ಪ್ರೊ| ಎಸ್. ಜಿ. ಶಂಗರೆಪ್ಪರ ಭಾಷಣ ೧೩

ಸ್ವದೇಶಾಭಿಮಾನಿ.

ತಾ. ೨ನೇ ಶುಕ್ರವಾರ ಜುಲೈ ೧೯೩೭

ನಿರಕ್ಷರತೆ

ಅಪ್ರತಿಮ ವಿದ್ಯಾವಂತರು ನಮ್ಮ ದೇಶೀಯರಲ್ಲಿ ಹಲವರು ಇಡೀ ಪ್ರಪಂಚದಲ್ಲೇ ಸ್ಥಾನ ಹೊಂದುತ್ತಿರುವರಾದರೂ, ದೇಶೀಯರಲ್ಲಿರುವ ನಿರಕ್ಷರತೆಯು ಅತಿ ಭಯಂಕರವಾದೆ. ನಮ್ಮ ಆಧಿಪತ್ಯದಲ್ಲಿನ ಪ್ರಾಥಮಿಕ ವಿದ್ಯಾ ಪ್ರಚಾರವನ್ನು ಕುರಿತು ಆಲೋಚಿಸಿದರೆ ನಮ್ಮಲ್ಲಿನ ಶಿಕ್ಷಿತರ ಸಂಖ್ಯೆಯು ಹತ್ತು ವರ್ಷಗಳಲ್ಲಿ ಸೇಕಡಾ ಒಂದರಂತೆ ಮಾತ್ರ ಹೆಚ್ಚುತ್ತಿದೆ ಎಂದು ತೋರುವುದು ಹೀಗಿದ್ದರೂ ಜನಸಂಖ್ಯೆಯು ಇದೊಂದು ಕಾಲಾಂತರದಲ್ಲಿ ಎಂಭತ್ತು ಮಿಲಿಯ ಹೆಚ್ಚಿದೆಯಾದರೂ, ಅಶಿಕ್ಷಿತರ ಸಂಖ್ಯೆಯು ಆರು ಮಿಲಿಯ ಹೆಚ್ಚಾಗಿದೆ ೧901ರಲ್ಲಿ 86 ಮಿಲಿಯರಿದ್ದ ಅಶಿಕ್ಷಿತರು ೧931ರಲ್ಲಿ 42 ಮಿಲಿಯವಾಗಿದ್ದಾರೆ ಹೀಗೆ ಮೂವತ್ತು ವರ್ಷಗಳಲ್ಲಿ ಅರುವತ್ತು ಲಕ್ಷ ನಿರಕ್ಷರರನ್ನು ಹೆಚ್ಚಿಸಿಕೊಂಡ ದುರ್ಭಾಗ್ಯವು ನಮ್ಮ ಸಂಸ್ಥಾನಕ್ಕೆ ಒದಗಿದುದು ಎಷ್ಟು ಸಂತಾಪಕರ!

ಸರಕಾರ ಲೋಕಲ್ ಬೋರ್ಡುಗಳು, ಮುನಿಸಿಪಾಲಿಟಿಗಳು, ಇತರ ಖಾಸಗಿ ಅಡಳಿತಗಳು ಸೇರಿಯೂ ಮಾಡಿರುವ ಪ್ರಯತ್ನಗಳಿಂದ, ಜನಸಂಖ್ಯೆಯು ಏರುತ್ತ ಬಂದಂತೆ ಅಕ್ಷರತೆಯನ್ನು ಸಹ ಹೆಚ್ಚಿಸಲು ಕೃತಾರ್ಥತೆ ಹೊಂದಿಲ್ಲ ಎಂಬುದು ಎಷ್ಟು ವಿಷಾದಕರ! ಅಕ್ಷರ ಬಲ್ಲವರು 1931ರಲ್ಲಿ ಸೇಕಡಾ 9 ಇವರೂ ಯಾವುದೊಂದು ಸರಕಾರೀ ಇಲಾಖೆಯಲ್ಲಿ ಸೇರುವುದಕ್ಕಾಗಿಯೆ ಹಿಂದೆ ಕಲಿತವರೂ, ಅಥವಾ ಆ ವರ್ಷದಲ್ಲಿ ಪಾಠಶಾಲೆಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳೂ ಆಗಿದ್ದು, ವಂಶಾನುಕ್ರಮವಾಗಿ ತಮ್ಮ ಹಿರಿಯರು ಆಚರಿಸಿ ಬರುತ್ತಿದ್ದ ಯಾವ ವೃತ್ತಿಗಳನ್ನೂ ಕೈಗೊಳ್ಳುವುದಕ್ಕಾಗಿ ಓದುಬರಹ ಕಲಿತವರಲ್ಲ ವಿದ್ಯಾಭ್ಯಾಸದ ಉದ್ದೇಶವೇ ಲೇಖನಿಯನ್ನುಪಯೋಗಿಸಿ ಜೀವನ ಸಾಗಿಸುವುದಕ್ಕಲ್ಲದೆ, ಇತರ ಯಾವ ತರದ ವೃತ್ತಿಗೂ ಅನಗತ್ಯವೆಂಬ ಭಾವವು ಜನರಲ್ಲಿ ಮೂಡಿದ್ದಿತು, ನಾಟಿದ್ದಿತು ಅಂತಹರನ್ನು ಅವರವರ ಹಿರಿಯರು ಆಯಾ ಉದ್ಯೋಗಕ್ಕೆ ತಕ್ಕಷ್ಟು ಮಾತ್ರ ವಿದ್ಯಾಭ್ಯಾಸ ಪೂರಯಿಸಲು ಶಾಲೆಗೋ ಕಾಲೇಜಿಗೋ ಕಳುಹುತ್ತಿದ್ದರು ಹೀಗಾಗಿ, ಮುಖ್ಯ ವಿದ್ಯಾಭ್ಯಾಸವೆಲ್ಲ ಪಟ್ಟಣಗಳಲ್ಲೂ ನಾಗರಿಕವೆಂಬ ವಾತಾವರಣದಲ್ಲೂ ಸಾಗಿತು. ಸೇಕಡಾ 90ರಂತೆ ಗ್ರಾಮಗಳಲ್ಲಿ ವಾಸಮಾಡುತ್ತಿದ್ದವರಿಗೆ ವಿದ್ಯಾಭ್ಯಾಸವೆಂಬುದು ಬರೀ ಒಂದು ಬಗೆಯದಾಯಿತು,-ವೆಂದು ವಿಮರ್ಶಕರು ದೂರುವಂತಾಯಿತು.

ಗ್ರಾಮಗಳಲ್ಲಿ ಮಕ್ಕಳ ಮುಂದಿನ ನೌಕರಿ ವಿಚಾರವಿಲ್ಲದಿರುವಲ್ಲಿ, ಹಿರಿಯರು ಮಕ್ಕಳನ್ನು ಪಾಠಶಾಲೆಗಳಿಗೇ ಕಳುಹುತ್ತಿರಲಿಲ್ಲ ಅಂತಹರನ್ನು ಶಾಲೆಗೆ ಕಳುಹುವುದರಿಂದ ಮನೆಯ ನಡವಳಿಕದಿಂದ ಅವರು ವಂಚಿತರಾಗುವರಲ್ಲದೆ, ಗ್ರಾಮಗಳನ್ನೇ ಗ್ರಾಮಜೀವನವನ್ನೇ ಅವರು ತುಚ್ಛೀಕರಿಸುವಂತಾಗುವುದೆಂಬ ಬೆದರಿಕೆಯೂ ಹಿರಿಯರಲ್ಲಿ ಗ್ರಾಮಗಳಲ್ಲಿ ಉಂಟಾಗಿದ್ದಿತು.

ರಾತ್ರಿ ಸ್ಕೀಮುಗಳು

ರಾತ್ರಿ ಸ್ಕೀಮುಗಳು ಉಂಟಾದುವು. ಸ್ಕೀಮುಗಳು ಒಂದಕ್ಕಿಂತ ಮತ್ತೊಂದು ಅತ್ಯುತ್ತಮವೇನೋ ಆಗಿದ್ದಿರಬಹುದು. ಇತರ ದೇಶಗಳಲ್ಲಿ ಅವನ್ನು ಅನುಸರಿಸಿ ಉತ್ತಮ ಪರಿಣಾಮಗಳು ಉಂಟಾದುದಿರಬಹುದು. ಈ ದೇಶದಲ್ಲಿ ಮಾತ್ರ ಅವನ್ನು ಅನುಸರಿಸಿ ನಿರಕ್ಷರತೆಯನ್ನು ತೊಲಗಿಸಲಾಗಲಿಲ್ಲ. ಕಡ್ಡಾಯ ವಿದ್ಯಾಭ್ಯಾಸಕ್ರಮವನ್ನು ಹಲವು ಸಂವತ್ಸರಗಳ ತನಕ ಜಾರಿಗೆ ತಂದು ಶಾಶ್ವತ ಅಕ್ಷರತೆಯ ಕಡೆಗೆ ಕಿಂಚಿತ್ತೂ ನಮ್ಮ ಬಾಲಪ್ರಪಂಚವು ಮುಂದರಿಯಲಿಲ್ಲ. ಏಕೆಂದರೆ ಕಡ್ಡಾಯವೆಂದು ಜಾರಿಗೆ ತಂದ ಅತ್ಯುತ್ತಮ ಪ್ರದೇಶಗಳಲ್ಲಿ ಸಹ, ಎರಡು ವರ್ಷಗಳೊಳಗೆ ಕಡ್ಡಾಯವು ಮುಗಿಯಿತು. ರಾತ್ರೀ ಶಾಲೆಗಳು, ಅರೆಹೊತ್ತಿನ ಶಾಲೆಗಳು ಮುಂತಾದುವುಗಳು ಉಂಟಾದುವು, ಅವುಗಳ ವಿಚಾರದಲ್ಲೂ ಸರಕಾರವು ಬರೆದ ರಿಪೋರ್ಟುಗಳಲ್ಲಿ ಕೊಂಚವಾದರೂ ಧೈರ್ಯ ಹೆಚ್ಚಿಸುವುವು ಒಂದೂ ಇಲ್ಲವಾಯಿತು ಪ್ರಯತ್ನಗಳೂ, ಸಮಯವೂ, ಹಣವೂ ವ್ಯರ್ಥವೇ ಆದುವು ಜೆನಾನಾಗಳಲ್ಲಿ ಪರ್ದಾಸ್ತ್ರೀಯರಿಗೂ ವಿದ್ಯಾಭ್ಯಾಸ ಕೊಡಿಸುವ ಪ್ರಯತ್ನಗಳಾದುವು, ಜನರೇ ಅವನ್ನು ಇದಿರಾಡಿ ಮುರಿದು ಹಾಕಿದರು ಸುಲಭ ವಿದ್ಯಾಭ್ಯಾಸವೆಂಬ ಹೊಸ ರೀತಿಯನ್ನು ಮಿಶನರಿಗಳು ಸೃಷ್ಟಿಸಿದರು, ಅದೂ ಅಲ್ಲಲ್ಲಿಗೇ ತಣ್ಣಗಾಯಿತು ವೃತ್ತಿ ಕೈಗಾರಿಕೆ ಕಲಿಸುವ ಶಾಲೆಗಳಾದುವು, ಜನರು ಇವನ್ನು ಪ್ರೋತ್ಸಾಹಿಸಲಿಲ್ಲ, ಇವುಗಳಿಂದ ಅಕ್ಷರ ಜ್ಞಾನವು ಹೆಚ್ಚುವುದೆಂದು ಯಾರೂ ಭರವಸೆಯಿಂದ ಹೇಳಲೂ ಇಲ್ಲ ಎಂತೆಂತಹ ಮೆಥಡುಗಳು ಜಾರಿಗೆ ಬಂದುವು! ಪರಿಣಾಮವೊಂದೇ ಉಳಿಯಿತು ಶಿಕ್ಷಣದ ಅವಧಿಯನ್ನು ಕಡಮೆ ಮಾಡಿ, ಅಷ್ಟರೊಳಗೆ ಎಲ್ಲ ಶಿಕ್ಷಣವನ್ನೂ ಪ್ರಾಥಮಿಕ ತರಗತಿಗಳ ಮಟ್ಟಿಗೆ ಪೂರಯಿಸುವ ಒಂದೂ ಕ್ರಮ ಉಂಟಾಗದೆ ಹೋಯಿತು 1931ರಲ್ಲಿ ಗಂಡಸರಲ್ಲಿ ಸೇಕಡಾ 84, ಹೆಂಗಸರಲ್ಲಿ 97 ನಿರಕ್ಷರರೆಂದೇ ಖಾನೆಸುಮಾರಿ ರಿಕಾರ್ಡಿನಲ್ಲಿದೆ ಒಂದೇ ತರಗತಿಯಲ್ಲಿ ಬಹು ವರ್ಷ ಮಕ್ಕಳು ಕೊಳೆಯುತ್ತಿರುವುದೂ, ಅರೆಜಾಣರಾಗುವುದರೊಳಗೆ ಶಾಲೆ ಮುಗಿಸುವುದೂ ಸರ್ವಸಾಮಾನ್ಯವಾಯಿತು ಬಡತನ, ಮನೆಕೆಲಸಕ್ಕೆ ಅಗತ್ಯವಾದ ಮಕ್ಕಳ ಸಹಾಯ, ಇವೆರಡೇ ಮುಖ್ಯ ಕಾರಣಗಳಿದ್ದುದರಿಂದ ಹೀಗಾಯಿತೆಂದು ವಿಮರ್ಶಕರ ಟೀಕೆಗಳಾದುವು

ಇತರ ದೇಶಗಳಲ್ಲಿ ಕಡ್ಡಾಯವಿಧಿಯಿಂದ ಅಷ್ಟು ಉತ್ತಮ ಪರಿಣಾಮವು ಏಕೆ ಉಂಟಾಯಿತು? ಜನಾಭಿಪ್ರಾಯದ ಬೆಂಬಲವು ಈ ವಿಧಿಯ ಹಿಂದೆ ಇತ್ತು ಹಿರಿಯರು ಮಕ್ಕಳನ್ನು ಉತ್ಸಾಹದಿಂದ ಶಾಲೆಗೆ ಕಳುಹುತ್ತಿದ್ದರು. ಒಮ್ಮೆ ಶಾಲೆಗೆ ದಾಖಲಾದ ಮಗು ಪ್ರಾಥಮಿಕ ಶಿಕ್ಷಣ ಮುಗಿಸುವ ತನಕ ಶಾಲೆಯಲ್ಲೇ ಇರುವಂತೆ ಹಿರಿಯರು ಎಚ್ಚರ ತೆಗೆದುಕೊಳ್ಳುತ್ತಿದ್ದರು ಹಾಜರಿಯಿಲ್ಲದಿರುವಲ್ಲಿ ಹಿರಿಯರನ್ನು ನಮ್ಮಲ್ಲಿ ದಂಡಿಸುವಂತೆ, ಅಲ್ಲಿನ ಕಾನೂನನ್ನು ಇಲ್ಲಿ ಪ್ರಯೋಗಿಸಿದ್ದರೆ, ಪ್ರಾಥಮಿಕ ವಿದ್ಯಾಭ್ಯಾಸವು ಇಷ್ಟಾದರೂ ಮುಂದರಿಯುತ್ತಿರಲಿಲ್ಲ ಎಂದು ಬೆದರಿಕೆ ಇತ್ತೆಂದು ತೋರುತ್ತಿದೆ

ಪ್ರೌಢ ವಿದ್ಯಾಭ್ಯಾಸ

ಶಾಲಾ ಮಕ್ಕಳಿಗೆ ಮಾತ್ರ ವಿದ್ಯಾಭ್ಯಾಸ ಕೊಡುವುದರಿಂದ ದೇಶದಲ್ಲಿ ಅಕ್ಷರತೆ ಹೆಚ್ಚಲಾರದೆಂದು, ಪ್ರಾಯಸ್ಥರಲ್ಲಿರುವ ನಿರಕ್ಷರತೆಯ ಪರಿಮಾಣ ಕಂಡವರೇ ಹೇಳುವರು ಪ್ರೌಢರು (15ರಿಂದ ಹೆಚ್ಚಿನ ವಯಸ್ಸಿನವರು) 1931ರಲ್ಲಿ ಜನಸಂಖ್ಯೆಯು ಗಂಡಸರಲ್ಲಿ ನೂರರಲ್ಲಿ 77, ಹೆಂಗಸರಲ್ಲಿ 97 ಎಂದು ಖಾನೆಸುಮಾರಿ ಲೆಕ್ಕದಲ್ಲಿ ತೋರುವುದು ಪ್ರೌಢರಲ್ಲಿ ವಿದ್ಯಾಗಂಧವು ಹುಟ್ಟುವಂತೆ ಪ್ರಯತ್ನಗಳಾಗಿದ್ದರೆ, ಅವರು ಮಕ್ಕಳಲ್ಲಿ ಶಿಕ್ಷಣವು ನಾಟುವಂತೆ ಸ್ವಾಭಾವಿಕವಾಗಿ ಪ್ರಯತ್ನಿಸುತ್ತಿದ್ದರು, ಕಡ್ಡಾಯ ಶಿಕ್ಷಣಕ್ಕೆ ಅವರ ಬೆಂಬಲ ಸಿಗುತ್ತಿತ್ತು

ಶಿಕ್ಷಣದ ಕಡೆಗೆ ಗ್ರಾಮಸ್ಥರು ಯಾವ ದೃಷ್ಟಿಯನ್ನಿಟ್ಟಿದ್ದರು? ಯಾವುದೊಂದು ಶಾಲೆಯಲ್ಲಿ ಐದು ವರ್ಷದಷ್ಟಾದರೂ ವಿದ್ಯಾಭ್ಯಾಸಮಾಡಿ ಓದುಬರಹ ಕಲಿತವನೆನ್ನಲು ಯಾರೂ ಒಪ್ಪುತ್ತಿರಲಿಲ್ಲ ಗ್ರಾಮಸ್ಥರ ವಿಶ್ವಾಸದ ಬೆಂಬಲವಿಲ್ಲದೆ, ಗ್ರಾಮಗಳಲ್ಲಿ ಎಂತಹ ಸುಧಾರಣೆಯಾಗಲೂ ಅವಕಾಶ ಸಿಗುವುದುಂಟೆ? ಓದುಬರಹವಿಲ್ಲದೆ, ಈ ಕಾಲದಲ್ಲಿ ಯಾವುದೊಂದು ಬಗೆಯ ವೃತ್ತಿಗೂ ಅವಕಾಶವುಂಟಾಗುವುದೆಂಬಷ್ಟು ಅಭಿಪ್ರಾಯವಾದರೂ ಅವರಲ್ಲಿ ಉಂಟಾಗದಿದ್ದರೆ, ಅವರೇಕೆ ಈ ಶಿಕ್ಷಣಪ್ರಚಾರವನ್ನು ನಂಬುವರು? ಓದುಬರಹದ ಸಾಮಾನ್ಯ ಪರಿಚಯಕ್ಕೆ ಕೆಲವು ತಿಂಗಳುಗಳೇ ಸಾಕೆಂದೂ ಆ ಅಭ್ಯಾಸ ಕಾಲದಲ್ಲಿ ಬೇಕಾದಷ್ಟು ಸಮಯವನ್ನು ಮನೆಯ ಅಥವಾ ಕುಟುಂಬದ ಉದ್ಯೋಗಕ್ಕೆ ಸಲ್ಲಿಸಲೂ ಅನುಕೂಲ ಮಾಡಿ ಕೊಡಬಹುದೆಂದು ಅವರ ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ಬೋಧಿಸುವುದಕ್ಕೆ ಮೊದಲೇ ಅಂತಹದೊಂದು ಶಿಕ್ಷಣದ ಪರ್ಯಾಯವನ್ನು ಮಾಡಿಕೊಡುವುದೂ ಅಗತ್ಯವಾಗಿತ್ತು ಇದನ್ನು ಬರೀ ಬಾಯಿಂದ ಸಾರಿದರೆ ಮಾತ್ರ ಯಾರೂ ಒಪ್ಪುವಂತಿರಲಿಲ್ಲ ಗ್ರಾಮದಲಿ ಪ್ರತ್ಯಕ್ಷವಾಗಿ ಬಳಕೆಗೆ ತಂದ ಪ್ರದರ್ಶಿಸಬೇಕಾಗಿತ್ತು

ಮುಂದೇನು ?

"ಇಂತಹದೊಂದು ಶಿಕ್ಷಣಕ್ರಮವು ಅತ್ಯಾವಶ್ಯಕವಾಗಿ ರಚನೆಹೊಂದ ಬೇಕಾಗಿದೆ ನಾಲ್ಕರಿಂದ ಎರಡು ವರ್ಷಗಳಿಗೆ ಶಿಕ್ಷಣದ ಅವಧಿಯನ್ನು ಇಳಿಸಿ ಅಕ್ಷರತೆಗಾಗಿ ಅಷ್ಟು ಸಮಯ [illegible] ರುಜುಪಡಿಸಬೇಕಾಗಿದೆ [illegible] ಗಳಲ್ಲಿ ಒಂದೊಂದ ತರಗತಿಯಲ್ಲಿ [illegible] ವ ಹಾಗೆ ಮಗುವಿಗೆ ಅಗತ್ಯವಾದ ಪರಿಜ್ಞಾನದ ಕನಿಷ್ಠಮಿತಿಯನ್ನು ನಿರ್ಧರಿಸಬೇಕು ಇದಕ್ಕಾಗಿ ಪಾಠಕ್ರಮವೂ ಪುಸ್ತಕಗಳೂ ಅಗತ್ಯವಾಗಿ ಬದಲಾಗಬೇಕು ಉಪಾಧ್ಯಾಯರಿಗೂ ಈ ವಿಷಯವಾಗಿ ಹೆಚ್ಚಿನ ತರಬೇತನ್ನು ಕೊಡಬೇಕು ಕಡ್ಡಾಯ ವಿದ್ಯಾಭ್ಯಾಸಕ್ಕೆ [illegible] ತ ಸುಧಾರಿತ ಬೋಧನೆಯೇ ಅಗತ್ಯವೆಂದು ಈಗ ಕಂಡುಬರುತ್ತಿದೆ [illegible] ವಿಷಯವಾಗಿ ಕಳೆದ ಹಲವು ವರ್ಷಗಳಿಂದಲೂ [illegible] ಗಳಲಿ ಹೆಚ್ಚಿನ [illegible] ತೆ ಹೊಂದಿರುವ ಶಿಕ್ಷಣ [illegible] ಬ್ಬರು ವಿವರಿಸಿರುತ್ತಾರೆ

ಅಕ್ಷರ ಮಾಲೆಯನ್ನು ಓದಲೂ ಬರೆಯಲೂ ಅತಿ ಸುಲಭವಾದ ಶಿಕ್ಷಣ ಕ್ರಮಗಳನ್ನು ಬಲ್ಲ ಉಪಾಧ್ಯಾಯರನ್ನು ತರಬೇತು ಮಾಡುವುದೇ ಶಿಕ್ಷಣ ಪ್ರಚಾರಕ್ಕೆ ಅತ್ಯಗತ್ಯವಾಗಿರುವ ಮೊದಲನೆ ಯುಕ್ತಿ ಇದೊಂದು ಸಾಧ್ಯವಾಗಿ ಅಕ್ಷರ ಜ್ಞಾನವು ಉಂಟಾಗುತ್ತಲೆ, ಇತರ ಯಾವತ್ತು ಪಠ್ಯ ವಿಷಯಗಳನ್ನು ಸುಲಭವಾಗಿ ಮುಂದೆ ಕಲಿತುಕೊಳ್ಳಲೂ ಕಲಿಸಿಕೊಡಲೂ ಸಾಧ್ಯವಾಗುವುದು ಪ್ರೌಢ ಅಶಿಕ್ಷಿತರಿಗೆ ಅಕ್ಷರಾಭ್ಯಾಸವನ್ನು ಆರಂಭ ಹಂತಗಳಲ್ಲಿ ಸಂಪೂರ್ಣವಾಗಿ ಕಲಿಸಿಕೊಡುವುದೂ ಮುಂದೆ ಅವರಿಗೆ ಜೀವನ ವಿಚಾರಗಳು ತಿಳಿದಿರುವ ಕಾರಣ ಇತರ ವಿಷಯಗಳನ್ನು ಬೇಗನೆ ಕಲಿಸುವುದೂ ಸಾಧ್ಯವಾಗಿದೆ ಎಂದು ಅವರೇ ಮಹಾನುಭವಿಗಳು ಬರೆದಿರುವರು

ಪ್ರಾಥಮಿಕ ಶಿಕ್ಷಣದ ಹೊಸ ರೀತಿಯನ್ನು ಸರಕಾರವು ಜಾರಿಗೆ ತರುವುದಾಗಿ ಈಗ ಪ್ರಕಟಿಸಿರುವುದರಲ್ಲಿ ಮೇಲೆ ಸೂಚಿಸಿರುವುದೆಲ್ಲ ಅಡಕವಾಗಿಯೆ ಇರುವಂತೆ ತೋರುತ್ತಿದೆಯಾದರೂ ಸ್ಪಷ್ಟವಾಗಿಲ್ಲ ಪ್ರಾಥಮಿಕ ಶಿಕ್ಷಣ ಕ್ರಮದ ಯಾವತ್ತು ಹೊಸ ವಿವರಗಳ ಇನ್ನು ಸದ್ಯದಲ್ಲೆ ಪ್ರಕಟವಾಗಲಿರುವ ಕಾರಣ, ಆಗ ಇಲಾಖೆಯಿಂದ ಹೊರಡುವ ಪತ್ರಕಗಳಲ್ಲಿ ಬೇಕಾಗಿರುವಷ್ಟು ಕೂಲಂಕಷವಾಗಿ ಬರೆಯಲಾಗಿದೆ ಎಂದೇ ಸೂಚಿತವಾಗಿದೆ ಇದಾದರೂ ಅಕ್ಷರತೆಯನ್ನು ಹೆಚ್ಚಿಸಲು ಸಾಧಕವಾದರೆ ನಮ್ಮ ಸಂಸ್ಥಾನಕ್ಕೆ ಕೀರ್ತಿಯುಂಟು

ಬಹುಪ್ರಖ್ಯಾತಿಪಟ್ಟದ್ದು-ಪ್ರಪಂಚದ ಅದ್ವಿತೀಯ ನವಶೋಧಿ.

ಬಿಮಲಾ ಮಾತ್ರೆಗಳು

ಬಿಮಲಾ ಪಿಲ್ಸ್ ಅಥವಾ ಮಾತ್ರೆಗಳೆಂಬ ಹೆಸರನ್ನು ಕೇಳಿದ ಕೂಡಲೇ ಬಹು ಕಾಲದ ಜಾಡ್ಯಗಳೂ, ರೋಗಗಳೂ ಹೆದರಿ ನಡುಗುತ್ತವೆ. ವೈದ್ಯಕೀಯ ಚಾತುರ್ಯವನ್ನು ತಪ್ಪಿಸ್ಯಾಗಿ ಮಾಡಿದ ನಾನಾ ತರದ ಹಳೇ ವ್ಯಾಧಿಗಳನ್ನು ಬಿಮಲಾ ಮಾತ್ರೆಗಳು ಗುಣಪಡಿಸಿ ಆಶ್ಚರ್ಯವನ್ನುಂಟುಮಾಡಿದೆ. ಧರ್ಮಾರ್ಥ ಕಳುಹಿಸುವ ಹಸ್ತಪುಸ್ತಕಗಳಿಗೂ, ಸೂಚನೆಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Kaviraj S C Mukerjie, B. A S.
Ayurvedic Institution Kalighat P O Calcutta.

ಯೋಗ್ಯ ಸಭ್ಯಸ್ಥರಾದ ಏಜೆಂಟರುಗಳು ಬೇಕಾಗಿದ್ದಾರೆ ಏಜನ್ಸಿ ರೂಲ್ಸುಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಸ್ಫುಟ ವಿಚಾರಗಳು

ವೈಸ್ರಾಯರ ಭಾಷಣಾನಂತರ

ಎಲ್ಲೆಲ್ಲಿಂದಲೂ ಅನುಕೂಲ ಪ್ರತಿಕೂಲ ವಿಮರ್ಶೆಗಳು ಹೊರಟಿವೆ ಕಾಂಗ್ರೆಸಿನ ಕಾರ್ಯಕಾರೀ ಕಮಿಟಿಯು ಸೇರಿ ಇತ್ಯರ್ಥಿಸುವ ತನಕ ಸ್ವತಂತ್ರವಾಗಿ ಮುಖಂಡರಾರೂ ಸ್ವಾಭಿಪ್ರಾಯವ ಪ್ರಕಟಿಸಬಾರದೆಂದು ಸೂಚಿಸಲಾಗಿದೆ [illegible] ಪ್ರತಿಯೊಬ್ಬ ಕಾಂಗ್ರೆಸ್ ಸದಸ್ಯನೂ ಈ ವಿಷಯವನ್ನು ಚೆನ್ನಾಗಿ ಮನನ ಮಾಡಿ [illegible] ಸಭೆಗೆ [illegible] ಅಥವಾ [illegible] ಇತ್ಯರ್ಥವನ್ನಾದರೂ ತನ್ನ ಅಭಿಪ್ರಾಯ [illegible] ನಂತಾಗಬೇಕು [illegible] ವೃತ್ತಿಗಳ ತರ್ಕವನ್ನು [illegible] ವ್ಯಾಖ್ಯಾನ ಅಭಿಪ್ರಾಯಗಳನ್ನು [illegible] ಹೇಳುತ್ತಿದ್ದರೋ ಅವನ್ನು [illegible] ವಿವರಿಸಿ [illegible] ಗವರ್ನರ [illegible] ವನ್ನು ಪ್ರತ್ಯೇಕಿಸಲಾಗುವುದಿಲ್ಲವೆಂಬುದನ್ನು ರುಜುಪಡಿಸುವುದಕ್ಕೆ ಅತ್ಯಾವಶ್ಯಕ ಕಾರಣ [illegible] ವೈಸ್ರಾಯರ ಹೇಳಿಕೆಯಲ್ಲಿದೆ ಹೀಗಿರುವಾಗ ಇನ್ನೇನು ಮಾಡಬಹುದು. ಈ ಪ್ರಶ್ನೆಯು ಇತ್ಯರ್ಥವಾಗುವ ತನಕ ಅಧಿಕಾರ ಸ್ವೀಕಾರದ [illegible] ಹೊಸ ಪ್ರಶ್ನೆಯು ಕಾಂಗ್ರೆಸಿನ [illegible] ಇದೆ ಮೊದಲನೆಯ ಸಮಸ್ಯೆ [illegible] ಮುಂದೆ ಬರುವಂತೆ ಅದರ ಒಳಗೆ ಒಡೆದವರೇ ತಾವೆಂದು ಮಹಾತ್ಮಾಜಿಯವರ [illegible] ಕಾಂಗ್ರೆಸಿನಲ್ಲಿ ತುಂಬಾ ಭರವಸೆಯುಳ್ಳವರ ವೋಟರ ಸಮುದಾಯಕ್ಕೆ [illegible] ಕಾಲದಲ್ಲಿ ಹೇಳಿದ ಕಾರ್ಯಕ್ರಮವನ್ನು ಮುಂದೊತ್ತಲು ಅಗತ್ಯವಾದ ಸೌಕರ್ಯಗಳನ್ನು ಒದಗಿಸಿಕೊಳ್ಳುವುದಕ್ಕಾಗಿಯೆ ಈ ಸಮಸ್ಯೆಯನ್ನುಂಟುಮಾಡಿದ [illegible] ಈ ಶರ್ತಗಳಿಂದ ಮಾತ್ರ ಕಾಂಗ್ರೆಸು ಅಧಿಕಾರ ಸ್ವೀಕರಿಸುವುದು [illegible] ದರೆ,—ಸಚಿವರೂ ಗವರ್ನರರಿಗೂ [illegible] ವಾದವಿವಾದಗಳಾಗಿ ಕಾರ್ಯಕ್ರಮ [illegible] ಕ್ಕೆ ಆತಂಕಗಳು ಉಂಟಾಗಬಾರದೆಂದೂ ಕಾರಣ ಕೊಡಲಾಗಿದ್ದಿತು ಆಕ್ಟನ್ನು ರದ್ದುಗೊಳಿಸಲೆತ್ನಿಸುವ ಮಾತನ್ನು [illegible] ಎತ್ತುದಿಲ್ಲ ಪ್ರಾಂತಿಕ ಸ್ವಾತಂತ್ರ್ಯವೆಂಬುದು ಬರೀ ವಿನೋದಕ್ಕಾಗಿ ರಚಿಸಿದುದಲ್ಲ, ಮಾಯಾಜಾಲವಲ್ಲ, ಸ್ವರಾಜ್ಯವೆಂದು ಹೆಸರಿಟ್ಟು ಏಕತಂತ್ರವಾಗಿ ಆಳುವ ಗವರ್ನರರಿಗೆ ಅನುಕೂಲವಾದ ರಾಜ್ಯಭಾರವಾಗಬಾರದು ಎಂದೇ ಈ ಭರವಸೆಯನ್ನು ಕೇಳಿದ್ದುದು ಹೀಗಿರುತ್ತಾ, ಮಂತ್ರಿಗಳು ತಮ್ಮ ಅಧಿಕಾರದ ಚತುರ್ಗಡಿಗಳಲ್ಲಿ ಕೆಲಸ ನಡೆಸುವಾಗ ಗವರ್ನರರು ಅವರನ್ನು ವಿರೋಧಿಸುವ ಮೊದಲು ಏವತ್ತು ಸಲ ಯೋಚಿಸಬೇಕೆಂದೂ, ಈ ಕೇಳಿಕೆಯಿದ್ದಿತು

ಶಾಲೆಗಳ ಸ್ಥಿತಿ.

... ವರಲ್ಲಿ ಪುನಃ ನಿರಕ್ಷರತೆ ಉಂಟಾಗೋಣ; ಮಕ್ಕಳು ಮುಂದರಿಯದೆ ಅಲ್ಲಲ್ಲೆ ತಡೆಗಟ್ಟಿಕೊಂಡೇ ಇರೋಣ; ಶಾಲೆಗಳು ಅಪೂರ್ಣವಾಗಿ ಅಯೋಗ್ಯವಾಗಿರೋಣ; ಶಾಲೆಗಳ ಸಾಂಪತ್ತಿಕ ಸ್ಥಿತಿ ಹಾಳಾಗಿರೋಣ; ಇರ ಚಿಕ್ಕ ಮಕ್ಕಳನ್ನು ಶಾಲೆಗಳಲ್ಲಿ ಸೇರಿಸಿ ರೋಣ; ತರಬೇತಿಲ್ಲದೆ ಇರುವ ಉಪಾಧ್ಯಾಯರ ಸಂಖ್ಯೆ ಇನ್ನೂ ಹೆಚ್ಚಾಗಿರೋಣ; ಮೊದಲಾದ ನಾನಾ ಕುಂದುಗಳನ್ನು ಸರಕಾರವು ಅಂಕೆಸಂಖ್ಯೆಗಳ ದೃಷ್ಟಾಂತಾದಿಗಳಿಂದ ಕಠಿಣವಾಗಿ ಪ್ರದರ್ಶಿಸಿ ಟೀಕಿಸಿಯದೆ. ಅಪೂರ್ಣ ಶಾಲೆಗಳಿಗೆ ಪೂರ್ಣತೆ ತರುವ ಅಥವಾ ಅವನ್ನು ರದ್ದು ಮಾಡುವ; ತರಬೇತಾಗದವರನ್ನು ಉಪಾಧ್ಯಾಯರನ್ನಾಗಿ ನೇಮಿಸಲಾಗದು; ಉಪಾಧ್ಯಾಯರ ಸಂಬಳ ಸರ್ವಿಸುಗಳ ಸರಿಯಾದ ನಿಬಂಧನೆಗಳಾಗಬೇಕೆನ್ನುವ; ಹಳ್ಳೀ ಶಾಲೆಗಳಿಗೆ ತಕ್ಕಂತಹ ಪಾಠ ಕ್ರಮಗಳನ್ನ ಬಳಕೆಗೆ ತರುವ; ಇತ್ಯಾದಿ ಹಲವು ತಿದ್ದುಪಾಟುಗಳೂ ಅಗತ್ಯವೇ ಆಗಿವೆ ಶಿಕ್ಷಣದ ಪುನರ್ವ್ಯವಸ್ಥೆಯಾಗುವ ಮೊದಲು ಅದನ್ನು ಕಡ್ಡಾಯವಾಗಿ ಪ್ರಾಥಮಿಕ ತರಗತಿಗಳಲ್ಲಿ ನಿರ್ಬಂಧದಿಂದ ಹರಡಿಸುವುದು ಅಸಾಧ್ಯವೆಂದೇ ಸರಕಾರವು ಹೇಳುತ್ತಿದೆ. ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲುಗಳನ್ನು ಬೋಲ್ಡಾಗಿ ಟೀಕಿಸಿ, ಅವನ್ನು ಮುಗಿಸುವ ಆಲೋಚನೆ ಇದೆ. ಸೆಕೆಂಡರಿ ತರಗತಿಗಳಲ್ಲಿ ವಿದ್ಯಾಭ್ಯಾಸವು ನಾಲ್ಕು ವರ್ಷದ ತರುವಾಯ ಒಂದು ಪರೀಕ್ಷೆ ನಡೆದು, ಅಲ್ಲಿಂದ ಮುಂದೆ ಮೂರು ವರ್ಷ ವಿದ್ಯಾಭ್ಯಾಸವಾಗಿ ಯುನಿವರ್ಸಿಟಿ ಪರೀಕ್ಷೆಗೂ, ಅಥವಾ ಹೆಚ್ಚು ಕಡಮೆ ಅವಧಿಯ ತನಕ ವೃತ್ತಿ ಶಿಕ್ಷಣವಾಗುವ ಹಾಗೂ ಏರ್ಪಾಡಾಗಬೇಕೆಂದು ಸೂಚಿತವಾಗಿದೆ ಹೈಸ್ಕೂಲುಗಳಿಗೆ ಮತ್ತೊಂದು ವರ್ಷ ಕೂಡಿಸಿ, ಅಲ್ಲಿ ಯುನಿವರ್ಸಿಟಿಯ ಮೆಟ್ರಿಕ್ ಪರೀಕ್ಷೆಯಾಗುವುದು, ಅಲ್ಲಿಂದ ಮೂರು ವರ್ಷಗಳಲ್ಲಿ ಡಿಗ್ರಿ ಪರೀಕ್ಷೆಯಾಗುವುದು. ಎಕ್ಸಪರ್ಟರು ಇಂಗ್ಲೆಂಡಿನಿಂದ ಬಂದಿದ್ದು ಇಲ್ಲಿನ ಶಿಕ್ಷಣ ಕ್ರಮವನ್ನು ವಿಮರ್ಶಿಸಿ ಬರೆದುದರ ಫಲವಾಗಿ, ಈ ವಿಷಯದಲ್ಲೆಲ್ಲಾ ಏನು ಸೂಚನೆ ಕೊಟ್ಟಿರುವರೋ ಇನ್ನೂ ತಿಳಿದಿಲ್ಲ ಆದರೆ, ನಮ್ಮ ದೇಶದ ಶಿಕ್ಷಣವನ್ನು ನಮ್ಮ ಜೀವನಕ್ಕೊಪ್ಪುವಂತೆ ತಿದ್ದಿಕೊಂಡು ನಡೆಯಲು ಅವರ ವಿಚಕ್ಷಣತೆಯಿಂದ ಹೆಚ್ಚಿನ ಉಪಕಾರವಾಗುವಂತಿಲ್ಲ ಯೂನಿವರ್ಸಿಟಿ ಶಿಕ್ಷಣವು ಹೆಚ್ಚಿನ ಪರಿಣಾಮವುಂಟು ಮಾಡುವ ಬಗೆಯದಲ್ಲ ಎಂದು ಸರಕಾರವು ತಿಳಿದು, ಯೂನಿವರ್ಸಿಟಿಗಳೂ ತಮ್ಮನ್ನು ಈ ವಿಧ್ಯವಾನಗಳಿಗೆ ಸರಿಯಾಗುವ ಹಾಗೆ ತಿದ್ದುಕೊಳ್ಳಬೇಕಾಗಿ ಸರಕಾರವು ಸೂಚಿಸಿಯದೆ. ಶಿಕ್ಷಣದಲ್ಲಿ ತಿದ್ದುವಡಿಯನ್ನು ಎಷ್ಟೋ ಸ್ಥಳೀಯ ರಾಜ್ಯಗಳು ಕೈಕೊಂಡಾಯಿತು ಬ್ರಿಟಿಷ ಇಂಡಿಯದಲ್ಲಿ ಮಾತ್ರ ಇನ್ನೂ ತಿದ್ದುವುದಕ್ಕೆ ಮುಹೂರ್ತ ಒದಗಿಲ್ಲ ಇಷ್ಟೋ ವರ್ಷಗಳೊಳಗೆ ನಿರಕ್ಷರತೆಯು ಅಳಿದು ಹೋಗುವಂತೆ ಮಾಡುವುದಕ್ಕೂ, ಸೆಕಂಡರಿ ವಿದ್ಯಾಭ್ಯಾಸ ಕ್ರಮವನ್ನು ನೂತನ ವ್ಯವಸ್ಥೆಗೆ ಗುರಿಪಡಿಸುವುದಕ್ಕೂ ಅಗತ್ಯವಾದ ಖಂಡಿತ ಶಾಸನವು ಉಂಟಾಗಬೇಕಾಗಿದೆ ಇಲ್ಲದಿರುವಲ್ಲಿ ಈ ಪತ್ರಿಕವು ಇತರ ಪತ್ರಿಕಗಳಂತೆಯೆ ಹಾಗೆಯೆ ಬರಿಹ ಮಾತ್ರವಾಗಿ ಉಳಿಯುವುದೆಂಬ ಬೆದರಿಕೆಯಿದೆ.

ನಿಖಿಲ ಸಮಾಜಗಳ ಪರಿಷತ್ತು.

ಪಂಜಾಬಿನಲ್ಲಿ ಸರ್ ಸಿಕಂದರ ಹಯ್ಯಾತ ಖಾನರು ಈ ಪರಿಷತ್ತನ್ನು ಕೂಡಿಸಿ, ಮೂರು ಠರಾವುಗಳನ್ನು ಮಂಜೂರು ಮಾಡಿರುವರು. ಸಮಾಜಗಳೊಳಗೆ ಉಂಟಾಗುವ ಉತ್ಪಾತಗಳನ್ನು ಖಂಡಿಸಿ ಅವುಗಳಿಂದ ನೊಂದವರೊಡನೆ ಸಹಾನುಭೂತಿ ಪ್ರಕಟಿಸಿ ಸಮಸ್ತರು ಇಂತಹ ಉದ್ರೇಕಗಳಿಗೆ ಎಡೆಗೊಡದಂತೆ ಸಹಕರಿಸಿ ಕೆಲಸ ಮಾಡಬೇಕು ಎಂದೇ ಮೊದಲಿನ ನಿರ್ಣಯ. ಪ್ರಾಂತಿಕ ಮತ್ತು ಜಿಲ್ಲಾ ಸಂಧಾನ ಸಮಿತಿಗಳನ್ನು ಏರ್ಪಡಿಸಲಾಯಿತು. ಇವುಗಳು ಅಂತರ್ಜಾತೀಯ ಕಲಹಗಳಾಗದಂತೆ ನೋಡುವುವು. ಎಲ್ಲ ಸಮಾಜಗಳ ಮುಖಂಡರು ಒಂದು ಕಮಿಟಿಯಲ್ಲಿ ಸೇರಿ, ಎಲ್ಲೆಲ್ಲಿ ಜಾತಿಕಲಹಗಳಾಗುವುವೋ ಅಲ್ಲಿ ವಿಚಾರಣೆ ಮಾಡಿ, ಎಲ್ಲ ಕಲಹ ಕಾರಣಗಳನ್ನು ಹೋಗಗೊಳಿಸುವ ಸಂಧಾನಗಳನ್ನು ಮಾಡಿಸಬೇಕೆಂದಾಯಿತು. ಮಂತ್ರಿಗಳ ವಿಷಯವಾಗಿ ರಾಜಕೀಯ ದೃಷ್ಟಿಯಿಂದ ಭೇದಭಾವನೆಗಳು ಎಂತಹವಿದ್ದರೂ ಇಡೀ ಪಂಜಾಬಿಗೆ ನಾಚಿಕೆಯೆನಿಸಿರುವ ಈ ಬಗೆಯ ಉತ್ಪಾತಗಳು ಉಂಟಾಗದೆ ಎಲ್ಲ ಸಮಾಜಗಳೂ ಪ್ರಯತ್ನಿಸಬೇಕಾಗಿರುವುದು ಅಗತ್ಯವೆಂದು ಮಂತ್ರಿಯರೇ ನುಡಿದರು. ಈ ಸಮಿತಿಗಳಿಗೆ ಸಂಪೂರ್ಣ ಸಹಾಯವನ್ನು ಸರಕಾರವು ಕೊಡವುದೆಂದು, ಯಾವನೊಬ್ಬ ಜಿಲ್ಲಾ ಆಫೀಸರನು ಇಂತಹ ಸಂಭವಗಳು ಉಂಟಾಗುವ ಮೊದಲೇ ಎಚ್ಚರಿಕೆ ತೆಗೆದುಕೊಳ್ಳದಿರುವಲ್ಲಿ, ಅಥವಾ ಅವು ಉಂಟಾಗಲು ಆಸ್ಪದ ಕೊಡುವಲ್ಲಿ ಅವನನ್ನು ಬಹಳ ಕಠಿನವಾಗಿ ದಂಡಿಸಲಾಗುವುದೆಂದೂ ಆಶ್ವಾಸನೆ ಕೊಡಲಾಗಿದೆ ಯಾವಾಗಲೂ ಒಬ್ಬ ಹಿಂದೂ ಮತ್ತು ಒಬ್ಬ ಮುಸ್ಲಿಮ ಮಂತ್ರಿಗಳು ಜತೆಯಾಗಿಯೆ ಜಿಲ್ಲಾ ಸಂಚಾರ ಮಾಡುತ್ತಿರಬೇಕೆಂದೂ, ಯಾವುದೊಂದೇ ಮತ ಜಾತಿಯವರು ಕೊಡುವ ಆಮಂತ್ರಣ ಮತ್ತು ಬಿನ್ನಪಗಳನ್ನು ಸ್ವೀಕರಿಸಲೇ ಬಾರದೆಂದೂ ನಿಶ್ಚಿತವಾಯಿತು. ಎಲ್ಲ ಪಕ್ಷಗಳ ಮೆಂಬರರೂ ಮಂತ್ರೀಶ್ವರರಿಗೆ ಈ ನೂತನ ಮನೋಭಾವಗಳನ್ನು ವ್ಯಕ್ತಪಡಿಸಿರುವುದಕ್ಕಾಗಿ ಧಾರಾಳವಾಗಿ ಕೊಂಡಾಡಿರುವರು

ಮಂಗಳೂರು.

ಮುಂಬ್ಬಾ ಮೊಗವೀರ ಯುವಕ ಸಂಘದ ಅಭಿವೃದ್ಧಿಯ ಕುರಿತು ಲೇಖನವೊಂದು ಬಂದಿರುತ್ತದೆ, ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಸಲಾಗುವುದು

ದಿವಂಗತ ಕಾರ್ನಾಡು ಸದಾಶಿವರಾಯರ ಸ್ಮಾರಕ ನಿಧಿ— ಈ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಮಾಡಿರುವ ನಿರ್ಣಯ ಮತ್ತು ವಿಜ್ಞಾಪನೆಗಳನ್ನು ಈ ಮೊದಲೇ ಪ್ರಕಟಿಸಲಾಗಿದೆ ಈ ನಿಧಿಯ ಬಗ್ಗೆ ಸೇವಾದಳ ನಾಟಕ ಮಂಡಳಿಯವರು ಮಂಗಳೂರಲ್ಲಿ ಆಡಿದ ನಾಟಕದ ಜಮಾಖರ್ಚು ಈ ಕೆಳಗಿನಂತಿದೆ —

ಟಿಕೇಟು ಮಾರಾಟದಿಂದ ಜಮಾ ರೂಪಾಯಿ [illegible], ಖರ್ಚು ಮ್ಯುನಿಸಿಪಲ್ ಲೈಸೆನ್ಸ್ ಟೆಕ್ಸ್ ವಗೈರೆ ರೂ [illegible] ಮುದ್ರಣ ಖರ್ಚು ರೂ [illegible] ಸೆನರಾ ಹೈಸ್ಕೂಲಿಗೆ ಬಾಡಿಗೆ ವಗೈರೆ ರೂ [illegible] ದೀಪ, ಬಣ್ಣ ಖರ್ಚು, ಕೂಲಿ, ಟಿಫಿನ್ ವಗೈರೆ ರೂ [illegible], ಜುಮ್ಲಾ ರೂ [illegible] ಖರ್ಚು ಕಳೆದು ಉಳಿದ ಶಿಲ್ಕು ರೂ [illegible] ಮೇಲಿನಂತೆ ವಸೂಲಾಗಿರುವ ಮೊಬಲಗಲ್ಲದೆ ಬಿಲ್ಲರೆ ವಂತಿಗೆಯಿಂದ ನಿಧಿಗೆ ರೂ [illegible] ವಸೂಲಾಗಿರುತ್ತದೆ ಹೀಗೆ ಒಟ್ಟಿಗೆ ಇದುವರೆಗೆ ಜಿಲ್ಲಾ ಕಮಿಟಿಯೊಡನೆ ವಸೂಲಾದ ಮೊಬಲಗು ರೂ. [illegible]ರಲ್ಲಿ ನಿಧಿಯ ಬಗ್ಗೆ ವಿನಂತಿ, ವ ರಶೀದಿ ಮುದ್ರಣ ಖರ್ಚು ರೂ. [illegible] ಕಳೆದು ಉಳಿದ ಏನ್ ಮೊಬಲಗು ರೂ. [illegible]ನ್ನು ಸೆಂಟ್ರಲ್ ಕೋಓಪರೇಟಿವ್ ಬೇಂಕಿನಲ್ಲಿ ಈ ನಿಧಿಯ ಬಗ್ಗೆ ಜಿಲ್ಲಾ ಕಮಿಟಿಯ ಹೆಸರಲ್ಲಿ ಪ್ರತ್ಯೇಕ ಸೇವಿಂಗ್ಸ್ ಠೇವಣಾತಿಯಾಗಿ ಇರಿಸಲಾಗಿದೆ ಎಂದು ಸಿ ರಾಮರಾಯ ಮಲ್ಯ, ಕಾರ್ಯದರ್ಶಿ, ದ. ಕ. ಜಿಲ್ಲಾ ಕಮಿಟಿ ಇವರು ತಿಳಿಸುತ್ತಾರೆ.

ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಕೆಲಸಗಾರರ ಅವಗಾಹನೆಗೆ— ಜಿಲ್ಲೆಯಲ್ಲಿ ಇದುವರೆಗೆ ಸೇರಿದ ಕಾಂಗ್ರೆಸ್ ಸದಸ್ಯರ ತಾಲೂಕುವಾರು ಸಂಖ್ಯೆಯನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕೂಡಲೇ ಕಳುಹಿಸಬೇಕಾಗಿರುವುದರಿಂದ ಆಯಾ ಸ್ಥಳಗಳಲ್ಲಿ ಕಾಂಗ್ರೆಸ ಸದಸ್ಯರನ್ನು ಸೇರಿಸುತ್ತಲಿರುವ ಕಾಂಗ್ರೆಸ ಕೆಲಸಗಾರರೆಲ್ಲರೂ ಕಳೆದ ಜೂನ್ ತಾ. [illegible]ರೊಳಗೆ ತಾವು ಸೇರಿಸಿದ ಸದಸ್ಯರ ಸಂಖ್ಯೆ, ಊರಿನ ಹೆಸರು ಮತ್ತು ತಾವು ಈ ಬಗ್ಗೆ ಉಪಯೋಗಿಸಿದ ಪುಸ್ತಕಗಳ ನಂಬ್ರ— ಇಷ್ಟು ಮಾಹಿತಿಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಪ್ಪದೆ ಕಳುಹಿಸಬೇಕಾಗಿ ಕಾರ್ಯದರ್ಶಿ, ಜಿಲ್ಲಾ ಕಾಂಗ್ರೆಸ್ ಕಮಿಟಿ ಇವರು ಈ ಮೂಲಕ ವಿನಂತಿಸುತ್ತಾರೆ.

ತೇರ್ಗಡೆ— ಮಂಗಳೂರಿನ ಶ್ರೀ ಪಿ. ಕೆ. ರಾಯರು ಕೇಂಬ್ರಿಜಿನ "ಮೆಥ್‌ಮ್ಯಾಟಿಕಲ್ ಟ್ರೈಫೋಸ್" ಎಂಬ ಗಣಿತಪರೀಕ್ಷೆಯಲ್ಲಿ ಅತಿ ಪ್ರಶಂಸನೀಯವಾದ ಯಶಸ್ಸನ್ನು ಸಂಪಾದಿಸುವಂತೆ ಕೃತಾರ್ಥರಾಗಿರುವರೆಂದು ತಿಳಿಸಲು ತುಂಬಾ ಆನಂದವಾಗುತ್ತದೆ. ಇವರು ಸಿಡ್ನಿ ಸಸೆಕ್ಸ್ ಕಾಲೇಜಿನಲ್ಲಿ ಗಣಿತವ್ಯಾಸಂಗ ಮಾಡುತ್ತಿದ್ದು, ಈ ಸಾರಿಯ [illegible] ಮಂದಿಗಳಲ್ಲಿ ಅತೀ ಉನ್ನತವಾದ ಸ್ಥಾನವನ್ನು ಪಡೆದಿರುತ್ತಾರೆ. ಇವರು ಮೊದಲು ಮದ್ರಾಸು ಯುನಿವರ್ಸಿಟಿಯ ವಿದ್ಯಾರ್ಥಿಗಳಾಗಿದ್ದರು

ವಿದ್ಯಾರ್ಥಿ ವೇತನ— ವಿಕ್ಟೋರಿಯಾ ಜುಬಿಲಿ ವಿದ್ಯಾರ್ಥಿವೇತನಕ್ಕಾಗಿ ಒಂದು ಸ್ಪರ್ಧಾ ಪರೀಕ್ಷೆಯು ನಡೆಯುವುದು. ಈ ವೇತನವು ಇಲ್ಲಿಯ ಯಾವುದೊಂದು ಕಾಲೇಜಿನ ತರಗತಿಯ ಒಬ್ಬನಿಗೆ, ಅವನು ತಪ್ಪಿದ್ದಲ್ಲಿ ಮುಸ್ಲಿಂ ಸಮಾಜದ ಒಬ್ಬನಿಗೆ, ಅವನೂ ತಪ್ಪಿದ್ದಲ್ಲಿ ಕ್ರೈಸ್ತ ಸಮಾಜದ ಒಬ್ಬ ವಿದ್ಯಾರ್ಥಿಗೆ ದೊರಕುವುದು. ಈ ಪರೀಕ್ಷೆಯು ಇಲ್ಲಿಯ ಗವರ್ನಮೆಂಟ್ ಕಾಲೇಜಿನಲ್ಲಿ ಇದೇ ತಾ. [illegible]ನೇ ಆಗೋಸ್ತು ತಿಂಗಳಲ್ಲಿ ನಡೆಯುವುದು. ಈ ಸಂಬಂಧ ಅರ್ಜಿಗಳನ್ನು ಆಗೋಸ್ತು ತಾ. [illegible]ರ ವರೆಗೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸ್ವೀಕರಿಸಲಾಗುವುದು. ಅರ್ಜಿ ಫಾರ್ಮು ಇತ್ಯಾದಿ ವಿವರಗಳನ್ನು ಡಿಸ್ಟ್ರಿಕ್ಟ್ ಕೋರ್ಟಿನಿಂದ ಪಡೆಯಬಹುದೆಂದು ಡಿಸ್ಟ್ರಿಕ್ಟ್ ಜಡ್ಜರೂ, ವಿಕ್ಟೋರಿಯ ಜ್ಯುಬಿಲಿ ವಿದ್ಯಾರ್ಥಿವೇತನ ಫಂಡಿನ ಪ್ರೆಸಿಡೆಂಟರೂ ಆದ ಶ್ರೀ ಎಂ. ವೆಂಕಟರಾಮಯ್ಯನವರು ತಿಳಿಸುತ್ತಾರೆ.

ಕೆನರಾ ಹೈಸ್ಕೂಲಿನ ಗತವರ್ಷದ ವಾರ್ಷಿಕ ವರದಿ— ಈ ವರದಿಯು ನಮ್ಮ ಕೈಸೇರಿರುತ್ತದೆ. ಎಲ್ಲಾ ವಿಚಾರಗಳಲ್ಲಿ ಈ ಶಾಲೆಯು ಒಳ್ಳೇ ತರದ ಕಾರ್ಯವನ್ನು ಮಾಡಿರುತ್ತದೆಂದೂ ತಿಳಿಯಪಡಿಸುವರೆ ಸಂತೋಷಪಡುತ್ತೇವೆ. ಈ ಶಾಲೆಯು ಇನ್ನೂ ಅಭಿವೃದ್ಧಿಹೊಂದಿಕೊಂಡು ಜನಸೇವೆಯನ್ನು ಮಾಡಲೆಂದು ನಮ್ಮ ಹಾರೈಕೆ.

ಶ್ರೀ ವಿವೇಕಾನಂದ ರಾಘವಾಶ್ರಮ ಇದೇ ತಾ. [illegible]ನೇ ಆದಿತ್ಯವಾರ ಮೇಲಿನ ಸಂಘದ ಆಶ್ರಯದಲ್ಲಿ ಶ್ರೀ ಕಾರ್ಕಳ ರಾಮದಾಸ ಶೆಣೈಯವರು "ಜ್ಞಾನಯೋಗ" ಎಂಬ ವಿಷಯವನ್ನೆತ್ತಿ ಭಾಷಣಮಾಡುವರು. ಶ್ರೀರಾಮನ ಕೃಪೆಯಿಂದ ಇಂತಹ ಮಹನೀಯರುಗಳು ನಮ್ಮ ಸಭೆಗೆ ಆಗಾಗ ಬಂದು ನಮಗೆಲ್ಲರಿಗೂ ತಮ್ಮ ಅನುಭವಸಿದ್ಧಾಂತವನ್ನು ವ್ಯಕ್ತಗೊಳಿಸಲು ಎಂದು ನಮ್ಮೆಲ್ಲರ ಪ್ರಾರ್ಥನೆ.

ಮುಸಲ್ಮಾನರು ಕಾಂಗ್ರೆಸ್ಸಿಗೆ ಸೇರಬೇಕು.
ಮೆಹರಾಲಿಯವರ ಹಿತೋಪದೇಶ.

ಶ್ರೀಯುತರು 'ಮುಸ್ಲಿಂ ವೆಲ್‌ಫೇರ್ ಅಸೋಸಿಯೇಶನ' ದಲ್ಲಿ ತಮ್ಮ ಉರ್ದು ಭಾಷೆಯಲ್ಲಿ ಭಾಷಣ ಮಾಡುತ್ತಾ, ಕಾಂಗ್ರೆಸ್ಸಿನ ಮಹತ್ವವನ್ನೂ, ಅದು ದೇಶದ ಏಳಿಗೆಗೆ, ಜಾತಿಮತ ಭೇದವಿಲ್ಲದೆ ಹೇಗೆ ಅರ್ಧಶತಮಾನದಿಂದಲೂ ಹೋರಾಡುತ್ತಿರುವುದೆಂಬುದನ್ನೂ ಸವಿಸ್ತಾರವಾಗಿ ವಿಸ್ತರಿಸಿ, ಕಾಂಗ್ರೆಸ್ಸಿಗೆ ಮುಸಲ್ಮಾನರು ಹೆಚ್ಚು ಸಂಖ್ಯೆಯಲ್ಲಿ ಸೇರಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವ ಅಗತ್ಯವಿದೆಯೆಂದು ಹೇಳಿದರು

ತಾಲೂಕುಗಳಿಂದ.

ಪಾಣೆಮಂಗಳೂರು:— ಈ ಸೆಂಟರಿನಿಂದ ಬರುವ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯು ಪ್ರತಿಸ್ಪರ್ಧೆ ಇಲ್ಲದೆ ನಡೆಯುವಂತೆ ಈ ಸರ್ಕಲಿಗೆ ಸೇರಿದ ಮೂವತ್ತು ಗ್ರಾಮಗಳಿಂದ ಪ್ರತಿನಿಧಿಗಳು ಸೇರಿ ತಮಗೆ ಬೇಕಾದ ಒಬ್ಬ ಮೆಂಬರನನ್ನು ಆರಿಸುವ ಬಗ್ಗೆ ಇದೇ ಬರುವ ಜುಲಾಯಿ ತಾ [illegible]ನೇ ಶನಿವಾರ ಅಪರಾಹ್ನ ಗಂಟೆ [illegible]ಕ್ಕೆ ಪಾಣೆಮಂಗಳೂರಿನಲ್ಲಿ ಸಭೆ ಸೇರಲಿರುವುದು ಆದ್ದರಿಂದ ಈ ಸೆಂಟರಿಗೆ ಸೇರಿದ ಎಲ್ಲಾ ಗ್ರಾಮಸ್ಥರು ತಮ್ಮ ತಮ್ಮ ಪ್ರತಿನಿಧಿಗಳನ್ನು ತಪ್ಪದೆ ಈ ಸಭೆಗೆ ಕಳುಹಿಸಬೇಕಾಗಿ ಸ್ಥಳೀಕ ಕಾಂ। ಕ. ಸೆಕ್ರೆಟರಿಯವರು ಎಲ್ಲಾ ಗ್ರಾಮಸ್ಥರಲ್ಲಿ ವಿನಂತಿಸುತ್ತಾರೆ.

ಕಾರ್ಕಳ:— ಅಖಿಲ ಭಾರತ ರೈತಸಂಘದ ಅಧ್ಯಕ್ಷರೂ ಸುಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳೂ ಆದ ಪ್ರೊಫೆಸರ್ ರಂಗ ಎಂ ಎಲ್. ಎ. ರವರು ತಾರೀಕು [illegible] ದಿನ ಇಲ್ಲಿ ಕೂಡಿದ ಸಾರ್ವಜನಿಕ ಸಭೆಯ ರೈತಜನರ ಸಂಘಟನೆ ಮತ್ತು ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಮಹತ್ವಪೂರ್ಣ ಭಾಷಣವನ್ನು ಕೊಟ್ಟರು.

ಕಾರ್ಕಳ ತಾಲೂಕಿನ ಕಾಂಗ್ರೆಸ್ ಕಾರ್ಯಕರ್ತರ ಸಭೆಗಳು ಬೈಲೂರು, ಮುದ್ರಾಡಿ ಮೊದಲಾದ ಕೆಲವು ಕಡೆಗಳಲ್ಲೂ ಆಗಿ, ಗ್ರಾಮ ಕಾಂಗ್ರೆಸ್ ಕಮಿಟಿಗಳ ಸ್ಥಾಪನೆಯಾಗಿರುವುದು, ಮಾತ್ರವಲ್ಲದೆ ಕಾಂಗ್ರೆಸ್ ಕಾರ್ಯಕ್ರಮವನ್ನು ಮುಂದರಿಸುವುದಕ್ಕಾಗಿ ಯೋಗ್ಯ ವಿಚಾರ ಯೋಜನೆಗಳೂ ಆಗಿರುವುವು.

ಈ ತಾಲೂಕಿನ ಮಾಳದುರ್ಗ, ಈದು ಕೆರ್ವಾಶಿ ಗ್ರಾಮಗಳ ನಿವಾಸಿಗಳು ಒಂದು ಸಾರ್ವಜನಿಕ ಸಭೆಯಲ್ಲಿ ತಮ್ಮ ಕೇಂದ್ರಕ್ಕೆ ಶಾಲೆ, ಆಸ್ಪತ್ರೆ, ಬಾವಿಗಳನ್ನು ಕೊಡಬೇಕೆಂದೂ ಪಂಚಾಯತಬೋರ್ಡನ್ನು ಸ್ಥಾಪಿಸಬೇಕೆಂದೂ ಸಂಬಂಧಪಟ್ಟ ಅಧಿಕಾರಿಗಳನ್ನು ಪ್ರಾರ್ಥಿಸಿ ಠರಾವು ಮಾಡಿಕೊಂಡಿರುವರು.

ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಲಯದಿಂದ ಮದ್ರಾಸು ಯುನಿವರ್ಸಿಟಿಯ ಶಿರೋಮಣಿ ಮತ್ತು ಸಂಸ್ಕೃತ ಪ್ರವೇಶಪರೀಕ್ಷೆಗೆ ನಿಂತ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ತಮ್ಮ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವುದು ಸ್ತುತ್ಯವಾಗಿದೆ.

ಆರ್ಯಧರ್ಮ ಪ್ರಚಾರ ಮಾಡುವ ನಿಮಿತ್ತ ಸಾಣೂರಲ್ಲಿ ಹಲವು ಮಂದಿ ತರುಣರು ಕೂಡಿ ಆರ್ಯ ಸಮಾಜ ಸಭೆಯನ್ನು ಸ್ಥಾಪಿಸಿಗೊಂಡಿರುವರು. ಶ್ರೀ ಸಾಣೂರು ಸದಾನಂದ ಶಾಂತಿಯ ಈ ಸಭೆಯ ಕಾರ್ಯದರ್ಶಿಗಳಾಗಿರುತ್ತಾರೆ.

ಹೊಸದುರ್ಗ— ಈ ಸೆಂಟರಿಗೆ ಸೇರಿದ ಬೋರ್ಡ್ ಶಾಲೆಯ ಉಪಾಧ್ಯಾಯರಾದ ಕಣ್ಣ ಎಂಬವರು (ಮಲೆಯಾಳಿ ಜೇಡರ ಸಮಾಜದವರು) ಅದೇ ಸೆಂಟರಿಗೆ ಸೇರಿದ ಬೋರ್ಡ ಬಾಲಿಕಾ ಪಾಠಶಾಲೆಯ ಉಪಾಧ್ಯಾಯಿನಿ ಲಕ್ಷ್ಮಿ ಎಂಬವರನ್ನು (ಮಲೆಯಾಳಿ ಬಿಲ್ಲರ ಸಮಾಜದವರು) ಇದೇ ಕಳೆದ ಜೂನ್ ತಿಂಗಳಲ್ಲಿ ರಜಿಸ್ಟರ್ ಮೂಲಕ ವಿವಾಹವಾದರೆಂದು ತಿಳಿದುಬರುತ್ತದೆ.

ಉಡುಪಿ— ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆರ್ಥಿಕ ಸ್ಥಿತಿ, ಹಳ್ಳಿ ಕಮಿಟಿಗಳ ರಚನೆ, ಮುಸ್ಲಿಮರನ್ನು ಕಾಂಗ್ರೆಸ್ಸಿಗೆ ಸೇರಿಸುವ ಪ್ರಯತ್ನ, ಜಿಲ್ಲಾ ರಾಜಕೀಯ ಪರಿಷತ್ತನ್ನು ಜರಗಿಸುವುದು ಡಿ ಬೋರ್ಡ್ ಮತ್ತು ಮುನಿಸಿಪಾಲಿಟಿ ಚುನಾವಣೆಯ ಪ್ರಶ್ನೆಯ ಪುನರ್ ವಿಚಾರವೇ ಮೊದಲಾದ ಪ್ರಾಮುಖ್ಯ ಪ್ರಶ್ನೆಗಳನ್ನು ನಡೆಸಲು ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಶೇಷ ಸಭೆಯೊಂದನ್ನು ಒಂದು ವಾರದೊಳಗೆ ಕರೆಯಬೇಕೆಂದು ಜಿ. ಕಾಂ ಕಮಿಟಿ ಮೆಂಬರರು ಕೆಲವರು ಅರ್ಜಿಮಾಡಿಕೊಂಡಿರುವರೆಂದೂ ಇದಕ್ಕೆ ಉಡುಪಿಯ ಮೆಂಬರರಲ್ಲಿ ಸಹಿಹಾಕಿ ಜಿಲ್ಲಾ ಕಾಂ। ಕಮಿಟಿ ಸಭೆಯನ್ನು ಉಡುಪಿಗೆ ಕರೆದಿರುವರೆಂದೂ ತಿಳಿದುಬರುತ್ತದೆ

(ಬಾತ್ಮಿದಾರರಿಂದ)

ಕುಂದಾಪುರ— ಇಲ್ಲಿಯ ಬೋರ್ಡ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದುದರಿಂದ ಸ್ವತಃ ಪುತ್ತೂರಿನಿಂದ ಮ. ರಾ। ಶೇಷಪ್ಪ, ಬಿ. ಎ. ಎಲ್. ಟಿ. ಇವರನ್ನು ಕುಂದಾಪುರಕ್ಕೆ ವರ್ಗಾಯಿಸಿದ್ದಾರೆ ಇಲ್ಲಿ ಈ ವರ್ಷ [illegible] ಕೆಮಿಸ್ಟ್ರಿ ಕ್ಲಾಸನ್ನು ತೆರೆದಿರುವುದು ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗಿರುತ್ತದೆ

ಇಲ್ಲಿನ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಕಾರ್ಕಳ ಹೈಸ್ಕೂಲಿನಿಂದ ಇಲ್ಲಿಗೆ ವರ್ಗವಾಗಿ ಬಂದಿರುವ ಶ್ರೀ ಜಿ ವಿ ಪುರಾಣಿಕ ಬಿ. ಎ. ಎಲ್. ಟಿ. ಇವರಿಗೆ ಹೈಸ್ಕೂಲಿನ ಉಪಾಧ್ಯಾಯರುಗಳೆಲ್ಲ ಟೀಪಾರ್ಟಿಯನ್ನು ಕೊಟ್ಟಿರುತ್ತಾರೆ

ಕರ್ನಾಟಕ ಸಾಹಿತ್ಯ ಸಂಘದ ಕಾರ್ಯನಿರ್ವಾಹಕ ಸಭೆಯು ಕಳೆದ ತಾ. [illegible]ರಲ್ಲಿ ಜರಗಿತು ಅನೇಕ ಮಹತ್ವ ವಿಷಯಗಳು ಚರ್ಚಿಸಿ ನಿರ್ಣಯಿಸಲ್ಪಟ್ಟವು ಖಾಲಿಯಾದ ಕಾರ್ಯನಿರ್ವಾಹಕ ಸಮಿತಿಯ [illegible] ಸ್ಥಾನಗಳಿಗೆ ಶ್ರೀಗಳಾದ ಎ. ವಿ. ಎಸ್ ಹೆಬ್ಬಾರ್ ವಕೀಲ್ ಎಸ್ ಭಾಸ್ಕರರಾವ್ ವಿ ಎಂ ಸಾವಡೇಕ, ಶ್ರೀಮತಿ ಸುಶೀಲಾಬಾಯಿ ಉಡುಪ (ಡಿ ಬೋ। ಮೆಂಬರ್) ಸದಸ್ಯರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿರುವರು. ಈ ಸಂಘದ ಆಶ್ರಯದಲ್ಲಿ ನಡಿಯುತ್ತಿರುವ ಧರ್ಮಾರ್ಥ ವಾಚನಾಲಯಕ್ಕೆ ಬಿಯಾಯಿತಿ ದರದಿಂದ ಪತ್ರಿಕೆಗಳನ್ನು ಕಳುಹಿ ಕೊಟ್ಟಿರುವ ಎಲ್ಲಾ ಪತ್ರಿಕಾ ಸಂಪಾದಕರನ್ನು ಈ ಸಂಘವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ ಎಂಬ ಠರಾವು ಅಂಗೀಕರಿಸಲ್ಪಟ್ಟಿತು ಸಾರ್ವಜನಿಕ ಧರ್ಮಾರ್ಥ ವಾಚನಾಲಯಕ್ಕೆ ಸಹಾಯಧನವನ್ನು ದಯಪಾಲಿಸುವಂತೆ ಡಿಸ್ಟ್ರಿಕ್ಟ್ ಬೋರ್ಡ್ ಮೊದಲಾದ ಸಂಸ್ಥೆಗಳಿಗೆ ಅರ್ಜಿಗಳನ್ನು ಕಳುಹಿಸಿಕೊಡಬೇಕೆಂದೂ ನಿರ್ಣಯಿಸಲಾಯಿತು. ಬೆಂಗಳೂರು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಕಳುಹಿಸಿರುವ ಸೂಚನೆಗಳಿಗೆ ಕೂಡಲೇ ಉತ್ತರವನ್ನು ಕಳುಹಿಸಿಕೊಡಬೇಕೆಂದೂ ನಿರ್ಣಯಿಸಲಾಯಿತು

ಉಡುಪಿ ಕೃಷ್ಣಮೂರ್ತಿ ನಾಟಕ ಕಂಪೆನಿಯವರು ಕುಂದಾಪುರದಲ್ಲಿ [illegible] ನಾಟಕಗಳನ್ನು ಉತ್ತಮ ರೀತಿಯಲ್ಲಿ ಅಭಿನಯಿಸಿದರು. ಪ್ರೋತ್ಸಾಹವು ಚೆನ್ನಾಗಿತ್ತದೆ. ನಾಟಕಗಳು ಉತ್ತಮವಾಗಿ ಅಭಿನಯಿಸಲ್ಪಟ್ಟವು ಈ ವರೆಗೆ ಆಡಿದ ನಾಟಕಗಳೆಲ್ಲಾ ಪೌರಾಣಿಕಗಳೇ ಆಗಿರುವುದರಿಂದ ಇನ್ನಾದರೂ ನಾಗರಿಕ ಮಾನ್ಯವಾದ ಸಾಮಾಜಿಕ ಮತ್ತು ಚಾರಿತ್ರಿಕ ನಾಟಕಗಳನ್ನು ಇವರು ಆಡುವುದು ಅತ್ಯವಶ್ಯಕವಾಗಿರುತ್ತದೆ ಎಂಬುದನ್ನು ಸೂಚಿಸದೆ ಇರಲಾರೆವು.

ಇನ್ನೊಂದು ಪಾರ್ಲಿಮೆಂಟಿನ ರಚನೆ

ರಾಜೇಂದ್ರ ಬಾಬುಗಳ ಹೊಸ ಯೋಜನೆ.

"ಸ್ವಾತಂತ್ರ್ಯ ತಪ್ಪಿದ ನಾನು ಪ್ರಾಂತ್ಯಕ್ಕಾಗಿ, ಸಮಸ್ತ ದೇಶಕ್ಕಾಗಿ ಶ್ರಮಿಸುತ್ತಲಿದ್ದೇನು. ನೀವು ಭರವಸೆಯಿಯುವುದಾದರೆ ನಿಮ್ಮಲ್ಲಿ ಇನ್ನೊಂದು ಪಾರ್ಲಿಮೆಂಟನ್ನು ರಚನೆ ಮಾಡುವೆನು" ಎಂದು ಶ್ರೀ ಬಾಬುರಾಜೇಂದ್ರ ಪ್ರಸಾದರು ಸಾರನ್ ಜಿಲ್ಲೆಯ ಜೈನ್‌ಪುರಾ ಎಂಬಲ್ಲಿ ಹಳ್ಳಿಗರ ಸಭೆಯೊಂದನ್ನು ಸಂಭೋದಿಸುತ್ತಾ ಮಾತನಾಡಿದರು.

ಆ ಹಳ್ಳಿಯಲ್ಲಿ ನೆರೆಯು ಬಾರದಂತೆ ಅಲ್ಲಲ್ಲಿ ಕಟ್ಟೆಗಳನ್ನು ಹಾಕಲೂ, ನೀರುದಾರಿಯನ್ನು ತೋಡಲೂ, ಶ್ರೀ ರಾಜೇಂದ್ರ ಬಾಬುಗಳ ವಿನಂತಿ ಮೇರೆಗೆ ಅನೇಕರು ಮುಂದೆ ಬಂದಿರುವರು.

ಮಂತ್ರಿಗಳೂ—ಸಿವಿಲ್ ನೌಕರರೂ.

ಓರ್ವ ಮಂತ್ರಿಗಳಿಗೆ ವಿರೋಧವಾದ ಪ್ರಚಾರ ಇತ್ಯಾದಿಗಳನ್ನು ನಡೆಸಿದ್ದಕ್ಕಾಗಿಯೂ, ಪ್ರಾಂತ್ಯದ ರಾಜಕೀಯ ವಿಚಾರದಲ್ಲಿ ಕೈಹಾಕಿದುದಕ್ಕಾಗಿಯೂ ಅಸ್ಸಾಮಿನ ಸಿವಿಲ್ ನೌಕರರಿಬ್ಬರು ಸರಕಾರದ ಶಿಸ್ತಿನ ಕಾಯಿದೆಗೆ ಒಳಗಾಗಿರುವರು. ಅವರ ಕುರಿತು ವಿಚಾರಣೆಯು ನಡೆಯುತ್ತದೆ ಅವರ ತಪ್ಪಿನ ಕುರಿತು ಅನೇಕ ದಾಖ್ಲೆಗಳು ದೊರಕಿವೆ

ಟಿಬೆಟ್ಟಿನಲ್ಲಿ ಅಜಂತಾ ಚಿತ್ರಗಳು.

ಟಿಬೆಟ್ಟಿನಲ್ಲಿ, ಹಿಂದೀಯ ಸಂಸ್ಕೃತಿಯು ತುಂಬಾ ಇದೆ. ಹಿಂದೂ ದೇಶದ ಪ್ರೇರಣೆಯು ಟಿಬೆಟ್ಟಿನಲ್ಲಿ ನಡೆದುದು ಅಲ್ಲಿನ ಅನೇಕ ಕಡೆಗಳಲ್ಲಿ ಕಾಣಬಹುದು ಅಲ್ಲಿನ ಒಂದು ದೇವಾಲಯದ ಗೋಡೆಗಳಲ್ಲಿ ೧೧ನೇ ಶತಮಾನದ ಕಾಶ್ಮೀರ ಚಿತ್ರಗಳಿವೆ. ಅಲ್ಲದೆ ಒಂದು ಬೌದ್ಧ ಮಠದಲ್ಲಿ ಅಜಂತಾ ಚಿತ್ರಗಳನ್ನು ಕಂಡುಹಿಡಿದಿರುವರು

೪೦,೦೦೦ ರೂ ಲಾಭ.

ಫೈಜಾಪುರ ಕಾಂಗ್ರೆಸ್ಸಿನ ಲೆಖ್ಖಾಚಾರವು ಸಂಪೂರ್ಣವಾಗಿ ಪರಿಶೋಧಿಸಲ್ಪಟ್ಟು, ಅದರಿಂದ ರೂ. ೪೦,೦೦೦ ಮುನಾಫೆ ಉಳಿದಿರುತ್ತದೆಂದು ತಿಳಿದುಬರುತ್ತದೆ ಈ ಹಣವು ಮಹಾರಾಷ್ಟ್ರ ಕಾಂಗ್ರೆಸ್ ಮಂಡಲದೊಡನೆ ಇರುವುದು

ಸರಕಾರದ ಮೇಲೆ ಮಾನನಷ್ಟದ — ದಾವೆ.

ಪಂಜಾಬಿನ ಕಾಂಗ್ರೆಸ್ ಮುಖಂಡರಾದ ಡಾಕ್ಟರ್ ಆಲಮ್ಮರು, ಅಲ್ಲಿನ ಸರಕಾರದ ಗಜೇಟಿನ ಮೇಲೆ ಕಾರ್ಯದರ್ಶಿಯ ಮೇಲೆ ಮಾನನಷ್ಟದ ವ್ಯಾಜ್ಯವನ್ನು ಹೂಡಿರುವರು. ಆ ಗಜೇಟಿನಲ್ಲಿ,ಪಂಜಾಬಿನಲ್ಲಿ ಕಾಂಗ್ರೆಸ್ಸಿನವರು ಮುಸ್ಲಿಮರನ್ನು ಕಾಂಗ್ರೆಸ್ಸಿನೊಡನೆ ಸೇರಿಸಿ ಕೊಳ್ಳಲು ೫ ಲಕ್ಷ ರೂಪಾಯಿಗಳನ್ನು ವ್ಯಯಿಸಬೇಕಾಗಿಯೂ, ಆ ಕುರಿತು ಪ್ರಚಾರ ನಡೆಯಿಸಲು ಡಾ। ಆಲಮ್ಮರಿಗೆ ಈ ಹಣವು ಸಂದಿರುತ್ತದೆಂದೂ ತಪ್ಪು ಸಂಗತಿಯು ಪ್ರಕಟವಾದುದೇ ಈ ದಾವೆಗೆ ಕಾರಣವಂತೆ ಈ ವ್ಯಾಜ್ಯವು ಬೇರೆ ಪ್ರಾಂತ್ಯದಲ್ಲಿ ತೀರ್ಮಾನಿಸಲಾಗುವುದಂತೆ

ಆಲ್ವಾರ್ ಮಹಾರಾಜರಿಗೊಂದು ಸ್ಮಾರಕ.

ಮೊನ್ನೆ ದಿವಂಗತರಾದ ಆಲ್ವರ್ ಮಹಾರಾಜರ ಸ್ಮಾರಕವಾಗಿ ಒಂದು ಮೊಪೊರಿಯನ್ನು ಕಟ್ಟಿಸಲು ರೂ. ೪೫ ಸಾವಿರವನ್ನು ಆಲ್ವರ್ ರಾಜ್ಯದವರು ವ್ಯಯಿಸಬೇಕೆಂದಾಗಿದೆ. ಅಲ್ಲದೆ, ಹಿಂದೀ ಸೇವಾ ಸಂಘದವರು ಅವರ ಸ್ಮಾರಕಾರ್ಥವಾಗಿ ಒಂದು ಸ್ಮಾರಕ ಪತ್ರಿಕೆಯನ್ನು ಹೊರಡಿಸಿ, ಅದರಲ್ಲಿ ಮಹಾರಾಜರ ಜೀವನ ಚರಿತ್ರೆಯನ್ನೂ ಭಾಷಣಗಳನ್ನೂ ಗ್ರಂಥಗಳನ್ನುಗಳನ್ನೂ ಕೊಡಬೇಕೆಂದಿದ್ದಾರೆ

ಲಂಡನ್ ನಗರವನ್ನು ರಕ್ಷಿಸಲು—

ಸ್ವೀಡಿಸ್ ತುಪಾಕಿಗಳನ್ನು ಕೊಂಡುಕೊಳ್ಳಬೇಕಾಗಿ ಗುಪ್ತವಾದ ವ್ಯವಹಾರವು ನಡೆದಿರುತ್ತದೆ. ಈ ತುಪಾಕಿಗಳಿಂದ ಅಂತರಿಕ್ಷದ ಅತಿಕ್ರಮಗಳನ್ನು ತಡೆಯಬಹುದಂತೆ ಅಂತರಿಕ್ಷದ ಅತಿಕ್ರಮವನ್ನು ತಡೆಯುವ ವಿಶೇಷ ಗುಣಗಳು ಸ್ವಿಡಿಶ್ ತುಪಾಕಿಗಳಲ್ಲಿರುವುದೆಂದು ತಿಳಿದುಬರುತ್ತದೆ.

ಮಧ್ಯರಾತ್ರಿಯಲ್ಲಿ ಡಕಾಯಿತಿ.

ರಾಜಮಹಲಿನ ಹತ್ತಿರವಿರುವ ಬಾರಂಗಾ ಎಂಬ ಹಳ್ಳಿಯ ಬಾಬುಚಂದ ರೈ ಎಂಬ ಜಮೀನ್ದಾರರ ಮನೆಯನ್ನು ನೂರು ಮಂದಿ ಡಕಾಯಿತರು ರಾತ್ರಿ ಹೊತ್ತು ನುಗ್ಗಿ, ಮಲಗಿದ್ದವರನ್ನು ಬಡಿದು ಸಾಧಾರಣ ೨೫,೦೦೦ ರೂ. ಮೌಲ್ಯದ ಆಭರಣ ಮತ್ತು ನಗದಿಯನ್ನು ದೋಚಿಕೊಂಡು ಪಲಾಯನ ಮಾಡಿರುವರು

ತಾಯಿಬೆಕ್ಕು ನಾಯಿಮರಿಗೆ ಜನ್ಮ ಕೊಟ್ಟಿತು.

ಸಂಯುಕ್ತ ಅಮೇರಿಕಾದ ವಿಲ್ಮಿಂಗ್‌ಟನ್ ಎಂಬಲ್ಲಿ ಒಂದು ತಾಯಿಬೆಕ್ಕು ನಾಯಿಮರಿಯನ್ನು ಹಡೆದಿದೆ ಅದು ಬುಲ್‌ಡೋಗಿನ ಮರಿಯಂತಿದೆ ಮೈಯಲ್ಲಿ ಕಪ್ಪು, ಹಳದಿ ಮತ್ತು ಬಿಳೀ ಬಣ್ಣಗಳಿವೆ ಜನ್ಮಕ್ಕೆ ಬರುತ್ತಲೇ ಅದು ಬೆಕ್ಕಿನಂತೆ ಕೂಗಿತು ಅದರ ಇತರ ವರ್ತನೆಗಳು ನಾಯಿಯಂತೆ ಇದೆ ಇದರಿಂದ ಅಲ್ಲಿಯ ವಿಜ್ಞಾನಿಗಳನೇಕರು ಆಶ್ಚರ್ಯಗೊಂಡಿರುವರು

೨೭ ಲಕ್ಷ ರೂ. ಮೌಲ್ಯದ ಕಬ್ಬು

ಸಂಯುಕ್ತ ಪ್ರಾಂತ್ಯಗಳಲ್ಲಿ ಸಕ್ಕರೆ ಕಾರಖಾನೆಯವರು ಕೊಂಡುಕೊಳ್ಳದೆ, ಗದ್ದೆಗಳಲ್ಲೇ ಹಾಳಾಗುತ್ತಿದೆ ಹಿಂದೂದೇಶದಲ್ಲಿ ಸಕ್ಕರೆ ತಯಾರಿಯು ಅತಿರೇಕವಾಗಿ ನಡೆದು, ಧಾರಣೆಯು ಕೆಟ್ಟುಹೋಗಿ ಕಾರಖಾನೆ ಮಾಲಿಕರಿಗೆ ಲಾಭ ಉಳಿಯದಂತಾಗಿದೆ, ಕೆಲವು ಕಡೆಗಳಲ್ಲಿ ಕಡಿಮೆಯಾಗಿದೆ ಧಾರಣೆಯನ್ನು ಹೆಚ್ಚಿಸಿ ಲಾಭವನ್ನು ಗಳಿಸಲು, ಸಕ್ಕರೆ ತಯಾರಿಯನ್ನು ಕಡಿಮೆಮಾಡಬೇಕಾಗಿ ಅಲ್ಲಿನ ಅನೇಕ ಸಕ್ಕರೆ ಕಾರಖಾನೆಗಳು ನಿರ್ಧಾರಮಾಡಿವೆ ಅಲ್ಲದೆ ಸಕ್ಕರೆಯ ಮೇಲೆ ಅಬಕಾರಿ ಸುಂಕವು ಹೆಚ್ಚಿಸಲಾಗಿದೆ ಧನಾಢ್ಯರ ಹಣಗಳಿಸುವ ಆಲೋಚನೆಯಿಂದ, ಇತ್ತೀಚೆಗೆ ಸಕ್ಕರೆಗೆ ಬೇಕಾದ ರಕ್ಷಣೆಯಿಲ್ಲದೆ, ಬಡ ರೈತರು ಸಂಕಷ್ಟಕ್ಕೊಳಗಾಗಬೇಕಾಗಿದೆ

ಹಿಂದೂ ವಿಶ್ವವಿದ್ಯಾಲಯಕ್ಕೆ

ವ್ಯವಸಾಯ ಪರಿಶೋಧನೆಗಾಗಿ ಇಂಪೀರಿಯಲ್ ಕೌನ್ಸಿಲಿನಿಂದ, ೭೬. ವರ್ಷಗಳ ತನಕ ವರ್ಷ ೧ಕ್ಕೆ ರೂ ೧೦,೦೦೦ ದ ಪ್ರಕಾರ ಗ್ರೇಂಟು ಕೊಡಬೇಕೆಂದಾಗಿದೆ ಕಬ್ಬು ಮತ್ತು ಗೋದಿಯ ಕುರಿತು ಪರಿಶೋಧನೆ ನಡೆಯಿಸಲು ವಿಶ್ವವಿದ್ಯಾಲಯವು ಈ ಹಣವನ್ನು ವ್ಯಯಿಸುವುದಾಗಿ ತಿಳಿದುಬರುತ್ತದೆ.

ಮಹಾತ್ಮಾ ಗಾಂಧಿ? – ರಾಯ್?

ಭಾರತೀಯ ರಾಜಕೀಯ ಚಳವಳದ ನಾಯಕತ್ವವನ್ನು ಕೊಮ್ಯುನಿಷ್ಟರಾದ ಎಂ ಎನ್. ರಾಯ್‌ಯವರು ವಹಿಸಬೇಕಾಗಿಯೂ, ಮಹಾತ್ಮಾಜಿಯವರು ನಿವೃತರಾಗಬೇಕಾಗಿಯೂ ಕೆಲವರು ಕೆಲವು ಪತ್ರಿಕೆಗಳಲ್ಲಿ ಸೂಚನೆಕೊಡುತ್ತಿದ್ದಾರೆ. ಆದರೆ, ರಾಯರಲ್ಲಿ ಮಹಾತ್ಮಾಜಿಯ ವರೆಷ್ಟು ಯೋಗ್ಯತೆಯಿರುವುದೇ ಎಂಬ ಸಂಶಯವುಂಟಾಗಿದೆ

ಚೀನಾದಲ್ಲಿ ಜಪಾನೀಯರ ಅಕೃತ್ಯ

ಇಗರ್ಜಿ ಮತಗುರುಗಳ ಮೇಲೆ ಹಿಟ್ಲರನ ವಕ್ರದೃಷ್ಟಿ.

ಚೀನಾ ದೇಶದ ಟಿನ್‌ಸ್ಟಿನ್ ಎಂಬಲ್ಲಿನ ಹಾಯಿಹೊ ನದಿಯಲ್ಲಿ ದಿನಂಪ್ರತಿ ಚೀನೀಯರ ಶವಗಳು ತೇಲಾಡಿಬರುತ್ತಿವೆ ಆ ಶವಗಳು ಎಲ್ಲಿಂದ ಬರುತ್ತಿವೆಯೆಂಬುದನ್ನು ಕಂಡುಹಿಡಿಯಲು ಪೋಲೀಸರು ಇಂದಿಗೆ ಅನೇಕ ದಿವಸಗಳಿಂದ ಶ್ರಮಿಸುತ್ತಿದ್ದರು ಶವಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ ಇದು ಜಪಾನೀಯರ ಕೆಲಸವೆಂದೂ, ಈಗ ಅವರು ಅಲ್ಲಿ, ಅಲ್ಲಲ್ಲಿ ಕೋಟೆಕೊತ್ತಳಗಳನ್ನು ರಚಿಸುತ್ತಿದ್ದಾರೆಂದೂ, ಆ ಕೆಲಸಮಾಡಿದ ಚೀನಿಯ ಕೂಲಿಗಾರರನ್ನು ಸಂಗ್ರಾಮ ರಹಸ್ಯ ಹೊರಬೀಳದಂತೆ, ಕೊಲೆಗೈಯ್ಯುತ್ತಿರುವರೆಂದೂ ಚೀನಾ ದೇಶದ ಕೆಲವು ಪತ್ರಿಕೆಗಳ ಅಭಿಪ್ರಾಯವಾಗಿರುತ್ತದೆ

ಸ್ಪೈನಿನ ದಂಗೆಯ ಗುಟ್ಟು

ಸ್ಪೈನಿನ ದಂಗೆಯ ಗುಟ್ಟೇನು? ಮುಸಲಿನಿಯು ಅಬಿಸಿನಿಯಾವನ್ನು ಹಿಡಿದುದರ ಗುಟ್ಟೇನು? ಮೋಟಾರು ವಾಹನಗಳಿಗೆ ಬೇಕಾದ ಪೆಟ್ರೋಲ್ ಮತ್ತು ತಾಮ್ರವು ಅಲ್ಲಿರುವುದೆಂದು ಪೆರಿಸ್ ನಗರದ ಒಂದು ಪ್ರಾಮುಖ್ಯ ಪತ್ರಿಕೆಯ ಅಭಿಪ್ರಾಯ ಈ ಎರಡು ಪದಾರ್ಥಗಳು ಬ್ರಿಟನಿನೊಡನೆ ತುಂಬಾ ಇವೆ ಅದರಿಂದ ಯುದ್ಧ ಸಮಯದಲ್ಲಿ ಅವುಗಳ ಕುರಿತು ಏನೂ ಭಯಪಡಬೇಕಾಗಿಲ್ಲ ಇಟೀಲಿಯೊಡನೆ ಬೇಕಾದ ಸೀಮೆ ಎಣ್ಣೆ ಇಲ್ಲ ತಾಮ್ರವೂ ಇಲ್ಲ ಇವೆರಡೂ ಯುದ್ಧಕ್ಕೆ ಬೇಕಾದ ಮುಖ್ಯಪದಾರ್ಥಗಳು ತನ್ನ ಸಂಗ್ರಾಮ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಲು ಮುಸಲೀನಿಯು ಸ್ಪೈನಿನ ದಂಗೆಯನ್ನು ಎಬ್ಬಿಸಿ ಯುದ್ಧವನ್ನು ನಡೆಯಿಸಿಬಿಟ್ಟನು

ಇಟೀಲಿಯನ್ ಸರಕಾರವು ಬ್ರಿಟಿಷ ಕಾರಣೀಕನನ್ನು ಬಹಿಷ್ಕರಿಸಿದ್ದರೂ, ಡ್ಯೂಕ್ ಆಫ್ ವಿಂಡ್ಸರರ ವಿವಾಹಕ್ಕೆ ಸಂಬಂಧಗಳನ್ನು ಕಳುಹಿಸಿಕೊಟ್ಟಿದೆ

ಜರ್ಮನಿಯಲ್ಲಿನ ಮತಗುರುಗಳಿಗೂ ನಾಜಿಗಳಿಗೂ ಶಿಕ್ಷಾಟವ್ಯಾಪಾರ ಭವಂಗಿದ ಮತಗುರುಗಳ ಮೇಲೂ ಇಗರ್ಜಿಗಳ ಮೇಲೂ ಹಿಟ್ಲರನ ವಕ್ರದೃಷ್ಟಿಗ ಬಿದ್ದಿರುತ್ತದೆ

ವಿದ್ಯಾರ್ಥಿಗಳಿಗೆ ಧರ್ಮಾರ್ಥ ಪ್ರಯಾಣ.

೩೫೦ ಚೀನಿಯ ವಿದ್ಯಾರ್ಥಿಗಳು ನಾಕಿಂಗ್ ಎಂಬಲ್ಲಿ ಹೋಗುವರೆ ರೈಲ್ವೇ ಸಂಸ್ಥೆಯೊಡನೆ ಧರ್ಮಾರ್ಥ ಪ್ರಯಾಣವನ್ನು ಕೇಳಿದಾಗ, ಸಂಸ್ಥೆಯವರು ಅದಕ್ಕೆ ಸಮ್ಮತಿಸದಿರಲು,ಅವರು ಕಂಬಿಗಳ ಮೇಲೆ ಕುಳಿತ ಮುಷ್ಕರಹಿಡಿದರು ಕೊನೆಗೆ ಅವರಿಗೆ ರೈಲ್ವೇ ಗಾಡಿಯೊಳಗೆ ಪ್ರವೇಶಿಸಲು ಬಿಟ್ಟರು ಆದರೆ, ಅವರನ್ನು ಒಯ್ದುದು ನಾಕಿಂಗಿಗಲ್ಲ, ಚಿನ್‌ಸ್ಟಿನ್ನಿಗೆ ನಾಕಿಂಗಿನಿಂದ ೫೦೦ ಮೈಲು ದೂರ

ಮೃತ್ಯುಕರ ದಾವೆ

ಬುಡಾಪೆಸ್ಟಿನ ಇಬ್ಬರು ವರ್ತಕರೊಳಗೆ ದಾವೆಯುಂಟಾಯಿತು ಅದು ವಕಾಲತು ಮಾಡಿದ ವಕೀಲರಿಗೆ ಮೃತ್ಯುಕರವೆನಿಸಿತು

ವ್ಯಾಜ್ಯದ ಮೊದಲನೇ ವ್ಯವಹರಣೆಯಲ್ಲಿ ವಕೀಲರು ಕೋರ್ಟಿನಲ್ಲೇ ಮೃತರಾದರು ಎರಡನೇ ಬಾರಿ ವಕಾಲತು ವಹಿಸಿಕೊಂಡವರು ದಾವೆಯು ವಿಚಾರಣೆಗೆ ಪ್ರಾರಂಭವಾಗುವ ೨ ದಿವಸಗಳ ಮುಂಚೆಯೇ ಮೃತರಾದರು

ವಕಾಲತನ್ನು ವಹಿಸಿದ ಮೂರನೇ ವಕೀಲರೂ ಒಂದು ಮೋಟಾರು ಅಪಘಡಕ್ಕೆ ತುತ್ತಾಗಿ ಮೃತರಾದರು ನಾಲ್ಕನೆಯವರ ಮೊನ್ನೆ ದಿನ ದಾವೆಯ ವಿಚಾರಣೆ ನಡೆಯುತ್ತಿರುವಾಗಲೇ ಕೋರ್ಟಿನಲ್ಲೇ ಮೃತರಾದರು

ಹಿಂದೂದೇಶದ ರೈಲ್ವೇ ಸಂಸ್ಥೆಗಳ ಉತ್ಪತ್ತಿಯಲ್ಲಿ ಅಭಿವೃದ್ಧಿ ಕಂಡುಬಂದಿದೆ ಜನಸಂಚಾರದಲ್ಲೂ, ಸರಕು ಸಾಗುವಿಕೆಯಿಂದಲೂ ಆದಾಯವು ಹೆಚ್ಚಿದ್ದಂತೆ ರೈಲ್ವೆಗಳ ಕ್ರಮದ ಬಗ್ಗೆ ವಿಚಾರಮಾಡಲು ನೇಮಕವಾದ ವೆಜ್‌ವುಡ್ ಕಮಿಟಿಯ ವರದಿಯು ಪ್ರಕಟವಾಗಿರುತ್ತದೆ ರೈಲ್ವೇಗಳಿಂದ ಇಂಡಿಯಾ ಸರಕಾರವು ಲಾಭಹೊಂದಬಹುದು ಎಂದು ಈ ಕಮಿಟಿಯ ಅಭಿಪ್ರಾಯ

ಮಲಯಾ ಆ ಕಡೆ ಸಂಚಾರಕ್ಕೆ ತೆರಳಿದ್ದ ತಿರವಾಂಕೂರಿನ ಮಹಾರಾಜರು ಸ್ವದೇಶಕ್ಕೆ ಹಿಂತಿರುಗಿರುವರು

ಮಳೆಯ ದೆಸೆಯಿಂದಲೇ ತಂಡಿಯುಂಟಾಗುವುದು

ಮಳೆಗಾಲದಲ್ಲಿ ಶೀತ, ಕೆಮ್ಮು ಯಾವಾಗಲೂ ಇರುವುದು ಆದುದರಿಂದ, ಮೈಯೊಳಗೆ ಚಳಿಯುಂಟಾದಾಗ ಮತ್ತು ಸೀನು ಬರಲು ಪ್ರಾರಂಭವಾದರೆ, ಕೆಲವು ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ ಅದರಿಂದ ಜಾಗ್ರತೆಯಿಂದಾಗಿ ಚಳಿ ಮತ್ತು ಶೀತವು ದೂರವಾಗುವುದು ಶ್ವಾಸನೀಯ ಪೆಪ್ಸ್ ಗುಳಿಗೆಗಳಿಂದ ಒಳ್ಳೇ ಉಪಶಮನವು ದೊರೆಯದಲ್ಲದೆ ಅದಕ್ಕೆ ರೋಗಾಣುಗಳನ್ನು ಕೊಲ್ಲುವ ಶಕ್ತಿಯಿದೆ ಪೆಪ್ಸ್ ಬಾಯಿಯಲ್ಲಿ ಕರಗಿ ಒಂದು ತರದ ಔಷಧಿಯ ಧೂಮವನ್ನು ಹೊರಡಿಸುತ್ತದೆ ಅದರಿಂದ ಜ್ವರ ಮತ್ತು ಶೀತದ ಅಣುಗಳು ನಾಶವಾಗುವುವು. ಪೆಪ್ಸ್ ಗುಳಿಗೆಯಿಂದ ಮೂಗು ಬಿದಾಗುವಿಕೆ ಗಂಟಲುನೋವು ಗುಣವಾಗುವುದಲ್ಲದೆ ಭಯಂಕರ ಅಪಾಯಗಳಿಂದಲೂ ರಕ್ಷಿಸುವುದು ಪೆಪ್ಸ್ ಗುಳಿಗೆಗಳು ಬಂದಾದ ಸೀಸೆಗಳಲ್ಲಿ ರೂ ।೯೦ಕೆ ದೊರೆಯುತ್ತದೆ

ಏಜಂಟರು — ಮೆಸರ್ಸ್ ದಾಥಾ ಅಂಡ್ ಕೋ, ಪಿ. ಟಿ. ಮದ್ರಾಸು.

ಪೆಪ್ಸ್ ವಿಷಹಾರಿ ಶ್ವಾಸನೀಯ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಯೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ

ಚಾರ್ಮಾಡಿ		ಕಾರ್ಕಳ
ಉಜಿರೆ	(ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಯೆ)	ಉಡ್ಪಿ
ಮಂಗಳೂರು		ಕುಂದಾಪುರ
ಪುತ್ತೂರು		ಮೂಡಬಿದ್ರೆ
ಮುಲ್ಕಿ		ಗಂಗೊಳ್ಳಿ

ಜಿಲ್ಲೆಯ ಹೊರಗೆ

ಮಡಿಕೇರಿ		ಮೈಸೂರು
ಸಕಲೇಶಪುರ		ಚಿಕ್ಕಮಗಳೂರು
	ಮೂಡಿಗೆರೆ	

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೈಂಟ್ ಮೆನೇಜರರಿಗೆ ಬರೆದು ತಿಳಿಸಿರಿ

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd. 1908

Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4 Attractive Bonuses

It pays you to represent this Company

Wanted Agents in unrepresented parts

—1936—

OUR VALUATION YEAR

Take a BOMBAY LIFE Policy now, and share in the profits



Apply to.—

Messrs Kochikar Brothers,

Madras Branch Secretaries.

Branches at:-	P. B. 337, Mount Road, Madras.	Visveshwarapuram Circle, Bangalore City	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No. 4

ನಮ್ಮ ವಿದ್ಯಾಭ್ಯಾಸದ ಪುನರ್ವ್ಯವಸ್ಥೆ

ಎಲಿಮೆಂ[illegible] ...ಯಾಗಿ ತೋರುವಂತೆ ಮಾಡಿ, ನಂತರ ಕ್ರಮೇಣ [illegible] ಸರಕಾರ [illegible] ಕ್ರಮಗಳನ್ನು ಮಾಡಿ ಪ್ರಾಂತ್ಯದ ವಿದ್ಯಾರ್ಥಿ [illegible] ಸೂಚನೆಗಳಿಂದಲೂ ವಿದ್ಯಾಭ್ಯಾಸದ [illegible] ಅನೇಕ ಸೂಚನೆಗಳಿಂದ ಕೂಡಿದ ಮದ್ರಾಸು ಸರಕಾರದ ಪ್ರಕಟನೆ ಒಂದು ಹೊರಟಿದೆ. ಸಂಬಂಧಪಟ್ಟವರು ಕಷ್ಟಪಟ್ಟು ಅದರಲ್ಲಿ ಗೊತ್ತಾದ ಕಾರ್ಯಕ್ರಮವನ್ನು ಸರಿಯಾಗಿ ನಡೆಯಿಸಿ, ಪ್ರಾಂತ್ಯದ ವಿದ್ಯಾಭ್ಯಾಸದ ಉದ್ಧಾರ ಮಾಡುವ ಧೈರ್ಯವು ಸರಕಾರಕ್ಕಿದೆ. ಮುಂದಕ್ಕೆ ಎಲ್ಲಾ ಮಕ್ಕಳು ಐದನೇ ತರಗತಿಯವರೆಗೆ ಕಲಿಯಲೇಬೇಕೆಂಬ ಕಡ್ಡಾಯದ ಕಾಯಿದೆ ಬರಬಹುದು. ಎಲಿಮೆಂಟರಿ ವಿದ್ಯಾರ್ಥಿಗಳಿಗೆ ಈಗ ಅನವಶ್ಯಕವಾಗಿ ವೆಚ್ಚವಾಗುವುದನ್ನು ನಿಲ್ಲಿಸಲಾಗುವುದು. ಹುಡುಗಿಯರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಹೊಂದುವ ಕಾಯಿದೆಗಳಾಗಬಹುದು. ಹಾಯರ್ ಎಲಿಮೆಂಟರಿಗೆ ಎಂಟನೆ ತರಗತಿಗೆ ಸರಕಾರ ಕಲ್ಪಿಸಿರುವ ಸೂಚನೆ ಈ ಪ್ರಕಟನೆಯಲ್ಲಿದೆ. ಈಗಿನ ವಿದ್ಯಾಕ್ರಮವನ್ನು ಸಂಪೂರ್ಣ ಬದಲಾಯಿಸಿ, ಹುಡುಗರನ್ನು ಅವರ ಮುಂದಿನ ಜೀವಮಾನಕ್ಕೆ ತರಬೇತು ಮಾಡುವ ರೀತಿ, ವಿಷಯಗಳು ವಿದ್ಯಾಕ್ರಮದಲ್ಲಿ ಸೇರಿಸಲಾಗುವವು. ಸೆಕೆಂಡರಿ ವಿದ್ಯಾಭ್ಯಾಸದ ವಿದ್ಯಾರ್ಥಿಗಳಿಗೆ ಯೋಗ್ಯ ಉದ್ಯೋಗ ದೊರಕುವ ರೀತಿ ನಡೆಯಿಸಬೇಕಾಗಿ ಅದರಲ್ಲಿ ಸೂಚನೆಗಳಿವೆ. ಸೆಕೆಂಡರಿ ಶಾಲೆಗಳಲ್ಲಿ ವ್ಯವಸಾಯ ವಿಷಯಗಳನ್ನು ಬೋಧಿಸಬೇಕಾಗಿ ಸೂಚನೆಗಳಿವೆ. ಹೀಗೆ ವಿದ್ಯಾಭ್ಯಾಸ ಕ್ರಮವನ್ನು ಮಾರ್ಪಡಿಸಿ ಸುಶಿಕ್ಷಿತರ ಸಂಖ್ಯೆಯನ್ನು ಹೆಚ್ಚಿಸುವ ಆಲೋಚನೆಯು ಈ ಪ್ರಕಟಣೆಯಲ್ಲಿದೆ.

ಐರೋಪ್ಯದ ಶಾಂತಿಭಂಗವಾಗುವುದೆ?

ಪರೀರ್ ವ್ಯವಹಾರದ ಕುರಿತು ಮೊನ್ನೆ ದಿನ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದ್ದಾಗ ಮುಖ್ಯ ಮಂತ್ರಿಗಳಾದ ಚೇಂಬರ್ಲೇನರು, ಐರೋಪ್ಯದ ಶಾಂತಿಗೆ ಅಪಾಯವಿದೆ, ಕಾರಣ ಕೊಮ್ಯುನಿಜಂ, ಫಾಸಿಜಂ ಇತ್ಯಾದಿ ಮತಗಳಿಂದ ಬೇರೆ ಬೇರೆ ಜನಾಂಗಗಳೊಳಗೆ ಗಲಾಟೆಯಾಗುವ ಈ ಸಮಯದಲ್ಲಿ ಆ ವಿವಿಧ ಮತಗಳನ್ನು ಅವಲಂಬಿಸುವ ಜನಾಂಗಗಳು ಸಂಗ್ರಾಮಕ್ಕೆ ಇಳಿಯಲೇ ಬೇಕಾಗುವುದೆಂದು ಅವರ ಅಭಿಪ್ರಾಯವನ್ನು ಸೂಚಿಸಿದರು. ಅವರ ಭಾಷಣದಲ್ಲಿ ಜರ್ಮನಿಯ ಕಡೆ ಹೆಚ್ಚು ಸ್ನೇಹಭಾವವು ಕಾಣುತ್ತದೆ. ತಟಸ್ಥಭಾವ ಸಮಿತಿ ವಿಚಾರದಲ್ಲಿ ಅದು ಸರಿಯಾಗಿರುವುದಿಲ್ಲವೆಂದೂ ಹಿಟ್ಲರ ಮುಸಲೋನಿಯವರು ಸ್ಪೈನಿನಲ್ಲಿ ತಮ್ಮ ಆಟವಾಡುತ್ತಿದ್ದಾರೆಂದೂ, ಲಾಯಿಡ್ ಜಾರ್ಜರು ಹೇಳಲೂ, ರಷ್ಯಾವು ಅದೇ ರೀತಿ ಸ್ಪೈನಿನ ಮಜೂರಿ ಸರಕಾರಕ್ಕೆ ಸಹಾಯವಿತ್ತಿರುತ್ತದೆ, ತಟಸ್ಥಭಾವ ಸಮಿತಿಯನ್ನು ರದ್ದುಮಾಡಿದರೆ, ಸ್ಪೈನಿನ ಸರಕಾರಕ್ಕೆ ಅಷ್ಟೊಂದು ಉಪಕಾರವಾಗಲೊಲ್ಲದೆಂದೂ ಮಿ। ಎಡನ್ನರ ಅಭಿಪ್ರಾಯ. ಅಂತೂ ಈ ವಿಚಾರದಲ್ಲಿ ಬ್ರಿಟನಿನ ವರ್ತನೆಯು ಇನ್ನೂ ಚಂಚಲವಾಗಿರುತ್ತದೆ.

ಸ್ಪೈನಿನ ದಂಗೆ.

ಜನರಲ್ ಫ್ರೆಂಕೊನಿಗೆ ಬಾಸ್ಕಿನ ಬಿಲ್ಬಾವೊದಲ್ಲಿ ಸಂಪೂರ್ಣ ಜಯ ಒದಗಿ ಸಂಪೂರ್ಣ ಬಾಸ್ಕ ಪ್ರದೇಶವು ಆತನ ಕೈವಶವಾಗಿರುತ್ತದೆ. ಸ್ಪೈನಿನ ಲೋಹದ ಗಣಿಗಳಿರುವ ಹೆಚ್ಚಿನ ಪ್ರದೇಶಗಳು ದಂಗೆಗಾರರ ವಶವಾಗಿರುತ್ತದೆ. ಇದರಿಂದ ಜನರಲ್ ಫ್ರೆಂಕೊವಿನ ಬಲವು ಇನ್ನಷ್ಟು ಹೆಚ್ಚಿದಂತಾಗಿದೆ. ಆತನಿಗೆ ಮುಂದಿನ ಸಂಗ್ರಾಮಕ್ಕಾಗಿ ಆಫ್ರಿಕದಿಂದ ಕಪ್ಪು ಸೈನಿಕರ ಮಹಾ ತಂಡತಂಡಗಳೇ ಬಂದಿವೆ. ಫ್ರೆಂಕೊನು ತನ್ನ ಪ್ರಬಲ ಯಾತ್ರೆಯನ್ನು ಮದ್ರಿಡ್ ನಗರದ ಕಡೆಗೆ ನಡೆಯಿಸುತ್ತಿದ್ದಾನೆ. ಆದರೆ ಹಾದಿಯಲ್ಲಿ ದೇಶಪ್ರೇಮಿ ನಗರಗಳು, ಆತನನ್ನು ತಡೆಯಲು ತಕ್ಕ ಸಿದ್ಧತೆಗಳನ್ನು ಮಾಡಿವೆ. ಸಾಟಂಡರ್ ಎಂಬಲ್ಲಿ ದೇಶದಲ್ಲಿ ಬಲವಿದ್ದವರಿಲ್ಲದರೂ, ರಣರಂಗಕ್ಕಿಳಿದು ನಗರ ರಕ್ಷಣೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಇಲ್ಲಿ ಫ್ರೆಂಕೊನನ್ನು ಎದುರಾಯಿಸಲು ೫೦ ಸಾವಿರ ಜನರ ಸೈನ್ಯ ಬಲವು ಸಿದ್ಧವಿದೆ. ಸಿಡಿಮದ್ದಿನ ಕಾರ್ಖಾನೆಗಳು ರಾತ್ರಿ ಹಗಲು ಕಾರ್ಯ ಸುತ್ತಿವೆ. ಜನರಲ್ ಫ್ರೆಂಕೊನಿಗೆ ಆತನ ಜಯದ ಕುರಿತು ಹಿಟ್ಲರನಿಂದ ಮತ್ತು ಮುಸೊಲೋನಿಯಿಂದ ವಂದನಾಪತ್ರಗಳು ಬಂದಿವೆ.

ವಿದ್ಯ ಮಾರ್ಗಗಳನ್ನು ಸಂರಕ್ಷಿಸುವಲ್ಲಿ ಸ್ಪೈನಿನ ಪ್ರಕರಣ ಇನ್ನೂ ಬೇಗನೆ ಇತ್ಯರ್ಥ ಹೊಂದುವುದೆಂದು ಹೇಳಬಹುದು. ಐರೋಪ್ಯದಲ್ಲಿ ಇನ್ನೊಂದು ಘೋರಯುದ್ಧ ಶಾಶ್ವತ ರಚನೆಯಾಗಬಹುದು.

ಆಂಗ್ಲೇಯ—ಜಪಾನ್ ಒಪ್ಪಂದ.

ಕೆಲ ಸಮಯದ ಹಿಂದೆ ಜರ್ಮನ್—ಜಪಾನ್ ಒಪ್ಪಂದವೊಂದು ನಡೆದುಬಿಟ್ಟಿತು. ಮಹಾ ಯುದ್ಧದ ಸಂಭವದಲ್ಲಿ ಜರ್ಮನಿಗೆ ಜಪಾನಿನಿಂದ ಸಹಾಯವಾಗಬೇಕು, ಜಪಾನಿನ ಸಂಕಷ್ಟದ ಸಮಯ ಜಪಾನಿಗೆ ಜರ್ಮನಿಯಿಂದ ಸಹಾಯಬೇಕು, ಎಂಬ ಒಂದು ಕರಾರಾಯಿತು. ಸಧ್ಯದಲ್ಲಿ ಬ್ರಿಟಿಷ್—ಜಪಾನ್ ಒಪ್ಪಂದವಾಗಲಿದೆ. ಶಾಂತ ಸಾಗರದ ವಿಚಾರದಲ್ಲಿ ಬ್ರಿಟಿಷರಿಗೆ ಜಪಾನಿಯರ ಮೈತ್ರಿ ಬೇಕಂತೆ. ಕಾರಣ ಚೀನಾದಲ್ಲಿ ಲಂಡನಿನ ದ್ರಾವ್ಯವು ಸಂಚಯಿಸಲ್ಪಟ್ಟಿದೆ. ಅದರ ಭದ್ರತೆ ಮತ್ತು ರಕ್ಷಣೆಯಾಗಬೇಕು. ಚೀನಾದಲ್ಲಿ ಬ್ರಿಟಿಷರಿಗೆ ಯಾವತ್ತು ಅಡ್ಡಿಗಳು ಬರಬಾರದು. ಪೌರ್ವಾತ್ಯದಲ್ಲಿ ಬ್ರಿಟನಿಗೆ ಇದ್ದುದ್ದು ಒಂದೇ ಒಂದು ಭಯವೆಂದರೆ ಜಪಾನಿನದು. ಈಗ ಒಂದು ಒಪ್ಪಂದದಿಂದ ಜಪಾನೀಯರ ಮೈತ್ರಿಯನ್ನು ಬೆಳೆಯಿಸಿ, ಈ ಭಯವನ್ನು ನಿವಾರಿಸಿ, ತಮ್ಮ ಪಾಶ್ಚಾತ್ಯದ ಸಮಸ್ಯೆಯಕಡೆ ಹೆಚ್ಚಿನ ಗಮನ ಕೊಡುವುದು ಬ್ರಿಟನಿನ ಉದ್ದೇಶ. ಅಂದರೆ, ವ್ಯಾಪಾರ ವಿಚಾರದಲ್ಲಿ ಹಿಂದೂ ದೇಶಕ್ಕೂ ಜಪಾನಿಗೂ ನಡೆಯುವ ಒಪ್ಪಂದ ಕರಾರಿನಲ್ಲಿ ಹಿಂದೂದೇಶದಲ್ಲಿ ಜಪಾನಿಗೆ ಹಿತಕರವೆನಿಸುವ ಶರ್ತಗಳು ಒಪ್ಪಲಾಗುವುದು. ಅಂತು ಇದು ಕುಂತಿ ಮಕ್ಕಳಿಗೆ ವನವಾಸ.

ನಾವು ಸ್ವತಂತ್ರರಾಗಿ ನಮ್ಮ ರಕ್ಷಣೆಯನ್ನು ಮಾಡಿಕೊಳ್ಳುವ.

ಜನರಲ್ ಫ್ರೆಂಕೊವಿನ ಅದೃಷ್ಟವು ತಿರುಗಿದ್ದು ಆತನಿಗೆ ಬಿಲ್ಬಾವೊ ದೊರಕಲು ಹಿಟ್ಲರನ ವರ್ತನೆಯು ಬದಲಾಗಿದೆ. "ನಮ್ಮ ರಕ್ಷಣೆ ಮಾಡಿಕೊಳ್ಳಲು ದೇವದಯೆಯಿಂದ ಇವತ್ತಿನ ದಿನ ನಮ್ಮಲ್ಲಿ ಸಾಮರ್ಥ್ಯ ಪೂರ್ಣವಿದೆ. ನಮ್ಮ ಜನಾಂಗದ ಗೌರವ, ಸ್ವತಂತ್ರ, ಭದ್ರತೆ ಇತ್ಯಾದಿ ನಾವೆ ರಕ್ಷಿಸಿಕೊಳ್ಳುವ" ಎಂದು ಹಿಟ್ಲರನ ಗರ್ಜನೆ. ಅಂದರೆ ಸ್ಪೈನಿನ ಸಮರದ ಕುರಿತು ತಟಸ್ಥಭಾವ ಸಮಿತಿಯಿಂದ ಹೊರಗಾಗಿ ಜನರಲ್ ಫ್ರೆಂಕೊನನ್ನು ಸ್ಪೈನಿನಲ್ಲಿ ತನ್ನ ಇಷ್ಟ ಸಾಧಿಸುವುದು ಇದರ ಉದ್ದೇಶ. ಬಿಲ್ಬಾವೊನಲ್ಲಿ ಜರ್ಮನಿಗೆ ಬೇಕಾದ ಕಬ್ಬಿಣವಿದೆ.

ಬಿಕ್ಕಟ್ಟಿನ ಪರಿಸ್ಥಿತಿಯ ಮೇಲೆ ಮದ್ರಾಸು ಗವರ್ನರರು.

ಉದಕಮಂಡಲದ Y. M. C. A ಮಂಡಳದ ವಾರ್ಷಿಕೋತ್ಸವದ ಸಮಯ ಭಾಷಣ ಮಾಡುತ್ತ ಮದ್ರಾಸು ಗವರ್ನರರು, ನವರಾಜ ಶಾಸನದ ನಡೆಯುವಿಕೆಯಲ್ಲಿ ಸರಕಾರದ ಸಂಪೂರ್ಣ ವರ್ತನೆಯೂ ಮಂತ್ರಿಮಂಡಳದ ಮೇಲೆ ಹೊಂದಿರುವುದೆಂದೂ, ಸರಕಾರವು ಉತ್ತಮ ತರದಲ್ಲಿ ನಡೆಯುವ ವರೆಗೆ ಮಂತ್ರಿಮಂಡಳಕ್ಕೂ ಗವರ್ನರಿಗೂ ಯಾವ ತರದ ತಿಕ್ಕಾಟವು ಉಂಟಾಗದೆಂದೂ ಜನರು ಸಹಕರಿಸಿದರೆ ನವರಾಜ ಶಾಸನವು ಯಶಸ್ವಿಯಾಗಿ ನಡೆಯುವುದೆಂದೂ, ಈಗಿನ ಈ ಬಿಕ್ಕಟ್ಟಿನ ಸ್ಥಿತಿಯು ವಿಷಾದಕರವಾದುದೆಂದೂ ಅಭಿಪ್ರಾಯಪಟ್ಟಿರುವರು.

ಕೊರನೇಶನ್ ನಿಮಿತ್ತ ಬರ್ಮ ದಂಗೆ ಕೈದಿಗಳ ಕೇಳಿಗೆ ಬಿಡುಗಡೆಯಾಗಿರುತ್ತದೆ.

ಇಟೇಲಿಯು ಯಾವುದಕ್ಕೂ ಸಿದ್ಧವಿಲ್ಲ.

ಸ್ಪೈನಿನ ಕಲಹ, ನಿಸಾದಿಕೆ, ಶಾಂತಿಭಿದಾರ ಇತ್ಯಾದಿ ವಿಷಯಗಳ ಕುರಿತು ಒಂದು ತರದ ಒಪ್ಪಂದಕ್ಕೆ ಬಂದು, ಶಾಂತಿ ರಕ್ಷಣೆ ಮಾಡುವರೆ, ಬ್ರಿಟನು ಇತ್ಯಾದಿ ಜನಾಂಗಗಳು ಮುಂದೆ ಬಂದಿದ್ದರೂ ಮುಸಲೊನಿಯ ಅವರನ್ನು ಕೂಡುವ ಹಾಗಿಲ್ಲ. ತನ್ನ ಛಲವನ್ನು ಮುಸಲೊನಿಯು ಬಿಡುವ ಹಾಗಿಲ್ಲ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ನಡೆಯುತ್ತಿದೆ. ಅನೇಕ ಮುಖ್ಯ ವಿಚಾರಗಳ ಮೇಲೆ ಚರ್ಚೆ ನಡೆಯುತ್ತಿದೆ.

ಸತ್ಯಾಗ್ರಹ ನಾಯಕರಾದ ಮೆಹರಾಲಿಯವರ ಬಂಧನ

ಆರು ತಿಂಗಳ ಶಿಕ್ಷೆಗೊಳಗಾದರು

ದಕ್ಷಿಣ ಕನ್ನಡ ಜಿಲ್ಲೆಗೆ ಬಂದು, ಇಲ್ಲಿನ ಕೆಲವು ಕಡೆಗಳಲ್ಲಿ ದೇಶದ ರಾಜಕೀಯ ಪರಿಸ್ಥಿತಿಯ ಕುರಿತು ಮತ್ತು ಮುಸ್ಲಿಮರು ಕೊಂಗ್ರೆಸ್ಸನ್ನು ಸೇರುವ ಕುರಿತು ಕೆಲವು ಪ್ರಚಾರ ಭಾಷಣಗಳನ್ನು ಮಾಡಿ, ಮೊನ್ನೆ ದಿನ ಕಲ್ಲಿಕೋಟೆಗೆ ತೆರಳಿದವರು ಬಂಧನಕ್ಕೆ ಒಳಗಾದರು. ಅವರ ಭಾಷಣದಿಂದ ಜನರಲ್ಲಿ ಕ್ಷೋಭೆವುಂಟಾಗಬಹುದೆಂದೂ, ಅವರು ಸಧ್ಯದಲ್ಲೇ ಮಲಬಾರಿನ ಅನೇಕ ಕಡೆಗಳನ್ನು ಸಂದರ್ಶಿಲಿರುವುದರಿಂದ, ಅವರ ಮೇಲೆ 144 ಸೆಕ್ಷನು ಜಾರಿಮಾಡಬೇಕಾಗಿ ಪೋಲಿಸ್ ಇಲಾಖೆಯವರು ಕೇಳಿದ ಮೇರೆಗೆ ಜಿಲ್ಲಾ ಮೇಜಿಸ್ಟ್ರೇಟರು ಅವರ ಮೇಲೆ 144 ಸೆಕ್ಷನು ಜ್ಯಾರಿಮಾಡಿದರು. ಶ್ರೀ ಮೆಹರಾಲಿಯವರು ಅದನ್ನು ಉಲ್ಲಂಘಿಸಿ ಕಲ್ಲಿಕೋಟೆಯಲ್ಲಿ ಭಾಷಣ ಮಾಡಿದುದಕ್ಕಾಗಿ ಸೆರೆಹಿಡಿಯಲ್ಪಟ್ಟು ೬ ತಿಂಗಳ ಸಾದಾ ಶಿಕ್ಷೆಗೊಳಗಾದರು.

ಶಾಸನಸಭೆಗಳ ಹೊರಗೆ ಕಾರ್ಯನಡೆಯಬೇಕು.

ಶಾಸನಸಭೆಯ ಕಾರ್ಯವನ್ನು ಚುನಾಯಿತರಾದ ಸದಸ್ಯರಿಗೆ ಬಿಟ್ಟುಬಿಟ್ಟು ಹೊರಗಡೆಯಿಂದ ಒಳ್ಳೇ ತರದ ಕಾರ್ಯವನ್ನು ನಡೆಸುವಂತಾಗಬೇಕು. ಎಲ್ಲರೂ ಈ ವಿಚಾರದ ಕಡೆ ಹೆಚ್ಚು ಗಮನ ಕೊಡಬೇಕು, ಎಂದು ಡಾ। ಪಟ್ಟಾಭಿಸೀತಾರಾಮಯ್ಯನವರು ಒಂದು ರಾಜಕೀಯ ಪರಿಷತ್ತಿನಲ್ಲಿ ಅಧ್ಯಕ್ಷ ಭಾಷಣದಲ್ಲಿ ಸೂಚಿಸಿದರು.

ಶ್ರೀಮತಿ ಎಲಿಜಬೆತ್ ವಾರ್ಕಿ: ಇವರು ಮದ್ರಾಸು ವಿಶ್ವವಿದ್ಯಾಲಯದ ಎಂ. ಎ. ಪದವಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ತೇರ್ಗಡೆಹೊಂದಿರುವರು.

ಕಾಂಗ್ರೆಸ್ ಮುಖಂಡರರಿಗೆ ಮತ್ತು ಪೇಪರ್ ಎಡಿಟರರಿಗೆ ಮಾಡರ್ನ ಹಿಂದೂ ಹೋಟೇಲಿನಲ್ಲಿ ಸತ್ಕಾರಕೂಟ.

ಮೈಸೂರ ಮೊಡರ್ನ ಹಿಂದೂ ಹೋಟೇಲಿನ ಪ್ರೊಪ್ರೈಟರ್ ಕೆ. ಸೀತಾರಾಮರಾಯರು ಇದೇ ಕಳೆದ ೩ನೇ ಭಾನುವಾರ ಮೊಡರ್ನ ಹಿಂದೂ ಹೋಟೇಲ್ ಭವನದಲ್ಲಿ ಮೈಸೂರು ಮಹಾರಾಜರ ವರ್ಧಂತಿ ಮಹೋತ್ಸವದಲ್ಲಿ ರಾಜ ಅತಿಥಿಗಳಾಗಿ ಬಂದಿರುವ ಹಿಂದೂ ಪತ್ರಿಕೆಯ ಪ್ರೊಪ್ರೈಟರ್ ಕೆ. ಶ್ರೀನಿವಾಸನ್ ಮತ್ತು ಕಾಂಗ್ರೆಸ್ ಮುಖಂಡರಾದ ಶ್ರೀಯುತ ಎಸ್. ಸತ್ಯಮೂರ್ತಿಯವರಿಗೂ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ಆ ಸಮಾರಂಭಕ್ಕೆ ಮೈಸೂರು ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಎನ್. ಎಸ್. ಸುಬ್ಬರಾವ್ ಕೈಗಾರಿಕೆಯ ಡೈರೆಕ್ಟರರಾದ ಎಸ್. ಜಿ. ಶಾಸ್ತ್ರಿಗಳು, ಮುನ್ಸಿಪಲ್ ವೈಸ್ ಪ್ರೆಸಿಡೆಂಟ್ ರಾವ್‌ಸಾಹೇಬ್ ಎಂ. ರಾಮಸ್ವಾಮಿ, ಎಚ್. ಸಿ. ದಾಸಪ್ಪ, ಎಂ. ಸಿ. ಕಮ್ಮಯ್ಯ, ದೊಡ್ಡ ಅವರಪ್ಪ, ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟ್ ಬಿ. ಎಸ್. ಪುಟ್ಟಸ್ವಾಮಿ, ಸಿ. ಎನ್. ನರಸಿಂಗರಾವ್, ಕೆ. ಟಿ. ಬಾಷ್ಯಂ, ವಿ. ಸೀತಾರಾಮಯ್ಯ, ಟಿ. ಶ್ರೀನಿವಾಸಯ್ಯಂಗಾರ್, ರಾವ್‌ಸಾಹೇಬ್ ಸಿ. ಎಸ್. ಆರ್. ರಾವ್, ಎಫ್. ಡಿ. ದೇವರಾಜ ಅರಸ್, ಸಿ. ನರಸಿಂಹಯ್ಯ, ಮತ್ತು ಕೆ. ಗೋಪಾಲನ್ ಮುಂತಾದವರು ಬಿಜಯಿಸಿದ್ದರು.

ಫಲಾಹಾರಸಾದ ನಂತರ ಮಾನ್ಯ ಅತಿಥಿಗಳು ಶ್ರೀಯುತ ಸೀತಾರಾಮಯ್ಯರು ಮೈಸೂರು, ನೀಲಗಿರಿ, ಮತ್ತು ಮದ್ರಾಸು ಕಡೆಗಳಲ್ಲಿ ನಡಿಸುತ್ತಿರುವ ವ್ಯಾಪಾರವನ್ನು ವರ್ಣಿಸಿ, ಮದ್ರಾಸ್ 'ಮೊಡರ್ನ ಕೆಫೆ'ಯು ಹೋಟೇಲುಗಳಿಗೆಲ್ಲಾ ಮಾದರಿಯಾಗಿದೆ ಎಂದು ಭಾಷಣ ಮಾಡಿ, ರಾ। ಸೀತಾರಾಮರಾಯರ ವ್ಯಾಪಾರವು ಅತಿಶಯವಾಗಿ ಅಭಿವೃದ್ಧಿಯಾಗಲೆಂದು ಹರಸಿದರು. ನೆರೆದ ಮಹನೀಯರುಗಳ ಗ್ರೂಪ್ ಫೋಟೋ ತೆಗೆಯಲಾಯಿತು. ನಂತರ ಸಭೆಯು ಮುಕ್ತಾಯವಾಯಿತು.

ಭೂರಿ ಜನರ ಸ್ಪರ್ಶವಾಗಲು

ಜಿಲ್ಲಾ ಬೋರ್ಡು ಸಭೆಗಳು ಹಳ್ಳಿಗಳಲ್ಲಿ ಸೇರಿಸಬೇಕಾಗಿ ತಂಜಾವೂರಿನ ಜಿಲ್ಲಾ ಬೋರ್ಡಿನ ನಿರ್ಧಾರವಾಗಿರುತ್ತದೆ. ಅದರ ಮೊನ್ನಿನ ಒಂದು ಸಭೆಯು ಒಂದು ಹಳ್ಳಿಯಲ್ಲಿ ನಡೆಯಿತು.

ಕೊಮುವಾರು ಭೇದವಿರಬಾರದು.

ಈ ಕುರಿತು ಪಂಜಾಬಿನ ಮುಖಂಡರು ಬಾರಿ ಪರಿಶ್ರಮವನ್ನು ವಹಿಸಿರುವರು. ಕೋಮುವಾರು ಬೇದವೆ ತಮ್ಮ ಪ್ರಾಂತ್ಯದಿಂದ ಮಾಯಬೇಕೆಂದು ಅವರ ಉದ್ದೇಶ. ಆ ಕುರಿತು ಸರಕಾರದ ಸಹಕಾರವು ಕೂಡ ದೊರಕುವುದೆಂದು ಮುಖ್ಯ ಮಂತ್ರಿ ಖಾನರು ಭರವಸೆಯಿತ್ತಿರುವರು.

ಕಾಂಗ್ರೆಸ್ ಕಾರ್ಯಕಾರಿ ಮಂಡಳವು

ಇದೇ ತಿಂಗಳ ೨೨ ರಲ್ಲಿ ವಾರ್ಧದಲ್ಲಿ ಸಭೆಸೇರುವುದು. ಕಾರ್ಯಕಾರಿಮಂಡಳದ ಸದಸ್ಯರಲ್ಲದೆ ಶ್ರೀಯುತ ರಾಜಗೋಪಾಲಾಚಾರ್ಯ, ಡಾ। ಕಾ. ಬಿ. ಬಿ. ಕರ್ ವಿಶ್ವನಾಥದಾಸ ಕೃಷ್ಣಸಿನ್ಹ, ಡಾ। ಖಾನ್ ಸಾಹೇಬ, ಸರತ ಚಂದ್ರ ಬೋಸ್ ಈ ಮಹನೀಯರುಗಳಿಗೆ ಸಭೆಗೆ ಬರಲು ಆಹ್ವಾನಗಳು ಹೋಗಿರುತ್ತವೆ.

ಈ ಸಭೆಯ ಮೇಲೆ ಸಾರ್ವಜನಿಕ ಸಮಸ್ತ ಜನತೆಯ ದೃಷ್ಟಿ ಬಿದ್ದಿರುತ್ತದೆ. ಇಂದಿನ ಭಾರತೀಯ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯ ಕುರಿತೂ, ವೈಸ್ರಾಯರ ಪ್ರಕಟನೆಯ ಕುರಿತೂ, ಮುಂದಿನ ಕಾರ್ಯದ ಕುರಿತೂ ಇಲ್ಲಿ ಘನವಾದ ನಿರ್ಧಾರವಾಗಲಿದೆ.

LATEST NEWS.

ಚಕ್ರವರ್ತಿ ರಾಜಗೋಪಾಲಾಚಾರ್ಯರು ಈಗಿನ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯ ಕುರಿತು ೨೩, ೪೦ ರಲ್ಲಿ ಮದ್ರಾಸು ಗವರ್ನರರನ್ನು ಉದಕಮಂಡಲದಲ್ಲಿ ಭೇಟಿಮಾಡಿದರು. ಆಚಾರ್ಯರನ್ನು ಕೊಂಡೊಯ್ಯಲು ಗವರ್ನರರ ಮೋಟಾರು ವಾಹನವು ಮುಟ್ಟುಪಾಳಯದ್ದಿಗೆ ಬಂದಿತ್ತು. ಸಾಧಾರಣ ಬೆಳಿಗ್ಗೆ ೧೧ ಗಂಟೆ ಸಮಯಕ್ಕೆ ಆಚಾರ್ಯರು ಸರಕಾರ ಸದನವನ್ನು ಸೇರಿದರು. ಮೋಟಾರಿನಲ್ಲೇ ಅವರು ಪೊದನೂರಿಗೆ ತೆರಳಿರುವರು. ಭೇಟಿಯ ವಿಚಾರಗಳು ಯಾವುದೂ ತಿಳಿದುಬಂದಿಲ್ಲ. ಎಲ್ಲವೂ ಗುಪ್ತವಾಗಿಯೇ ನಡೆದಿರುತ್ತದೆ.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟ್ಯಾನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ, ಬಜಾರ್, ಮಂಗಳೂರು.

ನವರತ್ನಾ 'ಚ್ಯವನಪ್ರಾಶಾವಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ.

ರಾತಲು 1ಕ್ಕೆ ರೂ. 2—6—0. ½ ರಾತಲು 1—4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಫೈಲೇರಿಯಾ, ಎರಳದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸು ವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳೆದು.

ಕ್ರಯ 16 oz 3-0-0; 8 oz 1 10 0; 4 oz 0 - 14 —0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:-

ಪಾಪುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಣೈ ಕಾರ್ಕಳ.

ಕೆ. ಎಲ್. ಐತಾಳ, ಉಡುಪಿ. — ಮೋಡರ್ನ್ ಫಾರ್ಮೆಸಿ, ಕುಂದಾಪುರ.

ಬಿ. ಜಿ ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರ.

ಡಾ॥ ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NARSI & CO.,

Chamsi's Princess Street, BOMBAY

KANARA WATCH WORKS

WATCH MAKERS & GENERAL MERCHANTS,

Hampankatta MANGALORE

Dealers in:— Watches, Clocks, Timepieces, Rolled Gold Jewellery & Sporting Materials etc,



Stockists of: West End, Zenith Meridian, Swiss Watches of latest designs & tastes

Repairers— Watches, Clocks, Timepieces and Gramophones.

Japan 8 Inch	Octegon	Rs	6	0	0
„ 8 „	Regulator	„	5	12	0
„ 10 „	Octegon	„	6	8	0
„ 10 „	Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಂಗೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ವ ಗ್ರಮೋಫೋನು ರಿಪೇರಿ ಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!

BEST BRILLIANCY

K. R. K. SHET,

Near Mission High School,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,

ಮಿಶ್ಯನ್ ಹೈಸ್ಕೂಲ್ ಬಳಿ, ಮಂಗಳೂರು.

ವಜ್ರಗಳು! ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷ ಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚೆಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಯಾಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ.

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಶೈ,

ಸರಾಫ ಮತ್ತು ಮೆಟಲ್ ಮರ್ಚಂಟ್,

ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of

Please call on or write to:-

Simon & Co.,

Painters,

Churchgate, Hampankatta No 13, MANGALORE.

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,

ಸ್ಯಾನ್ ಬೋರ್ಡುಗ ಇತ್ಯಾದಿಗಳನ್ನೂ

ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ವಾಪಸ್



ಶ್ರೇಷ್ಠ ಮಾಂಟ ಗಟ್ಟಿಯಾದ [illegible] ಗಳು, ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು. ಈ ಕಮ್ಮಿ ಬೆಲೆಗಳು [illegible] ಗ್ಯಾರಂಟಿ 3 ವಾಚುಗಳನ್ನು ಒಂದೇ ಸಲ ತರಿಸುವವರಿಗೆ [illegible] ಒಂದು [illegible] ವಾಚು 1ಕ್ಕೆ ರೂ. 2-15-0. ಅದರಲ್ಲಿ ಉತ್ತಮವಾದದ್ದು 3-8-0 ಬಂಗಾರದ ಗಿಲಿಟಿದ್ದದಕ್ಕೆ ರೂ 4—8—0 [illegible] ರೂ 5-0 0. [illegible] ಆಯತಾಕಾರದ್ದಕ್ಕೆ 6-8-0 ಅದರಲ್ಲಿ ಬಂಗಾರದ ಗಿಲಿಟಿದ್ದುದಕ್ಕೆ 7-8-0 ಲಿವರ್ ಪಾಕೆಟ್ ವಾಚಿಗೆ ಬರಿ ರೂ. 1—14—0 ಪಿ. ಕ್ಯಾಂಬೀಸ್ 1ಕ್ಕೆ ಬರಿ ರೂ 1-10-0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176, Cross Street CALCUTTA

Most Reliable New Model 1937.

GENUINE SWISS WATCHES OFFERED AT HALF PRICE.

CHROMIUM CASE RECTANGULAR LEVER WRIST WATCH.

No 16

Sale Rs. 6—15—0.

SMART LEVER MOVEMENT

Strong & Durable at Low Price.

UNIQUE OPPORTUNITY ONLY.

ONE Roman or Arabic Figures Plain Silver Dial.

Watch, Rs. 1—15—9.

Guaranteed for 5 Years. Lever Pocket 8—8—0.

No. 12. Chromium 4 Jewels „ 10—8—0

„ 14 „ 7 „ „ 12—8—0

„ 15. „ 15 „ „ 16—8 0.

„ 17. Rolled Gold

Postage & Packing Extra.

Rs. 1/- Extra for Radium Dial.

BAPALAL & CO. (s) 16, Abdul Rehman Street, Bombay 3

ಇಟೆಲಿಯ ಮೇಲೆ ಹಬಸಿ ಚಕ್ರವರ್ತಿಯವರ ದಾವೆ.

ಪಟಿಸೀನಿಯುದ ಸ್ಥಿರ್ಲ್ಶೀ ಸಂಸ್ಥೆಯು ಫ್ರೆಂಚ ರಳು. ಲ್ಯಾಸನ್ನಿಗೋಸ್ಕರ ಹಬಸಿ ಚಕ್ರವರ್ತಿಯವರಿಗೆ ಆ ಸಂಸ್ಥೆಯಲ್ಲಿ ರೂ. ೪ ಲಕ್ಷ ಮೌಲ್ಯದ ಪಾಲುಗಳನ್ನು ಕೊಡಲಾಗಿತ್ತು. ಈ ಪಾಲುಗಳ ಕುರಿತು ಮುಸಲೇನಿಗೂ ಹಬಸಿ ಚಕ್ರವರ್ತಿಗೂ ವ್ಯಾಜ್ಯವುಂಟಾಗಿರುತ್ತದೆ. ಹಬಸಿ ಚಕ್ರವರ್ತಿಯು ಎಥಿಯೋಪಿಯದ ರಾಜರಾಗಿದ್ದು ಆ ಶೇರುಗಳನ್ನು ಪಡೆದುದರಿಂದ, ಈಗ ಎಥಿಯೋಪಿಯವು ತನ್ನ ಕೈವಶವಾದುದರಿಂದ ಆ ಶೇರುಗಳೂ ತನ್ನದೆಂದು ಮುಸಲೀನಿಯು ವಾದಿಸುತ್ತಿದ್ದಾನೆ. ಹಬಸಿ ಚಕ್ರವರ್ತಿಯು ದೇಶವನ್ನು ತೊರೆದು ಪಲಾಯನಮಾಡುತ್ತಿರುವಾಗ ಕೊಂಡೊಯ್ದ ಹಣ, ಆಭರಣಗಳಿತ್ಯಾದಿಗಳಲ್ಲಿ ಇದೊಂದು ಮುಖ್ಯ ಹಣವಾಗಿರುತ್ತದೆ. ಚಕ್ರವರ್ತಿಯವರು ಆ ಶೇರು ತನ್ನದೆಂದೇ ವಾದಿಸುತ್ತಿದ್ದಾರೆ.

ದೇಶಭಕ್ತ ಹಬಸಿ ಯುವರಾಜರು.

ಸಂಪೂರ್ಣ ಹಬಸಿ ದೇಶವನ್ನು ನುಂಗಿದ ಮುಸಲೇನಿಯು ಈಗ ನೂತನ ಆಲೋಚನೆಯೊಂದನ್ನು ಮಾಡಿರುವನು. ಹಬಸಿ ದೇಶದ ಪಟ್ಟದ ಮೇಲೆ ಹೆಸರಿಗೆ ಮಾತ್ರ ಯುವರಾಜರನ್ನು ಕುಳ್ಳಿರಿಸಿ, ಅದೊಂದು ತನ್ನಡಿಯ ಆಶ್ರಿತವೆಂದು ಲೋಕದೊಡನೆ ಹೇಳಿಕೊಳ್ಳಲು. ಆದರೆ ಹಬಸಿ ಯುವರಾಜರು ಮುಸಲೇನಿಯ ಈ ಸೂಚನೆಯನ್ನು ತಿರಸ್ಕರಿಸಿರುವರು. ಸ್ವಾತಂತ್ರ್ಯವನ್ನು ಪಡೆದೇ ತನ್ನ ದೇಶದ ಪಟ್ಟವನ್ನೇರಬೇಕೆಂಬುದು ಅವರ ಒಂದು ಮಹಾ ಉದ್ದೇಶವಾಗಿರುತ್ತದೆ.

ಅಮೇರಿಕದಲ್ಲಿ ಮುಷ್ಕರ.

ಸಂಯುಕ್ತ ಅಮೇರಿಕದಲ್ಲಿ ೩ ಉಕ್ಕಿನ ಕಾರ್ಖಾನೆಗಳ ಸಾಧಾರಣ ೭೦,೦೦೦ ಮಂದಿ ಕೆಲಸಗಾರರು ಮುಷ್ಕರ ಹಿಡಿದಿರುವರು. ಈ ಮುಷ್ಕರದಿಂದ, ಕಾರ್ಖಾನೆಗಳ ಹತ್ತಿರ ರಣರಂಗದ ದೃಶ್ಯಗಳೇ ನಡೆಯುತ್ತಿವೆ. ಮುಷ್ಕರಗಾರರನ್ನು ತಣಿಸಲು ವಿಮಾನಗಳಿಂದ ತುಪಾಕಿಗಳ ಪ್ರಯೋಗವಾಗುತ್ತಿದೆ. ಈಗಿನ ಅಧ್ಯಕ್ಷರು ಮಜೂರರ ಹಿತಸಾಧಕರಾಗಿದ್ದರೂ, ಧನಾಢ್ಯರು ತಮ್ಮ ಧನಬಲದಿಂದ ಕೆಲಸಗಾರರ ಮೇಲೆ ಅನರ್ಥಗಳನ್ನು ನಡೆಯಿಸುವವರಾಗಿದ್ದಾರೆ.

ಹಾಲಿನಿಂದ ರೇಶ್ಮೆ.

ಹಾಲು ಮಾನವನಿಗೆ ಒಂದು ಪ್ರಾಮುಖ್ಯ ಆಹಾರವಾಗಿರುತ್ತದೆ. ಪಾಶ್ಚಾತ್ಯದ ವಿಜ್ಞಾನಿಗಳು ಹಾಲಿನಿಂದ ಛೆಕಲ್ಯಾಟ್ ಎಂಬ ಒಂದು ಪದಾರ್ಥವನ್ನು ತಯಾರಿಸಿ ಅದರಿಂದ ಮಾನವರಿಗೆ ಬೇಕಾದ ವಸ್ತು ಒಡವೆಗಳನ್ನು ತಯಾರಿಸುವ ಉಪಾಯವನ್ನು ಕಂಡು ಹಿಡಿದಿರುವರು. ಅಲ್ಲದೆ ಹಾಲಿನಿಂದ ಈ ಪದಾರ್ಥವು ಧಾರಾಳವಾಗಿ ಸಿದ್ಧವಾಗುತ್ತಿದೆ.

ವನ್ನು ಈಗ ಹಾಲಿನ ಅನೇಕಂಪು ಉಪಯೋಗ ವರ್ಷಗಳಿಸ್ತುಹಿಡಿದಿರುವರು. ಇವತ್ತಿಗೆ ಹತ್ತು ಓರ್ವ ಪಾಶ್ಚಾತ್ಯ ಕುರಿತು ಪರಿಶ್ರಮಿಸುತ್ತಿರುವ ರೇಶ್ಮೆಯನ್ನು ತಯಾರಿ ನಿಯು, ಹಾಲಿನಿಂದ ಕಂಡುಹಿಡಿದಿರುವನು. ಈ ವಿಧಾನವನ್ನು ಸ್ಥಾನದಿಂದ ತಯಾರಿಸಲ್ಪಟ್ಟ ರೇಶ್ಮೆಗೂ ನಿಜವಾದ ಗೂ ಯಾವತ್ತೂ ತರದ ಬೇಧ ಕಂಡು ಹಿಡಿಯಲು ಸಾಧ್ಯವಿಲ್ಲವೆಂದು ಅದನ್ನು ಪರೀಕ್ಷಿಸಿದ ಇನ್ನೊಬ್ಬ ವಿಜ್ಞಾನಿಯು ಅಭಿಪ್ರಾಯವಾಗಿರುತ್ತದೆ.

ಹಬಸಿದೇಶದಲ್ಲಿ ಇಟೆಲಿಯ ವರ್ತನೆ.

ಇದು ಬ್ರಿಟಿಷರ ಹಿಂದೂದೇಶದಲ್ಲಿನ ವರ್ತನೆಯ ಪ್ರತಿರೂಪವಾಗಿರುತ್ತದೆ. ಒಂದಾನೊಂದು ಕಾಲದಲ್ಲಿ ಜಗತ್ತಿನ ಎಲ್ಲಾ ಕಡೆಗಳಲ್ಲಿ ಬ್ರಿಟನು ಹೇಗೆ ವರ್ತಿಸಿತೊ, ಹಾಗೆನೆ ಇಟೆಲಿಯು ಹಬಸಿದೇಶದಲ್ಲಿ ವರ್ತಿಸುತ್ತದೆ.

ಅವೇ ಉಪಾಯಗಳನ್ನು ಮುಸಲೆನಿಯು ಈಗ ಬ್ರಿಟಿಷರಿಗೆ ವಿರೋಧವಾಗಿ ಉಪಯೋಗಿಸುತ್ತಿದ್ದಾನೆ ಎಂದು ಒಂದು ಪೆರಿಸ್ ಪತ್ರಿಕೆಯ ಅಭಿಪ್ರಾಯ.

ಅತಿ ಭಯಂಕರ ದರೋಡೆಗಾರ.

ಆತನನ್ನು ಹುಡುಕಲು ವಿಮಾನಗಳು ಸಂಚರಿಸುತ್ತಿದ್ದಾವೆ. ಈ ವಿಮಾನುಗಳಲ್ಲಿ ಮೆಶಿನು ತುಪಾಕಿಗಳಿವೆ. ಡಿಲಿಂಗರನೆಂದರೆ ಅಮೇರಿಕದ ಅತಿ ಪ್ರಬಲ ದರೋಡೆಗಾರನಾಗಿದ್ದನು. ಆತನೆಂದರೆ ಇಡೀ ಸಂಯುಕ್ತ ಅಮೇರಿಕವು ನಡುಗುತಿತ್ತು. ಮೇಲಿನ ದರೋಡೆಗಾರನು ಆತನನ್ನು ಮೀರಿಸುವೆನೆಂದೂ ಪಂಥ ಹಾಕಿಕೊಂಡಿರುವನಂತೆ. ಆದುದರಿಂದ ಮೆಶಿನು ತುಪಾಕಿಗಳಿಂದ ವಿಮಾನುಗಳು ಆತನನ್ನು ಸಂಯುಕ್ತ ಅಮೇರಿಕದ ಎಲ್ಲಾ ರಾಜ್ಯಗಳಲ್ಲಿ ಹುಡುಕಾಡುತಿದ್ದಾರೆ. ಆತನ ಹೆಸರು ಬ್ರೇಡಿ ಎಂದು. ಮಹಾ ಕೊಲೆಗಾರನು. ಪ್ರಾಯ ಬರೇ ೨೬. ಬರೇ ಒಬ್ಬ ಹಳ್ಳಿಯ ಹುಡುಗನಾಗಿದ್ದವನು.

ವಿಂಡ್ಸೊರರ ದಾನ.

ಐರೋಪ್ಯದ ವಾರ್ಸೊ ಎಂಬಲ್ಲಿ ಓರ್ವ ತರುಣ ವಿಜ್ಞಾನಿಯು ಸೌಂದರ್ಯವತಿಯಾದ ಒಬ್ಬಳಲ್ಲಿ ಮೋಹಿತನಾಗಿದ್ದನು. ಆದರೂ ಈರ್ವರೂ ಬಡವರಾಗಿದ್ದುದರಿಂದ ವಿವಾಹ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಮೊನ್ನೆ ವಿಂಡ್ಸರರ ವಿವಾಹವು ನಡೆಯಲು ವಿಜ್ಞಾನಿಯು ತನ್ನ ಹಂಬಲವನ್ನು ತಿಳಿಸಿ ಮಾಜಿ ಚಕ್ರವರ್ತಿಯವರಿಗೆ ಒಂದು ಪತ್ರವನ್ನು ಬರೆದನು. ಒಡನೆ ಆತನಿಗೆ ನೂರು ಪವನಿನ ಒಂದು ಚೆಕ್ಕು ಬಂದು ಬಿಟ್ಟಿತು. ಇಬ್ಬರೂ ಈಗ ವಿವಾಹವಾಗಿರುವರು.

ಎರಡು ನಾಲಗೆಯ ಸ್ತ್ರೀ.

ಪಾಟ್ನಾ ನಗರ ಹತ್ತಿರ ಒಂದು ಹಳ್ಳಿಯಲ್ಲಿರುವಳು. ಈಕೆಗೆ ಎರಡು ನಾಲಗೆಗಳಿವೆ. ಆದರೆ ಎರಡನ್ನೂ ಮಾತನಾಡಲು ಉಪಯೋಗಿಸಲಾಗುವುದಿಲ್ಲವಂತೆ.

ರಷ್ಯಾದಲ್ಲೇನು.

ಮಳೆಯು ತನ್ನಷ್ಟಕ್ಕೆ ತಾನೇ ಬರಬೇಕು. ಅದು ಬರುವಂತೆ ಮಾಡಲು ನಮ್ಮಿಂದ ಸಾಧ್ಯವಿಲ್ಲ. ಹೀಗಾಗಿ ಕೆಲವು ಬಾರಿ ಮಳೆಯು ಇಲ್ಲದೆ ಅನೇಕ ಕಷ್ಟಗಳನ್ನು ನಾವು ಅನುಭವಿಸುತ್ತೇವೆ. ನಮ್ಮ ಬೆಳೆಗೆ ಕೊಡಕು ಬರುತ್ತದೆ.

ರಷ್ಯಾದಲ್ಲಿ ಮುಂದಕ್ಕೆ ಈ ತರದ ಕಷ್ಟಗಳನ್ನು ಅನುಭವಿಸಬೇಕಾಗಿಲ್ಲ. ಬೇಕಾದ ಸಮಯ, ಬೇಕಾದಷ್ಟು ಮಳೆ ಬರುವಂತೆ ಮಾಡುವ ಉಪಾಯವನ್ನು ಕಂಡುಹಿಡಿದಿರುವರು. ಒಂದು ಸಂಪೂರ್ಣ ನಗರದ ಮೇಲೆ ಮಳೆ ಬರುವಂತೆ ಮಾಡಬಹುದಂತೆ.

ಮಾಜಿ ವೈಸ್ರಾಯರಿಗೆ ಸ್ಥಾನವಿಲ್ಲ.

ಹಿಂದೂ ದೇಶದಲ್ಲಿ ವೈಸ್ರಾಯರಾದವರಿಗೆ ಬಹಳ ವೈಭವ ಸಂಭ್ರಮಗಳು ದೊರಕುತ್ತವೆ. ವಿಜೃಂಭಣೆಯ ರಾಜ್ಯ ವೈಭವಗಳಲ್ಲಿ ಅವರು ದಿನ ಕಳೆಯುತ್ತಾರೆ. ಆದರೆ ಲಂಡನಿನಲ್ಲಿ ಅವರು ಬರೇ ನಾಗರೀಕರಾಗಿ ದಿನ ಕಳೆಯಬೇಕು. ಸಂಭ್ರಮ ಸತ್ಕಾರಗಳು ಅವರಿಗೆ ಅಲ್ಲಿ ದೊರಕುವುದೆ ಇಲ್ಲ. ಇಲ್ಲಿ ಮೆರೆಯುತ್ತಿರುವ ಮಾಜಿ ವೈಸ್ರಾಯರಾದ ವಿಲ್ಲಿಂಗ್ಡನ್ನರಿಗೂ, ಲಾರ್ಡ್ ಇರ್ವಿನರಿಗೂ ಈ ಗತಿಯು ಒದಗಿರುತ್ತದೆ. ಅವರ ಗಣನೆ ಮಾಡುವವರಿಲ್ಲ. ಹಿಂದೂ ದೇಶದಲ್ಲಿ ಸ್ಪೆಶಲ್ ಟ್ರೈನು, ವಿಮಾನ ಇತ್ಯಾದಿಗಳಲ್ಲಿ ಸಂಚರಿಸುತ್ತಿರುವವರು ಲಂಡನಿನಲ್ಲಿ ಮಿಕ್ಕವರಂತೆ ಸಾದಾ ಟ್ರೈನುಗಳಲ್ಲಿ ಸಂಚರಿಸುತ್ತಿದ್ದಾರೆ.

ಹಿಂದೂದೇಶದಲ್ಲಿ ವೈಸ್ರಾಯರಾಗಿದ್ದು ಮಿಲಿಯಾದಿ ಜನರಿಂದ ಡಂಕು ಸಲಾಂ ಪಡೆಯುವ ಇರ್ವಿನರಿಗೆ ಮೊನ್ನೆ ದಿನ ಒಂದು ಟ್ರೈನಿನ ಮೂರನೆ ತರಗತಿಯಲ್ಲೂ ಸ್ಥಳ ಸಿಗಲಿಲ್ಲವಂತೆ.

S. T.

ಭೂತದ ಮಾಯವಿ ತಂತ್ರಗಳು.

ಅದೃಶ್ಯವಾದ ನಾಣ್ಯಗಳು ಆಕಾಶದಿಂದ ಬಿದ್ದವು. ಮಹುಬಾನಿ ಎಂಬ ನಗರದ ಸಮೀಪವಿರುವ ಒಂದು ಹಳ್ಳಿಯಲ್ಲಿ ವಿಚಿತ್ರ ತರದ ಒಂದು ಭೂತದ ಕಥೆಯು ನಡೆದಿರುತ್ತದೆ.

ಓರ್ವ ಬ್ರಾಹ್ಮಣ ಸ್ತ್ರೀಯು ಪಕ್ಕನೆ ಪ್ರಜ್ಞೆತಪ್ಪಿದಳು. ಆದರೆ ವೈದ್ಯರಿಗೆ ಅವಳಲಿ ಯಾವತ್ತೂ ರೋಗ ಚಿಹ್ನೆಗಳನ್ನು ಕಂಡುಹಿಡಿಯಲಾಗಲಿಲ್ಲ. ಪ್ರಜ್ಞೆತಪ್ಪಿದ್ದ ಅವಳನ್ನು ಜೀವಕ್ಕೆ ತರಲು ಪ್ರಯತ್ನಮಾಡುವಾಗ ಅವಳ ಮೇಲಿರುವ ಆಭರಣಗಳು ಅದೃಶ್ಯವಾಗುತ್ತಿರುವುದು ಕಂಡು ಬಂತು. ಅಲ್ಲದೆ ಅಲ್ಲೇ ಒಂದು ಪೆಟ್ಟಿಗೆಯಲ್ಲಿದ್ದ ೬೦ ರೂಪಾಯಿಗಳು ಮಾಯವಾಗಿದ್ದವು.

ಆ ಸ್ತ್ರೀಗೆ ಭೂತ ಹಿಡಿದಿರುತ್ತದೆಂದು ನೆರೆಯವರು ಕೆಲವರು ಸೂಚಿಸಿದರು. ಆ ಕುರಿತು ಆಲೋಚಿಸುತ್ತಿರುವಾಗ, ಆಗಲೇ ಕಳೆದುಹೋದ ಆಭರಣಗಳು ಕಾಣಿಸಿಕೊಂಡವು. ಕಳೆದುಹೋದ ನಾಣ್ಯಗಳು ಒಂದೊಂದಾಗಿ ಆಕಾಶದಿಂದ ಬೀಳಲಾರಂಭಿಸಿದವು. ಸ್ತ್ರೀಯು ಕ್ರಮವಾಗಿ ಪ್ರಜ್ಞೆ ಹೊಂದಿದಳು.

ಇದೊಂದು ಭೂತದ ಕೆಲಸವಂತೆ.

ಬ್ರಿಟಿಷರಿಗೆ ವಿರೋಧವಾಗಿ ದಂಗೆಯೆಬ್ಬಿಸಲು ಪೆಲೆಸ್ತೀನದ ಅರಬಿಯವರಿಗೆ ಮುಸಲೇನಿಯು ಸಹಾಯಕನಾಗಿರುವನೆಂದು ರುಜುವಾತುಗಳು ದೊರಕಿವೆಯೆಂದು ವಿದೇಶೀ ಪತ್ರಿಕೆಯೊಂದರ ವಾರ್ತೆ.

೦ ೦ ೦

ಲಂಡನಿನ ವೆಸ್ಟ್‌ಕೆನ್ಸಿಂಗ್‌ಟನಿನಲ್ಲಿ ಕಟ್ಟಲಿರುವ ಮುಸಲ್ಮಾನರ ಮಸೀದಿಗೆ ಹೈದರಬಾದಿನ ನಿಜಾಮರವರು ೬೦,೦೦೦ ಪೌಂಡನ್ನು ಉಚಿತವಾಗಿ ಕೊಟ್ಟಿರುವರು.

TEST YOUR EYES



By the Electro Ophthalmoscope





All Varieties of Frames & Lenses.
AT
The Mangalore Trading Association Ltd
Sight Testing Ophthalmic Opticians,
Car Street, MANGALORE



ಗುಣಖಾತ್ರಿ ಔಷಧ.

ಸ್ತ್ರೀಯರ ಎಲ್ಲಾ ತರದ ಮುಟ್ಟು ದೋಷಗಳಿಗೆ. ಸ್ತ್ರೀಯರಿಗೆ ದೇಹವನ್ನು ಪುಷ್ಟಿಕರಿಸುವ ಟಾನಿಕ್

ಲೋಧ್ರ

ಎಲ್ಲಾ ದವಾಖಾನೆಗಳಲ್ಲಿ ಮಾರಾಟಕ್ಕಿರುತ್ತದೆ

ಕೇಸರಿ ಕುಟೀರಂ
ಮದ್ರಾಸು

ಮಂಗಳೂರು ಪ್ರವರ್ತಕರು ದಿ ಫೊಪ್ಯುಲರ್ ಸ್ಟೋರ್ಸ್ ರಥಬೀದಿ, ಮಂಗಳೂರು

'An ideal young progressive Life Office of India to Insure with or represent'

The Commonwealth Assurance Co., LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 37½. ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms, Apply to—

Messrs. GAWANKAR & SONS,
Chief Agents for Mysore state, Coorg, Ceded Districts & S. Kanara
AHMED BUILDINGS, CHICKPET, BANGALORE CITY.
Branches—Bombay, Calcutta, Delhi, Madras & Nagpur.
Local Representatives—THE MODERN TRADING CO., Mangalore.

Buy Advertised Goods

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ, ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಿಡಬಿಡದೆ ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಸಿಡಿಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒದ್ದಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5 ಅಂಚೆ ಖರ್ಚು ಬೇರೆ.

C L Namawala,
Palace Road, BARODA.

ಶಾಸ್ತ್ರೀಯ ರೀತ್ಯಾ ತಯಾರಿಸಿದ
ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಪಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ ರುಚಿಗೂ, ಆರೋಗ್ಯಕ್ಕೂ ಯೋಗ್ಯ ಮಕ್ಕಳು ಬಹಳ ಆನಂದದಿಂದ ಸವಿಯುವರು ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,
Flower Market South, Mangalore

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ
P O Peridepi (ನೆಲ್ಲೂರು ಜಿ.)

'Dil Roz' (Regd)

Dil Roz is a sure cure for Oriental sores local sores all kinds of deep rooted sores skin eruptions Pimples Eczema, Ringworm, Sinus, Fistula auxillary Abscess

There is no need of dressing the wounds & pure baths prohibited

Price Rs. 2
Postage extra

TAHIRUDDIN
Anarkali, LAHORE

BEHAR CHEMICAL WORKS, BHAGALPUR

ಗೊನೊಕ್ಯೂರು.

ಕೆಟ್ಟ ಚಾಳಿಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ದಿಸಕೂಡಿಲ್ಲದ ಔಷಧವಾಗಿದೆ ಒಂದೇ ದಿನದ ಔಷಧಿ ಉಪಯೋಗದಿಂದ ಗುಣ ಕಂಡುಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ—ಧಾತು ದಪ್ಪವಿದ್ದು ಹಳದಿ ಬಣ್ಣವಾಗಿ ಹೋಗುವುದು. ಶಕ್ತಿಗ್ರಂಥಿಗಳ ಸಂಬಂಧವಾಗಿ ಅತೀಯಾದ ಗುಳ್ಳೆಗಳು ಏಳೋಣ ಮೂತ್ರವಾಗುವಾಗ್ಯೆ ಉರಿಯುವುದು, ಇದರಿಂದ ಸಪ್ಪಂಕತ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧಿ ಸೀಸೆ 1ಕ್ಕೆ ರೂ 2—0—0

ವ್ಯಾಟ್ಯಾಲಿಟಿ ಪಿಲ್ಸ್

ವಿದ್ಯಾರ್ಥಿಗಳಿಗೂ, ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ಹೆಚ್ಚು ಉಪಯೋಗಕಾರಿಯಾಗಿವೆ. ವಿದ್ಯಾರ್ಥಿಗಳು ತಮ್ಮ ಓದುವಿಕೆಯಲ್ಲಿಯೇ ಆಸಕ್ತರಾಗಿದ್ದು, ವ್ಯಾಯಾಮವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಘಾತುಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕಶಕ್ತಿಯನ್ನು ಕಳೆದುಕೊಂಡು ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ ಅಲ್ಲದೆ ತಮ್ಮ ಹಿರಿಯರ ಕೂಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಶಕ್ತಿ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು ಸೀಸೆ 1ಕ್ಕೆ ರೂ 2-0-0.

ಏಜೆಂಟರ್ — ವ್ಯಾಸ ಫಂಡ್ಸ್

ಗವರ್ನಮೆಂಟ್ ಕಾಲೇಜ್ ಎದುರು
ಮಂಗಳೂರು.

ಪೋರ್ಟ್ ಆರ್ಯ ಸಮಾಜ, ಮುಂಬಾಯಿ.

ಇದರ ಪ್ರಥಮ ವಾರ್ಷಿಕೋತ್ಸವವು ಕಳೆದ ತಾ. ೨೦ನೇ ರವಿವಾರ ಮುಂಬಾಯಿ ಕೋಟೆಯೊಳಗಣ ಸರ್ ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಮಂಧಿರದಲ್ಲಿ, ಶ್ರೀ ಜಗದ್ಗುರು ಶಂಕರಾಚಾರ್ಯ, (ಡಾ. ಕುರ್ತಕೋಟಿ) ರವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಬಹಳ ವಿಜ್ರಂಭಣೆಯಿಂದ ಜರುಗಿತು.

ಸಭಾಕಾರ್ಯವು ಅಪರಾಹ್ನ ಘಂಟೆ2 30ಕ್ಕೆ ಸರಿಯಾಗಿ, ವೈದಿಕ ಗೀತೆಯೊಡನೆ ಪ್ರಾರಂಭವಾಯಿತು.

ಪಂಡಿತ ವಿಜಯಶಂಕರಜಿಯವರೂ, ಶ್ರೀ ಯಂ. ಚಂದೇಶ್ವರರೂ ಅಧ್ಯಕ್ಷರ ಪಂಚಯವನ್ನು ಸಭಿಕರಿಗೆ ಮಾಡಿಕೊಟ್ಟರಲ್ಲದೆ, ಅವರನ್ನು ಅಗ್ರಸ್ಥಾನವನ್ನು ವಹಿಸಿ ಅಂದಿನ ಕಾರ್ಯವನ್ನು ಜಯಶೀಲವಾಗಿ ನೆರವೇರಿಸಿಕೊಡುವರೇ ಪ್ರಾರ್ಥಿಸಿದರು

ಶ್ರೀ ವಿ. ಸತ್ಯಾರ್ಥಿ ಸಿದ್ಧಾಂತವಿಶಾರದ, ಪಂಡಿತ ಭದ್ರದತ್ತ ಶರ್ಮ ಮೊದಲಾದವರು ಆರ್ಯಸಮಾಜದ ಸಿದ್ಧಾಂತ, ಹಿಂದೂ ಸಂಘಟನೆಯ ಅವಶ್ಯಕತೆ, ಆರ್ಯಸಮಾಜವು ಮಾನವ ಜಾತಿಯ ಏಳಿಗೆಗಾಗಿ ಕಾರ್ಯರಂಗದಲ್ಲಿ ಕೈಕೊಂಡ ಕೆಲಸ ಮೊದಲಾದ ವಿಷಯಗಳಲ್ಲಿ ಮಾತನಾಡಿದರು.

ಅಧ್ಯಕ್ಷರು ತನ್ನ ಮಹತ್ವಪೂರ್ಣ ಭಾಷಣದಲ್ಲಿ ಮಹರ್ಷಿ ದಯಾನಂದ ಸರಸ್ವತಿಯವರು ಯಾಕೆ ಆರ್ಯಸಮಾಜವನ್ನು ಸ್ಥಾಪಿಸಿದರೆಂದೂ, ಸ್ವಾಮಿ ಶ್ರದ್ಧಾನಂದ, ಪಂಡಿತ ಲೇಖರಾಮಜೀ ಮೊದಲಾದವರು ಯಾಕೆ ತಮ್ಮ ಆತ್ಮಬಲಿದಾನವನ್ನಿತ್ತರೆಂದೂ ತಿಳಿಸಿ, ಆರ್ಯಧರ್ಮ, ಆರ್ಯ ಸಂಸ್ಕೃತಿ ಮತ್ತು ಆರ್ಯ ಸಭ್ಯತೆಗಳನ್ನು ರಕ್ಷಿಸುವುದು ಹಿಂದುಗಳ ಕರ್ತವ್ಯವೆಂದು ಸಾರಿದರು ಸ್ವಾಮಿ ದಯಾನಂದರು ಪಂಜಾಬಕ್ಕೆ ಕಾಲಿಡುತ್ತಿದ್ದಿಲ್ಲವಾದರೆ, ಅಲ್ಲಿಯ ಹಿಂದೂಗಳೆಲ್ಲಾ ಮುಸಲ್ಮಾನರಾಗುತ್ತಿದ್ದರು ಉತ್ತರ ಹಿಂದೂಸ್ಥಾನದಲ್ಲಿರುವಂತೆ ದಕ್ಷಿಣ ಭಾರತದಲ್ಲಿಯೂ ಆರ್ಯ ಸಮಾಜದ ಚಳವಳವನ್ನು ಹೂಡಬೇಕು ಹಿಂದುಗಳೆಲ್ಲರೂ ಆರ್ಯಸಮಾಜದ ಛತ್ರಛಾಯೆಯಲ್ಲಿ ಸೇರಿ ತಮ್ಮ ಭೇದಭಾವವನ್ನು ಮರೆಯಬೇಕು ಅಂತೆಯೇ ಹಿಂದೂಸ್ಥಾನದ ಇತರ ಮತಸ್ಥರನ್ನು ತಮ್ಮ ಅತಿಥಿಗಳೆಂದು ತಿಳಿದು, ಅವರಿಗೆ ಸಲ್ಲತಕ್ಕ ಆದರ ಸತ್ಕಾರಗಳನ್ನು ಸಲ್ಲಿಸಿ, ಅವರ ಅಭಿವೃದ್ಧಿಯನ್ನೂ ಐಕ್ಯತೆಯನ್ನೂ ನೋಡಿಕೊಂಡು ಪ್ರೇಮದಿಂದ ನಡೆಯಬೇಕು! ಯಾವ ರೀತಿಯಲ್ಲಿ ಕ್ರಿಶ್ಚನರ ಮತ್ತು ಮುಸಲ್ಮಾನರ ಸಂಸ್ಕೃತಿಗಳ ಪ್ರಚಾರಕ್ಕೆ ಬೇರೆ ಬೇರೆ ದೇಶಗಳಿರುತ್ತವೋ ಹಾಗೆ ಹಿಂದುಸ್ಥಾನವು ಆರ್ಯ ಸಂಸ್ಕೃತಿಯ ರಕ್ಷಣೆಗಾಗಿರುತ್ತದೆ ಆದ್ದರಿಂದ ತಮ್ಮ ಸಂಸ್ಕೃತಿಯ ರಕ್ಷಣೆಗಾಗಿ ಹಿಂದುಗಳೆಲ್ಲರೂ ಸಂಘಶಕ್ತಿಯನ್ನು ಹೆಚ್ಚಿಸಿ ಹೆಣಗಾಡಬೇಕು. ತಾನು ಸುಖಿಯಾಗಿ ಇತರರನ್ನು ಸುಖಿಯಾಗಿ ಮಾಡುವುದು ಪ್ರತಿಯೊಬ್ಬ ಆರ್ಯನ ಕರ್ತವ್ಯವಾಗಿರುತ್ತದೆಂದು ಹೇಳಿದರು

ತದನಂತರ ಶ್ರೀ. ಗಳಾದ ದಾಮೋದರ ಶಾಂತನರೂ, ಎಚ್ ಎಸ್ ಕಲ್ಯಾಣರೂ, ಪೋರ್ಟ್ ಆರ್ಯ ಸಮಾಜವು ಇನ್ನು ಮುಂದೆ ಮಾಡಲಿರುವ ಹಲವು ಕಾರ್ಯಗಳನ್ನು ಸೂಚಿಸಿ, ದಾನಶೂರ ಮಹಾಶಯರೆಲ್ಲರೂ ಸಮಾಜದ ವೇದ ಪ್ರಚಾರ ಫಂಡಿಗೆ ತಮ್ಮ ಶಕ್ತ್ಯಾನುಸಾರ ಧನಸಹಾಯ ಮಾಡುವರೇ ಪ್ರಾರ್ಥಿಸಿದರು

ಕಾರ್ಯಕ್ರಮಾಂತ್ಯದಲ್ಲಿ ಮಂಗಳೂರಿನ ಸುಪ್ರಸಿದ್ಧ ಪ್ರೊಫೆಸರ್ ಯನ್ ಶೇಷಪ್ಪನವರು ತನ್ನ ಶಿಷ್ಯವೃಂದದೊಡನೆ ಮನೋಲ್ಲಾಧಕವಾದ ವ್ಯಾಯಾಮ ದೇಖಾವೆಯನ್ನು ಪ್ರದರ್ಶಿಸಿದರು.

ಶ್ರೀ. ವಿ. ಜೆ ಕೋಟ್ಯಾನರು ಅಂದಿನ ಸಮಾರಂಭದಲ್ಲಿ ಭಾಗವಹಿಸಿ ಸಹಕರಿಸಿದ ಎಲ್ಲಾ ಮಹೋದಯರಿಗೂ ಧನ್ಯವಾದಗಳನ್ನರ್ಪಿಸಿದ ತರುವಾಯ ಸಭೆಯು ವಿಸರ್ಜನೆಯಾಯಿತು

ಮೇರಿಯುಂ ಹಾಪ್‌ಕಿನ್ಸ್



ಚಲನಚಿತ್ರಗಳಲ್ಲಿ ಸೌಂದರ್ಯದಿಂದಿರುವ ಹಾಗೆಯೇ ಅವಳು ಸ್ವತಃ ಸುಂದರಿಯಾಗಿಯೇ ಇದ್ದಾಳೆ.

ನೀವು ಮೇರಿಯ ಹಾಪ್‌ಕಿನ್ಸಳ ಪ್ರಸಿದ್ಧವಾದ ಸೌಂದರ್ಯವನ್ನು ಚಲನಚಿತ್ರಗಳಲ್ಲಿ [illegible] ಸುಂದರಿಯಾಗಿರುವುದರಿಂದ ಅಂತಹ ಸೌಂದರ್ಯವನ್ನು [illegible] ಆಶ್ಚರ್ಯಕರವಾದ ಸೌಂದರ್ಯದ ಗುಟ್ಟನ್ನು ಅವಳ [illegible] ಚರ್ಮವನ್ನು ಮೃದುವಾಗಿಯೂ, ಕೋಮಲವಾಗಿಯೂ ಮತ್ತು [illegible] ಇಟ್ಟುಕೊಳ್ಳಲು [illegible] ನಾನು ಅದನ್ನು ಯಾವಾಗಲೂ ಉಪಯೋಗಿಸುತ್ತೇನೆ '

ಚಲನಚಿತ್ರ ನಾರೀಮಣಿಯರಂತೆ ಆಕರ್ಷಕವಾಗಿ ನಿಮ್ಮ ಚರ್ಮವನ್ನು ಯಾವಾಗಲೂ ಲಕ್ಸ್ ಟಾಯಿಲೆಟ್ ಸಾಬೂನಿನ ಆದರಣೆಯಲ್ಲಿರಿ [illegible] ಪರಿಶುದ್ಧವಾದ ಪದಾರ್ಥಗಳಿಂದಲೇ ತಯಾರಿಸಿದುದೆಂಬುದಕ್ಕೆ ಗುರುತು—ಇದರ [illegible] ಚರ್ಮವನ್ನು [illegible] ಮತ್ತು ಯೌವನಸ್ಮರಂತೆ [illegible] ನೀವು ಅದರ [illegible] ಅಪೇಕ್ಷಿಸುವಿರಿ

ಲಕ್ಸ್ ಟಾಯಿಲೆಟ್ ಸ್‌ಬೂನು

LUX TOILET SOAP

ಇಂದಿಯಾದಲ್ಲೀ ವನಸ್ಪತಿಗಳ ಪರಿಶುದ್ಧವಾದ ಎಣ್ಣೆಯಿಂದಲೇ ತಯಾರಿಸಿದ್ದು



X-LTS 499-263

LEVER BROTHERS (INDIA) LIMITED
KANARESE

ಉಚಿತ

ಶ್ರಿಂಟುದ 9 ಲಕ್ಸ್ ಟ್ಯಾಲೆಟುಸಾಬೂನಿನ ದೊಡ್ಡ ಬಿಲ್ಲೆಗಳ ಹಾಪ್ಪುಗಳನ್ನು ಕೊಡಿಸಿ ನಿಮ್ಮ ವ್ಯಾಪಾರಿಗೆ ಕೊಡ್ಡುಕೆಳುವಿರಿ ಆಗ ಅವನು ಲಕ್ಸ್ ಟಾಯಿಲೆಟು ಸೋಪಿನ ಒಂದು ಪುಲ್‌ಸ ಬ್ ವಿಲ್ಲೆಯನ್ನು ನಿಮಗೆ ಕೊಡುವನು ಈ ಆಶ್ಚರ್ಯಕರವಾದ ಸುಸಂದರ್ಭವನ್ನು ಕಳೆದುಕೊಳ್ಳ ಬೇಡಿರಿ

X-LTS 498 0-434A KANARESE

THE

Shivaji Chemical Works, HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ವಾಡಿಕೆಯನ್ನು ಮರೆಯಬೇಡಿರಿ

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪ್ರುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ, ಕೊಕ್ಕೆ ಹುಳ, ನೂಲಿನಂತಹ ಹುಳ, ಯಾವ ತರಹದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು ಇದರ ಸೇವನೆ, ಸಕ್ಕರೆ ಬಿಸಿನೀರು (ಹರಳೆಣ್ಣೆ ಬೇಡ)

ಕ್ರಯ ಪ್ಯಾಕೆಟ್ 1ಕ್ಕೆ	0	1	0
ಸುಖವಿರೇಚನ ಗುಳಿಗೆ	0	0	6
ಪಿತ್ತವಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1	0

ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ವಾಂತಿಯೂ ಗುಣವುದು, ಕಪ ಮಿಶ್ರಣ ಸೀಸೆ 1ಕ್ಕೆ 0 8 0

ಸಿಗುವ ಸ್ಥಳ — ಷಾ ಕಂಪೆನಿ, ಗವರ್ನರ್ಮೆಂಟ್ ಕೋಲೇಜಿನ ಎದುರು ಮಂಗಳೂರು

USE KALYANPUR SUGAR

IT IS THE PUREST & THE SWEETEST

IT IS A UNIQUE PRODUCT OF OUR OWN DISTRICT.

available in 7lb and 14lb packets, at the *Office, C. P. C. Co., Ltd.*

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.

ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು! ಅತೀ ಕಮ್ಮಿ ದರ!

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ, ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.

ಹಾನಿಕರವಾದ ಪದಾರ್ಥಗಳು ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ: ಆಣೆ 8 ಮಾತ್ರ.

Manufactured by:—

J. B Dutt & Co., Calcutta,

Sole agent:—

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

ಡೋಂಗರೇಕೀ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ.

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾಹುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲಿ ದೊರೆಯುವುದು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು.)

1.	ಅಧಿಕೃತ ಚಂದಾ ಹಾಕಲು ಅರ್ಹಿಸಿದ ಮೂಲಧನ	ರೂ. 3,50,000 - 0 — 0
2.	ಚಂದಾ ಹಾಕಿ ಎತ್ತಿದ ಮೂಲಧನ . . .	ರೂ. 2,88,950 - 0 — 0
3.	ಕ್ಷೇಮನಿಧಿಗಳು	ರೂ. 3,63,578 - 0 - 0

ವ್ಯವಹಾರದಲ್ಲಿದ್ದ ಜುಮ್ಲಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

ಹೆಡ್ ಆಫೀಸು:—ಉಡುಪಿ

ಬ್ರಾಂಚುಗಳು:—1. ಮದ್ರಾಸು; 2. ವೆಲ್ಲೂರು; 3. ತಲಚೇರಿ; 4. ರಥಬೀದಿ, ಮಂಗಳೂರು, 5. ಬಂದ್ರ, ಮಂಗಳೂರು; 6. ಉಡುಪಿ; 7. ಶಿರ್ವ; 8. ಕುಂದಾಪುರ; 9. ಬೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13 ಮೈಸೂರು, 14. ಮಡಿಕೇರಿ: 15. ವೀರರಾಜೇಂದ್ರಪೇಟೆ; 16 ಸೇಲಂ.

Member Reserve Bank of India.

21—6—1937

V. R. Kamath, B A LL. B
Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by:–

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಗರ್ಭ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಆಶಕ್ತಿಯು ಅಶಕ್ತಿಯಾಗುತ್ತದೆ. ಬಹಳ ಬಸಿರುಗಳಲ್ಲಿ ವಿಶೇಷ ದುಃಖವಾಗುವುದರಿಂದ ಮುಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹೆರಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟುಗುಡಿಕೆಯು ನೇಮದಂತೆ ನಡೆಯುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು — ಡಾ| ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೇಳುವದೇನೆಂದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪–೦–೦, ಬಿ. ಪಿ. ಅಹಿ ಈ.

ವಿಳಾಸ.—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜೆ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಶಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ. ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೋರ್ಸ್ ಹೌಸ್ ಶ್ರೀರಾಮ ಪೇಟೆ ಕಾಸರಗೋಡು. 8 ಮೆಸರ್ಸ್ ಕಾಮತ್ ಎಂಡ್ ಕೋ [illegible] 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

THE PIE-MONEY BANK LTD.

Maidan Road MANGALORE

Undertakes all kinds of Banking Business Current accounts at 2½% per annum Savings Bank Deposits at 4½% per annum

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs 100—0—0 run regularly on systematic lines Unique Banking facilities to Businessmen and interested Public

Apply for paticulars **K R. GURU,** *Managing Director*

೧ ರೂಪಾಯಿಗೆ ೫೦೦೦ ರೂಪಾಯಿ

ಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರಿಮಿಯಂ ಕಟ್ಟಬೇಕಾಗಿಲ್ಲ, ಮತ್ತೆ ಪ್ರಿಮಿಯಂ ಕೇಳುವುದಿಲ್ಲ

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆತ್ ರೋಡ್, ಲಾಹೋರು.

Write for full particulars to:

M. S. V. Kamath,

BOLUR, MANGALORE.

Dist. Agent for SOUTH CANARA

Dist. Agent for North Kanara

Mr. I. A. Shaik Khaji Mohalla,

ANKOLA.

Edited Printed & Published By A. S. Kamath at the Sharada Press, Car Sreet, Mangalore.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೊರೆಯಲನುಪಮ ರತ್ನಗಳು ಸಾಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕವರಂಜಿದರೆ ಸುಧೆಯನು । ಪಡೆಯುವನ್ನವರೆಗೆ ತೆರಳಲಿಲ್ಲೆ ಕೋರಿದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೩೧. ಮಂಗಳೂರು ತಾ. ೯ನೇ ಜುಲಾಯಿ ೧೯೩೭ (9 7-'37)

"An ideal young progressive Life Office of India to Insure with or represent"

THE

Commonwealth Assurance Company Ltd.,

POONA.

Triennial Bonus! **On Endowment Rs. 37½/-**

Triennial Bonus! **On Whole Life Rs. 45**

NEXT VALUATION 1937-38.

Special features —

(1) Low Premium Rates
(2) Permanent Disability
(3) Double indemnity!
(4) Extended Assurance Benefit
(5) House purchase scheme for Policy holders

Liberal first year and hereditary renewal commissions for its representatives

Messrs GAWANKAR & SONS,

Chief Agents for Mysore State, Coorg, Ceded Districts, & S. Kanara,
Ahmed Buildings, Chickpet, BANGALORE CITY

Local Representatives - **The Modern Trading Co., Opp. City Press, Mangalore.**

Branches:

Bombay, Calcutta, Delhi, Madras & Nagpur.

[illegible] ... ಮುಸ್ಲಿಮರು [illegible] ... ಅದರಿಂದ — ಶ್ವಾಸ್ತ್ರಗಳು [illegible] ... ದಾಸ್ತಾನುಮಾಡಿದರು [illegible] ... ಈಗ-ಬ್ರಿಟಿಷ್-ಚಿನ್ನದ-ಮೂಟೆ [illegible] ... ನ್ನು ಸಾಗಾಣಿಕೆ ... ಯಿತು!

೦ ೦ ೦ ೦ ೦

ಚಿನ್ನವೆಲ್ಲ ಮಾಯವಾದರೂ, ಪ್ರಸನ್ನ ಳಾಗಿ ಕೂತ ಭಾರತಲಕ್ಷ್ಮಿಯಲ್ಲಿ! ಚಿನ್ನ ದಾಸ್ತಾನು ಮಾಡುತ್ತ ಚಿನ್ನದ ಮಾನ ಕಾಪಾಡ ಲಾರದ ಫ್ರಾನ್ಸು ಮುಂತಾದ ದೇಶಗಳ ಪ್ರಸ ನ್ನತೆಯಲ್ಲಿ!

೦ ೦ ೦ ೦ ೦

ತಾರಕೇಶ್ವರದ ದೇವರ ಹಿತಚಿಂತನೆ ಮಾಡುವ ಭಾರವು ಹೂಗ್ಲಿ ಜಿಲ್ಲಾ ಜಡ್ಜರ ಮೇಲೆ ಇದೆ. ಪ್ರಭಾತಗಿರಿ ಎಂಬೊಬ್ಬನನ್ನು ಮಹಂತನನ್ನಾಗಿ ನೇಮಿಸಬೇಕೆಂದು ಅರ್ಜಿ ಬಂದಿತ್ತು ವಂಗೀಯ ಬ್ರಾಹ್ಮಣಸಭೆಯು ಈ ಅರ್ಜಿಯನ್ನು ನಿರಾಕರಿಸಬೇಕೆಂದು ಜಡ್ಜ ರಿಗೆ ಭಿನ್ನವಿಸಿಕೊಂಡಿತು ಜಡ್ಜರು ಗಿರಿಯನ್ನು ನೇಮಿಸಿದರೆ, ದೇವರಿಗೆ ಹಾನಿಯಿದೆ ಎಂದು ಗಿರಿ ಯನ್ನು ನೇಮಿಸಲಿಲ್ಲ ದೇವರನ್ನು ಕಾಪಾ ಡುವ ಗಿರಿಯುಂಟಾದರೆ, ದೇವರನ್ನು ಗಿರಿಧರ ನೆಂದು ಏಕೆ ಕರೆಯಬೇಕು?

೦ ೦ ೦ ೦ ೦

ಕಾಶ್ಮೀರದಲ್ಲಿ ಆಗಾಗ ಮುಸ್ಲಿಮರ ಗಲಭೆ ಗಳಾಗುವುವು. ಈ ಸಲವೂ ಗಲ್ಲಭೆಯುಂಟಾಗಿ ಬೇರೆ ಬೇರೆ ಕಡೆಗಳಿಂದ ಮುಸ್ಲಿಮರು ಅತ್ತ ಗುಂಪುಕೂಡಿ ಮುತ್ತಿಗೆಹಾಕತೊಡಗಿದರು ಡಾ। ರಾಮ ಸಿಂಗರು ಜೈಲಿನಲ್ಲಿ ಕುರಾನನ್ನು ಬರೆದರೆಂದು ಈ ಗಲಭೆ ವಿಚಾರಣೆಯಲ್ಲಿ ಈ ಡಾಕ್ಟರರು ಹಾಗೆ ಮಾಡಿದ್ದಿಲ್ಲವಾದರೂ, ಅವರನ್ನು ಜೈಲಿ ನಲ್ಲಿ ಕೆಲಸಕ್ಕೆ ನೇಮಿಸಬಾರದೆಂದಾಯಿತು ಮುಸ್ಲಿಮರ ಇತರ ಬೇಡಿಕೆಗಳನ್ನೆಲ್ಲ ಮನ್ನಿಸ ಲಾಯಿತು ರಾಜ್ಯದಲ್ಲಿ ಮುಸಲ್ಮಾನರು ಜನರು ಮುಸ್ಲಿಮರು ಈಗ ಅವರಿಗೆಲ್ಲ ಸಂತೋಷವಾಗಿದೆ ಮದ್ರಾಸಿನಿಂದ ಅಲ್ಲಿಗೆ ಹೋಗಿರುವ ಹೊಸ ದಿವಾನರ ಈ ಶಾಂತಿಕರ ಬುದ್ಧಿಯಿಂದ, ಹಿಂದಿನಂತೆ ಗುಂಡು ಹಾರಿಸುವ ಅಗತ್ಯಬೀಳಲೇ ಇಲ್ಲ

೦ ೦ ೦ ೦ ೦

ವಾಯು ವಿಮಾನ ಬೇಕೋ? ಹತ್ತು ಸಾವಿರ ರೂಪಾಯಿಗೆ ಒಂದು ವಿಮಾನವನ್ನು ಒಬ್ಬ ಚೆಟ್ಟಿಯಾರರು ಕ್ರಯಕ್ಕೆ ತೆಗೆದುಕೊಂಡಿದ್ದರು ಅದರ ನೆಲಬಾಡಿಗೆಯು ಹಣ ಪಾವತಿಮಾಡಿ ದ್ದಿಲ್ಲ ಅದೀಗ ೧೮೫೦ ರೂಪಾಯಿಗೆ ಏಲಂ ಆಯಿತು ಬಾಡಿಗೆ ಬಾಕಿ ೧೧೫೪ ರೂಪಾಯಿ ಮೋಟಾರು ಕಾರಿನ ಕ್ರಯಕ್ಕೆ ವಿಮಾನ ಸಿಗುವು ದಾದರೂ, ಅದನ್ನು ಇಡಲು ಸ್ಥಳಬಾಡಿಗೆ ತೆರ ಲಾರದೆ ಏಲಂ ಹಾಕಿದರೆಂದರೆ!

೦ ೦ ೦ ೦

ಬೇಡನ್‌ಪವೆಲ್ ಪ್ರಭುಗಳು ಹಿಂದೀಯ ರಲ್ಲಿ ಗುಣವಿಲ್ಲವೆಂಬ ಮಾತು ನುಡಿದುದೇ ಎಲ್ಲೆಲ್ಲಿಂದಲೂ ಅವರ ಸ್ಕೌಟು ಪದ್ಧತಿಯನ್ನು ದೂರಿ, ಆಕ್ಷೇಪಿಸಿ, ಸ್ಕೌಟುದಳಗಳನ್ನು ಮುರಿದಿ ಕ್ಕುವ ಠರಾವುಗಳಾಗುತ್ತವೆ ಕೆಲ ವರ್ಷ ಹಿಂದೆ ಹೀಗೆ ನುಡಿದಿದ್ದಲ್ಲಿ, 'ನಿಜವಾಗಿಯೂ ಹಾಗೆಯೆ' ಎಂದು ಸ್ನಗುಟ್ಟುತ್ತಿದ್ದವರಿಷ್ಟೋ ಮಹಾನುಭಾವರು ನಮ್ಮಲ್ಲಿ ಇರುತ್ತಿದ್ದರು ರಾಷ್ಟ್ರೀಯ ಗೌರವ ಎಂಬ ವಿಚಾರಗಳು ರೂಪು ಗೊಳ್ಳಲು ಇವೇ ೧೫ ವರ್ಷಗಳ ಪರಿಶ್ರಮಹಿಡಿ ಯಿತು ಇಷ್ಟಾದರೂ, ಈ ವರ್ಷದ ಜಾಂಬೂ ರಿಗೆ ಮದ್ರಾಸಿನ ಸ್ಕೌಟುದಳಗಳ ಪ್ರತಿನಿಧಿಗಳು ಈಗಲೇ ಹೊರಡುವ ಆತುರದಿಂದ ಯುನಿ ಫೋರ್ಮುಗಳನ್ನು ಮಡಿಹಾಕಿಸಿರುತ್ತಾರೆ

೦ ೦ ೦ ೦ ೦

ಲಿಬರಲ್ ಪಕ್ಷವು ಉದಾರ ಮಾತ್ರವೇ ಇಲ್ಲ, ಅದರ ಸೂಚನೆಗಳೂ ಅಷ್ಟೇ ಉದಾರ

[illegible] ... ಹೋರಾಡುತ್ತ ... ರಾವಣಿಗಳು [illegible] ... ಸಂಭವವಿದೆಯಿದೆ! ಅವರೆ ... ಕಾಂಗ್ರೆಸ್ ... ಯನ್ನು ಹೊರೆಯ ... ಮುಂದೆ ಬಂದು ... ಹುಕುಂಗಳನ್ನು ... ಸಹಾಯಮಾಡುವಂತಾಗಲಿ ಎಂದೇ ... ಕೂಡಿದೆ. ಸೂಚಕರೇ, ... ಸಹಾಯವನ್ನೇಕೆ ... ಕೊಳ್ಳಲಾರದಾದರು!

೦ ೦ ೦ ೦ ೦

'ಗೋಡ್ ಸೇವ್ ದಿ ಕಿಂಗ್' ಹಾಡಿದ ತರುವಾಯದಲ್ಲಿ 'ವಂದೇ ಮಾತರಂ' ಹಾಡ ಬಹುದಾಗಿ, ಸ್ಕೌಟರಿಗೆ ಅಪ್ಪಣೆಯಿದೆ ಹೊರತು, ವಂದೇ ಮಾತರಂ ಹಾಡಬಾರದೆಂದೇನೂ ಇಲ್ಲ ಎಂದು ಸರ್ ಬ್ಯರಮ್ಜಾಜೀ ಜೀಜೀಭಾಯಿಯ ವರು ಹೇಳುತ್ತಾರೆ. ಈ ಮಹಾತ್ಮರನೆಷ್ಟೋ ಸರ್ ಜೀಜೀಭಾಯಿ ಬೈರಪ್ಪೀ ಎಂದು ಕರೆದರೆ ಅವರು ಸಿಟ್ಟಾದಾರೆ?

೦ ೦ ೦ ೦ ೦

ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಬೊಂ ಬಾಯಿ ಗವರ್ನರರು ಸಂಪೂರ್ಣವಾಗಿ ಮಂಜೂರ್ಮಾಡಿರುವರೆಂದು ಅಲ್ಲಿನ ತಾತ್ಕಾಲಿಕ ಮಂತ್ರಿವರ್ಯ ಜಮ್ನಾದಾಸ್ ಮೆಹತಾರವರು ಭಾಷಣಮಾಡಿರುವರು ಗವರ್ನರರೇ ಮಾತ್ರ ಹಾಗೆ ಹೇಳಿದ್ದಿಲ್ಲ, ಹೇಳುವುದಿಲ್ಲ ಹಾಗೆ ಹೇಳಿದ್ದರೆ ಮೆಹತಾರವರು 'ತಾತ್ಕಾಲಿಕವಾಗಿ' ಎಲ್ಲಿರುತ್ತಿದ್ದರು?

೦ ೦ ೦ ೦ ೦

೩೦ ಸೇರು ಭಾರದ ಮಾವಿನ ಹಣ್ಣುಗಳ ಒಂದು ಪಾರ್ಸೆಲನ್ನು ವಿಮಾನದ್ವಾರಾ ರಜ ಗ್ರಹ ಭಾಡಿಗೆಕೊಟ್ಟು, ಬನಾರಿಸ ಮಹಾರಾಜ ರು ನಮ್ಮ ಚಕ್ರವರ್ತಿಯರಿಗೆ ಈ ವಾರ ಕಳುಹಿ ಸಿರುವರು ಮೇರಿ ಎಂಟೊನೆಟ್ ಸ್ತ್ರೀಯದೊಂದು ವಜ್ರಹಾರವನ್ನು ೧೫,೦೦೦ ಪವನಿಗೆ ದರ್ಭಾಂ ಗದ ಮಹಾರಾಜರು ಲಂಡನಿನಲ್ಲಿ ಕ್ರಯಕ್ಕೆ ಕೊಂಡುಕೊಂಡರು

೦ ೦ ೦ ೦ ೦

ತಾವು ಫಸ್ಟ್ ಕ್ಲಾಸಿನ ಸೀಟುಗಳನ್ನು ರಿಜರ್ವ್‌ಮಾಡಿದ್ದೇವೆಂದು ನಾಗಪುರದ ಅಸಿ ಸ್ಟ್ಯಾಂಟ್ ಕಮಿಶನರಿಗೆ ಸ್ಟೇಶನಕೊಡದ ಇಬ್ಬರು ಯೂರೋಪೀಯರು ನಿಜವಾಗಿಯೂ ರಿಜರ್ವ ಮಾಡಿದ್ದಲ್ಲವೆಂದು ಅವರ ಮೇಲೆ ಚಾರ್ಜು ಮಾಡಲಾಗುವುದು ದುಬಾರಿ ಚಾರ್ಜನ್ನು ಕೊಡುವುದೇ ಅಲ್ಲದೆ ಇಂಗ್ಲೆಂಡಿನಿಂದಲೂ ಇವ ರಲ್ಲೊಬ್ಬರು ಇಲ್ಲಿಗೆ ಬಂದು ಮೊಕದ್ದಮೆಯಲ್ಲಿ ತನ್ನ ವ್ಯವಹರಣೆ ನಡೆಸುವಂತಾಗಿ ಬಾಧೆ ಯುಂಟಾಗಿದೆ ಪುಣ್ಯಾತ್ಮರಿಗೆ ಇನ್ನಾದರೂ ವಿವೇಕ ಅರಿದೀತೆ?

೦ ೦ ೦ ೦

ಯಾವನೊಬ್ಬನಿಗೆ ಅತ್ಯಧಿಕ ಜ್ವರವೇರಿ ದಾಗ, ಅವನ ಮೈಯಲ್ಲಿರುವ ನೋವು ಬಲ ಗಾಲಲ್ಲೋ ಎಡಗಾಲಲ್ಲೋ ಎಂಬುದು ಮುಖ್ಯ ವಾಗಿಲ್ಲ ಅವನ ಜ್ವರವಿಳಿದ ಬಳಿಕವೇ ಅದೆಲ್ಲಿ ಎಂದು ಬಹಳ ಚೆನ್ನಾಗಿ ಪರಿಶೋಧನೆಮಾಡಲು ಅವಕಾಶವಿದ್ದೇ ಇದೆ ಜ್ವರದ ಕಾಲದಲ್ಲಿ ಕಾಲನ್ನು ಕಟ್ಟುತ್ತ ಕೂತುಕೊಳ್ಳುವವರಿಲ್ಲ ಯಾವ ಕಾಲನ್ನು ಮೊದಲು ಪರೀಕ್ಷಿಸಬೇಕೆಂದು ವಿಚಾರಿಸಿ ಚರ್ಚಿಸಿ ಕೂತರೆ, ರೋಗಿಯನ್ನು (ಅವನ ಆಸೆಯನ್ನೇ) ಬಿಡುವುದೊಳ್ಳೆಯದು. ಹೀಗಿರುವ ಕಾರಣ, ಈಗಣ ರಾಜಕೀಯ ಬಿಕ್ಕಟ್ಟಿನ ಕಾಲದಲ್ಲಿ, ಇಂಡಿಯವು ಆ ಕಾಲನ್ನು ಅಥವಾ ಈ ಕಾಲನ್ನು ಮೊದಲು ಪರೀಕ್ಷಿಸ ಬೇಕೆಂದು ಕೂಗುತ್ತ ಕಾಲಹರಣಮಾಡಲಾ ರದು ಜ್ವರ ಇಳಿಯಲಿ, ಬಿಕ್ಕಟ್ಟು ಮುರಿಯಲಿ ಇನ್ನೇ ಇಂಧಿನ ಚಿಂತೆ.

೦ ೦ ೦ ೦

"ಡಾಕ್ಟರರು ಪಥ್ಯ ಹೇಳಿಕೊಡುತ್ತಾರೆ. ಆದರೆ,—ಇದನ್ನು ಮುಟ್ಟಬಾರದು, ಅದನ್ನು ತಿನ್ನಬಾರದು ಎಂದು ತಾಯಿಗೆ ಹೇಳುತ್ತಾರೆ ತಾಯಿಯ ಅಭಿಪ್ರಾಯದಲ್ಲಿ ಮಗುವಿಗೆ ಹಿತ ವೆಂದೂ ಅದು ಜೀರ್ಣಿಸಬಲ್ಲುದೆಂದೂ ತಿಳಿದಿರು ವುದನ್ನೆ ತಾಯಿ ಮಗುವಿಗೆ ಕೊಡುತ್ತಾಳೆ. ಡಾ ಕ್ಟರರು ಬಂದು ಮಗುವನ್ನು ನೋಡುವದೆ, ತಾಯಿ ಯೊಡನೆ ತರ್ಕಿಸುತ್ತಾರೆ, ಅವಳಲ್ಲಿ [illegible] ದೂ ಷಿಸುತ್ತಾರೆ ತಾಯಿಕೊಟ್ಟುದನ್ನು ಮಗು ಸುಖ ವಾಗಿ ತಿಂದು ಜೀರ್ಣಿಸಿ ರಕ್ತಹೆಚ್ಚಿಸಿಕೊಂಡು ಆರೋಗ್ಯವಾಗಿದೆ ಈಗ ಡಾಕ್ಟರರು ಅದನ್ನು ಬಲ್ಲದೆ, ಮಗುವು ಹೀಗೆ ಹೆಚ್ಚಿಸಿಕೊಂಡ ರಕ್ತ ವನ್ನು ಶಸ್ತ್ರಕ್ರಿಯೆಯಿಂದ ಹೊರಡಿಸಬೇಕೆನ್ನು ತ್ತಾರೆ "ಈ ಆಹಾರವು ಜೀರ್ಣವಾಗತಕ್ಕ ದಲ್ಲ" ಎಂದೇ ಅವರ ವಿಶ್ವಾಸ; ಅದರಿಂದ ಈ ವಿಚಾರ. ಇದರಂತೆ ಮಾಡಿದರೆ, ಮಗು ಗುಣ ಹೊಂದುವುದುಂಟೆ?"—ಹೀಗೆ ಶ್ರೀ ರಾಜಗೋ ಪಾಲಾಚಾರ್ಯರು ತಮ್ಮ ಮಾತುಗಳಲ್ಲಿ, ಬ್ರಾಹ್ಮಣ — ಬ್ರಾಹ್ಮಣೇತರ ಭೇದಗಳನ್ನೆತ್ತಿ ಕೊಂಡು ಸರ್ ರೆಡ್ಡಿಯವರಿಂದ ವಿಚಾರವನ್ನು ವಿಮರ್ಶಿಸಿದರು, ಕಾಂಗ್ರೆಸ್ಸಿಗೆ ಚುನಾವಣೆ ಹೊಂದಿಬಂದವರು ವೋಟರರಿಂದ ಬಂದವರು. ಅವರು ಆ ಜಾತಿ, ಈ ಜಾತಿ ಎಂದು ಇನ್ನೂ ದೂರುವುದೇಕೆ? ಅವರೇ ಹಿತವೆಂದು ವೋಟ ರರು ತಿಳಿದರೆ, ಕಾಂಗ್ರೆಸ್ ಅಂಗೀಕರಿಸಿದರೆ, ಅದಾಗದು ಅವರನ್ನು ಬಿಡಿರೆಂದು-ರೆಡ್ಡಿಯವರು ಆ ಡಾಕ್ಟರರಂತೆ ಎಂದರಾದೀತೆ? — ಜಾತಿದ್ವೇ ಷದ ರೋಗ ಬೆಳೆಯಲೇ ಬೇಕೆ? ಇನ್ನೂ?

ಎಷ್ಟು ತಂಪು ಮತ್ತು
ದಣುಪರಿಹಾರಿಯೋ ಅಷ್ಟೇ
ಪುಷ್ಟಿಕರವಾದದ್ದು

ಬೇಸಿಗೆ ಕಾಲದಲ್ಲಿ ತಣ್ಣಗಾದ ಓವಲ್ಟಿನನ್ನು ತೆಗೆದು ಕೊಂಡರೆ ಅದು ತಂಪನ್ನೂ ನವಚೈತನ್ಯವನ್ನೂ ಕೊಡು ವುದಲ್ಲದೆ ದೇಹದ ಶಕ್ತಿ ಚಟುವಟಿಕೆಯನ್ನು ಅಭಿವೃದ್ಧಿಮಾಡುವ ಪುಷ್ಟಿಯ ಎಲ್ಲ ಆಹಾರಗಳು ಅದ ರಲ್ಲಿ ಸಮೃದ್ಧಿಯಾಗಿವೆ

ಪ್ರಕೃತಿಯಲ್ಲಿರುವ ಉತ್ತಮ ಶಕ್ತಿವರ್ಧಕ ಆಹಾರಗಳಾದ ಪಕ್ವ ಬಾರ್ಲಿ ಸತ್ವದಿಂದಲೂ ದನದ ಕೆನೆ ಮೊಟ್ಟೆಗಳಿಂದಲೂ ಓವಲ್ಟಿನು ತಯಾರಿಸಿದು ದಾಗಿರುತ್ತದೆ ಬೇಸಿಗೆ ಕಾಲದಲ್ಲಿ ನಿಮ್ಮ ಆರೋಗ್ಯಶಕ್ತಿಯನ್ನು ಉಳಿಸಿಕೊಳ್ಳುವ ಪೌಷ್ಟಿಕಗಳು ಓವಲ್ಟಿನಲ್ಲಿವೆ ಅಲ್ಲದೆ ಓವಲ್ಟಿನಲ್ಲಿ ಆರೋಗ್ಯಕ್ಕೆ ಬೇಕಾ ಅತ್ಯಗತ್ಯ ವಸ್ತುಗಳಾದ ವಿಟಮಿನುಗಳೂ ಇವೆ

ಓವಲ್ಟಿನ ಪಾನೀಯವನ್ನು ತೆಗೆದುಕೊಂಡು ಅದು ಕೊಡುವ ಮಾನ ಸೀಕ ಮತ್ತು ದೈಹಿಕ ಚೈತನ್ಯಗಳ ಸುಖವನ್ನು ಅನುಭವಿಸಿ [illegible] ಗುವ ಸರಿಸಮಾನವಾಗದ ಒದಲಿಯುಗಳನ್ನು ತ್ಯಜಿಸಿ.

ಓವಲ್‌ಟಿನ್

ಇದನು ತಣ್ಣಗಾಗಿ ತೆಗೆದುಕೊಂಡರೆ ಅದು ಬೇಸಿಗೆ ಕಾಲದ ಉತ್ತಮ.

[illegible]

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ
ಇದು ತಯಾರಿಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ
ಏಜಂಟರು — ಜೇಮ್ಸ್ ರೈಟ್ ೪೬ ಎ ರಿಪನ್ ಸ್ಟ್ರೀಟ್ ಕಲ್ಕತ್ತಾ
ಬೊಂಬಾಯಿ ಮತ್ತು ಮದ್ರಾಸುಗಳಲ್ಲಿಯೂ ಸಿಗುತ್ತದೆ

OV/470

ಬ್ರಿಟಿಷ ಸಾಮ್ರಾಜ್ಯದ ಜೀವರೇಖೆಗಳು

ಬ್ರಿಟಿಷ ಸಾಮ್ರಾಜ್ಯದಲ್ಲಿ ಕಾರಣ ಸಾಮುಗ್ರಿಗಳು

ಬ್ರಿಟಿಷ ಸಾಮ್ರಾಜ್ಯದ ಜೀವರೇಖೆಗಳು

ಬ್ರಿಟಿಷ ಸಾಮ್ರಾಜ್ಯದ ವಿವಿಧ ರಾಷ್ಟ್ರಗಳ ಕರಿಷತ್ತು ಮೊನ್ನೆ ಕಾರನೇಶನಿನ ಸಮಯಲಂಡನಲ್ಲಿ ಜರಗಿತು ಸಾಮ್ರಾಜ್ಯದ ರಕ್ಷಣೆ, ಸಾಮ್ರಾಜ್ಯದ ಭಹೀರ್ ವ್ಯವಹಾರ ವಿಚಾರ, ಸಾಂಪತ್ತಿಕ ಧೋರಣೆ, ಇವುಗಳ ಕುರಿತು ವಿಮರ್ಶೆ ಅಲ್ಲಿ ಬಂದಿತ್ತು ಅಲ್ಲದೆ ಹೊಸ ಕ್ರಮಗಳು, ಒಪ್ಪಂದಗಳು ಅಲ್ಲಿ ಚರ್ಚೆಗೆ ಬಂದಿಲ್ಲ. ಮೇಲಿನ ವಿಮರ್ಶೆ ಮಾಡಬೇಕಾದರೆ ಸಾಮ್ರಾಜ್ಯದಲ್ಲಿ ಬ್ರಿಟಿಷರಿಗೆ ಯಾವ ತರದ ಹಿತಗಳಿವೆ, ಅವುಗಳನ್ನು ಹೇಗೆ ರಕ್ಷಿಸಬೇಕು ಎಂಬುದರ ಕುರಿತು ಜ್ಞಾನವಾಗಬೇಕು.

೧೩,೯೦೯,೭೮೨ ಚದರ ಮೈಲುಗಳು ಬ್ರಿಟಿಷ ಸಾಮ್ರಾಜ್ಯದ ವಿಸ್ತೀರ್ಣ ಅದರ ಜನಸಂಖ್ಯೆ ೪೯೩,೩೭೦,೦೦೦ ಜಗತ್ತಿನ ನಾಲ್ಕನೆ ಒಂದಂಶವು, ಜಗತ್ತಿನ ಜನಸಂಖ್ಯೆಯು ನಾಲ್ಕನೆ ಒಂದಂಶವು ಅದಂ ಆಳ್ವಿಕೆಗೆ ಒಳಗಾಗಿರುತ್ತದೆ

ಇಂಗ್ಲಾಂಡಿನ ಧಾರಾಳ ಹಣವು ಸಾಮ್ರಾಜ್ಯದ ಭಹೀರ್ ದೇಶಗಳಲ್ಲಿ, ಇತರ ಹೊರಗಿನ ಭಹೀರ್ ದೇಶಗಳಲ್ಲಿ ಸಂಚಯಿಸಲ್ಪಟ್ಟಿದೆ ಇಂಗ್ಲಾಂಡಿನ, ಸಾಮ್ರಾಜ್ಯದೊಡನೆ ಆಗುವ ರಫ್ತು ಮಿಕ್ಕ ಎಲ್ಲಾ ರಾಷ್ಟ್ರಗಳ ರಫ್ತು ಒಟ್ಟುಮಾಡಿದಷ್ಟಿದೆ

ಭಹೀರ್ ದೇಶಗಳಲ್ಲಿ ಬ್ರಿಟಿಷ ಸಂಚಯಗಳು (ಮಿಲಿಯ ಪವನುಗಳಲ್ಲಿ)

(೧) ಡೊಮಿಯನ್ಸುಗಳಲ್ಲಿ ಮತ್ತು ವಸಾಹತುಗಳಲ್ಲಿ	೧,೯೬೭
ಹಿಂದೂದೇಶ ಮತ್ತು ಸಿಂಹಳ	೪೫೬
ಹಿಂದೂದೇಶದಲ್ಲಿನ ಸಂಚಯವು ಇಲ್ಲಿ ಕೊಟ್ಟ ಅಂಖ್ಯೆಯ ಇಮ್ಮಡಿಯಾಗಿರುವುದೆಂದು ಕೆಲವು ಹಿ ದೀಯ ತಜ್ಞರ ಅಭಿಪ್ರಾಯ	
ಆಸ್ಟ್ರೇಲಿಯಾದಲ್ಲಿ	೪೯೪
ಕೆನಡಾ ಮತ್ತು ನ್ಯೂ ಪೌಂಡ್ಲೆಂಡ	೪೪೭
(೨) ಸಾಮ್ರಾಜ್ಯ ಹೊರಗಿರುವ ಪ್ರದೇಶಗಳಲ್ಲಿ	೧,೧೯೯
ಚೀನಾ ಮತ್ತು ಜಪಾನು ದೇಶಗಳಲ್ಲಿ	೧೨೩
ದಕ್ಷಿಣ ಅಮೇರಿಕಾದಲ್ಲಿ	೬೪೩
ಜಗತ್ತಿನ ಜುಮ್ಲಾ	೩,೧೮೬

ಭಹೀರ್ ವ್ಯಾಪಾರ, (ಮಿಲಿಯ ಪವನುಗಳಲ್ಲಿ)

	ಆಮದು	ರಫ್ತು
(೧) ಡೊಮಿಯನ್ಸುಗಳು ಮತ್ತು ವಸಾಹತುಗಳು	೨೮೪	೨೦೪
ಹಿಂದೂದೇಶ ಮತ್ತು ಸಿಂಹಳ	೫೧	೯೧
ಆಸ್ಟ್ರೇಲಿಯಾ	೩೪	೨೯
ಕೆನಡಾ	೫೫	೨೧
(೨) ಭಹೀರ್ ಪ್ರದೇಶದಲ್ಲಿ	೪೭೨	೨೨೧
ಅರ್ಜೆಂಟಿನಾ	೪೩	೧೫
ಸಂಯುಕ್ತ ಅಮೇರಿಕಾ	೮೬	೨೩
ನೆತರ್‌ಲೇಂಡು ಮತ್ತು ವಸಾಹತುಗಳು	೩೯	೧೭
ಜಗತ್ತಿನ ಜುಮ್ಲಾ	೭೫೬	೪೨೫

ಬ್ರಿಟಿಷ ಸಂಚಯಗಳು ಮತ್ತು ವ್ಯಾಪಾರವು ಸಮಸ್ತ ಜಗತ್ತಿನಲ್ಲೆಲ್ಲಾ ಹರಡಿರುತ್ತದೆಂದು ಇದರಿಂದ ವ್ಯಕ್ತವಾಗುತ್ತದೆ ಹೀಗಾಗಿ ಅಟ್ಲಾಂಟಿಕ್ ಸಾಗರ, (ಅರ್ಜೆಂಟ್ಯಾನ್) ಅರಭಿ ಸಮುದ್ರ ಹಿಂದೂಸಾಗರ (ಹಿಂದೂದೇಶ, ಸಿಂಹಳ) ಶಾಂತಸಾಗರ (ಆಸ್ಟ್ರೇಲಿಯಾ) ಉತ್ತರ ಅಟ್ಲಾಂಟಿಕ್ (ಕೆನಡಾ) ಇವುಗಳು ಒಂದೊಂದಾಗಿ, ಬ್ರಿಟಿಷ ಸಂಚಯಗಳ ಮತ್ತು ವ್ಯಾಪಾರ ಹತ್ತನೆ ಒಂದಂಶಕ್ಕೆ ಹೊಣೆಗಾರರಾಗಿವೆ. ಬ್ರಿಟನಿನ ಸಂಚಯದ ೩ನೇ ಅಂಶವು ಸಾಮ್ರಾಜ್ಯಗಳಲ್ಲಾಗಿದೆ, ಬ್ರಿಟನಿನ ವ್ಯಾಪಾರ ೫೦ರ ಸಲೆಯೂ ಸಾಮ್ರಾಜ್ಯಗಳ ದೆಸೆಯಿಂದ ನಡೆಯುತ್ತದೆ ಭಹೀರ್ ದೇಶಗಳಲ್ಲಿ ಆದ ಸಂಚಯಗಳಿಂದ ಬ್ರಿಟನಿಗೆ ವರ್ಷಂಪ್ರತಿ ೧೮೫ ಮಿಲಿಯ ಪವನುಗಳ ಆಧಾಯವಿದೆ, ಮತ್ತು ಅವರ ನೌಕಾ ಸಂಸ್ಥೆಗಳಿಂದ ೭೫ ಮಿಲಿಯ ಪವನು ಲಾಭವಿದೆ. ಈ ಅಂಖ್ಯೆಯು ಬ್ರಿಟಿಷ ಬೋರ್ಡ್ ಒಫ್ ಟ್ರೇಡಿನ ಪತ್ರಿಕೆಯಿಂದ ತೆಗಿಯಲಾದುದು ಈ ಅಂಖ್ಯೆಗಳು ೧೯೩೫ ವರ್ಷದಾಗಿರುತ್ತದೆ ಜಗತ್ತಿನ ಪ್ರತಿಯೋರ್ವ ಗಂಡಸು, ಹೆಂಗಸು, ಕೂಸು ಇವರಿಂದ ಬ್ರಿಟನಿಗೆ ರೂ ೨ರಂತೆ ಸಲ್ಲುತ್ತದೆ

೫೦,೦೦೦ ಟನ್ನು ಆಹಾರ ಸಾಮುಗ್ರಿ ೧೦,೦೦೦ ಟನ್ನು ಇತರ ಸಾಮಾನುಗಳು, ಪ್ರತಿದಿನವು ಇಂಗ್ಲಾಂಡಿಗೆ ಆಮದಾಗುತ್ತದೆ "ನಮ್ಮ ಸಮುದ್ರ ಹಾದಿಗಳು ಕಡಿಯಲ್ಪಟ್ಟರೆ, ನಮ್ಮೊಡನಿರುವ ಕಾರಣ ಸಾಮುಗ್ರಿಗಳ ಸಂಗ್ರಹವು ಮೂರು ತಿಂಗಳ ತನಕ ಬರಬಹುದು ಆದರೆ ಅವುಗಳು ನಮಗೆ ಹೆಚ್ಚಾಗುವುವು, ಕಾರಣ ಸಮುದ್ರ ಮಾರ್ಗಗಳು ಬಂದಾದ ಬಳಿ ಆರುವಾರುಗಳೊಳಗೆ ನಾವೆಲ್ಲರೂ ಹೊಟ್ಟೆ ಹಸಿವಿಂದ ಮಡಿಯಬೇಕಾಗುವುದು" ಎಂದು ಸರ್ ಸ್ಯಾಮುವೇಲ ಹೋರ ಅಭಿಪ್ರಾಯ

ಬ್ರಿಟಿಷ್ ಬಂದರಗಳಿಂದ ೧೯೩೫ರಲ್ಲಿ ೩೪೩ ಮಿಲಿಯ ಟನ್ನು ಸಾಮಾನ ಸಾಗಿಸಲ್ಪಟ್ಟಿದೆ ಪ್ರತಿ ದಿನವು ಪ್ರಪಂಚದ ಸಾಗರಗಳಲ್ಲಿ ೧೮೫೦ ಬ್ರಿಟಿಷ ನೌಕೆಗಳ ಚಲಿಸುತ್ತಿವೆ ೬೫೦೦ ಮೈಲು ಉದ್ದ ವ್ಯಾಪಾರ ಜಲಮಾರ್ಗವನ್ನು ಬ್ರಿಟಿಷ ನೌಕಾ ಸೇನಾವು ಕಾಯುತ್ತಿದೆ ಇಷ್ಟು ಉದ್ದವಾದ ಮಾರ್ಗದಲ್ಲಿ ಎಲ್ಲಾದರೂ ಬಿರುಕು ಉಂಟಾಯಿತೆಂದರೆ ಆಗ ಬ್ರಿಟನ ಒಡೆಯತನಕ್ಕೆ ಹಾನಿ ಬಂದೇ ಬರುವುದ

ಲಂಡನನ್ನು ಸಾಮ್ರಾಜ್ಯದ ವಿವಿಧ ದೇಶಗಳಿಗೆ ಕೂಡಿಸುವ ಐದು ಪ್ರಾಮುಖ್ಯ ಜಲಮಾರ್ಗಗಳಿವೆ ಇವುಗಳು ಬ್ರಿಟನ ಜೀವರೇಖೆಗಳ

(೧) ಇದು ಜಗತ್ತಿಗೆ ಸುತ್ತಿಕ್ಕಿದ (ಸೊಂಟ ಕಟ್ಟಿದ ವಸ್ತ್ರದ ಹಾಗೆ) ಲಂಡನ್ ಲಿವರ್‌ಪೂಲಿನಿಂದ ಪ್ರಾರಂಭವಾಗಿ, ಜಿಬ್ರಾಲ್ಟರ, ಸುಯೇಜ್ ಕಾಲುವೆಯಾಗಿ (ಇಲ್ಲಿ ಅಲೆಕ್ಸಾಂಡ್ರಾಯ ಹಾಯಿಫಾಯಲ್ಲಿ ಕಾವಲಿದೆ) ಸುಯೇಜ್ ಕಾಲುವೆಯಿಂದ ಹೊರಬಂದು, ಎಡೆನ್ನಾಗಿ ಹಿಂದೂದೇಶ, ಸಿಲೋನ್ ತರೆಳಿ ಅಲ್ಲಿಂದ ಸಿಂಗಾಪೂರ ಹೊಂಗ್‌ಕೊಂಗ್ ಶಾಂಗ್ಹೈ ಯೊಕೊಹೊಮಾಗಾಗಿ ಕನಡಾದ ವೆಂಕೊವರಿನಲ್ಲಿ ಮುಗಿಯುತ್ತದೆ ಈ ಮಾರ್ಗ ಈಗ ಅಷ್ಟು ಭದ್ರವಾಗಿರುವುದೆಂದು ಹೇಳಲಾಗುವುದಿಲ್ಲ ಮೆಡಿಟರೆನಿಯನ್‌ದಲ್ಲಿ ಇಟಲಿಯಾನ ಹಾವಳಿಯು ಉಂಟಾಗಬಹುದ ಅಲ್ಲಿ ಇಟೇಲಿಯಾನರ ನೌಕಾ ಮತ್ತು ವಾಯುಬಲವುಬಹಳವಾಗಿ ವೃದ್ಧಿ ಹೊಂದಿವೆ (ಬೆಲಿಂಕ್ ದ್ವೀಪಗಳಲ್ಲಿ ಬ್ರಿಟಿಷರ ಜಿಬ್ರಾಲ್ಟರಿನ ಎದುರಿರುವ ದ್ವೀಪ) ಆದರಿಂದ ಜಿಬ್ರಾಲ್ಟರಿನ ಭದ್ರತೆ ಸುರಕ್ಷಿತವಾಗಿರುವುದಿಲ್ಲ ಪೆಲಿಸ್ತೀನದಿಂದ ಪ್ರಾರಂಭವಾಗಿ ಚೀನಾದ ವರೇಗೂ ಈ ಮಾರ್ಗದಲ್ಲೆಲ್ಲಾ ಸಾರ್ವಭೌಮಕೆಗೆ ವಿರೋಧವಾಗಿ ರಾಷ್ಟ್ರೀಯ ಚಳವಳಗಳುನಡೆಯುತ್ತಿವೆ ಈ ಹಾದಿಯಲ್ಲಿ ಕೊನೆಗೆ ಆತಂಕವೆಂದರೆ ಜಪಾನೀಯ ಸಾರ್ವಭೌಮತೆಯು ಪ್ರತಿದಿನವು ಈ ಮಾರ್ಗದಲ್ಲಿ, ಬ್ರಿಟಿಷರ ೫೧ ನಾವೆಗಳು ಮೆಡಿಟರೆನಿಯನ್‌ದಲ್ಲಿ, ೪೨ ಸುಯೇಜ್ ಕಾಲುವೆಯಲ್ಲಿ, ೩೦ ಮತ್ತು ೪೯ ಮುಂಬಾಯಿ ಮತ್ತು ಸಿಲೋನಿನಲ್ಲಿ ೨೨ ಸಿಂಗಾಪೂರ ಹಾಂಗ್ ಕೊಂಗಿನಲ್ಲಿ, ಚಲಾವಣೆಯಾಗುತ್ತಿವೆ

(೨) ಇನ್ನೊಂದು ಜೀವರೇಖೆಯು, ಅಫ್ರಿಕಾದ ಪಶ್ಚಿಮ ಕರಾವಳಿಯ ಸುತ್ತಾಗಿ ಸಿಲೋನಿಗಾಗಿ ಆಸ್ಟ್ರೇಲಿಯಾದಲ್ಲಿ ಕೊನೆಗೊಳ್ಳುತ್ತದ ಈ ಮಾರ್ಗವನ್ನು ಬಲಪಡಿಸುವ ಸುದ್ದಿಗಳು ಬರುತ್ತಿವೆ ಕಾರಣ ಮೆಡಿಟರೆನಿಯನ್ ಮಾರ್ಗದಲ್ಲಿ ಆತಂಕಗಳುಂಟಾದರೆ, ಆಗ ಪೌರ್ವಾತ್ಯದೊಡನೆ ವ್ಯಾಪಾರವನ್ನು ಸಂಪೂರ್ಣವಾಗಿ ಈ ಮಾರ್ಗದ ಮೂಲಕ ನಡೆಯಿಸಬಹುದು ಸ್ವಲ್ಪ ಪ್ರಯಾಸವಾದರೂ, ವ್ಯಾಪಾರವು ಕೆಡದಂತೆ ನೋಡಬಹುದು ಅಲ್ಲದೆ ಈ ದಾರಿಯು ಸ್ಪೈನಿನಲ್ಲಿ ನಡೆಯುವ ಸಂಪತ್ತಿಗಳ ಪರಿಣಾಮವಾಗಿ, ದಕ್ಷಿಣ ಅಮೇರಿಕಕ್ಕೆ ಹೋಗಲು ಉಪಯೋಗಿಸಬೇಕಾಗುವುದು ಆದ್ದರಿಂದ ಪಶ್ಚಿಮ ಆಫ್ರಿಕಾದ ಕರಾವಳಿಯಲ್ಲಿ ಫ್ರಿಟೌನ್ ಎಂಬಲ್ಲಿ ಪತ್ತು ಸ್ಯಾಮನ್ಸ ಟೌನ್ ಎಂಬಲ್ಲಿ, ಸಿಂಗಾಪೂರ ತರದ ನವಾಲ್ ಬೇಸುಗಳನ್ನು ಅಂದರೆ ನೌಕಾ ಕೊತ್ತಳಗಳನ್ನು ರಚಿಸುವ ಆಲೋಚನೆಗಳಾಗುತ್ತಿವೆ

(೩) ಈ ಮೂರನೆ ದಾರಿಯುಎರಡನೆ ದಾರಿಯ ಉಪದಾರಿಯಾಗಿರುತ್ತದೆ ಉತ್ತರ ಆಫ್ರಿಕವಾಗಿ ದಕ್ಷಿಣ ಅಮೇರಿಕಾದ ಪಶ್ಚಿಮ ಮತ್ತು ಪೂರ್ವ ಕರಾವಳಿಗೆ ಹೋಗುವ ಹಾದಿ ದಕ್ಷಿಣ ಆಫ್ರಿಕಾದ ರಿಪಬ್ಲಿಕ್‌ಗಳಲ್ಲಿ ಒಂದ ತರದ ರಾಷ್ಟ್ರೀಯ ಭಾವವು ಬಲಿಯುತ್ತಿದೆ ಮತ್ತು ಅರ್ಜೆಂಟೈನ ಹೊರತು ಇತರ ರಾಜ್ಯಗಳ ತಮ್ಮ ಅಂತರಾಷ್ಟ್ರೀಯ ಧೋರಣೆಯ ಕುರಿತು, ಸಂಯುಕ್ತ ಅಮೇರಿಕವನ್ನು ಹೊಂದಿಕೊಂಡಿವೆ

(೪) ಇಂಗ್ಲಾಂಡಿನಿಂದ ಸಂಯುಕ್ತ ಅಮೇರಿಕಕ್ಕೆ ಮತ್ತು ಕೆನಡಾಕ್ಕೆ ಹೋಗುವ ದಾರಿಯಲ್ಲಿ ಪ್ರತಿ ದಿನ ಸಾಧಾರಣ ೩೦೦೦ ಟನ್ನು ಭಾರ ಹೊರುವ ೧೬೪ ನೌಕೆಗಳ ಚಲನೆಯಾಗುತ್ತಿವೆ

(೫) ಇಂಗ್ಲಾಂಡಿನಿಂದ ಪನಮಾ ಕಾಲುವೆ ಪ್ರದೇಶಕ್ಕೆ ಸಾಧಾರಣ ೧೦೦ ಬ್ರಿಟಿಷ ನಾವೆಗಳು ಚಲನೆಯಾಗುತ್ತಿವೆ. ಈ ಮಾರ್ಗವು ಮುಂದಕ್ಕೆ ಶಾಂತಸಾಗರಕ್ಕೆ ಮುಟ್ಟುತ್ತದೆ ಆದುದರಿಂದ ಸಂಯುಕ್ತ ಅಮೇರಿಕಾದ ನೌಕಾಬಲದ ಮೈತ್ರಿಯೂ ಬ್ರಿಟನಿಗೆ ಅತಿಗತ್ಯವಾದುದು ಸಾಮ್ರಾಜ್ಯದ ಮೂರು ದಾರಿಗಳು ಸುರಕ್ಷಿತವಾಗಿರುವಂತೆ ಈ ಮೈತ್ರಿ ಬೇಕೆಬೇಕು, ಬ್ರಿಟಿಷ ಜನರಿಗೆ ಬೇಕಾದ ಆಹಾರ, ಗೋದಿ, ಮಾಸು, ಮಾಂಸವು ಇದೇ ದಾರಿಯ ಮೂಲಕ ಬರಬೇಕು.

ಬ್ರಿಟಿಷ ಸಾಮ್ರಾಜ್ಯದಲ್ಲಿ ಕಾರಣ ಸಾಮುಗ್ರಿಗಳು

ಒಗ್ಗಟ್ಟವು ಕೂಡಿ ಬ್ರಿಟಿಷ ಸಾಮ್ರಾಜ್ಯವು ಜಗತ್ತಿನ ಕಾರಣ ಸಾಮುಗ್ರಿಗಳನ್ನು ತಯಾರಿಸುವ ಒಂದು ಮಹತ್ವದ ಕೇಂದ್ರವಾಗಿರುತ್ತದೆ. ಜಗತ್ತಿನಲ್ಲಿ ತಯಾರಾಗುವ ೧೪ ಲಕ್ಷ ಟನ್ನು ನಾರಿನ ಶೇ ೯೧.೫೭ ಯೂ, ೫೧ ಲಕ್ಷ ಟನ್ನು ಹತ್ತಿಯಲ್ಲಿ ಶೇ ೨೪.೪೫ ಸಲೆಯೂ, ೧೦ ಲಕ್ಷ ಟನ್ ಉಣ್ಣೆಯಲ್ಲಿ ಶೇ ೫೦.೯ ಸಲೆಯು, ೧೦ ಲಕ್ಷ ಟನ್ ರಬ್ಬರಿನಲ್ಲಿ ಶೇ ೫೬.೮ ಸಲೆಯೂ, ಬ್ರಿಟಿಷ ಸಾಮ್ರಾಜ್ಯದಲ್ಲಿ ತಯಾರಾಗುತ್ತಿದೆ ಜಗತ್ತಿನಲ್ಲಿ ತಯಾರಾಗುವ ೧೩೦ ಮಿಲಿಯ ಟನ್ನು ಗೋದಿಯಲ್ಲಿ ಬ್ರಿಟಿಷ ಸಾಮ್ರಾಜ್ಯದ ಪಾಲು ಶೇ ೨೩.೪ ಸಲೆ ೬೦ ಲಕ್ಷ ಟನ್ನು ನೆಲಕಡಲೆಯಲ್ಲಿ ಶೇ ೬೨.೮ ಸಲೆ ೮೩ ಮಿಲಿಯ ಟನ್ನು ಅಕ್ಕಿಯಲ್ಲಿಯೂ ಶೇ ೫೦ರ ಸಲೆ ಹಿಂದೂದೇಶಯಾ ಒಬ್ಬ ದಲ್ಲಿ ಶೇ ೫೦ರಷ್ಟು ಜಗತ್ತಿನಲ್ಲಿ ಸಿಗುವ ಅನೇಕ ಖನಿಜಗಳಲ್ಲಿ ಮತ್ತು ಲೋಹಗಳ ಮೇಲೆ ಬ್ರಿಟನಿಗೆ ಹೆಚ್ಚಿನ ಅಧಿಕಾರವಿದೆ ೧೧೦೦ ಮಿಲಿಯ ಟನ್ನು ಕಲ್ಲಿದ್ದಲಿನ ಶೇ ೨೫ ಸಲೆಯ ಬ್ರಿಟಿಷ ಸಾಮ್ರಾಜ್ಯದಲ್ಲಿದೆ ೧೧೬ ಮಿಲಿಯ ಟನ್ನು ಕಬ್ಬಿಣದ ಲೋಹ ಕಲ್ಲುಗಳಲ್ಲಿ ಶೇ ೧ ಸಲೆಯ ಬ್ರಿಟಿಷ ಸಾಮ್ರಾಜ್ಯದಲ್ಲಿ ದೊರಕುತ್ತದೆ ತನಗೆ ಬೇಕಾದ ಕ್ಕಿಂತ ಹೆಚ್ಚು ಲೋಹಗಳು ಮತ್ತು ಖನಿಜಗಳ ಬ್ರಿಟನಿಗೆ ದೊರಕುತ್ತವೆ ಈ ಜಗತ್ತಿನಲ್ಲಿ ಸಿದ್ಧವಾಗುವ ೨೬೦ ಮಿಲಿಯ ಟನ್ನು ಪೆಟ್ರೋಲಿಯಮಿನಲ್ಲಿ ಬ್ರಿಟನಿಗೆ ಸದ್ಯ ಇರುವ ಹಕ್ಕು ಶೇ ೧೦ ಸಲೆ ಇರಾನಿನಲ್ಲಿ ಮತ್ತು ಇರಾಕಿನಲ್ಲಿ ಈ ಅಂಖ್ಯೆಯ ಶೇ ೫ ಸಲೆ ತಯಾರಾಗುತ್ತಿದೆ ದಕ್ಷಿಣ ಅಮೇರಿಕಾದಲ್ಲಿ ಶೇ ೧೦ ಸಲೆ ಡಚ್ ಸಾಮ್ರಾಜ್ಯದಲ್ಲಿ ೩೯ ಸಲೆ ಇಂಗ್ಲಾಂಡಿಗೆ ಇವೆಲ್ಲವುಗಳ ಮೇಲೆ ಒಂದಲ್ಲ ಒಂದ ದಾರಿಯ ಮೂಲಕ ಅಧಿಕಾರವಿದೆ ಕಾರಣ ಧಾರಾಳ ಬ್ರಿಟಿಷ ಹಣವು ಅಲ್ಲಿನ ಈ ಸೀಮೆ ಎಣ್ಣೆ ಸಂಸ್ಥೆಗಳಲ್ಲಿ ಸಂಚಯಿಸಲ್ಪಟ್ಟಿದೆ ಈ ಕಾರಣದಿಂದ ಅದು ತನಗೆ ಬೇಕಾದಷ್ಟು ಸೀಮೆ ಎಣ್ಣೆಯನ್ನು ಒದಗಿಸಬಲ್ಲದು

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪಸಿದ್ಧ

ಗೊನೋಕಿಲರ್ (ರಜಿಸ್ಟರ್ಡ್)



ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3-0-0 (ಮೂರು) ವಿ ಪಿ ಛಾರ್ಜು ಬೇರೆ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N. JASANI,** Vithalbhai Patel Road, BOMBAY 4



Distributors for South Kanara:—

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.



ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು. ಇದರಿಂದ ಹತ್ತು ಸೆಕುಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು. ಇದು ಒಂದು ಸಮಯದಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು. ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದ ನೀವು ನೋಡಿರಬಹುದು. ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತೂಲ್ ಕೂಡೆ ಕಳುಹಿಸುವೆವು. ಪಿಸ್ತೂಲ ಒಂದು ಆರ್ಡರು ಮಾಡುವವರಿಗೆ ೩ ಟೊಪಿ ಬಾಕ್ಸ್ ಸ್ಪಾರ್ಟ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತೂಲು ಗಳ್ಳ ತೋಟೆಗಳ ಸಹಿತ ೭-೮-೦, ಟಪಾಲ ಖರ್ಚು ಪ್ರತ್ಯೇಕ.

ಸ್ವಾನ್ ಹೌಸ್,

ನಂ. ೪, ಇರುಳಪ್ಪನ ಬೀದಿ, ಮದ್ರಾಸು.

WHENEVER YOU THINK

of saving and safeguarding money
of borrowing or transmitting money
of any other financial requirement,

THINK OF YOUR BANK

a good place to keep your
account and establish your credit,
where your patronage and
deposits are always appreciated,
where you are always sure
of a friendly welcome.

RESOURCES OF A CRORE

ESTD: 1906

CANARA BANK, LIMITED.

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ಸಗ್ರೆ ಹಾಕಿಡಗ ದಂತೆಯೂ ವಿಷಕಿ ಮಿಗಳ ಸೇರ ದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರಗಳ ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಭಾದೆಯು ಇಲ್ಲ

ಅನೇಕ ತರಹ ಮತ್ತು
ಪ್ರಮಾಣಗಳಿವೆ

ಮುಖ್ಯ ಏಜಂಟರು

ಕೆ ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚಂಟ್

ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ
ಗರ್ಭಪಾಲ— ಗರ್ಭಶೂಲೆ, ಗರ್ಭಸ್ರಾವಕ್ಕೆ
ಚಂದ್ರಮಸ್— ವಾಂತಿಭೇದಿ, ಅತಿಸಾರಕ್ಕೆ
ಕೃಷ್ಣಾರಕ್— ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ವೃದ್ಧಿಕಾಸವ— ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ— ನಪುಂಸಕತ್ವ, ಧಾತುಕ್ಷೀಣತೆಗೆ
ಭುವನಾಂಜನ ಪೈನ್ ಬಾಮ್— ಶಾರೀರಕ ನೋವುಗಳಿಗೆ.
ರಸಬಿಂದು— ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ— ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ದೇಶಹಿತಕ್ಕಾಗಿ ಮಹಾ ಅರ್ಪಣೆ

ಶ್ರೀ ವಿನಾಯಕ ಸವಾರ್ಕಾರರು

ಮೂವತ್ತು ವರ್ಷಗಳ ಬಂಧನದ ನಂತರ ಬಿಡುಗಡೆ ಹೊಂದಿದ, ಶ್ರೀಗಳಾದ ವಿನಾಯಕ ಸವಾರ್ಕಾರರಿಗೆ ಮುಂಬಯಿಯಲ್ಲಿ, ಪೂನೆಯಲ್ಲಿ ಶ್ರೇಷ್ಠತರದ ಸ್ವಾಗತಗಳು ಕೊಡಲಾದುವು. ಅವು ಸವಾರ್ಕಾರರಲ್ಲಿ ಶಕ್ಯವು, ಅಲ್ಲದೆ ಸಮಸ್ತ ಮಹಾರಾಷ್ಟ್ರದಲ್ಲೆಲ್ಲಾ ಅವರಿಗೆ ಇಷ್ಟು ಘನತರದ ಮನ್ನಣೆಯು ದೊರಕದೆ ಇರದು.

ಶ್ರೀಯುತ ಸವಾರ್ಕಾರರ ಪರಿಚಯವು ನಮ್ಮ ಹಿರಿಯರಿಗೆ ಇದ್ದರೂ, ನಮ್ಮ ತರುಣರಿಗೆ ಅವರ ವಿಚಾರ ತಿಳಿದಿರಲಿಕ್ಕಿಲ್ಲ. ಶ್ರೀ ಸವಾರ್ಕಾರರು, (ಲೋಕಮಾನ್ಯರ ಕಾಲದ) ಓರ್ವ ಪ್ರಸಿದ್ಧ ರಾಜಕೀಯ ಪುರುಷರು. ಮಾತೃಭೂಮಿಗಾಗಿ ಬರಿ ಅಲ್ಪ ಸಮಯದಲ್ಲಿ ನಡೆಸಲ್ಪಟ್ಟ ರಾಜಕೀಯ ಸಾಹಸದಿಂದ, ಅವರು ದೇಶದ ಅಭಿಮಾನಕ್ಕೆ ಪಾತ್ರರಾಗಿರುವರು.

ತರುಣ ವಯಸ್ಕರಾಗಿರುವಾಗಲೆ ಅವರಲ್ಲಿ ಒಂದು ತರದ ದೇಶಸೇವೆಯ ಅನುರಾಗವಿದ್ದಿತು. ಆಳರಸರ ಒಡೆಯತನಕ್ಕೆ ಒಳಗಾದ ಮಾತೃಭೂಮಿಯ ಸಂಕಷ್ಟಗಳನ್ನು ನಿವಾರಿಸಬೇಕಾಗಿ, ಇವರಲ್ಲಿ ಜ್ಞಾನೋದಯವು ವಿದ್ಯಾರ್ಥಿಗಳಾಗಿರುವಾಗಲೆ ಮೂಡಿತ್ತು. ಅವರು ಬಹಳ ಸಾಹಸಿಗಳಾಗಿದ್ದರು, ಧೈರ್ಯವಂತರೂ, ವ್ಯವಸ್ಥಾಪಕರೂ, ಅತ್ಯಂತ ಬುದ್ಧಿಶಾಲಿಗಳೂ ಆಗಿದ್ದರು. ಇವೆಲ್ಲಾ ಗುಣಶ್ರೇಷ್ಠತೆಯಿಂದ, ಅವರು ಆಗಿನ 'ಎಕ್ಸ್ಟ್ರಿಮಿಸ್ಟ್' ಪಕ್ಷದ ನಾಯಕತ್ವವನ್ನು ವಹಿಸಿದ್ದರು. ಅವರು ಬರಿ ವಿದ್ಯಾರ್ಥಿಯಾಗಿರುವಾಗಲೆ, ಪರದೇಶಿ ವಸ್ತ್ರಗಳ ಬಹಿಷ್ಕಾರವನ್ನು ಪ್ರಾರಂಭಿಸಿ, 'ಪರದೇಶಿ ವಸ್ತ್ರಗಳ ಸುಡುವಿಕೆ'ಯನ್ನು ವ್ಯವಸ್ಥೆಗೊಳಿಸಿದವರು.

ಆ ಸಾಹಸದ ಕಾರ್ಯಕ್ಕಾಗಿ ಅವರಾಗ ಕಲಿಯುತ್ತಿದ್ದ ಪೂನೆಯ ಫರ್ಗ್ಯುಸನ್ ಕಾಲೇಜಿನಿಂದ ಹೊರ ತಳ್ಳಲ್ಪಟ್ಟರು (೧೯೦೫ರಲ್ಲಿ). ಆದರೆ ಅದರಿಂದ ಅವರ ಧೈರ್ಯಗುಂದಲಿಲ್ಲ. ಕೂಡಲೆ, 'ವಿಹಾರಿ' ಎಂಬ ವಾರಪತ್ರಿಕೆಯನ್ನು ಹೊರಡಿಸಿದರು, "ಅಭಿನವ ಭಾರತ" ಎಂಬ ಸಂಸ್ಥೆಯನ್ನು ವ್ಯವಸ್ಥೆಗೊಳಿಸಿದರು. ಆದರೆ ಬಹೀರ್ ದೇಶಕ್ಕೆ ತೆರಳಿ ವಿದ್ಯೆಹೊಂದಲು ದೊರಕುವ ಒಂದು ವಿದ್ಯಾವೇತನವು, ಶ್ರೀ ಲೋಕಮಾನ್ಯರ ಶಿಫಾರಸ್ಸಿನ ಮೇರೆಗೆ ಅವರಿಗೆ ದೊರಕಲು, ಸವಾರಕರರು ತಾವು ಹಿಡಿದ ಕಾರ್ಯಗಳನ್ನು ಬಿಟ್ಟು ವಿಲಾಯತಿಗೆ ತೆರಳುವವರಾದರು.

ಆ ವಿದ್ಯಾವೇತನಕ್ಕಾಗಿ, ೧೫೦ ಅತ್ಯಂತ ಉತ್ತಮ ತರುಣರ ಅರ್ಜಿಗಳು ಬಂದಿದ್ದುವು. "ಇವನೊಬ್ಬ ಉತ್ಸಾಹವಂತ ತರುಣನು, ಸ್ವದೇಶದ ವಿಚಾರದಲ್ಲಿ ವಿಶೇಷ ಉತ್ಸಾಹವುಳ್ಳವನು, —ಒಳ್ಳೆ ಆದ್ಯ ಗುಣವಂತನು" ಇವು ಲೋಕಮಾನ್ಯರು, ಸವಾರ್ಕಾರರ ಕುರಿತಾಗಿ ಶಿಫಾರಸು ಮಾಡಿದ ಸರ್ಟಿಫಿಕೇಟಿನಲ್ಲಿದ್ದ ಮಾತುಗಳು.

ಲಂಡನಿನಲ್ಲಿ ವಿನಾಯಕರು ಬೇಗನೆ ಮೇಲೆ ಬರುವವರಾದರು. ಅಲ್ಲೊಂದು 'ಇಂಡಿಯಾ ಹೌಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದು ಒಳ್ಳೆ ಕೀರ್ತಿಯನ್ನು ಪಡೆಯಿತು. ೧೯೦೭ರಲ್ಲಿ ಬ್ರಿಟಿಷರಿಗೆ ಒದಗಿದ ಜಯದ ಕುರಿತು ಒಂದು ಸ್ಮಾರಕೋತ್ಸವವನ್ನು ಅಲ್ಲಿ ಜರಗಿಸಿದ ಸಮಯ, "ಸ್ವಾತಂತ್ರ್ಯಕ್ಕಾಗಿ ಹಿಂದೂದೇಶದ ಸಮರ" ಎಂಬ ಉತ್ಸವವನ್ನು ಜರಗಿಸಿದರು. ಆ ಕುರಿತು ಒಂದು ಚರಿತ್ರೆಯನ್ನು ಪ್ರಕಟಮಾಡಿದರು.

ಆದರೆ ಸವಾರ್ಕರರ ಪುಸ್ತಕಗಳ ಮೇಲೆ ನಿರ್ಬಂಧಗಳು ಹಾಕಲಾದುವು. ಅಲ್ಲದೆ ಇವರ ಇತರ ಅನೇಕ ಪುಸ್ತಕಗಳ ಮೇಲೆ ಬಹಿಷ್ಕಾರ ಹಾಕಲಾಯಿತು.



ಇಂಡಿಯಾದ ಟೀಯು ತ್ರಾಣವನ್ನೂ ತೃಪ್ತಿಯನ್ನೂ ಕೊಡುವುದು

I. K. 48

ನಂತರ ವಿನಾಯಕರು, ಲಾ ಪರೀಕ್ಷೆಯಲ್ಲಿ ಉಚ್ಚಸ್ಥಾನದಲ್ಲಿ ತೇರ್ಗಡೆ ಹೊಂದಿದರು. ಆದರೆ, ಬಾರಿಗೆ ಕರೆಯಲಾಗುವ ಗೌರವವು ಅವರಿಗೆ ಸಲ್ಲದೆ ಹೋಯಿತು.

ಆಗ ಹಿಂದೂದೇಶದಲ್ಲಿ ವಿಭಜನೆಯ ಕುರಿತು ಚಳವಳದ ದಿನಗಳು. ಭಯಾತ್ಮಕ ಕಾರ್ಯಗಳು ಆಗ ತಲೆದೋರಿದ್ದುವು. ಸರಕಾರವು ಆಗ ಕಠಿಣ ತರದ ದಬ್ಬಾಳಿಕೆಯನ್ನು ನಡೆಸುತ್ತಿತ್ತು. ರಾಜಕೀಯ ಕೆಲಸಗಾರರ ಮೇಲೆ (ಆಗಿನ ಇಂಡಿಯಾ ಸೆಕ್ರೆಟರಿಗಳ ಹೇಳಿಕೆ ಮೇರೆಗೆ) ಅತ್ಯಂತ ಕಷ್ಟ ತರದ ಶಿಕ್ಷೆಗಳನ್ನು ವಿಧಿಸಲಾಗುತ್ತಿದ್ದವು. ವಿನಾಯಕರ ಅಗ್ರಜರಿಗೆ ಜೀವ ಶಿಕ್ಷೆಯು ವಿಧಿಸಲಾಗಿತ್ತು. ಅನುಜನಿಗೆ, ಒಂದು ಬಾಂಬು ಪ್ರಕರಣಕ್ಕಾಗಿ ಸೆರೆಹಿಡಿದಿದ್ದರು. ಲಂಡನಿನಲ್ಲಿ ಕರ್ಜನ್ ವಿಲ್ಲೆಯವರ ಕೊಲೆಯು ನಡೆಯಿತು.

ಆ ಕೊಲೆಗೆ ವಿನಾಯಕರು ಕಾರಣರೆಂಬ ಸಂಶಯಗಳನ್ನು ಕೆಲವರು ಹೊರಡಿಸಿದರು. ಭದ್ರತೆಗಾಗಿ ವಿನಾಯಕರು, ಪ್ಯಾರಿಸಿಗೆ ತೆರಳುವವರಾದರು. ಆದರೆ ನಂತರ ಪುನಃ ಇಂಗ್ಲೆಂಡಿಗೆ ಬರುವವರಾದರು. ವಿಧ್ಯಮಾನಗಳನ್ನು ಎದುರಿಸುವವರಾದರು.

ವಿನಾಯಕರನ್ನು ಮುಂಬಯಿಗೆ ಒಯ್ಯಲು ಲಂಡನಿನಲ್ಲಿ ಸೆರೆಹಿಡಿದರು. ಹಾದಿಯಲ್ಲಿ ಸವಾರಕರರು, ಸ್ಟೀಮರಿನ ಕಿಂಡಿಯ ಮೂಲಕ ತಪ್ಪಿಸಿಕೊಂಡು, ಸಮುದ್ರವನ್ನು ಈಜಾಡಿ ಫ್ರಾನ್ಸಿಗೆ ತೆರಳುವವರಾದರು. ಆದರೆ ಫ್ರಾನ್ಸಿನಲ್ಲಿ ಅವರಿಗೆ ರಕ್ಷಣೆ ದೊರಕದೆ ಹೋಯಿತು. ಫ್ರೆಂಚರು ವಿನಾಯಕರನ್ನು ಹಿಡಿದು ಬ್ರಿಟಿಷರಿಗೆ ಒಪ್ಪಿಸಿದರು.

ಹಿಂದೂದೇಶದಲ್ಲಿ ಅವರ ವಿಚಾರಣೆಯು ನಡೆದು ಅವರು ಜೀವ ಶಿಕ್ಷೆಗೊಳಗಾದರು. (೨ ಸಾರಿ) [illegible] ಅವರು ಸಾರ್ವಜನಿಕ ಕಾರ-ರಂಗಕ್ಕೆ ಇಳಿಯದ ಹಾಗೆ ಮಾಡುವುದು ಅದರ ಉದ್ದೇಶವಾಗಿರಬಹುದು.

ಆದರೆ ೧೯೨೪ರಲ್ಲಿ ಹದಿನಾಲ್ಕು ವರ್ಷದ ನಂತರ ಅಂಡಮಾನ್ ದ್ವೀಪಗಳಿಂದ ಅವರ ಬಿಡುಗಡೆಯಾಯಿತು. ಆದರೆ ಅವರಿಗೆ ಪೂರ್ಣ ಸ್ವಾತಂತ್ರ್ಯವು ದೊರಕಲಿಲ್ಲ. ಅವರನ್ನು ರತ್ನಗಿರಿಗೆ ತರಲಾಗಿ ಕೈದಿನಲ್ಲಿ ಇಡಲಾಯಿತು. ರಾಜಕೀಯವಲ್ಲದ ಚಟುವಟಿಕೆಗಳನ್ನು ಮಾಡಲು ಅವಕಾಶ ದೊರಕಿಸಿದರು. ಸಂಪೂರ್ಣವಾಗಿ ಬಂಧವಿಮೋಚನೆ ಹೊಂದಿದ್ದು ಅವರು ಕೆಲವೆ ದಿವಸಗಳ ಹಿಂದೆ.

ಇಷ್ಟು ಅಲ್ಪಸಮಯದ ಚಟುವಟಿಕೆಗಳು ಅವರ ಯೋಗ್ಯತೆಗೆ ಒಪ್ಪತಕ್ಕುವಂತದಲ್ಲ. ಈಗ ವಿನಾಯಕರು, ಹಿಂದೆ ರಾಷ್ಟ್ರೀಯ ನಾಯಕರನ್ನೂ ಕೂಡ ದಿಗಿಲುಗೊಳಿಸಿದ, ಸಮಸ್ತ ಪೂನೆಯನ್ನು ಕಂಪನಗೊಳಿಸಿದ ವಿನಾಯಕರಲ್ಲ; ಹಿಂಸಾತ್ಮಕ ನೀತಿಯ ಮೇಲೆ ಅವರಿಗೀಗ ನಂಬಿಕೆಯಿಲ್ಲ. ಪ್ರಾಯ ಮತ್ತು ಅನುಭವದಿಂದ, ವಿನಾಯಕರು ತಣ್ಣಗಾಗಿದ್ದರೂ, ಅವರಲ್ಲಿರುವ ರಾಷ್ಟ್ರಾನುರಾಗದ ಅಗ್ನಿಯು ಇನ್ನೂ ಉರಿಯುತ್ತಿದೆ.

ತನ್ನ ಸೇವೆಯನ್ನು ದೇಶವು ಮರೆಯಲಿಲ್ಲ ಎಂಬುದು ಎಲ್ಲೆಲ್ಲೂ ಪ್ರಕಟವಾದುದು ವಿನಾಯಕರಲ್ಲಿ ಇನ್ನಷ್ಟು ಉತ್ಸಾಹವನ್ನುಂಟು ಮಾಡದೆ ಇರದು.

S. T.

ಬರುವ ಕಾಂಗ್ರೆಸ್ ಅಧಿವೇಶನದಿಂದಾಗಿ ಹರಿಹರಪುರಕ್ಕೆ ಹೋಗುವ ರಸ್ತೆಯಲ್ಲಿ ಅತಿಶಯವಾದ ಸಂಚಾರವುಂಟಾಗುವುದರಿಂದ, ಸೂರತ್ ಜಿಲ್ಲಾ ಬೋರ್ಡಿನವರು, ಆ ರಸ್ತೆಗಳ ರಿಪೇರಿ ಬಗ್ಗೆ ಖರ್ಚಿನ ಅಂದಾಜುಪಟ್ಟಿಯನ್ನು ತಯಾರಿಸಲು, ಒಂದು ಉಪಸಮಿತಿಯನ್ನು ರಚನೆಮಾಡಿರುವರು.

ಪಂಜಾಬಿನಲ್ಲಿ ರಾಜಕೀಯ ಕೈದಿಗಳ ಬಿಡುಗಡೆ ಕುರಿತು, ಮುಖ್ಯ ಮಂತ್ರಿಗಳಾದ ಸಿಕಂದರ್ ಖಾನರು, ಒಂದು ತರದ ಆಲೋಚನೆಯನ್ನು ಮಾಡಿರುವರು. ಆದರೆ ಖಾನರ ಈ ಕಾರ್ಯದಿಂದ ಯಾರೂ ಬೆರಗಾಗದಂತೆ ನೆರೆಯ ಪ್ರಾಂತ್ಯವಾದ ಸಂಯುಕ್ತ ಪ್ರಾಂತ್ಯಗಳಲ್ಲಿ ಈಗಿನ ತಾತ್ಕಾಲಿಕ ಮಂತ್ರಿಗಳು, ಬೇರೆ ತರದ ಒಂದು ವರ್ತನೆಯನ್ನು ಹಿಡಿದಿರುವರು. ಇತ್ತೀಚೆಗೆ ನಡೆದ ಕೆಲಘಟನೆಗಳು ಇನ್ನೂ ಮುಂದಕ್ಕೆ ನಡೆಯುವುದಾದರೆ, ಸದ್ಯದಲ್ಲೆ ಸಂಯುಕ್ತ ಪ್ರಾಂತ್ಯದ ಕಾರಾಗೃಹಗಳಲ್ಲಿ ಸ್ಥಳ ದೊರೆಯದು ಎಂದು ಮದ್ರಾಸಿನ 'ಸಂಡೆ ಟೈಮ್ಸ್' ಪತ್ರಿಕೆಯ ಅಭಿಪ್ರಾಯ.

THE

Shivaji Chemical Works,
HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ವಾಡಿಕೆಯನ್ನು ಮರೆಯಬೇಡಿರಿ.

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಶುದ್ಧಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗಕ್ಕಾಗಿ ಸಕಲರೂ ಉಪಯೋಗಿಸುತ್ತಿರುವರು.

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ, ಕೊಕ್ಕೆ ಹುಳ, ಸೂಜಿನಂತಹ ಹುಳ, ಯಾವ ತರಹದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು. ಇದೆ ಸೇವನೆ, ಸಕ್ಕರೆ [illegible]. (ಹರಳೆಣ್ಣೆ ಬೇಡ)

ಕ್ರಿಯ ಪ್ಯಾಕೆಟ್ 1ಕ್ಕೆ	0	1
ಸುಕ್ಕರೀಜನ ಗುಳಿಗೆ	0	0
ಪಿತ್ತಶಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1

ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ವಾಂತಿ [illegible] ಬಾಟ್ಲಿ 1ಕ್ಕೆ 0 8

ಸಿಗುವ ಸ್ಥಳ:— ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳ

ರತಿರಹಸ್ಯ ... ಕ್ರಯ ರೂ. 1-0-0.

ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಸ್ತ್ರೀಪುರುಷರ ಸುಖಾನುಭವಗಳು ಎಲ್ಲಾ ... ವೇಶ್ಯಾಸ್ತ್ರೀಯರ ... ಸ್ತ್ರೀಪುರುಷರ ... ರಹಸ್ಯಗಳು ... ಫೋಟೋಗಳ ಸಹಿತ ... ಶೃಂಗಾರಮಯವಾಗಿರುವುದು, ಕ್ರಯ ರೂ. 1

ಇದರ ಸಂಗಡ ... ಫ್ರೆಂಚ್ ... ಫೋಟೋಗಳನ್ನು ಬಹುಮಾನವಾಗಿ ಕಳುಹಿ ಸಲಾಗುತ್ತದೆ.

ಭವಾನಿ ಏಜಂಟ್ ಕಂಪೆನಿ,

ಪೋಸ್ಟು ಬೋಕ್ಸ್ ನಂ. 287 ಮದರಾಸ್.

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿಕೊಳ್ಳಬೇಕಾದರೆ,

ಶಾರದಾ ಛಾಪಖಾನೆ ಮಂಗಳೂರು,

ಇಲ್ಲಿಗೆ ಬನ್ನಿರಿ ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಓರಿಯಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

ESTED- 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್. ನಾರಾಯಣರಾವ್,

ತಬಲಾ ವಿದ್ವಾನ್ ಹಾರ್ಮೋನಿಯಮ್ ಎಕ್ಸ್‌ಪರ್ಟ್ ಮತ್ತು ಉಭಯ ಸಂಗೀತವಿದ್ಯಾವಿಶಾರದ

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳ ನಾಟಕ **ಭಕ್ತಶಿಖಾಮಣಿ ದಾಮಾಜಿಪಂತ** ಸಂಗೀತ ನಾಟಕ

ಬರೆದವರು:—ಶ್ರೀ ಬಿ. ಎಸ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಕೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು । ಯೋಗಿ ಹೃದಯದೊಳಿಲ್ಲ, ಸೂರ್ಯಸೋಮರಲ್ಲಿಲ್ಲ । ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು, ನಾರದ ಮುನಿವರಾ!" ।

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ತಿಳಿಯುವಿರಿ! ಮರಾಟಿ ಚಾಲಿನ ಮನೋಹರವಾದ ಪದ ಗೀತಗಳಿವೆ. ಕಥಾಸಾರವೂ ... ಭಾಷೆಯ ... ಕನ್ನಡ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ -1. ಎಲ್ಯಾಡ್ ಪಬ್ಲಿಷಿಂಗ್ ಹೌಸ್, ಸ್ಟೇಶನ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಜ್ಯೇಷ್ಠ ಬ। ೧೦ ಶನಿವಾರದಿಂದ, ಆಷಾಢ ಶು। ೧ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇಯ ಮಿಥುನ (ಜೂನ್))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
10	ಶನಿ	೨	೩	ಆಶ್ಲೇಷ	೫೫	೨೬	[illegible]
11	ರವಿ	೩	೫೮	ಮಘ	೫೫	"	
12	ಸೋಮ	೫	೫೮	ಪುಬ್ಬ	೫೬	೨೮	
13	ಕುಜ	೬	೫೯	ಉತ್ತರ	೮೫	೨೯	
14	ಬುಧ	೭	೬೦	ಹಸ್ತ	೬೦	೩೦	
15	ಗುರು	೭	೧	ಹಸ್ತ	೨	೩೧	
16	ಶುಕ್ರ	೮	೪	ಚಿತ್ರ	೭	೩೨	

THE

BANK OF MANGALORE LTD.,

MANGALORE

ESTD 1931

Branches-

Panemangalore Mudabidri & Padubidri

Chairman—**Philip J Chandran Esq.,**

Retd Dt. Registrar of Joint Stock Companies

On & from 1st of January 1937,

Fixed Deposits will be received at following rates of interest.

For	3 months	3½%
"	6 "	4%
"	12 "	5%
	24 " & upwards	5½%

Interest Payable Quarterly

Saving Bank deposit 3½% on daily balances

All kinds of Banking business transacted

U. R. PAI, N. U. PAI, *Managing Directors*

ಮಂಗಳೂರಿನ ಪೇಟಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3— 8	4— 0
ಮುಷ್ಠಿ	3—10	4— 4
ಗುಡ್ಡು	3—10	4— 0
ಊರ ಅವ್ವಲ್ ಬೆಲ್ತಿಗೆ	4— 0	4—12
ರಂಗೂನು ಬೆ. ಗೋ. ಗಳ್ಳ	6 — 8	7— 0
ಎಲ್ಲೂರು ಬೆ ಮು. ಗಳ್ಳ	3—14	4— 0
ಗೋದಿ ಗೋಣಿ ಗಳ್ಳ	11— 0	13— 0
ತೊಗರಿ ಗೋಣಿ ಗಳ್ಳ	9 — 8	12— 8
ಹುರುಳಿ ಗೋಣಿ ಗಳ್ಳ	5— 4	5 — 6
ಕಡಲೆ ಗೋಣಿ ಗಳ್ಳ	8 —14	12 — 8
ತೊಗಂಡೇಲಿ ಗೋಣಿ ಗಳ್ಳ	11— 0	19— 0
ಉದ್ದು ಗೋಣಿ ಗಳ್ಳ	9— 0	9 — 8
ಹೆಸರು ಗೋಣಿ ಗಳ್ಳ	7—12	8— 8
ಊರುಬೆಲ್ಲ ಖಂಡಿ ಗಳ್ಳ	27— 8	32— 8
ಉಪ್ಪು ಗೋಣಿ ಗಳ್ಳ	4—10	5—14
ಕೊಬ್ರಿ ಖಂಡಿ ಗಳ್ಳ	75— 0	84— 0
ಕೊಬ್ರಿ ಹಿಂಡಿ ಖಂಡಿ ಗಳ್ಳ	20 — 0	20— 8
ಎಳ್ಳಿಂಡಿ ಖಂಡಿ ಗಳ್ಳ	27 — 8	31 — 4
ಕೊಬ್ರಿ ಎಣ್ಣೆ ಮಣ ಗಳ್ಳ	5— 8	6— 4
ಎಳ್ಳೆಣ್ಣೆ ಮಣ ಗಳ್ಳ	7— 0	7— 0
ಹರಳೆಣ್ಣೆ ಪಟ್ಟಿಗೆ ಗಳ್ಳ	6— 5	7— 5
ಮೋರಿಸ ಸಕ್ಕರೆ ಮ. ಗಳ್ಳ	3— 0	3 — 0
ಮೆಣಸು	4— 8	6— 0
ಸಾಸಿವೆ ಮುಡಿ ಗಳ್ಳ	5 — 4	5— 8
ಕಾಳುಮೆಣಸು ಖ. ಗಳ್ಳ	97 — 8	100— 0
ಮೆಂತ್ಯಬೀಜ ಮುಡಿ ಗಳ್ಳ	86— 0	85— 0
ಗೇರುಬೀಜ ಮು. ಗಳ್ಳ	3 —14	4 —
ಕಪ್ಪು ಬ ಹಿಂಡಿ ಗಳ್ಳ	51— 0	51— 4
ತಾಂಬ್ರದ ಗಡು ಮ ಗಳ್ಳ	14— 12	15— 0
ತಾಂಬ್ರ ಪಾತ್ರಗಳು ಮ ಗಳ್ಳ	17 0	17— 8
ಹಿತ್ತಾಳೆ ಗಡು ಮ ಗಳ್ಳ	13— 8	15— 0
ಹಿತ್ತಾಳೆ ತಗಡು ಮ ಗಳ್ಳ	12 — 0	12— 8
ಹವಸು ಗಳ್ಳ	22	22— 8
ಹುಣಸೆ ಹುಳಿ ಖಂಡಿ ಗಳ್ಳ	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳ	145— 0	150— 0
ಪ್ಲಾಂಟರ ಕಾಫಿ ಖಂಡಿ ಗಳ್ಳ	190— 0	200— 0
ಮಡಿಕೇರಿ ಏಲಕ್ಕಿ	57— 0	60 —

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ವಹಿಕ ತಿಳಿಯಪಡಿಸುವುದೇನೆಂದರೆ –

ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಮೋದಕ ಕರ್ಮಗಳಲ್ಲಿ ಈ ವರೆಗೆ ದಾನ ದಕ್ಷಿಣೆ ವಗೈರೆ ವರಮಾನಗಳಿಂದ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ನಮ್ಮಲ್ಲಿ ಒಪ್ಪಿಸುವಂತಹದು ಪ್ರಾಚೀನಾರಭ್ಯ ನಡೆದುಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ.

ಸದ್ರಿ ಮರ್ಯಾದೆ ಹಣವು ಸರೀ ಒಟ್ಟು ವೈದಿಕರಿಂದ ತರಿಸಿಕೊಳ್ಳುವರೆ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಷಂಪ್ರತಿ ನಾವು ತರಿಸಿಕೊಳ್ಳುವರೆ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮರ್ಯಾದೆ ಕಾಣಿಕೆಯನ್ನು ಪಡಕೊಂಡು ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ.

ಆದ್ದರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಮೋದಕ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವ್ತಿಪಡೆಯತಕ್ಕದ್ದು. ತಿಳಿದಿರುವುದು.

"ಮೊಗವೀರ ವ್ಯವಸ್ಥಾಪಕ" ಮಂಡಳಿ

ಮುಂಬಾಯಿ.

ಈ ಮೊದಲು ಪ್ರಕಟಿಸಿದಂತೆ ಮೇಲ್ಕೋರುವ ಮಂಡಳಿಯ ಏಳನೇ ವಾರ್ಷಿಕೋತ್ಸವವೂ ಮೊಗವೀರ 'ಧರ್ಮಾರ್ಥ ರಾತ್ರಿಶಾಲೆ'ಯ ಪಾರಿತೋಷಕ ಹಂಚೋಣದ ಸಮಾರಂಭವೂ ಜೂನ್ ತಾ. ೨೭ರಲ್ಲಿ ಸರ್ ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಜರಗಲ್ಪಟ್ಟಿತು.

ಮಂಡಳಿಯ ಅಧ್ಯಕ್ಷ ರಾ ಇ. ಟಿ ದೇವುಜಿಯವರು ಸಭಿಕರನ್ನು ಸ್ವಾಗತೀಕರಿಸಿ ಶ್ರೀ ಬಿ ಯಂ ಭಾರ್ಗವ ಬಿ ಎ ಯಲ್ ಯಲ್ ಬಿ ಜೆ ಪಿ ಯವರನ್ನು ಸಭಾಧ್ಯಕ್ಷತೆಯನ್ನು ಸ್ವೀಕರಿಸಲು ವಿನಂತಿಸಿಕೊಂಡ ಮೇರೆಗೆ ಸಭಿಕರ ಹಸ್ತತಾಡನದೊಂದಿಗೆ ರಾ ಭಾರ್ಗವರವರು ಅಧ್ಯಕ್ಷತೆಯನ್ನು ವಹಿಸಿದರು.

ಸಭೆಗೆ ಹಾಜರಾಗಲು ತಮ್ಮ ಅನಾನುಕೂಲತೆಯನ್ನು ಸೂಚಿಸಿ, ಸಭೆಗೆ ಯಶಸ್ಸನ್ನೂ ಮಂಡಳಿಗೆ ಶ್ರೇಯೋಭಿವೃದ್ಧಿಯನ್ನೂ ಕೋರಿ, ಮಂಡಳಿಯ ಹಿತೈಷಿಗಳಿಂದ ಬಂದ ಸಸ್ತಿವಾಚನಾ ಪತ್ರಗಳನ್ನು ರಾ ಆರ್ ಕೆ ಕುಂದರರು ಓದಿ ಹೇಳಿದರು.

ರಾ ಎಸ್ ಕೆ ಮೆಂಡನ್‌ರು ಮಂಡಳಿಯ ಗತ ೬ ವರ್ಷಗಳಿಂದ ನೈಟ ವಿದ್ಯಾಪ್ರಸಾರಣಾ ಕಾರ್ಯಗಳನ್ನೊಳಗೊಂಡ ಸಂಕ್ಷಿಪ್ತ ವರದಿಯನ್ನು ಓದಿಹೇಳಿದರು.

ವರ್ಷಾವಧಿ ಪರೀಕ್ಷೆಯಲಿ ಹೆಚ್ಚಿಗೆ ಗುಣಗಳನ್ನು ಪಡೆದವರಿಗೂ, ಶಾಲಾ ಪಂದ್ಯಾಟ ಸ್ಪರ್ಧೆಯಲ್ಲಿ ಜಯಶೀಲರಾದ ವಿದ್ಯಾರ್ಥಿಗಳಿಗೂ ಪಾರಿತೋಷಕ ಹಂಚೋಣದ ಕಾರ್ಯಭಾಗವು ಮೊದಲ್ಗೊಂಡು ರಾ ರಾ ಗಳಾದ ಎಂ ಎಸ್ ನಾಯೋಣ (ಜಡ್ಜ್) ಆರ್ ಕೆ ಪ್ರಭಾ ಎನ್ ಆರ್ ಸುವರ್ಣ ರಾ ಯಸ್ ಚಂದ್ರ, ರಾ ಗಳಂತ ನ ದನ್ ಶೆಟ್ಟಿ, ವಾಸುದೇವ ಪರಲೀಕರ್ ಪೈ ಕೊರಗಪ್ಪ, ಯಧ ಎಂ ಪಿಂಟೋ ಮೊದಲಾದವರು ಮಂಡಳಿಯ ವಿವಿಧ ಕಾರ್ಯಗಳನ್ನು ಪ್ರಶಂಸಿಸಿ ಮಂಡಳಿಗೆ ಉತ್ತರೋತ್ತರವನ್ನು ಕೋರಿ ಮಾತಾಡಿದರು.

ಸನ್ಮಾನ್ಯ ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಮಂಡಳಿಯ ಕಾರ್ಯಪಟುತ್ವವನ್ನು ಶ್ಲಾಘಿಸಿ ಮಂಡಳಿಯ ಮುಂದಾಳಿತ್ವಕ್ಕೆ ಹಲವು ಸಲಹೆಗಳನ್ನಿತ್ತರು.

ಶ್ರೀ ಬಿ ಎ ಕರ್ಕೇರರು ಅಧ್ಯಕ್ಷರಿಗೂ ಸಭಿಕರಿಗೂ ಮಂಡಳಿಯ ಪರವಾಗಿ ಧನ್ಯವಾದಗಳನ್ನರ್ಪಿಸಿದರು.

ಮಾಸ್ಟರ್ ದೇಜಪ್ಪ ಹಂಗಾ ಪ್ರಾ ಕಾಮತ್‌ರವರ ತಮ್ಮ ಮಧುರಕಂಠದ ಗಾಯನದಿಂದ ಸಭಿಕರನ್ನು ಸಂತೋಷಪಡಿಸಿದರು. ಪ್ರೊ ಶೀಷಪ್ಪನವರ ಶಿಷ್ಯವರ್ಗದವರು ತಮ್ಮ ಅಂಗಸಾಧನೆ ದೇಹಶಕ್ತಿಯನ್ನು ಪ್ರೇಕ್ಷಕರ ಚಿತ್ತಕ್ಕೆ ಆಕರ್ಷಣವಾಗುವಂತೆ ಪ್ರದರ್ಶಿಸಿದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು.

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತವೆ. ಬೆಂಗಳೂರಿನಲ್ಲಿರುವ ಇಂಗ್ಲಿಷ್ ಮತ್ತು ನಾಟಿ ತರಕಾರಿಗಳು ಹಣ್ಣುಗಳು ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1 0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ. ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2 – 8-0 ಅಡ್ವಾನ್ಸ್ ಇಲ್ಲದೆ ಆರ್ಡರ್ ಪಡೆಯಲಾಗದು. ಬರೆಯಿರಿ —

The Royal Seed Co.,

Florists & Seedsmen 27 Ilpay Thope

ULSOOR, BANGALORE

ಜೂನ್ ತಿಂಗಳ ಕೂನೆಯ ವಾರ

[ಪ್ರತಿ ತಿಂಗಳಲ್ಲಿ ನಮ್ಮ ಅಧಿಕಾರದ ಕೋರ್ಟುಗಳಲ್ಲಿ ವಿಚಾರಕ್ಕೊಳಪಡುವ ವಿಚಿತ್ರ ಮೊಕದ್ದಮೆಗಳನ್ನೋ ದರೆ ಯಾವ ರಸಿಕನೂ ಮನಸೋಲುವಷ್ಟು ವಿಚಿತ್ರವಾದ ಸತ್ಯ ಘಟನೆಗಳು ನಡೆಯುತ್ತಿರುವುದನ್ನು ತಿಳಿಯ ಹುದು]

ಮೊದಲನೆಯ ಕಥೆ: 24-6-37

ಪಲ್ಲವನಾಡು ತಾಲೂಕಿನಲ್ಲಿ ಚಿರು ಈಡು ಗ್ರಾಮವಿದೆ ಅಲ್ಲಿ ಒಬ್ಬ ಮಂತ್ರ ವಾದಿ ಇದ್ದನು ಐಯಪ್ಪನೆಂಬ ಇವನನ್ನು ಕೋವಲನ್ ಮತ್ತಿಬ್ಬರು ಚಿರುಮರು ದಾರಿಗಟ್ಟಿ ಹಿಡಿದು ಹಿಸುಕಿ ಕೊಂದರು. ಹೆಣವನ್ನು ಕಲ್ಲುಕಟ್ಟಿ ಒಂದು ಕೆರೆಯಲ್ಲಿ ಮುಳುಗಿಸಿದರು. ಅದೇ ಕೆರೆಯಲ್ಲಿ ಮೀನು ಹಿಡಿಯ ಹೋದ ಕೆಲ ರು ಈ ಹೆಣವನ್ನು ಅಲ್ಲಿ ಕಂಡು, ಕೂಡಲೆ ಪಟೇಲರಿಗೆ ತಿಳಿಸಿದರು (ಎಪ್ರಿಲ್ ತಾ 7) ಮೊಕದ್ದಮೆಯಾಯಿತು ನೆರೆಹೊರೆಯ ಹಲ ರು ಸಾಯುವಂತೆ ಮಾಟಮಾಡಿದವನೆಂದು ನಂಬಿ ಅಯ್ಯಪ್ಪನನ್ನು ಹೀಗೆ ಕೊಂದುದೆಂದು ವಿಚಾರಣೆಯಲ್ಲಿ ರುಜುವಾಯಿತು ಕೋವ ಲನ್ ಈ ಮೊಕದ್ದಮೆಯೇ ತನ್ನವರ ಮೇಲಿ ಟ್ಟೀಕದಿಂದ ಹೂಡಿದ್ದೆಂದನು ಇಂತಹ ಮಂತ್ರ ವಾದಿಗಳು ಉಂಟೇ? ಮೂಢತನ ಮತ್ತು ಸುಳ್ಳು ನಂಬಿ ಕೆಗಳೇ ಮೂಲಾಧಾರವಾಗಿ, ಊರವರ ಮರ ಣಗಳಿಗೆಲ್ಲ ಮಂತ್ರವಾದಿಯೇ ಕಾರಣನೆಂಬ ದಾಗಿ ನಂಬಿದರಲ್ಲ! ಆದರೂ, ಅವನನ್ನು ಕೊಲ್ಲುವುದು ನ್ಯಾಯವಿರುದ್ಧವೆಂದು ಇವರೂ ಅರಿದೇ ಇದ್ದರು, ಎಂದು ತೀರ್ಮಾನಿಸುತ್ತ, ಕೋವಲನನ ಗುಂಪಿನವರನ್ನು ಕಾಪು ಶಿಕ್ಷೆಗೆ ಗುರಿಪಡಿಸಿದರು.

ಎರಡನೆಯ ಕಥೆ 25-6-37

ಶಾದಿಲಾಲನೆಂಬೊಬ್ಬ ೧೬ ವರ್ಷ ವಯ ಸ್ಸಿನ ಹುಡುಗ ರಾವಲ್‌ಪಿಂಡಿಯಲ್ಲಿ ಮುಖ್ಯ ಕಾಂಗ್ರೆಸ್ ಪಕ್ಷಪಾತಿಗಳಾದವರ ಮನೆಯ ವನು ತನ್ನ ವಯಸ್ಸಿನ ಹಲವು ಯುವಕ ರೊಡನೆ ಒಂದು ಕೆರೆಯಲ್ಲಿ ಜಲವಿಹಾರವಿನೋದ ಮಾಡುತ್ತಿದ್ದನು ಪಕ್ಕನೆ ದೋಣಿ ಕವುಚಿತು, ಅದರಲ್ಲಿದ್ದ ಎಲ್ಲರೂ ನೀರಲ್ಲಿ ಬಿದ್ದರು ಶಾದಿ ಲಾಲನು ನೀರಲ್ಲಿದ್ದ ತನ್ನ ಗೆಳೆಯರಲ್ಲಿ ಒಬ್ಬೊ ಬ್ಬರನ್ನಾಗಿ ಮೂವರನ್ನು ಮೇಲಕ್ಕೆತ್ತಿ ದರಿಗೆ ತಂದನು ನಾಲ್ಕನೆಯವನನ್ನು ತರಲು ಬಹಳ ಕಷ್ಟವಾಗಿ ಪ್ರಾಣಸಂಕಟವಾಯಿತು ಅಲ್ಲಿಯ ಮಿಲಿಟರಿ ಆಫೀಸಿನ ಗುಮಾಸ್ತನೊಬ್ಬನು ಆ ದಾರಿಯಾಗಿ ಹೋಗುತ್ತಿದ್ದವನು ಇದನ್ನುಕಂಡು ತಾನು ಕೆರೆಗೆ ಹಾರಿದನು. ಅವನಿಂದ ಶಾದಿ ಲಾಲನನ್ನು ಮೇಲಕ್ಕೆ ತರಲಾಗಲಿಲ್ಲ ಅವ ನನ್ನು ಎತ್ತಿ ತಂದರೂ ಪ್ರಾಣವಿರಲಿಲ್ಲ ಜೀವ ಸಂಚಾರ ಮಾಡಲು ಮಾಡಿದ ಡಾಕ್ಟರರ ಪ್ರ ಯುಗಳು ವ್ಯರ್ಥವಾದುವು

ಮೂರನೆಯ ಕಥೆ: 26-6-37

ಸಂಗೀತದಲ್ಲಿ ಸ್ಪರ್ಧೆ ನಡೆದಾಗ ಚಿನ್ನದ ಪದಕವನ್ನೆ ಬಹುಮಾನ ಹೊಂದಿದ ಹುಡುಗಿ ಯೊಬ್ಬಳು, ಶಾಲೆಯಲ್ಲೂ ಉತ್ತಮ ತರಗತಿಯ ವಿದ್ಯಾರ್ಥಿನಿಯಾಗಿದ್ದಳು ಇವಳನ್ನು ಬೆನಾ ರಿಸಿನಲ್ಲಿದ್ದ ಒಬ್ಬ ೫೦ ವರ್ಷ ಮೀರಿದ ವಯ ಸ್ಸಿನ ವರನಿಗೆ ಕೊಡುವುದಾಗಿ ನಿಶ್ಚಿತವಾಗಿ ದ್ದಿತು ಊರವರಿಗೆ (ಪಾಟ್ನಾ) ಈ ಸುದ್ದಿ ತಿಳಿಯಿತು ಸಮಾಜ ಸುಧಾರಕರೂ ಈ ಪ್ರಸಂಗದಲ್ಲಿ ಮುಂದೆ ಬಂದು ಈ ವಿವಾಹವಾ ಗಬಾರದೆಂದು ಬಹಳ ಪ್ರಯತ್ನಿಸಿದರು ವಧು ವಿನ ಕುಟುಂಬದಲ್ಲೂ ಕೆಲವರಿಗೆ ಈ ಸಂಬಂಧ ಸರಿಯೆನಿಸಿರಲಿಲ್ಲ ವಧುವಿನ ತಂದೆಗೆ ಮಾತ್ರ ಒಂದು ರಗಳೆ ತೀರಿದರೆ ಸಾಕೆಂದಿದ್ದಿತು ಹೀ ಗಾಗಿ ವಿವಾಹಕ್ಕೆ ಸಿದ್ಧವಾಯಿತು ವರಪಕ್ಷ ದವರು ಬಂದರು. ಲಗ್ನದ ಮುಹೂರ್ತ ಸಮೀಪಿಸಿತು, ಕನ್ಯೆ? ಚಿಮಿಣಿಯೆಣ್ಣೆ ಮೈಗೆ ಸುರಿದುಕೊಂಡು ಬೆಂಕಿ ಹೊತ್ತಿಸಿಕೊಂಡಳೆ? ಭಾವಿಗೆ ಹಾರಿದಳೆ? ಮನೆಬಿಟ್ಟು ಓಡಿದಳೆ?— ವರನ ಪಕ್ಷದವರು ಇದ್ದಲ್ಲಿಗೇ ಬಂದು,—'ಇವ ನನ್ನು ತಾನು ವರಿಸಲೊಲ್ಲೆ' ಎಂದು ಬಿಟ್ಟಳು. ಬಿಕ್ಕಟ್ಟು ಉಂಟಾಯಿತು. ನಂಬಿಕೆ ಕೊಟ್ಟು ದನ್ನು ಮುರಿದರೆಂದು ಸಿಟಿ ಮೆಜಿಸ್ಟ್ರೇಟರಲ್ಲಿಗೆ ದೂರು ತಲಪಿತು. ಅವರ ಮೆಹನತ್ತಿನಿಂದ, ಈ ವಿವಾಹ ಮುರಿಯಿತು ಬೇರೊಬ್ಬ ವರನನ್ನೀಗ ಹುಡುಕುತ್ತಿದ್ದಾರೆ.

ನಾಲ್ಕನೆಯ ಕಥೆ 26-6-37

ಚಿತ್ತೂರು ಜಿಲ್ಲಾ ಸೆಶ್ಶನ್ಸ ಕೋರ್ಟಿನಲ್ಲಿ ವರದುಡು ಎಂಬೊಬ್ಬನು ತನ್ನ ಹೆಂಡತಿಯನ್ನು ಎಪ್ರಿಲ್ ತಿಂಗಳಲ್ಲಿ ಹೊಡೆದನೆಂದು ದೊಡ್ಡ ದೊಂದು ಮೊಕದ್ದಮೆ ಹೆಂಡತಿ ಪತಿವ್ರತೆ ಯಲ್ಲವೆಂದು ಗಂಡನು ಭಾವಿಸಿದ್ದನು ಹೆಂಡತಿ ತನ್ನ ಮನೆಯ ಕೋಣೆಯಲ್ಲಿ ಮೇಜಿನ ಮೇಲೆ ನಿಂತು, ಹತ್ತಿರದ ಕಿಟಕಿಯ ಹೊರಗೆ ಇದ್ದ ಯಾರೊಡನೆಯೋ ಮಾತಾಡುತ್ತಿದ್ದದನ್ನು ಗಂಡನು ಕಂಡನಂತೆ ಗಂಡನು ಅದೇನೆಂದು ವಿಚಾರಿಸಲು, ಹೆಂಡತಿ ಒಂದು ಚಿತ್ರ ನೋಡು ತ್ತಿದ್ದೇನೆಂದು ನುಡಿದಳು ಗಂಡನು ಆಗಲೇ ಹೊರಗೆ ಹೋದನು ಸಂಜೆಯಲ್ಲಿ ಅವಳು ಅಡುಗೆ ಮಾಡುತ್ತಿದ್ದಾಗ, ಹಿಂದಣಿಂದ ಓಡುತ್ತ ಬಂದು ಕುಡುಗೋಲಿಂದ ಅವಳನ್ನು ಹೊಡೆ ದನು ಅವಳು ಓಡಿ ನೆರೆಯವನೊಬ್ಬನ ಮನೆ ನುಗ್ಗಿದಳು ಅಲ್ಲಿಯೂ ಇವನು ಹಿಂಬಾಲಿಸಿ ಅವಳನ್ನು ಹೊಡೆದನು ಅವಳಿಗೆ ಹಲವು ವಿಚಿತ್ರ ಗಾಯಗಳಾದುವು ಆದರೆ ಆಸ್ಪತ್ರೆ ಯಲ್ಲಿ ಗುಣ ಹೊಂದಿದಳು ಗಂಡನೆನ್ನುವು ದೇನೆಂದರೆ,-ಅವಳು ಮತ್ತೊಬ್ಬ ಪ್ರಣಯಿಯ ಆಲಿಂಗನದಲ್ಲಿದ್ದುದನ್ನು ತಾನು ಕಂಡಾಗಲೇ ದಿಗ್ಭ್ರಾಂತನಾಗಿ ಮುಂದೇನು ಮಾಡಿದೆನೆಂದು ತಿಳಿಯದಷ್ಟು ಮನೋವಿಕಾರ ಹೊಂದಿದೆನು, ನನಗೆ ಹುಚ್ಚು ಹಿಡಿದಂತಾಯಿತು, ನಾನು ಹೊಡೆದೆನೆನ್ನುತ್ತಾರೆ, ನಾನು ಅದಕ್ಕೆ ಜವಾ ಬ್ದಾರನಲ್ಲ ತೀರ್ಮಾನದಲ್ಲಿ ಜಡ್ಜರು - 'ಈತನ ಹೆಂಡತಿಯು ಮತ್ತೊಬ್ಬ ಪ್ರಣಯಿಯೊ ಡನೆ ವ್ಯಭಿಚಾರ ಮಾಡುತ್ತಿದ್ದಳೆಂದು ನಾನು ನಂಬುತ್ತಿಲ್ಲ ಮತ್ತೊಬ್ಬನು ತನ್ನ ಹೆಂಡತಿ ಯನ್ನು ಆಲಿಂಗಿಸಿದನೆಂದ ಕೂಡಲೆ ಆತನನ್ನಾ ಗಲಿ ಅವಳನ್ನಾಗಲಿ ಕೊಂದಿಕ್ಕುವುದಕ್ಕೆ ಕಾ ನೂನು ಸಮ್ಮತಿಯಿದೆ ಎಂದು ಕೆಲವರಲ್ಲಿ ವಿಶ್ವಾಸವಿದ್ದುದು ಅತಿ ದುಃಖಕರ ಮಾತ್ರವಲ್ಲ, ವಿಚಿತ್ರವಾಗಿದೆ ಇದೇ ನೆವದಿಂದ ಎಷ್ಟೋ ಹತ್ಯಗಳು ನಡೆಯುತ್ತಲಿವೆ ಈ ಬಗೆಯ ವ್ಯಭಿಚಾರವನ್ನು ಕಂಡ ಗಂಡಂದಿರು ತೀರ ಕೆಲ ವರೇ ಇರಬಹುದು, ಆದರೂ ಹತ್ಯಗಳನ್ನು ವಿಚಾರಣೆ ಮಾಡುವಾಗ ಈ ನೆವವು ಎಲ್ಲೆ ಲ್ಲಿಯೂ ಕೇಳಬರುತ್ತಿದೆ ತನ್ನ ಕೈಯಲ್ಲಿದ್ದ ಕುಡುಗೋಲು ಮತ್ತೊಂದು ಮನೆಯದು ಎಂದು ಇವನು ಹೇಳುವುದನ್ನು ನಾನು ನಂಬಲಾರೆನು ಇದು ಕೊಲೆಯೋ ಕಠಿನ ಹೊಡೆತವೋ ಎಂದು ಚರ್ಚಿಸುವುದರಲ್ಲಿ ಪಾಂಡಿತ್ಯ ವ್ಯಯಿಸಿ ಫಲ ವಿಲ್ಲ ಹರಿತವಾದ ಹತ್ಯಾರು ಹಿಡಿದ ಇವನಾ ಗಲಿ ಯಾರೇ ಆಗಲಿ ತನ್ನ ಹೆಂಡತಿಯನ್ನು ಹೊ ಡೆಯುವುದು ಅನ್ಯಾಯ, ಕಾನೂನಿಗೆ ವಿರುದ್ಧ ವಾಗಿದೆ-ನಿರ್ಣಯ ನಾಲ್ಕು ವರ್ಷದ ಕಠಿಣ ಸಜೆ

ಐದನೆಯ ಕಥೆ: 28-6-37

ಗೊಂಡಜಾತಿಯ ಯುವಕನೊಬ್ಬನು ತನ್ನ ತಂದೆಯೊಡನೆ ತನ್ನ ಮದುವೆಗಾಗಿ ಹೋಗುತ್ತಿ ದ್ದನು ಇದಿರಲ್ಲಿ ಸುಮಾರು ೨೦೦ ಮಂದಿ ಬಂದು ಇವನನ್ನು ತಡೆದು, ಮೊದಲನೆ ಹೆಂಡತಿ ಯಿದ್ದು ಇದೆರಡನೆ ಮದುವೆಯಾಗಲಾರದೆಂ ದರು ಎಷ್ಟು ಪ್ರೇರೇಪಿಸಿದರೂ ಸಾಗದೆ, ಕೊನೆಗೆ ಇವನ ತಂದೆಯನ್ನು ಅವರು ಕಟ್ಟಿ ದರು ಯುವಕನನ್ನು ಇವರು ಅವನ ಮೊದ ಲನೆ ಹೆಂಡತಿ ಇದ್ದ ಹಳ್ಳಿಯ ಮನೆಗೇ ಕೊಂಡೊ ಯ್ದರು. ಈ ಒರಟನು ಪುನಃ ತನ್ನ ಹೆಂಡತಿ ಯೊಡನೆ ಸೇರುತ್ತಿದ್ದುದನ್ನು ಕಾಣಲು ಹಳ್ಳಿಯ ಆಪ್ತೇಷ್ಟರು ಹಿಂಡುಗೂಡಿಬಂದರು. ಈ ಹೆಂ ಡತಿಗೂ ಬಹಳ ಸಂತೋಷ; ಇವಳ ಪ್ರಯತ್ನ ಗಳಿಂದಲೇ ಇನ್ನೂರು ಮಂದಿಯೂ ಅವನನ್ನು ಅಟಕಾಯಿಸಿದ್ದರು. ಎಲ್ಲರೂ ಆನಂದಿಸುತ್ತಿ ದ್ದಾಗಲೇ, ಯುವಕನು ಮಾಯವಾದನು. ಅವನು ಎಲ್ಲಿರುವನೆಂದು ಹುಡುಕುವಾಗ, ತನ್ನ ಎರಡನೆ ಮದುವೆಯಾಗುವಲ್ಲಿಗೇ ನೆಟ್ಟಗೆ ಹೋಗುತ್ತಿದ್ದಾನೆಂದು ತಿಳಿದುಬಂತು. ಅವ ನನ್ನು ಹಿಡಿದರು. ಸೈಕಲ್ ಹತ್ತಿಸಿ ಕೂಡಲೆ ಅವನ ಮೊದಲನೆ ಹೆಂಡತಿ ಇರುವಲ್ಲಿಗೇ ತೆರಳ ಬೇಕೆಂದು ಒತ್ತಾಯ ಮಾಡಿದರು. ಅವನು ಒಪ್ಪಿ ಸೈಕಲ್ ಹತ್ತಿ ತನ್ನನ್ನು ಕಾಯುತ್ತಲಿ ಸಂಗಡ ಬರುತ್ತಿದ್ದ ಇತರ ಸೈಕಲ್ ಸವಾರರೊ ಡನೆ ಪಯಾಣ ಮಾಡುತ್ತ, ಪಕ್ಕನೆ ಒಹೊ ವೇ ಗವಾಗಿ ಚಲಿಸಿ ಎರಡನೆ ಹೆಂಡತಿ ಇರುವಲ್ಲಿಗೆ ಬಂದು ತಲುಪಿದನು ಅವನನ್ನು ಹಿಂಬಾಲಿ ಸುತ್ತ ಬಂದವರು ಅಲ್ಲಿ ತಲಪುವುದರೊಳಗೆ ಅವನ ವಿವಾಹವಾಗಿ ಮುಗಿದಿತ್ತು ಅವರು ಹಿಂತೆರಳಿದರು ಆದರೆ ಗಡಿಬಿಡಿಯಲ್ಲಿ ಅವ ನಿಗೆ ವಿವಾಹವಾದವಳು ನಿಶ್ಚಿತವಾದ ಕನ್ಯೆಯ ಲ್ಲ! ಇನ್ನೀಗ ಆತನು ಮೂರನೆ ವಧುವನ್ನು ಹುಡುಕುತ್ತಿರುವನಂತೆ

ಆರನೆಯ ಕಥೆ: 29-6-37

ಕೆನರಾ ಇಂಡಸ್ಟ್ರಿಯಲ್ ಮತ್ತು ಬ್ಯಾಂ ಕಿಂಗ್ ಸಿಂಡಿಕೇಟಿನ ನಂದಿಯಾಲ ಶಾಖೆಯಲ್ಲಿ ಕಳವಾಯಿತು ಬ್ಯಾಂಕಿನ ಏಜಂಟರು ಬ್ಯಾಂಕು ಕಟ್ಟಡದಲ್ಲಿ ಒಬ್ಬಂಟಿಗರಾಗಿ ವಾಸ ಮಾಡು ವರು ಜಗುಲಿ ಕಡೆಯ ಬಾಗಿಲನ್ನು ಮುಚ್ಚಿ ಭದ್ರಮಾಡಿ, ಬಡಗು ವರಾಂಡದಲ್ಲಿ ಅವರು ನಿದ್ದೆ ಹೋದರು ಖಜಾನೆಯ ಪೆಟ್ಟಿಗೆಗೆ ಬೀಗ ಹಾಕಿ, ಬೀಗದ ಕೈಗಳನ್ನು ಮೇಜಿನಲ್ಲಿಟ್ಟು ಅ ದಕ್ಕೆ ಬೀಗಹಾಕಿ, ಮೇಜಿನ ಬೀಗದ ಕೈಗಳನ್ನು ಏಜಂಟರು ಅಲ್ಲೇ ಕುರ್ಚಿಗೆ ತೂಗುತ್ತಿದ್ದ ತಮ್ಮ ಅಂಗೀ ಕಿಸೆಯಲ್ಲಿ ಇಟ್ಟರು ಹೊರಗಣಿಂದ ಚಾವಡಿಯ ಬಾಗಿಲ ಕೀಲನ್ನು ಎತ್ತಿದಂತೆಯೂ ಬೀಗದ ಕೈಗಳನ್ನು ವಶಪಡಿಸಿಕೊಂಡು ಖಜಾ ನಾ ಬೀಗವನ್ನು ತೆರೆದು, ಅದರೊಳಗಣ ಹಣದ ಪೆಟ್ಟಿಗೆಯನ್ನು ಕದ್ದೊಯ್ದಂತೆ ಕಾಣುತ್ತವೆ ಬೆಳಗ್ಗೆ ಕಸಗುಡಿಸಬಂದ ಜವಾನನು ಬಾಗಿಲು ತೆರೆದಿದ್ದುದನ್ನು ನೋಡಿ ಏಜಂಟರಿಗೆ ತಿಳಿಸಲು, ಅವರು ಕೇಶಿಯರರನ್ನು ಕರೆದು ಇಬ್ಬರೂ ಪೋಲೀಸರಿಗೆ ದೂರು ಕೊಟ್ಟಂತೆ ತಿಳಿದುಬರು ತ್ತದೆ ಆದರೆ ಖಜಾನಾ ಬೀಗದ ಕೈಯು ಮಾತ್ರ ಏಜಂಟರ ಹತ್ತಿರವಿರುವುದೆಂದೂ ರೊಕ್ಕದ ಪೆಟ್ಟಿಗೆಯ ಬೀಗದ ಕೈಗಳು ಕೇಶಿಯ ರರ ಬಳಿ ಇರುವಂತೆಯೂ ವ್ಯವಸ್ಥೆ ಇದೆ ಮಾತ್ರ ವಲ್ಲದೆ, ಖಜಾನೆಯ ಬೀಗಕಷ್ಟ ಒಂದು ಬಗೆ ಯ ತಮದಲ್ಲೇ ಮಾತ್ರ ಬೀಗ ತೆಗೆಯ ಒದು ವಂತೆ ಕೋಡ್ ಇದೆ ಹಣದ ಪೆಟ್ಟಿಗೆ ಇದ್ದಂ ತೆ ದೊರೆತಿದೆ ಅದರಲ್ಲಿ ರೂ ೯೭೬೦-೬-೭ ಇತ್ತು ಸಿಂಡಿಕೇಟ್ ಬ್ಯಾಂಕಿನ ಶಾಖಾ ಇನ್ಸ್ ಪೆಕ್ಟರರೂ ಅತ್ತ ಹೋಗಿದ್ದಾರೆ ಕೇಶಿಯ ರ ಮೇಲೆ, ಅವರನ್ನು ಕೈದುಮಾಡಿ, ಚಾರ್ಜ ಶೀಟು ದಾಖಲು ಮಾಡಲಾಗಿದೆ (II)

ಏಳನೆಯ ಕಥೆ: 30 – 6 – 37

ಮೈಲಾಪುರದ ಪೋಸ್ಟಮಾಸ್ಟರರು ಹೊ ರಗೆ ಹೋಗಿದ್ದರು ಅವರ ಮನೆಯಲ್ಲಿ ಹೆಂಡತಿ ಇದ್ದಳು ಇವಳನ್ನು ಯಾರೋ ದು ಷ್ಕರು ಹಗ್ಗಗಳಿಂದ ಬಿಗಿದು ಒಳಗಿದ್ದ ಹತ್ತು ಸಾವಿರ ರೂಪಾಯಿಗಳಷ್ಟು ಚಿನ್ನಾಭರಣಗಳವು ಮಾಡಿದರೆಂದು ಪೋಲೀಸರಿಗೆ ದೂರು ಪೋ ಲೀಸರು ಪತ್ತೆ ನಡೆಸಿದಲ್ಲಿ, ಯಾರೂ ಬಂದುದೂ ಇಲ್ಲ, ಹಗ್ಗವಿಕ್ಕಿದುದೇ ಇಲ್ಲ, ಕಳವಾದುದೇ ಇಲ್ಲ ಇದೀ ಎಲ್ಲ ಸುಳ್ಳೇ ಸುಳ್ಳು. ಮಾತ್ರವಲ್ಲ, ಇಂತಹ ವಿಚಿತ್ರ ಕಳವುಗಳನ್ನು ಕುರಿತು ಯಾರೂ ವಾರ್ತೆ ಹಬ್ಬಿಸಿದನ್ನು ನಂಬಲೇ ಬೇಡಿರಿ ಎಂದು ಇಶ್ತಿಹಾರು ಹಾಕಿರುವರು. ಸುಳ್ಳು ಪುಕಾರಿ ಪೋಲೀಸರಿಗೆ ಕೊಟ್ಟುದಕ್ಕೆ ಅವರು ಆ ಸ್ತ್ರೀ ರನ್ನು ಪೋಸ್ಟುಮಾಸ್ಟರರ ಮೇಲೆ ಖ್ಯಾಂಗೆ ತರ ಲಾರದೇಕೆ ಎಂಬ ಪ್ರಶ್ನೆ ಇನ್ನೂ ಇತ್ಯರ್ಥವಾ ಗಿಲ್ಲ. ಬೇಕೆಂದೇ ಇಷ್ಟು ನಷ್ಟ ಮಾಡಿಸಿ ಕೊಳ್ಳುವ ಜನರೂ ಉಂಟು



ಸೇವೆ ಮತ್ತು ಗೆಲುವು — ಕರ್ನಾಟಕದ ಕೀರ್ತಿ!

ಸೇವೆಯೇ

ಮೈಸೂರು ಇನ್ಶ್ಯೂರೆನ್ಸ್ ಕಂಪೆನಿಯ

ಪರಮ ಧ್ಯೇಯ

ಸೇವೆಯೇ ಅದರ ಗೆಲುವಿನ ಗುಟ್ಟು

ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು, ಆಡಳಿತ ಮಂಡಳಿ ...

"ಮೈಸೂರು" ಅಭ್ಯುದಯದ ಜೀವಾಳ.

ಕಂಪೆನಿಯು ಸೇವೆಗಾಗಿಯೇ ನಿರಂತರವೂ ನೂತನ ಮಾರ್ಗಗಳನ್ನು ಹುಡುಕುವುದರಲ್ಲಿಯೂ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿ ಕೊಳ್ಳುವುದರಲ್ಲಿಯೂ ನಿರತವಾಗಿದೆ. ಕಂಪೆನಿಯು ನಾಡಿಗರೆಲ್ಲರ ಸಹಾನುಭೂತಿಯನ್ನು ಕೋರಿ, ಅವರಿಂದ ಸೇವೆಗಾಗಿ ಹೆಚ್ಚಿನ ಕರೆ ಬರಲೆಂದು ಆಗ್ರಹಪೂರ್ವಕವಾಗಿ ಬೇಡುವುದು.

ಅದು ಬಾಳಿರುವುದು ಸೇವೆಯಿಂದ;
ಬಾಳುವುದು ಸೇವೆಗಾಗಿಯೇ.

ಇಂದಿನ ಕೆಲವು ಅಂಶಗಳು—ಅಂಕಿಗಳು.

ಅಧಿಕೃತ ಷೇರು ಬಂಡವಾಳ ರೂ. ೩,೦೦,೦೦೦	ಇಂಡಿಯಾ ಸರಕಾರದ ಸೆಕ್ಯೂರಿಟಿಯ ಬೆಲೆ ರೂ. ೨೫,೦೦೦
ಹೊರಹಾಕಿದ ಬಂಡವಾಳ ರೂ. ೨,೦೦,೦೦೦	ಜೀವ ವಿಮಾ ನಿಧಿ ರೂ. ೧೬,೨೨೧-೪-೪
ಚಂದಾ ಆದ ಬಂಡವಾಳ ರೂ. ೧,೪೯,೬೦೦	ಸಾಧಿಸಿದ ಉದ್ಯಮ ರೂ. ೧೦,೬೭,೪೫೩
ತೆತ್ತ ಬಂಡವಾಳ ರೂ. ೬೫,೦೦೦	ಪೂರ್ಣವಾದ ಉದ್ಯಮ ರೂ. ೭,೬೫,೩೪೫
ಷೇರುದಾರರ ಮೇಲಣ ನಿಧಿ ರೂ. ೮೪,೯೦೦	ಪ್ರೀಮಿಯಂ ಆದಾಯ ರೂ. ೫೫,೨೦೦

ಆಸ್ತಿ ರೂ. ೧ ಲಕ್ಷಕ್ಕೆ ಮೀರಿದೆ.

ಮೂರನೇ ವರ್ಷದ ಡೈರೆಕ್ಟರುಗಳ ಅಂಗೀಕೃತವಾದ ವರದಿಯ ಕೆಲವು ಮುಖ್ಯಾಂಶಗಳು.

೧. ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ೨೨೦ರಷ್ಟು ಏರಿದೆ. ೨. ಹೊಸ ಉದ್ಯಮವು ಶೇಕಡ ೬೫ರಷ್ಟೂ, ಪೂರ್ಣವಾದ ಉದ್ಯಮವು ಶೇಕಡ ೫೩ರಷ್ಟೂ ಏರಿದೆ. ೩. ಷೇರುಗಳು ಸಂಚಿಗೆ ಮಾರಾಟವಾಗುತ್ತಿವೆ. ೪. ಹೆಚ್ಚಿಸಿರುವ ಷೇರು ಬಂಡವಾಳಕ್ಕೆ ಚಂದಾ ಕೊಡಲು ಸಾರ್ವಜನಿಕರು ನಾನು ತಾನೆಂದು ಮುಂದೆ ಬಂದಿರುವರು. ೫. ಉದ್ಯಮವು ಅಧಿಕವಾಗುತ್ತಿರುವ ಸಮಯದಲ್ಲಿಯೇ ಖರ್ಚಿನ ಪ್ರಮಾಣವು ತಗ್ಗುತ್ತಲಿದೆ. ೬. ರದ್ದಾದ ಉದ್ಯಮದ ಪ್ರಮಾಣವು ತೀರ ಕಡಿಮೆಯಿದ್ದು, ಸಾಧಿಸಿರುವ ಉದ್ಯಮದ ಶ್ರೇಷ್ಠ ತರಗತಿಯನ್ನು ಸೂಚಿಸುತ್ತಲಿದೆ. ಹಾಗೂ ಅದರ ಶ್ರೇಷ್ಠತೆಯನ್ನು ಕಂಪೆನಿಯು ಇದುವರೆಗೆ ಭರಿಸಬೇಕಾಗಿ ಬಂದ ಕ್ಲೈಮುಗಳು ಸ್ಥಿರೀಕರಿಸುತ್ತವೆ.

ಕಾರ್ಯಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.

"ಮೈಸೂರು" ಆದರ್ಶ ಸಂಸ್ಥಾನದ ಆದರ್ಶ ಜೀವವಿಮಾ ಸಂಸ್ಥೆಯೆನಿಸಿ, ಮೈಸೂರು ದೇಶದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕಾರ್ಯ ನಡೆಯಿಸುತ್ತಿದ್ದಾಗ್ಯೂ ಪ್ರಥಮ ವರ್ಷದಲ್ಲಿಯೇ ಇಡೀ ಕರ್ನಾಟಕಕ್ಕೇ ಅಭೂತಪೂರ್ವವಾದ ಉದ್ಯಮವನ್ನು ಸಾಧಿಸಿದೆ. ಈ ಕೀರ್ತಿ ಪತಾಕೆಯನ್ನು ಹಿಡಿದು—ಈ ಅನುಭವ ಬೆಂಬಲದಿಂದ—ಕರ್ನಾಟಕದ ಇತರ ಭಾಗಗಳಲ್ಲೂ, ಬ್ರಿಟಿಷ ಇಂಡಿಯ, ಬರ್ಮಾ ಮತ್ತು ಸಿಲೋನುಗಳಲ್ಲೂ ವಿಜಯಿಯೆನಿಸಲು ಮುಂದಡಿಯಿಟ್ಟಿದೆ.

ಬೇಕು! ಕರ್ನಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯ ಬರ್ಮಾ ಸಿಲೋನುಗಳ ಎಲ್ಲ ಪ್ರಾಂತ್ಯಗಳಲ್ಲೂ ಏಜಂಟರುಗಳೂ, ಸ್ಪೆಷಲ್ ಏಜಂಟರುಗಳೂ, ಆರ್ಗನೈಜರುಗಳೂ ಬೇಕು. ಸಂಬಳದ ಮತ್ತು ಕಮಿಷನ್ ಅಥವಾ ಇವೆರಡರ ಮೇಲೂ ಕೆಲಸಮಾಡಲವಕಾಶವುಂಟು. ಪ್ರತಿನಿಧಿಗಳಾಗಲಿಚ್ಛಿಸುವವರು ಕಂಪೆನಿಗೆ ಅವರು ಕೊಡುವ ಉದ್ಯಮದ ಭರವಸೆಯನ್ನೂ ಮತ್ತು ಅವರ ಕಾರ್ಯಕ್ಷೇತ್ರಗಳನ್ನೂ ತಿಳಿಸುವುದು.

ಹೆಚ್ಚು ವಿವರಗಳಿಗೆ:—
ಜನರಲ್ ಮ್ಯಾನೇಜರ್,

ಮೈಸೂರು ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

"ನಾಗೇಶ್ವರ ಬಿಲ್ಡಿಂಗ್", ಶ್ರೀ ನರಸಿಂಹರಾಜಾ ರೋಡ್ ಬೆಂಗಳೂರು ಸಿಟಿ

ಟೀ ಕುಡಿಯುವ ಅಭ್ಯಾಸ ಮಾಡಿರಿ.

...ಳೆ ಇದೆ. ಛಳಿಗಾಲ ಕಳೆದು ಬೇಸಿಗೆಯು ...ವುದು. ಪುನಃ ಛಳಿಗಾಳಿವು ಪ್ರಾಪ್ತವಾಗುವುದು. ...ಗಾಢ ಮಾಲ್ಕೆ ತನ್ನ ಬಾಯಾರಿಕೆಯು ನುತ್ತ ...ಸಲು ಯಾವದಾದರೊಂದು ವಸ್ತುವನ್ನು ಹುಡುಕು... ಇರುವುದು. ಬಾಯಾರಿಕೆಯು ಮನುಷ್ಯ ಜೀವ...ದ ಸಹಜಗುಣ. ಛಳಿಗಾಲದಲ್ಲಾಗುವಂತೆ ಬೇಸಿಗೆ...ಲ್ಲಿ ಬಾಯಾರುವುದು ಸಹಜವೇ. ಸಹಜ ...ಯೋಗ್ಯವಾದ ಇಂತಹ ಬಾಯಾರಿಕೆಯನ್ನಡಗಿಸುವ ...ಸ್ತು ಈ ಪ್ರಪಂಚದಲ್ಲಿಯೇ ಇಲ್ಲವೆ ಏನು ಆ ...ದಾರ್ಥವು ಅಷ್ಟು ಹೆಚ್ಚು ಬೆಲೆಯದೇನೂ ಅಲ್ಲ ...ಥವಾ ಅಪೂರ್ವ ವಸ್ತುವೂ ಅಲ್ಲ. ಸುಲಭ ಸಾಧ್ಯ...ವಾದುದು, ಕಮ್ಮಿ ಬೆಲೆಯುಳ್ಳದ್ದು ಮನುಷ್ಯನು ತನ್ನ ...ತೃಪ್ತಿಪೂರ್ತಿಯಾಗಿ ಕುಡಿಯಲು ಯೋಗ್ಯವಾದ ಪಾನೀ...ಯವು. ಆ ವಸ್ತುವು ಈಗ ಭಾರತ ವರ್ಷದಲ್ಲಿ ಆ ...ಸೇತು ಹಿಮಾಚಲಪರ್ಯಂತವೂ ಪ್ರಸಿದ್ಧಿ ಪಡೆದಿದೆ. ...ಇಂತಹ ವಸ್ತುವು ಯಾವುದು ಗೊತ್ತೇ?

ಚಾ ಅಥವಾ ಟೀ.

ಟೀಯು ಇಷ್ಟರ ಮಟ್ಟಿನ ಪ್ರಜಾನುರಾಗವನ್ನು ಪಡೆದಿದ್ದರೂ ಅನೇಕರು ಟೀ ಕುಡಿಯಲು ಹಿಂಜರಿಯು...ರು. ಛಳಿಗಾಲದಲ್ಲಿ ಟೀ ಕುಡಿದು ಆನಂದಿಸುವ ...ನಾಗರಿಕರು ಬೇಸಿಗೆಯಲ್ಲಿ ಟೀ ಸೇವಿಸಲು ಸಂಕೋಚ ...ಪಡುವರು. ಈ ಸಂಕೋಚವು ಏತಕ್ಕೆ? ಟೀಯ ...ಪ್ರಕೃತಿಯ ವಿಷಯದಲ್ಲಿ ಒಂದು ವಿಧವಾದ ತಾತ್ಸಾರ ...ಭಾವನೆ ಇರುವುದೇ ಇದಕ್ಕೆ ಕಾರಣ.

ಟೀಯು ದಾಹವನ್ನಡಗಿಸುವುದು. ಉರಿಯುವ ಬೇಸಿಗೆಯಲ್ಲಿ ಒಂದು ಬಟ್ಟಲು ಟೀ ಕುಡಿದರೆ ಮನಸ್ಸಿಗೆ ...ತ್ವರಿತ ಉಲ್ಲಾಸವಾಗುವುದು. ದೇಹವು ತಣಿದು ...ಮನುಷ್ಯನಿಗೆ ಸ್ಫೂರ್ತಿಯುಂಟಾಗುವುದು. ಒಂದು ...ಬಟ್ಟಲು ಟೀಯು ಎಲ್ಲ ವಿಧವಾದ ತಂಪಾದ ಪಾನೀಯ...ಗಳಿಗಿಂತಲು ಹೆಚ್ಚು ತಂಪನ್ನು ಕೊಟ್ಟು ಶರೀರಕ್ಕೆ ಸೌಖ್ಯ...ವನ್ನೂ ಉತ್ಸಾಹವನ್ನೂ ಕೊಡುವುದು. ಶರೀರದಲ್ಲಿ ...ಗಿಂಪನ್ನುಂಟು ಮಾಡುವ ಗುಣವು ಟೀಯಲ್ಲಿ ಅಡಗಿದೆ ...ಆದ್ದರಿಂದಲೇ ಅದು ಅಷ್ಟು ಪ್ರಾಶಸ್ತ್ಯವನ್ನು ಪಡೆದಿದೆ.

ಮಾನವ ವರ್ಗದ ಆಹಾರ ವಿಜ್ಞಾನದ ಪಂಡಿತನೇ ...ರು ಟೀಯು ಆರೋಗ್ಯ ಗುಣಗಳನ್ನು ಒಮ್ಮುಖವಾಗಿ ಹೊಗಳಿದ್ದಾರೆ. ಟೀ ಕುಡಿದರೆ ತಕ್ಷಣ ಶರೀರದಲ್ಲಿ ...ಶಿವರುಂಟಾಗಿ ಶೀತೋಷ್ಣದಲ್ಲಿಯೇ ಉಷ್ಣತೆ ಕಡಿಮೆ ...ಯಾಗುವುದು. ಟೀ ಕುಡಿದ ನಂತರ ಅನೇಕ ಘಂಟೆ...ಗಳ ವರೆಗೂ ಈ ಆನಂದಮಯ ಪರಿಸ್ಥಿತಿಯು ಇರು...ವುದು. ಆದಕಾರಣ ಬೇಸಿಗೆಯಲ್ಲಿ ಟೀ ಕುಡಿಯು...ವುದೇ ಶರೀರದಲ್ಲಿ ತಂಪನ್ನುಂಟು ಮಾಡಲು ಶ್ರೇಷ್ಠ ಮಾರ್ಗ.

ಟೀ ಕುಡಿಯಲು ಛಳಿಗಾಲವೇ ಶ್ರೇಷ್ಠವೆಂಬ ...ನಂಬಿಕೆಯು ಈಗೀಗ ಜನರಿಂದ ದೂರವಾಗುತ್ತಿದೆ ಯಾಕೆಂದರೆ ಅನೇಕರು ಬೇಸಿಗೆಯಲ್ಲಿ ಬಿಸಿಬಿಸಿ ಟೀ ಮನ್ನೇ ಅಪೇಕ್ಷಿಸುತ್ತಿರುವುದರಿಂದ ಈ ಭಾವನೆಯು ...ಟೊಳ್ಳೆಂದೇ ಹೇಳಬಹುದು.

ಕಳೆದ ವರ್ಷದ ಟೀ ಪ್ರಚಾರದ ಪ್ರಗತಿಯ ವಿಷಯ...ವಾಗಿ ಇಂಡಿಯದ ಟೀ ಮಾರ್ಕೆಟ್ ಎಕ್ಸ್‌ಟೆನ್ಶನ್ ಬೋರ್ಡಿನ ಕಮಿಶನರರು ತಮ್ಮ ವರದಿಯಲ್ಲಿ ಹೀಗೆ ಬರೆದಿರುವರು "ವಿಮರ್ಶೆಗೊಳಗಾಗಿರುವ ಅವಧಿಯ ಅರ್ಧ ಭಾಗವೆಲ್ಲಾ ಬೇಸಿಗೆ ಕಾಲವಾಗಿತ್ತು. ಸಾಮಾನ್ಯ...ವಾಗಿ ಈ ಕಾಲದಲ್ಲಿ ಟೀ ಪ್ರಚಾರವು ಮತ್ತು ಟೀ ಕುಡಿಯುವಿಕೆಯೂ ಬಹು ಮಟ್ಟಿಗೆ ಕಮ್ಮಿಯಾಗು...ವುದು ವಾಡಿಕೆ. ಇದಲ್ಲದೆ ಟೀ ಮಂದಿರಗಳು ಹಂಗಾಮಿ...ಯಾಗಿ ಮುಚ್ಚಲ್ಪಡುವವು. ಬೀದಿ ಬೀದಿಗಳಲ್ಲಿ ಟೀ ಮಾರುವವರೂ ಈ ವ್ಯಾಪಾರವನ್ನು ನಿಲ್ಲಿಸುವರು. ಎಲ್ಲರ ದೃಷ್ಟಿಯೂ ತಂಪಾದ ಪಾನೀಯಗಳ ಕಡೆಗೆ ಆಕ...ರ್ಷಿಸಲ್ಪಡುವುದು. ಹಾಗೆಯೇ ಎಲ್ಲ ಅಂಗಡಿಗಳಲ್ಲೂ ವ್ಯಾಪಾರಿಗಳಲ್ಲಿ ಟೀ ಸೊಪ್ಪಿನ್ನು ಶೇಖರಿಸುವುದೂ ಕಮ್ಮಿ ಮಾಡುವರು.

ಆದರೆ ಭಿನ್ನ ಭಿನ್ನ ಪ್ರಾಂತ್ಯಗಳಿಂದ ಬಂದ ವರದಿ ಮನ್ನು ನೋಡಿದರೆ ಇದೇ ಅವಧಿಯಲ್ಲಿ ಬಹು ಮಟ್ಟಿನ ಪ್ರಗತಿಯು ಕಾಣಬರುವುದು. ಸಾಮಾನ್ಯವಾಗಿ ಬೇಸಿಗೆ ...ಯಲ್ಲಿ ಪ್ರಚಾರವಾಗುವುದಕ್ಕಿಂತ ಹೆಚ್ಚು ಟೀ ಸೊಪ್ಪು ...ಖರ್ಚಾಗಿರುವುದು. ಮುಚ್ಚಲ್ಪಟ್ಟ ಟೀ ಮಂದಿರ...ಗಳ ಜಾಗ್ರತೆಯೂ ಅಲ್ಲ- ಅನೇಕ ಕಡೆಗಳಲ್ಲಿ ಹೊಸ ...ಅಂಗಡಿಗಳೂ ತೆರೆಯಲ್ಪಟ್ಟವು.

ಪತ್ರವ್ಯವಹಾರ

ಪತ್ರ ಲೇಖಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ
—ಸಂಪಾದಕ.

ಪಂಚಾಯತ ಬೋರ್ಡಿನ ಪಜೀತಿ!

ಅಯ್ಯಾ,

ಬಂಟ್ವಾಳ ಮತ್ತು ಮೂಡು ಎಂಬರ ಸಮೀಪದಲ್ಲಿರುವ ಎರಡು ಗ್ರಾಮಗಳು, ಈಗ ಈ ಎರಡು ಗ್ರಾಮಗಳಿಗೆ ಕೂಡಿ ಶೀಘ್ರದಲ್ಲಿಯೇ ಒಂದು ಪಂಚಾಯತ ಬೋರ್ಡನ್ನು ದಾಪನಮಾಡುವ ಆಲೋಚನೆಯು ಇಗದೆ ಎಂದು ತಿಳಿದುಬರುತ್ತದೆ. ಇದು ಎಷ್ಟುಮಾತ್ರಕ್ಕೂ ನ್ಯಾಯವಾದುದಲ್ಲ. ಇದರಿಂದ ಉಂಟಾಗಬಹುದಾದ ಕೆಲವು ಹಾನಿಗಳನ್ನು ಮಾನ್ಯ ಜಿಲ್ಲಾ ಬೋರ್ಡು ಮೆಂಬರರ ಮತ್ತು ಇನ್ನಿತರ ಮಹನೀಯರ ಅವಗಾಹನೆ ಬಗ್ಗೆ ನಾನು ಇಲ್ಲಿ ಸೂಚಿಸಲು ಅಪೇಕ್ಷಿಸುತ್ತೇನೆ.

ಈ ಮೊದಲೇ ಹೇಳಿದಂತೆ ಮೂಡು ಎಂದರೆ, ಬಂಟವಾಳಕ್ಕೆ ಸಮೀಪದಲ್ಲಿರುವ ಒಂದು ಗ್ರಾಮ. ಬಂಟವಾಳವು ಗ್ರಾಮವೆಂದೆನಿಸಿಕೊಳ್ಳುವುದಕ್ಕಿಂತ ಪಟ್ಟಣದಾಗಿ ಒಂದು ಪಟ್ಟಣವೆಂದೆನ್ನಿಸುತ್ತದೆ. ನಾಗರಿಕತೆಯ ಕುರುಹುಗಳಾದ ಸಬ್ ಮಜಿಸ್ಟ್ರೇಟ ಕೋರ್ಟು, ಪೋಲಿಸ್ ಸ್ಟೇಶನು, ಲೋಕಲ್ ಫಂಡ್ ಆಸ್ಪತ್ರೆ ಮತ್ತು ಒಂದು ಹೈಸ್ಕೂಲೂ ಬಂಟ್ವಾಳದಲ್ಲಿವೆ. ಬಂಟ್ವಾಳದ ಜನರು ಹೆಚ್ಚಾಗಿ ವ್ಯಾಪಾರಸ್ಥರು. ಮೂಡುಗ್ರಾಮದವರದರ ಹಳೆಯ ಸಂಪ್ರದಾಯದ ಕೃಷಿಕ ಜೀವನವನ್ನು ನಡೆಸುವ ಒಂದು ಗ್ರಾಮ. ಬಂಟವಾಳದಲ್ಲಿ ಅಗಬೇಕಾದ ಸುಧಾರಣೆಗಳಿಗೂ, ನಮ್ಮಲ್ಲಿ ಆಗಬೇಕಾದ ಸುಧಾರಣೆಗಳಿಗೂ ಯಾವ ಸಂಪರ್ಕವೂ ಇಲ್ಲ. ಎರಡು ಗ್ರಾಮಗಳೂ ಬೇರೆ ಬೇರೆ ಬೇರೆ ರೆವಿನ್ಯೂ ಭಾಗಗಳಾಗಿವೆ. ಎರಡು ಗ್ರಾಮಗಳಿಗೂ ಪ್ರತ್ಯೇಕ ಪಂಚಾಯತ ಕೋರ್ಟುಗಳಿವೆ. ಅದಲ್ಲದೆ ಯಾವಾಗಲೂ ಗ್ರಾಮಕ್ಕೊಂದು ಪಂಚಾಯತ ಬೋರ್ಡೆಂಬುದು ಅದೊಂದು ರೂಢಿ. ಇಂತಹ ಸಂದರ್ಭದಲ್ಲಿ ಎರಡು ಗ್ರಾಮಗಳಿಗೂ ಒಂದೇ ಬೋರ್ಡನ್ನು ಮಾಡುವ ಮಾತುಕತೆಯು ಹೇಗೆ ಬಂತೆಂದು ಊಹಿಸಲು ಅಸಾಧ್ಯವಾಗಿದೆ. ಈ ರೀತಿಯಲ್ಲಿ ಮಾಡಿದರೆ ಮೂಡು ಜನರ ಸೌಕರ್ಯವು ನುಚ್ಚಲೆಗೆ ಒತ್ತಲ್ಪಟ್ಟು ಬಂಟವಾಳದವರು ನಮ್ಮಿಂದ ವಸೂಲುಮಾಡಿದ ತೆರಿಗೆ ಮುಂತಾದ ವುಗಳನ್ನು ತಮ್ಮ ಪಟ್ಟಣದ ಅಂದಚಂದಗಳಿಗೋಸ್ಕರ ವೆಚ್ಚಮಾಡಬಹುದೆಂಬ ಭೀತಿಯು ಉಂಟಾಗುತ್ತದೆ. ಮಾತ್ರವಲ್ಲ ಹಾಗೆ ಆಗಿಯೇ ಆಗುವುದು.

ಮೊಲ್ಲಂಥ ಅಂಶಗಳು ಟೀಯು ಬೇಸಿಗೆಯ ಪಾನೀಯನ್ನೇ ಎಷ್ಟು ಎಂಬುದನ್ನು ಅದು ಜನರಲ್ಲಿ ಪಡೆದಿರುವ ಪ್ರಸಿದ್ಧಿಯನ್ನೂ ವ್ಯಕ್ತಪಡಿಸುವುವು. ಈ ಸಂದರ್ಭ ವಿಖ್ಯಾತ ಶಿಕಾರಿಗಳಾದ ಮಿ ರಿ.ಜಿ. ಕೊಟ್‌ನ ಎಂಬವರ ಅಭಿಪ್ರಾಯವನ್ನು ಇಲ್ಲಿ ಮುಂದಿಡಿಸಲು ಇಚ್ಛಿಸುತ್ತೇವೆ. ಬೇಸಿಗೆಯಲ್ಲಿ ಬಿಸಿ ಬಿಸಿ ಟೀ ಕುಡಿಯುವುದರ ಪ್ರಯೋಜನವನ್ನು ಕುರಿತು "ಟ್ರಾಕ್ಸ್ ಆಫ ಆಫ್ರಿಕಾ" ಎಂಬ ಪುಸ್ತಕದಲ್ಲಿ ಈ ರೀತಿ ಬರೆದಿರುವರು.

"ಕುಡಿಯಲು ನಾವು ಸಾಮಾನ್ಯವಾಗಿ ಟೀಯನ್ನೇ ಉಪಯೋಗಿಸುತ್ತಿದ್ದೆವು. ನನ್ನೊಡನಿದ್ದ ಅಮೇರಿಕದ ಮಿತ್ರನಿಗೆ ಈ ಅಭ್ಯಾಸ ಮಾಡಿಸಲು ಬಹು ಕಾಲ ಬೇಕಾಯಿತು. ಬಾಯಾರಿಕೆಯನ್ನಡಗಿಸಿ ಉತ್ಸಾಹವನ್ನುಂಟು ಮಾಡಲು ಟೀಯಲ್ಲದೆ ಬೇರೆ ಪಾನೀಯವಿಲ್ಲವೆಂದು ಅವರು ತಿಳಿದ ನಂತರ ಮತ್ತು ಅವರುಗಳು ಟೀ ಕುಡಿಯಲು ಹಿಂಜರಿಯಲಿಲ್ಲ. ನಿಜವಾಗಿಯೂ "ಉಷ್ಣವು ಹೆಚ್ಚಿದಂತೆಲ್ಲಾ ಬಿಸಿ ಬಿಸಿ ಪಾನೀಯವೇ ಇರಲೆಂಬ" ನಾಣ್ಣುಡಿಯಲ್ಲಿ ಸತ್ಯವಿದೆ. ಬಹಳ ಸೆಖೆಯಾಗಿರುವ ಕಾಲದಲ್ಲಿ ದಾಹವನ್ನಡಗಿಸಲು ತಣ್ಣೀರು ಎಂದೆಂದಿಗೂ ಪ್ರಯೋಜನವಾಗಲಾರದು. ಬಿಸಿ ಬಿಸಿ ಟೀಯೇ ಉತ್ತಮವಾದ ಪಾನೀಯ.

ಬೇಸಿಗೆಯ ಕಾಲದಲ್ಲಿ ಕಠಿಣ ಶ್ರಮದಾಯಕ ಕೆಲಸ ಮಾಡಿದ ನಂತರ, ಅಥವಾ ವ್ಯಾಯಾಮ ಕ್ರೀಡೆಗಳಿಂದ ಬಳಲಿದಾಗ್ಯ ಪ್ರಯಾಸದ ಪ್ರಯಾಣದಿಂದ ಹಿಂತಿರುಗಿದ ನಂತರ ಅಥವಾ ಬಹುಕಾಲ ದೈಹಿಕ ಅಥವಾ ಮಾನಸಿಕ ಪರಿಶ್ರಮವನ್ನು ಮಾಡಿದ ನಂತರ ಒಂದೇ ಒಂದು ಬಟ್ಟಲು ಬಿಸಿ ಬಿಸಿ ಟೀ ಕುಡಿದು ನೋಡಿ, ನಿಮಗೆ ಎಷ್ಟು ತಂಪನ್ನೂ ಉಲ್ಲಾಸವನ್ನೂ ಉಂಟುಮಾಡುತ್ತದೆಂಬುದನ್ನು ಪರೀಕ್ಷಿಸಿರಿ.

...ಪೂರ್ಣವಾಗಿ ಹುಟ್ಟಿಕೊಳ್ಳುವ ಮತ್ತು ವಿಶೇಷವಾಗಿ ಇರುವ ... ಗಳ ಜಾಗ್ರತೆ ... ಕೋರ್ಟು ಇರುವುದೆಂದು ನಮಗೆ ಯಾವ ಭಾಗದ ಪ್ರಯೋಜನವೂ ಸಿಕ್ಕಲಿಕ್ಕೆ ಇರುವುದಿಲ್ಲ. ... ಪಂಚಾಯತ ಬೋರ್ಡು ಬಂದ ಮೇಲೆ ನಮಗೆ ಏಂತಹದಾಗಿಯೂ ಸಿಗಲಿಕ್ಕಿಲ್ಲ. ಬೇರೆ ಯಾವ ಸಾರ್ಥಕಕ್ಕಾಗಿ ನಮಗೊಂದು ಪಂಚಾಯತ ಬೋರ್ಡು? ಬಂಟವಾಳದವರ ಸೌಕರ್ಯಕ್ಕೆ ಒದಗಿಸಿಕೊಡುವುದಕ್ಕಾಗಿಯೇ? ನಮ್ಮಲ್ಲಿಯ ಕೆರೆಗಳನ್ನು ನಮ್ಮ ಹಣದಿಂದ ವಸೂಲು ಮಾಡಿ ನಾವೇ ಏಕೆ ನಮ್ಮ ಗ್ರಾಮದ ಅಭಿವೃದ್ಧಿಗಾಗಿ ವೆಚ್ಚಮಾಡಕೂಡದು? ಆದುದರಿಂದ ನಮಗೊಂದು ಪ್ರತ್ಯೇಕ ಪಂಚಾಯತ ಬೋರ್ಡು ಆದರೆ ಎಷ್ಟೋ ಲೇಸು. ಮಾತ್ರವಲ್ಲ ಈಗಿನ ಯೋಜನೆಯಂತೆ ಎರಡು ಗ್ರಾಮಗಳೂ ಪ ಮನವೆ ಮಾಡಿಬಿಟ್ಟರೆ ಜಾತಕಗಳ ಮೇಲಾಮೇಲಿಯು ಸರಿಯಲ್ಲದ್ದೆ ಗೃಹಛಿದ್ರಗಳು ಕಲೋರುವುದರಲ್ಲಿ ಸಂಶಯವಿಲ್ಲ. ಇದರಿಂದ ಪಂಚಾಯತ ಬೋರ್ಡು ಯಾವ ಸದುದ್ದೇಶದಿಂದ ಸ್ಥಾಪಿಸಲ್ಪಡುವುದೋ ಆ ಉದ್ದೇಶವು ನಿಷ್ಫಲವಾಗಿ, ಬೋರ್ಡಿನ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ತೊಡರು ಉಂಟಾಗಬಹುದು. ಆದುದರಿಂದ ಈ ವಿಷಯದಲ್ಲಿ ಡಿ. ಬೋರ್ಡು ಮೆಂಬರರೆಲ್ಲರೂ ಈ ವಿನಂತಿಯತ್ತ ಲಕ್ಷ್ಯಕೊಟ್ಟು ನಮಗೊಂದು ಪ್ರತ್ಯೇಕ ಪಂಚಾಯತ್ ಬೋರ್ಡು ಆಗುವಂತೆ ಪ್ರಯತ್ನಿಸಬೇಕಾಗಿದೆ. ಮಾತ್ರವಲ್ಲ, ಈ ಕುರಿತು ಮೂಡುಗ್ರಾಮ ನಿವಾಸಿಗಳೆಲ್ಲರೂ ಸಂಬಂಧಪಟ್ಟ ಅಧಿಕಾರಿಗಳೆಲ್ಲರಿಗೂ ಒಂದು ವಿನಂತಿಯನ್ನು ಬರೆದೊಂದು ಪ್ರಬಲ ಚಳವಳವನ್ನು ಎಬ್ಬಿಸ ಬೇಕಾಗಿದೆ.

'ಓರ್ವ ಮೂಡಗ್ರಾಮ ನಿವಾಸಿ'

ಮೂಡಗ್ರಾಮ ೩—೬—೧೯೩೬

ಮಂಚಿಯಿಂದ ಬೋಳಂತೂರಿಗಾಗಿ ಗೋಳ್ತಮಜಲು ರಸ್ತೆಬ್ಬನು.

(ಇದು ಪಾಣೆಮಂಗಳೂರು ಅನೇಕಲ್ಲು ರಸ್ತೆಯಿಂದ ಕಲ್ಲಡ್ಕ ವಿಟ್ಲ ರಸ್ತೆಗೆ ಕೂಡುತ್ತದೆ)

ಅಯ್ಯಾ,

ಈ ರಸ್ತೆ ಆಗಬೇಕಾಗಿ ಗ್ರಾಮಸ್ಥರು ಈ ಮೊದಲು ಅನೇಕ ಅರ್ಜಿಗಳನ್ನು ಬರೆದೊಂದಿದ್ದರು. ಪ್ರಕೃತ ಡಿ. ಬೋರ್ಡು ವೈಸ್ ಪ್ರೆಸಿಡೆಂಟ್ ಮಿ. ಸಿ ಗೋನ್ಸಾಲ್ವಿಸ್ ಇವರೂ, ಮೆಂಬರ್ ಜನಾಬ್ ಬಿ. ಎಲ್. ಅಹ್ಮದ್ ಸಾಹೇಬರೂ ಕಲ್ಲಡ್ಕಕ್ಕೆ ಇದೇ ತಾ ೧—೬—೩೬ಕ್ಕೆ ಚಿತ್ತೈಸಿ ಈ ರಸ್ತೆಯ ತನಿಖೆ ನಡೆಸಿ ಕಲ್ಲಡ್ಕ ಬೋರ್ಡಿನ ವರ ಅಭಿಪ್ರಾಯ ಕೂಡಾ ತಿಳಿದುಕೊಂಡಿರುತ್ತಾರೆ. ಈ ರಸ್ತೆಯು ಗ್ರಾಮಸ್ಥರಿಗೆ ತುಂಬಾ ಅಗತ್ಯವಾದುದು. ಕೆಲವು ಕಾಲದ ಹಿಂದೆ ಗ್ರಾಮಸ್ಥರ ವಂತಿಗೆ ಸಹಾಯದಿಂದ ಈ ರಸ್ತೆಯ ಸ್ವಲ್ಪ ಅಂಶ ಬೋಳಂತೂರು ಪಟೇಲರು ಮಾಡಿಸಿದ್ದರು. ಈಗ ನಾದುರುಸ್ತಿಯಲ್ಲಿ ಉಂಟು. ಈ ರಸ್ತೆಯ ಸ್ವಲ್ಪ ಅಂಶ ಕಲ್ಲಡ್ಕ ಪಂಚಾಯತ ಬೋರ್ಡಿಗೂ ಸ್ವಲ್ಪ ಅಂಶ ಮಂಚಿ ಪಂಚಾಯತ ಬೋರ್ಡಿಗೂ ಸೇರುತ್ತದೆ. ಸ್ವಲ್ಪ ಅಂಶ (ಬೋಳಂತೂರು ಗ್ರಾಮವು) ಸೀದಾ ಡಿ. ಬೋರ್ಡಿಗೂ ಒಳಪಡುತ್ತದೆ.

ಸಾರ್ವಜನಿಕ ಕಾಮಗಾರಿಗಳನ್ನು ಮಾಡಿಸುವ ಸಂಸ್ಥೆಗಳಾದ ಬೋರ್ಡಿನವರು ಈ ರಸ್ತೆಯನ್ನು ತೆರೆದರೆ ಮಂಚಿ—ಬೋಳಂತೂರು—ಗೋಳ್ತಮಜಲು— ಕೆಳಗಿನ ಗ್ರಾಮಸ್ಥರಿಗೆ ಕೂಡ ಹೆಚ್ಚಿನ ಪ್ರಯೋಜನ ಮಾತ್ರವಲ್ಲ. ಮಳೆಗಾಲದಲ್ಲಿ ಪಾಣೆಮಂಗಳೂರು—ಮಂಚಿ—ಸಾಲೆತ್ತೂರಿಗೆ ಹೋಗುವವರಿಗೆ ಗಾಡಿ ಮೋಟರುಗಳ ಬಳಸುವ ಹಾಗೆ ಈ ರಸ್ತೆಯಾದರೆ ಹೆಚ್ಚಿನ ಅನುಕೂಲವಾಗುತ್ತದೆ. ದಯಾಳು ಡಿಸ್ಟ್ರಿಕ್ಟ್ ಬೋರ್ಡಿನವರು ಸಾರ್ವಜನಿಕ ಉಪಕಾರದ ಈ ಕಾಮಗಾರಿಯನ್ನು ಮಾಡಿಸುವಂತೆ ಪ್ರಾರ್ಥನೆ.

ಗ್ರಾಮಸ್ಥರ ಹಿತೈಷಿ.

ಮಂಚಿ-ಕುಕ್ಕಾಜೆಯಿಂದ ಈರಕ್ಕಾಗಿ ಕನ್ಯಾನಕ್ಕೆ ಮುಸಾಫರಿಬಂಗ್ಲೆ ರಸ್ತೆಬ್ಬನು

ಪಾಣೆಮಂಗಳೂರಿನಿಂದ ಡಿ. ಬೋರ್ಡು ರಸ್ತೆಯು ಮಂಚಿ—ಕುಕ್ಕಾಜೆ—ಕೊಳ್ನಾಡು, ಸಾಲೆತ್ತೂರು, ಪಾತೂರು ಗ್ರಾಮಗಳನ್ನು ದಾಟಿ ಸುಮಾರು ೧೮ ಮೈಲು ಸುತ್ತಿಕೊಂಡು ಕನ್ಯಾನದ ರೋಡಲ ಡಿಸ್ಪೆನ್ಸರಿ ವ ಮುಸಾಫರಿ ಬಂಗ್ಲೆಗೆ ಸಮೀಪ ಉಕ್ಕುಡದಿಂದ್ಧ ಒಂದ ರಸ್ತೆಗೆ ಸೇರುತ್ತದೆ. ಕುಕ್ಕಾಜೆ ಪಂಚಾಯತ ಬೋರ್ಡು ಆ ಶಾಲೆಯ ಜಂಕ್ಷನಿಂದ ಈರ ಗ್ರಾಮಕ್ಕಾಗಿ ಒಂದು ರಸ್ತೆಯನ್ನು ತೆರೆದರೆ ಸುಮಾರು ೪ ಮೈಲು ದೂರದಿಂದ ಹೋಗ...

...ಬಹುದು. ಸುಮಾರು ೬೦೦೦ ರೂಪಾಯಿ ಬೇಕೆಂಬುದಾಗಿ ಈರ ಗ್ರಾಮಸ್ಥರಿಗೆ ವಸತಿಯನ್ನು ಒಪ್ಪಿಕೊಳ್ಳ ಹೋಟೆಲ ಸಮಯದಲ್ಲಿ ನೇಮಿಸಲ್ಪಡುವ ಕಾನ್ಫರೆನ್ಸಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ... ಕಾಣಬರುತ್ತದೆ. ಈ ಸಂಗತಿ ಆ ಸರ್ಕಲಿಗೆ ನಿಶ್ಚಿತ್ತಿಸುವ ಮಾನ್ಯ ಮೆಂಬರುಗಳಿಗೆ ಸ್ವಕೀಯ ತಿಳಿದ ವಿಷಯವಾಗಿರುತ್ತದೆ. ಹೊಸ ರಾಜ್ಯಾಂಗದ ಚರ್ಚೆಗೆ ಹಳ್ಳಿಯ ಉದ್ಧಾರವೇ ಮುಖ್ಯ ವಿಷಯವಾದುದರಿಂದ ಅಲ್ಲಲ್ಲಿ ರಸ್ತೆಗಳನ್ನು ತೆರೆಯುವಂತೆ ಮಾನ್ಯ ಮೆಂಬರರು ಉತ್ತೇಜನಕೊಟ್ಟು ಮೇಲ್ಕಂಡ ರಸ್ತೆಯನ್ನು ತೆರೆದೇ ಮಾಡಬೇಕಾಗಿ ಅಪೇಕ್ಷೆ—ಗ್ರಾಮದ ಹಿತಚಿಂತಕ.

ದಿ ಮೊಗವೀರ ಯುವಕ ಸಂಘ, ಮುಂಬಾಯಿ.

ವರ್ಷದ ನವಮಾಸದ ನವಮಿ ದಿನ (೩-೬-೩೬) ಅಲ್ಲದೆ ಶ್ರೀಕೃಷ್ಣ ಜಯಂತಿಯ ಆದೊಂದು ಸುದಿನದಲ್ಲಿ ಸ್ಥಾಪನೋತ್ಸವದಿಂದ ಶೋಭಿಸಿ, ಮೊಗವೀರ ಸಮಾಜ ದೊಳಗಿರುವ ಅಂಧಶ್ರದ್ಧೆ ಧಾರ್ಮಿಕ ಭ್ರಮೆ, ಆರ್ಥಿಕ ಮುಂದುಗಾಣಿಕೆ ಇವೇ ಮೊದಲಾದ ಕುಂದುಕೊರತೆಗಳನ್ನು ಬೇರು ಸಹಿತ ಕಿತ್ತೆಗೆಯುವ ಮತ್ತು ಕ್ರೀಡಾಯ ಪ್ರಾಮುಖ್ಯ ಸ್ವತ್ತಿಯಾಗಿರುವ ಮತ್ತು ವ್ಯಸನಹಾಯವನ್ನು ಸುಧಾರಿಸುವ ಸದುದ್ದೇಶಗಳನ್ನಿಟ್ಟುಕೊಂಡು ಇಂದಿಗೆ ಸಾಧಾರಣ ಎರಡೂವರೆ ವರ್ಷಗಳ ಹಿಂದೆ ಜನ್ಮವೆತ್ತಿದ ನಮ್ಮ ಮೇಲಿನ ಸಂಘವನ್ನು ಇಷ್ಟರಲ್ಲೇ ಯಾರೂ ಮರೆಯಲಿಕ್ಕಿಲ್ಲ.

ಮೊಗವೀರ ಸಮಾಜದಲ್ಲಿ ವರದಕ್ಷಿಣೆ ಬಾಲ್ಯವಿವಾಹಗಳಂಥ ಅಂಧ ರೂಢಿಗಳು ಇಷ್ಟರ ವರೆಗೆ ತಕತೊಪ್ಪದ ಈ ಕಾಲದಲ್ಲಿಯೂ ನೆಲೆನಿಂತಿರುವುದು ಎಷ್ಟೊಂದು ಶೋಚನೀಯ. ಇವುಗಳ ಪ್ರಬಲತೆಯನ್ನು ಅದಷ್ಟು ಮಟ್ಟಿಗಾದರೂ ನಿಲ್ಲಿಸಲು ಸಂಘವು ತನ್ನ ಜನ್ಮದಾರಭ್ಯದಿಂದಲೂ ಕರಪತ್ರಗಳ ಮುಖೇನವೂ, ಭಾಷಣಗಳಿಂದಲೂ, ನಾಟಕ ವಾಡಿಯೇ ಕೆಲಸಮಾಡುತ್ತಿರುವರೆಂಬುದನ್ನು ಯಾವ ಮೊಗವೀರನೂ ಅಲ್ಲಗಳೆಯನು. ಸದ್ಯ ಮೊಗವೀರ ಸಾರ್ವಜನಿಕ ಸಂಸ್ಥೆಗಳನ್ನು ಸಮ್ಮಿಳನಗೊಳಿಸುವ ಮುಂಬಾಯಿಯ ಮೊಗವೀರ ಮಹಾಜನ ಸಭೆಯ ಯೋಜನೆಗೆ ಕೊಡತಕ್ಕ ಯೋಗ್ಯ ಪ್ರೋತ್ಸಾಹ ಮತ್ತು ಬೆಂಬಲ ದಲ್ಲಿಯೂ ಸಂಘವು ಹಿಂದೆ ಬಿದ್ದಿರುವುದಿಲ್ಲವೆಂದು ಧೈರ್ಯದಿಂದ ಹೇಳಬಲ್ಲೆವು. ಇಲ್ಲಾ ಜಾತಿಯ ಹಿತಕ್ಕೆಂದು ಕಾದುಬಂದಿರುವ ಪ್ರತಿಯೊಂದು ಕಾರ್ಯಭಾಗದಲ್ಲಿಯೂ ಸಂಘವು ತನ್ನ ಪಾಲಿನ ಕರ್ತವ್ಯವನ್ನು ಧೈರ್ಯ ಮತ್ತು ಸಾಹಸದಿಂದಲೇ ವಹಿಸಿರುವುದು.

ಜಾತಿಯ ದುಸ್ಥಿತಿಯಾದ ಮತ್ಸ್ಯವ್ಯವಸಾಯವನ್ನು ಸ್ವಲ್ಪ ಮಟ್ಟಿಗಾದರೂ ಸುಧಾರಿಸಿ ಅದರಿಂದ ಹೆಚ್ಚಿನ ಜಾತಿಯ ಅಭಿವೃದ್ಧಿಯಾಗಬೇಕೆಂದೂ ಸಮಾಜದ ಶ್ರೇಯಸ್ಸಿಗಾಗಿ ಮೊಗವೀರರನ್ನು ಸಂಘಟಿಸುವ ಮುಖ್ಯ ಧ್ಯೇಯವನ್ನಿಟ್ಟುಕೊಂಡಿರುವ ಆ ಸಂಘಕ್ಕೆ ಜಾತ್ಯಾಭಿಮಾನಿಯಾದ ಪ್ರತಿಯೊಬ್ಬ ಯುವಕನೂ (ಇಷ್ಟರಲ್ಲೆ ಆಗಿಲ್ಲವಾದರೆ ಇನ್ನಾದರೂ) ಸದಸ್ಯನಾಗಿ ಸೇರಿ ಸಮಾಜಸೇವೆಯ ಈ ಮಹತ್ಕಾರ್ಯದಲ್ಲಿ ತನ್ನ ಸಂಪೂರ್ಣ ಬೆಂಬಲವನ್ನಿತ್ತು ಸಹಕರಿಸಬೇಕೆಂದು ಉದಾರಿಗಳಾದ ಜಾತಿಗ್ರಹಸ್ಥರು ತಮ್ಮಿಂದ ಸಾಧ್ಯವಾಗುವ ಸಹಾಯ ಮತ್ತು ಸಹಾನುಭೂತಿಯನ್ನು ತೋರಿಸಬೇಕೆಂದೂ ನಮ್ಮ ಭಾವದಿಂದ ವಿನಂತಿಸಿಕೊಳ್ಳುತ್ತೇವೆ.

ಅಲ್ಲದೆ ವರದಕ್ಷಿಣೆ ಮತ್ತು ಬಾಲ್ಯ ವಿವಾಹಗಳ ಕುರಿತು ಸಂಘದ ಇದೇ ಕಳೆದ ಮಹಾಸಭೆಯಲ್ಲಿ ಎರಡು ಠರಾವುಗಳು ಮಂಜೂರಾತಿ ಹೊಂದಿದ್ದವು.

(1) ವರದಕ್ಷಿಣೆಯ ಪದ್ಧತಿಯನ್ನು ಈ ಸಭೆಯು ತೀರಾ ಖಂಡಿಸುವುದು. ಅಂತೆಯೇ ಮೊಗವೀರರು ಅದನ್ನು ಇಂದಿನಿಂದಲೇ ಕಿತ್ತು ಬಿಸಾಟುವಂತೆ ಪ್ರಯತ್ನ ಪಡತಕ್ಕದ್ದು. ಅಲ್ಲದೆ ಅನಾಮಿಕ ರೂಪದಲ್ಲಿ, ಬಾಹ್ಯ ವಸ್ತುವಾಗಲೀ ಇಲ್ಲವೇ ಚಿನ್ನದವರೇಗಳೆಂದಾಗಲೀ ಕೊಡುವಂಥಾ ಮೊದಲಾದ ರೂಪದಿಂದ ವಿನಿಮಯ ಮಾಡತಕ್ಕದ್ದು.
(2) ಬಾಲ್ಯ ವಿವಾಹವನ್ನು ಈ ಸಭೆಯು ತೀರಾ ಖಂಡಿಸುವುದು ಮತ್ತು ಇನ್ನು ಮುಂದೆ ಮದುವೆಯಾಗತಕ್ಕ ವರರ ಪ್ರಾಯವು ೨೦ಕ್ಕೂ ವಧುವಿನ ಪ್ರಾಯವು ೧೪ಕ್ಕೂ ಕಡಿಮೆಯಾಗತಕ್ಕದು.

ಹೆಚ್ಚಿನ ಮದುವೆ ವಗೈರೆಗಳು ನಮ್ಮ ಸ್ವದೇಶದಲ್ಲಿಯೇ ನೆರವೇರುವುದರಿಂದ, ಜಾತಿಯ ಉನ್ನತಿಯನ್ನು ಬಯಸುವ ಪ್ರತಿಯೊಬ್ಬ ಮೊಗವೀರನೂ ಈ ಮೇಲಿನ ಠರಾವುಗಳಿಗೆ ಹೆಚ್ಚಿನ ಲಕ್ಷ್ಯಕೊಡಬೇಕಾಗಿಯೂ ವಿನಂತಿಸಿಕೊಳ್ಳುತ್ತೇವೆ. ಅಂತೆಯೇ ದಕ್ಷಿಣಕನ್ನಡದ ಮೊಗವೀರ ಮಹಾಜನ ಸಂಘವೂ ಕೂಡಾ ತಮ್ಮ ದೃಷ್ಟಿಯನ್ನು ಈ ಕಡೆ ತಿರುಗಿಸುವಂತೆ ನಮ್ಮ ವಿಜ್ಞಾಪನೆ.

ಮತ್ತು ಸಂಘದ ನೇತೃತ್ವದಲ್ಲಿ ನಡೆಸಿಕೊಂಡು ಬರುವ ನೋಟದ ಸ್ಥಾಪನೋತ್ಸವವು ಈ ಸಂಘದ ಎರಡನೇ ವಾರ್ಷಿಕೋತ್ಸವವು ಇದೇ ತಿಂಗಳ ೧೧ನೇ ತಾರೀಕಿಗೆ ಸರ್ ಕಾವಸ್ಜಿ ಜಹಾಂಗೀರ್ ಹಾಲಿನಲ್ಲಿ ಡಾಕ್ಟರ್, ಟಿ. ಕೆ. ಮೂಲ್ಕಿ ಎಮ್. ಬಿ. ಬಿ. ಎಸ್. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆ ಜರಗಲಿರುವುದೆಂದು ಈ ಮೂಲಕ ತಿಳಿಸಲು ಸಂತೋಷಪಡುವೆವು.

ಗೌರವ ಕಾರ್ಯದರ್ಶಿಗಳು.

[illegible]
[illegible] ೪
ಸ್ವರಾಜ್ಯಕ್ಕಾಗಿ [illegible] ೪
[illegible] ೬
[illegible] ೯
ಅಗ್ರಲೇಖ
ತಾತ್ಕಾಲಿಕರ ಕಾರ್ಯಕ್ರಮ ೧೧
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
[illegible] ಸಮಾಚಾರಗಳು ೧೧
ಯುದ್ಧ ಪ್ರಾರಂಭವಾಗುವುದೇ ಸ್ವಾತಂತ್ರ್ಯ
ಸಾಧನೆಗೆ ಎಡೆಯುಂಟೇ? ೧೩
ಮಂಗಳೂರು ಸಮಾಚಾರ ೧೪
ತಾಲೂಕುಗಳಿಂದ ,,
ಉಪಾಧ್ಯಾಯರ ಮೇಲೆ ಅನ್ಯಾಯ ದರ್ಶ ೧೬

ಸ್ವದೇಶಾಭಿಮಾನಿ.

ತಾ. ೯ನೇ ಶುಕ್ರವಾರ ಜುಲೈ ೧೯೩೭

ತಾತ್ಕಾಲಿಕರ ಕಾರ್ಯಕ್ರಮ

ಕೊಂಗ್ರೆಸ್ ಪಕ್ಷದವರು ಎಲ್ಲೆಲ್ಲಿ ಅಧಿಕ ಸಂಖ್ಯೆಯಲ್ಲಿದ್ದರೂ ಮಂತ್ರಿಮಂಡಲ ರಚನೆಗೆ ಒಪ್ಪಿರಲಿಲ್ಲವೊ ಅಲ್ಲಲ್ಲ ತಾತ್ಕಾಲಿಕ ಪ್ರಧಾನಿಗಳಾಗಿ ಅಧಿಕಾರ ಹೊಂದಿ, ಕಾರ್ಯಭಾರ ನಿರ್ವಹಿಸುತ್ತಿದ್ದವರು, ಈಚೆಗೆ ಶ್ರೀಮಾನ್ ವೈಸ್ರಾಯರು ಭಾಷಣ ಮೂಲಕವಾಗಿ ವಿವರಿಸಿದುದನ್ನು ತಿಳಿದೂ ಕೊಂಗ್ರೆಸಿನ ಕೇಳಿಕೆಗೆ ಈ ಭಾಷಣವು ಬೆಟ್ಟಿನ ಅನುಕೂಲವಾದ ಸೌಕರ್ಯಗಳನ್ನು ಕಲ್ಪಿಸಿಕೊಡುವುದಾಗಿ ತಿಳಿದು, ಇನ್ನು ಈ ತಿಂಗಳಲ್ಲೇ ಅವೆಲ್ಲ ಪ್ರಾಂತ್ಯಗಳಲ್ಲಿ ಗವರ್ನರರು ಸಭೆ ಕರೆಯಲಿರುವುದನ್ನು ಕಂಡು, ತಮ್ಮ ಅಧಿಕಾರಗಳಿಗೆ ತಾವಾಗಿ ರಾಜೀನಾಮೆ ಕೊಡಲೊಪ್ಪಿದುದು ಪ್ರಕಟವಾಗುತ್ತಿದೆ

ಸಮ್ರಾಜರ ಆಡಳಿತವು ಮುಂದರಿಯಬೇಕೆಂದವರು,ಅಥವಾ ಪ್ರಜಾಗಣಕ್ಕೆ ಸುಮ್ಮನೆ ಅನಾನುಕೂಲತೆಗಳನ್ನು ಉಂಟುಮಾಡಿ ಲಾಭವಿಲ್ಲೆಂದವರು, ಮತ್ತೂ ಅರಾಜಕತೆ ಉಂಟಾಗದ ಹಾಗೆ ನೋಡುವ ಕಟ್ಟುವುದಕ್ಕೆ ಮುಂದೆ ಬಂದವರು ಎಂದು ತಮ್ಮಲ್ಲಿ ತಾವೇ ವಿವರಿಸಿಕೊಂಡು ಸಮಾಧಾನಪಟ್ಟವರೂ, ಬೆಂಬಲವೂ ಜನತೆಯ ಸಹಾನುಭೂತಿಯೂ ಇಲ್ಲದೆ ಕೊಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಕೆಲವನ್ನು ತಾವು ಸಾಕಣೆಗೆ ತೆಗೆದುಕೊಂಡು ಕಾಲನಿರ್ವಾಹ ಮಾಡುತ್ತ ಮುಂದೆ ನಡೆಯಲು ಅನುಕೂಲತೆಗಳು ಲೋಪವಾಗುತ್ತಲೇ, ಕೊಂಗ್ರೆಸ್ ಪಕ್ಷವು ಅಧಿಕಾರ ಸ್ವೀಕರಿಸುವುದರಲ್ಲಿ ಈಗಲೆ ಅವರಿಗೆ ಸ್ಥಾನ ಬಿಟ್ಟುಕೊಡುತ್ತೇವೆಂದವರೂ; ಈಗ ಹಿಂಜರಿಯುತ್ತಿರುವರು ನ್ಯಾಯವೇ ಸರಿ

ತಾತ್ಕಾಲಿಕರಲ್ಲಿ ದೋಷ ಕಾಣುವುದಾಗಲಿ, ಅವರನ್ನು ದೂರುವುದಾಗಲಿ ನಮ್ಮ ಕರ್ತವ್ಯವಲ್ಲ. ಅವರು ಇಲ್ಲದಿದ್ದಲ್ಲಿ, ಎಂದೋ ಈ ಅಧಿಕಾರಗಳ ಬೇಳಿಕೆಗಳು ಹೊರಡುತ್ತಿದ್ದವು ಆಕ್ಟು ಅಸಮರ್ಪಕವಾಗಿದೆ ಎಂಬ ವಿಚಾರವು ಅದನ್ನು ರಚಿಸಿದವರಿಗೇ ತಿಳಿಯಬರುತ್ತಿತ್ತು. ತಾತ್ಕಾಲಿಕರಿಲ್ಲದಿದ್ದಲ್ಲಿ ಗವರ್ನರರುಗಳೇ ಎಲ್ಲ ರಾಜ್ಯಭಾರವನ್ನು ಸ್ವೀಕರಿಸಬೇಕಾಗಿ ಬಂದ ಕೂಡಲೆ, ಆಕ್ಟು ಬಯಲಾಗುತ್ತಿತ್ತು. ಜನಾಂಗದ ಜೀವನದಲ್ಲಿ ಇವಿಷ್ಟು ತಿಂಗಳೂ ವ್ಯರ್ಥವಾದುವೆಂದೂ, ಅಥವಾ ಈ ತಿಂಗಳುಗಳಲ್ಲಿ ಜನಾಂಗವು ಮುಂದರಿದಷ್ಟು ಮುಂದರಿಯಲಾಗದೆ ಹೋದುದಕ್ಕೆ ಮಾತ್ರ, ಇವರು ಕಾರಣರಾದರೆಂದು ಹೇಳಬೇಕಾಗುವುದಿಲ್ಲ.

ಕೊಂಗ್ರೆಸು ಮುಖಂಡರು ತಮ್ಮ ವೋಟರರಿಗೆ ಎಲ್ಲ ವಿಷಯಗಳನ್ನೂ ವಿವರಿಸಿ ಅವರಲ್ಲಿರಬಹುದಾದ ಸಂದೇಹಗಳನ್ನು ಹೋಗಲಾಡಿಸಿ ಯಥಾರ್ಥ ಸ್ವರೂಪವನ್ನು ಬಣ್ಣಿಸುತ್ತ ಬರಲೂ ಅವಕಾಶವುಂಟಾಯಿತು. ತಾತ್ಕಾಲಿಕರು ಹೊರಗೆಡವಿದ ಧ್ಯೇಯಗಳಿಗೂ ಅವರ ಮನಸ್ಸಿನಲ್ಲಿರುತ್ತಿದ್ದ ನಾನಾ ಇತರ ದುಷ್ಟ ವಿಚಾರಗಳಿಗೂ ಇರುವ ಭೇದವನ್ನು ಜನತೆಯು ತಿಳಿದುಕೊಳ್ಳುವಂತಾಯಿತು ಎಷ್ಟೋ ವೇಳೆ, ಹಿಂದಣ ಸರಕಾರ ಪದ್ಧತಿಗೆ ಕಿಂಚಿತ್ತೂ ಭಿನ್ನವೆಣಿಸದೆ ಹೊಸ ಎಪ್ರಿಲ್ ಒಂದನೇ ತಾರೀಕಿನಲ್ಲಿ ಈ ಅಧಿಕಾರಾರೂಢರು ನಡೆದುದೂ ಇದೆ ಇಂಗ್ಲೇಂಡಿನಲ್ಲಿ ಮತ್ತು ಇತರ ಕಡೆಗಳಲ್ಲಿ ಅಧಿಕಾರವಾಣಿಯು ನಾನಾ ಧ್ವನಿಗಳಲ್ಲಿ ಆಕ್ಟಿನ ವೈಚಿತ್ರ್ಯ ವಿಧಾನಗಳನ್ನು ವಿವರಿಸಿದೆ ತಮ್ಮ ಅಭಿಪ್ರಾಯಗಳನ್ನು ಗೌರವಪೂರ್ಣವಾಗಿ ವಿವರಿಸುತ್ತ ಕಿಂಚಿತ್ತೂ ರಿಯಾಯಿತಿ ತೋರಿಸದಂತೆ ಮಾತಾಡಿದವರೂ ಇದ್ದಾರೆ, ಮಾತಿನಲ್ಲಿ ಸ್ವರಾಜ್ಯವನ್ನೆ ದಾನಮಾಡಿ ಅಲ್ಲಲ್ಲಿನ ಒಂದೊಂದು ಇಳಿವೊತ್ತುಗಳಲ್ಲಿ ಎಲ್ಲವನ್ನೂ ನಿಷೇಧಿಸಿದವರೂ ಇದ್ದಾರೆ ಎಂತೂ ರಗಳೆಯೇ ಸುಳಿದಾಡುತಿದ್ದ ಇಷ್ಟು ಕಾಲವು ಮುಗಿಯಿತೆನ್ನಬೇಕು

ಚಿತ್ತಾರಿಯ ನವಾಬರು ಮೊದಲಾಗಿ, ಕೊಂಗ್ರೆಸು ಇನ್ನು ಅಧಿಕಾರ ಸ್ವೀಕರಿಸಬಹುದಾಗಿರುವ ಪ್ರಯುಕ್ತ ಹೊಸ ಮಂತ್ರಿಗಳು ಅಧಿಕಾರ ತಳೆಯಲು ಅನುಕೂಲವಾಗುವ ಹಾಗೆ ಈಗಲೆ ರಾಜಿನಾಮೆ ಕೊಟ್ಟೇ ಇರುವರು 'ಮದ್ರಾಸಿನ ಮಂತ್ರಿಗಳು ಗವರ್ನರರೊಡನೆ ಸುಖಾಸೀನರಾಗಿ ತಮ್ಮ ವೈಭವದ ಚಿತ್ರಪಟವೊಂದನ್ನು ತೆಗಿಸಿ, ಅಲ್ಲಲ್ಲೇ ಮುಂದಿನ ಆಲೋಚನೆಯಾಗುವ ತನಕ,—ಟಿಕೇಟು ಪಡೆದುಕೊಂಡ ಗಾಡಿ ಕಾಯುವವರಂತೆ—ಕಾಲಹರಣ ಮಾಡುತ್ತಿರುವರು ಅಂತೂ ಈ ಗ್ರಹಣ ಕಾಲವು ಮುಗಿವಂತಿದೆ ಎಂದು ಈಗ ಇದುವರೆಗೆ ಆಡುತ್ತಿದ್ದವರಿಗೆ ಈಗ ಮೂಡಿಯೇ ಇದೆ

ಕೊಂಗ್ರೆಸಿನ ಕಾರ್ಯಕಾರೀ ಮಂಡಲಿಯಲ್ಲೂ ಹಲವು ಅಭಿಪ್ರಾಯದವರಿರುವರು ಅದರ್ಲೂ ನಿರ್ಣಯವಾದ ಬಳಿಕ ಸರ್ವರೂ ಒಮ್ಮತದಿಂದ ನಡೆಯಬೇಕಾದುದರಿಂದ, ನಿರ್ಣಯವಾಗುವ ತನಕ ಬಲು ದೂರ ಚರ್ಚಿಸುತ್ತಿದ್ದುದೇ ಇಷ್ಟು ವಿಳಂಬವಾದ ಇತ್ಯರ್ಥಕ್ಕೆ ಕಾರಣವಾಗಿದೆ ನೂರಾರು ಕಡೆಗಳಿಂದ ಅಧಿಕಾರ ಸ್ವೀಕರಿಸಬೇಕೆಂದೇ ಸೂಚನೆಗಳಾಗಿವೆ, ಆಕ್ಷೇಪಗಳು ಇಲ್ಲವೆಂದಿಲ್ಲ ವೈಸ್ರಾಯರ ಭಾಷಣದಲ್ಲಿ ಸಾರವಿಲ್ಲ ಎನ್ನುವವರಿಗೆ,ಆದರೂ 'ವೋಟರರಿಗೆ ಪವಿತ್ರ ವಾಗ್ದಾನಗಳನ್ನು ಪೂರಯಿಸುವುದೆಂದಿಗೆ? ಸರಕಾರವು ಎನ್ನುವಂತೆ ಅಧಿಕಾರ ಸ್ವೀಕರಿಸಿ ಅದರಲ್ಲಿನ ನ್ಯೂನಗಳನ್ನು ಜನತೆಗೆ ತೋರಿಸಿ ಕೊಡೋಣ, ನಮ್ಮ ಕಾರ್ಯಕ್ರಮವನ್ನೂ ಮುಂದರಿಸೋಣ ಎಲ್ಲಿ ಮುಂದರಿಯಲಾರದಾಗುವೆವೊ ಅಲ್ಲಿಯೇ ಸರ್ವವನ್ನು ಬಹಿರಂಗವಾಗಿ ಜನತೆಗೆ ವಿವರಿಸಿ ಜನರ ಇಷ್ಟದಂತೆ ನಡೆಯೋಣ 'ಎಂದು ಪ್ರೇರೇಪಿಸಿ ಅಧಿಕಾರ ಸ್ವೀಕರಿಸಬೇಕೆಂದೇ ಆತುರಕ್ಕಿಂತಲೂ ಋಜುಮಾರ್ಗವನ್ನೆ ಬೋಧಿಸುವವರು ಇದ್ದಾರೆ ಹೀಗಾಗಿ ಅಧಿಕಾರ ಸ್ವೀಕರಿಸಲು ತುಂಬಾ ಪ್ರೋತ್ಸಾಹವಿದೆ

ಮುಂದಿನ ವಾರ, ನವೀನ ಇತಿಹಾಸಕ್ಕೆ ಪ್ರಾರಂಭವಾಗುವುದು. ಮೊದಲನೆ ಪಂಚ್ಞೇದದಲ್ಲಿ, ಸ್ವಸ್ತಿವಾಚನ ಬರೆವಾಗಲೇ, ಪಂಚ್ಞೇದದಲ್ಲಿ ನಿರೂಪಿಸಲಾಗುವ ವಿಷಯಗಳನ್ನು ಸಂಕ್ಷೇಪವಾಗಿ ಗವರ್ನರರೂ ಸಭೆಯೂ ಬಣ್ಣಿಸದಿರರು. ಎಂತೂ, ಇಷ್ಟು ಕಾಲ ವ್ಯಥಾ ಕಲಾಪದಲ್ಲಿ ಕಳೆದುಹೋದುದು ಹೋಗಲಿ, ಮರೆತೇ ಹೋಗಲಿ. ಮುಂದೆಯಾದರೂ, ಧ್ಯೇಯಕ್ಕೆ ತಕ್ಕುದಾದ ಯಥಾರ್ಥ ವರ್ತನೆಯಿಂದ ದೇಶೋನ್ನತಿಗೆ ಸಾಧಕವಾಗುವ ವ್ಯವಸ್ಥೆಯುಂಟಾಗಲಿ.

ಬಹುಪ್ರಖ್ಯಾತಿಪಟ್ಟಿದ್ದ-ಪ್ರಪಂಚದ ಅದ್ವಿತೀಯ ನವಶೋಧೆ.

ಬಿಮಲಾ ಮಾತ್ರೆಗಳು

ಬಿಮಲಾ ಪಿಲ್ಸ್ ಅಥವಾ ಮಾತ್ರೆಗಳೆಂಬ ಹೆಸರನ್ನು ಕೇಳಿದ ಕೂಡಲೇ ಬಹು ಕಾಲದ ಬಾಧ್ಯಗಳೂ, ರೋಗಗಳೂ ಹೆದರಿ ನಡುಗುತ್ತವೆ. ವೈದ್ಯಕೀಯ ಚಾತುರ್ಯವನ್ನು ತಪ್ಪಿಬ್ಬಾಗಿ ಮಾಡಿದ ನಾನಾ ತರದ ಹಳೇ ವ್ಯಾಧಿಗಳನ್ನು ಬಿಮಲಾ ಮಾತ್ರೆಗಳು ಗುಣಪಡಿಸಿ ಆಶ್ಚರ್ಯವನ್ನುಂಟುಮಾಡಿದೆ. ಧರ್ಮಾರ್ಥ ಕಳುಹಿಸುವ ಹಸ್ತಪುಸ್ತಕಗಳಿಗೂ, ಸೂಚನೆಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Kaviraj S. C Mukherjee, B. A S
Ayurvedic Institution Kalighat P O Calcutta.

ಯೋಗ್ಯ ಸಭ್ಯಸ್ಥರಾದ ಏಜೆಂಟರುಗಳು ಬೇಕಾಗಿದ್ದಾರೆ ಏಜನ್ಸಿ ರೂಲ್ಸುಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಸ್ಫುಟವಿಚಾರಗಳು

ದೇಶವನ್ನು ಉದ್ದಕ್ಕೂ ಅಡ್ಡಕ್ಕೂ ಕತ್ತರಿಸಿದ ಫಲ

ವಿಭಾಗಿಸಿ ಆಳುವ ತತ್ವಕ್ಕೆ ಅನುಸಾರವಾಗಿ, ನಮ್ಮ ದೇಶವನ್ನು ಉದ್ದಕ್ಕೆ ಕತ್ತರಿಸಿ ದೇಶೀಯ ರಾಜ್ಯಗಳನ್ನು ಕಲ್ಪಿಸಿದ್ದಾಗಿದೆ ಇವುಗಳು ವಿಸ್ತೀರ್ಣದಲ್ಲಿ ಇಡೀ ದೇಶದ ಮೂರರಲ್ಲೊಂದು ಅಂಶದಷ್ಟು, ಜನಸಂಖ್ಯೆಯಲ್ಲಿ ಕಾಲುಪಾಲು ಇವುಗಳನ್ನು ದೇಶೀಯ ರಾಜರ ಶಾಸನವೂ ಭಾರತವರ್ಷದ ಮೇಲಂತಸ್ತಿನ ಶಾಸನವೂ ಎಂಬೀ ಎರಡು ಶಾಸನಗಳ ಆಳುತ್ತವೆ ಪುನಃ ಪ್ರಾಂತ್ಯಗಳನ್ನು ಅಡ್ಡಕ್ಕೆ ಕತ್ತರಿಸಲಾಗಿದೆ ದೇಶವಾಸಿಗಳಲ್ಲಿ ಹಿಂದೂಗಳು ಮುಸಲ್ಮಾನರು ಬ್ರಾಹ್ಮಣರು ಬ್ರಾಹ್ಮಣೇತರರು ಎಂಬಿತ್ಯಾದಿ ಸಾಮಾಜಿಕ ಭೇದಗಳಿಂದಲೂ ಬೇರೆ ಬೇರೆ ಪಂಗಡಗಳನ್ನು ಉಂಟುಮಾಡಿ ಪಂಗಡಗಳ ಪ್ರಾತಿನಿಧ್ಯವನ್ನೆ ಏರ್ಪಡಿಸಲಾಗಿದೆ ಇದಲ್ಲದೆ ಮೇಲಿಂದಕೆಳಕ್ಕೆ ಸೀಳಿ ಕತ್ತರಿಸಿದಂತೆ, ನಾಗರಿಕರು, ಗ್ರಾಮಸ್ಥರು, ಧನಿಗಳು ಒಕ್ಕಲಗಳು ಎಂಬಿತ್ಯಾದಿ ಭೇದಗಳಾಗಿವೆ ಇಷ್ಟು ಹೋಳುಗಳನ್ನು ಒಂದು ಗೂಡಿಸಿದ ನಂತರವಲ್ಲವೆ ಸ್ವರಾಜ್ಯ?

ಐಕ್ಯವೆಲ್ಲಿದೆ?

ಪ್ರತಿಯೊಂದು ತುಂಡೂ ತನ್ನ ಪ್ರಾಧಾನ್ಯಕ್ಕಾಗಿ ಪಕ್ಷವಾಗಿದ್ದುದರಿಂದ, ಇಡೀ ರಾಷ್ಟ್ರವು ಒಡೆದೇ ಇರಬೇಕಾಗಿ ಬಂದಿದೆ ಈ ಭೇದಭಾವವು ನಮ್ಮಲ್ಲಿ ಎಷ್ಟು ಸ್ವಾಭಾವಿಕತೆಯನ್ನು ಬೆಳೆಸಿ ಬಿಟ್ಟಿದೆ ಎಂದರೆ, ದೇವರು ಈ ದೇಶವನ್ನು ಸೃಷ್ಟಿಸುವಾಗಲೆ, ಇಷ್ಟೆಲ್ಲ ಪ್ರಾಂತ್ಯಗಳನ್ನಾಗಿ ಪ್ರತ್ಯೇಕಿಸಿಯೆ ಸೃಷ್ಟಿಸಿದನೇನು ಎಂದು ನಮ್ಮಲ್ಲಿ ಪ್ರಶ್ನೆ ಹುಟ್ಟುವುದೂ ವಿಚಿತ್ರವೆನಿಸಲಾರದು ಪ್ರತಿಯೊಂದು ತಲಾಂತರದಲ್ಲಿ ಈ ಪಕ್ಷ—ವಿಪಕ್ಷಗಳ ಪರಿಣಾಮವೇನಾಗಿತ್ತೋ ಅದನ್ನು ಮುಂದಣ ಪೀಳಿಗೆಗೆ ಬೋಧಿಸುತ್ತ ಬರುತಿದ್ದುದರಿಂದ, ಯಾವ ಕಾಲಕ್ಕೂ ಈ ಸ್ವಾರ್ಥ ಬುದ್ಧಿಯು ಅಳಿದು ಹೋಗುವಂತಿಲ್ಲ, ದೇಶಭಕ್ತಿಯೆಂದರೆ, ತನ್ನ ಪ್ರಾಂತ್ಯವನ್ನೆ ಮಾತ್ರ ಆವರಿಸಿದೆಯೇ ಹೊರತು ಇಡೀ ದೇಶವನ್ನಲ್ಲ ಈ ಭಕ್ತಿಶ್ರದ್ಧೆಯನ್ನು ತಿದ್ದಲೂ ಬಲು ಕಷ್ಟವಾಗಿದೆ ಯಾವ ತಿದ್ದುಪಡಿಯನ್ನು ಸೂಚಿಸಿದರೂ, ಅದರ ಮೂಲವನ್ನು ಶೋಧಿಸಿಯೇ ಹೋಗಾಡುವರಲ್ಲದೆ, ಎಲ್ಲಿ ತಿದ್ದಿಕೊಳ್ಳಬಹುದೋ ಅದನ್ನಲ್ಲೇ ತಿದ್ದಿಕೊಂಡು ಮುನ್ನಡೆಯಲು ಯಾರೂ ಒಪ್ಪುವುದಿಲ್ಲ ಹಿಮಾಲಯವು ಒಂದು ಕಾಲದಲ್ಲಿ ಸಮುದ್ರದೊಳಗೆ ಮುಳುಗಿತ್ತೆಂಬುದನ್ನು ನಾವು ನಂಬುವುದೇ ಕಷ್ಟವಾಗಿದೆ, ನಮ್ಮಲ್ಲಿ ನೆಲದಡಿಯಲ್ಲಿ ಹೂತು ಹೋದ ಎಷ್ಟೋ ದೇವಾಲಯಗಳನ್ನು ನಾವು ಅಗೆದು ಕಂಡುಕೊಂಡಿರುವ ಹಾಗೆ, ವೈಭವಶಾಲಿಗಳಾಗಿದ್ದ ನಮ್ಮ ಸ್ಥಳೀಯ ರಾಜ್ಯಗಳು ನಮ್ಮಲ್ಲಿ ವಿಜೃಂಭಿಸಿವೆ ಹಿಂದೆ ಇದ್ದ ಭಾರತ ವರ್ಷವನ್ನು [illegible]ಗೂಡಿಸಿ ಆಳುತಿದ್ದ ಸಾಮ್ರಾಜ್ಯದ/ಸಮಾನ ಗೌರವವಿದ್ದ ಅಂಗಗಳೆಂದು ತಿಳಿದು, ಪ್ರಾಂತಗಳಂತೆಯೆ ಇವೂ ಹಿಂದೀಯರ ಐಕ್ಯತೆಗೆ ಸಾಧಕವಾಗಬೇಕೆಂದು ಬಯಸುವವರಿಗೆ ಈ ರಾಜ್ಯಗಳೇ ಇನ್ನು ಆತಂಕವಾಗದಿರವು

ತಾಟಸ್ಥ್ಯಭಾವ

ಪ್ರಾಂತಿಕ ವ್ಯವಹಾರಗಳ ಮಟ್ಟಿಗೆ ಈ ರಾಜ್ಯಗಳು ತಾಟಸ್ಥ್ಯಭಾವವನ್ನು ವಹಿಸಿಕೊಂಡು ಮಡಿಯಾಗಿವೆ ತಮ್ಮಲ್ಲಿನ ವ್ಯವಹಾರವನ್ನು ಕುರಿತಾಗಿ ಯಾವ ಪ್ರಾಂತ್ಯದವರೂ ಹಾಗೆಯೇ ತಾಟಸ್ಥ್ಯಭಾವವನ್ನು ತಳೆದ ಮಡಿಯಾಗಿರಬೇಕೆಂದೇ ಇವುಗಳ ಆಸೆಯಿದೆ ಆದರೆ ಸ್ಪೈನಿನಲ್ಲಿ ನಡೆವ ಯುದ್ಧದಲ್ಲಿ ಇಂಗ್ಲೆಂಡು, ಫ್ರಾನ್ಸ್, ಜರ್ಮನಿ, ಇಟೆಲಿಗಳ ಎಷ್ಟು ಮಟ್ಟಿಗೆ ತಟಸ್ಥವಾಗಿದ್ದಾವೆಯೋ ಅಷ್ಟೇ ಮಟ್ಟಿಗೆ ಈ ರಾಜ್ಯಗಳೂ ನಮ್ಮ ಪ್ರಾಂತಿಕ ವಿಚಾರಗಳಲ್ಲಿ ತಟಸ್ಥವಾಗಿವೆ ಆದರೆ ಮುಂದೆ ಪ್ರಾಂತಿಕ ವ್ಯವಹಾರದಲಿ ಸಾಮ್ರಾಜ್ಯ ಸರಕಾರದ ಪರವಾಗಿ ಪ್ರಾಂತಿಕ ಸ್ವರಾಜ್ಯದ ಮೇಲೆ ಬಾಣ ತೊಡುವುದಕ್ಕೆ ಇವು ಹಿಂದು ಬತ್ತಳಿಕೆಗಳಾಗಿವೆಯೋ ಎಂಬ ಕೆ[illegible] ಭಾರತವರ್ಷವು ನಮ್ಮೆಲ್ಲರದು ರಾಜ್ಯಗಳನ್ನು ಪ್ರತ್ಯೇಕಿಸಿ ಅಲ್ಲಲಿನ ಅರಸುಗಳಿಗೆ ಕೊಟ್ಟು ಪ್ರತ್ಯೇಕಿಸಿರುವ ರಾಜತಂತ್ರದಿಂದ ಈಗ ಭಾರತವರ್ಷದ ಗೋಜೇ ಇಲ್ಲವಾಗಿದೆ ಅಲ್ಲಲ್ಲಿನವರೂ ಅಲ್ಲಲ್ಲೇ ಭಕ್ತರಾಗಿ ಇತರರಿಗೆ ವಿಮುಖರು

ಭೂತ ವರ್ತಮಾನ-ಭವಿಷ್ಯತ್

ಭೂತಕಾಲದ ಗೌರವದ ನೆನಪಿರಲಿ ವರ್ತಮಾನದಲ್ಲಿ ನಡೆವ ಹಲವು ಪೀಡಾದಿಗಳ ಮಾತೂ ಇರಲಿ —ಇದನ್ನು ದೂರದೆ, ಭವಿಷತ್ಕಾಲದಲ್ಲಾದರೂ ಆತ್ಮಗೌರವ ಮರೆಯದೆ ಬಾಳಬೇಕೆಂಬಾಸೆ ನಮ್ಮೆಲ್ಲರಲ್ಲಿ ಹುಟ್ಟಬಾರದೆಂದಿದೆಯೆ? ರಾಜ್ಯಗಳ ಬ್ರಿಟಿಷ ಪ್ರಾಂತ್ಯಗಳಿಗಿಂತ ೫೦ ವರ್ಷ ಹಿಂದಣ ಸ್ಥಿತಿಯಲಿವೆ ಎಂಬುದು ಸಂತೃಪ್ತಿಯ ಮಾತೇ? ಕಾಲಸ್ಥಿತಿಗೆ ವಿರುದ್ಧವಾಗಿ ಎಷ್ಟು ಕಾಲಕ್ಕೆ ಸುಧಾರಣೆ ಮಾಡಲು ಹಿಂತೆಗೆಯಬಹುದೋ ಅಷ್ಟು ತೀಕ್ಷ್ಣವಾಗಿ ಸಂಘಾತದ ವೇಗವು ಹೆಚ್ಚುವುದು ಆದುದರಿಂದಲೆ ಎಲ್ಲ ಪ್ರಜೆಗಳು ಒಂದೇ ಮನಸ್ಸಿನಿಂದ ಒಂದೇ ಧ್ಯೇಯದಿಂದ ವಿವೇಕದಿಂದ ಎಚ್ಚೆತ್ತು ಮುನ್ನಡೆಯಬೇಕು ಇಲ್ಲದಿರುವಲ್ಲಿ ಪಕ್ಷವಾತ ಹಿಡಿದಿರುವ ದೇಹದಲ್ಲಿ ಮತ್ತು ಕೊಳೆತ ಅಂಗಗಳಂತೆ, ಪ್ರಾಂತ್ಯಗಳೂ ರಾಜ್ಯಗಳೂ ಕ್ಲೇಷಗಳಿಗೆ ಒಳಗಾಗ ಬೇಕಾಗುವುದು ಪ್ರಾಂತ್ಯಗಳು ಹಿಂದುಳಿದು ದೋಷಯುಕ್ತವಾಗುವಂತೆ, ರಾಜ್ಯಗಳಿಗೂ ಹಾನಿಯುಂಟು, ರಾಜ್ಯಗಳಲ್ಲಿ ದೋಷಗಳು ತಿದ್ದುಪಾಟಿಲ್ಲದಿರುವಂತಾದರೆ ಅದರಿಂದ ಪ್ರಾಂತ್ಯಗಳಿಗೂ ಹಾನಿಯುಂಟು. ಎಷ್ಟು ಭಿನ್ನತೆಯಂತೆ ತೋರಬೇಕಾಗಿ ಬಂದರೂ, ಎಲ್ಲವೂ ಒಂದೇ ದೇಹದ ಭಾಗಗಳೆಂದು ನಾವೆಲ್ಲರು ತಿಳಿದುಕೊಳ್ಳಬೇಕ? ಹೇಗೆ?

ಅಧಿಕಾರ ಸ್ವೀಕಾರವಾಗುವುದು.

ಅಧಿಕಾರ ಸ್ವೀಕರಿಸುವಂತೆ ಪ್ರಾಂತ್ಯಗಳ ಒತ್ತಾಯ.

ವಾರ್ಧಾದಲ್ಲಿ ರಾಷ್ಟ್ರೀಯ ನಾಯಕರ ಸಭೆ.

ಮಹಾತ್ಮಾಜಿಯವರಿಗೂ ರಾಷ್ಟ್ರಪತಿಯವರಿಗೂ ಒಪ್ಪಂದವಾಗಿರುತ್ತದೆ.

ತಾ ೫ರಿಂದ ವಾರ್ಧಾದಲ್ಲಿ ನೆರೆದ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸಭೆಯಲ್ಲಿ, ಕಾಂಗ್ರೆಸಿನಿಂದ ಕೇಳಲಾದ ಭರವಸೆಗಳು ವೈಸ್ರಾಯರ ಪತ್ರಕದಿಂದ ಎಷ್ಟರ ಮಟ್ಟಿಗೆ ಎಷ್ಟು ಮಟ್ಟಿಗೆ ಕೊಡಲಾಗಿವೆ, ಮತ್ತು ಈ ಪತ್ರಕದಲ್ಲಿರುವ ಇನ್ನಿತರ ವಿಚಾರಗಳನ್ನು ವಿಮರ್ಶಿಸಿ ಚರ್ಚೆ ನಡೆಯಿಸಲಾಯಿತು. ಶ್ರೀ ನೆಹರೂರವರಿಗೂ ಮಹಾತ್ಮಾಜಿಯವರಿಗೂ ಅಧಿಕಾರ ಸ್ವೀಕಾರದ ಕುರಿತು, (ವೈಸ್ರಾಯರ ಪತ್ರಕದ ಕುರಿತು) ಸಾಧಾರಣ ಇಪ್ಪತ್ತು ತಾಸುಗಳಿಗಿಂತ ಹೆಚ್ಚಿನ ಸಮಯ ಮಾತುಗಳು ನಡೆದು ಮಹಾತ್ಮಾಜಿ—ನೆಹರು ಒಪ್ಪಂದ ಒಂದು ನಡೆದಿರುತ್ತದೆ. ಅಧಿಕಾರ ಸ್ವೀಕಾರದ ಕುರಿತು ಹೊಸತೊಂದು ಠರಾವನ್ನು (ವೈಸ್ರಾಯರ ಪ್ರಕಟಣೆ ಇತ್ಯಾದಿಗಳ ಗಣನೆ ಮಾಡಿ) ಮಹಾತ್ಮಾಜಿ ಯಾಕ ರಚಿಸುವರಾಗಿ ತಿಳಿದುಬರುತ್ತದೆ. ಶ್ರೀ ನೆಹರೂರವರು ಎರಡು ದಿವಸ ಮುಂಚಿತವಾಗಿ ವಾರ್ಧಾಕ್ಕೆ ಬಂದಿದ್ದು ಮಹಾತ್ಮಾಜಿಯವರೊಡನೆ ಬಿಕ್ಕಟ್ಟಿನ ಸಮಸ್ಯೆ, ಅಧಿಕಾರಸ್ವೀಕಾರ, ವೈಸ್ರಾಯರ ಪ್ರಕಟಣೆ, ಇವುಗಳ ಕುರಿತು ಚರ್ಚೆ ನಡೆಯಿಸಿದರು. ಈ ಎರಡೂ ದಿವಸಗಳು ಅವರು ತಮ್ಮ ಊಟಗಳನ್ನು ಮಹಾತ್ಮಾಜಿಯವರೊಂದಿಗೆ ಮಾಡಿದರು. ಹಿಂದೂದೇಶದ ಎಲ್ಲಾ ಭಾಗಗಳಿಂದ ಅಧಿಕಾರ ಸ್ವೀಕಾರವಾಗಬೇಕೆಂದು ಸಂದೇಶಗಳ ಸುರಿಮಳೆ ಬಂದಿರುತ್ತದೆ.

ಫೈಜಾಪುರದ ಕಾಂಗ್ರೆಸಿನ ಲೆಖ್ಖಾಚಾರಗಳು ಸ್ವೀಕರಿಸಲಾದವು. ಕಾಂಗ್ರೆಸ್ಸು ಅಧಿಕ ಸ್ಥಾನಗಳನ್ನು ಪಡೆದ ಎಲ್ಲಾ ಪ್ರಾಂತ್ಯಕೀಯ ಎಸೆಂಬ್ಲಿಯ ಕಾಂಗ್ರೆಸ್ಸ ನಾಯಕರು ವಾರ್ಧಾಕ್ಕೆ ತೆರಳಿರುವರು. ಆರೋಗ್ಯ ನಿಮಿತ್ತ ಪಾಶ್ಚಾತ್ಯಕ್ಕೆ ತೆರಳಿದ ಭುಲಾಭಾಯಿ ದೇಸಾಯಿಯವರು ಕಾರ್ಯಕಾರಿ ಮಂಡಳದ ಸಭೆಗಾಗಿ ಬಂದಿರುವರು. ಇವರು ಈಗಿನ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಇಂಗ್ಲಾಂಡಿನಲ್ಲಿ ಉಂಟಾದ ಸ್ಥಿತಿಯನ್ನು ವಿವರಿಸಿದರು. ಅಲ್ಲಿನ ಪತ್ರಿಕೆಗಳು ಪ್ರಮುಖ ವ್ಯಕ್ತಿಗಳು ಹಿಂದೀಯ ರಾಜಕೀಯದಲ್ಲಿ ಈಗ ಹೆಚ್ಚಿನ ಕುತೂಹಲ ಹೊಂದಿರುವರಾಗಿದ್ದಾರಂತೆ.

ಈ ಕಾರ್ಯಕಾರಿ ಮಂಡಳದಲ್ಲಿ ಅಧಿಕಾರ ಸ್ವೀಕಾರ ಒಂದಲ್ಲದೆ, ಮುಂಬಯಿ, ಒರಿಸ್ಸಾ ಮೊದಲಾದ ಕಡೆಗಳ ಕಾಂಗ್ರೆಸ್ಸ ಕಮಿಟಿಗಳ ಕುರಿತು ಚರ್ಚೆ ನಡೆಯುವುದು.

(ಹೆಚ್ಚಿನ ವಾರ್ತೆಗಳಿಗೆ ೧೪ನೇ ಪುಟವನ್ನು ನೋಡುವುದು.)

ಅಧಿಕಾರಸ್ವೀಕಾರ ಸಮಸ್ಯೆ

ತಾ ೫ರಲ್ಲಿ ಪ್ರಾರಂಭವಾದ ವರ್ಕಿಂಗ ಕಮಿಟಿಯ ಸಭೆಯು ತಾ ೬ರಲ್ಲಿ ಮುಂದುವರಿಯಲಿದೆ. ಗಾಂಧೀಜೀಯವರು ಆ ಸಭೆಯಲ್ಲಿ ಭಾಗವಹಿಸಿದರು. ಅಧಿಕಾರಸ್ವೀಕಾರದ ಕುರಿತು ಬೇಗನೆ ಇತ್ಯರ್ಥವಾಗಲಿದೆ. ಎಲ್ಲಾ ಪ್ರಮುಖರು ಆ ಕುರಿತು ಹೇಳಬೇಕಾಗಿರುವ ಅಭಿಪ್ರಾಯಗಳನ್ನು ಮಹಾತ್ಮಾಜಿಯವರು ಶಾಂತಚಿತ್ತರಾಗಿ ಲಾಲಿಸಿದರು.

ವೈಸ್ರಾಯರ ಸಂದೇಶ, ಜೆಟ್ಲೆಂಡರ ಭಾಷಣ, ದಿಲ್ಲಿ ಠರಾವುಗಳ ಕುರಿತು ಕಾರ್ಯಕಾರಿ ಮಂಡಳವು ಐದು ತಾಸುಗಳ ತನಕ ಚರ್ಚೆನಡೆಯಿಸಿತು.

ಅಧಿಕಾರಸ್ವೀಕಾರವಾದರೆ ಅಲ್ಪಸ್ಥಾನಗಳನ್ನು ಪಡೆದ ಬಂಗಾಳದಲ್ಲೂ ಕಾಂಗ್ರೆಸ್ಸಿಗೆ ಹೆಚ್ಚಿನ ಬಲ ದೊರಕುವಂತಿದೆ ಎಂದೂ, ಕಾರಣ, ಕಾಂಗ್ರೆಸ್ ಅಧಿಕಾರಸ್ವೀಕಾರ ಮಾಡುವುದಾದರೆ, ಮಿ. ಫಜಲುಲ್ ಹಕ್ಕರ ಪ್ರಜಾಪಕ್ಷದ ಅನೇಕರು ಕಾಂಗ್ರೆಸ್ಸಿನೊಡನೆ ಸೇರುವರಾಗಿಯೂ ತಿಳಿದುಬರುತ್ತದೆ.

ಮಹಾತ್ಮಾಜಿಯವರು ಬಹಳ ಸಂತೋಷಚಿತ್ತರಾಗಿದ್ದು, ನೆರೆದ ಅನೇಕ ರಾಷ್ಟ್ರೀಯ ಪ್ರಮುಖರೊಡನೆ ಹಾಸ್ಯದ ನುಡಿಗಳನ್ನು ಆಡಿದರಂತೆ.

ಮಹಾತ್ಮಾಜಿಯವರು ಒಂದು ಪತ್ರಕವನ್ನು ಸಿದ್ಧಗೊಳಿಸಿದ್ದಾರೆ.

ರಾಷ್ಟ್ರಪತಿಯವರು ಈ ಮೂರು ತಿಂಗಳ ಬಿಕ್ಕಟ್ಟಿನ ಪರಿಸ್ಥಿತಿ, ವೈಸ್ರಾಯರ ಸಂದೇಶ, ಕಾಂಗ್ರೆಸು ಕೇಳುವ ಭರವಸೆ, ಅಧಿಕಾರಸ್ವೀಕಾರ, ಜೆಟ್ಲೆಂಡರ ಭಾಷಣಗಳು, ಪ್ರಜಾಭಿಪ್ರಾಯ (ವೈಸ್ರಾಯರ ಭಾಷಣದ ಕುರಿತು ಮತ್ತು ಅಧಿಕಾರಸ್ವೀಕಾರದ ಕುರಿತು) ಇವುಗಳ ಕುರಿತು ದೊಡ್ಡದೊಂದು ಭಾಷಣಮಾಡಿದ್ದರೂ, ಅಧಿಕಾರಸ್ವೀಕಾರದ ಸಮಸ್ಯೆಯ ಕುರಿತು ಅವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಲಿಲ್ಲವಂತೆ.

ಪ್ರಜಾಭಿಪ್ರಾಯವು ಕಾಂಗ್ರೆಸ್ಸು ಅಧಿಕಾರಸ್ವೀಕಾರವನ್ನು ಮಾಡಬೇಕಾಗಿರುವುದರಿಂದ, ಕಾಂಗ್ರೆಸು ಅಧಿಕಾರಸ್ವೀಕಾರ ಮಾಡುವಂತಿದೆ ಎಂದೂ ಮಹಾತ್ಮಾಜಿಯವರು ಆ ಕುರಿತು ಒಂದು ಠರಾವನ್ನು ಬರೆಯುವರಾಗಿ ಬಲವಾದ ವಾರ್ತೆಯಿದೆ.

ತಾತ್ಕಾಲಿಕ ಮಂತ್ರಿಮಂಡಳಗಳ ರಾಜಿನಾಮೆ.

ವೈಸ್ರಾಯರ ಪ್ರಕಟಣೆಯಲ್ಲಿ, ಬಿಕ್ಕಟ್ಟಿನ ಪರಿಸ್ಥಿತಿ ನಿವಾರಣೆಯ ಹಾದಿಯಿರುವುದರಿಂದ ಮತ್ತು ವಾರ್ಧಾದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಮಂಡಳವು ಅಧಿಕಾರ ಸ್ವೀಕಾರವಾಗುವ ನಿರ್ಣಯ ಮಾಡುವ ಹಾಗಿರುವುದರಿಂದಲೂ, ಕಾಂಗ್ರೆಸ್ ಅಧಿಕ ಸ್ಥಾನಗಳನ್ನು ಪಡೆದ ಆರು ಪ್ರಾಂತ್ಯಗಳಲ್ಲಿ ತಾತ್ಕಾಲಿಕ ಮಂತ್ರಿ ಮಂಡಳಗಳು ನಿವೃತ್ತಿ ಹೊಂದುವವಾಗಿ ತಿಳಿದುಬರುತ್ತದೆ.

ಸಂಯುಕ್ತ ಪ್ರಾಂತ್ಯಗಳ ತಾತ್ಕಾಲಿಕ ಮಂತ್ರಿ ಮಂಡಳವು ಈಗ ತನ್ನ ರಾಜಿನಾಮೆಯನ್ನು ಕೊಟ್ಟಿರುತ್ತದೆ. ಆದರೆ ಅದು ಸರಕಾರದಿಂದ ಸ್ವೀಕರಿಸಲ್ಪಡಲಿಲ್ಲ.

ಮುದ್ರಾಸಿನ ತಾತ್ಕಾಲಿಕ ಮಂತ್ರಿ ಮಂಡಳವು ಮೊನ್ನೆ ಗವರ್ನರರೊಡನೆ ಕುಳಿತು ಫೋಟೋ ತೆಗಿಯಿಸಲಾಯಿತು. ಬರುವ ವಾರದೊಳಗೆ ಕಾಂಗ್ರೆಸು ಅಧಿಕಾರಸ್ವೀಕಾರ ಮಾಡುವುದಾದರೆ ಈ ಮಂತ್ರಿಮಂಡಳವು ರದ್ದಾಗಲಿರುವುದರಿಂದ, ಮೇಲಿನ ಸಮಾರಂಭವು ಕೊನೆಯ ಸತ್ಕಾರಕೂಟವೆಂದು ಭಾವಿಸಲಾಗಿದೆ.

ಚಿಕ್ಕ ವಿದ್ಯಾರ್ಥಿಯೊಬ್ಬನ ಮರಣ

ಉಪಾಧ್ಯಾಯರು, ಆತನು ತನ್ನ ಪಾಠವನ್ನು ಸರಿಯಾಗಿ ಓದಿಬಾರದಕ್ಕೆ ಬರೇ ತಲೆ ಮತ್ತು ಕಾಲಿನಲ್ಲಿ ಕಠಿಣವಾದ ಬಿಸಿಲಿನಲ್ಲಿ ನಿಲ್ಲಿಸಿದರು. ಹುಡುಗನು ಪ್ರಜ್ಞೆ ತಪ್ಪಿದವನು ಮೃತನಾದನು. ಜುಲುಂದಾರ ಎಂಬ ಒಂದು ಹಳ್ಳಿಯ ಶಾಲೆಯಲ್ಲಿ ಬೇಸಿಗೆ ಕಾಲದ ಕಠಿಣ ಸೂರ್ಯನೆ ವಿದ್ಯಾರ್ಥಿಯ ಮರಣಕ್ಕೆ ಕಾರಣನಂತೆ.

ಸಹಕಾರ ಪರಿಷತ್ತು

ರಿಜರ್ವ ಬ್ಯಾಂಕಿಗೆ ಒಂದು ವಿನಂತಿ.

ಅಖಿಲ ಭಾರತ ಸಹಕಾರ ಪರಿಷತ್ತು ಬೆಂಗಳೂರಿನ [illegible] ಬೇಂಕಿನ ಕಟ್ಟಡದಲ್ಲಿ ಶ್ರೀ ಗಳಾದ ರಾಮದಾಸ್ ಪಂತಲುಗಳವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಪ್ರಾರಂಭವಾಗಿ ಎರಡು ದಿವಸಗಳ ಅಧಿವೇಶನವನ್ನು ನಡೆಯಿಸಿತು.

ಗ್ರಾಮ, ಸಾಲದ ಬಗ್ಗೆ ರಿಸರ್ವ ಬ್ಯಾಂಕಿನಿಂದ ಪ್ರಕಟವಾದ [illegible] ನ್ನು ತೀವ್ರವಾಗಿ ವಿಮರ್ಶಿಸಿ, ಸಹಕಾರಿ [illegible] ಅದರ [illegible] ಅಸಮಾಧಾನವಿದೆ ಎಂಬುದಾಗಿ ಚರ್ಚೆ ನಡೆದು ಠರಾವು ಮಾಡಲಾಯಿತು. ರಿಸರ್ವ ಬ್ಯಾಂಕಿನ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ರಿಸರ್ವ ಬ್ಯಾಂಕಿನ ೧೭ನೇ ಕಲ್ಮಿನ ಮೇರೆಗೆ ಸಿಗುವ ಸಾಲಗಳು [illegible] ಸಹಕಾರಿ ಪತ್ರಗಳ ಭದ್ರತೆಯ ಮೇಲೆ ಕೊಡುವ ಹಾಗೆ ರಿಸರ್ವ ಬ್ಯಾಂಕಿನ ಸೆಂಟ್ರಲ್ ಬೋರ್ಡನ್ನು ಕೇಳಿಕೊಳ್ಳಬೇಕೆಂದಾಯಿತು. ಅಲ್ಲದೆ ಪ್ರಾಂತ್ಯಕೀಯ ಸಹಕಾರಿ ಬ್ಯಾಂಕುಗಳಿಗೆ ಒಳ್ಳೆ ರಿಯಾಯತಿ ದರದಲ್ಲಿ ಚಿಕ್ಕ ವಾಯಿದೆಯ ಸಾಲಗಳನ್ನು ಒದಗಿಸಿಕೊಡಬೇಕಾಗಿ ರಿಸರ್ವ ಬ್ಯಾಂಕಿನೊಡನೆ ಕೇಳಬೇಕೆಂದಾಯಿತು. ಜಮೀನಿನ ಮೇಲೆ ಸಾಲಕೊಡುವ ಬ್ಯಾಂಕುಗಳು ಬ್ಯಾಂಕ್ ಸ್ಟಾಂಪ್ ಕಂಪನಿ ಧೂಪವನ್ನು ಜೋಡಬಾರದೆಂದೂ ಒಂದು ಠರಾವು ಮಂಜೂರಾತಿ ಹೊಂದಿತು.

ಸಹಕಾರಿ ಬ್ಯಾಂಕುಗಳ ಮೇಲೆ ಆದಾಯ ತೆರಿಗೆಯನ್ನು ಹೊರಿಸಬಾರದಾಗಿ ಸರಕಾರವನ್ನು ಕೇಳಿಕೊಳ್ಳಬೇಕೆಂದಾಯಿತು.

ಸಾಲದ ಬಡ್ಡಿ ದರಗಳನ್ನು ಏರಿಸಬಾರದಾಗಿಯೂ ಸಹಕಾರಿ ಬ್ಯಾಂಕುಗಳಿಂದ ಆದಷ್ಟು ಸುಲಭ ದರದಲ್ಲಿ ಸಾಲಗಳನ್ನು ಒದಗಿಸಬೇಕಾಗಿಯೂ ಆದರಿಂದ ಸಹಕಾರಿ ಬ್ಯಾಂಕುಗಳಿಗೆ ಸುಲಭ ದರದಲ್ಲಿ ಸಾಲ ಕೊಡುವ ಏರ್ಪಾಡಾಗಬೇಕೆಂದೂ ಠರಾವಾಯಿತು. ಸುಲಭ ದರದ ಬಡ್ಡಿಯು ಸಹಕಾರದ ಧ್ಯೇಯವು.

ಉದ್ದ ವಾಯಿದೆಯ ಸಾಲಗಳು ಹೆಚ್ಚಾಗಿ ವ್ಯವಸಾಯಗಾರರಿಗೆ ಮಾತ್ರ ಕೊಡಬೇಕಾಗಿ ನಿರ್ಣಯವಾಯಿತು. ಸಹಕಾರಿ ಚಳವಳಿಯಲ್ಲಿ ಸ್ತ್ರೀಯರೂ ಹೆಚ್ಚಿನ ಪರಿಶ್ರಮ ವಹಿಸುವ ಕುರಿತು ಪ್ರಚಾರ ನಡೆಯಿಸಬೇಕಾಗಿ ಠರಾವಾಯಿತು.

ಪ್ರಾಂತೀಕ ಸರಕಾರಗಳಿಂದ ಸಹಕಾರಿ ಬ್ಯಾಂಕುಗಳಿಗೆ ಬೇಕಾದ ಧನ ಸಹಾಯ ಮಾಡುವರೆ ಕೇಳಿಕೊಳ್ಳಬೇಕೆಂದಾಯಿತು.

ಸಧ್ಯದಲ್ಲೇ ಪೇರಿಸ್ ನಗರದಲ್ಲಿ ಜರಗಲಿರುವ (೧೯೩೭ರಲ್ಲಿ) ಅಂತರಾಷ್ಟ್ರೀಯ ಸಹಕಾರಿ ಪರಿಷತ್ತಿಗೆ ಹಿಂದೀಯ ಪ್ರತಿನಿಧಿಗಳನ್ನು ಆರಿಸಲಾಯಿತು.

ಹೀಗೆ ಅನೇಕ ಠರಾವುಗಳನ್ನು ಮಾಡಿ ಪರಿಷತ್ತು ಮುಕ್ತಾಯವಾಯಿತು.

"ಹಿಂದೂದೇಶಕ್ಕೆ ಅವಮಾನ!"

ನಮಗೆ ಬೇರೊಂದು ತರದ ಸ್ಕೌಟುದಳ ಬೇಕು.

ಗಡಿನಾಡಿನಲ್ಲಿ ಅಶಾಂತಿ.

ಹಿಂದುಸ್ಥಾನದಲ್ಲಿ ಮಾನ್ಯ (honour) ಎಂಬ ಶಬ್ದವಿರುವುದಿಲ್ಲ, ಆದುದರಿಂದ ಹಿಂದೀಯರು ಮಾನ್ಯವಂತರಲ್ಲ ಎಂಬುದಾಗಿ ಸ್ಕೌಟ್ ಮಂಡಳದ ಮುಖ್ಯನಾಯ್ಕರಾದ ಬೆಡನ್ ಪೊವೆಲ್ಲರು ಲಂಡನಿನಲ್ಲಿ ತಮ್ಮ ಹಿಂದೀಯ ಪ್ರಯಾಣದ ಕುರಿತು ಭಾಷಣ ಮಾಡುತ್ತಿರುವಾಗ ಆಡಿದುದಕ್ಕಾಗಿ ಸಮಸ್ತ ಹಿಂದೂದೇಶದಲ್ಲೆಲ್ಲಾ ಅವರ ಆ ನುಡಿಗಳನ್ನು ಖಂಡಿಸಿ, ಸಭೆ ಇತ್ಯಾದಿ ಚಳವಳಗಳು ಪ್ರಾರಂಭವಾಗಿವೆ. ಮುದ್ರಾಸು ನಗರಸಭೆಯಲ್ಲಿ ಆ ಕುರಿತು ಒಂದು ಠರಾವು ಮೊನ್ನೆದಿನ ಮಂಜೂರಾತಿ ಹೊಂದಿದೆ. ಮುಖ್ಯ ಸ್ಕೌಟರ ಆ ಮಾತುಗಳಿಂದ ಹಿಂದೂದೇಶಕ್ಕೆ ಮಹಾ ಅವಮಾನವಾಗಿದೆಂದೂ, ಹಿಂದೀಯರು ಮಹಾ ಗುಣವಂತರಾದುದರಿಂದ ಹಿಂದೂದೇಶವು ಅನೇಕ ಪ್ರಸಿದ್ಧ ವ್ಯಕ್ತಿಗಳ ಸ್ಥಾನವಾಗಿರುತ್ತದೆಂದೂ, ಮುಖ್ಯ ಸ್ಕೌಟರ ಈ ಅವಮಾನಕ್ಕಾಗಿ ನಗರ ಸಭೆಯ ಅಧೀನದಲ್ಲಿರುವ ಶಾಲೆಗಳ ಸ್ಕೌಟ್ ದಳಗಳ ಸ್ಕೌಟ್ ಮಂಡಲದೊಡನಿರುವ ಸಂಬಂಧವನ್ನು ಕಿತ್ತುಹಾಕಿ ಮಾನ್ಯ ಪಂಡಿತ ಮದನಮೋಹನ ಮಾಲವೀಯರ ಸೇವಾಸಮಿತಿಗೆ ಆ ಸ್ಕೌಟ್ ದಳಗಳನ್ನು ಕೂಡಿಸಬೇಕೆಂದೂ, ಠರಾವಿನ ಅಭಿಪ್ರಾಯವಾಗಿರುತ್ತದೆ. ಠರಾವು ಅಧಿಕಮತದಿಂದ ಮಂಜೂರಾತಿಯನ್ನು ಹೊಂದಿತು.

ಮುಖ್ಯ ಸ್ಕೌಟರ ತಿರಸ್ಕಾರದ ಕುರಿತು ಆಲೋಚಿಸಲು ಶ್ರೀ ನರಿಮನರ ಅಧ್ಯಕ್ಷತೆಯಲ್ಲಿ ಮುಂಬ್ಬಾಯಿಯಲ್ಲಿ ಜರಗಿದ ವಿದ್ಯಾರ್ಥಿಗಳ ಮಹಾಸಭೆಯಲ್ಲಿ ಸಾರ್ವಭೌಮತೆ ಕಲೆಕಿರುವ ಬೆಡನ್ ಪೊವೆಲ್ಲರ ಸ್ಕೌಟ್ ಕ್ರಮವು ಹಿಂದೂದೇಶಕ್ಕೆ ಬೇಡವೆಂದೂ, ನವೀನವಾದೊಂದು ಸ್ಕೌಟ್ ಕ್ರಮವು ಹಿಂದೂ ರಚನೆಯಾಗಬೇಕೆಂದೂ ಠರಾವು ಮಾಡಲಾಯಿತು. ಆ ಬಗ್ಗೆ ಒಂದು ಸಮಿತಿಯ ರಚನೆಯಾಗಿರುತ್ತದೆ.

ನೆಲಕಂದಾಯವನ್ನು ಹೆಚ್ಚಿಸುವ ಪ್ರಶ್ನೆಯ ಕುರಿತು ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಕರಾಚಿಯ ಪ್ರೊಫೆಸರ್ ಘನಶ್ಯಾಮದಾಸರು ಗವರ್ನರರನ್ನು ಕಂಡಿರುವರೆಂದೂ ಆ ವಿಷಯ ಚರ್ಚೆ ನಡೆದಿರುತ್ತದೆಂದೂ ತಿಳಿದುಬರುತ್ತದೆ.

ಗಡಿನಾಡುಗಳಲ್ಲಿ ಅಶಾಂತಿ

ಗಡಿನಾಡಿನ ಸ್ಥಿತಿಯು ಸಂಪೂರ್ಣ ಶಾಂತಿಗೊಳ್ಳಲಿಲ್ಲ. ಮೊನ್ನೆ ದಿನ ೩೦ನೆ [illegible] ತಂಡವೊಂದು ಒಂದು ಹಳ್ಳಿಯ ಮೇಲೆ ಧಾಳಿಯಿಟ್ಟಿತು. ಒಬ್ಬ ಹುಡುಗನನ್ನೂ [illegible] ಕದ್ದೊಯ್ದು [illegible] ಬಟಾಪಟಿಯಲ್ಲಿ [illegible] ಹುಡುಗನನ್ನು ಹಿಂದಕ್ಕೆ ಬಿಟ್ಟು ಹುಡುಗಿಯನ್ನು ಹಿಡುಕೊಂಡು ಪಲಾಯನ ಮಾಡಿರುವರು. ಸರಕಾರ ಸೈನ್ಯದಳವು ಈ ತುಂಟರನ್ನು ತಕ್ಕ ಪ್ರಾಯಶ್ಚಿತ್ತಕೊಳಪಡಿಸಲು ಪರಿಶ್ರಮಿಸುತ್ತದೆ. ಈ ತೆರದ ಅಮಾನುಷಿಕ ಸ್ಥಿತಿಯನ್ನು ನಿವಾರಿಸುವರೆ ಸರಕಾರವೂ ಡಾ। ಖಾನ್ ಸಾಹೇಬ್ ಇತ್ಯಾದಿ ಮಹನೀಯರು ಭಾರೀ ಪ್ರಯತ್ನಪಡುತ್ತಿದ್ದಾರೆ. ಕದ್ದೊಯ್ದ ಹುಡುಗ ಹುಡುಗಿ ಸ್ತ್ರೀಯರನ್ನು ಬಿಟ್ಟುಬಿಡಬೇಕಾದರೆ ತಮಗೆ ಪ್ರತಿಫಲವಾಗಿ ಇಂತಿಷ್ಟೇ ಹಣಕೊಡಬೇಕಾಗಿ ತುಂಟರು ಕೇಳುತ್ತಿರುವರಾಗಿಯೂ, ಹೀಗೆ ಅವರ ಬಂಧನಕ್ಕೊಳಗಾದ ಹಿಂದೂಗಳನ್ನು ರಕ್ಷಿಸಲು ನಿಧಿಕೂಡಿಸಬೇಕಾಗಿಯೂ, ಸಮಗ್ರ ಭಾರತದ ಹಿಂದೂಗಳು ಈ ಕುರಿತು ಧನಸಹಾಯ ಮಾಡಬೇಕೆಂದೂ, ಕಾಲವಿಳಂಬವಾಗಬಾರದೆಂದೂ ಗಡಿನಾಡಿನಿಂದ ಹಿಂತಿರುಗಿದ ಶ್ರೀ ಕೃಷ್ಣಕಾಂತ ಮಾಳವೀಯರು ವಿನಂತಿಮಾಡಿರುತ್ತಾರೆ.

ರತನ್‌ಚಂದರ ಬಿಡುಗಡೆ.

ಹದಿನೆಂಟು ವರ್ಷ ಮುಸ್ಸೋರಿಯಲ್ಲಿ ಕಾರಾಗೃಹವಾಸವನ್ನು ಅನುಭವಿಸಿದ ಅಮೃತಸರದ ಮಾರ್ಶೆಲ್ ಲಾ ಕೈದಿಗಳಾದ ಮಹಾಶಯ ರತನಚಂದರು ಮೊನ್ನೆ ದಿನ ಬಿಡುಗಡೆಹೊಂದಿರುವರು. ಬಿಡುಗಡೆ ಹೊಂದಿದ ಕೂಡಲೇ ಅವರು ಈಗ ಮುಸ್ಸೋರಿನಲ್ಲಿರುವ ಪಂಡಿತ ಮಾಳವೀಯರ ಭೇಟಿಮಾಡಿದರು. ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳ ಕುರಿತು ವಿಚಾರದ ಮಾತುಕತೆಗಳನ್ನು ಇವರು ಪಂಡಿತರೊಡನೆ ನಡೆಯಿಸಿದರು. ಅಷ್ಟು ಕಾರಾಗೃಹವಾಸದಲ್ಲಿದ್ದರೂ, ಅವರಲ್ಲಿದ್ದ ದೇಶವಾತ್ಸಲ್ಯ, ದೇಶಸೇವಾಸುರಾಗವೂ ಒಂದಿಷ್ಟೂ ತಣ್ಣಗಾಗಿಲ್ಲವೆಂದು ಪಂಡಿತ ಮದನಮೋಹನ ಮಾಳವೀಯರ ಅಭಿಪ್ರಾಯವಾಗಿರುತ್ತದೆ.

ಸರ್ ಪೊಚ್ಖನ್‌ವಾಲರ ನಿಧನ.

ಸೆಂಟ್ರಲ್ ಬೇಂಕ್ ಆಫ್ ಇಂಡಿಯಾ ಎಂಬ ಮುಂಬಯಿಯ ಪ್ರಸಿದ್ಧ ಬ್ಯಾಂಕಿನ ಸ್ಥಾಪನಾಚಾರ್ಯರೂ, ವ್ಯವಸ್ಥಾಪಕರೂ, ಮೊನ್ನೆಯ ತನಕ ಸದ್ರಿ ಬೇಂಕಿನ ಮೆನೇಜಿಂಗ್ ಡೈರೆಕ್ಟರರೂ ಆಗಿದ್ದ ಸರ್ ಪೊಚಖನ್ವಾಲರು ಮೊನ್ನೆ ತಾ ೪ರಲ್ಲಿ ದೈವಾಧೀನರಾದರು. ದಿವಂಗತರು ಬರೇ ಸಾಧಾರಣ ತರಗತಿಯಿಂದ ತಮ್ಮ ವಿಶೇಷ ಬುದ್ಧಿಚಾತುರ್ಯದಿಂದಲೇ ಉನ್ನತ ಸ್ಥಾನವನ್ನು ಹೊಂದಿದವರು. ಸೆಂಟ್ರಲ್ ಬೇಂಕಿಗೆ ಲಂಡನಿನಲ್ಲೂ, ಹಿಂದೂದೇಶದ ಸರ್ವಸಾಧಾರಣ ಎಲ್ಲಾ ಪ್ರಮುಖ ಕೇಂದ್ರಗಳಲ್ಲಿಯೂ ಶಾಖೆಗಳಿವೆ. ಸಾವಿರಾರು ಹಿಂದೀಯರಿಗೆ ಈ ಸಂಸ್ಥೆಯು ಒಂದು ಜೀವಾಳವಾಗಿರುತ್ತದೆ. ದಿವಂಗತರ ಆತ್ಮಕ್ಕೆ ಶಾಂತಿ ಇರಲಿ.

ಚುನಾವಣಾ ಚಟುವಟಿಕೆಗಳು.

ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿ ಪರನಾಗಿ ಜ್ಞಾನ್ಸಿ ಜಾಲೋನ [illegible] ವಿಭಾಗದ ರೂರಲ್ ಮುಸ್ಲಿಮ ಸೀಟಿಗೆ ಮತ್ತೊಮ್ಮೆ ಚುನಾವಣೆಯಾಗಲಿದೆ. ಕಾಂಗ್ರೆಸ್ಸಿನ ಪರವಾಗಿ ಮುಸ್ಲಿಮ ಉಮೇದ್ವಾರರೊಬ್ಬರು ನಿಂತಿರುವರು. ಮುಸ್ಲಿಮ್ ಕಾಂಗ್ರೆಸ್ ಉಮೇದ್ವಾರರ ಪರವಾಗಿಯೂ ಮುಸ್ಲಿಮ ಭೂರಿ ಜನರನ್ನು ಕಾಂಗ್ರೆಸ್ಸಿನಲ್ಲಿ ಸೇರಿಸಿಕೊಳ್ಳುವ ಪ್ರಚಾರಕಾರ್ಯ ನಡೆಯಿಸಲು ರಾಷ್ಟ್ರಪತಿ [illegible] ಈ [illegible] ಗದ ಪ್ರವಾಸವನ್ನು [illegible] ವಾರ [illegible] ತಿಳಿದುಬರುತ್ತದೆ.

ಕಲೆಗಳನ್ನು ಬಿಡದೆ ಅದು ಗುಣಪಡಿಸುತ್ತದೆ

ಬರೀ ಗಾಯ ಇತ್ಯಾದಿಗಳಿಗೆ ಜಾಂಬಕನ್ನು ಉಪಯೋಗಿಸಿರಿ.

ಯಾವದಾದರೂ ಕುರುವೆ ಮೇಲೆಯೂ [illegible] ಹೊಂದಿದ ಭಾಗದ [illegible] ರೋಗವಾದ ಚರ್ಮದ ಮೇಲೆಯೂ ಜಾಂಬಕನ್ನು ತಾಗಿಸಿದ ಕೂಡಲೆ, ನೋವು ಒಡನೆ ಮಾಯವಾಗಲು ಪ್ರಾರಂಭವಾಗುವುದು. ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ಮುಲಾಮು ಒಳಹೊಕ್ಕು ರೋಗಾಣುಗಳನ್ನು ನಾಶಪಡಿಸಿ ಅಲ್ಲಿರುವ ವಿಷಕ್ರಿಮಿ ಇತ್ಯಾದಿಗಳನ್ನು ಹೊರಗೆಡಹುತ್ತದೆ. ಜಾಂಬಕ್‌ನಿಂದ ಕುರುಗಳು, ಗಾಯಗಳು ಅತಿ ಬೇಗನೆ ಗುಣಹೊಂದುತ್ತವೆ. ಜಾಂಬಕನ್ನು ತುರಿಕಜ್ಜಿ, ಹೋಲಿಕಜ್ಜಿ, ಬೊಕ್ಕೆ, ಸುಟ್ಟಗಾಯ, ಮಹಾಕಾಲು, ಮುಲ್ಲ ಇತ್ಯಾದಿಗಳಿಗೆ ಉಪಯೋಗಿಸಬಹುದು. ರೂಪಾಯಿ 1 ಮತ್ತು 2-4-0 ಪ್ರಕಾರ ಸಾಂಬಕ್ ಎಲ್ಲಾ ಕಡೆಗಳಲ್ಲೂ ಮಾರಲ್ಪಡುತ್ತದೆ.

ಏಜಂಟರು:— ಮೆಸರ್ಸ್ ದಾಧಾ ಅಂಡ್ ಕೋ, ಪಿ. ಟಿ. ಮದ್ರಾಸು.

ಇದರಲ್ಲಿ ಪಾಷಾಣಗಳ ಕೂಟ್ಟು ಮಿಶ್ರವಿಲ್ಲ.

ಝಾಂಬಕ್

Zam Buk

ಯುದ್ಧವು ಪ್ರಾರಂಭವಾಗುವುದೆ?

ಇತ್ತೀಚೆಗೆ ರಷ್ಯದಲ್ಲಿ ಅನೇಕರು ಗಲ್ಲಿಕ್ಕೆ [illegible]ಲ್ಪಟ್ಟರು. ಅನೇಕ ದೊಡ್ಡ ದೊಡ್ಡ ಸರಕಾರಿ ಅಧಿಕಾರಿಗಳು ಈ ಶಿಕ್ಷೆಗೆ ಒಳಗಾಗಿರುವರು. ಇನ್ನು, ರಷ್ಯದ ನ್ಯಾಯಾಧಿಕರಣಿಸಿಕೊಂಡ ಮಹಾಪುರುಷರ ಮಹಾ ತಂಡವೊಂದು ಸಂಪೂರ್ಣವಾಗಿ ಗಲ್ಲಿಗೇರಿಸಲ್ಪಟ್ಟಿತು. ಒಳಸಂಚಿಗಾಗಿ ಈ ತೆರದ ಶಿಕ್ಷೆ ವಿಧಿಸಲಾದುದಂತೆ ಈ ರೀತಿ ಕೊಲೆಮಾಡಲ್ಪಟ್ಟವರ ಸಂಖ್ಯೆಯು, ಕೆಲವರು ನೂರಕ್ಕೆ ಮಿಕ್ಕಿರಬಹುದೆಂದೂ, ಕೆಲವರು ಸಾವಿರಕ್ಕೆ ಮಿಕ್ಕಿರಬಹುದೆಂದೂ ಹೇಳುತ್ತಾರೆ. ಸೋವಿಯಟ್ಟಿನ ಪ್ರತಿಯೊಂದು ಇಲಾಖೆಯಲ್ಲಿ ಒಳಸಂಚು ನಡೆಯುತ್ತದಂತೆ, ಸೇನಾ ಅಧಿಕಾರಿಗಳಿಂದ ವ್ಯವಸಾಯ ಅಧಿಕಾರಿಗಳ ವರೆಗೂ ಕೆಲವರು ಒಳಸಂಚು ನಡೆಸುತ್ತಿದ್ದಾರಂತೆ ಅವರೆಲ್ಲರೂ ಜರ್ಮನಿಯ ಯಾ ಜಪಾನಿನ ಲಂಚಕ್ಕೆ ಒಳಗಾಗಿರುವರೆಂದೂ ಸ್ಟೈಲೀನನು ಅನ್ನುತ್ತಿದ್ದಾನೆ. ಸ್ಯಾಬೆರಿಯವನ್ನು ಜಪಾನಿಗೂ ಪಶ್ಚಿಮ ರಷ್ಯವನ್ನು ಜರ್ಮನಿಗೆ ಒಪ್ಪಿಸುವ ತೆರದ ಒಳಸಂಚು ನಡೆಯುತ್ತಿತ್ತಂತೆ ಜರ್ಮನಿ ಮತ್ತು ಜಪಾನಿನೊಡನೆ ಯುದ್ಧವುಂಟಾದರೆ ರಣರಂಗದಲ್ಲಿ ಸುಮ್ಮನಿರುವುದು ರೈಲ್ವೆ ಸಂಚಾರವನ್ನು ನಿಲ್ಲಿಸುವುದು, ಸಿಡಿಮದ್ದಿನ ಕಾರ್ಖಾನೆಗಳನ್ನು ಧ್ವಂಸಪಡಿಸುವುದು, ಇವೇ ಮೊದಲಾದುವು ಈ ಒಳಸಂಚಿನ ಕಾರ್ಯಕ್ರಮಗಳಾಗಿದ್ದವು. ಅಲ್ಲದೆ ಸೇನಾಮಂಡಳದೊಳಗೆ ದಂಗೆಯನ್ನುಂಟುಮಾಡುವ ಆಲೋಚನೆಗಳಿದ್ದವು ದೈವವಶಾತ್ ಇವೆಲ್ಲಾ ಬೇಗನೆ ಬೆಳಕಿಗೆ ತರಲಾದುವು

ಒಳಸಂಚಿನ ರಹಸ್ಯಗಳು ಸಮಯಕ್ಕೆ ಸರಿಯಾಗಿ ತಿಳಿದುಬಂದಿರುವುದಾಗಿಯೂ, ಅದರಿಂದ ಅಂಥವುಗಳನ್ನು ತುಳಿದುಹಾಕಲು ಸುಲಭವಾಯಿತೆಂದು ಸ್ಟೈಲೀನಿನ ಅಭಿಪ್ರಾಯ ರಷ್ಯದಲ್ಲಿ ಒಂದು ತರದ ದಂಗೆ ಉಂಟಾಯಿತು, ಕಾರ್ಖಾನೆಗಳು ತಟಸ್ಥವಾಗಿ ನಿಂತುಬಿಟ್ಟುವು, ರೈಲ್ವೇ ಏರ್ಪಾಡುಗಳು ಕ್ರಮವಾಗಿ ನಡೆಯುವುದಿಲ್ಲವೆಂಬ ವಾರ್ತೆಗಳು ಬಂದಿದ್ದವು ಅಂದರೆ, ಸೋವಿಯಟ್ಟಿನೊಳಗೆ ಕೊಳೆಯುವಿಕೆಯು ವಿಸ್ತೃತ ಸಂಭವವಾದುದು ನಿಜವಂತೆ ಅಲ್ಲದೆ ಸೋವಿಯಟ್ಟಿನ ಸ್ಥಿತಿಯು ಸ್ವಲ್ಪಮಟ್ಟಿಗೆ ಕೆಟ್ಟುಹೋಗಿರುತ್ತದೆ ಸ್ಟೈಲೀನನು ತನ್ನ ನಂಬಿಕೆಯಂತ ಅನುಯಾಯಿಗಳ ಸಹಕಾರದಿಂದ ಈ ತರದ ಒಳಸಂಚನ್ನು ಅಡಗಿಸಿ, ಸ್ಥಿತಿಯನ್ನು ಸರಿ ಮಾಡಬಲ್ಲನೆ! ಅಥವಾ ಸ್ಟೈಲಿನನ ಅಂತ್ಯವಾಗುವುದೇ?

ಈ ಪ್ರಶ್ನೆಯು ಐರೋಪ್ಯದಲ್ಲೆಲ್ಲಾ ಚರ್ಚಿಸಲ್ಪಡುತ್ತಿದೆ ಕಾರಣ, ಪ್ರಭುತ್ವದ ಜನಾಂಗಗಳಿಗೆ ತಮಗೆ ರಷ್ಯದಲ್ಲಿ ಒಂದು ವೈರಿಯಾಗಿ ಯೋಗ್ಯತೆಯೂ, ಮಿತ್ರನಾಗಿ ಯೋಗ್ಯತೆಯೂ ಈಗಲೇ ತಿಳಿಯಬೇಕಾಗಿದೆ

ಫ್ರಾನ್ಸ್—ರಷ್ಯಾ ಒಪ್ಪಂದದ ದೆಸೆಯಿಂದ ಮಿತ್ರರುಗಳಾದ ಅನೇಕ ಸೋವಿಯಟ್ ಸೇನಾಧಿಕಾರಿಗಳಿಗೆ ಫ್ರೆಂಚರ ಸಂಗ್ರಾಮ ರಹಸ್ಯಗಳು ತಿಳಿದಿವೆ ಈ ಒಳಸಂಚಿನ ವಾರ್ತೆಗಳನ್ನು ಕೇಳಿ ಫ್ರಾನ್ಸಿಗೆ ಈಗ ಭಯವುಂಟಾಗಿದೆ.

ಐರೋಪ್ಯದ ಶಾಂತಿರಕ್ಷಣೆಯ ಮಹಾಪ್ರಶ್ನೆಯು ಸ್ಟೈಲೀನನ ಮೇಲೆ ಹೊಂದಿಕೊಂಡಿದೆ. ಸೋವಿಯಟ್ಟನ್ನು ಈಗಿನ ಕೊಳೆತ ಸ್ಥಿತಿಯಿಂದ ಮೇಲಕ್ಕೆ ತರಲು ಆತನಿಗೆ ಸಾಧ್ಯವೇ? ಈ ತರದ ಒಳಸಂಚುಗಳು ಮುಂದಕ್ಕೆ ನಡೆಯದಂತೆ ಮಾಡಲು ಆತನಿಂದಾಗುವುದೇ? ಬ್ರಿಟನಿಗೆ ಮತ್ತು ಫ್ರಾನ್ಸಿಗೆ ಈಗ ರಷ್ಯದ ಮೇಲಿನ ಭರವಸೆ ತಪ್ಪುತ್ತಿರುವುದರಿಂದ, ಅವರು ರಷ್ಯವಿರಹಿತವಾಗಿ ಸಂಗ್ರಾಮ ಸಿದ್ಧತೆಗಳನ್ನು ಮಾಡುತ್ತಿದ್ದಾರೆ ಈ ಕಾರಣದಿಂದಲೆ ಬ್ರಿಟನು, ಜರ್ಮನಿಯ ಮತ್ತು ಇಟಲಿಯ ಕಡೆ ಸ್ವಲ್ಪ ಸ್ನೇಹಭಾವವನ್ನೂ ತೋರಿಸುವುದು. ಆದರೆ, ಫೆಸಿಯುಸ್ಟರು ಸಮಾಧಾನ ಹೊಂದುವರೆ? ತಮ್ಮ ಕ್ರೂರ ಸಾಹಸವನ್ನು ಅವರು ಮುಂದರಿಸದೆ ಇಷ್ಟರಲ್ಲೇ ಶಾಂತರಾಗುವರೇ?

ಬ್ರಿಟನಿನಿಂದಲೇ ಇನ್ನೊಂದು ಯುದ್ಧವೆ!

"ಇಂಗ್ಲೆಂಡಿನ ಮೇಲೆ ಯಾ ಸಾಮ್ರಾಜ್ಯದ ಇತರ ರಾಷ್ಟ್ರಗಳ ಮೇಲೆ ಅಭಿಕ್ರಮವಾಗುವ ಹಾಗಿಲ್ಲವಂತೆ ಆದರೆ ಸಮಸ್ತಸಾಮ್ರಾಜ್ಯದ ಭದ್ರತೆಯ ಬಗ್ಗೆ ಈಗ ಮಾತುಗಳೇಕೆ?" ಎಂದು ಒಂದು ಜರ್ಮನ್ ಪತ್ರಿಕೆಯ ಟೀಕೆ

"ಬ್ರಿಟನು ಮತ್ತು ಬ್ರಿಟಿಷ ಸಾಮ್ರಾಜ್ಯವು ಯುದ್ಧವನ್ನು ತಪ್ಪಿಸುವ ಅವಸರದಲ್ಲಿ, ಬೇಕು ಬೇಕೆಂತಲೇ ಯುದ್ಧವನ್ನುಂಟು ಮಾಡಬಹುದು

ಮಹಾ ಯುದ್ಧವು ಉಂಟಾದರೆ?

ಸಂಗ್ರಾಮಕ್ಕೆ ಸಮ್ಬಂಧಪಟ್ಟ ಸಂಪೂರ್ಣ ಇಲಾಖೆಯನ್ನು ನಗರದಿಂದ ಎಲ್ಲೋ ನಾಡಿದಲ್ಲಿ ಅಡಗಿಸಿಡುವ ಏರ್ಪಾಡಾಗಿರುತ್ತದೆ, ಬ್ರಿಟನಿನಲ್ಲಿ ಈ ಗುಪ್ತವಾದ ನಾಡುಗಳಲ್ಲಿ ಗುಪ್ತವಾದ ಸ್ಥಳಗಳಲ್ಲಿ, ಗುಪ್ತವಾದ ಕಟ್ಟಡಗಳಲ್ಲಿ ಅದರ ಆಫೀಸು ಏರ್ಪಡಿಸಲಾಗುವುದು ಕಾರಣ, ನೂತನ ಸಂಗ್ರಾಮ ವಿಧಾನ ಪ್ರಕಾರ ಲಂಡನಿನ ಮೇಲೆ ಬಾಂಬಿನ ಸುರಿಮಳೆಯುಂಟಾದರೆ, ದೇಶವನ್ನು ಸುರಕ್ಷಿತವಾಗಿಡುವ ಕಾರ್ಯವು ಕೆಟ್ಟುಹೋಗುತ್ತದಂತೆ ದೇಶರಕ್ಷಣಾ ಇಲಾಖೆಯು ಸುರಕ್ಷಿತವಾಗಿರುವಂತೆ ಈ ಏರ್ಪಾಡು ಮಾಡಲಾಗಿದೆ ಈ ಬಗ್ಗೆ ವಿಶೇಷ ತರದ ಟೆಲಿಫೋನ್ ಮತ್ತು ರೇಡಿಯೊ ಸೌಕರ್ಯಗಳ ಏರ್ಪಾಡಾಗಿರುತ್ತದೆ

ಫ್ರಾನ್ಸಿನ ಕೆಲಸಗಾರರಿಗೆ ಒಂದು ವಿಶೇಷ ಸೌಕರ್ಯ

ಫ್ರಾನ್ಸಿನ ಮಜೂರ ಸರಕಾರವು, ಕೆಲಸಗಾರರಿಗೆ ಪ್ರತಿವರ್ಷದಲ್ಲಿ ಹದಿನೈದು ದಿವಸ ತಲಬು ಸಹಿತ ವಿಶ್ರಾಂತಿ ರಜೆಯನ್ನು ಕೊಡಬೇಕಾಗಿ ಕಾಯಿದೆ ಮಾಡಿರುತ್ತದೆ ಅದು ಪ್ರಥಮವಾಗಿ ಇದೇ ಅಗೊಸ್ಟಿನಲ್ಲಿ ಜ್ಯಾರಿಗೆ ಬರುವುವದರಿಂದ ರೈಲ್ವೆ ಸಂಸ್ಥೆಗಳಿಗೆ ಒಂದು ಮಹಾ ಸಮಸ್ಯೆಯು ಉಂಟಾಗುವುದಂತೆ ಸಾಧಾರಣ ೩ ಲಕ್ಷ ಕೆಲಸಗಾರರು ರಜೆ ಪಡೆದು ವಿಹಾರ ಸಂಚಾರಕ್ಕೆ ಹೊರಡುವರು ರೈಲ್ವೆ ದರದಲ್ಲಿ ಶೇಕಡಾ ೬೦ ಸಲಿ ರಿಯಾಯತಿ ಕೊಡಬೇಕೆಂದಾಗಿದೆ ಅಲ್ಲಲ್ಲಿ ವಿಹಾರ ಸ್ಥಳಗಳಲ್ಲಿ ಹೊಟೇಲು ಮ್ಹಾಲಿಕರಿಗೂ ಮಹಾ ಸಮಸ್ಯೆ ಉಂಟಾಗಬಹುದಂತೆ

ವಿದ್ಯಾಭ್ಯಾಸ ಕ್ರಮದಲ್ಲಿ ಸುಧಾರಣೆ

ಸುಮಾರು ಎರಡು ತಿಂಗಳ ಹಿಂದಣದೊಂದು ಸಂಚಿಕೆಯಲ್ಲಿ ನಾವು ಸಾಕಷ್ಟು ಕೂಲಂಕಷವಾಗಿ ಸೂಚಿಸಿದ್ದ ಅಭಿಪ್ರಾಯಗಳನ್ನುಳ್ಳ ಸೆಕೆಂಡರಿ, ಲೋವರ್ ಸೆಕೆಂಡರಿ, ಎಲಿಮೆಂಟರಿ ಮೊದಲಾದ ಶಿಕ್ಷಣ ತರಗತಿಗಳಲ್ಲಿ ಸರಕಾರವು ಎಣಿಸಿರುವ ಸುಧಾರಣೆಗಳನ್ನು ಕುರಿತಾಗಿ ಈಗ ಸಂಪೂರ್ಣ ವಿವರವುಳ್ಳ ಪತ್ರಕವನ್ನೇ ಸರಕಾರವು ಹೊರಡಿಸಿಯದೆ. ವಿದ್ಯಾಭ್ಯಾಸವು ಜನಜೀವನಕ್ಕೆ ನಿಕಟಸಂಬಂಧವುಳ್ಳುದಾಗಿರುವ ಕಾರಣ, ವಿದ್ಯಾಭ್ಯಾಸದಲ್ಲಿಯೂ ಜೀವನದಲ್ಲಾಗುವ ತಿದ್ದುಪಾಟುಗಳಿಗೆ ಅನುಕೂಲವಾಗುವ ತಿದ್ದುಪಾಟುಗಳು ಉಂಟಾಗಬೇಕಾಗಿರುವುದು ವಿಹಿತ. ಎಷ್ಟೋ ಕಮಿಟಿಗಳೂ ಸಮಿತಿಗಳೂ ಇದುವರೆಗೆ ಪ್ರತಿಯೊಂದು ಬಗೆಯ ಶಿಕ್ಷಣವನ್ನು ವಿಮರ್ಶಿಸಿ ರಿಪೋರ್ಟು ಬರೆದಿವೆಯಾದರೂ, ಇವುಗಳಲ್ಲಿ ಹೆಚ್ಚಿನವು ಕಾರ್ಯತಃ ಯಾವುದೊಂದು ಪರಿಣಾಮವನ್ನು ಉಂಟುಮಾಡದೇ ಇವೆ ಜನತೆಯು ಎಷ್ಟುಮಟ್ಟಿಗೆ ಈ ಸುಧಾರಣೆಗಳಾದಲ್ಲಿ ಚೆನ್ನಾಗುವುದೆಂದು ಬೆಂಬಲಕೊಟ್ಟರೂ, ಸುಧಾರಣೆಗಳಾವುವೂ ಆಗಿಲ್ಲ ಈಗ ಸರಕಾರವು ಪ್ರಕಟಿಸಿರುವ ನಿರ್ಣಯದಲ್ಲಿ ಸರ್ವರೂ ವಿಶೇಷ ವಿಚಾರ ಮಾಡತಕ್ಕ ಸಂಗತಿಗಳಿವೆ ಹಾಗೆ ವಿಚಾರ ಮಾಡಿದವರು ತಮ್ಮ ಅಭಿಪ್ರಾಯಗಳ ಮೂಲಕ ಈ ಸುಧಾರಣೆಗಳಿಗೆ ಒಂದು ಗತಿಯನ್ನೂ ರೂಪವನ್ನೂ ಕೊಡಬಹುದಾಗಿದೆ ತಾತ್ಕಾಲಿಕರು ಈ ನಿರ್ಣಯವನ್ನು ಜ್ಯಾರಿಗೆ ತರಲು ಅಸಮರ್ಥರೆಂಬುದಕ್ಕೆ ಅವರಿಗೆ ಅತ್ಯಾವಶ್ಯಕವಾಗಿರುವ ನ್ಯಾಯವಿಧಾಯಕ ಸಭೆಗಳ ಬೆಂಬಲವಿಲ್ಲದಿರುವುದೇ ಸಾಕಷ್ಟು ಕಾರಣವಾಗಿದೆ ಆದರೆ, ಜನರ ಸಾಂಪತ್ತಿಕ, ಸಾಮಾಜಿಕ ಮತ್ತು ರಾಜಕೀಯ ಜೀವನವು ಶಿಕ್ಷಣವನ್ನೇ ಆದರಿಸಿಕೊಂಡಿರುವ ಕಾರಣ, ಈಗ ಸೂಚಿಸಿರುವಂಥ ಬದಲಾವಣೆಗಳನ್ನು ಬಹುಕಾಲ ಹಿಂದಿಡಲು ಬರುವಂತಿಲ್ಲ

ಯುದ್ಧಾತುರತೆ

ಇಂಲಿಗೆ ೨೦ರಂತೆ ೮೦೦೦೦ ಹಳೆಯ ಯೋದ್ಧರು ಬ್ರಿಟಿಷ ಚಕ್ರವರ್ತಿಯವರ ಇದಿರಿನಲ್ಲಿ ಹಾಜರಾಗಿ ಅವರಿಂದ [illegible] ಬಹಳ ಸಹಾನುಭೂತಿ ಪ್ರದರ್ಶಕವಾದ ಸಿರೂಪವನ್ನು ಪಡೆದರು ಇವರಲ್ಲಿ ಸುಮಾರು ೧೦೦೦ ಮಂದಿಯನ್ನು ಕಂಡರಂತೂ ಎಂತಹರ ಎದೆಯೂ ಕರಗಬೇಕಾಗಿ ಇದ್ದರು ಇವರು ಕಳೆದ ಯುದ್ಧದಲ್ಲಿ ಹೇಳಲಾಗದಷ್ಟು ಊನವಾಗುವಷ್ಟು ಕಠಿಣ ಗಾಯಗಳನ್ನು ಪಡೆದಿದ್ದರು 'ಯುದ್ಧದಲ್ಲಿ ಗೆದ್ದರೂ ಸೋತರೂ ಅದೆ ತಹ ಮಹಾ ವಿಪತ್ತು ಎಂಬುದನ್ನು ನೀವೆಲ್ಲರೂ ತಿಳಿದೇ ಇರುವಿರಿ ಈ ಅನುಭವವನ್ನು ನಾವು ಜಗತ್ತಿಗೆ ಸಾರುವುದರಿಂದ ಮಾನವಕೋಟಿಗೆ ಅತಿ ಹೆಚ್ಚಿನ ಉಪಕಾರಮಾಡಿದ ತಾಗುವುದು' ಎಂದ ಚಕ್ರವರ್ತಿಯರೆಂದರು ಜಗತ್ತಿನಲ್ಲಿ ಶಾಂತಿಸ್ಥಾಪನೆ ಹೊಂದಲೆಂದೇ ಅವರ ಈ ಆತ್ಮಪೂರ್ಣ ಉದ್ಗಾರಗಳ ಅದೇ ವೇಳೆ ಸರಿಯಾಗಿ, ಇಟಲಿಯು — ಸ್ಪೈನಿಗೆ ಯುದ್ಧ ಸಾಮಗ್ರಿಗಳು ಸೇರದಂತೆ ಆಲೋಚಿತ [illegible] ಬ್ರಿಟಿಷರೂ ಫ್ರೆಂಚರೂ ಮಾತ್ರ ಪಹರೆ ಕಾಯುವುದನ್ನು ನಾನೊಪ್ಪುವುದಿಲ್ಲ ದಂಗೆಕೋರರಿಗೆ ಜಯದೊರೆಯುತ್ತಿರವಾಗಲೇ ಇವರ ಹೀಗೆ ಮಾಡುವುದರಿಂದ ಸ್ಪೈಯಿನ ಸರಕಾರಕ್ಕೆ ಸಹಾಯವಾಗುವಂತಾಗುವುದಿಲ್ಲವೆ? ಎಂದು ದೂರುತ್ತಿದೆ ಬ್ರಿಟಿಷರನ್ನೆ ದೂರುತ್ತ 'ಇನ್ನು ಕೆಲ ದಿನಗಳೊಳಗಾಗಿ ಏನೆಲ್ಲ ಅದ್ಭುತಕಾಂಡವಾಗಲಿದೆಯೋ ನೋಡುವಿರಂತೆ' ಎಂದು ಅಂತರಂಗ ತಿಳಿದ ಪತ್ರಿಕೆಗಳು ಬರೆದಿವೆ ಜರ್ಮನಿಯೂ ಇವೇ ಮಾತುಗಳನ್ನಾಡುತ್ತಿಲ್ಲವಾದರೂ ಎಲ್ಲ ಸರಕಾರಗಳು ಸೇರಿಯೇ ಈ ಕಾವಲನ್ನಿಡಬೇಕೆನ್ನುತ್ತಿದೆ ಇದು ಕಷ್ಟಸಾಧ್ಯವಾದುದರಿಂದ ಕಾವಲೆಂಬುದು ಮಾಯವಾಗಬಹುದು ಅದ್ಭುತ ವ್ಯಾಪಾರಗಳು ನಡೆಯಬಹುದು ಸ್ಪೈಯಿನಿನ ಕಾದಾಟಕ್ಕೆ ಯೂರೋಪೇ ರಣರಂಗವಾಗಬಹುದು ಎಂಬ ಅಂಜಿಕೆಗೆ ಕಾರಣವುಂಟಾಗಿದೆ

ನಮ್ಮ ರೈಲ್ವೇಗಳು

ವೆಜ್‌ವುಡ್ ಕಮಿಟಿಯ ರಿಪೋರ್ಟು ಪ್ರಕಟವಾಗಿದೆ ಜನತೆಗೆ ರೈಲ್ವೆಗಳ ಆಡಳಿತವನ್ನು ಒಪ್ಪಿಸಬೇಕಾಗಿ ಇಚ್ಛೆಯಿದೆಯಾದರೆ, ಜನತೆಯು ರಾಜಕೀಯ ಪಕ್ಷಗಳಿಂದ ಕೂಡಿರುವ ಕಾರಣ, ರೈಲ್ವೆಗಳು ಅಂತಹ ಪಕ್ಷಗಳಿಗೆ ಅಧೀನವಾಗಬಹುದು ಎಂಬ ಬೆದರಿಕೆ ಕಮಿಟಿಗೆ ಇದೆ ಹೀಗಾಗಿ ರೈಲ್ವೇಗಳು ಕೆಲ ಅಧಿಕಾರಿಗಳ ಸ್ವೇಚ್ಛಾನಿಯಮಗಳಿಗೆ ಮಾತ್ರ ಒಳಪಡುವುವು, ಮಾತವಲ್ಲ, ಜನಾಭಿಪ್ರಾಯವನ್ನು ರೈಲ್ವೆಗಳು ಇನ್ನೂ ಹೆಚ್ಚಾಗಿ ಮನ್ನಿಸದಂತೆಯೂ ಆಗಿತ [illegible] ರೈಲ್ವೇ ಕಂಪೆನಿಗಳಲ್ಲಿ ಹಾಕಿರುವ ಹಣದಲ್ಲಿ ಹೆಚ್ಚಿನದು ಇಂಗ್ಲೆಂಡಿನದಾದ ಕಾರಣ ಆ ಹಣಕ್ಕೆ ಸೇಕಡಾ ೧೦ರ ಬಡ್ಡಿ ದೊರಕಿಸಿ ಕೊಡುವ ಭಾರವು ಸರಕಾರದ ಮೇಲೆ ಇರುವ ಕಾರಣ ರೈಲ್ವೇಗಳ ಮುನಾಫೆಯಿಂದ ಇಂಡಿಯಾ ಸರಕಾರದ ಖಜಾನೆಗೆ ಇತರ ವಿಷಯಗಳ ಖರ್ಚನ್ನು ಭರ್ತಿಮಾಡಲು ಇನ್ನು ಹಣವು ಸಿಗುವಂತಿಲ್ಲ ಹತ್ತಿಪ್ಪತ್ತು ಕೋಟಿ ರೂಪಾಯಿ ರಿಜರ್ವ್ ಫಂಡು ಸಹ ಇದಕ್ಕೆ ಮೊದಲೇ ನಿರ್ನಾಮವಾಗಿದೆ ನ್ಯಾಯ ಸಭೆಗಳಿಗೆ ಒಳಪಡದ ಇತರವಾದೊಂದು ಅಧಿಕಾರದೊಳಗೆ ಇರುವ ರೈಲ್ವೇಗಳ ಮುಂದೆ ಹೇಗಿರುವುವೊ ಯಾರೂ ತಿಳಿಯರು ದೇಶೀಯ ಕೈಗಾರಿಕೆಗೆ ರೈಲ್ವೆ ಬಾಡಿಗೆ ದರಗಳು ವಿಪರೀತವಿವೆ ಎಂಬ ನೋವಿಗೆ ಯಾವ ಸಮಾಧಾನವನ್ನೂ ಈ ಕಮಿಟಿಯು ಕೊಟ್ಟಿಲ್ಲ ಆಫೀಸರುಗಳ ಭಾರೀ ಸಂಬಳವನ್ನು ಇಳಿಸಲೂ ಯಾವ ಸೂಚನೆಗಳೂ ಇಲ್ಲ ಇನ್ನು ಬಡಾವಣೆಗಳಿಗಾಗಿ ವಿಲಾಯತಿಯಿಂದ ಎಕ್ಸ್‌ಪರ್ಟರುಗಳನ್ನು ತರಿಸಿಕೊಳ್ಳುವ ಶಿಫಾರಸುಗಳಾಗಿವೆ ಬ್ರಿಟಿಷ ಆಫೀಸರರ ಮತ್ತು ಬ್ರಿಟಿಷ ಭಾಂಡವಳಿಗರ ಆದಾಯವೃದ್ಧಿಗಾಗಿಯೆ ನಮ್ಮ ದೇಶೀಯ ರೈಲುಗಳು ಇರುವಂತಾಗಬೇಕೆಂದು ಈ ಕಮಿಟಿಯು ಶಾಸನವಾಗಿದೆ ಜನತೆಗೂ ರೈಲ್ವೆಗೂ ಇರುವ ಕಚ್ಚಾಟವು ಇನ್ನೂ ಧಾರಾಳವಾಗಿ ನಿರಾತಂಕವಾಗಿ ಮುಂದರಿವಂತಾಗಿದೆ ಆದರೂ ರೈಲ್ವೇ ಬೋರ್ಡು ಈ ವರದಿಯನ್ನೋದಿ ತನ್ನ ನಿರ್ಧಾರಗಳನ್ನು ಮುಂದೆ ಮಾಡಲಿದೆಯಂತೆ ಆಗ, ವರದಿಯೊಳಗಣ ಹುಳುಕುಗಳನ್ನೆಲ್ಲ ತಿದ್ದಬಹುದಾಗಿ ನಂಬಬಹುದೇ? ಮುಖ್ಯವಾಗಿ ಕೇಂದ್ರ ಸರಕಾರಕ್ಕೆ ಹುಟ್ಟುವ ರೈಲ್ವೇ ಲಾಭವು ಎಲ್ಲ ಪ್ರಾಂತ್ಯಗಳಿಗೂ ಹಂಚಿಕೊಡುವಂತಾಗಬೇಕಾಗಿದೆ.

ಸ್ವಾತಂತ್ರ್ಯ ಸಾಧನೆಗೆ ಎಡೆಯುಂಟೆ?

ಜನಾಂಗವು ಸ್ವಾತಂತ್ರ್ಯಹೊಂದುವುದಕ್ಕೆ ಆಗತ್ಯ ಅವಕಾಶವನ್ನು ಈ ರಾಜ್ಯಾಂಗರಚನೆಯ ಮೂಲಕ ಪಡೆವಂತೆ ಸಾಧ್ಯವಾಗುವದೋ ಇಲ್ಲವೋ ಎಂದು ಪ್ರಯತ್ನಿಸಿ, ಬ್ರಿಟಿಷ ಮುತ್ಸದ್ದಿಗಳ ಮಾತಿನ ಮೌಲ್ಯ ಕಟ್ಟುವೆನು ಎಂದು ಗಾಂಧೀಜಿಯವರು ಎಂದುದುಂಟು. ವೈಸ್ರಾಯರು,—'ಪಾರ್ಲಿಮೆಂಟಿನ ಕ್ರಮದಂತೆ ಸಂಪೂರ್ಣ ರಾಜ್ಯಭಾರವು ಇಲ್ಲಿ ನೆಲೆಗೊಳ್ಳುವುದಕ್ಕೆ ಅವಿಶ್ರಾಂತವಾಗಿ ತಾನು ದುಡಿಯುವೆನು' ಎಂದು ಹೇಳಿರುವರು ರಾಜನೀತಿಯು ರಾಜತಂತ್ರವೂ ಇದ್ದಂತೆಯೇ ಸದಾ ಸರ್ವದಾ ಇರಲಾರದು, ಬದಲಾವಣೆ ಹೊಂದುತ್ತಲೇ ಇರುವುದು ಬರೆದುದೆಲ್ಲ ವೇದವಾಕ್ಯವಾಗಿಯೇ ಉಳಿಯಲಾರದು, ಎಂದು ವಿವರಿಸಿದಂತೆಯೇ ನಮ್ಮ ಗವರ್ನರರು ಸಹ, "ಅಧಿಕಾರವನ್ನು ನಿರ್ವಹಿಸುವ ಪಕ್ಷವು ಯಾವುದೇ ಇರಲಿ, ಪಾರ್ಲಿಮೆಂಟಿನವರು ನನ್ನ ಹೆಗಲ ಮೇಲೆ ಇರಿಸಿರುವ ಜವಾಬ್ದಾರಿಯನ್ನು ನಿರ್ವಹಿಸುವಾಗ ಯಾವ ಕಾಲದಲ್ಲಾದರೂ ನನಗೂ ಮಂತ್ರಿಗಳಿಗೂ ವಿವಾದವುಂಟಾದರೆ, ನಾವು ಚರ್ಚಿಸಿ ಹೇಗೂ ಮಾಡಿ ಬಿಕ್ಕಟ್ಟನ್ನು ಕಳೆದುಬಿಡಲಾರೆವೆಂದು ನಾನೆಂದೂ ನಂಬುವುದಿಲ್ಲ ಎನ್ನುವರು ಸರಕಾರವು ಹೀಗೆ ಉಚ್ಚಾಧಿಕಾರಿಗಳ ಬಾಯಿಯಿಂದ ನುಡಿದ ಮಾತುಗಳ ಸತ್ಯವನ್ನು ಶೋಧಿಸುವುದು ಕಾಂಗ್ರೆಸ್ಸಿನ ಕರ್ತವ್ಯವಾಗಿದೆ ಈ ಮಧ್ಯೆ ವೋಟರ ಸಮುದಾಯವು ಹೆಚ್ಚು ಕಡಮೆ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿ ತನಗೆ ಗುಣದ ಪಕಾರವನ್ನು ಮಾಡಲಿರುವುದು ಎಂಬುದನ್ನು ನೆನಪಿನಲ್ಲಿಟ್ಟುಕೊಂಡೇ ಇದೆಯಷ್ಟೆ ಅಧಿಕಾರ ನಿರ್ವಹಿಸುವಾಗ, ಇದು ವರೆಗೆ ಕೊಟ್ಟ ಭರವಸೆಗಳಿಂದ ಪಡೆಯುತ್ತಿಲ್ಲವೆಂದು ಕೊಂಗೆಸ್ ತಿಳಿದರೆ ವೋಟರ ಸಮುದಾಯವು ಆಗ ಸರಕಾರದ ಮುತ್ಸದ್ದಿಗಳ ಪತ್ತ ತನ್ನ ಪ್ರತಿನಿಧಿಗಳ ವರ್ತನೆಯನ್ನು ತೂಗಿನೋಡಲು ತಿಳಿಯದಷ್ಟು — [illegible]'

ಮುಂಬಾಯಿ ═══ ಗೋವಾ ═══ ಕಾರವಾರು

ಇತ್ಯಾದಿ ಕಡೆಗಳಿಗೆ

ಅತ್ಯಲ್ಪ ಖರ್ಚಿನಿಂದ- ಅತಿ ಸುಖಕರವಾದ ಪ್ರಯಾಣ.

ನಮ್ಮ ಬಸ್ಸುಗಳ ಮೂಲಕ

ಕೂಡೂರು ಮಾರ್ಗದಿವಾಗಿ ಮುಂಬಾಯಿಗೂ, ಶಿವಮೊಗ್ಗಾ ಹರಿಹರಕ್ಕಾಗಿ, ಹುಬ್ಬಳ್ಳಿ ಬೆಳಿಗಾಂ ಮುಂಬ್ಯಾ ಪ್ರಾಂತ್ಯಕ್ಕೂ
ಕಾರವಾರ ಮಾರ್ಗವಾಗಿ ಮುಂಬ್ಯಾ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳೆಸಲನುಕೂಲ

ಊರುಗಳ ಬದಲಾವಣೆ - ನೋಟಗಳ ಬದಲಾವಣೆ - ಜನತೆಯ ಸಂಪರ್ಕ - ಆಹಾರದ ಅನುಕೂಲ
ವಿಶ್ರಾಂತಿ ಗೃಹಗಳ ಏರ್ಪಾಡು - ನೌಕರರ ಸಭ್ಯತೆ

ಇವೆಲ್ಲವೂ ಬಸ್ಸುಪ್ರಯಾಣದಲ್ಲಿದೆ.

ನೀವು ಕಂಡ ಕುಂದುಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜ್ಯೊಂಟ್ ಮೆನೆಜರರಿಗೆ ಬರೆದು ತಿ

ಜ್ಯೊಂಟ್ ಮೇನೇಜರ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd. 1908
Church Gate Street, Fort - - BOMBAY.

SPECIAL FEATURES.

1. Rebate on yearly payment of policies
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

Messrs Kochikar Brothers,
Madras Branch Secretaries.

—1936—
OUR VALUATION YEAR

Take a BOMBAY LIFE Policy now, and share in the profits



Branches at:-	P. B. 887, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4

ಮಂಗಳೂರು

ಜಿಲ್ಲಾ ಬೋರ್ಡ್ ಚುನಾವಣೆ— ಶೀಘ್ರದಲ್ಲಿಯೇ ನಡೆಯಲಿರುವ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸುವ ಸಲುವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು [illegible] ಯಿಸಿರುತ್ತಾರೆ. ಕಾಂಗ್ರೆಸ್ ಕಡೆಯಿಂದ ಆಯಾ [illegible]ಗಳಿಗೆ ಉಮೇದ್ವಾರರಾಗಿ ನಿಲ್ಲಬಿಚ್ಛಿಸುವ ಉಮೇದ್ವಾರರು ಈ ಬಗ್ಗೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ದೊರೆಯುವ ಪ್ರತಿಜ್ಞಾಪತ್ರ ವ ಅರ್ಜಿಯನ್ನು ಬರೆದು [illegible]ಟಿಗೆ ಇದೇ ಬರುವ ಅಗೋಸ್ತು ತಾ. ೧೫ರ ಒಳಗೆ [illegible]ಡಬೇಕಾಗಿ ನಿರ್ಣಯಿಸಲ್ಪಟ್ಟಿರುತ್ತದೆ. ಉಮೇದ್ವಾ[illegible] ತಮ್ಮ ಅರ್ಜಿಯೊಡನೆ ಜಿಲ್ಲಾ ಕಾಂಗ್ರೆಸ್ ಚುನಾ[illegible] ಕಮಿಟಿಗೆ ಸಹಾಯಧನವಾಗಿ ರೂ. ೫೦ನ್ನು ಕೊಡ[illegible]ಕಾಗಿಯೂ, ಆರಿಸಲ್ಪಟ್ಟ ಉಮೇದ್ವಾರರಿಗೆ ಪ್ರತಿ[illegible]ರ್ಗಳಿರುವ ಸಂದರ್ಭದಲ್ಲಿ ಈ ಹಣದ ಪೈಕಿ ರೂಪಾ[illegible]ನ್ನು ಅಂತಹ ಉಮೇದ್ವಾರರಿಗೆ ಹಿಂದೆ ಕೊಡಬೇ[illegible]ಗಿಯೂ, ಆರಿಸಲ್ಪಡದ ಉಮೇದ್ವಾರರಿಗೆ ಅವರು [illegible]ಡುವ ಹಣದ ಪೈಕಿ ರೂ. ೪೦ರಂತೆ ಹಿಂದೆ ಕೊಟ್ಟು [illegible]ಳಿದ ರೂಪಾಯಿ ೧೦ನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ [illegible]ಡಬೇಕಾಗಿಯೂ ನಿರ್ಣಯಿಸಲ್ಪಟ್ಟಿರುತ್ತದೆ. ಜಿಲ್ಲಾ [ಕಾಂ]ಗ್ರೆಸ್ ಚುನಾವಣಾ ಕಮಿಟಿಯವರು ಉಮೇದ್ವಾರರನ್ನು ಆರಿಸುವಾಗ ಯಾವಾಗಲೂ ಪಾದಿಧರಿಸುವ [illegible] ಇನ್ನು ಮುಂದೆ ಯಾದರೂ ಧರಿಸಲೊಪ್ಪುವ [ಉ]ಮೇದ್ವಾರರನ್ನೇ ಆರಿಸಬೇಕಾಗಿ ನಿರ್ಣಯಿಸಿರುವುದ[ರಿಂ]ದ ಉಮೇದ್ವಾರರಾಗಲಿಚ್ಛಿಸಿ ಅರ್ಜಿ ಕಳುಹಿಸುವವರು [ಈ] ವಿಷಯವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕಾಗಿ ಪ್ರಾರ್ಥಿಸಲಾಗುತ್ತದೆ ಎಂದು ಪಿ. ರಾಮರಾಯ [illegible] ಕಾರ್ಯದರ್ಶಿ, ದ. ಕ. ಜಿಲ್ಲಾ ಕಾಂಗ್ರೆಸ್ [ಕ]ಮಿಟಿ ಇವರು ತಿಳಿಸುತ್ತಾರೆ.

[illegible]ಡಿಕಲ್ ಕಾಲೇಜಿನ ಹೊಸ ವರ್ಷವು [illegible] ಬರುವ ಜುಲಾಯಿ ತಾ. ೧೫ಕ್ಕೆ ಪ್ರಾರಂಭವಾಗು[illegible] ಎಸ್ ಎಸ್ ಎಲ್ ಸಿ ಮೆಟ್ರಿಕ್ ಅಥವಾ [illegible] ಮೂಲ್ಕಿ, ಪರೀಕ್ಷೆಗಳನ್ನು ಪಾಸ್ ಮಾಡಿ[illegible] ಅವರವರ ಸರ್ಟಿಫಿಕೇಟುಗಳಿಗೆ ತಕ್ಕ ಇಂಗ್ಲಿಷ್ [ಮ]ತ್ತು ಕನ್ನಡ ಕೋರ್ಸಿಗಳಿಗೆ ಅರ್ಹರಾದ ವಿದ್ಯಾರ್ಥಿ[ಗಳಿ]ಗೆ ಶಿಕ್ಷಣವು ಉಚಿತವಾಗಿ ಕೊಡಲ್ಪಡುವುದು. ಇಲ್ಲಿ [ಅ]ಭ್ಯಾಸಮಾಡಲಿಚ್ಛಿಸುವವರು ಕೂಡಲೇ ಪೋಸ್ಟೇಜ್[ಗಾ]ಗಿ ಎರಡು ಆಣೆಯ ಸ್ಟೇಂಪ್ ಇಟ್ಟು ರಿಜಿಸ್ಟ್ರಾರ್ [illegible] ವಿದ್ಯಾಪೀಠ ತುಂಗಭದ್ರಾ ಇವರಿಗೆ ಬರೆಯು[ವುದು ಆವ]ಶ್ಯಕ

ಮಂಗಳೂರು ಎಮೆಚೂರ್ಸ್ ನಾಟಕ ಸಭಾ, ಮಂಗಳೂರು— ಈ ಸಂಘದ ಮೆಂಬರರೂ [illegible] ಅದುತ್ತಿನ್ನ ನಾಟಕದಲ್ಲಿ ಸ್ತ್ರೀಪಾತ್ರವನ್ನು [ವ]ಹಿಸುತ್ತಿದ್ದವರೂ ಆದ ಶ್ರೀ ಕೇದಿಗೆ ರಾಮರಾಯರು [illegible] ತಾ. ೧೦ಕ್ಕೆ ಕಲ್ಕತ್ತಕ್ಕೆ ಫಿಲ್ಮ್ ಡೈರೆಕ್ಟರ್ ತನದ [ಅ]ಭ್ಯಾಸಕ್ಕೆ ತೆರಳುವವರಾಗಿರುವುದರಿಂದ ಅವರಿಗೆ ಸಂಘ[ದ]ವರು ಇದೇ ಕಳೆದ ತಾ. ೭ನೇ ಆದಿತ್ಯವಾರ ಸಂಜೆ [illegible] ಶ್ರೀ ಬಿ ಎಸ್ ಆನಂದರಾಯರ ಅಧೀನದಲ್ಲಿ [ಸಂ]ಘದ ಅಧ್ಯಕ್ಷರಾದ ಶ್ರೀ ಅತ್ತಾವರ ಬಾಬುನವರ [illegible] ಒಂದು ವಿದಾಯಸತ್ಕಾರವನ್ನಿತ್ತರು

ಭಾರತ ಸೇವಾಶ್ರಮ ಸಂಘ ಕಲ್ಕತ್ತ— ಇದರ ಪ್ರಚಾರಕರು ಸಂಘದ ಚಟುವಟಿಕೆಗಳ ಕುರಿತು ಪ್ರಚಾರಗೈಯ್ಯಲು ನಮ್ಮ ಜಿಲ್ಲೆಗೆ ಬಂದಿರುವರು. ಈ ಸಂಘದ ಆಶ್ರಯದಲ್ಲಿ ಕಳೆದ ಆದಿತ್ಯವಾರ ಇಲ್ಲಿನ ಥಿಯೋಸೋಫಿಕಲ್ ಲೋಜಿನಲ್ಲಿ ಶ್ರೀ ಕೃಷ್ಣಮೂರ್ತಿ ರಂಗಲು, ಸಹಾಯಕರು ಜಡ್ಜರು, ಇವರ ಅಧ್ಯಕ್ಷತನದಲ್ಲಿ ಸಂಘದ ಪ್ರಸಿದ್ಧ ಕೆಲಸಗಾರರಾದ ಸ್ವಾಮಿ ಅದ್ವೈತಾನಂದರು ಹಿಂದೂದೇಶದ ಧಾರ್ಮಿಕ ಆದರ್ಶಗಳ [illegible] ವಿಷಯದ ಮೇಲೆ ಮ್ಯಾಜಿಕ್‌ಲ್ಯಾಂಟರ್ನ್ ಮೂಲಕ ಚಿತ್ರಸಹಿತವಾದ ಭಾಷಣವಿತ್ತರು. ಸಭಾಸದನವು ತುಂಬಿಹೋಗಿ ಜನರು ಜಗಲಿ ಮೇಲೂ ನಿಂತು ಭಾಷಣ ಕೇಳುವವರಾದರು. ಅನೇಕರು ಸ್ಥಳಸಂಕೋಚದ ದೆಸೆಯಿಂದ ಹಿಂತೆರಳಿದರು. ಈ ಭಾಷಣದಲ್ಲಿ ಹಿಂದೂ ಧರ್ಮ ಮಹತ್ವ, ವೇದಧರ್ಮ ಮಹತ್ವವನ್ನೂ ಸ್ವಾಮಿಜಿಯವರು ವರ್ಣಿಸಿದರು. ತಮ್ಮ ಸಂಘವು ಹಿಂದೂ ಧರ್ಮದ ಏಳ್ಗೆಗಾಗಿ, ಪುನರುತ್ಥಾನಕ್ಕಾಗಿ ಅಲ್ಲಲ್ಲಿ ನಡೆಯಿಸುವ ಚಟುವಟಿಕೆಯ ಕುರಿತು ಭಾಷಣ ಮಾಡಿದರು. ಈ ಸಂಘದ ಆಶ್ರಯದಲ್ಲಿ ಅನೇಕ ವಿದ್ಯಾ ಸಂಸ್ಥೆಗಳೂ, ಧಾರ್ಮಿಕ ಸಂಸ್ಥೆಗಳೂ, ಧರ್ಮಾರ್ಥ ಶಾಲೆಗಳೂ ನಡೆಯುತ್ತಿವೆ. ಜನತೆಯ ಅಜ್ಞಾನವನ್ನು ನಾಶಪಡಿಸುವುದು ಈ ಸಂಘದ ಒಂದು ಮುಖ್ಯ ಉದ್ದೇಶವಾಗಿರುತ್ತದೆ. ಅಲ್ಲದೆ ಯಾತ್ರಾಸ್ಥಳದಲ್ಲಿ ಯಾತ್ರಿಕರಿಗೆ ಸೌಕರ್ಯಗಳನ್ನು ಕಾರ್ಯದಲ್ಲಿ ಸಹಕರಿಸುವುದಾಗಲಿ, ಈ ಸಂಘದ ಕೇಂದ್ರಗಳಿವೆ. ಜನತೆಯಲ್ಲಿ ತ್ಯಾಗಭಾವವನ್ನು ತಂದು, ಜನತಾಸೇವಾ ಭಾವವು [illegible]

[illegible] ಭೂಮಿ, ರಾಷ್ಟ್ರೀಯ ಅಸ್ತಿತ್ವವನ್ನು ಸ್ಥಾಪಿಸುವುದೆ ಈ ಸಂಸ್ಥೆಯ ಮುಖ್ಯ ಉದ್ದೇಶ. ಈ ಸಂಘವು ಸಂಕಷ್ಟಪ್ರದೇಶಗಳಲ್ಲಿ ಉಪಶಮನ ಏರ್ಪಾಡುಗಳನ್ನು ನಡೆಯಿಸುತ್ತದೆ. ಸ್ಥಿರವಾದ ಹೊಂದಿದ ಹಿಂದೂ ಸಮಾಜವನ್ನು ಸುಧಾರಿಸಿ, ಹಿಂದೂ ಜನತೆಯಲ್ಲಿ ಐಕ್ಯತೆ ಉಂಟಾಗುವಂತೆ ಮಾಡಿ, ಎಲ್ಲಾ ಹಿಂದೂಗಳು ಒಂದೆಯಾಗಿ ಉತ್ಕೃಷ್ಟರದ ಆದರ್ಶಗಳನ್ನು ಸಾಧಿಸುವಂತೆಯೂ, ವೇದಧರ್ಮವನ್ನು ಆಚರಿಸುವಂತೆ ಮಾಡುವುದು ಈ ಸಂಘದ ಧ್ಯೇಯ. ಈ ಸಂಘದ ಪರವಾಗಿ ಇನ್ನೊಂದು ಸಭೆಯು ಇದೇ ತಾ. ೯–೭–೩೭ನೇ ಸಾಯಂಕಾಲ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಸೇರುವುದು. ಶ್ರೀ ಅಚ್ಯುತ ಬಾಳಿಗರು ಅಧ್ಯಕ್ಷರು, ಅದ್ವೈತಾನಂದರು ಭಾಷಣಕರ್ತರು. ಎಲ್ಲರಿಗೂ ಸುಸ್ವಾಗತವಿದೆ.

ದ. ಕ. ಜಿಲ್ಲಾ ಕಿಸನ್ ಸಂಘ— ಶ್ರೀಮತಿ ಕಮಲಾದೇವಿಯವರು ಅಖಿಲ ಭಾರತ ಕಿಸನ್ ವ್ಯವಸ್ಥೆಯ ಕಾರ್ಯಕಾರಿ ಮಂಡಳದ ಸದಸ್ಯರಾಗಿ, ದ. ಕ. ಜಿಲ್ಲೆಯ ಕಿಸನ್ ಕೆಲಸಗಾರರ ಸಭೆಯೊಂದನ್ನು ಇದೇ ತಿಂಗಳ ತಾ. ೧೮ರಲ್ಲಿ ಕರೆದಿರುವರು (ಮಂಗಳೂರಿನಲ್ಲಿ) ಜಿಲ್ಲಾ ರೈತರ ಸಂಘವನ್ನು ವ್ಯವಸ್ಥೆಗೊಳಿಸಲು

ಕಾಂಗ್ರೆಸ್ ಸಾಮ್ಯವಾದ ಪಕ್ಷ— ಇದರ ಸಭೆಯೊಂದು ಮೊನ್ನೆ ತಾ. ೫ರಲ್ಲಿ ನಡೆದು, ಸಿಬಂದಿಯ ಚುನಾವಣೆಯು ನಡೆಯಿತು. ಶ್ರೀ [illegible] ವಿಠ್ಠಲ್ ಬೆಳ್ಗೆಯವರು ಮತ್ತು ಗೋವಿಂದನ್‌ನವರು ಕಾರ್ಯದರ್ಶಿಗಳಾಗಿ ನೇಮಕಗೊಂಡರು. ಕೇರಳ ಕಮ್ಯುನಿಸ್ಟರು [illegible] ಬರುವ ವರ್ಷಕ್ಕೆ ಒಂದು ಕಾರ್ಯಕ್ರಮವು ರಚಿಸಲಾಯಿತು. ಒಂದು ಪ್ರಚಾರ ಸಮಿತಿಯ ರಚನೆಯಾಯಿತು. ಶ್ರೀಮತಿ ಕಮಲಾದೇವಿಯವರ ಮನೆಯಲ್ಲಿ ಮುಂದಕ್ಕೆ ಸಂಜೆ ೪ ಗಂಟೆಯಿಂದ ಸ್ಟಡಿ ಕ್ಲಾಸುಗಳು ನಡೆಯುವುದಂತೆ

ವಿದ್ಯಾರ್ಥಿ ಸಂಘ— ಎಲ್ಲಾ ಕಾಲೇಜುಗಳ ಮತ್ತು ಶಾಲೆಗಳ ವಿದ್ಯಾರ್ಥಿಗಳ ಸಭೆಯೊಂದು ಮೊನ್ನೆ ತಾ. ೪ರಲ್ಲಿ ರಥಬೀದಿಯ ಸರ್ವೋದಯ ಹೋಟೆಲಿನಲ್ಲಿ ಕೂಡಿಬಂದು (ವಿ ಜೆ ಟೊಸೆಫರ ಅಧ್ಯಕ್ಷತೆಯಲ್ಲಿ) ಜಿಲ್ಲಾ ವಿದ್ಯಾರ್ಥಿಸಂಘವೊಂದು ರಚಿಸಲಾಯಿತು. ಶ್ರೀಮತಿ ಕಮಲಾದೇವಿಯವರು ಈ ಸಭೆಗೆ ಆಹ್ವಾನಿಸಲ್ಪಟ್ಟಿದ್ದು ಹಾಜರಿದ್ದರು. ಇದೇ ಸವಿವಾರ ಒಂದು ಸಾರ್ವಜನಿಕ ಸಭೆಯನ್ನ ಕರೆಯಬೇಕೆಂದಾಯಿತು. ಈ ಸಭೆಯಲ್ಲಿ ಶ್ರೀಮತಿ ಕಮಲಾದೇವಿಯವರೂ, ಪ್ರೊಫೆಸರ್ ವಾರ್ಕರ್‌ಯವರೂ ಭಾಷಣವಾಡಲಿರುವರು. ಸಂಘದ ಕಾರ್ಯಕ್ರಮವು ರಚನೆಯಾಗಿರುತ್ತದೆ. ಜಿಲ್ಲಾ ವಿದ್ಯಾರ್ಥಿಗಳ ಪರಿಷತ್ತೊಂದನ್ನು ಜರಗಿಸುವರಂತೆ

ಮುಸ್ಲಿಮ ಸಂಪರ್ಕ— ಕಾಂಗ್ರೆಸ್ಸಿನೊಡನೆ ಮುಸ್ಲಿಮರಿಗೂ ಸಂಪರ್ಕ ಉಂಟಾಗುವಂತೆ ಶ್ರೀಮತಿ ಕಮಲಾದೇವಿಯವರ ಮೊನ್ನೆ ಕೆಲವು ಸ್ಥಳೀಯ ಮುಸ್ಲಿಂ ನಾಯಕರನ್ನು ಕರೆದು [illegible] ಮಾತುಕತೆಯನ್ನು ನಡೆಯಿಸಿದರು. ಮುಸ್ಲಿಮರ ಕೆಲವು ಸಂಶಯಗಳು ಮತ್ತು ಭಯಗಳು ಅಲ್ಲಿ ನಿವಾರಿಸಲ್ಪಟ್ಟವು. ಈಗ [illegible] ಮುಸ್ಲಿಮರನ್ನು ಕಾಂಗ್ರೆಸಿನಲ್ಲಿ ಸೇರಿಸಿಕೊಳ್ಳಲು ಶ್ರೀಮತಿ ಕಮಲಾದೇವಿಯವರು ಜಿಲ್ಲಾ ಪ್ರಯಾಣ ಮಾಡುವರೆಂದು ತಿಳಿದುಬರುತ್ತದೆ

ಉಡುಪಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಶ್ರೀ ಪರ್ಯಾಯ ಪೇಜಾವರ ಶ್ರೀ ಪಾದಂಗಳವರು ಶ್ರೀ ಕೃಷ್ಣದೇವರಲ್ಲಿ ಕನಕನ ಕಿಟಕಿಯ ಮೂಲಕವೇ ಭಜಕರು ಶ್ರೀ ಕೃಷ್ಣವಿಗ್ರಹ ದರ್ಶನಮಾಡಕ್ಕದ್ದು ಇರುವಲ್ಲಿ ಮಹಾದ್ವಾರವನ್ನು ಇಡಿಸುವ ಯೋಜನೆಯಲ್ಲಿರುತ್ತಾರೆಂದೂ ಆ ಬಗ್ಗೆ ಇತರ ಮಠೀಯರ ಅಭಿಪ್ರಾಯವನ್ನು ಅಪೇಕ್ಷಿಸಿರುವರೆಂದೂ ತಿಳಿದುಬರುತ್ತದೆ. ಹೀಗೆ ದೊಡ್ಡ ದ್ವಾರವನ್ನೇ ಇಡಿಸಿದ್ದಲ್ಲಿ ಭಜಕರಿಗೆ ತುಂಬಾ ಅನುಕೂಲವೂ ಮನೋಜ್ಞಕರವಾದ ಹೊಸದುವಾಸಿಯಾಗಿರುವ ಕಡಗೋಲುಧಾರಿಯಾದ ಶ್ರೀಕೃಷ್ಣನ ಸಂಪೂರ್ಣವಾದ ಚೆನ್ನಾದ ದರ್ಶನವು ಲಭಿಸ[illegible]

ನೂತನ ಪರ್ಯಾಯದ ಪೂರ್ವಸಿದ್ಧತೆಯಾಗಿ ೨೬ ತಾ ಕಟ್ಟಿಗೆ ತೇರಿನ ಮುಹೂರ್ತವಿಧಿಯು ಪೂರ್ವಾಹ್ನ ಜರಗಿಸಲ್ಪಟ್ಟಿತು

ಅಹುದುರವೃಷ್ಟಿ ಯಾವುದಿಲ್ಲದಿದ್ದರೂ ಅಕ್ಕಿಯ ಧಾರಣೆಯು ಫಕ್ಕನೆ ಏರಿರುತ್ತದೆ; ಬಡವರಿಗೆ ಈಗ್ಗೆ ಉದ್ಯೋಗವಿಲ್ಲದೊಗಿ ಇದು ಬಹು ಕಷ್ಟಕರವಾಗಿದೆ

ಶ್ರೀ ಕೋ ಶಿ ಕಾರಂತರು ಉಡುಪಿಯ ಶ್ರೀ ಕೃಷ್ಣ ಸಂದೇಶ ಪತ್ರಿಕಾಧಿಪತಿ ಶ್ರೀ ಎಮ್. ಜನಾರ್ಧನಾಚಾರ್ಯರ ಮೇಲೆ ಹೂಡಿದ ಮಾನನಷ್ಟ ಮೊಕದ್ದಮೆಯನ್ನು ಶ್ರೀ ಆಚಾರ್ಯರ ಮೇಲಿನ ಜುದುಮಾನೆಯ ಬಗ್ಗೆ ಅಪೀಲಿನಲ್ಲಿ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಜುದುಮಾನೆಯು ಕಾಯಮಾಗಿದೆ.

ತಾಲೂಕುಗಳಿಂದ

ಬಂಟ್ವಾಳ:— ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ ಚುನಾವಣಾ ಕಮಿಟಿಗೆ ಮಂಗಳೂರು ತಾಲೂಕಿನಿಂದ ಇರುವ ಮೂರು ಮಂದಿ ಪ್ರತಿನಿಧಿಗಳ ಸ್ಥಾನಕ್ಕೆ ತಾಲೂಕು ಕಾಂಗ್ರೆಸ್ ಕಮಿಟಿಯವರು ಶ್ರೀಯುತ ಬಿ. ವೆಂಕಟ್ರಾಯ್ ಬಾಳಿಗ ಬಿ ಎ ಬಿ ಎಲ್, ಎಂ ಎಲ್ ಎ., ಮೂಲ್ಕಿ ರಾಮಕೃಷ್ಣ ಪೂಂಜ ಮತ್ತು ಪಾಣೆ ಮಂಗಳೂರು ಶ್ರೀನಿವಾಸ ರಾಮಚಂದ್ರ ಪೈ ಇವರನ್ನು ಸರ್ವಾನುಮತದಿಂದ ಆರಿಸಲಾಯಿತು

ಮೂಡಬಿದ್ರೆ— ಈ ಸೆಟ್ಟೆನ ಉಪಾಧ್ಯಾಯರ ಸಂಘದ ಎರಡನೇ ಸಾಮಾನ್ಯ ಸಭೆಯು ಇದೇ ಕಳೆದ ಜೂನ್ ತಿಂಗಳ ತಾ ೧೯ರಲ್ಲಿ ದಿಗಂಬರ ಜೈನ ಪಾಠಶಾಲೆಯಲ್ಲಿ ಸದರಿ ಶಾಲಾ ಅಧ್ಯಾಪಕರಾದ ಮ। ರಾ। ರಾ। ಟಿ ಕುವರ್ಶ್ರ್ಯ ಜೈನಿಯವರ ಅಧ್ಯಕ್ಷತೆಯಲ್ಲಿ ಜರಗಿತು

ಮದ್ರಾಸು ಸರಕಾರದ ಉದ್ಯೋಗದಲ್ಲಿದ್ದು ಇತ್ತೀಚೆ ನಿವೃತ್ತರಾದ ಸುಪ್ರಸಿದ್ಧ ವೈದ್ಯರೂ ನಮ್ಮ ಜಿಲ್ಲೆಯವರೂ ಆದ ಡಾ। ಮುಲ್ಕಿ ಲಕ್ಷ್ಮಣ ಕಾಮ್ತಿಯವರು ಮೊನ್ನೆ ದಿನ ಮದ್ರಾಸಿನಲ್ಲಿ ದಿವಂಗತರಾದರು. ಮೃತರ ಆತ್ಮಕ್ಕೆ ದೇವರು ಶಾಂತಿಯೀಯಲಿ!

ಕಾರ್ಕಳ:— ತಾರೀಕು ೨–೭–೧೯೩೭ರ ದಿನ ಶ್ರೀಯುತರಾದ ವಕೀಲ ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿದ ಕಾರ್ಕಳ ತಾಲೂಕು ಕಾಂಗ್ರೆಸ ಕಮಿಟಿಯ ಸಾಧಾರಣ ಸಭೆಯಲ್ಲಿ ಜಿಲ್ಲಾ ಬೋರ್ಡ ಚುನಾವಣೆಗೆ ಸಂಬಂಧಪಟ್ಟ ಚಟುವಟಿಕೆಗಳ ಜಿಲ್ಲಾ ಕಾಂಗ್ರೆಸ ಕಮಿಟಿಯಲ್ಲಿ ನಮ್ಮ ತಾಲೂಕಿನ ಪರವಾಗಿ ಶ್ರೀಯುತರುಗಳಾದ ವಕೀಲ ಲಕ್ಷ್ಮಣ ಕುಡ್ವರು, ವಕೀಲ ಪಿ ಪಿ ಉಪಾಧ್ಯಾಯರು ಮತ್ತು ವಕೀಲ [illegible] ಇವರು ಸದಸ್ಯರಾಗಿರಬೇಕೆಂದು ಸರ್ವಾನುಮತಿಯ ನಿರ್ಣಯವಾಗಿದೆ

[illegible] ಹರಿಜನ ಸೇವಾ ಸಂಘದ ಕಳೆದ ವರ್ಷದ ವರದಿಯು ಇತ್ತೀಚೆಗೆ ಪ್ರಕಟವಾಗಿದೆ. ಸಂಗ್ರಹವಾದ ಹಣದ ಪಟ್ಟಿ [illegible] ಆಡಳಿತದ [illegible] ಸಂಘವು ಹರಿಜನ ವಿದ್ಯಾರ್ಥಿಗಳ ಮತ್ತು [illegible] ಉಪಯೋಗದ ಬಗ್ಗೆ ಒಂದು ಬಾವಿಯನ್ನು ಕಟ್ಟಿಕೊಡುವುದು ಪಾತ್ರವಲ್ಲದೆ ಹರಿಜನ ವಿದ್ಯಾರ್ಥಿಗಳಿಗೆ ಅನ್ನ ವಸ್ತ್ರ ಶಿಕ್ಷಣ, ಸ್ಕಾಲರ್ಶಿಪ್ಪು, [illegible] ಕೆಲಸ ಮಾಡಿರುವುದರಿಂದ [illegible] ಶ್ರೀ [illegible] ದೊರೆಯಿದೆ. ಇದೆ ಸಂಘವು ಮುಂದಿನ ವರ್ಷದ ವರದಿ ಪ್ರೋತ್ಸಾಹವನ್ನು ಪಡೆದು ಅಧಿಕಾಧಿಕ ಹರಿಜನ ಸೇವೆಯನ್ನು ಮಾಡಲಿಕ್ಕೆ ಸಮರ್ಥವಾಗಲೆಂದು ಆಶಿಸುತ್ತೇವೆ

ಎಸಿದ್ದ ಮತದಾರರ ಪಟ್ಟಿಯಲ್ಲಿ ಕಳೆದ ವರ್ಷ ಸೇರದೆ ಹೋದ ಅನೇಕ ಮಂದಿ ಅಕ್ಷರಸ್ಥರ ಹೆಸರುಗಳನ್ನು ಈ ವರ್ಷದ [illegible] ಸ್ವಯಂಸೇವಕರು ಮಾಡಿದ ಪ್ರಯತ್ನಗಳ ಸ್ವತ್ತನ್ನಾಗಿವೆ. ಅವರು ಇದಾರು ದಿನಗಳ ಅಲ್ಪಾವಧಿಯಲ್ಲಿ ಮಾನ್ಯರಕ್ಕೂ ಮಿಕ್ಕಿ ಅಕ್ಷರಸ್ಥರ ಮತದಾರರಾಗಲು ಅಪೇಕ್ಷಿಸುವ ಅರ್ಜಿಗಳನ್ನು ಸಂಪಾದಿಸಿ ಸಂಬಂಧಪಟ್ಟ ಅಧಿಕಾರಿಗಳ ಸಮಕ್ಷಮಕ್ಕೆ ಹಾಜರುಪಡಿಸಿರುವರು. ಅಕ್ಷರಸ್ಥರಿಗೆ ತಮ್ಮ ಕರ್ತವ್ಯಜ್ಞಾನವಿರುತ್ತಿದ್ದರೆ ಸ್ವಯಂಸೇವಕರು ಈ ರೀತಿ ಹಗಲಿರುಳು ದುಡಿಯಬೇಕಾಗಿರಲ್ಲ. ಬಿಟ್ಟುಹೋದ ಹೆಸರುಗಳು ಇನ್ನೂ ಅನೇಕವಿರುವುದರಿಂದ ಸ್ಥಳೀಯ ಕಾಂಗ್ರೆಸ್ ಮುಖಂಡರು ಮುಂದಿನ ಒಂದು ವರ್ಷದೊಳಗಾಗಿಯಾದರೂ ಅತಿ ಜಾಗ್ರತಿಯನ್ನಿಟ್ಟುವರಾಡಿ ಮತ್ತೊಂದು ಸಂದರ್ಭದಲ್ಲಿ ಎಲ್ಲಾ ಅಕ್ಷರಸ್ಥರು ಮತದಾರರಾಗುವಂತೆ ಪ್ರಯತ್ನಿಸುವರಾಗಿ ನಂಬುತ್ತೇವೆ

ಈ ತಾಲೂಕಿನ ಕೆಲವು ಕೇಂದ್ರಗಳನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಆದ ಕಾಂಗ್ರೆಸ ಮೆಂಬರರ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಈ ಕಾರ್ಯಕ್ಕಾಗಿ ಇಷ್ಟರವರೆಗಾದ ಪ್ರಯತ್ನಗಳು ಬಹು ಸ್ವಲ್ಪವಾಗಿರುತ್ತವೆ. ಕಳೆದ ವರ್ಷದಂತೆ ಈ ವರ್ಷವೂ ಶ್ರೀ ಕೆ ಕೆ ಪಿ. ರಾಮಪೊತುವಾಳರಂಥ ಉತ್ಸಾಹೀ ಕೆಲಸಗಾರರನ್ನು ಈ ಕಾರ್ಯದಲ್ಲಿ ತೊಡಗಿಸಿದರೆ ಕಾರ್ಯಸಾಧನೆಯು ಸುಲಭದಲ್ಲಿ ಆಗಬಹುದು. ನಮ್ಮ ತಾಲೂಕು ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಯಾದ ಶ್ರೀ ಕೇಶವ ರಾಮಚಂದ್ರ ಶೆಣ್ಯೆಯವರು ಈ ಭಾಗದಲ್ಲಿ ಮಾಡಬೇಕಾದ ಕಾರ್ಯಗಳನ್ನು ಕೂಡಲೇ ಮಾಡುವರಾಗಿ ನಮಗೆ ವಿಶ್ವಾಸವುಂಟು

LATEST NEWS.

ಅಧಿಕಾರ ಸ್ವೀಕರಿಸಬೇಕು.

ಕಾಂ। ಕೆಬಿನೆಟ್ಟಿನ ನಿರ್ಧಾರ.

ನವ ರಾಜ್ಯಾಂಗವನ್ನು ಒಡೆಯುವುದಕ್ಕೂ ಒಳ್ಳೇ ಸಾರ್ಥಕ ಕಾರ್ಯಕ್ರಮವನ್ನು ನಡೆಯಿಸುವುದಕ್ಕೂ ಕಾಂಗ್ರೆಸ್ಸಿನ ಚುನಾವಣಾ ಪ್ರಸಿದ್ಧ ಪತ್ರದಲ್ಲಿ ಪ್ರಕಟಿಸಿದಂತೆ ಕಾರ್ಯಸಾಧಿಸಲಿಕ್ಕೂ ಕಾಂಗ್ರೆಸ ಅಧಿಕಾರ ಸ್ವೀಕರಿಸಬೇಕೆಂದು ವರ್ಕಿಂಗ್ ಕಮಿಟಿಯು ನಿರ್ಧರಿಸಿರುತ್ತದೆ

ಲಾರ್ಡ್ ಲಿನ್ಲಿತ್ಗೋನ ಪ್ರಕಟಣೆಯಿಂದ ನ್ಯಾಯವಾದ ಸಂದೇಹ ಕಾಂಗ್ರೆಸ್ಸಿನ ಕೇಳಿಕೆ ಇನ್ನು ನಿವಾರಣೆ ಆಗದೆ ಇದ್ದರೂ ಸದ್ಯಸ್ಥಿತಿಯಲ್ಲಿ ಕೈಗೊಂಡ ಫಲಿತಾಂಶಗಳು ದೊರಕಲ್ಲಿದ್ದುದರಿಂದ ವರ್ಕಿಂಗ ಕಮಿಟಿಯ ಅಭಿಪ್ರಾಯ

ಇಷ್ಟರ ತನಕ ನಡೆದ ವಿದ್ಯಮಾನಗಳಿಂದಲೂ ಗವರ್ನರುಗಳು ತಮ್ಮ ವಿಶೇಷ ಅಧಿಕಾರಗಳನ್ನು ಉಪಯೋಗಿಸಲು ಸುಲಭಸಾಧ್ಯವಾಗಲಾರದೆಂದು ವ ಕಮಿಟಿಯ ಅಭಿಪ್ರಾಯ ಪಡುತ್ತದೆ

ವರ್ಕಿಂಗ ಕಮಿಟಿಯ ಈ ನಿರ್ಣಯಕ್ಕೆ ಅಖಿಲ ಭಾರತ ಕಾಂಗ್ರೆಸ ಕಮಿಟಿಯು ಪ್ರೋತ್ಸಾಹಕವಾಗಿ ವರ್ಕಿಂಗ ಕಮಿಟಿಗೆ ಆಧಾರವಾಯಿತು

ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಅಭಿಪ್ರಾಯವನ್ನು ತಿಳಿಯದೆ ವರ್ಕಿಂಗ್ ಕಮಿಟಿಗೆ ಇಟ್ಟಿದ್ದು ಅವಕಾಶ ಇಲ್ಲದಿರುವುದರಿಂದ ದೇಶದ ಹಿತದೃಷ್ಟಿಯಿಂದ ಈ ನಿರ್ಣಯವನ್ನು ಮಾಡಲಾಯಿತು.

ಆಶ್ಚರ್ಯಕರ ತರದ ಶ್ವಾಸನೀಯ ಗುಣಕಾರಿ ಔಷಧಿ

ಈ ವಿಚಿತ್ರ ತರದ ಪೆಪ್ಸ್ ಮಾತ್ರೆಗಳು ಶ್ವಾಸಕೋಶವನ್ನು ಗುಣಪಡಿಸುವ ವಿಶೇಷ ಶಕ್ತಿಯ [illegible] ವ್ಯಾಸ್ ಪ್ಯಕ್ಷದ ತಂಪಿನ ಗಾಳಿಯು ನಿಮ್ಮ ಗಂಟಲುಗಳಿಗೆ ಮತ್ತು ಶ್ವಾಸಕೋಶಗಳಿಗಿಂದ ತರುವುದು. [illegible] ಯಲ್ಲಿ ಶರಗುತ್ತಿರುವಾಗ, ಉಂಟಾಗುವ ಧೂಮದಿಂದ ಗಂಟಲಲ್ಲಿ ಶ್ವಾಸಕೋಶಗಳಲ್ಲಿ ಎದೆಯಲ್ಲಿರುವ ರೋಗಾಣುಗಳನ್ನು ನಾಶಪಡಿಸುವುದು. ಶ್ವಾಸಕೋಶದ ಪ್ರಾಮುಖ್ಯ ಭಾಗಗಳನ್ನು ನೋವು ಬೇಗನೆ ನಿಮ್ಮ ಕೆಮ್ಮು ಶೀತ ಮತ್ತು ಬ್ರೊಂಕ್ಯಾಟಿಸ್ ರೋಗಗಳನ್ನು ಗುಣಪಡಿಸುತ್ತದೆ. ಪೆಪ್ಸ್ ಗುಳಿಗೆಗಳಿಂದ ಗಂಟಲಲ್ಲಿ ಒಂದು ತರದ ಸುಖವು ಉಂಟಾಗಿ, ಶ್ವಾಸಕೋಶಗಳಲ್ಲಿರುವ ಕಫವನ್ನು ಹೊರಪಡಿಸುತ್ತದೆ. ನಿಮ್ಮ ಎದೆಯನ್ನು ಮತ್ತು ಶ್ವಾಸಕೋಶವನ್ನು ಬಲಪಡಿಸುತ್ತದೆ

ಕೆಮ್ಮು ಶೀತ ಮತ್ತು ಬ್ರೊಂಕ್ಯಾಟಿಸ್‌ಗಳಿಗೆ ಪೆಪ್ಸ್‌ನ್ನು ಸೇವಿಸಿರಿ.

ಏಜಂಟರು —ಮೆಸ್ಸರ್ಸ್ ದಾಧಾ ಎಂಡ್ ಕೋ., ಪಿ ಟಿ ಮದ್ರಾಸು

ಎಲ್ಲಾ ಔಷಧಿ ಮಾರಾಟಗಾರರಲ್ಲಿ ಪೆಪ್ಸ್ ಬಾಟ್ಲಿ 1ಕ್ಕೆ ರೂ 1ರಂತೆ ಮಾರಲ್ಪಡುತ್ತದೆ

ಪೆಪ್ಸ್ PEPS

ನವರತ್ನಾ 'ಚ್ಯವನಪ್ರಾಶಾವ ಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ.

ರಾತಲು 1ಕ್ಕೆ ರೂ 2—6—0. ½ ರಾತಲು 1—4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಪ್ಲೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸು ವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳಿದು.

ಕ್ರಯ 16 oz 8-0-0; 8 oz 1-10 0; 4 oz 0—14—0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪಾಪ್ಯುಲರ್ ಸ್ಟೋರ್ಸ್, ಮಂಗಳೂರು   ಪಿ. ವಿ. ಶೆಣೈ ಕಾರ್ಕಳ.
ಕೆ. ಎಲ್. ಐತಾಳ, ಉಡುಪಿ   ಮೊಡರ್ನ್ ಫಾರ್ಮೆಸಿ, ಕುಂದಾಪುರ.
ಬಿ. ಜಿ. ಬಂಡಾರಿ, ಪುತ್ತೂರು   ಕರ್ನಾಟಕ ಸ್ಟೋರ್ಸ್ ಬಾರಕೂರ.
ಡಾ। ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NARSI & CO.,
Chemists, Princess Street, BOMBAY

DIAMONDS! DIAMONDS!

BEST BRILLIANCY

K. R. K. SHET,

Near Mission High School,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾ: ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ ಮಂಗಳೂರು

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಸಿನ ಕಲೆ ವಗೈರೆ ಯಾವ ದೋಷ ಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಥಾಯಿಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಶಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್ಸ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of
Please call on or write to:

Simon & Co.,
Painters,
Churchgate, Hampankatta No. 13, MANGALORE.

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸ್ಯಾನ್ ಬೋರ್ಡುಗ ಇತ್ಯಾದಿಗಳನ್ನೂ,
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.
ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

KANARA WATCH WORKS

WATCH MAKERS & GENERAL MERCHANTS
Hampankatta MANGALORE

Dealers in — Watches, Clocks, Timepieces, Rolled Gold Jewellery & Sporting Materials etc,



Stockists of West End, Zenith Meridian Swiss Watches of latest designs & tastes

Repairers – Watches, Clocks, Timepieces and Gramophones

Japan 8 Inch	Octegon	Rs	6	0	0
„ 8 „	Regulator	„	6	12	0
„ 10 „	Octegon	,	6	8	0
„ 10 „	Regulator	,	7	8	0

ಇವುಗಳು ಆಧುನಿಕ ಯಂತ್ರ ಸಾಮಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಂಗೆ ಸದಾ ಸಿದ್ಧವಿರುವುವು ವಾಚು, ಗಡಿಯಾರ, ವ ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 6 ವರ್ಷಗಳ ಅಖಂಡ ಗ್ಯಾರಂಟಿ ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್

ಶ್ರೇಷ್ಠ ಮಾರಾಟ ಗಟ್ಟಿಯಾದ ಯಂತ್ರಸಾಮಗ್ರಿಗಳು ... ಗಡಿಯಾರಗಳು ಅತಿ ಕಮ್ಮಿ ಬೆಲೆಗಳು ... ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ... ವಾಚು 1ಕ್ಕೆ ರೂ 2-10 0 ಅದರಲ್ಲಿ ಉತ್ತಮವಾದದ್ದು 3-8-0 ಬಂಗಾರದ ಗಿಲೀಟಿದ್ದದಕ್ಕೆ ರೂ 4—8—0 ... ರೂ 5-0 0 ... ಆಯತಾಕಾರದಕ್ಕೆ 6-8-0 ಅದರಲ್ಲಿ ಬಂಗಾರದ ಗಿಲೀಟಿದ್ದದಕ್ಕೆ 7-8-0 ... ರೂ 1-14-0 ... 1ಕ್ಕೆ ... ರೂ 1-1...-0 ಮಾತ್ರ

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು.

M. L. Watch Co., 176 Cross Street CALCUTTA

USE KALYANPUR SUGAR

IT IS THE PUREST & THE SWEETEST

IT IS A UNIQUE PRODUCT OF OUR OWN DISTRICT.

available in 7lb and 14lb packets, at the
Office, C. P. C. Co., Ltd.

ಕಲ್ಯಾಣಪುರ ಸಕ್ಕರೆಯನ್ನೇ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಉಪಾಧ್ಯಾಯರ ಮೇಲೆ ಅಮೃತ ವರ್ಷ!

(ಬರೆದು ಬಂದುದು.)

ಇತ್ತೀಚಿಗೆ ಕೆಲವು ಸಮಯದಿಂದ ತಮ್ಮ ಮುಖಂಡತನವನ್ನು ವಹಿಸಿಕೊಂಡಂಥವರು ಮೊದಲುಗೊಂಡು ಸರಕಾರದ ವಿದ್ಯಾಭ್ಯಾಸದ ಉಚ್ಚಾಧಿಕಾರಿಗಳ (ತನಕ) ಅಧಿಕಾರಿ ಬಿನ್ ಅಧಿಕಾರಿ ದೊಡ್ಡ ದೊಡ್ಡ ಮನುಷ್ಯರು ಆಡಿದ ಮಾತು, ಮಾಡಿದ ಭಾಷಣ, ಬರೆದ ಲೇಖನಗಳನ್ನು ನೋಡಿದರೆ, ಏನು ಉಪಾಧ್ಯಾಯರ ಮೇಲೆ ಅಮೃತ ವರ್ಷವಾಗುತ್ತಿರುವುದೋ ಎಂಬ ಹಾಗೆ ಭಾಸವಾಗುತ್ತದೆ. ಉಪಾಧ್ಯಾಯರು ಭೂಲೋಕದಲ್ಲಿದ್ದು ಸ್ವರ್ಗಸುಖವನ್ನು ಅನುಭವಿಸಲಿಕ್ಕೆ ಇನ್ನು ಹೆಚ್ಚು ಸಮಯ ಹೋಗದು ಎಂಬ ಹಾಗೆ ತೋರುತ್ತದೆ ಉಪಾಧ್ಯಾಯರ ಮೇಲೆ ಈ ಸಮಯದಲ್ಲಿ ಈ ಅಮೃತ ವರ್ಷ ಯಾಕೆ ಆಗುತ್ತಿರುವದೆಂಬ ಸಂದೇಹವುಂಟಾಗುತ್ತದೆ ಉಪಾಧ್ಯಾಯರನ್ನು ಸಂತುಷ್ಟಪಡಿಸಲಿಕ್ಕೆ ಇಂಥ ಪ್ರಯತ್ನಗಳು ಯಾಕೆಂದು ದುಃಖವಾಗುತ್ತದೆ.

ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಉಪಾಧ್ಯಾಯರಿಗಿರಬೇಕಾದ ಮಹತ್ವದ ಸ್ಥಾನ ಯಾವುದು, ಅವರಿಗೆ ಸಲ್ಲಬೇಕಾದ ಮರ್ಯಾದೆ ಎಷ್ಟು ಎಂಬುದನ್ನು ಈ ವರೆಗೆ ತಿಳಿದವರಿಲ್ಲ, ತಿಳಿಯುವ ಆತುರ ಕೂಡಾ ಅವರಲ್ಲಿಲ್ಲ, ಏನೋ ಹೊಟ್ಟೆ ಪಾಡಿಗಾಗಿ ಗಂಟೆ, ಅರ್ಧ ಗಂಟೆ ಶ್ರಮಿಸುವ ಬಡಜೀವಿಗಳು ಇವ್ರು, ಎಂದು ಉಪೇಕ್ಷೆಯಿಂದಿದ್ದವರೇ ಹೆಚ್ಚು ಸಂಖ್ಯೆಯಿಂದ ಕಂಡು ಬರುತಿದ್ದರು. ಉಪಾಧ್ಯಾಯರಿಗೆ ಮಾನ ಮರ್ಯಾದೆ ಕೊಡುವದಿರಲಿ, ಅವರ ಯೋಗಕ್ಷೇಮ ವಿಚಾರಿಸುವವರು ಕೂಡಾ ಇದ್ದಿರಲಿಲ್ಲ ಉಪಾಧ್ಯಾಯರಾದರೂ ತಮ್ಮಲ್ಲಿದ್ದ ಕುಂದುಕೊರತೆ ಲೋಪ ದೋಷಗಳಿಂದ ಕೈ ತೊಳೆದುಕೊಂಡು ತಮ್ಮ ನ್ಯಾಯವಾದ ಹಕ್ಕು ಅಧಿಕಾರಗಳನ್ನು ಪಡೆಯಲಿಕ್ಕಾಗಲೀ, ತೆಗೆದುಕೊಳ್ಳಲಿಕ್ಕಾಗಲೀ, ಅಸಮರ್ಥರಾಗಿದ್ದರು

ಇಷ್ಟು ದಿನಗಳು ಹೀಗೆ ಕಳೆದುಹೋದುವು ಎರಡೂ ಕಡೆಗಳ ಉಪೇಕ್ಷೆ ಕರ್ತವ್ಯ ವಿಮುಖತೆಯಿಂದ ಉಂಟಾದ ದುಷ್ಪರಿಣಾಮಗಳನ್ನು ಅನುಭವಿಸುವ ದಿನಗಳು ಈಗ ಬಂದುವು ಉಪಾಧ್ಯಾಯ ಸಮುದಾಯವನ್ನು ಅಲಕ್ಷಿಸಿದುದರಿಂದ, ದೇಶದ ರಕ್ಷಣೆ ಉದ್ಧಾರ ಅಭಿವೃದ್ಧಿಯಲ್ಲಿ ಯಾವ ಯಾವ ತೊಡಕುಗಳು ಉಂಟಾಗುತ್ತವೆ ಎಂಬುದನ್ನು ಈಗ ಮುಖಂಡ ಸರಕಾರವೂ ತಿಳಕೊಳ್ಳಹತ್ತಿದೆ ಶಿಕ್ಷಣ ಕ್ಷೇತ್ರದಲ್ಲಾಗುತ್ತಿರುವ ಅಪನ್ಯಯ ದುರ್ವ್ಯಯಗಳಿಗೆ ತಮ್ಮನ್ನು ತಾವೇ ಪ್ರಥಮತಃ ದೂರಿಕೊಳ್ಳಬೇಕಾಗಿದೆ ಎಂದು ಮುಖಂಡರಿಗೂ ಸರಕಾರಕ್ಕೂ ಗೊತ್ತಾಗಹತ್ತಿದೆ ಉಪಾಧ್ಯಾಯರನ್ನು ಉಪೇಕ್ಷಾ ಬುದ್ಧಿಯಿಂದ ನೋಡಿದ ಕಾರಣ, ಸೇಕಡಾ ೯೦ಕ್ಕೂ ಮಿಾರಿ ಜನರು ಅಕ್ಷರ ಜ್ಞಾನ ಹೀನರಾಗಿ ಉಳಿಯಬೇಕಾದರೆಂದೂ, ಅದೇ ಕಾರಣದಿಂದ ರಾಜಕೀಯ ಸಾಮಾಜಿಕ ಉನ್ನತಿ ಭಿನ್ನ ಭಿನ್ನ ಕಾರ್ಯಕ್ಷೇತ್ರಗಳಲ್ಲಿ ಉಂಟಾಗುವ ಕಷ್ಟನಷ್ಟಗಳು ಹೇಗೆ ಅಪರಿಹಾರ್ಯಕವಾಗಿವೆ ಎಂದೂ ತಮ್ಮ ಲಕ್ಷ್ಯಕ್ಕೆ ಕರತೊಡಗಿದೆ

ಅಷ್ಟರಿಂದಲೇ ಈ ಅಮೃತ ವರ್ಷವಾಗುತ್ತಿರುವುದಲ್ಲ ಈಗ ಉಪಾಧ್ಯಾಯ ಸಮುದಾಯವೂ ಎಚ್ಚೆತ್ತು ಸಂಘಟಿತವಾಗ ತೊಡಗಿದೆ ಅದರ ಜೀವನ ಧ್ಯೇಯೋದ್ದೇಶಗಳು, ಕಾರ್ಯಸಾಧನೆಯ ಉಪಯುಕ್ತ ಉಪಾಯಗಳು ಅದಕ್ಕೆ ಗೊತ್ತಾಗಹತ್ತಿವೆ. ಅದು ತನ್ನಲ್ಲಿದ್ದ ಕುಂದು ಕೊರತೆ ಲೋಪದೋಷಗಳನ್ನು ಒಂದೊಂದಾಗಿ ತೊಡೆದು ಹಾಕಿ ಯೋಗ್ಯತೆಯನ್ನು ಉಪಯುಕ್ತತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಯೋಗ್ಯತಾ ಸಂಪನ್ನ ಉಪಯೋಗೀ ಉಪಾಧ್ಯಾಯ ಸಮುದಾಯದ ಸಂಪೂರ್ಣ ಸಹಕಾರ ಸಹಾಯ ಬೆಂಬಲಗಳಿಲ್ಲದೆ ಸಾಮಾಜಿಕ ರಾಜಕೀಯ, ಯಾವದೇ ಪಕ್ಷ ವಿಪಕ್ಷದ, ಕಟ್ಟಕಡೆಗೆ ಅತ್ಯಂತ ಬಲಿಷ್ಠ ಸಹಕಾರದ ಯಾವದೇ ಕಾರ್ಯಕ್ರಮವು ಕೂಡ ಪೂರ್ಣ ಸಫಲವಾಗಲಾರದೆಂಬುದು ಅದಕ್ಕೆ ಗೊತ್ತಾಗಿದೆ ಮುಖ್ಯತಃ ಉಪಾಧ್ಯಾಯ ಸಮುದಾಯಕ್ಕೆ ತನ್ನ ಶಕ್ತಿಯ ಪರಿಚಯವು ಆಗಿದೆ ಅದು ಹೆಚ್ಚೆಚ್ಚು ನಿರ್ಭಯ ಮತ್ತು ಶಕ್ತಿಯುಕ್ತವಾಗ ತೊಡಗಿದೆ

ಆದ್ದರಿಂದ ಉಪಾಧ್ಯಾಯರ ಮೇಲೆ ಈ ಅಮೃತ ವರ್ಷ' ಇಷ್ಟು ಸಹಾನುಭೂತಿ! ಆದರೆ ಉಪಾಧ್ಯಾಯರು—ಇದು ಬರೀ ಮಾತಿನ ಅಮೃತ ವರ್ಷವೆಂದು ತಿಳಿದಿದ್ದಾರೆ ಇಂಥ ವರ್ಷದಿಂದ ಅವರ ದಾಹಶಾಂತಿ ಎಂದೆಂದಿಗೂ ಆಗಲಿಕ್ಕಿಲ್ಲ ಇದರಿಂದ ರಾಷ್ಟ್ರಮುಖಂಡರ ಅಥವಾ ಸರಕಾರದ ಇಷ್ಟಾರ್ಥಸಿದ್ಧಿಯೂ ಆಗಲಾರದು ಮೌಖಿಕ ಸಹಾನುಭೂತಿಯನ್ನು ಮಾತ್ರ ತೋರಿಸುವ ಮಾತುಗಳನ್ನು ಉಪಾಧ್ಯಾಯರು ಅನೇಕ ವರ್ಷಗಳಿಂದ ಕೇಳುತ್ತಾ ಬಂದಿದ್ದಾರೆ ಅವುಗಳನ್ನು ಇನ್ನೂ ಇನ್ನೂ ಕೇಳುತ್ತಿರಬೇಕೆಂಬ ಆತುರದಿಂದಾಗಲೀ ಕುತೂಹಲವಾಗಲೀ ಅವರಲ್ಲಿ ತಿಲಮಾತ್ರವೂ ಇರುವದಿಲ್ಲ ಉಪಾಧ್ಯಾಯರಲ್ಲಿ ನವೀನ ಸ್ಫೂರ್ತಿ ಉತ್ಸಾಹಗಳನ್ನು ತುಂಬಿಸುವ ಶಕ್ತಿ ಇಂಥ ಲೇಖನ ಭಾಷಣಗಳಿಗೆ ಸ್ವಲ್ಪ ಮಾತ್ರವೂ ಇರುವುದಿಲ ಮಾತಿನಲ್ಲಿ ಮಚ್ಚುಮರೆ ಇರಕೂಡದು ಆದ್ದರಿಂದ ಹೃದಯದಿಂದ ಒಂದ ಈ ಮಾತುಗಳನ್ನು ಸ್ಪಷ್ಟವಾಗಿ ಹೇಳದರೆ ತಪ್ಪಾಗಲಾರದೆಂದು ನನ್ನ ತಿಳುವಳಿಕೆ

ದುಡ್ಡಿನಿಂದಲೇ ಇಹಲೋಕ ಪರಲೋಕ ನಡೆಯುತ್ತದೆ ಸ್ವಲ್ಪ ಸ್ಥಿತಿಯ ಕರ್ತಾರದ ತ್ರಿಮೂರ್ತಿಗಳ [illegible] ಇದೇ ದ ದ್ದ ದ ದ್ದ [illegible] ಎಂದೊಬ್ಬ ಕವಿಗಳು ಹೇಳಿದ ಮಾತಿನಲ್ಲಿ ಎಷ್ಟು ವ್ಯಂಗ್ಯವಿದೆಯೋ ಅಷ್ಟೇ ಸತ್ಯವಿದೆ. ಉಪಾಧ್ಯಾಯರಿಗೆ ಅವರ ಯೋಗ್ಯತೆ ಮತ್ತು ಪರಿಶ್ರಮ, ಅವರ ಕಾರ್ಯದ ಮಹತ್ವ ಮತ್ತು ಜವಾಬ್ದಾರಿಗೆ ತಕ್ಕಂತೆ ತಲಬು ಸಿಕ್ಕುತಿರುವದೆ? ಆವರ ಸ್ಥಾನಕ್ಕೆ ತಕ್ಕಂಥ ಮಾನಮರ್ಯಾದೆ ಉದ್ಯೋಗ ಭದ್ರತೆ ಹಕ್ಕು ಅಧಿಕಾರಗಳು ಅವರಿಗೆ ಪ್ರಾಪ್ತವಾಗಿರುವವೆ? ಇಲ್ಲವಾದರೆ, ಯಾಕಿಲ್ಲ? ಅದಕ್ಕಾಗಿ ನಮ್ಮ ಮುಖಂಡರೂ ಸರಕಾರವೂ ಮಾಡಿದ ಪ್ರಯತ್ನವೆಷ್ಟು? ಪ್ರಯತ್ನಗಳಿಗೆ ದೊರಕಿದ ಸಫಲತೆ ಎಷ್ಟು? ಇದನ್ನೆಲ್ಲಾ ವಿಚಾರಿಸಿಕೊಳ್ಳದೆ ಮಾತಿನ ಅಮೃತ ವರ್ಷಕವಾದರೆ ಆ ಅಮೃತದಲ್ಲಿ ಸಂಜೀವನ ಶಕ್ತಿ ಇಲ್ಲ ಅದು ಬರೀ ಸಪ್ಪೆ ನೀರು ಎಂದು ಉಪಾಧ್ಯಾಯರು ವಿಮುಖರಾಗುವರು. ಆಗ ಪರಿಸ್ಥಿತಿಯು ಮೊದಲಿಗಿಂತ ಬಿಕ್ಕಟ್ಟಿನದಾಗುವದು ಆಗ ಮುಖಂಡರೂ ಸರಕಾರವೂ ತನ್ನ ಕರ್ತವ್ಯ ಪರಾಙ್ಮುಖತೆ, ಅಂಧದೃಷ್ಟಿ, ಅವಿಚಾರ ಅವಿವೇಕಕ್ಕಾಗಿ ತನ್ನನ್ನು ತಾನು ಧಿಕ್ ಧಿಕ್ ಎನ್ನುವ ಕಾಲವು ಬರುವುದು ಕ್ರಾಂತಿಯು ಆಗುವದು ಆಗಲಿ' ಪರಿಸ್ಥಿತಿಯು ಅಷ್ಟು ಪ್ರತಿಕೂಲವಾಗಬೇಕೆಂದು ಯಾರಾದರೂ ಅಪೇಕ್ಷಿಸಲಾರರಷ್ಟೆ?

ಉಪಾಧ್ಯಾಯರಿಗೆ ಮಾತಿನ ಅಮೃತ ವರ್ಷ ಬೇಡ ಮುಖಂಡರೂ ಸರಕಾರದ ಅಧಿಕಾರಿಗಳೂ ನಿಜವಾಗಿ ಉಪಾಧ್ಯಾಯರ ಹಿತಚಿಂತಕರಾಗಿರುವದಾದರೆ ಅವರು ಕ್ರಿಯಾತ್ಮಕ ಸಹಾನುಭೂತಿಯನ್ನು ತೋರಿಸಬೇಕು ಉಪಾಧ್ಯಾಯರ ಆರ್ಥಿಕ ಸ್ಥಿತಿಯ ಸುಧಾರಣೆ, ಸ್ಥಾನಮಾನಗಳ ರಕ್ಷಣೆ, ಉದ್ಯೋಗ ವೃತ್ತಿಗಳ ಭದ್ರತೆ ಹಕ್ಕು ಅಧಿಕಾರಗಳ ಪ್ರಾಪ್ತಿಗೆ ನಿಜವಾದ ಪ್ರಯತ್ನಗಳನ್ನು ಮಾಡಬೇಕು ಎಂದಿನ ತನಕ ಉಪಾಧ್ಯಾಯರ ಸರಳ ಜೀವನ ಮತ್ತು ಜೀವನ ಭದ್ರತೆಗೆ ಬೇಕಾದಷ್ಟು ತಲಬು ಅವರಿಗೆ ದೊರೆಯುವುದಿಲ್ಲವೋ, ಸುಖಜೀವನದ ಸೌಲಭ್ಯಗಳು ಅವರಿಗೆ ಪ್ರಾಪ್ತವಾಗುವುದಿಲ್ಲವೋ ಅಂದಿನ ತನಕ ಅದೇ [illegible] ಕಾರ್ಯಸಾಧನೆಗಾಗಿ ನಮ್ಮ ಮುಖಂಡರೂ ಸರಕಾರದ ಅಧಿಕಾರಿಗಳೂ ತಮ್ಮ [illegible] ಶಕ್ತಿಯುಕ್ತಿ [illegible] ಯೋಗಿಸಿ [illegible] ದರೆ ಪ್ರಯೋಜನವುಂಟು [illegible] ಅದೊಂದು ಕಾರ್ಯವನ್ನು ಬಿಟ್ಟು ಮಿಕ್ಕ ಎಷ್ಟು ಕಾರ್ಯಗಳನ್ನು ಎಷ್ಟು ಚೆನ್ನಾಗಿ ಮಾಡಿದರೂ ವ್ಯರ್ಥವೆ! ಅದೊಂದನ್ನು ಮಾಡದೆ ಉಪಾಧ್ಯಾಯರಿಂದ ಹೆಚ್ಚಿನ ಉತ್ತಮ ಪ್ರಯೋಜನವನ್ನು ನಿರೀಕ್ಷಿಸುವದು ನ್ಯಾಯವಲ್ಲ, ಅದು ದೊರಕುವಂತೆಯೂ ಇರುವದಿಲ್ಲ

ನಮ್ಮ ಮುಖಂಡರೂ ಸರಕಾರವೂ ಉಪಾಧ್ಯಾಯರ ಈ ಅಂತರಂಗದ ಭಾವನೆಯನ್ನು ಅರಿತುಕೊಂಡು ತಮ್ಮ ಮುಂದಿನ ಕಾರ್ಯಕ್ರಮವನ್ನು ರಚಿಸಿಕೊಂಡರೆ, ಅದರಿಂದ ಉಪಾಧ್ಯಾಯರಿಗೆ ಕ್ಷೇಮವುಂಟು, ಮುಖಂಡರ ಮತ್ತು ಸರಕಾರಕ್ಕೆ ಕ್ಷೇಮವುಂಟು, ಎಲ್ಲರಿಗೆ ಕ್ಷೇಮವುಂಟು

ಶ್ರೀಮತಿ ಆರ್. ಶ್ಯಾರವರು— ಇವರು ಮಧ್ಯಪ್ರಾಂತ್ಯದ ಸರಕಾರದ ಹಾರ್ಟಿಕಲ್ಚರಿಸ್ಟರಾಗಿ ನೇಮಕಹೊಂದಿರುವರು (ಹಾರ್ಟಿಕಲ್ಚರ್ = ತೋಟಗಾರಿಕೆ)

[illegible] ಕೆನಡಾ ಇತ್ಯಾದಿ ಬ್ರಿಟಿಷ ಸಾಮ್ರಾಜ್ಯದ ಆಶ್ರಿತ ರಾಷ್ಟ್ರಗಳು, ಬ್ರಿಟನು ಇನ್ನೊಂದು ಮಹಾ ಯುದ್ಧದಲ್ಲಿ ಕೈ ಮಾಡಿದರೆ, ತಾವು ಅದರಲ್ಲಿ ಭಾಗಿಯಾಗಲಾರೆವೆಂದೂ ಎಂಬ ಚಳ ಳವು ಆ ದೇಶಗಳಲ್ಲಿ ಉಂಟಾಗಿರುತ್ತದೆಂದು ತಿಳಿದುಬರುತ್ತದೆ



TEST YOUR EYES

By the Electro Ophthalmoscope





All Varieties of Frames & Lenses.

AT

The Mangalore Trading Association Ltd.

Sight Testing Ophthalmic Opticians,

Car Street, MANGALORE.

"Dil Roz" (Regd)

"Dil Roz" is a sure cure for Oriental sores local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess.

ಇಂದು ಸಂಯುಕ್ತ ಪ್ರಾಂತ್ಯದಲ್ಲಿ ಪೋಲೀಸರ ಅಧಿಪತಿಗಳಾಗಿದ್ದವರು ಒಂದಾನೊಂದು ದಿನ, ಅವರ ಕೈಯಲ್ಲಿ ಅತ್ಯಂತ ಕ್ರೂರತನವನ್ನನುಭವಿಸಿರುವರು. ಪ್ರಧಾನ ಮಂತ್ರಿ ಪಂತರು ಪ್ರಧಾನ ಸಚಿವರಾಗಿ, ಆರ್ಥಿಕ ಇತ್ಯಾದಿ ಖಾತೆಗಳೊಂದಿಗೆ ಪೋಲೀಸ್ ಇಲಾಖೆಯ ಮೇಲ್ವಿಚಾರವನ್ನು ತೆಗೆದುಕೊಂಡಿರುವರು. ಕಠಿಣತರದ ಲಾಠಿ ಹೊಡೆತಕ್ಕೆ ಒಳಗಾದವರು, ಪ್ರಧಾನ ಮಂತ್ರಿಗಳಲ್ಲಿ ಇವರೊಬ್ಬರೆ ಈ ಮಾನ್ಯವನ್ನು ಅವರು ರಾಷ್ಟ್ರಪತಿಯವರೊಡನೆ ಪಡೆದರು. ಸೈಮನ್ ಬೊಯ್ಕಾಟಿನ ಸಮಯ ಲಾಲಾಜಿಯವರ ಮೇಲೆ ಕೊರಡೆ ಏಟುಗಳು ಬಿದ್ದು, ಅವರು ಬಲಿದಾನದ ನಂತರ ಸಪ್ತಸ್ವಾಮಿನರು ಲಕ್ನೋ ನಗರಕ್ಕೆ ಬಂದಿದ್ದಾಗ, ಪಂಡಿತ ಜವಾಹರಲಾಲರ ಅಲ್ಲಹಾಬಾದಿನಿಂದ ಅತ್ತ ಕಡೆಗೆ ಹೋಗಿ, ಕಪ್ಪು ಧ್ವಜಗಳನ್ನು ಹಿಡಿದ ಹದಿನಾರು ಸ್ವಯಂಸೇವಕ ದಳಗಳನ್ನು ನಡೆಯಿಸಿದರು ಅವರನ್ನು ಅನ್ವಯಿಸಿ ಇನ್ನೊಂದು ದಳವು ನಡೆಯಿತು ಪಂಡಿತ ಪಂತರ ನಾಯಕತ್ವದಲ್ಲಿ ಫಕ್ಕನೆ, ಎಚ್ಚರಿಕೆ ಕೂಡ ಕೊಡದೆ, ಕುದುರೆ ಸವಾರರು ಪೋಲೀಸರು, ಈ ಕಾಂಗ್ರೆಸ್ ದಳಗಳ ಮೇಲೆ ಭಯಂಕರ ಅಭಿಕ್ರಮವನ್ನು ನಡೆಸಿದರು. ಲಾಠಿಗಳು ಬೀಸಲಾದುವು ಏಟುಗಳ ಸುರಿಮಳೆಯು ಅವರ ಮೇಲೆ ಸುರಿಸಲಾಯಿತು ಆದರೆ ಧೈರ್ಯವಂತ ವೀರರ, ಕದಡದೆ ಅಲ್ಲೆ ನಿಂತರು

"ನನಗೆ ಅಷ್ಟೊಂದು ಘಾತುಕಮಯ ಹಿಂಸೆಯು ಆಗದಿದ್ದರೂ ನನ್ನ ಮಿತ್ರರನೇಕರು ಭಯಂಕರ ಘಾತುಕಕ್ಕೆ ಒಳಗಾಗಿ, ಮರ್ಮಸ್ಥಳಗಳ ಮೇಲೆ ಹಿಂಸೆಯನ್ನು ಹೊಂದಿದರು ನನ್ನೊಡನೆ ನಿಂತ ಪಂಡಿತ ಪಂತರು, ಅವರ ದುಂಡಗಾದ ಶರೀರದಿಂದ ಅಸಂಖ್ಯಾತ ಏಟುಗಳಿಗೆ ಒಳಗಾದರು ಅದರಿಂದ ಉಂಟಾದ ಗಾಯ ಇತ್ಯಾದಿಗಳಿಂದ ಪಂಡಿತ ಪಂತರಲ್ಲಿ ಒಂದು ವೇದನಾಮಯ ರೋಗವು ಉಂಟಾಯಿತು ಬಹಳ ಸಮಯ ಅವರಿಗೆ ನೆಟ್ಟಗೆ ಕುಳಿತುಕೊಳ್ಳಲಾಗುತ್ತಿರಲಿಲ್ಲ ಎಂದು ಜವಾಹರಲಾಲರು ಬರೆದಿರುವರು

ಇಂದಿಗೂ ಪಂಡಿತ ಪಂತರ ... ಯಾಗಿ ಇದೆ ಆ ದಿನ ಅಂಧ ಅಭಿಕ್ರಮದ ಸ್ಮರಣಾರ್ಥವಾಗಿ

ನಾಗಪುರದ ಡಾ. ಖಾರೆಯವರು, ಪ್ರಸಿದ್ಧ ಬೆರಿಸ್ಟರ ಅಭ್ಯಂಕರರ ನಂತರ ಮಧ್ಯಪ್ರಾಂತದ ಕಾಂಗ್ರೆಸ್ ... ... ವಹಿಸಿದವರು. ವೈದ್ಯ ವೃತ್ತಿಯವರು, ನಿರ್ಭಯ ಸ್ವಾತಂತ್ರ್ಯ ಪುರುಷರು. ದೇಶಕ್ಕಾಗಿ ಮಹಾ ಅರ್ಪಣೆಯನ್ನು ಮಾಡಿದವರು,—ಅನುಸಂಕಟಗಳನ್ನು ಅನುಭವಿಸಿದವರು.

ಒರಿಸ್ಸಾ ಪ್ರಾಂತ್ಯದ ಮುಖ್ಯ ಮಂತ್ರಿಗಳಾದ ಬಿಶ್ವನಾಥ ದಾಸರವರು, ಒಂದಾನೊಂದು ಕಾಲ ಮದ್ರಾಸು ಶಾಸನ ಸಭೆಯಲ್ಲಿದ್ದರು ಸ್ಥಳೀಯ ಸಂಸ್ಥೆಗಳ ಆಡಳಿತದ ಕುರಿತು ಒಳ್ಳೆ ಪ್ರಶಂಸೆಯನ್ನೂ, ಸತ್ಯಾಗ್ರಹ ಚಳವಳದಲಿ ಕೀರ್ತಿಯನ್ನು ಗಳಿಸಿರುವರು.

ರಾಜೇಂದ್ರ ಬಾಬುಗಳ ಪ್ರಾಂತ್ಯವಾದ ಬಿಹಾರಿನಲ್ಲಿ ಶ್ರೀ ಕೃಷ್ಣ ಸಿನ್ಹಾರವರು ಪ್ರಧಾನ ಮಂತ್ರಿಗಳು ತನ್ನ ನಾಯಕರಂತೆ ಸರಳ ಜೀವಿಗಳು ಕಾಂಗ್ರೆಸ್‌ವಾಲರು, ಮಂತ್ರಿ ಪದವಿಯು, ತೋಟಿಯರ ಜಾಡು,—ಈ ಮೂರಲ್ಲಿ ಒಂದಿಷ್ಟು ಭೇದವಿಲ್ಲವೆಂಬ ಅಭಿಪ್ರಾಯವುಳ್ಳವರು ಪ್ರಸಿದ್ಧ ಸಾಧಕ ಆಶ್ರಮದಿಂದ ಸ್ಫೂರ್ತಿ ಹೊಂದಿದವರು— ಶ್ರೀ ಸಿನ್ಹಾರವರು

ಶ್ರೀಗಳಾದ ಬಿ ಜಿ ಖೇರ್, ಮುಂಬಾಯಿ ಪ್ರಾಂತದ ಮುಖ್ಯ ಮಂತ್ರಿಗಳು,—ಇವರ ಪರಿಚಯವು ಆ ಪ್ರಾಂತ್ಯದಲ್ಲಲ್ಲದೆ, ಮಿಕ್ಕ ಪ್ರಾಂತ್ಯಗಳಲ್ಲಿ ಯಾರಿಗೂ ಇರಲಿಲ್ಲ ಆದುದರಿಂದಲೆ ಶ್ರೀ ನರಿಮಾನರನ್ನು ಬಿಟ್ಟು ಅವರನ್ನು ಕಾಂಗ್ರೆಸ್ ನಾಯಕರನ್ನಾಗಿ ಆರಿಸಿದಾಗ, ಜನತೆಗೆ ಆಶ್ಚರ್ಯವಾದುದು

ಆದರೆ ಖೇರರು ವೀರಪುರುಷರು ಆಡಂಬರವಿಲ್ಲದೆ ಮೌನವಾಗಿ, ಶಾಂತರೀತಿಯಲ್ಲಿ ಕೆಲಸವನ್ನು ಮಾಡುವವರು ವಕೀಲರಾಗಿದ್ದ ಬಿ ಜಿ ಖೇರರವರು ದೇಶಕ್ಕಾಗಿ ಅನೇಕ ಸೇವೆಗಳನ್ನೂ ಮಹಾ ಅರ್ಪಣೆಗಳನ್ನೂ ಮಾಡಿರುವರು ಅಸಹಕಾರ ಚಳವಳಿಕ್ಕೆ ಬೇಕಾದ ಧನ ಸಹಾಯವನ್ನು ಒದಗಿಸಲು ತಮ್ಮ ಹಿರಿಯರ ಮನೆಗಳನ್ನು ಒಂದೊಂದಾಗಿ ಮಾರಿದವರು

ಮುಂಬಾಯಿ ನಗರದ ಸಮೀಪದಲ್ಲಿ ಹರಿಜನರಿಗಾಗಿ ಒಂದು ಕೈಗಾರಿಕೆ ... ... ವಸಾಹತನ್ನು ನಡೆಸುತ್ತಿದ್ದಾರೆ ಪ್ರತಿಒತ್ತು ಸಾಯಂಕಾಲ ಸಮಯ ದೊರಕಿದೊಡನೆ, ಅವರು ಈ ವಸಾಹತಿಗೆ ತೆರಳಿ ಅಲ್ಲಿ ಖುದ್ದಾಗಿ ಕೆಲಸ ಮಾಡುವರ ಅವರ ಹೆಚ್ಚಿನ ಉತ್ತಮತೆಯು ಅದರ ... ...

L. K. G.

ತ್ವರೆಮಾಡಿರಿ !

ಈಗ ಉಚಿತವಾಗಿ ಕೊಡುವ ನಿಮ್ಮ ಲಕ್ಸ್ ಟಾಯಿಲೆಟ್ ಸೋಪನ್ನು ಪಡೆದುಕೊಳ್ಳಿರಿ.

*ಇದು ಜುಲೈ 31 ರ ವರೆಗೆ ಮಾತ್ರ ಇರುವುದು.

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP

[illegible]

[illegible]
[illegible]
[illegible]
[illegible]
ಕಗ್ರಲೇಖ
ಮಹಾತ್ಮರ ಮಾ[illegible]
ಸ್ಫುಟಟಿಪ್ಪಣಿಗಳು
ವರ್ತಮಾನ ಸಂಗ್ರಹ
[illegible] ಸಮಾಚಾರಗಳು
[illegible] ಸಮಾಚಾ
[illegible]ಗಳಿಂದ
ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಮಹಾತ್ಮರ
ಹಿತೋಪದೇಶ ೧೨

ಸ್ವದೇಶಾಭಿಮಾನಿ.

ತಾ. ೨೩ನೇ ಶುಕ್ರವಾರ ಜುಲೈ ೧೯೩೭

ಮಹಾತ್ಮರ ಮಾತು

ಕಾಂಗ್ರೆಸ್ ಮಂತ್ರಿಕೂಟಗಳು ಹೇಗೆ ವರ್ತಿಸಬೇಕೆಂಬುದನ್ನು ಮಹಾತ್ಮಾಜೀಯವರು ವಿವರಿಸಿರುವರು ಮಂತ್ರಿಕೂಟಗಳಾಗುವಂತೆ ಸೂಚನೆಯನ್ನು ಮಂಜೂರು ಮಾಡಿಸಿರುವುದರ ಜವಾಬ್ದಾರಿಯು ಅವರ ಮೇಲಿರುವ ಕಾರಣ, ಅವರು ಸ್ಥೂಲ ರೂಪದಲ್ಲಿ ಮಂತ್ರಿಗಳೆಲ್ಲರಿಗೆ ಅವರವರ ಕಾರ್ಯಕ್ರಮವನ್ನು ಅರುಹಿಸಿರುವರು ಆರು ಪ್ರಾಂತ್ಯಗಳಲ್ಲಿನ ಸರಕಾರಗಳು ಈ ನಿರ್ದೇಶದಂತೆ ವರ್ತಿಸುವರಾಗಿ ತಿಳಿಯತಕ್ಕದು

ಈ ಮಂತ್ರಿಗಳು ಅಧಿಕಾರ ವಹಿಸಿಕೊಂಡಿರದಿದ್ದರೆ, ಒಂದು ಕಡೆ ಕ್ರಾಂತಿಯಾದೀತೆಂಬ ರಕ್ತಛಾಯೆಯ ಬೆದರಿಕೆ ಇತ್ತು, ಮತ್ತೊಂದು ಕಡೆ, ಇದು ವರೆಗೆ ಸಂಭವಿಸದಂತಹ ಶಾಸನೋಲ್ಲಂಘನ ಚಳವಳವಾದೀತೆಂಬ ಬೆದರಿಕೆಯೂ ಇತ್ತು ಈಗ ಮಂತ್ರಿಗಳು ಕಾರ್ಯಭಾರಿಗಳಾಗಿರುವುದರಿಂದ ಇವರ ವರ್ತನೆಯ ಮೂಲಕ ಇವೆರಡೂ ಬೆದರಿಕೆಗಳು ದೂರವಾಗುವಂತಾಗಬೇಕೆಂದೇ ಅವರ ಇಚ್ಛೆಯಾಗಿದೆ ಮಂತ್ರಿಗಳು ಕೃತಾರ್ಥರಾಗದಿರುವಲ್ಲಿ ಈ ಹೆದರಿಕೆಗಳಿಗೆ ಇನಸ್ಟು ಅವಕಾಶವಿದ್ದೀತು

ಧೈರ್ಯವೊಂದು ಆಗತ್ಯವಾಗಿಯೂ ಇವರಲ್ಲಿರಬೇಕಾಗಿರುವ ಗುಣ ಅದಿಲ್ಲದೆ ಮೋಕ್ಷವಿಲ್ಲ ಮಧ್ಯಪಾನ ನಿರೋಧ, ಜೈಲುಗಳ ಸುಧಾರಣೆ, ಖಾದೀ ಪ್ರಚಾರ, ಉಪ್ಪಿನ ಸುಲಭ ಸರಬರಾಯಿ ಇವೆಲ್ಲವನ್ನು ಸಾಧಿಸಲೇಬೇಕಾಗಿದೆ ನೋಕರಶಾಹಿಯ ಸ್ವಾಧೀನತೆಯಲ್ಲಿರುವ ಈ ವಿಚಾರಗಳ ಸೂತ್ರಗಳನ್ನು ಮಂತ್ರಿಗಳು ತಾವೇ ಕೈಯಲ್ಲಿಟ್ಟುಕೊಂಡು ಸುಧಾರಣೆಗಳನ್ನು ಮಾಡುವುದೆಂದರೆ, ಇದುವರೆಗೆ ಆಳಿಕೆಯ ಅಭ್ಯಾಸ ಅನುಭವಗಳಿಲ್ಲದವರಿಗೆ ಕಷ್ಟವಾದರೂ, ಧೈರ್ಯದಿಂದ ಅವರು ಪಾರಾಗುವರು ಎಂದೇ ಅವರ ವಿಶ್ವಾಸ

ಮುಖ್ಯ ವಿಚಾರವೆಂದರೆ, ಸಾಮಾನ್ಯ ಜೀವನದ ಹಾದಿ ಹಿಡಿಯಬೇಕೆಂದೇ ಅವರ ಸೂಚನೆ ಸಂಬಳವಂತೂ ೫೦೦ ರೂಪಾಯಿಗೆ ಮೀರಬಾರದೆಂದು ಎಲ್ಲರೂ ಒಪ್ಪಿಕೊಂಡಿರುವುದು ನಿಜ; ಆದರೆ ಎಲೋವೆನ್ಸುಗಳ ಮೊತ್ತ ಉಳಿದುದೇ ಈಗ ಅಪಹಾಸ್ಯಕ್ಕೆಡೆಕೊಟ್ಟಿದೆ ಮನೆ ಮತ್ತು ವಾಹನಗಳಿಗೆ, ೫೦೦ ರೂಪಾಯಿ, ತಲೆಬುಳ್ಳ ಮಂತ್ರಿಗಳು ಆ ಕಲಬಿಂದ ಖರ್ಚನ್ನು ನೋಡಲಾರರೆಂಬುದು ನಿಜ, ಇವೆರಡು ಧರ್ಮಾರ್ಥ ದೊರೆಯುಬೇಕಾಗಿದೆ. ಮಧ್ಯಪ್ರಾಂತ್ಯದಲ್ಲಿ ನಡೆದಿರುವ ವೈಚಿತ್ರ್ಯವೆಂದರೆ, ಸಂಬಳವು ೫೦೦ ರೂಪಾಯಿ, ಎಲೋವೆನ್ಸು ೬೦೦ ರೂಪಾಯಿ! ಕುದುರೆಯ ಕ್ರಯ ಹತ್ತು ರೂಪಾಯಿ ಯಾಗಿಯೂ [illegible] ರೂಪಾಯಿ ಯಾಗಿಯೂ [illegible] ಅಸಂಬದ್ಧ ವಿಚಾರವಾಗಿದೆ. ಸಂಬಳಕ್ಕೂ ಎಲೋವೆನ್ಸಿಗೂ ಒಂದು ಮಿತವಾದ ದಾಮಾಶಾಯವಿರಬೇಕು. ಉದ್ಯೋಗಿಗಳಿಗೆ ಸಂಬಳವು ಜೀವನಕ್ಕಾಗಿದೆ ಹೊರತು ಎಲೋವೆನ್ಸೇ ಮುಖ್ಯ ಆಯವಲ್ಲವಷ್ಟೆ ಅಥವಾ ೫೦೦ ರೂಪಾಯಿ ಕಡಿಮೆಯೆಂದು ಕಂಡರೆ, ಮೇಲ್ವಿಚಾರದ ಕಮಿಟಿಯೊಡನೆ ಹೇಳಿಕೊಂಡು ಏರಿಸಿಕೊಳ್ಳಬಹುದಿತ್ತು ಹೊರತು ಈ ಅಪಹಾಸ್ಯಕರವಾದ ಎಲೋವೆನ್ಸು ವಿಷಯ ಎರಡು ಸಾವಿರ ರೂಪಾಯಿಗಳನ್ನು ತ್ಯಜಿಸಿದ ಗೌರವ ಬುದ್ಧಿಗೆ, ಸಂಬಳಕ್ಕಿಂತಲೂ ಹೆಚ್ಚಾದ ಎಲೋವೆನ್ಸು ಪಡೆಯುವ ಈ ಚಾಳಿಯೇತಕ್ಕೆ ಮಹಾತ್ಮರ ಹೇಳಿಕೆಯನ್ನೋದಿ ಈ ಕಲಂಕವನ್ನು ಆ ಮಂತ್ರಿಗಳು ತೊಳೆದುಕೊಂಡಾರು ಎಂದು ನಂಬಬಹುದಾಗಿದೆ.

ಮಂತ್ರಿಗಳ ಸಂಚಾರವೆಲ್ಲವು ಮೂರನೆ ತರಗತಿಯದಾಗಲೆಂದು ಮಹಾತ್ಮರ ಸೂಚನೆ ಒಂದು ವೇಳೆ ಈಗಣ ಮೂರನೆ ತರಗತಿಯ ರೈಲ್ವೆ ಪ್ರಯಾಣವು ತೀರ ಬೇಸರ ಹುಟ್ಟಿಸುವ ಅನನುಕೂಲತೆಗಳನ್ನೆ ಹೆಚ್ಚಿಸುತ್ತಿದೆಯೆಂದಾದರೆ ಎರಡನೆ ತರಗತಿಯಾದರೂ ಚಿಂತಿಲ್ಲ ಸಲೂನು, ಮೊದಲನೆ ತರಗತಿ—ಇವೆರಡ ರದ್ದಾಗಲೇ ಬೇಕು ತಮ್ಮಂತಿರುವ ಇತರರ ಸ್ಥಿತಿಯು ತಮ್ಮದಾಗಿದೆ ಎಂದು ಮಂತ್ರಿಗಳು ತೋರಿಸಿಕೊಳ್ಳಲಿ, ಹಣವೂ ಉಳಿಯುವಂತಾಗುವುದು ಮಂತ್ರಿಗಳು ಹೀಗೆ ಪ್ರಯಾಣ ಮಾಡುವಾಗ, ಆಫಿಸರುಗಳೂ ಈ ತರಗತಿಯನ್ನೆ ಪ್ರೋತ್ಸಾಹಿಸುವರು ಸರಕಾರವೇ ನೇಮಿಸಿದ ರೈಲ್ವೆ ಕಮಿಟಿಯು ಪ್ರಥಮ ತರಗತಿಯ ಪ್ರಯಾಣವನ್ನು ಕುರಿತಾಗಿ ಅದೊಂದು ವಿಶೇಷ ವ್ಯಯದ ಸಾಧನವೆಂದು ಟೀಕಿಸಿಯದೆ ಈ ತರಗತಿಯ ಪ್ರಯಾಣ ಸ್ಥಿತಿಯು ಇನ್ನು ಬೇಡ, ಪ್ರಜಾಪಾಲಕ ನೋಕರರಿಗಂತೂ ಸಿದ್ಧವೆನಿಸಲಿ

ಅಧಿಕಾರ ಸ್ವೀಕಾರ ಮತ್ತು ಆಕ್ಟಿನ ನಿರಾಕರಣ—ಇವೆರಡೂ ಸಾಧ್ಯವೆ? ಎಂಬ ಪ್ರಶ್ನೆಯನ್ನು ಮಹಾತ್ಮರು ಉತ್ತರಿಸಿರುವರು ಆಕ್ಟನ್ನು ರಚಿಸಿದವರು ಎಣಿಸಿರದ ರೀತಿಯಲ್ಲಿ ಅದನ್ನು ಪ್ರಯೋಗಿಸಿ ಅವರು ಎಣಿಸಿದ ರೀತಿಯಲ್ಲಿ ಅದನ್ನು ಬಳಸದೆ ಇದ್ದರೆ, ಆಕ್ಟು ಇದ್ದೂ ವ್ಯರ್ಥವಾಗುವುದು, ಎಂದು ಅವರ ತತ್ವವಿಚಾರ ಅತೃಪ್ತರಾದ ಜನಗಳಿಗೆ ಒಂದೆರಡು ಚೂರು ತಿಂದಿ ಚೆಲ್ಲಿದರೆ ಅಲ್ಲಿಗೆ ಅವರಲ್ಲಿ ತೃಪ್ತಿಯಾದೀತೆಂದು ನಂಬಿ ಈ ಆಕ್ಟು ರಚನೆ ಹೊಂದಿದೆ ಹಾಗಿರುವಾಗ, ಧೈರ್ಯದಿಂದ ತ್ವರೆಯಾಗಿ ನಿಶ್ಚಿತ ಧ್ಯೇಯದ ಕಡೆಗೆ ಮುನ್ನಡೆವಂತೆ ಸಾಂಪತ್ತಿಕ ಸುಧಾರಣೆಗಳನ್ನು ಮಂತ್ರಿಗಳು ಮಾಡಿದರೆ ತೀರಿತು ಅಂತೆಯೆ ಕೆಲವು ಹೊಸ ಶಾಸನಗಳನ್ನು ಭದ್ರಪಡಿಸಿಕೊಟ್ಟರೆ ಸಾಕು, ಮುಂದೆ ಎಂತಹ ಸರಕಾರವಾದರೂ ಅವನ್ನು ಮುರಿಯಲು ಧೈರ್ಯ ಪಡೆಯದಂತಾಗುವುದು ಪ್ರತಿಯೊಂದು ಬಗೆಯ ಸುಧಾರಣೆಗಳ್ನು ಜ್ಯಾರಿಗೆ ತರುವ ಅಗತ್ಯವೇ ಇಲ್ಲ ಅದರ ಬದಲಾಗಿ ಕೆಲವೇ ಪ್ರಾಮುಖ್ಯ ಮೂಲ ವಿಶಯಗಳಲ್ಲಿ ಸುಧಾರಣೆಗಳಾದರೆ ಮುಂದೆ ಎಲ್ಲವೂ ಸರಿಯಾಗುವುದು ಹೀಗೆ ಆಳುತ್ತ ಬಂದರೆ, ಇವೇ ಕೆಲ ವರ್ಷಗಳ ಅವಧಿಯಲ್ಲಿ ಮಂತ್ರಿಗಳು ಧಾರಾಳವಾಗಿ ಕೃತಾರ್ಥರಾದರು ಮಿಕ್ಕ ವಿಚಾರಗಳು ಸದ್ಯಕ್ಕೆ ಬೇಡ

ಸಾರ್ವಜನಿಕ ಆರೋಗ್ಯ

ಕಾಂಗ್ರೆಸು ಮಂತ್ರಿಮಂಡಲದಲ್ಲಿ ಡಾ। ರಾಜನ್‌ರವರಂಥ ಪ್ರವೀಣರೂ ಮಹಾನುಭವಿಗಳೂ ಆರೋಗ್ಯ ಇಲಾಖಾಧೀಶ್ವರರಾಗಿರುವುದು ಸಂಸ್ಥಾನದ ಪೂರ್ವಪುಣ್ಯವೆನ್ನಬೇಕಾಗಿದೆ. ಮಂತ್ರಿಪದವಿಗೆ ಅವರನ್ನು ಕರೆದರೆಂದು ಅವರಿಗೆ ನೇಮಕವಾದ ಒಂದೆರಡು ತಾಸುಗಳ ಮೊದಲೂ ಗೊತ್ತಿರಲಿಲ್ಲವಾದರೂ, ತಮ್ಮ ಧಾರಾಳವಾದ ಸಂಪಾದನೆಯ ಉದ್ಯೋಗವನ್ನು ಖಾಸಗಿ ಆಸ್ಪತ್ರೆಯನ್ನೂ ಅತ್ತ ಮರೆದು, ಶ್ರೀ ಆಚಾರ್ಯರ ಆಹ್ವಾನವನ್ನು ಮನ್ನಿಸಿ ಅವರು ಕಾರ್ಯಭಾರವನ್ನು ವಹಿಸಿಕೊಂಡಿರುವರು ಇವರು ತಮ್ಮ ಇಲಾಖೆಯ ವಿಚಾರದಲ್ಲಿ ಹೇಳುವುದೇನು?

ಆಕ್ಟು ಬಿಗಿಯಾಗಿದೆ ಹೆಚ್ಚಿನ ಸ್ವಾತಂತ್ರ್ಯವೂ ಇಲ್ಲ, ಹಣವೂ ಇಲ್ಲ ಖಜಾನೆಯು ಇಂಡಿಯಾ ಸರಕಾರದ ವಶದಲ್ಲಿದೆ, ಪ್ರಾಂತಿಕ ಸರಕಾರಗಳಿಗೆ ಚಿಲ್ಲರೆ ಹಣ ಕಾಸುಗಳನ್ನು ಬಿಟ್ಟಂತಿದೆ ಹೀಗಿರುವಾಗ ವಿಶೇಷ ಸುಧಾರಣೆಗಳನ್ನು ನಿರೀಕ್ಷಿಸುವುದು ತಪ್ಪು ಆದರೂ ದೊರೆತುದರಲ್ಲಿ ಪ್ರಯೋಜನವೆಷ್ಟಿದೆ ಎಂದು ಸರ್ವರೂ ತಿಳಿದುಕೊಳ್ಳುವಂತಾಗಲಿ ಎಂದೇ ಕಾಂಗ್ರೆಸು ಅಧಿಕಾರ ಸ್ವೀಕಾರಕ್ಕೆ ಒಪ್ಪಿತು ಆದರೆ, ಮಹಾಜನರ ಬೆಂಬಲವಿದ್ದು ಅವರ ಭರವಸೆಗೆ ಪಾತ್ರರಾಗಿ ಸೇವೆಯನ್ನು ಕೈಕೊಂಡವರು ಅವರಿಗೆ ಜವಾಬ್ದಾರರಾಗಿ ನಡೆಯುವ ಕಾರಣ, ಜನಬಲವೇ ಮುಖ್ಯಾಶ್ರಯ ಮುಖ್ಯಾಧಾರವೆಂದು ಮಂತ್ರಿಗಳು ನಂಬಿರುವರ ವೋಟರರು ಮೂರೇ ಕೋಟಿಯಾದರೂ, ಮೂವತ್ತೈದು ಕೋಟಿಯ ಪ್ರಾತಿನಿಧ್ಯವನ್ನು ಈಗ ಪ್ರಾಂತಿಕ ಸರಕಾರಗಳು ನಿರ್ವಹಿಸಬೇಕಾಗಿರುವ ಕಾರಣ ಈ ಮೂರು ಕೋಟಿಯಲ್ಲಿ ಪ್ರತಿಯೊಬ್ಬನೂ ವೋಟಿಲ್ಲದವರ ಮುಖವಾಗಿದ್ದು ಅವರಿಗೂ ಪ್ರತಿನಿಧಿಗಳಿಗೂ ನಡುವಣ ಸಂಬಂಧವನ್ನು ಪಾಲಿಸಿ ಬರತಕ್ಕನೆಂದು ಮಂತ್ರಿಗಳು ನಂಬಿಯೇ, ಜನಸೇವೆಯನ್ನು ಕೈಕೊಂಡಿರುವರೆಂಬುದನ್ನು ಮರೆಯಲಾಗದು

ನಿರೀಕ್ಷಿಸುವ ಜನತೆಯೊಂದು ಕಡೆ, ಪರೀಕ್ಷಿಸುವ ಮಹಾತ್ಮಾಜಿಯವರು ಮತ್ತೊಂದು ಕಡೆ ಹೀಗೆ ಎರಡುಗಳ ನಡುವೆ ಮಂತ್ರಿಗಳು ಇದ್ದು ಕಾರ್ಯ ನಡೆಸಬೇಕಾಗಿದೆ ಇವರಿಗಾಗಿ ಸರ್ವರ ಸಹಾನುಭೂತಿಯೂ ಸಹಕಾರವೂ ಅವರಿಗೆ ತುಂಬ ಸಿಗದೆ ಅವರ ಕೃತಾರ್ಥರಾಗಲಾರರು

ಪ್ರಾಂತ್ಯದಲ್ಲಿ ಯಾವುದೊಂದು ಇಲಾಖೆಯು ನೋಕರರಿಗೂ ಮಂತ್ರಿಗಳಿಗೂ ಐಕ್ಯಮತ್ಯವಿದ್ದರೆ ತಾನೆ ಆಯಾ ಇಲಾಖೆಯು ಅಭಿವೃದ್ಧಿಗೆ ಬರುವುದು ನೋಕರರು ಭಕ್ತಿಯಿಂದಲೂ ಮಂತ್ರಿಗಳು ಭಕ್ತಿಯಿಂದಲೂ ಕಾರ್ಯ ನಿರ್ವಹಿಸುತ್ತಿರುವುದು ಉತ್ತಮ ಲಕ್ಷಣವಾಗಿದೆ

ಜನಾಂಗದ ಕ್ಷೇಮಾಭ್ಯುದಯಗಳಿಗೆ ಆರೋಗ್ಯ ಪಾಲನೆಗಿಂತ ಹೆಚ್ಚಿನ ಕಾರಕವಿಲ್ಲ. ಜೀವಿಸುವ ಹಕ್ಕು ಪ್ರತಿಯೊಬ್ಬನಿಗೆ ಇರುವಂತೆ ಪ್ರತಿಯೊಬ್ಬನ ರಕ್ಷಣೆಯ ಹಕ್ಕು ಸರಕಾರಕ್ಕಿದೆ ಹಾಗೆಯೆ ಅವನು ಆರೋಗ್ಯವಾಗಿರುವಂತೆ ನೋಡುವುದೂ ಸರಕಾರದ ಕರ್ತವ್ಯ, ಜವಾಬುದಾರಿ ಕಳೆದ ಹದಿನೈದು ವರ್ಷಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ಆರೋಗ್ಯವಿಮೆಯ ಆಕ್ಟು ಜ್ಯಾರಿಯಲ್ಲಿದ್ದು, ರೋಗಿಗಳಿಗೆ ಸರಕಾರಗಳು ಧರ್ಮಾರ್ಥವಾಗಿ ಶುಶ್ರೂಷೆ ಮಾಡುತ್ತವೆ ಮುದುಕರಿಗೆ ಪೆನ್ಶನು, ಚಿರರೋಗಿಗಳಿಗೆ ಆಶ್ರಯ ಸ್ಥಾನಗಳು, ಮೊದಲಾದ ಸೌಕರ್ಯಗಳನ್ನು ಜನತೆಯ ಸಹಕಾರದಿಂದ ಸರಕಾರಗಳು ಸಲ್ಲಿಸಿವೆ ಹಾಗೆಯೆ ನಮ್ಮಲ್ಲಿಯೂ ಪ್ರತಿಯೊಬ್ಬನಿಗೂ ವೈದ್ಯಕೀಯ ಸಹಾಯವು ಸುಲಭವಾಗಿ ದೊರೆವಂತೆ ಮಾಡಬೇಕೆಂದೇ ಮಂತ್ರಿಗಳ ಇಚ್ಛೆಯಿದೆ ಆರೋಗ್ಯವಾಗಿರುವುದಕ್ಕೆ ಅಗತ್ಯವಾಗಿ ಹೇಗೆ ನಡೆಯಬೇಕೋ ಹಾಗೆ ಎಲ್ಲರೂ ನಡೆವಂತೆ ಮಾಡಲು ಕಾನೂನನ್ನು ಜ್ಯಾರಿಗೆ ತರಬೇಕಾಗುವುದು ಆದರೆ ಕಾನೂನನ್ನು ಜ್ಯಾರಿಗೆ ತರುವ ಮೊದಲು, ಅದರ ಅಗತ್ಯವನ್ನು ಜನರು ಚೆನ್ನಾಗಿ ತಿಳಿದುಕೊಳ್ಳುವಂತೆ ಮಾಡುವುದೂ ಅಗತ್ಯವಾಗಿದೆ ಆದುದರಿಂದ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಹಾಗೆ ಏನನ್ನು ಮಾಡತಕ್ಕದೋ ಅದನ್ನು ಮೊದಲಾಗಿ ವಿವರಿಸಿ, ಅನಂತರವೇ ಅಂತಹ ಕಾನೂನನ್ನು ಮಂಜೂರುಮಾಡಿಕೊಳ್ಳಬೇಕಾಗಿದೆ

ನಮ್ಮಷ್ಟು ದರಿದ್ರ ಜನಾಂಗವೂ ಇಲ್ಲ, ನಮ್ಮಂತೆ ಅಲ್ಪ ಪೌಷ್ಟಿಕ ಆಹಾರವನ್ನುಣ್ಣುವ ಜನಾಂಗವೂ ಇಲ್ಲ ನಮ್ಮ ಸಂಸ್ಥಾನದ ಜನರ ತೆಗೆದುಕೊಳ್ಳುವ ಆಹಾರವು ದೇಶದ ಇತರ [illegible] ಆಹಾರಕ್ಕಿಂತ ಪೌಷ್ಟಿಕತೆಯಲ್ಲಿ ಬಡವಾಗಿದೆ ಸರಕಾರವು ಎಲ್ಲ ಬಗೆಯ ಆಹಾರಗಳ ಮೌಲ್ಯವನ್ನು ಕಂಡುಹಿಡಿದಿದೆ ಹೀಗೆ ಕಂಡುಹಿಡಿದುದರಿಂದೇನು? ಜನರ ಆಹಾರವು ಉತ್ತಮವಾಗುವಂತೆ ಇದು ಉಪಯೋಗಕ್ಕೆ ಬರುವಂತಾಗಬೇಕು

ಗ್ರಾಮಾಭ್ಯುದಯ ಸಾಧನೆಯು ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಒಂದಾಗಿದೆ ಇದರಲ್ಲಿ ಆರೋಗ್ಯವರ್ಧನೆಯೂ ಸೇರಿರುವುದು ಇದು ಬಲು ಕಷ್ಟಸಾಧ್ಯವಾದುದು ಹಾಗೆಂದು ಅದನ್ನು ತ್ಯಜಿಸಲಾಗುವುದಿಲ್ಲ, ಪ್ರಯತ್ನಿಸಲೇಬೇಕು

ರೋಗಗಳ ಕಾರಣಗಳು, ಅವುಗಳ ಹರಡುವಿಕೆ, ಚಿಕಿತ್ಸೆ ಮೊದಲಾದುವುಗಳು ನಮ್ಮ ಜನರಿಗೆ ಸರಿಯಾಗಿ ತಿಳಿಯುವಂತಾಗಬೇಕು ನಮ್ಮಲ್ಲಿನ ಮರಣ ಸಂಖ್ಯೆಯ ದಾಮಾಶಾಯವು ಪ್ರಪಂಚದಲ್ಲಿ ಮತ್ತೆಲ್ಲಿಯೂ ಇಲ್ಲವೆನ್ನಬಹುದು ಒಂದೆರಡು ಶತಮಾನಗಳ ಹಿಂದೆ ಯೂರೋಪಿನಲ್ಲಿ ಇದೇ ದಾಮಾಶಾಯವಿತ್ತು ಆದರೆ ಈಗ ನಮ್ಮಲ್ಲಿ ಜೀವಮಾನವು ಸರಾಸರಿ ೨೩ ವರ್ಷವಾಗಿದೆಯಾದರೆ ಅಲ್ಲಿ ೫೮ ವರ್ಷವಾಗಿದೆ! ನಮ್ಮ ದುಬಾರಿಯಷ್ಟು ಸರಾಸರಿ ಜೀವಿಸಬಲ್ಲ ಜನಾಂಗಗಳ ಸಂಪತ್ತೂ ಅಭ್ಯುದಯದ ಹೇಗೆ ಬೆಳೆಯಬಹುದೋ ತಿಳಿದುಕೊಂಡರೆ, ನಾವೂ ಅಷ್ಟೆ ದೀರ್ಘಕಾಲವಾದರೂ ಸರಾಸರಿಯಾಗಿ ಬಾಳುವುದಕ್ಕೆ ಪ್ರಯತ್ನಮಾಡಲೇಬೇಕಾಗಿದೆ ಈ ಪ್ರಯತ್ನಗಳು ಥಟ್ಟನೆ ಸಫಲವಾಗುವುವಲ್ಲ, ಇವುಗಳಿಗೆ ಬೇಕಾಗುವ ಸಲಕರಣೆಗಳನ್ನು ಸೃಷ್ಟಿಸಿಕೊಳ್ಳಬೇಕು ಇದನ್ನು ಜಯಶೀಲವಾಗುವಂತೆ ಪೇಚಾಡಲು ಕಾಂಗ್ರೆಸು ಮಂತ್ರಿಗಳಿಂದಲ್ಲದೆ, ಇನ್ನಾರಿಂದ ತಾನೆ ಜನತೆಯು ನಿರೀಕ್ಷಿಸಬಹುದು?

ಬಹುಪ್ರಖ್ಯಾತಿಪಟ್ಟಿದ್ದು-ಪ್ರಪಂಚದ ಅದ್ವಿತೀಯ ನವಶೋಧ:

ಬಿಮಲಾ ಮಾತ್ರೆಗಳು

ಬಿಮಲಾ ಪಿಲ್ಸ್ ಅಥವಾ ಮಾತ್ರೆಗಳೆಂಬ ಹೆಸರನ್ನು ಕೇಳಿದ ಕೂಡಲೇ ಬಹು ಕಾಲದ ಜಾಡ್ಯಗಳೂ, ರೋಗಗಳೂ ಹೆದರಿ ನಡುಗುತ್ತವೆ. ವೈದ್ಯಕೀಯ ಚಾತುರ್ಯವನ್ನು ತಪ್ಪಿಬ್ಬಾಗಿ ಮಾಡಿದ ನಾನಾ ತರದ ಹಳೇ ವ್ಯಾಧಿಗಳನ್ನು ಬಿಮಲಾ ಮಾತ್ರೆಗಳು ಗುಣಪಡಿಸಿ ಆಶ್ಚರ್ಯವನ್ನುಂಟುಮಾಡಿದೆ. ಧರ್ಮಾರ್ಥ ಕಳುಹಿಸುವ ಹಸ್ತಪುಸ್ತಕಗಳಿಗೂ, ಸೂಚನೆಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

೨೫ ಮಾತ್ರೆಗಳಿಗೆ ರೂ. 5/-; 50 ಮಾತ್ರೆಗಳಿಗೆ ರೂ. 9-8-0 100 ಮಾತ್ರೆಗಳಿಗೆ ರೂ 18;

ಎಲ್ಲಾ ಔಷಧಿಗಳಿಗೂ ಪೆಕಿಂಗ್ ಮತ್ತು ಟಿ. ಖರ್ಚು 9 ಆಣೆ ಪ್ರತ್ಯೇಕ.

Kaviraj S C Mukherjee, B. A S.

Ayurvedic Institution Kalighat P O Calcutta.

ಸರಕಾರಿ ಉದ್ಯೋಗಸ್ಥರಿಗೆ ಪಂಡಿತ ಪಂತರ ಹಿತೋಪದೇಶ.

ರಾಜಕೀಯ ಕೈದಿಗಳ ಬಿಡುಗಡೆ

ಎಲ್ಲಾ ಕಾಂಗ್ರೆಸ್ ಮಂತ್ರಿಮಂಡಲಗಳ ರಚನೆಯು ಸಂಪೂರ್ಣವಾಗಿ, ಕಾಂಗ್ರೆಸ್ಸು ಅಧಿಕಾರವಹಿಸಿರುತ್ತದೆ. ಮದ್ರಾಸಿನಂತೆ ಎಲ್ಲ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಗಳಿಗೆ ಪಾರ್ಲಿಮೆಂಟರಿ ಕಾರ್ಯದರ್ಶಿಯರು ನೇಮಿಸಲ್ಪಟ್ಟಿರುವರು. ಇನ್ನು ಸ್ವಲ್ಪ ಸಮಯದಲ್ಲಿ ಎಲ್ಲಾ ಅಸೆಂಬ್ಲಿ ಅಧಿವೇಶನಗಳು ಪ್ರಾರಂಭವಾಗುವವು

ಸಂಯುಕ್ತ ಪ್ರಾಂತ್ಯದ ಮಂತ್ರಿಮಂಡಲದಲ್ಲಿ ಒಬ್ಬ ಸ್ತ್ರೀ ಮಂತ್ರಿಯಿರುವರು, ಇವರು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು, ಆರೋಗ್ಯಖಾತೆಯ ಮಂತ್ರಿವರ್ಯರು ಅಲ್ಲಿನ ಪ್ರಧಾನಮಂತ್ರಿ ಪಂಡಿತ ವಲ್ಲಭ ಪಂತರವರು,

ಸರಕಾರದ ಸೆಕ್ರೆಟೇರಿಯಟ್ಟರನ್ನು ಕುರಿತು ಮೊನ್ನೆ ದಿನ ಒಂದು ಭಿನ್ನಹವನ್ನು ಕೊಟ್ಟರು ಅದರ ಸಾರಾಂಶವು ಈ ಕೆಳಗಿನಂತಿದೆ —

'ಸರಕಾರದ ಉದ್ಯೋಗಸ್ಥರು ಪಕ್ಷಭೇದವಿಲ್ಲದೆ ರಾಜಕೀಯದಲ್ಲಿ ಕೈಹಾಕದೆ ಈಗ ಅಧಿಕಾರದಲ್ಲಿರುವ ಕಾಂಗ್ರೆಸ್ಸಿಗೆ ಸ್ವಾಮಿ ನಿಷ್ಠೆಯಿಂದ ಕೆಲಸವನ್ನು ಮಾಡಬೇಕು. ಇಷ್ಟರ ತನಕ ಸರಕಾರದ ಧೋರಣೆಗೆ ಕಾರಣರಾಗಿರುವ ಉದ್ಯೋಗಸ್ಥರು ಮುಂದಕ್ಕೆ ಒಳ್ಳೇ ಆಸಕ್ತಿ ಕೆಲಸವನ್ನು ಮಾಡತಕ್ಕದ್ದು ಕಾಂಗ್ರೆಸ್ಸಿನ ಧೋರಣೆಯನ್ನನುಸರಿಸಬೇಕು. ಕಾಂಗ್ರೆಸ್ಸಿನ ಕಾರ್ಯಕ್ರಮವು ಸರಿಯಾಗಿ ನಡೆಯುವಂತೆ ಸಾಧಿಸಬೇಕು ಅಲ್ಲದೆ ಕಾಂಗ್ರೆಸ್ಸಿನ ಉದ್ದೇಶಗಳನ್ನು ಸಾಧಿಸಲು ಅವರ ಸೂಚನೆಗಳನ್ನು ಕೊಡಲೂ ಬೇಕು. ಒಂದು ಧ್ಯೇಯವನ್ನು ಇಟ್ಟು ಕಾಂಗ್ರೆಸ್ಸು ಶಾಸನಸಭೆಗಳನ್ನು ಸೇರಿರುತ್ತದೆ ಅದನ್ನು ನಡೆಯಿಸಲು ಉದ್ಯೋಗಸ್ಥರ ಸಹಕಾರವು ಅತಿ ಅಗತ್ಯವು ಇಷ್ಟರ ತನಕ ಭಾರತೀಯ ಬ್ರಿಟೀಶ ರೂಪದಲ್ಲಿದ್ದ ಸರಕಾರವು ಮುಂದಕ್ಕೆ ಸ್ವಯಂ ಪ್ರಭುತ್ವ ಸರಕಾರವಾಗುವುದು. ಸರಕಾರಿ ಉದ್ಯೋಗಸ್ಥರು ಈ ಸಮಾರ್ಪಣದ ಮುಖ್ಯ ಗಮನ ಮಾಡತಕ್ಕದ್ದು ಜನತೆಗೆ ಸರಿಯಾದ ರೀತಿಯಲ್ಲಿ ನಡೆಯತಕ್ಕದ್ದು ಇಷ್ಟರ ತನಕ ಕಾಂಗ್ರೆಸ್ಸಿಗೂ ಅಧಿಕಾರವರ್ಗಕ್ಕೂ ಒಂದು ತರದ ವೈಮನಸ್ಯವು ಇದ್ದಿತು. ರಾಷ್ಟ್ರೀಯ ಧ್ವಜವನ್ನು ಮುಂದಕ್ಕೆ ಎಲ್ಲರೂ ಮನ್ನಿಸತಕ್ಕದ್ದು ಅಧಿಕಾರಿಗಳು ಪ್ರಜಾ ಸ್ವಾತಂತ್ರ್ಯಕ್ಕೆ ಅಡ್ಡಿಯಾಗದಂತೆ ಜಾಗರೂಕರಾಗಿರಬೇಕು. ಮುಂದಕ್ಕೆ ಪೋಲೀಸ ಗುಪ್ತಚಾರರು ರಾಜಕೀಯ ಭಾಷಣಗಳ ವರದಿಮಾಡುವ ಬದಲು ಆ ಶಕ್ತಿಯನ್ನು ಬೇರೆ ಇತರ ಸಾರ್ವಜನಿಕ ಹಿತಕಾರ್ಯದಲ್ಲಿ ವ್ಯಯಿಸಬೇಕು ಜನತೆಯ ಸ್ಥಿತಿಯು ಭಯಂಕರ ಅವಸ್ಥೆಯಲ್ಲಿರುವುದು, ಸುಶಿಕ್ಷಿತರ ಸಂಖ್ಯೆಯು ಅತಿ ಕಡಿಮೆಯಾಗಿರುತ್ತದೆ. ಅವರ ಜೀವನಕ್ರಮ ಸಾಂಪತ್ತಿಕ, ಸಾಮಾಜಿಕ ಸ್ಥಿತಿಯು ಅತ್ಯಂತ ಶೋಚನೀಯವಾಗಿರುವುದು ಈ ಸ್ಥಿತಿಯನ್ನು ಮುಂದಕ್ಕೆ ನಾವು ಎಷ್ಟುಕಾಲ ಸಹಿಸಬಾರದು ತಮ್ಮ ಒಡೆಯರಾದ ಜನತೆಯ ಸೇವೆಯು ಉತ್ತಮರೀತಿಯಲ್ಲಾಗುವಂತೆ, ಅವರ ಸೇವಕರಾದ ಮಂತ್ರಿವರ್ಯರೂ ಅಧಿಕಾರಿಗಳೂ ಸಾಧಿಸತಕ್ಕದ್ದು

'ಕಾಂಗ್ರೆಸು ಮುಂದಕ್ಕೆ ಅನೇಕ ಮಹಾ ಕಾರ್ಯಗಳನ್ನು ಮಾಡಲಿದೆ ಜನತೆಯ ಸುಧಾರಣೆಯು ಎಲ್ಲಾ ಬಗೆಯಲ್ಲಿ ಆಗಬೇಕು ಇದಕ್ಕೆಲ್ಲ ಬೇಕಾದ ಹಣವನ್ನು ರಿಟ್ರೆಂಚ್‌ಮೆಂಟ್, ಮಿತವ್ಯಯ ಇತ್ಯಾದಿಗಳಿಂದ ಗಳಿಸತಕ್ಕದ್ದು ಆನುಷಂಗಿಕ ಸರಕಾರಕ್ಕೆ ಆರ್ಥಿಕ ವಿಚಾರದಲ್ಲಿ ಅನೇಕ ನಿರ್ಬಂಧಗಳಿರುವುದನ್ನು ಅವರು ಸೂಚಿಸಿದರು ಅನುಸಂಕಟಗಳನ್ನು ಅನುಭವಿಸುತ್ತಿರುವ ಜನತೆಗಾಗಿ ಅಧಿಕಾರಿಗಳು ಸ್ವಲ್ಪ ಅರ್ಪಣೆಯನ್ನು ಮಾಡಲು ಸಿದ್ಧರಿರಬೇಕು. ಅಧಿಕಾರಿಗಳ ಸಹಕಾರದಿಂದ ಸರಕಾರಿ ಆಡಳಿತವು ಉತ್ತಮವಾಗಬೇಕಲ್ಲದೆ, ಕಾಂಗ್ರೆಸ್ ಕಾರ್ಯಕ್ರಮವು ಬಹಳ ಯಶಸ್ವಿಯಾಗಿ ನಡೆಯುವಂತಾಗಬೇಕು"

ಸರಕಾರಕ್ಕೆ ಖಾದಿ.

ಮುಂದಕ್ಕೆ ಸರಕಾರದವರು ಯುನಿಫೋರ್ಮುಗಳಿಗೆ ಖಾದಿಯನ್ನೆ ಉಪಯೋಗಿಸಬೇಕಾಗಿ ಒಂದು ಠರಾವು ಗಡಿನಾಡಿನ ಪ್ರಾಂತ್ಯದ ಎಸೆಂಬ್ಲಿಯಲ್ಲಿ ಬರುವುದು,

ರಾಜಕೀಯ ಕೈದಿಗಳ ಬಿಡುಗಡೆ.

ಸಂಯುಕ್ತ ಪ್ರಾಂತ್ಯದ ಸರಕಾರವು, ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಬೇಕಾಗಿ ನಿರ್ಣಯ ಮಾಡಿರುತ್ತದೆ ಇದು ಕಾಂಗ್ರೆಸ್ ಕಾರ್ಯಕ್ರಮದ ಒಂದನೇ ಇಹಮು. ಇಂಡಿಯನ್ ಪಿನಲ್ ಕೋಡಿನ ೧೨೪ ಎ ಮತ್ತು ಕ್ರಿ.ಪ್ರೊ ಕೋಡಿನ ೧೦೮ನೇ ಕಲಮಿನ ಪ್ರಕಾರವಾಗಿ ಬಂಧಿಸಲ್ಪಟ್ಟ ಇನ್ನು ವಿಚಾರಣೆಯಲ್ಲಿರುವ ಕೈದಿಗಳ ಬಿಡುಗಡೆಯಾಗಬೇಕೆಂದು ಸರಕಾರದ ನಿರ್ಧಾರವಾಗಿರುತ್ತದೆ. ಆ ಬಗ್ಗೆ ಜಿಲ್ಲಾ ಅಧಿಕಾರಿಗಳಿಗೆ ಅಪ್ಪಣೆಗಳು ಸದ್ಯದಲ್ಲೇ ಹೋಗುವವು

ಮುಂಬಾಯಿಯಲ್ಲಿ

ಕಾಂಗ್ರೆಸ್ ಸದಸ್ಯರು ಮೊನ್ನೆ ಪ್ರಥಮಬಾರಿ ಶಾಸನ ಸಭಾಮಂದಿರವನ್ನು ಪ್ರವೇಶಿಸಿದರು ಈ ಕೆಳಗಿನವರು ಮಂತ್ರಿಗಳಾಗಿ ಆರಿಸಲ್ಪಟ್ಟಿರುವರು ಶ್ರೀ ಬಿ ಜಿ ಖೇರ್ ಎ ಬಿ ಲಾಠೆ, ಡಾ। ಎಂ ಡಿ ಗಿಲ್ಡರ್ ಕೆ ಎಂ ಮುನ್ಶಿ ಎಂ ಆರ್ ದೇಸಾಯಿ ಮತ್ತು ಎಲ್ ಎಂ ಪಟೇಲ್ ಇವರು ಮುಸ್ಲಿಮ್ ಮಂತ್ರಿವರ್ಯರೂ ಆರಿಸಲ್ಪಟ್ಟಿರುವರು.

ಪಂಜಾಬಿನ ಎಸೆಂಬ್ಲಿ.

ಪಂಜಾಬಿನ ಎಸೆಂಬ್ಲಿ ಬಜೆಟ್ ಅಧಿವೇಶನವು ಇದಕ್ಕಿಗೆ ಬಹಳ ದಿವಸಗಳಿಂದ ನಡೆಯುತ್ತದೆ ಅಲ್ಲಿ ಅಧಿಕಾರದಲ್ಲಿರುವ ಯುನಿಯನಿಸ್ಟ ಪಕ್ಷದ ಧೋರಣೆಯ ಉದ್ದೇಶಗಳು ಈಗ ತೋರಬೀಳುತ್ತಿವೆ ಯುನಿಯನಿಸ್ಟ ಮಂತ್ರಿಮಂಡಳವು ಕೆಲವು ವ್ಯಕ್ತಿ ಇತ್ಯಾದಿಗಳ ರೂಪದಿಂದ ಸರಕಾರದಿಂದ ಅದೆಷ್ಟು ಹಣ ಸೂರೆ ಹೋಗುವ ಉತ್ಸಾಹದಲ್ಲಿದ್ದಾರೆ ಸದಸ್ಯರಿಗೆ ದಿನ ಒಂದರ ರೂ ೧೦ರಂತೆ ದೊಡ್ಡ ಭತ್ತೆಯು ರೂ ೩೦೦ಗೆ ಏರಿಸಲಾಗಿದೆ ಅಲ್ಲದೆ ಸಾವಿರಗಟ್ಟಲೆ ಹಣ ಮಂತ್ರಿವರ್ಯರಿಗೆ ಸಲ್ಲಬೇಕಾಗಿದೆ ಅವರು ಕಾಂಗ್ರೆಸ್ ಪ್ರಾಂತ್ಯಗಳ ದೃಷ್ಟಾಂತವನ್ನು ಯಾಕೆ ಅನುಸರಿಸಬಾರದೆಂದೂ ಕೇಳಿದಕ್ಕೆ ಪ್ರಧಾನ ಮಂತ್ರಿ ಹಯಾತ್‌ಖಾನರು ಸರಕಾರಿ ಆಡಳಿತ ವಿಚಾರದಲ್ಲಿ ಮುಖ್ಯ ಪ್ರಾಂತ್ಯಗಳ ನಕ್ಕಲು ಮಾಡಲು ಅವರು ಸಿದ್ಧರಿಲ್ಲವೆಂಬ ಉತ್ತರವು ದೊರಕಿರುತ್ತದೆ ಸರಕಾರದ ಆದಾಯ ಸಂಪತ್ತು ಮಂತ್ರಿವರ್ಯರ ಕೆಲವು ಸುಖ್ಯಾದಿಗಳಿಗೆ ಹೋಗುವುದಾದರೆ ಮತ್ತೆ ಜನತೆಯ ಉದ್ಧಾರಕ್ಕೆ ಹಣ ಎಲ್ಲಿಂದ ಬರುವುದು ಕೆಲದಿನ ಕುರಿತು ಕಾಂಗ್ರೆಸಿನ ನಿರ್ಣಯದಿಂದ ಪಂಜಾಬು ಇತ್ಯಾದಿ ಪ್ರಾಂತ್ಯಗಳ ಕಣ್ಣು ತೆರೆಯುವಂತಾಗಿದೆ ತಾವು ಮೋಸ ಹೋಗಿರುವವೆಂಬ ಪಶ್ಚಾತ್ತಾಪವು ಅವರಲ್ಲಿ ಆಗದೆ ಇರದು.

ಒರಿಸ್ಸಾದಲ್ಲಿ

ಒರಿಸ್ಸಾ ಮಂತ್ರಿ ಮಂಡಲದಲ್ಲಿ ಓರ್ವ ಮುಸ್ಲಿಮ ಸದಸ್ಯರನ್ನು ಕೂಡಿಸುವ ಬಗ್ಗೆ ಅಲ್ಲಿನ ಮುಸ್ಲಿಮರು ಅಲ್ಲಿಗೆ ಚಿಕ್ಕಸಿದ ರಂಜೀಸ್ ಜಿಲ್ಲೆಗಳಿಗೆ ಭಿನ್ನವಿಯಾಲು ಸಂಬಂಧಪಟ್ಟ ಮುಸ್ಲಿಮ ಸದಸ್ಯರು ಕಾಂಗ್ರೆಸ್ ಸದಸ್ಯರನ್ನು ಸೋಲಿಸಿದುದರಿಂದಾಗಿ, ಅದು ಸಾಧ್ಯವಿಲ್ಲದಂತಾಗಿದೆ ಈಗ ಚುನಾಯಿತರಾದ ಮುಸ್ಲಿಂ ಸದಸ್ಯರು ರಾಜೀನಾಮೆ ಕೊಟ್ಟು, ಕಾಂಗ್ರೆಸ್ ಟಿಕೇಟಿನ ಮೇಲೆ ಚುನಾವಣೆಗೆ ನಿಂತು ಆ ಮೇಲೆ ಮುಸ್ಲಿಮ ಮಂತ್ರಿವರ್ಯರ ಚುನಾವಣೆ ನಡೆಯಬೇಕೆಂದಾಗಿದೆ

ಬಂಗಾಳದಲ್ಲಿ

ಕಾಂಗ್ರೆಸ್ಸಿನ ಅಧಿಕಾರಸ್ವೀಕಾರ ನಿರ್ಣಯದಿಂದ ಬಂಗಾಳದಲ್ಲಿ ಅನೇಕ ಪ್ರಾಮುಖ್ಯ ಘಟನೆಗಳು ನಡೆಯುವುದಾಗಿ ತಿಳಿದುಬರುತ್ತದೆ ಅಧಿಕಾರಸ್ವೀಕಾರ ನಿರ್ಣಯದ ಮೇರೆಗೆ ಕಾಂಗ್ರೆಸು ಪಕ್ಷವು ಮುಂದಕ್ಕೆ ಏನು ಮಾಡಬೇಕೆಂಬುದನ್ನು ಆಲೋಚಿಸಲು ಕಾಂಗ್ರೆಸ್ ಪಾರ್ಟಿ ಸಭೆ ಸೇರುವುದಾಗಿ ತಿಳಿದುಬರುತ್ತದೆ.

ಮುಸ್ಲಿಮ್ ಸಂಪರ್ಕ.

ರಾಷ್ಟ್ರಪತಿಯವರು ಕಾಂಗ್ರೆಸ್ಸಿಗೆ ಮುಸ್ಲಿಂಸಂಪರ್ಕದ ಕುರಿತು ಪರಿಶ್ರಮವನ್ನು ವಹಿಸಿರುವರು, ಬಿಹಾರಿನಲ್ಲಿ ಎಸೆಂಬ್ಲಿ ಮುಸ್ಲಿಮ ಸದಸ್ಯರು ಕಾಂಗ್ರೆಸ್ಸಿನೊಡನೆ ಸೇರಿರುವರು, ಒರಿಸ್ಸಾದಲ್ಲೂ ಹಾಗೇ ಆಗಬಹುದು ಮಧ್ಯ ಪ್ರಾಂತ್ಯದಲ್ಲಿ ಕಾಂಗ್ರೆಸು ಮಂತ್ರಿಮಂಡಳದಲ್ಲಿ ಮುಸ್ಲಿಂ ಮಂತ್ರಿಗಳೊಬ್ಬರು ಸೇರಿಸಲ್ಪಟ್ಟಿರುವರು ಅಂತೆಯೇ ಸಂಯುಕ್ತ ಪ್ರಾಂತ್ಯದಲ್ಲಿ. ಇದಲ್ಲದೆ, ಭೂರಿಜನ ಸಮಸ್ಯೆಗೆ ಹಿಂದೂ ಮುಸ್ಲಿಮ್ ಭೇದವಿಲ್ಲವೆಂದೂ, ಅದ್ದರಿಂದ ಹಿಂದೂಮುಸ್ಲಿಮರೆಲ್ಲರೂ ಒಟ್ಟಾಗಬೇಕೆಂದೂ ವಿನಂತಿ ಹೊರಟಿವೆ. ಮುಸ್ಲಿಮರನ್ನು ಕಾಂಗ್ರೆಸ್ಸಿನೊಡನೆ ಸೇರಿಸಲು ಎಲ್ಲೆಲ್ಲೂ ಪ್ರಚಾರಕಾರ್ಯ ನಡೆಯುತ್ತಿದೆ.

ಕಾಂಗ್ರೆಸ್ ಮಂತ್ರಿಮಂಡಲಗಳು ಹಿಂದೂಮುಸ್ಲಿಂ ಐಕ್ಯತೆ ಸಾಧನೆಯ ಕುರಿತು ಹೆಚ್ಚಿನ ಶ್ರಮವಹಿಸುವವಾಗಿ ತಿಳಿದುಬರುತ್ತದೆ.

ಮೆಹರಾಲಿಯವರು ಬಂಧ ವಿಮುಕ್ತರಾದರು

ಬ್ಲಿಟಾದಲ್ಲಿ ಭಯಂಕರ ರೈಲ್ವೇ ಅಪಘಾತ!

ಪಾಟ್ನಾದ ಹತ್ತಿರ, ಲಾಹೋರಿನಿಂದ ಕಲ್ಕತ್ತೆಗೆ ಹೋಗುವ ಪಂಜಾಬು ಎಕ್ಸಪ್ರೆಸ್ಸು ಟ್ರೈನು, ಪಾಟ್ನಾದಿಂದ ೧೫ ಮೈಲು ಹಿಂದಿರುವ ಬ್ಲಿಟಾ ಸ್ಟೇಶನು ದಾಟುವ ಮೊದಲು ಎತ್ತರಿಸಲ್ಪಟ್ಟ ರೈಲ್ವೇ ಮಾರ್ಗದ ಕಂಬಿಗಳಿಂದ್ ತಪ್ಪಿ ಕೆಳಗುರುಳಿತು. ಇಂಜಿನಿನೊಂದಿಗೆ ೯ ಗಾಡಿಗಳೂ ಕೆಳಕ್ಕೆ ಬಿದ್ದಿರುವವು. ಈ ಟ್ರೈನು ಯಾವಾಗಲೂ ಅತೀ ವೇಗವಾಗಿ ನಡೆಯುವುದರಿಂದ, ಗಾಡಿಗಳು ಒಂದು ಒಂದರ ಒಳಗೆ ಹೋಗಿ ಭಯಂಕರ ರೀತಿಯಲ್ಲಿ ನುಚ್ಚುನೂರಾಗಿ, ಒಳಗಿದ್ದ ಸಾಧಾರಣ ೩೦೦ ಮಂದಿಗಳು ಭಯಂಕರ ತರದ ಅಪಾಯಗಳಿಗೊಳಗಾಗಿರುವರು. ೧೦೯ ಮಂದಿಗಳು (ಸ್ತ್ರೀಯರೂ ಮಕ್ಕಳೂ ಕೂಡಿ) ಮೃತರಾಗಿರುವರು ಅಪಘಾತವು ಅಕಸ್ಮಾತ್ತಾಗಿ ನಡೆದುದರಿಂದ ನಿದ್ರೆಯಲ್ಲಿ ಮಲಗಿದ್ದಿರುವ ಅನೇಕರು ಅಕಸ್ಮಾತ್ ಮೃತಪಟ್ಟರು ಅಪಘಾತ ನಡೆದ ಸ್ಥಳದಲ್ಲಿ ಅತ್ಯಂತ ವಿಷಾದಮಯ ದೃಶ್ಯಗಳು ಕಾಣಿಸಿಕೊಂಡುವು ಕಾಂಗ್ರೆಸ್ಸಿನವರೂ ಸರಕಾರದವರೂ, ರೈಲ್ವೇ ಸಂಸ್ಥೆಯವರೂ ಇನ್ನಿತರೆಲ್ಲರೂ ಕೂಡಿ ರಕ್ಷಣಾ ಕೆಲಸವನ್ನು ಒಳ್ಳೇ ರೀತಿಯಲ್ಲಿ ನಡೆಸಿರುವರು ಕಾಂಗ್ರೆಸ್‌ವಾಲಂಟಿಯರು ಬಹು ಪ್ರಶಂಸನೀಯ ರೀತಿಯಲ್ಲಿ ಪರಿಶ್ರಮಿಸಿರುವರೆಂದು ತಿಳಿದುಬರುತ್ತದೆ ವ್ರಣಿತರಾದವರಲ್ಲಿ ಹೆಚ್ಚಿನವರು ಆರೋಗ್ಯವಂತರಾದ ಪಂಜಾಬಿಗಳಂತೆ ಹೆಣಗಳನ್ನೂ ಗಾಯಪಟ್ಟವರನ್ನೂ ಪಾಟ್ನಾಕ್ಕೆ ಒಯ್ದು ಅಲ್ಲಿ ತಕ್ಕ ವ್ಯವಸ್ಥೆ ಮಾಡಲಾಯಿತು ಈ ಅಪಘಾತವು ಮೋಸಕೃತ್ಯದಿಂದ ಉಂಟಾಗಿರಬಹುದೆಂದೂ ವಾರ್ತೆಯಿದೆ ಅಪಘಾತದ ಕುರಿತು ಬೇಗನೇ ವಿಚಾರಣೆಯು ನಡೆಯುವುದು ಮೃತಪಟ್ಟವರನ್ನು ಪಾಟ್ನಾದಲ್ಲಿ ಯೋಗ್ಯರೀತಿಯಲ್ಲಿ ಸಂಸ್ಕಾರಗೊಳಿಸುವ ಏರ್ಪಾಡುಮಾಡಲಾಗಿದೆ

ಮೆಹರಾಲಿಯವರು ಬಂಧವಿಮುಕ್ತರಾದರು.

ಮೊನ್ನೆ ಕಲ್ಲಿಕೋಟೆಯಲ್ಲಿ ೧೪೪ನೇ ಕ್ರಮವನ್ನು ಉಲ್ಲಂಘಿಸಿ ಆರು ತಿಂಗಳ ಸಜೆಗೊಳಗಾದ ಕಾಂಗ್ರೆಸ್ ಸೋಷ್ಯಲಿಸ್ಟ ನಾಯಕ ಮೆಹರಾಲಿಯವರು, ಮದ್ರಾಸು ಕಾಂಗ್ರೆಸ್ ಸರಕಾರದ ಆಜ್ಞೆಮೇರೆಗೆ ಬಂಧವಿಮುಕ್ತರಾಗಿರುವರು ಮೆಹರಾಲಿಯವರ ಅಪೀಲು ಇತ್ಯರ್ಥವಾಗದಿದ್ದುದರಿಂದ ಕಾಂಗ್ರೆಸ್ಸು ಆಜ್ಞೆಯನ್ನು ಈ ಮೊದಲು ಕೊಟ್ಟಿಲ್ಲ ಮೆಹರಾಲಿಯವರ ಅಪೀಲು ಡಿಸ್‌ಮಿಸ್ಸಾಗಲು, ಕಾಂಗ್ರೆಸ್ ಆಜ್ಞೆಯನ್ನು ಕೊಟ್ಟಿತು

ಚೀನಾ—ಜಪಾನ್ ಯುದ್ಧ.

ಚೀನಾ—ಜಪಾನ್ ಸಂಧಾನದ ಕುರಿತು ಜಪಾನಿನಿಂದ ಕೊಡಲ್ಪಟ್ಟ ಶರ್ತಗಳಿಗೆ ಚೀನವು ಒಪ್ಪುವದಾಗಿಲ್ಲ ಅದುದರಿಂದ ಸಂಧಾನವೆ ಆಗುವ ಹಾಗಿಲ್ಲ ಜಪಾನಿನಿಂದ ಸಾಧಾರಣ ನೂರು ಸಾವಿರ ಮಂದಿ ಸೈನಿಕರು ಚೀನಾಕ್ಕೆ ಹೋಗಿರುವರು

ಚೀನಾ ಜಪಾನ್ ಯುದ್ಧವು ಪ್ರಾರಂಭವಾಗಿ ಅನೇಕ ಘೋರ ಸಮರಗಳು ನಡೆಯುತ್ತಿವೆ

ಸ್ಪೇನಿನ ಸಮರ ಒಂದಿನಂತೆ ನಡೆಯುತ್ತಿದೆ ಬ್ರಿಟನು ತಟಸ್ಥಭಾವ ಸಮಿತಿಯೋಜನೆಗಳ ಕುರಿತು ಕೆಲವು ಸಲಹೆಗಳನ್ನು ಕೊಟ್ಟಿರುತ್ತದೆ. ಈ ಸಲಹೆಗಳ ಮೇಲೆ ಚರ್ಚಿಸಲು ಎಲ್ಲಾ ಪ್ರಭುತ್ವದ ಜನಾಂಗಗಳಿಗೆ ಸಮ್ಮತವಿ ವೃದಂತೆ

ಬಂಗಾಳದ ಡೆಟೆನ್ಯುಗಳು.

ಅವರ ಬಿಡುಗಡೆಯ ಕುರಿತು ಶ್ರೀ ಸು।

ಭೋಸರಿಗೂ ರಾಷ್ಟ್ರಪತಿಯವರಿಗೂ ಪತ್ರವ್ಯವಹಾರ ನಡೆದಿರುತ್ತದೆ. ಬಂಗಾಳ ಡೆಟೆನ್ಯುಗಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವರೆಂದೂ, ಅನೇಕ ತರದ ಅಟಿ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆಂದೂ, ಅವರ ಬಿಡುಗಡೆಯ ಬಗ್ಗೆ ಕೂಡಲೇ ಯತ್ನಗಳಾಗಬೇಕೆಂದೂ ಅಖಿಲ ಭಾರತ ರಾಜಕೀಯ ಕೈದಿಗಳ ವಿಮೋಚನಾ ಸಂಘದ ಕಾರ್ಯದರ್ಶಿಗಳಾದ ಶ್ರೀ। ಮೋಹನಲಾಲ ಸಕ್ಸೇನರವರ ವಿನಂತಿಯಾಗಿರುತ್ತದೆ ಡೆಟೆನ್ಯುಗಳ ವಿಮೋಚನೆ ಮಾತ್ರವಲ್ಲದೆ ಅವರಿಗೆ ಮತ್ತೊಮ್ಮೆ ಜೀವನಪ್ರಾರಂಭಿಸಲು ಅನುಕೂಲವಾಗುವಂತೆ ಧನಸಹಾಯದ ಏರ್ಪಾಡಾಗಬೇಕೆಂತ್, ಈ ಕುರಿತು ಚಳವಳ ನಡೆಸಬೇಕಾಗಿ ಎಲ್ಲಾ ಕಡೆಗಳಲ್ಲೂ ಸಭೆಗಳಾಗಿವೆ, ನಿಶ್ಚಿತಗಳೂ ಆಗಿವೆ. ಅಂದು ಚುನಾವಣೆಯ ಸಮಯ ಡೆಟೆನ್ಯುಗಳ ಬಿಡುಗಡೆಯ ಕುರಿತು ವಾಗ್ದಾನವಿತ್ತ ಪ್ರಧಾನಮಂತ್ರಿ ಶ್ರೀ। ಹಕ್ಕರು ಅಧಿಕಾರ ಭ್ರಮೆಯಿಂದಲೋ, ಇನ್ನಾವ ಕಾರಣದಿಂದಲೋ ತಮ್ಮ ವಚನವನ್ನು ಮರೆತುಬಿಟ್ಟಿರುವರು.

ಅಧಿಕಾರಸ್ವೀಕಾರವಾಯಿತು—ಮುಂದೇನು?

ಅಧಿಕಾರ ಸ್ವೀಕಾರವಾಯಿತು ಬಿಕ್ಕಟ್ಟಿನ ಸ್ಥಿತಿಯು ನಿವಾರಣೆಯಾಯಿತು ಅದರೆ ಮುಂದಕ್ಕೆ ಇದೆ.—"ಕಾಂಗ್ರೆಸ್ಸಿಗೆ ಇನ್ನಷ್ಟು ಮಹತ್ತರವೆನಿಸುವ ಕಾರ್ಯಗಳು. ನವಶಾಸನದ ಪ್ರಕಾರ ಗವರ್ನರರ ಸ್ವೇಚ್ಛಾಧಿಕಾರಗಳು, ಬ್ರಿಟಿಷ ಸಾಮ್ರಾಜ್ಯಶಾಹಿಯ ಧೀತಿ ಅರ್ಥಿಕ ಅನಾವಸ್ಥೆ—ಇವೆ ಮೊದಲಾದ ಮಹಾ ಆತಂಕಗಳ ಎದುರು ಕಾಂಗ್ರೆಸ್ ತಾನು ಕಟ್ಟಿಕೊಂಡ ಮಹಾಕಾರ್ಯಕ್ರಮವನ್ನು ಹೇಗೆ ನಡೆಯಿಸುವುದು. ಮತದಾರರು ತಮ್ಮಲ್ಲಿಟ್ಟ ನಂಬಿಕೆಯನ್ನು ಸಾರ್ಥಕಪಡಿಸಬೇಕು. ನವರಾಜಶಾಸನದ ಪೊಳ್ಳುತನವನ್ನು ಜನತೆಗೆ ಸ್ಪಷ್ಟಪಡಿಸಿ ಅದನ್ನು ಧ್ವಂಸಪಡಿಸಲು ಯತ್ನಗಳಾಗಬೇಕು ಭೂರಿಜನರ ಹಿತ ಪ್ರಾಮುಖ್ಯವಷ್ಟೆ. ಗ್ರಾಮೋದ್ಧಾರ ನಿರುದ್ಯೋಗ ನಿವಾರಣೆ, ವಿದ್ಯಾಪ್ರಸಾರ ಇತ್ಯಾದಿಗಳ ಕುರಿತು ಘನವಾದ ಕಾರ್ಯಕ್ರಮವು ಕಾಂಗ್ರೆಸನ್ನು ಕಾಯುತ್ತಿದೆ.

ಕಾಂಗ್ರೆಸ ವಾಲಂಟಿಯರು ಅಧಿಕಾರಿಗಳೊಡನೆ ಈ ಸಮಯದಲ್ಲಿ ಅವರ ಪ್ರಭಾವಕ್ಕೆ ಒಳಗಾಗದಂತೆ ಒಂದೆ ಬಾರಿಯೂ ಒಳಗಾದರೆ—ಅಧಿಕಾರ ವರ್ಗದಲ್ಲಿ ಎಲ್ಲರನ್ನು ಕೆಡಿಸುವ ಒಂದು ತರದ ವಿಷವು ಇರುವುದೆಂಬ ಅರಿವು ಕಾಂಗ್ರೆಸ ಮಂತ್ರಿವರ್ಯರು ಜಾಗ್ರತರಾಗಿರಬೇಕೆಂದೂ ಅಧಿಕಾರಿಗಳ (ಬ್ರಿಟಿಷರ) ಮಾಯಾಬಲೆಗೆ ಬೀಳದ ಹಾಗೂ ಕಾಂಗ್ರೆಸ್ಸಿನ ಧ್ಯೇಯ ಸಾಧನವನ್ನೆ ಗುರಿಯಾಗಿಟ್ಟು ಅತ್ಯಂತ ಪವಿತ್ರ ಕಾಂಗ್ರೆಸ್ ಮೇಲರಾಗಿರುವಂತೆ ಜಾಗರೂಕರಾಗುವಂತೆ—ಕಲ್ಕತ್ತೆಯ ಅದ್ಭುತ ಬಜಾರ ಪತ್ರಿಕೆಯು ಸೂಚನೆ ಕೊಟ್ಟಿರುತ್ತದೆ

ಇದೇ ಆಗೋಸ್ತು ತಿಂಗಳ ೩೦ನೇ ದಿನವನ್ನು ಕಾಂಗ್ರೆಸ್ಸು ಅಧಿಕಾರ ಸ್ವೀಕಾರ ಸ್ಮಾರಕದಿನವನ್ನಾಗಿ ಆಚರಿಸಬೇಕೆಂದು ರಾಷ್ಟ್ರಪತಿಯವರ ಅಪ್ಪಣೆಯಾಗಿರುತ್ತದೆ

ನಿಮಗೆ ಗಂಟಲುನೋವು ಇರುವುದೆ?

ನಿಮ್ಮ ಗಂಟಲು ರೋಗದ ಅಣುಗಳು ಕೂಡಿಕೊಳ್ಳುವ ಒಂದು ಅಪಾಯಕರ ಸ್ಥಳವು ಅದರಿಂದ ಇನ್‌ಫ್ಲ್ಯುಯೆಂಜಾ, ಶೀತಜ್ವರ ಇತ್ಯಾದಿ ಜ್ವರಗಳು ಉಂಟಾಗುವವು, ಅಲ್ಲದೆ ನ್ಯೂಮೋನಿಯಾ ಇತ್ಯಾದಿ ಮಹಾ ವ್ಯಾಧಿಗಳೂ ಉಂಟಾಗಬಹುದು ಆದ್ದರಿಂದ, ಗಂಟಲು ನೋವನ್ನು ಕೂಡಲೇ ನಿವಾರಿಸಲು ಪೆಪ್ಸ್‌ಗುಳಿಗೆಗಳನ್ನು ಸೇವಿಸಬೇಕು ಇವುಗಳಲ್ಲಿ ವಿಷಹಾರಿ ಗುಣಗಳಿದ್ದು ಅದರಿಂದ ಹೊರಡುವ ಔಷದಿಯುಕ್ತಧೂಮದಿಂದ ಬೇಗನೇ ಸುಖವುಂಟಾಗುವುದು ಈ ಧೂಮವು ಶ್ವಾಸಕೋಶವನ್ನು ಸೇರಿ, ಅಲ್ಲಿರುವ ರೋಗದಣುಗಳನ್ನು ಕೊಲ್ಲುತ್ತದೆ, ಅದರಿಂದ ಗಂಟಲುನೋವು ಕೆಮ್ಮು, ಶೀತ, ಮತ್ತು ಬ್ರೊಂಕೈಟಿಸ್ ಇತ್ಯಾದಿ ರೋಗಗಳು ಬೇಗನೇ ಗುಣವಾಗುತ್ತವೆ

ಪೆಪ್ಸ್‌ಮಾತ್ರೆಗಳು ಬಾಟ್ಲಿ 1ಕ್ಕೆ ರೂ 2_4_0ರಂತೆ ಎಲ್ಲಾ ದವಾಖಾನೆಗಳಲ್ಲಿ ಸಿಗುತ್ತದೆ

ಮೆಸರ್ಸ್ ದಾಧಾ ಅಂಡ್ ಕೋ., ಪಿ. ಟಿ. ಮದ್ರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್‌ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

ಮಂಗಳೂರು

ಡಿವಿಜನಲ್ ಕಾಂಗ್ರೆಸ್ ಕಮಿಟಿಗಳ ಸ್ಥಾಪನೆ—ಮಂಗಳೂರು, ಜುಲೈ ೧೮. ವಾರ್ಡುಗಳ ... ಒಂದನ್ನು ಒಟ್ಟುಗೂಡಿಸಿ ಒಂದು ... ಕಾಂಗ್ರೆಸ್ ಚುನಾವಣೆಯ ಮೂಲಕ ಈ ಡಿವಿಜನಲ್ ಕಮಿಟಿಗಳು ಸ್ಥಾಪಿತವಾಗುತ್ತವೆ. ಈ ಕಮಿಟಿಗಳನ್ನು ಸ್ಥಾಪಿಸಬೇಕಾದರೆ ... ಡಿವಿಜನಿನ ... ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಬೇಕು. ಕಾಂಗ್ರೆಸ್ ಕೆಲಸದ ಸೌಲಭ್ಯಕ್ಕೆ ಮತ್ತು ಇನ್ನಿತರ ಕಾರಣಗಳಿಗಾಗಿ ಈ ಕಮಿಟಿಗಳ ಸ್ಥಾಪನೆಯು ಅತ್ಯವಶ್ಯವಾಗಿದೆ. ... ಆದಷ್ಟು ಬೇಗನೆ ಕಾಂಗ್ರೆಸಿನ ಪ್ರಾಥಮಿಕ ಸದಸ್ಯರಾಗಿ ಈ ಕಮಿಟಿಗಳ ಸ್ಥಾಪನೆಯಲ್ಲಿ ನೆರವಾಗಬೇಕಾಗಿ ವಿನಂತಿ. ಡಿವಿಜನಲ್ ಕಮಿಟಿಗಳ ವಿವರವನ್ನು ಕೆಳಗೆ ಕೊಡಲಾಗಿದೆ—೧. ಬೋಳೂರು ಡಿವಿಜನಲ್ ಕಮಿಟಿ—ಬೋಳೂರು, ಮಣ್ಣಗುಡ್ಡೆ ಮತ್ತು ಕುದ್ರೋಳಿ ವಾರ್ಡುಗಳು. ೨. ಕೊಡಿಯಾಲಬೈಲು ಡಿವಿಜನಲ್ ಕಮಿಟಿ—ಕದ್ರಿ, ಕೊಡಿಯಾಲಬೈಲು ಮತ್ತು ಮಣ್ಣಗುಡ್ಡೆ ವಾರ್ಡುಗಳು. ೩. ಬಂದರ ಡಿವಿಜನಲ್ ಕಮಿಟಿ—ನವಾಯತ, ಗೋಳಿಕಟ್ಟಾ ಮತ್ತು ಬಂದರ ವಾರ್ಡುಗಳು. ೪. ಸೆಂಟ್ರಲ್ ಡಿವಿಜನಲ್ ಕಮಿಟಿ—ಶ್ರೀಕುಳೇಶ್ವರ, ಸೆಂಟ್ರಲ್ ಮತ್ತು ಡೊಂಗರಕೇರಿ ವಾರ್ಡುಗಳು. ೫. ಮಾರ್ಕೆಟ್ ಡಿವಿಜನಲ್ ಕಮಿಟಿ—ಮಾರ್ಕೆಟ್ ಸೌತ್, ಮಾರ್ಕೆಟ್ ನೋರ್ತ್ ಮತ್ತು ಕೋರ್ಟು ವಾರ್ಡುಗಳು. ೬. ಫಲ್ನೀರು ಡಿವಿಜಲ್ ಕಮಿಟಿ—ಬೆಂದೂರು, ಬಲ್ಮಠ, ಫಲ್ನೀರು ಮತ್ತು ಮಿಲಾಗ್ರಿಸ್ ವಾರ್ಡುಗಳು. ೭. ರುಜಾರಿಯೋ ಡಿವಿಜನಲ್ ಕಮಿಟಿ—ಪೋರ್ಟು, ರುಜಾರಿಯೋ ಮತ್ತು ಕಂಟೋನ್ಮೆಂಟ್ ವಾರ್ಡು. ೮. ಅತ್ತಾವರ ಡಿವಿಜಲ್ ಕಮಿಟಿ—ಅಳ್ಕೆ ಮತ್ತು ಅತ್ತಾವರ. ೯. ಜಪ್ಪಿನ ಡಿವಿಜನಲ್—ಜಪ್ಪಿನ ಮತ್ತು ಮಂಗಳಾದೇವಿ.

ಮಂಗಳೂರು ಮುನಿಸಿಪಲ್ ಚುನಾವಣೆ—ಮಂಗಳೂರು ಮುನಿಸಿಪಲ್ ಕೌನ್ಸಿಲಿಗೆ ಕಾಂಗ್ರೆಸ ಕಡೆಯಿಂದ ಉಮೇದ್ವಾರರಾಗಿ ನಿಲ್ಲಬಹ ಇಚ್ಛೆಯುಳ್ಳವರು ತಮ್ಮ ಅರ್ಜಿಗಳನ್ನು 'ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಿಗೆ ಅದೇ ಜುಲ್ಯಾ ತಾ ೧ನೇ ಶನಿವಾರದೊಳಗೆ ಕಳುಹಿಸತಕ್ಕದ್ದು ಅರ್ಜಿ ಮತ್ತು ಪ್ರಮಾಣಪತ್ರಗಳ ಫಾರ್ಮುಗಳನ್ನು ಕಾಂಗ್ರೆಸ್ ಕಚೇರಿಯಲ್ಲಿ ಪಡೆಯಬಹುದು ಅರ್ಜಿಯೊಡನೆ ಠೇವಣಾತಿಯಾಗಿ ರೂ. ೨೫ನ್ನು ಕೊಡತಕ್ಕದ್ದು ಉಮೇದ್ವಾರರಾಗಿ ಆರಿಸಲ್ಪಡದಿದ್ದರೆ ರೂ. ೨೫ ಅವರಿಗೆ ಹಿಂದೆ ಕೊಡಲ್ಪಡುವುದು. ಉಮೇದ್ವಾರರು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರಾಗಿರಬೇಕೆಂಬುದನ್ನು ಲಕ್ಷ್ಯದಲ್ಲಿ ಇಡಬೇಕಾಗಿ ವಿನ್ನಹ.

ಮಳೆ—ಈಗ್ಗೆ ಕೆಲವು ದಿನಗಳಿಂದ ಭಯಂಕರವಾದ ಗಾಳಿಮಳೆಗಳು ಬಂದು ಬಯಲುಗದ್ದೆ ಹಳ್ಳತೋಡುಗಳು ನೀರಿನಿಂದ ತುಂಬಿದ್ದವು. ನಿನ್ನೆಯಿಂದ ಸೂರ್ಯನು ಸ್ವಲ್ಪ ಕಾಣಿಸಿಕೊಳ್ಳುತ್ತಿದ್ದಾನೆ ಮಳೆಯು ವಿಶೇಷವಿಲ್ಲದು ಅಲ್ಲಲ್ಲಿ ಮಾರ್ಗಗಳು ಕಡಿದುಹೋಗಿರುತ್ತವೆ

ಶ್ರೀ ವಿವೇಕಾನಂದ ಸಭಾ, ರಾಘವಾಶ್ರಮ—ಇದೇ ಬರುವ ತಾ. ೨೫ನೇ ದಿನ ಬೆಳಗ್ಗೆ ಗಂಟೆ ಲಕ್ಕೆ ಮೇಲಿನ ಸಭೆಯ ಅಧ್ಯಕ್ಷದಲ್ಲಿ ಶ್ರೀ ಕಾರ್ಕಳ ವೆಂಕಟರಾವ್, ಎಂ. ಎ ಎಲ್ ಟಿ ಪ್ರೊಫೆಸರ್ ಗವರ್ನ್ಮೆಂಟ್ ಕಾಲೇಜ್ ಇವರು 'ಭಕ್ತಿಯೋಗ' ಎಂಬ ವಿಷಯದ ಕುರಿತು ಭಾಷಣಮಾಡುವರು ಈ ಸಂದರ್ಭವನ್ನು ಹೋಗಲಾಡಿಸದೆ, ಅಧಿಕ ಜನರು ಬಂದು ಈ ಸಭೆಯ ಸದುದ್ದೇಶವನ್ನು ಪೂರೈಸಬೇಕಾಗಿ ಸಭೆಯ ಕಾರ್ಯದರ್ಶಿಯವರು ಈ ಮೂಲಕ ವಿನಂತಿಸುತ್ತಾರೆ

೫ನೇ ತರಕಾರಿ ಮತ್ತು ಫಲಪುಷ್ಪಗಳ ಪ್ರದರ್ಶನ—ದಕ್ಷಿಣ ಕನ್ನಡಾ ಜಿಲ್ಲಾ ಎಗ್ರಿಕಲ್ಚರಲ್ ... ಸಂಘದವರು ಐದನೆ ಮಂಗಳೂರು ತರಕಾರಿ ಮತ್ತು ಪುಷ್ಪಗಳ ಪ್ರದರ್ಶನವನ್ನು ಬರುವ ಒಕ್ಟೋಬರ ತಾ ೭ ಮತ್ತು ೮ರಲ್ಲಿ ಜರಗಿಸುವರು ಪ್ರದರ್ಶಕರು ಶ್ರೀ ಪಿ. ಆರ್ ಪ್ರಭುಜರು ಅಥವಾ ಬಿ. ಎಸ್. ಫೆರ್ನಾಂಡಿಸ್ ಕೊಡಿಯಾಲ್ಬೈಲ್, ಇವರೊಡನೆ ವಿಚಾರಿಸಬಹುದು.

ಪಾರ್ಲಿಮೆಂಟರಿ ಸೆಕ್ರಿಟರಿಯವರಿಗೆ ಅಭಿವಂದನೆ—ನಮ್ಮ ಜಿಲ್ಲೆಯ ಕಾಂಗ್ರೆಸ್ ಎಸೆಂಬ್ಲಿ ಸದಸ್ಯರಾದ ಶ್ರೀಗಳಾದ ಕೆ. ಆರ್. ಕಾರಂತ, ಎ ಬಿ. ಶೆಟ್ಟಿ, ಸಿ. ಜೆ. ವಾರ್ಕಿ ಇವರುಗಳು ಪಾರ್ಲಿಮೆಂಟರಿ ಸೆಕ್ರಿಟರಿಗಳಾಗಿ ನೇಮಿಸಲ್ಪಟ್ಟುದಕ್ಕೆ ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ಒಂದು ಅಭಿವಂದನಾ ಕೂಟವೂ ಈ ದಿವಸ ಸಾಯಂಕಾಲ ನಡೆಯುವುದು.

... ಉತ್ಸಾಹದಿಂದ ... ಸಲ್ಲಿಸಿ ತಮ್ಮ ... ಗಳನ್ನು ತೋರಿಯುವರು. ಶ್ರೀ ... ಅವರು ತಮಗಿರುವ ಅಪಾರ ಸಂಬಳವನ್ನು ಬಿಟ್ಟು, ದೇಶಸೇವೆಗಾಗಿ ಮದ್ರಾಸಿಗೆ ತೆರಳುವರು. ... ಆಗುವ ... ಸ್ಥಾನಗಳನ್ನೆಲ್ಲಾ ಬೇರೆ ವಕೀಲರಿಗೆ ಬಿಟ್ಟುಕೊಟ್ಟಿರುವರು. ಇದರಿಂದ ಕಾರಂತರ ಉತ್ಪತ್ತಿಯು ಬಹಳವಾಗಿ ಕಡಿಮೆಯಾಗುವುದೆಂದು ತಿಳಿದುಬರುತ್ತದೆ. ಶ್ರೀ ಸಿ. ಜೆ. ವಾರ್ಕಿಯವರು ತಮ್ಮ ಕಾಲೇಜಿನ ಪ್ರೊಫೆಸರ್ ಹುದ್ದೆಗೆ ರಾಜಿಯನ್ನಿತ್ತಿರುವರು. ಅಂತೆಯೇ ಶ್ರೀಗಳಾದ ಎ. ಬಿ. ಶೆಟ್ಟಿಯವರು ತಮ್ಮ ಇಲ್ಲಿಯ ಸಕಲ ಕಾರ್ಯಗಳನ್ನು ಬಿಟ್ಟು ಮದ್ರಾಸಿಗೆ ತೆರಳುವರು.

ಈ ಮೂವರು ಮಹಾಶಯರು ಈ ತರದ ಅರ್ಪಣೆಯನ್ನು ಮಾಡುವುದು ಶ್ಲಾಘನೀಯವು

ಜಿಲ್ಲಾ ಕಾಂಗ್ರೆಸ್ ಕಮಿಟಿಯ—ಸಭೆಯೊಂದು ಮೊನ್ನೆ ಅವರ ಆಫೀಸಿನಲ್ಲಿ ನಡೆಯಿತು ಕೆಲವರಲ್ಲಿರುವ ಭೇದಾಭಿಪ್ರಾಯದಿಂದ ಸಭೆಯಲ್ಲಿ ಗಲಾಟೆ ನಡೆಯುತ್ತದೆಂದೂ ಶ್ರೀ ಸಕಲ ಶೆಟ್ಟರು ಅವನ್ನು ಸಂತಯಿಸಿದರೆಂದೂ ಕಾಂಗ್ರೆಸ್ ಕಮಿಟಿಯಲ್ಲಿ ಈಗ ವ್ಯರ್ಥ ಕೆಲ ಸಣ್ಣ ಸಣ್ಣ ಛಿದ್ರಗಳು ನಡೆಯುತ್ತಿದ್ದಾವೆಂದೂ ವಾರ್ತೆ ದೇಶದಲ್ಲೆಲ್ಲಾ ಕಾಂಗ್ರೆಸ್ ಶ್ರೇಯಸ್ಸು ... ನಮ್ಮವರು ಆ ಕುರಿತು ಹಿಂದುಳಿಯಬಾರದೆಂದು ಬಾತ್ಮಿದಾರರೊಬ್ಬ ಅಭಿಪ್ರಾಯ

ಎಲೋಸಿಯಸ್ ಕಾಲೇಜ್ ಎಸೆಂಬಿ

ಈ ಕಾಲೇಜಿನ ಯೂನಿಯನ್ ಶಾಸನವು ಬದಲಾಗುವುದೆಂದೂ ಸ್ವಯಂ ಪ್ರಭುತ್ವ ಶಾಸನವನ್ನು ಕೊಡಲು ಕಾಲೇಜಿನ ಅಧಿಕಾರಿಯು ಒಪ್ಪಿರುವರೆಂದೂ ತಿಳಿದುಬರುತ್ತದೆ ಈ ಭಾರಿಯ ಯೂನಿಯನ್ ಚುನಾವಣೆ ಪರ್ಲ್ಯಂತಿಯಲ್ಲಿ ನಡೆದು ಪ್ರೊಗ್ರೆಸ್ಸಿವ್ ಪಕ್ಷ ಕಾನ್ಸರ್ವೇಟಿವ್ ಪಕ್ಷದವರನ್ನು ಸೋಲಿಸಿರುವರು ಪ್ರೊಗ್ರೆಸ್ಸಿವ್ ಪಕ್ಷದವರು ಕಾರ್ಯಕ್ರಮದಲ್ಲಿ ಅನೇಕ ಮಾರ್ಪಾಟುಗಳನ್ನು ಮಾಡುವರಾಗಿ ತಿಳಿದುಬರುತ್ತದೆ ವಿದ್ಯಾರ್ಥಿಗಳ ಈ ಚಟುವಟಿಕೆಗಳಿಗೆ ಕಾಲೇಜಾಧಿಕಾರಿಗಳ ಸಮ್ಮತಿವಿರುವುದು

ಜಿಲ್ಲಾ ಬೋರ್ಡ್ ಸಭೆ—ಇದೇ ಕಳೆದ ತಾ. ೧೬ರಲ್ಲು ಜರಗಿತು. ಕಾಂಗ್ರೆಸ್ ಮಂತ್ರಿಮಂಡಳದಲ್ಲಿ ಭರವಸೆಯಾಗುವುದೆಂದೂ ಸಭಾಮಂದಿರದಲ್ಲಿ ಕೂಗಾಡಿಸಿದ ಪೋಲೀಸರ ಕುರಿತು ಇನ್ನಿತರ ಅನೇಕ ಪ್ರಮುಖ ವಿಷಯಗಳ ಮೇಲೆ ಠರಾವುಗಳಾಗಿರುತ್ತವೆ.

ನಮ್ಮೂರಿನ ಪ್ರಸಿದ್ಧ ಶಸ್ತ್ರಚಿಕಿತ್ಸಗಾರರಾದ ಲೆಪ್ಟನೆಂಟ್ ಕರ್ನಲ್ ಮಿರಾಜಕರವರು ಇಲ್ಲಿಗೆ ಬಿಜಯಂಗೈದು ಅನೇಕ ಶಸ್ತ್ರಚಿಕಿತ್ಸೆಗಳನ್ನು ನಡೆಯಿಸಿದರಾಗಿ ತಿಳಿದು ಬರುತ್ತದೆ

ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್— ಇದರ ಶಾಖೆಗಳೆರಡು ಮೆಟ್ಟುಪಾಲಯಂ ಮತ್ತು ಈರೋಡಿನಲ್ಲಿ ಬೇಗನೇ ತೆರೆಯಲಿರುವುದೆಂದು ತಿಳಿದುಬರುತ್ತದೆ

ತಾಲೂಕುಗಳಿಂದ.

ಪಡುಬಿದ್ರೆ:—ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯ ಜಗದ್ಗುರುಗಳ ಪುಣ್ಯ ದಿನಾಚರಣೆಯಂದು "ವಿದ್ಯಾರಣ್ಯ ಚರಿತ್ರೆ" ಅಥವಾ "ವಸಂತವನ ಪರ್ವಸೇನ" ಎಂಬ ಹರಿಕಥೋಪನ್ಯಾಸವನ್ನು ಶ್ರೀಯುತ ಪಿ ಎಲ್ ರಾಘವೇಂದ್ರರಾಯರು ಉದಯಾದ್ರಿ ಬಾಲಗಣೇಶ ಮಿತ್ರಮಂಡಳಿಯ ಸಹಾಯದಿಂದ ಜನಮನಾಕರ್ಷಣ ಗೊಳಿಸುತ್ತಾರೆ

ಕಾರ್ಕಳ:—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳನ್ನು ಕೊಡಬಯಸುವ ಹಿಂದೀ ಭಾಷಾಭ್ಯಾಸಿಗಳಿಗೆ ತಕ್ಕ ಶಿಕ್ಷಣವನ್ನು ಕೊಡುವುದಕ್ಕೋಸ್ಕರ ಹಿಂದೀ ವರ್ಗಗಳನ್ನು ತೆರೆಯುವ ಏರ್ಪಾಡು ಇಲ್ಲಿ ಈಗ ನಡೆದಿದೆ ರಾಷ್ಟ್ರಭಾಷೆ ಹಿಂದಿಯನ್ನು ಕಲಿತು ದೇಶಸೇವೆ ಮಾಡಬಯಸುವವರು ಇಲ್ಲಿಯ ಪ್ರಚಾರಕರಾಗಿರುವ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರಿಂದ ವರ್ಗಗಳ ಸಂಬಂಧವಾದ ಪೂರ್ಣ ವಿವರಗಳನ್ನು ತಿಳಕೊಳ್ಳಬಹುದು.

"ಕಲ್ಲತ್ತಿಯ ಭಾರತಸೇವಾಶ್ರಮ ಸಂಘದ ಶ್ರೀಮತ್ ಅದ್ವೈತಾನಂದ ಸ್ವಾಮಿಯವರು ತಾ. ೧೮—೭—೩೭ರ ದಿನ ಸಾಯಂಕಾಲ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಿದ ಬೃಹತ್ಸಭೆಯಲ್ಲಿ ಹಿಂದೂ ಆರ್ಯರ ಪ್ರಾಚೀನ ಸಂಸ್ಕೃತಿ ಎಂಬ ಕುರಿತು ಅನೋಘವಾದ ಭಾಷಣವನ್ನು ಕೊಟ್ಟು, ಸೇವಾಶ್ರಮದ ಸ್ಥಾಯೋದ್ದೇಶ ಕಾರ್ಯಸಾಧನೆಯ ಕ್ರಮಗಳನ್ನು ತಿಳಿಸಿ ಸಾರ್ವಜನಿಕರ ಕ್ರಿಯಾತ್ಮಕ ಸಹಾನುಭೂತಿಯನ್ನು ಕೋರಿದರು

ಪುತ್ತೂರು:—ಸಂಯುಕ್ತ ಗ್ರಾಮ ಕಾಂಗ್ರೆಸ್ ಸಮಿತಿ, ಬೆಳ್ಳಾರೆ— ತಾ. ೧೪—೭—೩೭ನೇ ದಿನ ಆದಿತ್ಯವಾರ ಗಂಟೆ ೫-೩೦ಕ್ಕೆ ಸರಿಯಾಗಿ ಇಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿತು. ಶ್ರೀಮಾನ್ ಟಿ. ನಾರಾಯಣ ಶಾನುಭಾಗರು ಅಗ್ರಾಸನವನ್ನು ವಹಿಸಿದ್ದರು ಪ್ರಾರಂಭದಲ್ಲಿ ರಾಷ್ಟ್ರಧ್ವಜವು ಏರಿಸಲ್ಪಟ್ಟು, ಧ್ವಜವಂದನೆಯನ್ನು ಮಾಡಲಾಯಿತು ಆ ಮೇಲೆ ಕಾಂಗ್ರೆಸ್ ಅಧಿಕಾರ ಸ್ವೀಕಾರ ಮಾಡುವ ವಿಷಯದಲ್ಲಿ ಮಹಾತ್ಮನ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು. ತದನಂತರ ಸಭಾಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸಿದ ಬಳಿಕ ಸಭೆಯು ಅಂತ್ಯಗೊಂಡಿತು

ದಕ್ಷಿಣ ಕನ್ನಡಿಗರಿಗೊಂದು ಶುಭವಾರ್ತೆ

(ಮುಂಬಯಿ ಪತ್ರಿಕಾ ಪ್ರತಿನಿಧಿಯ ಕಡೆಯಿಂದ)

ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರಾದ ಶ್ರೀ ಎಂ ಕೆ ಮೂಲ್ಕಿ ವಿಶನಾಥ ಟಿ ದೇವಜೀ ಎಂಬುವರನು ಮುಂಬಯಿಯ ಪ್ರಾಮುಖ್ಯ ಫೂಟ್ ಬೋಲ್ ಆಟದ ಸಂಸ್ಥೆಯಾದ "ದಿ ವೆಸ್ಟರ್ನ್ ಇಂಡಿಯಾ ಫೂಟ್ ಬೋಲ ಎಸೋಸಿಯೇಶನ್ ನ ಕಾರ್ಯನಿರ್ವಾಹಕ ಸಭೆಯ ಸದಸ್ಯರನ್ನಾಗಿ ಆರಿಸಿದ್ದು ನಮ್ಮ ದಕ್ಷಿಣ ಕನ್ನಡಿಗರಿಗೆ ಭೂಷಣವೇ ಸರಿ ಮುಂಬಯಿ ನಗರದಲ್ಲಿ ಕಾಲ್ಚೆಂಡಿನ ಪಂದ್ಯಾಟದೀಗ ಈ ವರೆಗೆ ವಿಶೇಷವಾಗಿ ಸ್ವೀಕ ಪ್ರೀತ್ಯರ್ಥಿಸಿಕೊಂಡಿದ್ದರು ಆದ ಕಳೆದ ಎರಡು ಮೂರು ವರ್ಷಗಳಿಂದಾಗಿ ಶ್ರೀ ದೇವಜೀಯವ ಪ್ರೋತ್ಸಾಹದಿಂದ ಒಂದು ಟೀಮನ ಏರ್ಪಡಿಸಿ ಈ ಮೇಲಿನ ಸಂಸ್ಥೆ ಏರ್ಪಡಿಸಿದ ನಡೆಯಿಸಲ್ಪಡು ಸವು ಪಂದ್ಯಾಟದಲ್ಲಿ ಭಾಗವಹಿ ಅನೇಕ ಇನಾಮುಗಳನ್ನು ಪಡೆ ಹಿಂದೀಯರ ಮತ್ತು ಯುರೋಪಿ ಯನರ ಪ್ರಶಂಸೆಗೆ ಪಾತ್ರರಾಗಿ ವೆ ಮುಂಬಯಿ ನಿವಾಸಿಗಳಾ ಹಿಂದೀಯರಲ್ಲಿ ಮುಖ್ಯತಃ ದಕ್ಷಿಣ ಕನ್ನಡ ಜಿಲ್ಲೆಯ ಯುವಕರ ಫೂಟ್ ಬೋಲ್ ಚೆಂಡಾಟದ ಅ ರುಚಿಯನ್ನು ಹೆಚ್ಚಿಸುವ ಉತ್ತ ಶ್ರೀ ದೇವಜೀಯವರಲ್ಲಿ ಬಹಳವಿ ಇವರ ಯತ್ನವು ಸಫಲವಾ ಮುಂದಿನ ನಡೆಯಲಿಕ್ಕಿರುವ ಪಂದ್ಯಾಟಗಳಲ್ಲಿ ನಮ್ಮ ಜಿಲ್ಲೆಯ ಯುವಕರು ಭಾಗವಹಿಸಿ ಕಪ್ಪು ಪಡೆದು ಕೀರ್ತಿಯನ್ನು ಯಶಸ್ಸನ್ನು ಗಳಿಸುವರೆಂದು ಹಾರೈಕೆ.

ಇದಲ್ಲದೆ ವಿಶನಾಥ ಟಿ ದೇವಜೀಯವರು ಸಮಾಜ ಸೇವೆಯಲ್ಲಿಯೂ ಎದೆಗಾರರು. ಇಲ್ಲಿಯ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಮೊಗವೀರ ಜಾತಿಯ ಸಂಸ್ಥೆಯಾದ ಮೊಗವೀರ ವ್ಯವಸ್ಥಾಪಕ ಮಂಡಳಿಯ ವರ್ಷದ ಅಧ್ಯಕ್ಷರಾಗಿದ್ದಾರಲ್ಲದೆ ಸದರಿ ಮಂಡಳಿಯ ಆಜೀವ ಮೆಂಬರರಾಗಿರುವರು ಈ ಮಂಡಳಿಯ ಮೂಲಕ ಶ್ರೀ ದೇವಜೀಯವರು ಜಾತಿಭೇದವಿಲ್ಲದೆ ಅನೇಕ ವರ್ಷಗಳಿಂದ ಕನ್ನಡಿಗರ ಸೇವೆಯನು ಮಾಡುತ್ತಬಂದಿರುವರು.

(ವಿ. ಎಸ್ ಶಿಬ್ರೂರ್ ಕರ್)

ನವರತ್ನಾ 'ಚ್ಯವನಪ್ರಾಶಾವ ಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ.

ರಾತಲು 1ಕ್ಕೆ ರೂ. 2—6—0. ½ ರಾತಲು 1-4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಫೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸುವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳೆದು.

ಕ್ರಯ 16 oz 3-0-0; 8 oz 1 10 0; 4 oz 0 - 14—0.

ತಯಾರಿಸುವವರು:—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪಾಪ್ಯುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಣೈ ಕಾರ್ಕಳ.
ಕೆ. ಎಲ್. ಐತಾಳ್, ಉಡುಪಿ. — ಮೊಡರ್ನ್ ಫಾರ್ಮಸಿ, ಕುಂದಾಪುರ.
ಬಿ. ಜಿ. ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರು
ಡಾ। ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NARSI & CO.,
Chemists, Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in:—
Watches, Clocks, Timepieces, Rolled Gold Jewellery & Sporting Materials etc,



Stockists of:
West End, Zenith Meridian, Swiss Watches of latest designs & tastes

Repairers – Watches, Clocks, Timepieces and Gramophones.

Japan	8 Inch	Octegon	Rs. 6	0	0
„	8 „	Regulator	„ 6	12	0
„	10 „	Octegon	„ 6	8	0
„	10 „	Regulator	„ 7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಾಗ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ವ ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ, ಮಂಗಳೂರು.

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಳೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಯಾಜುಗಳಲ್ಲಿಯೂ ಮಾಫಕ ಕ್ರಯಕ್ಕೆ ದಾಸ್ತಾಗಲೂ ಸಿಗುತ್ತವೆ.

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of
Please call on or write to:-

Simon & Co ,
Painters,

Churchgate, Hampankatta No. 13, MANGALORE.

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡು ಇತ್ಯಾದಿಗಳನ್ನೂ,
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶ್ರೇಷ್ಠ ಮಾರಾಟ, ಗಟ್ಟಿಯಾದ ಯಂತ್ರಸಾಮಗ್ರಿಗಳು ... ಅತಿ ಕಮ್ಮಿ ಬೆಲೆಗಳು ... 3 ವಾಚುಗಳನ್ನು ಒಂದೇ ಸಾರಿ ಕೊಳ್ಳುವವರಿಗೆ ... ನಿಕ್ಕೆಲಿನ ... ವಾಚು 1ಕ್ಕೆ ರೂ 2–15–0. ಅದರಲ್ಲಿ ಉತ್ತಮವಾದದ್ದು 3–8–0 ಬಂಗಾರದ ಗಿಲಿಟಿದ್ದದಕ್ಕೆ ರೂ 4—8—0 ... 5–0–0 ನಿಕ್ಕಲಿನ ಆಯತಾಕಾರದಕ್ಕೆ 6–8 0. ಅದರಲ್ಲಿ ಬಂಗಾರದ ಗಿಲಿಟಿದ್ದುದಕ್ಕೆ 7–8–0 ಲೀವರ್ ಪಾಕೆಟ್ ವಾಚಿಗೆ ಬರಿ ರೂ 1–14–0. ... 1ಕ್ಕೆ ಬರಿ ರೂ 1–15–0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು.

M. L. Watch Co., 176, Cross Street CALCUTTA.

USE
KALYANPUR SUGAR

IT IS THE PUREST & THE SWEETEST.
IT IS A UNIQUE PRODUCT OF OUR OWN DISTRICT.

available in 7lb and 14lb packets, at the
Office, C. P. C. Co., Ltd.

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಕಾಂಗ್ರೆಸ್ ಮಂತ್ರಿಮಂಡಳಗಳಿಗೆ ಮಹಾತ್ಮಾಜಿಯವರ ಹಿತೋಪದೇಶ

[illegible] ಪತ್ರಿಕೆಯಲ್ಲಿ ಒಂದು [illegible] ಬರೆದಿರುವರು. ಅದರ ಅನು ವಾದವು ಕೆಳಗಿರುವುದು.

ಕಾಂಗ್ರೆಸ್‌ನವರು ಮತ್ತು ವರ್ಕಿಂಗ್ ಕಮಿಟಿಯವರು ಮುಖ್ಯವಾಗಿ ನನ್ನ ಪ್ರೇರಣೆಯ ಮೇರೆಯಿಂದ ಅಧಿಕಾರ ಸ್ವೀಕರಿಸಬೇಕೆಂಬ ನಿರ್ಣಯ ಮಾಡಿರುವುದರಿಂದ, ಆ ಸಮಸ್ಯೆಯ ಕುರಿತು ನನ್ನ ಅಭಿಪ್ರಾಯ ಏನಿರಬಹುದೆಂದು ಜಗತ್ತಿಗೆ ಪ್ರಕಟಪಡಿಸುವುದು ನನ್ನ ಕರ್ತವ್ಯವಾಗಿರುತ್ತದೆ. ಅಲ್ಲದೆ ಕಾಂಗ್ರೆಸ್ ಚುನಾವಣಾ ಪ್ರಸಿದ್ಧ ಪತ್ರದಲ್ಲಿ ಕೊಟ್ಟ ನಿರ್ಣಯಗಳನ್ನು ನಡೆಯಿಸುವರೆ ಎಷ್ಟರ ಮಟ್ಟಿಗೆ ಸಾಧ್ಯವಿರುವುದೆಂದು ವಿವರಿಸಬೇಕಾಗಿದೆ.

ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರಕಿಸುವರೆ ನೂತನ ಇಂಡಿಯಾ ಗವರ್ನಮೆಂಟು ಆಕ್ಟು ಅಸಮಾಧಾನಕರ ತರದೆಂದು, ಲೋಕ ವಿಖ್ಯಾತವಾಗಿರುತ್ತದೆ. ಬಲಾತ್ಕಾರದ (ದಬ್ಬಾಳಿಕೆಯ) ಖಡ್ಗದ ಆಳ್ವಿಕೆ ಬದಲಾಗಿ ಅಧಿಕ ಪ್ರಜಾಮತವನ್ನು ಹೊಂದಿದ ಆಳ್ವಿಕೆಯನ್ನು ಆಚರಿಸುವುದು, ಈ ಆಕ್ಟಿನ ಉದ್ದೇಶವಾಗಿರಬಹುದೆಂದು ಒಂದು ಪಕ್ಷಕ್ಕೆ ಭಾವಿಸಬಹುದು ಮೂರು ಕೋಟಿ ಸ್ತ್ರೀಪುರುಷರಿರುವ ವೋಟರರ ಪಟ್ಟಿಯ ನಿರ್ಮಾಣ, ಅವರಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡುವುದು, ಇವುಗಳನ್ನು ಬೇರೆ ಹೆಸರುಗಳಿಂದ ವಿವರಿಸಲು ಕಷ್ಟ ನಮ್ಮ ಮೇಲೆ ಹೊರಿಸಲಾದ ಸಫಲ ಕರಣೆಯು, ಅಂತ್ಯದಲ್ಲಿ ನಮಗೊಂದು ಮಹಾ ವರವಾಗಿ ಪರಿಣಮಿಸಬಹುದು. ಮೂರು ಕೋಟಿ ಮಂದಿಗಳಿಂದ ಚುನಾಯಿತರಾದವರು ಬುದ್ಧಿಶಾಲಿಗಳೂ, ಧೈರ್ಯವಂತರೂ ಆಗಿದ್ದರೆ, ಅಧಿಕಾರ ಸ್ವೀಕಾರದಿಂದ ನೂತನ ಆಕ್ಟಿನ ಸಫಲ ಕರಣೆಆಶಯಗಳನ್ನು ನಾಶಪಡಿಸಬಹುದು ನೂತನ ಆಕ್ಟನ್ನು ರಚಿಸಿದವರ ಉದ್ದೇಶಗಳನ್ನು ನಾಶಮಾಡಬಹುದು ಈ ಕೆಲಸವನ್ನು ನೂತನ ಆಕ್ಟಿಗೆ ಅನುಗುಣವಾಗಿಯೆ ನಡೆಯಿಸಬಹುದು ಆಕ್ಟಿನ ರಚನೆಗಾರರ ಉದ್ದೇಶಗಳು ನಡೆಯದಂತೆ ಮಾಡಬಹುದು

ಮಹಾತ್ಮಾಜಿ ವಿರಚಿತ ಕಾರ್ಯಕ್ರಮ.

ನೂತನ ಆಕ್ಟಿನಿಂದ ಯಾವ ತರದ ಸಫಲ ಹೊಂದಬಹುದು, ಅದನ್ನು ಹೇಗೆ ಹೊಂದಬಹುದು ಎಂಬುದರ ಕುರಿತು ಮಹಾತ್ಮಾಜಿಯವರು ಒಂದು ಕಾರ್ಯಕ್ರಮವನ್ನು ರಚಿಸಿರುವರು

ಕಾಂಗ್ರೆಸ್ ಮಂತ್ರಿಮಂಡಳಗಳು ಮದ್ಯಪಾನ ನಿಷೇಧ ಕಾರ್ಯವನ್ನು ಕೂಡಲೇ ವಹಿಸಬೇಕು, ವಿದ್ಯಾ ಇಲಾಖೆಗೆ ಬೇಕಾದ ಹಣವನ್ನು ಅದರಿಂದಲೆ ಪಡೆಯುವಂತೆ ಮಾಡಿ ವಿದ್ಯಾ ಇಲಾಖೆ ಆಬಕಾರಿಗೆ ಇಲಾಖೆಯಿಂದ ಹಣ ಸಲ್ಲುವುದನ್ನುನಿಲ್ಲಿಸಬಹುದು ಇದೊಂದು ಆಶ್ಚರ್ಯ ಸೂಚನೆ ಎಂದು ಭಾವನೆಗಳಾಗಬಹುದು. ಆದರೆ ಅದು ಸಾಧ್ಯವಿದೆ ಎಂಬುದಾಗಿ ನನಗೆ ನಂಬಿಕೆಯಿದೆ

ಕಾರಾಗ್ರಹಗಳನ್ನು ಸುಧಾರಣಾ ನಿಲಯಗಳನ್ನಾಗಿ ಮಾಡಬಹುದು ಅವುಗಳು ತಾವಾಗಿಯೆ ನಡೆಯುವಂತಾಗಿ, ಅವುಗಳಿಂದ ಉಂಟಾಗುವ ವ್ಯಯವನ್ನು, ಅವುಗಳ ನಿಷ್ಪ್ರಯೋಜನತೆಯನ್ನು ತೊರೆದು ಹಾಕಬಹುದು ಉಪ್ಪು ಬಡವರಿಗೆ ಉಚಿತವಾಗಿ ದೊರಕಿಸುವ ವ್ಯವಸ್ಥೆಯಾಗಬೇಕು ಗಾಂಧಿ—ಇರ್ವಿನ್ ಪೆಕ್ಟಿನ ಪ್ರಕಾರ ಬಡವನಿಗೆ-ಉಪ್ಪು ಉಚಿತವೆಂದಿದ್ದರೂ ಆತನಿಗೆ ಅದು ಪುಕ್ಕಟೆಯಾಗಿ ದೊರಕುವುದಿಲ್ಲ. ಕಾಂಗ್ರೆಸ್ ಪ್ರಾಂತ್ಯಗಳಲ್ಲಾದರೂ ಬಡವನಿಗೆ—ಉಪ್ಪು ಉಚಿತವಾಗಬಹುದು, ಅಲ್ಲಿ ಸರಕಾರವು ಖಾದಿಯನ್ನೇ ಕೊಂಡುಕೊಳ್ಳುವಂತೆ ಮಾಡಬಹುದು ಗ್ರಾಮಗಳ ಕಡೆಗೆ ಹೆಚ್ಚಿನ ಗಮನಸಲ್ಲ

ತಕ್ಕುದು ಕೃಷಿಕ ವರ್ಗದ ಕುರಿತು ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕು ನಗರಗಳಿಗಿಂತ ಹೆಚ್ಚಿನ ಲಕ್ಷ್ಯವು ಹಳ್ಳಿಗಳಿಗೆ ದೊರಕತಕ್ಕದು. ಇವೆಲ್ಲಾ ಅವಸರದಲ್ಲಿ ಆರಿಸಲಾದ ಕೆಲವು ಸೂಚನೆಗಳು —ಇವುಗಳೆಲ್ಲಾ ಶಾಸನಕ್ರಮಬದ್ಧವಾಗಿವೆ ಆದರೂ, ಅವುಗಳನ್ನು ನಡೆಯಿಸಲು ಇಷ್ಟರ ತನಕ ಯತ್ನಗಳಾಗಲಿಲ್ಲ

ಮಂತ್ರಿವರ್ಯರು ಸರಳತೆಯ ಕುರಿತು ಮೇಲ್ಪಂಕ್ತಿಯನ್ನು ಹಾಕಬೇಕು.

ಮಂತ್ರಿವರ್ಯರ ಕುರಿತು, ಇವರು ಹೇಗೆ ವರ್ತಿಸಬೇಕು? ಅವರ ನಾಯಕರಾದ ರಾಷ್ಟ್ರಪತಿಯವರು ರೈಲ್ವೆಯಲ್ಲಿ ಮೂರನೆ ತರಗತಿಯಲ್ಲಿ ಪ್ರವಾಸಮಾಡುತ್ತಿರುವಾಗ, ಅವರು ಪ್ರಥಮ ತರಗತಿಯಲ್ಲಿ ಪ್ರಯಾಣ ಮಾಡಬಹುದೇ? ದಪ್ಪವಾದ ಖಾದಿ, ದೋತಿ, ಅದರ ಮೇಲೆ ವೈಸ್ಕೋಟು ಇವುಗಳು ರಾಷ್ಟ್ರಪತಿಯವರ ಉಡಿಗೆತೊಡಿಗೆಗಳು ಅವುಗಳಲ್ಲಿ ಅವರಿಗೆ ಸಮಾಧಾನವಿದೆ ಮಂತ್ರಿವರ್ಯರಿಗೆ ಪಾಶ್ಚಾತ್ಯ ಕ್ರಮಗಳು ಬೇಕೆ? ಕಳೆದ ೧೭ ವರ್ಷಗಳಿಂದ ಕಾಂಗ್ರೆಸ್ ವಾಲರಿಗೆ ಅತ್ಯಂತ ಸರಳತೆಯ ಕುರಿತು ಮಹಾಸಿಸ್ತಿನಿಂದ ಕೂಡಿದ ತರಬೇತಾಗಿದೆ ಮಂತ್ರಿವರ್ಯರು ತಮ್ಮ ಪ್ರಾಂತ್ಯಗಳ ಆಡಳಿತದಲ್ಲಿ ಸರಳತೆಯನ್ನು ಅಚರಿಸವರಾಗಿ ಸಮಸ್ತ ಜನತೆಯ ಆಶಯವಾಗಿರುತ್ತದೆ ಸರಳತೆಯ ಕುರಿತ ಅವರು ಅವಮಾನ ಹೊಂದಲಾರರು ಬದಲಾಗಿ ಅದೊಂದು ಮಹಾ ಗೌರವವೆಂದೆಸಿಸುವರು ನಮ್ಮದು ಈ ಜಗತ್ತಿನ ಅತ್ಯಂತ ಬಡವಾದ ಜನಾಂಗವು— ಮಿಲಿಯಾದಿ ಜನರು ಅರ್ಧ ಬರಗೇಡನ್ನು ಅನುಭವಿಸುತಿದ್ದಾರೆ ಈ ಸ್ಥಿತಿಗೆ ತಕ್ಕುದಾದ ರೀತಿಗೆ ವಿರೋಧವೆನಿಸುವ ತರದಲ್ಲಿ ವರ್ತಿಸಲು ಅದರ ಪ್ರತಿನಿಧಿಗಳಿಗೆ ಎಂದಿಗೂ ಧೈರ್ಯಬಾರದು ಆಂಗ್ಲೇಯರ ವಿಜಯವಂತ ಒಡೆಯರಾಗಿ ಸೋಲಿಸಲ್ಪಟ್ಟ ನಿರ್ಗತಿಕ ಜನತೆಗೆ ಒಪ್ಪದ ಜೀವಕ್ರಮವನ್ನು ರೂಢಿಗೆ ತಂದರು ಮಂತ್ರಿವರ್ಯರು ಗವರ್ನರರ ಮತ್ತು ಸಿವಿಲ್ ನೌಕರರ ನಕ್ಲ ಮಾಡದಿದ್ದರೆ ಆಗ ಕಾಂಗ್ರೆಸ್ ಮನೋಭಾವಕ್ಕೂ ಅವರ ಮನೋಭಾವಕ್ಕೂ ಇರುವ ಅಂತರವನ್ನು ವ್ಯಕ್ತಪಡಿಸಿದಂತಾಗುವುದು ನಮಗೂ ಅವರಿಗೂ ಯಾವತ್ತೂ ತರದ ಪಾಲುಗಾರತನವಿರುವುದು ಅಸಾಧ್ಯ-ರಕ್ಕಸನಿಗೂ-ಕುಳ್ಳನಿಗೂ ಸರಿಯಾದ ಜೋಡಿಯೆ? ಸರಳತೆಯ ಕುರಿತು ಅಸಮಾಧಾನ ಹೊಂದುವವರಿಗೆ— ಅಬ್ಬುಬಕ್ಕರ್ ಮತ್ತು ಓಮಾರನ, ರಾಮ ಮತ್ತು ಕೃಷ್ಣ, ಪ್ರತಾಪ ಮತ್ತು ಶಿವಾಜಿ, ಇವರುಗಳ ದೃಷ್ಟಾಂತವನ್ನು ಸೂಚಿಸುವೆನು

ಮಹಾ ಅಧಿಕಾರವಿದ್ದರೂ ಅವರು ಅತ್ಯಂತ ಸರಳಜೀವಿಗಳಾಗಿದ್ದರು ಆಡಂಬರದ ಮೇಲೆ ಅವರಿಗೆ ಅಭಿರುಚಿಯಿರಲಿಲ್ಲ ತನ್ನ ಅನುಯಾಯಿಗಳು ಸರಳ ಜೀವನ ಕ್ರಮವನ್ನು ಆಚರಿಸಬೇಕಾಗಿ ಪರಮಭಕ್ತೋಕ್ತಿಗಳಾದ ಅಬ್ಬುಬಕ್ಕರ್, ಓಮಾರ್‌ರವರ ಕಟ್ಟಪಣೆಗಳಿದ್ದವು ಜಗತ್ತಿನ ಸಿರಿಯು ಅವರ ಕಾಲಡಿಯಲ್ಲಿತ್ತು ಆದರೆ ಅವರವರಷ್ಟು ಸರಳಜೀವನವನ್ನು ನಡೆಯಿಸಿದವರು ಆ ಕಾಲದಲ್ಲಿ ಬೇರೆ ಯಾರೂ ಇರಲಿಲ್ಲವೆನ್ನಬಹುದು ೧೯೨೦ರಿಂದ ಕಾಂಗ್ರೆಸ್ಸು ಪಾಶ್ಚಾತ್ಯ ಕ್ರಮಗಳನ್ನು ತೊರೆದು ಸರಳತೆ ಹೊಂದಿರುತ್ತಿದೆ ಕಾಂಗ್ರೆಸ್ ಮಂತ್ರಿವರ್ಯರು ತಾವು ಅಂದು ಹೊಂದಿದ ಈ ಸರಳತೆಯನ್ನು ಇನ್ನೂ ಆಚರಿಸುವುದಾದರೆ ಆಗ ಸಾವಿರಗಟ್ಲೆ ರೂಪಾಯಿಗಳ ಉಳಿತಾಯವಾಗುವುದು ಅದರಿಂದ ಬಡವರಲ್ಲಿ ಆಶಯಗಳನ್ನುಂಟು ಮಾಡಿ ಸೇವೆಯ ರೂಪವನ್ನು ಬದಲಾಯಿಸಬಹುದು

ಸರಳತೆ ಎಂದರೆ ಅಸಂಯಕರ ವರ್ತನೆಯಲ್ಲ ಸರಳತೆಯಲ್ಲಿ ಕಲೆಯಿದೆ, ಶಾಂತಿಯಿದೆ ಈ ಶಾಂತಿಯನ್ನು ಸರಳತೆಯನ್ನು ಹೊಂದಿದವನೆ ಅನುಭವಿಸಬಹುದು ನಿರ್ಮಲವಾಗಿರಲು, ಚೊಕ್ಕಟವಾಗಿರಲು, ಗೌರವಮಾನದಿಂದ ವರ್ತಿಸಲು ಹಣ ವ್ಯಯಿಸಬೇಕಾಗಿಲ್ಲ ವಿಜೃಂಭಣೆ ಮತ್ತು ವೈಭವಗಳಲ್ಲಿ ದುರುಳತನವಿದೆ ಈ ತರದ ಸರಳತೆಯಿಂದ ಆಕ್ಟಿನ ನಿಸ್ಸಾರವನ್ನು ಅದರ ಅಯೋಗ್ಯತೆಗಳನ್ನೂ ಮತ್ತು ಅದನ್ನು ಬೇಗನೆ ನಾಶಪಡಿಸುವ ಧ್ಯೇಯವನ್ನು ಪ್ರಸಿದ್ಧಪಡಿಸಬಹುದು

ಹಿಂದೂದೇಶದಲ್ಲಿ ಐಕ್ಯವಿರಬೇಕು

ಹಿಂದೂದೇಶವು, ಹಿಂದೂ—ಮುಸ್ಲಿಮ ಎಂಬುದಾಗಿ ವಿಭಾಗಿಸಲು, ಆಂಗ್ಲೇಯ ಪತ್ರಿಕೆ ಪರಿಶ್ರಮಿಸುತ್ತಿವೆ ಕಾಂಗ್ರೆಸು ಅಧಿಕ ಸ್ಥಾನಗಳನ್ನು ಹೊಂದಿದ ಪ್ರಾಂತ್ಯಗಳಿಗೆ ಹಿಂದೂ ಪ್ರಾಂತ್ಯಗಳೆಂದೂ ಮಿಕ್ಕವು ಮುಸ್ಲಿಮ ಪ್ರಾಂತ್ಯಗಳೆಂದೂ ಅಭಿಪ್ರಾಯವನ್ನು ಹೊರಡಿಸಿರುವರು ಇದೊಂದು ಮಹಾ ಸುಳ್ಳೆಂಬುದು ಅವರಲ್ಲಿ ಹೊಳೆಯಲಿಲ್ಲ ನನ್ನ ಆಶಯವಾವುದೆಂದರೆ— ಕಾಂಗ್ರೆಸ್ ಮಂತ್ರಿವರ್ಯರು ಆರು ಪ್ರಾಂತ್ಯಗಳಲ್ಲಿ ಈ ತರದ ಸಂಶಯ ನಿವಾರಣೆಯಾಗುವರೆ ವರ್ತಿಸುವರಾಗಿ ತಮ್ಮಲ್ಲಿ, ಹಿಂದೂ, ಮುಸ್ಲಿಮ, ಕ್ರೈಸ್ತ, ಸಿಕ್ಖ, ಪಾರ್ಸಿ ಎಂಬ ಬೇಧವಿರುವುದಿಲ್ಲವೆಂಬುದಾಗಿ ಅವರು ತಮ್ಮ ಮುಸ್ಲಿಮ ಸಹೋದರರಲ್ಲಿ ವ್ಯಕ್ತಪಡಿಸಬೇಕು ಅಲ್ಲದೆ ಸವರ್ಣ ಹಿಂದೂ ಅಸವರ್ಣ ಹಿಂದೂ ಎಂಬ ಬೇಧಭಾವವು ಅವರಲ್ಲಿ ಇರಲೇಬಾರದು

[illegible] ಯರು ಎಲ್ಲರೂ ಒಂದೇ ಒಂದೇ ಮಾತೆಯ ಮಕ್ಕಳು ಎಂಬುದನ್ನು ಪ್ರಸಿದ್ಧಪಡಿಸಬೇಕು.— ಕೃಷ್ಣ ಮತ್ತು ಕೀಳು ತರಗತಿಗಳಿಲ್ಲವೆಂಬುದನ್ನು. ಬಡಕ್ಕಿಗೆ ಮತ್ತು ಹವೆಯು ಭೇದವಿಲ್ಲದೆ ಸರ್ವಸಾಮಾನ್ಯವೆನಿಸುತ್ತದೆ. ಎಲ್ಲರ ಸಮಸ್ಯೆಗಳು ಒಂದೆ, ನಮ್ಮ ತಿಳುವಳಿಕೆ ಪ್ರಕಾರ, ಆಂಗ್ಲೇಯ ಕ್ರಮದ ಧ್ಯೇಯವು ನಮ್ಮ ಧ್ಯೇಯದೊಡನೆ ಸರಿಹೋಲಲಾರದು ಈ ಎರಡು ವಿವಿಧ ಧ್ಯೇಯಗಳುಳ್ಳವರು ಒಂದೇ ಮಾನವ ವರ್ಗದವರು,— ಇಷ್ಟರ ತನಕ ರೂಢಿಯಲ್ಲಿಂದ ವಿಧದಲ್ಲಿ ಅವರೀಗ ಕಲೆಯುವರು. ಈ ಆಕ್ಟಿನ ಕುರಿತು ನನ್ನ ಅಭಿಪ್ರಾಯವು ಸರಿಯಾದರೆ ವಿವಿಧ ಚರಿತ್ರೆ, ವಾತಾವರಣ, ಮತ್ತು ಧ್ಯೇಯಗಳುಳ್ಳ ಎರಡು ಪಕ್ಷಗಳು ಒಟ್ಟುಗೂಡಿ ಒಬ್ಬರನ್ನೊಬ್ಬರು ತಮ್ಮ ತಮ್ಮ ಪಕ್ಷಕ್ಕೆ ಮತಾಂತರಗೊಳಿಸಲು ಪ್ರಯತ್ನಪಡುವರು ಸಂಸ್ಥೆಗಳು ನಿರ್ಜೀವ ವಸ್ತುಗಳು,— ಆದರೆ ಅವನ್ನು ನಡೆಯಿಸುವ ಯಾ ಉಪಯೋಗಿಸುವವರು ನಿರ್ಜೀವರಲ್ಲ ಆಂಗ್ಲೇಯರು, ಆಂಗ್ಲೇಯ ಭಾವವನ್ನು ಹೊಂದಿದ ಭಾರತೀಯರು, ಭಾರತೀಯವನ್ನು ಸರಿಯಾಗಿ ಕಂಡರೆ,—ಅದು ಸರಿ ಎಂದು ಒಪ್ಪಿದರೆ—ಆಗ ಸಮರದಲ್ಲಿ ಕೊಂಗ್ರೆಸ್ಸಿಗೆ ವಿಜಯವಾದಂತಾಗುವುದು ಒಂದು ಬೊಟ್ಟು ಕೂಡ ರಕ್ತಸ್ರವಣವಿಲ್ಲದೆ—ಸಂಪೂರ್ಣ ಸ್ವಾತಂತ್ರ್ಯವು ನಮಗೆ ಬರುವುದು

ಅಹಿಂಸಾನೀತಿ.

ಇದನ್ನು ಅಹಿಂಸಾ ನೀತಿ ಎಂದು ನಾನೆನ್ನುತ್ತೇನೆ ಅದು ಕಾರ್ಯಕಾರಿವಲ್ಲದಿರಬಹುದು ಬರೆ ಬುದ್ಧಿ ಭ್ರಮೆಯಾಗಿರಬಹುದು ಆದರೆ ಅದು ಕಾಂಗ್ರೆಸ್‌ವಾಲರು ಇತರ ಹಿಂದೀಯರು ಆಂಗ್ಲೇಯರು ತಿಳಿಯತಕ್ಕ ಅತ್ಯಂತ ಉತ್ತಮ ವಿಷಯವು ಈಗಿನ ಅಧಿಕಾರ ಸ್ವೀಕಾರದ ಉದ್ದೇಶವು ಸವರಾಜ ಶಾಸನವನ್ನು ನಡೆಯಿಸುವುದಲ್ಲ ಕೊಂಗ್ರೆಸ್ಸಿನ ಧ್ಯೇಯವಾಗಿರುವ ಸಂಪೂರ್ಣ ಸ್ವಾತಂತ್ರ್ಯ ಸಾಧನೆಯಲ್ಲಿ ರಕ್ತಮಯ ಕ್ರಾಂತಿಯಾಗದಂತೆಯೂ, ಇಷ್ಟರ ತನಕ ನಡೆಯದ ತರದಲ್ಲಿ ಭೂರಿಜನ ಅಸಹಕಾರ ಚಳವಳಿವನ್ನು ಹೂಡುವುದನ್ನು ತಪ್ಪಿಸುವುದಕ್ಕೂ, [illegible] ಲಾದ ಉಪಾಯವಾಗಿರುತ್ತದೆ

ಇವರು ದೇವರ ಕೃಪೆಗೆ ಪಾತ್ರರಾಗಲಿ

ಕಾಂಗ್ರೆಸಿನ ಪ್ರಾಥಮಿಕ ಸದಸ್ಯರಾಗಿರಿ.

ಕಾಂಗ್ರೆಸ್ ಸದಸ್ಯರಾಗುವ ಅವಧಿಯು ಸಮೀಪಿಸುತ್ತ ಬಂತು ಕಾಂಗ್ರೆಸ್ ಸದಸ್ಯರಾಗುವುದು ಪ್ರತಿಯೊಬ್ಬ ಭಾರತೀಯರ ಕರ್ತವ್ಯವೆಂಬುದನ್ನು ಮರೆಯದೆ ಹಿಂದು ಮುಸ್ಲಿಮ ಕ್ರೈಸ್ತರೆನ್ನದೆ ಎಲ್ಲರೂ ರಾಷ್ಟ್ರದ ಏಕಮಾತ್ರ ಪಕ್ಷದ ಸದಸ್ಯರಾಗಿರಿ! ನಿಮ್ಮ ಹತ್ತಿರ ಯಾರೂ ಬರದಿದ್ದಲ್ಲಿ ಕಾಂಗ್ರೆಸ್ ಕಛೇರಿಗೆ ಹೋಗಿ ಸದಸ್ಯರಾಗಿರಿ!

THEY WORK WHILE YOU REST.

Industrious Rupees are busy turning out more Rupees to savers in our bank But they do not jump in and go to work of their own free will. You have to start them and encourage them The best way is to give them friends Rupees are very sociable, and if they are lonely they do little. But if you keep adding more Rupees in to your account they do their best. And the more they work the more you can rest.

RESOURCES OF A CRORE.

ESTD: 1906

CANARA BANK, LIMITED.

TEST YOUR EYES

By the Electro Ophthalmoscope



All Varieties of Frames & Lenses.
AT
The Mangalore Trading Association Ltd.
Sight Testing Ophthalmic Opticians,
Car Street, MANGALORE

'Dil Roz' (Regd.)

'Dil Roz' is a sure cure for Oriental sores local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited

Price Rs. 2.
Postage extra.

TAHIR DIN,
Anarkali, LAHORE



ಗುಣಖ್ಯಾತಿ ಔಷಧ.

ಸ್ತ್ರೀಯರ ಎಲ್ಲಾ ತರದ ಮುಟ್ಟು ದೋಷಗಳಿಗೆ. ಸ್ತ್ರೀಯರಿಗೆ ದೇಹವನ್ನು ಪುಷ್ಟೀಕರಿಸುವ ಟಾನಿಕ್.

ಲೋಧ್ರ

ಎಲ್ಲಾ ದವಾಖಾನೆಗಳಲ್ಲಿಯೂ ದೊರೆಯುತ್ತದೆ

ಕೇಸರಿ ಕುಟೀರಂ
ಮದ್ರಾಸು

ಮಂಗಳೂರು ಪ್ರವರ್ತಕರು ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣ ಬೇಧಿಗಳು, ಕೈಕಾಲುಗಳು ಸಣ್ಣವಾಗಿ ಕ್ಷೀಣ, ಇವುಗಳಿಂದ ನರಳಿ, ಬಳಲಿ ಎಷ್ಟೋ ಮಂದ್ಯಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ಸೊರಗಿ ಹೋಗುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ'ವೊಂದೇ. ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ

ಎಳೆಯ ಮಕ್ಕಳನ್ನು ರಕ್ಷಿಸಬೇಕೆಂದರೆ–

ಬಾಲಭಾಸ್ಕರ

ಆಯುರ್ವೇದಾಶ್ರಮಂ,
೧೫೯, ಗೋವಿಂದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸ.

ದ. ಕ ಜಿಲ್ಲಾ ಏಜಂಟರು.
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲಿಕಟ್ಟ ಬಜಾರ್, ಮಂಗಳೂರು.

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡು ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಿಯೇಕ ರಸ್ತೆ, ಪೂಮಾರ್ಕೆಟು
ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ತೃಪ್ತಿಪಡೆಯಿರಿ.

CITY BISCUIT WORKS,
Flower Market, South, Mangalore.

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ. 1-4-0 (ವಿ ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸದನ, ಪೆರ್ದೇಪಿ,
P. O. Peridepi (ಸೆಲ್ಲೂರು ಪಿ.)

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎದೆಬಡಿತ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡಾಟಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲಿ ಪಲಾಯನವಾಗುತ್ತವೆ.ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ.

C. L. Namawala,
Palace Road, BARODA.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯದೂ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ, ಧಾತು ಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3–0–0 (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಬುಡ್ಡಿಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer **Dr D. N JASANI,** Vithalbhai Patel Road, BOMBAY 4

THE

AGRICULTURAL & INDUSTRIAL BANK,

LIMITED.

(Incorporated in British India)

Head Office: **"LAXMI NIVAS" Buildings, COONDAPOOR.**

Branches
Coondapoor,
Koteshwar
Byndoor
Kumta,
Gokarn,
Somwarpet &
Virarajendrapet.

Beg to announce the Opening of their Branches at Shimoga & Tarikere (Mysore State) in the next month

Please watch the opening dates.

'Laxmi Nivas' Buildings
Coondapoor, 10 7 1937

K. Vaman Shenai
G. Balakrishna S Nayak, } *Managing Directors*

ಜಪಾನೀಯ ತೋಳವು ಬೇಟೆಗೆ ಹೊರಡಿರುತ್ತದೆ.

ಪೌರ್ವಾತ್ಯದ ತೋಳವು ಮತ್ತೊಮ್ಮೆ ಬೇಟೆಗೆ ಹೊರಡಿರುವುದು — ಅದರ ಉದ್ದೇಶ ವೇನಿರಬಹುದೆಂದು ಯಾರಿಗೂ ತಿಳಿದಿಲ್ಲ ಅನುಕೂಲವಾದರೆ, ಚೀನಾದಲ್ಲಿ ಇನ್ನೊಂದು ಮಂಚಕೂವನ್ನು ಸ್ಥಾಪಿಸುವ ಆಲೋಚನೆಯು ಜಪಾನಿಗಿದೆ

ಆದರೆ ಈ ಬಾರಿ ತೋಳವು ಜೀವ ಸಹಿತ ಪಾರಾಗುವದೆ?

ಚೀನಿಯ ಸೈನಿಕರು, ಜಪಾನೀಯ ಸೈನಿಕರು ಸೈನ್ಯವ್ಯೂಹ ಅಭ್ಯಾಸ ಮಾಡುತ್ತಿರುವಾಗ ಆತಂಕಪಡಿಸಿದರೆಂಬುದೆ ಒಂದು ನೆವ ಚೀನಿಯರ ನೆಲದ ಮೇಲೆ ಜಪಾನೀಯರಿಗೆ ಯಾವ ತರದ ಅಧಿಕಾರ? ಸೈನ್ಯವ್ಯೂಹ ಅಭ್ಯಾಸಕ್ಕೆ ಚೀನಿಯರ ಅಪ್ಪಣೆಯಿತ್ತೊ?

ತಾನೆ ಮಾಡಿದ್ದು ಸರಿ ಎಂಬುದಾಗಿ ಜಗತ್ತು ನಂಬಬೇಕಾಗಿ ಜಪಾನು ಭಾವಿಸುತ್ತದೆ – ಯಾರು ಅವರನ್ನು ಪ್ರಶ್ನಿಸಬಾರದಂತೆ

ಯುದ್ಧವು ನಡೆಯುವುದು ಖಂಡಿತವಾದರೆ,—ಜಪಾನೀಯರಿಗೆ ಜಯ ಲಭಿಸುವ ಸಂಭವಗಳು ಹೆಚ್ಚು ಆದರೆ ಚೀನಿಯರು ಮುಂಚಿನ ಹಾಗೆ ಚಿಲ್ಲರೆಯಲ್ಲಿ ಬಿಟ್ಟುಕೊಡುವ ಹಾಗಿಲ್ಲ ಈ ಭಾರಿಯ ಚೀನಿಯರ ಪ್ರತಿಯತ್ನದಿಂದ ಜಪಾನೀಯರ ಬಲವು ಬಹಳವಾಗಿ ಕುಂದಬಹುದು ಜಪಾನೀಯರು ಬಳಲಿ ಬೆಂಡಾಗಬಹುದು ಆಗ ಇನ್ನೊಂದು ಮಹಾ ಪ್ರಭುತ್ವದ ಜನಾಂಗವನ್ನು ಎದರಾಯಿಸಲು ಜಪಾನಿಗೆ ಸ್ವಲ್ಪ ಕಷ್ಟಸಾಧ್ಯವೆನಿಸುವುದು

ಚೀನಿಯ ಯುದ್ಧದಿಂದ ಜಪಾನೀಯ ಭಂಡಾರವು ಬರಿದಾಗಿ, ಅವರಿಗೆ ಆರ್ಥಿಕ ಸಂಕಟವು ಉಂಟಾಗಬಹುದು

ಚೀನಿಯ ನಾಯಕರಾದ ಚಿಯಾಂಗ್ ಕೈ ಶೇಕರಿಗೆ ಇತರ ಕಡೆಗಳಿಂದ ಬ್ರಿಟನು, ಫ್ರಾನ್ಸು ರಷ್ಯ ಅಮೇರಿಕಾ ಇವೇ ಮೊದಲಾದ ಜಪಾನಿನ ಅಭಿವೃದ್ಧಿಯನ್ನು ಸಹಿಸದ ಪ್ರಭುತ್ವದ ಜನಾಂಗಗಳಿಂದ ಸಹಾಯ ದೊರಕಬಹುದು

ಈ ಯುದ್ಧವು ಸ್ಪೇಯಿನಿನ ಪ್ರಕರಣದಂತಾಗುವುದೆ-ಫೆಸಿಸ್ಟರೊ, ಕೊಮ್ಯುನಿಸ್ಟರೊ, ಎಂಬುದು ಇಲ್ಲಿ ಇತ್ಯರ್ಥವಾಗಬೇಕಾಗುವುದೊ?

S T

ಮುಂಬಾಯಿ — ಗೋವಾ — ಕಾರವಾರು

ಇತ್ಯಾದಿ ಕಡೆಗಳಿಗೆ

ಅತ್ಯಲ್ಪ ಖರ್ಚಿನಿಂದ- ಅತಿ ಸುಖಕರವಾದ ಪ್ರಯಾಣ.

ನಮ್ಮ ಬಸ್ಸುಗಳ ಮೂಲಕ

ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗಾ ಹರಿಹರಕ್ಕಾಗಿ, ಹುಬ್ಬಳ್ಳಿ ಬೆಳಗಾಂ ಮುಂಬ್ಯಾ ಪ್ರಾಂತ್ಯಕ್ಕೂ

ಕಾರವಾರ ಮಾರ್ಗವಾಗಿ ಮುಂಬ್ಯಾ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳೆಸಲನುಕೂಲ

ಊರುಗಳ ಬದಲಾವಣೆ–ನೋಟಗಳ ಬದಲಾವಣೆ–ಜನತೆಯ ಸಂಪರ್ಕ–ಆಹಾರದ ಅನುಕೂಲ
ವಿಶ್ರಾಂತಿ ಗೃಹಗಳ ಏರ್ಪಾಡು–ನೌಕರರ ಸಭ್ಯತೆ

ಇವೆಲ್ಲವೂ ಬಸ್ಸುಪ್ರಯಾಣದಲ್ಲಿದೆ.

ನೀವು ಕಂಡ ಕುಂದುಕೊರತೆಗಳ ಬಗ್ಗೆ ನಮ್ಮ ಸಂಸೆಯ ಜೊಯಿಂಟ್ ಮೆನೆಜರರಿಗೆ ಬರೆದು ತಿಳಿಸಿರಿ—

ಜೊಯಿಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಷಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು

The Coronation of their Majesties is now over! But Remember!

Comfortable Ideal Central

The Coronation Darbar Restaurant

Boarding & Lodging

Opposite Govt. College, Hampankatta, Mangalore

A Home in the Motherland

Cleanliness and comfort at moderate cost.

A delightful hotel in the centre of the town and nearest to the Rly Station & Bus Station

Gives best Refreshment & dinner service and modern preparations such as Biryani, Fowl Biryani, Pulav Khushka, Chops, Cutlets, Roast, Bheja, Khima, Tomato mutton, Roasted Fowl, Omlet, Sumbusa, etc, a speciality

Special lodging arrangements for travellers, Students will find all their food requirements

Please Step in Once and Convince Yourself

S B Mohidin, S. M Sayed Ali Saheb (Bhatkal) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಸೌಲಭ್ಯ ಸೌಕರ್ಯ ಸುಖದಾಯಕ

ಶುಚೀಕರವಾದ ಮತ್ತು ರುಚಿಯಾದ ತಿಂಡೀ ಪದಾರ್ಥಗಳ ಸುಲಭ ದರದಲ್ಲಿ ಇನ್ನೆಲ್ಲಿಯೂ ದೊರಕಲಾರದು

ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಆಫೀಸ ಗಳಿಗೆ ಹತ್ತಿರ ಸಮೀಪವು ಮನೋಲ್ಲಾಸಕರ ಕಾಫಿ ತಿಂಡಿ, ಊಟ ಉಪಚಾರಗಳ

ಮುರ್ಗಿ ಬಿರಿಯಾನಿ, ಬಿರಿಯಾನಿ ಮುರ್ಗಿ ರೋಸ್ಟ್, ಪುಲಾವ್, ಖುಷ್ಕಾ ಚಾಪ್, ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮಟೊವ ಟನ್, ಆಮ್ಲೆಟ್ ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವುವು

ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರವಾಸಿಕರಿಗೆ ಇರಲಿಕ್ಕೆ ತೃಪ್ತಿಕರವಾದ ವಿಶ್ರಾಂತಿ ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿರುವುದಾದರೆ ಒಂದೊಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ

ಯಸ್. ಬಿ. ಮೊಹಿದಿನ್,
ಯಸ್. ಎಮ್. ಸಯ್ಯದ್ ಆಲಿ ಸಾಹೇಬ್, (ಭಟ್ಕಳ) } ವ್ಯವಸ್ಥಾಪಕರು

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಶುಕ್ತಿಗೆ ಭುಜ, ಹಲ್ಲುವೇದನೆಗಳಿಗೂ ಎದೆನೋವು ಗಾಯಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ ಪಕ್ಷವಾತ ನ್ಯೂಮೋನಿಯಾ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲಿ ದೊರೆಯುವುದು

The Canara Banking Corporation, Udipi, Ltd.

ESTD. 1906.

(INCORPORATED IN BRITISH INDIA.)

Member:- **RESERVE BANK OF INDIA.**

Subscribed Capital	**Rs. 3,50,000**
Paid up Capital	**Rs. 2,88,950**
Deposits	**Rs. 37,22,794 9 5**
Reserves	**Rs. 3,63,573 5 5**

ANNOUNCEMENT.

BRANCHES of the Corporation will be shortly opened at METTUPALAYAM and ERODE.

Total Resources exceed Rs 52,00,000/-

28—7—1937

V. R. Kamath, B. A., LL. B.
Manager.

Best Cheap Durable

Use only 515 Red 365 & 232 White bar soap & be satisfied,

They are the best and foremost in the Market.

They are the unique products of our Province.

Many have tried & found satisfied Buy now and you will also be convinced

Manufactured by –

The West Coast Soap-Factory

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು ಅವುಗಳನ್ನು ಉಪಯೋಗಿಸುವುದೆಂದರ ನಮಗೆಲ್ಲರಿಗೂ ಒಂದು ಗೌರವ ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son

Bunder, MANGALORE

ಗರ್ಭನಿರೋಧಕ ಚೂರ್ಣ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರ್‍ಹೆರಿಯುವುದರಿಂದ ಹೆಂಗಸರ ಆಶಯು ಅಶಕ್ತಿಯದಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು, ಇದರ ಸೇವನೆಯಿಂದ ಮುಟ್ಟುಗುಳಿಕೆಯು ನೇಮದಂತೆ ಸಾಗುತಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಬೇಕಾದರೆ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು – ಡಾ॥ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೇವಾಡಕೇರು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪—೦—೦, ವಿ ಪಿ. ಖರ್ಚ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ, ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ 7—0—0.

ಕಸ್ತೂರಿ ಮಿಶ್ರಿತ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ. ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೋರ್ಸು ಹೌಸ್ ಶ್ರೀರಾಮ ಪೇಟೆ ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ ಗಿರಿಗಾಂ ಮುಂಬಾಯಿ 4 ಕೆ ಶೀನಪ್ಪ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents –

The Kerala Tea Syndicate,

PONANI—(S. Malabar)

THE PIE-MONEY BANK LTD.

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs 100—0—0 run regularly on systematic lines Unique Banking facilities to Businessmen and interested Public

Apply for particulars— **K R. GURU,** *Managing Director*

೧ ರೂಪಾಯಿಗೆ ೫೦೦೦ ರೂಪಾಯಿಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರೀಮಿಯಂ ಕಟ್ಟಬೇಕಾಗಿಲ್ಲ, ಮತ್ತ ಪ್ರೀಮಿಯಂ ಕೇಳುವುದಿಲ್ಲ

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

Write for full particulars to:

M. S. V. Kamath,

BOLUR, MANGALORE.

Dist Agent for SOUTH CANARA.

Dist. Agent for North Kanara

Mr **I A. Shaik,**

Khaji Mohalla, ANKOLA

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆತ್ ರೋಡ್, ಲಾಹೋರು.

ವಾರ್ಷಿಕ ಚಂದಾ ೩ ರೂಪಾಯಿ Regd. No. M. 3406. ಪೋಸ್ಟಲು ಹಾಸಲು ಸೇರಿ ರೂ 2-13-0.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳ್ ಸಾ । ಗರವ ಮಥಿಸಲ್ ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷದ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೨ ॥

ಪುಸ್ತಕ ೩೧. ಮಂಗಳೂರು ತಾ. ೩೦ನೇ ಜುಲೈ ೧೯೩೭ (30 7-'37) ಸಂಚಿಕೆ ೩೦

"An ideal young progressive Life Office of India to Insure with or represent"

THE

Commonwealth Assurance Company Ltd.,

POONA.

Triennial Bonus! *Triennial Bonus!*

On Endowment Rs. 37½/- On Whole Life Rs. 45/-

NEXT VALUATION 1937-38.

Special features —

(1) Low Premium Rates. (2) Permanent Disability!
(3) Double Indemnity! (4) Extended Assurance Benifit
(5) House purchase scheme for Policy holders.

Liberal first year and hereditary renewal commissions for its representatives.

Messrs GAWANKAR & SONS,

Chief Agents for Mysore State, Coorg, Ceded Districts, & S Kanara,
Ahmed Buildings, Chickpet, BANGALORE CITY.

Messrs. FAROOQUI BROTHERS, *Special Agents*, Fort House, Karkal, (South Kanara)

Local Representatives:- The Modern Trading Co., Opp. City Press, Mangalore.

Branches:

Bombay, Calcutta, Delhi, Madras & Nagpur.

Note......—ನೋಟಗಳು.

ದೊಡ್ಡ ಶಹರುಗಳಲ್ಲಿರುವ ಇಂಗ್ಲಿಷ ಜನ ರು ತಮ್ಮ ಪ್ರಮೋದಕ್ಕಾಗಿ ಕ್ಲಬ್‌ಗಳನ್ನು ಸ್ಥಾಪಿಸಿರುವರು. ಕಲ್ಕತ್ತದ ಕ್ಲಬ್ಬು ಪುರಾತನ ವೆಂದು ಕೀರ್ತಿ ಹೊಂದಿದೆ; ಪುರಾತನ ಮನೋ ಧರ್ಮವುಳ್ಳ ಕುಂಪಣಿ ಸರಕಾರದ ಸಾಬರೇ ಇಲ್ಲಿ ಹೆಚ್ಚಿನವರು, ಅಥವಾ ಆ ಸಾಬರ ಮನೋ ಧರ್ಮವುಳ್ಳವರು. ಇವರು ಒಂದು ಔತಣಕ್ಕೆ ನಮ್ಮ ವೈಸ್ರಾಯರನ್ನು ಆಮಂತ್ರಿಸಿದರು. ಹಿಂದೀ ರಾಜಕೀಯ ಕಾರ್ಯದಲ್ಲಿ ಹಿಂದೀಯ ರೊಡನೆ ಸೇರಿ ನಡೆವುದಕ್ಕಾಗಿಯೇ ಹೊರಟ ನಮ್ಮ ವೈಸ್ರಾಯರಿಗೆ ಇದು ಹಿಂದೀಯರನ್ನು ಸೇರ್ಪಡಿಸದ ಕ್ಲಬ್ ಎಂದು ತಿಳಿದು ಬಂದು "ಬರೋದಿಲ್ಲ" ಎಂದು ಹೇಳಲು ಮನಸ್ಸಿಗೆ ವಿಷಾದ" ಎಂದು ಹೇಳಿ ಕಳುಹಿಸಿದರು

೦ ೦ ೦ ೦

"ಇಂಡಿಯಕ್ಕೆ ಬಂದುದು ಹಿಂದೀಯ ರನ್ನು ಕಂಡು ಅವರೊಡನೆ ಸೇರಿರುವುದಕ್ಕೆ ಹೊರತು, ಇಲ್ಲಿಯೂ ಯುರೋಪಿಯರನ್ನೇ ಸೇರಿರುವುದಕ್ಕಲ್ಲ" ಎಂಬ ಮಾತುಗಳನ್ನಾ ಡಲು ಅವರಲ್ಲಿ ಧೈರವೆಷ್ಟು ಎಂದೇ ಸಾಬರು ಈಗ ಆಲೋಚನಾಪರರಾಗಿರುವರು

೦ ೦ ೦ ೦

ಕಾಥೇವಾಡದಲ್ಲಿ ಹರಿಜನೋದ್ಧಾರ ಕ್ಕಾಗಿ ದುಡಿದ ಸಾಧು ಗೋಪಾಲ ಬಾಬನೆಂಬ ವರು ಮಡಿದರು ಅವರ ಪತ್ನಿ ತುಂಬಾ ಪತಿ ವ್ರತೆ. ಹಾಗೆಂದು ಹಳೇ ರೀತಿಯ ಸಹ ಗಮನ ಮಾಡಿಲ್ಲ ಹರಿಜನೋದ್ಧಾರಕ್ಕಾಗಿ ತಾನೂ ದುಡಿಯುವುದಾಗಿ ನಿರ್ಧರಿಸಿ, ಆಕೆ ತನ್ನ ಬಂಧುಗಳನ್ನು ಕರೆದು, ಪತಿಯು ಪೂಜಿಸು ತ್ತಿದ್ದ ದೇವರನ್ನೂ ದೇವಾಲಯವನ್ನೂ ಹರಿಜನ ರಿಗೆ ಒಪ್ಪಿಸಿದಳು! ಸಹಧರ್ಮಿಣಿ ಎಂದರೆ ಇಂತ ಹಳು.

೦ ೦ ೦ ೦

ಹಿಂದೀ ಸಾಹಿತ್ಯ ಸಮ್ಮೇಳನವು ಇಂಡೋ ರದಲ್ಲಿ ಜರುಗಿದಾಗ, ಮಹಾತ್ಮಾಜಿಯವರು ಒಂದು ಲಕ್ಷ ರೂಪಾಯಿ ಕೂಡಿಸಿರಿ ಎಂದಿದ್ದರು ಸಮ್ಮೇಳನವೂ ಒಪ್ಪಿತ್ತು ಆದರೆ ದೊರೆತುದು ೨೨೦೦೦ ಮಾತ್ರ ಜಮ್ನಾಲಾಲಜೀಯವರು ೨೫೦೦೦ ದಾನ ಮಾಡಿದರು ಈಗ ಕೌನ್ಸಿರ ದೊಬ್ಬ ಕಮಲಾಪುರಜೀ ಎಂಬವರ ಧರ್ಮ ಫಂಡಿನಿಂದ ೩೫೦೦೦ ರೂಪಾಯಿ ದೊರೆತಿದೆ ಹೀಗಾಗಿ ಲಕ್ಷಕ್ಕೆ ೮೨೦ ಹಣ ಕೂಡಿಸಿದ್ದಾ ಯಿತು—ಹಿಂದೀ ಪ್ರಚಾರ ಅಗತ್ಯ, ಕನ್ನಡಕ್ಕೆ? ಯಾವ ಲಾಲಜೀಗಳೂ ರಾವಜೀಗಳೂ ಏನು ಕೊಡುತ್ತಿದ್ದಾರೆಯೆ?

೦ ೦ ೦ ೦

ಪವಿತ್ರ ಪ್ರಾಣಿಯೆಂದು ಪೂಜೆ ಮಾಡು ತ್ತಿದ್ದ ಗೋವುಗಳಿಗೆ ಹಾಲು ಕೊಡುತ್ತಿದ್ದಾಗ ಪೂಜೆಯನ್ನೂ ಬತ್ತಿದ ಮೇಲೆ ಕತ್ತಿಯನ್ನೂ ಸಮರ್ಪಿಸುವ ಬಂಗಾಳದ ಹಿಂದುಗಳಿಗೆ ಪ್ರಜ್ಞೆ ಯಿಲ್ಲವೆ? ಸತ್ತ ದನಗಳ ಚರ್ಮ ಸುಲಿಯುವು ದಿತ್ತು ಅನಂತರ, ಮೂರು ಸತ್ತ ದನಗಳಿಗೆ ಒಂದು ಕಡಿದ ದನದಂತೆ ಚರ್ಮ ಸುಲಿದು ವ್ಯಾಪಾರ ತೊಡಗಿತು ಈಗ ಚರ್ಮವನ್ನು ಒಂದು ಸತ್ತ ದನದಿಂದ ಸುಲಿದರೆ, ಮೂರು ದನ ಗಳನ್ನು ಕೊಂದು ಚರ್ಮ ಸುಲಿಯುವರಂತೆ. ಕಡಿಯುವ ದನಗಳ ಸಂಖ್ಯೆ ಹೆಚ್ಚಾಗಿ, ಅವುಗಳ ಮಾಂಸಕ್ಕೆ ಬೆಲೆಯೇ ಇಲ್ಲ, ಕೊಳೆಯುತ್ತದೆ!

೦ ೦ ೦ ೦

ಮೇಯೋಮಾಯಾವಿನಿಯ ತರುವಾಯ ದಲ್ಲೀಗ, ಅಸತ್ಯಪ್ರಕಾಶನಕ್ಕೆ ಮಾರ್ಗರೀತಾ ಬಾರ್ನ್ಸ್ ಅಮ್ಮನವರು ಹೊರಟಿದ್ದಾರೆ. ಮಹಾ ತ್ಮಾಜೀಯವರ ಪ್ರತ್ಯಕ್ಷ ಪರಿಚಯವುಳ್ಳವ ರೆಂದು ಹೇಳುವ ಈ ಅಮ್ಮನವರು,—"ಹಿಂದೀ ಯರ ಮನಶ್ಶಾಸ್ತ್ರ ತಿಳಿಯದು. ಒಬ್ಬೊಬ್ಬ ರಾಗಿ ಅವರಲ್ಲಿ ಪ್ರತಿಭಾಶಾಲಿಗಳಾಗಲೀರ ಬಹುದು, ಕೂಡಿ ನಡೆಯಲು ಇವರಿಂದಾಗದು. ಜವಾಬ್ದಾರಿಯೆಂದರೆ ಇವರಿಗೆ ಬಹಳ ಕಷ್ಟ. ಹಿಂದೂ ಧರ್ಮವೇ ಅತ್ಯ ಸಂಬಂಧವುಳ್ಳ ಕಾರಣ, ಪ್ರತಿಯೊಬ್ಬರು ಸ್ವಾರ್ಥಪರರು. ಕಾಂಗ್ರೆಸ್ ಎಂದರೆ ಹಿಂದು ಮಾತ್ರ" ಎಂದು ಬರೆದಿದ್ದಾರೆ.

೦ ೦ ೦ ೦

ಗೋರಖಪುರದ ಗಿರಣಿಯಲ್ಲಿ ಮುಷ್ಕರ ವಾಯಿತು. ೨೪೬ ಮಂದಿಯ ದಸ್ತಗಿರಿ. ಇವರ ಮೊಕದ್ದಮೆಗಳಲ್ಲಿ ವಿಚಾರಣೆಗೆ ೭೦೦ ಮಂದಿ ಸಾಕ್ಷಿಗಾರರು! ಸಂಯುಕ್ತ ಪ್ರಾಂತ್ಯದಲ್ಲಾದ ಇಂತಹ ಮುಷ್ಕರವನ್ನು ಕಾಂಗ್ರೆಸ್ ಮುಖ್ಯ ಮಂತ್ರಿಯವರು ಸಮಾಧಾನಗೊಳಿಸಿದರು. ಇಲ್ಲಿ ದಸ್ತಗಿರಿ, ಮೊಕದ್ದಮೆಗಳಾಗುತ್ತವೆ. ಒಂದೊಂದು ಕಡೆ, ಒಂದೊಂದು ಬಗೆ ಗೋರಖ ಪುರದ ಪೊಲೀಸರ ರುಚಿಯೇ ಬೇರೆ.

೦ ೦ ೦ ೦

ಭೋಜನಾದಿಗಳ ಸ ತ್ಕಾರ ಕೆಗಳು ನಮ್ಮ ಕಾಂಗ್ರೆಸ್ ಮಂತ್ರಿಗಳಿಗೂ ಅಗತ್ಯವೇ? ಹಿಂದೆ, ಅಧಿಕಾರಿಗಳ ಪ್ರೀತ್ಯರ್ಥವಾಗಿ ಇವೆಲ್ಲವೂ ನಡೆಯುತ್ತಿದ್ದುದು ವಿಚಿತ್ರವೆಂದು ತೋರುತ್ತಿರ ಲಿಲ್ಲ ಈಗ ಕಾಂಗ್ರೆಸ್ ಮಂತ್ರಿಗಳು ಬಿನ್ನ ವತ್ತಳೆಗಳ ಮಾನ ಸಂಭ್ರಮವೂ ಬೇಡವೆಂದಿರು ವಾಗ, ಇಂತಹ ಔತಣಗಳಿಗೆ ಇನ್ನೂ ಪ್ರಾಶಸ್ತ್ಯ ಕೊಡಬೇಕೆ?

೦ ೦ ೦ ೦ ೦

ಜೇಡನ್‌ಪವೆಲ್ ಪ್ರಭುಗಳು ಹಿಂದುಗಳ ಗುಣಾತಿಶಯಗಳಿಗೆ ಕುಂದನ್ನುಂಟು ಮಾಡುವ ಮಾತುಗಳನ್ನು ಉಚ್ಚರಿಸಲಿ ಅಥವಾ ಇಲ್ಲ ದಿರಲಿ ಅವರ ಮಾತುಗಳ ಗುಣಾತಿಶಯ ಗಳಿಂದ ಗುಣವೇ ಆಯಿತು ಕಾಡು ಜನಗಳ ಕೂಗುಗಳನ್ನು ಕಲಿತು, ಯಾವುದೋ ಒಂದು ಬಗೆಯಲ್ಲಿ ತರಬೇತು ಹೊಂದಿ ಸ್ಕೌಟುಗಳಾಗಿ ಎಲ್ಲೆಲ್ಲಿಯೂ ಸಮಾನ ಗೌರವ ದೊರೆಯದೆ ಇದ್ದ ನಮ್ಮ ಯುವಕರಿಗೆ ಈಗ ತಮ್ಮದೇ ಆಗಿ ರುವ ಯೋಗ್ಯ ಸಂಸ್ಥೆ ದೊರೆವ ಹಾಗಾಯಿತು

೦ ೦ ೦ ೦ ೦

ಮುಂಬಾಯಿ ಮದ್ರಾಸು ನಗರಗಳ ಮ್ಯುನಿಸಿಪಾಲಿಟಿಗಳ ಯಾತಿರಲಿ ಮೊನ್ನೆ ಸೇರಿದ ಸ್ಕೌಟು ಕಾರ್ಯಭಾರಿಗಳ ಮದ್ರಾಸ್ ಸಭೆಯಲ್ಲಿ ಆದ ನಿರ್ಣಯವೂ ಇದೇ ದೇ ಶೀಯ ದಳ, ರಾಷ್ಟ್ರೀಯ ಭಾವನೆ, ಇವೇ ನೂರು ಸಲ ಅವರ ಭಾಷಣಗಳಲ್ಲಿ ಪ್ರಕಟ ವಾದ ಮಾತ ಗಳು ಸೇವಾ ಸಮಿತಿಯೆಂದು ಇದ್ದೇ ಇದೆ ಸಿದ್ಧವಾಗಿ, ಸ್ಕೌಟುಗಳು ಇದನ್ನು ಸೇರಿ, ಸ್ಕೌಟು ಪದವನ್ನೆ ಮರೆತು, ಸೇವಾಪದ ವನ್ನೆ ಜಪಿಸಲಿ

೦ ೦ ೦ ೦

ಕಳೆದ ಮಹಾ ಯುದ್ಧದ ಕಾಲದಲ್ಲಿ ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾಗಿದ್ದ ಲೋಯ್ಡ ಜೋರ್ಜರು ಈಗ ಬಟಾಟೆ ಕೃಷಿ ಮಾಡುತ್ತಿದ್ದಾರೆ ಇಪ್ಪತ್ತು ಎಕ್ರೆ ಸ್ಥಳದಲ್ಲಿ ಈ ಬೆಳೆ ಬೆಳೆಸುವರು ಈಗ ಜನರಿಗೆ ಆಹಾರ ಕಡಮೆಯಾಗಿ ಬರಲು, ಬಟಾಟೆ ಬೆಳೆಸಿರಿ ಎಂದು ಇವರೇ ಬೋಧಿಸಿದವರು ಈಗ ಇವರೇ ಪೇಲ್ಪಂಕ್ತಿ ಹಾಕಿ ಬೆಳೆಸುತ್ತಾರೆ ಐರ್ಲೆಂಡಿನಿಂದ ಇಂಗ್ಲೆಂಡಿಗೆ ಬಟಾಟೆ ಬರುವುದು ಕಡಮೆಯಾಗಿದೆ, ಮತ್ತೊಂದು ಯುದ್ಧವೂ ಸದ್ದಿಲ್ಲದೆ ಪ್ರಾರಂಭವಾಗಬಹುದು—ಎಂಬೀ ಸಂಗತಿಗಳೂ ಇವರ ಈ ಉದ್ಯಮಕ್ಕೆ ಕಾರ ಣವೆ?

೦ ೦ ೦ ೦

ಪೆಲೆಸ್ತೀನದ ಅಂಗಭಂಗ ಮಾಡಿದ್ದಾ ಯಿತು. ಯಾರಿಗಾಗಿ ಮಾಡಲಾಗಿತ್ತೋ ಅವ ರಿಗೇ ತೃಪ್ತಿಯಿಲ್ಲ. ಅರಬರು ಜಗತ್ತಿನ ಮುಸ್ಲಿ ಮರಿಗೆ ಕೂಗುತ್ತಿರುವರಂತೆ. ಪೆಲೆಸ್ತೀನದಲ್ಲಿ ಶಾಂತಿಭಂಗವಾಗದಂತೆ, ಬ್ರಿಟಿಷರ ಬಲ ಕಾಯುತ್ತಿದೆ. ಅಲ್ಲಿನ ವಾರ್ತೆಗಳು ತುಂಡಾಗಿ ಬರುತ್ತವೆ ಸುತ್ತಲಿನ ಅರಬರು ಅರಬರ ಪಕ್ಷವಂತೆ. ಯೆಹೂದಿಗಳೂ ಸ್ಥಳ ಸಾಲ ದೆನ್ನುತ್ತಾರೆ., ಹಾಕಿದ ಹಣವೆಲ್ಲ ಹೋಯಿ ತೆನ್ನುತ್ತಾರೆ ಇದೂ ಒಂದು ರಗಳೆ.

೦ ೦ ೦ ೦

ಬರ್ದವಾನಿನ ಮಹಾರಾಜಾಧಿರಾಜರು ದೇಶಕ್ಕೆ ಹಿತವಾಗುವುದು ನಿಶ್ಚಯವೆಂತಾದರೆ, ತಮ್ಮ ರಾಜ್ಯವನ್ನೆ ತ್ಯಜಿಸಲೂ ಸಿದ್ಧರೆಂದು ಅವರೇ ಭಾಷಣ ಮಾಡಿದರು ಆದರೆ, ಅದಕ್ಕೆ ಪ್ರತಿಫಲವಾಗಿ ಮೌಲ್ಯ ಸಿಗಬೇಕೆನ್ನುತ್ತಾರೆ. ಎಂದರೆ, ಅಷ್ಟು ಹಣವನ್ನು ಕೊಡಲು ಯಾರೂ ಸಿದ್ಧರಿಲ್ಲವೆಂದು ಅವರು ತಿಳಿದೇ ಇರಬಹುದು. ಸರಕಾರವು, ಅವರ ಈ ಮಾತು ನಿಜವೆಂತಾ ದರೆ, ಒಕ್ಕಲುಗಳು ಕೃಷಿ ಮಾಡುವ ಜಮೀ ನನ್ನು ಆಯಾ ಒಕ್ಕಲಿಗೇ ಮಾರಿ, ಅವರಿಂದ ಮೌಲ್ಯವನ್ನು ಕಂತುಗಳಿಂದ ಪಡೆಕೊಳ್ಳುವಂತೆ ಕಾನೂನೂ ಭದ್ರತೆಯನ್ನೂ ಏರ್ಪಡಿಸಿದರೆ,— ವೈಭವಕ್ಕೆ ಹುಟ್ಟುವಳಿ ಸಾಲದೆ ಸಾಲದಲ್ಲೇ ಜೀವನ ಮಾಡುತ್ತಲಿರುವ ಎಷ್ಟೋ ಜಮೀನು ದಾರರು ಜಮೀನನ್ನು ತ್ಯಜಿಸಲು ಸಿದ್ಧರೇ ಆಗ ಬಹುದು.

(೧೧ನೇ ಪುಟಕ್ಕೆ ಮುಂದುವರಿಸಿದೆ.)



ಓವಲ್‌ಟಿನ್

ಶಕ್ತಿ, ಚೈತನ್ಯಗಳನ್ನು

ಕೊಡುವುದು.

ನಿಮ್ಮ ಶಕ್ತಿ, ಚೈತನ್ಯಗಳನ್ನು ಕುರುಪುಗೊಳಿಸಿ ದೇಹ ದುರ್ಬಲತೆಯಿಂದಲೂ, ನರಗಳ ಅಶಕ್ತಿಯಿಂದಲೂ ಮತ್ತು ರೋಗರುಜೆಗಳಿಂದಲೂ ನಿಮ್ಮನ್ನು ಕಾದುಕೊಳ್ಳಿರಿ

ಸರಿಯಾಗಿಯೂ ಸುಖಕರವಾಗಿಯೂ ಇರಬೇಕಾದರೆ ಅದಕ್ಕೆ ಸರಿಯಾದ ಶಕ್ತ ಪುಷ್ಟಿಕರ ಆಹಾರವು ಬೇಕು ಅಂತಹ ಪುಷ್ಟಿಕರ ಆಹಾರವು ಸಾಧಾರಣ ದಿನಚರಿಯ ಆಹಾರದಲ್ಲಿ ಸಿಗ ಲಾರದು ಆದರೆ ಶ್ರೇಷ್ಠ ಆಹಾರ ಪಾನೀಯ ವಾದ ಓವಲ್ಟಿನ್' ನಲ್ಲಿ ಅಂಥ ಶ್ರೇಷ್ಠ ಆಹಾರ ಪದಾರ್ಥಗಳು ಸಮೃದ್ಧಿಯಾಗಿವೆ

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಆಹಾರ ಪದಾರ್ಥ ಗಳಾದ ಪಕ್ವ ಬಾರ್ಲಿ ಸತ್ವದಿಂದಲೂ, ದನದ ಸಿಹಿ ಕೆನೆ ಹಾಲಿ ನಿಂದಲೂ, ತಯಾರಿಸಿದುದರಿಂದ 'ಓವಲ್ಟಿನ್'ನಲ್ಲಿ ಪರಿಪೂರ್ಣ ಪುಷ್ಟಿ ಆಹಾರಾಂಗಗಳನ್ನು ದೇಹಕ್ಕೆ ಬೇಕಾದಂತೆ ಪೂರೈಸಿಕೊಡು ತ್ತದೆ ಇದು ನಿಮ್ಮ ದೇಹದ ಆರೋಗ್ಯ, ಶಕ್ತಿ, ಚೈತನ್ಯಗಳನ್ನು ಹೆಚ್ಚಿಸುತ್ತದೆ ಅಮೂಲ್ಯ ಪ್ರಕೃತೀಯ ವಿಟಮಿನ್‌ಗಳೂ ಓವ ಲ್ಟಿನ್‌ನಲ್ಲಿದೆ ದೇಹದ ಸೌಖ್ಯಕ್ಕಾಗಿ ಓವಲ್ಟಿನ್ನನ್ನು ಸದಾ ಕುಡಿ ಯಿರಿ ಬದಲೀಘುಗಳನ್ನು ತ್ಯಜಿಸಿರಿ.

'ಓವಲ್‌ಟಿನ್' ಪುಷ್ಟಿಕರ ಆಹಾರ ಪಾನೀಯ

OVALTINE

ಮೆದುಳು, ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಸಿಗುತ್ತವೆ

ಏಜಂಟರು — ಜೇಮ್ಸ್ ರ್‍ಯಾಟ್ ಲಿಮಿಟೆಡ್, ಕಲ್ಕತ್ತಾ ಕರಾಚಿ

ಮತ್ತು ಬೊಂಬೈ ಮದ್ರಾಸುಗಳಲ್ಲಿ

OV/485

ಮಹಾತ್ಮರಿಗೆ ಗೌರವವೊ ಲಜ್ಜೆಯೊ?

ಈ ಅಧಿಕಾರ ಸ್ವೀಕಾರ ಮುಂತಾದ ಶಾಸನ ಸಭೆಗಳ ಕುರಿತು ಮಹಾತ್ಮರ ಮನೋಭಾವನೇನು?

"ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕಿಕ್ಕಿದರಯ್ಯಾ"

ಜನಪ್ರಿಯನಾದ ಮಹಾತ್ಮನು ತನ್ನ ವಿಶಿಷ್ಟ ಬಟ್ಟೆಬರೆಗಳಲ್ಲಿ ಪ್ರತಿದಿನವು ಮುಂಜಾನೆಯು ಸಂಚಾರ ಮಾಡುವಾಗ ಅವನ ತಲೆಯಲ್ಲಿ ತುಂಬಿರುವ ವಿಚಾರಗಳೇನು? ಅವರ ಸಂಗಡ ಹೊರಟ ನನ್ನೊಡನೆಯಾಗಲೀ ಮತ್ತಿಬ್ಬರೊಡನೆಯಾಗಲಿ ಅವರು ಮಾತನ್ನೇ ಆಡುವುದಿಲ್ಲ ಅವರ ನಡಿಗೆಯ ವೇಗವು ಮೊದಲಿಗಿಂತ ಹೆಚ್ಚಾಗಿದೆ ಮನಸ್ಸಿನೊಳಗಿನ ವಿಚಾರಗಳ ಗತಿಗಳನ್ನನುಸರಿಸಲು ದೇಹವು ಧಾವಿಸುವಂತೆ ಕಂಡು ಬರುತ್ತದೆ

ಅವರ ವಿಚಾರಗಳೇನು?

ಜನರು ಅವರನ್ನು ಹೊಗಳುತ್ತಾರೆ ಮುತ್ಸದ್ದಿ ಎಂದು ಕರೆಯುತ್ತಾರೆ ಭಾರತದ ನಾಯಕನೆನ್ನುತ್ತಾರೆ ಕಾಂಗ್ರೆಸ್ಸು ಸರಿಯಾದುದನ್ನು ಮಾಡಿತೆಂದು ಘೋಷಿಸುತ್ತಾರೆ ಆದರೆ ಅವರ ಹೃದಯವನ್ನು ಹೊಕ್ಕು ನೋಡಿದರೆ ದೇಶಬಾಂಧವರಿಲ್ಲ ಮೋಹದಿಂದ ಇತ್ತ ಇಂಗಿತಗಳನ್ನು ಕಾಣಬಹುದಾಗಿದೆ ತಮ್ಮ ಸ್ತುತಿಯ ಪ್ರತಿಯೊಂದು ಶಬ್ದವನ್ನು ಅವರು ಎಂತಹ ಬಲಿಷ್ಠವಾದ ನಿಗ್ರಹದಿಂದ ಮತ್ತು ಆತ್ಮಶಕ್ತಿಯಿಂದ ತಡೆದು ಹರ್ಷವನ್ನು ವ್ಯಕ್ತಮಾಡುವ ಮುಗುಳುನಗೆ ನಗುತ್ತಿರುವರು? ಆದರೆ ಹೊಗಳಿಕೆಯ ಪ್ರತಿಯೊಂದು ಶಬ್ದವು ಅವರ ಹೃದಯವನ್ನು ಛೇದಿಸುತ್ತದೆ ('ಹೊಗಳಿ ಹೊಗಳಿ ಎನ್ನ ಹೊನ್ನಶೂಲಕ್ಕಿಕ್ಕಿದರಯ್ಯ' ಎಂದು ಶರಣರು ಪಶ್ಚಾತ್ತಾಪಪಟ್ಟುಕೊಂಡಂತೆ ಮಹಾತ್ಮರಿಂದು ಮರಗುತ್ತಿರುವಂತೆ ತೋರುತ್ತದೆ)

ಯಾಕೆಂದರೆ ಕಾಂಗ್ರೆಸ್ಸಿನ ಈ ನಿರ್ಣಯದಿಂದ ಮಹಾತ್ಮರಿಗೇನಾಗಬೇಕಾಗಿದೆ? ಅದು ಸತ್ಯಾಗ್ರಹ ಮಹಾ ಅಸ್ತ್ರದ ಶ್ರದ್ಧಾಂಜಲಿಯಾಗಿದೆ ಮಲಗಿದವರನ್ನು ಎಚ್ಚರಿಸಲು ಮಾಡಿದ ಮಹಾತ್ಮರ ಯತ್ನವು ನಿಷ್ಫಲವಾಯಿತು ಎಚ್ಚತ್ತವರು ಪುನಹ ಮಲಗಿದಂತಾಯಿತು ದಾಸ್ಯದಲ್ಲಿರಿಸಲ್ಪಟ್ಟು, ಕೀಳು ಮಾನವ ವಿಚಾರಗಳಾದ ಜಾತಿ ಮತ್ಸರಗಳಲ್ಲಿ ಮುಳುಗಿಸಲ್ಪಟ್ಟ ಮತ್ತು ಕೊಳೆ, ರೋಗ ಮತ್ತು ಹಸಿವೆಗಳಲ್ಲಿ ಒದ್ದಾಡುತ್ತಿರುವ ಜನತೆಯನ್ನು ಹೊಡೆದೆಬ್ಬಿಸುವ ಅವರ ಮಹಾ ಪ್ರಯೋಗದ ಅಪಜಯವನ್ನು ಸೂಚಿಸುತ್ತದೆ ಆದರೆ ಅವರ ಸುತ್ತಲೆಲ್ಲ ಸೃಷ್ಟಿದೇವತೆಯು ನಗುತ್ತ ನಲಿಯುತ್ತಿರುವಳು, ಮಳೆಯು ಬೀಳುತ್ತಿರುವುದು, ಹೂಗಳು ಅರಳುತ್ತಿರುವುವು, ಮಾನವನು ಎಚ್ಚತ್ತು ಪರಮಾತ್ಮನ ಸಂಬಂಧವನ್ನು ಗುರ್ತಿಸಲು ಆ ದೇವನು ಕರೆಯುತ್ತಿರುವನು ಇಂಥ ಕಾಲದಲ್ಲಿ ಅವರ ಪ್ರಯೋಗವು ಅಪಜಯವಾಗಬಹುದೇ?

ಹೊಗಳಿಕೆಯ ಶಬ್ದಗಳು ಗಾಂಧೀಜೀಯವರ ಕಿವಿಗಳಿಗೆ ಎಷ್ಟು ಕಠೋರವಾಗುತ್ತಿರಬೇಕು! ಈ ಹೊಸ ರಾಜ್ಯಘಟನೆಯು ಒಂದು ಬಲೆಯೆಂದು ಅವರಿಗಿಂತ ಹೆಚ್ಚಾಗಿ ಯಾರಿಗೆ ತಿಳಿದಿದೆ? ಅದು ಸಾಮ್ರಾಜ್ಯದ ಬಂಧನದ ಸಂಕೋಲೆಯ ಮತ್ತೊಂದು ಗೊಣಸೆಂದು ಅವರಷ್ಟು ಚೆನ್ನಾಗಿ ಮತ್ತಾರಿಗೆ ಗೊತ್ತಿದೆ? ಹೊಸ ರಾಜ್ಯಘಟನೆಯ ನ್ವಯ ಕೌನ್ಸಿಲು ಅಸೆಂಬ್ಲಿಗಳಿಗೆ ಹೋಗುವದು ನಮ್ಮ ಸ್ವಾತಂತ್ರ್ಯದ ರಹದಾರಿಯಲ್ಲವೆಂದು ಅವರಷ್ಟು ಮತ್ತಾರಿಗೆ ಗೊತ್ತಿದೆ? ಪಾಪ! ಈಗ ಮಹಾತ್ಮರಿಗೆ ಗೊತ್ತಾಗಿದೆ ನನ್ನ ಹಿಂಬಾಲಿಗರು ವೀರರಲ್ಲ ಪತಿತರಾದ ದುಃಖಿತ ಮಾನವ ಪ್ರಾಣಿಗಳೆಂದೂ, ಅವರಿಗೆ ತಿಳಿದಿದೆ ಪಾಶ್ಚಾತ್ಯ ಪೌರ್ವಾತ್ಯಗಳೆರಡೂ ಅಲ್ಲದ ಸುಧಾರಣೆಯ ಸಂಕರದಿಂದ ಕೆಡಿಸಲ್ಪಟ್ಟ ಕೀಳು ಮಾನವರೆಂದೂ, ಶಾಲೆಯ ವಿದ್ಯಾರ್ಥಿ, ಇನ್ಶೂರನ್ಸ್ ಏಜಂಟರನ್ನು ಮೊದಲು ಮಾಡಿಕೊಂಡು ದೇವರದೂ ಅಲ್ಲ, ಮಾನವರದೂ ಅಲ್ಲ ಅಂಥ ಸಂಸ್ಕೃತಿಯ ಸೆಳವಿಗೆ ಸಿಕ್ಕಿ ನಡೆದಿದ್ದರೆಂದೂ ಅವರಿಗೆ ಈಗ ಚೆನ್ನಾಗಿ ಮನವರಿಕೆಯಾಯಿತು. ಗಾಂಧೀಜೀಯವರು ನಮ್ಮನ್ನು ಬಂಧನದಿಂದ ಅಲ್ಲಾಡಿಸಿ 'ಕಷ್ಟ ಸಹಿಸಿರಿ, ಸ್ವರಾಜ್ಯಪಡೆಯಿರಿ' ಎಂದು ಹೇಳಿದರು. ನಾವು ಯತ್ನಿಸಿದೆವು. ಆದರೆ ವಿಜಯಶಾಲಿಗಳಾಗಲಿಲ್ಲ.

ಈಗ ಮಹಾತ್ಮರು ಈ ದುಃಖಿತ ಮಾನವ ಪ್ರಾಣಿಗಳನ್ನು ತನ್ನ ಹಳೆಯ ಸ್ಥಾನದಲ್ಲಿರಿಸಿದ್ದಾನೆ ತನ್ನೊಡನೆ ತಾನೇ ಸಂಧಿಮಾಡಿಕೊಂಡು "ನಾನು ಕುರಿಗಳನ್ನು ದಡ್ಡಿಯಿಂದ ಗುಡ್ಡಕ್ಕೆ ಹೊಡಕೊಂಡು ಹೋದೆನು. ಆದರೆ ಅವು ಗುಡ್ಡದ ತುದಿಗೆ ಏರಲಾರದಾದವು ಆದ್ದರಿಂದ ಪುನಃ ಅವುಗಳನ್ನು ದಡ್ಡಿಗೆ ತಂದುಬಿಟ್ಟಿದ್ದೇನೆ ನಾನಿನ್ನು ಹೋಗುವೆನು"

ಗಾಂಧಿಜಿಯು ಮುತ್ಸದ್ದಿತನವೆಂದು ಜನರು ಹೇಳುವುದರ ಅರ್ಥವು ಸ್ವತಃ ಅವರಿಗೆ ಹೀಗಿದೆ ತನ್ನ ಜೀವನಕಾರ್ಯವು ತನ್ನೆದುರು ನಾಶಹೊಂದಿ ಬೀಳುವುದನ್ನು ನೋಡುವದು ಯಾವ ಮನುಷ್ಯನಿಗೂ ಸಂತೋಷದಾಯಕವಾಗದು ಮಹಾತ್ಮರು ಯಾರನ್ನು ಶೂರ ವೀರರೆಂದು ಹೊಗಳಿದ್ದರೋ, ಯಾರು ನಾಡಿನ ಬಂಧನವನ್ನು ಹರಿದು ಸ್ವಾತಂತ್ರ್ಯ ಪಡೆಯುವರೆಂದು ನಂಬಿದ್ದರೋ ಅವರೇ ಇಂದು ಎಲ್ಲವನ್ನೂ ಮರೆತು ತಿರಸ್ಕರಣೀಯ ರಾಜ್ಯಘಟನೆಯ ಮಾಯದಾಟಿಕೆಯನ್ನು ಎದೆಗೆ ಅಪ್ಪಿಕೊಂಡು ನಲಿದಾಡುತ್ತಿರುವುದನ್ನು ನೋಡುವುದು ಮಹಾತ್ಮರಿಗೆ ಮಹಾ ದುರ್ಘಟ ಸಂಕಟವಾಗಿರುವುದು ಅವರ ವೀರರಿಂದು ಬಾಲಕರಾಗಿದ್ದಾರೆ ಸ್ವರಾಜ್ಯ ಸ್ವಾತಂತ್ರ್ಯದ ಗುರಿಗಳ ದೂರ ಹೋದವು ಕಾಂಗ್ರೆಸ್ ಮಂತ್ರಿಗಳು ತಿಂಗಳಿಗೆ ೫೦೦ ರೂ ಪಗಾರದ ತಮ್ಮ ನಿರ್ಣಯದಂತೆ ನಡೆದುಕೊಳ್ಳಬಹುದ ಆದರೆ ಅವರು ಹಣ ಗಳಿಸುವ ಬೇರೆ ಹಂಚಿಕೆಗಳ ಹಾದಿಗಳನ್ನು ಕೇಳದಿರಲಾರರು ತಿಲಕ ಸ್ವರಾಜ್ಯ ಫಂಡಿನ ಆಡಳಿತವು ಹಿಂದಿನ ಮುಂದೆಯೇ ನುಸುಳುತ್ತಿದೆ

ಸಂತೋಷದಿಂದ ತಾವಾಗಿ ಹೋಕ್ಕ ಕಾರಿಯ ದೊಡ್ಡಿಗಳಲಿ ಕಾಂಗ್ರೆಸ್ ಜನರನ್ನು ಬಿಡೋಣ ಅಂದು ಎನಿಸ್ಲೆಂದರೂ ಅವರು ಸತ್ಯಾಗ್ರಹದ ಹೋರಾಟದಲ್ಲಿ ನಿಜವಾದ ಜೈಲಿಗೆಂದರೂ ಹೋದರು ಆದರೆ ಈಗ ಅವರ ಬಂಗಾರದ ಬಾರುಗಳ [illegible] ಸೆರೆಮನೆಯನ್ನು ಹೊಕ್ಕಿದ್ದಾರೆ ಅಧಿಕಾರ [illegible] ಮದಲೋಲುಗಳಲ್ಲಿ ತಮ್ಮನ್ನೇ ತಾವು ಮರೆತ ವಿಚಿತ್ರ ವಾತಾವರಣದಲ್ಲಿ ಸಿಕ್ಕರು ಅವರಷ್ಟಕ್ಕೆ ಅವರನ್ನು ಬಿಟ್ಟುಬಿಡೋಣ ಗಾಂಧಿಯವರಂತೂ ತಮ್ಮ ಕೈಗಳನ್ನು ತೊಳಕೊಂಡು ಸ್ವಚ್ಛವಾಗಿದ್ದಾರೆ ಜವಾಹರಲಾಲರು ಮುಖ ತಿರುಗಿಸಿದ್ದಾರೆ ಅವರೀಗ ನಿಜವಾದ ಭಾರತೀಯರು ವಾಸಿಸುವ ಹಳ್ಳಿಗಳ ಕಡೆಗೆ ನೋಡಹತ್ತಿದ್ದಾರೆ

ಆದಾಗ್ಯೂ ಭಾರತವು ಸ್ವತಂತ್ರವಾಗುವದೊ? ಹೌದು! ಆದರೆ ಅದು ಅಟ್ಟಹಾಸದಿಂದ ಅಸೆಂಬ್ಲಿಗಳಿಗೆ ಆರಿಸಿಹೋದ ಪ್ರತಿನಿಧಿಗಳಿಂದ ಆಗದು ನಾನು ಪಕ್ಷಪಾತವಿಲ್ಲದವನಾಗಿ ಆ ವಾಕ್ಯವನ್ನು ಹೇಳಿಬಿಡುವೆನು "ಅದರಲ್ಲಿದ್ದಷ್ಟನ್ನು ಸ್ವೀಕರಿಸಲು ಹೋದವರಿಂದ" ಆಗುವದೇನು? ಆದರೆ ಮತದಾರರ ಗತಿಯೇನು? ಅವರು ಮಹಾತ್ಮರ ಸತ್ಯಾಗ್ರಹ ತತ್ವಗಳನ್ನು ಸರಿಯಾಗಿ ಅರಗಿಸಬಲ್ಲರು. ಅವರನ್ನು ವೀರರನ್ನಾಗಿ ತಿದ್ದಿದರೆ ಭಾರತಕ್ಕೆ ಯಾತರ ಅಂಜಿಕೆಯೂ ಇರದು ಆಗ ಭಾರತ ಮಾತೆಯು ಸಾವಿರಾರು ಹಿಟ್ಲರ ಮುಸೋಲಿನಿಗಳನ್ನು ಎದುರಿಸಬಲ್ಲಳು

ಕಾಂಗ್ರೆಸ್ಸಿನ ಗತಿಯೇನು?

ಕಾಂಗ್ರೆಸ ಜನರು ಕೆಲಸ ಮಾಡುವ ಕೌನ್ಸಿಲಿನಲ್ಲಿ ಅದು ಇಲ್ಲ ಗಾಂಧೀಜೀಯವರು ನೂಲುವ ಹಳ್ಳಿಯಲ್ಲಿದೆ ಜವಾಹರಲಾಲರು ದುಡಿಯುತ್ತಿರುವ ಜನತಾ ಸಂಬಂಧದಲ್ಲಿದೆ

ನಿಮಗೆ ಗಾಂಧೀಜೀಯವರ ಮೇಲೆ ಪ್ರೇಮವಿದೆಯೋ? ಹಾಗಾದರೆ ದಯಮಾಡಿ ಅಧಿಕಾರ ಸ್ವೀಕಾರದ ಕಾಂಗ್ರೆಸ್ ನಿರ್ಣಯವನ್ನು ಹೊಗಳಬೇಡಿರಿ ಹಾಗೆ ಮಾಡುವುದೆಂದರೆ ಗಾಂಧೀಜೀಯವರ ಲಜ್ಜೆ ಮತ್ತು ಪತನಗಳನ್ನು ಹೊಗಳಿದಂತಾಗುವುದು.

ಮಹಾತ್ಮರ ಅನುಯಾಯಿಗಳಿಂದ.

"ಲೋಕಮತ"

ಹಳೆ ಪದ್ಧತಿ ಮತ್ತು ಹೊಸ ಪದ್ಧತಿ

ಮಹಾತ್ಮಾ ಗಾಂಧಿಯವರ ಲೇಖ

ಮಹಾತ್ಮಾ ಗಾಂಧಿಯವರು 'ಹರಿಜನ' ಪತ್ರಿಕೆಯಲ್ಲಿ ಈ ಪ್ರಕಾರ ಬರೆಯುತ್ತಾರೆ—

"ಹಳೆಯ ಪದ್ಧತಿ ಮತ್ತು ಹೊಸ ಪದ್ಧತಿಗಳಲ್ಲಿಯ ತಾತ್ವಿಕ ಭೇದವನ್ನು ಒಂದು ಕ್ಷಣ ಧ್ಯಾನದಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದೆ ಇದನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕಾದರೆ ಹೊಸ ರಾಜ್ಯಘಟನೆಯ ಹತ್ತಿಕ್ಕುವ ಮೇರೆಗಳನ್ನು ಎಂದು ಕ್ಷಣ ಮರೆಯಲಿಕ್ಕೆ ಪ್ರಯತ್ನ ಮಾಡಬೇಕು. ಕಾಂಗ್ರೆಸ್ಸು ತನ್ನ ಸೀಮೆಯ ಅಂಚಿಗೆ ಹೋಗಿರುವುದನ್ನೂ ಮತ್ತು ಅದು ಅಧಿಕಾರ ಸ್ವೀಕರಿಸಿರುವುದನ್ನೂ ಕಂಡು ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನು ಅದು ಯಾವ ಅಧಿಕಾರ ಸ್ವೀಕಾರಮಾಡಿದೆಯೆಂಬುದನ್ನು ಲಕ್ಷಿಸತಕ್ಕದ್ದು ಈ ಪೂರ್ವದಲ್ಲಿ ಮಂತ್ರಿಗಳು ಗವರ್ನರರ ಅಧಿಪತ್ಯದಲ್ಲಿ ಸುಲಭವಾಗಿ ಅನುಸರಣೆ ಮಾಡುತ್ತಿದ್ದರು ಈಗ ಅವರು (ಮಂತ್ರಿಗಳು) ಕಾಂಗ್ರೆಸ್ಸಿನ ಹಿಡಿತದಲ್ಲಿದ್ದಾರೆ

ಅವರಿಗಿರುವ ಮನ್ನಣೆಯು ಕಾಂಗ್ರೆಸ್ಸಿನದು ಗವರ್ನರರನ್ನಾಗಲಿ, ಐ. ಸಿ. ಎಸ್. ಅಧಿಕಾರಿಗಳನ್ನಾಗಲಿ ತೆಗೆದು ಹಾಕುವದಾಗದಿದ್ದರೂ ಅವರು ಮಂತ್ರಿಗಳಿಗೆ ಉತ್ತರವಾದಿಗಳಾಗಿದ್ದಾರೆ ಕೆಲವೊಂದು ಮಟ್ಟದ ವರೆಗೆ ಅವರ ಮೇಲೆ ಮಂತ್ರಿಗಳ ಪರಿಣಾಮಕಾರಿಯಾದ ಹಿಡಿತವುಂಟು ಈ ಮಟ್ಟವು ಅವರಿಗೆ (ಮಂತ್ರಿಗಳಿಗೆ) ಕಾಂಗ್ರೆಸ್ಸನ್ನು ಅರ್ಥಾತ್ ಜನತೆಯನ್ನು ಸಂಘಟಿತವಾಗಿ ಮಾಡಲು ಒಲಿಕೊಡುತ್ತದೆ ಮಂತ್ರಿಗಳ ಕಾರ್ಯಗಳ ಗವರ್ನರರಿಗೆ ಎಷ್ಟೋ ಮಿತಿಯಲ್ಲಿ ಸೇರಿಕೆ ಇಲ್ಲದಿದ್ದರೂ ಎಲ್ಲಿಯವರೆಗೆ ಅವರು ಹೊಸ ರಾಜ್ಯಘಟನೆಯ ಚೌಕಟ್ಟಿನಲ್ಲಿಯೇ ಆಡಳಿತ ಮಾಡುತ್ತಿರುತ್ತಾರೆಯೋ ಅಲ್ಲಿಯವರೆಗೆ ಅವರ ಕೈಯಲ್ಲಿ ಚಬುಕ (ರಾಜ್ಯನಾಶಕತ್ವ) ವಿದ್ದೇ ಇರುವುದು. ಪರೀಕ್ಷಾಂತ್ಯದಲ್ಲಿ ಈ ಪ್ರಶ್ನೆ [illegible] ವುದ — ಎಲ್ಲಿಯ ವರೆಗೆ ಜನತೆಯು ಅಹಿಂಸಾವಾದಿಯಾಗಿ ನಡೆಯುವುದೋ ಅಲ್ಲಿಯ ವರೆಗೆ ಕಾಂಗ್ರೆಸ್ ಮಂತ್ರಿಗಳಿಗೆ ಅಭ್ಯುದಯದ ಕಾರ್ಯ ಮಾಡಲು ಸಾಕಷ್ಟು ಸ್ವಾತಂತ್ರ್ಯ ದೊರೆಯುವುದು

ಈ ಅಧಿಕಾರವು (ಮಂತ್ರಿಗಳ ಅಧಿಕಾರವು) ಪರಿಣಾಮಕಾರಿಯಾಗಬೇಕಾದರೆ ಜನತೆಯು ಕಾಂಗ್ರೆಸ್ಸಿಗೆ ಮತ್ತು ಅವರ ಮಂತ್ರಿಗಳಿಗೆ ಹೃತ್ಪೂರ್ವಕವಾದ ಸಹಕಾರವನ್ನು ನೀಡಬೇಕು ಮಂತ್ರಿಗಳು ತಪ್ಪು ಮಾಡಿದರೆ ಅಥವಾ ತಮ್ಮ ಕರ್ತವ್ಯವನ್ನು ಅಲಕ್ಷಿಸಿದರೆ ಬೇಕಾದ ಮನುಷ್ಯನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳ ಕಡೆಗೆ ಪತ್ರ ಬರೆದ ತನ್ನ ತೊಂದರೆಗಳನ್ನು ದೂರಮಾಡಿಕೊಳ್ಳಲು ಯಾವಾಗಲೂ ಮುಕ್ತದ್ವಾರವಿದೆ ಆದರೆ ತಾವೇ ನ್ಯಾಯಾಧೀಶರಾಗಿ ಮನಬಲ್ಲಂತೆ ನಿರ್ಣಯ ಮಾಡಲು ಹೋಗಕೂಡದು

ಕಾಂಗ್ರೆಸ್ಸಿನ ಅಧಿಪತ್ಯವನ್ನು ಕೈಹಿಡಿದು ಕೇಳುವ ಒಂದಾದರೂ ರಾಜಕೀಯ ಪಕ್ಷವು ಕಾರ್ಯರಂಗದಲ್ಲಿ ಇರುವುದಿಲ್ಲವೆಂಬುದನ್ನು ಕಾಂಗ್ರೆಸ ಕಾರ್ಯಕರ್ತರು ಕಂಡುಕೊಳ್ಳಬೇಕು. ಏಕೆಂದರೆ ಉಳಿದ ರಾಜಕೀಯ ಪಕ್ಷಗಳು ಹಳ್ಳಿಗಳ ವರೆಗೆ ನಾಟಿ ಹೋಗಿರುವುದೇ ಇಲ್ಲ ಮತ್ತು ಅದು ಒಂದಾನೊಂದು ದಿನದಲ್ಲಿ ಮಾಡಲ್ಪಡುವಂಥ ಕಾರ್ಯವೂ ಅಲ್ಲ ಆದುದರಿಂದಲೇ ಕಾಂಗ್ರೆಸ್ಸಿನ ಉದ್ದೇಶವಾದ ಸಂಪೂರ್ಣ ಸ್ವಾತಂತ್ರ್ಯದ ಸಲುವಾಗಿ ಮಂತ್ರಿಗಳಿಗೆ ಒಂದು ಘನವಾದ ಸಮಯವು ಪ್ರಾಪ್ತವಾಗಿದೆಯೆಂದು ನನಗೆ ತೋರುತ್ತದೆ! ಆದರೆ ಅವರು ಮಾತ್ರ ಹೊಟ್ಟೆಗೆ ಗತಿ ಇಲ್ಲದ ಕೋಟ್ಯಾವಧಿ ಜನರ ಕಲ್ಯಾಣಕ್ಕಾಗಿ ಪ್ರಾಮಾಣಿಕರೂ, ಸ್ವಾರ್ಥರಹಿತರೂ, ಉದ್ಯೋಗಿಗಳೂ, ತತ್ಪರರೂ ಮತ್ತು ಕಳಕಳಿಯುಳ್ಳವರೂ ಆಗಿರಬೇಕು

ಮಂತ್ರಿಗಳು ರಾಷ್ಟ್ರ ನಿರ್ಮಾಣಕ ಕಾರ್ಯಗಳಿಗಾಗಿ ವೆಚ್ಚಮಾಡಲು ಹೊಸ ರಾಜ್ಯಘಟನೆಯಲ್ಲಿ ಏನೂ ಹಣವು ಉಳಿಯುವುದಿಲ್ಲವೆಂಬುದರಲ್ಲಿ ನಿಃಸಂಶಯವಾಗಿ ತಥ್ಯಾಂಶವಿದೆ ಆದರೆ ಇದರಲ್ಲಿ ಮಾಯೆಯೇ ಹೆಚ್ಚಾಗಿದೆ. ಸರ್ ಡೇನಿಯಲ್ ಹ್ಯಾಮಿಲ್ಟನ್ ಇವರು, ನಿಜವಾದ ಹಣವೆಂದರೆ ನಾಣ್ಯದ ಧಾತುವಲ್ಲ. ಆದರೆ ಪರಿಶ್ರಮವು ಎಂದು ಹೇಳುತ್ತಿರುವುದು ನನಗೂ ಒಪ್ಪಿಗೆ ಇದೆ ಪರಿಶ್ರಮವನ್ನು ನೋಟು (ಕಾಗದಧನ) ಅನುಸರಿಸುವುದು ಯುಕ್ತವಾದುದು, ಇಷ್ಟೇ ಅಲ್ಲ ನೋಟನ್ನು ಪರಿಶ್ರಮವು ಅನುಸರಿಸುವುದಕ್ಕಿಂತಲೂ ಉತ್ತಮವಾದುದು ಹಿಂದು ಸ್ಥಾನದಲ್ಲಿ ವರಿಷ್ಠ ಅಧಿಕಾರದಲ್ಲಿದ್ದ ಒಬ್ಬ ಇಂಗ್ಲಿಷ್ ಹಣಕಾಸಿನ ತಜ್ಞನ ವಿಚಾರವು ಈ ಪ್ರಕಾರವಾಗಿದೆ—

"ನಾವು ಹಿಂದೂಸ್ಥಾನಕ್ಕೆ ಕೊಟ್ಟ ಅತ್ಯಂತ ಅನಿಷ್ಟವಾದ ಸೊತ್ತೆಂದರೆ ವಿಪರೀತ ಪಗಾರವುಳ್ಳ ನೌಕರಿಗಳು ಆಗಿಹೋದುದನ್ನು ನೀಗಿಬಿಡಲು ಶಕ್ಯವಿಲ್ಲ ನಾನು ಇನ್ನು ಏನಾದರೊಂದು ಸ್ವತಂತ್ರ ಯೋಜನೆ ಮಾಡಬೇಕು ಹಣವೆ ಉದ್ದಿಷ್ಟ ವಸ್ತುವಾಗಿ ಯಾವುದು ಮಾಡಲ್ಪಡುತ್ತದೆಯೋ ಅದು ಇನ್ನು ಮೇಲೆ ಸೇವೆಯೇ ಉದ್ದಿಷ್ಟವಾಗಿ ಮಾಡಲ್ಪಡಬೇಕು. ಶಿಕ್ಷಕರಿಗಾಗಲಿ ಡಾಕ್ಟರರಿಗಾಗಲಿ ಹೆಚ್ಚೆಚ್ಚು ಪಗಾರಗಳನ್ನೇಕೆ ಕೊಡಬೇಕು? ಎಷ್ಟೋ ಕೆಲಸವನ್ನು ಸಹಕಾರ ಪದ್ಧತಿಯ ಮೇರೆಗೆ ಏಕೆ ಮಾಡಬಾರದು?

೬೦ ಕೋಟಿ ಕೈಗಳು ಪರಿಶ್ರಮ ಮಾಡಲಿರುವಾಗ ನಿಮಗೆ ಭಾಂಡವಲಿನ ಚಿಂತೆ ಏಕೆ? ಸಹಕಾರ ಪದ್ಧತಿಯಿಂದ ಅರ್ಥಾತ್ ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಸುಧಾರಿಸಿದ ಸನ್ನಾಹ ಸತ್ತ್ವಾವಾದಿ ತತ್ವದ ಮೇಲೆ ಕಾರ್ಯ ಮಾಡಿದರೆ ಹಣದ ಆವಶ್ಯಕತೆಯೆ ಇಲ್ಲ. ಕನಿಷ್ಠಪಕ್ಷ ವಿಶೇಷಹಣವೇನೂ ಬೇಕಾಗವುದಿಲ್ಲ'

ನನ್ನ ಚಿಕ್ಕ ಹಳ್ಳಿಯಾದ ಶೇಗಾಂವದಲ್ಲಿ ನಾನಿದನ್ನು ಸಿದ್ಧಮಾಡಿ ನೋಡಿದ್ದೇನೆ ನಾನು [illegible] ಶೇಗಾಂವದಲ್ಲಿಯ ವಯಸ್ಸಿಗೆ ಬಂದ [illegible] ಜನರು ನಡೆದಿದ್ದಾರೆ ಅವರು ಹತ್ತು ಸಾವಿರ ರೂಪಾಯಿಗಳನ್ನು ಪ್ರತಿವರ್ಷ ಸಂಪಾದಿಸಬಹುದು ಆದರೆ ಅವರು ಹಾಗೆ ನಡೆಯಲಿಕ್ಕೆ ಒಲ್ಲರು ಅವರಲ್ಲಿ ಸಹಕಾರವಿಲ್ಲ ಬುದ್ಧಿಯುಕ್ತ ಪರಿಶ್ರಮವೆಂಬುದರ ಕಲೆಯೇ ಅವರಿಗೆ ಗೊತ್ತಿಲ್ಲ ಹೊಸದಾದ ಯಾವುದನ್ನಾದರೂ ಕಲಿಯಲು ಅವರು ಒಲ್ಲೆನನ್ನುತ್ತಾರೆ ಅಸ್ಪೃಶ್ಯತೆಯೆಂದು ಅವರ ಮಾರ್ಗದಲ್ಲಿ ಒಡೆಗಲ್ಲು [illegible] ಲಿಕ್ಕಸಪತ್ರವಿಲ್ಲದವರ ಈ ಪ್ರಕಾರದ ಪರಿಸ್ಥಿತಿಗೆ ಅವರು ಹೊಣೆಗಾರರಲ್ಲ ಅದಕ್ಕೆ ಹೊಣೆಗಾರರು ನಾವು ಮಧ್ಯಮ ವರ್ಗದವರು.

ಶೇಗಾಂವದ ಪರಿಸ್ಥಿತಿಯು ಹೇಗಿದೆಯೋ ಹಾಗೆಯೇ ಪ್ರತಿಯೊಂದು ಹಳ್ಳಿಯ ಸ್ವರೂಪವು ಇದದೂ ಸಹನಶೀಲತೆಯಿಂದ ಪ್ರಯತ್ನ ಮಾಡಿದರೆ ಹಳ್ಳಿಗರು ಕೇಳುವರು ಶೇಗಾಂವದಲ್ಲಿ ಅತಿ ಮೆಲ್ಲಗೆ ಏಕಾಗಲೊಲ್ಲದೇಕೆ ಮಾತು ಕೇಳುತ್ತಿದ್ದಾರೆ

ಈ ರೀತಿಯಲ್ಲಿ ಸರಕಾರದವರು ವಿಶೇಷ ಕಾರ್ಯವನ್ನು ಮಾಡಬಲ್ಲರು" ಅವರು ಹೆಚ್ಚಿಗೆ ಒಂದು ಪೈಯನ್ನು ಕೂಡ ವೆಚ್ಚಮಾಡಬೇಕಾದಿಲ್ಲ. ಸರಕಾರಿ ಅಧಿಕಾರಿಗಳು ಹಳ್ಳಿಗರನ್ನು ತೊಂದರೆಗೊಳಿಸುವುದಕ್ಕೆ ಪ್ರತಿಯಾಗಿ ಅವರ ಸೇವೆಮಾಡುವಂತೆ ಹಚ್ಚಬಹುದು ಏನನ್ನಾದರೂ ಮಾಡಲು ಹಳ್ಳಿಗರನ್ನು ಒತ್ತಾಯಪಡಿಸಬೇಕಾಗಿಲ್ಲ ಯಾವ ಕಾರ್ಯಗಳನ್ನು ಮಾಡುವದರಿಂದ ಅವರ ನೈತಿಕ, ಬೌದ್ಧಿಕ, ಶಾರೀರಿಕ ಮತ್ತು ಸಾಂಪತ್ತಿಕ ಅಭಿವೃದ್ಧಿಯಾಗುತ್ತಿದೆಯೋ ಅವುಗಳ ವಿಷಯವಾಗಿ ಅವರಿಗೆ ಶಿಕ್ಷಣಕೊಡಬೇಕು.

[ಹರಿಜನ ಪತ್ರಿಕೆಯಿಂದ]

ಅನುವಾದ—"ಲೋಕಮತ"



Distributors for South Kanara.—

Raghavendra Ranga Pai Car Street Mangalore

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.

ಆಟೊಮೆಟಿಕ್ ಆಲಾರಂ ಪಿಸ್ತಲ್

(ಬಂದೂಕು)

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು ಇದರಿಂದ ಹತ್ತು ಸೆಕುಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು ಇದು ಒಂದು ವಿದ್ಯುತ್ ಶಕ್ತಿ ನಮ್ಮ ಸಹಾಯಕನಾಗಿರುವುದು ಸಿನಿಮಾದವರು ಡ್ರಾಮದವರು ಉಪಯೋಗಿಸುವುದು ನೀವು ನೋಡಿರಬಹುದು. ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತಲ್ ಕೂಡೆ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೨ ಬೆಟರಿ ಹಾಕಿದ ಸ್ಪಾರ್ಕ ಲೈಟ್ ಒಂದು ಇನಾಮ ಸೇರಿಸಿ ಕಳುಹಿಸುವೆವು ಪಿಸ್ತೂಲು ಗಳ್ಳೆ ತೋಟೆಗಳ ಸಹಿತ ೭—೮—೦ ಟಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ ೩, ಇರುಳಪ್ಪನ ಬೀದಿ, ಮದ್ರಾಸು

"An ideal young progressive Life Office of India to Insure with or represent"

The Commonwealth Assurance Co.,

LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 37½. ON WHOLE LIFE Rs. 46.

Next VALUATION YEAR 1937-38.

Join the Agency force on most Liberal Terms, Apply to—

Messrs. GAWANKAR & SONS,

Chief Agents for Mysore state, Coorg, Ceded Districts & S Kanara

AHMED BUILDINGS, CHICKPET, BANGALORE CITY.

Messrs. Farooqui Brothers, *Special Agents*,

Fort House, Farkal (South Kanara)

Local Representatives —THE MODERN TRADING CO., Mangalore

Modern Printing! at Moderate Rates!

CONSULT

Sharada Press, Car Street, ***Mangalore***

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ವಗೈರೆ ಹಾಳಾಗದಂತೆಯೂ ವಿಷಕ್ರಿಮಿಗಳ ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರೆಗಳು ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಬಾಧೆಯು ಇಲ್ಲ

ಅನೇಕ ತರಹ ಮತ್ತು ಪ್ರಮಾಣಗಳಲ್ಲಿ

ಮುಖ್ಯ ಏಜಂಟರು

ಕೆ. ರಾಮ ನಾಯಕ್,
ಹಾರ್ಡ್‌ವೇರ್ ಮತ್ತು ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ—ಗರ್ಭಶೂಲಿ, ಗರ್ಭಸ್ರಾವಕ್ಕೆ

ಚಂದ್ರಮುಸ್—ವಾಂತಿಭೇದಿ, ಅತಿಸಾರಕ್ಕೆ

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ

ವೃದ್ಧಿಕಾಸವ—ನಿಶ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ವ್ಯಾಪಾರಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಈ ವಾರದ ಕಥೆ—

ಮೆನೇಜರ ರಂಗರಾವ್

(ಲೇಖಕ— ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)

(ಕಲ್ಪಿತ ಕಥೆ)

ಶ್ರೀ ಮಹಾಲಕ್ಷ್ಮಿ ಪ್ರಸನ್ನ ಹಾಯರ ಎಲಿಮೆಂಟರಿ ಶಾಲೆಯ ಉಪಾಧ್ಯಾಯ ತಮ್ಮಯ್ಯ ಮಾಸ್ತು ಮತ್ತು ಅವರ ವಿಧವೆ ಮಗಳು ಇದೇ ಶಾಲೆಯ ಉಪಾಧ್ಯಾಯಿನಿ—ಸಾವಿತ್ರಮ್ಮ ಶಾಲೆಯ ಬಾವಿಯಲ್ಲಿ ಬಿದ್ದು ಪ್ರಾಣ ಕಳಕೊಂಡಿರುವರೆಂಬ ವರ್ತಮಾನವು ಬೆಳಗಾಗ ಬೇಕಾದರೆ ಪೊಲೀಸಿನವರಿಗೆ ದೊರೆತು, ಅವರು ಬಂದು ಎರಡೂ ಶವಗಳನ್ನು ಬಾವಿಯಿಂದ ಮೇಲಕ್ಕೆತ್ತಿ ಹಾಕಿದರು ಸಾವಿತ್ರಮ್ಮನ ಸೀರೆಯ ಸೆರಗಿನಲ್ಲಿ ಒಂದು ಪತ್ರವು ಕಟ್ಟಿದ್ದಿತು

'ರಂಗರಾಯರಿಗೆ, ಉದ್ಯೋಗವಿಲ್ಲದೆ ಅಲೆಯುತ್ತಿದ್ದ ನಮಗೆ ಉದ್ಯೋಗವನ್ನು ಕೊಟ್ಟದಕ್ಕಾಗಿ ನಿಮಗೆ ನಾವು ಕೃತಜ್ಞರಾಗಿರುವೆವು ಆದರೆ ಕಳೆದ ಎರಡು ಮೂರು ತಿಂಗಳುಗಳಿಂದ ನೀವು ನಮಗೆ ಕೊಟ್ಟ ಆಶ್ರಯವೆಂಬುದು ಕಟುಕನು ವಧ್ಯಸ್ಥಾನಕ್ಕೆ ಕೊಂಡುಹೋಗಲಿರುವ ಪಶುಗಳಿಗೆ ಕೊಡುವಂಥ ಆಶ್ರಯದಂತಿತ್ತು ಇದು ನಮಗೆ ಮೊದಲು ಗೊತ್ತಾಗದೆ ಮೋಸ ಹೋದೆವು ಸತೀತ್ವವನ್ನೂ ಪುರುಷತ್ವವನ್ನೂ ಮಾರಿ ಬದುಕುವ ಜೀವನವು ಪಶು ಜೀವನಕ್ಕಿಂತಲೂ ಹೀನವಾದ್ದು ಶಾಲಾ ಮಂದಿರಗಳು ದೇವಮಂದಿರಗಳಂತೆ ಪಾವಿತ್ರ್ಯದ ನೆಲೆಗಳಾಗಿರಬೇಕು ಆದರೆ ನಿಮ್ಮ ಶಾಲೆಯಲ್ಲಿ ಇದಕ್ಕೆ ತೀರ ಪ್ರತಿಕೂಲವಾದ ವಾತಾವರಣವನ್ನು ಕಂಡೆವು ಈಗ ಪ್ರಾಣಕೊಟ್ಟಲ್ಲದೆ ಈ ವಾತಾವರಣವನ್ನು ಪರಿಶುದ್ಧ ಮಾಡುವ ಬಗೆಯನ್ನು ಕಾಣುವದಿಲ್ಲ ನಮ್ಮ ಈ ಆತ್ಮಬಲಿಯಿಂದಲಾದರೂ ನಿಮ್ಮ ಶಾಲೆಯೊಳಗಿನ ಅಪವಿತ್ರತೆಯು ತೊಳೆದು ಹೋಗಿ ಪವಿತ್ರತೆಯು ಬರಲೆಂದು ಹಾರೈಸುತ್ತೇನೆ

ಇತಿ ತಮ್ಮ ಹಿತಚಿಂತಕರು-ಸಾವಿತ್ರಮ್ಮ

ಆರು ತಿಂಗಳುಗಳಿಂದ ತಮ್ಮಯ್ಯ ಮಾಸ್ತು ನಿರುದ್ಯೋಗಿಗಳಾಗಿದ್ದರು ಅವರು ಮೊದಲು ನಮ್ಮ ತಾಲೂಕು ಬೋರ್ಡಿನ ಒಂದು ಹಳ್ಳಿ ಶಾಲೆಯ ಉಪಾಧ್ಯಾಯರಾಗಿದ್ದರು ಆದರೆ ಹಣ ಉಳಿಸಬೇಕೆಂದು ನಮ್ಮ ಬೋರ್ಡು ಕೆಲವು ಉಪಾಧ್ಯಾಯರ ಜಾಗಗಳನ್ನು ತೆಗೆದು ಹಾಕಿದುದರಿಂದ ತಮ್ಮಯ್ಯ ಮಾಸ್ತು—ಬೇರೆ ಕೆಲವು ಉಪಾಧ್ಯಾಯರೊಂದಿಗೆ ಕೆಲಸಕ್ಕೆ ತಿಲಾಂಜಲಿ ಬಿಡಬೇಕಾಯಿತು ಆ ಮೇಲೆ ಅವರಿಗಿಂತ ಹೆಚ್ಚು ಅಥವಾ ಕಡಿಮೆ ಸರ್ವಿಸು ಆದವರು, ಹೆಚ್ಚು ಅಥವಾ ಕಡಿಮೆ ಕಲಿತವರು ಅದೇ ತಾಲೂಕು ಬೋರ್ಡಿನಲ್ಲ ಪುನಃ ಕೆಲಸವನ್ನು ಸಂಪಾದಿಸಿಕೊಂಡರು ತಮ್ಮಯ್ಯ ಮಾಸ್ತಗೆ ಮಾತ್ರ ಕೆಲಸವಿಲ್ಲ' ಅಂದರೆ ತಾಲೂಕು ಬೋರ್ಡಿನಲ್ಲಿ ಪ್ರತಿಷ್ಠಾಪಿಸಲ್ಪಟ್ಟ ದೇವತೆಗಳ ಪೂಜೆಯನ್ನು ಯಥಾವತ್ತಾಗಿ ಮಾಡಿ ಅವರನ್ನು ಸುಪ್ರೀತರನ್ನಾಗಿ ಮಾಡುವ ಜಾಣ್ಮೆ ಮತ್ತು ಸಾಧನ ತಮ್ಮಯ್ಯ ಮಾಸ್ತಲ್ಲಿ ಇರಲಿಲ್ಲ ಇದೇ ಸಮಯಕ್ಕೆ ಸರಿಯಾಗಿ ಸಾವಿತ್ರಮ್ಮನೂ ಮದುವೆಯಾಗಿ ಗಂಡನ ಮನೆಗೆ ಹೋದವಳು, ಒಂದು ವರ್ಷ ಮುಗಿಯಬೇಕಾದರೆ ವಿಧವೆಯಾಗಿ ಪುನಃ ತಂದೆ ಮನೆಯನ್ನೆ ಕೂಡಿದಳು ಗಾಯವಾದ ಬೆರಳು ಜಜ್ಜಿಕೊಳ್ಳುವದು ಹೆಚ್ಚು ಎಲ್ಲಿ ಹೋದರೂ ಕೆಲಸವಿಲ್ಲ ಕೂಡಿಸಿಟ್ಟ ಒಂದು ಚಿಕ್ಕಾಸೂ ಇಲ್ಲ. ಇದ್ದುದೆಲ್ಲ 60 ವರ್ಷ ಪ್ರಾಯದ ಮುದುಕನಿಗೆ ಸಾವಿತ್ರಮ್ಮನನ್ನು ಮದುವೆಮಾಡಿ ಕೊಡಲಿಕ್ಕೆ ಖರ್ಚಾಗಿ ಹೋಗಿತ್ತು. ಹೀಗೆ ತಮ್ಮಯ್ಯ ಮಾಸ್ತ ಭವಿಷ್ಯ ಜೀವನದಲ್ಲಿ ನಿರಾಶಾಮಯ ಗಾಢಾಂಧಕಾರವು ತುಂಬಿಕೊಂಡಿತು.

ಒಂದು ದಿನ ಅವರು ಅಂಗಡಿಗಾರ ನರಸಿಂಹಯ್ಯನವರ ಅಂಗಡಿಗೆ ಹೋಗಿ ಅರ್ಧ ಸೇರು ಬೆಲ್ಲವನ್ನು ಕೊಂಡುಕೊಂಡರು ನರಸಿಂಹಯ್ಯನವರು ಬೆಲ್ಲವನ್ನು ಗಜೇಟಿನ ತುಂಡಿನಿಂದ ಕಟ್ಟಿಕೊಟ್ಟರು ಸಿಕ್ಕಿದ ಕಾಗದವನ್ನು ಓದುವ ಹುಚ್ಚು ತಮ್ಮಯ್ಯ ಮಾಸ್ತಗೆ ಬೆಲ್ಲದ ತುಂಡನ್ನು ಮಗಳ ಕೈಯಲ್ಲಿಟ್ಟು, ಗಜೇಟ ತುಂಡನ್ನು ಓದ ತೊಡಗಿದರು.

'ಬೇಕಾಗಿದೆ–ತಿಂಗಳಿಗೆ 20 ರೂಪಾಯಿ ಸಂಬಳದ ಮೇಲೆ ಶ್ರೀ ಮಹಾಲಕ್ಷ್ಮಿ ಪ್ರಸನ್ನ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಕೆಲಸ ಮಾಡಲಿಚ್ಛಿಸುವ ಲೋವರ ಗ್ರೇಡಿನ ಒಬ್ಬ ಉಪಾಧ್ಯಾಯ ಮತ್ತು ಉಪಾಧ್ಯಾಯಿನಿ ಬೇಕು. ತರಬೇತಿ ಆಗದಿದ್ದರೂ ಚಿಂತೆ ಇಲ್ಲ ಇಬ್ಬರೂ ಒಂದೇ ಮನೆಯವರಾಗಿದ್ದರೂ ಆಗಬಹುದು ಉಮೇದುವಾರರು ಕೂಡಲೇ ಶಾಲಾ ಮೆನೇಜರರಿಗೆ ಅರ್ಜಿ ಬರೆಯಬೇಕು, ಅಥವಾ ಸ್ವತಃ ಬಂದು ಅವರನ್ನು ಕಾಣಬೇಕು

ರಂಗರಾವ್, ಮೆನೇಜರ

ತಮ್ಮಯ್ಯ ಮಾಸ್ತು ಗಜೇಟಿನ ತಾರೀಕನ್ನು ನೋಡಿದರು ಅದು ಪ್ರಕಟವಾಗಿ ಬಹಳ ದಿನಗಳಾಗಿಲ್ಲ, ಒಂದು ವಾರ ಆಗುತ್ತಿದೆ ಮಾತ್ರ ಒಳಗೆ ಹೋಗಿ—'ಸಾವಿತ್ರೀ!'ಎಂದು ಕರೆದರು ಸಾವಿತ್ರಿ ಮಾತನಾಡಲಿಲ್ಲ ಅವಳು ಒಲೆ ಮೇಲೆ ಬೆಲ್ಲದ ನೀರು ಇಟ್ಟು ಕಾಗದ ಚೂರುಗಳ ಬೆಂಕಿ ಮಾಡತ್ತಿದ್ದಳು ಬೆಂಕಿಯನ್ನು ಊದಿ ಊದಿ ಮೂಗು ಕಣ್ಣುಗಳಿಂದ ನೀರು ಸುರಿಯುತ್ತಿತ್ತು ಪುನಃ 'ಸಾವಿತ್ರಿ! ಎಂದು ಕರೆದರು ಅವಳಿದ್ದಲ್ಲಿಗೇ ಹೋದರು 'ಸಾವಿತ್ರೀ ಇನ್ನು ನಮ್ಮ ಭಾಗ್ಯೋದಯವಾಯಿತು ನೋಡು, ಈ ಕಾಗದ' ಮಹಾಲಕ್ಷ್ಮಿ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಎರಡು ಕೆಲಸಗಳು ಖಾಲಿ ಇದ್ದಿವೆ ಒಂದು ನನಗೆ ಒಂದು ನಿನಗೆ ಎಂದರು

ಸಾವಿತ್ರಮ್ಮನು ಹರಕು ಸೀರೆಯ ಸೆರಗಿನಿಂದ ಮೂಗು ಕಣ್ಣುಗಳನ್ನು ಒರಸಿಕೊಂಡು ತನ್ನ ಮುಂದೆ ನಿಂತಿರುವ ತಂದೆಯನ್ನು ದಿಟ್ಟಿಸಿ ನೋಡಿದಳು ಅವರ ಭಾವೀ ಸುಖದ ಕಲ್ಪನಾ ಸಾಗರದಲ್ಲಿ ತೇಲುಗಿ ಏಳುತ್ತಿದ್ದಾರೆ ತಿಂಗಳಿಗೆ ಇಬ್ಬರಿಗೆ 40 ರೂಪಾಯಿಗಳು ಮನಸ್ಸಿಗೆ ಬಂದಷ್ಟು ಖರ್ಚು ಮಾಡಿಯೂ ತಿಂಗಳಿಗೆ 10 – 15 ರೂಪಾಯಿಗಳನ್ನು ಉಳಿಸಿಕೊಂಡು ಬರಬಹುದು ಈಗ ತಿಂಗಳಿಗೆ 2–3 ರೂಪಾಯಿ ಮಾತ್ರ ಖರ್ಚು ಮಾಡಿ ಜೀವಿಸುವ ಅವರು 25 ರೂಪಾಯಿಗಳಿಗಿಂತ ಹೆಚ್ಚಾಗಿ ಎಷ್ಟು ಖರ್ಚು ಮಾಡಬಹುದು? ಪಾಪ

ಸಾವಿತ್ರಿ ಅರ್ಜಿ ಬರೆಯುತ್ತೇನೆ ದಸ್ಕತು ಹಾಕು,ನಾನು ಈಗಲೇ ಹೊರಟು ರಂಗರಾಯರನ್ನು ನೋಡುವೆನು '

ಅವಳು ಅರ್ಜಿಗೆ ದಸ್ಕತು ಹಾಕಿಕೊಟ್ಟಳು ತಮ್ಮಯ್ಯ ಮಾಸ್ತು ಹೊರಟು ಹೋಗುವಾಗ—'ಅಪ್ಪಯ್ಯ' ಗಂಡು ಮಕ್ಕಳ ಶಾಲೆಯಲ್ಲ ಹೆಂಗಸರೂ ಕೆಲಸ ಮಾಡುತ್ತಾರೆಯೇ?' ಎಂದು ಒಂದು ಪ್ರಶ್ನೆ ಮಾಡಿದಳು ಆದರೆ ಹರ್ಷಗುನ ಅವಸರದಲ್ಲಿ ಅದು ತಮ್ಮಯ್ಯ ಮಾಸ್ತಗೆ ಕೇಳಿಸಲಿಲ್ಲ. ಅವರು ಹೊರಟೇಹೋದರು.

ತಮ್ಮಯ್ಯ ಮಾಸ್ತಗೂ ಸಾವಿತ್ರಮ್ಮನಿಗೂ ಕೆಲಸ ಬಹು ಸುಲಭದಲ್ಲಿ ದೊರಕಿತು ಕೆಲಸಕ್ಕೆ ಸೇರಿ ಎರಡು ಮೂರು ತಿಂಗಳುಗಳೂ ಕಳೆದುಹೋಗಿದ್ದುವು ಆ ದಿನ ಆದಿತ್ಯವಾರ ಮಧ್ಯಾಹ್ನ 12 ಘಂಟೆಯ ಸಮಯವಾಗಿದೆ ಪೇಟೆಗೆ ಹೋಗಿದ್ದ ತಮ್ಮಯ್ಯ ಮಾಸ್ತು ಕಾಲು ತೊಳೆದು ಒಳಗೆ ಬಂದರು.

'ಅಪ್ಪಯ್ಯ ಅಕ್ಕಿ ಖರ್ಚಾಗಿ ನಾಲ್ಕೈದು ದಿನಗಳಾದುವು. ಇವತ್ತು ನಾಳೆ ಎಂದು ಎಷ್ಟು ದಿನ ನೆರೆಮನೆಯಿಂದ ಅಕ್ಕಿ ಕಡ ತರಬೇಕು? ಅವರು ಇನ್ನೂ ಸಂಬಳ ಕೊಡಲಿಲ್ಲವೆ?'

'ಇಲ್ಲ, ಸಾವಿತ್ರಿ' ಏನು ಮಾಡೋಣ! ಪಾಪ ಹೋದಲ್ಲಿ ಮೊಳಕಾಲುದ್ದ ನೀರು. ಎಲ್ಲಾ ಮಾಸ್ತಗೆ ಒಂದೊಂದು ತಿಂಗಳ ಸಂಬಳ ಕೊಟ್ಟಿದ್ದಾರೆಂದು ಕೇಳಿ, ನಾನೂ ಈಗ ಹೋಗಿ ಕೇಳಿದೆ. 'ಇವರು ಇಂಗ್ಲೀಷ ಮಾತನಾಡುತ್ತಾರೆ, ಸಾವಿತ್ರಿ!'

ಏನ ತೆ?

ಸಂಬಳ ಕೇಳಿದಾಗ ರಂಗರಾವರು ಹಸಿದ ಹುಲಿಯ ಹಾಗೆ ನನ್ನ ಮೈಮೇಲೆ ಬಿದ್ದರು ಚೆನ್ನಾಗಿ ಬುದ್ಧಿ ಕಲಿಸುತ್ತೇನೆಂದರು '

'ಯಾಕಾಗಿ?

'ದಗೂ ಹೇಳಬಾರದ ಮಾತದು ಅಪ್ಪರ ಸಂಗ, ಅಭಿಮಾನ ಭಂಗ ಎಂಬದರ ಅರ್ಥ ಸಿಕ್ಕಿಲ್ಲ ಅವರಿಗೆ ನಿನ್ನ ಕುರಿತು ಸಂದೇಹವಾಗಿದೆ. ತೆ ಸೀನ ಅವರ ಶಾಲೆಯ ಧರ್ಮ ಕೀರ್ತಿಗೆ ಮಸಿ ಹಚ್ಚಿದಿ ಎಂತೆ ಇನ್ನು ಏನೇನೋ ಮಾತನಾಡಿದರು ಸಾವಿತ್ರಿ ನಾನು ನಾರಾಯಣ ನಾರಾಯಣ ಎಂದು ಹೇಳಿ ಕಿವಿ ಮುಚ್ಚಿಕೊಂಡು ಅಲ್ಲಿ ನಿಲ್ಲದೆ ಹೊರಟು ಬಂದೆ ಮಾನಗೇಡಿಯಾಗಿ ಬದುಕಿರಬಾರದಮ್ಮ !'

'ಮಾನಗೇಡಿಯಾಗಿ ಬದುಕಿರಬಾರದು. ತಂದೆಗೂ ನನ್ನ ಮೇಲೆ ಸಂದೇಹವೆ? ನಿಜ ಮಾನಗೇಡಿಯಾಗಿ ಬದುಕಿರಬಾರದು.' ಎಂದು ಸಾವಿತ್ರಮ್ಮನಿಗೆ ಅನ್ನಿಸಿತು ಅವಳು ಮುಖ ತಗ್ಗಿಸಿಕೊಂಡು ಅಳಲಾರಂಭಿಸಿದಳು

'ಮಗೂ, ಅಳುವದೇಕೆ? ಹುಟ್ಟಿಸಿದ ದೇವರು ಊಟ ಕೊಡಲಾರನೆ? ಬದುಕಬೇಡವಮ್ಮಾ! ರಂಗರಾಯರು ಎಂಥವರೆಂದು ಪೇಟೆಯವರಿಗೆಲ್ಲಾ ಗೊತ್ತಿದೆ. ನಾವು ಬಗುಳಿದರೆ ಸ್ವರ್ಗಲೋಕ ಹಾಳಾದೀತೆ? ಅವರು ಶಾಲೆಗೆ ಬಂದ ಬಂಧವರೊಡನೆ ಹೀಗೆಯೇ ಮಾಡುತ್ತಾರಂತೆ! ಅವರದು ಶಿಕ್ಷಣಾಲಯವಲ್ಲ, ವೇಶ್ಯಾಲಯ' ಎಂದು ನರಸಿಂಹಯ್ಯ ಹೇಳಿದರು.'

ಸಾವಿತ್ರಿ ಸಣ್ಣ ಮಗುವಿನಂತೆ ಅಳಲಾರಂಭಿಸಿದಳು. 'ಸಾವಿತ್ರಿ 10—15 ದಿವಸಗಳಿಂದ ನಿನ್ನ ದೇಹ ಸ್ವಾಸ್ಥ್ಯ ಎಷ್ಟು ಕೆಟ್ಟು ಹೋಗಿದೆ! ಮೊದಲು ಹೇಗಿದ್ದವಳು ಈಗ ಹೇಗಾಗಿಬಿಟ್ಟೆ! ಅಮ್ಮಾ' ನೀನು ಇಷ್ಟು ದಿನ ಶಾಲೆಗೆ ಹೋಗದೆ ಇದ್ದ ದೆವ್ವವು ಮಾತು ನಾನು ಇಷ್ಟೆಲ್ಲ ಪ್ರಪಕ್ಷಿಸುವುದು ನಿನಗಾಗಿ, ಸಾವಿತ್ರಿ' ಅಮ್ಮಾ! ಅಳಬೇಡ ಅದರ ಪಾಪ ಅಳದಿ ನನು ಮಾಡುವ ಚಿಕ್ಕಂದಿನಲ್ಲಿ ತಾಯಿಯನ್ನು ಕಳಕೊಂಡೆ ಪ್ರಾಯಕ್ಕೆ ಬಂದ ಮೇಲೆ ಗಂಡನನ್ನು ಕಳಕೊಂಡೆ ಪರಾನ್ನ ಪ್ರಾಣ ಸಂಕಟ! ಅಯ್ಯೋ ನನ್ನ ಪ್ರಾರಬ್ಧವೇ?' ಎಂದು ಅವರೂ ಅಳಲಾರಂಭಿಸಿದರು

ಏ ಫೆಂಥ ಕಷ್ಟಗಳು ಬಂದಿದ್ದರೂ ತಮ್ಮಯ್ಯ ಮಾಸ್ತು ಅವುಗಳನ್ನು ಸುಮ್ಮಗೆ ಸಹಿಸಿಕೊಂಡು ಬಂದಿದ್ದರು ಬೇರೆಯವರೊಡನೆ ಹೇಳುವ ಮಾತು ಇರಲಿ, ಒಡಹುಟ್ಟಿದ ಮಗಳೊಡನೆ ಕೂಡ ತಮ್ಮ ಕಷ್ಟಗಳನ್ನು ಹೇಳಿದ್ದು ಏವನ್ನು ಬಹಿರಂಗಪಡಿಸಿಕೊಳ್ಳುತ್ತಿರಲಿಲ್ಲ ಅಷ್ಟು ದಿನಗಳಿಂದ ನುಂಗಿಕೊಂಡಿದ್ದ ಆ ದುಃಖವೆಲ್ಲ ಇಂದು ಹೊರಗೆ ಉಕ್ಕಿ ಉಕ್ಕಿ ಬಂದಿತು

ಅಪ್ಪಯ್ಯ' ನೀವು ಗಂಡ ಸಾಗಿ ಅಳಬಾರದು ನನ್ನ ದೇಹ ಸ್ವಾಸ್ಥ್ಯಕ್ಕಾಗಿ ನೀವು ಚಿಂತಿಸಬೇಕಾಗಿಲ್ಲ ನಾನು ಇಷ್ಟು ದಿನ ನಿಮ್ಮೊಡನೆ ಹೇಳದೆ ಸುಮ್ಮನಿದ್ದೆ ನನ್ನ ದೇಹ ಸ್ವಾಸ್ಥ್ಯವು ಕೆಟ್ಟುದರಿಂದ ನಾನು ಶಾಲೆಗೆ ಹೋಗದೆ ಇದ್ದುದಲ್ಲ ರಂಗರಾಯರು ಪಾಪಿಗಳು. ಅವರ ಶಾಲೆಯ ಸಂಸರ್ಗ ಬೇಡವೆಂದು ದೂರವಿದ್ದೆ ಆ ಸಂಗತಿ ನಿಮ್ಮೊಡನೆ ಹೇಳಿದ್ದರೆ ನಿಮಗೆ ಬಹಳ ದುಃಖವಾಗುತ್ತಿತ್ತು ಅದ್ದರಿಂದ ಜ್ವರ ಬರುತ್ತದೆ ಎಂದು ನೆವನ ಹೇಳಿ ರಜೆ ತೆಗೆದುಕೊಂಡೆ ಅಪ್ಪಯ್ಯ' 'ಎಂಥೆಂಥವರು ನನ್ನ ಮಾತು ಕೇಳಿದ್ದಾರೆ ನಿನ್ನದೇನು ದೊಡ್ಡಸ್ಥಿಕೆ ನನ್ನ ಮಾತು ಕೇಳದ ಧಿಟ್ಟ! ನಿನಗೆ ಬುದ್ಧಿ ಕಲಿಸದೆ ಇರುವದಿಲ್ಲ ನಿನ್ನ ಮಾನ ಎಷ್ಟುಂಟೋ ನೋಡಿ ಬಿಡುತ್ತೇನೆ ' ಎಂದು ರಂಗರಾಯ ಗದರಿಕೆ ಹಾಕಿದ್ದಾನೆ, ಅಪ್ಪಯ್ಯ!

(ಒಸೇ ಫುಟವನ್ನು ನೋಡಿರಿ)

THE [illegible] & INDUSTRIAL BANK, LIMITED.

(Incorporated in British India)

Head Office: "LAXMI-NIVAS" Buildings, COONDAPOOR.

Branches:
Coondapoor,
Koteshwar,
Byndoor,
Kumta,
Gokarn,
Somwarpet &
Virarajendrapet.

Beg to announce the Opening of their Branches at Shimoga & Tarikere (Mysore State) in the next month

Please watch the opening dates.

'Laxmi-Nivas' Buildings, Coondapoor, 10-7-1937.

K. Vaman Shenai
G. Balakrishna S. Nayak, } *Managing Directors.*

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳ ಸ್ವಲ್ಪ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ

ಬರೆದವರು.—ಶ್ರೀ ಜಿ. ಎಸ್. ಲಕ್ಷ್ಮಣ ಶೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡುವುದು—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ; ಸೂರ್ಯನೊಳಗಿಲ್ಲ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನ್ನು ನಾರದ ಮುನಿವರ!" ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ತಿಳಿ ದುಕೊಳ್ಳುವಿರಿ! ದುರಾಟ ಕಾಲದ ಮನೋಹರವಾದ ಹೊಸ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ.

ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯ್ಲಾಸ್ ಪಬ್ಲಿಷಿಂಗ್ ಹೌಸ್, ಸ್ಟೇಶನ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಆಷಾಢ ಬ॥ ೪ ಶನಿವಾರದಿಂದ, ಆಷಾಢ ಬ॥ ೭ ಶುಕ್ರವಾರದ ವರೆಗಿನ ಪಂಚಾಂಗ. (೧೯೩೭ನೇಯ (ಕರ್ನಾಟಕ ಆಟ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
31	ಶನಿ	೮	೧೦	ಭರಣಿ	೩೬	೧೫	[illegible]
1	ರವಿ	೯	೫೩	ಕೃತ್ತಿಕ	೩೨	೧೬	
2	ಸೋ	೧೧	೫೨	ರೋಹಿಣಿ	೨೮	೧೭	
3	ಕುಜ	೧೨	೪೬	ಮೃಗಶಿರ	೨೪	೧೮	
4	ಬುಧ	೧೪	೪೧	ಆರ್ದ್ರ	೨೧	೧೯	
5	ಗುರು	೧೪	೩೫	ಪುನರ್ವಸು	೧೮	೨೦	
6	ಶುಕ್ರ†	೩೦	೨೩	ಪುಷ್ಯ	೧೬	೨೧	

THE
BANK OF MANGALORE LTD.,
MANGALORE.

ESTD 1931

Branches:-
Panemangalore, Mudabidri & Padubidri

Chairman—**Philip J. Chandran, Esq.,**
Retd. Dt. Registrar of Joint Stock Companies

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors*

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತ ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು-ಹಣ್ಣುಗಳು—ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2-8-0 ಅಡ್ವಾನ್ಸ್ ಇಲ್ಲದೆ ಆರ್ಡರ್ ಪಡೆಯಲಾಗದು.

ವಿಳಾಸ —

The Royal Seed Co.,
Florists & Seedsmen, 27 Ilpay Thope
ULSOOR, BANGALORE.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ ಆ	ರೂ ಆ
ರಾಶಿ ಅಕ್ಕಿ ...	3— 8	4— 0
ಮಸೂರಿ ...	4— 4	4— 6
ಗುಡ್ಡ ...	3—12	4— 0
ಊರ ಅಕ್ಕಿ ಬೆಳ್ತಿಗೆ ..	4— 8	5— 0
ರಂಗೂನು ಬೆ. ಗೋ. ಒಕ್ಕ...	6 — 8	7— 0
ಎಲ್ಲೂರು ಬೆ. ಮು. ಒಕ್ಕ .	3—14	4— 0
ಗೋಧಿ ಗೋಣಿ ಒಕ್ಕ ...	12 — 8	15— 8
ತೊಗರಿ ಗೋಣಿ ಒಕ್ಕ ...	11— 8	18— 8
ಹುರುಳಿ ಗೋಣಿ ಒಕ್ಕ ...	5— 0	5 — 4
ಕಡಲೆ ಗೋಣಿ ಒಕ್ಕ ...	9 — 8	10 — 8
ತೊಗರಿಬೇಳೆ ಗೋಣಿ ಒಕ್ಕ.	11— 0	19— 0
ಉದ್ದು ಗೋಣಿ ಒಕ್ಕ .	9— 0	9 — 8
ಹೆಸರು ಗೋಣಿ ಒಕ್ಕ	9—12	10— 8
ಊರುಬೆಲ್ಲ ಖಂಡಿ ಒಕ್ಕ	30— 0	35— 0
ಉಪ್ಪು ಗೋಣಿ ಒಕ್ಕ ...	4— 8	5— 4
ಕೊಬ್ರಿ ಖಂಡಿ ಒಕ್ಕ .	85— 0	90— 0
ಕೊಬ್ರಿ ಹಿಂಡಿ ಖಂಡಿ ಒಕ್ಕ ..	20 — 0	21— 0
ಎಳ್ಳಿಂಡಿ ಖಂಡಿ ಒಕ್ಕ ..	25 —	26 — 0
ಕೊಬ್ರಿ ಎಣ್ಣೆ ಮುಡಿ ಒಕ್ಕ..	4— 6	6— 4
ಎಳ್ಳೆಣ್ಣೆ ಮುಡಿ ಒಕ್ಕ ..	6— 0	7— 0
ಬಿಳಿಎಣ್ಣೆ ಬಟ್ಟಿಗೆ ಒಕ್ಕ	6— 5	7— 5
ದೋಣಿಸಕ್ಕರೆ ಮು. ಒಕ್ಕ	2— 11	2 —12
ಮೆಣಸು	4— 6	6— 0
ಸಾಸಿವೆ ಮುಡಿ ಒಕ್ಕ	5 — 8	6— [illegible]
ಕಾಳುಮೆಣಸು ಖ ಒಕ್ಕ .	97 — 8	100 [illegible]
ಯೇಲಕ್ಕಿಬೀಜ ಮಣಕ್ಕೆ	80— 0	85— [illegible]
ಜೀರುಬೀಜ ಮು. ಒಕ್ಕ	3 — 14	4— [illegible]
ಕಚ್ಚಿನ ಖಂಡಿ ಒಕ್ಕ	50— 0	55— [illegible]
ಕಾಂಬ್ರುಕಗಡು ಮು ಒಕ್ಕ	14— 12	16— [illegible]
ಕಾಂಬ್ರುಕಾತ್ರಗಳು ಮು ಒಕ್ಕ	17 — 0	18— [illegible]
ಚಕ್ಕೆಬೆಳ್ಳಿ ಸೇರು ಒಕ್ಕ	13— 8	14— [illegible]
ಹುತ್ತಾರ ಚಗಡು ಮು ಒಕ್ಕ	12 — 0	12— [illegible]
ದವಸು ಒಕ್ಕ	22— 4	22— [illegible]
ಹುಣಸೆ ಹುಳಿ ಖಂಡಿ ಒಕ್ಕ	40— 0	45— [illegible]
ಪೇಟಿಂಟ್ ಕಾಫಿ ಖಂಡಿ ಒಕ್ಕ	140— 0	148— [illegible]
ಫುಟೇರಿ ಕಾಫಿ ಖಂಡಿ ಒಕ್ಕ	192— 0	195— [illegible]
ಮಡಿಕೇರಿ ಪಿಲಕ್ಕೆ	67— 0	70 —

(೫ನೇ ಪುಟದಿಂದ ಮುಂದುವರಿದುದು)

ಏನು ಮಾಡಬೇಕೋ ನನಗೆ ಗೊತ್ತಾಗುವದಿಲ್ಲ ಅಪ್ಪಯ್ಯ' ಹೇಳು, ಹೇಳು, ನಾನೇನು ಮಾಡಬೇಕು, ಅಪ್ಪಯ್ಯ' ಪ್ರಾಣ ಕೊಟ್ಟರಾಗಬಹುದೆ?' ಎಂದು ಸಾವಿತ್ರಮ್ಮ ಹುಚ್ಚಿಯಂತೆ ಪ್ರಲಾಪಿಸಿದಳು

ತಮ್ಮಯ್ಯ ಮಾಸ್ತ ಕಿಂಕರ್ತವ್ಯ ಮೂಢರಾದರು ಎತ್ತರವಾದ ಪರ್ವತ ಶಿಖರದಿಂದ ಹರಿದು ಬರುವ ಮಳೆಗಾಲದ ಎರಡು ಪ್ರವಾಹಗಳಂತೆ ಅವರು ಕಣ್ಣುಗಳಿಂದ ದುಃಖಾಶ್ರುಗಳು ಸುರಿದು ಬಂದವು

ಮಧ್ಯಾಹ್ನವಾಯಿತು, ಸಾಯಂಕಾಲವಾಯಿತು, ರಾತ್ರಿಯಾಯಿತು, ಒಬ್ಬರೂ ಒಂದು ತಟಕು ನೀರು, ಒಂದು ಕಾಳು ಅನ್ನ ಬಾಯಿಗೆ ಹಾಕಲಿಲ್ಲ. ರಾತ್ರಿ ಹತ್ತು ಘಂಟೆಯ ಸುಮಾರಿಗೆ ತಮ್ಮಯ್ಯ ಮಾಸ್ತ ಕಣ್ಣು ರೆಪ್ಪೆಗಳು ಒತ್ತಿಕೊಂಡವು.

ಸ್ವಲ್ಪ ಹೊತ್ತಿನಲ್ಲೇ, ತಮ್ಮಯ್ಯಮಾಸ್ತ ಒಂದು ಕೆಟ್ಟ ಕನಸು ಕಂಡು ಎಚ್ಚತ್ತರು. ಸಾವಿತ್ರಮ್ಮನು ಬಾವಿಗೆ ಬಿದ್ದು ಪ್ರಾಣ ತೆಗೆದುಕೊಂಡಂತೆ ಅವರಿಗೆ ಭಾಸವಾಗಿತ್ತು. ಇವರು ಒಳಗೆ ನೋಡಿದರು ಅಲ್ಲಿ ಯಾರೂ ಇಲ್ಲ. ಬಾಗಿಲು ತೆರೆದು ಹೊರಗೆ ಬಂದರು. ಅಲ್ಲಿ ಕೂಡ ಯಾರೂ ಇಲ್ಲ ನೆಟ್ಟಗೆ ಶಾಲೆಯ ಕಡೆಗೆ ನಡೆದರು ಪೇಟೆಯ ನಡು ಮಧ್ಯದಲ್ಲಿ ಶಾಲೆಯಿದ್ದಿತಾದರೂ ತಮ್ಮಯ್ಯ ಮಾಸ್ತ ಹೋಗುವದನ್ನು ಯಾರೂ ಗುರುತಿಸಲಿಲ್ಲ. ಆಗ ನಡುರಾತ್ರಿ! ಗುರುತಿಸುವರಾದರೂ ಹೇಗೆ ಸಾಧ್ಯ!

ಮರುದಿನ ಬೆಳಗ್ಗೆ ನೆರೆಕರೆಯ ಹೆಂಗಸರು ಬಾವಿ ನೀರು ಎತ್ತಲಿಕ್ಕೆ ಬಂದಾಗ ಅದರಲ್ಲಿ ಎರಡು ಶವಗಳನ್ನು ಕಂಡರು. ಒಂದು ತಮ್ಮಯ್ಯ ಮಾಸ್ತರದ್ದು, ಇನ್ನೊಂದು ಸಾವಿತ್ರಮ್ಮನದ್ದು.

ವರ್ತಮಾನ ಮಿಂಚಿನಂತೆ ಹರಡಿತು. ಪೋಲೀಸರು ಬಂದು ಶವಗಳನ್ನು ಆಸ್ಪತ್ರೆಗೆ ಸಾಗಿಸಿದರು. ಡಾಕ್ಟರರು ಪರೀಕ್ಷೆ ಮಾಡಿ

'ಆತ್ಮಘಾತ' ಎಂದರು.

ರಂಗರಾಯನಿಗೆ ಈ ವರ್ತಮಾನ ತಿ[illegible] ಯಿತೋ ಇಲ್ಲವೋ ಗೊತ್ತಿಲ್ಲ, ಅವನು ಅಂದೆ ಸಕ್ಕಿದ್ದನೆಂದು. ಕೆಲವರು ಜೋಗಿಯಾಗಿರುತ್ತಾರೆ ಅಲ್ಲಿ, ಹುಚ್ಚನಾಗಿ ಊರೂರು ಅಲೆಯುತ್ತಾನೆ ಎಂದು ಬೇರೆ ಕೆಲವರು ಹೇಳುತ್ತಾರೆ ಆದ[illegible] ನೋಡಿದವರು ಒಬ್ಬರೂ ಇಲ್ಲ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟು ಮುನ್ಸಿಫ್ ಕೋರ್ಟಿನಲ್ಲಿ

O S No 416/3[illegible]

ಕೇಪುಂಜ ಅಂಬಾಡಿಯ ಅಳಿ[illegible] ಕೂಡ್ಲು ಗ್ರಾಮದ ಕಾವುಗೋಳಿಯಲ್ಲಿ ರುವವ—ವಾ[illegible]

ಮತ್ತು

ತಿನಕಾವು ಭಟ್ಟ ವಾಸುದೇವಕಾವು ಭಟ್ಟರ ಮಗ ಕೂಡ್ಲು ಗ್ರಾಮದಲ್ಲಿರುವವ—ಪ್ರತಿವಾ[illegible]

ಇವರೊಳಗೆ

ಪ್ರತಿವಾದಿಯು ವಾದಿಗೆ ತಾರೀ[illegible] 22—6—1934ರಲ್ಲು ರೂಪಾಯಿ 100ಕ್ಕೆ ಬ[illegible] ಕೊಟ್ಟ ಕೈವಟ್ಟ ಪ್ರಕಾರ ಬಾಕಿ ಬರತಕ್ಕ ಅಸ[illegible] ಬಡ್ಡಿ ಖರ್ಚು ರೂಪಾಯಿ 118—14—0ನ[illegible] ಬರಮಾಡಿಕೊಳ್ಳುವರೆ ದಾಖಲು ಮಾಡಿದ ವ[illegible]ಲ್ಯಂಡೆ ವ್ಯಾಜ್ಯವು ತಾರೀಕು 11-8-1937 ವಿಚಾರಣೆಗೆ ಇಟ್ಟಿರುತ್ತದೆಂತಲೂ ಆ ಕುರಿ[illegible] ಆಕ್ಷೇಪವಿದ್ದರೆ ಆ ದಿವಸದಲ್ಲಿ ಹಾಜರಾ[illegible] ದಾಖಲು ಮಾಡತಕ್ಕದ್ದು ತಪ್ಪಿದರೆ ವ್ಯಾಜ್ಯ ಯೆಕ್ಸ್ ಪಾರ್ಟಿಯಿಂದ ತೀರ್ಮಾನ ಮಾಡಲ[illegible]ದೀತು ಎಂತ ಈ ಮೂಲಕ ಪ್ರತಿವಾದಿಗೆ [illegible] ಸೋಚಾಗುತ್ತದೆ.

ಕಾಸರಗೋಡು 27—7—37 } **K Devadas Shenoi,**
Vakil for Plainti[illegible]

ಕಾಂಗ್ರೆಸಿಗೆ ಮುಸ್ಲಿಂ ಆಧಾರವು ಹೆಚ್ಚುತ್ತದೆ

ಮಟ್ಟ ಪ್ರಾಂತ್ಯದಲ್ಲಿ ಹಜ್ಜಾರ ಮಂದಿ ಮುಸ್ಲಿಮರು ಕಾಂಗ್ರೆಸ್ ಸದಸ್ಯರಾಗಿ ಸೇರಿರುರು. ಹೀಗೆಂದು ಮುಸ್ಲಿಮ್ ಸಂಪರ್ಕ ಸಮಿಯ ಅಧ್ಯಕ್ಷರ ವರದಿಯಾಗಿರುತ್ತದೆ. ಅನೇಕ ಮುಸ್ಲಿಮ ಪ್ರಮುಖರು ಈ ಕುರಿತು ನಾಯಕತ್ವ ವಹಿಸಿರುವರು. ಅಲ್ಲಿನ ಪ್ರಮುಖ ಮುಸ್ಲಿಂ ನಾಯಕರೊಬ್ಬರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಸಭೆಯಲ್ಲಿ ಅನೇಕ ಮುಸ್ಲಿಮರು ಕಾಂಗ್ರೆಸ್ ಪ್ರತಿಜ್ಞೆಗೆ ಸಹಿ ಹಾಕಿರುವರು.

ಸಾವಿರಗಟ್ಲೆ ದನಗಳ ಕೊಲೆಯು ನಡೆಯುತ್ತದೆ

ಅವುಗಳ ಚರ್ಮಕ್ಕಾಗಿ. ಈ ಕುರಿತಾಗಿ ಬಾಬು ಸತೀಶ್ ಚಂದ್ರದಾಸ ಗುಪ್ತರವರು ಹರಿಜನ ಪತ್ರಿಕೆಯಲ್ಲಿ ಹೀಗೆ ಬರೆದಿರುವರು-(ಬಂಗಾಳ ಮತ್ತು ಬಿಹಾರಿನ ಕುರಿತು)

ಎಳೆ ಪ್ರಾಯದ ದನಗಳ ಚರ್ಮಗಳಿಗೆ ಒಳ್ಳೆ ಕ್ರಯವು ದೊರಕುವುದರಿಂದ, ಅವುಗಳು ನೂರುಗಟ್ಟೆಯಲ್ಲಿ ಕೊಲೆಮನೆಗೆ ಅಟ್ಟಲ್ಪಡುತ್ತವೆ. ಹಿಂದೆ ಮೂರರಲ್ಲಿ ಒಂದು ದನವನ್ನು ಕೊಲೆಗೆಳೆಯುವುದು, ಇಂದು ಜುಮ್ಲಾ ಸಂಖ್ಯೆಶೇ. ೯೦ ಸಲೆಯಾಗಿ ನಿಂತಿರುತ್ತದೆ

ಕೊಲೆಮಾಡಲು ದನಗಳನ್ನು ಒದಗಿಸುತ್ತಿರುವವರು ಹೆಚ್ಚಾಗಿ ಹಿಂದುಗಳೆ. ಹಿಂದೂಗಳಲ್ಲಿ ಹೆಚ್ಚಿನವರು ದನಗಳನ್ನು ನೇಗಿಲಿಗೆ ಉಪಯೋಗಿಸಿ, ಎಮ್ಮೆಗಳನ್ನು ಹಾಲಿಗಾಗಿ ಉಪಯೋಗಿಸುತ್ತಾರೆ.

ದನಗಳ ಕೊಲೆಯು ಅತ್ಯಂತ ಭಯಂಕರ ವೇಗದಿಂದ ನಡೆಯುವುದರಿಂದ, ಅವುಗಳ ಮಾಂಸಗಳಿಗೆ ಗಿರಾಕಿಗಳೆ ಇಲ್ಲವಾಗಿ, ಮಾಂಸದ ಕ್ರಯವು ಬಹಳವಾಗಿ ಇಳಿದುಬಿಟ್ಟಿದೆ. ಕೆಲವು ಹಳ್ಳಿಗಳಲ್ಲಿ ಮಾಂಸವನ್ನು ಮನೆ ಮನೆ ಮಾರಾಟಕ್ಕೆ ಒಯ್ಯಲಾಗುತ್ತಿದೆ.

ಎಸೆಂಬ್ಲಿ ಸದಸ್ಯರು ವಂತಿಗೆ ಹಾಕಬೇಕು

ಮಹಾಜನ ಸಂಪರ್ಕ ಚಳವಳಿಕ್ಕೆ. ಹೀಗೆಂದು ಮಹಾಜನಸಂಪರ್ಕ ಚಳವಳವು ಭಂಸಾಗಿ ನಡೆಸುವ ಕುರಿತು, ಅಲಹಾಬಾದ್ ಜಿಲ್ಲಾ ಕಾಂಗ್ರೆಸ್ ಕಮಿಟಿಯವರ ನಿರ್ಣಯವಾಗಿರುತ್ತದೆ

ಈಗ ಆ ಬಗ್ಗೆ ಇರುವ ಮೂವತ್ತು ಸಮಿತಿಗಳನ್ನು ೭೦ಕ್ಕೆ ಹೆಚ್ಚಿಸಬೇಕಾಗಿಯೂ, ಆ ಸಮಿತಿಗಳಿಗೆ ಕಾರ್ಯ ನಡೆಸಲು ನಿಯಮಿತ ಗ್ರಾಂಟು ಕೊಡಬೇಕಾಗಿಯೂ, ಆಯಾಯ ವಿಭಾಗಗಳ ಕಾಂಗ್ರೆಸ್ ಎಸೆಂಬ್ಲಿ ಸದಸ್ಯರು ಅವರಿಗೆ ದೊರಕುವ ತಲಬು, ಭತ್ತೆ ಇತ್ಯಾದಿಯ ಶೇ. ೫ರ ಸಲೆ ಈ ಕಾರ್ಯಕ್ಕೆ ವಂತಿಗೆ ಕೊಡಬೇಕಾಗಿಯೂ,ಅದು ನಿರ್ಣಯ ಮಾಡಿರುತ್ತದೆ.

ಸನ್ಯಾಸಿಯರು ಹರಿಜನ ಸೇವಕರು

ಕಾಶೀವಾಡಿನಲ್ಲಿ ಒಂದು ಪ್ರಾಮುಖ್ಯ ಹಿಂದೂ ದೇವಾಲಯವು ಹರಿಜನರಿಗೆ ತೆರೆಯಲ್ಪಟ್ಟಿತೆ. ಗೋಕುಲ ಬಾಬಾ ಎಂಬ ಸಾಮಾಜಿಕ ಸುಧಾರಣೆ, ಅಸ್ಪೃಶ್ಯತಾ ನಿವಾರಣೆ, ಇತ್ಯಾದಿಗಳಿಗೆ ಪರಿಶ್ರಮಿಸಿದ ಪವಿತ್ರ ವ್ಯಕ್ತಿಗಳ ಸ್ಮಾರಕಾರ್ಥವಾಗಿ ಅವರ ವಿಧವೆಯು ನಾಯಕತ್ವದಲ್ಲಿ, ಅವರ ಕುಟುಂಬದ ದೇವಾಲಯದಲ್ಲಿ ಎಲ್ಲಾ ಹಿಂದೂಗಳಿಗೆ ಪ್ರವೇಶ ಕೊಡಬೇಕಾಗಿ ನಿರ್ಣಯವಾಗಿ ಈ ಮಹತ್ಕಾರ್ಯದ ಪ್ರಾರಂಭವು ಮೊನ್ನೆ ದಿನ ನಡೆಯಿತು.

ಪೂನೆಯಲ್ಲಿ ರಾನಡೆ ಮಂದಿರ

ಕಾಂಗ್ರೆಸ್ ಮಂದಿರವೊಂದನ್ನು ಪೂನೆಯಲ್ಲಿ ರಚಿಸಬೇಕಾಗಿಯೂ, ಅದಕ್ಕೆ ರಾನಡೆ ಮಂದಿರವೆಂದು ನಾಮಾಂಕಿತವಾಗಬೇಕೆಂದೂ ನಿರ್ಧಾರವಾಗಿದೆ. ಆ ಬಗ್ಗೆ ಅಧ. ಕಾಂಗ್ರೆಸ್

ಆರೋಗ್ಯವೇ ಪ್ರಥಮಸ್ಥಾನವನ್ನು ಹೊಂದುತ್ತದೆ.

ನಿಮ್ಮ ಯುವಕರನ್ನು ವಿಷಕ್ರಿಮಿಗಳಿಂದ ರಕ್ಷಿಸಬೇಕಾದರೆ ಯಾವಾಗಲೂ ಲೈಫ್‌ಬಾಯನ್ನೇ ಉಪಯೋಗಿಸಿ.

ನಿಮ್ಮ ಮಕ್ಕಳ ಆರೋಗ್ಯವನ್ನು ಕೆಡಿಸುವ ವಿಷ ಕ್ರಿಮಿಗಳನ್ನು ನೀವು ನೋಡಲಾರಿರಿ. ಆದರೆ ನೈರ್ಮಲ್ಯಕ್ಕೆ ಅದು ಯಾವಾಗಲೂ ಇರುತ್ತೆಂಬುದು ಗೊತ್ತಿದೆ. ಅವೆಲ್ಲೂ ವಿಶೇಷವಾಗಿ ಕೊಳೆಯಲ್ಲಿ ಇದ್ದಾದರೂ ನಿಮ್ಮ ಮಕ್ಕಳು ಆಟವಾಡಿ ಬಂದನಂತರ ಅವರ ಕೈ ಕಾಲುಗಳು ಎಷ್ಟು ಧೂಳಿನಿಂದ ಇರುತ್ತೆಂಬುದನ್ನು ಗಮನಿಸಿರಿ. ಆ ಧೂಳಿನಲ್ಲಿ ಬಲಮುದಾದ ವಿಷಕ್ರಿಮಿಗಳಿವೆಯೆಂಬುದನ್ನು ಮರೆಯಬೇಡಿ. ನಿಮ್ಮ ಮಕ್ಕಳನ್ನು ರೋಗದಿಂದ ಕಾಪಾಡಿ. ಅವರು ಯಾವಾಗಲೂ ಲೈಫ್‌ಬಾಯ್ ಉಪಯೋಗಿಸುವಂತೆ ಮಾಡಿರಿ. ಅದರ ವಿಶಾಲವಾದ ನೊರೆಯು ಬಹು ಬೇಗ ಎಲ್ಲಾ ಕೊಳೆಯನ್ನು ಹೋಗಿಸಿ ಮಕ್ಕಳನ್ನು ಆರೋಗ್ಯವಾಗಿರುವಂತೆ ಮಾಡುತ್ತದೆ.



ಲೈಫ್ ಬಾಯ್ ಸಾಬೂನು

LIFEBUOY SOAP



ಇಂಡಿಯಾದಲ್ಲೇ ವಸ್ತುಗಳ ಉತ್ಪಾದನೆ ...

LEVER BROTHERS (INDIA) LIMITED

KANARE

ಗ್ರಹಸ್ಥರ ಒಂದು ಸಮಿತಿಯು ರಚನೆಯಾಗಿ ನಿಧಿ ಕೂಡಿಸುವ ಆಲೋಚನೆಗಳು ನಡೆದಿವೆ ರೂಪಾಯಿ ೫೦,೦೦೦ ಇದಕ್ಕೆ ಕೂಡಿಸಲಾಗುವುದು-ಸಮಸ್ತ ಮಹಾರಾಷ್ಟ್ರದಲ್ಲಿ ಪ್ರವಾಸಗೈದು, ಪ್ರತಿಯೋರ್ವ ಕಾಂಗ್ರೆಸ್‌ವಾದಿಯಿಂದ ಒಂದೊಂದು ರೂಪಾಯಿ ಪ್ರಕಾರ ವಸೂಲಿ ಮಾಡಿ, ಮೇಲಿನ ಮೊಬಲಗನ್ನು ಕೂಡಿಸುವ ಆಲೋಚನೆಯು ನಡೆದಿರುತ್ತದೆ

ಹಿಂದೀ ಪ್ರಚಾರ ಕಾರ್ಯಕ್ಕೆ

ಹಿಂದೀ ಪ್ರಚಾರಕ್ಕೆ ತತ್ಕಾಲಕ್ಕೆ ಒಳ್ಳೆ ಆರ್ಥಿಕ ಸಹಾಯವು ದೊರಕಿರುತ್ತದೆ. ಇಂದೋರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ, ಒಂದು ಲಕ್ಷ ರೂಪಾಯಿ ಕೂಡಿಸಿ ಕೊಡುತ್ತೇವೆಂಬ ಭರವಸೆಯ ಮಾತುಗಳಿದ್ದವು. ಆದರೆ ಅಲ್ಲಿ ೩೨ ಸಾವಿರ ರೂಪಾಯಿಗಳು ಮಾತ್ರ ಒದಗಿದುವು. ಅದನ್ನು ಭರ್ತಿ ಮಾಡಲು, ಜಮ್ನಾಲಾಲ್ಜಿಯವರು ರೂ ೨೫,೦೦೦ ಕೊಟ್ಟರು.



ಜಮ್ನಾಲಾಲರು.

ಈಗೆ ಹಿಂದೀ ಪ್ರಚಾರಕ ಜಮ್ನಾಲಾಲರಿಗೆ ಇನ್ನೊಂದು ೭೫ ಸಾವಿರವು ದೊರಕಿರುತ್ತದೆ. ಕಾನ್‌ಪುರದ ಕಮಲಾ ಪಟ್ಟ ಎಂಬ ಪರಧರ್ಮ ನಿಧಿಯಿಂದ. ... ಬದಲಾಗಿ ಹಿಂದೀ ಪ್ರಚಾರಕ್ಕೆ ಈಗ ರೂಪಾಯಿ ೧,೨೫,೦೦೦ ದೊರಕಿರುತ್ತದೆ.

ಬೆಳ್ಳುಳ್ಳಿ ಮತ್ತು ಹಳದಿಗಡ್ಡೆ

ಭಾರತೀಯ ಆಯುರ್ವೇದವು ಮಹತ್ವಾದ ಶಾಸ್ತ್ರವೆಂದೂ, ಅದರ ಸೂತ್ರಗಳನ್ನು ಸರಿಯಾಗಿ ಅನುಸರಿಸಿದರೆ, ಮಾನವವರ್ಗದ ರೋಗ ಚಿಕಿತ್ಸೆಯನ್ನು ಅತಿ ಸುಲಭದಲ್ಲೂ, ಬೇಗನೆಯೂ, ಮಾಡಬಹುದೆಂದೂ ಭಾರತೀಯ ಮತ್ತು ಪಾಶ್ಚಿಮಾತ್ಯದ ಅನೇಕ ಮಹರ್ಷಿಯರುಗಳ ಅಭಿಪ್ರಾಯವಾಗಿರುತ್ತದೆ. ಕೇವಲ ಕೆಲವೆ ಗಿಡಮೂಲಿಕೆಗಳಿಂದ ಆಶ್ಚರ್ಯಕರ ರೀತಿಯಲ್ಲಿ ಮಹಾ ರೋಗಗಳನ್ನು ಗುಣಪಡಿಸಬಹುದು. ಆದರೆ ಗಿಡಮೂಲಿಕೆಯ ಸರಿಯಾದ ಉಪಯೋಗದ ಕುರಿತು ಜ್ಞಾನ ಮಾತ್ರವಾಗಬೇಕು. ಆಯುರ್ವೇದದ ಕಡೆಗೆ ಭಾರತೀಯರು ತೋರಿಸಿದ ನಿರ್ಲಕ್ಷಭಾವದಿಂದ, ಇಂದಿನ ಅನೇಕ ಸಂಕಷ್ಟಗಳನ್ನು ವ್ಯರ್ಥವಾಗಿ ಅನುಭವಿಸುವವರಾಗಿದ್ದಾರೆ. ಬೆಳ್ಳುಳ್ಳಿಯು ಎಷ್ಟು ಸಾಮಾನ್ಯವಾದುದು. ಅದರಲ್ಲಿ ವಿಚಿತ್ರಕರದ ಔಷಧಿಗುಣಗಳು ಉಂಟೆಂದು ಹೇಳಿದರೆ ಎಷ್ಟು ಜನರಿಗೆ ಆಶ್ಚರ್ಯವೆನಿಸದು. ಆದರೆ ಬೆಳ್ಳುಳ್ಳಿಯಲ್ಲಿ ಅತಿ ಶ್ರೇಷ್ಠವಾದ ಗುಣಗಳಿವೆ ಎಂದು ಕಂಡುಹಿಡಿಯಲಾಗಿದೆ. ರಕ್ತದ ಒತ್ತಾಟವು ಹೆಚ್ಚಿದುದನ್ನು ಕಡಿಮೆಮಾಡಲು ಬೆಳ್ಳುಳ್ಳಿಯಲ್ಲಿ ಯೋಗ್ಯತೆ ಇರುವುದೆಂದು ಮಹಾತ್ಮಾಜೀಯವರು ಕಂಡುಹಿಡಿದಿರುವರು. ಅಲ್ಲದೆ ಮನುಷ್ಯನಲ್ಲಿರುವ ಸಾಧಾರಣ ಶೀತ ಸಂಬಂಧ ರೋಗಗಳನ್ನು ಈ ಬೆಳ್ಳುಳ್ಳಿ ಸೇವನೆಯಿಂದ ಗುಣಪಡಿಸಬಹುದಂತೆ.

ಹಾಗೆಯೇ ಸಾಮಾನ್ಯವೆನಿಸುವ ಹಳದಿಗೆಡ್ಡೆಯಿಂದ ಪಿತ್ತಕೋಶ ಸಂಬಂಧದ ಅನೇಕ ರೋಗಗಳನ್ನು ಗುಣಪಡಿಸಬಹುದಂತೆ.

ಅವುಗಳನ್ನು ಹೇಗೆ ಉಪಯೋಗಿಸಬೇಕು ಯಾವಾಗ ಉಪಯೋಗಿಸಬೇಕು ಎಂಬುದರ ಕುರಿತು, ಅರಿತ ಆಯುರ್ವೇದ ಪಂಡಿತರೊಡನೆ

ದ್ರಾವಕಾಧಿಕ್ಯ

ಉದರದೊಳಗೆ ದ್ರಾವಕಾಧಿಕ್ಯವಾಗುವುದು ಆಧುನಿಕ ಕಾಲದ ಒಂದು ದಂಡನೆಯು-ಕಾಲನಿಯಮವಿಲ್ಲದ ಊಟಗಳು, ಅಜೀರ್ಣದಿಂದ ಆಹಾರವು ಕೊಳೆಯುವುದು, ಅಯೋಗ್ಯ ಆಹಾರ, ಮನೋವ್ಯಥೆ, ಇವೆ ಮೊದಲಾದವುಗಳು ಅದರ ಕಾರಣಗಳು. ಕಾರಣ ಯಾವುದೆ ಇರಲಿ ಅದನ್ನು ಖಂಡಿತವಾಗಿಯೂ ಗುಣಪಡಿಸಬಹುದು.

ದ್ರಾವಕಾಧಿಕ್ಯವನ್ನು ಗುಣಪಡಿಸಲು ನೀವು ಅಲ್ಕೇಲಿ ಪದಾರ್ಥವನ್ನು ಸೇವಿಸಬೇಕು ಅದು ದ್ರಾವಕ ವಿರೋಧಿಯು. ಖಾತ್ರಿ ಗುಣಗಳುಳ್ಳ, ಜನಜನಿತವಾದ ಹೆಚ್ಚಾಗಿ ಉಪಯೋಗಿಸಲ್ಪಡುವ, ಈ ಅಲ್ಕೇಲಿ ಹುಡಿಯೆಂದರೆ, ಅದು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರು. ಅದು ಪೆಟ್ಟಿಗೆಯೊಳಗಿರುವ ಬಾಟ್ಲಗಳಲ್ಲಿ ಮಾರಲ್ಪಡುತ್ತದೆ. ಪೆಟ್ಟಿಗೆಯ ಮೇಲೂ ಬಾಟ್ಲಿಗಳ ಮೇಲೂ

Alex. C. Maclean

ಸಹಿಯಿರುವುದೆ ಖಾತ್ರಿ ಮಾಲು. ಪೆಟ್ಟಿಗೆಯ ಮೇಲೆ ರಕ್ಷಣೆಯ ಬಗ್ಗೆ ಒಂದು ಕೆಂಪು ಮುದ್ರೆ ಇರುವುದು. ಒಂದು ಚಮಚೆಯಷ್ಟು ಈ ಹುಡಿಯನ್ನು ನೀರಿನೊಡನೆ ಭೋಜನದ ತರುವಾಯ ಸೇವಿಸಿದರೆ ಆಗ ದ್ರಾವಕಾಧಿಕ್ಯದ ಭಯಾನಕ ಪರಿಣಾಮಕಾರಿಯಾಗುವ ಸಮಯವಾರಿಂದ ಅದರಿಂದ ಮಹಾ ಉಪಶಮನವು ದೊರಕುವುದು. ಉದರದೊಳಗಿನ ಒಂದು ಕಹಾಳುಭಾವವನ್ನು ತೆಗೆದು ಸಂತೋಷಮಯ ಭಾವನೆಯನ್ನುಂಟುಮಾಡುವುದು. ನಿಮ್ಮ ಆಹಾರವು ಸರಿಯಾಗಿ ಜೀರ್ಣವಾಗುತ್ತದೆ. ಅದು ಕೊಳೆಯುವುದು ನಿಂತದು ನಿಮಗೆ ತಿಳಿಯುವುದು

ದ್ರಾವಕಾಧಿಕ್ಯವನ್ನು ಕೂಡಲೆ ಗುಣಪಡಿಸಬೇಕು. ಅದು ಉದರದ ಅನೇಕ ಮಹಾರೋಗಗಳಿಗೆ ತಳಹದಿಯು. ಅದರ ನಿರ್ಲಕ್ಷವಾದರೆ ಉದರದೊಳಗೆ ಹುಣ್ಣು ಇತ್ಯಾದಿಗಳು ಉಂಟಾಗುವುವು. ಮೆಕ್ಲೀನ್ ಪೌಡರು ಎಷ್ಟರ ಮಟ್ಟಿಗೆ ಗುಣಕಾರಿಯೆಂದರೆ, ಅದರಿಂದ ಕರುಳುಗಳ ಮೇಲೆ ನಡೆಯಬೇಕಾದ ಶಸ್ತ್ರಚಿಕಿತ್ಸೆಯನ್ನು ತಪ್ಪಿಸಲಾಗಿದೆ. ಆದರೂ ಆ ಮಹಾ ವ್ಯಾಧಿಗಳು ಉಂಟಾಗುವ ಮೊದಲೆ, ಮೆಕ್ಲೀನನ್ನು ಕ್ರಮವಾಗಿ ಸೇವಿಸಿ,ನಿಮ್ಮ ರಕ್ಷಣೆಯನ್ನು ಮಾಡಿಕೊಳ್ಳುವುದು ಉತ್ತಮ.

ನಿಮಗೆ ಖಾತ್ರಿ ಮಾಲು ದೊರಕುವಂತೆ ಜಾಗರೂಕರಾಗಿರಿ.

ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.-

ಜೆ ಎಲ್ ಮೋರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್.

ಸ್ಟೆಂಡಾರ್ಡ್ ಬಿಲ್ಡಿಂಗ್, ಹೊರ್ನ್ಬಿ ರೋಡ್, ಮುಂಬಾಯಿ



S. No. 66.

ಬಂಗಾಳ ಡೆಟಿನ್ಯೂಗಳ ಮತ್ತು ರಾಜಕೀಯ ಕೈದಿಗಳ ಬಿಡುಗಡೆ ಮಾಡಬೇಕೆಂದು ಈಗಿನ ಮಂತ್ರಿಮಂಡಳವು ತನ್ನ ಚುನಾವಣಾ ವಾಗ್ದಾನವನ್ನು ಮರೆತುಬಿಟ್ಟಿರುವುದನ್ನು ವಿರೋಧಿಸಲು, ಬಂಗಾಳದ ಮುಸ್ಲಿಮರು ಚಳವಳಿ ಮಾಡಿರುವರು.

ಆಚಾರ್ಯ ಪ್ರಫುಲ್ಲಚಂದ್ರ ರೇಯವರು.

ಪ್ರಸಿದ್ಧ ಭಾರತೀಯ ರಸಾಯನ ಶಾಸ್ತ್ರಜ್ಞರಾದ ಆಚಾರ್ಯ ಪ್ರಫುಲ್ಲ ಚಂದರ್ ರೇಯವರು, ಅರ್ಧ ಶತಮಾನದ ಕೋದಿನಾಲ ವಿಪರಿಶ್ರಮದ ನಂತರ ನಿವೃತ್ತರಾಗಿರುರು. ಆಚಾರ್ಯರು, ಶುದ್ಧ ಆಚಾರ್ಯರೇ ಗಿದ್ದರು. ಆ ವಿಜ್ಞಾನ ಕಾಲೇಜಿನ ಮುಂದಿ ಹೊಳಗೆ ಶಿಷ್ಯವೃಂದದೊಳಗೆ.

ಹೆಸರಿಗೆ ಮಾತ್ರ ಆಚಾರ್ಯರು ನಿವೃತ್ತರಾಗಿರುವರು, ಆದರೆ ಅವರು ಜೀವನದಲ್ಲಿರುವ ಕೆಲಸ, ಮತ್ತವರು ಇಲ್ಲಿಂದ ಹೊರಟ ನೋಲೂ ವ್ಯಾಪಕರೆ ಆಗಿರುವರು

ರಸಾಯನ ವಿಜ್ಞಾನದಲ್ಲಿ ನವೀನ ಶೋಧಕನ್ನು ನಡೆಯಿಸಿದ ಪ್ರಥಮ ಭಾರತೀಯರೆಂಬ ಗೌರವವು ಆಚಾರ್ಯರಿಗೆ ಸಲ್ಲತಕ್ಕದು ಕೇವಲ ಪರಿಶೋಧಕರಾಗಿಯೆ ಅವರ ಕೀರ್ತಿ ಎಲ್ಲ. ಉತ್ಸಾಹ ಹೊಂದಿದ ಪರಿಶೋಧನಾ ಅಭಿರುಚಿಯುಳ್ಳ ಅನೇಕ ವಿಜ್ಞಾನ ವಿದ್ಯಾರ್ಥಿಗಳ ಪಡೆಗಳನ್ನೆ ನಿರ್ಮಿಸಿದವರ. ಈ ಕಾರಣದಿಂದ ಆಚಾರ್ಯರು, ಭಾರತೀಯ ರಸಾಯನಾ ಶಾಸ್ತ್ರಾಲಯದ ಸ್ಥಾಪಕರೂ, ವ್ಯವಸ್ಥಾಪಕರೂ ಆಗಿರುವರು.

"ಒಬ್ಬನು ಎಲ್ಲಾ ಕಡೆಗಳಲ್ಲಿ ವಿಜಯವನ್ನು ಸೇರತಕ್ಕದು, ಆದರೆ ತನ್ನ ಮಗನ ಶಿಷ್ಯರ ಕೈಗಳಲ್ಲಿ ಆತನು ಸೋಲನ್ನು ನಿರೀಕ್ಷಿಬೇಕು" ಎಂಬ ಪ್ರಸಿದ್ಧ ಸಂಸ್ಕೃತ ವಾಕ್ಯವೆ ಅವರ ಧ್ಯೇಯವಾಗಿರುವುದು ಅವರ ಖ್ಯಾತಿಗೆ ಇದೆ ಧ್ಯೇಯವು ಕಾರಣವು ಬರೆ ವಿಜ್ಞಾನ ಪರಿಶೋಧನೆಯಲ್ಲ

ವಿಜ್ಞಾನದ ಆಪ್ತಭಕ್ತರು–ಅದನ್ನು ಮಾನವನಿಗೆ ಹೇಗೆ ಉಪಯುಕ್ತಗೊಳಿಸಬಹುದು, ಎಂಬುದರ ಕುರಿತು ಪರಿಶ್ರಮಿಸಿದವರು ರಸಾಯನಾ ಕೈಗಾರಿಕೆಗಳನ್ನು ಭರತ ಖಂಡದಲ್ಲಿ ಮೊದಲಾಗಿ ಸ್ಥಾಪಿಸಿದವರು–ಆಚಾರ್ಯರು ಈ ವಿಚಾರವು ಕಲ್ಕತ್ತೆಯ ಬಂಗಾಳ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ಸಂಸ್ಥೆಯ ಚರಿತ್ರೆಯಿಂದ ವಿಧಿತವಾಗುವುದು ಅಲ್ಲದೆ ಇತರ ಅನೇಕ ಕೈಗಾರಿಕೆಗಳಲ್ಲಿ ಅವರಿಗೆ ಸಂಬಂಧವಿರುವುದು ಅನೇಕ ಕೈಗಾರಿಕಾ ಸಂಸ್ಥೆಗಳ ಪ್ರವರ್ತಕರಾಗಿರುವರು

ಮಹತ್ತರ ಕೈಗಾರಿಕೆಗಳ ಕಡೆಗೆ ಮಾತ್ರವಲ್ಲ—ಆಚಾರ್ಯರಷ್ಟು ಖಾದಿ ಪ್ರೇಮಿಗಳು ಬೇರೊಬ್ಬರಿಲ್ಲ ಚರಕ ಮತ್ತು ಖಾದಿಯ ಕುರಿತು ಪ್ರಚಾರಕಾರ್ಯ ನಡೆಯಿಸಿದವರು

ಮಾನವನ ಗೋಳಿನ ನಿವಾರಣೆ ಕುರಿತು ಮಹಾ ಆಸಕ್ತಿಯುಳ್ಳವರು–ಕರುಣ ಹೃದಯಿಗಳು ಅನೇಕ ವರ್ಷಗಳ ಹಿಂದೆ ಉತ್ತರ ಬಂಗಾಳದಲ್ಲಿ ಮಹಾ ನೆರೆಯುಂಟಾಗಲು, ಸಂಕಟಕ್ಕೊಳಗಾದವರ ನಿವಾರಣೆಗಾಗಿ ಹೊರಡಿಸಿದ ಚಂದಾಗೆ ಪತ್ರದ ಓರ್ವ ಸಹಕಾರರು ಈ ಚಂದಾಗೆ ಮಹಾ ಪ್ರತಿಫಲವು ದೊರಕಿತು ನೆರೆಯಿಂದ ಸ್ಥಳಗಳಿಗೆ ತಾವು ಖುದ್ದಾಗಿ ಹೋಗಿ ಅಲ್ಲಿ ಉಪಶಮನ ಕಾರ್ಯಗಳಲ್ಲಿ ಭಾಗವಹಿಸಿದ್ದರು ನೆರೆಯ ಹಾವಳಿಗೆ ಒಳಗಾದವರಿಗೆ ಒಂದೊಂದು ಚರಕವನ್ನು ದರ್ಮಾರ್ಥವಾಗಿ ಕೊಡುವ ಏರ್ಪಾಡನ್ನು ಮಾಡಿ, ಅವರು ತಯಾರಿಸಿದ ನೂಲನ್ನು ಕ್ರಯಕ್ಕೆ ಕೊಂಡುಕೊಳ್ಳುವ ವ್ಯವಸ್ಥೆಯನ್ನು ಮಾಡಿದ್ದರು ಈ ರೀತಿಯಲ್ಲಿ ಅವರು ಪ್ರಾರಂಭಿಸಿದ ಚರಕದ ಮತ್ತು ಖಾದಿಯ ಕುರಿತು ಪ್ರಚಾರವು ಇನ್ನೂ ನಡೆಯುತ್ತಿದೆ.

ಇವತ್ತಿನ ವರೆಗೆ ನೂರಾರು ಮಂದಿ ವಿದ್ಯಾರ್ಥಿಗಳು, ವಿದ್ಯಾಭ್ಯಾಸಂಗಕ್ಕಾಗಿ ಇವರಿಂದ ವೇತನಗಳನ್ನು ಪಡೆದಿರುವರು. ಭರತಖಂಡದಲ್ಲಿ ವಿಜ್ಞಾನದ ಹಲವು ತರದ ಉದ್ಧಾರಕ್ಕಾಗಲೂ, ವಿಶ್ವವಿದ್ಯಾಲಯದ ಪ್ರೊಫೆಸರಾಗಿ ಅವರು ಹದಿನೈದು ವರ್ಷಗಳ ಸಂಬಳವು ಸಂಪೂರ್ಣವಾಗಿ ವ್ಯಯಿಸಲಾಗಿದೆ.

ಬರೆ ಬಾಯಿ ನುಡಿಗಳ ಅಧ್ಯಾಪಕರು [illegible]

ಜೀವಮಾನವೆ ಬೋಧನ ಪ್ರದಾಯಕವಾಗಿರುತ್ತದೆ ವಿದ್ಯಾರ್ಥಿಗಳು ಮಾತ್ರವಲ್ಲ–ಸರ್ವರಿಗೂ.

ಅತ್ಯಂತ ಸರಳ ಜೀವಿಗಳು ಇವರ ಸರಳ ವರ್ತನೆಯು ಕೆಲವು ಬಾರಿ ಹಾಸ್ಯಾಸ್ಪದವಾಗಿದ್ದರೂ,–ಆಚಾರ್ಯರೊಳಗೆ ಶ್ರೇಷ್ಠ ವ್ಯಕ್ತಿಯು ಇರುವುದು. ತಮ್ಮ ಜೀವಮಾನದ ಆರಂಭದಲ್ಲಿ ಬ್ರಹ್ಮಚಾರಿಗಳಾಗಿರಲು ದೀಕ್ಷೆ ಹೊಂದಿದವರು, ಇಂದಿಗೂ ಆಚಾರ್ಯರು ಶುದ್ಧ ಬ್ರಹ್ಮಚಾರಿಗಳಾಗಿಯೆ ಇರುವರು

ನಾಡುಗಳೆಂದರೆ ಅವರಿಗೆ ಪ್ರೇಮ ತನ್ನ ರಜಾ ಸಮಯವನ್ನು ಹೆಚ್ಚಾಗಿ ತನ್ನ ಮಾತೃ ನಾಡಿನಲ್ಲೂ, ಇನ್ನಿತರ ಹಳ್ಳಿಗಳಲ್ಲೂ, ಕಳೆಯುವುದು ಆಚಾರ್ಯರ ಕ್ರಮ.

ವಿಜ್ಞಾನಿಗಳಾಗಿ ಆಚಾರ್ಯರು, ಲೋಕ ವಿಖ್ಯಾತರು ಆದರೆ ಅದರ ಬದಲಾಗಿ ಪತ್ರಿಕಾಕರ್ತನ ಉದ್ಯಮವನ್ನು ಅವರು ಅನುಸರಿಸುತ್ತಿದ್ದರೆ, ಅಲ್ಲೂ ವಿಖ್ಯಾತರಾಗುತ್ತಿದ್ದರು ತನ್ನ ಹೆಸರಿನಲ್ಲೂ ಅನಾಮಧೇಯವಾಗಿಯೂ, ಅನೇಕ ಪ್ರಸಿದ್ಧ ಲೇಖಗಳನ್ನು ಬರೆದಿರುವರು ಮಹಾ ಸಾಹಿತ್ಯ ಪುರುಷರಾಗಿ ಬೆಳಗುವ ಯೋಗ್ಯತೆಯು ಆಚಾರ್ಯರಲ್ಲಿದೆ

ಆಚಾರ್ಯರು ಮಹಾ ದೇಶಭಕ್ತರು ಭಾರತೀಯರು–ಕೆಲವರು ಅವರು ಬರೆ ಬಂಗಾಳಿಗಳೆಂದೂ, ಪ್ರಾಂತಿಕ ಭಾವವು ಅವರಲ್ಲಿ ತುಂಬಾ ಇರುವುದೆಂದೆನ್ನುತ್ತಿದ್ದರೂ,–ಅವರಲ್ಲಿ ಹಿಂದೂ ಮಾತೆಗಾಗಿ ವಾತ್ಸಲ್ಯವೂ ಬಹಳವಿದೆ

ವೃದ್ಧಾಳುಗಳಾದ ಆಚಾರ್ಯರೂ, ಧಾರ್ಮಿಕ ಗುಣಗಳು ಬಹಳವಿದ್ದುಕೊಂಡು, ಆ ಅಡಿಕಟ್ಟಿನ ಮೇಲೆ ಆಚಾರ್ಯರ ಮಹತ್ತಾದ ಜೀವನವು ನಿಂತಿರುವುದು ಅವರ ಈ ಧಾರ್ಮಿಕ ಗುಣಗಳೆ ಅವರ ಅನೇಕ ವಿಧಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳಿಗೆ ಒಂದು ಪ್ರಾಮುಖ್ಯ ಕಾರಣವು

ಈಗ ತನ್ನ ಜೀವಮಾನದ ಸಾಯಂಕಾಲದಲ್ಲಿ, ಆಚಾರ್ಯರು ಒಂದು ರಂಗವನ್ನು ಬಿಟ್ಟು ಇನ್ನೊಂದು ರಂಗಕ್ಕೆ ಇಳಿದಿರುವರು ಗ್ರಾಮಗಳ ಪುನರುತ್ಥಾನ, ಉದ್ಧಾರ, ಅಭ್ಯುದಯ ಕೆಲಸದಿಂದ ನಿವೃತ್ತ ಹೊಂದಿದರೂ, ವಿಶ್ರಾಂತ ಹೊಂದುವವರು ಆಚಾರ್ಯರಲ್ಲ—ಮತ್ತೊಂದು ಹೊಸ ತರದ ಚಟುವಟಿಕೆಯಲ್ಲಿ ಕೈಹಾಕಿರುವರು—ಸುಮ್ಮನಿರುವುದು ಆಚಾರ್ಯರ ಸ್ವಭಾವವಲ್ಲ.

ಆಚಾರ್ಯರು ಕೈಕೊಂಡ ಈ ಹೊಸ ಕಾರ್ಯದಲ್ಲಿ ಯಶಸ್ಸನ್ನು ಪಡೆಯಲೆಂದು, ದೇವರೊಡನೆ ನಮ್ಮ ಪ್ರಾರ್ಥನೆ

"ಮೊಡರ್ನ್ ರಿವ್ಯೂ"

WANTED

Applications are invited from energetic young men for the posts of a TRAFFIC INSPECTOR and an assistant TRAFFIC INSPECTOR carrying a salary of Rs 25 to 30 and Rs 20 to 25 per month respectively and a consolidated travelling allowance of Rs 15 per month each. Applicants should have studied up to 6th Form. Preference will be given to GRADUATES

Applications should be made to the following address,

JOINT MANAGERS,
The Combined Booking Agency,
Mangalore.

ಜಿಂಜರ್ ರೋಜರ್ಸ್

ಇವಳು ಯಾವಾಗಲೂ ಸ್ವತಃ ಲೋಕಸುಂದರಿಯಾಗಿದ್ದಾಳೆ

ಜಿಂಜರ್ ರೋಜರ್ಸ್ ಳ ಸುಂದರ ನಸು ಚರ್ಮವನ್ನು ಮನೋಹರವಾಗಿಯೂ ನುಣುಪಾಗಿಯೂ ಮೃದುವಾಗಿಯೂ ಮತ್ತು ಚೊಕ್ಕಟವಾಗಿಯೂ ಇರುವಂತೆ ಲಕ್ಸ್ ಟಾಯಿಲೆಟ್ ಸಾಬೂನು ಇಡುತ್ತದೆ ಅವಳ ಸೌಂದರ್ಯವು ಎಷ್ಟು ಆಹ್ಲಾದಕರವಾಗಿದೆ

ಚಲನಚಿತ್ರ ನಟಿಯರಂತೆ ಆಚರಿಸಿ ಲಕ್ಸ್ ಟಾಯಿಲೆಟ್ ಸಾಬೂನನ್ನು ನಿಮ್ಮ ಸೌಂದರ್ಯೋಪಾಸನೆಯದನ್ನಾಗಿ ಮಾಡಿಕೊಳ್ಳಿರಿ ಅದರ ಬೆಣ್ಣೆಯಂಥ ಬಿಳುಪಾದ ನೊರೆಯು ಚರ್ಮರಂಧ್ರಗಳಲ್ಲಿ ಬಹಳ ದೂರದವರೆಗೂ ಪ್ರವೇಶಿಸಿ ಕೊಳೆಯನ್ನು ಹೊರಗೆಹೋಗಿಸಿ ಚರ್ಮವನ್ನು ಮೃದುವಾಗಿ ಯೌವನಸ್ಥರಂತೆ ಮಾಡುತ್ತದೆ ನೀವು ಅದರ ಆನಂದದಾಯಕ ಸುವಾಸನೆಯನ್ನೂ ಸಹಾ ಪ್ರೀತಿಸುವಿರಿ

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP



ಇಂಡಿಯಾದಲ್ಲೇ ವನಸ್ಪತಿ ಎಣ್ಣೆಯಿಂದ ತಯಾರಿಸಿದ್ದು

L.T. 590-50

LEVER BROTHERS (INDIA) LIMITED
KANARESE

ಖಾನ್ ಅಬ್ದುಲ್ ಘಫರ್ ಖಾನರು

ಪಂಜಾಬನ್ನು ಸೇರಬಾರದಾಗಿ ಇದ್ದ ನಿರ್ಬಂಧವನ್ನು ಹಯಾತ್ ಖಾನ್ ಸರಕಾರವು ತೆಗೆದು ಹಾಕಿರುತ್ತದೆ ಅಲ್ಲದೆ ರಾಜಕೀಯ ಕೈದಿಗಳ ಬಿಡುಗಡೆ ಕುರಿತು ಪಂಜಾಬ ಸರಕಾರವು ಕೆಲ ಮಟ್ಟಿನ ಆಲೋಚನೆಯನ್ನು ಮಾಡಿರುತ್ತದೆ ಈ ವಿಚಾರದಲಿ ಈಗ ಹಿಂದುಳಿದ ಪ್ರಾಂತ್ಯವೆಂದರೆ ಬಂಗಾಳ ಮಾತ್ರ ಬಂಗಾಳದ ಡೆಟಿನ್ಯೂಗಳ ವಿಚಾರವನ್ನು ಮುಖ್ಯ ಮಂತ್ರಿ ಹಕ್ಕರು ಮರತೆ ಬಿಟ್ಟಿರುವರು

"ಮುಸ್ಲಿಮ ಸಂಪರ್ಕ ಚಳವಳವನ್ನು ಕಾಂಗ್ರೆಸ್ಸು ಈ ಮೊದಲೆ ಪ್ರಾರಂಭಿಸುತ್ತಿದ್ದರೆ ಇನ್ನೂ ಉತ್ತಮವಿತ್ತು" ಎಂದು ಖಾನರ ಅಭಿಪ್ರಾಯ

ಖಾನರು ಈಗ ಬಿಹಾರದತ್ತ ಕಡೆ ತೆರಳಿರುವರು

ಭಾರತೀಯ ಸಾಂಸ್ಕೃತಿಕ ಪರಿಷತ್ತು ಸರ್ ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಬರುವ ದಸಂಬರದಲ್ಲಿ ಜರುಗುವುದಾಗಿಯೂ ವ್ಯಾಸರಾಯರು ಅದರ ಪ್ರಾರಂಭೋತ್ಸವವನ್ನು ಮಾಡುವರಾಗಿಯೂ ತಿಳಿದುಬರುತ್ತದೆ.

ಝಾನ್ಸಿಯಲ್ಲಿ ಕಾಂಗ್ರೆಸ್ಸಿಗೆ ಅಪಜಯ

ಝಾನ್ಸಿಯಲ್ಲಿ ಒಂದ ಮುಸ್ಲಿಮ ವಿಭಾಗದ ಸದಸ್ಯತನವು ಖಾಲಿಯದ್ದ ಮುಸ್ಲಿಮ ಲೀಗಿನ ಪರ ಕಾಂಗ್ರೆಸ್ ಉಮೇದ್ವಾರರಿಗೆ ಪ್ರತಿಸ್ಪರ್ಧೆ ನಡೆದಿದ್ದು, ಎಂಟ್ರಿತಿಯರೂ ಅತ್ತ ಕಡೆ ಪ್ರಚಾರ ಕಾರ್ಯ ಡೆಯಿಸಿದ್ದ ಕಾಂಗ್ರೆಸ್ ಉಮೇದ್ವಾರರ ಸೋತಿರುವರು

ರಾಷ್ಟ್ರಪತಿಯವರ ಅಲ್ಲಿನ ಪ್ರಚಾರ ಪ್ರವಾಸದ ಸಮಯ ಮುಸ್ಲಿಮ ಲೀಗಿನವರು ಅವರ ಮೇಲೆ ನಡೆಯಿಸಿದ ಅತ್ಯಾಚಾರವನ್ನು ಖಂಡಿಸಿ, ಲಖ್ನೋವಿನ ಮುಸ್ಲಿಮ ವಿದ್ಯಾರ್ಥಿ ಸಂಘದವರ ಒಂದ ಠರಾವನ್ನು ಮಾಡಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಕಾಂಗ್ರೆಸ್ಸಿಗೆ ಸೇರಬೇಕಾಗಿ ನಿರ್ಣಯ ಮಾಡಿರುವರು

FOR

Quality Frames & Lens,

Please Visit



Nayaks' Optical Stores

Scientific Opticians,

Temple squares, MANGALORE.

ಮುಂದಿನ ಕರ್ತವ್ಯ.

ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಇತರ ಮುಖಂಡರ ಸೂಚನೆಗಳು.

ಮದ್ರಾಸು ಮುಂದಾಗಿ, ಇತರ ಪ್ರಾಂತ್ಯಗಳಿಗೆ ಮೇಲ್ಪಂಕ್ತಿ ಹಾಕುವುದು.

1. ಲೋರ್ಡ್ ಲಿನ್‌ಲಿತ್‌ಗೊ ಇವರ ಕೆಯಂತೆ, ಈ ದೇಶದಲ್ಲಿ ಕೃಷಿಯಾಗಿರುವ ನು ಜನಸಂಖ್ಯೆಯಲ್ಲಿ ಪ್ರತಿಯೊಬ್ಬರಿಗೆ ಎಕ್ರೆಯಷ್ಟಾಗಿದೆ. ಅರ್ಧ ಎಕ್ರೆಯಿಂದ ರವೊದಗದು. ಜಮೀನು ಇಲ್ಲದವರಿಗೆ ನು ಸಿಗುವಂತಾಗಬೇಕು, ಎಂದೊಡನೆ ರನ್ನೆಲ್ಲ ಹಂಚಬಾರದು. ಹಂಚಿದರೂ ಗೆ ಸಹಾಯಮಾಡಬೇಕು ಕೆಲವರ್ಷ ಇಂತಹ ಹಿಡುವಳಿಯಿಂದ ತೀರ್ವೆ ಎತ್ತದು. ಸಹಕಾರೀ ಸಂಘಗಳ ಆಶ್ರಯದಲ್ಲಿ ಹಿಡುವಳಿಗಳನ್ನು ಕೆಲವು ಕುಟುಂಬಗಳಿಗೆ ಸ್ಟಿಗಿ ಕೊಡಬೇಕು. ಜಮೀನಿನ ಮೇಲೆ ಲು ಉಂಟಾಗಿ ಹಿಡುವಳಿದಾರರಿಗೆ ಪ್ರಯೋ ದೊರೆವಂತಾದ ಬಳಿಕ, ಅವರವರ ಹೆಸ ಪ್ರತ್ಯೇಕ ಪಟ್ಟಾಗಳನ್ನು ಕೊಡಬಹುದು

2 ಸಣ್ಣ ನೀರಾವರಿ ಕೆಲಸಗಳನ್ನು ತಲೇ ಪ್ರಾರಂಭಿಸಬೇಕು ನೀರಾವರಿ ಕೆಲ ಆತಂಕವಾಗಿ ರೈಲ್ವೆಗಳಾದುವು, ದೊಡ್ಡ ಟ್ಟು ಕಾಲುವೆಗಳನ್ನು ಕಟ್ಟಿಸತೊಡಗಿ ಸಣ್ಣ ಮೂಲೆಪಾಲಾದುವು. ಎಲ್ಲೆಲ್ಲಿ ಕೃಷಿಗೆ ನಡುವ ಜಮೀನಿಗೆ ನೀರು ಪೂರಯಿಸುತ್ತಿ ರೋ ಅಲ್ಲಿ ಎಲ್ಲ ಕಾಲುವೆಗಳೂ ಅಣೆಕಟ್ಟು ಊ ಪ್ರತಿ ಜಿಲ್ಲೆಯಲ್ಲೂ ರಚನೆಹೊಂದಬೇಕು

3 ಸಹಕಾರ ಸಂಘಗಳಿಗೆ ಇಲಾಖೆ ಸಂಪರ್ಕವೇ ಇರಬಾರದು ಸೆಂಟ್ರಲ್ ರ್ಟಗೇಜು ಬೇಂಕಿಗೆ ಸೆಕ್ರೆಟರಿಯಾಗಿ ಕ್ಟಿಟ ಕಲೆಕ್ಟರರನ್ನು ನೇಮಿಸಿದಾಗ, ಇಡೀ ಖೆಯೇ ಸಂಪೂರ್ಣವಾಗಿ ಸರಕಾರದ ವಾದಂತಾಗಿದೆ ಜನರ ಕೈಯಲ್ಲೇ ಅದರ ಲಿತವು ಸಂಪೂರ್ಣವಾಗಿ ಬಂದಾಗ ಹೇಗಾ ವುದೆಂದು ವಿಚಾರಿಸಲು ಈಗ ಅವಕಾಶವಿದೆ,

4 ಮುಖ್ಯ ಮಂತ್ರಿಗಳು, ಮದ್ಯಪಾನ ಷೇಧವಾಗಬೇಕೆಂದು ಒಂದಿಸಿಂದಲೂ ಸಾರು ಸ್ತವರು ಕುಡಿಕರ ದುಃಖಕ ದೊರೆವ ದ್ಯದ ಸುಂಕದಿಂದ ವಿದ್ಯಾ ಇಲಾಖೆಯನ್ನು ಸಿಬರುವುದೆಂದರೇನು? ಮದ್ಯದ ಸುಂಕದ ಣದಿಂದ ಈ ಇಲಾಖೆಯನ್ನು ಪಾಲಿಸಬರವು ದ ಬದಲಾಗಿ, ಕೊಲೀಜುಗಳನ್ನು ಮುಚ್ಚುವೆ ದು ದಿಲ್ಲಿಯಲ್ಲಿ ಶ್ರೀ ರಾಜಗೋಪಾಲಾರ್ಯ ವರು ಎಂದುದುಂಟು ಆದುದರಿಂದ ಇನ್ನೇನು ಡಲಿರುವರೋ ನೋಡಬಹುದು ಪ್ರತಿ ರ್ಷವೂ ನೇಕಡಾ ೧೦ರಷ್ಟು ಈ ಸುಂಕದ ಲವನ್ನು ಕಡಿಮೆಮಾಡುತ್ತ ಬರುವಂತೆ, ರಡು ಮೂರು ಜಿಲ್ಲೆಗಳ ಮಟ್ಟಿಗೆ ವರ್ಷವೂ ಮದ್ಯಪಾನ ನಿವಾರಣೆಗೆ ಪ್ರಯತ್ನಿಸಿದರೆ, ಹತ್ತು ರ್ಷಗಳಲ್ಲಾದರೂ ಇದೊಂದು ಸಾಧಿತವಾ ತು ಪ್ರಾಂತಿಕ ಸರಕಾರದ ಎಲ್ಲ ಆಯ ಲ್ಲಿ ಮೂರರಲ್ಲೊಂದು ಅಂಶವು ಈ ಸುಂಕದ ಉತ್ಪನ್ನವಾಗಿದೆ. ಆದುದರಿಂದ ಅದನ್ನು ಮ್ಮೆಯೇ ವರ್ಜಿಸುವುದು ಸಾಧ್ಯವೇ ಅಲ್ಲ. ದಾರು ಕೋಟಿ ರೂಪಾಯಿಗಳನ್ನು ಕೂಡಲೇ ಟ್ಟಿಸುವ ಬೇರೊಂದು ತೆರಿಗೆಯನ್ನು ವಿಧಿ ಲೂ ಬರುವಂತಿಲ್ಲ

5 ಇನ್ಶೂರೆನ್ಸ್, ಮೋಟರು ಚಲಾ ಣೆ, ಸಿನಿಮಾ, ವಿದ್ಯುಚ್ಛಕ್ತಿ, ಜಮೀನು ಅಡ ಮಾನದ ಬೇಂಕುಗಳು ಮೊದಲಾದುವನ್ನು ಸರ ಕಾರವು ಗಮನಕ್ಕೆ ತಂದುಕೊಳ್ಳಬೇಕೆಂಬ ಸೂಚನೆಗಳೂ ಇವೆ. ತಿರುವಾಂಕೋಡು ಸರ ಕಾರವು ಎಲ್ಲ ಮೋಟರು ಚಲಾವಣೆಯನ್ನು ತಾನೇ ವಹಿಸಿಕೊಳ್ಳಬೇಕೆಂದಿದೆ. ಇನ್ಶೂರೆನ್ಸ್ ಮೈಸೂರು ಸರಕಾರದ ಜಮೆಗೆ ಸೇರಿಯೇ ಇದೆ. ಪ್ರಾಂತ್ಯದಲ್ಲಿರುವ ಒಂದು ಕೋಟಿ ಕುಟುಂಬ ಗಳಾದರೂ ಒಂದೊಂದರಂತೆ ಒಂದು ನೂರು ರೂಪಾಯಿ ವಿಮೆಗೆ ವಾರ್ಷಿಕವಾಗಿ ಒಂದು ರೂ ಪಾಯಿಯ ಚಂದಾ ತೆರುತ್ತ ಬರುವಂತಾದರೆ, ಪ್ರಾಂತಿಕ ಸರಕಾರದ ಜೀವವಿಮೆ ಸಂಘವು ಸರಕಾರಕ್ಕೆ ಧಾರಾಳ ಉಪಯೋಗಕ್ಕೆ ಬರು ವುದು ಹತ್ತು ವರ್ಷಗಳಲ್ಲಿ ಈ ಹಣವೇ ಮದ್ಯಪಾನ ನಿವಾರಣೆಯಿಂದಾಗುವ ಹಣ ನಷ್ಟಕ್ಕೆ ತುಂಬ ಸಹಾಯಮಾಡುವುದು, ಮಾತ್ರ ವಲ್ಲದೆ, ಮದ್ಯದಿಂದ ವ್ಯಯವಾಗಿ ಹೋಗುತ್ತಿದ್ದ ಹಣವೂ ಉಳಿಯುವ ಹಾಗಾಗುವುದು.

6. ವಿದ್ಯಾಭ್ಯಾಸ. ಇಡೀ ಇಲಾಖೆಯ ಪುನರ್ಘಟನೆಯಾಗಬೇಕು. ಪರೀಕ್ಷೆಗಳಿಗೆ ಒಂದು ಗೊತ್ತುಗುರಿಯಿರಬೇಕು ಸರಕಾರಕ್ಕೆ ನೌಕರರಾಗಿ ಸೇರತಕ್ಕವರ ವಯಸ್ಸನ್ನು 20ಕ್ಕೆ ಇಳಿಸುವುದುತ್ತಮ ಹೀಗಾದರೆ, ವೃಥಾ ಪ್ರೌಢ ವಿದ್ಯಾಭ್ಯಾಸಕ್ಕೆ ಕೈಹಚ್ಚಿ ಅಪಾರ ಧನವ್ಯಯ ದಿಂದ ಮುಂದೆ ನಿರುದ್ಯೋಗಿಗಳಾಗುವವರ ಸಂಖ್ಯೆ ಇಳಿಯುವುದು

7 ಕೈಗಾರಿಕೆಗಳು ಖಾದೀಪ್ರಚಾರ, ಉತ್ಪನ್ನ ಇವೇ ಪ್ರತಿ ಹಳ್ಳಿಯ ಕೈಗಾರಿಕೆಗಳಾಗಿ ಬೇರೂರಬೇಕು ಇದರಂತೆ, ರೇಷ್ಮೆ ಜರತಾರೀ ಕೆಲಸಗಳೂ ಗುಡಿಕೈಗಾರಿಕೆಗಳಾಗಬೇಕು ನೇಯ್ಗೆಯು (ಪ್ರತಿಯೊಂದು ಬಗೆಯದು) ಸರ ಕಾರದ ಆಶ್ರಯ ಹೊಂದಲೇಬೇಕು

8 ಆರೋಗ್ಯ: ಪ್ರತಿಯೊಂದು ಹಳ್ಳಿ ಯೂ ಆರೋಗ್ಯದಿಂದಿರುವ ಹಾಗೂ ವೈದ್ಯಕೀಯ ಸಹಾಯವು ದೊರೆಯಲೇ ಬೇಕು ನಿರಕ್ಷರತೆ ಇರಬಾರದು. ಯೂನಿವರ್ಸಿಟಿ ವಿದ್ಯಾರ್ಥಿ ಗಳು ಡಿಗ್ರಿಪಡೆಯಬೇಕಾದರೆ, ಆರು ತಿಂಗಳಾ ದರೂ ಹಳ್ಳಿಯಲ್ಲಿ ಗ್ರಾಮಾಭ್ಯುದಯಕ್ಕಾಗಿ ಬೋಧಕರಾಗಿ ಧರ್ಮಾರ್ಥ ಉದ್ಯೋಗನಿರ್ವ ಹಿಸಬೇಕು. ವಕೀಲರಾಗತಕ್ಕವರು ಉಮೇ ದ್ವಾರರಾಗಿ ಉತ್ತಮ ವಕೀಲರ ಕೈಕೆಳಗೆ ದ ಡಿ ಯುವುದಿಲ್ಲವೆ? ಏನಲ್ಲದಿದ್ದರೂ, ಪ್ರೈಮರಿ ವಿದ್ಯಾಭ್ಯಾಸವನ್ನು ಪ್ರಚಾರಮಾಡಲು ಒಂದು ವರ್ಷದ ಸ್ವಂತದ ಪರಿಶ್ರಮ ವಿಂಡ ದುಡಿಯುವು ದಕ್ಕೆ ಯುನಿವರ್ಸಿಟಿ ವಿದ್ಯಾರ್ಥಿಗಳು ಪ್ರಯ ತ್ನಿಸಬೇಡವೇ?

9 ಮಾಸಿಕವಾಗಿ ರೂ ೨೦೦ಕ್ಕೆ ಮೇ ಲ್ಪಟ್ಟ ಸಂಬಳವನ್ನು ಪಡೆವವರನ್ನು ಮೊದಲ್ಗೊಂಡು ಸರ್ಚಾರ್ಜು ರೂಪದಲ್ಲಿ ಶೇಕಡಾ ೨೫ರಂತೆ ಪ್ರಾರಂಭಿಸಿ, ಸಾವಿರ ರೂಪಾಯಿ ಸಂಬಳದವರಿಂದ ಶೇಕಡಾ ೩೫ರಂತೆ ವಸೂಲುಮಾಡಿಕೊಳ್ಳುವ ಒಂದು ಯೋಜನೆಮಾಡಿಕೊಳ್ಳುವುದು ಉತ್ತಮ ವೆಂದು ನಂದ್ಯಾಲದಲ್ಲಾದ ಪರಿಷತ್ತಿನ ನಿರ್ಣಯ ವಿದೆ ಸ್ವೇಚ್ಛೆಯಿಂದ ಸಂಬಳದ ಒಂದಂಶವನ್ನು ಬಿಟ್ಟುಬಿಡುವುದು ಸಾಧ್ಯವಾಗದೆ ಇರುವಲ್ಲಿ, ಸರ್ಚಾರ್ಜಿನ ವ್ಯವಸ್ಥೆಯೇ ಅಗತ್ಯವೆಂದು ಪರಿ ಷತ್ತು ಸೂಚಿಸಿಯದೆ

10 ಇಷ್ಟು ವರ್ಷ ಎಕ್ಸಿಕ್ಯೂಟಿವ್ ಮತ್ತು ಜ್ಯುಡಿಶಿಯಲ್ ಇಲಾಖೆಗಳ ದಾಂಪತ್ಯ ವಿಚ್ಛೇದವಾಗಬೇಕೆಂದು ನಿರ್ಣಯಗಳಾಗಿವೆ. ಅದಕ್ಕೆ ಈಗಲಾದರೂ ಸುಮುಹೂರ್ತವೊದಗ ಬೇಡವೇ? ಕಲೆಕ್ಟರರು ಇಳಿಳನೇ ಸೆಶ್ಶನನ್ನು ಜ್ಯಾರಿಗೆ ತರುವ ಅಧಿಕಾರವಿರುವವರಾಗಬಾ ರದು. ಕೋರ್ಟುಗಳಲ್ಲಿ ಆಗುವ ವಿಳಂಬಕ್ಕೆ ಮಿತಿಯಿಲ್ಲವಾಗಿದೆ. ಅವುಗಳಲ್ಲಾಗುವ ಖರ್ಚು ಮಿತಿಯಿಲ್ಲದ್ದಾಗಿದೆ. ನ್ಯಾಯಸ್ಥಾನವು ವ್ಯಯ ಸ್ಥಾನವಾಗಿದೆ. ಪಂಚಾಯತುಗಳನ್ನು ಹೆಚ್ಚಿಸ ಬೇಕು. ಕೋರ್ಟುಗಳಿಗೆ ಹೋಗುವ ಸಂಭವ ಗಳನ್ನು ಕಡಿಮೆಮಾಡಬೇಕು. ಅಪ್ಪೀಲುಗಳಿಗೆ ವಿಶೇಷ ಅವಕಾಶವಿರದಂತೆ ನ್ಯಾಯನಿರ್ಮಾಣ ವಾಗುವಂತೆ ಪ್ರಯತ್ನಿಸಬೇಕು.

11. ಪೋಲೀಸರು ಮತ್ತು ಜೈಲುಗಳು: ಈ ವಿಷಯವಾಗಿ ನಿಜವಾದ ತಿಳುವಳಿಕೆಯು ಜನಗಳಲ್ಲಿ ಹರಡುವಂತಾಗಬೇಕು. ಗ್ರಾಮ ಉದ್ಯೋಗಸ್ಥರ ಕರ್ತವ್ಯಗಳ ವಿಷಯ ತುಂಬಾ ಜ್ಞಾನವು ಗ್ರಾಮಸ್ಥರಿಗೆ ಇರುವಂತಾಗಬೇಕು. ಜೈಲುಗಳು ನರಕದ ನಕಲುಗಳಾಗಿರಬಾರದು. ರಕ್ಷಣೆಯ ಕ್ರಮಗಳನ್ನು ಈ ಇಲಾಖೆಯಲ್ಲಿ ಜ್ಯಾ ರಿಗೆ ತರಬೇಕು. ಗ್ರಾಮಸ್ಥರ ನಾಯಕರೂ ಸಹಾಯಕರೂ ಆಗಿ ಗ್ರಾಮೋದ್ಯೋಗಸ್ಥರು ಇರಬೇಕು. ಪೋಲೀಸರು ಜನರ ಸಹಾಯಕ ರಾಗಿ ಸಹಾನುಭೂತಿ ಪ್ರದರ್ಶಿಸುವವರಾಗ ಬೇಕು.

12. ರೈಲ್ವೇ ಗುಡ್ಸ್ ಶಿಬ್ಬಂದಿ, ನ್ಯಾಯ ಸ್ಥಾನಗಳು, ತಾಲೂಕು ಖಜಾನೆಗಳು, ರಿಜಿಸ್ಟ್ರಿ ಇಲಾಖೆ, ಪಿ ಡಬ್ಲ್ಯೂ ಡಿ ಇಲಾಖೆ, ಲೋಕಲ್ ಬೋರ್ಡುಗಳು ಮುಂತಾದುವುಗಳಲ್ಲಿ ಸಂಸ್ಥಾನದ ಎಷ್ಟೋ ಕಡೆ ಕೇಳಬಂದಿರುವ ಮಾಮೂಲುಗಳನ್ನು ವಿಚಾರಿಸಿ ನಿರ್ಮೂಲಿಸ ಬೇಕು

13 ಸರಕಾರದ ಕೆಳನೌಕರರಿಗೆ ಎರಡೇ ತರಗತಿಗಳಿರಬೇಕು ೨೫ ರೂಪಾಯಿಯಿಂದ ವಾರ್ಷಿಕ ೫ರ ಬಡ್ತಿಯಾಗಿ ೫೦ ರೂಪಾಯಿ, ಮಾಹೆಯಾನ ಸಂಬಳದೊಂದು, ೫೦ ರೂಪಾಯಿ ಯಿಂದ ಪ್ರಾರಂಭಿಸಿ, ವಾರ್ಷಿಕ ೧೦ರ ಬಡ್ತಿ ಯಾಗಿ ೧೦೦ಕ್ಕೇರುವ ಸಂಬಳದೊಂದು ಇಷ್ಟೆ ಸಾಕು

14 ಭತ್ತೆಗಳ ಕುತ್ತದಿಂದ ಪಾರಾಗು ವರೆ ಅಗತ್ಯಪ್ರಯತ್ನಗಳಾಗಬೇಕು ಪ್ರಯಾಣ ಗಳು ಎಷ್ಟು ಖರ್ಚಿನಿಂದಾದವೊ ಅಷ್ಟನ್ನು ಮಾತ್ರ ತೆರಬೇಕು ವರ್ಗಾವರ್ಗಿಯೆಂದರೆ ಇಡೀ ಕುಟುಂಬದ ಪರಿವಾರದ ವರ್ಗವಲ್ಲ ವಷ್ಟೆ ಅದಕ್ಕೂ ಒಂದು ಮಿತಿಯಿರಬೇಕು ಕಿಸೆ ಯಲ್ಲಿ ಚಿಲ್ಲರೆ ಹಣ ಕಡಮೆಯಾದ ಕೂಡಲೇ ಸರ್ಕೀಟು ಬೆಳಸುವ ಪದ್ಧತಿಗಳಿರಬಾರದು. ಅಲ್ಲಲ್ಲಿ ಛತ್ರಗಳೂ, ಹೊಟೇಲುಗಳೂ ಇರು ವಂತಾದರೆ, ಊರವರು ಸರಬರಾಯಿ ಮಾಡುವ ಬಿಟ್ಟಿ ಮುಗಿಯುವುದು ಹತ್ತಿರ ಹತ್ತಿರವೇ ವರ್ಗಾವರ್ಗಿಗಳಾಗಬೇಕಲ್ಲದೆ, ಈ ಮೂಲೆ ಯಿಂದ ಆ ಮೂಲೆಗೆ ಕೆಲವೇ ಕಾಲಕ್ಕೆಂದು ವರ್ಗಾಯಿಸಿ, ಎಷ್ಟೋ ನೌಕರರಿಗೆ ಸಂಬಳ ಕ್ಕಿಂತ ಭತ್ತೆ ಹೆಚ್ಚಾಗಿ ಸಿಗುವುದುಂಟು ಇದನ್ನು ನಿವಾರಿಸಬೇಕು

15 ರಜೆಯ ಸಂಬಳದ ಮಿತಿ, ಮತ್ತು ಲೆಕ್ಕ ಸರಿಯಾಗುವಂತೆ ತಿದ್ದುಪಾಟಾಗಬೇಕು ಕೆಲವರಿಗೆ ರಜೆಯಲ್ಲಿ ಸಿಗುವ ಸಂಬಳವು ಆಯಂ ಕೆಲಸದಲ್ಲಿದ್ದುದಕ್ಕಿಂತ ಹೆಚ್ಚಾಗು ತ್ತದೆ ಇದು ನಿವಾರಣೆಹೊಂದಲಿ

16 ಸುಮಾರು 50ವರ್ಷ ವಯ ಸ್ಸಾದ, 25 ವರ್ಷ ಸರ್ವಿಸಾದ ಭಾರೀ ಸಂಬಳ ದವರನ್ನು ದಾಮಾಷಲಾಯದ ಪೆನ್ಶನ್ ಮೂಲಕ ನಿವೃತ್ತಿಪಡಿಸಿ, ಅವರ ಬದಲಾಗಿ ಕಡಮೆ ಸಂ ಬಳದವರನ್ನು ಸೇರಿಸಬೇಕು ಇತ್ಯಾದಿ ಇತ್ಯಾದಿ

[ಇವೆಲ್ಲವೂ ಅಲ್ಲಲ್ಲಿಂದ ಮಂತ್ರಿಮಂಡಲಕ್ಕೆ ದೊರೆತಿರುವ ಸೂಚನೆಗಳು ಈ ಸೂಚನೆ ಗಳು ಒಂದು ಬಗೆಯಾಗಿ ವಿಶೇಷ ಲಾಭ ದಾಯಕವೆಂದು ತೋರಿದರೂ, ಇವನ್ನು ಜ್ಯಾ ರಿಗೆ ತರಲೂ ತೊಂದರೆ ಉಂಟಾಗಬಹುದಾದ ಪರಿಣಾಮಗಳನ್ನು ಈಗಲೇ ಗೊತ್ತುಹಚ್ಚಲೂ ಬಹಳ ಧೈರ್ಯ ಬೇಕು ಮಹಾತ್ಮಾಜಿಯವರು ಮೊದಲೇ ಸರ್ವ ಮಂತ್ರಿ ಮಂಡಲಗಳಿಗೆ (ಕಾಂಗ್ರೆಸ್) ಸೂಚನೆ ಕೊಟ್ಟುದುಂಟು ಈ ಗಲೇ ಅವರೊಡನೆ ಇನ್ನೂ ವಿಮರ್ಶಿಸುವುದಕ್ಕೆ ಖುದ್ದಾಗಿ ಮದ್ರಾಸು ಮಂತ್ರಿಗಳೊಬ್ಬರು ತೆರಳಿ ರುವರು. ಬಜೇಟು ತಯಾರಾಗುತ್ತಲಿದೆ ತಾತ್ಕಾಲಿಕರು ಮೊದಲೇ ಎಣಿಕೆ ಹಾಕಿ ಕೆಲ ಹಣಗಳನ್ನು ಬಳಸಿ ದಾರಿ ತೋರಿಸಿದ್ದಾರೆ. ಮುಂದೆ ಅದೇ ದಾರಿಯಾಗಿ ಸಾಗುವುದು ಸುಲ ಭವಲ್ಲ. ಅದರ ವಿಮರ್ಶೆಯೂ ಬೇಕು. ಅಂತೂ ಕಾಂಗ್ರೆಸ್ ಮಂತ್ರಿಗಳಿಗೆ ಈ ವರ್ಷ ವೆಲ್ಲ ಅನುಭವ ಉಪಾಯಶೋಧನೆ ಇವೆರಡಕ್ಕೇ ಬೇಕಾಗುವುದು. ಮತ್ತೇನು ಮಾಡಬಹುದೋ ಅದನ್ನು ಮುಂದಿನ ತಿಂಗಳ ಬಜೇಟು ಪ್ರಕಟಣೆ ಯ ಕಾಲಕ್ಕೆ ವಿವರಿಸುವರು. ಇನ್ನೂ ಸೂಚನೆ ಗಳು ಅವಿರಾಮವಾಗಿ ಬರುತಲೇ ಇವೆ.]

ಅಗೋಸ್ತು ಒಂದನೇ ತಾರೀಕು.

'ಕಮಲಾದೇವಿ'

ಈ ದಿನ ದೇಶದ ಎಲ್ಲಾ ಕಡೆಗಳಲ್ಲಿ ಸಭೆ ಗಳನ್ನು ಸೇರಿಸಿ, ಜನತೆಗೆ ಇಂದಿನ ಸ್ಥಿತಿಯ ಅರಿವನ್ನು ಮಾಡಕೊಡಬೇಕಾಗಿ ರಾಷ್ಟ್ರಪತಿಯರ ಅಪ್ಪಣೆಯು ಹೊರಟಿರುತ್ತದೆ. ಇದೊಂದು ಚಾರಿತ್ರಮಯ ಪ್ರಕಟಣೆಯು—ಇದು ಐಗುಪ್ತ ದಲ್ಲಿ ನಡೆದ ಒಂದು ಸಂಘಟನೆಯ ನೆನಪನ್ನು ಮಾಡುತ್ತದೆ ಐಗುಪ್ತಕ್ಕೆ ನನರಾಜ ಶಾಸನವು ಕೊಡಲಾಗಿ ವಾಫ್ದ ಪಂಗಡವು ಅಧಿಕಾರಕ್ಕೆ ಬಂದ ದಿನ ಅದರ ನಾಯಕರಾದ ಜ್ಞಾಗಲುಲ್ಲ ಪಾಶಾರವರು ಇದೇ ತರದ ಒಂದು ಪ್ರಕಟಣೆ ಯನ್ನು ಮಾಡಿರುವಾಗ ಜನತೆಗೆ ಒಂದು ಎಚ್ಚ ರಿಗೆಯನ್ನು ಮಾಡಿದ್ದರು—ಗಣ್ಯಳರಲ್ಲಿ. ಆದರೂ ವಾಫ್ಡಿಸ್ಟ್ ಪಂಗಡವು ಅದರ ನಿರ್ಲಕ್ಷ್ಯ ಮಾಡಲು ಕೊನೆಗೆ ವ್ಯಥೆಪಡಬೇಕಾಯಿತು. ಆ ಪಕ್ಷದಲ್ಲಿ ಛಿದ್ರಗಳುಂಟಾಗಿ ಕೊನೆಗೆ ಸಾಮ್ರಾಜ್ಯ ಶಾಹಿಗೆ ಜಯಲಭಿಸಿತು—ಜ್ಞಾಗುಲಲ್ಲ ಪಾಶಾ ರವರು ಹೊರಗೆ ಅಟ್ಟಲ್ಪಟ್ಟರು ಆದುದರಿಂದ ರಾಷ್ಟ್ರಪತಿಯರ ಪ್ರಕಟಣೆಯನ್ನು ಜಾಗ ರೂಕರಾಗಿ ಅರಿತುಕೊಳ್ಳಬೇಕು ಅದರ ಅರ್ಥವನ್ನು ಸರಿಯಾಗಿ ತಿಳಕೊಳ್ಳಬೇಕು. ಈಗಿನ ಪರಿಸ್ಥಿತಿಯ ಕುರಿತು ಅತಿ ಪ್ರಾಮುಖ್ಯ ವೆನಿಸುವ ವಿಚಾರಗಳನ್ನು ಅವರು ಪ್ರಸಿದ್ಧಪಡಿ ಸಿರುವರು.

ಮೊದಲಾಗಿ ನಾವು ಮಹಾಜನಗಳನ್ನು ನೆನೆ ಪಿನಲ್ಲಿಡಬೇಕೆಂದೂ, ಅವರಿಗೆ ಈಗಿನ ಸ್ಥಿತಿಯ ಸಂಪೂರ್ಣ ಜ್ಞಾನವನ್ನು ಮಾಡಿಕೊಡಬೇಕಾಗಿ ರಾಷ್ಟ್ರಪತಿಯರ ಎಚ್ಚರಿಕೆ ಅವರಲ್ಲಿ ಈಗಿನ ಧೋರಣೆ ಬದಲಾವಣೆಯ ಕುರಿತು ಯಾವ ತರದ ಅಭಿಪ್ರಾಯವಿರುವುದು? ಅವರು ಕಾಂಗ್ರೆ ಸ್ಸಿನಿಂದ ಏನನ್ನು ಇಚ್ಛಿಸುತ್ತಿದ್ದಾರೆ ಸ್ವಾತಂತ್ರ ಚಳವಳ ಮುಗಿಯುತ್ತೆಂಬ ಭಾವನೆ ಅವರಲ್ಲಾ ಗಿರುತ್ತದೊ? ಕಾಂಗ್ರೆಸು ಅಧಿಕಾರ ಸ್ವೀಕರಿಸಿ ದುದರಿಂದ? ಈ ಪ್ರಶ್ನೆಗಳಿಗೆ ಉತ್ತರವಾಗಿ ಶ್ರೀ ನೆಹರುಗಳು, ಮಹಾಜನಗಳನ್ನು ನಾವು ಮರೆತು ಬಿಡಲಿಲ್ಲ. ನಾವು ಅವರ ಪರಮ ಆಪ್ತರು ನಮ್ಮಲ್ಲಿ ಕೆಲವರು ರಾಜ್ಯ ಪೀಠ ಗಳ ಮೇಲೆ ಕುಳಿತಿದ್ದರೂ, ನಮ್ಮ ದೇಹದ ಮೇಲೆ ಈಗಲೂ ಖಾದಿಯು ಇರುವುದು. ನಮ್ಮ ಮನಸ್ಸಿನಲ್ಲಿ ಮುಂಚಿನ ಆಲೋಚನೆ ಗಳೇ ಇರುವವು ನಮ್ಮ ಧ್ಯೇಯದಲ್ಲಿ ಬದ ಲಾವಣೆಗಳಾಗಲಿಲ್ಲ ಅದೇ ನಮ್ಮನ್ನು ಕಾರ್ಯಕ್ಕೆ ಕರೆಯುತ್ತಿದೆ ನಂತರ ಈ ರೀತಿಯ ಒಂದು ಎಚ್ಚರಿಕೆಯನ್ನು ಕೊಟ್ಟಿರುವರು— ಆದರೂ, ಆ ಮೋಕ್ಷದಿಂದ ನಾವು ಇನ್ನೂ ಬಹು ದೂರ ಇರುವೆವು ದೇಶದ ಗತಿಯನ್ನು ನಿರ್ಮಿಸುವ ಅಧಿಕಾರವು ನಮ್ಮಲ್ಲಿಲ್ಲ. ಕಾಂಗ್ರೆಸಿಗರು ಮಂತ್ರಿಪದವಿಗಳಲ್ಲಿದ್ದರೂ ಸ್ವರಾಜ್ಯ ಸ್ಥಾಪನೆಯಾಗಲಿಲ್ಲ ಕಾಂಗ್ರೆಸು ರಾಜನು ಬರಲಿಲ್ಲ. ಆದರೂ ನಮ್ಮ ಬಲ ವನ್ನು ಹೆಚ್ಚಿಸಿಕೊಳ್ಳಲು, ಮಹಾಜನದ ಸೇವೆ ಯನ್ನು ಮಾಡಲು, ಅವರ ಸಂಕಟ ನಿವಾರಣೆ ಮಾಡಲು ನಮಗೊಂದು ಅವಕಾಶ ದೊರಕಿರು ತ್ತದೆ

ಆದರೆ ಈ ಸೇವೆಯು ಮಹಾ ಜನರ ಮನೋವರ್ತನೆ ಮೇಲೂ, ಅವರ ಬಲದ ಮೇಲೂ ಈಗ ನಡೆಯುವ ಚಟುವಟಿಕೆಗಳ ಕುರಿತು ಅವರ ಗಣನೆಯ ಮೇಲೂ ಹೊಂದಿ ಕೊಂಡಿದೆ. . ಕಾಂಗ್ರೆಸು ಮಂತ್ರಿವರ್ಯ ರನ್ನು ನಾವು ಅಭಿನಂದಿಸುತ್ತಿರುವಾಗ, ಮಹಾ ಜನರ ದರಿದ್ರವನ್ನು ಹೊಗಲಾಡಿಸುವರೆ ಸ್ವಾ ತಂತ್ರ ಸಾಧಿಸುವರೆ ನಾವು ದೃಢಸಂಕಲ್ಪವನ್ನು ಮಾಡಬೇಕು.

ರಾಷ್ಟ್ರಪತಿಯವರು, ಇಂದು ಘನವಾದ ಪ್ರಕಟಣೆಯನ್ನು ಹೊರಡಿಸಿದುದರ ಉದ್ದೇಶ ವೇನು? ಉತ್ತರವು ದೂರವಿಲ್ಲ. ಈ ಮೊದಲೆ ತೋರಿಸಿ ಕೊಟ್ಟಂತೆ ನಮ್ಮ ಶಾಸನವನ್ನು ನಾವೆ

(೧೨ನೇ ಪುಟಕ್ಕೆ ಮುಂದರಿಸಿಯದೆ.)

...ಗೌರಾಣೆ ... ಲ್ ...
... ಅಜರ್ ಹೃತ್ಪ...
...ಯಂದಿನ ಕೆಲ...
...ಗ್ರಶ್ನೆ...
...ಗೋಸ್ಟಿನ ಮೊದಲನೆ ತಾರೀಕು ೧೦
...ಸ್ವೀಕಾರಗಳು
...ರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು ೧೪
ಬೆಂಗಳೂರು ಸಮಾಚಾರ ೧೦
ತಾಲೂಕುಗಳಿಂದ ೧೧
...ನೇಜರ ರಂಗರಾವ್ ೫
...ಮಗಳಲ್ಲಿ ಕಾಂಗ್ರೆಸು ಕಮಿಟಿಗಳ ಅವಶ್ಯಕತೆ ೧೪
...ಯುನಲ್ಲಿ ಭಯಂಕರ ಕದನ ೧೩
...ನ್ನ ಇಲೆಕ್ಷನು ೧೯

ಸ್ವದೇಶಾಭಿಮಾನಿ.

ತಾ. ೩೦ನೇ ಶುಕ್ರವಾರ ಜುಲೈ ೧೯೩೭

ಆಗೋಸ್ಟಿನ ಮೊದಲನೆ ತಾರೀಕು

ನಮ್ಮ ದೇಶವು ಸ್ವರಾಜ್ಯಕ್ಕಾಗಿ ಕಾದಾಡುತ್ತಿರುವುದಕ್ಕೆ ಪ್ರಯತ್ನಿಸಿದಂದಿನಿಂದ ಈ ತಾರೀಕು ಏಕೋ ಮಹತ್ವವನ್ನು ತಳೆದು ಬರುತ್ತಲೇ ಇದೆ ಇಂಥಿಗೆ ಹದಿನೇಳು ವರ್ಷಗಳ ಹಿಂದೆ ಲೋಕಮಾನ್ಯರು ನಿಧನ ಹೊಂದಿದ ಪುಣ್ಯ ತಿಥಿಯೆ ಅದು ಹೋರಾಟಕ್ಕೆ ಬಲವನ್ನು ತುಂಬಿಸಿಕೊಳ್ಳುವುದಕ್ಕಾಗಿ ಮಹಾತ್ಮಾಜಿಯವರೂ ಅಸಹಕಾರ ಚಳವಳವನ್ನು ಹೂಡಿದ ದಿನವು ಅದೇ ಜನತೆಯಲ್ಲಿ ಅಂದಿನಿಂದ ಇದು ವರೆಗೆ ಆತ್ಮಜಾಗ್ರತಿ ಹೆಚ್ಚಿರುವುದಾದರೆ ಇದು ನವ ಜಾಗೃತಿಯನ್ನುಂಟು ಮಾಡಿರುವ ಯುಗಾದಿಯೆಂದೇ ಭಾವಿಸಬೇಕಾಗುತ್ತದೆ ಹಾಗೆ ಭಾವಿಸುವೆವಾದರೆ, ಹಿಂದಣ ಚರಿತ್ರವನ್ನು ಪುನಃ ನೆನಪಿಗೆ ತಂದುಕೊಂಡು, ನಾಳಿನ ಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೆ ಇದೇ ಉತ್ತಮ ಯುಗಾದಿಯಾಚರಣೆ ಎನಿಸುತ್ತದೆ

ಇದಕ್ಕಾಗಿಯೆ ಪ್ರತಿಯೊಂದು ಗ್ರಾಮದಲ್ಲೂ ಈ ಯುಗಾದಿಯನ್ನು ಸಂಭ್ರಮದಿಂದ ಆಚರಿಸುವಂತಾಗಲೆಂದು ಕಾಂಗ್ರೆಸಿನ ಅಧ್ಯಕ್ಷರು ಸೂಚಿಸಿದ್ದಾರೆ ಅಂದು ಕಾರ್ಯನಿರ್ವಾಹಕ ಮಂಡಲದ ನಿರ್ಣಯವನ್ನೋದಿ ಹೇಳಿ ವಿವರಿಸಿ, ನಮ್ಮ ಸೋದರರಾಗಿದ್ದು ಮಂತ್ರಿಮಂಡಲಗಳನ್ನು ನಿರ್ಮಾಣ ಮಾಡಿರುವ ಕಾಂಗ್ರೆಸ್ ಸದಸ್ಯರೊಡನೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸಲು ಪ್ರಮಾಣ ಮಾಡಿಕೊಂಡು, ಜನಾಂಗದ ಉದ್ಧಾರಕ್ಕೆ ಅಗತ್ಯವಾಗಿರುವ ಸ್ವರಾಜ್ಯವನ್ನು ಸಂಸ್ಥಾಪಿಸುವುದಕ್ಕೆ ಮೊದಲು ಪ್ರಯತ್ನವಾಗಿರುವ ದಂದ್ರ ನಾರಾಯಣನ ಪ್ರೀತ್ಯರ್ಥವಾದ ಪೂಜೋಪಹಾರಗಳನ್ನು ಸಮರ್ಪಿಸಬೇಕಾಗಿದೆ. ರಾಷ್ಟ್ರಧ್ವಜದ ವಂದನೆಯಂತೂ ಪ್ರಾತಃಕಾಲದ ಪ್ರಥಮ ಕರ್ತವ್ಯವೆಂದು ಪುನಃ ಹೇಳಬೇಕಾಗಿಲ್ಲ

ಕಾಂಗ್ರೆಸು ಅಧಿಕಮತ ಪಡೆದಿರುವ ಮತ್ತು ಪಡೆಯದಿರದ ಪ್ರಾಂತ್ಯಗಳಲ್ಲಿ ರಾಜಕೀಯ ಬದಲಾವಣೆಗಳು ಉಂಟಾಗಿವೆಯಾದರೂ, ಬ್ರಿಟಿಷ ಸರಕಾರಕ್ಕೂ ಹಿಂದೀ ಸರಕಾರಕ್ಕೂ ಇರುವ ಸಂಬಂಧಗಳಲ್ಲೇನೂ ಅಷ್ಟು ಬದಲಾವಣೆಯಾಗಿಲ್ಲ. ಹಿಂದೀ ಸರಕಾರದಲ್ಲಿ ಈಗ ಅಧಿಕಾರ ತಳೆದಿರುವ ಕಾಂಗ್ರೆಸ್ ಮಂತ್ರಿಗಳು ಜಯಶೀಲರಾಗುವಹಾಗೆಯಾವತ್ತು ಸರಕಾರಿ ನೌಕರರು ಯಥಾರ್ಥವಾದ ಸಹಾಯ ಸಹಕಾರಗಳನ್ನು ಒಪ್ಪಿಸಲೇ ಬೇಕಾಗಿದೆ, ಅವರು ಒಪ್ಪಿಸುವುದೂ ಅವರ ಶಿಸ್ತಿಗೆ ಒಪ್ಪುವುದಾಗಿದೆ. ಹಿಂದೀಯರಲ್ಲರೂ ಈಗ ಈ ಪ್ರಾಂತಿಕ ಸರಕಾರಗಳ ಬೆಂಬಲಕ್ಕೆ ನಿಂತರೆ, ಜಯವು ಸಿದ್ಧ; ದೇಶದ ಸ್ವರಾಜ್ಯಸಾಧನೆಯಲ್ಲಿ ಒತ್ತಾಸೆ ಕೊಡಬಳಸುವವರೆಲ್ಲರೂ ರಾಷ್ಟ್ರಧ್ವಜವನ್ನು ಗೌರವಿಸಿ ಖಾದಿ ಧರಿಸಿ ತಮ್ಮ ಸದಿಚ್ಛೆಗಳನ್ನು ಪ್ರಕಟಿಸಲಿ. ಹಿಂದೀಯರೆಲ್ಲರ ಆಶಾಕಾಂಕ್ಷೆಗಳು ತಮ್ಮವೂ ಎಂದು ಸರಕಾರದ ನೌಕರರೆಲ್ಲರು ಎದುರಾಡದೆ ಈ ಉತ್ಸವದಲ್ಲಿ ಸೇರಲಿ, ಹೀಗಾದಲ್ಲಿ, ಅವರು ಸಮಸ್ತರ ಹಿತಕ್ಕಾಗಿ ದುಡಿಯುವ ನೌಕರರೂ ಸಹಕಾರಿಗಳೂ ಎನ್ನಿಸಿ ಜನತೆಯ ವಾತ್ಸಲ್ಯಕ್ಕೆ ಪಾತ್ರರಾಗುವುದರಲ್ಲಿ ಸಂದೇಹವಿಲ್ಲ.

ಈ ಉತ್ಸವದಲ್ಲಿ ಭಾಗಿಗಳಾಗಲು ಎಲ್ಲ ಹಿಂದೀಯರೂ ಅರ್ಹರು, ಲೋಕಮಾನ್ಯರನ್ನು ಗೌರವಿಸದ ಹಿಂದೀಯರಾರು? ಪ್ರಜಾಸತ್ತೆಯ ಮೂಲತತ್ವಗಳನ್ನು ಪುನಃ ವಾಚಿಸಿ, ಅವುಗಳನ್ನು ಅನುಸರಿಸಿ ನಡೆದುಕೊಳ್ಳುವುದಕ್ಕೆ ಯಾರಿಗೂ ಅರ್ಹತೆಯಿಲ್ಲವೆಂದಿದೆಯೆ? ಸ್ಥಳೀಯ ರಾಜ್ಯಗಳಲ್ಲಿನ ಪ್ರಜೆಗಳೂ ಭಾರತೀಯರೇ ಅಲ್ಲವೆ? ಅಂತಹ ಪ್ರಜೆಗಳು ಪ್ರಜಾಸತ್ತೆಯನ್ನು ಪಾಲಿಸಿಕೊಡಿರೆಂದು ಶಾಂತರೀತಿಯಿಂದ ದೃಢಚಿತ್ತರಾಗಿ ಅರುಹಿದರೆ, ರಾಜರುಗಳು ಒಪ್ಪದಿರುವರೆ? ನ್ಯಾಯವಾದ ರೀತಿಯಲ್ಲಿ ಸಾತ್ವಿಕ ಭಾವದಿಂದ ನಡೆವ ಪ್ರಜೆಗಳನ್ನು ಯಾರೂ ಮನ್ನಿಸದಿರಲಾರರು

ಭಾರತೀಯ ಪ್ರಜಾಸತ್ತೆಯಲ್ಲಿ ರಾಜರುಗಳೂ ಅಂಗಗಳು, ಪ್ರಜೆಗಳೂ ಅಂಗಗಳು ಪ್ರಜೆಗಳ ಹಿತವೇ ರಾಜರುಗಳ ಹಿತ, ಮೂಲ ಹಕ್ಕುಗಳನ್ನು ಪ್ರಜೆಗಳು ಎಲ್ಲಿ ಹೆಚ್ಚು ಹೆಚ್ಚಾಗಿ ನಡೆಯುವರೋ ಅಲ್ಲಿ ರಾಜರುಗಳು ರಾಮರಾಜ್ಯದಂತೆ ಆಳುತ್ತಲಿರಬಹುದು ಆದರೆ, ಖನಿಯಿಂದ ಎತ್ತಿದ ಎಲ್ಲ ಕಲ್ಲುಗಳನ್ನು ಕಟ್ಟಡಕ್ಕೆ ಉಪಯೋಗಿಸಬರುತ್ತಿಲ್ಲವೆನ್ನುವಂತೆಯೆ, ಅವನ್ನು ಬೇಕಾದಂತೆ ಕತ್ತಿ ಕಟ್ಟಡದ ಭಾಗಗಳಿಗೆ ಅಗತ್ಯವಾಗುವಂತೆ ರೂಪಿಸಿಕೊಂಡೇ ಉಪಯೋಗಿಸಬೇಕಾಗುವಂತೆಯೆ, ರಾಜರುಗಳೂ ತಮ್ಮ ಹಕ್ಕು ಜವಾಬ್ದಾರಿಗಳನ್ನು ಕೊಂಚ ತಿದ್ದಿಕೊಂಡೇ ಭಾರತದ ಸ್ವರಾಜ್ಯಮಂದಿರದಲ್ಲಿ ತಮ್ಮ ತಮ್ಮ ನ್ಯಾಯವಾದ ಸ್ಥಾನವನ್ನು ಅಲಂಕರಿಸಿಕೊಳ್ಳಬೇಕಾಗಿದೆ ಇಲ್ಲದಿರುವಲ್ಲಿ, ಅಂತಹ ಕಲ್ಲುಗಳು ಮಂದಿರದಲ್ಲಿ ಅಲ್ಲಲ್ಲಿ ವಿರೂಪಹೊಂದಿ ಇಡೀ ಮಂದಿರದ ರೂಪವು ಕುರೂಪವಾಗುವಂತೆ ಅವರೇ ದೃಷ್ಟಿಯನ್ನು ಸೆಳೆದುಕೊಳ್ಳುವಂತಾದೀತು ಎಂಬುದನ್ನು ಅವರು ತಿಳಿದಿಲ್ಲವೆಂದು ಯಾರೂ ಹೇಳಬರುವುದೆ?

ಬ್ರಿಟಿಷ ಇಂಡಿಯಾದಲ್ಲಿನ ಪ್ರಜೆಗಳು ಈ ದಿನಾಚರಣೆಯಲ್ಲಿ ನಿರತರಾಗಿರುವಾಗ, ಸ್ಥಳೀಯ ರಾಜ್ಯಗಳಲ್ಲಿಯೂ, ರಾಜರುಗಳು ತಮ್ಮ ಗೌರವವನ್ನು ಪಾಲಿಸಿಕೊಂಡು ಪ್ರಜೆಗಳಿಗೆ ಗೌರವವುಂಟಾಗುವಂತೆ ತಾವು 'ತ್ಯಾಗವೇ ಭೋಗ' ಎಂಬ ಸೂಕ್ತಿಯಂತೆ ಪ್ರಜಾಪಾಲನೆಗಾಗಿ ಸಕಲ ಸೌಕರ್ಯಗಳನ್ನು ಕಲ್ಪಿಸಿಕೊಡುವಂತಾಗಲೆಂದು ಅವರನ್ನು ನಿವೇದಿಸಿಕೊಳ್ಳುವ ಕಾರ್ಯವನ್ನು ಕೈಕೊಳ್ಳಬೇಕಾಗಿದೆ ಅಧಿಕಾರವೆಂಬುದು ಬೇಕೆಂದಿರುವವರಿಂದ ಮಾಯವಾಗುವ ತತ್ವವಾಗಿದೆ ರಾಜರುಗಳ ಸತ್ವವು ಇತರ ಯಾವ ಕವಚಗಳಿಂದಲೂ ರಕ್ಷಣೆ ಹೊಂದುವ ಬದಲಾಗಿ, ಪ್ರಜೆಗಳಿಗೆ ಪ್ರಜಾಸತ್ತೆಯನ್ನು ದಾನಮಾಡುವುದರಿಂದ ಬಲು ಚೆನ್ನಾಗಿ ಭದ್ರತೆ ಹೊಂದುವುದು

ಕೆಲವು ಸಂದೇಹಗಳು

ಕಾಂಗ್ರೆಸು ಅಧಿಕಾರ ತಳೆದುದೇನೋ ನಿಜ' ಆದರೆ ಜನರಲ್ಲಿ ನಾನಾ ಸಂದೇಹಗಳು ಉಂಟಾಗಿವೆ. ಚಿಕ್ಕದೊಂದು ಸಂಘದಲ್ಲಿ ಸಹ, ಯಾವನೊಬ್ಬನು ಮುಂದಾಳಾಗಿ ಮುನ್ನಡೆಗೆ ತೊಡಗುವನೆಂದ ಕೂಡಲೆ, ಹಿಂದಿನ ರೂಲ್ಸು, ಕಾರ್ಯಕ್ರಮಗಳು, ಪ್ರೊಸೀಡಿಂಗ್ಸ್ ಮುಂತಾದುವು ಅವನನ್ನು ಕೂಡಲೆ ಎದುರಿಸುತ್ತವೆ. ಹಾಗೆಯೆ, ಇದು ವರೆಗೆ ವಾದದಲ್ಲಿ ಸರಕಾರದೊಡನೆ ಪ್ರತಿವಾದಿಸುತ್ತಿದ್ದ ಕಾಂಗ್ರೆಸು ಒಮ್ಮೆಲೇ ವಾದಿಯಾಗಿ ಮುಂದೆ ನಿಂತಿರುವಾಗ, ಸರಕಾರದ ಮುತ್ಸದ್ದಿಗಳು ಇಷ್ಟು ವರ್ಷಗಳ ರಿಕಾರ್ಡುಗಳನ್ನು ಆರ್ಡರುಗಳನ್ನು ಬೈಲೋಗಳನ್ನು ಮುಂದೆ ತಂದಿಟ್ಟು, ಈಗೇನು ಮಾಡೋಣ ಎನ್ನದೆ ಇರಲಾಗುವುದಿಲ್ಲ ಅಂಕೆಸಂಖ್ಯೆಗಳ ತಪಶೀಲುಗಳು ಬೇರೆಯೇ ದಂಡುಗಟ್ಟಿ ನಿಲ್ಲಬಹುದು ರಾಜಕೀಯ, ಸಾಮಾಜಿಕ, ಆರ್ಥಿಕ ಮೊದಲಾದ ವಿಚಾರಗಳಲ್ಲಿ ಸುಧಾರಣೆ ಮಾಡಬೇಕಾಗಿ, ವೋಟರರು ಹೇಳಿದರೆ, ಅವನ್ನು ಮಾಡುವುದಕ್ಕೆ ಮಂತ್ರಿಗಳು ಒಪ್ಪಿಕೊಂಡರೂ, ಜೀ ಓ ಮತ್ತು ಸೆಕ್ಷನ ಗಳನ್ನು ಎದುರಿಸಿ ಅವರಿಂದ ಕೂಡಲೆ ಏನೊಂದನ್ನು ಸುಧಾರಿಸಲು ಸಾಧ್ಯವಾಗದಿರಬಹುದು ಆದುದರಿಂದ ವೋಟರರು ಅಲ್ಲಲ್ಲಿ ಸಂಘಗಳಲ್ಲಿ, ತಮ್ಮ ಧ್ಯೇಯಗಳಾವುವು ಅವುಗಳನ್ನು ಸಾಧಿಸುವುದಕ್ಕೆ ಸದ್ಯಕ್ಕೆ ಇದಿರು ಇರುವ ವಿಧ್ಯಮಾನಗಳು ಯಾವುವು ಎಂಬುದನ್ನು ಚೆನ್ನಾಗಿ ವಿಚಾರಿಸಿ ತಿಳಿಯಬೇಕಾಗಿದೆ ಇಲ್ಲದಿದ್ದಲ್ಲಿ, ಮಂತ್ರಿಗಳು ಜಯಶೀಲರಾಗಲೂ ಅವಕಾಶವಿಗದು, ಆಕ್ಷೇಪಗಳೂ ಹೆಚ್ಚಬಹುದು

ಮಂತ್ರಿಗಳಿಗೆ ರಾಜ್ಯಭಾರದ ಅನುಭವದ ವಿಚಾರಗಳಲ್ಲಿ ತಮಗೆ ಅಷ್ಟು ತಿಳುವಳಿಕೆ ಕಡಿಮೆಯಾಗಿದೆ ಎನ್ನುವುದಕ್ಕೇನೂ ನಾಚುಗೆಯಿಲ್ಲ ಹದಿನೇಳು ವರ್ಷಗಳಿಂದಲೂ ಅವರು ವಿಮರ್ಶಕರಾಗಿದ್ದರೇ ಹೊರತು, ವಿಧಾಯಕರಾಗಿದ್ದಿಲ್ಲ ಹೀಗಿರುವುದರಿಂದ ಅವರು ಸುಧಾರಣೆಗಳನ್ನು ಮಾಡುವುದರಲ್ಲಿ ವಿಳಂಬಿಸಿದರೆ, ಅವರನ್ನು ದೂರುವುದು ನ್ಯಾಯವಲ್ಲ ಗ್ರಾಮಗಳಲ್ಲೆಲ್ಲ ಒಂದೊಂದು ಸಮಿತಿಯುಂಟಾಗಿ ಕಾಂಗ್ರೆಸಿನ ಕಾರ್ಯಕ್ರಮಕ್ಕೆ ಸಾಧಕ ಬಾಧಕಗಳಾದ ವಿಚಾರಗಳನ್ನು ಚರ್ಚಿಸಿ ನೋಡಿದರೆ, ಆಗ ಮಂತ್ರಿಗಳ ಕರ್ತವ್ಯಗಳಿಗೆ ಬಹಳ ಸಹಾಯವಾಗಬಹುದು ಇಂತಹ ಸಂಘಗಳೇ ಗ್ರಾಮಗಳ ಜೀವಾಳಗಳು

ಎಸೆಂಬ್ಲಿ ಮತ್ತು ಕೌನ್ಸಿಲುಗಳಿಗೆ ಚುನಾವಣೆ ಹೊಂದಿದ ಮಹಸೀಯರು ತಮ್ಮ ವೋಟರರಿಗೆ ಸದಾಸರ್ವದಾ ಸಹಾಯಕರೂ ಬೋಧಕರೂ ಗೆಳೆಯರೂ ಆಗಿ ವರ್ತಿಸಬೇಕಾಗಿದೆ ವೋಟರರ ನಾಲಗೆಯಾಗಿ ಇವರಿರುವರು. ಮಾತ್ರವಲ್ಲದೆ, ಇವರ ತಿಳುವಳಿಕೆಗೆ ಬರುವ ಎಲ್ಲ ವಿಷಯಗಳನ್ನು ಬಹಳ ಚೆನ್ನಾಗಿ ವಿಮರ್ಶಿಸಿ ಪ್ರಾಮುಖ್ಯ ವಿಷಯಗಳನ್ನು ಗೊತ್ತು ಮಾಡಿಕೊಳ್ಳಬೇಕಾಗುವುದು ಎಲ್ಲ ನೌಕರರು ಪ್ರಜಾರಂಜಕರು ಮಾತ್ರವಲ್ಲದೆ ಸರ್ವಿಸಿಗೆ ಸಂಬಂಧಪಟ್ಟಿರುವ ಸೇನಾಧುರಂಧರರು ಎಂದೇ ನಂಬಿ, ಅವರ ನಡೆವಳಿಕವನ್ನು ಇವರು ದೃಷ್ಟಿಯಿಟ್ಟು ನೋಡಬೇಕಾಗುವುದು, ನೌಕರರಿಗೂ ಜನತೆಗೂ ಪರಸ್ಪರ ಮೈತ್ರಿ ವಿಶ್ವಾಸಗಳು ಬೆಳೆದು ಬರುವಂತೆ ಇವರೇ ಪ್ರಯತ್ನಿಸಬೇಕಾಗುವುದು ಇಲ್ಲದಿದ್ದಲ್ಲಿ ಕಾಂಗ್ರೆಸು ಅಧಿಕಾರ ತಳೆದುದೂ, ಇವರು ಕಾಂಗ್ರೆಸ್ ಪ್ರತಿನಿಧಿಗಳಾದರೂ ವ್ಯರ್ಥವೆನಿಸೀತು

ರಾಷ್ಟ್ರೀಯತೆಯ ಭಾವನೆಯು ಹರಡಿಲ್ಲದ ಕಾರಣ, ಗ್ರಾಮಾಂತರಗಳಲ್ಲಿ ಅಲ್ಲಲ್ಲಿನ ಚಿಕ್ಕ ಅಲ್ಪ ವಿಷಯಗಳ ಸಲುವಾಗಿಯೆ ಕಚ್ಚಾಟಗಳಾಗುತ್ತಿದ್ದುದು ಇದು ವರೆಗಣ ಇತಿಹಾಸ ಗ್ರಾಮಗಳಲ್ಲಿ ನಾನಾ ಪಂಗಡಗಳಾಗಿ ಹಗೆತನ ಬೆಳೆವುದಕ್ಕೂ ಆಸ್ಪದ ಹೆಚ್ಚಾಗಿದ್ದಿತು ಅತ್ಯಲ್ಪ ವಿಷಯಗಳಿಗಾಗಿ ದಂಗೆಗಳೂ ಕೊಲೆಗಳೂ ಆದುದುಂಟು ವ್ಯಾಜ್ಯಗಳು ಇಡೀ ಗ್ರಾಮಗಳನ್ನೆ ದಾರಿದ್ರ್ಯಕ್ಕೆ ಬಲಿಯೊಪ್ಪಿಸಿ ಹಾಳುಬಿದ್ದುದುಂಟು ಇನ್ನು ಗ್ರಾಮವೆಂದರೆ ಒಂದು ಸಂಘವೆಂಬಂತೆ, ಕುಟುಂಬವೆಂಬಂತೆ ಎಲ್ಲರೂ ವರ್ತಿಸುವ ಹಾಗೆ ಗ್ರಾಮದ ಹಿರಿಯರು ಆ ಕುಟುಂಬವನ್ನು ನಡೆಸಿ ಬರುವ ಹಾಗೆ ಕಾಂಗ್ರೆಸು ಪ್ರತಿನಿಧಿಗಳು ಏರ್ಪಾಡಬೇಕಾಗಿದೆ

ಗ್ರಾಮೋದ್ಧಾರ ಕಾರ್ಯಗಳಲ್ಲೆಲ್ಲ ಸಹಾಯ ಮಾಡುವ ಗ್ರಾಮಸೇವಕರು ಇನ್ನು ತಲೆದೋರಬೇಕು ಹೊಂದಬೇಕು ಕಾಂಗ್ರೆಸಿನ ಆಜ್ಞೆ ಪಾಲಿಸಿ ದುಡಿದು ಅನುಭವ ಹೊಂದಿರುವ ಯುವಕರ ಸಂಖ್ಯೆ ದೊಡ್ಡದಾಗಿದೆ ಈ ಯುವಕರು ಗ್ರಾಮೋದ್ಧಾರ ಕಾರ್ಯಕ್ಕೆ ನೆರವಾಗುವಂತಾಗಬೇಕು ಗ್ರಾಮಗಳಿಗೆ ಅಥವಾ ಗ್ರಾಮಸ್ಥರಲ್ಲಿ ಉಂಟಾಗುವ ಕುಂದುಗಳನ್ನು ನಿವಾರಿಸಲು ಈ ಯುವಕರು ಸಿದ್ಧರಿರಬೇಕು ಈ ಬಗೆಯಲ್ಲಿ ಸೇವಾ ದುರಂಧರತೆಯನ್ನು ಅವರಲ್ಲಿ ಹುಟ್ಟಿಸುವುದಕ್ಕೆ ಕಾಂಗ್ರೆಸ್ ಸದಸ್ಯರೂ ಪ್ರತಿನಿಧಿಗಳೂ ತುಂಬಾ ಸಹಾಯ ಮಾಡಬೇಕು ಹೀಗಾದರೆ ಮಾತ್ರ, ಮಂತ್ರಿಗಳಿಗೆ ಯಾವುದೊಂದು ವಿದದಲ್ಲಿ ಸುಧಾರಣೆಗಳನ್ನು ಮಾಡಲೂ, ಮಂತ್ರಿಗಳು ಮಾಡುವ ಸೂಚನೆಗಳನ್ನು ಗ್ರಾಮಗಳಲ್ಲಿ ಸಹ ಆಚರಣೆಗೆ ತರಲೂ ಸುಲಭವಾದೀತು ಜನರೆಲ್ಲರು ಜಾಗ್ರತರಾಗುವಷ್ಟಕ್ಕೆ, ರಾಜ್ಯಭಾರವು ಚೆನ್ನಾಗುವುದು

ಆದರೆ—ಇವಿಷ್ಟು ಬಗೆಯ ಕಷ್ಟಸಾಧ್ಯ ಕಾರ್ಯಕ್ರಮಗಳನ್ನು ಕಾಂಗ್ರೆಸಿನ ಅಧಿನಾಯಕರು ಸೂಚಿಸುವಾಗ, ಎಲ್ಲವೂ ಎಲ್ಲೆಲ್ಲಿಯೂ ಸಾಧ್ಯವಾದೀತೇ ಎಂದು ಸಂದೇಹಪಡುವವರಿರುವರು ಆಚರಣೆಯಿಂದಲೇ ಸಂದೇಹ ನಿವಾರಣೆಯಾಗಬೇಕು ವಿನಾ ಭಾವಿಸಿ ಕೂತು ಫಲವಿಲ್ಲ

ಚೀನಾ ಜಪಾನು ಸಮರವು ಶಾಂತವಾಗಲಿಲ್ಲ ಚೀನಿಯರು ಕ್ಷಮೆಬೇಡಬೇಕೆಂಬುದು ಜಪಾನೀಯರ ಸಂಧಾನದ ಶರ್ತಗಳಲ್ಲೊಂದು. ಸಂಧಾನ ಮಾತುಕತೆಗಳು ನಡೆಯುತ್ತವೆ.

ಬಹುಪ್ರಖ್ಯಾತಿಪಟ್ಟಿದ್ದು ಪ್ರಪಂಚದ ಅದ್ವಿತೀಯ ನವಶೋಧೆ.

ಬಿಮಲಾ ಮಾತ್ರೆಗಳು

ಬಿಮಲಾ ಪಿಲ್ಸ್ ಅಥವಾ ಮಾತ್ರೆಗಳೆಂಬ ಹೆಸರನ್ನು ಕೇಳಿದ ಕೂಡಲೇ ಬಹು ಕಾಲದ ಜಾಡ್ಯಗಳೂ, ರೋಗಗಳೂ ಹೆದರಿ ನಡುಗುತ್ತವೆ. ವೈದ್ಯಕೀಯ ಚಾತುರ್ಯವನ್ನು ತಪ್ಪಿಬ್ಬಾಗಿ ಮಾಡಿದ ನಾನಾ ತರದ ಹಳೇ ವ್ಯಾಧಿಗಳನು ಬಿಮಲಾ ಮಾತ್ರೆಗಳು ಗುಣಪಡಿಸಿ ಆಶ್ಚರ್ಯವನ್ನುಂಟುಮಾಡಿದೆ ಧರ್ಮಾರ್ಥ ಕಳುಹಿಸುವ ಹಸ್ತಪುಸ್ತಕಗಳಿಗೂ, ಸೂಚನೆಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

೨೫ ಮಾತ್ರೆಗಳಿಗೆ ರೂ. 5/-; 50 ಮಾತ್ರೆಗಳಿಗೆ ರೂ. 9-8-0. 100 ಮಾತ್ರೆಗಳಿಗೆ ರೂ. 18;

ಎಲ್ಲಾ ಔಷಧಿಗಳಿಗೂ ಪೆಕಿಂಗ್ ಮತ್ತು ಟಿ. ಖರ್ಚು ೪ ಆಣೆ ಪ್ರತ್ಯೇಕ.

Kaviraj S. C Mukherjee, B. A S.

Ayurvedic Institution Kalighat P O Calcutta

ಮಂಗಳೂರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಕಟನೆ.

ಈ ಕೆಳಗೆ ಕಾಣಿಸಿದ ವಿಷಯಗಳ ಕುರಿತು ಜಿಲ್ಲಾ ಕಮಿಟಿಯವರು ಮಾಹಿತಿಯನ್ನು ಸಂಗ್ರಹಿಸುತ್ತಿರುವುದ ರಿಂದ ಸರಿಯಾದ ಮಾಹಿತಿ ಇದ್ದವರು ಅದನ್ನು ಆದಷ್ಟು ಬೇಗನೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿಗೆ ಕಳುಹಿಸ ಬೇಕಾಗಿ ಈ ಮೂಲಕ ವಿನಂತಿ.

೧. ಅಸಹಕಾರ ಚಳವಳ ಮತ್ತು ಸತ್ಯಾಗ್ರಹ ಚಳವಳಗಳಲ್ಲಿ ಭಾಗವಹಿಸಿದ ಕಾರಣದಿಂದಾಗಿ ಕೆಲಸ ವನ್ನು ತೆಗೆದ ಗ್ರಾಮ ಉದ್ಯೋಗಸ್ಥರು, ಉಪಾಧ್ಯಾಯರು, ಸರಕಾರಿ ಮತ್ತು ಸ್ಥಳೀಕ ಬೋರ್ಡು ವರ್ಗ್ಗದ ನೌಕರರು—ಇವರ ಹೆಸರು ಮತ್ತು ವಿಳಾಸ ೨. ೨. ರಾಜಕೀಯ ತಪ್ಪುಗಳಿಂದ ಶಿಕ್ಷೆಹೊಂದಿ ಜುಲ್ಮಾನೆ ದೈಲಿನಲ್ಲಿರುವವರ ಹೆಸರು ಮತ್ತು ವಿಳಾಸ ಮತ್ತು ಅದರ ಮೇಲಾದ ಸಂಬ್ರಧ ಮಾಹಿತಿ ಮತ್ತು ಶಿಕ್ಷೆಯ ವಿವರ

ರಾಷ್ಟ್ರಪತಿಗಳ ಸಂದೇಶ

ತಾರೀಕು ೧—೮—೧೯೩೭ರ ಸಮಾರಂಭ ಕಾಂಗ್ರೆಸಿನವರು ಮಂತ್ರಿಪದವಿಗಳನ್ನು ಸ್ವೀಕರಿಸಿದ ಧೋರಣೆಯನ್ನು ಸಾರ್ವಜನರು ಸರಿಯಾಗಿ ತಿಳಿಯುವಂತೆ ಮಾಡುವುದು ಅವಶ್ಯವೆಂಬುದರಿಂದ ತಾ ೧—೮—೧೯೩೭ನೇ ದಿನವನ್ನು ಅದಕ್ಕೆ ಅಖಿಲಭಾರತ ದಿನವನ್ನಾಗಿ ಆಚರಿಸಬೇಕಾಗಿ ಪಂಡಿತ ಜವಾಹರಲಾಲರ ಸಂದೇಶವು ಬಂದಿರುತ್ತದೆ. ಆದಿನ ಕಾರ್ಯಕ್ರಮವು ಈ ಕೆಳಗಿನಂತಿದೆ.—

೧ ರಾಷ್ಟ್ರ ಧ್ವಜವಂದನೆ ಬೆಳಿಗ್ಗೆ ಗಂಟೆ ೮ಕ್ಕೆ ಸಾಯಂಕಾಲ ಸಾರ್ವಜನಿಕ ಸಭೆ, ಸಭೆಯಲ್ಲಿ ಜುಲೈ ತಿಂಗಳಲ್ಲಿ ವಾರ್ಧಾದಲ್ಲಿ ವರ್ಕಿಂಗ್ ಕಮಿಟಿಯಲ್ಲಿ ಅಂಗೀಕೃತವಾದ ನಿರ್ಣಯವನ್ನು ಓದಿ ವಿವರಿಸುವುದು ಕಾಂಗ್ರೆಸಿನ ಸಂಪೂರ್ಣ ಸ್ವಾತಂತ್ರ್ಯದ ಉದ್ದೇಶವನ್ನು ಪುನ ದೃಢೀಕರಿಸುವುದು ಜಿಲ್ಲೆಯಲ್ಲಿಯ ಎಲ್ಲಾ ಪಟ್ಟಣ ಹಾಗೂ ಗ್ರಾಮಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಬೇಕಾಗಿ ಎಲ್ಲಾ ಕಾಂಗ್ರೆಸ್ ಕಮಿಟಿಗಳಿಗೂ ಸಹಾಯಕರಿಗೂ ಈ ಮೂಲಕ ವಿನಂತಿ ಎಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪ್ರೆಸ್ ಕೆಲಸಗಾರರ ಸಂಘಸ್ಥಾಪನೆ.

ಮಂಗಳೂರು ಶಹರಿನ ಪ್ರೆಸ್ ಕೆಲಸಗಾರರ ಸಭೆಯು ಈ ಮೊದಲೇ ನಿಶ್ಚಯವಾಗಿರುವಂತೆ ರಥಬೀದಿಯಲ್ಲಿರುವ ಕಾಂಗ್ರೆಸ್ ಸಮಾಜವಾದಿ ಕಾರ್ಯಾಲಯದಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ತಾ ೨೫—೬—೧೯೩೭ನೇ ಆದಿತ್ಯವಾರ ಸಂಜೆ ಗಂಟೆ ೫ಕ್ಕೆ ನೆರೆಯಿತು. ಅಧ್ಯಕ್ಷೆಯವರು ಸಂಘಸ್ಥಾಪನೆಯ ಕುರಿತು ಪ್ರಸ್ತಾಪಿಸಿದ ನಂತರ ಸಂಘದ ಧ್ಯೇಯ ಮತ್ತು ನಿಯಮಾವಳಿಗಳು ಸವಿವರವಾಗಿ ಚರ್ಚಿಸಲ್ಪಟ್ಟು ಸರ್ವಾನುಮತದಿಂದ ಮಂಜೂರಾದುವು. ಆಗಲೇ ೧೦೦ಕ್ಕಿಂತಲೂ ಹೆಚ್ಚು ಮಂದಿ ಸಂಘದ ಮೆಂಬರರಾಗಿ ಸೇರಿಸಲ್ಪಟ್ಟರು. ಕಾರ್ಯಕಾರೀ ಸಮಿತಿಗೆ ಶ್ರೀಮತಿ ಕಮಲಾದೇವಿ (ಅಧ್ಯಕ್ಷೆ), ಶ್ರೀಗಳಾದ ಬಿ. ವಿ. ರಾವ್ (ಕಾರ್ಯದರ್ಶಿ), ವಿಠಪ್ಪ ಶೆಟ್ಟಿ (ಜತೆಕಾರ್ಯದರ್ಶಿ), ಎಮ್. ಲಕ್ಷ್ಮಣ (ಕೋಶಾಧ್ಯಕ್ಷ), ಜೆ. ಲೋಬೊ, ಎ ಶಾಂತಿರಾಜ, ಬಿ ಎಸ್. ಶೆಟ್ಟಿ, ಸದಪ್ಪ ಶೆಟ್ಟಿ ಪಾಸ್ಕಲ್ ಲೋಬೊ, ಕಾಮು ಶೆಟ್ಟಿ, ತಿಮ್ಮಪ್ಪ ಶೆಟ್ಟಿ, ಎಚ್. ನಾರಾಯಣ ನಾಯಕ್, ವಿಠಪ್ಪ ಶೆಟ್ಟಿ, ಎಮ್. ಗುರುವಪ್ಪ, ಬಿ. ಆನಂದ, ನಾಗಪ್ಪ, ದೇವಪ್ಪ, ಕೆ ಸುಂದರರವರನ್ನು ಸೇರಿಸಿಕೊಳ್ಳಲಾಯಿತು. ತಾ. ೩೦ರಲ್ಲಿ ಕಾರ್ಯಕಾರೀ ಮಂಡಳಿಯ ಸಭೆ ನೆರೆದು ಮುಂದಿನ ಕೆಲಸದ ಕುರಿತು ನಿರ್ಧಾರವಾಗಿರುವುದು.

ಶ್ರೀ ವಿವೇಕಾನಂದ ಸಭಾ, ರಾಘವಾಶ್ರಮ

ಇದೇ ಬರುವ ಆಗೋಸ್ತು ತಾ. ೧ನೇ ಆದಿತ್ಯವಾರ ದಿನ ಈ ಸಭೆಯಲ್ಲಿ ಗವರ್ನಮೆಂಟ್ ಕಾಲೇಜಿನ ಕನ್ನಡ ಪಂಡಿತರಾದ ಶ್ರೀಯುತ ಸೀತಾರಾಮಾಚಾರ್ಯರವರು "ಅಧ್ಯಾತ್ಮ ಜ್ಞಾನ" ಎಂಬ ವಿಷಯವನ್ನೆತ್ತಿ ಕನ್ನಡದಲ್ಲಿ ಭಾಷಣಮಾಡುವರು ಎಲ್ಲರಿಗೂ ಸುಸ್ವಾಗತವಿದೆ.

ಹೋಟೇಲು ಕೆಲಸಗಾರರ ಸಭೆ.

ಮಂಗಳೂರಿನ ಹೋಟೇಲು ಕೆಲಸಗಾರರ ಸಭೆಯೊಂದು ಇದೇ ತಾ. ೧—೮—೧೯೩೭ನೇ ಆದಿತ್ಯವಾರ ರಾತ್ರಿ ೯ ಗಂಟೆಗೆ ರಥಬೀದಿಯಲ್ಲಿರುವ ಕಾಂಗ್ರೆಸ್ ಸಮಾಜವಾದಿ ಕಾರ್ಯಾಲಯದಲ್ಲಿ ಸೇರಲಿರುವುದು. ಶ್ರೀ ಬಿ. ವೆಂಕಟರಾಯ ಬಾಳಿಗ ಎಂ. ಎಲ್. ಎ. ಯವರು ಅಧ್ಯಕ್ಷಸ್ಥಾನ ವಹಿಸಲಿರುವರು. ಎಲ್ಲಾ ಕೆಲಸಗಾರರೂ ಬರಬೇಕಾಗಿ ವಿನಂತಿ.

ಇಂಡೊ ಕರ್ನಾಟಿಕ್ ಬೇಂಕ್ ಲಿಮಿಟೆಡ್

ಇದರ ಒಂದು ಶಾಖೆಯು ಮಂಗಳೂರು ಟೌನ್ ಪೋಲೀಸ್ ಸ್ಟೇಷನಿನ ಎದುರಿನಲ್ಲಿ ಇದೇ ತಾ. ೨೯ನೇ ದಿನ ತೆರೆಯಲಾಗಿದೆ. ದಿ. ಕೆನರಾ ಬೇಂಕಿಂಗ್ ಕಾರ್ಪೋರೇಷನ್, ಬಂದರ ಬ್ರೆಂಚಿನ ಏಜಂಟರಾಗಿದ್ದ ಶ್ರೀ ಮಲ್ಯರು ಇದರ ಏಜಂಟರಾಗಿ ನೇಮಕ ಹೊಂದಿರುತ್ತಾರೆ.

ತಾಲೂಕುಗಳಿಂದ.

ಬೆಳ್ತಂಗಡಿ:— ಇಲ್ಲಿ ಶ್ರೀ ಅಗಳವಾಡಿ ದೇವಣ್ಣ ಶೆಟ್ಟರ ಮನೆಯಲ್ಲಿ ಕಾಂಗ್ರೆಸ ಸಭೆಯು ಜರಗಿತು. ಮಂಗಲಪಾಡಿ ಸೀತಾರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ನಮ್ಮ ಜಿಲ್ಲೆಯವರಾದ ಶ್ರೀ ಡಾಕ್ಟರ್ ರಾಮರಾಯರು ಕೌನ್ಸಿಲು ಅಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ಆರ್. ಕಾರಂತ, ಎ. ಬಿ ಶೆಟ್ಟಿ, ಸಿ. ಜಿ. ಪಾರ್ಲಿ ಇವರುಗಳು ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟುದಕ್ಕೆ ಅಭಿನಂದನಗಳನ್ನು ಸಮರ್ಪಿಸುವ ಸೂಚನೆಯು ಮಾನ್ಯವಾಯಿತು. ತಾಲೂಕು ಕಾಂಗ್ರೆಸು ಕಮಿಟಿಗೆ ಶ್ರೀಗಳಾದ ಮಂಗಲಪಾಡಿ ಸೀತಾರಾಮಯ್ಯ ಮತ್ತು ಎ. ದೇವಣ್ಣ ಶೆಟ್ಟಿ ಇವರುಗಳನ್ನು ಪ್ರತಿನಿಧಿಗಳನ್ನಾಗಿ ಆರಿಸಲಾಯಿತು. ಶ್ರೀ ಬಿ. ರಾಮಯ್ಯ ಶ್ಯಾನು ಭಾಗರು "ಕಾಂಗ್ರೆಸಿಗೆ ಏಕೆ ಸದಸ್ಯರಾಗಬೇಕು" ಎಂಬ ವಿಷಯವನ್ನೆತ್ತಿ ಬೋಧಪರ ಭಾಷಣವಿತ್ತರು. ಧನ್ಯವಾದಾರ್ಪಣೆಯ ನಂತರ ಸಭೆಯು ಮುಕ್ತಾಯವಾಯಿತು. ಅತಿಥಿಗಳಿಗೆ ಫಲಾಹಾರಕೊಟ್ಟಿದ್ದಿತು.

ಕಾರ್ಕಳ.— ಜಗದ್ಗುರು ಶ್ರೀ ಆಚಾರ್ಯ ಸ್ವಾಮಿ ಪ್ರಣವಾನಂದರಿಂದ ಸಂಸ್ಥಾಪಿಸಲ್ಪಟ್ಟ ಕಲ್ಕತ್ತೆಯ ಭಾರತ ಸೇವಾಶ್ರಮ ಸಂಘದ ಶ್ರೀಮತ್ ಸ್ವಾಮಿ ಅದ್ವೈತಾನಂದರು ತಾ ೨೦—೬—೧೯೩೭ರ ದಿನ ಶ್ರೀಯುತ ಕಾರ್ಕಳ ಸ್ವಾಮಿ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ "ಆತ್ಮಜ್ಞಾನ" ಎಂಬ ವಿಷಯದ ಮೇಲೆ ತಮ್ಮ ದ್ವಿತೀಯ ಇಂಗ್ಲಿಷ ಭಾಷಣವನ್ನು ಕೊಟ್ಟರು. ಅದರಲ್ಲಿ ಅವರು—ಮನುಷ್ಯಜೀವನದಲ್ಲಿ ಭೌತಿಕ ಮತ್ತು ಪಾರಮಾರ್ಥಿಕ ಜ್ಞಾನದ ಅವಶ್ಯಕತೆ ಮತ್ತು ಮಹತ್ವವನ್ನು ಬೋಧಿಸಿದರು. ತರುಣರನ್ನೂ ವಿದ್ಯಾರ್ಥಿಯರನ್ನೂ ಪ್ರತ್ಯೇಕವಾಗಿ ಉದ್ದೇಶಿಸಿ ಬ್ರಹ್ಮಚರ್ಯ ಪಾಲನೆಯ ಆಗತ್ಯ ಮತ್ತು ಸಾಧನೋಪಾಯಗಳನ್ನೂ ಅವರ ಕರ್ತವ್ಯಗಳನ್ನೂ ತೋರಿಸಿಕೊಟ್ಟರು. ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ಅವರ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿದರು. ಪಾರಮಾರ್ಥಿಕ ವಿಷಯಗಳ ಮೇಲೆ ಇಂಥ ಭಾಷಣಗಳು ಇಲ್ಲಿ ಕೆಲ ಕಾಲದಿಂದೀಚೆಗೆ ಆಗಿಲ್ಲವೆಂದು ಪ್ರತಿಯೊಬ್ಬರು ಅವುಗಳನ್ನು ಶ್ಲಾಘಿಸುತ್ತಿರುವರು

ಕಾರ್ಕಳ ಶ್ರೀ ಸ್ವಾಮಿ ಪ್ರಭುಗಳವರು ಸ್ವಾಮಿಯವರ ಮಾತುಗಳನ್ನೇ ಇತಿಹಾಸ ಪ್ರಮಾಣಗಳ ಆಧಾರದಿಂದ ಪುಷ್ಟೀಕರಿಸಿ ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟರು ಭಾರತ ಸೇವಾಶ್ರಮ ಸಂಘವು ಜಾತಿಮತ ವರ್ಣಭೇದಗಳನ್ನಿಟ್ಟುಕೊಳ್ಳದ ಸೈಕೊಂಡಿರುವ ಲೋಕೋದ್ಧಾರ ಕಾರ್ಯವು ಅತ್ಯುತ್ತಮವೂ ಅನುಕರಣೀಯವೂ ಆ ದುವುದರಿಂದ ಆ ಸಂಘಕ್ಕೆ ಶ್ರೇಯೋತ್ಪಾದಕ ಸಹಾನುಭೂತಿಯನ್ನು ತೋರಿಸುವುದು ಪ್ರತಿಯೊಬ್ಬ ದೇಶವಾಸಿಯ ಕರ್ತವ್ಯವಾಗಿರುವುದೆಂದರು. ಶ್ರೀಯುತ ವಕೀಲ ಲಕ್ಷ್ಮಣ ಕಾಮ್ತರು ಧನ್ಯವಾದ ಸಮರ್ಪಣೆ ಮಾಡಿದ ಬಳಿಕ ಸಭಾಕಾರ್ಯವು ಮುಗಿಯಿತು

ಶ್ರೀ ಸ್ವಾಮಿಯವರು ಇಲ್ಲಿ ಇದ್ದಷ್ಟು ದಿನ ಪ್ರತಿ ನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ತಾವು ಇಳಕೊಂಡಿದ್ದ ಶ್ರೀ ವೆಂಕಟ್ರಮಣ ದೇವಾಲಯದ ಧರ್ಮಶಾಲೆಯಲ್ಲಿ ಸ್ವಾಮಿಯವರ ಧರ್ಮೋಪದೇಶವು ನಡೆಯುತ್ತಿತ್ತು. ಅವರ ಉಪದೇಶಾಮೃತದ ಪಾನಮಾಡಲಿಕ್ಕೆ ಆಬಾಲವೃದ್ಧರು ಮಾತ್ರವಲ್ಲದೆ ಇಂಗ್ಲಿಷ ಶಿಕ್ಷಣವನ್ನು ಪಡೆದಂಥ ದೊಡ್ಡ ದೊಡ್ಡ ಪದವೀಧರರು ಕೂಡ ಬರುತ್ತಿದ್ದರೆಂಬುದೇ ಸ್ವಾಮಿಯವರ ದೊಡ್ಡಸ್ತಿಕೆಯನ್ನು ತೋರಿಸುತ್ತದೆ.

ತಾ. ೨೩—೬—೧೯೩೭ ದಿನ ಶ್ರೀ ಸ್ವಾಮಿಯವರು ತಮ್ಮ ಇತರ ಕೆಲಸಗಾರರೊಂದಿಗೆ ಉಡುಪಿ ಕಡೆಗೆ ಪ್ರಯಾಣಬೆಳೆಸಿರುವರು. ಅವರು ಹೋದಲ್ಲೆಲ್ಲಾ ಅವರ ಗುಣೋಚಿತವಾದ ಸ್ವಾಗತೋಪಚಾರಗಳು ನಡೆಯುವವೆಂದು ಆಶಿಸಲಾಗುತ್ತದೆ.

ಮದ್ರಾಸು ಆಂಧ್ರ ವಿಶ್ವವಿದ್ಯಾಲಯಗಳ ಸಂಸ್ಕೃತ ಪದವೀಧರರೂ ಕಲ್ಕತ್ತಾ ವಿಶ್ವವಿದ್ಯಾಲಯದ ಕಾವ್ಯತೀರ್ಥರೂ ಆಗಿರುವ ಇಲ್ಲಿಯ ಬಪ್ಪಂಜೆ ಲಕ್ಷ್ಮೀನಾರಾಯಣ ಶೆಣೈಯವರಿಗೆ ಅವರ ವಿದ್ವತ್ಪಾಂಡಿತ್ಯಗಳನ್ನು ಪ್ರಶಂಸಿಸಿ ಕರವೀರ ಮಠದ ಶ್ರೀ ಜಗದ್ಗುರು ಶಂಕರಾಚಾರ್ಯ (ಡಾ॥ ಕುರ್ತಕೋಟಿ)ಯವರು "ವಿದ್ಯಾಲಂಕಾರ" ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿರುವರೆಂಬುದನ್ನು ತಿಳಿದು ನಮಗೆ ಅತೀ ಆನಂದವಾಗುತ್ತದೆ. ಶ್ರೀ ಶೆಣೈಯವರು ಇಂಥ ಇನ್ನೂ ಅನೇಕ ಸನ್ಮಾನಗಳಿಗೆ ಪಾತ್ರರಾಗಲೆಂದು ಹಾರೈಸುವೆವು.

ಬಂಟ್ವಾಳ— ಇದೇ ತಿಂಗಳ ತಾ. ೩೧ನೇ ಶನಿವಾರ ಸಾಯಂಕಾಲ ಗಂಟೆ ೪ಕ್ಕೆ ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಒಂದು ವಿಶೇಷಸಭೆಯು ಜರಗಲಿರುವುದು. ಚರ್ಚಿಸಲಿರುವ ವಿಷಯಗಳು ಮಹತ್ವದ್ದಾದ ಕಾರಣ ಸದಸ್ಯರೆಲ್ಲರು ತಪ್ಪದೆ ಬರಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮೂಲ್ಕಿ:—ರಾಷ್ಟ್ರಪತಿ ನೆಹರೂಗಳವರ ಸಂದೇಶದಂತೆ ಇದೇ ಬರುವ ತಾ. ೧—೮—೧೯೩೭ನೇ ಆದಿತ್ಯವಾರ ಸ್ಥಳೀಯ ಕಾಂಗ್ರೆಸ್ ಕಮಿಟಿ ಕಛೇರಿಯ ಎದುರುಗಡೆ ಬೆಳಿಗ್ಗೆ ೮ ಗಂಟೆಗೆ ನಡೆಯುವ ರಾಷ್ಟ್ರ ಧ್ವಜವಂದನೆ ಸಮಾರಂಭಕ್ಕೂ, ಅದೇ ದಿನ ಸಾಯಂಕಾಲ ೫ ಗಂಟೆಗೆ ಸ್ಥಳೀಯ ಬಿಲ್ಲವ ಸಮಾಜದ ಹೋಲಿನಲ್ಲಿ ನಡೆಯುವ ಸಾರ್ವಜನಿಕ ಸಭೆಗೂ ಎಲ್ಲರೂ ಬಹುಸಂಖ್ಯಾತರಾಗಿ ನೆರೆದು ಬಂದು ಸಭೆಯನ್ನು ಚಂದಗಾಣಿಸಿಕೊಡುವಂತೆ ಸ್ಥಳೀಯ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರು ವಿನಂತಿಸಿಕೊಳ್ಳುತ್ತಾರೆ.

ಮೂಲ್ಕಿ ಸರ್ಕಲಿನಿಂದ ಬರುವ ಜಿಲ್ಲಾ ಬೋರ್ಡಿಗೆ ಒಬ್ಬ ಯೋಗ್ಯ ಮೆಂಬರನನ್ನು ಪ್ರತಿಸ್ಪರ್ಧೆ ಇಲ್ಲದಂತೆ ಆರಿಸುವರೆ ಮೂಲ್ಕಿ ಸರ್ಕಲಿನ ವೋಟರರ ಮಹಾಸಭೆಯೊಂದನ್ನು ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ತಾ. ೬—೮—೧೯೩೭ನೇ ಶನಿವಾರ ಸಾಯಂಕಾಲ ೩ ಗಂಟೆಗೆ ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಸೇರಿಸಲಿರುವರೆಂದು ತಿಳಿದು ಬರುತ್ತದೆ.

ಹಿಂದೂ ಮಹಾಸಭೆಯ ಮೈಸೂರು ಬ್ರಾಂಚಿನ ಗೌರವ ಕಾರ್ಯದರ್ಶಿಯವರಾದ ಶ್ರೀಯುತ ಆಲಿವೂರು ಕೇಶವಪ್ಪಯ್ಯ ಇವರು ಅಲ್ಲಲ್ಲಿ ಹಿಂದೂಧರ್ಮ ಸಂಘಟನೆ ವಿಷಯದಲ್ಲಿ ಭಾಷಣಮಾಡುತ್ತಿದ್ದು ಜನತೆಯ ಪ್ರೋತ್ಸಾಹವನ್ನು ಪಡೆಯುತ್ತಲಿರುವರು.

ಸ್ಥಳೀಯ ಕಲಾಸಂಘದವರ ಚಾಲಕರಿಂದ ನಡೆಯುತ್ತಿರುವ "ಕಿರಿಯರ ಕೂಟಕ್ಕೆ" ಶ್ರೀಯುತ ಡಾ॥ ಎಂ. ರಾಯಪ್ಪ ಕಮ್ತಿರು ಅಧ್ಯಕ್ಷರಾಗಿಯೂ, ಶ್ರೀಯುತ ಬಿ. ಭೋಜರಾಯರು ಉಪಾಧ್ಯಕ್ಷರಾಗಿಯೂ ಬಾಕಿ ೯ ಮಂದಿ ಮೆಂಬರರಾಗಿಯೂ ಸೇರಿ. ಸದರಿ ಸಂಸ್ಥೆಯನ್ನು ಊರ್ಜಿತ ಸ್ಥಿತಿಗೆ ತರಲಿರುವರೆಂದು ತಿಳಿದುಬರುತ್ತದೆ

ಉಡುಪಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಆಚಾರ್ಯ ಶ್ರೀಮತ್ ಸ್ವಾಮಿ ಪ್ರಣವಾನಂದಜೀಯವರಿಂದ ಕಲ್ಕತ್ತದಲ್ಲಿ ಸ್ಥಾಪಿತವಾಗಿರುವ ಭಾರತ ಸೇವಾಶ್ರಮ ಸಂಘದ ಪ್ರಚಾರಕರು ಮಂಗಳೂರಿಗೆ ತಮ್ಮ ಪ್ರಚಾರಕ್ಕೆ ಬಂದಿದ್ದವರು ಕಾರ್ಕಳವನ್ನು ಸಂದರ್ಶಿಸಿ ಇದೇ ತಾ. ೨೩ಕ್ಕೆ ಉಡುಪಿಗೆ ಚಿತ್ತೈಸಿರುತ್ತಾರೆ ಅಂದೇ ಸಾಯಂಕಾಲ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಾನವ ಧ್ಯೇಯಗಳು ಎಂಬ ವಿಷಯವಾಗಿ ಬೋಧಪರವಾದ ಭಾಷಣವನ್ನು ಶ್ರೀಮತ್ ಸ್ವಾಮಿ ಅದ್ವೈತಾನಂದಜೀಯವರ ಮಾಡಿದರು ನಗರಾಧ್ಯಕ್ಷರಾದ ಶ್ರೀ ಎ ಎಲ್ ಎಸ್ ರಾವ್, ಬಿ ಎ ಬಿ ಎಲ್ ರವರು ಅಗ್ರಾಸನವನ್ನು ವಹಿಸಿದ್ದರು ತಾ ೨೬ನೇ ಸಾಯಂಕಾಲವೂ ಸದರಿ ಶ್ರೀ ಸ್ವಾಮಿಯವರು "ಆತ್ಮ ಜಾಗರಣ" ವಿಷಯ ಭಾಷಣಮಾಡಿ, ವಿದ್ಯಾರ್ಥಿಗಳಿಗಾಗಿ ಬ್ರಹ್ಮಚರ್ಯದ ಕುರಿತೂ ಬಿತ್ತಿ ಹೇಳಿ ಸುದನವೂ ಜ್ಞಾನಪದವೂ ಆದ ಗರ್ಭಿತ ವಿಷಯವನ್ನು ಹೇಳಿದರು ಇವರು ನಿತ್ಯವೂ ತಾನು ಬಿಡಾರ ಮಾಡಿಕೊಂಡಿರುವ ಶ್ರೀ ಪಿ ಸಿ ಕಾಮತಿಯವರ ಪ್ರಯಾಣಿಕರ ಭವನದಲ್ಲಿ ಜರಗಿಸುವ ಪೂಜಾ ಕೀರ್ತನ ಭಜನೆಗಳನ್ನು ನೋಡಿ ಕೇಳಲು ಬಹ ಮಂದಿ ತವಕಗೊಂಡು ಬರುತ್ತಿದ್ದಾರೆ ಇನ್ನು ಕೆಲ ದಿನಗಳಲ್ಲಿದ್ದು ಮುಂದಕ್ಕೆ ಕುಂದಾಪುರಕ್ಕೆ ಅಥವಾ ತಲಚೇರಿಗೆ ಪ್ರಯಾಣ ಬೆಳೆಸಲಿರುವರು ಇವರ ಸಂಘದ ಧ್ಯೇಯ ಕಾರ್ಯಕಲಾಪಗಳ ಕುರಿತು ಮುಂದಿನ ಸಂಚಿಕೆಯಲ್ಲಿ ಓದಲು ಧರ್ಮಾಭಿಮಾನಿಗಳು ಮರೆಯಬೇಡಿರಿ.

ದ. ಕ ಜಿಲ್ಲಾ ಬೋರ್ಡು ಉಪಾಧ್ಯಾಯ ಉಪಾಧ್ಯಾಯಿನಿಯರ ತಿಳುವಳಿಕೆ ಬಗ್ಗೆ.

ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರು ಒಮ್ಮೆ ಉಪಾಧ್ಯಾಯರ ಸಂಬಳದ ಕಡಿತವನ್ನು ತೆಗೆದುಹಾಕಿದ ಬಾಬಿನಲ್ಲಿ ಮಾನ್ಯ ಸರಕಾರವು ಅದಕ್ಕೆ ಸಮ್ಮತಿ ಕೊಟ್ಟು ಬೋರ್ಡಿಗೆ ದ್ರವ್ಯಸಹಾಯ ಮಾಡುವಂತೆ ಉಪಾಧ್ಯಾಯರ ಕಷ್ಟ ಸಂಕಷ್ಟಗಳ ಕುರಿತು ಸರಕಾರಕ್ಕೆ "ಮೆಮೋರಿಯಲ್" ತಯಾರಿಸುವ ವಿಷಯದಲ್ಲಿ ಪಿಲ್ಲಾ ಸೆಂಟರು ಗಳಿಗೂ ತಿಳಿಸಿರುವೆನಷ್ಟೆ! ಆದರೆ ಆ ವಿಷಯದಲ್ಲಿ ಹೆಚ್ಚಿನ ಉಪಾಧ್ಯಾಯರು ಗಮನಕೊಡಲಿಲ್ಲ. ಆದ್ದರಿಂದ ಮೆಮೋರಿಯಲ್ ತಯಾರಿಸುವ ಕೆಲಸವನ್ನು ಬಾಕಿ ಇಡಬೇಕಾಗಿ ಬಂತು. ಆದರೆ ಈಗ ಸರಕಾರದ ಸೂಚನೆ ಮೇರೆಗೆ ಡಿ. ಬೋರ್ಡಿನವರು ತಿರುಗಿ ರೂಪಾಯಿಗೆ ೧॥ ಆಣೆಯಂತೆ ಕಡಿತ ಜಾರಿದ್ದಾರಾಗಿಯೂ ಉಪಾಧ್ಯಾಯಿನಿಯರ ಸ್ಕೇಲನ್ನು ಉಪಾಧ್ಯಾಯರ ಸ್ಕೇಲಿನ ಮಟ್ಟಕ್ಕೆ ಕೆಂದು ನಿಶ್ಚಯಿಸಿದ್ದಾರಾಗಿಯೂ ವರ್ತಮಾನ ಇದೆ. ಈ ಬಾಬಿನಲ್ಲಿ ಉಪಾಧ್ಯಾಯರು ಮಾಡತಕ್ಕ ಪ್ರಯತ್ನ ವಿನಾ ದರೂ ಇದೆಯೋ ಇಲ್ಲವಾದರೆ ಮುಂದೇನು ಮಾಡಬೇಕೆಂಬುದು ನಿಶ್ಚಯಿಸುವುದಕ್ಕೆ ತಾ. ೮—೮—೧೯೩೭ನೇ ಆದಿತ್ಯವಾರ ಪೂರ್ವಾಹ್ನ ೧೧ ಗಂಟೆಗೆ ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಶಾಲೆಯ ವಠಾರದಲ್ಲಿ ಡಿ ಬೋರ್ಡು ಸ್ಕೂಲ್ ಉಪಾಧ್ಯಾಯ, ಉಪಾಧ್ಯಾಯಿನಿಯರ ಮಹಾಸಭೆಯು ಜರಗುವುದು. ಅದಕ್ಕೆ ತಪ್ಪದೆ ಎಲ್ಲಾ ಉಪಾಧ್ಯಾಯರೂ, ಉಪಾಧ್ಯಾಯಿನಿಯರೂ ದಯಮಾಡಿಸಿರಿ. ಇದೇ ಬರುವ ಆಗೋಸ್ತು ೩೦ಕ್ಕೆ ಸರಕಾರದ ಬಜೆಟ್ ಮಂಜೂರಾಗಲಿಕ್ಕಿದೆಯಂತೆ. ಅದಕ್ಕೆ ಮೊದಲು ತಾರೀಕು ೧೦—೮—೧೯೩೭ರ ಒಳಗಾದರೂ ನಮ್ಮ ನಿರ್ಣಯವು ಯಾ ನಮ್ಮ ಮನವಿಗಳು ಸರಕಾರಕ್ಕೆ ಡಿ ಬೋರ್ಡು ಮುಖಾಂತರ ತಲಪಬೇಕು ಎಂದು ಕಾರ್ಯದರ್ಶಿ ಪಿ ಬಾಬುಸೆಟ್ಟಿಯವರು ತಿಳಿಸುತ್ತಾರೆ.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಎಂಬೀ ಶುದ್ಧ ಸ್ವದೇಶೀ ಜೀವವಿಮಾ ಕಂಪೆನಿಯು ೧೯೩೬ನೇ ವರ್ಷದ ಕಾರ್ಯವೃತ್ತಾಂತ.

ಭಾರತೀಯ ಶುದ್ಧ ಸ್ವದೇಶೀ ವಿಮಾ ಸಂಘಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಕಾರ್ಯಾರಂಭ ಮಾಡಿರುವುಗಳಲ್ಲಿ ಮೊದಲನೆ ಸಾಲಿಗೆ ಸೇರಿರುವ ಈ ಸಂಘವು ಇಂದಿನ ತನಕವೂ ಅಗ್ರಗಾಮಿಯಾಗುತ್ತಲೇ ಇರುತ್ತಿರುವುದು ಶ್ರೇಯಸ್ಕರವಾಗಿದೆ. ಇದು ಈ ಸಂಘದ ಜೀವನದಲ್ಲಿ ೩೯ನೇ ವರ್ಷ. ಸರ್. ಲಲ್ಲೂಭಾಯಿ ಸಾಮಲದಾಸರವರು ವಿಮಾಶಾಸ್ತ್ರದಲ್ಲಿ ಅಗ್ರಗಣ್ಯರಾಗಿದ್ದು, ಈ ಸಂಘದ ಸಂಸ್ಥಾಪಕರಲ್ಲೊಬ್ಬರೂ ಅಂದಿನಿಂದ ಇದುವರೆಗೂ (ಅವರ ನಿಧನದ ವರೆಗೂ) ಅಧ್ಯಕ್ಷರಾಗಿದ್ದರು. ಅವರ ಯೋಗ್ಯತೆ ಕಾರ್ಯಸಾಧಕತ್ವ ವಿವೇಕ ಇವುಗಳಿಂದಾಗಿಯೆ ಈ ಸಂಘವು ಇಷ್ಟು ಉನ್ನತಿಗೇರಿತು, ಇನ್ನೂ ಉನ್ನತಿಗೇರುತ್ತಲೇ ಇದೆ. ವಾರ್ಷಿಕವಾಗಿ ಒಂದು ಕೋಟಿ ರೂಪಾಯಿಗಳ ವಿಮಾ ಕರಾರುಗಳನ್ನು ಬರೆಯುತ್ತ, (ಹಿಂದಣ ವರ್ಷ ೧॥ ಕೋಟಿ, ವರದಿಯ ವರ್ಷ ೧॥। ಕೋಟಿ) ೫ ವರ್ಷಗಳ ಹಿಂದಣ ಸರಾಸರಿಯ ನಾಲ್ಕು ಪಾಲಷ್ಟು ಹೆಚ್ಚಿನ ವಿಮೆಯನ್ನು ಸರಾಸರಿಯಾಗಿ ಲಭಿಸಿಕೊಂಡಿದೆ, ಅಂತೂ ೨೮ ೨೮೯ ಪೊಲಿಸಿಗಳು ರೂ. ೫,೧೪,೦೦,೦೦೦ ಗಳಿಗಾಗಿ ಈಗ ಈ ಸಂಘದಲ್ಲಿ ಊರ್ಜಿತವಾದ ಸ್ಥಿತಿಯಲ್ಲಿವೆ. ವಾರ್ಷಿಕ ಪ್ರೀಮಿಯಮ್ ಉತ್ಪನ್ನವು (ಹಿಂದಣ ವರ್ಷಕ್ಕಿಂತ ೪। ಲಕ್ಷದಷ್ಟು ಹೆಚ್ಚಾಗಿ) ೨೬॥ ಲಕ್ಷ ರೂಪಾಯಿಗಳಾಗಿದೆ ಸಣದ ಹೀವಣಾತಿಗಳ ಮೇಲೆ ಬಡ್ಡಿಯ ದರ ಇಳಿದಿದ್ದರೂ, ಹಿಂದಣ ವರ್ಷಕ್ಕಿಂತ ಎಲ್ಲ ಮೂಲಗಳ ಬಡ್ಡಿಯ ಆಯವು ೬೦ ಸಾವಿರ ರೂಪಾಯಿ ಹೆಚ್ಚಾಗಿ ಲಭಿಸಿಯದೆ ಕರಾರುಗಳನ್ನು ಹೆಚ್ಚಿಸುವ ಅವಸರದಲ್ಲಿ ಸಿಕ್ಕಾಬಟ್ಟೆ ಜನಗಳ ಜೀವವಿಮೆ ಮಾಡಿದ ಕಾರಣ ಹಿಂದಣ ವರ್ಷಕ್ಕಿಂತ ಈ ವರ್ಷ ಮೃತರಾದ ಪಾಲಿಸಿದಾರರಿಗೆ ಸಂದಾಯ ೩೮,೦೦೦ ರೂಪಾಯಿ ಕಡಿಮೆಯೂ ಸಂತಿತ್ತದು ಸುಮಾರು ೪। ಲಕ್ಷ ರೂಪಾಯಿಯಾಗಿದೆ. ಸಂಘದ ವ್ಯಯವು ಉತ್ಪತ್ತಿ ಹೆಚ್ಚುತ್ತಬಂದರೂ, ಹಿಂದಣ ವರ್ಷಕ್ಕಿಂತ ನೇಕಡಾ ೧೮೦ತ ಇಳಿದೇ ಇದೆ. ಜೀವವಿಮಾ ಭದ್ರತೆಯ ಫಂಡು ಕಳೆದ ವರ್ಷಕ್ಕಿಂತ ೯೩ ಲಕ್ಷ ರೂಪಾಯಿ ಹೆಚ್ಚಿ, ಈಗ ೫೨ ಲಕ್ಷ ರೂಪಾಯಿಗಳಾಗಿದೆ ಭದ್ರತಾ ಪತ್ರಗಳ ಮೊತ್ತದ ಬೆಲೆಯು ಅವುಗಳ ತೆತ್ತಬೆಲೆಕ್ಕಿಂತ ೪ ಲಕ್ಷ ರೂಪಾಯಿ ಹೆಚ್ಚೇ ಆಗಿದೆ.

೬೦ ಬ್ರಿಟಿಷ ೬೬ ಪರದೇಶೀಯ ವಿಮಾ ಕಂಪೆನಿಗಳು ನಮ್ಮ ದೇಶದಲ್ಲಿ ಸರ್ವಸಾಧಾರಣ ಜನಗಳ ವಿಮೆ ಮಾಡುತ್ತಿವೆಯಾದ ಕಾರಣ, ದೇಶೀಯ ಕಂಪೆನಿಗಳು ೧೫ ಮಾತ್ರವಿವೆ ವಿದೇಶೀಯ ಕಂಪೆನಿಗಳ ಬೆಂಬಲಕ್ಕೆ ಬೇರೆ ಬೇರೆ ಗಳಿವೆ, ಅವುಗಳಿಗೆ ಇತರ ಬಗೆಯ ಸತ್ವಸಹಾಯಗಳಿವೆ, ದೇಶೀಯ ಸಂಘಗಳ ಚೇತನ ಕೆಡಿಸುವುದಕ್ಕೆ ಅವುಗಳ ಪ್ರಬಲ್ಯವು ಬೇಕಾದಷ್ಟಿದೆ ಮಾತ್ರವಲ್ಲದೆ, ದೇಶೀಯ ಕಂಪೆನಿಗಳಲ್ಲಿ ವಿಮೆಮಾಡದಂತೆ ವಿರೋಧಿಸುವ ಸ್ಪರ್ಧೆಯ ಸಾಹಸವೂ ಅವುಗಳಲ್ಲಿದೆ. ಜಪಾನಿನಂತೆ ನಮ್ಮ ದೇಶವು ಪರದೇಶೀಯ ಕಂಪೆನಿಗಳು ಕೆಲಸಮಾಡದಂತೆ ತಡೆಯುವ ಬಲಗೊಂಡಿಲ್ಲ. ಸರಕಾರವಾದರೂ ದೇಶೀಯ ಕಂಪೆನಿಗಳಲ್ಲೇ ವಿಮೆ ಎತ್ತುತ್ತಿಲ್ಲ. ಇಷ್ಟು ಸಾಂಪತ್ತಿಕ ಅಡಚಣೆಗಳ ನಡುವೆ ದೇಶೀಯ ಕಂಪೆನಿಗಳು ಹೆಸರು ಉಳಿಸಿಕೊಳ್ಳುವುದು ಕಷ್ಟ. ಇಂತಹ ಸನ್ನಿವೇಶಗಳನ್ನು ಧೈರ್ಯದಿಂದ ತಾಳಿಯೂ ಕೀರ್ತಿಶಾಲಿಗಳಾಗಿ ಉನ್ನತಿ ಸಾಧನೆ ಮಾಡುತ್ತಿರುವ ಇಂತಹ ಸ್ವದೇಶೀ ಕಂಪೆನಿಗಳು ಜನಾಂಗಕ್ಕೂ ದೇಶಕ್ಕೂ ಗೌರವ ತರುವುವಾಗಿವೆ ಎಂಬುದನ್ನು ತಿಳಿದು, ಇನ್ನೂ ಇನಷ್ಟು ಧಾರಾಳವಾಗಿ ಅವುಗಳ ಪ್ರೋತ್ಸಾಹವು ಸಿಗುವಂತಾಗಬೇಕಾದುದು ಈ ದೇಶದ ಜನರ ಕರ್ತವ್ಯ. ವಿಮಾ ಕ್ಷೇತ್ರದಲ್ಲಿ ಪ್ರತಿಯೊಬ್ಬನ ಕರ್ತವ್ಯವೂ ಧರ್ಮವೂ ಆಗಿದೆ. ಈ ವಿಮಾಸಂಘವು ಅಭ್ಯುದಯವನ್ನು ಹೊಂದುತ್ತ ಬರುತ್ತಿರಲಿ.

[illegible]ಾರು ಮಂದಿಗಳು ಮೃತರಾದರು!

ಸ್ಪೈಯಿನನಲ್ಲಿ ಘೋರ ಕದನ!

ದಂಗೆಖೋರರು ಈಗ ಮೆಡ್ರಿಡ್ ನಗರದ [illegible]ಗಳಿಗೆ ಮುತ್ತಿರುವರು. ಅಲ್ಲೀಗ ಘೋರ ಕದನವು ನಡೆಯುತ್ತಿದೆ. ಹಾದಿಯಲ್ಲಿ [illegible] ನಗರಗಳು ಧ್ವಂಸವಾಗಿಹೋ[illegible]ದೆ. ದಂಗೆಖೋರರು ವಿಮಾನಗಳಿಂದ ಬಹು [illegible]ರದ ಧಾಳಿಯನ್ನು ನಡೆಸುತ್ತಿದ್ದಾರೆ. [illegible]ಯುನ್ ಸರಕಾರವು ಇನ್ನೂ ಸ್ಥಿರವಾಗಿಯೇ [illegible]ರುತ್ತದೆ. ಜನರಲ್ ಫ್ರೆಂಕೋನನ್ನು ಧೀರ

[illegible]ದ ರೀತಿಯಲ್ಲಿ ಪ್ರತಿಕೂಲಿಸುತ್ತಿದ್ದಾರೆ ದಂಗೆ[illegible]ರರ ಅನೇಕ ವಿಮಾನಗಳು ಕೆಡಹಲ್ಪಟ್ಟು [illegible]ಕ್ಕುರುಳಿಬಿಟ್ಟವು ಮೆಡ್ರಿಡ್ ನಗರದ ಪಶ್ಚಿಮ[illegible]ಲ್ಲಿ ನಡೆದ ಘೋರಯುದ್ಧದಲ್ಲಿ ದಂಗೆಖೋರ[illegible]ಗೆ ೨೩,೦೦೦ ಪ್ರಾಣನಷ್ಟವಾಗಿದೆಯೆಂದು ಸ್ಪೇ[illegible]ನ್ ವರ್ತಮಾನ ಸಂಸ್ಥೆಯಿಂದ ವಾರ್ತೆಯು [illegible]ಂದಿರುತ್ತದೆ ದಂಗೆಖೋರರ ವಾಯುಬಲವು [illegible]ರಕಾರದಕ್ಕಿಂತ ಶ್ರೇಷ್ಠತರದ್ದೆಂದೂ, ಅನೇಕ [illegible]ಳಲ್ಲಿ ಸರಕಾರಿ ವಿಮಾನಗಳನ್ನೇ ನೆಲ್ಕಕ್ಕುರುಳಿಸಿಬಿಟ್ಟಿರುವರೆಂದು ವದಂತಿಯಿದೆ

ಚೀನಾದಲ್ಲಿ ಯುದ್ಧ.

ಚೀನಾದಲ್ಲಿ ಯುದ್ಧಮಾಡಿಯೇ ತೀರಿಸಿ, ತನ್ನ ಸಾಮ್ರಾಜ್ಯಶಾಹೀ ಇಚ್ಛೆಗಳನ್ನು ನಡೆಯಿಸಬೇಕಾಗಿ ಜಪಾನು ನಿರ್ಧರಿಸಿದಂತೆ ಕಾಣುತ್ತದೆ, ಉತ್ತರ ಚೀನಾದ ಪೈಪಿಂಗ್ ಪ್ರದೇಶದ ಕೆಲವೆಡೆಗಳಲ್ಲಿ ನಿಲ್ಲಿಸಿದ ಚೀನೀಯ ಸೈನ್ಯಮಂಡಲಗಳನ್ನು ಹಿಂತೆಗೆಯಬೇಕು, ಇಲ್ಲದಿದ್ದರೆ ಪರಿಣಾಮಗಳು ಕೆಟ್ಟದಾಗುವುದೆಂದು ಜಪಾನೀಯರು ಎಚ್ಚರಕೊಟ್ಟುದನ್ನು ಚೀನೀಯರು ಉಲ್ಲಂಘಿಸಿದರಿಂದ ಟೈನ್ಟ್ಸಿನ್ ಮತ್ತು ಪೈಪಿಂಗಿನ ಸಮೀಪದ ಘೋರ ಕದನಗಳು ನಡೆದುವು. ಜಪಾನಿಯರು ವಿಮಾನಗಳನ್ನುಪಯೋಗಿಸಿರುವರು ಬಾಂಬುಗಳಿಂದ ಭಯಂಕರ ಧಾಳಿಯು ನಡೆದಿರುತ್ತದೆ ಕೆಲವು ಕಡೆಗಳಲ್ಲಿ ಜಪಾನೀಯ ಸೈನ್ಯಮಂಡಳಗಳು ಚೀನಿಯರಿಂದ ಮುತ್ತಲ್ಪಟ್ಟಿವೆ ಪೈಪಿಂಗಿನಿಂದ ಬರುವ ಟೆಲಿಫೋನ್ ಸರಿಗೆಗಳು ಕಡಿಯಲ್ಪಟ್ಟಾಗಿವೆ ಘೋರ ಯುದ್ಧವು ಖಂಡಿತವಾಗಿ ಪ್ರಾರಂಭವಾಗಿದೆಂದು ಊಹೆಗಳಿವೆ

ನೂತನ ಇಂಡಿಯಾ ಆಕ್ಟಿನ ಕುರಿತು ಬ್ರಿಟಿಷ ಪ್ರತಿಕೂಲತೆ

ಈ ಕುರಿತು, 'ನ್ಯೂ ರಿವ್ಯೂ' ಎಂಬ ಬ್ರಿಟಿಷ ಪತ್ರಿಕೆಯೊಂದು ಹೀಗೆ ಬರೆದಿರುತ್ತದೆ.

ಇಂದಿಯಾ ಸರಕಾರದ ಮೇಲೆ ತನ್ನ ಅಧಿಕಾರ ಇತ್ಯಾದಿಗಳನ್ನು ನಡೆಸುವುದರಲ್ಲಿ ಇಂಡಿಯಾ ಸೆಕ್ರೆಟರಿಗಳಿಗೆ ಸರ್ವಾಧಿಕಾರವು ದೊರೆತಿತ್ತು. ಇಂಡಿಯಾ ಸೆಕ್ರೆಟರಿಗಳು, ಪಾರ್ಲಿಮೆಂಟಿಗೆ ಹೊಣೆಗಾರರು ನಿಜ ಆದರೆ, ಈ ಹೊಣೆಗಾರಿಕೆಯು ಅರ್ಥವು ಸರ್ವರಿಗೂ ವಿಷಯವು. ಇವರೊಬ್ಬರು ಮಾತ್ರ [illegible]ಧಿಕಾರಿಗಳಲ್ಲ—ಪ್ರಾಂತ್ಯಕೀಯ ಗವರ್ನರರು, ತಮ್ಮ ಕ್ಷೀಟ್ಟವರ ಇಚ್ಛೆಗಳಂತೆ ವರ್ತಿಸುವ ಹಕ್ಕು ಮತ್ತು ಇತರ ಅನೇಕ ವಿಶೇಷ ಅಧಿಕಾರಗಳಿಂದ ಸರ್ವಾಧಿಕಾರಿಗಳಾಗಿರುವರು. ಫೆಡರೇಶನಿನ ರಚನೆಯೊಡನೆ ಇನ್ನೋರ್ವ ಸರ್ವಾಧಿಕಾರಿಗಳ ರಚನೆಯಾಗುವುದು—ವೈಸರಾಯರು.

"ಆಶ್ರಿತರಾಜ್ಯಗಳು ಫೆಡರೇಶನನ್ನು ಸೇರುವಂತೆ ಬ್ರಿಟಿಷರು ಅವರಿಗೆ ಲಂಚ ಹಾಕಿರುರೆಂದೂ ಅನೇಕ ಭಾರತೀಯ ಮತ್ತು ಬ್ರಿಟಿಷರ ದೂರು. ನಿಜವಾಗಿಯೂ ಈ ಫೆಡರೇಶನು ಭಾರತೀಯರ ಗುಲಾಮಗಿರಿಯನ್ನು ಸ್ಥಿರಪಡಿಸುವ ಒಂದು ಮಹಾ ಉಪಾಯವು,—ಭಾರತೀಯವನ್ನು ಹಿಂದೂದೇಶಕ್ಕೆ ವಿರೋಧಿಗಳಾಗುವಂತೆ ಮಾಡುವ ಸಾಧನೆಯು ರಾಜಕೀಯ ಹಿಂದೂದೇಶದ ಛಿದ್ರಗೊಳಿಸುವ ಉಪಾಯವು" ಸರ್ ವಿಲಿಯಂ ಬಾರ್ಟನ್—ಗ್ರೇಟ್ ಬ್ರಿಟನ್ ಮತ್ತು ಪೂರ್ವ ಎಂಬ ಲೇಖನದಲ್ಲಿ

ಪಾಶ್ಚಾತ್ಯವು ವಿಜ್ಞಾನಶಾಸ್ತ್ರವನ್ನು ಎಲ್ಲಿಂದ ಕಲಿತುಕೊಂಡಿತು?

ಹಿಂದೀಯ ತತ್ವಶಾಸ್ತ್ರದಿಂದ ನಿಸರ್ಗದ ಕುರಿತು ಅರಿವಾಗುವುದಿಲ್ಲ ಎಂಬುದರಲ್ಲಿ ಸತ್ಯಾಂಶವಿಲ್ಲ ಹಾಗೆ ತಿಳಿಯುವವರು, ಹಿಂದೂದೇಶದ ಸಂಸ್ಕೃತಿ ಚರಿತ್ರೆಯನ್ನು ಬಲ್ಲದವರು ಹಿಂದೂದೇಶವು—ಗಣಿತಶಾಸ್ತ್ರ, ಖಗೋಳಶಾಸ್ತ್ರ ರಸಾಯನಶಾಸ್ತ್ರ, ವೈದ್ಯಕೀಯ ಶಾಸ್ತ್ರ, ಶಸ್ತ್ರ ಚಿಕಿತ್ಸೆ ಮತ್ತು ಎಲ್ಲಾ ತರದ ವಸ್ತು ವಿಜ್ಞಾನ, ಇವುಗಳ ಉಪಯೋಗದಲ್ಲಿ (ಪ್ರಾಚೀನ ಕಾಲದಲ್ಲಿ) ಪ್ರಥಮಸ್ಥಾನವನ್ನು ಪಡೆದಿತ್ತು ಗ್ರೀಕರು ಅರಬಿಯವರಿಗೆ ಬೋಧಕರಾದಂತೆ, ಭಾರತೀಯರು ಕೂಡ ಅರಬಿಯರ ಬೋಧಕರಾಗಿದ್ದರು ಈ ಅರಬಿಯರ ಮೂಲಕ ಯುರೋಪ್ಪದಲ್ಲಿ ನವ ಜಾಗೃತಿಯು—ವಿಜ್ಞಾನ, ಜ್ಞಾನ ಇತ್ಯಾದಿಗಳ ಕುರಿತು ನವಚೇತನವು ಉಂಟಾಯಿತು ಯುರೋಪ್ಪದ ವಿಜ್ಞಾನದ ಅಡಿಕಟ್ಟು ಅರಬಿಯರು—ಅರಬಿಯರ ಬೋಧಕರು ಭಾರತೀಯರು

ರಾಜರುಗಳು ಕೀರ್ತಿಶೇಷ ಪೋಲೀಸರಾಗಿದ್ದ ಕಾಲ.

ಪ್ರಾಚೀನ ಹಿಂದೂದೇಶದಲ್ಲಿ ನಿಜವಾದ ಪ್ರಜಾಪ್ರಾತಿನಿಧ್ಯವಿದ್ದಿತು ಜಾತಿ ವಿಭಾಗಗಳನೇಕವಿದ್ದರೂ, ಅದರಿಂದ ಯಾವತ್ತೂ ತರದ ಅಧ್ಯಂತರಗಳುಂಟಾಗಲಿಲ್ಲ ಆದರೆ, ಹಿಂದೂದೇಶದ ಭೂಗೋಳ ದೆಸೆಯಿಂದ, ವಿವಿಧ ಜಾತಿ ವಿಭಾಗ, ಧರ್ಮ ಇತ್ಯಾದಿಗಳಿಂದ ಹಿಂದೂದೇಶದಲ್ಲಿ ಐಕ್ಯವುಂಟಾಗಲು ಅವಕಾಶವಿಲ್ಲವೆಂದೂ ಪಾಶ್ಚಾತ್ಯರ ಅಭಿಪ್ರಾಯವಾಗಿರುತ್ತದೆ ಆದರೆ, ಅತ್ಯಂತ ಉತ್ತಮ ತರದ ಸೂತ್ರಗಳಿಂದ ಕೂಡಿದ ಪ್ರಜಾಪ್ರಾತಿನಿಧ್ಯವು ನಮ್ಮ ಪ್ರಾಚೀನ ಹಳ್ಳಿಗಳ ಆಡಳಿತದಲ್ಲಿ ಕಾಣಬಹುದು

ಸಂಸ್ಕೃತೀಯ ಪ್ರಜಾಪ್ರಾತಿನಿಧ್ಯವೂ ಕೂಡ ಅಂದು ಬಹಳ ಶ್ರೇಯಸ್ಸನ್ನು ಪಡೆದಿತ್ತು ಯಾವತ್ತೂ ಭೇದವಿಭಾಗಗಳೂ ಕಾರ್ಯಭಂಗವಾಗಿ ನಿಲ್ಲಲಿಲ್ಲ ಎಲ್ಲರೂ ಸರ್ವಸಾಮಾನ್ಯ ಹಿತಗಳಿಗಾಗಿ ಒಟ್ಟುಗೂಡುತ್ತಿದ್ದರು ಹೊರಗಿನವರನ್ನು ತಮ್ಮಲ್ಲಿ ಕೂಡಿಸಿಕೊಳ್ಳುವ ವಿಶೇಷ ಯೋಗ್ಯತೆಯೂ ಅವರಲ್ಲಿತ್ತು ಸಾಮಾಜಿಕ ಕ್ರಮ ಮತ್ತು ಇತ್ಯಾದಿ ನಿಯಮಗಳಿಂದ ಪ್ರಜಾಪ್ರಾತಿನಿಧ್ಯ ಸೂತ್ರವು ನಮ್ಮ ಜನವರ್ಗದಲ್ಲಿ ಅನೇಕ ವರ್ಷಗಳಿಂದ ನಾಟಿಕೊಂಡಿದ್ದುವು ಆಗ ಅರಸರು ಇರುತ್ತಿದ್ದರೂ, ಅವರು ದೇಶದ ಪೋಲೀಸರು—ಯಾ ಶಾಸನಪುರುಷರಾಗಿದ್ದರು.

ನಿಜವಾದ ಸರಕಾರವು ಪ್ರಜೆಗಳೊಡನೇ ಇತ್ತು. ಸ್ಥಳೀಯ ಪಂಗಡಗಳ ಕುರಿತು ಇತ್ಯರ್ಥಗಳೆನ್ನೆಲ್ಲ ಸಣ್ಣ ಸಂಸ್ಥೆಗಳಾದ ಗ್ರಾಮ ಪಂಚಾಯಿತುಗಳಲ್ಲಿ ನಿಷ್ಕರ್ಷೆಯಾಗುತ್ತಿದ್ದವು. ಈ ತರದ ಸರಕಾರವು ನಿಜವಾಗಿಯೂ ಪ್ರಜಾಪ್ರಾತಿನಿಧ್ಯ ಸರಕಾರವೆನ್ನಬಹುದು ಸರಕಾರ ಆಡಳಿತದಲ್ಲಿ ಜನಮತಕ್ಕೆ ಮನ್ನಣೆಯಿತ್ತು. (ಜೆ. ಸಿ. ಕುಮಾರಪ್ಪ—'ಆರ್ಯನ್ ಪಾತ್')

(೯ನೇ ಪುಟದಿಂದ ಮುಂದುವರಿಸಿದುದು)

ರಚಿಸುವ ಸ್ಥಿತಿಗೆ ನಾವಿನ್ನೂ ಬರಲಿಲ್ಲ ಇಂದು ಈ ಅಧಿಕಾರವು ಅನ್ಯ ಪ್ರಭುತ್ವದೊಡನಿರುವುದು. ಈ ಪ್ರಭುತ್ವವು ಇಂದು ಸಂಗಾತಿಯ ಸಹಾಯದಿಂದ ಮೆಶಿನು ತುಪಾಕಿಗಳಿಂದ, ಆ ಅಧಿಕಾರವನ್ನು ತನ್ನಲ್ಲಿ ರಕ್ಷಿಸಿಕೊಳ್ಳಲು ಪ್ರಯತ್ನಪಡುತ್ತದೆ ನೂತನ ಇಂಡಿಯಾ ಆಕ್ಟಿನಲ್ಲಿ ಸ್ವಯಂಪ್ರಭುತ್ವದ ಸೂತ್ರಗಳ ಪ್ರಕಾರ ಅಧಿಕಾರವೆಲ್ಲವೂ ಮಹಾಜನಗಳಿಗೆ ಇರಬೇಕು ಮತದಾರರಿಗೆ ಮಾತ್ರ ಮಂತ್ರಿಗಳನ್ನು ತೆಗೆಯುವ ಯಾ ನೇಮಿಸುವ ಅಧಿಕಾರವಿರಬೇಕು ಆದರೆ ಇಲ್ಲಿ ಬೇರೆ ಒಂದು ಅಧಿಕಾರವು ರೂಢಿಯಲ್ಲಿರುವುದು—ಬ್ರಿಟಿಷ ಸಾರ್ವಭೌಮತೆ ಸಾರ್ವಭೌಮತೆ ಹಿತಗಳು ಮತ್ತು ರಾಷ್ಟ್ರೀಯ ಹಿತಗಳು ಒಟ್ಟುಗೂಡಿ ಎಂದಿಗೂ ಕಾರ್ಯಿಸಲೊಲ್ಲವು ಒಂದು ಇನ್ನೊಂದರ ಮೇಲೆ ಅಧಿಕಾರ ನಡೆಯಿಸಲಿಚ್ಛಿಸುವುದು ನೂತನ ಆಕ್ಟಿನ ಪ್ರಕಾರ, ಸಾರ್ವಭೌಮ ಹಿತದ ಪ್ರಾತಿನಿಧ್ಯವು ಗವರ್ನರರಲ್ಲಿದೆ, ಅವರ ವಿಶೇಷ ತರದ ಅಧಿಕಾರಗಳಲ್ಲಿದೆ ಅವರು ಪ್ರಜಾವರ್ಗಕ್ಕೆ ಹೊಣೆಗಾರರಲ್ಲ—ಬ್ರಿಟಿಷ ಪಾರ್ಲಿಮೆಂಟಿಗೆ ಸಾರ್ವಭೌಮತೆ ಹಿತಗಳಿಗೂ ರಾಷ್ಟ್ರೀಯ ಹಿತಗಳಿಗೂ ತಿಕ್ಕಾಟ ನಡೆದರೆ ರಾಷ್ಟ್ರೀಯ ಹಿತಗಳನ್ನು ಬದಿಗಿಡುವ ಅಧಿಕಾರವು ಅವರಲ್ಲಿದೆ. ಮತ್ತು ರಾಷ್ಟ್ರಪತಿಯವರು ನಮೂದಿಸಿದಂತೆ—ಹಿಂದೂದೇಶದ ಮತ್ತು ಸಾರ್ವಭೌಮತೆಯ ಸಂಬಂಧವು ಒಂದಿಷ್ಟು ಬದಲಾಗಲಿಲ್ಲ ಸಫಲಕರಣೆ ಮತ್ತು ಹೊರಗಿಯ್ಲ ಅಲ್ಲೇ ಇರುತ್ತದೆ ಈ ಅಧಿಕಾರ ದರ್ಪದ ಕಾರಣ ದೇಶದ ಸಂಗ್ರಾಮ ವರ್ಗವು ಅಲ್ಲೇ ಇರುವುದು ಹಿಂದೂದೇಶದ ಆರ್ಥಿಕದ ಮೇಲಿನ ಸಾರ್ವಭೌಮತೆಯ ಹಿಡಿತವು ಹಾಗೆನೆ ಇರುವುದು ಆದ್ದರಿಂದ ಈ ಮಹೋತ್ಸವು ಸಂತೋಷ ಸೂಚಕವೆ? ಆದರೂ ಆಗೋಸ್ತು ಒಂದನ ದಿನಾಚರಣೆ ಅದಕ್ಕಾಗಿ—ಎಂಬ ಅಭಿಪ್ರಾಯ ಹೊಂದುವವರು ಅನೇಕರಿರುವರು

ಸ್ವಯಂಪ್ರಭುತ್ವ ಸೂತ್ರವನ್ನು ಹಿಂದೂದೇಶವು ಎಂದಿಗೂ ಬಿಡುವ ಹಾಗಿಲ್ಲ—ಮುಂದಿನ ರಾಜ ಶಾಸನವನ್ನು ನಿರ್ಮಿಸುವ ಅಧಿಕಾರ ಕಾನ್ಸ್ಟಿಟುವೆಂಟ್ ಅಸೆಂಬ್ಲಿಗೆ ಮಾತ್ರ ಇರುವುದು ಆದರೆ ಹಿಂದೀಯ ಮಹಾಜನವಿರುವ

(೨ನೇ ಪುಟದಿಂದ ಮುಂದುವರಿಯುವುದು.)

ಮೆಂಚೂರಿಯ ಪ್ರಾಂತ್ಯದಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಿ ಸ್ವಾಧೀನತೆಯಲ್ಲಿಟ್ಟುಕೊಂಡ ಜಾಪಾನು ತನಗೊಂದು ಯೋಗ್ಯ ಪಸಾಹತನ್ನು ಮಾಡಿಕೊಂಡಿತು—ಈಗ ಚೀನದ ಮತ್ತೊಂದು ತಂಡೂ ಜಾಪಾನಿಗೆ ಬೇಕಾಗಿದೆ. ಚೀನದ ಬೆನ್ನಿಯಲ್ಲಿ ಜಾಪಾನಿಗೆ ಸಿಗುವ ಕಲ್ಲುಗಳು ಒಂದೇ, ಎರಡೇ,—ಹಲವು ಸಾವಿರ. ಈಗ ಯುದ್ಧವಾಗಬೇಕಾಗಿದೆ ಚೀನವೂ ಕಾಯುತ್ತದೆ, ಋಣಸಂದಾಯಕ್ಕೆ. ದಿನಕ್ಕೆರಡು ಸಲ ರಾಜೀಪ್ರಸ್ತಾಪಗಳೂ, ಗುಂಡಿನ ಸದ್ದೂ ಕೇಳುತ್ತಲೇ ಇದೆ

೦ ೦ ೦ ೦

ಸಾಮಾಜಿಕ ಪಕ್ಷಪಾತದ ಪಕ್ಷವಾತ ಬೇನೆಯೇ ನಮ್ಮ ಜನಾಂಗವನ್ನು ಇನ್ನೂ ಪೀಡಿಸುತ್ತದೆಂಬುದಕ್ಕೆ ಝಾನ್ಸಿಯಲ್ಲಾದ ಚುನಾವಣೆಯ ಪರಿಣಾಮವು ತೋರಿಸಿದೆ

೦ ೦ ೦ ೦

ಭಾರತ ವರ್ಷದ ಯಾವ ಚತುರ ವೈದ್ಯರು ಎಷ್ಟು ಚಿಕಿತ್ಸೆ ಮಾಡಿದರೂ ಫಲಕ್ಕೆ ಬರಲಿಲ್ಲ ದೊಡ್ಡಣ್ಣ ಶೌಕತಾಲಿ ಸಮಾಧಾನ ಪಾಲಕರ ಪ್ರಯೋಗವೇ ಬಲವಾಯಿತು

೦ ೦ ೦ ೦

ಕೊಂಗ್ರೆಸು ಇದರಿಂದ ವಿಮುಖವಾಗಬಾರದು ಈ ಬಹುಕಾಲದ ವ್ಯಾಧಿಯು ಅಷ್ಟು ಬೇಗನೆ ಗುಣಹೊಂದುವಂತಿದ್ದರೆ ಎಂದೋ ಅದನ್ನು ಗುಣಪಡಿಸಬಹುದಾಗಿತ್ತು ಇನ್ನೂ ಬಲವಾದ ರಸಾಯನೋಪಯೋಗವನ್ನು ಮಾಡಬೇಕಾಗಿದೆ ಎಂದು ಕೊಂಗ್ರೆಸ ಕಂಕಣ ಬದ್ಧವಾಗಿರಲಿ

೦ ೦ ೦ ೦ ೦

ಆದರೆ, ಕೌನ್ಸಿಲಿನಲ್ಲಿ ಸೇರಿರುವ ನಾಲ್ಕು ಮುಸ್ಲಿಂ ಲೀಗ ಪ್ರತಿನಿಧಿಗಳು ಮಾತ್ರ ಲೀಗನ್ನು ತ್ಯಜಿಸಿ ಕೊಂಗ್ರೆಸನ್ನು ಸೇರಿದರು ಒಬ್ಬರು ಬಂದುದಕ್ಕೆ ನಾಲ್ವರು ತೊರೆದರು,—ಆ ಪಕ್ಷಪಾತೀ ಪಕ್ಷವನ್ನ

ಸಭೆಯೊಂದು ಕರೆಸಿ ಅಲ್ಲ ಅವರಿಗೆ ಹಿತ [illegible]ಸುವ ನೂತನ ಸರಕಾರದ ರಚನೆಮಾಡುವುದು, ಸಾರ್ವಭೌಮತೆಯನ್ನು ಸೋಲಿಸಿದ ವಿನಹ ಸಾಧ್ಯವಿಲ್ಲ ಈ ವಿಚಾರದಲ್ಲಿ ರಾಷ್ಟ್ರಪತಿಯವರ ನುಡಿಗಳು ಇಲ್ಲಿ ಕೊಡಲಾಗಿವೆ

ಈಗನವು ಬರೆ ಮೇಲಿನ ಮಾರ್ಪಾಟುಗಳೆಂದೂ ಅಂತರ ಸ್ಥಿತಿಯು ಇದ್ದ ಹಾಗೆ ಇರುವುದೆಂದೂ ಸಾರ್ವಭೌಮತೆಗೂ ರಾಷ್ಟ್ರೀಯತೆಗೂ ತಿಕ್ಕಾಟವು ನಡೆಯುತ್ತಲಿರುವುದೆಂದೂ ಈ ಚಳವಳದಲ್ಲಿ ಮಹಾಜನಗಳಿಂದಲೆ ನಮಗೆ ಬಲವು ಬರುವುದೆಂದೂ ಮೇಲಿನ ಅಧಿಕಾರದಿಂದಲ್ಲವೆಂದು ಮಹಾಜನಗಳಲ್ಲಿ ಜ್ಞಾನೋದಯವಾಗಬೇಕು ಮಹಾಜನರು ಎಲ್ಲಾ ವಿಧಗಳಲ್ಲಿ ಸುಧಾರಣೆ ಹೊಂದುವ ತನಕ ಈ ಚಳವಳವು ನಡೆಯಬೇಕು

THEY WORK WHILE YOU REST.

Industrious Rupees are busy turning out more Rupees to savers in our bank But they do not jump in and go to work of their own free will You have to start them and encourage them The best way is to give them friends Rupees are very sociable and if they are lonely they do little But if you keep adding more Rupees in to your account they do their best. And the more they work the more you can rest.

RESOURCES OF A CRORE

ESTD: 1906

CANARA BANK, LIMITED.

ನವರತ್ನಾ 'ಚ್ಯವನಪ್ರಾಶಾವ ಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ.

ರಾತಲು 1ಕ್ಕೆ ರೂ 2—6—0. ½ ರಾತಲು 1—4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಫೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸುವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳೆದು.

ಕ್ರಯ 16 oz 3-0-0; 8 oz 1 10 0; 4 oz 0 - 14—0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪಾಪ್ಯುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಣೈ ಕಾರ್ಕಳ.
ಕೆ. ಎಲ್. ಐತಾಳ, ಉಡುಪಿ — ಮೊಡರ್ನ್ ಫಾರ್ಮೆಸಿ, ಕುಂದಾಪುರ.
ಬಿ. ಜಿ ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರು.
ಡಾ। ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NARSI & CO.,
Chemists Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in.— Watches, Clocks Timepieces, Rolled Gold Jewellery & Sporting Materials etc



Stockists of West End, Zenith Meridian, Swiss Watches of latest designs & tastes

Repairers — Watches, Clocks, Timepieces and Gramophones

Japan	8 Inch	Octegon	Rs	6	0	0
„	8 „	Regulator	„	6	12	0
„	10 „	Octegon	„	6	8	0
„	10 „	Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ವ ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾದ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಚಿಕಿತ್ಸೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಶನ್ ಹೈಸ್ಕೂಲ್ ಬಳಿ ಮಂಗಳೂರು.

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಯಾಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಶಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of
Please call on or write to:-

Simon & Co,
Painters,
Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡು ಇತ್ಯಾದಿಗಳನ್ನೂ,
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್

ಶ್ರೇಷ್ಠ ಪಸಂಟ ... ಗಡಿಯಾರಗಳು ಅತಿ ಕಮ್ಮಿ ಬೆಲೆಗಳು ... ವರ್ಷದ ಗ್ಯಾರಂಟಿ ... ಒಂದೇ ಸಾರಿ ತರಿಸುವವರಿಗೆ ... ಮುಫತ್ ನಿಕ್ಕೆಲಿನ ಉರುಟು ವಾಚ 1ಕ್ಕೆ ... 2 15 0 ಅದರಲ್ಲಿ ಉತ್ತಮ ವಾದದ್ದು 3-8-0 ಬಂಗಾರದ ಗಿಲೀಟಿದ್ದದಕ್ಕೆ ... 1—8—0 ... 5-0 0 ನಿಕ್ಕೆಲಿನ ಆಯತಾಕಾರದಕ್ಕೆ 6-8-0 ಅದರಲ್ಲಿ ಬಂಗಾರದ ಗಿಲೀಟಿದ್ದುದಕ್ಕೆ 7-8-0 ... ವಾಚಿಗೆ ಬರೆ ರೂ 1-14-0 ಬ್ರೇಸ್ಲೆಟ್ಸ್ 1ಕ್ಕೆ ಬರೆ ರೂ 1-15 0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176 Cross Street CALCUTTA

USE
KALYANPUR SUGAR

IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets, at the
Office, C. P. C. Co., Ltd.

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಹಳೇ ವಿರೋಧವು ಅಲ್ಲೇ ಇರುವುದು.

ಮಹಾಜನಗಳನ್ನು ಬಲಪಡಿಸುವರೇ ಅವಕಾಶವಾಗುವಂತೆ ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದುದು.

ಕಾಂಗ್ರೆಸ್ ಮತ್ತು ಸಂಬಳಗಳು.

ರಾಷ್ಟ್ರಪತಿಯವರು ಈ ಕುರಿತು ಮಾಡಿದ ಪ್ರಕಟಣೆಯ ಸಾರಾಂಶವು ಹೀಗಿರುತ್ತದೆ.

ಕಾಂಗ್ರೆಸ್ ಮಂತ್ರಿಮಂಡಳಗಳು ಸ್ಥಾಪಿಸಲ್ಪಟ್ಟಿದ್ದರಿಂದ ಸಂಬಳದ ಪ್ರಶ್ನೆಯು ಈಗ ಮೇಲಕ್ಕೆ ಬಂದಿರುವುದು. ಕಾಂಗ್ರೆಸ್ ಮಂತ್ರಿವರ್ಯರು ಕಡಿಮೆ ಸಂಬಳವನ್ನು ಪಡೆಯುತ್ತಿರುವಾಗ ಇನ್ನೊಂದೆಡೆ ಅಧಿಕಾರವರ್ಗಕ್ಕೆ ಅತಿ ಹೆಚ್ಚಿನದಾದ ಸಂಬಳ ಸಲ್ಲುತ್ತಿರುವುದು ಕಾಣುತ್ತದೆ. ಪ್ರೊಫೆಸರರು ಮತ್ತು ವಿಶ್ವವಿದ್ಯಾಲಯದ ವೈಸ್ ಚಾನ್ಸಲರು ಕೂಡ ತಮ್ಮ ಬುದ್ಧಿಶಕ್ತಿಯನ್ನು ಹಣದಿಂದ ಅಳತೆ ಮಾಡುತ್ತಿರುವರು. ಅವರಿಗೆ ಅತಿರೇಕವಾದ ಸಂಬಳ ಸಲ್ಲುತ್ತಿದೆ. ಪಂಜಾಬದಲ್ಲಿ ಅಸೆಂಬ್ಲಿ ಸದಸ್ಯರ ವೇತನವು ವಿಪರೀತವಾಗಿ ಹೆಚ್ಚಿಸಿದರು. ಇವೆಲ್ಲಾ ವಿಚಾರಗಳು ಕಾಂಗ್ರೆಸ್ಸಿಗೂ ಇತರರಿಗೂ ಇರುವ ವ್ಯತ್ಯಾಸವನ್ನು ವ್ಯಕ್ತಪಡಿಸಿರುವುದು. ಆದರೆ ಅದನ್ನು ತಿಳಿದುಕೊಂಡವರು ಹೆಚ್ಚಿನವರಿಲ್ಲ.

ಕರಾಚಿ ನಿರ್ಣಯ.

"ಸಿವಿಲ್ ಇಲಾಖೆಯ ಖರ್ಚು ಮತ್ತು ಸಂಬಳ ಗಣನೀಯವಾಗಿ ಕಡಿಮೆ ಮಾಡತಕ್ಕದ್ದು. ಸರಕಾರದ ಯಾವತ್ತೂ ಉದ್ಯೋಗಸ್ಥರು (ವಿಶೇಷವಾಗಿ ನೇಮಕವಾದ ಪ್ರವೀಣರ ಹೊರತು) ತಿಂಗಳೊಂದರ ರೂ. ೫೦೦ಗಿಂತ ಹೆಚ್ಚಿನ ಸಂಬಳವನ್ನು ಪಡೆಯಬಾರದು.

ರೂ. ೫೦೦ ನಿಯಮಿತ ಸಂಬಳವೆಂದು ಅಷ್ಟನ್ನೂ ಪಡೆಯಬೇಕೆಂದಲ್ಲ. ಸಂಬಳದ ಕುರಿತು ಕಾಂಗ್ರೆಸ್ಸಿನ ಸೂತ್ರಗಳು ಹೀಗಿವೆ. ೧. ಸಂಬಳಗಳು ದೇಶದ ದರಿದ್ರ ಸ್ಥಿತಿಗೆ ತಕ್ಕವುಗಳಾಗಬೇಕು. ಕೆಲಸವು ಉತ್ತಮ ರೀತಿಯಲ್ಲಿ ನಡೆಯುವಂತೆ ಆದು ಅದಷ್ಟು ಕಡಿಮೆಯಾಗಬೇಕು. ೨. ಸಂಬಳಗಳು ಅಧಿಕಾರದ ಗೌರವ ಮೇಲೆ ಹೊಂದಿಕೊಂಡಿರಬಾರದು ಅಥವಾ ಅಧಿಕಾರದ ಪ್ರಾಮುಖ್ಯತೆಯ ಮೇಲೆ ಹೊಂದಿಕೊಂಡಿರಬಾರದು. ಅದು ವ್ಯಕ್ತಿಯ ಅಗತ್ಯಗಳ ಮೇಲೆ ಹೊಂದಿಕೊಂಡಿರಬೇಕು.

ದರಿದ್ರದಿಂದ ನರಳುತ್ತಿರುವ ಜನರಿಂದ ಅತಿರೇಕದ ಸಂಬಳವನ್ನು ಅನುಭವಿಸುತ್ತಿರುವುದರಲ್ಲಿ ನ್ಯಾಯವಿದೆಯೆ? ಅತಿ ಕನಿಷ್ಠ ತರದ ಸಂಬಳವನ್ನು ಅನುಭವಿಸುತ್ತಿರುವ ಜನಜೂರರಿಂದ ಕೂಡಿದ ಸಂಸ್ಥೆಯಿಂದ ದೊಡ್ಡ ದೊಡ್ಡ ವೇತನಗಳನ್ನು ಪಡೆಯುವಂತೆ, ನಮ್ಮ ನಮ್ಮ ಪ್ರಾಮುಖ್ಯತೆಯನ್ನು ದುಡ್ಡಿನ ಅಳತೆಯಲ್ಲಿ ಲೆಕ್ಕ ಮಾಡುವುದು ನಮ್ಮ ಅಭ್ಯಾಸವಾಗಿರುತ್ತದೆ; ಅದ್ದರಿಂದ ನಮಗೆ ಬೇರೆ ರೀತಿಯಲ್ಲಿ ಆಲೋಚಿಸಲಾಗುವುದಿಲ್ಲ. ಈ ನಿಯಮದಿಂದ ಸಮಾಜವು ಬೇಗನೆ ಕೆಟ್ಟುಹೋಗುವುದು. ಈಗ ರೂಢಿಯಲ್ಲಿರುವ ಈ ಕ್ರಮವೇ ಇಷ್ಟು ಅನ್ಯಾಯದ ಕಾರಣವು.

ಈ ಪ್ರಶ್ನೆಯನ್ನು ಸುಧಾರಿಸುವರೆ?

ಹಣದ ಅಳತೆಯಲ್ಲಿ ತಮ್ಮ ಮೌಲ್ಯ ಹಿಡಿಯುವ ಈ ಮನೋಭಾವವು ನಮ್ಮನ್ನು ತೊರೆಯತಕ್ಕದ್ದು. ಸರಕಾರಿ ಉದ್ಯೋಗಸ್ಥರ ಸಂಬಳಗಳ ಕುರಿತು ಮೇಲಿನ ನಿರ್ಣಯವನ್ನು ಅನುಸರಿಸಬೇಕಾಗಿ ಕಾಂಗ್ರೆಸ್ಸಿನ ಉದ್ದೇಶ. ಹಿಂದೂದೇಶದ ಸ್ಥಿತಿಗೆ ತಕ್ಕುದೆನಿಸುವ ಮೇರೆಗೆ ಅವುಗಳನ್ನು ಇಳಿಸಿ ಅಧಿಕಾರಿಗಳಿಗೂ—ಗದ್ದೆಯಲ್ಲಿರುವ ರೈತನಿಗೂ ಇರುವ ವಿಶೇಷ ತರದ ವ್ಯತ್ಯಾಸವನ್ನು ಕಡಿಮೆಮಾಡಬೇಕು. ದೇಶದ ಹಣದಿಂದ ಹೆಚ್ಚಿನದು, ಸಾಮಾಜಿಕ ಮತ್ತು ಇತರ ಸೇವೆಗಳ ರೂಪದಲ್ಲಿ ಮಹಾಜನಗಳಿಗೆ ಮರುಪಾವತಿಯಾಗುವಂತಾಗಬೇಕು. ಉದ್ಯೋಗಸ್ಥರಿಗೆ ಕ್ರಮವಾಗಿ ಸಂಬಳ ಹೆಚ್ಚಿಸುವುದನ್ನು ನಿಲ್ಲಿಸಬೇಕೆಂದು ಕಾಂಗ್ರೆಸ್ಸಿನ ಇಚ್ಛೆ. ಒಬ್ಬನ ಅಗತ್ಯಗಳು ಹೊಂದಿಕೊಂಡು ಆತನ ಸಂಬಳದ ನಿರ್ಣಯವಾಗಬೇಕು, ಅವನು ಧರಿಸುವ ಅಧಿಕಾರದಿಂದಲ್ಲ. ಎಲ್ಲರಿಗೂ ಒಂದೆ ತರದ ಸಂಬಳ ಸಲ್ಲುವುದು ಆದರ್ಶ ಸೂತ್ರವು. ಆದರೆ ಈಗಿನ ಸ್ಥಿತಿಗಳಿಗೆ ಇದು ಒಪ್ಪದು. ಆದರೂ ಮಂತ್ರಿವರ್ಯರಿಗೆ ಅವರ ಸೆಕ್ರೆಟರಿಗಿಂತ ಹೆಚ್ಚಿನ ಸಂಬಳ ಸಲ್ಲಬೇಕೆಂದು ನಿಯಮಗಳಿಲ್ಲ — ಅವರ ಅಧಿಕಾರ ಬೆಲೆಯಿಂದ. ಇದೇ ಸೂತ್ರವು ಉದ್ಯೋಗಸ್ಥರ ಸಂಬಳದ ಕುರಿತು ಅನ್ವಯಿಸತಕ್ಕದ್ದು. ಅಂದರೆ ಎಲ್ಲಾ ಸಂಬಳಗಳನ್ನು ಮೇಲಿನ ನಿಯಮಕ್ಕೆ ಅಧಿಕ ಸಂಖ್ಯೆಯ ದಾಮಶಾಯಿಯಲ್ಲಿ ಬೇಕೆಂದಲ್ಲ. ಎಲ್ಲಾ ಬಗೆಯ ಸಂಬಳಗಳು ಕಡಿಮೆ ತರಗತಿಯಲ್ಲಿರಬೇಕು, ಅಗತ್ಯ ಬಂದರೆ ಮಾತ್ರ ನಿಯಮಿತ ಅಧಿಕ ಸಂಬಳವನ್ನು ಕೊಡಬಹುದು.

ಈ ಸೂತ್ರಗಳನ್ನು ನಡೆಯಿಸುವರೆ ಅಡ್ಡಂತರಗಳು.

ಅಂದರೆ ಈಗ ರೂಢಿಯಲ್ಲಿರುವ ಕ್ರಮವನ್ನೆಲ್ಲಾ ಸಂಪೂರ್ಣವಾಗಿ ಮಾರ್ಪಾಡು ಮಾಡಬೇಕು,—ತಲೆಯಿಂದ ಬುಡದವರೆಗೆ. ಬ್ರಿಟಿಷ ಸರಕಾರ ದಸೆಯಿಂದ ಬಂದ ಅನರ್ಥಗಳಲ್ಲದೆ, ಸಾಮಾಜಿಕ ಕ್ರಮ, ಜನರ ಅಭ್ಯಾಸ ಮತ್ತು ಇತರ ಅನೇಕ ವಿಷಯಗಳು ಇದಕ್ಕೆ ಅಡ್ಡಂತರವಾಗಿ ಬರುತ್ತವೆ, ಮತ್ತು ಕೆಲವು ದುಷ್ಕರ ಪ್ರಶ್ನೆಗಳನ್ನು ವಿಚಾರಿಸತಕ್ಕದು. ಈಗ ಪ್ರಾರಂಭದಲ್ಲಿ ನಾವು ಜನತೆಯ ಎದುರು ಕೆಲವು ದೃಷ್ಟಾಂತಗಳನ್ನು ಕಲ್ಪಿಸಬಹುದು. ಈಗ ಪ್ರಸ್ತುತಕ್ಕೆ ಮಂತ್ರಿವರ್ಯರ ಸಂಬಳಗಳನ್ನು ನಾವು ಕರಾಚಿ ನಿರ್ಣಯವನ್ನನುಸರಿಸಿ ನಿಯಮಿಸಿದ್ದೇವೆ. ಹೀಗೆಂದು ಹೇಳಿ ಬಂದೆಡೆ ಸಂಬಳಗಳನ್ನು ಕಡಿಮೆ ಮಾಡುತ್ತಿರುವಾಗ ಬತ್ತೆಯ ರೂಪದಲ್ಲಿ ಆ ಸಂಬಳವನ್ನು ಹೆಚ್ಚದಂತೆ ನಾವು ಜಾಗರೂಕರಾಗಬೇಕು.

ಎಲ್ಲರಿಗೂ ಜೀವನ ಸಾಗಿಸಲು ತಕ್ಕುದೆನಿಸುವ ಸಂಬಳ ದೊರಕಬೇಕು.

ಒಂದೆಡೆಯಲ್ಲಿ ನಾವು ಮಹಾ ಉದ್ಯೋಗಸ್ಥರ ಸಂಬಳಗಳನ್ನು ಇಳಿಸಬೇಕಾಗಿ ನಾವು ಇಚ್ಛಿಸುತ್ತಿರುವಾಗ ಜೀವನ ಕ್ರಮವನ್ನು ಉತ್ತಮಗೊಳಿಸುವರೆ ಎಲ್ಲರಿಗೂ ಜೀವನ ಸಾಗಿಸಲು ತಕ್ಕುದೆನಿಸುವ ಸಂಬಳ ದೊರಕಿಸುವುದು ನಮ್ಮ ಆದರ್ಶವು. ಎಲ್ಲರಿಗೂ ಕಾಲದ ಸಂಸ್ಕೃತಿಗೆ ಒಪ್ಪುವ ತರದ ಜೀವಮಾನವನ್ನು ಅನುಭವಿಸುವಂತೆ ಜೀವಕ್ರಮವನ್ನು ಆದಷ್ಟು ಉತ್ತಮಗೊಳಿಸುವುದು ನಮ್ಮ ಧ್ಯೇಯವು. ಅವಕಾಶ ದೊರಕಿದ ಕೂಡಲೆ ಈ ಸಂಬಳದ ಮತ್ತು ಬತ್ತೆಯ ಕುರಿತು ಪ್ರಶ್ನೆಯನ್ನು ನಾವು ಕಾಂಗ್ರೆಸ್ ಮಂತ್ರಿಮಂಡಳದೊಡನೆ ವಿಚಾರಿಸುವೆವು.

ಮಹಾಜನರನ್ನು ಬಲಪಡಿಸುವರೆ ಅವಕಾಶವಾಗುವಂತೆ ಕಾಂಗ್ರೆಸ್ಸು ಅಧಿಕಾರವನ್ನು ಸ್ವೀಕರಿಸಿದುದು.

ಆಗೋಸ್ತು ತಾ. ಒಂದನ್ನು ಮುನಿಸ್ಸಿ ದಿನವನ್ನಾಗಿ ಆಚರಿಸಬೇಕಾಗಿ ರಾಷ್ಟ್ರಪತಿಯವರು ಹೊರಡಿಸಿದ ಪ್ರಕಟಣೆಯಲ್ಲಿ ಅವರ ಅಭಿಪ್ರಾಯವು ಹೀಗಿರುವುದು:

"ಅಧಿಕಾರ ಸ್ವೀಕರಿಸಲು ಅಪ್ಪಣೆಯನ್ನು ಕೊಟ್ಟ ವರ್ಕಿಂಗ್ ಕಮಿಟಿಯ ನಿರ್ಣಯದಿಂದ, ಮತ್ತು ಅದರ ಪರಿಣಾಮವಾಗಿ ಆರು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ರಚನೆಯಾದುದರಿಂದ, ಒಂದು ತರದ ನವ ಸ್ಥಿತಿಯು ಉಂಟಾಗಿರುತ್ತದೆ. ಹೆಚ್ಚಿನ ಕಾಂಗ್ರೆಸ್ಸಿನವರಿಗೆ ಈ ಕುರಿತು ಸಂಶಯವಿರುವುದು. ಅನೇಕರು ಇದರಿಂದ ಮಹಾ ವಿಷಯಗಳು ನಡೆಯುವವೆಂಬ ನಿರೀಕ್ಷೆ ಹೊಂದುವವರಾಗಿದ್ದಾರೆ. ಈ ತರದ ಪ್ರತೀಕಾರಗಳು ಸಹಜವಾದುವುಗಳು. ಇಷ್ಟರ ವರೆಗೆ ನಾವು ಅನುಸರಿಸುತ್ತಿರುವ ಮಾರ್ಗವನ್ನು ಬಿಟ್ಟಿರುತ್ತೇವೆ. ಈಗ ವಿಚಿತ್ರ ತರದ ಮಾರ್ಗದಲ್ಲಿ ನಡೆಯಲು ನಮಗೆ ಸಂಶಯವಾಗುವುದು ಸ್ವಾಭಾವಿಕವು. ಅಕಸ್ಮಾತ್ ಅವಘಡಗಳು ಲಭಿಸುವುವೆಂದೂ ಕೆಲವರ ಭಯ. ಎಲ್ಲವೂ ಸರಾಗವಾಗಿ ನಡೆಯುವುದೆಂದು ಇನ್ನೂ ಕೆಲವರ ಧೈರ್ಯ. ಆದರೆ, ದೇಶಸೇವೆಯನ್ನು ಮಾಡಲು ಮಹಾ ಅವಕಾಶ ದೊರಕಿದ ನಮ್ಮಲ್ಲಿ ಅನೇಕರು, ವರ್ಕಿಂಗ್ ಕಮಿಟಿಯ ನಿರ್ಣಯವನ್ನೇ ಅತ್ಯಾದರದಿಂದ ಸ್ವೀಕರಿಸಿರುವೆವು. ನಮ್ಮ ಸಂಸ್ಥೆಯ ಸಾಂಪ್ರದಾಯ ಪ್ರಕಾರ ಒಬ್ಬರ ಮೇಲೊಬ್ಬರು ಅತ್ಯಂತ ನಿಷ್ಠೆಯನ್ನಿಟ್ಟಿರುವೆವು.

ಒಳ್ಳೇ ಅನುಭವಸ್ಥ ಕಾಂಗ್ರೆಸ್ ವಾಲರೇ ಸಂಕೋಚಪಡುವುದಾದರೆ, ಮಹಾ ಜನರ ಗತಿಯೇನು? ಅವರ ಗತಿಯೇನು? ಅಧಿಕಾರ ಸ್ವೀಕಾರದಿಂದ ಸ್ವರಾಜ್ಯ ಚಳವಳಿಯು ಕೊನೆಗೊಂಡಿತ್ತೆಂದು ಅವರ ಅಭಿಪ್ರಾಯವೇ? ಹಿಂದಿನ ಕೈದಿಯು ಇಂದು ಮಂತ್ರಿಯಾದುದನ್ನು ಕಂಡು ಅವರು ಆಶ್ಚರ್ಯಪಟ್ಟಂತಾಗಿರಬೇಕು. ಹಸಿವಿನಿಂದ ಬಳಲುತ್ತಿರುವ ಅವರ ಕೈಯನ್ನು ನಾವು ಬಿಟ್ಟಿರುವೆವೋ ಎಂಬ ಭಯವು ಅವರಲ್ಲಿ ಮೂಡಿರಬಹುದೋ?

ನಾವು ಮಹಾಜನರನ್ನು ಬಿಟ್ಟುಬಿಡಲಿಲ್ಲ. ಹಿಂದಿನಂತೆ ನಾವು ಅವರ ಜತ್ತಲು. ನಮ್ಮಲ್ಲಿ ಕೆಲವರು ಸರಕಾರದ ಅಧಿಕಾರ ಗದ್ದಿಗೆಯ ಮೇಲೆ ಕುಳಿತಿದ್ದರೂ, ನಮ್ಮ ಮೈಮೇಲೆ ಅದೇ ಖಾದಿ ಇರುವುದು. ನಮ್ಮಲ್ಲಿ ಅವೇ ಆಲೋಚನೆಗಳಿರುವುವು. ಅವೇ ಧ್ಯೇಯಗಳು ನಮ್ಮನ್ನು ಕಾರ್ಯರಂಗಕ್ಕೆ ಅಟ್ಟುತ್ತವೆ. ಆದರೂ ಇನ್ನೂ ನಾವು ಆ ಧ್ಯೇಯದಿಂದ ದೂರದಲ್ಲಿರುವೆವು. ದೇಶದ ಗತಿಯನ್ನು ರೂಪಿಸುವ ಅಧಿಕಾರವು ನಮ್ಮಲ್ಲಿ ಇಲ್ಲ. ಸ್ವರಾಜ್ಯವೂ ಬಂದಿಲ್ಲ. ಕಾಂಗ್ರೆಸ್ ರಾಜನ ಸ್ಥಾಪನೆಯಾಗಲಿಲ್ಲ. ಆದರೂ, ಮಹಾಜನಗಳ ದರಿದ್ರ ನಿವಾರಣೆಮಾಡಲು, ಅವರ ಸೇವೆಮಾಡಲು, ಅವರನ್ನು ಬಲವಂತಗೊಳಿಸಲು, ಅವರ ಅನೇಕ ಹೊರೆಗಳನ್ನು ಕಡಿಮೆಮಾಡಲು, ನಮಗೊಂದು ನೂತನ ಅವಕಾಶವು ದೊರಕಿರುತ್ತದೆ. ಆದರೆ, ಈ ಸೇವೆಯು ಕೂಡಾ ಮಹಾಜನರನ್ನೇ ಹೊಂದಿಕೊಂಡಿದೆ. ಅವರು ಈಗಿನ ಸ್ಥಿತಿಗತಿಗಳನ್ನು ಅರಿತುಕೊಂಡು ಅವುಗಳ ಬುದ್ಧಿಯುಕ್ತ ವಿಮರ್ಶೆಯ ಮೇಲೆ ಹೊಂದಿಕೊಂಡಿದೆ. ಅದ್ದರಿಂದ ಏನೆಲ್ಲ ನಡೆದಿರುತ್ತದೆಂದೂ ನಾವು ಮಹಾ ಜನರಲ್ಲಿ ವಿವರಿಸತಕ್ಕುದು. ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಅವರಲ್ಲಿ ಓದಿಹೇಳಿ, ಆ ಕುರಿತು ಎಲ್ಲಾ ಉದಾಹರಣೆಗಳನ್ನು ಅವರಿಗೆ ಕೊಡಬೇಕು. ಹಳೇ ವಿರೋಧವು ಹಾಗೆನೇ ಇರುವುದೆಂಬ ಜ್ಞಾನ ಅವರಲ್ಲಾಗಬೇಕು. ಮಹಾಜನರು ಎಚ್ಚರಿಕೆಯಿಂದಿದ್ದು, ಕಾಂಗ್ರೆಸ್ ಸಲಹೆಗಳನ್ನು ಒಪ್ಪಿದರೆ, ಅಧಿಕಾರ ಸ್ವೀಕರಿಸಿದ ನಮ್ಮ ಸ್ನೇಹಿತರು ಸರಿಯಾಗಿ ಕಾರ್ಯನಡೆಸುವಂತಾಗುವುದು. ಅವರಿಗೆ ಎಲ್ಲಾ ತರದ ಸಹಕಾರ—ಸಹಾನುಭೂತಿಯು ನಮ್ಮಿಂದ ಸಲ್ಲತಕ್ಕುದು.

ಆಗೋಸ್ತು ತಾ. ಒಂದನ್ನು.

"ಆದರೆ ಆಗೋಸ್ತು ತಾ. ಒಂದನ್ನು ಮುನಿಸ್ಸಿ ದಿನವನ್ನಾಗಿ ಆಚರಿಸಲು ಸಭೆಗಳು ಸೇರಬೇಕು, ನಗರಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ. ಆದಿತ್ಯವಾರ ದಿವಸ ವರ್ಕಿಂಗ್ ಕಮಿಟಿಯ ನಿರ್ಣಯವು ಓದಲಾಗಬೇಕು, ವಿವರಿಸಲ್ಪಡಬೇಕು. ಕಾಂಗ್ರೆಸ್ ಮಂತ್ರಿವರ್ಯರನ್ನು ಅಭಿನಂದಿಸುತ್ತಿರುವಾಗ ದೇಶದ ದರಿದ್ರ ನಿವಾರಣೆಗೂ ಸ್ವಾತಂತ್ರ್ಯ ಸಾಧನೆಗೂ ನಾವು ಪ್ರತಿಜ್ಞೆಗಳನ್ನು ತೆಗೆಯತಕ್ಕುದು. ಅಂದು ಧ್ವಜವಂದನಾ ಸಮಾರಂಭ. ಅತ್ಯಂತ ಭಕ್ತಿಭಾವದಿಂದ ಎಲ್ಲೆಲ್ಲೂ ನಡೆಯಬೇಕು. ಆಗೋಸ್ತು ಒಂದನೇ ತಾರೀಕು—ನಮಗೊಂದು ಪ್ರಾಮುಖ್ಯ ದಿನವು. ಹಿಂದೂದೇಶದ ಸ್ವಾತಂತ್ರ್ಯಕ್ಕೆ ಅರ್ಪಣೆಯಾದ ದಿನವು. ಈ ದಿನ ೧೭ ವರ್ಷಗಳ ಹಿಂದೆ ಲೋಕಮಾನ್ಯ ತಿಲಕರು ದೈವಾಧೀನರಾಗಿದ್ದರು. ಅದೇ ದಿವಸ ಹಿಂದೂದೇಶವು ಅಸಹಕಾರ ಚಳವಳಿಯನ್ನು ಹೂಡಿತ್ತು. ಅದ್ದರಿಂದ ಈ ದಿನಾಚರಣೆಯನ್ನು ಇವುಗಳಿಗೆ ಒಪ್ಪುವ ರೀತಿಯಲ್ಲಿ ಆಚರಿಸಬೇಕು. ಆಗ ಹಿಂದಿನ ನೆನವಾಗಬೇಕು. ಭವಿಷ್ಯವನ್ನು ಪ್ರತಿಜ್ಞಾ ದೃಷ್ಟಿಯಿಂದ ನೋಡಬೇಕು.

ಈಗ ಒಂದು ಮಾರ್ಪಾಟು ಬಂದಿರುತ್ತದೆ. ಆದರಿಂದ ಹಿಂದೂದೇಶಕ್ಕೂ ಬ್ರಿಟನಿಗೂ ಇರುವ ಸಂಬಂಧವು ಯಾವ ರೀತಿಯಲ್ಲೂ ಮಾರ್ಪಾಟಾಗಲಿಲ್ಲ.

ಆದರೆ ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ನಿಂತ ಪ್ರತಿಯೋರ್ವ ಭಾರತೀಯನು, ನಮ್ಮ ಸ್ವಾತಂತ್ರ್ಯದ ಉಡುಪಾದ ಖಾದಿಯನ್ನು ಧರಿಸುವರಾಗಿಯೂ, ರಾಷ್ಟ್ರೀಯ ಧ್ವಜವನ್ನು [illegible] ವಿಸರು. ರಾಷ್ಟ್ರದ ಆಸೆಯು ಕಡೆಯಿರುವ ವಿರೋಧವನ್ನು ಬಿಟ್ಟು, ಅನ್ಯರು ತನ್ನ ಒಡೆಯರೆಂಬ ಭಾವವನ್ನು ತೊರೆದು, ಭಾರತೀಯ ರೀತಿ ಆಲೋಚಿಸುವವನಾಗಿಯೂ, ಮಹಾಜನರ ಪ್ರೀತಿಯನ್ನೂ ಸಹಕಾರವನ್ನೂ ಕೋರುವವನಾಗಿ ನನ್ನ ನಂಬುಗೆ, ಮಹಾಜನರ ಹಿತ ಕಾಂಗ್ರೆಸ್ ಮಂತ್ರಿಮಂಡಳವು, ಇವುಗಳಿಗೆ ಬೇರೆ ಅರ್ಥವಿಲ್ಲ.

"ಆಗೋಸ್ತು ಒಂದನೇ ತಾರೀಕನ್ನು ಅತ್ಯಂತ ಯಶಸ್ವಿಯಾಗಿ ಜರಗಿಸಬೇಕು."

ಡೆಟಿನ್ಯೂ ದಿನಾಚರಣೆ ವಾರ್ತೆಗಳು.

ಡೆಟಿನ್ಯೂ ದಿನಾಚರಣೆ ವಾರ್ತೆಯನ್ನು ಪ್ರಕಟಿಸಬಾರದಾಗಿ, ಬಂಗಾಳ ಸರಕಾರದವರು ಕಲ್ಕತ್ತಾ ಪತ್ರಿಕೆಗಳಿಗೆ ಅಪ್ಪಣೆಕೊಟ್ಟಿರುತ್ತಾರೆ. ಹೆಚ್ಚಿನ ಪ್ರಜಾಮತವನ್ನನುಸರಿಸಿ ರಚನೆಯಾದ ಸರಕಾರವು ಅಧಿಕಾರದಲ್ಲಿರುವುದಾದರೂ, ದಬ್ಬಾಳಿಕೆ ಕ್ರಮಗಳು ಇನ್ನೂ ರೂಢಿಯಲ್ಲಿದೆ. ಅಲ್ಲದೆ, ಹೊಸ ಸರಕಾರವು ದಬ್ಬಾಳಿಕೆಯನ್ನು ನಡೆಸಲು ಉದ್ಯುಕ್ತವಾಗಿದೆ. ವಾರ್ತಾ ಪತ್ರಿಕೆಗಳು ಭಸವಾದ ಭದ್ರತಾಠೇವಣಾತಿ ಕೊಟ್ಟು, ಈ ಸಮಯದಲ್ಲಿ ಈ ಅಪ್ಪಣೆಯನ್ನುಲ್ಲಂಘಿಸಲು ಹೆಚ್ಚಿನವರಿಗೆ ಧೈರ್ಯವಿಲ್ಲ. ಆದರೂ, ನವೀನವಾಗಿ ರಚನೆಯಾದ ಸರಕಾರದ ನಿಜವಾದ ರೂಪವನ್ನು ಜನತೆಗೆ ಪ್ರಸಿದ್ಧಪಡಿಸಲು, ಒಂದು ಪರೀಕ್ಷಾರ್ಥ ಕಾನೂನುಲ್ಲಂಘನೆಮಾಡಬೇಕಾಗಿ ಅಮೃತಬಜಾರ ಪತ್ರಿಕೆಯ ಸಂಪಾದಕ ಸೂಚನೆ. ಈ ಕುರಿತು ಪತ್ರಿಕಾಕರ್ತರ ಸಭೆಯೊಂದು ನಡೆದಿರುತ್ತದೆ. ಇತರ ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ರಾಜಕೀಯ ಕೈದಿಗಳ ಬಿಡುಗಡೆಯಾಗುತ್ತಿರುವಾಗ, ಬಂಗಾಳದಲ್ಲಿ ಇನ್ನೂ ದಬ್ಬಾಳಿಕೆ ಕಾನೂನುಗಳ ದರ್ಶನವಾಗುತ್ತದೆ.

WANTED

ಕಾರ್ಕಳ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ Secondary grade Trained ಉಪಾಧ್ಯಾಯಿನಿ ಒಬ್ಬಳು, Higher Elementary grade Trained ಉಪಾಧ್ಯಾಯಿನಿಯರು ಇಬ್ಬರು ಕೂಡಾ ಮೂರು ಜನ ಉಪಾಧ್ಯಾಯಿನಿಯರು ಬೇಕಾಗಿರುತ್ತಾರೆ. ಸದರಿ ಹುದ್ದೆಗಳನ್ನು ಅಪೇಕ್ಷಿಸುವವರು ತಮ್ಮ ಸರಿಯಾದ ವಿಳಾಸ ಕೊಟ್ಟು ಈ ಕೆಳಗೆ ಸಹಿ ಮಾಡಿದವರ ಬಳಿಗೆ ತಾ. 10-8-37ರ ಒಳಗೆ ತಲುಪುವಂತೆ ತಮ್ಮ ಅರ್ಜಿಗಳನ್ನು ಬರೆಕಳುಹಿಸುವುದು.

K. Soiru Prabhu,
President,
S. V. T. Board of Education,
Karkal.

29-7-1937.

ಕುರುಗಳನ್ನೂ, ಹುಣ್ಣುಗಳಾದ ಕಾಲನ್ನೂ ಗುಣಪಡಿಸಿರಿ.

ಝಾಂಬಕಿನಿಂದ ಕಲೆಗಳು ನಿಲ್ಲುವುದಿಲ್ಲ.

ನಿಮ್ಮಲ್ಲಿ ಕುರುಗಳು, ಹುಣ್ಣುಗಳು, ವೇದನಮಯ ಕಾಲು ಇತ್ಯಾದಿ ಉಂಟಾದರೆ ರೋಗ ಅಂಟಿದ ಭಾಗಕ್ಕೆ ಝಾಂಬಕನ್ನು ತಿಕ್ಕಿರಿ. ಅದರಿಂದ ನೋವು ಮಾಯವಾಗುವುದು. ಎಲ್ಲಾ ಬಗೆಯ ಉರಿತ, ತುರಿಕೆ ಮಾಯವಾಗುವುದು. ಅಲ್ಲಿರುವ ವಿಷಪದಾರ್ಥಗಳನ್ನು ಹೊರಗೆಳೆಯುವುದು. ವಿಷಮಯ ಕ್ರಿಮಿಗಳನ್ನು ನಾಶಪಡಿಸಿ, ಹೊಸ ಗ್ರಂಥಿಗಳು ಉಂಟಾಗುವಂತೆ ಝಾಂಬಕು ಸಹಕರಿಸುತ್ತದೆ. ಅದು ಬೇಗನೇ ಯಶಸ್ವಿಯಾಗಿ ಗುಣಪಡಿಸುವುದು, ಗುಣವಾದ ನಂತರ ಕಲೆಗಳು ನಿಲ್ಲಲಾರವು. ಯಾವತ್ತೂ ಗಾಯ, ಕಚ್ಚು, ತುರಿಕಜ್ಜಿ ಇತ್ಯಾದಿಗಳಿಗೆ ಝಾಂಬಕನ್ನು ಉಪಯೋಗಿಸಿ, ಉತ್ತಮ ತರದ ಉಪಕಾರವನ್ನು ಹೊಂದಬಹುದು. ಎಲ್ಲಾ ಔಷಧಿಮಾರಾಟಗಾರರಲ್ಲಿ ಸಾಂಬಳ್ ರೂ. 2-4-0ರಂತೆ ಸಿಗುತ್ತದೆ. ಏಜಂಟ್ಸ್:—

ಮೆಸರ್ಸ್ ದಾಧಾ ಎಂಡ್ ಕೊ, ಪಿ. ಟಿ. ಮದ್ರಾಸು.

ಝಾಂಬಕ್

Zam Buk

ಝಾಂಬಕಿನಲ್ಲಿ ಪ್ರಾಣಿಗಳ ಕೊಬ್ಬಿಲ್ಲ.

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,16,58,706
1930	59,97,500	9,83,367	28,00,970	2,06,68,828
1933	94,16,500	15,12,692	50,04,871	3,07,98,484
1936	1,36,00,180	26,76,274	82,69,451	5,14,38,305

The Company offers all the up-to-date schemes of Assurances Family Safe Guard Policy a special feature

Application for agencies will be received from honest and respectable gentlemen.

Organisers appointed with pay and allowance

Gentlemen with organising ability and who can guarantee Business need apply.

KOCHIKAR BROTHERS,

Madras Branch Secretaries,

Post Box 337, Mount Road, MADRAS

Phone No. 8245.

Apply to any of the following Offices:-

Ottapalam	Central Station Road Trivandrum	Visveshwarapuram Circle, Bangalore City	Soumyalayam Puthiyara, Calicut	Car Street, Mangalore.	Udipi, S India.	Charni Road, Bombay No. 4

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

ಮುಂಬಾಯಿ══ಗೋವಾ══ಕಾರವಾರು

ಇತ್ಯಾದಿ ಕಡೆಗಳಿಗೆ

ಅತ್ಯಲ್ಪ ಖರ್ಚಿನಿಂದ- ಅತಿ ಸುಖಕರವಾದ ಪ್ರಯಾಣ.

ನಮ್ಮ ಬಸ್ಸುಗಳ ಮೂಲಕ

ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗಾ ಹರಿಹರಕ್ಕಾಗಿ, ಹುಬ್ಬಳ್ಳಿ ಬೆಳಗಾಂ ಮುಂಬ್ಯಾ ಪ್ರಾಂತ್ಯಕ್ಕೂ

ಕಾರವಾರ ಮಾರ್ಗವಾಗಿ ಮುಂಬ್ಯಾ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳೆಸಲನುಕೂಲ

ಊರುಗಳ ಬದಲಾವಣೆ-ನೋಟಗಳ ಬದಲಾವಣೆ-ಜನತೆಯ ಸಂಪರ್ಕ-ಆಹಾರದ ಅನುಕೂಲ

ವಿಶ್ರಾಂತಿ ಗೃಹಗಳ ಏರ್ಪಾಡು-ನೌಕರರ ಸಭ್ಯತೆ

ಇವೆಲ್ಲವೂ ಬಸ್ಸುಪ್ರಯಾಣದಲ್ಲಿದೆ.

ನೀವು ಕಂಡ ಕುಂದುಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜ್ಯೊಂಟ್ ಮೆನೆಜರರಿಗೆ ಬರೆದು ತಿಳಿಸಿರಿ—

ಜ್ಯೊಂಟ್ ಮೆನೇಜರ್ಸ್,

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು.

ಮತ್ತು

ಜ್ಯೊಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು.

ನಮ್ಮ ಇಲೆಕ್ಷನ್!

ನಮ್ಮ ಊರಿನ ಪಂಚಾಯತ ಬೋರ್ಡು ಇಲೆಕ್ಷನ ಇದೇ ಬರುವ ಆಗೋಸ್ತು ತಾ. ೯ರಲ್ಲು ನಡೆಯುವುದಂತೆ. ಆದರೆ ಅದು ನಡೆಯಲಿರುವ ಕ್ರಮವು ಬಹಳ ವಿಚಿತ್ರವಾದುದು. ಸಾಧಾರಣ ಒಂದು ತಿಂಗಳ ಹಿಂದೆ ಬಂಟವಾಳ ಮತ್ತು ಮೂಡು ಗ್ರಾಮಕ್ಕೆ ಕೂಡಿ ಒಂದು ಪಂಚಾಯತ ಬೋರ್ಡು ನಿರ್ಮಿಸಲ್ಪಡುವುದೆಂದೂ ಇನ್ನು ನಾಲ್ಕು ತಿಂಗಳ ನಂತರ ಚುನಾವಣೆಯು ನಡೆಯುವುದೆಂದೂ ಎರಡು ಗ್ರಾಮಗಳನ್ನೂ ಬೇರೆ ಬೇರೆ ೧೬ ವಾರ್ಡು ಗಳಾಗಿ ವಿಭಾಗಿಸಿ, ಒಂದೊಂದು ವಾರ್ಡಿನಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆಯಾ ವಾರ್ಡಿನವರು ಆರಿಸಬೇಕೆಂದೂ ಪ್ರಕಟವಾಗಿತ್ತು. ಇದೆಲ್ಲವೂ ಈಗ ರದ್ದು ಮಾಡಲ್ಪಟ್ಟು ಹೊಸ ರೀತಿಯ ವಿಭಜನೆಯು ಮಾಡಲ್ಪಟ್ಟಿರುವುದು.

ಬಂಟವಾಳವು ಒಂದು ವಾರ್ಡು; ಮೂಡು ಗ್ರಾಮವು ಇನ್ನೊಂದು ವಾರ್ಡು. ಬೋರ್ಡಿನಲ್ಲಿ ಬಂಟವಾಳದವರಿಗೆ ೭ ಸೀಟುಗಳು. ಮೂಡಿನವರಿಗೆ ೯ ಸೀಟುಗಳು. ಭಲಾ! ಇದೀಗ ಹಿಂದಿನ ಪ್ರಕಟಣೆಯ ಮೇಲೆ ಮಾಡಿದ ಪ್ರಗತಿಪರ ಸುಧಾರಣೆಯ ಸಾರಾಂಶ! ಹದಿನಾರು ವಾರ್ಡುಗಳು ಹೋಗಿ ಬರೇ ಎರಡು ವಾರ್ಡುಗಳು. ವಾರ್ಡಿಗೊಬ್ಬ ಪ್ರತಿನಿಧಿ ಹೋಗಿ ಬಹು ಮಂದಿ ಪ್ರತಿನಿಧಿಗಳು ಇನ್ನು ಪ್ರಾತಿನಿಧ್ಯದ ಪಂಚಾಯತಿ—ಅದೂ ವಿಚಿತ್ರವಾದುದು! ಸಣ್ಣ ತಲೆಗೆ ದೊಡ್ಡ ಮುಂಡಾಸು; ದೊಡ್ಡ ಹೊಟ್ಟೆಗೆ ಬಂದು ಹಿಡಿ ಹಿಟ್ಟು! ಬಂಟವಾಳದಲ್ಲಿ ಸುಶಿಕ್ಷಿತರೂ ಹೆಚ್ಚು, ಜನ ಸಂಖ್ಯೆಯೂ ಹೆಚ್ಚು. ಸೀಟುಗಳು ಮಾತ್ರ ಬರೇ ೭. ಮೂಡಿನ ಜನರಲ್ಲಿ ಅಧಿಕ ಮಂದಿ ಕೃಷಿಕರು—ಶಿಕ್ಷಿತರನ್ನು ಕೈ ಬೆರಳುಗಳ ಮೇಲೆ ಎಣಿಕೆ ಮಾಡಿ ಮುಗಿಸಬಹುದು ಜನ ಸಂಖ್ಯೆಯೂ ಕಮ್ಮಿ ಅವರಿಗೆ ಸೀಟುಗಳು ೯ ಇದು ನ್ಯಾಯವೆ? ಸರಿಯೆ? ಈ ಬಗೆಯ ಸೀಟುಗಳ ಹಂಚೋಣವು ಯಾವ ಕ್ರಮವನ್ನು ಅನುಸರಿಸಿ ಮಾಡಲ್ಪಟ್ಟಿದೆಯೆಂದು ತಿಳಿಯದು ಇದನ್ನೆಲ್ಲಾ ನೋಡಿದರೆ ಸ್ವಾರ್ಥಸಾಧಕರಾರೋ ಒಳಗಿಂದೊಳಗೆ ಚಾಣಕ್ಯ ತಂತ್ರವನ್ನು ಪ್ರಯೋಗಿಸಿದಂತೆ ತೋರುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಒಬ್ಬರ ಸ್ವಾರ್ಥ ಪೂರ್ತಿಗಾಗಿ ಮಂದಿಯ ಸೌಕರ್ಯವನ್ನೂ ನ್ಯಾಯದ ಮಾರ್ಗವನ್ನೂ ಕೆಡಿಸುವುದು ಸರಿಯಲ್ಲ ಸಮಂಜಸವಲ್ಲ, ನ್ಯಾಯವಲ್ಲ ಇಲ್ಲದೆ ಕೆಲವು ದಿನಗಳ ಹಿಂದೆ ನಿಮ್ಮ ಪತ್ರಿಕೆಯ ಪುಟಗಳಲ್ಲಿ ಮೂಡು ಗ್ರಾಮ ನಿವಾಸಿಯೊಬ್ಬನು ತಮಗೊಂದು ಬೇರೆ ಪಂಚಾಯತ ಬೋರ್ಡು ಆಗಬೇಕೆಂದು ಬೊಬ್ಬಿಟ್ಟುದರ ಫಲವೇ ಇದು! ಹಾಗಿದ್ದರೆ ಬಾಯಿಯಿದ್ದವ ಬದುಕ್ಯಾನಯ್ಯಾ ಈಗಿನ ದಿನಗಳಲ್ಲಿ! ಆದರೆ ಈ ರೀತಿಯ ಏರ್ಪಾಡಿಗಿಂತ ನಮಗೂ ಅವರಿಗೂ ಪ್ರತ್ಯೇಕ ಪಂಚಾಯತ ಬೋರ್ಡುಗಳು ನಿರ್ಮಾಣವಾದರೂ ಚಿಂತೆಯಿಲ್ಲ, ಈ ಬಗೆಯ ಹಸಿಹಸಿ ಅನ್ಯಾಯವು ನಡೆಯುವುದು ಬೇಡ

ಇಲೆಕ್ಷನ್ ಜರಗುವ ಕ್ರಮವು ಇನ್ನೂ ಸೋಜಿಗವಾಗಿದೆ ಮೆಂಬರಿಕೆಗೆ ನಿಲ್ಲುವವರು ಯಾವ ರೀತಿಯಲ್ಲಿ ಮುಂದರಿಯಬೇಕು, ತಮ್ಮ ಮೆಂಬರಿಕೆಯ ಅರ್ಜಿಯನ್ನು ಯಾರೊಡನೆ ಕೊಡಬೇಕು, ವೋಟರರು ಯಾರು, ವೋಟು ಕೊಡುವ ಬಗೆ ಹೇಗೆ ಎಂಬವುಗಳ ಕುರಿತು ತಿಳಿಸದೆ, ಒಮ್ಮೆಗೆ ವೋಟರರೆಲ್ಲರೂ ಬಂದು ನಿಗದಿತ ಸ್ಥಳಕ್ಕೆ ತಾ. ೯ರಲ್ಲು ಬರಬೇಕೆಂದು ಪ್ರಕಟಿಸಿದರಾಯಿತೆ? ಸಾವಿರಾರು ಮಂದಿ ವೋಟರರಿರುವಾಗ ಈ ಪ್ರಕಟಣೆಯು ಎಲ್ಲರ ತಿಳುವಳಿಕೆಗೆ ಬರಲು ಸಾಧ್ಯವಿದೆಯೆ? ಇದು ಇಲೆಕ್ಷನ್ ಫಾರ್ಸ್ ಅಲ್ಲದೆ ಎಂದೂ ಇಲೆಕ್ಷನ್ ಎಂದೆನಿಸಿಕೊಳ್ಳಲಿಕ್ಕಿಲ್ಲ. ಇಲೆಕ್ಷನ್ ಕ್ರಮದಲಿ ಎಷ್ಟೋ ಸುಧಾರಣೆಗಳು ನಡೆದಿರುವಾಗ

[illegible] ನಲ್ಲಿ ಮುನಿಸಿಪಲ್ ಚುನಾವಣೆಗಳು ನಡೆಯುವಂತೆ ನಮಗೂ ಆಗಬೇಕು. ಸುಮ್ಮನೆ ಓಡಿ ಬನ್ನಿರಿ ಕೂಡಿ ಬನ್ನಿರಿ, ಕೈಯನ್ನೆತ್ತಿರಿ ಆಯಿತಪ್ಪ ಇಲೆಕ್ಷನ್ ಎಂದು ಹೇಳಿದರೆ ಸಾಲದು. ಮೊದಲನೆ ಆಲೋಚನೆಯಂತೆ ಎರಡು ಗ್ರಾಮಗಳನ್ನೂ ಬೇರೆ ಬೇರೆ ವಾರ್ಡುಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ವಾರ್ಡಿನ ವೋಟರರ ಪಟ್ಟಿಯು ತಯಾರಾಗಬೇಕು. ಮತ್ತು ಈ ಕುರಿತು ಅಗತ್ಯವಿರುವ ವಿಷಯಗಳೆಲ್ಲವನ್ನು ಜನರ ಗೊತ್ತುವಳಿಗೆ ತರಬೇಕು. ಸಾಕಷ್ಟು ಪುರುಸೊತ್ತನ್ನೂ ಕೊಡಬೇಕು. ಅನಂತ ಚುನಾವಣೆಯು ನಡೆಯಬೇಕು ಸುಮ್ಮನೆ ಇವತ್ತು ಬಂದು ನಾಳೆ ಇಲೆಕ್ಷನ್ ಎಂದು ಹೇಳಿದರೆ ಅದು ಬರಿಯ ಒಂದು ಫಾರ್ಸಲ್ಲದೆ ಬೇರೇನೂ ಆಗಲಿಕ್ಕಿಲ್ಲವೆಂದು ಇನ್ನೊಮ್ಮೆ ಹೇಳಲಪೇಕ್ಷಿಸುತ್ತೇನೆ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗಳಿಗೋಸ್ಕರ ವೋಟರರ ಹೊಸ ತೊಂದು ಪಟ್ಟಿಯು ತಯಾರಾಗುತ್ತದೆಂದು ಕೇಳುತ್ತೇನೆ ಅದಕ್ಕನುಸಾರವಾಗಿ ನಮ್ಮಲ್ಲಿಯೂ ಚುನಾವಣೆಯು ನಡೆಯಬಾರದೇಕೆ? ಆದುದರಿಂದ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ನಿಗಾ ತೆಗೆದುಕೊಂಡು ನಮ್ಮ ಮನಂತಿಯನ್ನು ಕೂಲಂಕಷ ವಿಚಾರ ಮಾಡಿ ನೋಡಿ, ನಾಗರಿಕತೆಯ ಈ ಯುಗದಲ್ಲಿ, ಈ ಇಪ್ಪತ್ತನೆಯ ಶತಮಾನದಲ್ಲಿ ಈ ಬಗೆಯ ಅನ್ಯಾಯವು ನಡೆಯದಂತೆ ಪ್ರಯತ್ನಿಸುವರಾಗಿ ನಂಬುತ್ತೇನೆ. ಪ್ರಯತ್ನಿಸಬೇಕಾಗಿ ಕರಜೋಡಿ ಬೇಡಿಕೊಳ್ಳುತ್ತೇನೆ

ಓರ್ವ ಬಂಟವಾಳ ನಿವಾಸಿ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ನಿರ್ಣಯಗಳು.

ತಾ. ೧೮-೬-೩೭ರಲ್ಲಿ ಸೇರಿದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಶೇಷ ಮಹಾ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳು ಮಂಜೂರಾದವು.

ಜಿಲ್ಲಾ ಕಮಿಟಿಯ ೫೦ ಮಂದಿ ಸದಸ್ಯರಲ್ಲಿ ೪೩ ಮಂದಿ ಹಾಜರಿದ್ದು ಈ ಕೆಳಗಿನಂತೆ ನಿರ್ಣಯಗಳಾಗಿರುತ್ತವೆ:— ಜಿಲ್ಲಾ ಕಾಂಗ್ರೆಸ್ ಕಮಿಟಿಯು ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಕಾರ್ಯದರ್ಶಿಯವರಿಗೆ ಸಂಬಳ ಕೊಡಲು ಸಾಧ್ಯವಿಲ್ಲದಾಗಿಯೂ ಆ ಬದಲು ಕಾರ್ಯದರ್ಶಿಯವರು ಗೌರವ ಕಾರ್ಯದರ್ಶಿಯವರಾಗಿರಬೇಕಾಗಿಯೂ ಕಮಿಟಿಯ ಅಧೀನದ ಪತ್ರವ್ಯವಹಾರ ನಡೆಸುವರೆ ಒಬ್ಬ ಕ್ಲಾರ್ಕನನ್ನು ತಿಂಗಳೊಂದರ ರೂ ೧೫ರಂತೆ ವೇತನ ಕೊಟ್ಟು ನೇಮಿಸಬೇಕಾಗಿಯೂ ಸೂಚಿಸಿ ತಂದ ನಿರ್ಣಯವು ಸಭೆಯ ಅನುಮತಿಯಿಂದ ಹಿಂದೆಗೆಯಲಾಯಿತು

ಜನರಲ್ ಕಾರ್ಯದರ್ಶಿಯವರ ಜಿಲ್ಲೆಯಲ್ಲಿ ತಿಂಗಳಿಗೆ ೨೦ ದಿನ ಪ್ರವಾಸ ಬೆಳೆಸಬೇಕಾಗಿಯೂ ಈ ಬಗ್ಗೆ ಅವರಿಗೆ ತಗಲುವ ಖರ್ಚಿನ ಕುರಿತು ತಾಲೂಕು ಕಮಿಟಿಗಳ ಕೂಡೆ ನಿಶ್ಚಯಿಸಬೇಕಾಗಿಯೂ ನಿರ್ಣಯಿಸಲಾಯಿತು

ಜಿಲ್ಲಾ ಪರಿಷತ್ತನ್ನು ಜರಗಿಸಬೇಕಾಗಿಯೂ ಸ್ಥಳ ಮತ್ತು ಸಮಯಗಳನ್ನು ಕಾರ್ಯಕಾರೀ ಮಂಡಲಿಯವರು ನಿರ್ಣಯಿಸಬೇಕಾಗಿಯೂ ಈ ಮೊದಲು ಆದ ನಿರ್ಣಯವೇ ಮಂಜೂರಾಯಿತು.

ಅಬುಲ್ ಕಲಾಮ್ ಸಯ್ಯದ್ ಮಹಮ್ಮದ್, ಡಾಕ್ಟರ್ ಅನ್ಸಾರೀ ಇತರ ಮುಸ್ಲೀಮ ಧುರೀಣರನ್ನು ಮೂರು ತಿಂಗಳ ಒಳಗೆ ಬರುವಂತೆ ಮಾಡಬೇಕಾಗಿ ನಿರ್ಣಯಿಸಲ್ಪಟ್ಟಿತು.

ಜಿಲ್ಲಾ ಬೋರ್ಡು ಮತ್ತು ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸಿನವರು ಭಾಗವಹಿಸಬೇಕೆಂದು ಈ ಮೊದಲು ಮಾಡಿದ ನಿರ್ಣಯವನ್ನು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು

ಡಾಕ್ಟರ್ ವಿಟ್ಠಲ ಶೆಟ್ಟರು ಕಮಿಟಿಯ ಉಪಾಧ್ಯಕ್ಷಪದವಿಗೆ ತಾನು ಕೊಟ್ಟ ರಾಜಿನಾಮೆಯನ್ನು ಸಭಿಕರ ಅಪೇಕ್ಷೆ ಮೇರೆಗೆ ಹಿಂದೆ ತೆಗೆದುಕೊಂಡರು

ಶ್ರೀ ಕಾರ್ನಾಡು ಸದಾಶಿವರಾವ್ ಸ್ಮಾರಕ ನಿಧಿಯ ಉದ್ದೇಶವನ್ನು ಮಂಗಳೂರಲ್ಲಿ ಅವರ ಹೆಸರಲ್ಲಿ ಸ್ಮಾರಕ ಕಟ್ಟೋಣವನ್ನು ರಚಿಸುವುದಕ್ಕಾಗಿ ಉಪಯೋಗಿಸಬೇಕೆಂದು ಬದಲಾಯಿಸುವಂತೆ ಮಾಡಿದ ಸೂಚನೆಯು ಮಂಜೂರಾಯಿತು

ಒಮ್ಮೆ ಮಂಜೂರು ಮಾಡಿದ ನಿರ್ಣಯವನ್ನು ಎಲ್ಲಾ ಸದಸ್ಯರಲ್ಲಿ ಒಂದು ಮೂರನೇ ಅಂಶದವರು ಕೇಳಿಕೊಂಡಲ್ಲಿ ಮಾತ್ರ ಪುನಃ ಮೂರು ತಿಂಗಳೊಳಗೆ ವಿಚಾರಿಸಬಹುದು ಎರಡು ಮೂರನೆ ಅಂಶ ಸದಸ್ಯರ ಬಹುಮತವಿದ್ದರೆ ಮಾತ್ರ ಪರಿವರ್ತಿಸಲಾಗುವುದೆಂಬ ನಿಯಮವು ಮಂಜೂರಾಯಿತು

1938ನೇ ಜನವರಿ ತಾ 1ರ ವರೆಗೆ ಶ್ರೀಮತಿ ಸುಶೀಲಾ [illegible] ಯವರನ್ನು ಸದಸ್ಯರನ್ನಾಗಿ [illegible] ನಿರ್ಣಯಿಸಲಾಯಿತು

[illegible] ದಲ್ಲಿ [illegible] ಕಾಂಗ್ರೆಸ್ [illegible] ಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯು ಅಭಿನಂದಿಸುತ್ತದೆ ಮತ್ತು ಜಿಲ್ಲೆಯವರಾದ ಡಾಕ್ಟರ್ ಯು ರಾಮರಾಯರ ಕೌನ್ಸಿಲ್ ಪ್ರೆಸಿಡೆಂಟರಾಗಿಯೂ ಶ್ರೀಗಳಾದ ಎ ಬಿ ಶೆಟ್ಟಿ, ಕೆ ಆರ್ ಕಾರಂತ ಮತ್ತು ಸಿ. ಜೆ ವಾರ್ಕಿಯವರು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟದ್ದಕ್ಕಾಗಿ ಅವರನ್ನು ಅಭಿನಂದಿಸುತ್ತದೆ ಎಂಬ ದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು

ಹಿ. ರಾಮರಾಯ ಮಲ್ಯ,
ಕಾರ್ಯದರ್ಶಿ,
ಜಿಲ್ಲಾ ಕಾಂಗ್ರೆಸ್ ಕಮಿಟಿ

ಶ್ರೀ ಸುಭಾಷ್ಚಂದ್ರಬೋಸರ ಆರೋಗ್ಯವು ಈಗ ಸ್ವಲ್ಪ ವೃದ್ಧಿ ಹೊಂದಿರುತ್ತದೆಂದು ಅವರ ಪತ್ರ ಬಂದಿರುತ್ತದೆ

ಅಮರೊಹಾ ಎಂಬ ಹಳ್ಳಿಯಲ್ಲಿ ಓರ್ವ ಸ್ತ್ರೀಯು ೪ ಕೂಸುಗಳನ್ನು ಹಡೆದಿರುವಳು. ತಾಯಿಯು ಎಲ್ಲಾ ಕೂಸುಗಳ ಸಮೇತ ಸೌಖ್ಯದಲ್ಲಿರುವಳು.

ಕಳೆದ ವಾರ ರೂಪಾಯಿ ೨೭,೭೫,೩೭೮ ಕ್ರಯಬಾಳುವ ಭಂಗಾರವು ಹಿಂದೂದೇಶದಿಂದ ರಫ್ತಾಗಿರುತ್ತದೆ. ಇಷ್ಟರ ತನಕ ರಫ್ತಾದ ಭಂಗಾರದ ಮೌಲ್ಯ ೩,೦೦,೮೭,೫೧,೮೭೫ ರೂಪಾಯಿ



TEST YOUR EYES



By the Electro Ophthalmoscope



All Varieties of
Frames & Lenses.
AT
The Mangalore Trading Association Ltd.
Sight Testing Ophthalmic Opticians,
Car Street, MANGALORE.



ಗುಣಖಾತ್ರಿ ಔಷಧ.

ಸ್ತ್ರೀಯರ ಎಲ್ಲಾ ತರದ ಮುಟ್ಟು ದೋಷಗಳಿಗೆ. ಸ್ತ್ರೀಯರಿಗೆ ದೇಹವನ್ನು ಪುಷ್ಟೀಕರಿಸುವ ಟಾನಿಕ್.

ಲೋಧ್ರ

ಎಲ್ಲಾ ದವಾಖಾನೆಗಳಲ್ಲಿಯೂ ದೊರೆಯುತ್ತದೆ

ಕೇಸರಿ ಕುಟೀರಂ
ಮದ್ರಾಸು

ಮಂಗಳೂರು ಪ್ರವರ್ತಕರು ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಯ್ಯ ಕರಣೀಕ ರಸ್ತೆ, ಹೂಮಾರ್ಕೇಟು ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,
Flower Market South, Mangalore.

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ-ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ಕೊಳಗಳ ಡಬ್ಬಿ ರೂ. 1-4-0 (ವಿ.ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದೀಯ ಸಮಾಜ, ಪೆರಿಡೆಪಿ.
P. O. Peridepi (ನೆಲ್ಲೂರು ಜಿ.)

'Dil Roz' (Regd)

'Dil Roz' is a sure cure for Oriental sores local sores, all kinds of deep rooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited.

Price Rs. 2.
Postage extra.

TAHIR DIN,
Anarkali, LAHORE.



ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ. ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್
ವ್ಯಾಧಿಗಳು

ಅನೇಕ ಸಂದಿ ಶಿಶುಗಳನ್ನು ಬಾಧಿಸ ತ್ತಿವೆ ಅಜೀರ್ಣ, ಹೊಟ್ಟೆ ಉಬ್ಬರ ಅಜೀರ್ಣ ಬೇಧಿಗಳು, ಕೈಕಾಲುಗಳು ಸಣ್ಣವಾಗಿ ಕ್ಷೀಣ ಇವುಗಳಿಂದ ನರಳಿ, ಒಳಲು ಎಷ್ಟೋ ಕಂದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ಸಾಯೋ ಎಂದಿರುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಪ ಹತ್ತಿರವಾದ ಔಷಧವೆಂದರೆ ಬಾಲಭಾಸ್ಕರ ಎಂಬೀ ನಿಮ್ಮ ಮಕ್ಕಳಿಗ ಬಾಲಭಾಸ್ಕರವನ್ನು ಕೊಡಿರಿ

ಎಳೆಯ ಮಕ್ಕಳನ್ನು ರಕ್ಷಿಸ ಪುದೆ ದರೆ—

ಬಾಲಭಾಸ್ಕರ

ಆಯುರ್ವೇದಾಶ್ರಮಂ,
ನಂ ಗೋವಿಂದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸ

ದ. ಕ ಜಿಲ್ಲಾ ಏಜಂಟ್
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವ ಸೇವೆಯನ್ನು ಮಾಡುತ್ತದೆ ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ ಬಾಯಿ ಬಡಿಕೆ ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡಾಟಗಳು 24 ತಾಸುಗಳಲ್ಲೆ ನಿಲ್ಲುವವು ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಉನ್ಮಾದ 10 ನಿಮಿಷಗಳಲ್ಲಿ ಮಾಯವಾಗುತ್ತವೆ, ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ 5, ಪೋಸ್ಟೇಜು ಅಧಿಕವಿದೆ.

C. L. Namawala,
Palace Road, BARODA.

ಗ್ರಾಮಗಳಲ್ಲಿ ಕಾಂಗ್ರೆಸು ಕಮ್ಮಿಟಿಗಳ ಆವಶ್ಯಕತೆ

ಲೇಖಕ—ಯಂ. ಬಿ. ನರ್ಸಪ್ಪ

ರಾಷ್ಟ್ರೀಯ ಮಹಾಸಭೆಯ ಸೂತ್ರವು, ಗಾಂಧಿಜೀಯವರ ಕೈಯಲ್ಲಿ ಸಿಕ್ಕಿದಂದಿನಿಂದ ದೇಶದಲ್ಲಿ 'ನವಯುಗ'ವು ತಲೆದೋರಿ ಸ್ವಾತಂತ್ರ ಚಳವಳದ ರುಚಿಯನ್ನು ಕಂಡುಕೊಳ್ಳುವಂತಾಯಿತು. ಮಹಾತ್ಮಾಜೀಯವರ ಆತ್ಮಶಕ್ತಿಯ ತೇಜಸ್ಸು ಕಳೆದ ಹದಿನೇಳು ವರ್ಷಗಳಿಂದ ದೇಶದಲ್ಲಿ ನವ ಜಾಗ್ರತವನ್ನು ಹುಟ್ಟಿಸಿತು. ರಾಷ್ಟ್ರ ಪ್ರೇಮಿಗಳು ಬಹುಪಕ್ಷವಾಗಿ ರಾಷ್ಟ್ರ ಸಭೆಗೆ ಸೇರಿ ರಾಷ್ಟ್ರ ಸಭೆಯು ಕೈಗೊಂಡ ಕಾರ್ಯಗಳಲ್ಲಿ ಸಹಕಾರಿಗಳಾಗಿ ಆಳರಸರ ವಕ್ರದೃಷ್ಟಿಗೆ ಒಳಗಾಗಿ ಸೆರೆಮನೆಗಳ ಆತಿಥ್ಯವನ್ನು ಹೊಂದಿರುವರಲ್ಲದೆ ಲಾಠಿ ಪ್ರಹರಕ್ಕೂ, ಗುಂಡಿನ ಸುರಿಮಳೆಗೂ ತುತ್ತಾಗಿರುವರು ಆದರೆ ಈ ವಲ್ಲಾ ಕಷ್ಟ ತೊಂದರೆಗಳನ್ನು ಹೆಚ್ಚಾಗಿ ಹೊಂದಿದ್ದು ಬಡಸಮಾಜವೆಂದು ಹೇಳಿದರೆ ತಪ್ಪಾಗಲಾರದು

ರಾಷ್ಟ್ರೀಯ ಮಹಾಸಭೆಯೆಂಬುದು ಐಶ್ವರ್ಯವಂತರ ಸೂತ್ರ ಚಾಲನೆಯೆಂದೂ ಅದರಿಂದ ಬಡವರಿಗೆ (ಮುಖ್ಯತಾ ಹಳ್ಳಿಯ ಬಡ ಸಮಾಜಕ್ಕೆ) ಅದರಿಂದ ಏನೂ ಪ್ರಯೋಜನವಿಲ್ಲವೆಂದೂ ತಿಳಕೊಳ್ಳುವ ಸ್ಥಿತಿಯು ಆಗಾಗ್ಗೆ ಕೇಳಿಬರುತ್ತದೆ ಅಂದರೆ ಪಟ್ಟಣ, ಶಹರುಗಳಲ್ಲಿರುವ ಹಲಕೆಲವು ಐಶ್ವರ್ಯವಂತ ಹಾಗೂ ತಿಳಿದ ಜನರ ಕೈಯಲ್ಲಿರುವುದೆಂದೂ ಸದರಿ ಸಭೆಗೂ ತಮಗೂ ಏನೂ ಸಂಬಂಧವಿಲ್ಲವೆಂದೂ ಹಳ್ಳಿಗರು ತಿಳಿಯುವಂತಾಯಿತು ಇದಕ್ಕೆ ಕಾರಣವೇನು?

ಶೇಕಡಾ 80ರಷ್ಟು ಜನಸಂಖ್ಯೆಯುಳ್ಳ ಏಳು ಸಾವಿರ ಹಳ್ಳಿಗಳಲ್ಲಿ ಕಾಂಗ್ರೆಸ್ಸಿನ ಪ್ರಚಾರ ಕಾರ್ಯವು ನಡೆಯದಿದ್ದದರಿಂದಲೇ ದಯಾಳು ಬ್ರಿಟಿಷ ಸರಕಾರದ 170 ವರ್ಷಗಳ ಆಳ್ವಿಕೆಯಲ್ಲಿ ಶೇಕಡಾ ಎಂಟು, ಹತ್ತು ಜನರು ಮಾತ್ರ ವಿದ್ಯೆ ಅಂದರೆ ಓದು ಬರಹ ಬಲ್ಲವರಾಗಿರುತ್ತೇವೆ ಅದೇ ಹತ್ತು ವರ್ಷಗಳ ಆಳ್ವಿಕೆಯಲ್ಲಿ ಟರ್ಕಿ, ಜಪಾನ್ ಮತ್ತು ರಷ್ಯಾ ದೇಶಗಳಲ್ಲಿ ಶೇಕಡಾ ನೂರು ಜನರು ಓದುಬರಹಗಳನ್ನು ಕಲಿತಿದ್ದುದು ಮಾತ್ರವಲ್ಲದೆ ತಮ್ಮ ಜೀವನಕ್ಕೆ ಬೇಕಾದ ಸ್ವತಂತ್ರವಾದ ಉದ್ಯೋಗಗಳನ್ನು ಹೊಂದಿ ಸ್ವತಂತ್ರವಾಗಿ ಸುಖ ಜೀವನ ಸಾಗಿಸುತ್ತಿರುವರು ಮೇಲಾಗಿ ದೇಶಪ್ರೇಮದಿಂದ ಮೈ ಮರೆಯುತ್ತಿರುವರ ಪರದೇಶಗಳ ಗೊಡವೆಯೇ ಇಲ್ಲದೆ ಸರ್ವ ಸ್ವತಂತ್ರರಾಗಿರುವರು ಆದರೆ ನಮ್ಮ ಈ ಬಡ ಭಾರತದ ಸ್ಥಿತಿಯೆಲ್ಲಿ?

ಪ್ರಚಲಿತ ಭಾರತದ ಹಳ್ಳಿಗಳಲ್ಲಿನ ಶೋಚನೀಯ ಸ್ಥಿತಿಗಳು ಮತ್ತಾವ ದೇಶಗಳ ಹಳ್ಳಿಗಳಲ್ಲಿಯೂ ಕಾಣಸಿಕ್ಕಲಾರದು ಅಲ್ಲಿಯ ಹಳ್ಳಿಗಳ ಸುಖವು ನಮ್ಮ ದೊಡ್ಡದೊಡ್ಡ ಶಹರುಗಳಲ್ಲಿಯ ಸುಖಗಳಿಗಿಂತ ಕಮ್ಮಿ ಇರುವುದಿಲ್ಲ ಹಳ್ಳಿಗಳಿಂದಲೇ ಪೇಟೆ, ಶಹರುಗಳು ಬದುಕುವುವೆಂಬುದನ್ನು ಅವರು ತಿಳಿದಿರುವರು ಹಾಗೂ ಅದೇ ರೀತಿಯ ಸೌಕರ್ಯಗಳನ್ನು ಹಳ್ಳಿಗಳಿಗೆ ಒದಗಿಸುತ್ತಿರುವರು ಇದರಿಂದಲೇ ಅಲ್ಲಿಯ ಹಳ್ಳಿಗಳು ವಿದ್ಯಾ ಸಂಪನ್ನರಿಂದಲೂ, ಶ್ರೀಮಂತರಿಂದಲೂ ತುಂಬಿ ತುಳುಕುತ್ತಿರುವುದು. ಆದರೆ ನಮ್ಮ ವಿಶಾಲ ಭಾರತದ ಹಳ್ಳಿಗಳಲ್ಲಿ ಬರಹದ ಗಂಧ ಅರಿಯದ ಕೋಟಿಗಟ್ಟಲೆ ಸಮಾಜವು ಕೂಪ ಮಂಡೂಕದಂತಿದ್ದು ಲೋಕ ವ್ಯವಹಾರ ಜ್ಞಾನವಿಲ್ಲದೆ ಆಳರಸರೇ ತಮ್ಮ ದೇವರೆಂಬುದನ್ನು ತಿಳಕೊಂಡಿರುವರು.

ಸಮತಾವಾದಿಗಳು ದೇಶದ ಹಳ್ಳಿಗಳ ಆರ್ಥಿಕ ದುಃಸ್ಥಿತಿ, ನಿರುದ್ಯೋಗದ ಹೊರೆ, ಜೀವನದ ಕಾಠಿಣ್ಯ ಸ್ಥಿತಿಗಳನ್ನು ಅದ್ಯಂತವಾಗಿ ತಿಳಿದು ಅಲ್ಲಿಯ ಜಮೀನ್ದಾರು ಬಡ್ಡ ಸಮಾಜಕ್ಕೆ ಕೊಡುವ ಹಿಂಸೆಗಳನ್ನು ನೋಡಿ, ಬರಬೇಕಾದ ಸಾಲಗಳಿಗೆ ದುಬಾರಿ ಬಡ್ಡಿಗಳನ್ನು ರಕ್ತ ಹೀರಿದಂತೆ ಸೆಳೆಯುವ ಕಷ್ಟಗಳನ್ನು ಸ್ವತಃ ಅನುಭವಿಸಿ ರಾಷ್ಟ್ರ ಸಭೆಗೆ ದೂರಿಕೊಂಡರು. ಪ್ರಥಮತವೆಂಬಂತೆ ರಾಷ್ಟ್ರಪತಿ ನೆಹರೂಗಳವರು ತಮ್ಮ ಸಂಯುಕ್ತ ಸಂಸ್ಥಾನದ ಹಳ್ಳಿಗಳ ದುರವಸ್ಥೆಗಳನ್ನು ನೋಡಿ ಮರುಕಗೊಂಡು ಜಮೀನ್ದಾರಿ ಕ್ರಮವನ್ನೆ ನಾಶಗೊಳಿಸಬೇಕೆಂಬುವ ಇಚ್ಛೆಪಡುವಲ್ಲಿಗೆ ಬಂದರು. ಅನಂತರವೇ ದೇಶದ ಹಳ್ಳಿಗಳ ಉದ್ಧಾರವಾಗದೆ ದೇಶದ ಸುಭಿಕ್ಷೆಯಾಗದೆಂದು ತಿಳಿದ ಆ ಬಗ್ಗೆ ಪ್ರಯತ್ನ ಪಡುತ್ತಿದ್ದಾರೆ ಆ ಬಗ್ಗೆ ತನ್ನ ಸರ್ವ ಶಕ್ತಿಯನ್ನು ಉಪಯೋಗಿಸುತ್ತಿರುವರು ಇದರಿಂದಲೇ ಹಳ್ಳಿಗಳ ಬಡ ಸಮಾಜವು ರಾಷ್ಟ್ರಪತಿಗಳ ಮೇಲೆ ಪೂಜ್ಯ ಭಾವವನ್ನು ತೋರಿಸುತ್ತಿರುವರು ಅವರೇ ತನ್ನ ಫೈಜಪುರ ಕಾಂಗ್ರೆಸ್ಸಿನ ಅಧ್ಯಕ್ಷ ಭಾಷಣದಲ್ಲಿ ಏಳು ಸಾವಿರ ಹಳ್ಳಿಗಳಲ್ಲಿಯೂ ಕಾಂಗ್ರೆಸು ಕಮ್ಮಿಟಿಗಳ ನೇಮಕವಾಗಿ ಆ ಮುಖಾಂತರ ಕಾಂಗ್ರೆಸ್ಸಿನ ಪ್ರಚಾರ ಕಾರ್ಯವು ನಡೆಯಬೇಕೆಂದೂ, ಹಳ್ಳಿಗಳ ಉದ್ಧಾರವಾಗಬೇಕೆಂದೂ, ಅದಕ್ಕಾಗಿ ಆಯಾಯ ಹಳ್ಳಿಗಳ ಮುಂದಾಳುಗಳು ಪ್ರಯತ್ನಪಡಬೇಕೆಂದೂ ದೇಶವನ್ನು ಕೇಳಿಕೊಂಡಿದ್ದಾರೆ

ಇಷ್ಟರ ವರೆಗೆ ಬರೇ ಪಟ್ಟಣ ಶಹರುಗಳಲ್ಲಿ ಕಾಂಗ್ರೆಸು ಸಂಸ್ಥೆಗಳು ಹಳ್ಳಿಗಳಿಗಿಳಿಯಬೇಕೆಂಬುದೇ ಗಾಂಧಿಜೀಯ ಸಲಹೆ ಅದನ್ನೇ ಮೊನ್ನೆ ಫೈಜಪುರದ ಕಾಂಗ್ರೆಸ್ಸಿನಲ್ಲಿ ತನ್ನ ಅಂತರಾಳದ ಬಿಸಿಯುಸಿರನ್ನು ಮುಚ್ಚು ಮರೆಯಿಲ್ಲದೆ ಹೇಳಿದ್ದಾಗಿರುತ್ತದೆ ಹಳ್ಳಿಗಳಲ್ಲಿ ಕಡ್ಡಾಯವಾದ ಶಿಕ್ಷಣವನ್ನು ಕೊಡದೆ ನರಕ ತಾಪದ ಸ್ಥಿತಿಗೆ ತಂದಿರಿಸಲ್ಪಟ್ಟಿದೆ ಆ ಸ್ಥಿತಿಯನ್ನು ಮೇಲಕ್ಕೆತ್ತಬೇಕಾದರೆ ಕಾಂಗ್ರೆಸಲ್ಲದೆ ಮತ್ತಾವ ಸಂಸ್ಥೆಯಿಂದಲೂ ಸಾಧ್ಯವಾಗಲಾರದು ಈಗ ಕಾಂಗ್ರೆಸಿನವರು ಆರು ಪ್ರಾಂತ್ಯಗಳಲ್ಲಿ ಮಂತ್ರಿಪದವಿಗಳನ್ನು ಸ್ವೀಕಾರ ಮಾಡಿರುವರು ಅಲ್ಲದೆ ಬಾಕಿ ಸಂಸ್ಥಾನಗಳಲ್ಲೂ ಕಾಂಗ್ರೆಸ್ಸಿನ ಪ್ರತಿಷ್ಠೆ ನಡೆಯಲಿರುವುದು ಮುಂದಕ್ಕೆ ಕಾಂಗ್ರೆಸ್ಸಿನಿಂದ (ಮಂತ್ರಿಮಂಡಲದ) ಹಳ್ಳಿಗಳಿಗೆ ಪ್ರಯೋಜನ ದೊರಕಲಿದೆ ತ್ಯಾಗಶಿಖಾಮಣಿಗಳಾದ ಧುರೀಣರುಗಳೇ ಮಂತ್ರಿಗಳಾಗಿರುವುದರಿಂದ ಹಳ್ಳಿಗಳ ವಿದ್ಯಾಪ್ರಚಾರಕ್ಕೆ ಹೆಚ್ಚಿನ ಸಹಾಯತೆ ಸಿಕ್ಕುವುದರಲ್ಲಿ ಸಂದೇಹವಿಲ್ಲ ಅದರ ಜೊತೆ ಮದ್ಯಪಾನ ನಿಷೇಧಕ್ಕಾಗಿ ಬೇಕಾದ ಚಳವಳವೂ ನಡೆಯಲಿರುವುದು ಆಗ ಜನತೆಯ ಬೆಂಬಲವು ದೊರಕಿ ಮಂತ್ರಿಗಳ ಕಾರ್ಯಕ್ರಮಗಳು ಸಂರಾಗವಾಗಿ ನಡೆಯುತ್ತವೆ ಇದಕ್ಕೆ ವ್ಯತಿರಿಕ್ತವಾಗಿ ನಡೆದಲ್ಲಿ ಆಗ ಹೊಸ ಸರಕಾರವು ಬರೇ ಕಣ್ಣುಕಟ್ಟಿನದೆಂದು ಜನತೆಯು ತಿಳಿದು ಮುಂಬರುವ ಇನ್ನೊಂದು ಸ್ವತಂತ್ರ ಚಳವಳಕ್ಕೆ ಅನುಕೂಲವಾಗುವುದು.

ಪ್ರಚಲಿತ ವಿಧ್ಯಮಾನಗಳನ್ನು ತಿಳಿದು ಸಮಗ್ರ ಕರ್ನಾಟಕದ ಹಳ್ಳಿಗಳಲ್ಲಿ ಗ್ರಾಮ ಕಾಂಗ್ರೆಸು ಕಮ್ಮಿಟಿಗಳು ಏರ್ಪಾಡಾಗಬೇಕು. ಮುಂದಾಳುಗಳು ಬರೇ ಆಜ್ಞೆ ಹೇಳುವವರಾಗಿರಕೂಡದು. ಮುಂದಾಳುಗಳಾಗಿ ಹಳ್ಳಿಗಳಿಗೆ ಇಳಿದಲ್ಲಿ ಹಿಂದಿನಿಂದ ಕಾರ್ಯಕರ್ತರು ಕೆಲಸ ಮಾಡುವಲ್ಲಿ ಸಂದೇಹವಿರಲಾರದು ಗ್ರಾಮ ಪಂಚಾಯತ ಬೋರ್ಡುಗಳು, ಆಯಾಯ ಕಾಂಗ್ರೆಸು ಕಮಿಟಿಗಳ ಆಡಳಿತಕ್ಕೆ ಸಿಕ್ಕುವಂತೆ ಪ್ರಯತ್ನ ಪಡಬಹುದು ಆದರೆ ಅದಕ್ಕೆ ಬೇಕಾದ ಕಾಂಗ್ರೆಸು ಕಮ್ಮಿಟಿಗಳು ತಿಳಿದ ಕಾರ್ಯಕರ್ತರ ಕೈ ಸೇರುವಂತಾಗಬೇಕು ಹಾಗಾದರೆ ಮಾತ್ರ ಜನಾಬ್ದಾರಿ ಹೊಂದಲು ಸಾಧ್ಯವಾಗಬಹುದು ಬಡ ಸಮಾಜವು ಸುಮ್ಮನಿರದೆ ಕಾಂಗ್ರೆಸ್ಸಿನ ಪ್ರಾಥಮಿಕ ಮೆಂಬರರಾಗಿ ಅಧಿಕ ಸಂಖ್ಯಾತದಲ್ಲಿ ಸೇರಬೇಕು. ವರ್ಷಒಂದಕ್ಕೆ 4ಆಣೆ ತೆರಲು ಯಾರಿಗೂ ಕಷ್ಟವಾಗಲಾರದು ಪ್ರಾಥಮಿಕ ಮೆಂಬರರಾಗದ ಕಾಂಗ್ರೆಸ್ಸಿನ ಯಾವದೊಂದು ಕಾರ್ಯಕಾರಿ ಮಂಡಳಕ್ಕೆ ಸೇರಲು ಸಾಧ್ಯವಿಲ್ಲವೆಂಬುದನ್ನು ಮರೆಯಲಾಗದು ನಂತರ ತಾನು ಮೆಂಬರನಾಗಲಿಲ್ಲವಲ್ಲಾ ಎಂದು ಬೇಸರಪಟ್ಟುಕೊಳ್ಳುವುದಕ್ಕಿಂತ ಆದಷ್ಟು ಬಹು ಮುಂದಿಯಾಗಿ ಮೆಂಬರರಾಗಿ ಸೇರಿ ಆಯಾಯ ಗ್ರಾಮಗಳಲಿ ಕಾಂಗ್ರೆಸ್ಸು ಕಮ್ಮಿಟಿಗಳನ್ನು ಸ್ಥಾಪಿಸಿ ಕಾರ್ಯ ಕುಶಲರೂ, ಹಳ್ಳಿಗಳ ಉದ್ಧಾರ ಕಾಂಕ್ಷಿಗಳೂ, ದೇಶ ಪ್ರೇಮಿಗಳೂ ಆದ ಸುಶಿಕ್ಷಿತರ ಕೈಯಲ್ಲಿ ಅಧಿಕಾರವನ್ನು ಕೊಟ್ಟು ಜನತೆಯು ಪ್ರತೀ ಒಂದು ಕಾರ್ಯದಲ್ಲಿ ಸಹಕಾರ ಸಹಾಯತೆಯನ್ನು ನೀಡಬೇಕು. ತಮ್ಮ ಕುಂದ ಕೊರತೆಗಳನ್ನು ಕಾಂಗ್ರೆಸು ಕಮ್ಮಿಟಿಗಳ ಮೇಲಿನ ಅಧಿಕಾರದಲ್ಲಾಗಲೀ, ಸ್ಥಳೀಯ ಪತ್ರಿಕೆಗಳಲ್ಲಾಗಲೀ ಹೇಳಿಕೊಡಬೇಕು. ಗ್ರಾಮಾಭಿವೃದ್ಧಿ ಕೆಲಸದಲ್ಲಿ ಸಮಭಾಗಿಗಳಾಗಬೇಕು ವಿದ್ಯಾ ಪ್ರಚಾರಕ್ಕಾಗಿ ಸತತ ಪ್ರಯತ್ನಪಟ್ಟು ಜಯಶೀಲರಾಗಬೇಕು ಕೈಗಾರಿಕೆಗಳನ್ನು ಪುನರ್ವ್ಯವಸ್ಥೆಯಾಗುವಂತೆ ಪ್ರಯತ್ನಪಟ್ಟಲ್ಲಿ ಅದಕ್ಕೆ ಬೇಕಾದ ಪ್ರೋತ್ಸಾಹವೂ ಸಹಾಯವೂ ಹೊರಗಿನಿಂದ ದೊರಕುವುದರಲಿ ಸಂದೇಹವಿರಲಾರದು.

ಆಯಾಯ ಗ್ರಾಮಗಳ ಕುಂದುಕೊರತೆಗಳನ್ನು ಕಾಂಗ್ರೆಸು ಮಂತ್ರಿ ಮಂಡಳವು ತಿಳಿಯುವುದಾದ ಪಕ್ಷದಲ್ಲಿ ಅದು ನೇರವಾಗಿ ಆಯಾಯ ಗ್ರಾಮಗಳ ಕಾಂಗ್ರೆಸು ಕಮ್ಮಿಟಿಯಿಂದ ಮಾತ್ರವೇ ಕೇಳುತ್ತೇರಾದ್ದರಿಂದ ಈ ಸಂದಿಗ್ಧ ಸಮಯದಲ್ಲಿ ಪ್ರತೀ ಒಂದು ಗ್ರಾಮಗಳಲ್ಲಿ ಕಾಂಗ್ರೆಸು ಕಮ್ಮಿಟಿಗಳನ್ನು ಸ್ಥಾಪಿಸಿ ಮುಂದಾಳುಗಳು ಆ ಮೂಲಕ ಗ್ರಾಮ ಸೇವೆ ಮಾಡಲು ಮುಂದೆ ಬರುವರೆಂದು ಆಶಿಸಬಹುದೇ?

ಕೆಲಸ ಮಾಡಲೂ, ನಿದ್ರಿಸಲೂ ಆಗದಷ್ಟು ಅಶಕ್ತಳಾಗಿದ್ದಳು.

ಮಲಬದ್ಧತೆಯಿಂದ ಅವಳ ದೇಹದಲ್ಲೆಲ್ಲಾ ವಿಷವು ಕೂಡಿತ್ತು.

ಕ್ರುಶನ್ ಲವಣದ ಸೇವನೆಯಿಂದ ಬಹಳವಾಗಿ ಗುಣಹೊಂದಿದಳು

ಅನೇಕ ವರ್ಷಗಳಿಂದ ಮಲಬದ್ಧತೆಯ ದೆಸೆಯಿಂದ, ಈ ಸ್ತ್ರೀಯ ದೇಹದಲ್ಲೆಲ್ಲಾ ವಿಷವೇರಿತ್ತು ಆವಳಿಗೆ ಮಲಗಲಾಗುತ್ತಿರಲಿಲ್ಲ. ಕೆಲಸಮಾಡಲೂ ಆಗುತ್ತಿರಲಿಲ್ಲ ಯಾವ ಔಷಧಿಯಿಂದಲೂ ಚಿಕಿತ್ಸೆಯಿಂದಲೂ ಅವಳಿಗೆ ಉಪಕಾರವಾಗಲಿಲ್ಲ ಕೊನೆಗೆ ಮಲಬದ್ಧತೆಯಿಂದ ಹೊರಗಾಗಲು ಅವಳೊಂದು ಉಪಾಯವನ್ನು ಕಂಡುಹಿಡಿದಳು ತನ್ನ ಆರೋಗ್ಯವನ್ನು ಯಾವ ಉಪಾಯದಿಂದ ಸರಿನಡಿಸಿದಳೆಂದು ಅವಳ ಪತ್ರವನ್ನು ಓದಿರಿ—

"ಅನೇಕ ವರ್ಷಗಳ ಸಮಯ, ಕರುಳು ಹೊಟ್ಟೆ ಮತ್ತು ಮೂತ್ರಪಿಂಡಗಳ ದೆಸೆಯಿಂದ ನಾನು ಬಹಳವಾಗಿ ನರಳಿದೆನು ನನ್ನಲ್ಲಿ ಕಠಿಣವಾದ ಮಲಬದ್ಧತೆಯಿದ್ದಿತು ಯಾವ ಔಷಧಿಯಿಂದಲೂ, ಇದನ್ನು ಗುಣಪಡಿಸಲು ಸಾಧ್ಯವಾಗಲಿಲ್ಲ ನನ್ನ ದೇಹದಲ್ಲೆಲ್ಲಾ ಕ್ರಮವಾಗಿ ವಿಷವು ಏರಿತು ನನ್ನಲ್ಲಿ ಭಯವು ಉಂಟಾಗಲು ಸುಖವಾಗಿ ನಿದ್ರಿಸಲು ಅಸಾಧ್ಯವೆನಿಸಿತು. ಕೊನೆಗೆ ನಾನು ಕ್ರುಶನ್ ಲವಣವನ್ನು ಸೇವಿಸಲು ಪ್ರಾರಂಭಿಸಿದೆನ ಒಡನೆ ನನ್ನ ಆರೋಗ್ಯವು, ಬಹಳ ವೃದ್ಧಿಹೊಂದಿದಂತೆ ಕಾಣಿಸಿತು ಈಗ ನನಗೆ ಸರಿಯಾಗಿ ನಿದ್ರಿಸಲಾಗುತ್ತದೆ ನನ್ನಲ್ಲಿ ಮಲಬದ್ಧತೆಯು ಈಗ ಇರುವುದಿಲ್ಲ ನನ್ನಲ್ಲೀಗ ನಿಶಕ್ತಭಾವವು ಇರುವುದಿಲ್ಲ ಈಗ ನಾನು ಕೆಲಸ ಮಾಡಲೂ ಶಕ್ತಳಾಗಿದ್ದೇನೆ ಕ್ರುಶನ್ ಲವಣದ ಈ ಉಪಕಾರಕ್ಕೆ ನಾನು ಚಿರಋಣಿಯಾಗಿರುತ್ತೇನೆ

Mrs. B

ಮಲವಿಸರ್ಜನೆಗೊಳಿಸಲು ಕ್ರುಶನ್ ಲವಣವು ಪರಮ ಪ್ರಧಾನವು ಇದರಲ್ಲಿರುವ ಆರು ಲವಣಗಳು ದೇಹದ ಅಂಗಾಂಗಗಳನ್ನು ಸರಿಯಾಗಿಯೂ ಸ್ವಾಭಾವಿಕವಾಗಿಯೂ

ಕಾರ್ಯಗೈಸುವಂತೆ ಮಾಡುತ್ತವೆ ಅನೇಕ ಅನುಭೋಗಗಳಿಗ ಮತ್ತು ವೇದನೆಗಳಿಗೆ ಕಾರಣವಾಗುವ ಕಶ್ಮಲಗಳನ್ನು ನಿಮ್ಮ ಉದರದೊಳಗಿನಿಂದ ಹೊರಕಳ್ಳಿ, ಉದರವನ್ನು ಶುಚಿಯಾಗಿ ಮಾಡುತ್ತದೆ ಕ್ರುಶನ್ ಲವಣವು ಎಲ್ಲಾ ದವಾಖಾನೆ ಮತ್ತು ಬಜಾರುಗಳಲ್ಲಿ ಮಾರಲ್ಪಡುತ್ತದೆ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

(ರಜಿಸ್ಟರ್ಡ)

ಗೋನೋಕಿಲರ್



ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N. JASANI,** Vithalbhai Patel Road, BOMBAY 4

ಡೋಂಗರೇ ಇವರ ಬಾಲಾಮೃತ,
ಮಕ್ಕಳಿಗೆ
ಆರೋಗ್ಯವನ್ನು
ಕೊಡುತ್ತದೆ

ಡೋಂಗರೆಕೈ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

The Coronation of their Majesties is now over!
But Remember!

Comfortable ***Ideal*** ***Central***

The Coronation Darbar Restaurant

Boarding & Lodging

Opposite Govt. College, Hampankatta, Mangalore

A Home in the Motherland

Cleanliness and comfort at moderate cost.

A delightful hotel in the centre of the town and nearest to the Rly Station & Bus Station.

Gives best Refreshment & dinner service and modern preparations such as *Biryani, Fowl Biryani, Pulav Khushka Chops, Cutlets,* Roast, Bheja, Khima, Tomato mutton, Roasted Fowl, Omlet, Sumbusa, etc, a speciality

Special lodging arrangements for travellors, Students will find all their food requirements.

Please Step in Once and Convince Yourself

S. B. Mohidin, S. M. Sayed Ali Saheb (Bhatkali) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಗವರ್ನಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಸೌಲಭ್ಯ **ಸೌಕರ್ಯ** **ಸುಖದಾಯಕ**

ಶುಚಿಕರವಾದ ಮತ್ತು ರುಚಿಯಾದ ತಿಂಡಿ ಪದಾರ್ಥಗಳು ಸುಲಭ ದರದಲ್ಲಿ ಇನ್ನೆಲ್ಲಿಯೂ ದೊರಕಲಾರವು.

ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಆಫೀಸುಗಳಿಗೆ ತೀರಾ ಸಮೀಪವು.

ಮನೋಲ್ಲಾಸಕರ ಕಾಫಿ, ತಿಂಡಿ, ಊಟ ಉಪಚಾರಗಳು

ಮುರ್ಗಿ ಬಿರಿಯಾನಿ, ಬಿರಿಯಾನಿ, ಮುರ್ಗಿ ರೋಸ್ಟ್, ಪುಲಾವ್, ಖುಷ್ಕಾ ಚಾಪ್, ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮೆಟೊ ಮಟನ್, ಆಮ್ಲೆಟ್, ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವುವು

ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರಯಾಣಿಕರಿಗೆ ಇರಲಿಕ್ಕೆ ತೃಪ್ತಿಕರವಾದ ಏರ್ಪಾಡು. ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿಕೊಳ್ಳುವುದಾದರೆ ಒಂದೊಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ

ಯಸ್. ಬಿ. ಮೊಹಿದಿನ್,
ಯಸ್. ಎಮ್. ಸಯ್ಯದ್ ಆಲಿ ಸಾಹೇಬ್, (ಭಟ್ಕಳ) } ಸ್ವಾಮಿತ್ವದವರು

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ನೆಗಡಿಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ನೋವಲಿಂದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಜಾನದ್ರವ, ತಲೆಹುಣ್ಣು ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲಿ ದೊರೆಯುವುದು

The Canara Banking Corporation, Udipi, Ltd.

ESTD. 1906.

(INCORPORATED IN BRITISH INDIA.)

***Member:-* RESERVE BANK OF INDIA.**

Subscribed Capital	**Rs. 3,50,000**
Paid up Capital	**Rs. 2,88,950**
Deposits	**Rs. 37,22,794 9 5**
Reserves	**Rs. 3,63,573 5 5**

Total Resources exceed Rs. 52,00,000/

ANNOUNCEMENT.

BRANCHES of the Corporation will be shortly opened at METTUPALAYAM & ERODE.

28-7-1937

V. R. Kamath, B. A. LL. B
Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced

Manufactured by—

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder, MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು — ಡಾ। ಡಿ. ಎ. ವೈದ್ಯ ಎಲ್. ಸಿ ಪಿ ಎಸ್ ಕೊಲ್ಹಾಪೂರ ಇವರು ಬರೆದದ್ದು: ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ ಪಿ. ಅಂಚೆ ೮

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಶಿಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ. ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ ಕಾಸರಗೋಡು 8 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಗಾಂ ಮುಂಬಾಯಿ. 4 ಕೆ ಶ್ರೀ ವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents.—

The Kerala Tea Syndicate,

PONANI—(S. Malabar.)

THE PIE-MONEY BANK LTD.

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Cant Funds ranging from Rs 100—0—0 run regularly on systematic lines Unique Banking facilities Businessmen and interested Public

Apply for particulars— **K R. GURU,** *Managing Director*

೧ ರೂಪಾಯಿಗೆ ೫೦೦೦ ರೂಪಾಯಿ

ಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ

ಪುನಃ ಪ್ರೀಮಿಯಂ ಕಟ್ಟಬೇಕಾಗಿಲ್ಲ, ಮತ್ತೆ ಪ್ರೀಮಿಯಂ ಕೇಳುವುದಿಲ್ಲ

ಎಲ್ಲಾ ಕಡೆಯಲ್ಲೂ ಏಜಂಟರ ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

Write for full particulars to:

M. S. V. Kamath,

BOLUR, MANGALORE.

Dist Agent for SOUTH CANARA.

Dist Agent for North Kanara

Mr. I. A. Shaik,

Khaji Mohalla, ANKOLA

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆತ್ ರೋಡ್, ಲಾಹೋರು.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವದ ಸುಡುತ ಬರುತಿರುವ ॥
ಗರಳಕ್ಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಷ ೩೧. ಮಂಗಳೂರು ತಾ. ೬ನೇ ಅಗೋಸ್ತು ೧೯೩೭. (6-8-'37) ಸಂಚಿಕೆ ೩೧

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,16,58,706
1930	59,97,500	9,83,367	28,00,970	2,06,68,328
1933	94,16,500	15,12,692	50,04,871	3,07,98,434
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances. Family Safe Guard Policy a special feature.
Application for agencies will be received from honest and respectable gentlemen.
Organisers appointed with pay and allowance.
Gentlemen with organising ability and who can guarantee Business need apply.

KOCHIKAR BROTHERS,
Madras Branch Secretaries,
Post Box 337, Mount Road, MADRAS.
Phone No. 8245.

Apply to any of the following Offices:-

Ottapalam	Central Station Road, Trivandrum.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಸುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಣಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ವಿಷ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಿನ ಸಾ. ಕೆತ್ತಿರುವು ದೊರೆಯುವುದು.

...... ನೋಟಗಳು

[illegible] ... ಕಾಂಗ್ರೆಸು ಮಂತ್ರಿಮಂಡಲ ರಚಿಸಲೊಪ್ಪಿ ದ್ದರೂ ಅವರ [illegible] ಸಂತೋಷವೇನಾಗಿ ದ್ದರಬೇಕಲ್ಲವೆ?

o o o o

ಘೋಷವೆಂದೊಡನೆ, – ಮಕ್ಯಾಧಲ್ಲಾ ಟಿರಡು ರೇಡಿಯೋ ಯಂತ್ರವನ್ನಿರಿಸಿ, ಅಲ್ಲಿಂದ ೨೦೦ ಮೈಲಿಯ ಮುಸ್ಲಿಮರು ಇಡೀ ಪ್ರಪಂಚ ದಲ್ಲಿ ವರ್ತಮಾನಗಳನ್ನು ಕೇಳುವಂತೆಯೂ, ಇಟಲಿ ಜರ್ಮನಿಗಳು ಮುಸ್ಲಿಮರಿಗಾಗಿ ತಾವಿದ್ದೇವೆ ಎಂದು ಸಾರುತ್ತಿರುವುದನ್ನು ಎದುರಿಸುವುದಕ್ಕೂ, ಬ್ರಿಟಿಷರು ಪ್ರಯತ್ನಿಸಿ, ಆಗಖಾನರಂಥ ಹರ ಭಾಷಣಗಳನ್ನು ಮಾಡಿಸಲಿದ್ದರೆಂಬ ವದಂತಿಯೂ ಪತ್ರಿಕೆಗಳಲ್ಲಿ ಪ್ರಕಟವಾದುದರ ನೆನಪು ಹುಟ್ಟುತ್ತದೆ.

o o o o

ಬುದ್ಧಗಯಾ ದೇವಾಲಯದಲ್ಲಿ ಬೌದ್ಧ[illegible] ಪ್ರವೇಶಿಸಿ ಅಧಿಕಾರ ನಡೆಸದಂತೆ ತ[illegible]ತ್ತಿರುವರಂತೆ ಅದಕ್ಕಾಗಿ, ದೇವಾಲಯದ ಹೆಬ್ಬಾಗಿಲಲ್ಲಿ, ಅವರಿಗೆ ಪ್ರವೇಶ ಸಿಗುವ ತನಕ ಸತ್ಯಾಗ್ರಹ ಹೂಡುವರೆ, ಗಾಂಧಿಜಿಯವರ ಸೂಚನೆಯಂತೆ, ಸಾವಿರಾರು ಒವಿರ್ಸಾಯು ಬೌದ್ಧ ಸನ್ಯಾಸಿಗಳು ಸಿದ್ಧರಾಗುತ್ತಿರುವಂತೆ ವಾರ್ತೆ

o o o o

ಪಾಟ್ನಾದಲ್ಲಿ ಟಪ್ಪಾಲು ಮತ್ತು ತಂತೀ ಆಫೀಸುಗಳಲ್ಲಿದ್ದು, ಕಾಗದ ಪತ್ರಗಳನ್ನೊಡೆದು ಅವುಗಳಲ್ಲಿ ಆಕ್ಷೇಪಾರ್ಹವಾದುವೆಂಬ ಅಂಶಗಳನ್ನು ಕತ್ತರಿಸುವ ಉದ್ಯೋಗವು ಇನ್ನು ಅಲ್ಲಿನ ಪೋಲೀಸರಿಂದ ತಪ್ಪಿತು ಪೆಲೆಸ್ಟೀನದ ವಿಭಜನೆಯನ್ನು ಕುರಿತು ಆಕ್ಷೇಪಿಸಿ ಮಹಾಜನರ ಸಭೆಸೇರಿದಾಗ, ಭಾಷಣಾದಿಗಳು ನಡೆದರೂ ಅತ್ತ ಪೋಲೀಸರೊಬ್ಬರೂ ಸುಳಿದಿಲ್ಲ

o o o o o

ಕೊಂಗ್ರೆಸ್ ಸರಕಾರ ನಿರ್ವಹಿಸಿದುದೇ ಕೆಲವರಿಗೆ ಜೀವನೋಪಾಯವಾಗಿದೆ ತಾವು ಕಾಂಗ್ರೆಸ್ ಸ್ವಯಂಸೇವಕರೆಂದು ಜನರಿಂದ ವಂತಿಗೆ ವಸೂಲು ಮಾಡುತ್ತಿದ್ದ ಇಬ್ಬರನ್ನು ಮಧುರಾ ಜಿಲ್ಲೆಯಲ್ಲಿ ಕೈದುಮಾಡಿರುವರು ಅವರ ಕೈಯಲ್ಲಿದ್ದ ಯಾವ ಕಾಗದಪತ್ರಗಳೂ ನಂಬಿಗೆಗೆ ಅರ್ಹವಾಗಿರದೆ ಸುಳ್ಳಾಗಿದ್ದುವು. ಕೊಂಗ್ರೆಸ್ ಕೂಟದವರು ಅವರನ್ನು ಎಚ್ಚರಿಸಿದ್ದರು ಅವರು ತಮ್ಮ ಕಳ್ಳತನದ ವೃತ್ತಿಯಲ್ಲಿ ಮುಂದರಿಸಿದ್ದರು ಈಗ ಕೊಂಗ್ರೆಸ್ಸಿನ ಹೆಸರು ಕೆಡಿಸಲೆತ್ನಿಸಿ ಜೈಲುಪಾಲಾಗುವರು

o o o o

ಮದ್ರಾಸು ಮಂತ್ರಿಗಳು ಇದುವರೆಗೆ ಕೈಕೊಂಡ ಉತ್ತಮ ಕಾರ್ಯಗಳಲ್ಲಿ, ಮೆಡಿಕಲ್ ಕೊಲೆಜಗೆ ಪ್ರಿನ್ಸಿಪಾಲರನ್ನು ನೇಮಿಸಿದುದು ಧೀರತನದ ಸುಧಾರಣೆ ಇದುವರೆಗೆ ಯೂರೋಪಿಯ ಐ ಎಂ ಎಸ್ ಆಫೀಸರರೇ ಈ ಪದವಿ ಪಡೆಯುತ್ತಿದ್ದರು ಈಗ ಡಾ ಎ ಲಕ್ಷ್ಮಣಸ್ವಾಮಿ ಮುದಲಿಯಾರರನ್ನೇ ನೇಮಿಸಲಾಗಿದೆ

o o o o

ಐ ಎಂ ಎಸ್ ಕೆಲವರಿಗೆ ಇದು ಅಗೌರವವೆನಿಸಿ, ಅವರ ಅಪ್ಪೀಲು ಇದೆಯಂತೆ ಅದಲ್ಲದೆ, ಬ್ರಾಹ್ಮಣೇತರರನ್ನು ಕೊಂಗ್ರೆಸ್ ನ್ಯಾಯವಾಗಿ ನಡೆಸದು ಎಂಬ ಅವಹೇಳನವು ವ್ಯರ್ಥವಾಗುವಂತಾಯಿತು ಈಗ ಇವರ ಅಣ್ಣಂದಿರು ಶ್ರೀ ರಾಮಸ್ವಾಮಿ ಮುದಲಿಯಾರರು ಕೊಂಗ್ರೆಸ್ಸನ್ನು ಜರೆದು ಇಂಡಿಯಾ ಆಫೀಸಿನಲ್ಲಿ ಪದಾ ಹಿಡಿದ್ದು ಎಲ್ಲಿಗೆ ಬಂದಿತು?

o o o o o

ಬಂಗಾಳದ ಮಂತ್ರಿಮಂಡಳವು ತುಂಬಾ ~~ರಗಳೆಯಲ್ಲಿದೆ.~~ ಬಜೆಟಿನ ಪ್ರಕಾರ ಎರಡು ಕೋಟಿ ರೂಪಾಯಿ ಕಿಲ್ಲು ಉಳಿಯುವುದೆಂಬ ವಿಷಯವು ಪ್ರಕಟವಾಗಿ ಈ ಮಂತ್ರಿಗಳು ಸುಖ ಸಂತೋಷಾಲಾಪಗಳಲ್ಲಿ ಇರುವಾಗಲೇ, ಜನರಲ್ಲಿ ಇವರ ಮೇಲೆ ತುಂಬ ಅತೃಪ್ತಿಯುಂಟಾ...

[illegible] ... ಸಾರದ ಶಾಸನ ... ಯುಗಿಸುವಾಗ ... ಈಗ ಅವು ... [illegible]

o o o o

ರಾಜಕೀಯ ಕೈದಿಗಳನ್ನು ಸರಕಾರ ಇನ್ನೂ ಬಿಟ್ಟಿಲ್ಲ. ಇವರನ್ನು ನ್ಯಾಯವಿಚಾರಣೆಗೆ ತನ್ನಿರೆಂದರೂ ತರುತ್ತಿಲ್ಲ. ಇತರ ಪ್ರಾಂತಗಳಲ್ಲಿ, ಕೊಂಗ್ರೆಸು ಅಧಿಕಾರದಲ್ಲಿರದ ಪ್ರಾಂತಗಳಲ್ಲಿ ಸಹ, ಇಂತಹರನ್ನು ಬಿಟ್ಟಿರುವಾಗ ಇಲ್ಲಿ ಆದೇಕಾಗದೆಂದು, ಮಂತ್ರಿಗಳು ಹಿಂದೆ ಚುನಾವಣೆಕಾಲದಲ್ಲಿ ಹೇಳಿದ ಮಾತುಗಳನ್ನೇ ಅವರ ಮುಂದೆ ತಂದಿಟ್ಟು ಪ್ರೋಟೆಸರು ಕೇಳುತ್ತಿರುವರು.

o o o o

ಮಂತ್ರೀಶ್ವರ ಫಜಲುಲ್ ಹುಕ್ ರವರು ಎಲ್ಲರನ್ನೂ ಸಮಾಧಾನಗೊಳಿಸಿ, ಬೆದರಿಸಿ, ಪ್ರಯತ್ನಿಸುತ್ತಿದ್ದಾರೆ ಅವರ ಪಕ್ಷೀಯರೇ ರೇಗಿರುವರು ಸಾಲದುದಕ್ಕೆ ಈಗ ಅಂದಮಾನ ದ್ವೀಪಗಳ ದುರ್ವಾರ್ತೆ ಬಂದಿದೆ

o o o o

ಅಂದಮಾನವು ಸ್ವರ್ಗಸಮಾನವೆಂದು ಗ್ರಿಗ್ ಸಾಹೇಬರು ಎಸೆಂಬ್ಲಿಯಲ್ಲಿ ನುಡಿದಿದ್ದರು 'ಅದನ್ನು ಸಂದರ್ಶಿಸಿದ್ದ ಎಸೆಂಬ್ಲಿ ಸಭಸ್ಯರು ಅದೇ ನರಕವೆಂದಿದ್ದರು ಈಗ ಸುಮಾರು ಇನ್ನೂರು ಕೈದಿಗಳು ತಮ್ಮನ್ನು ಸ್ವದೇಶಕ್ಕೆ ಕಳ್ಸಿ, ಇಲ್ಲವೆ ಉಪವಾಸವಾಗಿ ಸಾಯುತ್ತೇವೆಂದು ಬರೆದು ಇಂಡಿಯಾ ಸರಕಾರಕ್ಕೆ ತಿಳಿಸಿದ್ದಾರೆ

o o o o

ಸರಕಾರವು ಒಬ್ಬೊಬ್ಬರ ಮನವಿಯನ್ನು ಮಾತ್ರ ಪ್ರತ್ಯೇಕ ಆಲಿಸುವುದಂತೆ, ಸಮುದಾಯದ ಮನವಿ ಸಲ್ಲದಂತೆ ಈಗ ಹದಿನೈದು ದಿನ ಉಪವಾಸಮಾಡಿದ್ದವರ ಆರೈಕೆಗೆಂದು ಮುಂದಿ ಡಾಕ್ಟರರನ್ನು ಕಳುಹುದು, ಅಷ್ಟೆ ಅಂದಮಾನದ ಅಂದವೂ ಅದೇ, ಮಾನವೂ ಅದೇ

o o o o

ಇನ್ನೂ ಇದೆ ಮುಷ್ಕರಗಾರರಲ್ಲಿ ಒಬ್ಬನ ಮೇಲೆ ಮೊಕದ್ದಮೆ ಮಾಡಲು ಕಾರಣವೆಂದರೆ, ನೀವೆಲ್ಲರೂ ಒಂದಾಗಿ ಸೇಚಾಡಿರಿ ಎಂದು ಅವನೆಂದಿದ್ದನಂತೆ. ಇದನ್ನು ತಿಳಿದು ಹೈಕೋರ್ಟು ಆ ಮೊಕದ್ದಮೆಯನ್ನೇ ಡಿಸ್ ಮಿಸ್ ಮಾಡಿತು 'ಎಲ್ಲರೂ ಬೇರೆ ಬೇರೆಯಾಗಿ ಜಗಳಾಡಿಕೊಳ್ಳಿರಿ' 'ರೆಂದೂ' 'ಧನಿಗಳ ಹುಕುಂಗಳನ್ನು ಸನ್ಮಾನಿಸಿ ಜೀವಿಸಬೇಕೆಂ'ದೂ ಅವನೇಕೆ ಕೂಲಿಗರಿಗೆ ಬೋಧಿಸಿಲ್ಲ? ಎಂದೂ ಅಧಿಕಾರಿಗಳು ಅವನಲ್ಲಿ ಕುಂದನ್ನು ಕಂಡಿದ್ದರೇನು?

o o o o

ಪ್ರಾಂತಿಕ ಸರಕಾರಗಳು, ಹಿಂದೆ ನಡೆದ ಆರ್ಥಿಕ ವಿದ್ಯಮಾನಗಳ ವರದಿಯಂತೆ, ಕೇಂದ್ರ ಸರಕಾರದಿಂದ ವಾರ್ಷಿಕವಾಗಿ ಹಣ ಪಡೆಯದೆ ಇರಲಾಗುವುದಿಲ್ಲ ಅದಕ್ಕಾಗಿ, ಕೇಂದ್ರ ಸರಕಾರವು ವ್ಯಯವನ್ನು ಇಳಿಸಿಕೊಳ್ಳಬೇಕು ಎಂದು ಎಸೆಂಬ್ಲಿಯಲ್ಲಿ ಒಂದು ಸೂಚನೆ ಬರಲಿದೆ ಸರಕಾರದ ಅಭಿಪ್ರಾಯವು ಹೇಗಿದೆಯೋ ನೋಡಬೇಕು ಸೈನ್ಯವೊಂದರಿಂದಲೇ ಎಂಟು ಕೋಟಿ ರೂಪಾಯಿ ಉಳಿತಾಯವಾಗಬಹುದೆಂದು ಸೈನ್ಯಾಧ್ಯಕ್ಷರು ಹಿಂದೆ ಹೇಳಿದುದುಂಟು ಇನ್ನೇಕೆ ವಿಳಂಬ?

o o o o

ಹಿಂದೂ ಮುಸ್ಲಿಮರೊಳಗೆ ಯಾವ ತರದ ಹೋರಾಟಗಳೂ ಆಗದಂತೆ ತಡೆಯುವ ಸಂಪೂರ್ಣ ಪ್ರಯತ್ನಗಳನ್ನು ಪಂಜಾಬಿನ ಮುಖ್ಯ ಮಂತ್ರಿಗಳು ಮಾಡುತ್ತಿರುವರು. ಸಾಮಾಜಿಕ ಕಲಹಗಳಾಗದ ಹಾಗೆ ವಿಧಾನಗಳನ್ನು ಮಾಡಿದ್ದುದರಲ್ಲದೆ, ಆಫೀಸರುಗಳನ್ನೆಲ್ಲಾ ಎಚ್ಚರಿಸಿ, ಪತ್ರಿಕೆಗಳಿಗೂ ಬುದ್ಧಿ ಹೇಳಿರುವರು. ಅಲ್ಲಿ, ಎಲ್ಲಕ್ಕೂ ಮೇಲಾದ ಸಂಕಟವೆಂದರೆ, ಪತ್ರಿಕೆಗಳ ಉಪಟಳ.

ಮಗುವಿನ ಆರೋಗ್ಯಕ್ಕೆ ಮೊಲೆ ಹಾಲೇ ಶ್ರೇಷ್ಠವಾದದ್ದು

ತಾಯಿ ಯಾವ ಪ್ರೀತಿಯೋರ್ವರೂ ತನ್ನ ಮಗುವನ್ನು ಪ್ರಕೃತೀಯ ರೀತಿಯಲ್ಲಿ ಬೆಳೆಸಬೇಕು ಆಹಾರ ದೋಷಗಳಿಂದಾಗ ಆಗುವ ರೋಗಗಳ ತಪ್ಪಿತಕ್ಕೆ ಮೊಲೆ ಹಾಲಿನ ಉಣ್ಣಿಸುವಿಕೆಯೇ ಮಕ್ಕಳ ಆರೋಗ್ಯದ ಕಳೆಹದಿ

ಇಂಥ ಶ್ರೇಷ್ಠ ಮೊಲೆಹಾಲಿಂದ ನಮ್ಮ ಮಕ್ಕಳನ್ನು ಸರಿಯಾಗಿ ಬೆಳಿಸಬೇಕೆಂಬುದರ ಭರಣಸೆಗಾಗಿ ಓವಲ್ಟಿನ್ನನು ಉಪಯೋಗಿಸಿದ್ದಲ್ಲಿ ತಾಯಿಂದಿರಲ್ಲಿ ಅದು ಮಕ್ಕಳಿಗೆ ಬೇಕಾದ ಶ್ರೇಷ್ಠ ಮೊಲೆಹಾಲನ್ನುಂಟು ಮಾಡುವುದು [illegible] ಓವಲ್ಟಿನ ನಲ್ಲಿ ಅಂಥಾ ಮಾತ್ಯಕ್ತೀದ ಸತ್ವವಿರುವುದು ಇದನ್ನು ಎಳೇ ಮಕ್ಕಳ ತಾಯಂದಿರು ಕುಡಿದಲ್ಲಿ ಅವರಿಗೆ ಶಕ್ತಿ ಚೈತನ್ಯಗಳುಂಟಾಗುವುದು

ಓವಲ್ಟಿನ್ ಶುದ್ಧವಾದ ಪ್ರಕೃತೀ [illegible] ತಯಾರಿಕೆಯಾಗಿದ್ದು ಅದರಲ್ಲಿ ಪಕ್ವ [illegible] ಸತ್ವವೂ [illegible] ಶಕ್ತಿ ಆರೋಗ್ಯಗಳನ್ನು ಬೆಳಿಸಬೇಕಾಗುವ [illegible] ಅಂಗಗಳೂ ಅದರಲ್ಲಿ ಕೂಡಿಕೊಂಡಿವೆ ಓವಲ್ಟಿನ್ನ [illegible] ವ್ಯಾಲಂಗಳನ್ನು ತ್ಯಜಿಸಿ

ಓವಲ್ ಟಿನ್

ತಾಯಿಂದಿರಿಗೆ ಮಕ್ಕಳನ್ನು ಮೊಲೆಯುಣ್ಣಿಸಿ ಬೆಳಿಸ ಶಿಕ್ಕೆ ಶಕ್ತಿಯನ್ನು ಕೊಡುತ್ತದೆ

OVALTINE

ಟಾನಿಕ್ ಆಹಾರ ಪಾನೀಯ—

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಸ್ಟೋರುಗಳಲ್ಲಿಯ ಕೆಮಿಸ್ಟರಲ್ಲಿಯೂ ದೊರಕುತ್ತದೆ

ಏಜಂಟರು —ಜೇಮ್ಸ್ ರೈಟ 85 ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತ ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ

OV 465

ಅಲ್ವಾರುಸಂಸ್ಥಾನದಲ್ಲಿ ಇಂತಹದೊಂದು ಕಲಹವಾದಾಗ, ತಡೆಯಲಾರದೆ ಪೋಲೀಸರು ಗುಂಡುಹಾರಿಸಿ, ಜನಗಳನ್ನು ಕೊಂದುದನ್ನು ಕುರಿತಾಗಿ, ವಿಶೇಷ ಪ್ರಕಾರದ ವಿಮರ್ಶೆ ಆಗತಕ್ಕವೆಂದು ಎಲ್ಲೆಲ್ಲಿಂದಲೂ ಸರಕಾರಕ್ಕೆ ದೂರಿದಲಾಗಿತ್ತು. ಪಾರ್ಲಿಮೆಂಟಿನಲ್ಲಿ ಸಹ ಈ ವಿಷಯ ಪ್ರಶ್ನೋತ್ತರಗಳಾಗಿದ್ದವು. ಈಗ ವಿಚಾರಣೆಯಾಗಿ ಕೆಲಮಂದಿ ಪೋಲೀಸ್ ಅಧಿಕಾರಿಗಳನ್ನು ದಂಡಿಸಲಾಗಿದೆ. ಪ್ರತಿಯೊಂದು ದಂಗೆಯಾದಾಗಲೂ ಇಂತಹ ವಿಚಾರಣೆಗಳಾಗುವುವಾದರೆ, ದಂಗೆಗಳೇ ಕಡಮೆಯಾಗುವ ಸಂಭವವಿದೆಯೆಂದು ಪತ್ರಿಕೆಗಳ ಟೀಕೆಯಿದೆ

ಕೆನರಾ ವಿದ್ಯಾರ್ಥಿ ಸಂಘ, ಮುಂಬಾಯಿ

ಈ ಸಂಘದ ಮೂರನೇ ವಾರ್ಷಿಕೋತ್ಸವವು ಇದೇ ತಾ ೮ನೇ ಆದಿತ್ಯವಾರ ಮುಂಬಯಿ ಎಪೊಲ್ಲೊ ರಸ್ತೆಯಲ್ಲಿರುವ ನೇಟಿವ್ ಶೇರ್ ಎಂಡ್ ಸ್ಟಾಕ್ ಬ್ರೋಕರ್ಸ್ ಸಂಘದ ಸಭಾಂಗಣದಲ್ಲಿ, ಶ್ರೀ ಕೆ. ಎನ್ ಗ್ಯಾತೊಂಡೆಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಹಿಂದೂದೇಶದ ರಾಷ್ಟ್ರೀಯ ವಿದ್ಯಾಭ್ಯಾಸದಲ್ಲಿ ಏನಿರಬೇಕು?

ಮಹಾತ್ಮಾಜೀಯವರ ಅಭಿಪ್ರಾಯ.

ಗುಜರಾತಿನಲ್ಲಿ ಮೊನ್ನೆ ನಡೆದ ರಾಷ್ಟ್ರೀಯ ಶಾಲೆಗಳ ಉಪಾಧ್ಯಾಯರ ಪರಿಷತ್ತಿನಲ್ಲಿ ಈ ಪ್ರಶ್ನೆಯು ಚರ್ಚಿಸಲಾಯಿತು. ಅವರು ಪರಿಷತ್ತಿನ ಮುಂಚಿತವಾಗಿಯೆ ಒಂದು ಪ್ರಶ್ನಾವಳಿಯನ್ನು ಹೊರಡಿಸಿದ್ದರು. ಅದರಲ್ಲಿ ಈ ಕೆಳಗಿನ ಪ್ರಶ್ನೆಗಳಿದ್ದುವು.

೧ ನಮ್ಮ ಹಳ್ಳಿಗಳಿಗೆ ತಕ್ಕುದೆನಿಸುವ ಮತ್ತು ಫಲದಾಯಕವಾಗುವ ವಿದ್ಯಾಕ್ರಮಯಾವುದು? ಆ ತರದ ವಿದ್ಯಾಭ್ಯಾಸವು ನಮ್ಮ ಹಳ್ಳಿಗಳಲ್ಲಿ ನಡೆಯುವಂತೆ ಹೇಗೆ ಸಾಧಿಸಬಹುದು?

೨ ಮಹಾಜನಗಳಲ್ಲಿರುವ ನಿರಕ್ಷರತೆಯನ್ನು ಹೇಗೆ ಹೋಗಲಾಡಿಸಬಹುದು, ಅವರಲ್ಲಿರುವ ಮೂಢಭಾವವನ್ನು ಹೇಗೆ ತೆಗೆಯಬಹುದು?

೩. ಬುದ್ಧಿವಂತಿಕೆಯ ಬೆಳವಣಿಗೆಗೆ ಅಕ್ಷರತೆಯು ಅಗತ್ಯವೆ? ಅಕ್ಷರಾಭ್ಯಾಸದಿಂದ ಪ್ರಾರಂಭವಾಗುವ ವಿದ್ಯಾಕ್ರಮದಿಂದ ಜ್ಞಾನ ಬೆಳವಣಿಗೆಗೆ ಹಾನಿಯಿರುವುದೆ?

೪ ಔದ್ಯೋಗಿಕ ಶಿಕ್ಷಣಕ್ಕೆ ವಿದ್ಯಾಭ್ಯಾಸದಲ್ಲಿ ಕೇಂದ್ರಸ್ಥಾನವನ್ನು ಕೊಡುವ ವಿಚಾರ

೫ ಈಗಿನ ರಾಷ್ಟ್ರೀಯ ಶಾಲೆಗಳ ಭವಿಷ್ಯ

೬. ಮಕ್ಕಳ ಮಾತೃಭಾಷೆಯಲ್ಲಿ ವಿದ್ಯಾಭ್ಯಾಸವನ್ನು ನಡೆಯಿಸುವ ಕುರಿತು

೭ ಈಗಿನ ಶಾಲೆಗಳಲ್ಲಿ ನಡೆಯುವ ವಿದ್ಯಾಕ್ರಮಕ್ಕೂ,ರಾಷ್ಟ್ರೀಯ ವಿದ್ಯಾಭ್ಯಾಸಕ್ಕೂ ಯಾವ ವ್ಯತ್ಯಾಸವಿದೆ

೮ ಹಿಂದೀ ಹಿಂದೂಸ್ತಾನಿಯನ್ನು ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಲಿಯುವ ವಿಚಾರ

ಈ ಪ್ರಶ್ನೆಗಳಿಗೆ ಮಹಾತ್ಮಾಜೀಯವರ ಉತ್ತರವನ್ನು ಕೇಳಲಾಗಿ,ಅವರ ಅಭಿಪ್ರಾಯವು ಹೀಗಿರುವುದು

ಹಳ್ಳಿಗಳಿಗೆ ಬೇಕಾದ ರೀತಿಯಲ್ಲಿ ವಿದ್ಯಾಭ್ಯಾಸವು ನಡೆಯಬೇಕಾದರೆ, ನಾವು ವಿದ್ಯಾಪೀಠವನ್ನು ಹಳ್ಳಿಗಳಿಗೆ ಒಯ್ಯತಕ್ಕದು ಹಳ್ಳಿಗಳ ಆವಶ್ಯಕತೆಗಳನ್ನು ಅನ್ವಯಿಸಿ, ಉಪಾಧ್ಯಾಯರ ತರಬೇತು ನಡೆಯಿಸುವ, ಅವು ತರಬೇತು ಕೇಂದ್ರಗಳಾಗಬೇಕು ನಗರಗಳಲ್ಲಿರುವ ಟ್ರೈನಿಂಗ್ ಶಾಲೆಗಳ ಮೂಲಕ,ಹಳ್ಳಿಗಳ ಅವಶ್ಯಗಳಿಗೆತಕ್ಕುದೆನಿಸುವ ರೀತಿಯಲ್ಲಿ ಉಪಾಧ್ಯಾಯರ ತರಬೇತನ್ನು ನಡೆಯಿಸುವುದು ಅಸಾಧ್ಯ ಅಲ್ಲದೆ ಅವರು ಹಳ್ಳಿಗಳ ಕುರಿತು ಆಸಕ್ತಿ ಹೊಂದುವಂತೆ ಮಾಡುವುದೂ ಅಸಾಧ್ಯ ನಗರ ನಿವಾಸಿಗಳನ್ನು ಹಳ್ಳಿ ಹಿತೈಸಿಗಳಂತೆ ಮಾರ್ಪಾಟುಗೊಳಿಸುವುದು ಒಂದು ಕಷ್ಟದ ಸಮಸ್ಯೆಯು ಈ ಕುರಿತು ಸೆಗಾಂವ್ ಹಳ್ಳಿಯಲ್ಲಿ ನಮಗೆ ಒಳ್ಳೆ ದೃಷ್ಟಾಂತಗಳು ದೊರಕಿವೆ ಇಲ್ಲಿ ನಮ್ಮ ನೆಲೆಯ ಅವಧಿಯು ಒಂದು ವರ್ಷವಾಗಿದ್ದರೂ, ನಾವು ಹಳ್ಳಿಗರಾಗಿರುವೆವೆಂದೂ, ನಾವು ಅವರೊಡನೆ ಒಂದಾಗಿರುವೆವೆಂದೂ ಹೇಳಬಹುವುದಿಲ್ಲ

ಪ್ರಾಥಮಿಕ ವಿದ್ಯಾಭ್ಯಾಸದ ಕುರಿತು, ಅಕ್ಷರವು ಮೊದಲ್ಗೊಂಡು ವಿದ್ಯಾಭ್ಯಾಸವನ್ನು ಪ್ರಾರಂಭಿಸುವುದರಿಂದ, ಮಕ್ಕಳ ಜ್ಞಾನಾಭಿವೃದ್ಧಿಗೆ ಅಡ್ಡಿ ಬರುವುದೆಂದು, ನಾನು ದೃಢವಾದ ನಂಬುಗೆ ಹೊಂದುವವನಾಗಿದ್ದೇನೆ. ವಿದ್ಯಾರ್ಥಿಗಳಿಗೆ ಚರಿತ್ರೆಯ, ಭೂಗೋಳದ, ಮಾನಸಿಕ, ಲೆಕ್ಕ ಮತ್ತು ಕಲೆ (ನೇಯುವುದು) ಇವುಗಳ ಕುರಿತು ಮೊದಲು ಸುಲಭ ಜ್ಞಾನವಾದ ವಿನಹ ಅವರಿಗೆ ಅಕ್ಷರಾಭ್ಯಾಸಕ್ಕೆ ಅವಕಾಶವನ್ನು ನಾನು ಕೊಡಲಾರೆನು. ಇವುಗಳ ಮೂಲಕ ನಾನವರ ಜ್ಞಾನಾಭಿವೃದ್ಧಿಯನ್ನು ಮಾಡುವೆನು. ಆದರೆ ನೇಯುವುದರಿಂದ ಅವರ ಜ್ಞಾನಾಭಿವೃದ್ಧಿಯು ಹೇಗಾಗುವುದೆಂಬ ಪ್ರಶ್ನೆಗಳು ಕೇಳಲಾಗಬಹುದು ಬರೇ ನೇಯುವುದನ್ನು ಮಾತ್ರ ಬೋಧಿಸುವ ಬದಲು, ನೂಲುವ ಪ್ರತಿಯೊಂದು ಹೆಜ್ಜೆಯನ್ನು ಕಾರಣಾಂತರಗಳಿಂದ ಮಕ್ಕಳಿಗೆ ವಿವರಿಸಿ, ಅವರನ್ನು ನೂಲುವುದರಲ್ಲಿ ತರಬೇತು ಮಾಡಿದರೆ, ಆಗವರ ಜ್ಞಾನಾಭಿವೃದ್ಧಿಯು ವಿಶೇಷ ತರದಲ್ಲಿ ನಡೆಯುವುದು ತಕಲಿ ಯಾ ಚರಕದ ಯಾಂತ್ರಿಕ ವಿವರಣೆಯು ಮಗುವಿಗಾಗಬೇಕು ನಂತರ ಹತ್ತಿಯ ಚರಿತ್ರೆಯನ್ನು ಅವರಿಗೆ ಹೇಳಿಕೊಡಬೇಕು ಹತ್ತಿಯು ಮೊದಲಾಗಿ ಹೇಗೆ ಕಂಡುಹಿಡಿಯಲ್ಪಟ್ಟಿತು, ನವನಾಗರೀಕತೆಯೊಡನೆ ಹತ್ತಿಯು ಹೇಗೆ ಪ್ರಗತಿಹೊಂದಿತು ಎಂಬುದು ಅವರಿಗೆ ವಿವರಿಸಲ್ಪಡಬೇಕು ನಂತರ ಅವರನ್ನು ಹತ್ತಿ ಬೆಳೆಸುವ ಗದ್ದೆಗಳಿರುವ ಹಳ್ಳಿಗಳಿಗೆ ಕೊಂಡೊಯ್ಯಬೇಕು ನಂತರ ತಾನು ನೂಲುತ್ತಿರುವಾಗ ಚರಕಸುತ್ತುಗಳನ್ನು ಅವರಿಂದ ಲೆಕ್ಕ ಮಾಡಿಸಬೇಕು ಅವರು ನೂಲುವ ನೂಲಿನ ಬಲವನ್ನೂ ಯೋಗ್ಯತೆಯನ್ನೂ ಕಂಡುಹಿಡಿಯುವ ಉಪಾಯಗಳನ್ನು ಅವರಿಗೆ ಬೋಧಿಸಬೇಕು ಹೀಗೆ ನೀವು ಒಂದೆಡೆ ಅವರ ಕೈ ತರಬೇತು ಮಾಡುವಾಗ, ಇನ್ನೊಂದೆಡೆ ಅವರ ಜ್ಞಾನಾಭಿವೃದ್ಧಿಯನ್ನು ಮಾಡುವಿರಿ ಈ ರೀತಿಯ ಅವರ ತರಬೇತು ಆರು ಮಾಸಗಳ ತನಕ ನಡೆಯಬೇಕು ಈ ತರಬೇತಿನ ನಂತರ ಮಗುವು ವಿದ್ಯಾಭ್ಯಾಸಂಗಕ್ಕೆ ಸಿದ್ಧವೆನಿಸುವುದು

ಓದು ಬರೆಯುವಿಕೆಯ ಕುರಿತು ಅಭ್ಯಾಸವು ಆಗ ನಡೆಯಬೇಕು ಮೇಲಿನ ಕ್ರಮವನ್ನನುಸರಿಸಿದರೆ, ಓದು ಬರೆಯುವುದನ್ನು ಮಕ್ಕಳು ಅಲ್ಪ ಸಮಯದಲ್ಲಿ ಅರಿಯುವರು ಅಕ್ಷರಗಳನ್ನು ಬರೆಯುವರೆ ಅವರಿಗೆ ಬೋಧನೆಯಲ್ಲಿ ಕೆಲವು ಚೌಕಗಳನ್ನು,ವೃತ್ತಾಕಾರಗಳನ್ನು ಬರೆಯುವರೆ ಕಲಿಸಬೇಕು ನಂತರ ಪಕ್ಷಿ ಎಲೆ ಇತ್ಯಾದಿಗಳನ್ನು ಚಿತ್ರಿಸಲು ಕಲಿಸಬೇಕು ನಂತರ ಅಕ್ಷರಗಳನ್ನು ಬರೆಯುವರೆ ಕಲಿಸಬೇಕು ಈಗ ರೂಢಿಯಲ್ಲಿರುವ ಕ್ರಮದಿಂದ ಓದು ಬರೆಯುವಿಕೆಯ ಕುರಿತು ಮಕ್ಕಳ ತರಬೇತಾಗುವಾಗ ಅವರ ಜ್ಞಾನಾಭಿವೃದ್ಧಿಯು ಆಗುವುದಿಲ್ಲ ಹೀಗಾಗಿ ಮಗುವಿನ ಜ್ಞಾನದ ಅಭಿವೃದ್ಧಿಗೆ ಕಡಿವಾಣ ಬಿದ್ದಂತಾಗುವುದು

ನಮ್ಮ ಮಹಾಜನಗಳಲ್ಲಿರುವ ನಿರಕ್ಷರತೆಯ ಕುರಿತು, ಮೂಢತನದ ಕುರಿತು, ನಾವು ವಿಷಾದಿಸುವುದು ಮಾತ್ರವಲ್ಲದೆ ಲಜ್ಜೆಪಡಬೇಕು ಆದುದರಿಂದ ಬೆಳೆದವರ ಮೂಢತನವನ್ನು ಹೋಗಲಾಡಿಸುವರೆ, ಒಳ್ಳೆ ತರಬೇತು ಹೊಂದಿದ ಉಪಾಧ್ಯಾಯರಿಂದಲೂ, ತಕ್ಕುದೆನಿಸುವ ವಿದ್ಯಾಕ್ರಮಗಳಿಂದಲೂ ಕೂಡಿದ ಏರ್ಪಾಡಾಗಬೇಕು

ಗ್ರಾಮಗಳ ಕೈಗಾರಿಕೆಗಳು, ವಿದ್ಯಾಭ್ಯಾಸದ ಮೂಲವಾಗಬೇಕು ಈಗ ಹಿಂದೂದೇಶದ ವಿದ್ಯಾಸಂಸ್ಥೆಯಲ್ಲಿ ನಡೆಯುವ ವಿದ್ಯಾಭ್ಯಾಸಕ್ಕೆ ವಿದ್ಯೆ ಎಂದು ಕರೆಯಲಾಗುವುದಿಲ್ಲ ಗ್ರಾಮ ಕೈಗಾರಿಕೆಗಳ ಮೂಲಕ ಜ್ಞಾನಾಭಿವೃದ್ಧಿಯಾಗುವ ರೀತಿಯಲ್ಲಿ ವಿದ್ಯಾಭ್ಯಾಸವು ನಡೆಯಬೇಕು ಅದರಲ್ಲಿ ಸತ್ವವಿದೆ ಶಿಸ್ತಿನಿಂದ ಕೂಡಿದ ಮಾನಸಿಕ ತರಬೇತು ಅದರಿಂದಾಗುವುದು ಹೀಗೆಂದು ಹೇಳಿ ಕಲೆಗಳನ್ನು ವ್ಯರ್ಥಗೊಳಿಸುವುದು ನನ್ನ ಉದ್ದೇಶವಲ್ಲ. ಕಲೆಯುಕ್ತ ವಿದ್ಯಾಭ್ಯಾಸದಿಂದ ನಮಗೆ ಯಾವ ತರದ ಫಲ ಲಭಿಸಿರುವುದೆಂದು ನಮ್ಮ ಕಣ್ಣು ಮುಂದೆ ಕಾಣಿಸುತ್ತದೆ

ಇನ್ನೊಂದು ಮಹಾಯುದ್ಧದ ಸಂಭವದಲ್ಲಿ ಕೆನಡಾವು ತಟಸ್ಥವಾಗಿರುವಂತೆ, ಅಲ್ಲಿನ ಸರಕಾರವು ತಕ್ಕ ಯೋಜನೆಗಳನ್ನು ಮಾಡಿರುತ್ತದೆ.

ಗ್ರಾಮ ಸಾಲನಿವಾರಣೋಪಾಯ.

ಕಾಂಗ್ರೆಸ್ ಎಸೆಂಬ್ಲಿ ಸದಸ್ಯರೂ ಖಾದಿಯೂ.

'ಮಜೂರ ವರ್ಗಕ್ಕೆ ಅನೇಕ ಇತರ ಉದ್ಯಮಗಳ ಜ್ಞಾನವಿರುವುದು-ಧನಾಢ್ಯರೊಡನೆ ಹಣವಿದ್ದಂತೆ. ಯುಕ್ತಿಯು, ಮಜೂರನ ಭಂಡವಾಳವು . ..ಇಂದು ಭಂಡವಾಳವು ಒಳ್ಳೆ ವ್ಯವಸ್ಥೆ ಹೊಂದಿದ ಸ್ಥಿತಿಯಲ್ಲಿರುವಾಗ, ಮಜೂರನ ಮಾನಸಿಕ ಪ್ರಗತಿಯೆ ನಡೆಯಲಿಲ್ಲ ಅತನ ಗತಿಯು ಸಂಪೂರ್ಣವಾಗಿ ಯಜಮಾನನ ಕೈಯಲ್ಲಿರುವುದು. ಅತನು ಒಳ್ಳೆ ರೀತಿಯಲ್ಲಿ ವ್ಯವಸ್ಥೆ ಹೊಂದಲಿ, ಅತನು ಬುದ್ಧಿ ಪ್ರಗತಿ ಹೊಂದಲಿ, ಅತನು ಅನೇಕ ಉದ್ಯಮಗಳನ್ನು ಅರಿತುಕೊಳ್ಳಲಿ, ಆಗ ಅತನು, ಉಪವಾಸ ಭಯವಿಲ್ಲದೆ, ದಿವಸ ಸಾಗಿಸಬಹುದು

ಮಹಾತ್ಮಾಜಿ

ಗ್ರಾಮ ಸಾಲ ನಿವಾರಣೋಪಾಯ

ಸಾಗುವಳಿಗಾರರಿಗೆ ಸಾಲಕೊಡುವ ಕುರಿತ, 'ರೈತನು ಪಡಕೊಳ್ಳುವ ಶಕ್ತಿಯು ಹೆಚ್ಚಬೇಕು, ಅತನ ಸಂಪಾದನೆಯ ಯೋಗ್ಯತೆಯು ವೃದ್ಧಿಯಾಗಬೇಕು ' ಎಂದು ರಿಸರ್ವ ಬ್ಯಾಂಕಿನ ಅಭಿಪ್ರಾಯವಾಗಿರುತ್ತದೆ ಆದರಿಂದ ಹಳ್ಳಿಗರು ಒಳ್ಳೆ ಲಾಭದಾಯಕ ಉದ್ಯಮಗಳನ್ನು ನಡೆಯಿಸುವಂತೆ, ಪ್ರಾಂತ್ಯಕೀಯ ಸರಕಾರಗಳು ಸಾಧಿಸಬೇಕೆಂದು ಅವರ ಸೂಚನೆ

ಗ್ರಾಮಸ್ಥರ ಸಾಲ ನಿವಾರಣೆ ಕುರಿತ, ಅವರ ಸಾಂಪತ್ತಿಕ ಸ್ಥಿತಿಯ ಸುಧಾರಣೆಯ ಕುರಿತು ಬಾವನಗರದ ರಾಜ್ಯದಲ್ಲಿ ಅನೇಕ ಯತ್ನಗಳು ನಡೆದಿವೆ. ಅಲ್ಲಿ ಆಚರಿಸಲಾದ ಕೆಲವು ರಚನಾತ್ಮಕ ಮತ್ತು ನಿರ್ಬಂಧಯುಕ್ತ ಕ್ರಮಗಳು ಈ ಕೆಳಗೆ ಕೊಡಲಾಗಿವೆ ಅವುಗಳು ಹೇಗೆ ನಡೆಯುವವೆಂದ ಹೇಳಲು ಈಗ ಅಸಾಧ್ಯ ಆದರೆ ಅಲ್ಲಿ ಆಚರಿಸಲ್ಪಡುವ ರಚನಾತ್ಮಕ ಕಾರ್ಯಕ್ರಮದ ಪರಿಗಣನೆ ಮಾಡಬಹುದು

ಗ್ರಾಮ ಪಂಚಾಯತಗಳ ರಚನೆ ಮತ್ತು ಜನವನ್ನು ವಿದ್ಯಾವಂತಗೊಳಿಸುವ ವ್ಯವಸ್ಥೆ ಮಿತವ್ಯಯದ ಕುರಿತು ಬೋಧನೆ, (ಸಾಮಾಜಿಕ ಸಮಾರ ಭಗಳಿಗೆ) ಬದಿಸಲು ನಿಬಂಧನೆ ಕಡಿಮೆಯಾಗ ಮಾಡುವ ಪ್ರಯತ್ನ, ಕೆರೆಗಳನ್ನು ಉದ್ಧಾರಗೊಳಿಸುವುದು ಒಳ್ಳೆ ಬೀಜಗಳನ್ನು ಶೇಖರಿಸುವುದು, ಬಾವಿಗಳ ಕಟ್ಟೋಣ ಸುಲಭ ತರದ ಸಾಗುವಳಿ ಕ್ರಮಗಳನ್ನು ಅನುಸರಿಸುವಂತೆ ಪ್ರಚಾರ ಇವುಗಳ ರಚನಾತ್ಮಕ ಕಾರ್ಯಕ್ರಮದ ಕೆಲವು ಮುಖ್ಯ ಅಂಶಗಳು ರೈತರ ಇತರ ಉದ್ಯಮಗಳನ್ನು ನಡೆಸುವಂತೆಯೂ, ಗ್ರಾಮ ಕೈಗಾರಿಕೆಗಳ ಅಭ್ಯುದಯವಾಗುವಂತೆಯೂ, ಸಾಧನೆಗಳು ನಡೆಯುತ್ತವೆ ಕಾರಣ ರಿಸರ್ವ ಬ್ಯಾಂಕಿನ ಅಭಿಪ್ರಾಯದಂತೆ, ರೈತನ ವಿಮೋಚನೆ ಇವು ಅಗತ್ಯವೆಂದು ಆ ರಾಜ್ಯಕರ್ತರ ಅಭಿಪ್ರಾಯವಾಗಿರುವುದು.

ಕೆಲವು ಕಡೆಗಳಲ್ಲಿ ನೂಲುವುದಕ್ಕೆ ಮತ್ತು ನೇಯುವುದಕ್ಕೆ ಕ್ರಮವಾಗಿ ಪ್ರೋತ್ಸಾಹ ಕೊಡಲಾಗಿದೆ ಅಲ್ಲದೆ ಹತ್ತಿಯನ್ನು ಹದಮಾಡುವುದರಲ್ಲೂ ಅವರ ತರಬೇತು ನಡೆಯುತ್ತಿದೆ ಕಾರಣ ಶಕ್ತಿಯನ್ನು ಕೈಯಿಂದ ಹದಮಾಡುವುದರಿಂದ, ಮುಂದಿನ ಬೆಳೆಗೆ ಬೇಕಾಗುವಂತೆ ಒಳ್ಳೆ ಬೀಜಗಳನ್ನೆ ರಕ್ಷಿಸಬಹುದು ಹಳ್ಳಿಗರು ತಮಗೆ ಬೇಕಾದ ಬಟ್ಟೆಬರೆಗಳಿಗೆ ತಮ್ಮ ಹತ್ತಿಯಿಂದಲೆ ತಯಾರಿಸುವ ಸಂಸ್ಥಾನವು ಪ್ರೋತ್ಸಾಹಿಸುತ್ತದೆ

ಇನ್ನೊಂದು ನೂತನ ಸೂಚನೆ ಎಂದರೆ–ಸತ್ತ ಪ್ರಾಣಿಗಳ ಮಾಂಸ, ಎಲುಬು ಇತ್ಯಾದಿಗಳಿಂದ ಸಾಗುವಳಿಗೆ ಬೇಕಾದ ಗೊಬ್ಬರವನ್ನು ತಯಾರಿಸುವುದು ಸಂಸ್ಥಾನದ ಪ್ರಯತ್ನ ಇದರಿಂದ ಸತ್ತ ಪ್ರಾಣಿಗಳ ಸದುಪಯೋಗವಾಗುವುವಲ್ಲದೆ, ಹರಿಜನರು ಅವುಗಳನ್ನು ಸೇವಿಸದಂತೆ ಮಾಡಬಹುದು ದನಕರು ಇತ್ಯಾದಿ ಈ ರೀತಿಯಲ್ಲಿ ಉಪಯೋಗಿಸಲ್ಪಟ್ಟರೆ, ಆಗ ನಮ್ಮ ಹಳ್ಳಿಗಳಲ್ಲಿರುವ ಸಾಮಾಜಿಕ ಬೇಧಗಳು ಮಾಯವಾಗುವವು.

ವಿ. ಎಲ್. ಮೇಥಾರವರ ಹರಿಜನ ಪತ್ರಿಕೆಯಲ್ಲಿರುವ ಲೇಖದಿಂದ.

ಕಾಂಗ್ರೆಸ್ ಎಸೆಂಬ್ಲಿ ಸದಸ್ಯರೂ ಖಾದಿಯೂ

ಗಾಂಧಿಯವರ ರಚನಾತ್ಮಕ ಕಾರ್ಯಕ್ರಮವನ್ನು ಅನುಸರಿಸಬೇಕಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು, ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸುವ ವಿಚಾರ ಮಾಡಿದ್ದ ಒಂದು ನಿರ್ಣಯ, ಖಾದಿಯು ಇದರಲ್ಲಿ ಒಂದಾಗಿರುತ್ತದೆ.

ಆದರೆ ಎಷ್ಟು ಜನ ಕಾಂಗ್ರೆಸ್ ಎಸೆಂಬ್ಲಿ ಸದಸ್ಯರು ಖಾದಿಗಾಗಿ ಪರಿಶ್ರಮಿಸುತ್ತಿರುವರು, ಅವರವರ ವಿಭಾಗದಲ್ಲಿ?

ಖಾದಿಯಿಂದ ಮಹಾ ಜನಗಳಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸಬಹುದು,-ರೈತರ ಉತ್ಪತ್ತಿಯನ್ನು ಹೆಚ್ಚಿಸಬಹುದು ಎಲ್ಲರಿಗೂ ಜೀವನಕ್ಕೆ ಬೇಕಾದಷ್ಟು ಸಂಪಾದನೆಯನ್ನುಂಟುಮಾಡಬಹುದು

ಅಂದರೆ ಖಾದಿಯ ಕುರಿತು ಜನರಲ್ಲಿ ಒಂದು ತರದ ಅಭಿರುಚಿಯನ್ನುಂಟುಮಾಡಬೇಕು ಖಾದಿಯ ಮಹಿಮೆಯ ಜ್ಞಾನವು ಅವರಿಗಾಗಬೇಕು

ಅಲ್ಲಲ್ಲಿ ಖಾದಿಕ್ಷೇತ್ರಗಳ ಸ್ಥಾಪನೆಯಾಗಬೇಕು ತಯಾರಾದ ನೂಲನ್ನು ಪಡಕೊಳ್ಳಲೂ, ಬೇಕಾದ ಹತ್ತಿಯನ್ನು ಒದಗಿಸಲೂ ಯೋಗ್ಯ ವ್ಯವಸ್ಥೆಗಳಾಗಬೇಕು ಆದರಿಂದ ತಮಗೆ ಸಂಪಾದನೆ ಉಂಟೆಂದು ಜನರು ತಿಳಿದರೆ ಅನೇಕರು ಈ ವೃತ್ತಿಯನ್ನು ಅನುಸರಿಸುವಂತಾಗುವುದು

ಆಯಾ ಕ್ಷೇತ್ರಗಳಲ್ಲಿ ತಯಾರಾದ ಖಾದಿಯ ಮಾರಾಟವಾಗುವ ಯತ್ನಗಳಾಗಬೇಕು ಖಾದಿಯ ಸಾಂಪತ್ತಿಕ ಮಹತ್ವವು ಅವರಲ್ಲಿ ವಿವರಿಸಲಾಗಿ ಅವರ ಖಾದಿಯನ್ನೆ ಉಪಯೋಗಿಸುವ ಬುದ್ಧಿ ಪ್ರಚಾರವು ನಡೆಯಬೇಕು

ಆಗ ಈ ಖಾದಿಕ್ಷೇತ್ರವು ತನ್ನಷ್ಟಕ್ಕೆ ತಾನೆ ವೃದ್ಧಿಹೊಂದುವದು ಜನರಿಗೆ ಒಂದು ಉದ್ಯಮವನ್ನು ದೊರಕಿಸುವುದು ಆದರಿಂದ ಜನತೆಯ ರಕ್ಷಣೆ ಮಾತ್ರವಲ್ಲದೆ ರಾಷ್ಟ್ರರಕ್ಷಣೆಯೂ ಆಗುವುದು. ಹೊರಸ ಮನೆ ಕಡಿಮೆಯಾಗಿ ಲಕ್ಷ್ಮಿಯು ನಮ್ಮಲ್ಲಿ ನೆಲೆಯೂರುವಳು.

ನಮ್ಮ ಜಿಲ್ಲೆಯಲ್ಲಿ ಖಾದಿಯ ಕುರಿತು ಅಷ್ಟೊಂದು ಉತ್ಸಾಹವಿದ್ದಂತೆ ಕಾಣುವುದಿಲ್ಲ ನಮ್ಮಲ್ಲಿ ನಿರುದ್ಯೋಗಿಗಳು ಎಷ್ಟಿಲ್ಲ? ಹಳ್ಳಿಗರಿಷ್ಟು ಮಂದಿ ಅವರ ಉತ್ಪತ್ತಿಯ ಸಾಲದೆ ಒಳಲುವುದಿಲ್ಲ ನಮ್ಮೂರ ಪರಿಜನರಿಗೆ ಹೊಟ್ಟೆ ತುಂಬಿಸಲು ದಾರಿಗಾಣದ ಘಟ್ಟದ ಮಂದಿಗಳು ಮಲೆಜ್ವರದಿಂದ ಘಟ್ಟಗಳಿಗೆ ಹೋಗಿ, ತಮ್ಮ ಪ್ರಾಣಬಲಿಯನ್ನು ಕೊಡುತ್ತಿರುವರು ಖಾದಿಯಿಂದ ಅವರನ್ನು ವಿಮೋಚನೆಗೊಳಿಸಬಾರದೆ? ಅಲ್ಲದೆ ಕೆಲಸವಿಲ್ಲದೆ ವ್ಯರ್ಥವಾಗಿ ತಮ್ಮ ಹೆಚ್ಚಿನ ಸಮಯವನ್ನು ಕಳೆಯುವ ನಮ್ಮ ಸ್ತ್ರೀಯರಿಗೂ ಒಂದು ಉದ್ಯೋಗವನ್ನು ಕಲ್ಪಿಸಬಹುದು.

ಆದುದರಿಂದ ನಮ್ಮ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಖಾದಿ ಕ್ಷೇತ್ರದ ಸ್ಥಾಪನೆಯಾಗಬೇಕು ಖಾದಿ ಪ್ರಚಾರದ ಕುರಿತ ವ್ಯವಸ್ಥೆಗಳಾಗಬೇಕು

ನಮಗೆ ಬೇಕಾದ ಖಾದಿಯು ಹೆಚ್ಚಿನ ಮಟ್ಟಿಗೆ ಹೊರಕಡೆಗಳಿಂದ ಬರಬೇಕಾಗಿದೆ ಸಾಕಷ್ಟು ಖಾದಿಯು ನಮಗೆ ದೊರಕುವುದಿಲ್ಲ

ಖಾದಿಯ ವಿಚಾರ ಕಾಂಗ್ರೆಸ್ ಎಸೆಂಬ್ಲಿ ಸದಸ್ಯರ ಗಮನೆಯು ಅತ್ಯಗತ್ಯ. ಚುನಾವಣೆಯ ಮೊದಲು ಇವರು ಹಳ್ಳಿಹಳ್ಳಿಗೆ ಹೋಗಿ ಶ್ರಮಪಟ್ಟಂತೆ, ಈಗ ಖಾದಿಯ ಕುರಿತಾಗಿ ಪರಿಶ್ರಮಿಸಿದರಾಗದೆ?

"ಖಾದಿಪ್ರೇಮಿ



Distributors for South Kanara —

Raghavendra Ranga Pai Car Street Mangalore.

ಕುಂದಾಪುರ ಪ್ರವರ್ತಕರು—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.

ಆಟೊಮಾಟಿಕ್ ಅಲಾರಂ ಪಿಸ್ತೊಲ್

(ಬಂದೂಕು)

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೊಲಿನಂತಿರುವುದು. ಇದರಿಂದ ಹತ್ತು ಸೆಕುಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು. ಇದು ಒಂದು ವನ್ಯಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು. ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು. ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತೊಲ್ ಕೂಡೆ ಕಳುಹಿಸುವೆವು. ಪಿಸ್ತೊಲ್ ಒಂದು ಆರ್ಡರು ಮಾಡುವವರಿಗೆ ೩ ಬೆಲೆಂ ಹಾಕಿದ ಸ್ಪಾರ್ಕ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತೊಲು ೧೦೦ ತೋಟೆಗಳ ಸಹಿತ ೧-೮-೦ ಟಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ ೩, ಇರುಳಪ್ಪನ ಬೀದಿ, ಮದ್ರಾಸು

"An ideal young progressive Life Office of India to Insure with or represent"

The Commonwealth Assurance Co.,
LTD., POONA.

TRIENNIAL BONUS! ON ENDOWMENT Rs. 37½. TRIENNIAL BONUS! ON WHOLE LIFE Rs. 46.

Next VALUATION YEAR 1937-38.

Join the Agency force on most Liberal Terms, Apply to—

Messrs. GAWANKAR & SONS

Chief Agents for Mysore state, Coorg, Ceded Districts & S. Kanara
AHMED BUILDINGS, CHICKPET, BANGALORE CITY

Messrs. Farooqui Brothers, *Special Agents,*
Fort House Karkal, (South Kanara.)

Local Representatives —THE MODERN TRADING CO Mangalore

THE
BANK OF MANGALORE LTD.,
MANGALORE
ESTD 1931

Branches-
Panemangalore Mudabidri & Padubidri

Chairman—Philip J. Chandran, Esq.,
Retd. Dt. Registrar of Joint Stock Companies

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly
Saving Bank deposit 3½% on daily balances
All kinds of banking business transacted

U. R. PAI, N. U. PAI, *Managing Directors*

Modern Printing! at Moderate Rates!

CONSULT

Sharada Press, *Car-Street,* Mangalore

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ

ಚಂದ್ರವುಸ್—ವಾಂತಿಭೇದಿ, ಅತಿಸಾರಕ್ಕೆ

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ಮೃತ್ಯುಂಜಯ (?)—ನಿದ್ರಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಈ ವಾರದ ಕಥೆ

ನಾಳೆಯ ಸಮಸ್ಯೆ.

(ದೃಶ್ಯ)

ಲೇಖಕ:—'ದೇವಕೀನಂದನ'

ಬರುವ ಪಾತ್ರಗಳು:

ಪಾರ್ವತಿ—ಗಂಡನನ್ನು ದೇವರೆಂದು ತಿಳಿದುಕೊಳ್ಳ ಸಾಧ್ವಿ
ಮಾಲಿಂಗ—ಅವಳ ಗಂಡ ಅಧಮರ ಅಧಮ,
ಮಾಪಣ್ಣ—ಪಾರ್ವತಿಯ ತಂದೆ ಯಾ ಮಾಲಿಂಗನ ಮಾವ
ಶ್ಯಾಮಣ್ಣ ಊರ ಗ್ರಹಸ್ಥ.
ಸರಸ್ವತಿ—ಮಾಲಿಂಗನ ಅಕ್ಕ-ವಿಧವೆ ದೊಡ್ಡ ಮಾರಿ

ಮೊದಲು ತಿಳಿಯತಕ್ಕ ವಿಷಯ

ಪಾರ್ವತಿ ಹದಿನೇಳು ಹದಿನೆಂಟು ವರುಷದ, ಸುಶಿಕ್ಷಿತೆ, ಸುಂದರ, ಗುಣಾಢ್ಯಳಾದ ಹುಡುಗಿ ಗಂಡನನ್ನು ದೇವರೆಂದು ತಿಳಿದು ಭಜಿಸತಕ್ಕವಳು ಹೀಗಿದ್ದರೂ ಮಾಲಿಂಗನಿಗೆ ಅವಳಲಿ ಎಳ್ಳಷ್ಟೂ ಅನುರಾಗವಿಲ್ಲ ಅವರಿಲ್ಲಿಯೋ ಹೆಂಡತಿಯನ್ನು ಬಿಟ್ಟು ಬಸವಿಯರೊಡನೆ ಸರಸವಾಡುವ ನೀಚ. ಕಾರಣವಿಲ್ಲದೆ ಹೆಂಡತಿಯನ್ನು ಬೇಕಾದ ಹಾಗೆ ನೋಡಿಕೊಳ್ಳುವ ಹಕ್ಕಿದೆ ಎಂಬ ದುರ್ಭಾವನೆಯಿಂದ ಶಿಕ್ಷಿಸುತ್ತಲಿರುವ ಪಾಪಿ ಕೆಲವು ವರುಷಗಳಿಂದ ಹೀಗೆ ನಡೆದು ಬರುತ್ತಲಿದ್ದಿತು ಇದಕ್ಕೆ ಉಪ್ಪುಕಾರ ಹಚ್ಚತಕ್ಕವಳು ಅವನ ಅಕ್ಕ—ದೊಡ್ಡ ಸೂಟಿ ಸರಸ್ವತಿ!

ಮೊದಲಿನ ದೃಶ್ಯ

ಹಂಚು ಹಾಕಿದ ಮನೆ ಚೊಕ್ಕಟವಾಗಿಟ್ಟುಕೊಂಡಿರುವ ಅಂಗಳ ಮನೆಯ ಚಾವಡಿ—ಚಾವಡಿಯ ಬದಿಯಲ್ಲಿರುವ ಮಂಚದ ಮೇಲೆ ಗೋಡೆಗೊರಗಿಕೊಂಡು ಕುಳಿತಿರುವ ಮಾಲಿಂಗ ವೀಳ್ಯದೆಲೆ ಸುಣ್ಣದ ಡಬ್ಬಿ ಹೊಗೆಸೊಪ್ಪಿನ ಕರಡಿಗೆ, ನಾಲ್ಕೈದು ಅಡಿಕೆ, ಎದುರಿಗಿರುವ ಹರಿವಾಣದಲ್ಲಿ ಓರಣವಾಗಿ ಇರಿಸಲ್ಪಟ್ಟಿವೆ ಮಾಲಿಂಗ ಕೋಳಿಗಳ ಕುತ್ತಿಗೆಗೆ ಹಾಕುವ ಗೆಜ್ಜೆಯನ್ನು ಸರಿಮಾಡುತ್ತಲಿರುವನು ನಡುನಡುವೆ ಹಾಡುವನು

ಮಾಲಿಂಗ ಪಾರ್ವತೀ! ಪಾರ್ವತೀ!

ಸರಸ್ವತಿ: ಒಳಗಿಂದ ಬಂದು ಯಾಕೆ? ಏನು ಬೇಕು?

ಮಾಲಿಂಗ ಅಕ್ಕ ಅವಳೆಲ್ಲಿಗೆ ಹೋದಳು? ಗಯ್ಯಾಳಿ

ಸರಸ್ವತಿ ಹೋಗುವುದೆಲ್ಲಿಗೆ? ಆಚೇ ಮನೆಗೆ ಅವಳದು ಹಾಗಿರಲಿ ನಿನಗೇನು ಬೇಕು?

ಮಾಲಿಂಗ ಒ ದಿಷ್ಟು ನೀರು ಇದರಲಿ ಆಚೇ ಮನೆಯಲ್ಲಿ ಅವಳಿಗೇನು ಕೆಲಸ? (ಸರಸ್ವತಿ ಒಳಕ್ಕೆ ಹೋಗಿ ನೀರು ತಂದಿಡುವಳು ಅದನ್ನು ಮಾಲಿಂಗ ಕುಡಿಯುವನು)

ಸರಸ್ವತಿ ನಿನಗೆ ಗೊತ್ತಿಲ್ಲ [illegible] ಮರೆಯಾಗುವುದೇ ತಪ್ಪು ಅವಳ ಸವಾರಿ ಆಚೇ ಮನೆಗೆ ಹೋಗುತ್ತದೆ ಅಲ್ಲಿ ಆ ಸಣಕಿಣಿ ಲಕ್ಷ್ಮಮ್ಮ ಇಲ್ಲವೇ? ಅವರೊಡನೆ ನಮ್ಮವರು ಹಾಗೆ, ನಮ್ಮತ್ತಿಗೆ ಹೀಗೆ ದೊಡ್ಡ ಸೂಟಿ ಎಂದು ಮುಂತಾಗಿ ಉಪ್ಪುಕಾರ ಹಚ್ಚಿ ತರಳೆ ಹೇಳುವುದು ಯಾಕೆ ಹೀಗೆ ಗಯ್ಯಾಳಿಯ ಹಾಗೆ ಮಾಡ್ತಾಳೋ? ನೀನೆಷ್ಟು ಸಲ ಹೇಳಿದರೂ, ಹೊಡೆದರೂ, ಬುದ್ಧಿ ಬರಲಿಲ್ಲ ಅಂದರೆ—? ಅಂತೂ ನಿನಗೊಂದು ದಿನ ಅವಳಿಂದಾಗಿ ಸುಖವಿಲ್ಲದೇ ಹೋಯಿತು (ಅಷ್ಟರಲ್ಲಿ ಸೀರೆ ಸುತ್ತುತ್ತ ಪಾರ್ವತಿ ಬರುವಳು) ಏನು ಬಂದುಬಿಟ್ಟಿ? ಆಚೇ ಮನೆಯಲ್ಲೇ ಇರಬಹುದಿತ್ತಲ್ಲವೇ?

ಪಾರ್ವತಿ ಸೀರೆ ಮಾಡುವುದಕ್ಕೆ ಅಟ್ಟಕ್ಕೆ ಹೋಗಿದ್ದೆ ಕರೆದದ್ದು ಕೇಳಿತು ಬಂದೆ ಆಚೇ ಮನೆಗೆ ನಾನೆಲ್ಲಿ ಹೋಗಿದ್ದೆ ಅತ್ತಿಗೆ? ನನ್ನನ್ನು ಯಾಕೆ ಕರೆದಿರಿ?

ಮಾಲಿಂಗ ಏನು ನಾಲಿಗೆ ಉದ್ದುದ್ದವಾಗುತ್ತ ಹೋಗುತ್ತದೆ ನಿನಗೇನು ಬೆನ್ನು ತುರಿಸುತ್ತದೆಯೇ? ಬಾಯಿ ಬಿಚ್ಚಿದರೆ ಬೀಳುವುದು ಸುಳ್ಳು ಹೋದರೆ ಬೇಡವೆಂದು ಯಾರು ಹೇಳ್ತಾರೆ? ಹೀಗೆ ತರಳೆ ಹೇಳಬೇಕೆ? ಅನಂತರ ಬಂದು ಹೋಗಿಲ್ಲ ಎಂದು ಸುಳ್ಳು ಹೇಳಬೇಕೆ? ಮತ್ತೆ ಬಂದು ಯಾಕೆ ಕರೆದೀರಿ, ಏನು ಬೇಕು ಎಂದು ವೇಶ್ಯೆಯ ಹಾಗೆ ಮುಖ ತಿರುಗಿಸುತ್ತಾಳೆ. ಅಲ್ಲ ನೀರು ಬೇಕು ಎಂದು ಹೇಳಿ ತಾಸು ಮೂರಾಯಿತು. ತಂದು ಕೊಡುವವರೇ ಇಲ್ಲ ಅಕ್ಕ ಇಲ್ಲದಿದ್ದರೆ ದೊಂಡೆಯೊಣಗಿ ನಾನು ಇದರೊಳಗಾಗಿ ಸಾಯಬೇಕಿತ್ತು. ನಾನು ಮದುವೆಯಾದ್ದು ಹಣ ಸೊಕ್ಕಿ ಹೋದದ್ದಕ್ಕೇ? ದೇವರ ಹಾಗೆ ಇಟ್ಟುಕೊಂಡು ಪೂಜಿಸುವುದಕ್ಕೇ? ಭರ್ತಿಗೆಂದೇ ಅಥವಾ ನನ್ನನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆಂದೇ? ನಿನ್ನನ್ನು ತರುವುದರ ಬದಲಾಗಿ ನಾಯಿಯನ್ನು ತಂದು ಸಾಕುತ್ತಲಿದ್ದರೆ ಹೊತ್ತಿಗೆ ಸರಿಯಾಗಿ ಬೇಕಾದ್ದನ್ನು ಒದಗಿಸಿ ಕೊಡುತ್ತಿತ್ತು (ಕೈಯಲ್ಲಿದ್ದ ಬೆತ್ತವನ್ನು ಎತ್ತಿ ನೆಲಕ್ಕೆರಡು ಸಾರಿ ಹೊಡೆಯುವನು).

ಪಾರ್ವತಿ (ಬೆತ್ತವನ್ನು ಕಂಡು ಬೆದರದೆ, ಪಾಪಿಯ ದರ್ಪವನ್ನು ಕಂಡು ಅಳುಕದೆ, ಶಾಂತಳಾಗಿಯೇ) ಆಚೇ ಮನೆಗೆ ನಾನು ಹೋಗಿರಲಿಲ್ಲ ನನ್ನ ಅತ್ತಿಗೆಯಾಣೆ—ಹೋಗದೆ ದಿನ ಹತ್ತಾಯಿತು.

ಸರಸ್ವತಿ ಯಾಕೆ ಸುಳ್ಳು ಹೇಳುತ್ತಿ ಪಾರ್ವತಿ? ಹೋದ್ದು ನಾನು ಈ ಕಣ್ಣುಗಳಿಂದಲೇ ನೋಡಿದ್ದೆ ಯಾಕೆ ಆಣೆಗೀಣೆ ಇಡುತ್ತೀ? ಹೇಳಿಬಿಡು. ಅವನಿನ್ನ ಗಂಡ ನಿನ್ನಪಾಲಿಗೆ ದೇವರು ಅವನೊಡನೆ ತಪ್ಪನ್ನು ಒಪ್ಪಿಕೊಳ್ಳಬಾರದೇ?ಹೋಗದೆ ಎಂಟಾಯಿತು ದಿನ ಅಂದೆಯಲ್ಲಾ? ತೂಗರಿಬೇಳೆಗೆಂದು ನಿನ್ನೆ ಹೋದ್ದಲ್ಲವೇ ನೀನು? ಮಾತಿಗೆ ಬಿದ್ದ ~~ನನ್ನನ್ನು ಕರೆ~~ಯಲು ಮತ್ತೆ ನಾನೇ ಬರಬೇಕಾಯಿತು ಹೌದೋ ಅಲ್ಲವೋ? ಯಾಕೆ ಸುಮ್ಮನೆ ನಿಂತೆ? ಮಾತನಾಡಬಾರದೇ ಪಾರ್ವತಿ?

ಮಾಲಿಂಗ ಮೊದಲೇ ಹೇಳಲಿಲ್ಲವೇ ಅಕ್ಕಾ—ಬಾಯಿ ತೆರೆದರೆ ಬೀಳುವುದು ಸುಳ್ಳು ಇವಳ ಬಾಯಿ ಯಿ ದ ಎಂದು ಒಮ್ಮೆ ಹಾದಿಗೆ ಬರ ತ್ತಾಳೋ ನೋಡಿಬಿಡುತ್ತೇನೆ! ಪಾರ್ವತೀ ಆಚೇ ಮನೆಗೆ ಹೋದ್ದು ನಿಜವೇ?

ಪಾರ್ವತಿ (ಮೌನವಾಗಿರುವಳು ಇದನ್ನು ಕಂಡು ಮಾಲಿಂಗನಿಗೆ ಕೋಪ ಹೆಚ್ಚುವುದು)

ಮಾಲಿಂಗ ಏನು? ಬೇಕಾದ ಹಾಗೆ ಹೋಗುತ್ತಲಿದ್ದ ನಿನ್ನ ನಾಲಿಗೆ ಈಗ ಇಂಗಿ ಹೋಯಿತೇ? ಹೂಂ ಹೇಳುತ್ತೀಯೋ ಇಲ್ಲವೋ? (ಹೊಡೆಯುವನು)

ಪಾರ್ವತಿ (ಪೆಟ್ಟು ಬಲವಾಗಿದ್ದರೂ, ಗರ್ವದಿಂದ ಸಹಿಸಿಕೊಂಡು) [illegible] ಆಚೇ ಮನೆಗೆ ಹೋಗಿರಲಿಲ್ಲ ಯಾಕೆ ಸುಮ್ಮನೆ ಹೊಡೆ[illegible]?

[illegible] ಹೇಳಿದೆ? ಹೋಗಲಿಲ್ಲ! ಅಬ್ಬ ನಿನ್ನ ಗರ್ವವೇ! ಅಕ್ಕ ಹೇಳಿದರೂ, ನೀನು ಹೋದ್ದನ್ನು ಅವರು ನೋಡಿಬಿಟ್ಟಾರಂತೆ ಯಾಕೆ ಬೆಳೆಯುತ್ತಾ ಹೋಗುತ್ತದೆ ನಿನ್ನ ಗರ್ವ? ನಿನಗೆ ಆಚೆ ಮನೆಯಲ್ಲೇನು ಕೆಲಸ? ಅಲ್ಲಿಗೇನ ನಿನ್ನ ಮಿಂಡ ಬರುವನೇ?

ಪಾರ್ವತಿ ನಾನು ಆಚೇ ಮನೆಗೆ ಹೋಗಿರಲಿಲ್ಲ ನಿಮಗೆ ಯಾರು ಹೇಳಿದರು ಇದನ್ನು?

ಮಾಲಿಂಗ (ಮತ್ತೆರಡು ಏಟು ಹೊಡೆದು) ಯಾರು ಹೇಳಿದರು? ಹೇಳಿದವರನ್ನು ಹರಿದು ತಿನ್ನುವಿಯೇನು? ಹಲ್ಲು ತೋರಿಸುತ್ತಾಳೆ!

ಪಾರ್ವತಿ: ಏನಾದರೂ ನೆವ ಹಿಡಕೊಂಡು ಯಾಕೆ ಹೀಗೆ ಬೈಯ್ತೀರಿ? ನಾನು ಆಚೇ ಮನೆಗೆ ಹೋದರಲ್ಲವೇ? ಯಾಕೆ ನನ್ನನ್ನು ದೂಷಿಸುತ್ತೀರಿ?

ಸರಸ್ವತಿ ಯಾಕೆ ಪಾರ್ವತಿ ಹಟ ಹಿಡಿಯುತ್ತೀ? ಅವನು ಹೇಳಿದ್ದು ಕೇಳಿದ್ದರೆ ನಾಯಿಗಾದರೂ ಇದರೊಳಗಾಗಿ ಬುದ್ಧಿ ಬರುತಿತ್ತು! ಅಷ್ಟು ಓದಿರುವಿಯಂತೆ ಅಂತಹರೊಡನೆ ಇದ್ದೆಯಂತೆ! ಆದರೂ ಬುದ್ಧಿಯೆಂಬ ದೇವತೆಯಿಲ್ಲವೆಂದರೆ—?

ಮಾಲಿಂಗ ಅಲ್ಲ ಅಕ್ಕ, ಪೆಟ್ಟಿನ ರುಚಿ ನೋಡದೆ ದಿನ ಮೂರಾಯಿತು ಮೈ ತುರಿಸುತ್ತದೆ ಎಂತ ಕಾಣುತ್ತದೆ! ಇಲ್ಲದಿದ್ದರೆ, ಸಮಯ ಸರಿ ನೋಡದೆ, ಆಚೇ ಮನೆಗೆ ಹೋಗಿ ತರಳೆ ಹೇಳುತ್ತ ಸಮಯ ಹಾಳು ಮಾಡುತ್ತಿದ್ದಳೇ? ಬುದ್ಧಿ ಬರುವುದೋ ಇಲ್ಲವೋ ಎಂದು ಒಮ್ಮೆ ನೋಡಿಬಿಡಬೇಕು! (ಎಂದು ಹೇಳಿ, ಕೈಯಲ್ಲಿದ್ದ ಬೆತ್ತವನ್ನು ಸರಿಮಾಡಿಕೊಂಡು, ಹತ್ತಿರದಲ್ಲಿ ನಿಂತಿದ್ದ ದೇವಿಯ ಅಂತಹವಾದ ಪಾರ್ವತಿಯ ಕೋಮಲ ಕರಗಳನ್ನು ತನ್ನ ಪಾಪಿ ಕೈಗಳಲ್ಲಿ ಹಿಡಿದುಕೊಂಡು) ಏನೇ? ಏನು ಹೇಳಿದೆ? (ಕಣ್ಣು ಕೆಂಪಗೆ ಕೆರಳಿಸುವನು) ಬಾಯಿ ಬಿಡುತ್ತೀಯೋ ಇಲ್ಲವೋ? ಅಥವಾ ಬಿಡಿಸಬೇಕೋ?

ಪಾರ್ವತಿ. (ಸುಮ್ಮನಿರುವಳು.)

ಮಾಲಿಂಗ: ಏನು ಗರ್ವ ಅಕ್ಕ ಇವಳದು, ಗರ್ವದ ತುಂಡು, ಹೀಗೇ ಬಿಟ್ಟರೆ ಪುಟ್ಟಿಯಲ್ಲಿ ತಕ್ಕೊಂಡು ಹೋಗಿ ಪೇಟೆಯಲ್ಲಿ ಮೂರು ಕಾಸಿಗೆ ನಮ್ಮನ್ನೆಲ್ಲಾ ಮಾರಿ ಬಿಟ್ಟಾಳು. ನೋಡಿಬಿಡಬೇಕು ಎಲ್ಲಿಯ ತನಕ ಇವಳ ಗರ್ವ ಎಂದು ನೀನು. ಹೋಗಿಲ್ಲೇನು? ಹೂಂ! ಬೇಗ ಹೇಳು, ಇಲ್ಲವಾದರೆ ನಾನೇ ಬಿಡಿಸುತ್ತೇನೆ ಬಾಯಿಯನ್ನು!

ಪಾರ್ವತಿ: ನಾನು ಹೋದ್ದೇ ಇಲ್ಲ (ಧೈರ್ಯವಾಗಿಯೇ ನುಡಿದಳು)

ಮಾಲಿಂಗ ಹೋಗಿಯೂ ಇಲ್ಲವೆಂದು ಹೇಳಿದೆಯಾ? ಮಾರಿ (ಎಂದು ಪುನಃ ಹೊಡೆಯುವನು)

ಪಾರ್ವತಿ ಯಾಕೆ ಈ ಯಮ ಯಾತನೆಯನ್ನು ನನಗೆ ಕೊಡುತ್ತೀರಿ! ನಾನು ಆಚೇ ಮನೆಗೆ ಹೋದ್ದೂ ಇಲ್ಲ ತರಳೆ ಹೇಳಿದ್ದೂ ಇಲ್ಲ

ಮಾಲಿಂಗ ಮತ್ತೂ ಹೇಳುವುದು ಸುಳ್ಳನ್ನೇ ಕೆಟ್ಟ ಪ್ರಾಣಿ! ಸತ್ಯವನ್ನು ಹೇಳುವಿಯೋ ಇಲ್ಲವೋ ನೋಡಿಬಿಡುತ್ತೇನೆ? (ತಲೆಗೊಂದು ಏಟು ಹೊಡೆಯುವನು) ಹೋಗಿರುವಿಯೋ ಇಲ್ಲವೋ?

ಪಾರ್ವತಿ (ತಲೆಯೊಡೆದು ನೆತ್ತರು ಸುರಿಯುವುದು ಉಟ್ಟ ಸೀರೆ, ತೊಟ್ಟ ರವಕೆ, ದೇಹವಿಡೀ ರಕ್ತಮಯ, ನೋಡುವುದಕ್ಕೆ ಸಾಧ್ಯವಿಲ್ಲ 'ಅಯ್ಯೋ! ಅಯ್ಯೋ!' ಎಂದು ಹೇಳಿ ನೆಲಕ್ಕೆ ಬೀಳುವಳು)

ಮಾಲಿಂಗ ಹೋಗಿರುವಿಯೋ ಇಲ್ಲವೋ? ಸತ್ಯ ಹೇಳು!

ಪಾರ್ವತಿ ಇಲ್ಲ ನಾನು ಹೋದ್ದೇ ಇಲ್ಲ

ಮಾಲಿಂಗ ಅಬ್ಬಾ ನಿನ್ನ ಗರ್ವವೇ! ಅಕ್ಕಾ ಒಂದಿಷ್ಟು ಮೆಣಸು ತಾ! (ಸರಸ್ವತಿ ಒಳಕ್ಕೆ ಹೋಗಿ ಮೆಣಸು ತಂದು ಕೊಡುವಳು—ನಾಲಿಗೆಗೂ ಕಣ್ಣಿಗೂ ಅದನ್ನು [illegible] ಮಾಲಿಂಗ ಪಾರ್ವತಿ 'ಅಯ್ಯೋ ಅಯ್ಯೋ' ಎಂದು ಹೊರಳಾಡುವಳು ಮಾಲಿಂಗ ಒದೆಯುವನು ಅಂಗಳದಲ್ಲಿ ಅತ್ತಿತ್ತ ಎಳೆಯುವನು) ಏನು? ಹೋಗಿರುವಿಯೋ ಇಲ್ಲವೋ ಅಲ್ಲಿ ಚಾಡಿ ಹೇಳಿದ್ದಿಯೋ ಇಲ್ಲವೋ?

ಪಾರ್ವತಿ ನಾನು ಹೋಗಿರಲಿಲ್ಲ ನಿಮ್ಮ ವಿಷಯ ಯಾ ಅತ್ತಿಗೆಯವರ ವಿಷಯ ಅಲ್ಲಿ ಹೇಳಿದ್ದು ಇಲ್ಲ, ಆದರೆ—ನೀವು ಕೊಡುವ ಈ ಯಾತನೆ ಇದೆ ಅಲ್ಲಿ ಅದನ್ನು ಇನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ ಇಷ್ಟರ ತನಕ ನೀವು ನನ್ನ ಗಂಡ, ನಾನು ಹೆಂಡತಿ, ಬೇಕಾದ ಹಾಗೆ ಅಧಿಕಾರ ನಡೆಸುವ ಹಕ್ಕಿದೆ ಎಂದು ತಿಳಿದು ಸುಮ್ಮನಿದ್ದೆ ಸಹಿಸಿಕೊಂಡಿದ್ದೆ ಇನ್ನು ಸಹಿಸುವುದು ಸಾಧ್ಯವಿಲ್ಲ!

ಮಾಲಿಂಗ ಹಾಗಿದ್ದರೆ ಹೋಗಿಬಿಡು

ಪಾರ್ವತಿ ನಾನು ಹೋಗಲಾರೆ! ಇಲ್ಲಿ ಇದ್ದು ಸತ್ತರೂ ಚಿಂತೆಯಿಲ್ಲ ಹೋಗಲಾರೆ ಸತಿಗೆ ಪತಿ ದೇವರಂತೆ, ನಿಮ್ಮನ್ನು ಹಾಗೆ ತಿಳಕೊಂಡಿದ್ದೆ ಹಾಗೇ ಕಾಣುತ್ತೇನೆ. ನೀವು ಹೊಡೆದರಲ್ಲ, ಕೊಂದರೂ ನಾನು ಇಲ್ಲಿಂದ ಕದಲತಕ್ಕವಳಲ್ಲ ನೀವು ಕೊಲ್ಲಬೇಕು

ಮಾಲಿಂಗ ನೀನು ನನಗೆ ಬೇಡ, ಹೊರಟುಹೋಗು

ಪಾರ್ವತಿ. ಹೋಗು ಎಂದ ಮಾತ್ರಕ್ಕೆ ಹೋಗಲು ಬಾ ಎಂದು ನೀವು ಕರೆಯಲು, ಮನೆಯಿಂದ ಕುಶಿ ಬಂದ ಹಾಗೆ ಇಳಿದು ನಿಮ್ಮೊಡನೆ ಬಂದವಳಲ್ಲ ತಂದೆಯವರು ನಿಮಗೆ ಧಾರೆಯೆರೆದು ಕೊಟ್ಟುದು ನಾಲ್ಕು ಜನರ ಮುಂದೆ ನೀವು ಲಗ್ನವಾದ್ದು, ಧಾರೆಯೆರಸಿಕೊಂಡುದೂ ನಾಲ್ಕು ಜನ ಸಭ್ಯರ ಮುಂದೆಯೇ! ನಾನು ಇಲ್ಲಿಗೆ ಸೂಳೆಯ ಹಾಗೆ ಇಳಿದು ಬಂದವಳಲ್ಲ. ಹೆತ್ತವರು ಕೊಟ್ಟಿದ್ದಾರೆ—ನೀವು ತಂದಿದ್ದೀರಿ—ಬಂದಿದ್ದೇನೆ ಬೇಡವಾದರೆ ಹೋಗಿಬಿಡುತ್ತೇನೆ ಆದರೆ ನೀವು ಹೇಗೆ ನನ್ನನ್ನು ನಾಲ್ಕು ಜನರ ಮುಂದೆ ತಂದಿದ್ದೀರೋ ಹಾಗೆಯೇ ನಾಲ್ಕು ಜನರ ಮುಂದೆ ಬೇಡ ಎಂದು ಬಿಟ್ಟುಬಿಡಿ, ಹೋಗಿಬಿಡುತ್ತೇನೆ. ನಾಲ್ಕು ಜನರ ಇದಿರೇ ನಾನು ಕೆಟ್ಟ ನಡತೆಯವಳಲ್ಲವೆಂದು ತಿಳಿದು ಬರುವಂತೇ ಹೋಗಿ ಬಿಡುತ್ತೇನೆ. ಬಂದ ಮನೆಗೆ, ಇದ್ದ ಮನೆಗೆ ಹೆಸರು ತರಬಾರದು ಎಂದು ಸಹಿಸಿಕೊಂಡಿದ್ದೆ ಇನ್ನು ಸಾಧ್ಯವಿಲ್ಲ, ಬೇಡವಾದರೆ ತಂದೆಯವರಿಗೆ ತಿಳುಹಿಸಿ ಬಿಡಿ. ಅವರು ಕರಕೊಂಡು ಹೋದಾರು!

ಮಾಲಿಂಗ. ಪರ್ದೇಶಿ ಹೆಚ್ಚಿಗೆ ಮಾತನಾಡಬೇಡ, ಈಗಲೇ ಹೊರಡು (ಒದೆಯುವನು)

ಎರಡನೇ ದೃಶ್ಯ.

ಶ್ಯಾಮಣ್ಣ—(ಪ್ರವೇಶಿಸಿ) ಇಂತಹ ಮಂಗಗಳಿಗೆ ಬುದ್ಧಿ ಬರಬೇಕಾದರೆ ಹುಡುಗಿಯರನ್ನು ಬೇರೆಯವರಿಗೆ ಮದುವೆಮಾಡಿ ಕೊಡಬೇಕು ನಾಲ್ಕು ಜನರಿಂದ ಎಕ್ಕಡದಲ್ಲಿ ತಟ್ಟಿಸಬೇಕು (ಅಷ್ಟರಲ್ಲಿ ಮಾಪಣ್ಣನು ಬರುವನು) ಏನು? ಎತ್ತ ಕಡೆಗೆ ಸವಾರಿ ಹೊರಟಿತು?

ಮಾಪಣ್ಣ—ಹೀಗೇ ಬಂದೆ! ಅದು ಹಾಗಿರಲಿ ನೀವೆತ್ತ ಕಡೆಗೆ ಹೊರಟಿದ್ದೀರಿ

ಶ್ಯಾಮಣ್ಣ—ಹೀಗೇ ಹೊರಟೆ ನಿಮ್ಮ ಹುಡುಗಿಯ ವಿಷಯ ?

ಮಾಪಣ್ಣ—ಹೂಂ ಗೊತ್ತಿದೆ ಅವಳ ಹಣೇಬರಹ ನಮ್ಯಾಕೆ ಹೋಗಿದ್ದಾಳೆ ನೋಡುವುದಕ್ಕೆ ನೋಡುವುದಕ್ಕೇ ಸಾಧ್ಯವಿಲ್ಲವಂತೆ ನಿಮ್ಮ ಮಾತು ಕೇಳದೆ ಹೀಗಾಯ್ತು.

ಶ್ಯಾಮಣ್ಣ—ಅವಳ ಹಣೇಬರಹವಲ್ಲ ನಿನ್ನ ಪಾಪದ ಫಲ! ಈಗೇನು ಮಾಡುತ್ತೀ ಹೇಳು?

ಮಾಪಣ್ಣ—ನೋಡಬೇಕು

ಶ್ಯಾಮಣ್ಣ—ನೋಡುವುದು ನಂತರ, ಮೊದಲು ಕರಕೊಂಡು ಬಂದು ಅವಳನ್ನು ಈ ಯಾತನೆಯಿಂದ ತಪ್ಪಿಸು, ಸರಿಯಾದ ದಾರಿಗೆ ತಿರುಗಿದರೆ ಹುಡುಗಿಯನ್ನು ಕಳುಹಿಸು ಇಲ್ಲವಾದರೆ ಮನೆಯಲ್ಲಿರಲಿ, ಅನ್ನಕೊಡುವ ಶಕ್ತಿ ಇದೆ ಕೊಟ್ಟುಬಿಡು ಮಗಳು ಮನೆಯಲ್ಲಿದ್ದುಕೊಳ್ಳಲಿ ಆದರೆ ನಾಳೆಯೇ ಹೊರಡಬೇಕು.

ಶ್ಯಾಮಣ್ಣ—ಹಾಗೆಲ್ಲ ಮಾಡುವುದರಲ್ಲಿ ಅರ್ಥವಿಲ್ಲ ಕರಕೊಂಡು ಬಂದು ಅವಳು ನಿರಪರಾಧಿ ಎಂದು ರುಜುಪಡಿಸಬೇಕು ಜನನಿಂದೆಯಿಂದ ಕಾಪಾಡಬೇಕು. ಬೇರೊಬ್ಬನಿಗೆ ಮದುವೆ ಮಾಡಿಕೊಡುವ ಧೈರ್ಯ ನಿನಗಿರಬೇಕು. ನಾನಾಗಿದ್ದರೆ ಹಾಗೂ ಮಾಡುತ್ತಿದ್ದೆ ಸುಧಾರಣೆಯ ಈ ಯುಗದಲ್ಲಿ ತರುಣರಿಗೇನೂ ಕೊರತೆಯಿಲ್ಲ ಮದುವೆಮಾಡಿ ಕೊಟ್ಟು ಬಿಡು, ಈಗ ಕತ್ತಲಾಯಿತು ನಾಳೆ ಹೋಗಿ ಕರಕೊಂಡು ಬಾ (ಹೋಗುವರು ಪರದೆ ಬೀಳುವುದು)

ಮೂರನೇಯ ದೃಶ್ಯ

(ಹಿಂದೆ ಹೇಳಿದ ಮನೆಯ ಹಿಂದುಗಡೆ, ಪಾರ್ವತಿ ಕುಳಿತಿರುವಳ ಮುಖವಿಕಾರವಾಗಿದೆ ಮೈ ಬಾತಿದೆ ಆಲೋಚನೆಯಲ್ಲಿರುವಳು, ಮಾಪಣ್ಣ ಬರುವನು ಮಗಳ ಗುರುತು ಸಿಗದೆ)

ಮಾಪಣ್ಣ—ಯಾರು ಪಾರ್ವತಿಯಲ್ಲವೇ?

ಪಾರ್ವತಿ—(ತಂದೆಯನ್ನು ಕಂಡು ಅವಳ ಮುಖ ಸಣ್ಣದಾಗುವುದು) ಅಪ್ಪನೇ? ಯಾಕೆ ಬಂದೆ? ಮನೆಯಲ್ಲಿ ಎಲ್ಲರಿಗೂ ಸೌಖ್ಯವಷ್ಟೇ? ಒಳಕ್ಕೆ ಹೋಗಿ ನೀರು ತಂದಿಡುವಳು, ಬಾಯಾರಿಕೆ ಕುಡಿಯುವನು. ಕಾಲು ತೊಳೆದು, ನೀರು ಕುಡಿದು ಮಾಪಣ್ಣ)

ಮಾಪಣ್ಣ—ಮಾಲಿಂಗ ಇಲ್ಲವೇ?

ಪಾರ್ವತಿ—ಇದ್ದಾರೆ ಈಗ ಎಲ್ಲಿಗೋ ಹೋದರು! ಯಾಕೆ ಅಪ್ಪ?

ಮಾಪಣ್ಣ—ಇನ್ನು ಸುಮ್ಮನಿರುವುದು ಸಾಧ್ಯವಿಲ್ಲ, ನಿನಗೆ ಕೊಡುವ ಯಾತನೆಯನ್ನು ನೋಡಿಕೊಂಡಿರುವುದು ಇನ್ನು ಸಾಧ್ಯವಿಲ್ಲ. ಇಂತಹನಿಗೇಕೆ ಹೆಂಡತಿ? ನಿನ್ನನ್ನು ಕರಕೊಂಡು ಹೋಗಲು ಬಂದೆ! ಅವನಿಗೆ ನಾಲ್ಕು ಮಾತು ಹೇಳಿ ಕರಕೊಂಡು ಹೋಗಬೇಕು.

(ತೆರೆ ಪುಟವನ್ನು ನೋಡುವುದು.)

ನಾಳೆಯ ಸಮಸ್ಯೆ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಪಾರ್ವತಿ—ನನಗಾವ ಯಾತನೆ ಇದೆ ಅಪ್ಪ ಇಲ್ಲಿ? ನಿನಗಾರು ಇದನ್ನು ಹೇಳಿದರು? ಸುಖವಾಗಿದ್ದೇನೆ. ಗಂಡನ ಮನೆ ಹೆಂಡತಿಗೆ ಸ್ವರ್ಗ, ಅಲ್ಲಿ ಸುಖ ಅವಳಿಗೆ ಇಲ್ಲವಾದರೆ ಎತ್ತಲ್ಲಿ ಅದು ಸಿಕ್ಕೀತು ಅವಳಿಗೆ?

ಮಾವಣ್ಣ—ಹಾಗಿದ್ದರೆ ನಿನ್ನ ಮೈ ಸೊರಗುತ್ತಿದೆಯೇಕೆ? ಅಲ್ಲಲ್ಲಿ ರಕ್ತ ಹೆಪ್ಪುಗಟ್ಟಿರುವುದೇಕೆ?

ಪಾರ್ವತಿ ನಾಲ್ಕೈದು ದಿನಗಳಿಂದ ಜ್ವರ ಬರುತ್ತಿದೆ. ನನ್ನ ತಲೆ ತಿರುಗಿ ಅಂಗಳಕ್ಕೆ ಬಿದ್ದ ಪೆಟ್ಟಾಯಿತು ಅಷ್ಟೇ ಅಪ್ಪ!

ಮಾವಣ್ಣ—ಏನು ಪತಿಭಕ್ತಿ ಮಗ. ನಿನ್ನದು, ಊರಿಂದ ಊರಿಗೇ ಗೊತ್ತಿದೆ ಮಾಲಿಂಗ ನಿನಗೆ ಹೊಡೆದ—ನಿನ್ನನ್ನು ಕೊಲ್ಲ ಕಲಿದ್ದನೆಂದು ಯಾಕೆ ಮುಚ್ಚುತ್ತಿ ಮಗಳೆ ಸತ್ಯವನ್ನು ಇದ್ದುದನ್ನು ಹೇಳಬಾರದೇ? ಮಗೂ! ನಿನ್ನ ಬಾಳ್ವೆಯನ್ನು ಬೇಕೆಂತಲೇ ಮಣ್ಣುಗೂಡಿಸಿದ ಪಾಪಿ ನಾನು

ಪಾರ್ವತಿ-ಹೊಡೆದಿರಬಹುದು, ಮತ್ತೇನಾದರೂ ಮಾಡಿರಬಹುದು ಅವರಲ್ಲದೆ ಮತ್ತಾರಿಗೆ ಹಾಗೆ ನನ್ನ ಮೇಲೆ ಮಾಗಿದು ಕೊಳ್ಳ ಧೈರ್ಯ, ಅಧಿಕಾರ ಇದೆ? ಆದರೆ ನಿನ್ನಪ್ಪ ಇವರಲ್ಲಿ ಏನಿದೆ? ಸುಖದಲ್ಲಿರುವ ಭಾಗ್ಯ ನನಗಿಲ್ಲ ಹಣೆಯಲ್ಲಿ ಬರೆದಿಲ್ಲ ಅಷ್ಟೇ! ಗಂಡ ಕೊಟ್ಟ ಕಷ್ಟಗಳನ್ನು ಹೆಂಡತಿಯಾದವಳು ಅನುಭವಿಸಬೇಕು! ಕಷ್ಟದಲ್ಲೇ ಸುಖವನ್ನು ಕೊಂಡಬೇಕು ಅದು ಗರತಿಯಾದವಳ ಕರ್ತವ್ಯ ಅದು ಹಾಗಿರಲಿ! ನೀನು ಯಾಕೆ ಬಂದೆ?

ಮಾವಣ್ಣ ಇದನ್ನೆಲ್ಲ ಕೇಳಿ, ಈ ಕಟುಕನ ಕೈಯಲ್ಲಿ ನಿನ್ನನ್ನು ಇನ್ನು ಬಿಡಲು ಮನಸ್ಸು ಬಾರದೆ ಕರಕೊಂಡು ಹೋಗೋಣ ಎಂದು ಬಂದೆ, ಹೀಗೇಕೆ ನೀನಿಲ್ಲಿ ನರಳಬೇಕು ನಮ್ಮೊಡನೆ ಸುಖವಾಗಿರಬಾರದೇ?

ಪಾರ್ವತಿ ಏನು ಹುಚ್ಚು ಮಾತು ಅಪ್ಪ ಇದು, ನಾಲ್ಕು ಜನರ ಮುಂದೆ ನನ್ನನ್ನು ದಾನ ಮಾಡಿದ್ದೀರಿ ನಾನು ನಿಮ್ಮ ಮಗಳಾದರೂ ನಿಮ್ಮ ವಶವೆಯಲ್ಲ ಗಂಡನ ಹೇಳಿಕೆಯಂತೆ ಇರತಕ್ಕವಳು ಅವರ ವಶಕ್ಕೆ ಬ್ರಹ್ಮಸಭೆಯ ಮುಂದೆ ಒಪ್ಪಿಸಿದ್ದೀರಿ ಕೇಳುವ ಹಕ್ಕಿಲ್ಲ ಅವರು ಬೇಕಾದ ಹಾಗೆ ಅದು ಯಾವ ರೀತಿಯೇ ಇರಲಿ, ನನ್ನನ್ನು ನೋಡಿಕೊಳ್ಳಬಹುದು ಯಾಕೆ ಹಾಗೆ ಮಾಡಿದೆ ಎಂದು ಕೇಳುವ ಹಕ್ಕು ದಾಟಿ ಹೋಗಿದೆ ನಿಮ್ಮ ಕೈಯಿಂದ ಹೆಣ್ಣು ಅನುಭವಿಸಲು ಹುಟ್ಟಿದವಳು ಕ್ಲೇಶಗಳನ್ನು ಸಹಿಸಲು ಹುಟ್ಟಿದವಳು ನಾನು ಇಲ್ಲಿದ್ದು ನರಕವಾಸದ ಸುಖವನ್ನೇ ಅನುಭವಿಸಿದರೂ ನನ್ನ ಪಾಲಿಗೆ ಅದರಲ್ಲಿ ಸ್ವರ್ಗವಾಸದ ಸುಖ ಲಭಿಸೀತು ನೀವು ಕರಕೊಂಡು ಹೋಗಬಾರದು ಅವರು ನಡೆ ಎಂದು ದಬ್ಬಿದರೆ ಬೇರೆ ಮಾರ್ಗವಿಲ್ಲ

ಮಾವಣ್ಣ ಪಾತೂ ನೀನು ನನ್ನ ಹೊಟ್ಟೆಯಲ್ಲಿ ಅವತರಿಸಿದ ಸಾಕ್ಷಾತ್ ಪಾರ್ವತೀ ದೇವಿ ಅಥವಾ ಪಾತಿವ್ರತ್ಯದ ಪ್ರಭಾವವು ಶಿಥಿಲವಾಗುತ್ತಲಿರುವ, ಪಾತಿವ್ರತ್ಯದ ಪಾತವಾಗುತ್ತಿರುವ ಈ ಜಗತ್ತಿಗೆ ಸ್ತ್ರೀಯರು ಹೀಗೇ ಇರಬೇಕು ಎಂದು ತಿಳುಹಿಸುವುದಕ್ಕಾಗಿ ಭೂಮಿಗಿಳಿದು ಬಂದ ಯಾವಳೋ ಒಬ್ಬ ದೇವಿಯಾ ದೇವಿಯ ಅಂಶವಾಗಿರಬೇಕು ನಿನ್ನನ್ನು ಈ ಜನ್ಮದಲ್ಲಿ ಕಾಣುವ ಭಾಗ್ಯವನ್ನು ತಂದು ಕೊಟ್ಟ ಸುಬ್ರಮಣ್ಯನನ್ನು ನಾನು ಪೂಜಿಸಬೇಕು ಪಾತೂ! ಹಟ ಮಾಡಬೇಡ ಮನೆಗೆ ಹೋಗೋಣ (ಅಷ್ಟರಲ್ಲಿ ಮಾಲಿಂಗ ಬರುವನು ಮಾವಣ್ಣನನ್ನು ಕಂಡು ಮುಖ ಸಪ್ಪಟೆಯಾಗುವುದು. ಆದರೂ ಸುಧಾರಿಸಿಕೊಂಡು)

ಮಾಲಿಂಗ-ಏನು ಮಾವ? ಯಾಕೆ ಬಂದಿರಿ? ಸೌಖ್ಯವಷ್ಟೇ?

ಮಾವಣ್ಣ-(ಕೇಳಿಯೂ ಕೇಳಿಸದವನಂತೆ ನಟಿಸುವನು.)

ಮಾಲಿಂಗ-ಮಾವ? ಮನೆಯಲ್ಲಿ ಕ್ಷೇಮವಷ್ಟೆ?

ಪಾರ್ವತಿ-ಅಪ್ಪಾ! ಮಾತನಾಡಿಸಿದರು, ಕೇಳಲಿಲ್ಲವೇ?

ಮಾಲಿಂಗ—ಸಾಕು! ನಿನ್ನ ಮಾತಲತು ನಡೀ ಒಳಗೆ! ಅನಿಷ್ಟದವಳೇ! (ಮತ್ತು ಮಾತನಾಡದೇ ಇರುವ ಮಾವನನ್ನು ಕಂಡು ಪೆಚ್ಚುಮೋರೆ ಮಾಡಿಕೊಂಡು) ಮಾವಾ?

ಮಾವಣ್ಣ—ಹೋಗುತ್ತಲಿದ್ದ ಪಾರ್ವತಿಯನ್ನು ಹಿಡಿದು ನಿಲ್ಲಿಸಿ) ಯಾರ ಮಾವ? ನನ್ನ ಅಳಿಯ ನನ್ನ ಪಾಲಿಗೆ ಅವನು ನಿನ್ನೆ ಸತ್ತು ಹೋದ, ನೀನು ಮಾಲಿಂಗನಲ್ಲ-ಯಾರೋ ಒಬ್ಬ ಘಟಿಂಗನಾಗಿರಬೇಕು

ಮಾಲಿಂಗ (ಮುಖವನ್ನು ಕೆಳಗೆ ಮಾಡುವನು)

ಮಾವಣ್ಣ ಏನು ನಾಲಗೆ ಇಂಗಿಹೋಯಿತೇ? ನೀಚನೇ? ಹುಡುಗಿ ಎಂದರೆ ನಿನ್ನ ಆಟದ ಬೊಂಬೆಯೇ? ನನ್ನ ಮಗಳು ಅಂದರೆ ನನ್ನ ಕರುಳು ಅವಳನ್ನು ಹೀಗೆ ಹೊಡೆಯುವುದೇ? ತಪ್ಪಿದ್ದರೆ ಚಿಂತೆಯಿರಲಿಲ್ಲ. ಅವಳು ಅಪರಾಧಿಯಲ್ಲ-ಅದು ಜಗತ್ತಿಗೇ ಗೊತ್ತಿದೆ ಯಾಕೆ ಈ ಕಳೆದ ಮೂರು ನಾಲ್ಕು ವರ್ಷಗಳಿಂದ ಶಿಕ್ಷೆ ಕೊಡುತ್ತಲಿರುವೆ? ಮಕ್ಕಳು ನನಗೆ ಭಾರವಾಗಲಿಕ್ಕಿಲ್ಲ ಎಷ್ಟಿದ್ದರೂ ಕಡಿಮೆ ಎಂದೇ ಆದೀತು ಬೇಡವಾದರೆ ಬಿಟ್ಟುಬಿಡು ನಿನ್ನಂತಹನಿಗೆ ಹೆಂಡತಿ ಯಾಕೆ? ನನ್ನ ಮಗಳಂತಹ ಸುಸ್ವರೂಪಿ ಸುಗುಣಿ ಸುಶಿಕ್ಷಿತ ಗೃಹಿಣಿಯಾಕೆ? ಬೀದಿಯ ಬಿದ ಸೂಳೆಯರಾದೀತು ಬೇಕಾದಷ್ಟಿದ್ದಾರೆ ಅವರಲ್ಲಿಯೇ ಬೇಕಾದರೆ ಇದ್ದುಕೋ! ಮಗಳನ್ನು ಕರಕೊಂಡು ಹೋಗುತ್ತೇನೆ

ಮಾಲಿಂಗ: ಹೋಗಿ, ಯಾರು ಬೇಡವೆಂದರು. ಅಂತಹ ಲಜ್ಜೆಯಿಂದ ಹುಡುಗಿ ನನ್ನ ಹೆಂಡತಿಯಾಗಿರುವುದು ಬೇಡ. ಬೇಕಾದರೆ ಮನೆಯಲ್ಲಿಟ್ಟುಕೊಳ್ಳಿ ನಿಮ್ಮ ಮಗಳು! ಬೇಕಾದ ಹಾಗೆ ಮಾಡಿ ನನಗೆ ಭಾರ ಇಳಿದ ಹಾಗಾಯಿತು

ಮಾವಣ್ಣ ಮನೆಯಲ್ಲಿಟ್ಟುಕೊಳ್ಳುತ್ತೇನೆ ಅಥವಾ ಬೇರೊಬ್ಬರಿಗೆ ಮದುವೆಮಾಡಿಕೊಡುತ್ತೇನೆ ಅದೆಲ್ಲ ನಿನಗೆ ಯಾಕೆ? ಮೂರು ಕಾಸಿನವನಿಗೆ! ಪಾತೂ! ಹೊರಡು

ಪಾರ್ವತಿ (ಗಂಡನ ಮುಖವನ್ನು ನೋಡುತ್ತ ಸುಮ್ಮನಿರುವಳು)

ಮಾಲಿಂಗ ನನ್ನನ್ನು ನೋಡುವುದೇಕೆ? ಹೋಗಬಾರದೇ? ಅಪ್ಪನಿರುವ ಹೋಗು ಯಾರ ಅಡ್ಡಿಯೂ ಇಲ್ಲ

ಮಾವಣ್ಣ ಏನು? ಅಧಮ! ಪಾರ್ವತಿ ನಿರಪರಾಧಿ! ಲಜ್ಜೆಮುಂಡತನ ನಿನ್ನದು ಹೆಂಡತಿಯನ್ನು ಬಿಟ್ಟು, ಊರಿನ ಹೆಂಗಸರನ್ನು ಬಯಸುವ (ಕೋಪವೇ ಹೆಚ್ಚಾಗಿ ಮಾತು ನಿಲ್ಲುವುದು ಸಾವರಿಸಿಕೊಂಡು) ಪಾತೂ! ಹೋಗೋಣ (ಪಾತು ಮೆಲ್ಲಗೆ ಕೆಳಗಿಳಿಯುವಳು • ಸರಸ್ವತಿ ಹೊರಗೆ ಬರುವಳು)

ಸರಸ್ವತಿ ಮತ್ತು ಮಾಲಿಂಗ (ಅವಳನ್ನೇ ನೋಡುತ್ತ ಸುಮ್ಮನಿರುವರು)

ಪಾರ್ವತಿ ದೇವರಿಗೆ ನಮಸ್ಕರಿಸಿ ಬರುತ್ತೇನೆ (ಎಂದು ಒಳಗೆ ತೆರಳಿ ದೇವರಿಗೆ ನಮಸ್ಕರಿಸಿ ಪುನ. ಗಂಡನ ಕಾಲುಹಿಡಿದು) ದೇವರೇ ಇವರಿಗೆ ಒಳ್ಳೇದು ಆಗಲಿ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟು ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 237/1937

ಕಂಪಾದ್ತ ಮೊಯಿದಿಂ ಕುಂಞ—ವಾದಿ.

ಮತ್ತು

1 ವಾಸುದೇವ ಕಕ್ಕಿಲ್ಲಾಯ ಪೊರವಿಲ್ ಬಡ್ಕೆರೆ ಇಲ್ಲತ್ತ ವಾಸುದೇವ ಕಕ್ಕಿಲ್ಲಾಯರ ಮಗ ಕ್ತರ್ನಾಟಿ ಕಾರ್ನವ ಮತ್ತು ಆಡಳಿತದಾರ } ಪ್ರತಿವಾದಿ

2 ನಾರಾಯಣ ಕಕ್ಕಿಲ್ಲಾಯ, 3 ಪದ್ಮನಾಭ ಕಕ್ಕಿಲ್ಲಾಯ—ಪದ್ಮನಾಭ ಕಕ್ಕಿಲ್ಲಾಯರ ಮಕ್ಕಳು

ಕಾಸರಗೋಡು ತಾಲೂಕು ಮದಿಕ್ಕೈ ಗ್ರಾಮ ಇವರೊಳಗೆ

1ನೇ ಪ್ರತಿವಾದಿ ಮತ್ತು ಆತನ ಅಣ್ಣ ಮೃತಪಟ್ಟ ಪದ್ಮನಾಭ ಕಕ್ಕಿಲ್ಲಾಯ ಕೂಡಾ 2 ಜನರು ವಾದಿಗೆ ತಾ 9 4—1937ರಲ್ಲು ರೂಪಾಯಿ 600ಕ್ಕೆ ಬರಕೊಟ್ಟ ದಿ ಪ್ರೊ ನೋಟಿನ ಅಸಲ ಬಡ್ಡಿ ಬಗ್ಗೆ ವಾದಿಯು ದಾಖಲು ಮಾಡಿದ ಮೋಕ್ದಮೆ ವ್ಯಾಜ್ಯವು ತಾರೀಕು 14—8—1937ಕ್ಕೆ ಸದ್ರಿ ಕೋರ್ಟಿನಲ್ಲಿ ತನಿಖೆ ಬಗ್ಗೆ ಇಡೋಣಾಗಿಯದೆಂತ ಸದ್ರಿ ಪ್ರತಿವಾದಿರೀಗೆ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು 28 7 37 — **B Amrita Rao,** Pleader for Plff

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು 'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂದಾಪುರ ದ ಕ

ಬ್ರೇಂಚ್ ಆಫೀಸುಗಳು
ಕುಂದಾಪುರ,
ಕುಮಟಾ,
ಕೋಟೇಶ್ವರ,
ಬೈಂದೂರು,
ಗೋಕರ್ಣ,
ವೀರರಾಜೇಂದ್ರಪೇಟೆ,
ಸೋಮವಾರ ಪೇಟೆ,
ಶಿವಮೊಗ್ಗಾ
ತರಿಕೆರೆ

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ತೆರೆಯಲ್ಪಡುವುವು

ಶಿವಮೊಗ್ಗಾ ತಾ 26 8 1937
ತರಿಕೆರೆ 30 8-1937

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುವು

ದಕ್ಷಿಣ ಕನ್ನಡ ಉತ್ತರ ಕನ್ನಡ ಕೊಡಗು ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಮ್ಮದೇ ಆಗಿರುವ ಅದರ್ಶಪ್ರಾಯವಾದ ಈ ಬೇಂಕಿನಲಿಯೇ ನಿಮ್ಮ ವ್ಯವಹಾರಗಳನ್ನು ನಡಿಸಬೇಕಾಗಿ ಕೋರುತ್ತೇವೆ.

Laxmi Nivas Buildings
Coondapur 8 1 1937 — The Agricultural & Industrial Bank, Ltd

ಒಂದ ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ

5 ಅಂಕಗಳ ಸ್ವಲ್ಪ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ

ಬರೆದವರು —ಶ್ರೀ ಜಿ. ಎಸ್ ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು । ಯೋಗಿ ಹೃದಯದೊಳಿಲ್ಲ, ಸೂರ್ಯನೊಳಗಿಲ್ಲ ।
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು ನಾರದ ಮುನಿವರ।" ।

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ ಮಂಟಪದ ಮನೋಹರವಾದ ೩೫ ಗೀತಗಳಿವೆ ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ,ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ -1. ಎಲ್ಯಾರ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಶ್ರಾವಣ ಶು| ೧ ಶನಿವಾರದಿಂದ, ಶ್ರಾವಣ ಶು| ೭ ಶುಕ್ರವಾರದ ವರೇಗಿನ ಪಂಚಾಂಗ (೧೯೩೭ನೇಯ (ಕರ್ನಾಟಕ ಆಟಿ)

[illegible]	[illegible]	[illegible]	[illegible]	[illegible]	[illegible]	[illegible]	[illegible]
7	ಶನಿ	೧	೩೦	ಆಶ್ಲೇಷ	೧೪	೨೨	[illegible]
8	ರವಿ	೨	೨೮	ಮಘ	೧೪	೨೩	
9	ಸೋ	೩	೨೬	ಹುಬ್ಬ	೧೫	೨೪	
10	ಕುಜ	೪	೨೮	ಉತ್ತರ	೧೬	೨೫	
11	ಬುಧ	೫	೩೦	ಹಸ್ತ	೨೧	೨೬	
12	ಗುರು	೬	೩೩	ಚಿತ್ರ	೨೫	೨೭	
13	ಶುಕ್ರ	೭	೩೭	ಸ್ವಾತಿ	೩೧	೨೮	

FOR

Quality Frames & Lens

Please Visit



Nayaks' Optical Stores

Scientific Opticians,

Temple squares, MANGALORE.

ಮುಖ್ಯ ಮಂತ್ರಿಯರ ಕೆಲವು ಅಭಿಪ್ರಾಯಗಳು.

೧. ಒಂದು ಜಾತಿಗೆ ಸೇರಿದವನನ್ನು ಮತ್ತೊಂದು ಜಾತಿಯವರು ಬಹುಮಾನಿಸಿದ ಡಲೆ ಅವರಿವರು ಹಿಗ್ಗುವುದೊಂದು ನಮ್ಮ ನ್ನ ರೂಢಿಯಾಗಿದೆ. ಇದರಿಂದ ನಾವೆಲ್ಲ ಂದೇ ಜಾತಿ ಎಂಬುದನ್ನು ಮರೆಯುವಂತಾ ದೆ. ಮರವೊಂದೇ ಆದರೂ, ಅದಕ್ಕೆ ಗೆಲ್ಲು ಳು ಎಷ್ಟೋ ಇರುವುವಲ್ಲವೆ? ಯಾವುದೊಂದು ಲ್ಲಿನ ಬಲವು ಇತರ ಗೆಲ್ಲುಗಳ ಚೇತನವನ್ನೆ ಹೊಂದಿಧೆಯಲ್ಲವೆ? ನಾವು ಇದನ್ನು ಮರೆಯು ೇವೆ. ಜೇನು ಹುಳಗಳಿಗಿಂತ ನಾವು ಜಾಣರು; ರುವೆಗಳಿಗಿಂತ ನಾವು ಉದ್ಯಮಿಗಳು ಎಂದೆ ಷ್ಟೋ ಬಗೆಯಾಗಿ ನಾವು ಹಿಗ್ಗಿಕೊಂಡು, ಸೃಷ್ಟಿ ು ಅಧಿದೇವರಾಗಿ ಮೆರೆಯುತ್ತೇವೆ. ಆದರೂ ಮ್ಮಲ್ಲಿ ಉಂಟಾಗುವ ಕರ್ತವ್ಯಪ್ರಮಾದಗಳಿಗೆ ಣತಿಯಿಲ್ಲ. ಹಳಬರಲ್ಲಿರುವ ಈ ದೋಷವನ್ನು ವಾರಿಸಿಕೊಂಡು, ಎಳೆಯವರಾದರೂ ಜನಾಂ ದ ದೃಷ್ಟಿಯಿಂದ ಪ್ರವರ್ತಿಸತೊಡಗಿದರೆ ನಮ್ಮ ನ್ಮಸಿದ್ಧ ಹಕ್ಕನ್ನು ಸುಲಭವಾಗಿ ಪಡೆವೆವು. ನನು ಇಡೀ ಜನಾಂಗದ ಹಿತವನ್ನೆ ಸಾಧಿ ುವ ಹೃದಯವುಳ್ಳಾತನು; ಹೊರಗೆ ಏನೇ ರಲಿ ಎನ್ನುವುದು ತಪ್ಪು. ಇದರ ಬದಲಾಗಿ ಗ ಶಿಕ್ಷಿತರಾಗಿ ಹೊರಡುವ ಯುವಕರು ತಾವೆ ರೂ ಈ ಜನಾಂಗವೆಂದು ಹೊರಗೂ ಒಳಗೂ ೋರಿಸಿಕೊಳ್ಳುವಂತಾಗಲಿ

೨. ನಮ್ಮಲ್ಲಿನ ಬಡತನವು ಯಾವು ೊಂದೇ ಜಾತಿಯವರನ್ನು ಪ್ರತ್ಯೇಕವಾಗಿ ಭಾ ಸುತ್ತಿಲ್ಲವಷ್ಟೆ. ಜನರ ಬಡತನವನ್ನು ಕಂಡರೆ ಯಾರೂ ಕಣ್ಣೀರು ಸುರಿಸದಿರಲಾಗುವುದಿಲ್ಲ. ಹಳ್ಳಿಗಳಿಗೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ಪ್ರತ್ಯೇಕವಾಗಿ ಕಾಣುವವರಲ್ಲಿ ಜಾತಿಗಳ ಭೇ ದದ ಭಾವವೇ ಕಂಡುಬರುತ್ತಿಲ್ಲ. ನಗರಗಳಿಗೆ ಎಂದು, ಹುದ್ದೆಗಳಿಗೆ ಹಾತೊರೆವಾಗ ಮಾತ್ರ ತನ್ನ ಜಾತಿಯ ಸ್ಮರಣೆ ಉಂಟಾಗುತ್ತದೆ. ಸಂಬಳ ಅಥವಾ ಪಿನ್ಶನು ಎಂಬುದು ಆಯಾ ಮನು ಷ್ಯನ ಕುಟುಂಬಭಾರವನ್ನು ಹೊಂದಬೇಕಾದ ಕರ್ತವ್ಯದ ವಿಚಾರದಿಂದ ಕೊಡುವ ಮಾತಾ ಗಿದೆ ಹುದ್ದೆಗಳ ಘಂಟೋಣವನ್ನು ಕಂಡರೆ,— ತನ್ನ ಸಮಾಜಕ್ಕಿಂತ ಮೊದಲೇ ಉತ್ತಮ ಸ್ಥಿತಿಗೆ ಏರಿದವನು ಇನ್ನೂ ಉತ್ತಮ ಸ್ಥಿತಿಗೆ ಏರುವಂತೆ ಸಾಧನೆ ಮಾಡಿದಂತಿದೆ. ಅಶಿಕ್ಷಿತರ ಮೇಲೆ ತನ್ನ ಹೆಚ್ಚುಗೆಯನ್ನು ಪ್ರಕಟಿಸಿ ಅಶಿಕ್ಷಿತರನ್ನು ಬಲಿ ಗೊಳ್ಳುವುದಕ್ಕೇ ಶಿಕ್ಷಿತನು ಹೊರಡಂತೆ, ಈ ಹುದ್ದೆಗಳನ್ನು ಪಡೆವ ಸಾಧನೆಯಲ್ಲಿರುವುದು ಶೋಚನೀಯ. ಸ್ವಸಮಾಜವನ್ನು ತೊರೆಯಬೇ ಕೆಂದಿಲ್ಲ; ಸ್ವಸಮಾಜವು ಹಿಂದುಳಿದಿದೆ ಎಂಬ ಕಾರಣದಿಂದ ಯಾವನೂ ಅದೊಂದು ನೆವದಿಂದ ತನ್ನೊಬ್ಬನ ಏಳಿಗೆ ಸಾಧಿಸಲೆತ್ನಿಸುವುದು ಉತ್ತ ಮವಲ್ಲ. ಸ್ವಸಮಾಜಕ್ಕಾಗಿ ತ್ಯಾಗಶೀಲನಾಗಿ ನಿರಾಲಸ್ಯನಾಗಿ ದುಡಿಯುವವನೇ ಹೆಚ್ಚಿನವನು. ಗ್ರಿಡ್ಜುವೇಟರು ತಮ್ಮೆಲ್ಲರ ಮೇಲ್ಮೆಯನ್ನು ಮಾತ್ರ ಸಾಧಿಸುವ ಬದಲಾಗಿ, ಸ್ವಸಮಾಜದಲ್ಲಿ ಅಕ್ಷರತೆಯನ್ನು ಹಬ್ಬಿಸಲು ಸೇಚಾಡಿ, ಸಮಾ ಜದ ಹಿತವರ್ಧಿಸುವವರಾಗಬೇಕು, ತಮಗೆ ಕಿಂಚಿತ್ತು ಸೌಖ್ಯಕಡಮೆಯಾದರೂ ಗಣನೆಗೆ ತರಬಾರದು. ಗ್ರಾಮದಲ್ಲಿ ಉಪಾಧ್ಯಾಯನಾಗಿ ಸಮಾಜಸೇವೆ ಮಾಡುವುದು ಉತ್ತಮವಲ್ಲದೆ, ಅದರ ದುಬಾರಿ ಸಂಬಳ ಪಡೆದು ನಗರದಲ್ಲಿ ವೈಭವದಿಂದ ಜೀವಿಸಿ ಸಮಾಜವನ್ನು ಮರೆ ವುದು ಉತ್ತಮವಲ್ಲ.

೩. ನಮ್ಮ ಜನಾಂಗದ ಸ್ಥಿತಿಯು ತೆರಿಗೆ ದಾರರ ದೃಷ್ಟಿಯಿಂದ, ಅತಿ ಶೋಚನೀಯವಾ ಗಿದೆ ಎಂದು ರುಜುಪಡಿಸಬಹುದು. ನಾವು ದೊಡ್ಡದೊಂದು ಕಟ್ಟಡದ ಮೇಲ್ಮಾಳಿಗೆಯಲ್ಲಿ ಗ್ಲೇವೆಯಾದರೂ, ಅದರ ಅಸ್ತಿವಾರವು ಜರ್ಝ ರಿತವಾಗಿದೆ ಎಂಬಂತೆ ಈ ಅವಸ್ಥೆಯಿದೆ. ಇಡೀ ಕಟ್ಟಡವನ್ನು ಒಮ್ಮೆಲೇ ದುರುಸ್ತಿ ಮಾಡಲಾಗು ವುದಿಲ್ಲ; ಹಾಗೆಂದು ದುರುಸ್ತಿ ಕೈಹಚ್ಚದಿದ್ದರೆ ಕಟ್ಟಡವು ಇನ್ನಷ್ಟು ಅಪಾಯಕರವಾಗುತ್ತ ಬರು ತ್ತದೆ. ಎಲ್ಲವನ್ನೂ ಮಾಡದೆ ಏನನ್ನು ಮಾಡು ವುದು ತಪ್ಪೆಂದರೆ, ತನ್ನ ಕರ್ತವ್ಯ ತೊರೆದು ದೂರವಾಗುವುದು ಲೇಸೆನಿಸುವುದು. ಆದುದ ರಿಂದ ಮಂತ್ರಿಗಳು ತಿದ್ದುಪಾಟುಗಳನ್ನು ಪ್ರಾ ರಂಭಿಸಬೇಕಾಗಿದೆ, ಅದಕ್ಕಾಗಿ ಸರ್ವರ ಸಹಾ ನುಭೂತಿಯೂ ದೊರೆತರೆ ಮಾತ್ರ ಸುಧಾರಣೆ ಮಾಡಬಹುದಲ್ಲದೆ, ಸ್ವಾರ್ಥದಿಂದ ಕೆಲವರು ಹಿಂದೆಗೆದರೆ, ಎಲ್ಲರ ಹಿತಕ್ಕೂ ಆತಂಕವುಂಟಾ ಗುವುದಲ್ಲವೆ?

೪. ಬಹಳ ಪೇಚಾಡಿ ಒಂದು ಹಪ್ತೆಯ. ತನಕ ದುಡಿದವನು, ಕೊನೆಯ ದಿನ ಸಂಬಳ ಎನ್ನು ಹಿಡಿದು ಮನೆಗೆ ಹೋಗುವಾಗ, ಅವನ ದಾರಿಯುದ್ದಕ್ಕೂ ಸರಾಯಿ ಅಂಗಡಿಗಳಿರುವು ವಾದರೆ, ಅವನಲ್ಲಿ ಎಷ್ಟು ಹಣ ತಾನೆ ವ್ಯಯ ವಾಗದೆ ಉಳಿದೀತು? ಅವನ ಕುಟುಂಬಕ್ಕೆ ಅವನ ದುಡಿತದ ಎಷ್ಟಂಶವು ದೊರಕೀತು? ಮದ್ಯಪಾನ ನಿವಾರಣೆಮಾಡಲು ಪ್ರಯತ್ನಪಡ ಬೇಕು. ಇದರಿಂದ ಸರಕಾರಕ್ಕೆ ದೊರೆವ ಆಯ ವು ತಪ್ಪುವುದು. ವ್ಯಯವನ್ನು ಇಳಿಸಿದರಾ ಯಿತು. ಆದರೆ, ಇಳಿಸಲು ಅಧಿಕಾರವೇ ಇಲ್ಲದ ರೀತಿಯಲ್ಲಿ ವ್ಯಯವನ್ನು ಮಾಡಲೇ ಬೇಕಾಗಿದೆಯಲ್ಲ! ಸೈನ್ಯದ ಖರ್ಚನ್ನು ಇಳಿಸ ಬರುವುದೆ? ಇಂಡಿಯಾ ಸೆಕ್ರೆಟರಿಯವರ ಅಧಿ ಕಾರದೊಳಗಣ ನೇಮಕಗಳ ವೇತನವನ್ನು ಇಳಿ ಸಬರುತ್ತಿದೆಯೆ? ಹಾಗೆಂದು ಸುಮ್ಮನಿರಲೂ ಆಗುವುದೆ? ಬಡವರೆಡೆಯ ದೃಷ್ಟಿಯುಳ್ಳವರು ನಾನು ಯಾವ ಸೌಕರ್ಯಗಳನ್ನೂ ಅವರಿಗಾಗಿ ಮಾಡುತ್ತಿಲ್ಲವೆನ್ನರೆ? ಅದಕ್ಕಾಗಿ ನಾನೂ ನನ ಸಹೋದ್ಯೋಗಿಗಳೂ ನಮ್ಮ ಸಂಬಳವನ್ನು ಇಳಿ ಸಿಕೊಂಡಿದ್ದೇವೆ, ಸ್ವಲ್ಪ ಸೌಕರ್ಯಗಳನ್ನು ಕಡಮೆ ಮಾಡಿಕೊಂಡಿದ್ದೇವೆ, ಮನೆಯ ಖರ್ಚನ್ನು ಇಳಿಸಿದ್ದೇವೆ, ಕಡಮೆ ಕ್ರಯದ ಕಾರು ಸಾಕೆಂ ದಿದ್ದೇವೆ. ಅಂತೆಯೆ ವಿಿತವ್ಯಯಗಳನ್ನು ಬಲ್ಲಿ ಸಮಾಜಗಳಿಗೆ ನಾನು ಹೀಗೆ ಮಾಡಿರೆನ್ನವುದ ರಲ್ಲಿ ತಪ್ಪಿಲ್ಲವಷ್ಟೆ. ಮುಸ್ಲಿಮ 'ಇತಿಹಾಸ ದಲ್ಲಿ' ಮಿತವ್ಯಯದ ದೃಷ್ಟಾಂತಗಳು ಲಕ್ಷಗಟ್ಟಲೆ ಇವೆ ಖಲೀಫರು ಜಗತ್ತಿನ ವ್ಯವಹಾರಗಳ ನ್ನೆಲ್ಲ ಬರೇ ಚಾಪೆಯ ಮೇಲೆ ಕೂತು ನಡೆ ಸಿಲ್ಲವೆ? ಅವರು ಈಗಣ ಸರಕಾರಿ ನೋಕರರಿ ಗಿಂತ ಕಡಮೆ ವೈಭವಗಳಿಂದ ಕೂಡಿದ್ದರು.

೫. ಈಗಣ ಸೌಕರ್ಯಗಳನ್ನು ಉಪ ಯೋಗಿಸಬಾರದೆಂದು ನಾನೆನ್ನುವುದಿಲ್ಲ. ಸಾ ಮಾನ್ಯ ಜೀವನ ನಡೆಸಿರೆನ್ನುತ್ತೇನೆ ಗಾಂಧಿ ಜೀಯವರು ಸೂಚಿಸುವಷ್ಟು ಜೋರಾಗಿ ಮುಂ ದರಿಸಲು ನನ್ನಲ್ಲಿ ಧೈರ್ಯವಿಲ್ಲ. ಸೇಲಂ ಜಿಲ್ಲೆಯಲ್ಲಿ ಮದ್ಯಪಾನ ನಿರೋಧ ಮಾಡಲೆಳಸಿ ದ್ದೇವೆ. ಇದು ಜಯಶೀಲವಾಗುವಂತೆ ಸರ್ವರೂ ಪ್ರಯತ್ನಿಸಬೇಕಾಗಿದೆ. ಮದ್ಯದಿಂದ ದೊರೆವ ಹಣವನ್ನು ನಮಗೆ ಒದಗಿಸುವುದರಲ್ಲಿ ಸೇಲಂ ಜಿಲ್ಲೆಯು ದ್ವಿತೀಯ ಸ್ಥಾನದಲ್ಲಿ ಪ್ರತಿಷ್ಠೆಹೊಂ ದಿದೆ! ಈ ಸುಂಕದ ಬೊಬಲಗನ್ನು ನಾವು ಹೇಗೂ ತುಂಬಿಸಬೇಕಾಗಿದೆ. ವ್ಯಯವನ್ನು ಇಳಿಸಬೇಕು. ಸ್ವೇಚ್ಛೆಯಿಂದ ಸರ್ವರೂ ಕಲ ಬನ್ನು ಇಳಿಸಿಕೊಳ್ಳಬೇಕು. ಜನತೆಗೆ ಹಿತ ಸಾಧನೆ ಮಾಡುವುದಕ್ಕಾಗಿ, ಜನರು ಸ್ವಲ್ಪ ತ್ಯಾಗಮಾಡುವುದೆಂದು ನಂಬಿದ್ದೇನೆ. ಹೆಂಡ ತಯಾರಿಸುವವರಿಗೆ ಇದರಿಂದ ಸಂಕಷ್ಟವಾದೀ ತಾಗಿಯೂ ತಿಳಿದೇ ಇರುವೆನು. ಟ್ರೇಮುಗಳೂ ರೈಲುಗಾಡಿಗಳೂ ಮೊದಲು ಸ್ವಂಚಾರಕ್ಕೆ ದೊರೆ ತಾಗ, ಗಾಡೀವಾಲರಿಗೆ ಸಂಕಷ್ಟವಾಗಿಲ್ಲವೆ? ಜನರ ಹಿತವರ್ಧನೆಗಾಗಿ 'ಮದ್ಯಪಾನವು ನಿರ್ಮೂಲನ ಹೊಂದಲೇ ಬೇಕಾಗಿದೆ. ಸೇ ಲಂನಲ್ಲಿ ಏನಾಗುವುದೋ ಅದರ ಪರಿಣಾಮ ನೋಡಲು ಇಡೀ ದೇಶವು ಕಣ್ತೆರೆದು ಕಾಯು ತ್ತಲಿದೆ ಜನಹಿತವು ಹೃದಯದಲ್ಲುಳ್ಳವರು ಈ ಸಾಧನೆಯಲ್ಲಿ ನಮಗೆ ನೆರವಾಗದಿರರು.

ಅಂಡಮಾನದ ಉಪವಾಸಿ ಕೈದಿಗಳು

೧೦ನೇ ಪುಟವನ್ನು ನೋಡುವುದು

ಉಪವಾಸವಾಗಿರುವಾಗ ತಾವೇನೂ ಮಾಡು ವುದಿಲ್ಲವೆನ್ನಲು ಕಾಂಗ್ರೆಸ್ ಪಕ್ಷದವರ "ರಾಜನಾಮೆ ಕೊಡಿರಿ" ಎಂದು ಕೂಗಿದರು ಬಂಗಾಳ ಸರಕಾರಕ್ಕೆ ಈ ಭಾಗದಲ್ಲಿ ಜವಾ ಬ್ದಾರಿಯಿಲ್ಲವೆ? ಎಂದ ಕೇಳಲು, "ಸದ್ಯಕ್ಕೆ ಇಲ್ಲ" ಎಂದುತ್ತರ ದೊರೆಯಿತು "ಉಪ ವಾಸಮಾಡಿದ ಕಾಪಲಿ ಕೈದಿಗಳ ಕೂಗಿಗೆ ಸರ ಕಾರವು ಶರಣು ಬರಬೇಕೆಂದು ಇಂತಹ ಸಂಭ ವಗಳುಂಟಾದರೆ, ಸರಕಾರವೇ ಕಷ್ಟವಾದೀತು ಇನ್ನೇನೆಲ್ಲ ಆಗುತ್ತದೆಯೋ ನೋಡಿ, ತಮ ಜವಾಬ್ದಾರಿಯೊಳಗೆ ಬಂದ ಕಾಪಲೆ, ಮುಂದ ಏನು ಮಾಡಬಹುದೆಂದು ಸರಕಾರವು ಆಲೋ ಚಿಸುವುದು ಇದು ವರೆಗೆ ಇಂಡಿಯಾ ಸರ ಕಾರದ ಆಲೋಚನೆಯೆ ನಡೆಯುತ್ತದೆ ಹೊರತು ಬಂಗಾಳ ಸರಕಾರಕ್ಕೆ ಈ ವಿಷಯವು ಬಂದಿಲ್ಲ ಹಾಗೆ ಬರುತ್ತಲೆ, ಅಗತ್ಯವಾದ ಅಪ್ಪಣೆ ಕೊಡು ವುದು ನಿಜ" ಎಂದೂ ಮಂತ್ರಿಗಳು ತಿಳಿಸಿದರು ಸಂಯುಕ್ತ ಪ್ರಾಂತ್ಯದ ಕೊಂಗ್ರೆಸ್ ಮಂತ್ರಿಗಳ ಈ ವಿಷಯವಾಗಿ ಇಂಡಿಯಾ ಸರಕಾರಕ್ಕೆ ಬರೆದು, ತಮ್ಮ ಪ್ರಾಂತ್ಯದ ಕೈದಿಗಳನ್ನು ಕೂಡಲೆ ಬಂಧವಿಮೋಚನೆಗೊಳಿಸಬೇಕೆಂದೂ, ಬಿಹಾ ರದ ೧೧ ಮಂದಿಯನ್ನು ಹೀಗೆಯೆ ಕೈದಿನಿಂದ ಬಿಡಬೇಕೆಂದೂ ಬಿಹಾರದ ಮಂತ್ರಿಗಳೂ ಇಂಡಿ ಯಾ ಸರಕಾರಕ್ಕೆ ಬರೆದುಕೊಂಡಿರುವರು ಉಪವಾಸವನ್ನು ತ್ಯಜಿಸಿರೆಂದು ಕೈದಿಗಳಿಗೆ ಕೊಂಗ್ರೆಸು ಮಂಡಲವು ಸಂದೇಶ ಕಳುಹಿ ಯಿದೆ.]

ಬೇಸಿಗೆಯಲ್ಲಿ ಟೀ ಯು ಅತ್ಯಾವಶ್ಯಕ



ಬಿಸಿಲಿನ ಬೇಗೆಯು ಅತಿಯಾಗಿರುವುದು. ನೀವೂ ಸೊಕ್ಕಿ ಸೊಪ್ಪಾಗಿರುವಿರಿ. ಟೀ ಯಿಂದ ಪಡೆಯು ಬಹುದಾದ ಶಕ್ತಿಯನ್ನು ಪಡೆಯಲು ಇದೇ ಸಕಾಲ. ಬೇಸಿಗೆಯಲ್ಲಿ ಟೀ ಯೇ ಸರ್ವೋತ್ಕೃಷ್ಟವಾದ ಪಾನ. ಅದು ನಿಮ್ಮ ದೇಹದಲ್ಲಿ ತಂಪನ್ನುಂಟುಮಾಡಿ ನರ ಗಳಿಗೆ ತ್ರಾಣವನ್ನು ಕೊಡುವುದು

ಇಂಡಿಯಾದ ಟೀ ಯು ತಂಪನ್ನೂ ತೃಪ್ತಿಯನ್ನೂ ಕೊಡುವುದು.

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿರಿ. ಶುಚಿಯಾಗಿರುವ ಮಣ್ಣಿನ (ಪಿಂಗಾಣಿ) ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ. ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗಾಗಿ ಒಂದು ಚಮಚ ಉತ್ತಮವಾದ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ ನೀರು ಕುದಿಯ ಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ. ಐದು ನಿಮಿಷ ಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ

I K 47

ವೈಸ್ರಾಯರ ಆಮಂತ್ರಣದ ಮೇ
ಗೆ ಮಹಾತ್ಮಾಜಿಯವರು ವೈಸ್ರಾಯರ ದಿಲ್ಲಿಯ
ಭವನದಲ್ಲಿ ಅವರ ಭೇಟಿಮಾಡಿದರು. (ಆಗೋ
ಸ್ಟ ತಾ. ೪ರ ಪ್ರಾತಃಕಾಲ)

ಈ ಭೇಟಿಯ ಕುರಿತು ವಾರ್ತೆಗಳು ಗುಟ್ಟಿನಲ್ಲಿಡಲಾಗಿದ್ದವು. ಆದರೆ ಮೊನ್ನೆ ದಿನ ಮಹಾತ್ಮಾಜೀಯವರು ವಾರ್ಧಾದಿಂದ ದಿಲ್ಲಿಗೆ ಹೊರಡಲು ಅದರ ಕುರಿತು ಸಂದೇಹಗಳು ಉಂಟಾಗಿದ್ದವು. ಮಹಾತ್ಮಾಜೀಯವರು ಸ್ವಲ್ಪ ದೇಹಾ



ಲೋರ್ಡ್ ಲಿನ್‌ಲಿಸ್‌ಗೋರವರು

ಗಾಂಧಿ-ಲಿನ್‌ಲಿತ್‌ಗೊ ಭೇಟಿ

ಲಸ್ಯದಲ್ಲಿದ್ದಾಗ್ಯೂ ಈ ಭೇಟಿಗೆ ಹೋದುದರಿಂದ ಏನೂ ಮಹತ್ವದ ವಿಚಾರಗಳು ಮಾತನಾಡಲ್ಪಟ್ಟಿವೆಂದು ಊಹೆಗಳುಂಟಾಗಿವೆ

ಈ ಭೇಟಿಯ ದೆಸೆಯಿಂದ ಅನೇಕ ಪ್ರಾಮುಖ್ಯ ಘಟನೆಗಳು ನಡೆಯಲಿವೆ ಎಂದು ಅಫಿಸಿಯಲ್ ಮತ್ತು ನಾನ್ ಅಫಿಸಿಯಲ್ ವಾತಾವರಣಗಳಲ್ಲಿ ಊಹೆಗಳುಂಟಾಗಿವೆ ಮುಂದಕ್ಕೆ ಅಧಿಕಾರ ವರ್ಗದೊಡನೆ ಸಂಪರ್ಕವು ಹೆಚ್ಚಬಹುದೆಂಬ ಊಹನೆಗಳಿವೆ

ಈ ಬೇಟಿಯ ಅವಧಿಯು 80 ನಿಮಿಷಗಳು ಇಕ್ಕಡೆಗಳಲ್ಲೂ ಒಳ್ಳೆ ನಮ್ರಭಾವ,ಸ್ನೇಹಭಾವವೂ ಪ್ರಕಟಿಸಲ್ಪಟ್ಟಿತ್ತೆಂದು ತಿಳಿದುಬರುತ್ತದೆ

ಖಾನ್ ಅಬ್ದುಲ್ ಘಫರ್ ಖಾನರು ಗಡಿನಾಡನ್ನುಪ್ರವೇಶಿಸಬಾರದಾಗಿ ಇರುವ ನಿರ್ಬಂಧದ ಕುರಿತು, ಮಾತನಾಡುವರೆ, ಮಹಾತ್ಮಾಜಿಯರು,ವೈಸ್ರಾಯರನ್ನುಕಾಣಲು ಆಮಂತ್ರಣವಿಲ್ಲದೆ ಸಿದ್ಧವಿದ್ದರೆಂದು ತಿಳಿದುಬರುತ್ತದೆ ಅಲ್ಲದೆ, ಮಹಾತ್ಮಾಜಿಯವರು, ಗಡಿನಾಡನ್ನು ಪ್ರವೇಶಿಸುವ ಕುರಿತು, ವೈಸ್ರಾಯರೊಡನೆ ಮಾತನಾಡಬೇಕಾಗಿ ಗಾಂಧಿಜಿಯವರಿಗೆ ಆಲೋಚನೆಯು ಈ ಮೊದಲೆ ಇದ್ದಿತು

ಈ ಭೇಟಿಯು, ವೈಸ್ರಾಯರು ಪ್ರವಾಸದಲ್ಲಿರುವಾಗ ಮಹಾತ್ಮಾಜಿಯವರಿಗೆ, ಕಳುಹಿಸಿದ ಆಮಂತ್ರಣದ ಪರಿಣಾಮವೆಂದು ತಿಳಿದುಬರುತ್ತದೆ. ಗಾಂಧಿಜಿಯವರೊಡನೆ ಮೈತ್ರಿ ಬೆಳೆಯುಸುವುದು, ಇದರ ಉದ್ದೇಶವು

ವೈಸ್ರಾಯರು, ಗಾಂಧಿಜೀಯವರ ಮಾ

ಗಡಿನಾಡಿನ ಗಾಂಧಿ–ಖಾನ್ ಅಬ್ದುಲ್ ಘಫರ್ ಖಾನರು

ತುಗಳನ್ನು ಅತ್ಯಂತ ವಿನಯಭಾವದಿಂದ ಲಾಲಿಸಿ, ಖಾನ್ ಅಬ್ದುಲ್ ಘಫೂರ್ ಖಾನರೂ ಗಾಂಧಿಜೀಯವರೂ, ಗಡಿನಾಡನ್ನು ಪ್ರವೇಶಿ



ಮಹಾತ್ಮಾ ಗಾಂಧಿಯವರು

ಸುವ ಕುರಿತು, ಗಡಿನಾಡಿನ ಗವರ್ನರರೊಡನೆ ಪತ್ರವ್ಯವಹಾರ ಬೆಳೆಯುಸುವೆನೆಂದು ವಾಗ್ದಾನವಿತ್ತಿರುವರು

ಈ ಬೇಟಿಯು ಸರ್ವಸಾಮಾನ್ಯವಾಗಿದ್ದು ಅಲ್ಲಿ ಮುಖ್ಯವಾಗಿ ಮಾತನಾಡಲ್ಪಟ್ಟ ವಿಷಯ. ವೆಂದರೆ ಗ್ರಾಮಾಭ್ಯುದಯ ಮತ್ತು ಮಹಾಜನಗಳ ಸ್ಥಿತಿಗತಿಗಳ ಉದ್ಧಾರ

ಮಹಾತ್ಮಾಜಿಯವರು ದಿಲ್ಲಿಯಲ್ಲಿ ಒಂದು ವಾರದ ತನಕ ಇರುವರೆಂಗಿ ತಿಳಿದುಬರುತ್ತದೆ

ಅಗ್ನಿಮಾಂದ್ಯ.

ಅಜೀರ್ಣಾವಸ್ಥೆಗಳಲ್ಲಿ ಒಂದಾದಅಗ್ನಿಮಾಂದ್ಯವನ್ನು ಮಾಯಾವಿ ತರದಲ್ಲಿ ಗುಣಪಡಿಸಲು ಸಾಧ್ಯವಿಲ್ಲ ಅದಕ್ಕೆ ತಕ್ಕ ಚಿಕಿತ್ಸೆಯು ನಡೆಯಬೇಕು ಸಮಾಧಾನವನ್ನು ತಾಳಿ ಆ ಚಿಕಿತ್ಸೆಯನ್ನು ನಡೆಯಿಸಿದರೆ, ಆಗ ಗುಣವು ದೊರಕುವುದು

ಖಂಡಿತವಾಗಿಯೂ ಗುಣಪಡಿಸುವ ಜನಜನಿತವಾದ ಚಿಕಿತ್ಸೆಯೆಂದರೆ 'ಮೆಕಿನ್ ಬ್ರಾಂಡ ಸ್ಟೋಮಕ್ ಪೌಡ'ರೆನ್ನಬಹುದು ಅಗ್ನಿಮಾಂದ್ಯವನ್ನು ಅನುಭವಿಸುತ್ತಿರುವ ರೋಗಿಗಳಿಗೆ ಬೇಕಾದ ಔಷಧಿಗಳು ಇದರಲ್ಲಿ ಒಳ್ಳೇ ದಾಮಾಶಾಯಿಯಲ್ಲಿ ಕೂಡಿವೆ ಅಗ್ನಿಮಾಂದ್ಯಕ್ಕೆ ಜೀರ್ಣವು ಸರಿಯಾಗಿ ನಡೆಯುವಂತೆ ಮಾಡುವುದು ಅಗತ್ಯವು ಮೆಕ್ಲಿನ್ ಬ್ರಾಂಡ್ ಹುಡಿಯಿಂದ ಈ ಮಹದುಪಕಾರವನ್ನು ಹೊಂದಬಹುದು ಅದ ಜೀರ್ಣವನ್ನುಂಟು ಮಾಡಲು ಖಾತ್ರಿ ಗುಣಕಾರಿಯು

ಜೀರ್ಣಕ್ಕೆ ಬೇಕಾದ ರಸಗಳು ಹೊಟ್ಟೆಯಲ್ಲಿ ಉಂಟಾಗದಿರಲು ಮೆಕಿನ್ ಬ್ರಾಂಡ್ ಹುಡಿಯು ಕೋಶದ ಅಂಗಗಳೊಡನೆ ಸಹಕರಿಸಿ, ಜೀರ್ಣವನ್ನು ಸರಿಪಡಿಸುವುದು

ಅಗ್ನಿಮಾಂದ್ಯವನ್ನು ಅನುಭವಿಸುತ್ತಿರುವವರು ಒಂದು ವಾರ ಯಾ ಎರಡು ವಾರಗಳ ತನಕ ಮೆಕ್ಲಿನ್ ಬ್ರಾಂಡ್ ಹುಡಿಯನ್ನು ತಪ್ಪದೆ ಸೇವಿಸಬೇಕು ಆ ಅವಧಿಯಲ್ಲಿ ಅವರಿಗೆ ಪ್ರಗತಿಯೂ ಗುಣವು ಕಾಣಿಸುವುದು ಅದರಿಂದ ಅವರು ಆಶ್ಚರ್ಯಚಕಿತರಾಗಿ ಸಂತೋಷ ಹೊಂದುವವರಾಗುವರು. ಖಾತ್ರಿಯಾದ ಮೆಕ್ಲಿನ್ ಬ್ರಾಂಡನ್ನು ಪಡೆಯುವ ಸಲುವಾಗಿ ಜಾಗರೂಕರಾಗಿರಿ ಪೆಟ್ಟಿಗೆಯ ಮೇಲೂ ಬಾಟ್ಲಿಯ ಮೇಲೂ ಕೆಂಪು ಮುದ್ರೆಯ ಮೇಲೆ



ಎಂಬ ಸಹಿ ಇರುವಂತೆ ಜಾಗರೂಕರಾಗಿರಿ

ಇದು ಚಿಲ್ಲರೆಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಜೆ ಎಲ್ ಮೊರಿಸನ್, ಸನ್ ಎಂಡ್ ಜೋನ್ಸ್
(ಇಂಡಿಯಾ) ಲಿಮಿಟೆಡ್
ಸ್ಟೆಂಡಾರ್ಡ್ ಬಿಲ್ಡಿಂಗ್ ಹೊರ್ನ್ಬಿ ರೋಡ್ ಮುಂಬಯಿ



ಲೈಫ್‌ಬಾಯ್
ವಿಷಕ್ರಿಮಿಗಳಿಂದ
ರಕ್ಷಿಸುತ್ತದೆ.

ಲೈಫ್‌ಬಾಯ್‌ನಿಂದ
ಅವನ
ಆರೋಗ್ಯವನ್ನು ಕಾಪಾಡಿಕೊಳ್ಳಿರಿ.

ಮಕ್ಕಳು ಆಟವಾಡುವಾಗ ಕೈ ಮತ್ತು ಕಾಲುಗಳಲ್ಲಿ ವಿಷಕ್ರಿಮಿಗಳಿಂದ ಕೂಡಿದ ಧೂಳು ಇರುತ್ತೆಂಬುದನ್ನು ನೀವು ಯಾವಾಗಲಾದರೂ ಯೋಚಿಸಿದ್ದೀರೋ? ವಿಷಕ್ರಿಮಿಗಳಿಗೆ ಮಣ್ಣೇ ಆಶ್ರಯವೆಂಬುದನ್ನು ನೀವು ತಿಳಿದಿರಬೇಕು. ಆದ್ದರಿಂದ ನಿಮ್ಮ ಮಕ್ಕಳು ಯಾವಾಗಲೂ ಕೈ ಕಾಲು ಮತ್ತು ಮುಖವನ್ನು ತೊಳೆಯುವಾಗ ಲೈಫ್‌ಬಾಯನ್ನೇ ಉಪಯೋಗಿಸುವಂತೆ ನೋಡಿಕೊಳ್ಳಿರಿ. ಅದರ ಕೆನೆಯಂಥಾ ವಿಷಾಪಹಾರಿಯಾದ ನೊರೆಯು ಬಹುಬೇಗ ವಿಷಕ್ರಿಮಿಗಳನ್ನೂ, ಕೊಳೆಯನ್ನೂ ಹೋಗಲಾಡಿಸಿ ಯುವಕರನ್ನು ಲಾಯಖ್ ಆಗಿರುವಂತೆ ಮಾಡುತ್ತದೆ. ಲೈಫ್‌ಬಾಯನ್ನೇ ಉಪಯೋಗಿಸುವುದರಿಂದ ಅವರು ಚೆನ್ನಾಗಿ ಆರೋಗ್ಯವಾಗಿರುವುದನ್ನು ನೀವೇ ತಿಳಿಯಬಹುದು.

ನೆಲದಮೇಲೆ ಆಡುವುದಕ್ಕೆ ಮೊದಲೆಂಬ ಸ್ವಾಭಾವಿಕವಾಗಿ ಆಟವಾಡುವುದಕ್ಕೆ ನೆಲವೇ ಉತ್ತಮವಾದ ಸ್ಥಳವೆಂದು ಮಕ್ಕಳಿಗೆ ಗೊತ್ತು ಆದ್ದರಿಂದ ಅವರು ನೆಲದಮೇಲೆ ಆಡುವುದರಿಂದ ತಡೆಯುವುದು ಅಪ್ರಯೋಜನವಾದ್ದು ಇದಕ್ಕಾಗಿ ವ್ಯಥೆಪಡಬೇಕಾದ್ದಿಲ್ಲ ಪ್ರತಿದಿನವೂ ಲೈಫ್‌ಬಾಯ್ ನಿಂದ ನೆಲವನು ತೊಳೆಯಿರಿ ಇದರಿಂದ ಅವರು ವಿಷಕ್ರಿಮಿಗಳಿಂದ ಪಾರಾಗುತ್ತಾರೆ



ಲೈಫ್‌ಬಾಯ್ ಸಾಬೂನು
LIFEBUOY SOAP
ಇಂಡಿಯಾದಲ್ಲೇ ವನಸ್ಪತಿಗಳ ಶುದ್ಧವಾದ ಎಣ್ಣೆಯಿಂದ ತಯಾರಿಸಿದ್ದು.

LEVER BROTHERS (INDIA) LIMITED

“ಲೋಕಮಾನ್ಯ ತಿಲಕ ಮಹಾರಾಜ ಕೀ ಜೈ”

ಎಂಬ ಘೋಷವು, ಇದೇ ಕಳೆದ ಆಗೋಸ್ಟು ತಾ. 1ರಲ್ಲಿ ಸಮಸ್ತ ಭಾರತದಲ್ಲಿ ಕೇಳಿಸಿತು.

‘ಲೋಕಮಾನ್ಯರು ಆಧುನಿಕ ಭಾರತದ ಕರ್ತರು’. ಮಹಾತ್ಮಾ ಗಾಂಧಿಜಿ

‘ಸ್ವರಾಜ್ಯವು ನನ್ನ ಜನ್ಮಹಕ್ಕು—ಅದನ್ನು ನಾನು ಪಡೆಯುವೆನು’

—ಲೋಕಮಾನ್ಯ ತಿಲಕ.

‘ಅಂದು ಸಮಸ್ತ ಭಾರತವು ಬೆಚ್ಚಿಬಿದ್ದಿತು. ಅವರಿಗೆ ಜುಮ್ಮೆನಿಸಿತು’ — ತಿಲಕರ ಮರಣವಾರ್ತೆಯನ್ನು ಕೇಳಿ.

ಲೋಕಮಾನ್ಯ ತಿಲಕರು ಮಾನವರಲ್ಲಿ ಮಾರ್ತಾಂಡರು; ಚಿರಸ್ಮರಣೀಯರು. ತಮಗಾಗಿ ಪರಿಶ್ರಮಿಸಿ, ಮೃತಪಟ್ಟರೆಂದು ಜನತೆಯು ಅವರ ಸ್ಮರಣೆಯನ್ನು ಮಾಡುವರು. ಈ ತರದ ಮಾನವರನ್ನು ಮೃತರಾದರೆಂದು ಹೇಳಬರುವುದಿಲ್ಲ. ಕಾರಣ, ಅವರ ಸತ್ವವು ಇಂದಿಗೂ ನಮ್ಮಲ್ಲಿ ನೆಲೆಸಿಂತಿರುವುದು. ಲೋಕಮಾನ್ಯರ ಧೈರ್ಯ, ಅವರ ಸರಳತೆ, ಅವರ ಕಾರ್ಯಾನುರಾಗ, ಅವರ ದೇಶಭಕ್ತಿ—ಇವೆಲ್ಲಾ ನಮ್ಮಲ್ಲಿ ಸೇರಿ, ಲೋಕಮಾನ್ಯರಿಗಾಗಿ ಒಂದು ಸ್ಮಾರಕವು ರಚನೆಯಾಗಬೇಕು. ಹಿಂದೂದೇಶದ ಸ್ವಾತಂತ್ರ್ಯ ಹೋರಾಟದ ವೀರರೆನಿಸಿದ, ೧೭ ವರ್ಷಗಳ ಹಿಂದೆ ಮೃತರಾದ ಲೋಕಮಾನ್ಯರ ಪುಣ್ಯತಿಥಿಯು, ಕಳೆದ ಆದಿತ್ಯವಾರ ಸಮಸ್ತ ಭರತಖಂಡದಲ್ಲೆಲ್ಲಾ ಅತ್ಯಂತ ಪೂಜ್ಯಭಾವದಿಂದ ಆಚರಿಸಲ್ಪಟ್ಟಿತು.

ಮಹಾ ವಿದ್ವಾಂಸರು.

ಲೋಕಮಾನ್ಯರು ವಿದ್ವಾಂಸರು, ಆದರೆ, ಅನಿವಾರ್ಯದಿಂದ ರಾಜಕೀಯ ಪುರುಷರಾದರು. ದೇಶದ ಅಧೀನತೆಯು ಅವರ ಮನಸ್ಸಿಗೆ ನಾಟಿ, ಅದು ಅವರನ್ನು ಸ್ವಾಭಾವಿಕ ಮಾರ್ಗವನ್ನು ಬಿಟ್ಟು ದೇಶಸೇವೆಯನ್ನು ಆಚರಿಸುವಂತೆ ಮಾಡಿತು. ಹೀಗೆ ಅವರು ರಾಜಕೀಯದಲ್ಲಿ ಕಾಲಿಟ್ಟಿರದಿದ್ದರೆ, ಅವರ ಅನೇಕ ವಿದ್ವಾಂಸನೀಯ ಚಟುವಟಿಕೆಗಳು ನಿಂತುಹೋದುವು. ಆದರೆ, ಸರಕಾರವು ಈ ಕುರಿತು ಅವರ ಸಹಾಯಕ್ಕೆ ಬಂದಿತ್ತೆ—ಅವರನ್ನು ಸಾರ್ವಜನಿಕ ಕಾರ್ಯರಂಗದಿಂದ ನಿವೃತ್ತಿಗೊಳಿಸಿತ.

ಕಾರಾಗೃಹದ ಕೋಣೆಯಲ್ಲಿ ಅವರು ವಿದ್ವಾಂಸನೀಯ ಕಾರ್ಯಗಳನ್ನು ನಡೆಯಿಸಿದರು. ಮಂಡಲೆಯು, ಇತರ ಕಡೆಗಳಲ್ಲಿನ ಅವರ ಹತ್ತು ವರ್ಷಗಳ ಕಾರಾಗೃಹವಾಸದಲ್ಲಿ ನಡೆದ ಸಾಹಿತ್ಯಕಾರ್ಯಗಳ ಕೀರ್ತಿಯು ಅವರ ರಾಜಕೀಯ ಕೀರ್ತಿಯು ಕುಂದಿದರೂ ಬೆಳಗುವುದು. ಕಾರಾಗೃಹವಾಸದಲ್ಲಿ ಅತ್ಯಂತ ಶ್ರೇಷ್ಠವೆನಿಸುವ ಗ್ರಂಥಗಳನ್ನು ಬರೆದರು.

ಮುಂಬ್ಬಾಯಲ್ಲಿ ವಿದ್ವಾಂಸರ ವಿಶೇಷ ಕೂಟವೊಂದು ಜರಗಿತು. ಪಾರ್ಸಿ ಮಹಾಶಯರೊಬ್ಬರು ಅಧ್ಯಕ್ಷರಾಗಿದ್ದರು. ಅಲ್ಲಿ ಲೋಕಮಾನ್ಯರು ಹಿಂದೀಯ ಸಂಸ್ಕೃತಿಯ ಕುರಿತು, ಅವರು ಮಾಡಿದ ಭಾಷಣವು ಸ್ವಾರಸ್ಯಮಯವಾಗಿದ್ದು, ವಿದ್ವಾಂಸರ ತಲೆತೂಗಿಸಿತು. ಆಗ ಅಂದಿನ ಅಧ್ಯಕ್ಷರು, “ತಿಲಕರೇ, ನಿಮ್ಮ ಬುದ್ಧಿ ಸಾಮರ್ಥ್ಯವು ಹಾಳಾಗುತ್ತಿದೆ. ಇಷ್ಟು ಮಹತ್ತಿಂದ ಬುದ್ಧಿವಂತಿಕೆಯಿಂದ ಚರಿತ್ರೆಯಲ್ಲಿ ಸಂಶೋಧನಾ ಕಾರ್ಯವನ್ನು ನಡೆಸಲು ನೀವು ತಕ್ಕವರು. ಅದರಲ್ಲಿ ನೀವು ಉದ್ಯುಕ್ತರಾದರೆ, ಜಗತ್ಪಸಿದ್ಧವಾದ ಕೀರ್ತಿಯನ್ನು ಪಡೆಯಬಹುದು. ನೀವೇಕೆ ಈ ರಾಜಕೀಯದ ಕೆಸರಿನಲ್ಲಿ ಸಿಕ್ಕಿಕೊಂಡಿರುವಿರಿ” ಎಂದು ಹೇಳಲು, ‘ಭಾರತಮಾತೆಯು ಗೊಡ್ಡು ಸ್ತ್ರೀಯಲ್ಲ. ಸ್ವರಾಜ್ಯವು ಬಂದೊಡನೆ ನನ್ನಂತೆ ಸಾವಿರಾರು ವಿದ್ವಾಂಸರು ಉಂಟಾಗುವರು. ಇಂದು ನಮ್ಮಲ್ಲಿ ಪ್ರತಿಯೊರ್ವನೂ ದೇಶದ ರಕ್ಷಣೆಗೆ ಹೋಗಬೇಕು. ನಮ್ಮ ಯೋಗ್ಯತೆ ಶಕ್ತಿಗಳೆಲ್ಲಾ ಸ್ವರಾಜ್ಯಸಾಧನೆಗೆ ಸಲ್ಲತಕ್ಕದ್ದು’ ಎಂದು ಉತ್ತರವಿತ್ತರು.

ಲೋಕಮಾನ್ಯ ಬಾಲ ಗಂಗಾಧರ ತಿಲಕರು.

ಅತ್ಯಂತ ಶ್ರಮಜೀವಿಗಳು.

ಮುಂಬ್ಬಾಯಲ್ಲಿ ‘ರಾಷ್ಟ್ರಮಾತಾ’ ಹೊರಡಿಸಿದಾಗ, ಕುರ್ಚಿ, ಮೇಜು ಮತ್ತು ಇತರ ಅವಶ್ಯಕತೆಗಳ ಕುರಿತು ಮಾತು ಬಂತು.

ಆಗ ತಿಲಕರು ‘ನಾನು ‘ಕೇಸರಿ’ಯನ್ನೂ ಮತ್ತು ‘ಮರಾಟ’ ಪತ್ರಿಕೆಯನ್ನೂ ಹೊರಡಿಸಿದಾಗ, ನಮ್ಮೊಡನೆ ಸಂಪಾದಕೀಯ ಗೌರವಕ್ಕೆ ತಕ್ಕುದೆನಿಸುವ ಯಾವತ್ತು ಸೌಕರ್ಯಗಳಿರಲಿಲ್ಲ. ಪತ್ರಿಕೆಗಳಿಂದ ನಮಗೊಂದು ಪೈಸಂಪಾದನೆಯೂ ಕೂಡ ಆಗುತ್ತಿರಲಿಲ್ಲ. ನಮ್ಮ ಹಾಸಿಗೆಗಳನ್ನು ಸುತ್ತಿ ಅವುಗಳನ್ನು ನಾವೇ ಮೇಜುಗಳನ್ನಾಗಿ ಉಪಯೋಗಿಸುತ್ತಿದ್ದೆವು. ಬರಿ ತಳ್ಳಗಾದ ಕಾಗದ ಮೇಲೆ ಬರೆಯಲಾದ ನಮ್ಮ ಲೇಖಗಳು ಬಹಳ ಪ್ರಭಾವವುಳ್ಳದಾಗಿದ್ದವು.

ಭೂರೆಕ್ರೆಸಿಗೆ ಎಚ್ಚರಿಕೆ.

‘ಸಮಸ್ತ ಸಭೆಯನ್ನು ವಶಪಡಿಸುವ ಹಕ್ಕು ನಮಗಿದೆ. ನಾವು, ನಿಮಗೆ ನಮ್ಮೊಡನೆ ಸ್ಥಳ ಕೊಡುವುದು—ಅದೊಂದು ರಿಯಾಯಿತಿ ಎಂದು ನೀವು ಭಾವಿಸಬೇಕು. ಬೇಗನೆ ಇಲ್ಲಿಂದ ಹೊರ ನಡೆಯುವಂತೆ.

‘ಇಷ್ಟರ ತನಕ ನೀವು ಅಧಿಕಾರದಲ್ಲಿದ್ದು ಆದರಿತ ನಡೆಯಿಸಿದಿರಿ. ಮುಂದಕ್ಕೆ ನಾವು ನಿಮ್ಮನ್ನು ಅಲ್ಲಿರಗೊಳ್ಳಲಾರೆವು.

‘ನಾವಿನ್ನು ಈ ಸಭೆಯ ಒಡೆಯರೆಂದು ನೀವು ಕ್ರಮೇಣ ಭಾವಿಸತಕ್ಕದು. ಹಾಗಾದರೆ ಮಾತ್ರ ಸಂಧಾನವಾಗಬಹುದು,—ಇಲ್ಲದಿದ್ದರೆ—ಏನೂ ಇಲ್ಲ.

ಈ ಎಚ್ಚರಿಕೆಯ ಮಾತುಗಳು, ಮೃತಪಡುವ ೩ ವರ್ಷದ ಹಿಂದೆ, ಲೋಕಮಾನ್ಯರು ಭೂರೆಕ್ರೆಸಿಗೆ ಕೊಟ್ಟುದಾಗಿರುತ್ತವೆ. ಇದೇ ಇಂದಿನ ಕಾಂಗ್ರೆಸ್ ಕಬಿನೆಟ್ಟ ಆಕರಣೆಯಾಗಿರುತ್ತದೆ.

ಅಸಹಕಾರ ಚಳವಳಿದ ಮೂಲಪುರುಷರು.

ಲೋಕಮಾನ್ಯರು ಅಸಹಕಾರ ಚಳವಳವನ್ನು ಹೊರಡಿಸಿದ ಮೂಲ ಪುರುಷರು. ಅದ್ದರಿಂದ ಪ್ರಥಮ ಅಸಹಕಾರ ಚಳವಳವು ಅವರ ಪುಣ್ಯತಿಥಿಯ ದಿನವಾಗಿ ಪ್ರಾರಂಭಿಸಿದುದರಲ್ಲಿ ಅರ್ಥವಿದೆ. ೧೯೦೭ರಲ್ಲಿ ಇದೇ ತರದ ಒಂದು ಚಳವಳವನ್ನು ಹೂಡಬೇಕಾಗಿ ಅವರು ಆಲೋಚಿಸಿದ್ದರು.

‘ನಮ್ಮ ಆಡಳಿತದ ಕೆಲಸವನ್ನು ಕೆಲವೆ ಮಂದಿ ಅಂಗ್ಲೇಯರು ನಡೆಯಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದನ್ನು ಅವರು ನಮ್ಮ ಸಹಾಯವಿಲ್ಲದೆ ನಡೆಯಿಸುತ್ತಿದ್ದಾರೆ. ಅನ್ಯ ಸರಕಾರದೊಡನೆ ಸಹಕರಿಸಬಾರದಾಗಿ ಆಲೋಚಿಸುವಷ್ಟು ತ್ಯಾಗಬುದ್ಧಿಯು ನಿಮ್ಮಲ್ಲಿರುವುದಿಲ್ಲವೋ? ಇದು “ಬೊಯ್ಕೋಟ್-ಬಹಿಷ್ಕಾರ”ವು. ಇದೇ ನಮ್ಮ ರಾಜಕೀಯ ಅಸ್ತ್ರವು ಎಂದು ಆಗ ಅವರು ಹೇಳಿದ್ದರು. ಆ ತರದ ಚಳವಳವು ನಂತರ ಮಹಾತ್ಮಾಜೀಯವರಿಂದ ಪ್ರಾರಂಭಿಸಲ್ಪಟ್ಟು ನಡೆಸಲಾಯಿತು.

ಕಂದಾಯ ವಸೂಲು ಮಾಡಲು, ಶಾಂತಿರಕ್ಷಣೆ ಮಾಡಲು, ನಾವಿನ್ನು ಅವರಿಗೆ ಸಹಾಯಕರಾಗಬಾರದು. ಭಾರತ ರಕ್ತದಿಂದ, ಭಾರತ ಹಣದಿಂದ, ಹಿಂದೂ ದೇಶದ ಹೊರದೇಶಗಳಲ್ಲಿ ನಾವು ಅವರಿಗೋಸ್ಕರ ಕಾದಾಡಬಾರದು. ನ್ಯಾಯ ಸ್ಥಾನಗಳನ್ನು ನಡೆಯಿಸಲು ನಾವು ಅವರೊಡನೆ ಸಹಕರಿಸಬಾರದು.

‘ನಮ್ಮದೆ ನ್ಯಾಯಸ್ಥಾನಗಳು (ಕೋರ್ಟುಗಳು) ಸ್ಥಾಪನೆಯಾಗಬೇಕು. ನಂತರ ಸಮಯ ಬಂದೊಡನೆಯೇ ನಾವು ಕಂದಾಯವನ್ನು ತೆರಬಾರದು. ನಮ್ಮಲ್ಲಿನ ಐಕ್ಯದಿಂದ ಇದನ್ನು ಸಾಧಿಸುವುದು ಅಸಾಧ್ಯವೋ? ಹಾಗೆ ಆಗುವುದಾದರೆ ನಾಳೆಯಿಂದಲೆ ನೀವು ಸ್ವತಂತ್ರರಾಗಬಹುದು.’

ಮೇಲಿನದು—ಲೋಕಮಾನ್ಯರ ಅಸಹಕಾರವು. ಗಾಂಧೀಜೀಯವರು ನಡೆಯಿಸಿದ ಮೂರು ಅಸಹಕಾರ ಚಳವಳಿಗಳ ರೂಪವು ಇದೇ ಆಗಿರುತ್ತದೆ.

ರಾಷ್ಟ್ರೀಯ ಐಕ್ಯತೆಯ ಕುರಿತು.

ಲೋಕಮಾನ್ಯರು ಮುಸ್ಲಿಮ ವಿರೋಧಿಗಳೆಂಬ ಭಾವನೆ ಇರುವುದು. ಆದರೆ ಮುಸ್ಲಿಮರಲ್ಲಿ ಅವರಿಗಿರುವ ಪ್ರೀತಿಯ ಕುರಿತು ಅವರ ಅನೇಕ ಮುಸ್ಲಿಮ ಸ್ನೇಹಿತರ ಸಾಕ್ಷಿಯೆನಿಸುತ್ತದೆ. ಹಿಂದೂಮುಸ್ಲಿಮ ಐಕ್ಯದಲ್ಲಿ ನಂಬಿಕೆಯುಳ್ಳವರು, ರಾಷ್ಟ್ರೀಯ ಐಕ್ಯತೆಗೆ ಯಾವ ಅರ್ಪಣೆಯಾದರೂ ಚಿಂತಿಲ್ಲ ಎಂದು ಅವರ ಮತವಾಗಿತ್ತು.

೧೯೧೬ರಲ್ಲಿ ಲಕ್ನೋದಲ್ಲಿ ‘ಹಿಂದೂಗಳು ಮುಸ್ಲಿಮ ಸಹೋದರರಿಗೆ ಬಗ್ಗಿದುದು ಹೆಚ್ಚಾಗಿದೆ ಎಂದು ಹೇಳುತ್ತಿರುವರು. ಸಮಸ್ತ ಭಾರತದ ಹಿಂದೂಗಳ ಪರವಾಗಿ ನಾನಿಂದು ಮಾತನಾಡುತ್ತಿದ್ದೇನೆ. ಸ್ವರಾಜ್ಯವು ಮುಸ್ಲಿಮರಿಗೆ ಮಾತ್ರ ಸಿಕ್ಕಿದರೆ ನಾನದರ ಗಣನೆಮಾಡೆನು. ರಜಪೂತರಿಗೆ ಮಾತ್ರ ದೊರಕಿದರೆ ಗಣನೆಮಾಡೆನು. ಹರಿಜನರಿಗೆ ಮಾತ್ರ ದೊರಕಿದರೆ ಗಣನೆಮಾಡೆನು. ಆಗ ಈ ತ್ರಿಕೋಣಾಕೃತವಾಗಿರುವ ಹೋರಾಟವು ಮಾಯವಾಗುವುದು.’

ಸಾಮಾಜಿಕ ಸುಧಾರಣೆಯ ಕುರಿತು ತುಂಬಾ ಆತುರವು ಲೋಕಮಾನ್ಯರಲ್ಲಿತ್ತು.

ಒಂದಾನೊಂದು ದಿವಸ ಲೋಕಮಾನ್ಯರ ಮಿತ್ರರೊಬ್ಬರು ಅವರೊಡನೆ “ಸ್ವರಾಜ್ಯದ ಆಡಳಿತದಲ್ಲಿ ನಿಮಗೆ ಯಾವ ಅಧಿಕಾರಬೇಕು? ನೀವು ಪ್ರಧಾನ ಮಂತ್ರಿಗಳಾಗುವಿರೊ, ಬಹಿರ್ ವ್ಯವಹಾರದ ಮಂತ್ರಿಗಳಾಗುವಿರೊ” ಎಂದು ಕೇಳಲು —ತಿಲಕರು,—‘ಸ್ವರಾಜ್ಯದ ಆಡಳಿತದಲ್ಲಿ ನಾನು ಗಣಿತಶಾಸ್ತ್ರದ ಪ್ರೊಫೆಸರನಾಗುವೆನು—ಒಂದು ಸ್ವದೇಶೀ ಕಾಲೇಜಿನಲ್ಲಿ, ರಾಜಕೀಯದಿಂದ ನಿವೃತ್ತನಾಗಿ. ರಾಜಕೀಯವು ನನಗೆ ಸೇರುವುದಿಲ್ಲ. ಗಣಿತಶಾಸ್ತ್ರದ ಪುಸ್ತಕವನ್ನು ಬರೆಯುವೆನು. ದೇಶದ ಸ್ಥಿತಿಯು ಕೆಟ್ಟಿರುತ್ತದೆ. ಯಾರೂ ಅದಕ್ಕೋಸ್ಕರ ಏನೂ ಮಾಡುವುದಿಲ್ಲ, ಅದ್ದರಿಂದ ನಾನು ಈ ಶ್ರಮಗಳನ್ನು ವಹಿಸಿರುವೆನು.’

ಬರುವ ಅಧಿವೇಶನದೊಳಗೆ, ಅಸ್ಸಾಮು ಎಸೆಂಬ್ಲಿ ೩೦ ಮಂದಿ ಮುಸ್ಲಿಮ ಸದಸ್ಯರು ಕಾಂಗ್ರೆಸ್ ಕಡಾಗಿ ಸೇರಿ ಹಾಕುವರಾಗಿ ವರದಿಯಿದೆ.

ಜಿ. ಎಸ್. ಬಿ. ಸ್ಕೊಲರ್‌ಶಿಪ್ ಸಮಿತಿ, ಮುಂಬಾಯಿ.

೧೯೩೬-೩೭ನೇ ಕೊಡಲಾದ ವೇತನಗಳು.

ವಿದ್ಯಾರ್ಥಿಗಳ ಸಂಖ್ಯೆ.		ಕೊಡಲಾದ ರೂಪಾಯಿಗಳು.
ಮುಂಬಾಯಿ	೩೯	ರೂ. ೫೬೦—೦—೦
ಕಾರವಾರ	೩೦	,, ೬೦೫—೦—೦
ಅಂಕೋಲ	೨೩	,, ೨೫೩—೦—೦
ಕುಮುಟ	೬೪	,, ೫೧೩—೦—೦
ಹೊನ್ನಾವರ	೩೯	,, ೬೩೩—೦—೦
ಭಟ್ಕಲ	೫	,, ೧೦೩—೦—೦
ಶಿರ್ಸಿ	೮	,, ೧೧೫—೦—೦
ಮುಂಡಗೋಡು	೧	,, ೧೫—೦—೦
ಬಂಕಿಕೊಡ್ಲ	೨	,, ೩೪—೧೨—೮
ಹುಬ್ಬಳ್ಳಿ	೧	,, ೩೩—೦—೦
ಪೂನ	೧	,, ೩೩—೦—೦
ಉಡುಪಿ	೧೩	,, ೧೪೮—೦—೦
ಬಂಟವಾಳ	೬	,, ೧೫೦—೦—೦
ಮಂಗಳೂರು	೫	,, ೧೫೦—೦—೦
ಕುಂದಾಪುರ	೩	,, ೫೧—೦—೦
ಕಲ್ಯಾಣಪುರ	೧೦	,, ೩೧೦—೦—೦
ಕಾರ್ಕಳ	೮	,, ೨೧೬—೦—೦
ಕಾಸರಗೋಡು	೧	,, ೩೦—೦—೦
ಮೂಡಬಿದ್ರಿ	೨	,, ೩೫—೦—೦
ಮುಲ್ಕಿ	೫	,, ೧೧೬—೦—೦
	೨೦೫	ಒಟ್ಟು ರೂ. ೫೬೬೬—೦—೦

THEY WORK WHILE YOU REST.

Industrious Rupees are busy turning out more Rupees to savers in our bank But they do not jump in and go to work of their own free will. You have to start them and encourage them. The best way is to give them friends. Rupees are very sociable, and if they are lonely they do little. But if you keep adding more Rupees in to your account they do their best. And the more they work the more you can rest.

RESOURCES OF A CRORE. ESTD. 1906 CANARA BANK LIMITED.

ಅನುಕ್ರಮಣಿಕೆ.

[illegible]	
[illegible]	
[illegible]	
ಸ್ವದೇಶ	
ಮದ್ಯಪಾನ ನಿರೋಧ ೬ ಆಕ್ಷೇಪಗಳು	೧೦
ಸ್ಫುಟವಿಚಾರಗಳು	
ವರ್ತಮಾನ ಸಂಗ್ರಹ.—	
ವಿವಿಧ ಸಮಾಚಾರಗಳು.	೧೧
ಮಂಗಳೂರು ಸಮಾಚಾರ	೧೪
ತಾಲೂಕುಗಳಿಂದ	೧
ಕೃಷ್ಣಿದಾಯಕ ಆಹಾರದ ಕುರಿತು ತಿಳುವಳಿಕೆ	೧೪

ಸ್ವದೇಶಾಭಿಮಾನಿ.

ತಾ. ೬ನೇ ಶುಕ್ರವಾರ ಆಗೋಸ್ತು ೧೯೩೭

ಮದ್ಯಪಾನ ನಿರೋಧ ಮೂರು ಆಕ್ಷೇಪಗಳು

ಮಹಾತ್ಮಾಜಿಯವರು ಕಾಂಗ್ರೆಸ್ ಮಂತ್ರಿ ಮಂಡಲಗಳಿಗೆ ಮುಂದಣ ಕಾರ್ಯಕ್ರಮವನ್ನು ಕುರಿತಾಗಿ ರೂಪರೇಖೆಗಳನ್ನು ಹಾಕಿ ಕೊಟ್ಟಿರುವರು. ಅವುಗಳಲ್ಲಿ ಮದ್ಯಪಾನ ನಿರೋಧವು ಪ್ರಾಮುಖ್ಯವಾಗಿರುವ ಒಂದು ಸೂಚನೆಯಾಗಿದೆ.

ಸೇಲಂ ಜಿಲ್ಲೆಯು ಶ್ರೀ ರಾಜಗೋಪಾಲಾಚಾರ್ಯರ ಜನ್ಮಸ್ಥಾನ. ಅಲ್ಲೀ ಅವರ ಮಾತು ಅವರ ಜೀವನ ಪರಿಚಯವುಳ್ಳ ಜನತೆ. ಆದುದರಿಂದ ಅದೊಂದು ಜಿಲ್ಲೆಯಿಂದ ಮದ್ಯಪಾನ ನಿರೋಧವನ್ನು ಇತರ ಜಿಲ್ಲೆಗಳಿಗೆ ಆದರ್ಶವಾಗುವಂತೆ ಸಾಧಿಸಬೇಕೆಂದು ಅವರ ತೀರ್ಮಾನ. ಇಲಾಖೆಗಳು ಅವರಿಗೆ ಸಹಾನುಭೂತಿ ಕೊಟ್ಟಿವೆ. ಆದರೆ ಈ ಭಾಗದಲ್ಲಿ ಕೆಲವು ಆಕ್ಷೇಪಗಳೂ ಇವೆ. ಇವನ್ನು ವಿಚಾರ ಮಾಡಬೇಕಾಗಿದೆ.

ಮದ್ಯಪಾನದ ಆಸಕ್ತಿಯು ಜನರಲ್ಲಿ ಇರುವ ಕಾರಣವೆ ಸರಕಾರಕ್ಕೆ ಸುಂಕದ ರೂಪವಾದ ಹಣವು ಸಿಗುತ್ತದೆ. ಈಗ ನಿರೋಧವಾದ ಕೂಡಲೆ, ತೀರ್ವೆಯು ಮೊಬಲಗಿಗೆ ಎರಡನೆದಾಗಿರುವ ಈ ಆಯವು ತಪ್ಪುತ್ತದೆ. ಅದೊಂದು ಜಿಲ್ಲೆಯಿಂದಲೆ 11 ಲಕ್ಷ ರೂಪಾಯಿ ಕಡಮೆಯಾಗುವುದು. ಇದನ್ನೆಂತು ತುಂಬಿಸುವುದು? ಎಂಬುದು ಒಂದು ಆಕ್ಷೇಪ.

ಈ ಸುಂಕದ ಹಣಕ್ಕು ವಿದ್ಯಾ ಇಲಾಖೆಯ ಖರ್ಚಿಗೂ ಸಂಬಂಧ ಹಾಕಿದ್ದಾರೆ. ಹೇಗೆಂದು ಹೇಳಬರುವುದಿಲ್ಲ. ಕುಟುಂಬವೆಲ್ಲ ಕುಡಿಕರಾದರೆ, ಮಗು ಬರಹ ಕಲಿಯುವಂತಾಗಿದೆ. ಇದು ನ್ಯಾಯವೆ? ಚಂದವೆ? ಶಿಕ್ಷಣವನ್ನು ಕುಂದಿಸುವಂತಾದೀತು, ಈ ನಿರೋಧದಿಂದ ಎಂದು ಸಾರುವವರು ಹೆಚ್ಚಾಗಿದ್ದಾರೆ. ಇಲ್ಲವೆ, ಇಷ್ಟು ಹಣವನ್ನು ಮತ್ತಾವ ಕಡೆಯಿಂದ ತಂದೀರಿ? ಈಗ ತೆರಿಗೆಗಳನ್ನು ಇಳಿಸಬೇಕಾಗಿರುವಾಗ, ಇನ್ನೆಲ್ಲಿ ಯಾವ ತೆರಿಗೆಗಳನ್ನು ಹೆಚ್ಚಿಸುವಿರಿ? ಎಂದು ಆಕ್ಷೇಪ ಮಾಡುತ್ತಾರೆ.

ಶಿಕ್ಷಣದ ಖರ್ಚು ತನ್ನಂತೆಯೆ ಪೂರಯಿಸುವ ಹಾಗೆ ಶಿಕ್ಷಣದ ವಿಧಾನವಿರಬೇಕೆಂದು ಮಹಾತ್ಮರು ಹೇಳುವರು. ನಾವಂತೂ ಶಿಕ್ಷಣವು ಖರ್ಚಿಗೊಂದು ದಾರಿ ಎಂದೇ ಬಹು ದೂರ ನಡೆದವರು; ಅದರಿಂದೊಂದು ಉತ್ಪನ್ನ ಮಾಡಲು ಉಪಾಯ ತಿಳಿಯದವರಾಗಿದ್ದೇವೆ. ಶಿಕ್ಷಣದ ಖರ್ಚನ್ನು ಕಡಮೆ ಮಾಡಬಹುದು. ಅದಕ್ಕೆ ಉಪಾಯಗಳನ್ನು ಮಂತ್ರಿಗಳು ಹುಡುಕಿದರು. ಅನಾವಶ್ಯಕವಾದ ಉಪಕರಣಗಳು ಕಟ್ಟಡಗಳು, ವಸ್ತ್ರಗಳು, ಇಟ್ಟಂದಿ ಇವನ್ನು ಇಳಿಸಬೇಕಾಗಿದೆ. ಈ ಕಡೆಗೆ ಮಂತ್ರಿಗಳು ಗಮನ ಕೊಡುತ್ತಿರುವರು.

ಜನರ ಮದ್ಯಪಾನದಿಂದ ಸರಕಾರಕ್ಕೆ ದೊರೆವ ಸುಂಕವು ತಪ್ಪಿದರೂ ಜನರಲ್ಲಿ ಸುಖವೂ ಹಣವೂ ಹೆಚ್ಚುವುದೆಂಬುದು ಖಂಡಿತ. ಸುಖಕ್ಕೆ ಬೇರೆ ಮೌಲ್ಯ ಹಿಡಿಯ ಬರುವುದಿಲ್ಲ. ಜನರು ದುಡಿಯಲು ಹೆಚ್ಚಿಗೆ ಆಸಕ್ತಿ ಹೊಂದುವರು. ಅವರ ಕೈಯಲ್ಲಿ ಉಳಿಯುವ ಕಾಸುಗಳೇ ಇತರ ಅಗತ್ಯ ವಿಷಯಗಳಿಗೆ ವ್ಯಯವಾಗುತ್ತ ಜೀವನದ ಮಾನವು ಹೆಚ್ಚುವುದು. ಜನರಲ್ಲಿ ಸಂಪತ್ತು ಹೆಚ್ಚುತ್ತ ಬಂದು, ದುಡಿಯುವ ಶಕ್ತಿ ಹೆಚ್ಚಾಗುತ್ತ ಬರುವುದು ಮದ್ಯಪಾನ ನಿರೋಧದ ಉತ್ತಮ ಫಲವೆನಿಸದೆ?

ಅಮೇರಿಕದವರು ಈ ನಿರೋಧಕ್ಕೆ ಕೈಹಚ್ಚಿ ಕೊನೆಗೆ ಅದನ್ನು ತ್ಯಜಿಸುವಂತಾಯಿತು. ಅಕ್ರಮದಿಂದ ಮದ್ಯಪಾನವಾಗುವುದು ಹೆಚ್ಚಿತು ಎಂಬಿತ್ಯಾದಿ ಇತರ ಆಕ್ಷೇಪಗಳಿವೆ. ಅಮೇರಿಕವು ಅಮೇರಿಕವೇ, ನಾವು ನಾವೇ ಎಂಬುದನ್ನು ಯಾರೂ ಎಣಿಸುತ್ತಿಲ್ಲ. ನಿರೋಧವು ಕಷ್ಟಸಾಧ್ಯವೆಂಬುದು ನಿಜ; ಕಷ್ಟವನ್ನು ಕೈಕೊಳ್ಳಲಾರದವರು ಮಂತ್ರಿಗಳಾಗಿ ಮಾಡುವುದೇನು?

ಅಮೇರಿಕದಲ್ಲಿ ಮದ್ಯಪಾನಾಸಕ್ತಿಯುಳ್ಳದ ಜನರು, ನಮ್ಮಲ್ಲಿನ ಮದ್ಯಪಾನಾಸಕ್ತರಿಗಿಂತಲೂ ಕಡಮೆ. ಇವರಿಗೆ ಬೋಧಿಸಿ ನಿರೋಧಿಸಬಹುದು. ಅದು ಸುಲಭವೆಂದೇ, ಕೊಯಮುತ್ತೂರು ತಂಜಾವೂರು ಜಿಲ್ಲೆಗಳವರು ತಮ್ಮ ಜಿಲ್ಲೆಗಳಲ್ಲೂ ಈ ನಿರೋಧ ಚಳವಳಿಗಳನ್ನು ಆರಂಭಿಸಿರಿ ಎಂದು ಮಂತ್ರಿಗಳಿಗೆ ಹೇಳಿಕೊಂಡಿದ್ದಾರೆ.

ಮದ್ಯ ತಯಾರಿಸಿ ಮಾರಿ ಬದುಕುವ ಸಾವಿರಾರು ಜನರಿಗೆ, ನಿರೋಧ ಸೂತ್ರವು ಜಾರಿಗೆ ಬಂದರೆ, ಗತಿಯೇನು? ಎಂಬ ಪ್ರಶ್ನೆಯಿದೆ, ಜನತೆಗೆ ಹಾನಿಯನ್ನುಂಟುಮಾಡುವ ದುರಭ್ಯಾಸಗಳ ಪೋಷಣೆಯೆ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡವರನ್ನು ಸರಕಾರವು ಆಧರಿಸುವುದು ಹೇಗೆ ಎಂದು ಮಂತ್ರಿಗಳು ಪ್ರಶ್ನಿಸುತ್ತಾರೆ. ಇಷ್ಟುಕಾಲ ಅದೇಕೆ ಸರಕಾರವು ಮದ್ಯಪಾನವನ್ನು ಜನತೆಗೆ ಹಾನಿಕರವೆಂದೇಕೆ ಎಣಿಸಲಿಲ್ಲ? ಎಂದು ಮರಳಿ ಪ್ರಶ್ನೆಗಳಾಗಿವೆ. ಇದು ಪ್ರಶ್ನೆಗೆ ಪ್ರಶ್ನೆ ಅಷ್ಟೆ.

ಜಗತ್ತಿನ ಇತಿಹಾಸದಲ್ಲಿ, ಜನಾಂಗದ ಚರಿತ್ರೆಯಲ್ಲಿ, ಅಗತ್ಯ ಮಾರ್ಪಾಟುಗಳು ಉಂಟಾಗುವಾಗ,—ದಾಸ್ಯವಿಮೋಚನೆ, ಸತೀ ಸಹಗಮನ ನಿರೋಧ ಇತ್ಯಾದಿ—ಈ ರೀತಿಯಲ್ಲಿಯೆ ಪ್ರಶ್ನೆಗಳಾಗಿವೆ. ಮದ್ಯ ವ್ಯಾಪಾರಗಳೇ ಮೊದಲಾದವರು ಇತರ ವ್ಯಾಪಾರಗಳನ್ನಾಗಲಿ ಕೃಷಿಯನ್ನಾಗಲಿ ಕೈಕೊಳ್ಳಬಾರದೆಂದೇನೂ ಇಲ್ಲವಷ್ಟೆ. ಬಸ್ಸುಗಳು ಪೇಟೆಯಲ್ಲಿ ಸುತ್ತಾಡುವುದರಿಂದ ಜಟ್ಕಾ ಗಾಡಿಯವರಿಗೆ ನಷ್ಟವೆಂದು, ಬಸ್ಸುಗಳೇನೂ ತಿರುಗದೆ ಇಲ್ಲ, ಜಟ್ಕಗಳೂ ಇವೆ. ಸರಕಾರವು ಒಂದು ವೃತ್ತಿಯನ್ನು ತೊರೆಯಿರೆಂದು ಬೋಧಿಸುವಾಗ, ಮತ್ತೊಂದು ವೃತ್ತಿಯನ್ನು ಅವರು ಕೈಕೊಂಡರೆ ಬೆಂಬಲಕೊಡದಿರಲಾಗುವುದೆ? ಜನತೆಗೆ ಉಪಕಾರವಾಗುವ ಎಷ್ಟೋ ವೃತ್ತಿಗಳಿವೆ. ಅವನ್ನು ಈ ಜನರು ಕೈಕೊಳ್ಳುವಂತೆ ಧನಿಕರೂ ಸಮಾಜ ಹಿತಚಿಂತಕರೂ ಸರಕಾರವೂ ಅಗತ್ಯ ಪ್ರಯತ್ನಿಸಬೇಕು.

ಇಡೀ ಇಂಡಿಯಾ ದೇಶವು ಈಗ ಸೇಲಂ ಜಿಲ್ಲೆಯ ದೃಷ್ಟಾಂತವನ್ನು ನೋಡಿ, ಅದರ ಪರಿಣಾಮ ಫಲಗಳನ್ನು ಲೆಕ್ಕ ಹಾಕಿ ನೋಡಲು ಕಾದಿದೆ. ಅದರ ವಿಶೇಷ ಕೀರ್ತಿಯು ಇಡೀ ಪ್ರಾಂತ್ಯಕ್ಕೆ ಬರುವುದು ಎಂದೇ ಅಧಿಕಾರಿಗಳೂ ಇತರ ಮಹಾಜನರೂ ವಿಶ್ವಾಸದಿಂದ ಹೇಳುತಿದ್ದಾರೆ. ಇಷ್ಟು ಆಕ್ಷೇಪಗಳೇಕೆ?

ಪ್ರಪಂಚದ ಮಹತ್ತಾದ ನವಶೋಧೆಯು
ಬಿಮಲಾ ಮಾತ್ರೆಗಳು

ನಂಬ್ರ ಒಂದನೇದು:—ದ್ರಾವಕಾಧಿಕ್ಯ, ಅತಿಸಾರ, ಅಮಶಂಕೆ, ಧಾತು ಹೋಗುವಿಕೆ, ಅಶಕ್ತಿ, ನಿದ್ರೆ ಇಲ್ಲದಿರುವಿಕೆ, ಮಾನಸಿಕ ಸಂಬಂಧ ರೋಗಗಳು, ಅಪಸ್ಮೃತಿ, ಕಣ್ಣು ರೋಗಗಳು, ರಕ್ತಅರ್ಬುದ ಸಿಫ್ಲಿಸ್, ಇತ್ಯಾದಿ ರೋಗಗಳು ಗುಣವಾಗುವುದು.

ನಂಬ್ರ ಎರಡನೇದು:—ಕೊಡುಕುಮಯ ಜ್ವರಗಳು, ಅರಶಿನ ಮಂಡಿಗೆ ರೋಗ, ಪಾರ್ಶ್ವಶೂಲೆ, ವಾತರೋಗ, ಹುಣ್ಣು, ಕೊಳೆಯುವ ಮತ್ತು ವಿಷಮಯ ಕುಷ್ಠರೋಗ, ಗೊನೊರಿಯಾ, ಪ್ರಮೇಹ ಕಲ್ಲು ಇತ್ಯಾದಿಗಳನ್ನು ಗುಣಮಾಡುವುದು.

ನಂಬ್ರ. 1 ಸ್ಪೆಶಲ್—ಇದರಿಂದ ಕ್ಷಯರೋಗವೂ,

ನಂಬ್ರ 2 ಸ್ಪೆಶಲ್—ಇದರಿಂದ ಕಫಸಂಬಂಧ ರೋಗಗಳೂ, ಗುಣವಾಗುವುವು.

25 ಮಾತ್ರೆಗಳಿಗೆ ರೂ, 5 0-0. 50 ಮಾತ್ರೆಗಳಿಗೆ ರೂ. 9-8-0.

ರೋಗಿಗಳಿಗೊಂದು ತಾಯಿತು— ವೈದ್ಯರಿಗೊಂದು ಮಹಾ ವರವು.

ಧರ್ಮಾರ್ಥ ದೊರಕುವ ಪುಸ್ತಕಕ್ಕೆ ಬರೆಯಿರಿ:—

AYURVEDIC INSTITUTION, P. O. Kalighat, Calcutta.
Telegm:-"BEEPILLS", CALCUTTA.

ಪ್ರವರ್ತಕರು ಬೇಕಾಗಿದ್ದಾರೆ.

ಅಂದಮಾನದಲ್ಲಿನ ಉಪವಾಸೀ ಕೈದಿಗಳು

(ಕವೀಂದ್ರ ರವೀಂದ್ರರ ಭಾಷಣ.)

[ಇದೇ ತಾ. ೨ರಲ್ಲಿ, ಕಲ್ಕತ್ತದ ನಗರಭವನದಲ್ಲಿ ಸೇರಿದ ನಾಗರಿಕರು ಅಂದಮಾನದಲ್ಲಿ ಸುಮಾರು ೨೦೦ ಮಂದಿ ಕೈದಿಗಳು ಈಗ ಎರಡು ವಾರಗಳಿಂದಲೂ ಉಪವಾಸವಾಗಿರುವ ಶೋಚನೀಯವಾರ್ತೆಯನ್ನು ಕುರಿತಾಗಿ ವಿಚಾರಗೈದು ಅವರನ್ನು ಸ್ವದೇಶಕ್ಕೆ ಮರಳಿ ತರುವ ಸೂಚನೆಗಳನ್ನು ಮಾಡಿದರು. ಈ ಸಂದರ್ಭದಲ್ಲಿ ರವೀಂದ್ರನಾಥ ಠಾಕೂರರವರು ಗೈದಿದ ಭಾಷಣದ ಸಾರಾಂಶ.]

ಇಷ್ಟು ಮಂದಿ ಸಾಮುದಾಯಿಕವಾಗಿ ಬರೆದುಕೊಂಡ ಮನವಿಯನ್ನು ಪರಾಮರ್ಶಿಸಲಾಗುವುದಿಲ್ಲೆಂದು ಇಂಡಿಯಾ ಸರಕಾರವೆನ್ನುತ್ತಿದೆ. ಸರಕಾರದಲ್ಲಿ ಜನವಾತ್ಸಲ್ಯ ನ್ಯಾಯಪ್ರಿಯತೆಗಳಿದ್ದುದನ್ನು ರಾಜ್ಯಭಾರ ಸೂತ್ರಗಳ ಕಠಿಣ ಯಂತ್ರವು ತಡೆದು ಜಯಹೊಂದಿದೆ. ಆಗಾಗ ಬಾಯಿಗೆ ಬೀಗ ಹಾಕುತ್ತಲಿದ್ದರೂ ಪತ್ರಿಕೆಗಳು ಸರಕಾರಕ್ಕೂ ಜನತೆಗೂ ಪ್ರಜಾಸ್ವಾತಂತ್ರ್ಯವನ್ನು ಹೇಗೆ ಅಲ್ಲಗಳೆಯಲಾಗುತ್ತಿದೆಂಬುದನ್ನು ವಿವರಿಸಿಯೇ ಇವೆ. ಬಂಗಾಳದಲ್ಲಿ ವ್ಯಕ್ತಿಸ್ವಾತಂತ್ರ್ಯವೆಂಬುದು ಮರುಭೂಮಿಯಲ್ಲಿನ ಮರೀಚಿಕೆಯ ಮಾಯೆಯಷ್ಟೆ ಅಸತ್ಯವಾಗಿದೆ.

ನಾನು ರಾಜಕೀಯ ಭಾಷಣಮಾಡುವವನಲ್ಲ. ನ್ಯಾಯ ಮತ್ತು ಮಾನವ ಜೀವನದ ಪ್ರಿಯತೆ ಇವನ್ನು ಭಾವಿಸಿಯೇ ನಾನಾಡುವೆನು. ಇಂತಹ ಅಗತ್ಯ ಸಂದರ್ಭಗಳಲ್ಲಿ ನಮ್ಮಲ್ಲಿ ಪ್ರತಿಯೊಬ್ಬರ ಅಂತರಂಗಗಳೂ ತಲ್ಲಣಗೊಳ್ಳದಿರಲಾರವು. ಇನ್ನೂರು ಮಂದಿ ಇಷ್ಟುಕಾಲ ಉಪವಾಸಿಗಳಾಗಿರುವರೆಂಬುದನ್ನು ತಿಳಿದೂ ತಿಳಿಯದವರಂತೆ ನಾವು ಮೌನವಾಗಿರಲಾಗುವುದೆ?

ಅಂದಮಾನದಿಂದ ಸ್ವದೇಶಕ್ಕೆ ನಮ್ಮನ್ನು ಒಯ್ಯಿರಿ ಎಂದೇ ಈ ಉಪವಾಸಿಗಳ ಕೂಗು. ಇದು ನ್ಯಾಯ; ಅಷ್ಟೇನು ವಿಶೇಷ ರಿಯಾಯಿತಿಯನ್ನು ಅಪೇಕ್ಷಿಸುವುದಿಲ್ಲ. ಈ ದೇಶದ ಜನರಿಗೆ ಬದ್ಧವಾಗಿರದ ಅಧಿಕಾರವೇ ನಿರ್ವಹಿಸುತ್ತಿರುವಾಗ, ದೇಶದಿಂದ ಸಾವಿರಾರು ಮೈಲು ದೂರದಲ್ಲಿನ ಸ್ವದೇಶ ಬಾಂಧವರಿಗೆ ಹೇಗೆ ನಡೆಸುತ್ತಾರೆಯೋ ಎಂದು ಸಂದೇಹದಿಂದ ಭಾವಿಸುವುದೂ ವಿಚಿತ್ರವಾಗಿಲ್ಲ, ಅವರನ್ನು ಸ್ವದೇಶದಲ್ಲೇ ಇಡಿರಿ ಎನ್ನುವುದೂ ತಪ್ಪಲ್ಲ. ಏಕೆಂದರೆ ಹೀಗಾದಲ್ಲಿ, ಜನತೆಯು ಒಂದು ಬಗೆಯಾಗಿ ಅವರ ಪಾಲಕೆಯ ವಿಷಯ ಸ್ವಲ್ಪ ನಿಗಾಕೊಡಬರುತ್ತದಲ್ಲವೆ? ಇಂಡಿಯಾ ಸರಕಾರವು ಈ ಕೈದಿಗಳನ್ನು ಸ್ವದೇಶಕ್ಕೆ ತರುವ ವಿಷಯವನ್ನು ಬಂಗಾಳ ಸರಕಾರದ ಮೇಲಿರಿಸಿ ತಾನು ಸ್ವಸ್ಥವಾಗಿದೆ!

ಹಿಂದೆಯೊಮ್ಮೆ, ಇದೇ ಬಗೆಯಲ್ಲಿ ಅಲ್ಲಿ ಉಪವಾಸದ ಪ್ರಕರಣವುಂಟಾಗಿತ್ತು. ಮೂವರು ಯುವಕರು ಜಗ ಮಡಿದರು. ಇಬ್ಬರನ್ನು ಒತ್ತಾಯದಿಂದ ಆಹಾರ ಕೊಟ್ಟುದರಿಂದ ಅವರು ಸತ್ತರೆಂದೂ ಹೇಳುತ್ತಾರೆ. ಇದೇ ಪರಿಣಾಮವು ಉಂಟಾಗುವ ಹಾಗೆ ನಾವಾಗಲಿ ಬಂಗಾಳದ ಸರಕಾರವಾಗಲಿ ಪುನಃ ವರ್ತಿಸಬೇಕೆ? ಮುಂಬಾಯಿ, ಮದ್ರಾಸು, ಮಧ್ಯಪ್ರಾಂತ್ಯಗಳಲ್ಲಿನ ಸರಕಾರಗಳ ಪಂಕ್ತಿಯಲ್ಲೇ ಬಂಗಾಳ ಸರಕಾರವೂ ಉದಾರಹೃದಯದಿಂದ ಮಾನವ ಧರ್ಮಕ್ಕೊಪ್ಪುವಂತೆ ವರ್ತಿಸಿ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಬಾರದೆ?

ಜಗತ್ತಿನ ಎಷ್ಟೋ ಕಡೆಗಳಲ್ಲಿ ದಂಡನೆ ಕೊಡುವ ನಿಷ್ಕರುಣ ಕ್ರಮಗಳು ಇನ್ನೂ ರೂಢಿಯಲ್ಲಿರುವುದನ್ನು ಕಂಡರೆ, ನಮ್ಮ ಸುಧಾರಣೆಗೆ ಅವಹೇಲನ ಉಂಟಾಗುವಂತಿದೆ. ಇದಲ್ಲದೆ, ಇತ್ತೀಚೆಗೆ ರಾಜಕೀಯ ಕೈದಿಗಳ ವಿಚಾರವಾಗಿ ಕೆಲ ಪಾಶ್ಚಾತ್ಯ ರಾಷ್ಟ್ರಗಳು ಪ್ರತಿ ಹಿಂಸಾತುರತೆಯಿಂದ ವರ್ತಿಸುತ್ತಿವೆಯೆಂದೂ ತೋರಿಬರುತ್ತಿವೆ. ಕಾಯಿದೆ, ವ್ಯಕ್ತಿಸ್ವಾತಂತ್ರ್ಯಗಳನ್ನು ಕಡೆಗಣಿಸದ ಫೆಸಿಸ್ಟರಂತೆ ವರ್ತಿಸುವ ಕೆಲ ಲಕ್ಷಣಗಳು ನಮ್ಮ ಇಂಡಿಯಾ ಸರಕಾರದಲ್ಲೂ ಕಂಡುಬರುತ್ತವೆ. ಬಂಗಾಳದಂತಹ ದುರ್ಭಾಗ್ಯಮಯವಾದ ಪ್ರಾಂತ್ಯದ ನೂರಾರು ದುಃಖಭರಿತ ಮಂದಿರಗಳಲ್ಲಿ ಕತ್ತಲು ತುಂಬುವಂತಾಗಿದೆ. ಏಕೆ? ಎಳೇ ವಯಸ್ಸಿನ ಪುರುಷರೂ ಸ್ತ್ರೀಯರೂ ನ್ಯಾಯವಿಚಾರಣೆಗೆ ಒಳಪಡದೆ ಮಿತಿಯಿಲ್ಲದ ಅವಧಿಯ ತನಕ ಕಾರವಾಸಿಗಳಾಗಬೇಕಾಗಿ ಬಂದಿದೆ; ಅವರ ದೇಹಗಳಿಗೂ ಮನಸ್ಸಿಗೂ ಹಲವು ಬಗೆಯ ದಂಡನೆಗಳೂ ಇವೆ!

ಇಂತಹ ಸಂದರ್ಭದಲ್ಲಿ, ಕಾನೂನನ್ನು ಸಮೂಲವಾಗಿ ತಿದ್ದಬೇಕೆಂದೇನೂ ನಾವು ಕೇಳುವುದಿಲ್ಲ; ಇದೆಷ್ಟೋ ಅಗತ್ಯವಿದೆಯಾದರೂ ಸರಕಾರಕ್ಕೆ ನಾವಿದನ್ನು ಈಗ ಬಿನ್ನವಿಸುತ್ತಿಲ್ಲ. ಕಾನೂನಿನ ವಜ್ರಘಾತದ ಪೆಟ್ಟು ಸ್ವಲ್ಪ ಹದವಾಗಲಿ ಎಂದೇ ನಾವು ಕೇಳುತ್ತೇವೆ. ಪುನ್ಯಾಕರಲ್ಲಿ ನಾನಾ ಬಗೆಯ ನರಕಗಳನ್ನು ಸೃಷ್ಟಿಸಿದ್ದಾರಾದರೂ, ಇಂಗ್ಲೆಂಡಿನಲ್ಲಿ ಸ್ವದೇಶದಿಂದ ದೂರ ಕೊಯ್ದು ಅಲ್ಲಿನ ತಪ್ಪಿತಸ್ಥರನ್ನು ದಂಡಿಸುವ ಕ್ರಮವೇ ಇಲ್ಲ. ಆದರೆ ಅಧೀನರಾಗಿರುವ ಜನರಿಗೆ ಮಾತ್ರ, ಸ್ವದೇಶದಲ್ಲಿಲ್ಲದ ದಂಡನೆಯನ್ನು ಬ್ರಿಟಿಷರು ಹೊರಿಸುತ್ತಿರುವುದು ನಮಗೆ ಮನಸ್ಸಿಗೆ ಏನೇನೋ ಎನಿಸುತ್ತಿದೆ. ಈ ಬಗೆಯ ಪ್ರತ್ಯೇಕ ಕ್ರಮವು ನಮ್ಮನ್ನು ಹೀನರನ್ನಾಗಿಸುವ ಕಾರಣವೇ, ಸ್ವದೇಶದ ಹೆಸರಲ್ಲಿ ನಾನು ಅದನ್ನು ವಿರೋಧಿಸಿ ಮಾತಾಡಬೇಕಾಗಿದೆ.

[ಬಂಗಾಳದ ಎಸೆಂಬ್ಲಿಯಲ್ಲಿ, ಈ ಕೈದಿಗಳನ್ನು ಕುರಿತಾಗಿ ಪ್ರಶ್ನೋತ್ತರಗಳಾಗಿವೆ. ಮಂತ್ರಿ ಸರ್ ಕೇ. ನಿಜಾಮುದ್ದೀನರವರು ಉತ್ತರ ಕೊಡುವಾಗ, ಈ ಕೈದಿಗಳು ಇನು

(೭ನೇ ಪುಟವನ್ನು ನೋಡುವುದು.)

ವರದಕ್ಷಿಣೆ ಇಲ್ಲ—ಜಾತಿವಿಭಾಗವಿಲ್ಲ.

ಅಂಡಮಾನ ದ್ವೀಪದಲ್ಲಿ ಮುಷ್ಕರ.

ಬಂಗಾಳದ ಎಸೆಂಬ್ಲಿಯ ಈಗ ನಡೆಯುವ ಬಜೆಟ್ ಅಧಿವೇಶನದಲ್ಲಿ ಬರೆ ರಾಜಕೀಯ ವಿಷಯಗಳು ಮಾತ್ರವಲ್ಲದೆ, ಎರಡು ನಾನ್–ಅಫೀಸಿಯಲ್ ಬಿಲ್ಲುಗಳು ಬರುವವಾಗಿ ತಿಳಿದುಬರುತ್ತದೆ. ಒಂದರಿಂದ ಬಂಗಾಳದಲ್ಲಿ ರೂಢಿಯಲ್ಲಿರುವ ಜಾತಿ ಭೇದವನ್ನು ತೆಗೆದು ಹಾಕಬೇಕೆಂದಿರುವದು. ವರದಕ್ಷಿಣೆಯ ಕುರಿತು ಕೆಲವು ನಿರ್ಬಂಧಗಳನ್ನು ಹಾಕಬೇಕೆಂದು ಇನ್ನೊಂದರ ಅಭಿಪ್ರಾಯವಾಗಿರುವುದು.

೫೦ ವರ್ಷ ಮಿಕ್ಕಿದ ವಯಸ್ಸಿನವರು ವಿವಾಹ ಮಾಡಿಕೊಳ್ಳಬಾರದು. ಬಡವರಾದ ತಂದೆತಾಯಿಗಳೊಡನೆ ವರದಕ್ಷಿಣೆ ಕೇಳಬಾರದು. ಹುಡುಗಿ ತಂದೆಯ ಯೋಗ್ಯತೆಗೆ ಮಿಕ್ಕಿದ ವರದಕ್ಷಿಣೆ ಸ್ವೀಕರಿಸಿದವರಿಗೆ ಶಿಕ್ಷೆ ವಿಧಿಸಬೇಕು. ವಿವಾಹಿತನಾಗುವ ತರುಣನು ತನ್ನ ಆರೋಗ್ಯ ಯೋಗ್ಯತೆ ಕುರಿತು ವೈದ್ಯರ ಸರ್ಟಿಫಿಕೇಟನ್ನು ಹಾಜರುಪಡಿಸಬೇಕು. ಇವುಗಳು ವರದಕ್ಷಿಣೆ ಕುರಿತು ಬರುವ ಬಿಲಿನಲ್ಲಿರುವ ಕೆಲವು ನಿಯಮಗಳು.

ಜಾತಿಯ ಕುರಿತು ವಿಚಾರಿಸಬಾರದು, (ಮದುವೆಯ ಮತ್ತು ಕೆಲಸಕ್ಕಾಗಿ ಅರ್ಜಿ ಮಾಡುವ ಸಮಯದಲ್ಲಿ ಹೊರತು) ಈ ಕಾನೂನನ್ನು ಉಲ್ಲಂಘಿಸಿದಯವನಿಗೆ ಶಿಕ್ಷೆ ವಿಧಿಸಬೇಕಾಗಿ ಒಂದನೇ ಬಿಲಿನಲ್ಲಿದೆ. ಈ ಬಿಲುಗಳ ಗತಿ ಏನಾಗುವುದೆಂದು ನೋಡಲಿದೆ.

ಅಂಡಮಾನ ದ್ವೀಪಗಳಲ್ಲಿನ ಮುಷ್ಕರ.

ಅಂಡಮಾನ ದ್ವೀಪಗಳಲ್ಲಿರುವ ಉಪವಾಸ ಮುಷ್ಕರ ಹಿಡಿದಿರುವ ರಾಜಕೀಯ ಕೈದಿಗಳಲ್ಲಿ ಹೆಚ್ಚಿನವರು ಬಂಗಾಳದವರು. ಅದ್ದರಿಂದ, ಮೊನ್ನೆ ತಾ. ೧೮ರಲ್ಲಿ ಕಲ್ಕತ್ತೆಯಲ್ಲಿ, ಆ ಕುರಿತು ಅನೇಕ ಸಾರ್ವಜನಿಕ ಸಭೆಗಳು ಜರುಗಿ, ರಾಜಕೀಯ ಕೈದಿಗಳ ಉಪವಾಸದ ಬಗ್ಗೆ ಸಹಾನುಭೂತಿ ಸೂಚನೆಗಳು ರಚನೆಯಾಗಿವೆ. ಅಲ್ಲದೆ ಬಂಗಾಳ ಸರಕಾರವು ಆ ಕುರಿತು ಕೂಡಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿ ಸೂಚನೆಗಳಿಂದ ಕೂಡಿದ ಠರಾವುಗಳಾಗಿವೆ. ಕಾಂಗ್ರೆಸಿನ ಪರವಾಗಿ ಉಪವಾಸಾಚರಣೆಯನ್ನು ಮಾಡುತ್ತಿರುವ ಕೈದಿಗಳ ಸ್ಥಿತಿಗತಿಗಳನ್ನು ಅರಿತುಕೊಳ್ಳುವರೆ ಕುರ್ವರು ಮಹಾಶಯರನ್ನು ಅಂಡಮಾನಗಳಿಗೆ ಕಳುಹಿಸಬೇಕೆಂದಾಗಿದೆ.

ಸಂಯುಕ್ತ ಪ್ರಾಂತ್ಯದ ಸರಕಾರವು ಈ ಕುರಿತು ಅತ್ಯಂತ ಲಕ್ಷ್ಯ ಮಾಡಿಯತ್ತದೆ. ಸಂಯುಕ್ತ ಪ್ರಾಂತ್ಯಕ್ಕೆ ಸಂಬಂಧಪಟ್ಟ ಅಂಡಮಾನದಲ್ಲಿರುವ ರಾಜಕೀಯ ಕೈದಿಗಳ ಕುರಿತು ಪ್ರಧಾನ ಮಂತ್ರಿಯವರು ಆಲೋಚಿಸುತ್ತಿರುವರು. ಅಂತೆಯೇ ಮದ್ರಾಸು ಪ್ರಾಂತ್ಯದ ಪ್ರಧಾನ ಮಂತ್ರಿ ರಾಜಗೋಪಾಲಾಚಾರಿಯವರು ಈ ಪ್ರಶ್ನೆಗೆ ಅತ್ಯಂತ ಲಕ್ಷ್ಯವನ್ನು ಕೊಟ್ಟಿರುವರು.

ನಾಗರೀಕ ಹಕ್ಕು ಬಾಧ್ಯತೆಗಳ ರಕ್ಷಣೆಯಾಗಬೇಕು.

ಈ ಕುರಿತು ಮುಂಬೈ ಸರಕಾರದ ಭರವಸೆಯು ದೊರಕಿರುತ್ತದೆ. ಅಲ್ಲದೆ ಪ್ರತಿಯೊಂದು ಕಾಂಗ್ರೆಸ್ ಪ್ರಾಂತ್ಯಗಳಿಂದ, ಪ್ರಜೆಗಳ ನಾಗರೀಕ ಹಕ್ಕುಗಳ ಮೇಲೆ ಕೈಹಾಕುವುದಿಲ್ಲವೆಂಬ ಭರವಸೆಗಳು ದೊರಕಿವೆ. ಈ ಭರವಸೆಗಳನ್ನು ಕಾರ್ಯರೂಪಕ್ಕೆ ತರುವಂತೆ ಈ ಮೊದಲು ಜಾರಿ ಮಾಡಲಾದ ಪ್ರಜೆಗಳ ನಾಗರೀಕ ಹಕ್ಕುಗಳಿಗೆ ವಿರೋಧವೆನಿಸುವ ಎಲ್ಲಾ ಅನುಚಿತ ನಿರ್ಬಂಧಗಳು ರದ್ದು ಮಾಡಲಾಗುವವು.

ಪ್ರಜೆಗಳು ಸರಕಾರದ ಆಡಳಿತದ ಕುರಿತು ಕೊಡಲಾಗುವ ಸೂಚನೆಗಳಿಗೆ ಮನ್ನಣೆ ದೊರಕುವುದೆಂದು ಸೂಚನೆಗಳಾಗಿವೆ.

ಚೀನಾ — ಜಪಾನ್ ಸಂಗ್ರಾಮ

ಕೇಂದ್ರ ಚೀನಾ ಸರಕಾರದಿಂದ ಉತ್ತರ ಚೀನಾಕ್ಕೆ ಸಹಾಯವಾಗಿ ಅನೇಕ ಸೈನ್ಯಪಡೆಗಳು ಕಳುಹಿಸಲಾಗಿವೆ. ಚೀನಾ ದೇಶದ ಅನೇಕ ಕಡೆಗಳಲ್ಲಿ ಜಪಾನೀಯರ ಒಡವೆಗಳ ಮೇಲೆ ಸಾಂಪತ್ತಿಕ ಬಹಿಷ್ಕಾರವು ಬಂದಿದೆ. ಈ ಬಹಿಷ್ಕಾರವು ವಿದ್ಯಾರ್ಥಿಗಳ ಉತ್ತೇಜನದಿಂದ ಬಹಳ ಯಶಸ್ವಿಯಾಗಿ ನಡೆದಿರುತ್ತದೆ. ಜಪಾನೀಯರಿಗೆ ಅದರಿಂದ ಭಯವು ಉಂಟಾಗಿದೆ. ಕಾರಣ ಜಪಾನೀಯ ಒಡವೆಗಳಿಗೆ ಈಗ ಗಿರಾಕಿಗಳು ತೀರಾ ಕಡಿಮೆಯಾಗಿರುತ್ತವೆ. ಸಂಗ್ರಾಮವು ಸಾಗುತ್ತದೆ.

ನೆರೆಯ ಹಾವಳಿ.

ವಿಪರೀತ ಮಳೆಯ ದೆಸೆಯಿಂದ ಬಂಗಾಳದ ಅನೇಕ ಕಡೆಗಳಲ್ಲಿ ನೆರೆಯು ಉಂಟಾಯಿತು. ಮಿಡ್ನಾಪುರ ಜಿಲ್ಲೆಯಲ್ಲಿ ಐವರು ನೀರು ಪಾಲಾಗಿ ಮೃತರಾಗಿರುವರು.

ಸಂಯುಕ್ತ ಪ್ರಾಂತ್ಯದ ಕಾಶಿ ಜಿಲ್ಲೆಯಲ್ಲೂ ಮಳೆ ದೆಸೆಯಿಂದ ಗಂಗಾನದಿಯು ಉಕ್ಕಿಬಂದು ಅಕ್ಕಪಕ್ಕದಲ್ಲಿರುವ ಅನೇಕ ಕಡೆಗಳಲ್ಲಿ ಪ್ರಳಯ ಉಂಟಾಗಿರುತ್ತದೆ. ಕಾಶಿ ನಗರದ ಬೀದಿಗಳಲ್ಲೆಲ್ಲಾ ನೀರು ಹರಿದುಬಂತು. ಜಿಲ್ಲಾ ಅಧಿಕಾರಿಗಳು ರಕ್ಷಣೆ ಬಗ್ಗೆ ಒಳ್ಳೆ ಏರ್ಪಾಡುಗಳನ್ನು ಮಾಡಿರುವರು.

ರಾವಲ್ ಪಿಂಡಿಯಲ್ಲಿ ನೆರೆಯ ಸಂಬಂಧ ಒಂದು ನೂರರಷ್ಟು ಟ್ರೈನು ಕಂಬಿಗಳನ್ನು ಬಿಟ್ಟು ನೆಲಕ್ಕೆ ಉರುಳಿತು. ಅಲ್ಲದೆ, ಅನೇಕ ಕಡೆಗಳಲ್ಲಿ ನೆರೆಯ ಹಾವಳಿಯು ನಡೆದಿರುತ್ತದೆ. ಬವರ್ಸಾದಲ್ಲಿ ನೆರೆಯು ಉಂಟಾಗಿ ಒಂದು ಕಡೆಯಲ್ಲಿ ಮೂರು ಮಂದಿ ಪ್ರಯಾಣಿಕರಿರುವ ಒಂದು ಮೋಟಾರುಬಸ್ಸು ಘಕ್ಕನೆ ಮಾಯವಾಗಿರುತ್ತದೆ.

ಶಾಲೆಗಳಲ್ಲಿ ಚರಕ.

ಅಸ್ಸಾಮಿನ ಎಸೆಂಬ್ಲಿ ಸದಸ್ಯರಾದ ಶ್ರೀ ಶಂಕರ ಚಂದ್ರ ಬರುವಾರವರು, ಈ ಕೆಳಗಿನ ಠರಾವನ್ನು ಮುಂಬರುವ ಅಸೆಂಬ್ಲಿಯ ಅಧಿವೇಶನದಲ್ಲಿ ತರುವದಾಗಿ ಸೂಚನೆ ಕೊಟ್ಟಿರುವರು.

ನೂಲುವುದರಲ್ಲಿ ಬೋಧನೆಯು ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ನಡೆಯಬೇಕು. ಆ ಕುರಿತು ಹತ್ತಿ ಮತ್ತು ಚರಕಗಳನ್ನು ಪಡಕೊಳ್ಳುವ ಬಗ್ಗೆ ಒಂದು ಲಕ್ಷ ರೂಪಾಯಿ ವಿನಿಯೋಗವಾಗಬೇಕು.

ಮದ್ರಾಸು ಸರಕಾರದ ಮುಖ್ಯ ಕಾರ್ಯದರ್ಶಿಯವರು ಖಾದಿ ಪೋಷಕರಲ್ಲಿ.

ಮದ್ರಾಸು ಸರಕಾರದ ಮುಖ್ಯ ಕಾರ್ಯದರ್ಶಿಯವರಾದ ಮಿ। ಸಿ. ಎಫ್. ಬ್ರೆಕನ್‌ಬರಿ, I. C. S. ಯವರು ಮೊನ್ನೆ ದಿನ ಖಾದಿ ಪೋಷಕರಲ್ಲಿ ಆಟಿಸಿಗೆ ಬಂದಿರುವರು.

ಖಾದಿಯನ್ನು ಧರಿಸುವರೆ ಆನಂದವಾಗುತ್ತದೆಂದು ಅವರು ಸೂಚಿಸಿದರು.

ಈ ಪೋಷಕರಿಗೆ ಬೇಕಾದ ವಸ್ತ್ರವು ಕಾಂಗ್ರೆಸು ಅಧಿಕಾರ ವಹಿಸಿದ ದಿನ ಪ್ರಧಾನ ಮಂತ್ರಿ ರಾಜಾಜಿಯವರ ಆಪ್ತರಿಗೆ ಉಡುಗೊರೆಯಾಗಿ ಕೊಡಲ್ಪಟ್ಟಿದೆಂದು ತಿಳಿದುಬರುತ್ತದೆ.

ಕಾಂಗ್ರೆಸ್ ಮಂಡಳಕ್ಕೂ, ಇತರ ಸರಕಾರ ನೌಕರರಿಗೂ ಮಿ। ಬ್ರೆಕನ್‌ಬರಿಯವರು ಒಂದು ಸತ್ಕಾರವನ್ನು ಕೊಟ್ಟು, ಅಲ್ಲಿ ಕಾಂಗ್ರೆಸ್ ಮಂತ್ರಿಮಂಡಳವನ್ನು ಇತರ ಸರಕಾರಿ ಉದ್ಯೋಗಸ್ಥರಿಗೂ ಪರಿಚಯವಾಗಿ ಅನೇಕ ವಿಚಾರಗಳ ಮೇಲೆ ಮಾತುಕತೆಗಳು ನಡೆದವು.

ಮುಂಬಾಯಿ ಸರಕಾರದ ಆಜ್ಞೆ.

೨೩೭ ಸಂಸ್ಥೆಗಳ ಮೇಲಿನ ಬಹಿಷ್ಕಾರವು ತೆಗೆದು ಹಾಕಲ್ಪಟ್ಟಿತು. ಕಾಯಿದೆ ಮತ್ತು ಸುವ್ಯವಸ್ಥೆ ಮಂತ್ರಿಗಳಾದ (ಮುಂಬೈ) ಶ್ರೀಯುತ ಕೆ. ಎಮ್. ಮುನ್ಶಿಯವರು, ಮುಂಬೈ ಪ್ರಾಂತ್ಯದ ೨೩೭ ಸಂಸ್ಥೆಗಳ ಮೇಲೆ ಈ ಮೊದಲು ಇದ್ದ "ಬಹಿಷ್ಕಾರ ತೆಗೆದು" ಹಾಕುವ ಆಜ್ಞೆಯನ್ನು ಹೊರಡಿಸಿರುವರು. ಈ ಸಂಸ್ಥೆಗಳಲ್ಲೂ ಕಾಂಗ್ರೆಸ್ ಸಂಬಂಧವಾಗಿದ್ದವುಗಳು. ಅವುಗಳಲ್ಲಿ ಹಿಂದೂಸ್ಥಾನಿ ಸೇವಾದಳವು ಒಂದಾಗಿರುತ್ತದೆ.

ಅಂಡಮಾನದಲ್ಲಿ ಕೈದಿಗಳ ಉಪವಾಸ.

ಅಂಡಮಾನ ದ್ವೀಪದಲ್ಲಿರುವ ಕೈದಿಗಳು ಇಂಡಿಯಾ ಸರಕಾರದೊಡನೆ ಮಾಡಿದ ಒಂದು ಅರ್ಜಿಯು ತಿರಸ್ಕೃತವಾಗಲು, (ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕು. ಒತ್ತಾಯ ಕಾಯಿದೆಗಳು ಗಡಿಪಾರದ ಕಾಯಿದೆಗಳು ಹಿಂತೆಗೆಯಬೇಕು. ಎಲ್ಲಾ ರಾಜಕೀಯ ಕೈದಿಗಳಿಗೆ 'ಬಿ' ಕ್ಲಾಸ್ ದೊರಕಬೇಕು. ಇವೆ ಮೊದಲಾದವುಗಳು ಅವರ ಅರ್ಜಿಯಲ್ಲಿರುವ ಸಲಹೆಗಳು) ಅರ್ಜಿಯಲ್ಲಿ ಮೊದಲೇ ತಿಳಿಸಿದಂತೆ ಉಪವಾಸಾರಂಭ ಮಾಡಿರುವರು. ಉಪವಾಸ ಆರಂಭವಾಗಿ ಒಂದು ಪಕ್ಷವಾಗಿರುತ್ತದೆ. ಕೈದಿಗಳು ಅವರವರ ಪ್ರಾಂತ್ಯಕೀಯ ಸರಕಾರಗಳೊಡನೆ ಅರ್ಜಿ ಮಾಡಬೇಕಾಗಿ ಇಂಡಿಯಾ ಸರಕಾರದ ಅಪ್ಪಣೆ.

ಟಿಟಾ ರೈಲ್ವೆ ಅಪಘಾತದ ಕಾರಣ.

ರೈಲ್ವೆ ದಾರಿಯು ಸರಿಯಾದ ರೀತಿಯಲ್ಲಿ ರಚನೆಯಾಗದಿದ್ದುದೇ ಅಪಘಾತಕ್ಕೆ ಕಾರಣವೆಂದು ರೈಲ್ವೆ ವಿಚಾರಣಾ ಸಮಿತಿಯವರ ಅಭಿಪ್ರಾಯವಾಗಿರುವುದೆಂದು ತಿಳಿದುಬರುತ್ತದೆ.

ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿ.

ನವರಾಜ ಶಾಸನ ಕುರಿತು ಕಾಂಗ್ರೆಸ್ ಅಭಿಪ್ರಾಯವನ್ನು ಸೂಚಿಸುವ ಮತ್ತು ಪ್ರಜಾಪರಿಷತ್ತಿನಲ್ಲಿ ನಿರ್ಣಯಿಸಲ್ಪಡುವ ಶಾಸನದ ಕುರಿತು ಸಂ। ಪ್ರಾಂತ್ಯದ ಅಸೆಂಬ್ಲಿಯು ಬೇಗನೇ ತನ್ನ ಅಭಿಪ್ರಾಯವನ್ನು ಸೂಚಿಸುವುದೆಂದು ಸಂಡಿಕ ಪಂಕರ ಪ್ರಕಟಣೆಯಾಗಿರುತ್ತದೆ.

ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಮಂತ್ರಿಮಂಡಳವು ಪ್ರಥಮದಾಗಿ ರೈತರ ಗೋಳು ನಿವಾರಣೆ ಪ್ರಶ್ನೆಯನ್ನು ಪರಿಶೀಲಿಸುವರಾಗಿಯೂ, ಆ ಕುರಿತು ಒಂದು ಸಮಿತಿಯನ್ನು ರಚಿಸುವರಾಗಿಯೂ ತಿಳಿದುಬರುತ್ತದೆ.

ಕಾಂ। ವರ್ಕಿಂಗ್ ಕಮಿಟಿಯು ಇದೇ ತಾ. ೧೬ರಲ್ಲಿ ಅಲ್ಲಹಾಬಾದಿನಲ್ಲಿ ಸಭೆ ಸೇರುವುದಾಗಿ ವದಂತಿಯಿದೆ.

ಲಂಡನಿನಲ್ಲಿ ಕೊಂಗ್ರೆಸ್ ವಾರ್ತಾ ಸಂಸ್ಥೆ.

ಭಾರತಮಂತ್ರಿ ಜೆಟ್ಲೆಂಡರ ಭಾಷಣ.

ಶ್ರೀಯುತರುಗಳಾದ ಭುಲಾಭಾಯಿ ದೇಸಾಯಿ, ಅಖಿಲ ಚಂದ್ರ ದತ್ತ, ಡಾ। ಬಿ. ಸಿ. ರೋಯ್ ಇವರೇ ಮೊದಲಾದವರ ಲಂಡನ್ ಪ್ರವಾಸಗಳ ನಿಮಿತ್ತ ಲಂಡನಿನಲ್ಲಿ ಒಂದು ಕಾಂಗ್ರೆಸ್ ಬ್ಯೂರೋವನ್ನು ರಚಿಸುವ ಏರ್ಪಾಡಾಗಿರುತ್ತದೆ. ಇದರಿಂದಾಗಿ, ಕಾಂಗ್ರೆಸ್ ಚಟುವಟಿಕೆಗಳ ಕುರಿತು ಸರಿಯಾದ ವಾರ್ತೆಯು ಲಂಡನಿಗೆ ಹೋಗುವಂತೆಯೂ, ಹಿಂದೂದೇಶದ ಕುರಿತು ಪಾರ್ಲಿಮೆಂಟಿನ ಚಟುವಟಿಕೆಗಳನ್ನು ಹಿಂದೂದೇಶಕ್ಕೆ ತಿಳಿಸುವಂತೆಯೂ ಏರ್ಪಾಡುಮಾಡಲಾಗಿದೆ. ಇದರಲ್ಲಿ ಅನೇಕ ಮಂದಿ ಪಾರ್ಲಿಮೆಂಟಿನ ಸದಸ್ಯರು ಉತ್ಸಾಹ ತೆಗೆದುಕೊಳ್ಳುವರಾಗಿ ತಿಳಿದುಬರುತ್ತದೆ.

ಭಾರತಮಂತ್ರಿ ಜೆಟ್ಲೆಂಡರ ಭಾಷಣ.

"ಬ್ರಿಟನ್ ಮತ್ತು ಹಿಂದೂದೇಶಗಳೊಳಗೆ ಇರುವ ವೈಷಮ್ಯವು ಇನ್ನು ದಿನೇ ದಿನೇ ಕಡಿಮೆಯಾಗುವುದೆಂದು ನನ್ನ ಆಶೆ" ಎಂದು ಭಾರತ ಮಂತ್ರಿ ಜೆಟ್ಲೆಂಡರು, ಒಂದು ಭಾರತೀಯ ಭೋಜನಕೂಟದಲ್ಲಿ, ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದುದರ ಕುರಿತಾಗಿ ಪ್ರಾಮಾಣಿಕತ್ವವಾಗಿ ಹೇಳಿರುವರು. ಬ್ರಿಟನಿಗೆ, ಹಿಂದೂದೇಶದ ಮೈತ್ರಿ ಬೇಕು, ಅದು ಹಿಂದೂದೇಶದೊಡನೆ ಸಂಧಾನಕ್ಕೆ ಸಿದ್ಧವಿದೆ. ಅಧಿಕಾರ ದರ್ಪವನ್ನು ನಡೆಸಿ ತೀರಿಸುವುದು ಅವರ ಉದ್ದೇಶವಲ್ಲ. ಅಂದರೆ, ಬ್ರಿಟನ್ನಿನಲ್ಲಿ ಹಿಂದೂದೇಶದ ಕುರಿತು ಬ್ರಿಟಿಷರ ಮನೋಭಾವದಲ್ಲಿ ಸ್ವಲ್ಪ ಬದಲಾವಣೆಗಳಾಗಿರುವವೆಂದು ಇದರಿಂದ ತಿಳಿದುಬರುತ್ತದೆ.

ನರಿಮನ್ನರ ಪ್ರತಿಜ್ಞೆ.

ವಕೀಲ ನರಿಮನ್ನ ವಾದವಿವಾದಕ್ಕೆ ಮೊನ್ನೆ ತಾ. ೧೮ರಲ್ಲಿ, ತಿಲಕ ಪುಣ್ಯತಿಥಿಯ, ಮಹಾಗುರುವಿಗೆ ನಮ್ರಭಾವವಾಗಿ ನರಿಮನ್ನರು ತಿಲಾಂಜಲಿ ಕೊಟ್ಟಿರುವರು. ಮುಂಬೈ ಎಸೆಂಬ್ಲಿ ಕಾಂಗ್ರೆಸ್ ನಾಯಕರ ಚುನಾವಣೆಯಲ್ಲಿ ಇವರಿಗೂ, ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ವಲ್ಲಭಭಾಯಿ ಪಟೇಲರಿಗೂ ವಿವಾದವೆದ್ದಿತ್ತು. ನರಿಮನ್ನರನ್ನು ಬಿಟ್ಟು ಶ್ರೀ। ಬಾಲಗಂಗಾಧರ ಖೇರ್ ಇವರನ್ನು ಚುನಾಯಿಸಿದುದಕ್ಕಾಗಿ. ಮಹಾತ್ಮಾಜಿಯವರು ಈ ಕುರಿತು ವಿಚಾರಣೆ ನಡೆಸಬೇಕಾಗಿಯೂ, ಪಟೇಲರು ಬರೀ ವೈಯಕ್ತಿಕ ದ್ವೇಷದಿಂದ ವರ್ತಿಸಿರುವರೆಂದೂ ನರಿಮನ್ನರ ವಾದವಿತ್ತು. ಈ ಕುರಿತು, ಹಿಂದೆ ದಿಲ್ಲಿಯಲ್ಲಿ ನಡೆದ ವರ್ಕಿಂಗ್ ಕಮಿಟಿಯ ನಿರ್ಣಯ ಪ್ರಕಾರ, ಪಟೇಲರ ಅನುಜ್ಞೆಯನ್ನು ಶಿರಸಾವಹಿಸಬೇಕೆಂದಾಗಿತ್ತು. ಅದಕ್ಕೀಗ ನರಿಮನ್ನರು ಮನ್ನಣೆಯಿತ್ತಿರುವರು. 'ಶಾಸನ ಸಭೆಗಳ ಹೊರಗೂ ಒಳಗೂ ಕಾಂಗ್ರೆಸ್ಸಿನ ಕಾರ್ಯಕ್ರಮದ ಮೇರೆಗೆ ಕಾರ್ಯನಡೆಸಲು ಸರ್ವಸ್ವವನ್ನೂ ಅರ್ಪಣ ಮಾಡಿ, ನನ್ನ ಎಲ್ಲಾ ಕಾಲವನ್ನು ಅದಕ್ಕಾಗಿ ವಿನಿಯೋಗಿಸುವೆನೆಂದು ನಾನು ಅಂತಃಕರಣ ಪೂರ್ವಕವಾಗಿ ಪ್ರತಿಜ್ಞೆ ಮಾಡಿರುವೆನು' ಎಂದು ನರಿಮನ್ನರ ಪ್ರತಿಜ್ಞೆಯಾಗಿರುತ್ತದೆ.

ಪ್ರಾಂತ್ಯದ ಕಾರಾಗೃಹದಲ್ಲಿರುವ ಕೈದಿಗಳಿಗೆ ಮುಂದಕ್ಕೆ ಅವರ ಅನುಪಾನದೊಡನೆ ಮಜ್ಜಿಗೆಯನ್ನೂ ಕೊಡಬೇಕಾಗಿ ಮದ್ರಾಸಿನ ಪ್ರಧಾನಮಂತ್ರಿವರ್ಯ ಮಾನ್ಯ ರಾಜಗೋಪಾಲಾಚಾರ್ಯರ ಆಜ್ಞಾಪನೆಯಾಗಿರುತ್ತದೆ.

ಕಾರಾಗೃಹವಾಸಿಗಳ ಸುಧಾರಣೆಯ ಕುರಿತು ಸರಕಾರವು ಬೇಗನೇ ನಿಗಾತೆಗೆದುಕೊಳ್ಳುವುದೆಂದೂ ತಿಳಿದುಬರುತ್ತದೆ.

ಕಾಯಿದೆ ಉಲ್ಲಂಘನಾ ಚಳವಳದ ದೆಸೆಯಿಂದ ಉದ್ಯೋಗಗಳನ್ನು ಕಳಕೊಂಡ ಗ್ರಾಮಾಧಿಕಾರಿ ಇತ್ಯಾದಿ ನೌಕರರಿಗೆ ಮತ್ತೊಮ್ಮೆ ಉದ್ಯೋಗ ಕೊಡುವ ಕುರಿತು ಮದ್ರಾಸು ಸರಕಾರವು ಆಲೋಚಿಸುತ್ತಿದೆ.

ಮುಂದಿನ ಕಾಂಗ್ರೆಸ್ ಅಧಿವೇಶನವು ಬಾರ್ಡೋಲಿಯ ಹರಿಪುರ ಎಂಬಲ್ಲಿ ಬರುವ ಫೆಬ್ರವರಿ ತಾ. ೧೪, ೧೫, ೧೬ರಲ್ಲಿ ನಡೆಯುವುದಾಗಿ ತಿಳಿದುಬರುತ್ತದೆ.

ಅಲ್ಲಹಾಬಾದ್ ನಗರ ಸಭೆಯು ಕಮಲಾನೆಹರು ಸ್ಮಾರಕ ಆಸ್ಪತ್ರೆಗೆ ರೂ. ೧೦,೦೦೦ ಧನಸಹಾಯ ಮಾಡುತ್ತದೆಂದು ತಿಳಿದುಬರುತ್ತದೆ.

ಮುಂಬೈ ಸರಕಾರಕ್ಕೆ ಮೋಸ.

ಇದರಲ್ಲಿ ನಮ್ಮ ಜಿಲ್ಲೆಯವರು ಕೆಲವರು ಇರುವರು. ಒಬ್ಬನನ್ನು ಈ ವಿಚಾರದಲ್ಲಿ ಮೊನ್ನೆ ಮಂಗಳೂರಿನಲ್ಲಿ ಕೈದು ಮಾಡಲಾಯಿತಂತೆ. ಈ ಮೋಸವು ಇಂದಿಗೆ ೧೪ ವರ್ಷಗಳಿಂದ ನಡೆಯುತ್ತಿದೆ. ರೂ. ೭೫ ಸಾವಿರದ ವಹಿವಾಟವು ಇದರಲ್ಲಿ ನಡೆಯುತ್ತದೆ.

ಕೇರುಗಳನ್ನು ಒಬ್ಬರಿಗೆ ಒಬ್ಬರು ಬದಲಿ ಮಾಡಿಕೊಳ್ಳುವಾಗ ಬದಲಾವಣೆ ಅರ್ಜಿಗಳಿಗೆ ರೆವಿನ್ಯೂ ಸ್ಟಾಂಪು ಅಂಟಿಸುವುದುಂಟು. ಅನೇಕ ಸಂಸ್ಥೆಗಳಿಂದ, ಈ ಅರ್ಜಿಗಳಿಂದ ಮಾಡಿದ ಟಿಕೇಟುಗಳನ್ನು ತೆಗೆದು, ಮತ್ತೊಮ್ಮೆ ಮಾರಾಟವಾಗುತ್ತಿರುವುದೇ ಈ ಮೋಸದ ವಿಚಾರ. ವಿಚಾರಣೆಯು ನಡೆದಿರುತ್ತದೆ.

ಸರಕಾರಕ್ಕೆ ಮತವೀಯಬೇಕು— ಇಲ್ಲದಿದ್ದರೆ ನೀವು ನಮಗೆ ಬೇಡ.

ಕೇಂದ್ರ ಎಸೆಂಬ್ಲಿಗೆ ಪ್ರಾಂತ್ಯೀಯ ಸರಕಾರಗಳಿಂದ ಸದಸ್ಯರನ್ನು ನೋಮಿನೇಟು ಮಾಡುವ ಪದ್ಧತಿಯಿದೆ. ಈ ಕುರಿತು ಇಂಡಿಯಾ ಸರಕಾರದ ಅಪ್ಪಣೆಯೊಂದು ಹೊರಬಿದ್ದಿರುತ್ತದೆ. ನೋಮಿನೇಟು ಮಾಡಲ್ಪಟ್ಟ ಸದಸ್ಯರು, ಸರಕಾರದೊಡನೆ ಇರುವರಾಗಬೇಕೆಂತಲೂ ಅದಕ್ಕೆ ಸಮ್ಮತವಿಲ್ಲದಿದ್ದರೆ, ಪ್ರಾಂತ್ಯಗಳು ಸದಸ್ಯರನ್ನು ನೋಮಿನೇಟು ಮಾಡುವುದೇ ಬೇಡವೆಂದೂ ಅಪ್ಪಣೆಯ ಅಭಿಪ್ರಾಯ. ಹಳೆ ಪಯಣ್‌ಪಾಸ್ ಇವೇ ಮೊದಲಾದ ಪ್ರಾಂತ್ಯಗಳ ಹೊರತು ಮಿಕ್ಕ ಪ್ರಾಂತ್ಯಗಳು ಅಂದರೆ ಕಾಂಗ್ರೆಸ್ ಪ್ರಾಂತ್ಯಗಳು, ಈ ಅಪ್ಪಣೆಯನ್ನು ಮನ್ನಿಸಲು ಸಿದ್ಧವಿಲ್ಲದುದರಿಂದ, ಅವುಗಳು ಕೇಂದ್ರ ಎಸೆಂಬ್ಲಿಗೆ ಸದಸ್ಯರನ್ನು ನೋಮಿನೇಟ್ ಮಾಡುವುದಿಲ್ಲವೆಂದು ಬೆದರಿಕೆ.

ಗಡಿನಾಡಿನಲ್ಲಿ ಶಾಂತಿ ಸ್ಥಾಪನೆಯಾಗಲಿಲ್ಲ.

ಗಡಿನಾಡಿನ ಅಶಾಂತಿಗೆ ಕಾರಣನೆನಿಸುವ ಇಪ್ಪಿಯ ಫಕೀರನು ಇನ್ನೂ ತೃಪ್ತನಾದಂತೆ ಕಾಣುವುದಿಲ್ಲ. ಸುದ್ದಿ ನಿವಾಸಿಗಳು ಮಾರ್ಗ ಕೇಳಿದಲ್ಲಿ ಭಾಗಗಳಾದಂತೆ ಈ ಫಕೀರನ ಪ್ರಯತ್ನವಂತೆ. ಅಲ್ಲದೆ ರಜೆಯಲ್ಲಿ ಕೆಲಸ ಮಾಡುತ್ತಿದ್ದ ಸಿಪಾಯಿಗಳ ಮೇಲೆ ಅವನ ಜನಗಳವು ಆಕ್ರಮ ನಡೆಯುತ್ತಿರುವುದೆಂದು ವಾರ್ತೆ.

ದಮ್ಮು ಪೂರ್ಣ ಗುಣವಾಗುವ ಉಪಾಯವನ್ನೇ ಕೈಕೊಳ್ಳಬೇಕು.

ಕೆಮ್ಮು ಮತ್ತು ಕಫವಿಕಾರವಿದ್ದವರು "ಎಫಿಡಿನ್" ಮುಂತಾದ ತಾತ್ಕಾಲಿಕ ಶಮನವೆನಿಸುವ ಔಷಧಗಳನ್ನು ಎಂದೂ ಉಪಯೋಗಿಸಬಾರದು. ಈ ಔಷಧಗಳು ರೋಗವನ್ನು ಪೂರ್ಣ ಗುಣಪಡಿಸಲು ನಿರುಪಯೋಗಿ ಎಂಬುದು ಸ್ಪಷ್ಟವು ಮತ್ತು ಇಂಥ ಔಷಧಗಳು ಶ್ವಾಸನಲಿಕೆಯಲ್ಲಿ ಪೆಟ್ಟಿಗೆ ನೋವುಂಟುಮಾಡಿ ರೋಗವನ್ನು ಶಾಶ್ವತಮಾಡುತ್ತವೆ.

ರೋಗಲಕ್ಷಣವನ್ನು ಪೂರ್ಣ ವಿಚಾರಮಾಡಿ, ರೋಗಿಗೆ ಬೇಗನೆ ಮತ್ತು ಸಾವಧಾನವಾಗಿ ಪೂರ್ಣ ಗುಣಮಾಡುವ ಔಷಧವೇ ನಿಜವಾದ ಉಪಾಯವು ಮತ್ತು ಇದೇ ದೃಷ್ಟಿಯಿಂದ ಡಾ। ಪುರೋಹಿತ ಇವರ— "ಶ್ವಾಸಹಾರಿ ಪ್ಲೇನ" ಮತ್ತು "ಶ್ವಾಸಹಾರಿ ಕಾಂಪಾವುಂಡ" ಈ ಎರಡೂ ಔಷಧಗಳು ದಮ್ಮು ವಿಕಾರವನ್ನು ಪೂರ್ಣ ಗುಣಪಡಿಸುವ ಡಿಪಾರ್ಟಮೆಂಟಿಯಲ್ಲಿ ಅಗ್ರೇಸರವೆನಿಸಿವೆ. ದಮ್ಮು, ಶ್ವಾಸ, ಮುಂದಾಳಿಯ ಸನಿಕೆ, ಗಂಟಲು ಕೆರೆಯುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲಾ ರೋಗ ಗುಣಪಡಿಸಲು "ಶ್ವಾಸಹಾರಿ ಪ್ಲೇನ" ಉಪಯೋಗಿಸಬೇಕು. ಅಮ್ಲಪಿತ್ತವಿದ್ದವರು "ಶ್ವಾಸಹಾರಿ ಕಂಪೌಂಡ" (ಕೆಂಪು ಪ್ಯಾಕಿಂಗ) ಉಪಯೋಗಿಸುವುದು ಹೆಚ್ಚು ಲಾಭಕರವು.

ಬಹುತರವಾಗಿ ಎಲ್ಲಾ ಶಹರುಗಳಲ್ಲಿ ಕೆಮಿಸ್ಟ ಸ್ಟೋರ್ಸ ಮತ್ತು ಅಂಗಡಿಗಳಲ್ಲಿ ಈ ಔಷಧಗಳು ರೂ. 2, 3–8–0 ಮತ್ತು 6 ಹೀಗೆ ಬೇರೆ ಬೇರೆ ಬೆಲೆಯ 3 ಪ್ಯಾಕಿಂಗ್ ಮಾದರಿಕ್ಕೆ ಸಿಗುತ್ತವೆ.

ಮಂಗಳೂರು:— ದಿ. ಪ್ರೊವ್ಯಾಲರ್ ಸ್ಟೋರ್ಸ್, ರಥಬೀದಿ.

ವಿಜಾಪುರ:— ಸಾಯೋನಿಯರ ಫಾರ್ಮಸಿ. ಯು. ಪಿ. ಬಾಳಿಗಾ.

ಹುಬ್ಬಳ್ಳಿ ಗದಗ ಧಾರವಾಡ — ಹುಬ್ಬಳ್ಳಿ ಫಾರ್ಮಸಿ.



ಅಲ್ಲಲ್ಲಿಂದ ಒಂದಿಷ್ಟು.

ಬರೆದವ—ಶ್ರೀಕ

ಮಗಳಲ್ಲ, ಹೆಂಡತಿ!

ಕಾರ್ಕಳದಿಂದ ಉಡುಪಿಗೆ ಹೋಗುವ ಮೋಟರ ಗಾಡಿಯಲ್ಲಿ ನನ್ನ ಪಕ್ಕದಲ್ಲೊಬ್ಬ ಮಹಾಶಯರು ಕೂತಿದ್ದರು. ಪ್ರಾಯ ೫೦-೬೦ ಆಗಿರಬಹುದು. ಹಲ್ಲುಗಳು ಬಿದ್ದುಹೋಗಿವೆ. ಗಲ್ಲಗಳು ಗುಳಿ ಬಿದ್ದಿವೆ. ಚರ್ಮ ನೆರಿ ಕಟ್ಟಿದೆ. ಕೂದಲು ಬಿಳಿದಾಗಿದೆ. ಮುಖದಲ್ಲಿ ಕಾಂತಿಯಿಲ್ಲ, ಮೈಯಲ್ಲಿ ಬಲವಿಲ್ಲ. ಹಲವು ದಿನಗಳ ತನಕ ನರಳುತಿದ್ದವರ ಹಾಗೆ ಕಂಡರು. 'ಎಲ್ಲಿಗೆ ಹೊರಟಿರಿ' ಎಂದು ಕೇಳಿದೆ. ಮುಂದಿನ ಸೀಟಿನಲ್ಲಿ ಒಬ್ಬಳು ೧೬-೧೮ ವರ್ಷ ಪ್ರಾಯದ ಹುಡುಗಿ ಕೂತಿದ್ದಳು. ಅವಳ ಕಡೆಗೆ ಬೆರಳು ನೀಡಿ—'ಇವಳನ್ನು ಮುಟ್ಟಿಸಲಿಕ್ಕೆ ಹೋಗುತ್ತೇನೆ, ಕುಂದಾಪುರಕ್ಕೆ' ಎಂದರು. ನೋಡಿದೆ, ಅವಳೂ ಅವರ ಹಾಗೆ ಇದ್ದಾಳೆ. ಮುಖದಲ್ಲಿ ತೇಜವಿಲ್ಲ, ಕಾಂತಿಯಿಲ್ಲ, ರಕ್ತಹೀನವಾದ ಕಣ್ಣುಗಳು. ವರ್ಣ ಕೆಟ್ಟ ಮೈ. ತುಂಬಿದ ತಿಂಗಳ ಗರ್ಭಿಣಿಯ ಹಾಗೆ ತೋರಿದಳು. 'ಯಾರು, ನಿಮ್ಮ ಮಗಳೇ?' ಎಂದು ಕೇಳಿದೆ. 'ಅಲ್ಲ, ನನ್ನ ಹೆಂಡತಿ!' ಎಂದು ಹೇಳಿದರು.

ಪ್ರಮಾದವಾದುದಕ್ಕಾಗಿ ನಾನು ನಾಲಿಗೆ ಕಚ್ಚಿದೆ.

ಮಗಳೆ! ಅಲ್ಲ, ಹೆಂಡತಿ! ಅವರಿಬ್ಬರ ಹೃದಯದಲ್ಲಿ ಯಾವ ಯಾವ ಭಾವನಾತರಂಗಗಳು, ಮನಸ್ಸಿನಲ್ಲಿ ಯಾವ ಯಾವ ವಿಚಾರದ ಅಲೆಗಳು ಎದ್ದಿರಬಹುದೋ,—ಅಂತೂ ಅವುಗಳ ಹೊಯಿಲಿಗೆ ತಲೆ ಕೊಡಲಾರದೆ ಅವರಿಬ್ಬರು ತಲೆ ತಗ್ಗಿಸಿಯೇ ಇದ್ದರು. ಪಾಪ!

\+ \+ \+ \+ \+

ನಾನು ಒಬ್ಬ ಉಪದೇಶಿ

ಗಾಡಿ ಹತ್ತಬೇಕಾದರೆಯೆ—'Hullo, mister, Good morning. Here is a seat; come on' (ಪ್ರಿಯರೇ, ನಮಸ್ಕಾರ, ಇಲ್ಲೊಂದು ಸ್ಥಳವಿದೆ. ಬನ್ನಿ ಕೂತುಕೊಳ್ಳಿ) ಎಂದೊಬ್ಬರು ನನ್ನನ್ನು ಕರೆದರು. ನಾನು ನೋಡಿದೆ—ನನ್ನ ಪರಿಚಯದವರಲ್ಲ. ಆದರೂ ಎಲ್ಲಿಯೋ ಕಂಡ ಹಾಗೆ ಕಾಣುತ್ತಾರೆ. ನಾನು ಹೋಗಿ ಡ್ರೈವರನ ಸಮೀಪ ಕೂತುಕೊಂಡೆ.

'I am an evanjelist, my friend') ಸ್ನೇಹಿತರೆ, ನಾನು ಒಬ್ಬ ಉಪದೇಶಿ) ಎಂದು ಅವರು ನನಗೆ ತಮ್ಮ ಪರಿಚಯ ಮಾಡಿಕೊಟ್ಟರು. ನಾನು ಕಲಿತ ಶಾಲೆ, ಮಾಡಿಕೊಂಡಿರುವ ಉದ್ಯೋಗ—ಇದೆಲ್ಲ ಕೇಳಿ ತಿಳಿದಾದ ಬಳಿಕ—'Well my friend, you might have read the Bible, what is your opinion?' (ಒಳ್ಳೇದು ನನ್ನ ಸ್ನೇಹಿತರೆ, ನೀವು ಪವಿತ್ರ ಬೈಬಲನ್ನು ಓದಿರಬಹುದು. ನಿಮ್ಮ ಅಭಿಪ್ರಾಯವೇನು?) ಎಂದು ಕೇಳಿದರು.

ನಾನು ಬಸ್ಸಿನಿಂದ ಇಳಿಯುವ ತನಕ ನಮ್ಮಿಬ್ಬರೊಳಗೆ ಪ್ರಶ್ನೋತ್ತರಗಳು ನಡೆಯುತ್ತಲೇ ಇದ್ದುವು. ಕೊನೆಗೆ ಅವರು—'Well my dear friend, you are a teacher and you seem to have studied logic too. It is very difficult to discus with you. Still it gives me a great pleasure to talk with you. I shall meet you another day' (ಒಳ್ಳೇದು, ನನ್ನ ಪ್ರಿಯ ಸ್ನೇಹಿತರೇ, ನೀವು ಉಪಾಧ್ಯಾಯರಾಗಿದ್ದೀರಿ. ತರ್ಕಶಾಸ್ತ್ರವನ್ನು ಬಲ್ಲವರಂತೆ ತೋರುತ್ತೀರಿ. ನಿಮ್ಮೊಡನೆ ಚರ್ಚೆ ಮಾಡುವದು ಬಹಳ ಕಷ್ಟದ ವಿಷಯ. ಆದರೂ ನಿಮ್ಮೊಡನೆ ಮಾತನಾಡಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಇನ್ನೊಂದು ದಿನ ನಿಮ್ಮನ್ನು ಕಾಣುವೆನು) ಎಂದು ಹೇಳಿ ಸಲಾಂ ಕೊಟ್ಟು ನನ್ನನ್ನು ಬೀಳ್ಕೊಟ್ಟರು.

ಉಪದೇಶಿಗಳಲ್ಲಿ ಇರುವಷ್ಟು ಸ್ಫೂರ್ತಿ ಉತ್ಸಾಹ ಅಭಿಮಾನಗಳು, ತಮ್ಮ ಮತದ ಪ್ರಸಾರ ಪ್ರಚಾರ ಮಾಡಬೇಕೆಂಬ ಲವಲವಿಕೆ ನಮ್ಮ ವೈದಿಕರು ಪುರೋಹಿತನು ಮಠಾಚಾರ್ಯರುಗಳಲ್ಲಿ ಎಷ್ಟಿದೆ? ಅಪರಿಚಿತರೊಡನೆಯೂ ಪರಿಚಯ ಮಾಡಿಕೊಂಡು ಅವರನ್ನು ತಮ್ಮ ಕಡೆಗೆ ಒಲಿಸುವ ಪ್ರಯತ್ನ ಇವರೆಷ್ಟು ಮಾಡುತ್ತಿದ್ದಾರೆ?

ಉಪದೇಶಿಗಳು ಸಂಬಳಕ್ಕಾಗಿ ಹೀಗೆ ಮಾಡುತ್ತಿರಬಹುದು? ಆದರೆ ನಮ್ಮ ವೈದಿಕರು ಪುರೋಹಿತರು ಮಠಾಚಾರ್ಯರು ಸಮಾಜದ ಉಪ್ಪನ್ನ ತಿಂದು ಬೆಳೆದವರಲ್ಲವೇ? ದಕ್ಷಿಣೆ ಕಾಣಿಕೆ ತೆಗೆದುಕೊಳ್ಳುವುದಿಲ್ಲವೇ?

'ನಾವೂ ಹಿಂದೂ ಮತೋಪದೇಶಿಗಳು' ಎಂದು ಇವರು ಹೇಳುತ್ತಿರುವದನ್ನು ನಾವೆಂದು ಕೇಳುತ್ತಿರಬಹುದು?

\+ \+ \+ \+ \+

ಕಾಂಗ್ರೆಸವಾಲ್ಲಾ.

'ಈ ಮಳೆಗೆ ಎಲ್ಲಿಗೆ ಹೊರಟಿರಿ?' ಎಂದು ನಾನು ಕೇಳಿದೆ.

'ಇಲ್ಲಿಗೆ . . . . . ತನಕ ಹೋಗಿ ಬರಬೇಕಾಯಿತು.

'ಸರಿ, ಸರಿ, ಗೊತ್ತಾಯಿತು. ಈವತ್ತು ತಿಲಕರು ಹುಟ್ಟಿದ ದಿನ. ಕಾಂಗ್ರೆಸ ಮೀಟಿಂಗಿಗೆ ಹೋಗುವಿರಲ್ಲವೆ?'

'ಅಲ್ಲಪ್ಪಾ, ಅಲ್ಲ. ನಾನು ಹೋಗುವುದು ಖಾಸಗೀ ಕೆಲಸದ ಮೇಲೆ!'

'ನೀವು ಕಾಂಗ್ರೆಸ ಮೆಂಬರರಲ್ಲವೆ? ಜವಾಹರರು ಬಂದಾಗ ಅವರ ಸಮೀಪದಲ್ಲಿಯೇ ಸುತ್ತಾಡಿಕೊಂಡು ಇದ್ದೀರಿ!'

'ಹೌದು. ನಾನು ಒಬ್ಬ ಕಾಂಗ್ರೆಸವಾಲ್ಲಾ ಕಾಂಗ್ರೆಸಿನೊಡನೆ ನನ್ನ ಸಹಾನುಭೂತಿ ಉಂಟು. ಆದರೆ ಕಾಂಗ್ರೆಸ್ ಮೆಂಬರು ಮಾತ್ರ ಅಲ್ಲ.

'ಮತ್ತು ಕಾಂಗ್ರೆಸವಾಲ್ಲಾ ಹೇಗೆ?'

'ಕಳೆದ ಇಲೆಕ್ಷನಿನಲ್ಲಿ . . . . . . ರು ಕಾಂಗ್ರೆಸ ಉಮೇದ್ವಾರಿಯಾಗಿದ್ದರು. ನಾನು ಅವರ ಪಕ್ಷಕ್ಕೆ ನಿಂತು ಕೆಲಸ ಮಾಡಿದ್ದೇನೆ. ಆದರೆ ಮೀಟಿಂಗು ಗೀಟಿಂಗುಗಳಿಗೆ ಹೋಗುವುದಿಲ್ಲ. ನಮಗೆ ಸರಕಾರದ ಮಂದಿಯೊಡನೆ ಕೆಲಸ ಜಾಸ್ತಿ. ಅವರೊಡನೆ ವಿರೋಧ ಮಾಡಲಿಕ್ಕಾಗುವುದಿಲ್ಲ.

'ಈಗ ಸರಕಾರ ಕಾಂಗ್ರೆಸಿನದ್ದು. ನಿಮಗೆ ಗೊತ್ತಿಲ್ಲವೆ?'

'ಹಾಗೆಂದು ಕೇಳಿದ್ದೇನೆ. ಆದರೂ ನೋಡಬೇಕು, ಏನೆಲ್ಲಾ ಆಗುತ್ತದೆಂದು'

× × × × ×

ಫರ್ಸ್ಟ್ ಕ್ಲಾಸ್ ರಿಜರ್ವ್.

ಎಲ್ಲಾ ಸೀಟುಗಳ ಮೇಲಿನ ಕೂತುಕೊಳ್ಳುವ ಹಾಸಿಗೆಗಳು ಹಾಗೆಯೇ ಇವೆ. ಡ್ರೈವರನ ಎಡಗಡೆಗಿದ್ದ ಹಾಸಿಗೆ ಮಾತ್ರ ಮಾಯವಾಗಿದೆ. ಟಿಕೇಟು ತೆಗೆದುಕೊಂಡ ಎಷ್ಟೋ ಮಂದಿ ನೋಡಿ ನೋಡಿ ಹಿಂದೆ ಹೋಗಿ ಕೂತುಕೊಂಡರು. ಪರೀಕ್ಷಿಸಬೇಕೆಂದು ಒಬ್ಬ ಖಿಲಾಡಿ ಬಂದು 'ಎರಡು ಫರ್ಸ್ಟ್ ಕ್ಲಾಸ್ ಟಿಕೇಟು ಕೊಡಿ' ಎಂದ. 'ಇಲ್ಲ, ರಿಜರ್ವ್ ಆಗಿದೆ' ಎಂದು ಕಂಪೆನಿಯ ಗುಮಾಸ್ತ ಬಂದವನನ್ನು ಹಿಂತಿರುಗಿಸಿದ.

ನಾನು—'ಇದೇನು ತಮಾಷೆ?' ಎಂದು ಮೂಗಿನ ಮೇಲೆ ಬೆರಳಿಟ್ಟು ನೋಡುತ್ತ ಕೂತೆ. ಬಸ್ಸು ಸ್ವಲ್ಪ ಮುಂದೆ ಹೋಗಿ ನಿಂತಿತು. ದೊಡ್ಡ ಮನೆಯೊಳಗಿಂದ ಜರಿ ಪೇಟಾ ಇಟ್ಟ ದೊಡ್ಡ ಮನುಷ್ಯರೊಬ್ಬರು ಹೊರಗೆ ಬಂದು ನಿಂತರು. ಟೋಪಿನ ಮೇಲಿದ್ದ ಹಾಸಿಗೆಯನ್ನು ಕಂಡಕ್ಟರ ಡ್ರೈವರನ ಎಡಗಡೆ ಹಾಸಿದ. ಮಹಾಶಯರು ಇಬ್ಬರು ಕೂತುಕೊಳ್ಳುವ ಸ್ಥಳದಲ್ಲಿ ಒಬ್ಬರೇ ಕೂತುಕೊಂಡು ಪ್ರಯಾಣ ಮಾಡಿದರು.

ಹಣ ಕಾಸು ಇಲ್ಲದ ಬಡವರೂ, ಕೋಟ್ ಪತಲೂನ್ ಹಾಕದ ಉದ್ಯೋಗಸ್ಥರೂ ಸಹ ಬಸ್ಸಿನ ಫರ್ಸ್ಟ್ ಕ್ಲಾಸುಗಳಲ್ಲಿ ಕೂತುಕೊಳ್ಳಲಿಕ್ಕೆ ತಾ ಮುಂದೆ ತಾಮುಂದೆ ಬರುವುದರಿಂದ—ಕೆಲ ಕೆಲವು ಮಂದಿ ಪಾಸು ಇರುವವರಿಗಾಗಿಯೂ, ಸೆಕೆಂಡ ಕ್ಲಾಸ ಟಿಕೇಟು ತೆಗೆದುಕೊಳ್ಳುವವರಿಗಾಗಿಯೂ, ಹೀಗೆ ಹಾಸಿಗೆ ಟೋಪಿನ ಮೇಲೆ ಹಾಕಿ ಫರ್ಸ್ಟ್ ಕ್ಲಾಸ್ ಸೀಟು ರಿಜರ್ವ ಮಾಡುವದುಂಟಂತೆ. ಹೊಸ ಪದ್ಧತಿ! ಎಲ್ಲರೂ ನೋಟ್ ಮಾಡಬೇಕಾದ್ದು!

× × × × ×

ಕಂಗಾಲ್ ಏಜನ್ಸಿ.

ಮೊನ್ನೆ ಒಂದು ದಿನ ಒಬ್ಬ ಉಪಾಧ್ಯಾಯರ ಮನೆಯಲ್ಲಿ ಉಳಕೊಂಡಿದೆ. ಉಪಾಧ್ಯಾಯರ ಸ್ಥಿತಿಗತಿಗಳ ಸುಧಾರಣೆಯ ಪ್ರಶ್ನೆಯು ಬರಲು, 'ಪ್ರತಿಯೊಂದು ಜಾತಿಮತ ಸಂಪ್ರದಾಯ ವರ್ಗದವರಿಗೆ ಒಂದೊಂದು ಸಂಘ, ಸಂಸ್ಥೆ, ಬೇಂಕು, ಕಂಪೆನಿ ಇತ್ಯಾದಿಗಳಿವೆ. ಅವುಗಳಿಂದ ಅವರು ಲಾಭ ಸಂಪಾದಿಸಿಕೊಂಡು ಸಂಪನ್ನರಾಗುತಿದ್ದಾರೆ. ನಾವು ಸಂಪನ್ನರಾಗಲಿಕ್ಕೆ ಹುಟ್ಟಿದವರಲ್ಲ, ಬಡವರಾಗಿ ಹುಟ್ಟಿ, ಬಡವರಾಗಿ ಬಾಳಿ, ಬಡವರಾಗಿ ಸಾಯಲಿಕ್ಕೆ ಹುಟ್ಟಿದವರು . . . . ' ಎಂದರು.

'ಹೌದು, ಅದಕ್ಕೀಗ ಏನು ಮಾಡಬೇಕೆನ್ನುವಿರಿ?'

'ನಾವೊಂದು ಕಂಗಾಲ್ ಏಜನ್ಸಿಯನ್ನು ರಿಜಿಸ್ಟರ ಮಾಡಬೇಕೆಂದೆಣಿಸಿದ್ದೇವೆ. ನಿಮ್ಮ ಅಭಿಪ್ರಾಯವೇನು?'

'ನನಗೆ ಅರ್ಥವಾಗಲಿಲ್ಲ'.

'ಇತರರು ಸ್ವಾರ್ಥಿಗಳಾಗಿ ಸ್ವಾರ್ಥಕ್ಕೋಸ್ಕರ ಬೇಂಕು ಮೊದಲಾದವುಗಳನ್ನು ಇಡುವರಾದರೆ ನಾವು ಪರಾರ್ಥಿಗಳಾಗಿ ಪರಾರ್ಥಕ್ಕೋಸ್ಕರ ಏಜನ್ಸಿಯನ್ನು ಸ್ಥಾಪಿಸುವೆವು. ಪರೋಪಕಾರ ಮಾಡಲಿಕ್ಕೆ ನಮ್ಮ ಹತ್ತಿರ ಮತ್ತೇನೂ ಉಳಿದಿಲ್ಲ. ದಾರಿದ್ರ್ಯದ ಮೂಲಕ ಇದ್ದ ಶರೀರಬಲ ಮನೋಬಲಗಳೂ ನಾಶವಾಗಿ ಹೋಗಿಬಿಟ್ಟಿವೆ. ಆದ್ದರಿಂದ ಏಜನ್ಸಿಯಲ್ಲಿ ನಮ್ಮ ಕಂಗಾಲುತನ—ದಾರಿದ್ರ್ಯವನ್ನೇ ಭಂಡವಾಳ ಹಾಕಿ, ಅದನ್ನೇ ಇತರರಿಗೆ ಹಂಚುವೆವು. ಬೇರೆ ಉಪಾಯವಿಲ್ಲ'.

'ನಾನು ನಕ್ಕು ಒಂದು ನಿಡಿದುಸಿರನ್ನು ಬಿಟ್ಟೆ. ನೀವು ಹೇಳುವದು ನಿಜ. ಆದರೆ ಕೊಳ್ಳುವವರಿಲ್ಲದೆ ಏಜನ್ಸಿಯು ಕೊಡುವುದಾದರೆ ಯಾರಿಗೆ? ನಿಮಗಿಂತ ಬಡವರಿಗೆ ಕೊಟ್ಟು ಪ್ರಯೋಜನವಿಲ್ಲ. ನಿಮಗಿಂತ ಶ್ರೀಮಂತರಾದವರು ನಿಮ್ಮ ಕಂಗಾಲುತನವನ್ನು ತಕ್ಕೊಳ್ಳಲಾರರು. ಆದ್ದರಿಂದ 'ಏಜನ್ಸಿಯು ವ್ಯವಹಾರ—ವಹಿವಾಟು ಇಲ್ಲದೆ ಮುಚ್ಚಿ ಹೋದೀತೋ ಎಂಬ ಸಂದೇಹವಾಗುತ್ತದೆ!—ನನಗೆ.

'ಆದರೂ ಪ್ರಯತ್ನಿಸಿ ನೋಡುವೆವು!' ಎಂದರವರು.

ಅಡಿಕೆತೋಟಗಾರರಿಗೆ ಎಚ್ಚರಿಕೆ!

ಮಹಾಳಿ ಅಥವಾ ಕೊಳೆರೋಗ. ದಕ್ಷಿಣಹಿಂದೂದೇಶದ ಅಡಿಕೆ

(ಮದರಾಸು ವ್ಯವಸಾಯ ಇಲಾಖೆಯಿಂದ)

ಮಹಾಳಿ ಅಥವಾ ಕೊಳೆ ರೋಗವು ತೋಟಗಳಿಗೆ ಬಹಳವಾಗಿ ನಾಶವನ್ನುಂಟು ಮಾಡುವ ರೋಗವಾಗಿದೆ. ಅದು ಒಂದು ತರದ ಪರತಂತ್ರ ಜೀವಿಯು ಅಣಬಿಯಿಂದ ಉಂಟಾಗುತ್ತದೆ. ಮತ್ತು ಅದು ಬಹಳವಾದ ಮಳೆಯಲ್ಲಿ ವೃದ್ಧಿಯಾಗುವುದು. ಆದುದರಿಂದ ಅದು ವಿಪರೀತ ಮಳೆ ಬೀಳುವ ಬಾಗ್ಯಾಯತು ಪ್ರಾಂತ್ಯಗಳಲ್ಲಿ ಉಂಟಾಗುವುದು. ದಕ್ಷಿಣ ಹಿಂದೂಸ್ಥಾನದ ಮಲಬಾರು ದಕ್ಷಿಣ ಕನ್ನಡ, ಮೈಸೂರು ಪ್ರಾಂತ್ಯದ ಮಲೆನಾಡುಗಳಲ್ಲಿ, ಕೊಚ್ಚಿ ಮತ್ತು ತಿರುವಾಂಕೂರು ಪ್ರಾಂತ್ಯಗಳಲ್ಲಿ ಪ್ರತಿ ವರ್ಷವು ತಲೆದೋರುವುದಾಗಿ ಕಂಡು ಬರುತ್ತದೆ. ಈ ರೋಗವು ಹೆಚ್ಚಾಗಿ ಬೆಳೆಯುವ ಅಡಿಕೆಗಳಿಗೆ ತಗಲಿ—ಅವುಗಳನ್ನು ಕೊಳೆತು ಬೀಳಿಸುವುದು. ಮಳೆಯು ಹೆಚ್ಚಾಗಿದ್ದ ಕಾಲಗಳಲ್ಲಿ ಈ ರೋಗವು ಬಹಳ ಕಠಿಣವಾಗಿ ಇಡೀ ಫಲವನ್ನೇ ನಾಶ ಮಾಡುವುದು. ಕೆಲವು ವೇಳೆ ಈ ರೋಗವು ಮಂದ ಕೊಂಬೆಗೆನೇ ತಗಲಿ ಮರವೇ ಸತ್ತುಹೋಗುವುದು.

ನಿವಾರಣೆ.

ಈ ರೋಗವನ್ನು ನಿವಾರಣೆ ಮಾಡುವ ಒಂದು ಬಹಳ ಒಳ್ಳೇಯ ಉಪಾಯವು ಈಗ ಕಂಡು ಹಿಡಿಯಲ್ಪಟ್ಟಿದೆ. ಅದೇನೆಂದರೆ-ಅಡಿಕೆ ಗೊನೆಗಳಿಗೆ "ಬೋರ್ಡೋ ಮಿಕ್ಶ್ಚರ್" ಎಂಬ ದ್ರಾವಕವನ್ನು ಪಂಪಿನ ಮೂಲಕ ಚಿಮುಕಿಸುವುದು. ಅಡಿಕೆಗಳ ಮೇಲೆ ಬಿದ್ದ ಈ ಮಿಶ್ರಣವು ಒಣಗಿ ಒಂದು ಕವಚವಾಗಿ ನಿಲ್ಲುತ್ತದೆ. ಅನೇಕ ಬಾಗ್ಯಾಯತುದಾರರು ಪ್ರತಿ ವರ್ಷವೂ ರಕ್ಷಣೋಪಾಯಗಳನ್ನು ಅನುಸರಿಸಿ ಹೆಚ್ಚಾದ ಗುಣಗಳನ್ನು ಹೊಂದಿರುವರು. ಕಳೆದ ಮಳೆಗಾಲದಲ್ಲಿ ಈ ರೋಗವು ಸಾಂಕ್ರಾಮಿಕ ರೂಪದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಲೆದೋರಿತು. ಸಮಯಕ್ಕೆ ಸರಿಯಾಗಿ ಔಷಧಿಯನ್ನು ಪ್ರಯೋಗಿಸಿದವರು ತಮ್ಮ ಫಲಗಳನ್ನು ರಕ್ಷಿಸಿಕೊಂಡರು. ಅದಕ್ಕೆ ತಪ್ಪಿದವರು ಫಲವನ್ನು ಕಳಕೊಂಡರು.

ಹಲವು ತೋಟಗಳಲ್ಲಿ ಇಡೀ ಫಸಲೇ ನಾಶಹೊಂದಿತು. ಮತ್ತು ಅಡಿಕೆ ತೋಟಗಳೇ ಜೀವನಕ್ಕೆ ಪೂರ್ಣಾಧಾರವಾಗಿದ್ದಂಥಾ ಬಾಗಾಯತುದಾರರು ಬಹಳ ಕಂಗಾಲು ಸ್ಥಿತಿಯಲ್ಲಿ ಬಿದ್ದರು. ಅತ್ಯುತ್ತಮ ಫಲವು ದೊರೆಯಬೇಕಾದರೆ ಅಡಿಕೆಗೊನೆಗಳಿಗೆ ಎರಡು ಸಲ ಮದ್ದು ಚಿಮುಕಿಸತಕ್ಕದ್ದು. ಮಳೆಗಾಲವು ಪ್ರಾರಂಭವಾಗುವ ಸ್ವಲ್ಪ ಮೊದಲು ಅಂದರೆ ಅಡಿಕೆ ಸಣ್ಣದಿರುವಾಗ ಒಂದು ಸಲ, ಮತ್ತು ಕೆಲವು ಹಪ್ತೆಗಳ ನಂತರ (ಸುಮಾರು ೬ ಹಪ್ತೆಗಳು) ಅಡಿಕೆಗಳು ಸ್ವಲ್ಪ ದೊಡ್ಡದಾದ ಮೇಲೆ ಎರಡನೇ ಸಲ. ಈ ಮಿಶ್ರಣವನ್ನು ಅಡಿಕೆ ಬೆಳೆಸುವ ಪ್ರಾಂತ್ಯಗಳ ಅಂಗಡಿಗಳಲ್ಲಿ ಸಿಕ್ಕುವ ಔಷಧಿಗಳಿಂದ ತೋಟದ ಮಾಲಿಕರೇ ತಯಾರಿಸಬಹುದು. ಇಂಗ್ಲೀಷ್ ಮತ್ತು ದೇಶಭಾಷೆಯ ಮದ್ದು ತಯಾರಿಸುವ ಪಂಪುಗಳ ಉಪಯೋಗ ಮೊದಲಾದ ವಿಷಯಗಳ ಕರಪತ್ರಗಳನ್ನು ಮದ್ರಾಸ್ ವ್ಯವಸಾಯ ಇಲಾಖೆಯವರು ಪ್ರಕಟಿಸಿರುವರು. ಇವುಗಳನ್ನು ಡೆಮೊನಸ್ಟ್ರೇಟರರಿಂದಲೂ ಅಥವಾ ತಲಚೇರಿಯ ಕೃಷಿಯ ಡಿಪ್ಯುಟಿ ಡೈರೆಕ್ಟರ್‌ರವರಿಂದಲೂ ಪಡಕೊಳ್ಳಬಹುದು. ಇದರ ವಿಷಯ ಹೆಚ್ಚಿನ ಮಾಹಿತಿಗಳನ್ನು ಈ ಆಫೀಸರರು ಸಂತೋಷದಿಂದ ಕೊಡಲು ತಯಾರಿರುತ್ತಾರೆ.

ಜರ್ಮನಿಯ ಬರ್ಲಿನ್ ನಗರದಿಂದ ಅಫಘಾನಿಸ್ಥಾನದ ಕಾಬೂಲಿಗೆ ಒಂದು ವಿಮಾನ ಸರ್ವಿಸಿನ ವ್ಯವಸ್ಥೆಯಾಗುವುದು.

ಪೆಲಿಸ್ತೀನದ ವಿಭಾಗದ ಕುರಿತು ಭಾರತೀಯ ಮುಸ್ಲಿಮರಲ್ಲಿ ಅಸಮಾಧಾನವುಂಟಾಗಿದ್ದು, ಅದನ್ನು ಖಂಡಿಸಿ ಅವರು ಅನೇಕ ಕಡೆಗಳಲ್ಲಿ ಪ್ರದರ್ಶನಾಸಭೆಗಳನ್ನು ಜರಗಿಸಿದರು.

ನವರತ್ನಾ 'ಚ್ಯವನಪ್ರಾಶಾವ ಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ

ರಾತಲು 1ಕ್ಕೆ ರೂ 2—6—0. ½ ರಾತಲು 1-4—0. ¼ ರಾತಲು 0-12-0

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇಧರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ ಫೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸುವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳೆದು,

ಕ್ರಯ 16 oz 3-0-0, 8 oz 1 10 0, 4 oz 0 14—0

ತಯಾರಿಸುವವರು.—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ —

ಪಾಪುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಣೈ ಕಾರ್ಕಳ.
ಕೆ. ಎಲ್. ಐತಾಳಾ, ಉಡುಪಿ — ಮೊಡರ್ನ್ ಫಾರ್ಮಸಿ, ಕುಂದಾಪುರ.
ಬಿ. ಜಿ. ಭಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರ.
ಡಾ। ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು.-CHAMSI NARSI & CO.

Chemists Princes Street BOMBAY

DIAMONDS! DIAMONDS!

BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್ ಕೆ. ಶೆಟ್, ಜುವೆಲ್ಲರ್
ಮಿಶ್ಶನ್ ಹೈಸ್ಕೂಲ್ ಬಳಿ ಮಂಗಳೂರ

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನ ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮುತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of

Please call on or Write to:-

Simon & Co.,
Painters,
Church Gate Hampankatta No. 13 MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡುಗಳು ಇತ್ಯಾದಿಗಳನ್ನೂ
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

KANARA WATCH WORKS

WATCH MAKERS & GENERAL MERCHANTS
Hampankatta MANGALORE

Dealers in — Watches Clocks Timepieces, Rolled Gold Jewellery & Sporting Materials etc,



Stockists of West End Zenith Meridian, Swiss Watches of latest designs & tastes

Repairers — Watches, Clocks Timepieces and Gramophones

Japan 8 Inch	Octegon	Rs	6	0	0
„ 8 ,	Regulator	„	6	12	0
, 10 ,	Octegon	,	6	8	0
„ 10 „	Regulator	,	7	8	0

ಇವುಗಳು ಆಧುನಿಕ ಯಂತ್ರ ಸಲಕರಣೆಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು ವಾಚು, ಗಡಿಯಾರ, ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲುಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ)

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶ್ರೇಷ್ಠ ಮಾದರಿ ಗಟ್ಟಿಯಾದ ಯಂತ್ರಸಾಮಗ್ರಿಗಳು, ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು ಅತಿ ಕಮ್ಮಿ ಬೆಲೆಗಳು ಮೂರ ವರ್ಷದ ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ಟಪ್ಪಾಲು ಖರ್ಚು ಮಾಫ್ ಕೆಳಗಿನ ಉರುಟು ವಾಚು 1ಕ್ಕೆ ರೂ 2 15 0 ಅದರಲ್ಲಿ ಉತ್ತಮವಾದದ್ದು 3-8 0 ಬಂಗಾರದ ಗಿಲೀಟಿದ್ದದ್ದಕ್ಕೆ 4—8—0 ಲೇಡಿಸ್ ರೂ 5-0 0 ಸಿಕ್ಕೇರ ಆಯತಾಕಾರದಕ್ಕೆ 6-8 0 ಅದರಲ್ಲಿ ಬಂಗಾರದ ಗಿಲೀಟಿದ್ದುದಕ್ಕೆ 8-0 ಲೆದರ ಪಾಕೆಟ್ ವಾಚಿಗೆ ಬರೆ ರೂ 1—14—0 ಬಿ ಟ್ರ್ಯಾಂಬೀಸ್ 1ಕ್ಕೆ ಒರೆ ರೂ 1—15 0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co, 170 Cross Street CALCUTTA

USE
'KALYANPUR SUGAR

IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.

available in 7lb and 14lb packets at the
Office, C. P. C. Co., Ltd

ಕಲ್ಯಾಣಪುರ ಸಕ್ಕರೆಯನ್ನೇ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ತಾಲೂಕುಗಳಿಂದ

ಕಾರ್ಕಳ:—ರಾಷ್ಟ್ರಪತಿ ಜವಾಹರಲಾಲು ನೆಹರೂಯವರ ಆಜ್ಞೆಯಂತೆ ತಾ. ೧೮-೭-೩೭ನೇ ಆದಿತ್ಯವಾರ ಇಲ್ಲಿಯೂ ಹಿರಿಯ ತಲೆ ದಿನವನ್ನಾಗಿ ಆಚರಿಸಿದರು. ಶಾಲಾಶಾಲೆಗಳಿಗೆಲ್ಲ ರಜೆ ಇದ್ದ ಕಾರಣ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಿಂದ ಮುಖ್ಯ ಭಾಗವನ್ನು ತೆಗೆದುಕೊಂಡಿದ್ದರು. ಬೆಳಿಗ್ಗೆ ಪ್ರಭಾತಫೇರಿ, ರಾಷ್ಟ್ರಧ್ವಜವಂದನೆ, ಸಾಯಂಕಾಲ ಮೆರವಣಿಗೆ ಮತ್ತು ವಕೀಲ ಶ್ರೀಯುತ ಕೆ. ಮಹಾಬಲ ಹೆಗ್ಡೆರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಗಳು ಆದುವು. ಸಭೆಯಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ಇತರ ಕರ್ತವ್ಯಾದಿಗಳ ಕುರಿತು ಅಧ್ಯಕ್ಷರ ಮತ್ತು ಶ್ರೀಯುತ ಕೇಶವ ರಾಮಚಂದ್ರ ಶೆಣೈಯವರ ಭಾಷಣಗಳಾಗಿ "ವಂದೇ ಮಾತರಂ"ನೊಂದಿಗೆ ಅಂದಿನ ಕಾರ್ಯಕ್ರಮವು ಮುಗಿಯಿತು. ಸಭೆಯಲ್ಲಿ ಕಾಂಗ್ರೆಸ ಮಂತ್ರಿಗಳ ಅಭಿನಂದನ ಮತ್ತು ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಕುರಿತು ನಿರ್ಣಯಗಳೂ ಆದುವು.

ತಾ. ೨೬-೭-೩೭ರ ರಾತ್ರಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಬೆಂಗಳೂರಿನ ಶ್ರೀಮಾನ್ ಬಿ. ಎಚ್. ಶ್ರೀನಿವಾಸಾಚಾರ್ಯರು ಪಂಢರಾಪುರದ ನರಹರಿ ಭಕ್ತ ಇವರ ಚರಿತ್ರೆಯನ್ನು ಹರಿಕಥಾ ರೂಪವಾಗಿ ಹೇಳಿದರು. ಅಂದಿನ ಸಭೆಗೆ ಶ್ರೀಯುತ ಕಾರ್ಕಳ ಸ್ನೋರುಪ್ರಭುಗಳವರು ಅಧ್ಯಕ್ಷರಾಗಿದ್ದರು. ಅವರೂ ತಮ್ಮ ಭಾಷಣದಲ್ಲಿ ಭಕ್ತಿರಸದ ಮಹಿಮೆಯ ಕುರಿತು ಚಲೋ ಭಾಷಣವನ್ನು ಕೊಟ್ಟರು.

ಮಳೆಗಾಲದ ದುರುಸ್ತಿ ವಗೈರೆ ಏನೊಂದೂ ಇಲ್ಲದೆ ಪಂಚಾಯತ ಆಡಳಿತಕ್ಕೆ ಒಳಪಟ್ಟ ಕೆಲವು ಓಣಿಗಳ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿರುವವು. ರಸ್ತೆಯ ಇಬ್ಬದಿಯಲ್ಲಿರುವ ನೀರು ಹರಿಯುವ ತೋಡುಗಳು ಕಲ್ಲು ಮಣ್ಣು ಕಸಕಡ್ಡಿಗಳಿಂದ ತುಂಬಿಹೋಗಿರುವ ಪ್ರಯುಕ್ತ ಮಳೆ ನೀರು ರಸ್ತೆಯ ಮೇಲಿಂದಲೇ ಹರಿದುಹೋಗಿ ರಸ್ತೆಗಳು ಮತ್ತೂ ಹೆಚ್ಚಿಗೆ ಹಾಳಾಗುತ್ತಿವೆ. ಈಗ ಇವುಗಳ ದುರುಸ್ತಿ ಕೆಲವೇ ರೂಪಾಯಿಗಳಿಂದ ಆಗುವದಿದ್ದಲ್ಲಿ ಇವು ಪೂರ್ಣ ಹಾಳಾದಾಗ ಬಹಳ ರೂಪಾಯಿಗಳು ಬೇಕಾಗುವವು. ಪಂಚಾಯತಿಯವರು ಇತ್ತ ಗಮನಕೊಡುವರಾಗಿ ನಂಬಲಾಗಿದೆ.

ಬೈಲೂರು:—ಅಖಿಲಭಾರತ ರಾಷ್ಟ್ರಪತಿ ಪಂಡಿತ ಜವಾಹರಲಾಲರ ಸಂದೇಶದ ಮೇರೆಗೆ ಬೈಲೂರು ಸಂಯುಕ್ತ ಕಾಂಗ್ರೆಸ್ ಕಛೇರಿಯಲ್ಲಿ ತಾ ೧೮-೭-೩೭ರಲ್ಲು ಒಂದು ಸಾರ್ವಜನಿಕ ಸಭೆಯನ್ನು ಶ್ರೀಯುತ ಕಾರ್ಕಳ ನಾಗಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಸಭಿಕರಲ್ಲಿ ಕೆಲವರು ಭಾಷಣಕೊಟ್ಟರು. ಮುಖ್ಯವಾಗಿ ಮ| ರಾ| ಕೆ ಎಲ್ ಕುಡುವ ಬಿ ಎ ಬಿ, ಎಲ್, ಇವರು ತಮ್ಮ ಭಾಷಣದಲ್ಲಿ ಸಭೆ ಜರಗಿಸುವ ಉದ್ದೇಶ ಈಗಿನ ಹೊಸ ರಾಜ್ಯಾಂಗರಚನೆಯ ಕಾನೂನಿನ ಪ್ರಕಾರ ಕಾಂಗ್ರೆಸ್ ಮಂತ್ರಿಗಳಿಗೆ ದೇಶಕ್ಕೆ ಹಿತವಾಗ ತಕ್ಕಂಥಾ ಕೆಲಸಗಳನ್ನು ಮಾಡಲಿಕ್ಕೆ ಎಷ್ಟರಮಟ್ಟಿನ ಅಧಿಕಾರವುಂಟು ಮತ್ತು ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಸ್ವೀಕಾರ ಮಾಡಿದಂದಿನಿಂದ ಇಂದಿನ ವರೆಗೆ ಮಾಡಿದ ಕಾರ್ಯಕಲಾಪಗಳೂ ಇನ್ನು ಮಾಡಲಿಕ್ಕಿರುವ ಕಾರ್ಯ ಮುಂತಾದ ವಿಷಯಗಳ ಕುರಿತು ಸಭಿಕರಿಗೆ ಮುಂದಿಟ್ಟಾಗುವ ರೀತಿಯಲ್ಲಿ ವಿವರಿಸಿ ತಿಳಿಸಿದರು. ತರುವಾಯ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಪ್ರತಿಯೊಂದು ಕಡೆಗಳಲ್ಲಿಯೂ ಮಂಜೂರು ಮಾಡಬೇಕೆಂದು ಪ್ರಕಟಿಸಿದ ಠರಾವುಗಳನ್ನು ಇಲ್ಲಿ ಕೂಡ ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟವು.

ಮೂಲ್ಕಿ:—ರಾಷ್ಟ್ರಪತಿ ನೆಹರೂಗಳವರ ಸಂದೇಶದಂತೆ ಇಲ್ಲಿ ಈ ದಿನ ತಾ ೧೮ರಲ್ಲಿ ಮೂಲ್ಕಿ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಬೆಳಿಗ್ಗೆ ಪ್ರಭಾತಫೇರಿ, ಧ್ವಜವಂದನೆ, ಸಾಯಂಕಾಲ ಸ್ಥಳೀಯ ಬಿಲ್ಲವ ಸಮಾಜದ ಬೋರ್ಡಿನಲ್ಲಿ ಸಾರ್ವಜನಿಕ ಸಭೆ ಸೇರಿತು. ಸಭೆಗೆ ಶ್ರೀಯುತ ಎಂ ರಾಮಣ್ಣ ಶೆಟ್ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪ್ರಾಮುಖ್ಯವಾದ ಈ ದಿನದ ಮಹತ್ವವನ್ನು ವಿವರವಾಗಿ ಡಾ| ಎಂ ರಾಯಪ್ಪ ಕಮ್ತಿರು ಸಭೆಗೆ ವಿವರಿಸಿದ ನಂತರ ಶ್ರೀಯುತ ಎಂ. ಆರ್ ಪೂಂಜರು ಕಾಂಗ್ರೆಸ್ ವಹಿಸಿಕೊಂಡ ಮಂತ್ರಿಪದವಿಯ ಕುರಿತು ಮಾತಾಡಿ, ಪ್ರತಿಯೊಂದು ಗ್ರಾಮಗಳಲ್ಲಿಯ ಕಾಂಗ್ರೆಸ್ ಕಮಿಟಿಗಳು ಆಗುವುದು ಒಳ್ಳೆಯದೆಂಬುದನ್ನು ಬೋಧಿಸಿ, ಪ್ರತಿಯೊಬ್ಬ ಪ್ರಾಯಕ್ಕೆ ಬಂದವನು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯನಾಗಿ ಸೇರಬೇಕಾದ ಆವಶ್ಯಕತೆಯನ್ನೂ ಮುಂದಿಟ್ಟಾಗುವಂತೆ ವಿವರಿಸಿ ಹೇಳಿದರು. ಅಧ್ಯಕ್ಷರ ಉಪಸಂಹಾರದ ಭಾಷಣವಾದೊಡನೆ ಮಹಾಸಭೆಯು ಅಖಿಲಭಾರತ ರಾಷ್ಟ್ರಸಭೆಯು ಮಂತ್ರಿಪದವಿಗೆ ಒಪ್ಪಿಗೆಕೊಟ್ಟದ್ದಕ್ಕೆ ಪ್ರಶಂಸಿಸಿ, ಆರು ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಗಳ ಮೇಲೆ ಸಂಪೂರ್ಣ ವಿಶ್ವಾಸವುಂಟೆಂದು ತೋರಿಸಿ, ಎಲ್ಲಾ ರಾಜಕೀಯ ಮತ್ತು ಇತರ ಕೈದಿಗಳನ್ನು ಬೇಗನೆ ಸರಕಾರವು ಬಿಡಬೇಕೆಂಬ ಅಪೇಕ್ಷೆಯನ್ನು ಸೂಚಿಸಿ ಠರಾವುಗಳನ್ನು ಮಂಜೂರುಮಾಡಿತು.

ಮೂಲ್ಕಿ ಪೇಟೆಯಿಂದ ಕೋಟೆಕೇರಿ, ಅಕ್ಕಸಾಲಿಗರಕೇರಿ, ಬಪ್ಪನಾಡು ಕೇರಿಗಳಿಗೆ ಹೋಗುವ ಒಳ ರಸ್ತೆಗಳು ಬಹಳ ನಾದುರುಸ್ತಿಯಾಗಿ ಪ್ರಯಾಣಿಕರಿಗೆ ತುಂಬಾ ಕಷ್ಟಕೊಂದರೆಗಳು ಸಂಭವಿಸುತ್ತಿವೆ. ರಾತ್ರಿಕಾಲದಲ್ಲಂತೂ ಸ್ವಂತ ದೀಪದ ಸಹಾಯವಿಲ್ಲದೆ ಹೋಗಲಿಕ್ಕೇ ಸಾಧ್ಯವಾಗುವಂತಿಲ್ಲ. ಈ ನಾದುರುಸ್ತಿಯ ವಿಷಯದಲ್ಲಿ ಮೇಲಾಧಿಕಾರರು ಯಾವುದೊಂದೂ ನಿಗಾ ತೆಗೆದುಕೊಂಡದ್ದು ಕಂಡುಬರುವುದಿಲ್ಲ. ಆದುದರಿಂದ ಈ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮೇಲಾಧಿಕಾರರು ನಿಗಾ ಕೊಡುವರೆಂದು ಆಶಿಸಲಾಗಿದೆ.

ಕುಲ್ಯಾ ಚಿತ್ರಾಪುರ:—ಇಲ್ಲಿಯ ಮಠಾಧೀಶರಾದ ಶ್ರೀ ವಿದ್ಯಾಪೂರ್ಣ ತೀರ್ಥ ಶ್ರೀಪಾದಂಗಳವರು ಕಳೆದ ವರ್ಷದಂತೆ ಈ ವರ್ಷವೂ ಅಖಂಡ ಉಪವಾಸ ವ್ರತವನ್ನು ಆಚರಿಸುವರು. ಕಳೆದ ಪ್ರಥಮ ಏಕಾದಶಿಯಿಂದ ಬರುವ ಉತ್ಥಾನ ದ್ವಾದಶಿ ವರೆಗೆ ಸದರಿ ವ್ರತವನ್ನು ಆಚರಿಸಬೇಕೆಂದು ನಿರ್ಧಾರ ಮಾಡಿಕೊಂಡಿರುತ್ತಾರೆ ಎಂದು ತಿಳಿದುಬರುತ್ತದೆ.

ಪಣಂಬೂರು ಬೈಕಂಪಾಡಿ:— ತಾರೀಕು ೨೯-೭-೩೭ನೇ ದಿನ ಬೆಳಿಗ್ಗೆ ಸುಮಾರು ೧೦ ಗಂಟೆಗೆ ಇಲ್ಲಿಯ ಮೊಗವೀರರಲ್ಲಿ ಕೆಲವರು ಸಮುದ್ರದಲ್ಲಿ ಬಲೆ ಹಿಡಿಯುತ್ತಿರುವ ಸಮಯ ಆಕಸ್ಮಾತ್ ಬಿರುಗಾಳಿಯು ಬೀಸಿ ಕೆಲವು ದೋಣಿಗಳು ನೀರಲ್ಲಿ ಮುಳುಗಿ ಕೆಲವರಿಗೆ ಬಲವಾದ ಪೆಟ್ಟು ಆಗಿರುತ್ತದೆಂದು ತಿಳಿದುಬರುತ್ತದೆ.

ಉಡುಪಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಜಿಲ್ಲಾ ಅಧ್ಯಾಪಕರ ಸಂಘದ ಕೇಂದ್ರಗಳ ಕಾರ್ಯದರ್ಶಿಗಳಿಗೂ ಮತ್ತು ಬೋರ್ಡ್ ಅಧ್ಯಾಪಕ, ಅಧ್ಯಾಪಕಿಯರ ಅವಗಾಹನೆಗೂ — ಉಪಾಧ್ಯಾಯರ ಸಂಬಳದಲ್ಲಿ ತಾ ೧-೬-೩೭ರಿಂದ ರೂಪಾಯಿಗೆ ೨ ಆಣೆಯಂತೆಯೂ ಉಪಾಧ್ಯಾಯಿನಿಯರ ಸಂಬಳದ ಸ್ಕೇಲಿನಲ್ಲಿ ಕಡಿತವಲ್ಲದೆ, ನಂತರ ಸಿಗುವ ತಲಬಿನಲ್ಲಿಯೂ ೨ ಆಣೆಯಂತೆಯೂ ಪ್ರತಿ ತಿಂಗಳಲ್ಲಿ ಕಡಿತಮಾಡಬೇಕಾಗಿ ಸರಕಾರದ ಹುಕುಂ ಬಂದಿರುವುದಷ್ಟೆ! ಈ ವಿಷಯದಲ್ಲಿ ಬೋರ್ಡ್ ಉಪಾಧ್ಯಾಯರು ಅವರವರ ತಾಲೂಕುಗಳಲ್ಲಿ, ತಾಲೂಕು ಸಭೆಗಳನ್ನಾಗಲಿ ಜಿಲ್ಲಾ ಸಭೆಗಳನ್ನಾಗಲೀ ಜರಗಿಸಿ, "ನಾವು ಬಹಳ ಅನ್ಯಾಯ ಹೊಂದುತ್ತೇವೆ" ಎಂಬ ಆಕ್ಷೇಪವನ್ನು ಸೂಚಿಸುವ ನಿರ್ಣಯವನ್ನು ಮಾಡಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಿಗೂ ನಮ್ಮ ಜಿಲ್ಲೆಯ ಸರಕಾರ ಕಡೆಯ ಮಂತ್ರಿಗಳವರು ಮುಂದಿ ಕಾರ್ಯದರ್ಶಿಗಳಿಗೂ ಕಳುಹಿಸುವ ಏರ್ಪಾಡನ್ನು ತ್ವರ್ಯದಲ್ಲಿ ಮಾಡಬೇಕಾಗಿ ಕೆಲವು ಪತ್ರಗಳು ನಮಗೆ ಬಂದಿರುತ್ತವೆ. ಆದರೆ ಇಂಥಾ ಸಭೆಗಳನ್ನು ಎಷ್ಟೋ ಸಲ ಜರಗಿಸಿ ಕಡಿತಗಳ ವಿಷಯ ನಾವು ನಮ್ಮ ಆಕ್ಷೇಪವನ್ನು ಸೂಚಿಸಿದ್ದೇವೆ. ಬಡ ಉಪಾಧ್ಯಾಯರು ಆಗಾಗ್ಗೆ ಸಭೆಗಳಿಗೆ ಹೋಗಿಬರಲು ಅನಾವಶ್ಯಕ ಖರ್ಚು ಮಾಡಲು ಅಸಮರ್ಥರಾದ್ದರಿಂದ ಜಿಲ್ಲೆಯಲ್ಲಿ ಉಪಾಧ್ಯಾಯರ ಅನುಕೂಲಕ್ಕೆ ಸರಿಯಾಗಿ ಪ್ರಕೃತ ಇರುವ ೩೦ ಯಾ ೩೫ ಕೇಂದ್ರಗಳಲ್ಲಿ ಇದೇ ಬರುವ ಆಗೋಸ್ತು ತಾ ೧೪ನೇ ಶನಿವಾರ ಮಾಸಿಕ ಸಭೆ ಜರಗುವುದರಿಂದ ಈ ಎಲ್ಲಾ ಕೇಂದ್ರಗಳ ಸಭೆಗಳಲ್ಲಿ ಅಧ್ಯಾಪಕರು ಕಡಿತದ ವಿಷಯ ತಮ್ಮ ಆಕ್ಷೇಪ ಸೂಚಿಸುವ ನಿರ್ಣಯವನ್ನು ಮಾಡಿ, ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಿಗೂ, ಮಂತ್ರಿಗಳಿಗೂ ವ ಆವರ ನಮ್ಮ ಜಿಲ್ಲೆಯ ಕಾರ್ಯದರ್ಶಿಗಳಿಗೂ ನಿರ್ಣಯವನ್ನು ಕಳುಹಿಸಿಕೊಡುವ ವ್ಯವಸ್ಥೆಯನ್ನು ಆಯಾಯ ಕೇಂದ್ರಗಳಲ್ಲಿನ ಉಪಾಧ್ಯಾಯರು ಮಾಡಿಕೊಳ್ಳಲು ದಯಮಾಡಿ ನೋಡಿರಿ. ಹೀಗೆ ಮಾಡಿದರೆ ಬಡ ಉಪಾಧ್ಯಾಯರಿಗೆ ಖರ್ಚು ಕಡಿಮೆಯಾಗುವುದು. ನಾವು ಆಕ್ಷೇಪವನ್ನು ಸೂಚಿಸದಿದ್ದರೆ, ಕಡಿತಕ್ಕೆ ನಮ್ಮ ಸಮ್ಮತಿ ಕೊಟ್ಟಹಾಗಾಗುವುದು, ಆದ್ದರಿಂದ ಆಗೋಸ್ತು ತಿಂಗಳ ತಾ ೧೪ರಲ್ಲು ಜರಗುವ ಜಿಲ್ಲೆಯ ಎಲ್ಲಾ ಕೇಂದ್ರಸಭೆಗಳಲ್ಲಿ ಬೋರ್ಡ್ ಉಪಾಧ್ಯಾಯರು ಮೇಲೆ ಹೇಳಿದಂತೆ ಮಾಡಲು ಮರೆಯದಿರಲಿ.

ಇದೇ ತಾ ೧ಕ್ಕೆ ಅಖಿಲ ಭಾರತದಲ್ಲಿಯೂ ಆಚರಿಸಲ್ಪಟ್ಟಂತೆ ಕಾಂಗ್ರೆಸ್ ಮಂತ್ರಿ ದಿನಾಚರಣೆಯು ಜರಗಿಸಲ್ಪಟ್ಟಿತು. ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರಾತಃ ೮ ಗಂಟೆಗೆ ನಗರಾಧ್ಯಕ್ಷರಾದ ಶ್ರೀ| ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಧ್ವಜವಂದನೆಯೂ ಸಂಜೆ ೫ ಗಂಟೆಗೆ ಡಾ| ಟಿ ಮಾಧವ ಪೈ, ಎಂ ಬಿ., ಬಿ ಎಸ್ ರವರ ಅಧ್ಯಕ್ಷತೆಯಲ್ಲಿ ಮಹಾಸಭೆಯು ಜರಗಿತು. ಸಭಾಪೂರ್ವ 'ರಾಷ್ಟ್ರಧ್ವಜವಂದನೆ' ಪುರಮೆರವಣಿಗೆಯು ಆಯ್ತು. ಶಾರದಾ ಸಂಗೀತ ಕಲಾಶಾಲೆಯ ವಿದ್ಯಾರ್ಥಿನಿಯರಿಂದ ರಾಷ್ಟ್ರಗೀತಗಳು ಹಾಡಲಾದ ಮೇಲೆ ಅಧ್ಯಕ್ಷರು ಸಂದರ್ಭೋಚಿತ ಮಾತುಗಳಿಂದ ಕಾಂಗ್ರೆಸಿನ ಕಾರ್ಯಕಲಾಪಗಳನ್ನು ನಿವೇದಿಸಿ ಸದ್ಯದ ಸ್ಥಿತಿಯಲ್ಲಿ ಕಾಂಗ್ರೆಸು ಮಂತ್ರಿಪದವಿಯನ್ನು ಸ್ವೀಕರಿಸಿದುದರ ಬಗ್ಗೆ ಜನಸಂತೋಷವಾಗಿರುವದಲ್ಲದೆ, ಇದರಿಂದ ಜನತೆಗೆ ಭಾವೀ ಕಲ್ಯಾಣವಾಗುವುದಿದೆಂದರು. ಆದರೆ ಜನತೆಯು ತಮ್ಮ ಆಸೆಗಳ ಮಟ್ಟಿಗೆ ಮಿತಿಮೀರದೆ ಮಂತ್ರಿಮಂಡಳದವರ ಸಾಹಸ ಕಾರ್ಯಗಳಿಗೆ ಸಹಕಾರವೀಯಬೇಕೆಂದರು. 'ನವಯುಗ'ದ ಸಂಪಾದಕರಾದ ಶ್ರೀ ಕೆ ಕೆ. ಶೆಟ್ಟರು ರಾಷ್ಟ್ರಪತಿಗಳ ಅನುಜ್ಞೆ ಮೇರೆಗೆ ಠರಾವುಗಳನ್ನು ಸಭೆಯ ಮುಂದಿಡುವ ಮೊದಲು ದಿವಂಗತ ಲೋಕಮಾನ್ಯ ತಿಲಕರ ಪರಿಚಯ ಸ್ವಾರ್ಥತ್ಯಾಗ ದೇಶಸೇವೆಯ ಪ್ರಸ್ತಾಪ ಮಾಡಿ ಇಂದಿನ ದಿನವು ಲೋಕಮಾನ್ಯರ ಪುಣ್ಯದಿನವಾಗಿಯೂ ಅನಂತರ ಮಹಾತ್ಮ ಗಾಂಧಿಯವರು ಅಸಹಕಾರವನ್ನು ಹೂಡಿದ ಪುಣ್ಯದಿನವಾಗಿಯೂ ಇರುವಲ್ಲಿ ಈಗ್ಗೆ ಕಾಂಗ್ರೆಸಿನವರ ಮಂತ್ರಿಪದವಿಯನ್ನು ಸ್ವೀಕರಿಸಿದ ಬಗ್ಗೆ ಸಂತೋಷಾಭಿನಂದನೆಗಳನ್ನು ಪ್ರಕಟಿಸುವ ಅಖಿಲಭಾರತ ದಿನವಾಗಿ ಮಹತ್ವವನ್ನು ವಿವರಿಸಿದರು. ಮಂತ್ರಿಮಂಡಲವು ಜರಗಿಸಲಿರುವ ರಾಜ್ಯಭಾರಕ್ರಮದಲ್ಲಿ ಜನತೆಯು ಸಂಪೂರ್ಣ ಸಹಾಯವಿತ್ತು, ಹಳ್ಳಿಹಳ್ಳಿಗಳಲ್ಲಿಯೂ ಕಾಂಗ್ರೆಸು ಸಮಿತಿಗಳನ್ನು ಸ್ಥಾಪಿಸಿ ಪ್ರತಿಯೋರ್ವರೂ ತಾವಾಗಿ ಕಾಂಗ್ರೆಸು ಸದಸ್ಯರಾಗಿ ಮಂತ್ರಿಮಂಡಲಕ್ಕೆ ಸಲಹೆಗಳನ್ನಿತ್ತು, ಸಂಪೂರ್ಣ ಸ್ವರಾಜ್ಯವನ್ನು ಶೀಘ್ರ ಲಭಿಸುವಂತೆ ಮಾಡಬೇಕೆಂದರು. ಠರಾವುಗಳನ್ನು ವಿವರಿಸುತ್ತಲು ಸುದೀರ್ಘ ಭಾಷಣವನ್ನಿತ್ತರು. ಅನಂತರ ಶ್ರೀಗಳಾದ ಎ ಲಕ್ಷ್ಮೀನಾರಾಯಣರಾವ್, ಬಿ ರಾಮಾಚಾರ್ ಎಸ್ ನರಸಿಂಹಾಚಾರ್ ಬಿ ರಾಮಕೃಷ್ಣಾಚಾರ್ (ಹಿಂದೀಯಲ್ಲಿ) ಕೆ ರಮಾನಾಥಯ್ಯಗಳು ಭಾಷಣವಿತ್ತರು. ವಂದೇ ಮಾತರಂ ಧ್ವಜದ ಅವರೋಹಣ ಮಾಡಿ ಸಭಾಂತ್ಯವಾಯಿತು.

ತಾ ೫ನೇ ಗುರುವಾರ ಸಾಯಂಕಾಲ ೫-೩೦ಕ್ಕೆ ಸ್ಥಳೀಯ ಮುನ್ಸಿಪಲ್ ಕೌನ್ಸಿಲಿನ ಸಾಧಾರಣವಾದ ಸಭೆಯು ಜರಗಲಿದೆ. ಕೆಲಮಹತ್ವದ ನಿರ್ಣಯಗಳ ಸೂಚನೆಗಳಿವೆಯೆಂದು ತಿಳಿದು ಬರುತ್ತದೆ.

ಮಂಗಳೂರು.

ಹೊಟೇಲು ಕೆಲಸಗಾರರ ಸಂಘಸ್ಥಾಪನೆ:—ಮಂಗಳೂರಿನ ಹೊಟೆಲು ಕೆಲಸಗಾರರ ಮಹಾಸಭೆಯೊಂದು ಇದೇ ತಾ. ೧-೮-೩೭ನೇ ಆದಿತ್ಯವಾರ ರಾತ್ರಿ ಒಂಭತ್ತೂವರೆ ಘಂಟೆಗೆ ಸರಿಯಾಗಿ ಕಾಂಗ್ರೆಸ್ ಸಮಿತಾವಾದಿ ಆಫೀಸಿನಲ್ಲಿ ಜರಗಿತು. ಎಲ್ಲಾ ಹೊಟೆಲುಗಳ ಕೆಲಸಗಾರರು ಉತ್ಸಾಹದಿಂದ ನೆರೆದು ಬಂದು ಸುಮಾರು ೩೦೦ಮಂದಿಯು ಸೇರಿದ್ದರು. ಶ್ರೀ ಬಿ ವೆಂಕಟ್ರಾಯ ಬಾಳಿಗ ಎಂ ಎಲ್ ಎ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ ಮೇಲೆ ಮಂಗಳೂರಿನ 'ನೂತನಭೂಮಿ' ದೈನಿಕ ಪತ್ರಿಕೆಯ ಉಪಸಂಪಾದಕ ಶ್ರೀ ಪಿ ನಾರಾಯಣ ನಾಯರ್ ಮತ್ತು ಶ್ರೀ ಎಸ್ ಹೊಳ್ಳರು ಸಂಘ ಶಕ್ತಿಯ ಕುರಿತು ಭಾಷಣವಿತ್ತರು. "ಮಂಗಳೂರು ಹೊಟೆಲು ವರ್ಕರ್ಸ್ ಯೂನಿಯನ್" ಎಂಬ ಸಂಸ್ಥೆಯನ್ನು ಸ್ಥಾಪಿಸುವ ಸರ್ವಸಮ್ಮತಿಯ ನಿರ್ಧಾರವಾಗಿ ಸಂಘದ ಧ್ಯೇಯ ಮತ್ತು ನಿಯಮಗಳು ವಿವರವಾಗಿ ಚರ್ಚಿಸಲ್ಪಟ್ಟು ಸರ್ವಸಮ್ಮತಿಯಿಂದ ಮಂಜೂರಾದಮೇಲೆ ಕಾರ್ಯಕಾರೀಮಂಡಲಿಗೆ ಶ್ರೀಗಳಾದ ಬಿ. ವೆಂಕಟ್ರಾಯ ಬಾಳಿಗ ಎಂ. ಎಲ್. ಎ. (ಅಧ್ಯಕ್ಷ), ಯು. ಶ್ರೀನಿವಾಸಮಲ್ಯ (ಉಪಾಧ್ಯಕ್ಷ); ಎಸ್. ವಿಟ್ಠಲಹೆಗ್ಡೆ, ಪಿ. ರಘುನಾಥಶೆಟ್ಟಿ (ಕಾರ್ಯದರ್ಶಿಗಳು), ಪಾಂಡುರಂಗ ಭಂಡಾರಿ, ಯು. ಗಣಪತಿ ಪ್ರಭು (ಖಜಾಂಚಿಗಳು) ಬಿ. ಚರಡಪ್ಪ ನಾಯಕ್, ಗೋಪಾಲ ಶೆಟ್ಟಿ, ಜಿ. ಗಣಪತಿ ಪೈ, ಎಚ್. ಕೇಶವ ಶೆಟ್ಟಿ, ಜಿ. ವಿಟ್ಠಪ್ಪ ಕಾಮತ್, ಜಿ. ಗೋಪಾಲ ಪೈ, ಪುರುಷೋತ್ತಮ ಕಾಮತ್, ಬಿ ಅಣ್ಣಪ್ಪ ಬಾಳಿಗ, ಶ್ರೀನಿವಾಸ ಶೇಟ್, ಸಂಜೀವ ಶೇಟ್, ಕೆ ದಾಮೋದರ ಬಾಳಿಗ, ಕೆ. ನರಸಿಂಹ ಪ್ರಭು, ಕೆ. ಸುಂದರರಾವ್, ಜಿ. ಕೃಷ್ಣರಾವ್, ಕೆ ವಾಸುದೇವ ಪೈ, ಎಂ. ಅಚ್ಯುತ ಪೈ, ಎಚ್. ಗೋಪಾಲ ಪೈ, ಯು. ಸೀತಾರಾಮ ಪೈ, ಎಂ. ವಾಸುದೇವ ಶೆಟ್ಟಿ ಮೊದಲಾದವರು ಆರಿಸಲ್ಪಟ್ಟರು. ಕೊನೆಗೆ ಅಧ್ಯಕ್ಷರು ಕೆಲಸಗಾರರೆಲ್ಲಾ ಒಕ್ಕಟ್ಟಿನಿಂದ ವರ್ತಿಸಬೇಕೆಂದೂ ಮೆಂಬರರು ಸಂಘದ ಹಿತವನ್ನು ಬಯಸಿ ನಿಯಮಗಳಿಗೊಳಪಟ್ಟು ನಡೆಯಬೇಕೆಂದೂ ಭಾಷಣವಿತ್ತರು. ಕಾರ್ಯದರ್ಶಿಯು ಧನ್ಯವಾದಗಳನ್ನೀಯುವಾಗ ಸಂಘದ ಕೆಲಸಗಳಿಗೆ ಮ್ಹಾಲಿಕರೂ ಬೆಂಬಲವೀಯಬೇಕೆಂದು ಪ್ರಾರ್ಥಿಸಿದರು.

ಅಧಿಕಾರ ಸ್ವೀಕಾರದ ದಿನ—ಕಾಂಗ್ರೆಸಿನವರು ಅಧಿಕಾರ ಸ್ವೀಕಾರ ಮಾಡಿದ್ದಕ್ಕಾಗಿ ಆಗೋಸ್ತು ೧ನೇ ಆದಿತ್ಯವಾರ ಪವಿತ್ರದಿನವಾಗಿ ಆಚರಿಸಬೇಕೆಂದು ರಾಷ್ಟ್ರಪತಿ ಜವಾಹರಲಾಲ ನೆಹರೂಗಳು ಆಜ್ಞಾಪಿಸಿದ ಮೇರೆಗೆ ಮಂಗಳೂರಲ್ಲಿ ಮೊನ್ನೆಯ ದಿವಸ ಅಧಿಕಾರ ಸ್ವೀಕಾರದ ದಿನವಾಗಿ ಆಚರಿಸಲಾಯಿತು. ಹಲವು ಮುಖಂಡರ ಭಾಷಣಗಳಿದ್ದುವು.

ದ. ಕ. ಜಿಲ್ಲಾ ಶಾನುಭೋಗರ ಸಂಘದ ಸಭೆ — ಮದ್ರಾಸು ಎಸೆಂಬ್ಲಿಯಲ್ಲಿ ಇದೀ ಮದ್ರಾಸು ಆದಿಪಕ್ಕದ ಆಯ ವ್ಯಯ ಪಟ್ಟಿ ಬಜೆಟು ಎಸ್ಟಿಮೇಟು ಓಟಿಂಗು ಇದೇ ತಿಂಗಳ ೩ ೪ಕ್ಕೆ ಜರಗುವುದರಿಂದ ದಕ್ಷಿಣ ಕನ್ನಡ ಜಿಲ್ಲಾ ಶ್ಯಾನುಭೋಗರ ಸಂಕಷ್ಟನಿವಾರಣೆ ಮತ್ತು ಸಂಬಳದ ವಿಷಯ ಅಪೀಲು ಮಾಡಿಕೊಳ್ಳುವುದು ಅಗತ್ಯವಿರುವುದರಿಂದ ಇದೇ ತಾ. ೧೫ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಮೇಲಿನ ಸಂಘದ ಸಭೆ ಕೂಡಬೇಕಾಗಿ ನಿಶ್ಚಯಿಸಲಾಗಿರುವುದರಿಂದ ಆ ಬಗ್ಗೆ ಜಿಲ್ಲೆಯ ಪ್ರತಿಯೊಬ್ಬ ಶ್ಯಾನುಭೋಗರು ಆ ದಿವಸ ಮೀಟಿಂಗಿಗೆ ತಪ್ಪದೆ ಹಾಜರಾಗಬೇಕಾಗಿ ಮಂಗಳೂರು ತಾಲೂಕು ಶ್ಯಾನುಭೋಗರ ಸಂಘದ ಸೆಕ್ರೆಟರಿಯವರು ಆಶಿಸುತ್ತಾರೆ.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರ ಸಂಚಾರ ಕಾರ್ಯಕ್ರಮ — ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀಯುತ ಕೆ ರಾಮಚಂದ್ರ ಮಲ್ಯರು ಕಾಂಗ್ರೆಸ ಸದಸ್ಯರನ್ನು ಸೇರಿಸಲಿಕ್ಕೂ, ಗ್ರಾಮ ಕಾಂಗ್ರೆಸ ಕಮಿಟಿಗಳನ್ನು ಸ್ಥಾಪಿಸಲಿಕ್ಕೂ ಕಾಂಗ್ರೆಸಿನ ಈಗಿನ ಕಾರ್ಯಕ್ರಮಗಳನ್ನು ವಿವರಿಸಲಿಕ್ಕೂ ಮಂಗಳೂರು ತಾಲೂಕಿನಲ್ಲಿ ಈ ಕೆಳಗಿನಂತೆ ಸಂಚರಿಸಲಿಕ್ಕಿದ್ದಾರೆ. ಆಗೋಸ್ತು ತಾ ೧ರಲ್ಲು ಬಂಟ್ವಾಳ ೪ರಲ್ಲು ಪುಂಜಾಲಕಟ್ಟೆ, ೫ರಲ್ಲು ಕೈಸೂರು, ೬ರಲ್ಲು ಪಾಣೆಮಂಗಳೂರು ೭ರಲ್ಲು ಮೂಲ್ಕಿ, ೮ರಲ್ಲು ಹಳೆಯಂಗಡಿ ೯ರಲ್ಲು ಸುರತ್ಕಲ್ ೧೦ರಲ್ಲು ಪಣಂಬೂರ ೧೧ರಲ್ಲು ಸುರಿದ್ಯಾರು, ೧೨ರಲ್ಲು ಕಿನ್ನಿಗೋಳಿ, ೧೩ರಲ್ಲು ಕಟೀಲು ೧೪ರಲ್ಲು ಬಜ್ಪೆ, ೧೫ರಲ್ಲು ಗುರುಪುರ, ೧೬ರಲ್ಲು ಕೋಟೆಕಾರು

ಎದೆ ಮತ್ತು ಶ್ವಾಸಕೋಶ ರೋಗಗಳನ್ನು ದೂರವಿಡಿರಿ

ನಿಮಗೆ ಥಕ್ಕನೆ ಚಳಿಹಿಡಿದರೆ, ಕೆಮ್ಮು ಉಂಟಾದರೆ, ಶ್ವಾಸಕೋಶವನ್ನು ನಿರ್ಬಲಗೊಳಿಸುವ ತಂಡಿವುಂಟಾದರೆ ಆಗ ರೋಗದ ಪ್ರಥಮ ಚಿಹ್ನೆಗಳು ಕಾಣಿಸಿಕೊಂಡಾಗಲೆ ಪೆಪ್ಸ್ ಮಾತ್ರೆಗಳನ್ನು ಸೇವಿಸಿರಿ

ಬಾಯಿಯಲ್ಲಿ ಕರಗುವ ಪೆಪ್ಸ್ ಮಾತ್ರೆಗಳಿಂದ ಔಷಧಿಯುಕ್ತ ಧೂಮ ಉಂಟಾಗಿ ಅದು ನಿಮ್ಮ ಎದೆಯೊಳಗೆ ಮತ್ತು ಶ್ವಾಸಕೋಶದೊಳಗೆ ಸೇರಿ ಅಲ್ಲಿರುವ ರೋಗದ ವಿಷವಾಯು ಅಣುಗಳನ್ನು ನಾಶಪಡಿಸುತ್ತದೆ ಶ್ವಾಸನಾಳದಲ್ಲಿ ಉಂಟಾದ ಉರಿತ ಇತ್ಯಾದಿಗಳನ್ನು ತೆಗೆದು ಸ್ವಚ್ಛಪಡಿಸುತ್ತದೆ ಆದರಿಂದ ಕೆಮ್ಮು, ಶೀತ, ಗಂಟಲುನೋವು ಇತ್ಯಾದಿಗಳನ್ನು ಬೇಗನೆ ಗುಣಪಡಿಸುವವು. ಬ್ರೋಂಕೈಟಿಸ್, ಉಬ್ಬಸ ಮತ್ತು ಇನ್‌ಫ್ಲುಯೆಂಜಾ ಇತ್ಯಾದಿಗಳಿಗೆ ಪೆಪ್ಸ್ ಗುಳಿಗೆಗಳು ದಿವ್ಯ ಔಷಧಿಯು

ಏಜಂಟರು — ಮೆಸ್ಸರ್ಸ್ ದಾಥಾ ಎಂಡ್ ಕೊ., ಪಿ ಟಿ ಮದ್ರಾಸು.

ಪೆಪ್ಸ್ ಗುಳಿಗೆಗಳು ಸೀಲುಹಾಕಲ್ಪಟ್ಟ ಬಾಟ್ಲಿಗಳಲ್ಲಿ ರೂಪಾಯಿ 1ರಂತೆ ಮಾರಲ್ಪಡುತ್ತವೆ. ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ

ಪೆಪ್ಸ್ PEPS

WANTED

Applications are invited from energetic young men for the posts of a TRAFFIC INSPECTOR and an assistant TRAFFIC INSPECTOR carrying a salary of Rs 25 to 30 and Rs. 20 to 25 per month respectively and a consolidated travelling allowance of Rs 15 per month each. Applicants should have studied up to 6th Form Preference will be given to GRADUATES

Applications should be made to the following address,

JOINT MANAGERS,
The Combined Booking Agency
Mangalore

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3—8	4—0
ಮುಸ್ಸಿ	4—4	4—6
ಗುಡ್ಡು	3—12	4—0
ಊರ ಅವ್ವಲ್ ಬೆಳ್ತಿಗೆ	4—8	5—0
ರಂಗೂನು ಬೆ. ಗೋಣಿ ಗೆ	6—8	7—0
ಎಲ್ಲದುಟೆ ಮು ಗೆ	3—14	4—0
ಗೋಧಿ ಗೋಣಿ ಗೆ	12—8	15—8
ತೊಗರಿ ಗೋಣಿ ಗೆ	11—8	18—8
ಹುರುಳಿ ಗೋಣಿ ಗೆ	5—0	5—4
ಕಡಲೆ ಗೋಣಿ ಗೆ	9—8	10—8
ತೊಗರಿಬೇಳೆ ಗೋಣಿ ಗೆ	11—0	19—0
ಉದ್ದು ಗೋಣಿ ಗೆ	9—0	9—8
ಹೆಸರು ಗೋಣಿ ಗೆ	9—12	10—8
ಊರುಬೆಲ್ಲ ಖಂಡಿ ಗೆ	8[illegible]—0	35—0
ಉಪ್ಪು ಗೋಣಿ ಗೆ	4—6	5—4
ಕೊಪ್ರ ಖಂಡಿ ಗೆ	85—0	90—0
ಕೊಪ್ರ ಹಿಂಡಿ ಖಂಡಿ ಗೆ	20—0	21—0
ಎಳ್ಳಿಂಡಿ ಖಂಡಿ ಗೆ	26—	26—0
ಕೊಪ್ರ ಎಣ್ಣೆ ಮುಡಿ ಗೆ	[illegible]—6	6—4
ಎಳ್ಳೆಣ್ಣೆ ಮುಡಿ ಗೆ	6—0	7—0
ಹರಳೆಣ್ಣೆ ಬುದ್ದಿಗೆ ಗೆ	6—5	7—5
ಮೋರಿಸ ಸಕ್ಕರೆ ಮು. ಗೆ	2—11	2—12
ಮೆಣಸು	4—8	6—0
ಸಾಸಿವೆ ಮುಡಿ ಗೆ	5—8	6—8
ಕಾಳುಮೆಣಸು ಖ ಗೆ	97—8	100—0
ಯೇಲಕ್ಕಿ ಬೀಜ ಸುಣ ಗೆ	80—0	85—0
ಗೇರುಬೀಜ ಮು. ಗೆ	3—14	4—2
ಕಪ್ಪು ಖಂಡಿ ಗೆ	[illegible]0—0	5[illegible]—0
ಗಾಂಪ್ಯುತಗಡು ಮು ಗೆ	14—12	15—0
ಕಾಂಪ್ಯುತಾತ್ರಗಳು ಮು ಗೆ	17—0	18—0
ಟೀಪಲೆಗ ನೀರು ಗೆ	13—6	14—0
ಹಿತ್ತಾಳೆ ಚಾಡು ಮು. ಗೆ	12—0	12—0
ದವಸು ಗೆ	22—4	22 0
ಮುಡಿಕೆ ಹುಳಿ ಖಂಡಿ ಗೆ	40—0	45—0
ನೇಟಿವ್ ಚಾಕ್ಕಿ ಖಂಡಿ ಗೆ	1[illegible]0—0	14[illegible]—0
ಫಿಟೇಂ ಚಾಕ್ಕಿ ಖಂಡಿ ಗೆ	19—0	1[illegible]—0
ಮಡಕೇರಿ ಏಲಕ್ಕಿ	67 0	70

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತೆ ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು-ಹಣ್ಣುಗಳು-ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯ ಸ್ಪೇಷ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2 8 0 ಅಡ್ವಾನ್ಸ್ ಇಲ್ಲದೆ ಆರ್ಡರ್ ಪಡೆಯಲಾಗದ

ವಿಳಾಸ —

The Royal Seed Co
Florists & Seedsmen [illegible]
ULSOOR BANGALORE

ಮುಂಬಾಯಿ — ಗೋವಾ — ಕಾರವಾರು

ಇತ್ಯಾದಿ ಕಡೆಗಳಿಗೆ

ಅತ್ಯಲ್ಪ ಖರ್ಚಿನಿಂದ- ಅತಿ ಸುಖಕರವಾದ ಪ್ರಯಾಣ.

ನಮ್ಮ ಬಸ್ಸುಗಳ ಮೂಲಕ

ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗ, ಹರಿಹರಕ್ಕಾಗಿ, ಹುಬ್ಬಳ್ಳಿ ಬೆಳಗಾಂ ಮುಂಬ್ಯಾ ಪ್ರಾಂತ್ಯಕ್ಕೂ

ಕಾರವಾರ ಮಾರ್ಗವಾಗಿ ಮುಂಬ್ಯಾ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳಸಲನುಕೂಲ

ಊರುಗಳ ಬದಲಾವಣೆ-ನೋಟಗಳ ಬದಲಾವಣೆ-ಜನತೆಯ ಸಂಪರ್ಕ-ಆಹಾರದ ಅನುಕೂಲ

ವಿಶ್ರಾಂತಿ ಗೃಹಗಳ ಏರ್ಪಾಡು-ನೌಕರರ ಸಭ್ಯತೆ

ಇವೆಲ್ಲವೂ ಬಸ್ಸುಪ್ರಯಾಣದಲ್ಲಿದೆ.

ನೀವು ಕಂಡ ಕುಂದುಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜ್ಯೊಂಟ್ ಮೆನೆಜರರಿಗೆ ಬರೆದು ತಿಳಿಸಿರಿ—

ಜ್ಯೊಂಟ್ ಮೆನೇಜರ್ಸ್,
ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.
— ಮತ್ತು —
ಜ್ಯೊಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು.

ಮದ್ರಾಸಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ಕಾರ್ಯಕಲಾಪಗಳು.

ಕಾಂಗ್ರೆಸು ಅಧಿಕಾರ ಸ್ವೀಕರಿಸಿದುದರಿಂದ ಸರಕಾರದ ಧೋರಣೆಯಲ್ಲಿ ಯಾವ ತರದ ಮಾರ್ಪಾಟು ಉಂಟಾಗಿರುತ್ತದೆಂದು ತಿಳಿಯಲು ನಮ್ಮ ಸಾವಿರಾರು ವಾಚಕರು ಉತ್ಸಾಹ ಹೊಂದಬಹುದು. ಕಾಂಗ್ರೆಸ್‌ವಾಲರು ಅಧಿಕಾರಕ್ಕೆ ಬಂದು ಅಲ್ಪ ಸಮಯವಾದರೂ,—ಈಗಲೆ ಮಹತ್ವದ ಕಾರ್ಯಗಳನ್ನು ನಡೆಯಿಸಿ ಬಿಟ್ಟಿರುವರು.

ಕಾಂಗ್ರೆಸ್ ನಿರ್ಣಯಕ್ಕೆ ಮದ್ರಾಸಿನ ಎಡ್ವೋಕೇಟ ಜನರಲ್‌ರ ಸಮ್ಮತ.

ಪ್ರಧಾನ ಮಂತ್ರಿ ರಾಜಗೋಪಾಲಾಚಾರಿಯವರ ವಿನಂತಿ ಮೇರೆಗೆ ಮದ್ರಾಸಿನ ಎಡ್ವೋಕೇಟ ಜನರಲ್‌ರು, ತನ್ನ ತಲಬನ್ನು ರೂ. ೫೦೦ ಕ್ಕೆ ಇಳಿಸಲು ಸಮ್ಮತ ಇತ್ತಿರುವರು.

ಸರಕಾರ ಮಂದಿರದಲ್ಲಿ.

ಒಂದಾನೊಂದು ದಿನ ಖಾದಿ ಧರಿಸಿದವರು ಅತಿ ದುರ್ಲಭವಾಗಿರುವ ಮದ್ರಾಸಿನ ಸೆಕ್ರಿಟೇರಿಯಟಿನಲ್ಲಿ ಇಂದು ಖಾದಿ ಧರಿಸದೆ ಬರುವವರ ಸಂಖ್ಯೆಯು ಅತಿ ಕಡಿಮೆಯಾಗಿರುತ್ತದೆ. ಇಂಡಿಯನ್ ಸಿವಿಲ್ ಸರ್ವಿಸಿನವರು ಈಗ ಖಾದಿಯ ಕುರಿತು ಧಿಕ್ಕಾರ ಮಾಡುವುದಿಲ್ಲ, ಅನೇಕ ಸರಕಾರಿ ನೋಕರರೂ, ಪ್ರಧಾನ ಮಂತ್ರಿಯರ ಗುಮಾಸ್ತರೂ ಈಗ ಖಾದಿಯನ್ನು ಧರಿಸುತ್ತಿರುವರು. ಪೇದೆಯವರನ್ನು ಪೇದೆಗಳೆಂದು ಕರೆಯಬಾರದು, ಅವರನ್ನು ಅವರವರ ಹೆಸರಿನಿಂದ ಕರೆಯಬೇಕಾಗಿ ರಾಜಾಜಿಯವರ ಅಪ್ಪಣೆಯಾಗಿರುತ್ತದೆ. ಅಧಿಕಾರ ವರ್ಗದ ಅಬ್ಬರವು ಕಡಿಮೆಯಾಗಿ ತಮ್ಮ ಕೆಳ ನೋಕರರನ್ನು ನಮ್ರಭಾವದಿಂದ ಕಾಣುತ್ತಿರುವರು.

ಮದ್ಯಪಾನ ನಿರೋಧ.

ಸಂಪೂರ್ಣ ಮದ್ಯಪಾನ ನಿರೋಧವು ಸೇಲಂ ಜಿಲ್ಲೆಯಲ್ಲಿ ಪ್ರಾರಂಭಿಸುವರು. ಆ ಕುರಿತು ಅಲ್ಲಿನ ಎಕ್ಸೈಜ್ ಇಲಾಖೆಯವರಿಗೆ ಅಪ್ಪಣೆ ಹೋಗಿರುತ್ತದೆ. ಇನ್ನು ಮುಂದೆ ಶೇಂದಿ ಅಂಗಡಿಗಳ ಏಲಂ ನಡೆಯಬಾರದಾಗಿ ಜಿಲ್ಲಾ ಕಲೆಕ್ಟರರಿಗೆ ಅಪ್ಪಣೆ ಹೋಗಿರುತ್ತದೆ. ಇದರಿಂದ ೨೦ ಸಾವಿರ ಮುರಿತೆಗಾರರ ಕೆಲಸವು ತಪ್ಪುವುದರಿಂದ ಅವರು ತಮ್ಮ ಸಲಹೆಗಳನ್ನು ಮಜೂರ ಮಂತ್ರಿ ಮಾನ್ಯ ವಿ. ವಿ. ಗಿರಿಯವರೊಡನೆ (ಅಲ್ಲಿಗೆ ಚಿತ್ತೈಸಿದ) ಹೇಳಿಕೊಂಡಿರುವರು. ಅವರಿಗೆ ಉದ್ಯೋಗ ದೊರಕಿಸಲು ತಕ್ಕ ವ್ಯವಸ್ಥೆ ಮಾಡಲಾಗುವುದು.

ರಾಜಕೀಯ ಕೈದಿಗಳ ಬಿಡುಗಡೆ.

ರಾಜಕೀಯ ಕೈದಿಗಳ ಬಿಡುಗಡೆ ಕುರಿತು ಮದ್ರಾಸು ಸರಕಾರದ ಅಪ್ಪಣೆ ಹೊರಟು, ಎಲ್ಲಾ ಕೈದಿಗಳನ್ನು ವಿಮೋಚನೆಗೊಳಿಸುವ ಕುರಿತು ಜಿಲ್ಲಾ ಕಲೆಕ್ಟರರಿಗೆ ಅಪ್ಪಣೆಗಳು ಹೋಗಿವೆ.

ಮದ್ರಾಸು ಸೆಕ್ರೆಟರೇಟು ಕಾಂಗ್ರೆಸು ಕ್ಷೇತ್ರವಾಗಿರುತ್ತದೆ.

ರಾಜಾಜಿಯವರು, ಕಂದಾಯದಾರನ ಹಣವನ್ನು ಉಳಿಸಲು, ಮಿತವ್ಯಯದ ಅನೇಕ ಏರ್ಪಾಡುಗಳನ್ನು ಮಾಡಿರುವರು. ಸರಕಾರ ಮಂದಿರದಲ್ಲಿ ಕಾಂಗ್ರೆಸ್ ಕಾರ್ಯಕ್ರಮಗಳನ್ನು ರೂಢಿಗೆ ತಂದಿರುವರು. ಅದರಿಂದ ಜಸ್ಟಿಸ್ ಪಕ್ಷದವರಿಗೆ ಭೀತಿ ಉಂಟಾಗಿರುತ್ತದೆ.

ರಜಾ ದಿವಸವಾದರೂ ರಾಜಾಜಿಯವರು ತಮ್ಮ ಮಂತ್ರಿಗಳೊಡನೆ ಮತ್ತು ಪಾರ್ಲಿಮೆಂಟರಿ ಸೆಕ್ರೆಟರಿಗಳವರೊಡನೆ ಆಫೀಸಿಗೆ ಹಾಜರಾಗುತ್ತಿದ್ದಾರೆ. ಮಂತ್ರಿವರ್ಯರು ದಿನಾಲು ಬೆಳಿಗ್ಗೆ ೮ ಘಂಟೆಯಿಂದ ಸಂಜೆ ೫ ಘಂಟೆಯ ತನಕ ಕೆಲಸಮಾಡುತ್ತಿರುವರು. ಹೆಚ್ಚಿನ ವಿಶ್ರಾಂತಿ ಪಡೆಯುವುದು—ಕಂದಾಯಗಾರನಿಗೆ ಮೋಸ ಮಾಡಿದಂತಾಗುವುದೆಂದು ರಾಜಾಜಿಯವರ ಅಭಿಪ್ರಾಯ. ಹಿಂದಿನ ಮಂತ್ರಿಮಂಡಳ ದಿನ ಒಂದರ ನಾಲ್ಕು ತಾಸುಗಳಿಗೆ ಮಾತ್ರ ಕಾರ್ಯಿಸುತ್ತಿದ್ದರು. ಈಗಿನ ಕ್ರಮದಿಂದ ದಿನ ಒಂದರ ಸಾಧಾರಣ ೭೦೦ ಗಂಟೆಗಳ ಹೆಚ್ಚಿನ ಕೆಲಸವು ಮಂತ್ರಿಮಂಡಳದಿಂದಾಗುತ್ತದೆ.

ಪೋಲೀಸರು ಮಜೂರ ಚಳವಳಗಳಲ್ಲಿ ಕೈಹಾಕದಂತೆ ಮಾನ್ಯ ಪ್ರಧಾನಮಂತ್ರಿಯರ ಆಜ್ಞೆಯಾಗಿರುತ್ತದೆ.

ಹರಿಜನ ಸೇವೆ.

ಮಾನ್ಯ ರಾಜಾಜಿಯವರು ಕಾಂಗ್ರೆಸ್ ಕಾರ್ಯಕ್ರಮವನ್ನು ರೂಢಿಗೆ ತಂದಿರುವರು. ಸಂಪೂರ್ಣ ಮದ್ಯಪಾನ ನಿಷೇಧ ಕೆಲಸದ ಪ್ರಾರಂಭವನ್ನು ಸೇಲಂ ಜಿಲ್ಲೆಯಲ್ಲಿ ಮಾಡಿರುವರು. ನಂತರ ಅದು ಕ್ರಮೇಣ ಇಡೀ ಪ್ರಾಂತ್ಯಕ್ಕೆ ಹರಡುವುದು. ಸಾಧಾರಣ ೩ ವರ್ಷದ ಸಮಯದೊಳಗೆ ಪ್ರಾಂತ್ಯದೊಳಗೆ ಮದ್ಯಪಾನ ನಿಷೇಧವು ಸಂಪೂರ್ಣವಾಗುವುದೆಂದು ಭಾವಿಸಲಾಗಿದೆ. ಮಾನ್ಯ ಪ್ರಧಾನ ಮಂತ್ರಿಯರು ಹರಿಜನ ಸೇವಕ ಸಂಘದ ಪರಿಷತ್ತನ್ನು ನಡೆಯಿಸಿ, ಹರಿಜನ ಸೇವೆಯು ಇನ್ನಷ್ಟು ವೃದ್ಧಿಹೊಂದುವ ಆಲೋಚನೆಗಳನ್ನು ಮಾಡಿರುವರು. ಹರಿಜನಸೇವೆಯು ಸರಕಾರದ್ವಾರಾ ನಡೆಯಿಸುವ ಏರ್ಪಾಡು ಮಾಡಲಾಗಿದೆ. ಹರಿಜನ ಸೇವೆಯ ಕುರಿತು ಒಂದು ಮನವಿಯು ಸರಕಾರಕ್ಕೆ ಮಾಡಲಾಗುವುದು.

ಕಾಂಗ್ರೆಸ್ ಮಂತ್ರಿಮಂಡಳದ ಇವೆಲ್ಲಾ ಚಟುವಟಿಕೆಗಳನ್ನು ನೋಡಿ, ಜಸ್ಟಿಸ್ ಪಂಗಡದವರಲ್ಲೊಬ್ಬರು ಬೆರಗಾಗಿರುವರು.

ಬಂಗಾಳ ಗವರ್ನರ ವಿಶೇಷ ಅಧಿಕಾರದ ಉಪಯೋಗ.

ನವರಾಜ ಶಾಸನವು ಸ್ವಯಂ ಪ್ರಭುತ್ವ ಸೂತ್ರಗಳಿಂದ ಕೂಡಿದ್ದಿಲ್ಲ ಎಂದೂ ಅದು ನಮಗೆ ಒಪ್ಪತಕ್ಕದಲ್ಲವೆಂದೂ, ಅದನ್ನು ಕೊನೆಗಾಣಿಸಿ ಪ್ರಜಾಪರಿಷತ್ತಿನಿಂದ ರಚನೆಯಾದ ಶಾಸನವು ನಮಗೆ ಬೇಕೆಂದೂ, ಬಂಗಾಳದಲ್ಲಿ ಈಗ ಪ್ರಾರಂಭವಾದ ಎಸೆಂಬ್ಲಿ ಅಧಿವೇಶನದಲ್ಲಿ ಕಾಂಗ್ರೆಸ್ ಸದಸ್ಯರೊಬ್ಬರು ಒಂದು ಠರಾವನ್ನು ತರಲು, ಬಂಗಾಳ ಗವರ್ನರರು ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸಿ, ಆ ಠರಾವು ಚರ್ಚಿಸಲ್ಪಡಬಾರದಾಗಿ ನಿರಾಕರಿಸಿಬಿಟ್ಟರು.

ಸೇಲಮಿನಲ್ಲಿ ವಿ. ವಿ. ಗಿರಿಯವರು.

ಮದ್ರಾಸ ಸರಕಾರದ ಮಜೂರ ಮತ್ತು ಕೈಗಾರಿಕೆಯ ಶಾಖೆಯ ಮಂತ್ರಿಗಳಾದ ಮಾನ್ಯ ವಿ. ವಿ. ಗಿರಿಯವರು ಮೊನ್ನೆ ದಿವಸ ಸೇಲಮಿಗೆ ಚಿತ್ತೈಸಿ ಅಲ್ಲಿನ ಸ್ವದೇಶಿ ಪ್ರದರ್ಶನವನ್ನು ತೆರೆದರು. ಅಲ್ಲಿ ಅನೇಕ ಬಿನ್ನಪಗಳನ್ನು ಸ್ವೀಕರಿಸಿದರು. ಅವರಿಗೆ ಅರ್ಪಿಸಲಾದ ಮೊದಲಿನ ಬಿನ್ನಪವು ಮೂರ್ತೆಗಾರರದ್ದು. ಸೇಲಂ ಜಿಲ್ಲೆಯಲ್ಲಿ ಸದ್ಯದಲ್ಲೆ ಮದ್ಯಪಾನ ನಿಷೇಧವು ಸಂಪೂರ್ಣ ಜ್ಯಾರಿಯಾಗುವುದರಿಂದ ಸಾಧಾರಣ ೨೦ ಸಾವಿರ ಮೂರ್ತೆಗಾರರಿಗೆ ಉದ್ಯೋಗವು ಹೋಗುವುದರಿಂದ, ಅವರಿಗೆ ಬೇರೆ ಉದ್ಯೋಗವನ್ನು ದೊರಗಿಸಿಕೊಡುವ ಏರ್ಪಾಡನ್ನು ಮಾಡಬೇಕಾಗಿಯೂ, ಮದ್ಯನಿಷೇಧದ ಕುರಿತು ತಮ್ಮ ಸಂಪೂರ್ಣ ಸಹಾನುಭೂತಿಯಿರುವುದೆಂದು ಅವರ ಬಿನ್ನಪದ ಅಭಿಪ್ರಾಯವು. ಆ ಕುರಿತು ತಕ್ಕ ವ್ಯವಸ್ಥೆ ಮಾಡಲಾಗುವುದೆಂದು ಮಾನ್ಯ ಗಿರಿಯವರ ಭರವಸೆಯು ದೊರಕಿರುತ್ತದೆ.

ಮಾನ್ಯ ವಿ. ವಿ. ಗಿರಿಯವರು.
ಕೈಗಾರಿಕೆ ಮತ್ತು ಮಜೂರ ಮಂತ್ರಿ.

ಅಲ್ಲಿನ ಜಾಡರು ತಮ್ಮ ಕೈಗಾರಿಕೆಗೆ ಅವಸಾನಕಾಲ ಬಂದಿರುವುದರಿಂದ ತಮ್ಮ ರಕ್ಷಣೆಯ ಕುರಿತು, ಕೈನೇಯಿಗೆಯ ಕೈಗಾರಿಕೆಗೆ ಸರಕಾರದ ಲಕ್ಷ್ಯ ಬೇಕೆಂದು ಕೋರಲಾದ ಇನ್ನೊಂದು ಬಿನ್ನಪಕ್ಕೆ ಆ ಕುರಿತು ಸರಕಾರವು ಕೂಡಲೆ ಅತ್ಯಂತ ಲಕ್ಷ್ಯವನ್ನು ಕೊಡುವುದಾಗಿ ಅವರ ಉತ್ತರವು ದೊರಕಿತು.

ಸೇಲಮಿನಲ್ಲಿ ಕೈಗಾರಿಕೆಯ ಉದ್ಧಾರವಾಗಬೇಕು, ಅಲ್ಲಿರುವ ಖನಿಜಗಳನ್ನು ನಡೆಯಿಸುವ ಏರ್ಪಾಡಾಗಬೇಕೆಂಬ ಇನ್ನೊಂದು ಬಿನ್ನಪದಲ್ಲಿ (ನಗರಸಭೆಯವರ) ಕೇಳಲಾಗಿ, ಅದಕ್ಕೂ ಒಳ್ಳೇ ಸಮಾಧಾನಕರ ಉತ್ತರವು ದೊರಕಿರುತ್ತದೆ. ಹೀಗೆ ಅನೇಕ ಬಿನ್ನಪಗಳು ಅರ್ಪಿಸಲಾಗಿ ಅವುಗಳಿಗೆಲ್ಲಾ ಯೋಗ್ಯ ಉತ್ತರಗಳು ದೊರಕಿವೆ.

ಅನಂತರ ಮಾನ್ಯ ಗಿರಿಯವರು ಅನೇಕ ಸಂಸ್ಥೆಗಳನ್ನು ಸಂಚರಿಸಿದರು.

ಆಗೋಸ್ಟು ೨ನೆಯ ತಾರೀಕು ಮಾನ್ಯ ಗಿರಿಯವರ ಸಮಕ್ಷಮದಲ್ಲಿ ಒಳ್ಳೇ ಉತ್ಸಾಹದಿಂದ ಆಚರಿಸಲಾಯಿತು. ಜನಸಮುದಾಯವು ಕಿಕ್ಕಿರಿದು ನೆರೆದಿರುವ ಸಭೆಯಲ್ಲಿ, ಕಾಂಗ್ರೆಸಿನ ಕುರಿತು, ಮಾನ್ಯ ಗಿರಿಯವರು ಅತ್ಯಂತ ಅಮೋಘವಾದ ಭಾಷಣವನ್ನು ಮಾಡಿದರು.

ಇದಲ್ಲದೆ ಮಾನ್ಯ ಗಿರಿಯವರು ಸೇಲಂ ಜಿಲ್ಲೆಯ ಅನೇಕ ಹಳ್ಳಿಗಳ ಸಂದರ್ಶನವನ್ನು ಮಾಡಿ, ಗ್ರಾಮಾಭ್ಯುದಯ ಕುರಿತೂ, ಮಹಾಜನ ಸಂಪರ್ಕದ ಕುರಿತೂ ಭಾಷಣವಿತ್ತಿರುವರು. ಹೋದಡೆಗಳಲ್ಲೆಲ್ಲಾ ಮಾನ್ಯ ಗಿರಿಯವರ ದರ್ಶನಕ್ಕಾಗಿ ಹಳ್ಳಿಗರು ಕಿಕ್ಕಿರಿದು ನೆರೆದು ಜಯಘೋಷವನ್ನು ಮಾಡಿದರು.

ಅಂಚೆ ಮತ್ತು ಟೆಲಿಗ್ರಾಫ್ ಇಲಾಖೆಗೆ ೧೯೩೬-೩೭ರಲ್ಲಿ ೧೪ ಲಕ್ಷ ರೂಪಾಯಿಗಳ ಲಾಭವಾಗಬಹುದೆಂದು ಲೆಕ್ಕಹಾಕಲಾಗಿದೆ.

ಬರ್ಮಾದಲ್ಲಿ ಮಹಾಪ್ರಳಯದ ದೆಸೆಯಿಂದ ೫೦ ಮಂದಿ ನೀರುಪಾಲಾದರು. ಸಾವಿರಾರು ಮಂದಿ ಮನೆಗಳಿಲ್ಲದೆ ಅಲೆದಾಡುವವರಾದರು.



TEST YOUR EYES

By the Electro Ophthalmoscope





All Varieties of Frames & Lenses.

AT

The Mangalore Trading Association Ltd.

Sight Testing Ophthalmic Opticians,

Car Street, MANGALORE.

'Dil Roz' (Regd)

'Dil Roz' is a sure cure for Oriental sores local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited.

Price Rs. 2.

Postage extra.

TAHIR DIN,

Anarkali, LAHORE.



ಗುಣಖಾತ್ರಿ ಔಷಧ.

ಸ್ತ್ರೀಯರ ಎಲ್ಲಾ ತರದ ಮುಟ್ಟು ದೋಷಗಳಿಗೆ. ಸ್ತ್ರೀಯರಿಗೆ ದೇಹವನ್ನು ಪುಷ್ಟೀಕರಿಸುವ ಟಾನಿಕ್.

ಲೋಧ್ರ

ಎಲ್ಲಾ ದವಾಖಾನೆಗಳಲ್ಲಿಯೂ ದೊರೆಯುತ್ತದೆ

ಕೇಸರಿ ಕುಟೀರಂ

ಮದ್ರಾಸು

ಮಂಗಳೂರು ಪ್ರವರ್ತಕರು: ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಆರೋಗ್ಯಕ್ಕೆ

ರಾಜಮಾರ್ಗ

ಯಾವ ಕೆಲಸಕ್ಕಾದರೂ ರಾಜಮಾರ್ಗವನ್ನು ಅನುಸರಿಸುವುದೇ ಉತ್ತಮ.
ಅದರಿಂದ ಸೌಖ್ಯ, ಆನಂದ ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ–

ಜೀವಾಮೃತ

ಆಯುರ್ವೇದಾಶ್ರಮಂ,

೧೫೧ ಗೋವಿಂದಪ್ಪನಾಯಕ್ ಬೀದಿ,

ಜಿ. ಟಿ. ಮದ್ರಾಸ್.

ದ. ಕ. ಜಿಲ್ಲೆಯ ಏಜಂಟರು–

ಪೊಪ್ಯುಲರ್ ಸ್ಟೋರ್ಸ್, ರಥಬೀದಿ

ಮಂಗಳೂರು.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಂಕಟ್ಟಾ ಬಜಾರ್, ಮಂಗಳೂರು.

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ತಾತ್ರಿಪಡೆಯಿರಿ.

CITY BISCUIT WORKS,

Flower Market South, Mangalore.

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನುಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0(ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರಡೇಪಿ,

P. O. Peridepi (ಕಲ್ಲೂರು ತಾ.)

ಸೂತಿಕಾವಾಯು ಅಪಸ್ಮಾರ,

10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

"ವಾಯುವಿಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒಮ್ಮೆಲೆ 10 ನಿಮಿಷಗಳಲ್ಲಿ ಮಾಯವಾಗುತ್ತವೆ ಮತ್ತು ರೋಗಿಯು ಶಾಂತಿಯನ್ನೂ ತೃಪ್ತಿಯನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ.

C. L. Namawala,

Palace Road, BARODA.

ಪುಷ್ಟಿದಾಯಕ ಆಹಾರದ ಕುರಿತು ಕೆಲವು ಸೂಚನೆಗಳು

ನಾವು ಸೇವಿಸುತ್ತಿರುವ ಆಹಾರದಲ್ಲಿ ವಿಟಮಿನ್‌ಗಳಿರಬೇಕು, ಎಂಬುದಾಗಿ, ಅನೇಕ ಪೌಷ್ಟಿಕ ಪ್ರವೀಣರ ಬೋಧನೆಯಾಗಿರುತ್ತದೆ. ಈಗ ನಾವು ಅನುಭವಿಸುತ್ತಿರುವ ದೇಹಾಲಸ್ಯಗಳು ಹೆಚ್ಚಿನ ಮಟ್ಟಿಗೆ ಈ ವಿಟಮಿನ್‌ಗಳು ಅಭಾವದಿಂದ ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಈ ವಿಟಮಿನ್‌ಗಳು ಅತಿಗತ್ಯ ವಿಟಮಿನುಗಳು ಅಭಾವದಿಂದಲೆ ಹೆಚ್ಚಿನ ಮಕ್ಕಳು, ಭಯಂಕರ ರೋಗಗಳಿಗೆ ಆಹುತಿಗಳಾಗುತ್ತಿವೆ ಶಿಶು ಮರಣದ ಸಂಖ್ಯೆಯು ಅತ್ಯಧಿಕವಾಗಿರುತ್ತದೆ

ದನದ ಹಾಲಿನಲ್ಲಿ ಮಗುಗಳ ಬೆಳವಣಿಗೆಗೆ ಬೇಕಾದ ವಿಟಮಿನ್‌ಗಳಿರುವುದರಿಂದ, ಮಕ್ಕಳಿಗೆ ಅದು ಅತಿಗತ್ಯ ಆಹಾರವು

ಗಿರಣಿಗಳಲ್ಲಿ ಸಿದ್ಧವಾಗುತ್ತಿರುವ ಅಕ್ಕಿಯ ವಿಟಮಿನಂಶಗಳೆಲ್ಲಾ ಕಳೆದು ಹೋಗುವುದರಿಂದ, ಅದನ್ನು ಸೇವಿಸುತ್ತಿರುವವರಿಗೆ ಅಕ್ಕಿಯಲ್ಲಿರುವ ವಿಟಮಿನು ದೊರಕದೆ, ಅವರು ಅವುಗಳು ಅಭಾವದಿಂದ ಕೆಲವು ಭಯಂಕರ ರೋಗಗಳಿಗೆ ತುತ್ತಾಗುವರು ಕುಟ್ಟಿದ ಅಕ್ಕಿಯಲ್ಲಿ ವಿಟಮಿನುಗಳು ಕಳೆದುಹೋಗುವುದಿಲ್ಲ ಆದುದರಿಂದ ಕುಟ್ಟಿದ ಅಕ್ಕಿಯ ಉಪಯೋಗದಿಂದ ಗ್ರಾಮಾಭ್ಯುದಯವಾಗುವುದಲ್ಲದೆ, ನಮ್ಮ ಆರೋಗ್ಯ ರಕ್ಷಣೆಯಾಗುವುದು ಅಕ್ಕಿಯನ್ನು ಅನೇಕ ಬಾರಿ ನೀರಿನಲ್ಲಿ ಹಾಕಿ ತೊಳೆಯಬಾರದು ಹಾಗೆ ಮಾಡಿದರೆ ಅದರಲ್ಲಿರುವ ವಿಟಮಿನುಗಳು ಕಳೆದು ಹೋಗುವ ಸಂಭವಗಳಿವೆ ಬಡಜನರು ಯಾವಾಗಲೂ, ಆಗಲೆ ತಯಾರಾದ, ನಾಡಿನಲ್ಲಿ ತಯಾರಾದ (ಕುಟ್ಟಿದ) ಅಕ್ಕಿಯನ್ನು ಮಾತ್ರ ಉಪಯೋಗಿಸಬೇಕು ಅದರಿಂದ ಅವರಿಗೆ ಹೆಚ್ಚು ಪೌಷ್ಟಿಕವೂ, ವಿಟಮಿನ್ 'ಬಿ' ಯು ದೊರಕುವುದು ವಿಟಮಿನ್ ಬಿ ನಮ್ಮ ಆರೋಗ್ಯಕರ ಬೆಳವಣಿಗೆಗೆ ಅತ್ಯಗತ್ಯವು

ಸಕ್ಕರೆಯ ಕುರಿತು—ಅತ್ಯಂತ ಭಯಂಕರವೆನಿಸುವ ಕೆನ್ಸರ್ ಮತು ಡಾಯಬೆಟಿಸ್ ರೋಗಗಳು, ಸಕ್ಕರೆ ಉಪಯೋಗವು ಧಾರಾಳವಾಗಿ ಹೆಚ್ಚಿದುದರ ಪರಿಣಾಮವೆಂದು, ಲಂಡನ್ ವಿಶ್ವವಿದ್ಯಾನಿಲಯದ ಓರ್ವ ಪ್ರವೀಣರ ಶೋಧೆಯಾಗಿರುತ್ತದೆ—ಇಂಗ್ಲಾಂಡಿನ ಕುರಿತು ಸಕ್ಕರೆಯಲ್ಲಿ ಆಹಾರ ಯೋಗ್ಯತೆಗಳಿಲ್ಲ ವಿಟಮಿನುಗಳಿಲ್ಲ ಆದುದರಿಂದ ಬ್ರಿಟಿಷ ಸರಕಾರವು ಸಕ್ಕರೆ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬಾರದಾಗಿ ಅವರ ಸೂಚನೆ ಕಬ್ಬುಗಳಿಂದ ತೆಗೆದ ಸಕ್ಕರೆಯನ್ನು ನಾವು ಸೇವಿಸುವುದಲ್ಲ—ವಿಟಮಿನ್ 'ಬಿ' ಧಾರಾಳವಾಗಿರುವ ಕಬ್ಬನ್ನೆ ಸೇವಿಸಬೇಕು ಆಗ ಜನರ ಆಹಾರದಲ್ಲಿ ವಿಟಮಿನ್ ಬಿ ಅಭಾವವು ಕಡಿಮೆಯಾಗುವುದು ಹೆಚ್ಚಾಗಿ ಸಕ್ಕರೆಯನ್ನು ಸೇವಿಸುವುದರಲ್ಲಿ ಆರೋಗ್ಯಕ್ಕೆ ಹಾನಿಯಿದೆ ಹಿಂದ-ದೇಶದ ಹುಂಜಾ ರಾಜ್ಯದ ಗುಡ್ಡನಿವಾಸಿಗಳು ಸಕ್ಕರೆಯನ್ನು ಉಪಯೋಗಿಸುವುದೆ ಇಲ್ಲ ನಿಸರ್ಗವು ಒದಗಿಸಿದ ಆಹಾರವನ್ನು ಸೇವಿಸಿ, ಉತ್ತಮ ತರದ ಆರೋಗ್ಯವನ್ನೂ ದೃಢಕಾಯವನ್ನೂ ಅನುಭವಿಸುತ್ತಿರುವರು ''

ಆದರೆ ಬೆಲ್ಲವು ಹಾಗಲ್ಲ—ಅದರಲ್ಲಿ ಮನುಷ್ಯನ ಆರೋಗ್ಯಕ್ಕೆ ಬೇಕಾದ ವಿಟಮಿನ್ ಬಿ, ಪ್ರೊಟೀನ್, ಲವಣಗಳು ಸುಣ್ಣ, ಪೊಸ್‌ಫರಸ್, ಕಬ್ಬಿಣ ಇತ್ಯಾದಿ ಅಂಶಗಳಿರುವುವು ಸಕ್ಕರೆ ತಯಾರಿಯಲ್ಲಿ ಇವೆಲ್ಲಾ ತ್ಯಜಿಸಲ್ಪಟ್ಟು ಹೊರ ಬಿಸಾಡಲಾಗುತ್ತವೆ

ಬೆಲ್ಲವು ನಿರ್ಮಲವಾಗಿ ತಯಾರಾಗುವುದಿಲ್ಲವೆಂದು ಕೆಲವರು ಭಾವಿಸಬಹುದು, ಆದರೆ ಹೆಚ್ಚಿನ ಕಡೆಗಳಲ್ಲಿ ಬೆಲ್ಲವನ್ನು ಅತಿ ನಿರ್ಮಲತೆಯಿಂದ ತಯಾರಿಸುತ್ತಿದ್ದಾರೆ ಬೆಲ್ಲವು ಹಳ್ಳಿಯ ಕೈಗಾರಿಕೆಯು ಸಕ್ಕರೆಯು ಧನಾಢ್ಯರಿಗೆ ಲಾಭಗಳಿಸುವ ಮಹಾ ಕೈಗಾರಿಕೆಯು ಸಕ್ಕರೆ ಸೇವನೆಯಿಂದ ಧನಾಢ್ಯರಿಗೆ ಲಾಭ ಗಳಿಸಲು ಮಾತ್ರವಲ್ಲದೆ ಬೇರೆ ಯಾವ ಪ್ರತ್ಯುಪಕಾರವೂ ಇಲ್ಲ. ಬೆಲ್ಲದ ಸೇವನೆಯಿಂದ ಮಾನವನಿಗೆ ಬೇಕಾದ ಪೌಷ್ಟಿದಾಯಕ-ವಿಟಮಿನ್ ಮತ್ತು ಆಹಾರವು ಒದಗಿ, ಆತನು ಆರೋಗ್ಯವಂತನಾಗುವುದಲ್ಲದೆ, ಹಳ್ಳಿಗಳ ಬೆಲ್ಲದ ಕೈಗಾರಿಕೆಯ ಅಭ್ಯುದಯವಾಗುವುದು ಅದರಲ್ಲೂ ಹಣ್ಣು ಹಂಪಲುಗಳನ್ನು ಸೇವಿಸಲು ಅನುಕೂಲವಿಲ್ಲದ ಬಡವನಿಗೆ,ಬೆಲ್ಲವು ಒಂದು ಶ್ರೇಷ್ಠ ಬದಲಿಯು

ಬೆಲ್ಲವನ್ನು ಕಬ್ಬಿನರಸದಿಂದ ಮಾತ್ರವಲ್ಲದೆ ತೆಂಗಿನ ಮರ, ತಾಳೆ ಮರದಿಂದಲೂ ತಯಾರಿಸಬಹುದು ತಾಳೆ ಮರದಿಂದ ತೆಗೆದ ಸಿಹಿರಸದಿಂದ ಅತಿ ನಿರ್ಮಲ ರೀತಿಯಲ್ಲಿ ಒಳ್ಳೆ ಬೆಲ್ಲವು ಪುಷ್ಕಳವಾಗಿ ಸಿದ್ಧವಾಗುತ್ತದೆ ತಾಳೆ ಮರದಿಂದ ಮತ್ತು ತೆಂಗಿನ ಮರದಿಂದ ಶರಾಯಿಯನ್ನು ತಯಾರಿಸುವ ಬದಲು,ಅವುಗಳಿಂದ ಉತ್ತಮ ತರದ ಬೆಲ್ಲವನ್ನು ತಯಾರಿಸಬಹುದು

ಎಣ್ಣೆಯ ಕುರಿತು ಯಂತ್ರದಲ್ಲಿ ತಯಾರಾಗುವ ಎಣ್ಣೆಗಿಂತ ಹಳ್ಳಿ ಗಾಣದಲ್ಲಿ ತಯಾರಾಗುವ ಎಣ್ಣೆಯು ಉತ್ತಮವೆನ್ನಬಹುದ ನಮಗೆ ಬೇಕಾದಾಗ ಅದನ್ನು ತಯಾರಿಸಬಹುದು ಅದು ಪರಿಶುದ್ಧವಾಗಿರುವುದರಿಂದ ಹಾಳಾಗುವ ಸಂಭವಗಳು ಕಡಿಮೆ

(ಸೇನಾಪು)

ವಿವಾಹದಲ್ಲಿ ಪ್ರೇಮವು ಕೊನೆಗೆ ಬರಬೇಕು

ಹಿಂದೂ ಶಾಸ್ತ್ರದ ಪ್ರಕಾರ ಸಂತತಿಯನ್ನು ಹೊಂದುವುದೆ, ವಿವಾಹದ ಮುಖ್ಯ ಉದ್ದೇಶವು ಇದು ಶ್ರೇಷ್ಟವಾದ ಉದ್ದೇಶವು ಕೇವಲ ಕಾಮ ಇಚ್ಛೆಗಳನ್ನು ಪೂರೈಸುವುದ ಹಿಂದೂ ವಿವಾಹದ ಉದ್ದೇಶವಲ್ಲ ಹಿಂದೂ ವಿವಾಹದಲಿ ಒಂದು ತರದ ಅಧ್ಯಾತ್ಮಿಕ ಭಾವವು ಇರುವುದು

ವಿವಾಹದ ಕುರಿತ ರೂಢಿಯಲ್ಲಿರುವ ಕೆಲವು ಪದ್ಧತಿಗಳಿಗೆ ಒಳ್ಳೆ ಕಾರಣಗಳಿವೆ ದೃಷ್ಟಾಂತವಾಗಿ, ಒಂದೆ ಗೋತ್ರದವರೊಳಗೆ ವಿವಾಹವಾಗಲೊಲ್ಲದು— ಕಾರಣ ಒಂದು ಕುಟುಂಬದೊಳಗೆ ಒಂದೆ ಮನೆಯವರೊಳಗೆ ವಿವಾಹ ನಡೆಯುವುದು ಉತ್ತಮ ಸಂತತಿಯನ್ನು ಪಡೆಯುವ ವಿಚಾರದಲ್ಲಿ ಉತ್ತಮವಲ್ಲವೆಂದು ಖಚಿತವಾಗಿದೆ ಹೀಗಾಗಿ ವಿವಾಹಪದ್ಧತಿಗಳನ್ನು ನಾವು ಕೆಲಮಟ್ಟಿಗೆ ಆಚರಿಸಬೇಕು ವಿವಾಹವು ಪ್ರೇಮದಿಂದ ಮೊದಲಾಗಬೇಕೆಂದೂ ಈಗಿನ ಕೆಲವು ಆಧುನಿಕರ ಅಭಿಪ್ರಾಯವಾಗಿದ್ದರೂ ವಿವಾಹವು ಮೊದಲಾಗಿ,—ಪ್ರೇಮವು ನಂತರ ನಡೆಯುವುದೆ ಉತ್ತಮವು ಕಾರಣ ಪ್ರೇಮಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟರೆ ಆ ವೇಗಭರದಲ್ಲಿ ದಾಂಪತ್ಯದ ಇತರ ಮುಖ್ಯ ವಿಚಾರವನ್ನು ಮರೆತುಬಿಡಬಹುದ ಆದ್ದರಿಂದ ವಿವಾಹವಾಗುವರೆ, ಆಧ್ಯಾತ್ಮಿಕವು ಮೊದಲಾಗಿ ಬಂದು ಸೇವೆ ಕುಟುಂಬ ವಿಚಾರ ಸಾಮಾಜಿಕ ಪರಸ್ಪರ ಪ್ರೇಮ ಇವುಗಳೆಲ್ಲ ಒಂದನ್ನೊಂದ ಸರಿಸಿ ಇನ್ನೊಂದ ಬರಬೇಕ ಪ್ರೇಮವು ಕೊನೆಯದಾಗಿ ಬರಬೇಕು ಆದರೆ ಪ್ರೇಮವೆ ಇಲ್ಲದವಿವಾಹಗಳು ನಡೆಯ ಬಾರದು ಲಿಂಗಗಳ ವಿಚಾರ ಹೆಚ್ಚಿನ ಗಮನವಾಗಬೇಕು

ಹಿಂದೂ ಶಾಸ್ತ್ರದ ಪ್ರಕಾರ ಮೊದಲಿನ ಮಗುವು ಧರ್ಮಪ್ರಕಾರ ಹುಟ್ಟಿದ್ದು ಇತರವುಗಳು ಕಾಮಕ್ಕೆ ಹುಟ್ಟಿದವೆಂದು ನೀತಿ ಇದೆ ಮೊದಲಿನದು ಯಾವಾಗಲೂ ಗಂಡಾಗಬೇಕೆಂದೂ ಅಪೇಕ್ಷೆಯಿದೆ ಆದರೆ, ಒಳ್ಳೆ ಬಲವಂತ ಮಕ್ಕಳನ್ನು ಪಡೆಯುವುದು, ಒಬ್ಬನ ಯೋಗ್ಯತೆಯ ಮೇಲೆ ಹೊಂದಿಕೊಂಡಿದೆ

ಕೈಗಾರಿಕೆ ಕ್ಷೇತ್ರಗಳಲ್ಲಿರುವ ಡೆಟಿನ್ಯುಗಳಲ್ಲಿ ಈ ವಾರ ಮೂರು ದಿಗಳ ಬಿಡುಗಡೆಯಾಗುವುದ ಒಂದು ಕಳದಲ್ಲಿ ಅಂದರೆ ಇಷ್ಟರ ತನಕ ಕೈಗಾರಿಕೆ ತರಬೇತು ವಿಧದಲ್ಲಿ ವಿಮೋಚನೆ ಹೊಂದಿದ ಡೆಟಿನ್ಯುಗಳ ಸಂಖ್ಯೆಯು ೨೮೦ ಆಗಿರುತ್ತದೆ

ನಿಮ್ಮ ಹೊಟ್ಟೆಯನ್ನು ಸರಿಯಾಗಿಟ್ಟುಕೊಂಡಲ್ಲಿ

ನೀವು ಆರೋಗ್ಯದಲ್ಲಿರುವಿರಿ ಇನೋಸ್ "ಫ್ರುಟ್ ಸೋಲ್ಟ್" ಇದು ಹೊಟ್ಟೆಯ ಅವ್ಯವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ ಮಲಬದ್ಧತೆ, ಹೊಟ್ಟೆಯ ಉಬ್ಬರ ತಲೆನೋವು, ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದುಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ ನೀವು ಈ ಉತ್ತಮವಾದ ಪೇಯವನ್ನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು ಇದೇ ಆರೋಗ್ಯವು

ಇನೋ ಇದಕ್ಕೆ ನಿಮ್ಮ ಸ್ವಾಭಾವಿಕ ಸುರಕ್ಷಿತವಾದ ಭೇದಿಯಾಗುವ ಗುಣವಿರುವುದು



ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ

Eno's 'Fruit Salt'

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬಾತುಕೊಳ್ಳುವಿಕೆ ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ,ಧಾತುಸ್ರಾವ,ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3–0–0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer **Dr D. N JASANI,** Vithalbhai Patel Road, BOMBAY 4

ನಿಮ್ಮ ಕಾಲುಗಳ ಉಪಯೋಗವನ್ನು ಮಾಡಿರಿ

ಇಂಗ್ಲಾಂಡಿನ ಸರ್ ಜಾರ್ಜ್ ಟಲ್ಲಿಯವರು, ಜನಾಂಗದ ಆರೋಗ್ಯ ಉದ್ಧಾರ ಬಗ್ಗೆ ಸಾರಿದ ಅನೇಕ ಬೋಧನೆಗಳಲ್ಲಿ ಕೆಲವು ಈ ಕೆಳಗೆ ಕೊಡಲಾಗಿವೆ.

ಆಧುನಿಕ ನಾಗರೀಕ ಜೀವನದಿಂದ ಕಾಲುಗಳ ಉಪಯೋಗವಾಗದುದರಿಂದ, ಅದು ನಮ್ಮ ಆರೋಗ್ಯದ ವೈರಿಯಾಗಿರುವುದು.

ಮಹಡಿಗಳನ್ನು ಹತ್ತಲು ಇರುವ ಲಿಫ್ಟ ಯೋಜನೆಯಿಂದ ದೇಹಕ್ಕೆ ಹಾನಿಯಿದೆ.

ಆಧುನಿಕ ಚಲಾವಣೆ ಸೌಕರ್ಯದಿಂದ ಅಜೀರ್ಣ ಉಂಟಾಗದಂತೆ ನೋಡುವುದು ಒಂದು ಮಹಾ ಸಮಸ್ಯೆಯು.

ಯಾವನೂ ತನ್ನ ಕಾಲುಗಳನ್ನು ಉಪಯೋಗಿಸುವುದಿಲ್ಲವೋ ಆತನು ಸದಾಕಾಲ ವೈದ್ಯರನ್ನು ಕಾಣುವವನಾಗುವನು.

ಉತ್ತಮ ಆರೋಗ್ಯವು ಸಂಪಾದಿಸತಕ್ಕದು. ಅದು ತನ್ನಷ್ಟಕ್ಕೆ ತಾನೆ ಬರುವುದಿಲ್ಲ. ದುಡಿದ ಆರೋಗ್ಯದಿಂದ ಸಂತೋಷವಿದೆ.

ಬೇರೆಯವರು, ಆಟಗಳ ಸ್ಪರ್ಧೆಯಲ್ಲಿ ಭಾಗವಹಿಸುವುದನ್ನು ನಿರೀಕ್ಷಿಸುವುದರಲ್ಲಿ ಸಮಾಧಾನ ಹೊಂದುವುದು,—ಈ ಆಧುನಿಕ ಕಾಲದ ಒಂದು ಅನರ್ಥವು

ನಾವು ಒಂದನೆ ಜನಾಂಗವಾಗಬೇಕಾದರೆ ಫುಟ್ ಬಾಲ್ ಆಡುವವರನ್ನು ನೋಡುವುದನ್ನು ಬಿಟ್ಟು ನಾವೆ ಆ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಬೇಕು ಈಜುವುದರಲ್ಲಿ ದೊರಕುವಷ್ಟು ವ್ಯಾಯಾಮವು ಬೇರೆಯಾವ ಆಂಗಸಾಧನೆಯಿಂದಲೂ ದೊರಕುವುದಿಲ್ಲ

ಮನೆವಾರ್ತೆ ಉಪಯೋಗಕ್ಕೆ ಉಪ್ಪು ಉಚಿತ

ಮನೆವಾರ್ತೆ ಉಪಯೋಗದ ಬಗ್ಗೆ ಹಳ್ಳಿಗರು ಉಪ್ಪನ್ನು ಉಚಿತವಾಗಿ ಕೊಡಿಸುವ ವಿಚಾರದ ಲಕ್ಷ್ಯವು ನಮ್ಮ ಸರಕಾರವು ತೆಗೆದುಕೊಂಡಿರುತ್ತದೆ

ಗಾಂಧಿ-ಇರ್ವಿನ್ ಒಪ್ಪಂದದಿಂದ ದೊರೆತ ಈ ರಿಯಾಯಿತಿ ಕೆಲಸಮಯದ ಹಿಂದೆ ಹಿಂತೆಗೆಯಲಾಗಿತ್ತು ಕೆಲವರು ಈ ರಿಯಾಯಿತಿಯನ್ನು ಅನ್ಯಾಯಕರ ರೀತಿ ಉಪಯೋಗಮಾಡಿ,ಮೂಟೆ ಕಟ್ಟಿಯಲ್ಲಿ ಉಪ್ಪನ್ನು ದೂರದ ಪ್ರದೇಶಗಳಿಗೆ ಸಾಗಿಸಿ, ಅಲ್ಲದನ್ನು ಮಾರಾಟ ಮಾಡಿದುದಕ್ಕೆ—ಸರಕಾರದ ಆದಾಯಕ್ಕೆ ಹಾನಿ ಬರುತ್ತದೆಂದು

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ, ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುಬುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ –

ಶಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

The Coronation of their Majesties is now over!
But Remember!

Comfortable ***Ideal*** ***Central***

The Coronation Darbar Restaurant

Boarding & Lodging

Opposite Govt. College, Hampankatta, Mangalore

A Home in the Motherland

Cleanliness and comfort at moderate cost

A delightful hotel in the centre of the town and nearest to the Rly Station & Bus Station

Gives best Refreshment & dinner service and modern preparations such as Biryani Fowl Biryani, Pulav Khushka, Chops, Cutlets, Roast, Bheja Khima, Tomato mutton Roasted Fowl, Omlet, Sambusa, etc a speciality

Special lodging arrangements for travellers Students will find all their food requirements

Please Step in Once and Convince Yourself

S B Mohidin, S. M Sayed Ali Saheb (Bhatkal) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಸೌಲಭ್ಯ ಸೌಕರ್ಯ ಸುಖದಾಯಕ

ಶುಚಿಕರವಾದ [illegible] ಪದಾರ್ಥಗಳು ಸುಲಭ ದರದಲ್ಲಿ ಇನ್ನೆಲ್ಲಿಯೂ ದೊರಕಲಾರದು

ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್ ಬಸ್ ಆಫೀಸುಗಳಿಗೆ ತೀರಾ ಸಮೀಪವು [illegible]

[illegible] ಬಿರಿಯಾನಿ [illegible] ಪುಲಾವ್, ಖುಶ್ಕಾ ಚಾಪ್ ಕಟ್ಲೆಟ್ಸ್ ರೋಸ್ಟ್ ಬೇಜ ಖೀಮ, ಟೊಮೆಟೊ ಮಟನ್ ಆಮ್ಲೆಟ್ [illegible] ತಯಾರಿಯು ನಮ್ಮ ಸ್ಪೆಶಿಯಾಲಿಟಿ [illegible]

ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ [illegible] ಪ್ರಯಾಣಿಕರಿಗೆ [illegible] ಭೋಜನಶಾಲೆಯು [illegible] ಒಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ

ಯಸ್ ಬಿ. ಮೊಹಿದಿನ್,
ಯಸ್. ಎಮ್ ಸಯ್ಯದ್ ಅಲಿ ಸಾಹೇಬ್, (ಭಟ್ಕಳ) } ಸ್ವಾಧೀನಕರ

The Canara Banking Corporation, Udipi, Ltd.

ESTD. 1906.

(INCORPORATED IN BRITISH INDIA.)

***Member:-*RESERVE BANK OF INDIA.**

Paid up Capital	**Rs. 2,88,925**
Deposits	**Rs. 37,98,217/-**
Reserves	**Rs. 3,52,213/-**
Govt. Securities	**Rs. 12,46,325/-**

ANNOUNCEMENT.

The Mettupalayam Branch of the Corporation will be opened on 11 – 8 – 1937 and all kinds of Banking transactions will be undertaken from that date.

Total Resources exceed Rs 52,00,000/-

6—8—1937

V. R. Kamath, B A LL B
Manager.

[illegible] | [illegible] | [illegible]

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by –

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

ಗುಣಕಾರಿದ್ದರೆ [illegible] | ಹಣ ವಾಪಾಸು!

[illegible] ವೈದ್ಯರಾಜ ಎಮ್. [illegible] ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0 ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಶೈ, ಚಿಕ್ಕ ಮಂಗಳೂರು. 2 ಶ್ರೀನಿವಾಸ ಸ್ಟೋರನ ಹೌಸ್ ಸ್ಟೇಶನ್ ಪೇಟೆ ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿಡಿಗಾಂ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

THE PIE-MONEY BANK LTD.

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs 100—0—0 run regularly on systematic lines Unique Banking facilities to Businessmen and interested Public

Apply for paticulars— **K R. GURU,** *Managing Director*

೧ ರೂಪಾಯಿಗೆ ೫೦೦೦ ರೂಪಾಯಿ

ಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರೀಮಿಯಂ ಕಟ್ಟಬೇಕಾಗಿಲ್ಲ, ಮತ್ತೆ ಪ್ರೀಮಿಯಂ ಕೇಳುವುದಿಲ್ಲ

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

Write for full particulars to:

M. S. V. Kamath,

BOLUR, MANGALORE.

Dist Agent for SOUTH CANARA.

Dist Agent for North Kanara

***Mr.* I. A. Shaik,**

Khaji Mohalla, ANKOLA

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಏಸ್ಪೆಶ್ ರೋಡ್, ಲಾಹೋರು.

Regd. ... ರೂ. 2-12-0.

ಸ್ವದೇಶಾಭಿಮಾನಿ

SWADESHABHIMANI

ಸಂಚಾಲಕರ ...] ಕೀರ್ತಿಶೇಷ ಎ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮುಕ್ತಿ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪಡೆದು ತೃಪ್ತರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧. ಮಂಗಳೂರು ತಾ. ೧೩ನೇ ಅಗೋಸ್ತು ೧೯೩೭. (13-8-'37) ಸಂಚಿಕೆ ೩೨

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,18,58,706
1930	59,97,500	9,83,367	28,00,970	2,06,68,328
1933	94,16,500	15,12,692	50,04,871	3,07,98,434
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances. Family Safe Guard Policy a special feature.
Application for agencies will be received from honest and respectable gentlemen.
Organisers appointed with pay and allowance.
Gentlemen with organising ability and who can guarantee Business need apply.

KOCHIKAR BROTHERS,

Madras Branch Secretaries,

Post Box 337, Mount Road, MADRAS.

Phone No. 8245.

Apply to any of the following Offices:-

Ottapalam	entral Station Road, Trivandrum.	Visveshwarapuram ircle, Bangalore ity.	Soumyalayam Puthiyara, alicut	ar Street, Mangalore.	Udipi, S. India.	harni Road, Bombay No. 4

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಚುಚ್ಚಿಗೆ, ಬಾವು, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ, ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿ, ... ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

... ದೊರೆಯುವದು.

[illegible]

[illegible] ಮುನ್ನ ಬಂದಾಗ, [illegible] ಬಂದಲ್ಲಿ [illegible] ಇರುವುದೇ? ಇಲ್ಲಿಯೂ ಅಲ್ಲಿಯೂ [illegible] ಮಾರಾಟಕ್ಕಿರುವ ಕಂಪೆನಿಗಳು ಒಂದೇ, ಎಂದರೆ ಅಲ್ಲಿ ಅಗ್ಗವಾಗುವಂತೆ ವ್ಯಾಪಾರ, ಅಂಥ [illegible] ಹೆಚ್ಚುವ ಹಾಗೆ ಇಲ್ಲಿ ದರ ಏರಿಸುವರಂತೆ! ಆದರೆ, ಕಂಪೆನಿಗಳು ಹೀಗೆ [illegible] ಇಲ್ಲಿ ದರ ಏರಿಸುವ ವೆಂದು ಪ್ರಕಟಿಸುವುದಿಲ್ಲ.

ಅದರಂತೆ, ಲಂಡನಿನಿಂದ ರಂಗೂನಿಗೆ ವಿಮಾನಗಳ ಮೂಲಕ ಪತ್ರವ್ಯವಹಾರವನ್ನು ಇಂಗ್ಲೆಂಡಿನವರು ಆಸಗೆ ಒಯ್ಯುವರು. ಆದರೆ, ಮದ್ರಾಸಿನಿಂದ ರಂಗೂನಿಗೆ ಪತ್ರವ್ಯವಹಾರಕ್ಕಾಗಿ, ಬರೀ ಟಪ್ಪಾಲು ದ್ವಾರಾ ಖರ್ಚು ಹೆಚ್ಚಿಗೆ ಇದೆ. ಲಂಡನಿನವರಿಗೆ ರಂಗೂನು ಬೇಕು, ವ್ಯಾಪಾರಕ್ಕೆ, ಮದ್ರಾಸಿನ ವ್ಯಾಪಾರವು ರಂಗೂನಿನಿಂದ ದೂರವಾಗಬೇಕು ಎಂದಿಷ್ಟೇ ಅವರ ಆಸೆ.

ಮದ್ಯಪಾನ ನಿವಾರಣೆಗೆ ಕೊಂಗ್ರೆಸ್ ಮಂತ್ರಿಗಳು ಕೈಹಚ್ಚಿರುವರು, ನಿಜ. ರೈಲ್ವೇ ಸ್ಟೇಶನುಗಳಲ್ಲಿ ಮಾರಾಟವಾಗುವ ಮದ್ಯವನ್ನು ತಡೆವವರಾರು?

ವಾಯುವ್ಯ ಗಡಿನಾಡಿನಲ್ಲಿ ಎಂದಿನಿಂದಲೂ ದಂಗೆಗೆ ಕಾರಣನಾಗಿರುವ ಫಕೀರನು ಫಕೀರನೇ ಅಲ್ಲವಂತೆ. ವಜೀರಸ್ಥಾನವನ್ನು ಬ್ರಿಟಿಷರು ವಶಪಡಿಸಿಕೊಳ್ಳುತ್ತಾರೆಂದು ಬೋಧಿಸುವ ಕಾಲವಿದು. ಈತನು ಧನಾಢ್ಯನು, ಜನರಿಗೆ ಮಾತ್ರ ತೀರ ಫಕೀರನಾಗಿ ಸಾಧುಪುರ ಷನೆಸಿಸಿಕೊಂಡಿರುವನಂತೆ.

ಪ್ರಾಂತಿಕ ಸರಕಾರಗಳೆಲ್ಲವೂ ಮದ್ಯದ ಸುಂಕವನ್ನು ಕಳೆದುಕೊಂಡರೆ ೧೫ ಕೋಟಿ ರೂ. ನಷ್ಟವಾಗುವುದು. ಸರಕಾರವು ಶಿಕ್ಷಣಕ್ಕಾಗಿ ವ್ಯಯಿಸುವುದು ೧೨ ಕೋಟಿ ರೂಪಾಯಿ. ಇದಕ್ಕಾಗಿ ನಷ್ಟಭರ್ತಿಮಾಡಿಕೊಳ್ಳುವುದು ಹೇಗೆ? ರೂ. ೫೦೦ರ ಮೇಲಣ ಸಂಬಳವನ್ನೆಲ್ಲ ಇಳಿಸುವುದೇ? ೧೦೦೦ರಿಂದ, ಶೇಕಡಾ ೧೦ರ ತೆ ೫೦೦ ತನಕ ಸಂಬಳವೇರಿರುವುದನ್ನು ಇಳಿಸುವುದೇ? ಇಂಗ್ಲೆಂಡಿನಿಂದ ನೇಮಕಹೊಂದಿದವರ ಸಂಬಳವನ್ನಂತೂ ಮುಟ್ಟಲಾಗುವುದಿಲ್ಲ. ಇಲಿನವರ ಸಂಬಳವನ್ನು ಒಂದು ವೇಳೆ ಸಾಮಾಜಿಕ ಬಲತ್ಕಾರದಿಂದಲೂ ಇಳಿಸಬಾರದೆಂದಿದೆಯೆ? ಹತ್ತು ವರ್ಷಗಳಲ್ಲಿ ಹೀಗೆ ಕತ್ತರಿಸಿದ ಸಂಬಳವು ೫೦ ಕೋಟಿಯಷ್ಟಾಗ ವುದ. ಮೆಟ್ರಿಕ್ ಪಾಸಾದವರು ೧ ವರ್ಷ ಶಿಕ್ಷಣ ಪ್ರಚಾರಕ್ಕೆ ಹಳ್ಳಿಗಳಲ್ಲಿದ್ದು ಸ್ವಂತ ಖರ್ಚಿನಿಂದ ಅಭ್ಯಾಸ ಮಾಡಬೇಕೆಂದು ವಿಧಿಸಿದರಾಗದೆ? ವರ್ಷಕ್ಕೆ ೫೦ ರೂಪಾಯಿ ಪಡೆದು ಇಂತಹ ಸ್ವಯಂಸೇವಕರು ಗ್ರಾಮ ಸೇವೆ ಮಾಡಲಾರರೆ? ಎಂದೆಲ್ಲ ಸೂಚನೆಗಳನ್ನು ಮಹಾತ್ಮಾಜಿಯವರಿಗೆ ಪ್ರೊಫೆಸರ್ ಕೆ. ಟಿ. ಶಹಾರವರು ಬರೆದು ಕೊಂಡಿದ್ದಾರೆ.

ಇವು ಸೂಚನೆಗಳು ನಿಜ, ಒಳ್ಳೆದಿದ್ದರೆ? ಅವರಿಗೆ ತಗಲುವ ಆ ೫೦ ರೂಪಾಯಿ ಖರ್ಚಿನ ೨೦, ೨೫ ಪಟ್ಟು ಹೆಚ್ಚಾಗಿ ಅವರು ಸರಕಾರಕ್ಕೆ ಹಣ ತುಂಬಬೇಕಂತೆ. ಇದು ನಿಜವಾದಲ್ಲಿ, ಮೆಟ್ರಿಕ್ ಕಲಿಯುವವರ ಸಂಖ್ಯೆಯೇ ಇಳಿಯಬಹುದು.

ರೈಲ್ವೆಗಾಡಿ ಓಡುತ್ತಲಿರುವಾಗ, ತನ್ನ ಸ್ಟೇಶನು ದಾಟಿ ಹೋಯಿತೆಂದು, ಪ್ರಯಾಣಿಕರು ಕೂಡಲೆ ಇಳಿದರೆ, ಪ್ರಾಣಾಪಾಯವಾದೀತು. ಗಾಡಿ ನಿಂತ ಬಳಿಕ, ನಿಧಾನವಾಗಿ ಇಳಿದು, ಪ್ರಯಾಣದಿಂದಾಗುವ ಮೋಟಾರ ತಪ್ಪುಗಳು [illegible] ಎಂದು ಶ್ರೀ ರಾಜಗೋಪಾಲಾಚಾರ್ಯರು ಎಂದಂತೆ, ಶಕ್ಯವಿ ಭಯಂಕರ ಪಾಪ ಸೂಚನೆಗೆ ಕೈ ಹಚ್ಚಿ, ಕೈ ಸುಟ್ಟುಕೊಳ್ಳುವಂತಾಗಬಾರದಷ್ಟೆ.

ಎಂಟನೆಯ ಎಡ್ವರ್ಡರು ಮೆರವಣಿಗೆಯಾಗಿ ಹೋಗುತ್ತಿದ್ದಾಗ ಯಾರೋ ಒಬ್ಬನು ರಿವಾಲ್ವರನ್ನು ಅವರ ಕಡೆಗೆ ಬಿಸುಡಿದ್ದನಷ್ಟೆ. ಆಗ ಅಲ್ಲಿ ಕಾನೂನನ್ನು ಜ್ಯಾರಿಗೆ ತಂದು, ಆತನನ್ನು ಟಿತೊಂಸ್ಸರ ಸಲುವಾಗಿಟ್ಟ ನಮ್ಮ ಕಾನೂನಿನಂತೆ ಡೆಟನ್ಯೂವಾಗಿ ನ್ಯಾಯ ವಿಚಾರಣೆಗೆ ಒಳಪಡಿಸದೆ ಜೈಲಿನಲ್ಲಿಟ್ಟರೇ? ಹಾಗಿರುವಾಗ ನಮ್ಮಲ್ಲಿ ಕ್ರಾಂತಿಕಾರಕರೆಂದು ಪೋಲೀಸರ ರಿಪೋರ್ಟನ್ನು ಆದರಿಸಿ ವಿಚಾರಣೆಯಿಲ್ಲದೆ ಕೈದಿನಲ್ಲಿರುವ ಕ್ರಮವೇಕೆ? ಎಂದು ಸುಭಾಷ ಚಂದ್ರ ಬೋಸರು ಪ್ರಶ್ನೆ ಕೇಳಿರುವರು.

ಇದು ಇಂಗ್ಲೆಂಡಲ್ಲ. ಡೆಟನ್ಯೂಗಳಲ್ಲಿ ಇಂಗ್ಲಿಷರಿಲ್ಲ. ಎಂದು ಮಾತ್ರ ಬೋಸರಿಗೆ ತಿಳಿದಿಲ್ಲ.

ಶಿಕ್ಷಣ ಪ್ರಚಾರವಾಗದಿರುವುದಕ್ಕೆ ಉಪಾಧ್ಯಾಯರೇ ಕಾರಣವೆನ್ನುವವರುಂಟು. ದರಿದ್ರ ಗೃಹಶಾಲಿಯಾಗಿರುವ ಒಬ್ಬ ಉಪಾಧ್ಯಾಯನ ಅವಸ್ಥೆಯನ್ನು ಕೇಳಬೇಕು. ತಿಂಗಳಿಗೆ ೧೦ ರೂಪಾಯಿ ಸಂಬಳವಿದೆ. ೨೦ ಮಕ್ಕಳು ಕೂತುಕೊಳ್ಳಲು ಅವಕಾಶವಿರುವಲ್ಲಿ ೬೫ ಮಕ್ಕಳು ಪ್ರತಿ ದಿನ ಹಾಜರಾಗುವಾಗ, ಅವರಲ್ಲಿ ಯಾರನ್ನೂ ಹೊರಜಗಲಿಯಲ್ಲಿ ನಿಲ್ಲಿಸಿರಬಾರದು. ಹೊರ ನಿಂತವರ ತಂದೆಯರು ಅವನನ್ನು ಬಡೆಯಬಹುದೆಂಬ ಅಂಜಿಕೆಯಿದೆ. ಇದೀ ದಿನ ಕಲಿಸಬೇಕು, ಅಡುಗೆ ಮಾಡಲೂ ಉಪಾಧ್ಯಾಯನು ಕುಳಿತರೆ, ಅವನ ಮೇಲೆ ತಕ್ಷೀರು ಹೊರಿಸುತ್ತಾರೆ. ವ್ಯರ್ಥವಾದವರನ್ನು ಮೇಲಣ ತರಗತಿಗೆ ಸೇರಿಸಬೇಕೆಂದೂ ಈಗ ಅವನಿಗೆ ಭಯ ತೋರಿಸುತ್ತಾರೆ ಎಂದ ರ್ನುಾಸ್ಲಿ ಜಿಲ್ಲಾ ಬೋರ್ಡಿನ ಭಟ್ಟಗಾಂವ ಶಾಲೆ ಉಪಾಧ್ಯಾಯನ ದೂರು.

ಗಡಿನಾಡಿನ ಗಾಂಧಿಯವರೆಂದ ಹೆಸರುಗೊಂಡ ಖಾನ ಬಹದ್ದೂರ ಗಫರಖಾನರ ಭಾಷಣ ಕೇಳಿದುದಕ್ಕಾಗಿ ೨೨ ವಿದ್ಯಾರ್ಥಿಗಳಿಗೆ ಅಥಾ ಶಾಲಾ ಹೆಡ್‌ಮಾಸ್ತರರ ಜುಲುಮಾನೆ ವಿಧಿಸಿರ ವರ. ಮುಗವೇ ಬದಲಾದರೂ ಕೆಲವು ಅಧಿಕಾರಿಗಳ ಮರ್ಜಿ ಬದಲಾಗಲಿಲ್ಲ.

ಪಂಜಾಬಿನ ಎಸೆಂಬ್ಲಿಯಲ್ಲಿ ಮೆಂಬರರಿಗೆ ಮೊದಲ ಇದ್ದ ದೈನಿಕ ಭತ್ತೆ ರೂ. ೧೨ನ್ನು ಈಗ ಮಂತ್ರಿಗಳ ರೂ. ೨೫ಗೆ ಏರಿಸಿರುವರು. ಹೀಗಾಗಿ ಸ್ವಪಕ್ಷದ ಮೆಂಬರರು ಜಾರದೆ ಉಳಿದಿರುವರು. ಇನ್ನು ಕೆಲವರು ಸೆಕ್ರೆಟರಿಗಳನ್ನು ಸುಮಾರು ೭೫೦೦ ರೂಪಾಯಿ ಸಂಬಳದಲ್ಲಿ ನೇಮಿಸುವರು. ಇದರಿಂದ ಇವರ ಪಕ್ಷಬಗಿಯಾದೀತೆಂದು ನಂಬಿದ್ದಾರೆ—ಎಂದು ಪಂಜಾಬಿನ ಪತ್ರಿಕೆಗಳು ಎನ್ನುತ್ತಿವೆ. ಮಂತ್ರಿಗಳೇ ಮಾತ್ರ ಯುವರಾಜರಂತೆ ಸಂಬಳ ಪಡೆದರೆ, ಇವರಿಗೆ ವೋಟು ಕೊಟ್ಟಿರುವ ಮೆಂಬರರು ಸುಮ್ಮನಿರುವರೇ?

ವೈಸ್ರಾಯರು ಗಾಂಧಿಜಿಯವರನ್ನು ಆಮಂತ್ರಿಸಿಕೊಂಡು ಸಂಭಾಷಣೆ ಬೆಳೆಸಿದರು ಎಂಬುದೇ ಈ ವಾರದ ಶುಭವರ್ತಮಾನ. ವಿಲ್ಲಿಂಗ್ಡನರು ಗಾಂಧಿಜಿಯವರು ಅಪೇಕ್ಷಿಸಿದುದನ್ನು ವಿಲ್ಲಿಂಗ್ಡನ್ (ಮನಃಪೂರ್ವಕವಾಗಿ) ಮಾಡಲಾರರೆ. ಇಲ್ಲಿ ಅವಧಿ ಮುಗಿಸಿದರು. ಇಲ್ಲೀಗ ಇಷ್ಟು ಕಾಲದ ತರುವಾಯ "ಹೃದಯ ಪರಿವರ್ತನೆ"ಯಾದುದು ಪ್ರಕಟವಾಗುತ್ತದೆ. ದೇಶವಾಸಿಗಳಲ್ಲಿ ಸಂತೋಷವೆಷ್ಟಾಯಿತು! ಮಹದಾನಂದ!

ನಿಮ್ಮ ನರಗಳ ಪೋಷಣೆ
ಕಡೆ ಗಮನಿಸಿರಿ.
ಅಂದರೆ ಅವುಗಳು
ಶಕ್ತಿಯುಕ್ತವಾಗುವುವು.

ಬಹು ಬೇಗನೆ ಆಯಾಸ ಹೊಂದಿ ರಾತ್ರಿಹೊತ್ತಿನಲ್ಲಿ ನೀವು ಬಹಳ ಶ್ರಮ ಪಡುವಿರಾದರೆ ಅದು ನಿಮ್ಮ ನರಗಳಿಗೆ ಆರೋಗ್ಯಕೊಡುವ ಆಹಾರಗಳ ಪೂರ್ತಿಕೆ ಇಲ್ಲದಿದ್ದುದರಿಂದಾಗುತ್ತದೆ. ಅದಕ್ಕೆ ಸರಿಯಾಗಿ ಬೇಕಾಗುವ ತಕ್ಕ ಪೋಷಣೆಯನ್ನು ಕೊಡಿರಿ ಅಂದರೆ ಅವು ನಿಮ್ಮನ್ನು ಎಂದೂ ಬಾಧಿಸಲಾರವು.

ಇಂಥಾ ತೊಂದರೆಗಳಲ್ಲಿ ಓವಲ್ಟೀನು ಅದ್ವಿತೀಯವಾದುದ್ದಾಗಿದ್ದು ಬಳಲಿದ ನರಗಳನ್ನು ಪುನರ್ನವಸ್ಥೆಪಡಿಸುತ್ತದೆ. ಯಾಕೆಂದರೆ ಓವಲ್ಟಿನ್ ಎಂಬುದು ನರಗಳ ಶಕ್ತಿಗೆ ಬೇಕಾದ ಆರೋಗ್ಯ ಶಕ್ತಿ ಚೈತನ್ಯಗಳನ್ನುಂಟು ಮಾಡುವ ಪೌಷ್ಟಿಕ ಆಹಾರಗಳಿಂದೊಡಗೂಡಿದ್ದಾಗಿದ್ದು ಸಂಪೂರ್ಣವಾಗಿರುವ ಆಹಾರಪಾನೀಯವಾಗಿರುತದೆ.

ಓವಲ್ಟೀನು ಪ್ರಾಕೃತಿಕ ಆಹಾರವಾಗಿದ್ದು [illegible] ಧನದ ನವ ಕೆನೆಹಾಲಿನಿಂದಲೂ ಮತ್ತು ವಿಟಮಿನ್ [illegible] ಶ್ರೇಷ್ಠ ವಸ್ತುಗಳಿಂದಲೂ ಕೂಡಿದ್ದಾಗಿರುತ್ತದೆ. ರಾತ್ರಿಹೊತ್ತಿನಲ್ಲಿ ಕುಡಿದ [illegible] ಕಪ್ ಓವಲ್ಟಿನ್ ನರಗಳನ್ನು ಶಾಂತಗೊಳಿಸಿ ಸುಖವಾದ ನಿದ್ರೆಯನ್ನುಂಟು ಮಾಡುತ್ತದೆ. ಬದಲಿಯವುಗಳನ್ನು ತ್ಯಜಿಸಿರಿ.

'ಓವಲ್‌ಟಿನ್'
ಪೌಷ್ಟಿಕ ಆಹಾರ ಪಾನೀಯ.

OVALTINE

ಶಾಂತವಾಯ ಸುಖ ನಿದೆಯನ್ನುಂಟುಮಾಡುತ್ತದೆ
ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ
ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರಕುತದೆ
ಏಜಂಟರು—ಜೇಮ್ಸ್ ರೈಟ್ ಲಿಮಿಟೆಡ್, ಕಲ್ಕತ್ತ,
ಕರಾಚಿ, ಮುಂಬಯಿ ಮತು ಮದ್ರಾಸುಗಳಲ್ಲಿ
OV 458

ಆದರೆ ಅಂದಮಾನವಾಸಿ ಕೈದಿಗಳ ಉಪವಾಸ ಪ್ರಸಂಗವು ಮಾತ್ರ ಬಹಳ ದುಃಖವನ್ನುಂಟುಮಾಡಿಯದೆ. ಬಂಗಾಳದಿಂದ ಅತ್ತ ಕಳುಹಲಾದ ಕೈದಿಗಳ ಸಂಖ್ಯೆಯೇ ಧಾರಾಳ. ಬಂಗಾಳ ಮಂತ್ರಿಮಂಡಲ ಬೇರೆಯಾದರೂ ರಾಜತಂತ್ರ ಮಾಂಧಾತನ ಕಾಲದ್ದೇ. ವೈಸರಾಯರು ಬಂಗಾಳಕ್ಕೆ ಏನೂ ಸೂಚನೆ ಕೊಡಲಾರರೆ? ದೇಶವೆಲ್ಲ ಆನಂದಿಸುವಾಗಲೇ ಕಣ್ಣೀರು ಸುರಿಸಬೇಕೆ?

ಹೊಸ ವರ್ಷದ ಬಿರುದುಗಳು—ಬಿರುದು ವಿರೋಧಿಗಳಾಗಿರುವ ಕೊಂಗ್ರೆಸ್ ಪಕ್ಷದ ಮಂತ್ರಿಗಳ ಶಿಫಾರಸಿನಿಂದಾಗುವುದುಂಟೆ? ಆಗಬಹುದೆ? ಎಂಬ ವಿಚಾರಗಳಲ್ಲಿ ಈಗ ಅಖಿಲ ಭಾರತದ ಕಮಿಟಿಯೆ ನಿರ್ಧರಿಸಬೇಕಾಗಿದೆ. ಮಂತ್ರಿಗಳು ಪಟ್ಟಿ ಬರೆವವರಲ್ಲ. ಬಿರುದು ತ್ಯಜಿಸದೆ ಕೊಂಗ್ರೆಸ್ ಮೆಂಬರರಾಗಲು ಬರುವುದಿಲ್ಲವಷ್ಟೆ. ಕೊಂಗ್ರೆಸ್ ಮೆಂಬರರಲ್ಲದವರಿಗೆ ಬಿರುದು ಕೊಡುವುದೂ ತಪ್ಪೆ? ಆ ಬಿರುದುಗಳಿಗೆ ಬೆಲೆಯುಂಟೆ? ಇಲ್ಲವೆ? ಇವೇ ಕೆಲವರ ಪ್ರಶ್ನೆಗಳಾಗಿವೆ.

ಅಧಿಕಾರ ಸ್ವೀಕಾರದ ಪರಿಣಾಮವೇನಾಗಬಹುದು?

ಪಾರ್ಲಿಮೆಂಟರಿ ಚಟುವಟಿಕೆಗಳನ್ನು ಕೈಕೊಂಡ ಕಾಂಗ್ರೆಸ್‌ವಾಲರಿಗೆ ಶ್ರೀ। ಸುಭಾಷ್ಚಂದ್ರ ಭೋಸರ ಹಿತಸೂಚನೆಗಳು.

"ಅಧಿಕಾರ ಸ್ವೀಕಾರದಿಂದ, ಇನ್ನೊಂದು ಮಹತ್ತಾದ ಮಹಾಜನ ಸತ್ಯಾಗ್ರಹಕ್ಕೆ ಸಿದ್ಧತೆಗಳಾಗಬೇಕು. ಕಾಂಗ್ರೆಸ್ ವಾಲರು ಕೆಡದಂತೆ ಜಾಗ್ರತರಾಗಬೇಕು"

ಬಾಬು ಸುಭಾಷ್ಚಂದ್ರ ಭೋಸರು, ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದ ಕುರಿತು, ಕಲ್ಕತ್ತೆಯ 'ಮೊಡರ್ನ್ ರಿವ್ಯೂ' ಪತ್ರಿಕೆಯಲ್ಲಿ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಲೇಖವನ್ನು ಬರೆದಿರುವರು

ಅಧಿಕಾರ ಸ್ವೀಕರಿಸಲು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಸಮ್ಮತವಿತ್ತುದರಿಂದ, ಮುಂದಕ್ಕೆ ಬರಬಹುದಾದ ಅಪಾಯಗಳ ಕುರಿತಾಗಿ ಗಣನೆ ಮಾಡುವುದು ಅಗತ್ಯವು. ಆರು ಪ್ರಾಂತ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಸರಕಾರಗಳು ರಚನೆಯಾಗಿದ್ದರೂ, ಸಮಸ್ತ ಭಾರತದ ಕಾಂಗ್ರೆಸ್‌ವಾಲರ ಅಲ್ಲದೆ ಇತರ ಸಾರ್ವಜನಿಕರ ದೃಷ್ಟಿಯು, ಪ್ರಾಂತ್ಯಕೀಯ ಶಾಸನಸಭೆಗಳ ಮತ್ತು ಅವುಗಳ ಮಂತ್ರಿವರ್ಯರ ಕಾರ್ಯಕಲಾಪಗಳ ಮೇಲೆ ಸಂಪೂರ್ಣವಾಗಿ ಬೀರಲಾಗುವುದು. ಆದುದರಿಂದ ಶಾಸನಯುಕ್ತ ಚಟುವಟಿಕೆಗಳಿಗೆ ಹೆಚ್ಚಿನ ಲಕ್ಷ್ಯವು ದೊರಕಿ, ಬಹುಕಾಲದಿಂದ ಬೆಳೆದುಬಂದ, ಕಾಂಗ್ರೆಸ್ಸಿನ ವಿರೋಧಭಾವವು, ಮೂಲೆಪಾಲಾಗುವ ಸಂಭವಗಳುಂಟಾಗಲು ಅವಕಾಶವಿರುವುದು ಕಾಂಗ್ರೆಸ್‌ವಾಲರು, ಪ್ರಾಂತ್ಯಗಳ ಮಂತ್ರಿಪದವಿಯನ್ನೂ ಇತರ ಅಧಿಕಾರಗಳನ್ನೂ ಹೊಂದುವುದರಲ್ಲಿ ಆಸಕ್ತರಾಗಬಹುದು.

ಅಧಿಕಾರ ಸ್ವೀಕಾರವನ್ನು ವಿರೋಧಿಸುವವನು ನಾನಲ್ಲ ಅಧಿಕಾರ ಸ್ವೀಕಾರವೆಂದರೆ ಬ್ರಿಟಿಷ ಕಿರೀಟಕ್ಕೆ ವಿಧೇಯತಾ ಪ್ರತಿಜ್ಞೆಯನ್ನು ಗೈಯ್ಯಬೇಕು, ಆದ್ದರಿಂದ ಅಧಿಕಾರ ಸ್ವೀಕಾರವು ಬೇಡ ಎಂಬುದಾಗಿ ಹಲವರು ಈ ಮೊದಲು ವಾದಿಸುತ್ತಿದ್ದುದು ನನಗೆ ಸರಿ ಎಂದು ಕಾಣಲಿಲ್ಲ. ಹಾಗೆ ಪ್ರತಿಜ್ಞೆ ಹೊಂದಿದುದರಿಂದ ಏನೂ ಅಪಾಯವಿಲ್ಲೆಂದು ನನ್ನ ನಂಬಿಕೆ ಕಾರಣ, ಐಯರ್ಲೆಂಡಿನ ಡಿವೆಲರನ್ನು ಇದೇ ರೀತಿ ಪ್ರತಿಜ್ಞೆಗೈದು, ಶಾಸನಸಭೆಯನ್ನು ಸೇರಿ, ನಂತರ ಆ ಪ್ರತಿಜ್ಞೆಯನ್ನೆ ರದ್ದುಮಾಡಲಿಲ್ಲವೆ?

ಆಡಳಿತ ಕೆಲಸವನ್ನು ಸರಿಯಾಗಿ ನಿರ್ವಹಿಸಬೇಕಾದರೆ ಒಬ್ಬನು ಅದರ ಸಂಪೂರ್ಣ ಪರಿಶ್ರಮಗಳನ್ನು ವಹಿಸಬೇಕು ಆತನಿಗೆ ಇತರ ಚಟುವಟಿಕೆಗಳನ್ನು ನಡೆಯಿಸಲು ಅವಕಾಶ ದೊರಕದು ೧೯೩೦ರಲ್ಲಿ ನಾನು ಕಲ್ಕತ್ತ ನಗರಸಭೆಯ ಆಡಳಿತ ಉದ್ಯೋಗಸ್ಥ ಹುದ್ದೆಯನ್ನು ಹೊಂದಿದಾಗ, ನಗರ ಸಭೆಯ ಆಡಳಿತದ ಭರದಲ್ಲಿ, ಕಾಂಗ್ರೆಸ್ಸು ಚಟುವಟಿಕೆಯಿಂದ ನಾನು ಸಂಪೂರ್ಣ ಹೊರಗಾಗಬೇಕು ಆದರೆ ಕಾಂಗ್ರೆಸ್ ಕೆಲಸಕ್ಕೆ ಕೆಲಸಗಾರರ ಅಭಾವವಿಲ್ಲದೆ ಇದ್ದುದರಿಂದ, ನಾನು ಆ ಪದವಿಯನ್ನು ಹೊಂದುವಂತಾದೆ

ಒಂದು ರಾಜಕೀಯ ಪಕ್ಷವು ವಿಜಯ ಮಾಡೊಡನೆ, ಅದು ಆಡಳಿತದ ಪುನರ್ವ್ಯವಸ್ಥೆಯ ಕಾರ್ಯಗಳನ್ನು, ಸಂಪೂರ್ಣವಾಗಿ ಹೊಂದಿಕೊಂಡು, ಅದರಲ್ಲಿ ಸೃಷ್ಟನಾಶಕ್ತಿಯು ಇರುವುದೆಂದು ಜಗತ್ತಿಗೆ ವ್ಯಕ್ತಪಡಿಸಬೇಕು ಆದರೆ, ಹಾಗೆ ಅಧಿಕಾರವನ್ನು ವಹಿಸುವ ಮೊದಲು—ಸ್ವಾತಂತ್ರ್ಯ ಹೊಂದುವ ಸಮಯ ಬಂದಿತ್ತದೊ, ಸ್ವಾತಂತ್ರ್ಯ ಹೋರಾಟಕ್ಕೆ ಜಯ ಲಭಿಸಿದೆಯೆ? ಎಂಬುದು ನಿಷ್ಕರ್ಷೆಯಾಗಬೇಕು "೧೯೩೫ರ ಇಂಡಿಯಾ ಆಕ್ಟು, ನಾವು ಇಷ್ಟರ ತನಕ ಯಾವುದಕ್ಕೆ ಪರಿಶ್ರಮಿಸಿದೆವೊ, ಅದನ್ನು ಕೊಡುತ್ತದೆಯೆ? ಕೇಂದ್ರ ಸರಕಾರದ ವಿಚಾರವು ಹಾಗಿರಲಿ,—ಅದರಿಂದೆ, ಸ್ವಯಂಪ್ರಭುತ್ವದ ಪ್ರಾಂತ್ಯಗಳು, ರಚನೆಯಾಗಿವೆಯೆ?"

ಇಲ್ಲವೆಂಬುದೆ ಇದಕ್ಕೆ ಉತ್ತರ

ಅಧಿಕಾರ ಸ್ವೀಕರಿಸುವ ನಮ್ಮ ಯತ್ನದಲ್ಲಿ ನಾವು ಆಡಳಿತದ ಬಲೆಯಲ್ಲಿ ಸಿಲುಕಿ, ನಮ್ಮಲ್ಲಿರುವ, ರಾಜಕೀಯ ಪ್ರಗತಿಗೆ ಅಗತ್ಯವೆನಿಸುವ 'ವಿರೋಧಭಾವ' ಮಾಯವಾಗಲಿಕ್ಕಿಲ್ಲ ಎಂಬ ಭರವಸೆ ನಮ್ಮಲ್ಲಿರುವುದೆ? ಈಗ ಅರ್ಧಕ್ಕಿಂತ ಕಿಂಚಿತ್ಕಡಿಮೆಯಾದ ಫಲಹೊಂದದ ಸ್ವಾತಂತ್ರ್ಯ ಹೋರಾಟವನ್ನು ಮುಂದರಿಸುವಂತೆ, ದೇಶದ ಧುರೀಣರೆಲ್ಲ ಮಂತ್ರಿಪದವಿಗಳನ್ನು ಸ್ವೀಕರಿಸಬಾರದು ಹಾಗೆಂದು, ಒಳ್ಳೆ ಯೋಗ್ಯತಾ ಪುರುಷರು ವಿವಿಧ ಪ್ರಾಂತ್ಯಗಳಲ್ಲಿ ಮಂತ್ರಿಪದವಿಯನ್ನು ಹೊಂದದೆ ಪ್ರಯೋಜನ ದೊರಕದು. ಈ ಶಾಸನಸಭೆಯ ಕಾರ್ಯಕ್ಕೆ ನಮಗೆ, ಮಹತ್ತಾದ ಶಾಸನ ಸಾಂಪ್ರದಾಯವನ್ನು ರಚಿಸಿದ ಸರಕಾರಿ ಸದಸ್ಯರು, ಸರಿಯಾದ ರೀತಿ ವರ್ತಿಸುವಂತೆ ಮಾಡಿದ ದಿವಂಗತರಾದ ಮಾನ್ಯ ವಿಠಲಭಾಯಿ ಪಟೇಲರಂತಹ ಮಹಾವ್ಯಕ್ತಿಗಳ ಸೇವೆಯು ದೊರಕಬೇಕು



ಶ್ರೀ। ಸುಭಾಷ್ಚಂದ್ರ ಭೋಸರು

ಒಂದು ರಾಜಕೀಯ ಪಕ್ಷಕ್ಕೆ ಆಡಳಿತದ ಕುರಿತು ಅನುಭವವು ಅಗತ್ಯವಾಗಿ ಬೇಕು, ಈ ಅನುಭವವು ನವ ರಾಜಶಾಸನದಿಂದ ದೊರಕುವುದು ಎಂದು ಕೆಲವರು ಹೇಳಬಹುದು ಆದರೆ, ಅದು ಅಗತ್ಯವಿಲ್ಲೆಂದ ಪರೀಕ್ಷೆಯಲ್ಲಿ ಕಳೆದ ಮಹಾಯುದ್ಧದ ನಂತರ ನಡೆದ ಪುನರ್ವ್ಯವಸ್ಥಾ ಕಾರ್ಯದಿಂದ ತಿಳಿದುಬರುತ್ತದೆ ಲೆನಿನ್, ಸ್ಟೆಲಿನ್, ಹಿಟ್ಲರ್, ಮುಸಲೀನಿ ಮತ್ತು ಕೆಮಾಲ್ ಪಾಶಾ ಇವರೇ ಮೊದಲಾದವರ ದೃಷ್ಟಾಂತಗಳನ್ನು ನೋಡಿದರೆ, ಇದನ್ನು ಕಾಣಬಹುದು ಒಂದು ಕ್ರಾಂತಿಯ ತರುವಾಯ, ನವ ಆಡಳಿತೆಗೆ, ಬೇರೆ ತರದ ಕ್ರಮ, ಸೂತ್ರ ವಿಧಿಗಳು ಬೇಕಾಗುವುವು ಇವುಗಳು ಅನುಭವದಿಂದೆ ದೊರಕಲಾರವು ಧೈರ್ಯ, ಕಲ್ಪನಾಶಕ್ತಿ, ಯೋಗ್ಯತೆ ಇವುಗಳಿಂದ ದೊರಕುವುವು ರಷ್ಯದಲ್ಲಿ 'ಐದು ವರ್ಷದ ಯೋಜನೆ'ಯನ್ನು ಹೊರಡಿಸಿದುದು, ಟರ್ಕಿಯಲ್ಲಿ ಸ್ವಯಂಪ್ರಭುತ ರಾಜ್ಯಸ್ಥಾಪನೆಯಾದುದು ನವ ಇಟಲಿಯ ರಚನೆಯಾದುದು, ಜರ್ಮನಿಯ ಪುನರುತ್ಥಾನವಾದುದು, ಅನುಭವಶಾಲಿ ಆಡಳಿತಗಾರರಿಂದಲೆ?

ಈಗಲೂ ಕೇಂದ್ರ ಅಧಿಕಾರವು ಬ್ರಿಟಿಷರ ಕೈಗಳಲ್ಲೆ ಇರುವುದು—ನಮ್ಮ ಕೈಗಳಿಗೆ ಬಂದುದೆಂದರೆ, ಪ್ರಾಂತ್ಯಗಳ ಅಧಿಕಾರ—ಪರಿಪೂರ್ಣವಾಗಲ್ಲ ಹೀಗಿರುವಾಗ, ನಾವು ಈ ತರದ ಪ್ರಾಂತ್ಯಗಳ ಆಡಳಿತದ ಭರದಲ್ಲಿ ಮುಖ್ಯ ವಿಷಯವನ್ನು ಬಿಟ್ಟು, ಮುಳುಗಬಹುದೆ? ನಾವು ಮೊದಲಾಗಿ ಎಚ್ಚರಿಕೆಗಳನ್ನು ಹೊಂದಬೇಕು ಮುಂದೆ ಬರಬಹುದಾದ ಕೆಲವು ಅಪಾಯಗಳ ಕುರಿತು ಅಧಿಕಾರ ಸ್ವೀಕಾರ ಮಾಡಲು ಸಮ್ಮತಿಯಿತ್ತ ಕಾಂಗ್ರೆಸ್ ನಿರ್ಣಯವನ್ನು ಟೀಕಿಸುವುದು ನನ್ನ ಉದ್ದೇಶವಲ್ಲ. ಸ್ವಾತಂತ್ರ್ಯ ಹೋರಾಟವು, ಇನ್ನಷ್ಟು ಯಶಸ್ವಿಯಾಗಿ ನಡೆಯುವಂತೆ, ನವರಾಜಶಾಸನದ ಆದಷ್ಟು ಉಪಯೋಗವನ್ನು ಮಾಡುವಂತೆ, ನಾವು ತಪ್ಪಿಸಬೇಕಾದ ಕೆಲವು ಅಪಾಯಗಳನ್ನು ಸೂಚಿಸುವುದೆ ನನ್ನ ಈ ಲೇಖದ ಉದ್ದೇಶ.

ಬಡತನ, ನಿರುದ್ಯೋಗ, ರೋಗ ಮತ್ತು ನಿರಕ್ಷರತೆ, ಇವು ಭಾರತೀಯ ಶಾಸನ ಪುರುಷನ ಎದುರಿರುವ ಮಹಾ ಪ್ರಶ್ನೆಗಳು. ಧಾರಾಳ ಅನುಕೂಲತೆಗಳಿಂದ ಕೂಡಿದ, ಒಂದು ರಾಷ್ಟ್ರೀಯ ಸರಕಾರದಿಂದ ಮಾತ್ರ ಈ ಮಹಾ ಪ್ರಶ್ನೆಗಳನ್ನು ಸುಧಾರಿಸಬಹುದು ಈ ಪ್ರಶ್ನೆಯನ್ನು ಕೈಗೊಳ್ಳಲು ನಮ್ಮಲ್ಲಿ ಸಂಕಲ್ಪವಿದ್ದರೆ,—ನಮಗೆ ಅದಕ್ಕೆ ತಕ್ಕ ವ್ಯವಸ್ಥಾಪನೆ ಮತ್ತು ಹಣವು ಬೇಕಾಗಿದೆ ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಮಂತ್ರಿಗಳಿಗೆ ರಾಷ್ಟ್ರಾಭ್ಯುದಯ ಮಾಡುವ ಈ ಪ್ರಶ್ನೆಗಳನ್ನು ಕೈಗೊಳ್ಳಲು, ಹಣವೂ, ವ್ಯವಸ್ಥಾಪನೆಯೂ ದೊರಕುವುದೇ? ವ್ಯವಸ್ಥಾಪನೆ ಕುರಿತು, ಉಚ್ಚ ತರಗತಿಯ ಉದ್ಯೋಗಿಗಳೆಲ್ಲರೂ, ಬ್ರಿಟಿಷರ ಅಧೀನದಲ್ಲಿರುವರು ಅವರ ತಲಬು ಸೌಕರ್ಯ, ಪೆನ್ಶನು ಇತ್ಯಾದಿಗಳು ಮಂತ್ರಿವರ್ಯರ ಅಧಿಕಾರದಿಂದ ಹೊರಗಿದ್ದು, ನವ ರಾಜಶಾಸನದಿಂದ ಕಾಪಾಡಲ್ಪಟ್ಟಿವೆ ಈ ಅಧೀನರು, ಕಾಂಗ್ರೆಸ್ ಮಂತ್ರಿವರ್ಯರಿಗೆ ಸರಿಯಾದ ರೀತಿಯಲ್ಲಿ ವರ್ತಿಸುವರೆ? ಅವರ ಆಜ್ಞೆಗಳನ್ನು ಶಿರಸಾವಹಿಸುವರೆ? ಅವರು ಕಾಂಗ್ರೆಸ್ ಮಂತ್ರಿವರ್ಯರಿಗೆ ಬಗ್ಗದಿದ್ದರೆ ಆಗ ಕಾಂಗ್ರೆಸ್ ಮಂತ್ರಿವರ್ಯರ ಗತಿಯೇನು? ಈ ತರದ ಆತಂಕಗಳ ಎದುರು, ಯಶಸ್ವಿಯಾಗಿ ಪರಿಶ್ರಮಿಸಲು ಕಾಂಗ್ರೆಸ್ಸಿಗೆ ಸಾಧ್ಯವಿದೆಯೇ? ಮೇಲಿನ ಅಧಿಕಾರ ವರ್ಗದಲ್ಲಿ ಬದಲಾವಣೆಗಳನ್ನು ಮಾಡಲು ಅವರಿಂದಾಗದು—ಕಾರಣ ಅವರದೊಂದು ಕಾಪಾಡಲ್ಪಟ್ಟ ವಿಷಯವಾಗಿದ್ದು ಅವರು ಮಂತ್ರಿವರ್ಯರ ಸ್ಪರ್ಶದಿಂದ ದೂರಗಾಗಿರುವರು ಆದುದರಿಂದ ಇದ್ದ ಹಾಗೆ ಅವರಿಂದ ಆದಷ್ಟು ಒಳ್ಳೆದನ್ನು ಪಡೆದು,—ಅವರು ತಮ್ಮ ಕಾರ್ಯಗಳನ್ನು ಅಲ್ಲಗಳೆಯುವ ಅಧ್ಯಂತರಗಳಾಗಿದ್ದರೂ—ಮಂತ್ರಿವರ್ಯರು ಕಾರ್ಯ ನಡೆಯಿಸಬೇಕು. ಅಂದರೆ, ಕಾಂಗ್ರೆಸ್ ಸರಕಾರವು, ಬ್ರಿಟಿಷ ಅಧೀನರಿಂದ, ನಡೆಯಿಸುವ ಸ್ಥಿತಿಯು ಪ್ರಾಂತ್ಯಗಳಲ್ಲಿ ಉಂಟಾಗುವುದು.

ಈಗ ಆರ್ಥಿಕ ವಿಚಾರ—ಇದೊಂದು ಅತಿ ಪ್ರಮುಖವಾದ ಪ್ರಶ್ನೆಯು. ಕಾಂಗ್ರೆಸ್ಸಿನ ಕೆಲವು ಕಾರ್ಯಕ್ರಮಗಳಿಂದ, ಸರಕಾರದ ಉತ್ಪತ್ತಿಯು ಕಡಿಮೆಯಾಗುವುದು ಆದುದರಿಂದ ರಾಷ್ಟ್ರಾಭ್ಯುದಯವಾಗುವ ಸಮಸ್ಯೆಗಳನ್ನು ಕೈಗೊಳ್ಳಲು ಅತಿ ಕಷ್ಟವೆನಿಸುವುದು ಭೂಕಂದಾಯದಲ್ಲಿ ಇಳಿತ, ಮದ್ಯಪಾನ ನಿಷೇಧ ಇವುಗಳಿಂದ ಸರಕಾರದ ಬಜೆಟಿನಲ್ಲಿ—ಹಣವು ಕಡಿಮೆಯಾಗುವುದು ಬೇರೆ ದೇಶಗಳಲ್ಲಾಗುತ್ತಿದ್ದರೆ, ಆರ್ಥಿಕ ಸಚಿವರು ಕೂಡಲೆ, ಖರ್ಚು ಕಡಿಮೆ ಮಾಡುವ ಯೋಚನೆಯನ್ನು ಹೊರಡಿಸುತ್ತಿದ್ದರು ಭಾರತೀಯ ಪ್ರಾಂತ್ಯಗಳಲ್ಲಿ—ಉಚ್ಚ ಅಧಿಕಾರ ವರ್ಗದ ತಲಬನ್ನು ಕಡಿಮೆ ಮಾಡುವ ಅಧಿಕಾರವು ಮಂತ್ರಿಗಳಿಗಿಲ್ಲ ಕೆಳತರಗತಿಯ ನೌಕರರಿಗೆ ಸಾಕಷ್ಟು ತಲಬು ದೊರಕುವುದಿಲ್ಲ ಹೀಗಿರುವಾಗ, ಹಣವನ್ನು ಯಾವ ರೀತಿಯಲ್ಲಿ ಗಳಿಸಿಕೊಳ್ಳಬಹುದು. ಮಿತವ್ಯಯವನ್ನು ಹೇಗೆ ಸಾಧಿಸಬಹುದು ಸೈನ್ಯ, ರೈಲ್ವೆ ಅಂಚೆ ಮತ್ತು ತಂತಿ, ಸುಂಕ ಇವೆಲ್ಲಾ ಫೆಡರಲ್ ಸಂಬಂಧಪಟ್ಟ ವಿಚಾರಗಳಾದುದರಿಂದ, ಅವುಗಳಲ್ಲಿನ ಏರಿಳಿತದಿಂದ ಪ್ರಾಂತ್ಯಗಳಲ್ಲಿ ಯಾವತ್ತೂ ತರದ ಪರಿಣಾಮಗಳು ಉಂಟಾಗುವಹಾಗಿಲ್ಲ. ಹೀಗೆಂದು ಹೇಳಿ, ನೋಟುಗಳನ್ನು ಛಾಪಿಸುವ ಅಧಿಕಾರವು ಪ್ರಾಂತ್ಯಗಳಿಗಿಲ್ಲ ಕಾರಣ ಕರೆನ್ಸಿಯು ಕೂಡ ಫೆಡರಲ್ ವಿಚಾರವಾಗಿರುತ್ತದೆ. ಈ ಸಂದರ್ಭಗಳಲ್ಲಿ ರಾಷ್ಟ್ರೀಯ ಅಭ್ಯುದಯ ಕಾರ್ಯಕ್ರಮಗಳನ್ನು ನಡೆಯಿಸಲು, ಪ್ರಾಂತ್ಯಗಳು ಸಾಲಗಳನ್ನು ಹೊರಡಿಸಬೇಕು. ಈ ಸಾಲಗಳಿಗೆ ಗವರ್ನರರ ಸಮ್ಮತವು ದೊರಕುವುದೆ? ಲಿನ್‌ಲಿತ್‌ಗೊ ಪ್ರಭುಗಳ ಸರಕಾರದ ಶೆಂಕ್ಯನು ಇದಕ್ಕೆ ದೊರಕುವುದೆ? ಇವುಗಳು ಯಾವತ್ತು ಅಸಾಧ್ಯವೆನಿಸಿದರೆ—ಆಗ ಮಂತ್ರಿವರ್ಯರು ನಿರಾಶರಾಗಬೇಕಾಗುವುದು.

ಸ್ಥಿತಿಯು ಹೀಗಿರುವಾಗ, ನವರಾಜಶಾಸನದಿಂದ ಕಾಂಗ್ರೆಸ್ ಮಂತ್ರಿಗಳು ಯಾವ ತರದ ಒಳ್ಳೆತನ್ನು ಸಾಧಿಸಬಹುದು ಮೊದಲನೇದಾಗಿ ಅವರು ರಾಜಕೀಯ ಕೈದಿಗಳನ್ನು ವಿಮೋಚನೆಗೊಳಿಸಬಹುದು, ದಬ್ಬಾಳಿಕೆಯ ಕ್ರಮಗಳನ್ನು ರದ್ದುಮಾಡಬಹುದು, ಓರ್ಡಿನೆನ್ಸುಗಳನ್ನು ನಿರ್ಮೂಲನಗೊಳಿಸಬಹುದು, ಜನರಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಒದಗಿಸಬಹುದು ಎರಡನೇದಾಗಿ ಅವರು ಪ್ರಾಂತ್ಯಗಳ ಆಡಳಿತಕ್ಕೆ ಹೊಸ ತರದ ಸ್ಫೂರ್ತಿಯನ್ನು ಕೊಡಬಹುದು ಸಾರ್ವಜನಿಕ ಸೇವೆಯ ಕುರಿತು, ಸರಕಾರಿ ನೌಕರರಲ್ಲಿ, ಮುಖ್ಯವಾಗಿ ಪೋಲೀಸರಲ್ಲಿ ನವಜಾಗೃತಿಯನ್ನುಂಟುಮಾಡುವುದು ಈ ರೀತಿಯಲ್ಲಿ ಈಗಿನ ಸರಕಾರಿ ಉದ್ಯೋಗಸ್ಥರಿಂದ ಹೆಚ್ಚಿನ ಕೆಲಸವನ್ನು ಪಡೆದು, ಸರಕಾರದ ಆಡಳಿತದ ರೂಪವನ್ನು ವೃದ್ಧಿಗೊಳಿಸಬಹುದು ಮೂರನೇದಾಗಿ ಅವರು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳಿಗೆ, ಸರಕಾರಿ ಸಹಕಾರ, ರೂಪದಲ್ಲಿ ಒಳ್ಳೆ ಆಧಾರವನ್ನು ಕೊಡಬಹುದು ನಾಲ್ಕನೇದಾಗಿ, ಖಾದಿ ಇತ್ಯಾದಿ ಸ್ಥಳೀಯ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬಹುದು ಸರಕಾರ ಬೇಕಾದ ವಸ್ತು ಒದವೆಗಳನ್ನು ಸ್ವದೇಶಿಯಲ್ಲೆ ಪಡೆದು ಐದನೆಯದಾಗಿ ಅವರು ಅನೇಕ ವಿಚಾರಗಳಲ್ಲಿ ಲಾಭಕರ ಶಾಸನಕ್ರಮಗಳನ್ನು ಹೊರಡಿಸಬಹುದು—(ಸಮಾಜದಭ್ಯುದಯ, ಸಾರ್ವಜನಿಕ ಆರೋಗ್ಯ ಇತ್ಯಾದಿ) ವಿಶೇಷವಾಗಿ ಆ ತರದ ಕ್ರಮಗಳಿಂದ ಹೆಚ್ಚಿನ ಖರ್ಚು ಉಂಟಾಗದಂತೆ,ಅಂತೇದಾಗಿ ಅತಿ ಜಾಗ್ರತೆಯಲ್ಲಿ, ಪ್ರೋತ್ಸಾಹದ ಹಂಚುವಿಕೆಯಿಂದ ಅವರು ಪ್ರಾಂತ್ಯದ ರಾಷ್ಟ್ರೀಯ ಭಾವನೆಯು ಮೇಲಕ್ಕೆ ಬರುವಂತೆ ಮಾಡಿ, ದೇಶಕ್ಕೆ ವಿರೋಧವೆನಿಸುವ ಪ್ರಭಾವಗಳನ್ನು ಕಡಿಮೆ ಮಾಡಬಹುದು ಏಳನೇದಾಗಿ—ಪ್ರಾಂತ್ಯದ ಸಂಪತ್ತಿಕ ಸರ್ವೆಯನ್ನು ಮಾಡಿ, ಜನರ ಐಶ್ವರ್ಯವನ್ನು ಅರಿತುಕೊಂಡು,ಐಶ್ವರ್ಯದ ಮೇಲೆ ಸಂದಾಯವನ್ನು ಹೊರಿಸಬಹುದಾದ ಉಪಾಯವನ್ನು ಕಲ್ಪಿಸಬಹುದು ಪ್ರಾಂತ್ಯದಲ್ಲಿ ನಿರುದ್ಯೋಗಸಮಸ್ಯೆಯು ಹೇಗಿರುವುದೆಂದು ಕಂಡುಹಿಡಿಯುವುದು, ಎಂಟನೇದಾಗಿ ಅವರು, ಸರಕಾರದ ಕೆಲವು ಇಲಾಖೆಗಳಲ್ಲಿ ರಿಟ್ರೆಂಚ್‌ಮೆಂಟನ್ನು ತರಬಹುದು. ಒಂಬತ್ತನೇದಾಗಿ, ಅವರು ಈ ಅಧಿಕಾರದಿಂದ ಕೇಂದ್ರ ಫೆಡರಲ್ ಸರಕಾರ ಸ್ಥಾಪನೆಯಾಗದಂತೆ ಸಾಧಿಸಬಹುದು. ಕೊನೆಯದು ಮತ್ತು ಅತಿ ಪ್ರಾಮುಖ್ಯವಾದುದು, ಅವರ ದೃಷ್ಟಾಂತದಿಂದ, ಕಾಂಗ್ರೆಸ್ ಪ್ರಭುತ್ವವಿಲ್ಲದ ಪ್ರಾಂತ್ಯಗಳಲ್ಲಿ ಒಳ್ಳೆ ಪ್ರೇರಣೆ ಉಂಟಾಗುವಂತೆ ಮಾಡುವುದು

ಆದರೆ ಇವುಗಳೆಲ್ಲಾ ಒಟ್ಟು ಸುಧಾರಣೆಗಳು ಜನರಲ್ಲಿ ತಾತ್ಕಾಲಿಕ ಸಮಾಧಾನ ಮಾತ್ರ ಉಂಟಾಗುವುದು. ಆದರೆ, ಬಡತನ, ನಿರುದ್ಯೋಗ, ರೋಗ, ನಿರಕ್ಷರತೆ ಇತ್ಯಾದಿ ಸಮಸ್ಯೆಗಳೆಲ್ಲಾ ಇನ್ನಷ್ಟು ಭಯಂಕರ ರೂಪವನ್ನು ತಾಳುವುವು ಅವುಗಳ ಸುಧಾರಣೆಯು, ಕೂಡಲೆ ಆಗಬೇಕೆನಿಸುವುದು ನಿರೋಧವಯು. ಕೇಂದ್ರ ಸರಕಾರ ಮತ್ತು ಪ್ರಾಂತ್ಯದ ನಿರ್ಬಂಧವೂಯು ಆರ್ಥಿಕ ವ್ಯವಸ್ಥೆ ಇವುಗಳಿಂದ ಮಂತ್ರಿವರ್ಯರು ಈ ಕೋರಿಕೆಗಳನ್ನು ನಡೆಯಿಸಬಲ್ಲರೆ? ವ್ಯವಸಾಯ ಅಭ್ಯುದಯ, ರಾಷ್ಟ್ರೀಯ ಕೈಗಾರಿಕೆಗಳ ಅಭ್ಯುದಯ, ಸುಲಭ ತರದ ಸಾಲ ಮತ್ತು ಬೇಂಕಿಂಗ್ ಸರಬರಾಯಿ, ಇವುಗಳಿಂದ ನಿರುದ್ಯೋಗ ಮತ್ತು ಬಡತನವನ್ನು ಬಹುಮಟ್ಟಿಗೆ ನಿವಾರಿಸಬಹುದು. ಇದಕ್ಕೆಲ್ಲಾ ಹಣವು ಬೇಕಾಗಿದೆ. ರೋಗನಿವಾರಣೆಗಾಗಿ ರಕ್ಷಣೋಪಾಯ

(೧೫ನೇ ಪುಟವನ್ನು ನೋಡುವುದು.)



Distributors for South Kanara:—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಸಿಂಹದ ಮೇಲೆ ದಂತಚಿಕಿತ್ಸೆ.

ಲಂಡನಿನ ಮೃಗಾಲಯದಲ್ಲಿ ಸಿಂಹದ ಮೇ[illegible] ಅಲ್ಲಿನ ಡಾಕ್ಟರರೊಬ್ಬರು ದಂತಚಿಕಿತ್ಸೆ ನಡೆಸುತ್ತಿರುವರು.

"An ideal young progressive Life Office of India to Insure with or represent"

The Commonwealth Assurance Co., LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 87½. ON WHOLE LIFE Rs. 45.

Next VAUATION YEAR 1937-38.

Join the Agency force on most Liberal Terms, Apply to:–

Messrs. GAWANKAR & SONS,

Chief Agents for Mysore state, Coorg, Ceded Districts & S. Kanara

AHMED BUILDINGS, CHICKPET, BANGALORE CITY.

Messrs. Farooqui Brothers, *Special Agents,*

Fort House, Karkal, (South Kanara.)

Local Representatives:—THE MODERN TRADING CO., Mangalore.

THE

BANK OF MANGALORE LTD.,

MANGALORE.

ESTD. 1931

Branches:-

Panemangalore, Mudabidri & Padubidri.

Chairman:—**Philip J. Chandran, Esq.,**

Retd. Dt. Registrar of Joint Stock Companies.

On & from 1st of January 1937,

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

Interest Payable Quarterly.

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors.*

Modern Printing! at Moderate Rates!

CONSULT

Sharada Press, *Car-Street,* Mangalore

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವದಿಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ.

ಗರ್ಭಪಾಲ— ಗರ್ಭಶೂಲೆ, ಗರ್ಭಸ್ರಾವಕ್ಕೆ.

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ.

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ಸ್ಮೃದ್ಧಿಕಾಸವ— ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ— ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕಟಪಾಡಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಜಗತ್ತಿನ ಶಾಂತಿರಕ್ಷಣೆಯ ಭಾರವು

ಸಂಪೂರ್ಣವಾಗಿ ಬ್ರಿಟನಿನ ಮೇಲಿರುವುದು.

ಕೇವಲ ಆದರ್ಶಗಳಿಗಾಗಿ ಯುದ್ಧವಾಗದು

ಜನಾಂಗಗಳ ಸ್ವಾರ್ಥವು,—ಇನ್ನೊಂದು ಮಹಾಯುದ್ಧದ ಕಾರಣವು.

ಸೌಮ್ಯವಾದಿ ರಷ್ಯಾವು ಅತ್ಯಂತ ಸಂತುಷ್ಟವಾದ ಜನಾಂಗವು

ಕೊಮ್ಯುನಿಷ್ಟ-ಪೆಸಿಯುಸ್ಟ ವಿರೋಧವು ಇನ್ನೊಂದು ಮಹಾಯುದ್ಧಕ್ಕೆ ಕಾರಣವಾಗುವುದೆಂದೂ, ಅನೇಕರ ಭಾವನೆ. ಜನಾಂಗ ಮಂಡಳವು ಶಾಂತಿರಕ್ಷಣೆಗಾಗಿ, ಅನೇಕ ಬಾರಿ ಉತ್ಸಾಹವನ್ನು ತೋರಿಸಿರುವುದು ಆದರೆ ಅದರ ಯಾವತ್ತು ಯತ್ನಗಳು ಫಲಕಾರಿಯಾಗಲಿಲ್ಲ ಇಟೆಲಿ-ಹಬಸಿ, ಸಂಗ್ರಾಮದ ಸಮಯ ಅದು ಶಾಂತಿಸ್ಥಾಪನೆಗಾಗಿ ಯತ್ನಪಟ್ಟಿತು ತನ್ನ ಅಧಿಕಾರವನ್ನು ಜನಾಂಗಗಳ ಮೇಲೆ ಉಪಯೋಗಿಸಲು ಸಾಹಸಪಟ್ಟಿತು ಆದರೆ ಅವರನ್ನು ಹತೋಟಿಗೆ ತರಲು ಅದಕ್ಕೆ ಅಸಾಧ್ಯವೆನಿಸಿತು ಸ್ಪೆಯಿನಿನಲ್ಲಿ ಯುದ್ಧವು ಉಂಟಾಗಲು, ಅದು ಶಾಂತಿಸ್ಥಾಪನೆ ಬಗ್ಗೆ ಇನ್ನೊಂದು ಪ್ರಯತ್ನವನ್ನು ಮಾಡಿತು ಲಂಡನಿನ ತಾಟಸ್ಥ್ಯಭಾವ ಸಮಿತಿಯನ್ನು ರಚಿಸಿ ಆದರೆ ಇಷ್ಟರ ತನಕ ನಡೆದ ವಿದ್ಯಮಾನಗಳನ್ನು ಪರಿಶೀಲಿಸಿದರೆ,—ಲಂಡನಿನಿಂದ ಶಾಂತಿಸ್ಥಾಪನೆಯಾಗುವರೆ ಸಂದೇಹಗಳು ಉಂಟಾಗಿವೆ ಕೊಮ್ಯುನಿಷ್ಟ ಪೆಸಿಯಿಷ್ಟ ವಿರೋಧವನ್ನು ತಣಿಯುವ ಮಧ್ಯವರ್ತಿ ಯೋಗ್ಯತೆಯು ಲಂಡನಿನಲ್ಲಿರುವುದೆಂದು ಕೆಲವರ ಭಾವನೆ ಅದರಿಂದ ಒಂದೆ ಶಾಂತಿರಕ್ಷಣೆಯಾಗುವುದು ತಪ್ಪಿದಲ್ಲಿ ಮಹಾಯುದ್ಧದ ದಿನವು ಮುಂದರಿಸಲಾಗುವುದೆಂದು ಕೆಲವರ ನಂಬುಗೆ ಜಗತ್ತನ್ನು ಸರ್ವಾಧಿಕಾರಿಗಳ ಹಾವಳಿಯಿಂದ ರಕ್ಷಿಸುವರೆ, ಪ್ರಜಾಪ್ರಭುತ್ವದ ಜನಾಂಗಗಳೊಡನೆ ಆಗಿಂದಾಗ್ಯೆ ಕೋರಲಾಗಿತ್ತು ಬ್ರಿಟಿಷ ಪ್ರಜಾಪ್ರಭುತ್ವದಿಂದ, ಶಾಂತಿಸ್ಥಾಪನೆಯಾಗುವುದೆ, ಎಂಬ ವಿಷಯವು, ಈ ಕೆಳಗಿನ ಸಂಘಟನೆಗಳಿಂದ, ವಿಶದವಾಗಿ ವಿವರಿಸಲಾಗುವುದು

? ? ?



ಬ್ರಿಟನಿನ ಬಹೀರ್ ವ್ಯವಹಾರ ಮಂತ್ರಿಯವರಾದ ಮಿ ಅಂತೋನಿ ಏಡನ್‌ರು

ಲಂಡನಿನ ತಾಟಸ್ಥ್ಯಭಾವ ಸಮಿತಿ

ರಷ್ಯಾ ಮತ್ತು ಮೆಕ್ಸಿಕೊ ದೇಶಗಳಿಂದ ಸ್ಪೈನಿನ ಸೌಮ್ಯವಾದ ಸರಕಾರಕ್ಕೆ ಸಹಾಯವು ಒದಗಿದುದು ನಿಜ ಅಲ್ಲಿಂದ ಅವರಿಗೆ, ಸೈನ್ಯ, ಶಸ್ತ್ರ, ಸಿಡಿಮದ್ದು ಇತ್ಯಾದಿಗಳು ದೊರಕಿವೆ. ಆದರೆ ಅದು ದಂಗೆಗಾರರಿಗೆ ಬಹೀರ್ ಜನಾಂಗಗಳಿಂದ ಉಂಟಾದ ಸಹಾಯದಷ್ಟಲ್ಲ ದಂಗೆಖೋರರಿಗೆ ಅನ್ಯ ಜನಾಂಗಗಳಿಂದ ಅತಿಶಯವಾದ ಸಹಾಯವಾಗಿರುತ್ತದೆ ಸ್ಪೆಯಿನಿನ ಯುದ್ಧರಂಗದಲ್ಲಿ, ೧೨೦೦೦೦ ಇಟೆಲಿಯಾನ ಮತ್ತು ಜರ್ಮನ್ ರಾಷ್ಟ್ರೀಯ ಸೈನಿಕರಿರುವರೆಂದು, ಎಣಿಸಲಾಗಿದೆ ಸೌಮ್ಯವಾದಿ ಸರಕಾರದ ಪರವಾಗಿ ಅನ್ಯ ರಾಷ್ಟ್ರೀಯ ಸೈನಿಕರ ಸಂಖ್ಯೆಯು ಬರೆ ೨೦,೦೦೦ ಆಗಿರುತ್ತದೆ ಲಂಡನ್ ತಟಸ್ಥ್ಯಭಾವ ಸಮಿತಿಯ ಉದ್ದೇಶಧ್ಯೇಯಗಳು ಏನೆ ಇರಲಿ,—ಅದರಿಂದ ದಂಗೆಖೋರರಿಗೆ ಹೆಚ್ಚಿನ ಉಪಕಾರವಾಗಿರುತ್ತದೆ

? ? ?

ಯುದ್ಧ ದಿನವು ಮುಂದರಿಯುವುದು

ಲಂಡನು ತಾತ್ಕಾಲಿಕ ಶಾಂತಿಗೆ ಮಾತ್ರ ಪ್ರೇರೇಪಿಸುತ್ತಿರುವುದೆಂದು,ಅವರ ಭಹೀರ್ ವ್ಯವಹಾರ ವರ್ತನೆಯಿಂದ, ಖಚಿತವಾಗುತ್ತದೆ. ಶಾಂತಿಯ ಕುರಿತು, ಜನಾಂಗ ಮಂಡಳದ ಕುರಿತು, ಲಂಡನು ಆತುರ ಪ್ರಕಟಿಸುವುದಾದರೂ, ಅವುಗಳಲ್ಲಿ ಅವರಿಗೆ ನಿಜವಾಗಿಯೂ

ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರ್

ವಿಶ್ವಾಸವಿರುವುದಿಲ್ಲ ಒಂದು ತರದ ವಿಚಿತ್ರ ಸ್ಥಿತಿಯಿಂದ ಅವರು ಈಗಿನ ವರ್ತನೆಯನ್ನು ಅನುಸರಿಸಬೇಕಾಯಿತು ಪೆಸಿಯಿಷ್ಟ ಜನಾಂಗಗಳ ಪ್ರಭುತ್ವದ ಪ್ರಗತಿ ಅವರಿಗೆ ಸರಿಯೆನ್ನುವದಿಲ್ಲ ಅದರಿಂದ ಅವರ ವ್ಯಾಪಾರಕ್ಕೆ ಸಾಮ್ರಾಜ್ಯದ ಜೀವನರೇಖೆಗಳಿಗೆ ಮಹಾಘಾತ ಆಗುವ ಸಂಭವಗಳಿವೆ ಸ್ಪೆಯಿನ ಯುದ್ಧದಿಂದ ಮೆಡಿಟರೆನಿಯನ್ ಸಮುದ್ರದಲ್ಲಿ ಬೆಲಿರಿಕ್ ದ್ವೀಪಗಳಲ್ಲಿ ಇಟೆಲಿ-ಜರ್ಮನ ಸೇನಾಪ್ರಭುಗಳ ಸ್ಥಾಪನೆಯಾಗಿನೆ ಯುದ್ಧ ಉಂಟಾದರೆ ಸಾಮ್ರಾಜ್ಯಕ್ಕೆ ತೆರಳಲು,ಅವರು ಆಫ್ರಿಕಾವನ್ನು ಸುತ್ತ ಬರಬೇಕಾಗುವುದು ಇದೇ ರೀತಿಯ ಲ್ಲಿ ಫ್ರೆಂಚರಿಗೂ ತೊಂದರೆಗಳುಂಟಾಗುವುವು ಹೀಗಿಂದ, ರಷ್ಯಾ ಇತ್ಯಾದಿ ದೇಶಗಳಲ್ಲಿ ಸೌಮ್ಯವಾದವು ಪ್ರಗತಿ ಹೊಂದುವುದರಲ್ಲಿ ಬ್ರಿಟನಿಗೆ ಒಪ್ಪಿಗೆಯಿಲ್ಲ ಅವರಿತ್ತರ ನಡೆಸಿದ ಒಪ್ಪಂದಗಳ ಬರೆ ತಾತ್ಕಾಲಿಕವಾದವುಗಳು ಅವರಿಗೂ ಕೆಮಗೂ ಸರಿಬೀಳದೆಂದು ಬ್ರಿಟನು ತಿಳಿದಿದೆ ಈಗ ಪ್ರಕೃತಕ್ಕೆ ಪೆಸಿಯಿಷ್ಟ ಪ್ರಭುತ್ವಗಳೊಡನೆ ಕಾದಾಟ, ಮುಂದಕ್ಕೆ ಬರಲಿರುವ ಹುದಾದ, ಸೌಮ್ಯವಾದಿ ರಾಷ್ಟ್ರಗಳೊಡನೆ ಹೋರಾಟ, ಇವುಗಳಿಂದಾಗಿ, ಬ್ರಿಟನಿನ ಭಹೀರ್ ವ್ಯವಹಾರ ವರ್ತನೆಯು ವಿಚಿತ್ರ ರೂಪವನ್ನು ಹೊಂದಿರುತ್ತದೆ ಈಗ ತತ್ಕಾಲಕ್ಕೆ, ಅದಕ್ಕೆ ಸೌಮ್ಯವಾದಿಗಳೊಡನೆ ಯುದ್ಧಮಾಡುವ ಇಚ್ಛೆಯಿರುವುದಿಲ್ಲ ಕಾರಣ ಅದರಿಂದ ಪೆಸಿಯಿಷ್ಟರು ಇನ್ನೂ ಬಲವಂತರಾಗುವರು, ಅವರ ಸೌಮ್ಯವಾದಿ ವೈರಿಗಳ ಕುಂದುವರೆಯಿಂದ. ಅದರಿಂದ ಪೆಸಿಯಿಷ್ಟರು ಬೆಳೆಯಬಾರದು, ಸೌಮ್ಯವಾದಿ ಪ್ರಭುತ್ವಗಳು ಮೇಲಕ್ಕೆ ಬರಬಾರದು, ಎಂಬುದೆ ಬ್ರಿಟನಿನ ಈಗಿನ ಭಹೀರ್ ವ್ಯವಹಾರ ವರ್ತನೆಯ ಮೂಲ ಸೂತ್ರವಾಗಿರುತ್ತದೆ ಆದುದರಿಂದಲೆ ಅವರು ಪ್ರಕೃತಕ್ಕೆ ಪೆಸಿಯಿಷ್ಟರನ್ನು ಒಲಿಸಿಕೊಳ್ಳಲು ಪ್ರಯತ್ನಪಡುವುದು.

? ? ?

ಆದರ್ಶಗಳಿಗಾಗಿ ಯುದ್ಧವಲ್ಲ

ತಮ್ಮ ಆದರ್ಶಗಳಿಗಾಗಿ ಪ್ರಭುತ್ವಗಳು ಯುದ್ಧರಂಗಕ್ಕೆ ಇಳಿಯವು. ತಮ್ಮ ಹಿತಗಳಿಗೆ ಹಾನಿ ಕಂಡರೆ ಮಾತ್ರ ಅವು ಯುದ್ಧರಂಗಕ್ಕೆ ಇಳಿಯುವವು ಕಬ್ಬಿಣ ಮತ್ತು ತಾಮ್ರಕ್ಕಾಗಿ ತಾನು ಸ್ಪೆಯಿನಿನ ಯುದ್ಧರಂಗಕ್ಕೆ ಇಳಿದಿರುವೆನೆಂದು ಹಿಟ್ಲರನು ಈ ಮೊದಲೆ ಸಾರಿರುವನು,—ಹಾಗೆನೆ, ತನ್ನ ಸ್ಪೆಯಿನಿನ ಕಡೆಯ ಗಡಿಯಲ್ಲಿ ಇನ್ನೊಂದು ವೈರಿಯು ಸ್ಥಾಪನೆಯಾಗದಂತೆ, ಸೌಮ್ಯವಾದಿ ಫ್ರಾನ್ಸ ಸ್ಪೆಯಿನಿನ ಯುದ್ಧರಂಗಕ್ಕೆ ಇಳಿದುದು ದಂಗೆಗಾರರ ಪ್ರದೇಶಗಳಲ್ಲೂ ಸರಕಾರದ ಪ್ರದೇಶಗಳಲ್ಲೂ ಬ್ರಿಟಿಷರಿಗೆ ಹಿತಗಳಿರ ಪ್ರದೇಶದ ಈಗಾಗಲೆ ಕಂಡು ಹಿಡಿಯಲಾಗಿದೆ ಅದರಿಂದ ಸ್ಪೆಯಿನಿನ ಯುದ್ಧವು ಆದರ್ಶಗಳಿಗಾಗಿಲ್ಲ

ಪ್ರಧಾನ ಮಂತ್ರಿ ಚೇಂಬರ್‌ಲೀನ್

ಕೊಮ್ಯುನಿಷ್ಟರನ್ನು ಮತ್ತು ಪೆಸಿಯಿಷ್ಟರನ್ನು ತಣಿದು ಶಾಂತಿಸ್ಥಾಪನೆಯ ಭಾರವನ್ನು ಪ್ರಜಾಪ್ರಭುತ್ವ ರಾಷ್ಟ್ರವಾದ ಬ್ರಿಟನ್ ಕಳೆದು ಹೋದಂತೆ ಕಾಣುತ್ತದೆ ಬ್ರಿಟನ ತನ್ನ ಬಹೀರ್ ವಿಚಾರಗಳಲ್ಲಿ ಪ್ರಜಾಪ್ರಭುತ್ವ ಆದರ್ಶಗಳನ್ನು ಅನುಸರಿಸುತ್ತಿದೆಯಾದರೂ ಜಗತ್ತಿನ ರಾಜಕೀಯದಲ್ಲಿ ಪ್ರಜಾಪ್ರಭುತ್ವದ ಭರವಸೆಯು ಅವರಿಗೆ ತಪ್ಪಿದುದರಿಂದಲೆ ಬ್ರಿಟನಿನ ಪ್ರಧಾನಮಂತ್ರಿ ಚೇಂಬರ್‌ಲೀನರ ಇಟಲಿಯ ಪೆಸಿಯಿಷ್ಟ ಸರ್ವಾಧಿಕಾರಿ ಮುಸಲೋನಿಗೆ ಮೈತ್ರಿಯ ಪತ್ರವನ್ನು ಬರೆದುದು

? ? ?

ಮುಸಲೋನಿ

ಬ್ರಿಟನು ಅತ್ಯಂತ ಪ್ರಬಲವಾದ ಜನಾಂಗವು.

ಆದುದರಿಂದ ಅದರ ಭೀತಿಯು ಪ್ರತಿಯೊಂದು ಜನಾಂಗಕ್ಕಿರುವುದು. ಬ್ರಿಟನಿನ ಅಪಾರ ಸಂಪತ್ತು, ವಿಸ್ತಾರವಾದ, ಸಾಮ್ರಾಜ್ಯ, ಮಹತ್ತಾದ ಶಸ್ತ್ರಶೇಖರ, ಸಂಗ್ರಾಮನುಕೂಲ ಇವುಗಳಿಂದಾಗಿ ಐರೋಪ್ಯದ ಇತರ ಪ್ರಭುತ್ವಗಳು ಹಿಂಜರಿಯುವಂತಾಗಿದೆ ಶಾಂತಿಸ್ಥಾಪನೆ ಕುರಿತು, ಲಂಡನಿನಲ್ಲಿ ನಡೆಯುವ ಯತ್ನಗಳಿಗೆ ಅವರು ಉತ್ಸಾಹ ಕೊಡುತ್ತಿರುವುದು ಇದೆ ಕಾರಣದಿಂದ ಶಾಂತಿರಕ್ಷಣೆಗಾಗಿ ಅಂತರಾಷ್ಟ್ರೀಯ ಚಳವಳಿವನ್ನು ಹೂಡಿ ಬ್ರಿಟನಿನ ಪ್ರಜಾಪ್ರಭುತ್ವವು ಜಗತ್ತಿನ ವಿಶ್ವಾಸವನ್ನು ಸ್ವಲ್ಪ ಮಟ್ಟಿಗೆ ಪಡೆಯುವಂತಾಗಿದೆ ಬ್ರಿಟನಿನ ಮಹತ್ತರದ ಪ್ರಾಬಲ್ಯದಿಂದಾಗಿ ಅದರ ಅಸಮಾಧಾನಹೊಂದಲು ಯಾವ ಜನಾಂಗವೂ ಸಿದ್ಧವಿಲ್ಲ ಅದನ್ನು ತಟಸ್ಥಗೊಳಿಸಿ ತಮ್ಮ ತಮ್ಮ ಧ್ಯೇಯ ಸಾಧಿಸಲು ಇತರ ಪ್ರಭುತ್ವಗಳು ಸಾಧಿಸುತ್ತಿವೆ ಆದುದರಿಂದಲೆ ಸ್ಪೆಯಿನಿನ ಪ್ರಕರಣದ ಕುರಿತು ಬ್ರಿಟನಿನ ಮಾತುಗಳಿಗೆ ಅಷ್ಟು ಮನ್ನಣೆ ದೊರಕುವುದು ಶಾಂತಿರಕ್ಷಣೆಯಾಗುವುದಾದರೆ, ಬ್ರಿಟನಿನ ಮಹಾ ಪ್ರಬಲತೆಯಿಂದ, ಅದರ ಪ್ರಜಾಪ್ರಭುತ್ವದಿಂದಲ್ಲವೆಂದು ಇದರಿಂದ ವಿಶದವಾಗುತ್ತದೆ

? ? ?

ರಷ್ಯಾದಲ್ಲಿ ಸಂಗ್ರಾಮಿಕ ಸರ್ವಾಧಿಕಾರವು ಇಲ್ಲ

ಸೋವಿಯಟ್ ರಷ್ಯದ ನಿಜವಾದ ಸ್ಥಿತಿಯನ್ನು ಅರಿತು ಕೊಂಡು ಬಂದ ಓರ್ವ ಆಂಗ್ಲೇಯ ಪತ್ರಿಕಾ ಪ್ರತಿನಿಧಿಯ ವರದಿಯು ಇಲ್ಲಿ ಕೊಡಲಾಗಿದೆ ಇದರಿಂದ ರಷ್ಯಾದಲ್ಲಿ ಅಸಮಾಧಾನ ಉಂಟಾಗಿದೆ, ಸ್ಟಲೀನ ಮೇಲೆ ಮಹಾಜನಗಳ ವಿರೋಧವು ಉಂಟಾಗಿದೆ, ಇವೇ ಮೊದಲಾದುವುಗಳ ಕುರಿತ, ರಷ್ಯಾ ದೇಶ ಕೆಂಪ್ ಸೈನ್ಯಾಧಿಕಾರಿಗಳ ರಾಜದ್ರೋಹ ವಿಚಾರಣೆಯ ಸಮಯ ಹರಡಿದ ಅನೇಕ ಕಥೆಗಳ ನಿಜಾಂಶವು ತಿಳಿದು ಬರುವುದು ರಷ್ಯದಲ್ಲಿ ಸಂಗ್ರಾಮಿಕ ಸರ್ವಾಧಿಕಾರವು ಸ್ಥಾಪಿತವಾದುದು ನಿಜವೊ ಅಲ್ಲ, ನಿಜ ಪ್ರಜಾಪ್ರಭುತ್ವ ಶಾಸ

ರಷ್ಯಾದ ಸರ್ವಾಧಿಕಾರಿ ಸ್ಟೇಲೀನ್

ನವು ಈಗ ಹುಟ್ಟಿಗೆಯಲಾಗಿದೆ, ಎಂಬ ವಾರ್ತೆಯು ನಿಜವೊ, ರಷ್ಯಾದಲ್ಲಿ ಧನಾಢ್ಯಮತವು ಮತ್ತೊಮ್ಮೆ ಕಾಣಿಸಿಕೊಂಡುದು ಎಂಬುದು ನಿಜವೊ, ರಷ್ಯಾದಲ್ಲಿ ಇತ್ತೀಚೆಗೆ ಯಾವ ತರದ ಪ್ರಗತಿ ಉಂಟಾಗಿದೆ, ಯುದ್ಧ ಮತ್ತು ಶಾಂತಿಯ ಕುರಿತು, ರಷ್ಯಾದೇಶ ಪ್ರಜಾವರ್ಗದ ಅಭಿಪ್ರಾಯವು ಏನಿರುವುದು, ಇವೆ ಮೊದಲಾದವುಗಳ ಕುರಿತು, ಸಂದೇಹಗಳು ಈ ವರದಿಯಿಂದ ಮಾಯವಾಗುವವು.

ಈ ವಾರ್ತೆಗಳನ್ನು ಈ ಆಂಗ್ಲೇಯ ವರದಿಗಾರನು ರಷ್ಯಾದಸೋವಿಯಟ್ ಅಧಿಕಾರಿಗಳಿಂದಲೆ ಕೂಡಿಸಿರುವನು ಅಧಿಕಾರಿಗಳ ಬೇಟಿಯಿಂದ ಆತನಿಗೆ ಮೇಲಿನ ವಾರ್ತೆಗಳು ಸುಳ್ಳು ಎಂದು ತಿಳಿದುಬಂತು.

ರಷ್ಯಾದಲ್ಲಿ ಸಂಗ್ರಾಮಿಕ ಸರ್ವಾಧಿಕಾರವು ಸ್ಥಾಪನೆಯಾದುದು ಸುಳ್ಳು. ಅಲ್ಲಿ ಮಾರ್ಷಲ್‌ರೊ ಜ್ಯಾರಿಯಲ್ಲಿರುವುದಿಲ್ಲ ಆದರೆಸೈನ್ಯದ ಮೇಲಿನ ಸೋವಿಯಟ್ ಅಧಿಕಾರ ಹೆಚ್ಚಿಸಲಾಗಿ

(೩ನೇ ಪುಟವನ್ನು ನೋಡುವುದು.)

...ಸ್ಥಾಪನೆಯ ಸಂಪೂರ್ಣ ಭಾರವು ಇಂಗ್ಲೆಂಡಿನ ಮೇಲಿರುವುದೇ?

(ಹಿಂದಿನ ಸಂಚಿಕೆಯಿಂದ ಮುಂದುವರಿಸಿದುದು)

ಧನಾಢ್ಯಮತವು ರಷ್ಯಾದಲ್ಲಿ ಮತ್ತೊಮ್ಮೆ ಕಾಣಿಸಿಕೊಂಡದೆ ಎಂಬುದರಲ್ಲಿ ಕಿಲಕಾಂಶವು ಸತ್ಯವಿಲ್ಲ. ಸೌಮ್ಯವಾದವನ್ನು ತೊರೆಯುವ ಯಾವತ್ತು ಯತ್ನಗಳು ನಡೆಯುಲಿಲ್ಲ. ಕೈಗಾರಿಕೆಗಳು ಇನ್ನಷ್ಟು ಉತ್ತೇಜನದಿಂದ ನಡೆಯುವಂತೆ, ಬೋನಸ್ ಇತ್ಯಾದಿ ಕ್ರಮಗಳು ಆಚರಿಸಲ್ಪಟ್ಟಿವೆ. ಮಹಾ ಯುದ್ಧವು ಬೇಗನೆ ಇರುವುದೆಂದು ಅಲ್ಲಿನವರ ನಿರೀಕ್ಷೆ ಪೆಸಿಯಿಶಮ್ಮನ್ನು ವಿರೋಧಿಸಲು, ಯುದ್ಧರಂಗಕ್ಕೆ ಇಳಿಯಲು ಅವರು ಸದಾ ಸಿದ್ಧರಿರುವರು ಜಗತ್ತಿನ ಶಾಂತಿಯ ಕುರಿತು ರಷ್ಯಾವು ಆತುರಪಡುತ್ತದೆ ಸೋವಿಯಟ್ ರಷ್ಯಾದ ಪ್ರಜಾವರ್ಗವೆಲ್ಲವೂ, ಸಂತುಷ್ಟವಾಗಿರುವುದು ಅವರ ಜೀವನಕ್ರಮವು ಉತ್ತಮಗೊಂಡಿದೆ ಅಲ್ಲಿ ಮಹತ್ತರ ಕೈಗಾರಿಕೆ ಚಟುವಟಿಕೆಗಳು ನಡೆಯುತ್ತವೆ

ರಷ್ಯಾದ ಕೊಮ್ಯುನಿಷ್ಟರಲ್ಲಿ ಸ್ವವಿಶ್ವಾಸ ತುಂಬಾ ಇದೆ ತಮಗೆ ಒಳ್ಳೆ ಭವಿಷ್ಯವಿರವುದು ಅವರಲ್ಲಿ ದೃಢವಾದ ನಂಬಿಕೆಯಿದೆ ಅವರಲ್ಲಿ ಯಾವತ್ತೂ ತರದ ಕಡುಕುಗಳು ಉಂಟಾಗಲಿಲ್ಲ

? ? ?

ಜನರಲ್ ಫ್ರೆಂಕೋವಿನ ಸಂಕ್ಷಿಪ್ತ ಚರಿತ್ರೆ

ಸ್ಪೆನಿಶ್ ದಂಗೆನಾಯಕ ಪ್ರೆಂಕೋವಿನ ಪ್ರಾಯವು ಸಾಧಾರಣ ನಲ್ವತ್ತಾಗಿರಬಹುದು ದಂಗೆ ಪ್ರಾರಂಭವಾಗುವ ಮೊದಲು ಜನರಲ್ ಫ್ರೆಂಕೋನು, ಅಷ್ಟು ಪ್ರಸಿದ್ಧನಾಗಿರಲಿಲ್ಲ ಆದರೆ ಆತನ ಅನುಜ ಮೇಜರ್ ರಾಮನ್ ಫ್ರೆಂಕೋನು ದಕ್ಷಿಣ ಅತ್ಲಾಂಟಿಕ್ ಮೇಲೆ ಪ್ರಥಮವಾಗಿ ಹಾರಾಡಿ ಕೀರ್ತಿಯನ್ನು ಗಳಿಸಿದ್ದನು

ಜನರಲ್ ಫ್ರೆಂಕೋನು ತನ್ನ ೩೨ನೇ ವಯಸ್ಸಿನಲ್ಲಿ ಜನರಲ್ ಪದವಿಯನ್ನು ಹೊಂದಿದನು ಧೈರ್ಯವಂತನೆಂಬ ಕೀರ್ತಿಯನ್ನು ಪಡೆದಿರುವನು 'ರಿಫ್ಸ್'ರಿಗೆ ವಿರೋಧವಾಗಿ ಆತನು ತನ್ನ ಸೈನ್ಯಮಂಡಳವನ್ನು ನಡೆಯಿಸಿದವನು ಆದರೆ ಅದರಲ್ಲಿ ಅವನಿಗೆ ಘಾತುಕಗಳಾಗಲಿಲ್ಲ ೧೯೩೪ರಲ್ಲಿ ಉಂಟಾದ ಖನಿಜ ಕೆಲಸಗಾರರ ಮನುಷ್ಯರನ್ನು ಅತ್ಯಂತ ಕ್ರೂರರೀತಿಯಲ್ಲಿ ಕೊನೆಗೊಳಿಸಿದ ಸೈನ್ಯದ ದಳದ ನಾಯಕತ್ವವನ್ನು ವಹಿಸಿದವನು ೧೯೩೬ರಲ್ಲಿ ಸ್ಪೈನಿನಲ್ಲಿ ಸೌಮ್ಯವಾದಿ ಸರಕಾರದ ಸ್ಥಾಪನೆಯಾಗದಂತೆ ಯತ್ನಿಸಿದವನು ಅದಕ್ಕಾಗಿ ಅಲ್ಲಿಂದ ಕೆನರಿ ದ್ವೀಪಗಳಿಗೆ ಗಡೀಪಾರು ಮಾಡಲ್ಪಟ್ಟವನು ಆತನ ಪಸಿಯಿಷ್ಮ ಮತಗಳಿಗಾಗಿ ಅಲ್ಲಿಂದ ತಪ್ಪಿಸಿಕೊಂಡು ಮೊರೊಕ್ಕೊ ದೇಶಕ್ಕೆ ಹಾರಾಡಿ, ಅಲ್ಲಿಂದ ಸರಕಾರಕ್ಕೆ ವಿರೋಧವಾಗಿ ಈಗಿನ ದಂಗೆಯನ್ನು ಹೊರಡಿಸಿದನು

ಮುಸಲೀನಿ, ಹಿಟ್ಲರ್, ಈ ಇಬ್ಬರು ಪೆಸಿಯಿಷ್ಮ ಸರ್ವಾಧಿಕಾರಿಗಳ ಸಹಾನುಭೂತಿ

ಜನರಲ್ ಫ್ರೆಂಕೋ

ಯಿಂದ ಇನ್ನಷ್ಟು ಪ್ರಬಲತೆಯನ್ನು ಹೊಂದಿದನು

? ? ?

ರಷ್ಯಾದಲ್ಲಿ ರಾಷ್ಟ್ರದ್ರೋಹ

ದ್ರೋಹಿಗಳನ್ನು ಗಲ್ಲಕ್ಕೇರಿಸದಿದ್ದಲ್ಲಿ ಪರಿಣಾಮವೇನಾಗುತ್ತಿತ್ತು ಸ್ಪೈಯಿನಿನಲ್ಲಿ ಸೌಮ್ಯವಾದ ಸರಕಾರವು 1936ರಲ್ಲಿ ರಚನೆಯಾಯಿತು ಜನರಲ್ ಪ್ರೆಂಕೋನು ಅದಕ್ಕೆ ವಿರೋಧವೆಸಿಸುವ ಚಟುವಟಿಕೆಗಳನ್ನು ನಡೆಯಿಸಿದನು ಸರಕಾರವು ಅವನನ್ನು ಗಡಿಪಾರು ಮಾಡಿತು ಆತನು ತಪ್ಪಿಸಿಕೊಂಡನು ಮುಸಲೀನಿ,ಹಿಟ್ಲರರನ್ನು ವಿಚಾರಿಸಿದನು ಅವರ ಭರವಸೆಗಳನ್ನು ಪಡೆದನು ಸೈನಿಕರನ್ನು ಒಟ್ಟುಕೂಡಿಸಿದನು ಸ್ಪೈಯಿನಿನಲ್ಲಿ ದಂಗೆ ಹೊರಡಿಸಿದನು ಸ್ಪೈಯಿನಿನ ಸ್ತ್ರೀಯರ ಮಕ್ಕಳು ಮಂಗಳು ವೃದ್ಧರ ಅತ್ಯಂತ ಕ್ರೂರ ತರದ ಕೊಲೆಗಳಿಗೆ ಕಾರಣನಾದನು ಸ್ಪೈಯಿನಿನ ಸರ್ವನಾಶಕ್ಕೆ ಕಾರಣನಾದನು

ಅಂತೆಯೆ ರಷ್ಯಾದೇಶದ ಸಂಗ್ರಾಮ ಖಾತೆಯ ಕೆಲವು ಮಹಾ ಘನಸ್ತರು, ಮತ್ತು ಕೆಲವು ಇತರ ಸೋವಿಯಟ್ ಉದ್ಯೋಗಸ್ಥರು,ಸ್ಟೈಲೀನನಿಗೆ ವಿರೋಧವಾಗಿ ನಡೆಯಿಸಿದ ದ್ರೋಹವು ಕಂಡು ಹಿಡಿಯಲಾಯಿತು ಅವರ ವಿಚಾರಣೆ ನಡೆಯಿಸಲ್ಪಾಯಿತು. ಅವರ ದ್ರೋಹ ಖಚಿತಮಾಡಲಾಯಿತು. ಅವರನ್ನು ಗಲ್ಲಕ್ಕೇರಿಸಲಾಯಿತು ಈ ತರದ ಚಟುವಟಿಕೆಗಳು ಮುಂದಕ್ಕೆ ನಡೆಯದಂತೆ, ದ್ರೋಹಿಗಳನ್ನೆಲ್ಲಾ ಹುಡುಕಿ ತೆಗೆದು, ಅವರನ್ನು ನಿರ್ಮೂಲ ಮಾಡಲಾಯಿತು ಹಾಗೆ ಮಾಡದಿರುತ್ತಿದ್ದರೆ, ರಷ್ಯಾದಲ್ಲಿ ಒಂದು ಮಹಾ ದಂಗೆ

ಈ ದ್ರೋಹಗಳನ್ನು ರಷ್ಯ ದೇಶದ ಕಡು ವೈರಿಗಳು, ಅವರ ವಿರೋಧಪ್ರಸಾರಣೆಗೆ ಉಪಯೋಗಿಸಿದರು ನೀತಿ ವಿಚಾರಗಳೇನೋ ಇರಲಿ,ಆ ಕುರಿತು ಸ್ಟೈಲೀನನ ವರ್ತನೆಯು ಸರಿಯಾದುದು ರಷ್ಯಾವು ಜಗತ್ತಿನ ಪ್ರತಿಯೋರ್ವ ಕೆಲಸಗಾರನ ಆದರ್ಶವು ಅದರ ಪ್ರಗತಿಯಾಗಬೇಕು

ಪೆಸಿಯಿಷ್ಟರು ರಷ್ಯಾದ ಕುರಿತು ವಿರೋಧ ಪ್ರಸಾರಣೆಗೆ ಮಾಡಿದಲ್ಲದೆ ಅಲ್ಲಿ ದ್ರೋಹಗಳೂ ನಡೆಯುವಂತೆ ಪ್ರೇರೇಪಿಸಿರುವರೆಂದು ತಿಳಿದು ಬರುತ್ತದೆ

ರಷ್ಯಾವು ದಿನೆ ದಿನೆ ಪ್ರಗತಿಹೊಂದುತ್ತಿದೆ ಅದರ ಸಾಂಪತ್ತಿಕ ಸ್ಥಿತಿಯು, ವೃದ್ಧಿಯಾಗಿರುತ್ತಿದೆ ಅಲ್ಲಿನ ಕೆಲಸಗಾರನ ಸರಕಾರವು ಅತ್ಯಂತ ಶ್ಲಾಘನೀಯವಾದುದು ದ್ರೋಹಗಳಿಂದ ಪರಿಶುದ್ಧವಾದ ರಷ್ಯದ ಸೈನ್ಯವೂ ಇನ್ನಷ್ಟು ಬಲವಂತವಾಗಿರುತ್ತದೆ ದಿನೆ ದಿನೆ ವೃದ್ಧಿಹೊಂದುತ್ತ ಇದ್ದು, ಸದ್ಯದಲ್ಲಿ ಯಿರೋಪ್ಯದ ಎಲ್ಲಾ ಪ್ರಭುತ್ವಗಳನ್ನ ಒಟ್ಟಿಗೆ ಗನಾಗಿ ಎದುರಾಯಿಸುವ ಪ್ರಬಲತೆಯು ರಷ್ಯದಲ್ಲುಂಟಾಗಬಹುದು

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಶ್ರಾವಣ ಶು|| ೮ ಶನಿವಾರದಿಂದ, ಶ್ರಾವಣ ಶು|| ೧೪ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇಯ (ಸಿಂಹ ಸೋರ)

[illegible]	[illegible]	[illegible]	[illegible]	[illegible]	[illegible]	[illegible]	[illegible]
14	ಶನಿ	೮	೪೨	ವಿಶಾಖ	೩೭	೨೧	*
15	ರವಿ	೯	೪೭	ಅನುರಾಧ	೪೩	೩೦	
16	ಸೋಮ	೧೦	೫೧	ಜ್ಯೇಷ್ಠ	೫೦	೩೧	
17	ಮಂಗಳ	೧೧	೫೩	ಮೂಲ	೫೫	೧	
18	ಬುಧ†	೧೨	೫೯	ಪೂ ಷಾ	೬೦	೨	
19	ಗುರು	೧೩	೬೦	ಪೂ ಷಾ	೦	೩	
20	ಶುಕ್ರ	೧೪	೨	ಉ ಷಾ	೪	೪	

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು.—'ಲಕ್ಷ್ಮಿನಿವಾಸ' ಬಿಲ್ಡಿಂಗ್ಸ್, ಕುಂದಾಪುರ ದ ಕ

ಬ್ರೇಂಚ್ ಆಫೀಸುಗಳು
ಕುಂದಾಪುರ,
ಕುಮಟಾ,
ಕೋಟೀಶ್ವರ,
ಬೈಂದೂರು,
ಗೋಕರ್ಣ,
ವೀರರಾಜೇಂದ್ರಪೇಟೆ,
ಸೋಮವಾರ ಪೇಟೆ,
ಶಿವಮೊಗ್ಗಾ,
ತರಿಕೆರೆ.

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ತೆರೆಯಲ್ಪಡುವುವು.

ಶಿವಮೊಗ್ಗಾ ತಾ 26-8-1937.
ತರಿಕೆರೆ ,, 30-8-1937.

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡಿಸಲ್ಪಡುವುವು.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಮ್ಮದೇ ಆಗಿರುವ ಆದರ್ಶಪ್ರಾಯವಾದ ಈ ಬೇಂಕಿನಲ್ಲಿಯೇ ನಿಮ್ಮ ವ್ಯವಹಾರಗಳನ್ನು ನಡಿಸಬೇಕಾಗಿ ಕೋರುತ್ತೇವೆ.

'Laxmi Nivas' Buildings, Coondapoor, 8-1-1937.

The Agricultural & Industrial Bank, Ltd

ತರುಣಿಯೋರ್ವಳಿಗೆ ರಕ್ತದ ಒತ್ತಾಟವು ಹೆಚ್ಚಿತ್ತು

ಈ ಅಪಾಯಕರ ಸ್ಥಿತಿಯು ಕ್ರುಶನ್ ಲವಣಗಳಿಂದ ನಿವಾರಿಸಲಾಯಿತು.

ಅನೇಕ ನಡು ಪ್ರಾಯಸ್ತರೂ, ಅದಕ್ಕಿಂತಲೂ ಮುಂದಗೊಂಡವರು, ಹೆಚ್ಚಿನ ರಕ್ತ ಒತ್ತಾಟದಿಂದ ಸಂಕಟಪಡುವುದುಂಟು ಈ ರೀತಿ ತರುಣರು ಸಂಕಟಪಡುವುದು ಅಸ್ವಾಭಾವಿಕವು

ಹೆಚ್ಚಿದ ರಕ್ತ ಒತ್ತಾಟವನ್ನು ಅನುಭವಿಸಿದ ಓರ್ವ ತರುಣಿಯ ಅನುಭವವು ಇಲ್ಲಿ ಕೊಡಲಾಗಿದೆ. ಅವಳು ಹೀಗೆ ಬರೆಯುತ್ತಾಳೆ

"ನಾನು ಹೆಚ್ಚಿದ ರಕ್ತ ಒತ್ತಾಟದ ಸಂಬಂಧವನ್ನು ಅನುಭವಿಸುತ್ತಿರುವೆನು. ಸಾಧಾರಣ ತರದ ಜಾಡಣೆಯನ್ನು ಉಪಯೋಗಿಸುವುದು, ಇದರ ಚಿಕಿತ್ಸೆಯ ಒಂದು ಭಾಗವು. ಅನೇಕ ತರದ ಜಾಡಣಾ ಔಷಧಿಗಳನ್ನು ಪ್ರಯತ್ನಿಸಿದ ಬಳಿಕ,ಕೊನೆಗೆಡಾಕ್ಟರರು ಕ್ರುಶನ್ ಲವಣವನ್ನು ನನಗೆ ಕೊಟ್ಟರು ಅದು ಅತ್ಯಂತ ಸುರಕ್ಷಿತವಾದ ಜಾಡಣೆ-ಅವರ ಅಭಿಪ್ರಾಯವಾಗಿತ್ತು ಅದರಿಂದ ನಾನು ಉತ್ತಮ ತರದ ಫಲವನ್ನು ಹೊಂದಿರುವೆನು ಕ್ರುಶನ್ ಲವಣವನ್ನು ಸೇವಿಸಲಾರಂಭಿಸಿ ಕೆಲವೆ ದಿವಸಗಳಲ್ಲಿ ನನ್ನ ರಕ್ತ ಒತ್ತಾಟವು ಸ್ವಾಭಾವಿಕ ಸ್ಥಿತಿಗೆ ಇಳಿಯಿತು"

ಮಿಸ್ 'ಎ ಬಿ'

ನಿಮ್ಮ ಹೊಟ್ಟೆಯನ್ನು ನಿರ್ಮಲವಾಗಿಡಲು ಕ್ರುಶನ್ ಲವಣಗಳು ಖಾತ್ರಿ ಸುರಕ್ಷಿತವಾದ ಸೂಕ್ಷ್ಮವಾದ ಔಷಧಿಯು ಕ್ರುಶನ್ ಲವಣಗಳು ಮೆಲ್ಲನೆ ಕಾರ್ಯಗೊಳಿಸುವುದಾದರೂ ಅದು ಸಂಪೂರ್ಣ ಫಲಕಾರಿಯು ಕ್ರುಶನ್ ಲವಣಗಳಿಂದ ನಿಮ್ಮ ಮಲಬದ್ಧತೆಯು ಮಾಯವಾಗುತ್ತಿರುವಾಗ ನಿಮ್ಮದೇಹದೊಳಗೆ ಆರೋಗ್ಯಕ್ಕುಪಯುಕ್ತವೆನಿಸುವ ಆರು ಖನಿಜ ಲವಣಗಳಾಗಿ ಸೇರುವವು

ಕ್ರುಶನ್ ಲವಣಗಳು ಎಲ್ಲಾ ದವಾಖಾನೆಗಳಲ್ಲೂ ಅಂಗಡಿಗಳಲ್ಲೂ ಪೇಟೆಗಳಲ್ಲೂ ಮಾರುತ್ತದೆ

ವಜ್ರಗಳು! ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಚಿರಿಯರ ಟಿಂಟ್ಟಿನ ಕಳೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮೋಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ.

ಅಲ್ಲಲ್ಲಿಂದ ಒಂದಿಷ್ಟು

(ಲೇಖಕ- ಶ್ರೀಶ)

ಗುಡಾಣದ ಸುಬ್ಬಾ ಭಟ್ಟರು

ಗುಡಾಣದ ಸುಬ್ಬಾ ಭಟ್ಟರು ಎಲ್ಲಿಂದಲೋ ಹೊಟ್ಟೆ ತುಂಬಿಸಿಕೊಂಡು ನಮ್ಮ ಮನೆ ಚಾವಡಿ ಮೇಲೆ ಕಾಲು ನೀಡಿದರು 'ಎಲ್ಲಿ ಆಯಿತು, ಇಂದಿನ ಊಟ?' ಎಂದು ನಾನು ಕೇಳಿದೆ. 'ನಮಗೆ ಊಟಕ್ಕೆ ಕೊರತೆಯೆ? ಯಜಮಾನರ ಮನೆಯ ಶ್ರಾದ್ಧಕ್ಕೆ ಹೋಗಿದ್ದೆ' ಎಂದರವರು

ಅಷ್ಟರಲ್ಲಿ ನಮ್ಮ ಮನೋಹರ ಒಳಗಿನಿಂದ ಹೊರಗೆ ಬಂದ ಕೈಯಲ್ಲಿ 'ಶ್ರಾದ್ಧ ನಿರ್ಣಯ'ವಿತ್ತು 'ಭಟ್ಟರೆ, ಶ್ರಾದ್ಧ ಮಾಡುವದು ವೇದೋಕ್ತ ಅಲ್ಲವೆಂದು ಆರ್ಯಸಮಾಜಿಗಳು ಹೇಳುತ್ತಾರೆ ಹೌದೆ?' ಎಂದು ಕೇಳಿದ

'ಆರ್ಯ ಸಮಾಜಿಗಳು ಸತ್ತರು! ಮಗೂ ನಿನಗೆ ಆ ವಿಚಾರ ಬೇಡ ನೀನು ಹೋಗಿ ಪಾಠ ಓದು. ಇಲ್ಲವಾದರೆ ನಾಳೆ ಶಾಲೆಯಲ್ಲಿ ಪೆಟ್ಟು ತಿನ್ನುವಿ!'

'ಆರ್ಯಸಮಾಜಿಗಳು ಸತ್ತರೆ,ಸಾಯಲಿ, ಭಟ್ಟರೆ! ಶ್ರಾದ್ಧ ವೇದೋಕ್ತವೇ ಹೇಳಿ''

'ಅಲ್ಲಸಲ್ಲದ ಪ್ರಶ್ನೆ ಕೇಳಿ ತಲೆ ಕೆಡು ಮಾಡಿಕೊಳ್ಳಬೇಡ, ಮಗೂ ಒಳಗೆ ಹೋಗಿ ಪಾಠ ಓದು'

'ಓದುತ್ತೇನೆ, ಭಟ್ಟರೆ! ಶ್ರಾದ್ಧ ಶಾಸ್ತ್ರೋಕ್ತವೇ ಹೇಳಿ''

'ಈ ಹುಡುಗ ಹೇಳಿದ್ದು ಒಂದನ್ನೂ ಕೇಳುವದಿಲ್ಲ ಏನು ಉಪದ್ರವ ಕೊಡುತ್ತಾನೆ!'

'ಅಲ್ಲ ಭಟ್ಟರೆ'

ಆಗ ನಾನು 'ಮಗೂ, ಮನೋಹರ, ಭಟ್ಟರನ್ನು ಪೀಡಿಸಬೇಡ ಊಟಮಾಡಿ ಬಂದಿದ್ದಾರೆ ಮಾತ್ರ ಸ್ವಲ್ಪ ಆರಾಮ ತೆಗೆದುಕೊಳ್ಳಲಿ' ಎಂದೆ

'ನಿಜ, ಊಟಮಾಡಿ ಅವರ ಹೊಟ್ಟೆ ಗುಡಾಣದಂತಾಗಿದೆ, ಬೇಕಾದಷ್ಟು ಆರಾಮ ತೆಗೆದುಕೊಳ್ಳಲಿ! ಅಪ್ಪಯ್ಯ ಇವರ ಮಾಕೆ ಹೀಗೆ ಮಾಡುತ್ತಾರೆ? ಈ ಭಟ್ಟರ ವೇದ ಓದಲಿಲ್ಲವೇ?'

'ಇಲ್ಲ'

'ಶಾಸ್ತ್ರಗಳನ್ನೂ ಓದಲಿಲ್ಲವೆ?'

'ಇಲ್ಲ'

'ಪುರಾಣಗಳನ್ನೂ ಓದಲಿಲ್ಲವೆ?'

'ಇಲ್ಲ ಮಗೂ''

'ಇತಿಹಾಸಗಳನ್ನು?'

'ಯಾವುದೂ ಇಲ್ಲ, ಮಗ'

'ವೈದಿಕ ವೃತ್ತಿ ಮಂತ್ರ ಪಾಠ ಹೇಗೆ ಮಾಡುತ್ತಾರೆ?'

'ಗಿಳಿ ಪಾಠ ಮಾಡಿದ ಹಾಗೆ ಮಗೂ'

'ಅರ್ಥ?'

'ಯಾರಿಗೂ ಬೇಕಾಗಿಲ್ಲ'

'ಪ್ರಯೋಜನ?'

'ಪರಮಾನ್ನ ಭೋಜನ! ಮಗೂ''

'ಹಾಗಾದರೆ ಅಪ್ಪಯ್ಯ, ಇವರು ಉಂಡಿ ಭಟ್ಟರು ತಾನೆ? ಇವರೊಡನೆ ಕೇಳಿ ಫಲವಿಲ್ಲ' ಎಂದು ಹೇಳಿ ಮನೋಹರ ಒಳಗೆನಡೆದ

ನಾನು ಭಟ್ಟರ ಕಡೆಗೆ ನೋಡಿದೆ ಇಷ್ಟು ಮಾತುಗಳನ್ನು ಕೇಳುತ್ತಿದ್ದರೂ ಅವರ ಮುಖಭಾವ ಎಂದಿಷ್ಟು ಬದಲಾಗಿರಲಿಲ್ಲ ಕಡೆ ಮಾತು ಕೇಳಿ ಕಿಸಕ್ಕನೆ ನಕ್ಕು ತಮ್ಮ ಸಮ್ಮತಿಯನ್ನೇ ಸೂಚಿಸಿದರು

ಬ್ರಾಹ್ಮಣತ್ವದ ಪತನ ಎಲ್ಲಿಂದೆಲ್ಲಿಯ ತನಕ ಆಯಿತೆಂದು ಮನಸ್ಸಿನಲ್ಲಿಯೇ ಮರುಗಿದೆ ಜುಗುಪ್ಸೆಯಿಂದ ಭಟ್ಟರ ಮುಖ ನೋಡಲಿಕ್ಕಾಗದೆ ನಾನೂ ಒಳಗೆ ನಡೆದೆ

ಕೊನ್ಸಕ್ರಿಪ್ಷನ್

ಯುದ್ಧವಾಗುವದಿದ್ದಾಗ ಪ್ರಾಯಕ್ಕೆ ಬಂದವರನ್ನೆಲ್ಲ ಸೇನೆಗೆ ಭರ್ತಿ ಮಾಡುತ್ತಾರೆ ಅದಕ್ಕೆ ಕೊನ್ಸಕ್ರಿಪ್ಷನ್ ಎಂದು ಹೇಳುವರು ಈಗ ಕಾಂಗ್ರೆಸಿನವರು ಆರು ಪ್ರಾಂತ್ಯಗಳಲ್ಲಿ ರಾಜ್ಯಾಡಳಿತದ ಜವಾಬುದಾರಿಯನ್ನು ಹೊತ್ತುಕೊಂಡಿದ್ದಾರಷ್ಟೆ? ಇದೊಂದು ಯುದ್ಧಕಾಲವೆಂದ, ಅವರು ತಿಳಕೊಂಡಂತಿದೆ. ತಮ್ಮ ಅಹಿಂಸಾತ್ಮಕ ಯುದ್ಧದ ಸೇನೆಗೆ ಶಿಕ್ಷಿತ ನಿರುದ್ಯೋಗಿಗಳನ್ನೆಲ್ಲ ಸೇರಿಸಿ ತಮ್ಮ ಬಲವನ್ನು ಬೆಳೆಸಬೇಕೆಂದಿದ್ದಾರೆ ಈ ವಿದ್ಯಾವಂತ ತರುಣರಿಗೆ ಅನ್ನ ಬಟ್ಟೆ ಮಾತ್ರ ಕೊಟ್ಟು ಅವರ ಮೂಲಕ ಶಿಕ್ಷಣ ಪ್ರಚಾರ, ಮದ್ಯಪಾನ ನಿಷೇಧ, ಹರಿಜನಸೇವೆ ಇತ್ಯಾದಿ ಇತ್ಯಾದಿ ಮಾಡಿಸಬೇಕೆಂದಿದ್ದಾರೆ 'ಹೀಗೆ' ಕಾಂಗ್ರೆಸಿನವರ ಈ ಸೇನೆಗೆ ನೀವು ಸೇರುವಿರಾ?' ಎಂದು ಒಬ್ಬ ವಿದ್ಯಾವಂತ ನಿರುದ್ಯೋಗಿಯನ್ನು ಕೇಳಿದೆ 'ಎಷ್ಟು ಮಾತ್ರಕ್ಕೂ ಸೇರಲಿಕ್ಕಿಲ್ಲ ನಮ್ಮ ತಂದೆ ತಾಯಿಗಳು ಮನೆಮಾರು ಆಸ್ತಿ ಬದುಕು ಮಾರಿಕೊಂಡು ನಮಗೆ ಕಲಿಸಿದ್ದು ಈ ಕೆಲಸ ಮಾಡಲಿಕ್ಕಾಗಿಯೆ? ಸಿಕ್ಕಿದರೆ ಕುರ್ಚಿ ಮೇಲೆ ಕೂತು ಮೇಜಿನ ಮೇಲೆ ಬರೆಯಲಿಕ್ಕಿರುವ ಗೌರವದ ಹುದ್ದೆ ಸಿಕ್ಕಬೇಕು ಇಲ್ಲವಾದರೆ ಉದ್ಯೋಗವಿಲ್ಲದೆ ಉಪವಾಸ ಬಿದ್ದಾದರೂ ಪ್ರಾಣ ಕೊಟ್ಟೇವೇ ಹೊರತು ಹಾಳು ಸ್ವಯಂಸೇವಕರು, ಪಾಪದ ಉಪಾಧ್ಯಾಯರ ಮಾಡುವ ಕೆಲಸವನ್ನು ನಾವೆಂದೂ ಮಾಡಲಿಕ್ಕಿಲ್ಲ. ತಿಳಿಯಿತೆ? ಅದು ನಮ್ಮ ಗೌರವಕ್ಕೆ ಕೊರತೆಯನ್ನು ತರುವ ಕೆಲಸ' ಎಂದು ಅಬ್ಬರದಿಂದ ಮಾತನಾಡಿದರು ಇವರ ಸ್ಫೂರ್ತಿಯ ಮಾತುಗಳು ನನ್ನನ್ನು ಚಾಯಾಡಿಸದಂತೆ ಮಾಡಿದುವು 'ಇವರು ಕಲಿತ ವಿದ್ಯೆಯು ಇವರಿಗೆ ಗೌರವ ರಕ್ಷಣೆಯ ಉಪಾಯವನ್ನು ಬಹು ಚೆನ್ನಾಗಿ ಕಲಿಸಿದೆ ಎಂದೆಣಿಸಿ ನಾನು ಸುಮ್ಮಗಾದೆ ಶಿಕ್ಷಣದ ಪ್ರಭಾವ ಎಂಥ ತನೆ?

ಥೋಟಾ ಸಿಂಗನು ಬಂದು ನಮ್ಮ ನಾಗಪ್ಪಯ್ಯನಿಗೆ ಒಂದು ಚಕ್ರಾಣಿಕ ಕೊಟ್ಟ 'ಇದ ಕೊಳ್ಳಿ ಎಣಿಸಿದ ಕಾರ್ಯಗಳು ಸಿದ್ಧವಾಗುತ್ತವೆ ನಿಮ್ಮ ಹೆಸರು ನಾಗಪ್ಪಯ್ಯ ಗಂಡು ಮಕ್ಕಳ ಇದ್ದಾರೆ ಹೆಣ್ಣು ಮಕ್ಕಳು ಇದ್ದಾರೆ ಹೆ ತಕಿ ಭಾಗ್ಯಲಕ್ಷ್ಮಿ ಬರುವ ತಿಂಗಳ ಸೋಮವಾರ ದೊಡ್ಡದೊಂದ ಲಾಭವಾಗುತ್ತದೆ ಜಯವಾಗುತದೆ' ಎಂದು ನಾಗಪ್ಪಯ್ಯ ಕರಹಿ... ದ ಕಣ್ಣಾರಳಿಸಿದ ಗೋವಿಂದ ನೋಡಿ ಒಂದು ರೂಪಾಯಿ ಹಾಕಿದ್ದೇನೆ ಸಿಕ್ಕಬಹುದೆ?

ಛೆಂಪಕ್ ಒಂದು ಅಂಕೆ ಹೇಳಿ'

19

'ಇದ ಖಂಡಿತವಾಗಿಯೂ ಸಿಕ್ಕುತ್ತೆ ಇದು ಗಂಡಕಿ ನದಿಯ ಸಾಲಿಗ್ರಾಮ ನಿತ್ಯವೂ ಪೂಜೆ ಮಾಡಿ ಇಷ್ಟಾರ್ಥವನ್ನು ಕೊಡುತ್ತದೆ'

ನಾಗಪ್ಪಯ್ಯ ಕೊಟ್ಟ ಒಂದು ರೂಪಾಯಿ ತೆಗೆದುಕೊಂಡು ಥೋಟಾಸಿಂಗ ಹೊರಗೆ ನಡೆದ

'ಲಕ್ಷ್ಮೀ, ನೋಡು, ಜಾಗ್ರತೆಯಿಂದ ಇಡಬೇಕ ಅಮೂಲ್ಯವಾದ್ದು ಬೇಕಾದಾಗ ಸಿಕ್ಕುವಂಥಾದ್ದಲ್ಲ ಅಪರೂಪದ ಚಕ್ರಾಣಿಕ ಮತ್ತು ಸಾಲಿಗ್ರಾಮ' ಎಂದು ಹೇಳುವಷ್ಟರಲ್ಲಿ ಹೊರಗೆ ಕುಂಟನು ಕೂತ ಗಾಡಿಯನ್ನು ಎಳೆಯುತ್ತ ಭಿಕ್ಷೆ ಬೇಡುವ ಕುರುಡನೊಬ್ಬನು ಬಾಗಿಲ ಮುಂದೆ ಗಾಡಿ ನಿಲ್ಲಿಸಿ 'ಅಮ್ಮಾ, ಅಪ್ಪಾ' ಎಂದ.

'ಎ ಎ, ಹೋಗು, ಹೋಗು,' ಎಂದು ನಾಗಪ್ಪಯ್ಯ ಬಿಸಿ ನೀರು ಮೈಮೇಲೆ ಚೆಲ್ಲಿ ಆ ಇಬ್ಬರೂ ಭಿಕ್ಷುಕರನ್ನು ಹೊರಗೆ ಕಳುಹಿಸಿದ ಒಂದು ಹಿಡಿ ಅಕ್ಕಿ ಸಹ ಕೊಡಲಿಲ್ಲ

ಸೋದ್ದಿಯ ಸೋಮವಾರ ಬಂದಿತು ಅಲಭ್ಯ ಲಾಭವಾಯಿತು ನಾಗಪ್ಪಯ್ಯನಿಗಲ್ಲ, ಪರಂತು, ಥೋಟಾಸಿಂಗನಿಗೆ!

ನಾಗಪ್ಪಯ್ಯ ಚಕ್ರಾಣಿಕ ಕೈಯಲ್ಲಿ ಹಿಡಿದು 'ಇದು, ನನ್ನ ಮೂಖತನವೆ, ಮೂಢತನವೆ?' ಎಂದು ತನ್ನನ್ನು ತಾನು ಕೇಳಿದ ಯಾರು ಬಲ್ಲರು, ಏನೆಂದು?

ನಿರುದ್ಯೋಗಿಗಳಿಗೊಂದು ಉದ್ಯೋಗ

ಜಾಹೀರಾತನ್ನು ಓದಿ ಮರುಳಾದ ನಿರುದ್ಯೋಗಿಗಳೊಬ್ಬರು, ಅರ್ಜಿಗಳನ್ನು ಬರೆದು ಉಳಿಯುವ ಬಿಡು ಸಮಯದಲ್ಲಿ ಕೆಲಸಮಾಡಿ ತಿಂಗಳಿಗೆ 200—300 ರೂಪಾಯಿ ಸಂಪಾದಿಸುವೆವೆಂದು ಎಂಟಾಣೆ ಕಳುಹಿಸಿ ಕಂಪೆನಿಗೆ ಬರೆದು ಹಾಕಿದರು ಪ್ರಾಸಪೆಕ್ಟಸಿಗಾಗಿ!

ಮೂರು ನಾಲ್ಕು ದಿನಗಳಲ್ಲಿ ಪ್ರಾಸ್‌ಪೆಕ್ಟಸ ಬಂದೀತು 'ನಮ್ಮ ಟಪ್ಪಾಲು ಮೂಲಕ ಶಿಕ್ಷಣದಿಂದ ಸಾವಿರಾರು ಮಂದಿ ಉದ್ಯೋಗ ದೊರಕಿಸಿಕೊಂಡಿದ್ದಾರೆ. ನೀವೂ ನಮ್ಮಿಂದ ಒಂದು ಕೋರ್ಸ ತೆಗೆದುಕೊಂಡು ಆ ಭಾಗ್ಯಶಾಲಿಗಳಲ್ಲಿ ಒಬ್ಬರಾಗಬಹುದು ನಮ್ಮ ಪೂರ್ಣ ಕೋರ್ಸಿಗೆ ರೂ 250 ಆಗುತ್ತದೆ ಆದರೆ ಸ್ಕಾಲರ್ ಶಿಪ್ ಇದ್ದವರು ಬರೇ 100 ರೂಪಾಯಿ ಕಳುಹಿಸಿ ಕೊಟ್ಟು ಶಿಕ್ಷಣ ಪಡೆಯಬಹುದು ವರ್ಷವರ್ಷವೂ ಸಾವಿರಾರು ಮಂದಿಗೆ ಸ್ಕಾಲರ್ ಶಿಪ್ ಕೊಡುತಿದ್ದೇವೆ ಎರಡು ರೂಪಾಯಿ ಪ್ರವೇಶ ಫೀಸು ಕಳುಹಿಸಿ ಸ್ಕಾಲರ್ ಶಿಪ್ಪಿಗೆ ಅರ್ಜಿ ಮಾಡಿ'

ಅರ್ಜಿ ಮಾಡಿದವರಿಗೆ ಕಂಪೆನಿ ಸ್ಕಾಲರ್ ಶಿಪ್ ಕೊಡತ್ತದೆ ಪ್ರವೇಶ ಧನ 2 ರೂಪಾಯಿ ಕಾಗದ ಬರೆಯಬೇಕಾದರೆ ಎಂಟಾಣೆ ಕೊಟ್ಟರೆ ಸಾಕು ಹಣ ಸಂಪಾದಿಸುವ ಹೊಸ ಕ್ರಮವಿದು ಉದ್ಯೋಗ ದೊರೆಯದ ಕಾಲದಲ್ಲಿ ಇದೊಂದು ಉದ್ಯೋಗವನ್ನಾದರೂ ಮಾಡಿಕೊಂಡು ನಮ್ಮ ನಿರುದ್ಯೋಗಿ ತರುಣರು ತಮ್ಮ ಭಾಗ್ಯ ಪರೀಕ್ಷೆ ಮಾಡಿಕೊಳ್ಳಬಹುದ ಪ್ರಾಸಪೆಕ್ಟಸ ಛಾಪಿಸಲಿಕ್ಕೆ ಸ್ವಲ್ಪ ಹಣ ಸಾಲ ತೆಗೆದರೆ ಮತ್ತೆ ಕೊಟ್ಟರಾಯಿತು

ಗಿಳಿ ಪಾಠದ ಮಹಿಮೆ.

ಇನ್ಸಪೆಕ್ಟರರು ಒಂದು ಶಾಲೆಯ ಎಂಟನೆ ತರಗತಿಯನ್ನು ಪ್ರವೇಶಿಸಿ 'ವಿಜಯ ನಗರದಲ್ಲಿ ಅರಸರು ಏನನ್ನೆಲ್ಲ ಕಟ್ಟಿಸಿದರು?' ಎಂದು ಒಬ್ಬ ಹುಡುಗನನ್ನು ಕೇಳಿದರು

ಅಂತಃಪುರದ ಮಹಿಳೆಯರಿಗಾಗಿ ಗಜಾಲಯ ಎಂದ ಹೇಳಿದ ಆ ಹುಡುಗ

ಮತ್ತೇನು?'

ಆನೆಗಳನ್ನು ಕಟ್ಟುವದಕ್ಕಾಗಿ ಪದ್ಮಾಲಯ'

'ಸರಿ ಕೂತ ಕೊ'

ಹೀಗೆಂದು ಹೇಳಿ ಇನ್ಸಪೆಕ್ಟರರು ಅಲ್ಲಿಂದೆದ್ದು ಬೇರೆ ತರಗತಿಗೆ ಹೋದರು ಗಿಳಿ ಪಾಠದ ಮಹಿಮೆ.

ನಿಜಕ್ಕೂ ನಡೆದ ತಮಾಷೆ

ನಮ್ಮ ಆಫೀಸಿನಲ್ಲೊಂದ ದಿನ ಒ ದ ತಮಾಷೆ ನಡೆಯಿತು ಖಾಲಿಯಾದ ಕ್ಲಾರ್ಕನ ಜಾಗಕ್ಕೆ ಬಿ ಎ, ಎಂ ಎ, ಕಲಿತವರಿಂದ ಅರ್ಜಿಗಳನ್ನು ಅಪೇಕ್ಷಿಸಿ ಜಾಹೀರಾತ ಕೊಡಲಾಗಿತ್ತು

ಎಂ ಎ ಕಲಿತವನೊಬ್ಬನ ಅರ್ಜಿಯನ್ನು ಹಿಡಕೊಂಡು ಆಫೀಸಿಗೆ ಬಂದ ಕಣ್ಣೆದುರಿಗೆ ಬಿದ್ದ ಕ್ಲಾರ್ಕನ 'ಪತಿತ ಮೆನೇಜರ ಎಲ್ಲಿ?' ಎಂದ ಕೇಳಿದ

ಅವರು ಒಂದಿಷ್ಟು ಏನಾದರೂ ಕೇಳಿಸಿದ್ದರೆ ಹೇಳಿ' ಎಂದು ಕ್ಲಾರ್ಕನು ವಿನಯದಿಂದ ನುಡಿದ ಎ ಎ ಕಲಿತವನೂ ಅಲ್ಲ ಅವನು ಇಲ್ಲ, ನನಗೆ ಆಫೀಸು ಕ್ಲಾರ್ಕನ ಹತ್ತಿರ ಏನು ಕೆಲಸ? ಮೆನೇಜರನೊಡನೆ ಮಾತನಾಡಬೇಕು ಅವರು ಬರುವ ತನಕ ಕಾತುಕೊಳ್ಳುತ್ತೇನೆ' ಎಂದು ಗರ್ವದಿಂದ ನುಡಿದ

'ಮಹಾಶಯ, ಆಗಬಹುದು ಅಲ್ಲಿ ಕುರ್ಚಿ ಇದೆ ಮೆನೇಜರ ಬರುವ ತನಕ ಅಲ್ಲಿ ಕೂತುಕೊಳ್ಳಿ' ಎಂದು ಹೇಳಿ ಕ್ಲಾರ್ಕ ಅವಗೆ ಕುರ್ಚಿ ತೋರಿಸಿದ

ಒಂದು ಗಂಟೆಯಾಯಿತು, ಎರಡ ಗಂಟೆಯಾಯಿತು, ಎಷ್ಟೋ ಮಂದಿ ಒಂದು ಕ್ಲಾರ್ಕನೊಡನೆ ಕೆಲಸ ಮಾಡಿಸಿ ಹೊರಟು ಹೋದರು ಮೂರು ಗಂಟೆಗಳೂ ಆದುವು ಆದರೆ ಮೆನೇಜರ ಇಲ್ಲ

'ಅವರು ಬರಲಿಕ್ಕೆ ಇನ್ನೂ ತಡವಿದೆಯೆ?' ಎಂದು ಅವನು ಮೆಲ್ಲಗೆ ಬಂದು ಕೇಳಿದ

'ಹೌದು, ಕ್ಲಾರ್ಕನ ಕೆಲಸಕ್ಕೆ ನನ್ನನ್ನು ನೇಮಿಸಿ ನಿನ್ನೆ ಅವರು 15 ದಿನಗಳ ರಜೆ ತೆಗೆದುಕೊಂಡು ಹೋಗಿದ್ದಾರೆ. ಇಚ್ಛೆಯಿದ್ದರೆ ಅವರು ಬರುವ ತನಕವೂ ನೀವು ಇಲ್ಲಿ ಕೂತುಕೊಂಡಿರಬಹುದು ಇಲ್ಲವಾದರೆ...'

ಎಂ ಎ. ಕಲಿತವನ ಮುಖ ಮಾರುದ್ದವಾಯಿತು; ಅದು ಸುಟ್ಟ ಮಸಿ ಕೆಂಡದಂತೆ ಕಪ್ಪಾಯಿತು. ಅವನು ಮಾತೆತ್ತದೆ ಹೊರಟು ಹೋದ

ಪದವಿಧಾರಿಗಳ ಸ್ಥಿತಿ ಇಲ್ಲಿ ತನಕ ಬಂದು ಮುಟ್ಟಬೇಕಿತ್ತೆ? ಪಾಪ!

ಹೊಟ್ಟೆನೋವು 5 ನಿಮಿಷಗಳಲ್ಲಿ ಮಾಯವಾಯಿತು.

ಹೊಟ್ಟೆನೋವಿನಿಂದ ನೀವು ಸಂಕಟಪಡುವುದಾದರೆ, ಆ ನೋವಿನ ನಿವಾರಣೆ ಬೇಗನೆ ಮಾಡಿಕೊಳ್ಳಲು ನೀವು ಇಚ್ಛಿಸುವಿರಿ ಈ ಅನುಭವವು ಬ್ರ್ಯಾಟನ್ನಿನ ಮಿಸೆಸ್ 'ಡಿ' ಎಂಬವಳಿಗಾಯಿತು

ಅವಳು ಹೊಟ್ಟೆನೋವಿನ ಸಂಕಟವನ್ನು ಅನುಭವಿಸುತ್ತಿದ್ದಳು ಈಗ ಅವಳು ಬೇಗನೆ ಹೊಟ್ಟೆನೋವನ್ನು ನಿವಾರಿಸುವ ಮತ್ತು ಅದು ಪುನಃ ಬಾರದ ಹಾಗೆ ಮಾಡುವ ಉಪಾಯವನ್ನು ಕಂಡುಹಿಡಿದಿರುವಳು.

ಅಕೆಯ ಪತಿಯು ಈ ರೀತಿ ಬರೆಯುತ್ತಿದ್ದಾನೆ-"ಎರಡು ವಾರಗಳ ಹಿಂದೆ ನನ್ನ ಪರಮ ಮಿತ್ರನೊಬ್ಬನು, ನನ್ನ ಪತ್ನಿಗೆ ಒಂದು ಬಾಟ್ಲಿ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಒದಗಿಸಿದನು ಅಂದು ಶನಿವಾರವಾಗಿತ್ತು ಬೆಳಗಿನ ಜಾವಕ್ಕೆ, ಆಗ ನನ್ನ ಪತ್ನಿ ಹೊಟ್ಟೆನೋವಿನ ಸಂಕಟದಲ್ಲಿದ್ದಳು

'ಒಡನೆ ಅವಳು ಒಂದು ಡೋಸನ್ನು ಸೇವಿಸಿದಳು ಐದೆ ನಿಮಿಷಗಳಲ್ಲಿ ಅವಳ ನೋವು ಮಾಯವಾಯಿತು. ನೋವಿಲ್ಲದ ಅವಳ ಮುಖ ಲಕ್ಷಣಗಳನ್ನು ನೋಡಲು, ಅತಿ ಸಂತೋಷವೆನಿಸಿತು ಈಗ ಅವಳು ಅದನ್ನು ನಿತ್ಯವೂ ಸೇವಿಸುತ್ತಿದ್ದಾಳೆ ಅವಳ ಹೊಟ್ಟೆನೋವು ಸಂಪೂರ್ಣವಾಗಿ ಮಾಯವಾದುದಲ್ಲದೆ, ಈಗ ಅವಳಿಗೆ ಹೊಟ್ಟೆ ನೋವೆ ಆಗುವುದಿಲ್ಲ ಈಗ ಬಹಳ ಸಂತುಷ್ಟಳಾಗಿರುವಳು

"ಬರಿದೆ ಸಂಕಟ ಪಡಬೇಡಿರಿ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಪಡೆಯಿರಿ- ಅದರಲ್ಲದು ಅಲೆಕ್ಸ ಸಿ ಮೆಕ್ಲೀನ್ ರವರದೆಂದು ಖಚಿತ ಮಾಡಿಕೊಳ್ಳಿರಿ' ಎಂದು ಯಾವಾಗಲು ನನ್ನ ಸ್ನೇಹಿತರಿಗೆ ಬೋಧಿಸುವೆನು.

ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಮಾಯಾವಿ ತರದಲ್ಲಿ ನೋವು ನಿವಾರಣೆ ಮಾಡಿದುದರಲ್ಲಿ ಇದೊಂದ ದೃಷ್ಟಾಂತವಾಗಿರುತ್ತದೆ ಸಾವಿರಾರು ಮಂದಿಗಳು ಇದೆ ತರದ ಅನುಭವವನ್ನು ಹೊಂದಿರುವರು,-ಅವರು, ಇದೆ ಸಂತೋಷಕರ ವಾರ್ತೆಯನ್ನು ಕೊಡುವರು ಆದರೆ ಹೆಸರಿಲ್ಲದ ಔಷಧಿಗಳನ್ನು ಸೇವಿಸಬೇಡಿರಿ ಬಾಟಲಿಯ ಮೇಲೆ ಮತ್ತು ಪೆಟ್ಟಿಗೆಯ ಮೇಲೆ

Alex. C. Maclean

ಎಂಬ ಸಹಿಯಿರುವ ತೆಂಪು ಅದೆ ಸಹಿಯಿಂದ ಮಾಡಿದ ಕೆಂಪು ಮುದ್ರೆ... ವ ತೆ... ,ಜಾಗರೂಕರಾಗಿರಿ ಇದ ಪುಡಿ ಪೆಕ್ಕಿನ ... ಸಕ ರುಹುಗಳ —ನಿಮ್ಮ ಹೊಟ್ಟೆ ನೋವನ್ನು ಕೂಡಲೆ ... ಚಿಹ್ನೆಗಳು

ಇದು ಟಿಕ್ಲಿಯಾಗಿ ಮಾಡುವುದಕ್ಕೆ ... ಪೊಟ್ಟಣಗಳಲ್ಲೂ ... ದೆ

ಸ್ಥಳೀಯ ಕೆಮಿಸ್ಟರಿಂದ ... ಸ್ಟೋರುಗಳಿಂದ ಇದನ್ನು ಪಡೆಯಿರಿ ... ಈ ಕೆಳಗಿನ ವಿಳಾಸಕ್ಕೆ ಬರೆ...

ಜೆ ಎಲ್ ಮೋರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್

ಸ್ಟೆಂಡಾರ್ಡ ಬಿಲ್ಡಿಂಗ್ ಹೋರ್ನ್ಬಿ ರೋಡ್ ಮುಂಬಯಿ

S No 68.

ಪುತ್ತೂರು ಡಿ ಮುನ್ಸಿಫ ಕೋರ್ಟಿನಲ್ಲಿ

O S 205/37

ಪರಮೇಶ್ವರಿ ಅಮ್ಮ ವಾದಿ

ತಿಮ್ಮಣ್ಣ ಭಟ್ಟ ಕೂಡಾ ಪ್ರತಿವಾದಿರು

ಸದ್ರಿ ವ್ಯಾಜ್ಯದ 1, 2, 3, 4ನೇ ಪ್ರತಿವಾದಿಗೆ ಇತರರಿಗೆ ಕೂಡಾ ಈ ಮೂಲಕ ತಿಳಿಸುವುದೇನಂದರೆ—

ಮೇಲ್ಕಂಡ ವ್ಯಾಜ್ಯದ ವ್ಯಾದೆಯು ಇದೇ ತಾ 31-8-37ಕ್ಕೆ ಇಟ್ಟಿದೆ ಆ ದಿವಸ 10 ಘಂಟೆಗೆ ಸರಿಯಾಗಿ ಸ್ವತಹ ಆಗಲಿ ವಕೀಲು ದ್ವಾರಾ ಆಗಲಿ ಹಾಜ್ರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲ್ಪಡುವದು ತಿಳಿದಿರಲಿ.

ಪುತ್ತೂರು,
11-8-37

C. S Shastry,
Vakil for Pltff

ಡಿಪ್ಟಿ ಕಲೆಕ್ಟರ ಮಗಳು

(ಲೇಖಕ:—ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)

[illegible]

ನಾನು ಕಾಗದವನ್ನು ಓದಿ ನೋಡಿದೆ—'ಮೋಹಿನಿಗೆ, ಅಣ್ಣನ ಆಶೀರ್ವಾದ. ನಿನ್ನ ಮತ್ತು ರಾಮುವಿನ ಕ್ಷೇಮಕ್ಕೆ ಬರೆಯುತ್ತ ಇರಬೇಕು. ನಾಳೆದು ಸೋಮವಾರ ನಮ್ಮೂರ ಜಾತ್ರೆ, ನೀನು ರಾಮುವನ್ನು ಕರಕೊಂಡು ಬರಬೇಕು. ಜತೆಗೆ ಬೇಕಾದರೆ ಭಾವಯ್ಯನವರನ್ನು ಕರಕೊಂಡು ಬಾ, ತಪ್ಪಬೇಡ. 'ಇತಿ ಮಾತುವ ಆಶೀರ್ವಾದ—ಅಣ್ಣ.'

ಪತ್ರವನ್ನು ಓದಿ ಸಿಟ್ಟು ನನ್ನ ತಲೆಗೇರಿತು '...... ನಿನ್ನ ಮತ್ತು ರಾಮುವಿನ ಕ್ಷೇಮಕ್ಕೆ ಬರೆಯಬೇಕು.' ಈ ಮಾತು ಬರೆಯಲಿಕ್ಕೂ ಧೈರ್ಯ ಬಂತೆ! ಹಾ! ಭಾವಯ್ಯನವರು ಜತೇಲಿ ಬರಲಿಕ್ಕೆ ಅವರು ಮೋಹಿನಿಯ ಕೂಲಿ ಆಳು! ಮೋಹಿನಿ ಕೂಡ ಬರಿ ಗಡಸುಗಾತಿ' 'ನಾನು ಹೋಗಲೆ?' ಎಂದು ವಿನೀತಳಾಗಿ ಗಂಡನನ್ನು ಕೇಳುವ ಬದಲಿಗೆ 'ನಾನು ಹೋಗುತ್ತೇನೆ.' ಎಂಬ ಸ್ವೇಚ್ಛಾ ಪ್ರದರ್ಶನೆಯ ಮಾತು! ಇಲ್ಲ, ಹೀಗೆಯೇ ಸಡಿಲು ಬಿಟ್ಟರೆ ಇವಳೂ ಅವರೂ ತಲೆಗೇರಿ ಬಿಟ್ಟಾರು ಮನುಷ್ಯನ ಸಹನಾಶಕ್ತಿಗೂ ಒಂದು ಮೇರೆ ಇದೆ

ಮೋಹಿನಿ, ನನ್ನ ಹೆಂಡತಿ, ಡಿಪ್ಟಿಕಲೆಕ್ಟರ ರಾವ್ ಸಾಹೇಬ ಸುಬ್ಬರಾಯರ ಮಗಳು ನನ್ನೊಟ್ಟಿಗೆ ಕಾಲೇಜು ತನಕ ಓದಿದವಳು. ಹೆಸರಿಗೆ ತಕ್ಕಂತೆ ರೂಪ, ಅದಕ್ಕೆ ತಕ್ಕ ಗುಣ ರಾಯರು ನನ್ನ ಯೋಗ್ಯತೆಯ ವಿಚಾರ ಮಾಡಿದರು ಎಷ್ಟು ಹಣ ಉಳಿಯುವುದೆಂದು ಆಲೋಚನೆ ಮಾಡಿದರು ಆ ಮೇಲೆ ಈ ಬಿಳಿ ಆನೆಯನ್ನು ನನ್ನ ಕುತ್ತಿಗೆಗೆ ಕಟ್ಟಿದರು ಅಳಿಯ ಮಗಳು ಬಹುಕಾಲ ತನ್ನಲ್ಲಿದ್ದರೆ ಚೆಂದ ಕಾಣೆಸದೆಂದು ಹೇಳಿ ಒಂದು ಪ್ರತ್ಯೇಕ ಮನೆ ಮಾಡಿಕೊಟ್ಟರು, ಆಫೀಸಿನಲ್ಲಿ ಒಂದು ಗುಮಾಸ್ತೆಯ ಕೆಲಸವನ್ನೂ ತೆಗೆಸಿ ಕೊಟ್ಟರು. ಖರ್ಚಿಗೆ ಸಾಲದಾಗ ನಾನು ಆಗಾಗ ಅವರಿಂದ 20 25 ರೂಪಾಯಿ ಸಾಲವಾಗಿ ತೆಗೆದು ಕೊಂಡುದಿದೆ ಅದನ್ನು ಇಷ್ಟರ ತನಕ ಹಿಂತಿರುಗಿಸಿಲ್ಲ ಅಷ್ಟು ಮಾತ್ರಕ್ಕೆ ಮಾವನವರು ಹೆಚ್ಚೇನು ಮಾಡಿದ ಹಾಗಾಯಿತು? ಅವರು ಅಳಿಯನ ಬಗ್ಗೆ ತಮ್ಮ ಕರ್ತವ್ಯ ಮಾಡಿ ಮುಗಿಸಿದ್ದಾರೆ, ಧರ್ಮ ಪಾಲನೆ ಮಾಡಿದ್ದಾರೆ ಆದರೂ ಇವರಿಗೆ ಮಾತ್ರ ನನ್ನ ಮೇಲೆ ತಿರಸ್ಕಾರ, ತಾತ್ಸಾರ ಅವಳಿಗೆ ತವರು ಮನೆಯ ದೊಡ್ಡಸ್ತಿಕೆಯ ಅಹಂಭಾವ ಅದನ್ನೊಮ್ಮೆ ಮುರಿದುಬಿಟ್ಟರೆ

'ನಾನು ಹೋಗುತ್ತೇನೆ' ಎಂದು ಮೋಹಿನಿ ಪುನಃ ಹೇಳಿದಳು.

'ಎಲ್ಲಿಗೆ?' ಎಂದು ನಾನು ಸ್ವಲ್ಪ ಗಟ್ಟಿಯಾಗಿ ಕೇಳಿದೆ

'ಎಲ್ಲಿಗೆಂದರೆ, ಗೊತ್ತಾಗುವದಿಲ್ಲವೆ? ತಾಯಿ ಮನೆಗೆ!'

'ಹೋಗದಿದ್ದರೆ ಆಗದೆ? ಮದುವೆಯಾಗುವ ಮೊದಲು 25 28 ವರ್ಷ ನೋಡಿದ್ದು ಸಾಕಲ್ಲ!'

'ಆ ಸಂಗತಿ ನಿಮಗೆ ಯಾಕೆ? ನಾನು ಹೋಗಲೇ ಬೇಕು'

'ಹೋಗದಿದ್ದರೆ?'

'ಇಲ್ಲ ತಾಯಿ ಮನೆಗೆ ಹೋಗದೆ ಬಹಳ ಕಾಲವಾಯಿತು ನಾನು ನಾಳೆಯೇ ಹೋಗುತ್ತೇನೆ'

'ನಿಜ! ಹೋಗದೆ ಬಹಳ ಕಾಲವಾಯ್ತು. 80 ದಿವಸ, ಎಳ್ನೂರು ಘಂಟೆ, ನಾಲ್ವತ್ತು ಸಾವಿರ ನಿಮಿಷ.'

'ನಿಮ್ಮ ನಿಂದೆಯ ಮಾತು ಸಾಕು ನಾನಾದ್ದರಿಂದ ಒಂದು ತಿಂಗಳು ಬಂದು ಒಂದು ತಿಂಗಳು ಹೋಗುತ್ತೆನೆಂದು ಇಟ್ಟುಕೊಳ್ಳಿ ಇನ್ನೊಬ್ಬಳಾಗಿದ್ದರೆ...'

'ಹೌದು, ಡಿಪ್ಟಿ ಕಲೆಕ್ಟರ ಮಕ್ಕಳಲ್ಲಿ ನೀನು ಸ್ವಲ್ಪ ನಾಸಿಯೆಂದು ನಿನ್ನನ್ನೇ ಮದುವೆಯಾದೆ, ಮೋಹಿನಿ.'

'ಮಾತುಮಾತಿಗೆ ಡಿಪ್ಟಿಕಲೆಕ್ಟರ ಹೆಸರು ತೆಗೆಯಬಾರದು, ಗೊತ್ತಾಯಿತೆ? ನೀವು ಎಷ್ಟೇ ಹೇಳಿ, ನಾನು ಹೋಗದೆ ಇರಲಾರೆ'

'ಹಾಗಾದರೆ ಹೋಗಿಬಿಡು, ಹೋಗಲಿಕ್ಕೆ ಹೊರಟ ನಿನ್ನನ್ನು ತಡೆಯುವ ಸಾಮರ್ಥ್ಯ ಯಾರಿಗಿದೆ? ಹೋಗಿಬಿಡು.'

'ಎಲ್ಲಿಗೆ?'

'ಎಲ್ಲಿಗೆಂದರೆ !'

'ನೋಡಿ, ಆಣೆ ಇಟ್ಟು ಹೇಳುತ್ತೇನೆ ಇಷ್ಟು ದಿನ ಹೀಗೆ ಮಾತನಾಡಿದ್ದಾಯಿತು ಇನ್ನು ಹಾಗೆ ಮಾತನಾಡಿದರೆ'

'ಏನು ಮಾಡುವಿ? ಫಿರ್ಯಾದಿ ಕೊಡುವೆಯಾ? ಒಳ್ಳೆ ಫೈಸಲ್ ಕೊಟ್ಟಾರು! ಅದಕ್ಕೂ ತಯ್ಯಾರಿದ್ದೇನೆ'

'ಯಾರು ಫೈಸಲೆ ಕೊಡುವವರು?' ಎಂದು ಮೋಹಿನಿ ಕಣ್ಣು ಕೆರಳಿಸಿ ಕೇಳಿದಳು

'ಯಾರೆಂದರೆ? ನಿನ್ನ ತಂದೆ'

ಹೀಗೆ ಮಾತನಾಡಿದರೆ ತನ್ನ ಆಟ ನಡೆಯುವದಿಲ್ಲವೆಂದೆಣಿಸಿ, ಸ್ವಲ್ಪ ಹತ್ತಿರಕ್ಕೆ ಬಂದು 'ನಾನು ಹೋಗಲೆ?' ಎಂದು ವಿನೀತಳಾಗಿ ಕೇಳಿದಳು

ಹತ್ತು ಘಂಟೆಯ ಸಮಯ ಆಗಲೇ ಮೀರಿ ಹೋಗಿದೆ ಆಫೀಸಿಗೆ ಹೋಗಲಿಕ್ಕೆ ಇನ್ನು ಒಂದು ತಾಸು ಮಾತ್ರ ಉಳಿದಿದೆ ಒಲೆಯ ಮೇಲೆ ಅನ್ನದ ಪಾತ್ರೆ ಇನ್ನೂ ಏರಿಸಿಲ್ಲ ಉಪಾಯದಿಂದ ಕೆಲಸ ಮಾಡಿಸಿಕೊಳ್ಳಬೇಕು—ಎಂದೆಣಿಸಿ ನಾನೂ ಸ್ವಲ್ಪ ಮೆತ್ತಗಾದೆ 'ಮೋಹಿನಿ, ಆಗಬಹುದು, ಎಂದು ಹೋಗುವೆ, ಮುದ್ದೂ?'

'ನಾಳೆಯೇ! ನೀವೂ ಬರಬೇಕು' ಎಂದು ಇನ್ನೂ ಸಮೀಪಕ್ಕೆ ಬಂದು ಹೇಳಿದಳು

'ಜತೆಗೆ ಬರಬೇಕೆ?'

'ಹೌದು'

'ಮೋಹಿನಿ ನನಗೆ ಆಫೀಸಿನಲ್ಲಿ ಈಗ ತುಂಬಾ ಕೆಲಸ ನಾನು ಬರಲಾರೆ, ಮುದ್ದು'

ಕೆಲಸವಿದ್ದರೆ ನೀವು ಅಲ್ಲಿ ನಿಲ್ಲುವದ ಬೇಡ ನನ್ನನ್ನು ಅಲ್ಲಿ ತನಕ ಮುಟ್ಟಿಸಿ ಹಾಗೆಯೇ ಬಂದು ಬಿಡಿ

ಅವಳ ಮಾತು ಕೇಳಿ ನಾನು ಹಲ್ಲು ಕಚ್ಚಿದೆ ತಲೆಯಲ್ಲಿ ನೆತ್ತರು ಕುದಿಯ ತೊಡಗಿತು ಆದರೂ ಅಂತರಂಗವನ್ನು ಬಹಿರಂಗ ಮಾಡದೆ—

'ಮೋಹಿನಿ, ನಾನು ಬರಲಾರೆ' ಎಂದೆ

'ಹಾಗಾದರೆ ನಾನೊಬ್ಬನೇ ಹೋಗುತ್ತೇನೆ ನನಗೆ ಖರ್ಚಿಗೆ ಕೊಡಿ'

ನಾನು ಮಾತನಾಡಲಿಲ್ಲ

'ಖರ್ಚಿಗೆ ಹತ್ತು ರೂಪಾಯಿ ಬೇಕು'

'ಮೋಹಿನಿ ಇವತ್ತು 15ನೇ ತಾರೀಕು ಪಗಾರ ಬರಲಿಕ್ಕೆ ಇನ್ನೂ ದಿನಗಳಿವೆ ಅದು ಕೂಡ ಒಂದೆರಡಲ್ಲ, ಹತ್ತು ರೂಪಾಯಿ ಏನು ಮಾಡಲಿ, ಮುದ್ದು?'

'ಎಲ್ಲಿಂದಾದರೂ ಸಾಲ ತನ್ನಿ'

'ತರಬಹುದಿತ್ತು, ಆದರೆ, ಮೋಹಿನಿ, ಈಗ ನನ್ನನ್ನು ಯಾರೂ ನಂಬುವದಿಲ್ಲವಲ್ಲ'

'ಅದೊಂದೂ ನನಗೆ ತಿಳಿಯದು ಹೇಗಾದರೂ ಮಾಡಿ ಹತ್ತು ರೂಪಾಯಿ ತರಲೇಬೇಕು'

ಆಗ ನಾನು ಮಾತನಾಡಲಿಲ್ಲ ಅವಳೂ ಸುಮ್ಮಗಿದ್ದಳು ಒಂದೆರಡು ಸೆಕುಂಡುಗಳ ತರುವಾಯ—ಏನೆಂದು ಆಲೋಚಿಸಿದರಿ?' ಎಂದು ಕೇಳಿದಳು.

ನಾನು ನಗುಮುಖದಿಂದ—'ನಿನಗೆ ಕೊಡದಿದ್ದರೆ ಆಗುತ್ತದೆಯೆ, ಮೋಹಿನಿ? ಹೇಗಾದರೂ ಮಾಡಿ ತರುತ್ತೇನೆ.' ಎಂದೆ

ಮೋಹಿನಿ ಒಂದು ಮನೋಹರವಾದ ಮುಗುಳ್ನಗೆಯನ್ನು ನಕ್ಕು ಚಂಚಲ ಕಟಾಕ್ಷವನ್ನು ಬೀರುತ್ತ ಹೇಳಿದಳು—'ರಾಮುವಿಗೆ ಒಂದು ಸ್ಯೆಲರ್ ಸೂಟು'

'ಹೂಂ'

'ಒಂದು ಹ್ಯಾಟು ಮತ್ತು ಕೋಟು'

'ನಿನಗೇನೂ ಬೇಡವೆ, ಮೋಹಿನಿ?'

'ಒಂದು ನೀಲದ ಕಂಠೀಸರ'

'ಮತ್ತೆ?'

'ಒಂದು ಜೋಡಿ ಕೊತ್ತಂಬರಿ ಬಳೆ'

'ಮತ್ತೆ?'

'ಒಂದು ಬೆಂಗಳೂರು ಸಿಲ್ಕ್ ಸೀರೆ'

'ನಿಜ, ನಿಜ ಡಿಪ್ಟಿ ಕಲೆಕ್ಟರ ಮಗಳು—ಮತ್ತೇನು ಬೇಕು ಮೋಹಿನಿ?' ಅವಳು ಸಂದೇಹಪಟ್ಟಳು 'ತಮಾಷೆ ಮಾಡುತ್ತೀರಾ? ನೋಡಿ, ತಮಾಷೆ ಗಿಮಾಷೆ ಮಾಡಬಾರದು ಸಾಧ್ಯವಿದ್ದರೆ ತರುತ್ತೇನೆ, ಅನ್ನಿ, ಇಲ್ಲವಾದರೆ, ಸಾಧ್ಯವಿಲ್ಲ, ಅನ್ನಿ ನಾನು ನಿಮ್ಮೊಡನೆ ಬೇಡಲಿಕ್ಕೆ ಬಂದಿಲ್ಲ!'

ಮೋಹಿನಿ ದೊಡ್ಡ ಮಾಯಾವಿನಿ, ಬೇಕಾದಾಗ ಬೇಕಾದಂತೆ ಬಣ್ಣ ಬದಲಾಯಿಸ ಬಲ್ಲಳು ಅವಳಿಗೆ ತಕ್ಕ ಗಂಡ ನಾನು! ಈ ಜತೆ ಸುಬ್ರಮಣ್ಯಕ್ಕೆ ಹೋದರೂ ಸಿಕ್ಕಲಿಕ್ಕಿಲ್ಲ

ನಾನು ಹೇಳಿದೆ—'ಮೋಹಿನಿ, ಹೇಗೂ ಸಾಲ ಮಾಡಬೇಕು ಅಂದ ಮೇಲೆ ಸ್ವಲ್ಪ ಹೆಚ್ಚಿಗೆ ಸಾಲ ಮಾಡಿಯಾದರೂ ನನ್ನ ಮನಸ್ಸಿನ ತೃಪ್ತಿ ಮಾಡೋಣ ಎಂದು. ಹೀಗಂದೆ ಡಿಪ್ಟಿ ಕಲೆಕ್ಟರ ಮಗಳು ತಾಯಿ ಮನೆಗೆ ಹೋಗುವಾಗ ಇಷ್ಟು ಸಾಲದು, ಮೋಹಿನಿ ಹೇಳು, ಮತ್ತೆ ಏನೆಲ್ಲ ಬೇಕ, ಹೇಳಿಬಿಡು ಮುದ್ದೂ

'ನನಗೆ ಇನ್ನೇನೂ ಬೇಡ

'ಒಳ್ಳೇದು

ಈ ಸಾಮಾನು ಯಾವಾಗ ತರುತ್ತೀರಿ?

ನೀನು ಹೋಗುವದು ನಾಳೆ ಎಂದಾದ ಮೇಲೆ ಈ ಹೊತ್ತೇ ತರಿಸಬೇಕು ಅಷ್ಟು ತಿಳಿಯದವನೆ, ನಾನ ಮೋಹಿನಿ?

ಅಲ್ಲ ಇಂಥ ವಿಷಯಗಳಲ್ಲಿ ನಿಮಗೆ ನೆನಪು ಸ್ವಲ್ಪ ಕಡಿಮೆ

ಹಾಂ'! ಅದನ್ನೇ ಹೇಳಲಿಕ್ಕಿದ್ದೆ ಇಗೋ! ಪೆನ್ಸಿಲು ಮತ್ತು ಕಾಗದ ತುಂಡು ತೆಗೆದುಕೊಂಡೆ ಹೇಳು, ಏನೆಲ್ಲ ಬೇಕೆಂದು ಪುನಃ ಒಂದು ಬಾರಿ ಹೇಳ, ಬರಕೊಳ್ಳುತ್ತೇನೆ

'ಅದೇ ಒಳ್ಳೇದು, ಬರಕೊಳ್ಳಿ —ಸ್ಯೆಲರ ಸೂಟು, ಹ್ಯಾಟು ಮತ್ತು ಬೂಟು, ನೀಲದ ಕಂಠೀಸರ, ತಂಬದ ಹಾರ, ಕೊತ್ತಂಬರಿ ಬಳೆ ಸಿಲ್ಕ್ ಸೀರೆ—ಬೆಂಗಳೂರಿನದು,

'ಮತೆ?'

'ಹತ್ತು ನಗದು ರೂಪಾಯಿಗಳು'

'ಸರಿ ಊಟಕ್ಕೆ ಆಗಿದೆಯೆ? ಇಲ್ಲವಾದರೆ ಮೋಹಿನಿ ಸ್ವಲ್ಪ ಬೇಗ ಬೇಗ ಅಡಿಗೆ ಮಾಡು'

'ಎಲ್ಲಾ ಹೊತ್ತು ನಮ್ಮ ಚರ್ಚೆಯಲ್ಲಿಯೆ ಹೋಯಿತು ಇಲ್ಲವಾದರೆ ಆಗಲೇ ಅಡಿಗೆಯಾಗುತ್ತಿತ್ತು ಈಗ ಆಫೀಸಿಗೆ ಹೋಗುವ ಸಮಯ ಆಯಿತಷ್ಟೆ? ಹೋಟೆಲಲ್ಲಿ ಒಂದಿಷ್ಟು ಕಾಫಿ ಕುಡಿದು ಹೋಗಿ, ರಾತ್ರಿ ಬಂದು ಊಟ ಮಾಡಬಹುದು!'

ನಾನು ಆಫೀಸಿಗೆ ಹೊರಟೆ. ಹೋಗುವಾಗ ಮೋಹಿನಿ ಪುನಃ—'ನೆನಪಿರಲಿ ತರಲಿಕ್ಕೆ ಮರೆಯಕೂಡದು ಎಂದು ಹೇಳಿ ನಡೆದಳು

ಕೃಷ್ಣಾಭವನದಲ್ಲಿ ಊಟ ತೀರಿಸಿ ನಾನು ಆಫೀಸಿಗೆ ಹೋದೆ. ಸಾಯಂಕಾಲ 'ಕಲಿತ ಹುಡುಗಿ'ಯ ಚಲಚಿತ್ರವನ್ನು ನೋಡಿ ಮನೆಗೆ ಬಂದೆ.

ಮೋಹಿನಿ ಕಾಲಿನಿಂದ ತಲೆಯ ತನಕ ನನ್ನನ್ನು ದಿಟ್ಟಿಸಿ ನೋಡಿದಳು.

ನಾನು ಹೇಳಿದೆ—'ಮೋಹಿನಿ, ನಾನು ಮೊದಲೆ ಹೇಳಿರಲಿಲ್ಲವೆ, ಆಫೀಸಿನಲ್ಲಿ ಕೆಲಸ ಬಹಳವಾಗಿದೆ ಎಂದು ಅಲ್ಲಿಂದ ಹೊರಬೀಳಬೇಕಾದರೆ ಇಷ್ಟು ಹೊತ್ತಾಯಿತು ನೀನು ಹೋಗುವದು ನಾಳೆ ಮಧ್ಯಾಹ್ನವಷ್ಟೆ ಬೆಳಗಾಗಬೇಕಾದರೆ.'

ಮಾತು ಮುಗಿಸಬೇಕಾದರೆ ಮೋಹಿನಿ ಅಡಿಗೆ ಕೋಣೆಗೆ ನಡೆದಳು

ನಾನು ಊಟಕ್ಕೆ ಕೂತುಕೊಂಡಾಗ ಪುನಃ ಹೇಳಿದೆ—'ಮೋಹಿನಿ, ಸಿಟ್ಟಾಗಬೇಡ ನಾಳೆ ಬೆಳಗಾಗಬೇಕಾದರೆ ಎಲ್ಲವೂ ಸಿದ್ಧ!'

'ನೀವು ತಂದು ಕೊಡದೆ ಇರಬೇಕು, ಆ ಮೇಲೆ ನೋಡಿ!' ಎಂದವಳು ಒಂದು ಮನೋಹರವಾದ ನಗೆಯನ್ನು ನಕ್ಕಳು. ಅವಳು ಹೇಳಿದಂತೆ ತಂದುಕೊಡಬಹುದಾಗಿದ್ದರೆ ಸ್ವರ್ಗದ ಸುಖವನ್ನೇ ಅನುಭವಿಸಬಹುದಾಗಿತ್ತೆಂದು ನನಗನ್ನಿಸಿತು

ಒಂಭತ್ತು ಹತ್ತು ಗಂಟೆಯಾದರೂ ನನ್ನ ಭಾಗದಲ್ಲಿ ಬರೆದಿರದ ಆ ಅನುದಿನದ ಕಾಫಿ ಮರುದಿನ ಬೆಳಗ್ಗೆ ನಾನು ಹಾಸಿಗೆಯಿಂದ ಏಳುವದನ್ನು ಕಾಯುತ್ತಿತ್ತು ಅದರ ಆವಿಯ ಬಿಸಿಯಿಂದ ನಾನು ಎಚ್ಚರವಾದೆ ಮೋಹಿನಿ ಬಂದು—'ಬೇಗನೆ ಕಾಫಿ ಕುಡಿದು ಪೇಟೆಗೆ ಹೋಗಿ ಬರುತ್ತಾ ಮೋಟರಿಗೂ ಹೇಳಿ ಬನ್ನಿ ಎಂದಳು ನಾನು ಅವಳ ಅಪ್ಪಣೆಯನ್ನು ಶಿರಸಾವಹಿಸಿ ಹೊರಟೆ ಬರುವಾಗ 11 45

ಮೋಹಿನಿ ಬಂದು ನನ್ನ ಬರೀ ಕೈ ಬರೀ ತಲೆ ನೋಡಿದಳು ಹೊರ ನೋಡಿದಳು, ಯಾರೂ ಇಲ್ಲ!

ಏನು, ತರಲಿಲ್ಲವೆ?' ಎಂದಳು

'ಮೋಹಿನಿ, ಮೋಹಿನಿ ನಾನು ಬರೆದು ತೆಗೆದುಕೊಂಡ ಆ ಪಟ್ಟಿ ಉಂಟಲ್ಲ, ಅದು ಎಲ್ಲಿಯೋ ಬಿದ್ದು ಹೋಗಿದೆ, ಮೋಹಿನಿ ಏನು ಮಾಡಲಿ ಮೋಹಿನಿ? ಮೂರು ನಾಲ್ಕು ಬಾರಿ ಅಲ್ಲಿಂದಲ್ಲಿಗೆ, ಇಲ್ಲಿಂದಲ್ಲಿಗೆ ತಿರುಗುವರೀ ಆಯಿತ ಮೋಹಿ! ಎಲ್ಲಿಯೂ ಸಿಕ್ಕಲಿಲ್ಲ ಮೋಹಿನಿ [illegible] ಬೇಡ ನಾನು ಪುನ ಬರಕೊಳ್ಳುತ್ತೇನೆ ಹೇಳು ಮೋಹಿನಿ ಹೂಂ, ಬೇಗ ಬೇಗ ನನಗೆ ಸ್ಯೆಲರಸೂಟು ರಾಮುವಿಗೆ ಕೊತ್ತಂಬರಿ ಮತ್ತೆ ಹೂಂ ಹೇಳ ನಿನಗೆ ಸೂಂತಿ

ಅಷ್ಟರಲ್ಲಿ ಬಸ್ಸು ಬಂದು ಒಂತು ಪೊಂ ಪೊಂ ಮಾಡಿತು ಮೋಹಿನಿ ಹೋಗಲಿಕ್ಕೆ ಸಿದ್ಧಳಾಗಿಲ್ಲ ನನ್ನ ಕಣ್ಣಸನ್ನೆ ನೋಡಿದ ಬಸ್ಸು ತನ್ನಷ್ಟಕ್ಕೆ ಮುಂದೆ ಹೋಯಿತು

ತಾಯಿ ಮನೆಗೆ ಜಾತ್ರೆಗೆ ಹೋಗಲಿಕ್ಕೆ ಅದ ಕಡೇ ಬಸ್ಸು ಅದು ಹೋಗಿ ಆಯಿತು ಇನ್ನು ಬಸ್ಸು ಇಲ್ಲ ಮೋಹಿನಿ ಅಲ್ಲೇ ಉಳಿದಳು

ಆಗ ಮೋಹಿನಿ ನಿಂತುಕೊಂಡ ರೀತಿ, ಆಗಿನ ಅವಳ ಮುಖ ಮುದ್ರೆ ಅದನ್ನೆಲ್ಲ ವರ್ಣಿಸಲಿಕ್ಕೆ ಸಾಧ್ಯವಿಲ್ಲ ಅಂಥ ಚಿತ್ರವನ್ನು ನೀವು ಒಂದಲ್ಲ ಒಂದು ದಿನ ನೋಡಿರಬಹುದು, ಅಥವಾ ನೋಡಬಹುದು ಆದರೆ ಅದು ಮೋಹಿನಿಯ ಆಗಿನ ಚಿತ್ರಕ್ಕೆ ಹೇಗೇಗೂ ಹೋಲಿ ಬರಲಿಕ್ಕಿಲ್ಲ ಈಗಲೂ ಆ ಚಿತ್ರ ನನ್ನ ಮನಸ್ಸಿನಲ್ಲಿ ನಲಿದಾಡುತ್ತಿದೆ ಅದನ್ನು ನೆನೆದು ನನಗೆ ನಗೆ ಬರುತ್ತದೆ, ಕನಿಕರವೂ ಆಗುತ್ತದೆ

ಅದಾದ ಮೇಲೆ ಮೋಹಿನಿ ನನ್ನೊಡನೆ ಮಾತನಾಡುವದು ಅಷ್ಟಷ್ಟೆ ಆಗಿದೆ ಆಲಾಪನೆಗೆ ಶ್ರುತಿ ಹಿಡಿದ ಹಾಗೆ ಅವಳ ಮಾತು, ಎಷ್ಟು ಬೇಕೋ ಅಷ್ಟು! ಈಗ ತಂದೆ ಮನೆಯ ಕಾಗದ ಬರುವದೂ ಕಡಿಮೆ, ಮೋಹಿನಿ ತಾನು ತವರು ಮನೆಗೆ ಹೋಗುತ್ತೇನೆನ್ನುವದೂ ಅಪರೂಪ

ಆ ಬಗ್ಗೆ ನನಗೆ ದುಃಖ ಇಲ್ಲ. ಸಾಲಗಾರರ ತಗಾದೆಯಿಂದ ಮಾವನ ಮನೆಗೆ ಹೋಗುವದು ತಪ್ಪಿತಲ್ಲ—ಅಷ್ಟೇ ಸಾಕು.

ಮಂತ್ರಿವರ್ಗರ ಉಪಯುಕ್ತತೆಯು ಗವರ್ನರರ ದಯೆದಾಕ್ಷಿಣ್ಯದ ಮೇಲೆ ಹೊಂದಿಕೊಂಡಿದೆ.

[illegible] ಟ್ಟಿನ ಪರಿಸ್ಥಿತಿಯು ಉಂಟಾದುದರಿಂದ, ಗವರ್ನರರ ವಿಶೇಷ ತರದ ಅಧಿಕಾರಗಳ ಕಡೆಗೆ, —ಅವರ ಸ್ವಂತ ಇಚ್ಛಾರ್ಥ ಮೇಲೆ ಕೆಲವು ಕರ್ತವ್ಯಗಳನ್ನು ನಡೆಯಿಸಲು—ಸಾರ್ವಜನಿಕ ದೃಷ್ಟಿಯು ಬಿದ್ದಿರುತ್ತದೆ ಆದರೆ ನೂತನ ಇಂಡಿಯಾ ಆಕ್ಟಿನಲ್ಲಿ ಗವರ್ನರರಿಗಿರುವ ಸಾಮಾನ್ಯ ಅಧಿಕಾರಗಳಿಂದಲೂ ಒಂದು ಪ್ರಾಂತ್ಯದ ಮಂತ್ರಿಮಂಡಲದ ಉಪಯುಕ್ತತೆಯು, ಅದು ಕಾಂಗ್ರೆಸ್ಸಾಗಿರಲಿ, ಅನ್ಯಪಕ್ಷವಾಗಿರಲಿ, ಗವರ್ನರರ ದಯೆದಾಕ್ಷಿಣ್ಯದ ಮೇಲೆ ಹೊಂದಿಕೊಂಡಿದೆ

ರಾಷ್ಟ್ರಾಭ್ಯುದಯವಾಗಲಿ, ದೇಶೋದ್ಧಾರವಾಗಲಿ, ಮಂತ್ರಿಮಂಡಲದೊಡನೆ ಸಾಕಷ್ಟು ಹಣವಿರಬೇಕು ಅಲ್ಲದೆ, ಜಾರಿಯಲ್ಲಿರುವ ಹಾನಿಕರವೆನಿಸುವ ಕ್ರಮಗಳನ್ನು ರದ್ದುಗೊಳಿಸುವ ಯಾ ಸರಿಪಡಿಸುವ ಅಧಿಕಾರವು ಅವರಿಗಿರಬೇಕು ಅಗತ್ಯ ಬಿದ್ದರೆ ದೇಶಹಿತಕ್ಕಾಗಿ ನೂತನ ಕ್ರಮಗಳನ್ನು ಜಾರಿಮಾಡುವ ಅಧಿಕಾರವು ಅವರಿಗೆ ಇರಬೇಕು

ಮಂತ್ರಿಮಂಡಲಕ್ಕೆ ಬೇಕಾದಷ್ಟು ಹಣ ದೊರಕುವ ವ್ಯವಸ್ಥೆಯಿದೆಯೆ?

'ಪ್ರಾಂತ್ಯಕೀಯ ಸರಕಾರಗಳಿಗೆ ಸರಿಯಾದ ಆರ್ಥಿಕ ವ್ಯವಸ್ಥೆಯು ಏರ್ಪಾಡಾಗಲಿಲ್ಲವೆಂದು ಸಾಧಾರಣ ಎಲ್ಲಾ ರಾಜಕೀಯ ಪುರುಷರ ದೂರಾಗಿರುತ್ತದೆ

ಅವರು ರಾಷ್ಟ್ರಾಭ್ಯುದಯಕ್ಕೆ ಬೇಕಾದ ಹಣವನ್ನು, ಕಡಿತ, ಮಿತವ್ಯಯ, ರೂಢಿಯಲ್ಲಿರುವ ಕಂದಾಯ ತೆರಿಗೆಗಳನ್ನು ಹೆಚ್ಚಿಸುವುದು, ನೂತನ ತೆರಿಗೆಗಳನ್ನು ವಿಧಿಸುವುದ, ಇವುಗಳಿಂದ ಕೂಡಿಸಬಹುದು ಆದರೆ, ಗವರ್ನರರು ದಯೆತೋರದಿದ್ದರೆ ಇವುಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ

ನೂತನ ಇಂಡಿಯಾ ಆಕ್ಟಿನಿಂದ ಅನೇಕ ಮಾರ್ಪಾಟುಗಳಾಗಿವೆಯೆಂದ ತೋರಿಸಲ್ಪಟ್ಟದ್ದರೂ, ಪ್ರಾಂತ್ಯಗಳ ಆರ್ಥಿಕ ವಿಚಾರದಲ್ಲಿ ಗವರ್ನರರಿಗೆ ಹೆಚ್ಚಿನ ಅಧಿಕಾರವು ದೊರಕಿರುತ್ತದೆ—ಕಾಪಾಡಲ್ಪಟ್ಟ ಹಿತಗಳ ಮತ್ತು ಇನ್ನಿತರ ರೂಪಗಳಲ್ಲಿ ಇಂಡಿಯಾ ಆಕ್ಟಿನಲ್ಲಿ ನಮೂದಿಸಲ್ಪಟ್ಟಂತೆ ಒಂದು ಪ್ರಾಂತ್ಯದಲ್ಲಿ ವೆಚ್ಚ ಮಾಡಲು ಧಾರಾಳ ಹಣವು ಬೇಕಾಗಿದೆ —ಹೆಚ್ಚಿನ ತಲಬು ದೊರಕುವ ಉದ್ಯೋಗಸ್ಥರನ್ನು ನೇಮಿಸುವ ಅಧಿಕಾರವು ಇಂಡಿಯಾ ಸೆಕ್ರಟರಿಯವರದು ಅವರ ತಲಬು ನಿರ್ಣಯ, ಭತ್ತೆ ನಿರ್ಣಯ, ರಜಾಕ್ರಮ ಇತ್ಯಾದಿ ಎಲ್ಲವೂ ಅವರ ಕೈಯಲ್ಲಿರುತ್ತದೆ ಅವರ ತಲಬಿನ ಮೇಲೆ ಕಡಿತ ತರುವ ಅಧಿಕಾರವು ಮಂತ್ರಿಮಂಡಳಲಿಕ್ಕಿಲ್ಲ. ಮಂತ್ರಿವರ್ಯರ ಕಡಿಮೆ ತಲಬನ್ನು ಪಡೆದು ಹಣವನ್ನು ಉಳಿಸಬೇಕು ಅವರ ಪಾರ್ಲಿಮೆಂಟರಿ ಕಾರ್ಯದರ್ಶಿಯವರ ತಲಬನ್ನು ಕಡಿಮೆ ಮಾಡಬಹುದು. ಅವರಿಂದ ನೇಮಕರಾದ ಎಡ್ವೊಕೇಟ ಜನರಲರಿಗೆ ಅವರಷ್ಟು ಕಡಿಮೆ ತಲಬನ್ನು ಕೊಡಬಹುದು. ಆದರೆ ಅವುಗಳಿಂದ ಹೆಚ್ಚಿನ ಉಳಿತಾಯವಾಗದು.

ಗವರ್ನರರು ದಯೆತೋರಿ, ಇಂಡಿಯಾ ಆಕ್ಟಿನ ಪ್ರಕಾರ ಆಗಬೇಕಾದ ವ್ಯಯಗಳನ್ನು ಕಡಿಮೆಮಾಡಲು ಸಮ್ಮತಿಸಿದರೆ ಮಾತ್ರ ಅವರು ಸಮ್ಮತಿಸಿದ ಮಟ್ಟಿಗೆ, ಆ ಖರ್ಚುಗಳಿಗೆ ಕಡಿತ ಹಾಕಬಹುದು

ನೂತನ ಇಂಡಿಯಾ ಆಕ್ಟಿನ ೭೮ನೆ ಕ್ರಮದ ಪ್ರಕಾರ ಆಗಬೇಕಾದ ವ್ಯಯದ ಕುರಿತು ಮಂತ್ರಿಮಂಡಳಕ್ಕೆ ಯಾವತ್ತೂ ಅಧಿಕಾರಗಳಿರುವುದಿಲ್ಲ. ಅಲ್ಲದೆ ಎಸೆಂಬ್ಲಿಯು ಕಡಿತಕ್ಕೊಳಗಾದ ವ್ಯಯಗಳಿಂದ ತಮ್ಮ ಇಚ್ಛಾರ್ಥದ ಪ್ರಕಾರ ಕಡಿತಗಳನ್ನು ತೆಗೆದುಹಾಕುವ ಅಧಿಕಾರವು [illegible] ಗವರ್ನರರು ತಮ್ಮ ಇಚ್ಛಾರ್ಥದ ಮೇಲೆ ಹೊಂದಿಕೊಂಡು ಹೊಸ ಗ್ರಾಂಟುಗಳನ್ನು ಕೇಳಬಹುದು.

ಯಾವತ್ತು ತೆರಿಗೆಗಳನ್ನು ಹೆಚ್ಚಿಸುವುದಾಗಲಿ, ಹೊಸ ತೆರಿಗೆಗಳನ್ನು ಹೊರಿಸುವುದಾಗಲಿ ಸಾಲಗಳನ್ನು ಕರೆಯುವುದಾಗಲೀ ಇವೆಲ್ಲಕ್ಕೂ ಗವರ್ನರರ ಸಮ್ಮತವು ದೊರಕಬೇಕು

ಇತರ ಸಾಮಾನ್ಯವಾದ ಲೆಜಿಸ್ಲೇಟಿವ್ ವಿಚಾರಗಳಲ್ಲಿ ಯಾವತ್ತೂ ಪ್ರಾಂತ್ಯಕೀಯ ಅಸೆಂಬ್ಲಿಗಳಿಗೆ ಕೊನೆಯ ಇಚ್ಛಾರ್ಥವಾಡುವ ಅಧಿಕಾರವಿರುವುದಿಲ್ಲ ಕೊನೆಯ ಇಚ್ಛಾರ್ಥವು ಗವರ್ನರರಲ್ಲಿ ಮತ್ತು ವೈಸ್ರಾಯರಲ್ಲಿ ಕೂಡಿದೆ ಆದುದರಿಂದ ರಾಷ್ಟ್ರದ ಹಿತಸಾಧಿಸುವ ಕ್ರಮಗಳು ಗವರ್ನರರು ಮತ್ತು ವೈಸ್ರಾಯರು ಕೃಪೆದೋರಿದರೆ ಮಾತ್ರ ಜಾರಿಯಾಗಬಹುದು. ಅವರ ಇಚ್ಛಾರ್ಥಗಳಿಗೆ ಎದುರುನುಡಿಯುವ ಅಧಿಕಾರವು ಪ್ರಾಂತಕೀಯ ಅಸೆಂಬ್ಲಿಗಳಿಗಿಲ್ಲ ಹೀಗಿರುವಾಗ, ನಿರಕ್ಷತೆ ನಿವಾರಣೆ, ಮದ್ಯನಿಷೇದ, ಗ್ರಾಮಾಭ್ಯುದಯ, ಹರಿಜನಸೇವೆ, ರೈತರ ಗೋಳು ನಿವಾರಣೆ ಇತ್ಯಾದಿ ರಾಷ್ಟ್ರಕ್ಕೆ ಹಿತಕರವೆನಿಸುವ—ಕಾಂಗ್ರೆಸ್ಸ್ ವಿರಚಿತ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಯಿಸಬಹುದೊ

'ನಿರಕ್ಷತೆಯನ್ನು ಹತ್ತು ವರ್ಷಗಳೊಳಗೆ ನಾಶಪಡಿಸಬಹುದು ಸಂಪೂರ್ಣ ಮದ್ಯನಿಷೇದವನ್ನು ಐದು ವರ್ಷಗಳೊಳಗೆ ಸಾಧಿಸಬಹುದು' ಇದು 'ಕಾಂಗ್ರೆಸು ಮಂತ್ರಿಮಂಡಳಗಳು' ಎಂಬ ಗಾಂಧಿಯವರ ಲೇಖನವನ್ನು ವೀಕಿಸಿ ಪ್ರಸಿದ್ಧ ಸಂಪತ್ತಶಾಸ್ತ್ರಜ್ಞರಾದ ಪ್ರೊ ಕೆ ಟಿ ಶಾ ರವರು ಬರೆದ ಲೇಖನದ ಅಭಿಪ್ರಾಯವಾಗಿರುತ್ತದೆ ಮಹಾತ್ಮಾಜಿಯವರ ಆಹ್ವಾನ ಮೇರೆಗೆ ಬ್ರಿಟಿಷ ಹಿಂದೂದೇಶದ ಅಬ್ಕಾರಿ ಉತ್ಪತ್ತಿಯು ರೂ ೧೫ ಕೋಟಿ, ವಿದ್ಯಾಭ್ಯಾಸಕ್ಕಾಗಿ ವ್ಯಯ ರೂ ೧೨ ಕೋಟಿ ಮದ್ಯನಿಷೇದದಿಂದ ೧೫ ಕೋಟಿ ರೂಪಾಯಿ ಉತ್ಪನ್ನ ನಷ್ಟವನ್ನು ಬೇರೆ ವಿಧಗಳಲ್ಲಿ ತುಂಬಿಸಬೇಕು ವಿದ್ಯಾಖಾತೆಯ ಅಧಿಕಾರಿಗಳಿಗೆ ದೊರಕುವ ಹಿರಿದಾದ ತಲಬುಗಳನ್ನು ಕಾಂಗ್ರೆಸ್ ನಿಯಮಕ್ಕೆ ಸರಿಯಾಗಿ ಇಳಿಸುವದೇ ಪ್ರಥಮ ಸಾಧನೆಯು ನೂರಕ್ಕೆ ಮಿಕ್ಕಿದ ತಲಬುಗಳನ್ನು ಸ್ವೀಕರಿಸುವವರು ತಮ್ಮಷ್ಟಕ್ಕೆ ತಾವೇ ಕಡಿತಕ್ಕೆ ಸಿದ್ಧರಾಗಬೇಕು—ಶೇ ೫೦ರ ಸೆಲೆಯಿಂದ ೧೦೦ ಸೆಲೆ ವರೆಗೆ ನೂತನ ಇಂಡಿಯಾ ಆಕ್ಟಿನಿಂದ ರಕ್ಷಿಸಲ್ಪಟ್ಟ ಆಂಗ್ಲೇಯ ಆಫೀಸರರು ಇದಕ್ಕೆ ಸಮ್ಮತಿಸದಿದ್ದರೆ, ದೇಶಹಿತಕ್ಕಾಗಿ ಭಾರತೀಯ ವರ್ಗವಾದರೂ ಅರ್ಪಣೆಯನ್ನು ಮಾಡಬಹುದು ಹಾಗೆ ಕಡಿತಕ್ಕೆ ಸಿದ್ಧರಾಗದ ಭಾರತೀಯರ ಮೇಲೆ ಸಾಮಾಜಿಕ ತರದ ಒತ್ತಾಯಗಳಿಂದ ಕೂಡಿದ ಯತ್ನಗಳು ನಡೆಯಬೇಕು

ಈ ತರದಲ್ಲಿ ೩ರಿಂದ ೪ ಕೋಟಿ ರೂಗಳ ವರೆಗೆ ಉಳಿಸಬಹುದೆಂದು ಪ್ರೊ. ಶಾರವರ ಅಭಿಪ್ರಾಯವಾಗಿರುತ್ತದೆ.

ನಿರಕ್ಷರತೆಯನ್ನು ನಾಶಗೊಳಿಸುವ ಕುರಿತು "ಹತ್ತು ವರ್ಷದ ಯೋಜನೆ" ಬಗ್ಗೆ ರೂ ೫೦ ಕೋಟಿ ಬೇಕು ಈ ಹೆಚ್ಚಿನ ವ್ಯಯಕ್ಕೆ ಬೇಕಾದ ಹಣವನ್ನು ಹೇಗಾದರೂ ಗಳಿಸಬೇಕು ಮೆಟ್ರಿಕ್ ಪರೀಕ್ಷೆಯನ್ನು ಪಾಸಾಗುವ ಪ್ರತಿಯೋರ್ವ ಯುವಕನು ಒಂದು ವರ್ಷದ ತನಕ ನಿರಕ್ಷರತೆ ನಿವಾರಣೆಗಾಗಿ ಹಳ್ಳಿಗಳಲ್ಲಿ ಧರ್ಮಾರ್ಥವಾಗಿ ಶ್ರಮವಹಿಸುವಂತೆ ಒಂದು ಕ್ರಮವನ್ನು ಹೊರಡಿಸಬೇಕು. ಪಾಶ್ಚಾತ್ಯ ಇತ್ಯಾದಿ ದೇಶಗಳಲ್ಲಿ ಯುದ್ಧ ಸಮಯದಲ್ಲಿ ದೇಶದ ಪ್ರತಿಯೋರ್ವ ತರುಣನು ಸೈನಿಕನಾಗಿ ಸಿದ್ಧನಾಗುವಂತೆ ವಿಜ್ಞಾಪನೆಗಳನ್ನು ಹೊರಡಿಸುವ ರೀತಿಯಲ್ಲಿ, ಸಮಾಜಸೇವೆಗಾಗಿ ಹಿಂದೂದೇಶದಲ್ಲಿ

ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸಿನ ಧೋರಣೆ ಮತ್ತು ಕಾರ್ಯಕ್ರಮಗಳು.

ಮದ್ರಾಸಿನ ಶ್ರೀ ಸತ್ಯಮೂರ್ತಿಯವರು ಈ ಕುರಿತು, ಈ ಕೆಳಗಿನ ಅಭಿಪ್ರಾಯಗಳನ್ನೊಳಗೊಂಡ ಒಂದು ಲೇಖನವನ್ನು ಕಲ್ಕತ್ತದ 'ಮೊಡರ್ನ್ ರಿವ್ಯೂ' ಎಂಬ ಪತ್ರಿಕೆಯಲ್ಲಿ ಬರೆದಿರುವರು.

ಶ್ರೀ ಸತ್ಯಮೂರ್ತಿಯವರು

ಮುಂದಿನ ಸ್ವಾತಂತ್ರ್ಯಹೋರಾಟವು ಕಡೆಯದಾಗುವಂತೆಯೂ, ಅದರಿಂದ ಸ್ವಾತಂತ್ರ್ಯವನ್ನು ಪಡೆಯಲು, ಅತ್ಯಂತ ಪರಿಣಾಮಕಾರಿಯಾಗುವಂತೆಯೂ ಭಾರತೀಯರಿಗೆ ಅವಕಾಶವಿರುವ ಯಾವತ್ತು ಶಾಸನ ಸಭೆಗಳಲ್ಲಿನ ಎಲ್ಲಾ ಪೀಠಗಳು ಕಾಂಗ್ರೆಸ್ ವಾದಿಗಳಿಂದ ಅಲಂಕರಿಸಲ್ಪಡಬೇಕು ಆಗ ಹಿಂದೀಯ ಪ್ರತಿನಿಧಿಗಳ ತಾವೇನೆಂದ ಹೇಳುವ ಅವಕಾಶವು ಕಪಟ ಜನರಿಗೆ ದೊರೆಯದು ಎಂದು ನಾನು ಧೈರ್ಯದಿಂದ ಹೇಳಬಲ್ಲೆನು ಈಗಿರುವ ಮತದಾರರ ಪಟ್ಟಿ [illegible] ನಮ್ಮ ಸ್ವಾತಂತ್ರ್ಯಹೋರಾಟಕ್ಕೆ ಪ್ರತಿಯೋರ್ವ ಭಾರತೀಯನ ಬೆಂಬಲವು ಬೇಕು. ನಮ್ಮ ಶಾಸನಸಭೆಗಳ ಮೂಲಕ ಬ್ರಿಟಿಷರಿಗೂ, ಜಗತ್ತಿನ ಇನ್ನಿತರ ಜನಾಂಗಗಳಿಗೂ ವ್ಯಕ್ತಪಡಿಸಬೇಕು. ಎಲ್ಲಾ ಪ್ರಾಂತ್ಯಗಳ ಶಾಸನ ಸಭೆಗಳನ್ನು ಸೇರಿದ 'ಕಾಂಗ್ರೆಸ್ ವಾದಿ'ಗಳು ಕಾಂಗ್ರೆಸ್ಸು ಬಲಶಾಲಿಯಾಗುವಂತೆಯೂ, ಹಿಂದೂ ದೇಶದ ಏಕಮಾತ್ರ ಸಂಸ್ಥೆಯಾಗುವಂತೆಯೂ, ದುರ್ಧರವಾಗುವಂತೆಯೂ ಸಾಧಿಸಬೇಕು. ಇದರ ನಂತರ ಬೇರೆ ವಿಚಾರಗಳು.

ಸರಕಾರದ ಆಡಳಿತದಲ್ಲಿ ಮಿತವ್ಯಯ ಮತ್ತು ಸರಳತೆಯು ಕಾಂಗ್ರೆಸ್ ಮಂತ್ರಿಮಂಡಳಗಳಿಂದ ರೂಢಿಗೆ ಬರಬೇಕು ಅವರು ರೂ ೫೦೦ರ ತಲಬು ಮತ್ತು ಕೆಲವು ಅಲ್ಪ ಭತ್ತೆಗಳನ್ನು ಮಾತ್ರ ಪಡೆಯಬೇಕು ತಾವು ಸಾರ್ವಜನಿಕ ಸೇವಕರೆಂಬ ಭಾವನೆಯು ಅವರಲ್ಲಿರಬೇಕು ವಿಜೃಂಭಣೆಯ ಸ್ವಾಗತಗಳನ್ನು ಅವರು ತಿರಸ್ಕರಿಸಬೇಕು ಅವರ ಬೇಟಿಯು ಎಲ್ಲರಿಗೂ ದೊರೆಯ ನಂತಾಗಬೇಕು ಅವರು ಪರಿಶುದ್ಧವಾದ ಖಾದಿಯನ್ನೇ ಧರಿಸಬೇಕು ಅದರಿಂದ ಆಡಳಿತದ ಸುಧಾರಣೆಯಾಗುವುದು

ಅವರಿಂದ ಆಡಳಿತಕ್ರಮದಲ್ಲಿ ಸ ಧಾರಣೆಗಳಾಗಬೇಕು, ಕಾರಾಗೃಹಗಳ ಸುಧಾರಣೆಯಾಗಬೇಕು. ಸರಕಾರಿ ಇಲಾಖೆಗಳಲ್ಲಿರುವ ಕೆಟ್ಟ ಕುತನದ ನಾಶವಾಗಬೇಕು ಕೋಮುವಾರು ಭಾವದ ಬದಲಾಗಿ ರಾಷ್ಟ್ರೀಯ ಭಾವವು ಉಂಟಾಗಬೇಕು—ಇವುಗಳು ಅವರು ಕೈಕೊಳ್ಳಬೇಕಾದ ಸುಧಾರಣೆಗಳು ಗ್ರಾಮ ಕೈಗಾರಿಕೆಗಳಿಗೆ ಅತ್ಯಂತ ಪ್ರೋತ್ಸಾಹ ದೊರಕುವಂತೆ ಅವರು ಸಾಧಿಸಬೇಕು. ಮುಖ್ಯವಾಗಿ ಖಾದಿಗೆ. ಸರಕಾರಕ್ಕೆ ಬೇಕಾದುದನ್ನೆಲ್ಲಾ ಹಿಂದೂದೇಶದಲ್ಲೇ ಪಡೆಯ ಬೇಕು ಸರಕಾರೀ ನೌಕರರಿಗೆ ಯೂನಿಫೋರ್ಮ ಗಳನ್ನು ಕೊಡುವದಿದ್ದಲ್ಲಿ ಅದಕ್ಕೆ ಖಾದಿಯು ಉಪಯೋಗವಾಗಬೇಕು ಸರಕಾರದ ಉಪಯೋಗಕ್ಕೆ ಗ್ರಾಮದಲ್ಲಿ ತಯಾರಾದ ವಸ್ತುಗಳನ್ನೆ ಪ್ರೋತ್ಸಾಹಿಸಬೇಕು

ಪ್ರಾಂತ್ಯಗಳ ಆರ್ಥಿಕ ವಿಚಾರದ ಕುರಿತು ಸುವ್ಯವಸ್ಥೆಗಳಾಗಬೇಕು ಆರ್ಥಿಕ ಪುನರ್ವ್ಯವಸೆ ಆಗದ ವಿನಹ ಪ್ರಾಂತೀಯ ಸ್ವಯಂಪ್ರಭುತ್ವವು ಯಶಸ್ವಿಯಾಗಿ ನಡೆಯದು ಅತಿರೇಕವಾದ ಮಿಲಿಟರಿ ವೆಚ್ಚ, ಅತ್ಯಂತ ವೆಚ್ಚಕಗಲುವ ಸಿವಿಲ್ ನೌಕರ ವರ್ಗ—ಇವುಗಳ ಸಂಖ್ಯೆಯನ್ನೂ ತಲಬನ್ನೂ ಕಡಿಮೆಮಾಡಬೇಕು ಎಲ್ಲಾ ತರದ ವೆಚ್ಚಗಳಲ್ಲಿ ಮಿತವಾಗಬೇಕು ಹಣವನ್ನುಂಟುಮಾಡದ ವಿನಹ, ಹೆಚ್ಚಿನದನ್ನು ಪಡೆಯಲು ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಸಾಧ್ಯವಿಲ್ಲ ನಮ್ಮ ರಚನಾತ್ಮಕ ಕಾರ್ಯಕ್ರಮಕ್ಕೆ ಧಾರಾಳವಾದ ಹಣಬೇಕಾಗಿದೆ ರಚನಾತ್ಮಕ ಕಾರ್ಯಕ್ರಮಗಳಿಗಾಗಿ, ದೊಡ್ಡ ಪ್ರಾಂತ್ಯಗಳಲ್ಲಿ ವರ್ಷಕ್ಕೆ ರೂ ೫, ೬ ಕೋಟಿಗಳ ವೆಚ್ಚವೂ ಸಣ್ಣ ಪ್ರಾಂತ್ಯಗಳಲ್ಲಿ ೩ರಿಂದ ೪ ಕೋಟಿ ರೂಪಾಯಿಗಳ ವೆಚ್ಚವೂ ಮಾಡಬೇಕಾಗುವುದು ಈ ತರದಲ್ಲಿ ೧೦ ವರ್ಷಗಳ ತನಕ ನಡೆಸಬೇಕು ಆಗ ಪ್ರಾಥಮಿಕ ವಿದ್ಯಾಭ್ಯಾಸ, ಗ್ರಾಮಾಭ್ಯುದಯ, ಕೈಗಾರಿಕೆಗಳ ಉದ್ಧಾರ ಮಾಡಿದ್ದೇವೆಂದು ಧೈರ್ಯದಿಂದ ಹೇಳಬಹುದು

ಇತರ ದೇಶಗಳಲ್ಲಿ ಶ್ರೀಮಂತರಿಂದ ಕಂದಾಯ ತೆತ್ತಂತೆ, ಶ್ರೀಮಂತರಿಂದ ಹೆಚ್ಚಿನ ಕಂದಾಯ ಪಡೆಯುವ ಕ್ರಮಗಳು ನಮ್ಮಲ್ಲಿಲ್ಲ. ಅಲ್ಲದೆ, ಸಾರ್ವಜನಿಕ ಉಪಯುಕ್ತತೆಯ ಸಂಸ್ಥೆಗಳು ಸರಕಾರದಿಂದಲೇ ನಡೆಸಲ್ಪಟ್ಟು, ಅದರಿಂದ ಲಾಭಪಡೆಯುವಂತಾಗಬೇಕು: ಅಲ್ಲದೆ ಹಣ ಗಳಿಸುವ ಇತರ ಉಪಾಯಗಳನ್ನು ಹುಡುಕಬೇಕು. ಸರಕಾರಿ ಉದ್ಯೋಗಸ್ಥರಿಗೆ ರೂಪಾಯಿ ೫೦೦ಕ್ಕೆ ಮಿಕ್ಕಿದ ತಲಬನ್ನು ಕೊಡಲು ನಮ್ಮಿಂದ ಸಾಧ್ಯವಿಲ್ಲ. ಭೂಕಂದಾಯ ಸಮಸ್ಯೆಯು ಮತ್ತೊಮ್ಮೆ ಪರೀಕ್ಷಿಸಲಾಗಿ ಪುನರ್ವ್ಯವಸ್ಥೆ ಹೊಂದಬೇಕು. ಸಾಗುವಳಿ ಉತ್ಪತ್ತಿಯ ಮೇಲೆ ತೆರಿಗೆಯನ್ನು ಹೊರಿಸಬೇಕು. ಮದ್ಯನಿಷೇಧವು ನಡೆಯಬೇಕು. ಇದರಿಂದ ಧಾರಾಳ ಆದಾಯವು [illegible]

ಆ ತರದ ವಿಜ್ಞಾಪನೆಗಳನ್ನು ಹೊರಡಿಸಿ ಆ ಕುರಿತು ಇತರ ಜನಾಂಗಗಳಿಗ ನಮ್ಮಿಂದ ಒಂದ ಮೇಲ್ಪಂಕ್ತಿ ಹಾಕಲ್ಪಡಬೇಕ

ಹಾಗೆ ಕಾರ್ಯ ನಿರ್ವಹಿಸಲು ಮುಂದೆ ಬರುವ ಯುವಕರಿಗೆ ಸರಕಾರದ ಖರ್ಚಿನಲ್ಲಿ ಊಟ ಕೊಡುವ ಏರ್ಪಾಡಾಗಬೇಕು ಈ ಖರ್ಚು ತಲಾ ಒಂದು ವರ್ಷ ಒಂದರ ರೂ ೫೦ಕ್ಕೆ ಮಿಕ್ಕಬಾರದು ಹಳ್ಳಿಗರು ಸಹಕರಿಸುವುದಾದರೆ, ಈ ಖರ್ಚು ಇನ್ನಷ್ಟು ಕಡಿಮೆಯಾಗಬಹುದು

ರಷ್ಯದಲ್ಲಿ ಒಬ್ಬನು ಕೊಮ್ಯುನಿಸ್ಟ ಮತಕ್ಕೆ ವಿರೋಧವಾಗಿ ಲಾಭವನ್ನು ಗಳಿಸುವನಾದರೆ, ಅವನ ಮೇಲೆ ಮಿತಿಮೀರಿದ ತೆರಿಗೆಗಳನ್ನು ಹೊರಿಸಿ, ಅತನ ಮೇಲೆ ಒಂದು ತರದ ಸಾಮಾಜಿಕ ಬಹಿಷ್ಕಾರವನ್ನು ತರಲಾಗುವುದು ಮೇಲೆ ಸೂಚಿಸಿದ ಸಮಾಜಸೇವೆಯನ್ನು ಕೈಕೊಳ್ಳಲು ಸಮ್ಮತವಿಲ್ಲದ ಯುವಕರ ಮೇಲೆ ಈ ತರದ ಕ್ರಮಗಳನ್ನು ಹೊರಿಸಿ, ಅವರು ಸಮಾಜಸೇವೆ ಕೈಕೊಳ್ಳುವಂತೆ ಮಾಡಬೇಕು ಈ ತರದಲ್ಲಿ ವಿದ್ಯಾಪ್ರಚಾರಕ್ಕೆ ಬೇಕಾದ ಖರ್ಚನ್ನು ಕಡಿಮೆ ಮಾಡಬಹುದು. ನಮ್ಮಲ್ಲಿನ ನಿರಕ್ಷರತೆಯನ್ನು ಸಂಪೂರ್ಣವಾಗಿ ನಾಶಗೊಳಿಸುವ ಉದ್ದೇಶವನ್ನು ಬೇಗನೇ ಸಾಧಿಸಬಹುದು.

ಅವೇ ಮೊದಲಾದುವುಗಳು ಪ್ರೊ। ಶ್ಯಾರವರ ಸೂಚನೆಗಳು. ಇವುಗಳಿಗೆ ಮಹಾತ್ಮಾಜೀಯವರ ಒಡಂಬಡಿಕೆಯು ಇರುವುದು.

([illegible])

ಅನುಕ್ರಮಣಿಕೆ

ಅಗ್ರಲೇಖ
ಸಂಬಳ ೧೦
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು ೧೧
ಬೆಂಗಳೂರು ಸಮಾಚಾರ ೧೪
ತಾಲೂಕುಗಳಿಂದ

ಸ್ವದೇಶಾಭಿಮಾನಿ

ತಾ.೧೩ನೇ ಶುಕ್ರವಾರ ಆಗೋಸ್ಟು ೧೯೩೭

ಸಂಬಳ

ಸರಕಾರದ ಹುದ್ದೆದಾರರ ಸಂಬಳವನ್ನು ಇಳಿಸಬೇಕೆಂದು ಈಗ ಕೊಂಗ್ರೆಸ್ ಮಂತ್ರಿ ಮಂಡಲಗಳು ವಾಶಿತ್ತಿರುವುದು. ಅವರು ಅಧಿಕಾರಿಗಳಾಗಿ ಬಂದಿರುವರೆಂಬ ಹೆಮ್ಮೆಯಿಂದಾಗಲಿ, ನೋಕರರಿಗೆ ತಾವು ವಿರುದ್ಧ ಮಾಡಬೇಕೆಂದೆಣಿಸುವ ಅಭಿಪ್ರಾಯದಿಂದಾಗಲಿ ಅಥವಾ ಈಗಲೆ ಸಂಬಳಗಳನ್ನು ಬೇಗನೆ ಕಡಿದಿಕ್ಕುತ್ತ ಮುಂದೆ ಸದ್ಯದಲ್ಲಿ ಹೊರಬೀಳಬೇಕಾದೀತೆಂಬ ಬೆದರಿಕೆಯಿಂದಾಗಲಿ ಅಲ್ಲ. ಯಾವ ಸರಕಾರಕ್ಕೇ ಆದರೂ ವ್ಯಯಭಾಗವು ಸಂಬಳದ ಮತ್ತು 'ಸ್ಕೇಲಿನ' ಸಲುವಾಗಿಯೇ ಅಧಿಕಾಂಶವನ್ನು ತೋರಿಸುವುದು. ಈ ಸಂಬಳ ಮತ್ತು ಸ್ಕೇಲುಗಳನ್ನು ಎಣಿಸಿಯೆ, ಕಂದಾಯ ವಸೂಲಿಯ ಪರಿಣಾಮವನ್ನು ನಿರ್ಧರಿಸಬೇಕಾಗುವುದು. ನೋಕರರ ಸಂಖ್ಯೆಯನ್ನು ಈ ಸಂಬಳ ಸ್ಕೇಲುಗಳೇ ನಿರ್ಣಯಿಸುವುವು. ನೋಕರರ ಸಂಖ್ಯೆಯನ್ನು ಹೆಚ್ಚಿಸಬೇಕೆಂದೂ ತಲಬನ್ನು ಇಳಿಸಬೇಕೆಂದೂ ಕೊಂಗ್ರೆಸ್ಸಿನ ಉದ್ದೇಶವಿದೆ. ಹೀಗಿರುವಾಗ, ತಲಬಿನ ಮೊತ್ತವು ಕಡಿಮೆಯಾಗದೆ ನೋಕರ ಸಂಖ್ಯೆಯು ಹೆಚ್ಚಿಸಿ ನಿರುದ್ಯೋಗಿ ಯೋಗ್ಯರಿಗೆ ನೋಕರಿ ಕೊಡಬರುವುದಿಲ್ಲ. ನಿರುದ್ಯೋಗಿಗಳ ಸಂಖ್ಯೆ ಇಳಿಸುವುದು ಕೊಂಗ್ರೆಸ್ಸಿನ ಕಾರ್ಯಕ್ರಮ; ಅದನ್ನು ಮಾಡಲಾರದೆ ಉಳಿದರೆ, ಪುನಃ ಬಿಕ್ಕಟ್ಟು ಉಂಟಾಗಬಹುದಷ್ಟೆ.

ತಲಬನ್ನು ಇಳಿಸುವ ವಿಚಾರದಲ್ಲಿ ನೋಕರರನ್ನು ಎರಡು ತರಗತಿಗಳಲ್ಲಿ ವಿಭಜಿಸಬೇಕಾಗುವುದು. ಹೊಸಬರನ್ನು ಕೊಂಗ್ರೆಸು ನಿಯಮಿಸುವಾಗ, ಹೊಸ ಸ್ಕೇಲಿನಲ್ಲೇ ನೇಮಿಸಬರುವುದು ಸ್ವಾಭಾವಿಕವಾಗಿದೆ. ಹೀಗಾದರೂ, ಇವರ ಸಂಬಳದ ಪರಮಾವಧಿಯು ಕಡಿಮೆಯಾಗಿ (ರೂ. ೫೦೦) ಬರುವ ಕಾರಣ, ಈಗ ಕೆಲಸ ನೋಡುತ್ತಿರುವ ಅದೇ ತರಗತಿಯವರ ಬಡ್ತಿಗೆ ಹಾನಿಯಿದೆ ಎಂದು ಸೆಕ್ರೆಟರಿಯವರು ಲಂಡನಿನಿಂದ ಆಕ್ಷೇಪಿಸಬಹುದು. ಈ ವಿಷಯದಲ್ಲಿ, ಪ್ರಾಂತಿಕ ಶಾಸನ ಸಭೆಗಳಿಗೆ ಎಷ್ಟು ಅಧಿಕಾರವಿದೆ ಎಂಬುದನ್ನು ನಿಶ್ಚಯಿಸಿಕೊಳ್ಳಬೇಕಾಗಿದೆ.

ಈಗ ಉದ್ಯೋಗ ನೋಡುತ್ತಿರುವವರ ವಿಷಯವೇ ಬೇರೆ. ಅವರನ್ನು ಬಹಳ ಔದಾರ್ಯದಿಂದಲೂ ವಿವೇಕದಿಂದಲೂ ನಡೆಸಬೇಕಾಗಿದೆ. ಸಾಂಪತ್ತಿಕ ಅಡಚಣಿಯೂ ಇದಿಯಾದ ಕಾರಣ, ಕಾರ್ಯಕ್ರಮದ ಒತ್ತಾಯದಿಂದಲೂ, ಸಂಬಳಗಳನ್ನು ಇಳಿಸ ನಿರ್ವಾಹವಿಲ್ಲವಾಗಿದೆ. ಪ್ರಜೆಗಳೂ ನೋಕರರ ಕಡೆಗೆ ನಡೆದುಕೊಳ್ಳಬೇಕಾದ ವಿಚಾರಗಳನ್ನು ತಿದ್ದಿಕೊಳ್ಳುವ ಅವಶ್ಯಕತೆಯಿದೆ. ಹಾಗೆಂದು ನೋಕರರ ವಿಧ್ಯಮಾನಗಳನ್ನು ಪ್ರತ್ಯೇಕ ಸ್ಥಿತಿಯನ್ನು ತಿಳಿದೇ ಸಂಬಳ ಕಡಿತಕ್ಕೆ ಕೈಯಿಕ್ಕಬೇಕಾಗಿದೆ. ಎಲ್ಲರಿಗೂ ನ್ಯಾಯವೂ ಹಿತವೂ ಆಗುವ ರೀತಿಯಲ್ಲಿ ಸಂಬಳ ಇಳಿಸಬಹುದಾಗಿದೆ ಎಂದು ತಜ್ಞರ ಅಭಿಪ್ರಾಯವಾಗಿದೆ.

ಆದರೆ, ಆಕ್ಟಿನ ಪ್ರಕಾರ, ಮಂತ್ರಿಗಳಿಗೆ ಈ ಕಡಿತಕ್ಕೆ ಕೈಯಿಕ್ಕಲು ಹೆಚ್ಚಿನ ಅಧಿಕಾರವಿಲ್ಲ. ಇಂಡಿಯಾ ಸೆಕ್ರೆಟರಿಯವರೇ ಮೊದಲಾಗಿ ಈ ವಿಚಾರವನ್ನು ಮಂಜೂರುಮಾಡಬೇಕಾಗಿದೆ. ಸದ್ಯಸ್ಥಿತಿಯನ್ನು ವಾಸ್ತವ ರೀತಿಯಲ್ಲಿ ಸೆಕ್ರೆಟರಿಯವರು ಪರಾಂಬರಿಸಿದರೆ, ಅವರಾದರೂ ಸಂಬಳ ಕಡಿತಕ್ಕೆ ಒಪ್ಪುವುದು ಸಹಜವೆನ್ನಬೇಕು. ಆದರೆ, ಅವರು ಹಾಗೆ ಒಪ್ಪುವರೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವಂತೆ ಅವರನ್ನು ವಿಚಾರಿಸಿ ನೋಡಬೇಕಷ್ಟೆ.

ಸ್ವೇಚ್ಛೆಯಾಗಿ ಸಂಬಳ ಕಡಿತಕ್ಕೆ ಒಪ್ಪುದವರು ಯಾರು, ಎಷ್ಟಕ್ಕೆ ಒಪ್ಪುವರು ಎಂಬುದನ್ನು ನೋಡಬೇಕೆಂದು ಕೆಲವು ಮಂತ್ರಿಗಳ ಇಚ್ಛೆ ಇದೆ. ಇದು ಸರ್ವರಿಗೂ ತೃಪ್ತಿಕರವಾಗುವಂತೆ, ಆನಂದ ರೀತಿಯಲ್ಲಿ ನಡೆದರೆ, ಎಲ್ಲರಿಗೂ ಸಂತೋಷವೇ. ಸಮಸ್ತರೂ ಒಪ್ಪುವರೋ ಎಂಬುದು ಮಾತ್ರ ಮುಖ್ಯ ಪ್ರಶ್ನೆ. ಒಬ್ಬರಿಬ್ಬರು ಅಲ್ಲಲ್ಲಿ ಉತ್ಸಾಹದಿಂದಲೋ ಅಥವಾ ಸಂತೋಷದಿಂದಲೋ ತ್ಯಾಗಿಗಳಾಗಿ ಎದುರು ಬರಬಹುದು. ಹೀಗೆ ಮುಂದೆ ಬಂದ ಒಬ್ಬರಿಬ್ಬರು ಸಹಪಂಕ್ತಿಯಿಂದ ವಂಚಿತರಾಗಲೂ ಬಹುದು ಎಂಬ ಅಂಜಿಕೆ ಕೆಲವರಿಗಿದೆ; ಇಂಥವರು ಮಂತ್ರಿಗಳಿಗೆ ಆಪ್ತರಾದಾರು ಎಂಬ ಪರಸ್ಪರ ಮತ್ಸರ ಭಾವನೆಯುಂಟಾಗಿ, ಮುಂದೆ ನಾನಾ ಕಲಹಗಳಿಗೆ ಕಾರಣವಾದೀತೆನ್ನುತ್ತಾರೆ! ಆದುದರಿಂದ ನ್ಯಾಯದಂತೆ, ಒಂದೇ ತರದ ರೀಕಶೆಯಲ್ಲಿ ಕಡಿತವನ್ನು ವಿಧಿಸಿದ್ದಲ್ಲಿ ಯಾರಿಗೂ ಮನನೋಯದೆ, ನೋವಾದರೂ ಸಮಾನವಾಗಿ, ಹಣವೂ ಉಳಿಯುವುದು, ಶಿಸ್ತೂ ಹಾಳಾಗದು ಎಂದು ತೋರುವುದು, ಇಂಡಿಯಾ ಸೆಕ್ರೆಟರಿಯವರ ಕೊಡನೆ ಎಂತೂ ಪ್ರಥಮತಃ ಕೇ... ದಕ್ಕೂ ಮುಂದರಿಸುವುದು ಸಾಧ್ಯ... ತೋರುವುದು. ಕೊಂಗ್ರೆಸು ... ಯನ್ನು ಅಂಗೀಕರಿಸಿತೆಂದು ತಿಳಿದು ... ಆನಂದವನ್ನೂ ತೃಪ್ತಿಯನ್ನೂ ... ಲೋರ್ಡ ಜೆಟ್ಲೆಂಡರು ಈ ವಿಷಯದ ... ಗಳಿಗೆ ಅನುಕೂಲರಾಗಿ ಅವರ ... ವನ್ನು ಮುಂದುವರಿಯುವ ಹಾಗೆ, ಮುದು... ಭೂತಿ ತೋರಿಸುವರೋ ಇಲ್ಲವೋ ನಿಲ್ಲು... ಈಗ ಪ್ರತ್ಯಕ್ಷ ತಿಳಿದುಕೊಳ್ಳುವ ಸಂಧಿಟ್ಟಿಸಿ ... ಕೂಡದೆಂದು ಅವರೆಂದರೆ, ಮಂತ್ರಿಗ... ಕ್ರಮ ದೂರಯಿಸಲಾರದಿರುವುದಕ್ಕೆನು ... ಹೊಣೆಗಾರರಾಗಬೇಕಾಗುವುದು. ... ವೇಳೆ ಮೂಲತಃ ತೆರಿಗೆ, ಕಂದಾಯ ... ಮೊದಲಾದುವನ್ನು ನೂತನ ಕ್ರಮದ ... ಸಲು ಮಂತ್ರಿಗಳಿಗೂ ಸಂದರ್ಭಗಳು ... ಯುವುವು. ಎಂತೂ, ನೋಕರರ ವ... ಯನ್ನು ಸಾಧಿಸುವುದು ಎಲ್ಲರಿಗೂ ... ಇದಕ್ಕಾಗಿ ಸೆಕ್ರೆಟರಿಯವರು ಮಂತ್ರಿಗ... ಯಕರಾಗಬೇಕು. ಇಲ್ಲದಿದ್ದಲ್ಲಿ ಬೇಕು... ಉಂಟಾಗುವುದು. ಕಾರ್ಯಕ್ರಮ ನಡೆಸಲಾರದೆ ಮಂತ್ರಿಗಳು ಹೊರಬೀಳಬೇಕಾಗುವುದು. ಇದನ್ನು ಪರ್ಯಾಲೋಚಿಸಿ, ... 'ಪ್ರಾಂತಿಕ ಸ್ವರಾಜ್ಯ' ಎಂಬುದರ ರಟ್ಟಾಗುವುದು.

ಪ್ರಪಂಚದ ಮಹತ್ವಾದ ನವಶೋಧೆಯು
ಬಿಮಲಾ ಮಾತ್ರೆಗಳು

ನಂಬ್ರ ಒಂದನೇದು:–ದ್ರಾವಕಾಧಿಕ್ಯ, ಅತಿಸಾರ, ಅಮಶಂಕೆ, ಧಾತು ಹೋಗುವಿಕೆ, ಅಶಕ್ತಿ, ನಿದ್ರೆ ಇಲ್ಲದಿರುವಿಕೆ, ಮಾನಸಿಕ ಸಂಬಂಧ ರೋಗಗಳು, ಅಪಸ್ಮೃತಿ, ಕಣ್ಣು ರೋಗಗಳು, ರಕ್ತ ಅರ್ಬುದ ಸಿಫ್ಲಿಸ್, ಇತ್ಯಾದಿ ರೋಗಗಳು ಗುಣವಾಗುವುದು.

ನಂಬ್ರ ಎರಡನೇದು:–ತೊಡುಕುಮಯ ಜ್ವರಗಳು, ಅರಸಿನ ಮಂಡಿಗೆ ರೋಗ, ಪಾರ್ಶ್ವಶೂಲೆ, ವಾತರೋಗ, ಹುಣ್ಣು, ಕೊಳೆಯುವ ಮತ್ತು ವಿಷಮಯ ಕುಷ್ಠರೋಗ, ಗೊನೊರಿಯಾ, ಪ್ರಮೇಹ ಕಜ್ಜಿ ಇತ್ಯಾದಿಗಳನ್ನು ಗುಣಮಾಡುವುದು.

ನಂಬ್ರ. 1 ಸ್ಪೆಶಲ್—ಇದರಿಂದ ಕ್ಷಯರೋಗವೂ,
ನಂಬ್ರ 2 ಸ್ಪೆಶಲ್–ಇದರಿಂದ ಕಫಸಂಬಂಧ ರೋಗಗಳೂ, ಗುಣವಾಗುವುವು.
25 ಮಾತ್ರೆಗಳಿಗೆ ರೂ, 5 0-0. 50 ಮಾತ್ರೆಗಳಿಗೆ ರೂ. 9-8-0.
ರೋಗಿಗಳಿಗೊಂದು ತಾಯಿತು - ವೈದ್ಯರಿಗೊಂದು ಮಹಾ ವರವು.
ಧರ್ಮಾರ್ಥ ದೊರಕುವ ಪುಸ್ತಕಕ್ಕೆ ಬರೆಯಿರಿ:–
AYURVEDIC INSTITUTION, P. O. Kalighat, Calcutta.
Telegm:–"BEEPILLS", CALCUTTA.
ಪ್ರವರ್ತಕರು ಬೇಕಾಗಿದ್ದಾರೆ.

ಇನ್ನೂ ಸೈನ್ಯದ ಬಡಾವಣೆ

ಸೈನ್ಯದ ಖರ್ಚನ್ನು ಇಳಿಸುವುದು ಹೇಗೆ ಬಾಡಿದರೆ, ಹಿಂದಣ ಅಧಿಕಾರಿಗಳು ತೂಗಬೇಕು. ರೀತಿಯಲ್ಲಿ, ಸುಮಾರು ಎಂಟು ಕೋಟಿ ... ಪವನು ಉಳಿಯುವುದಾಗಿ ತಿಳಿದು, ಪ್ರಾಂತ್ಯಗಳ ಮಂತ್ರಿಗಳ ಕಡೆಯಿಂದ ಸರಕಾರಕ್ಕೆ ಸೂಚನೆಗಳು ಹೊರಡು... ಪ್ಪರಲ್ಲೇ,–ಇಂಗ್ಲೆಂಡಿನಲ್ಲಿ ಅರ್ಮಿಲೀಗ್ ಎಂದು ಹೊಸ ಸಂಸ್ಥೆಯ ಹೊಸ ... ಗಳೂ ಹೊರಟಿರುವುದು ಭಯಂಕರ ... ಣವಾಗಿ ತೋರುತ್ತದೆ. ಈ ಸಂಸ್ಥೆಯ ಅಭಿಪ್ರಾಯದಲ್ಲಿ,–ಹಿಂದೂದೇಶದಲ್ಲಿ ನಿಲ್ಲಿಸಲಾಗಿರುವ ಸೈನ್ಯದ ಸಂಬಳಾದಿಗಳು ಹೆಚ್ಚಬೇಕು, ಅಥವಾ ಸೈನಿಕರು ಇಲ್ಲಿ ನಿಲ್ಲುವ ಅವಧಿಯನ್ನೂ ಹೆಚ್ಚಿಸಿ, ಅವರಿಗೆ ಸಲ್ಲುವ ಪೆನ್ಶನು ಹೆಚ್ಚಾಗುವಂತಾಗಬೇಕು ಎಂದು ಪ್ರಕಟವಾಗಿದೆ. ಈ ಪ್ರಕಟಣೆಯು ಇನ್ನು ಇಂಡಿಯಾ ಸರಕಾರಕ್ಕೆ ತಲುಪಿಲ್ಲವಾದರೂ, ಇಂಗ್ಲಿಷ ಪತ್ರಿಕೆಗಳು ಪ್ರಕಟಿಸಿವೆ.

ಈ ಸಂಸ್ಥೆಯು ಸರಕಾರಕ್ಕೇನೂ ಸಂಬಂಧವುಳ್ಳದಲ್ಲವಾದರೂ, ಸಾಮ್ರಾಜ್ಯದ ರಕ್ಷಣೆಗಾಗಿ ಯುದ್ಧಸನ್ನಹಗಳನ್ನು ಬಲಪಡಿಸುವ ಉದ್ದೇಶದಿಂದ ಸ್ಥಾಪನೆಹೊಂದಿದ್ದು, ಅಧಿಕರೇ ಇದರಲ್ಲಿ ಸದಸ್ಯರಾಗಿ ಕೆಲಸಮಾಡುತ್ತಿರುವ ಕಾರಣ, ಈ ಸಂಸ್ಥೆಯು ಮಾತಿಗೆ ಪಾರ್ಲಿಮೆಂಟಿನ ಅನುಮತಿ ದೊರೆವುದು ಕಷ್ಟವಾಗಿಲ್ಲವೆಂದು ಭಾವಿಸಬೇಕಾಗಿದೆ. ಸಾಮ್ರಾಜ್ಯಶಾಹಿಯ ಬೆಂಬಲಕ್ಕಿರುವ ಸಮಸ್ತ ಶ್ರೀಮಂತರ ಸಹಾಯವು ಈ ಸಂಸ್ಥೆಗೆ ಇದೆ. ಯುರೋಪಿನಲ್ಲಿ ವಾತಾವರಣವು ಕೆಟ್ಟು ಫಕ್ಕನೆ ಯುದ್ಧವಾಗಬಹುದೆಂಬ ಅಂಜಿಕೆ ತೋರಿದ ಕಾರಣ ಬ್ರಿಟಿಷ ಸೇನಾಂಗವು ಬಹಳ ಬಲವಾಗಿ, ಸೈನ್ಯದಲ್ಲಿ ಉದ್ಯೋಗ ನೋಡುವುದಕ್ಕೂ ಜನತೆಯಲ್ಲಿ ಪ್ರೇಮವು ಹೆಚ್ಚುವಂತಾಗಬೇಕೆಂದೇ ಈ ಸಂಸ್ಥೆಯ ಸ್ಥಾಪನೆಯಾಯಿತು. ಸದಸ್ಯರಲ್ಲಿ ನಮ್ಮ ಮಾಜಿ ಸರ್ವ ಸೈನ್ಯಾಧ್ಯಕ್ಷರೂ ಒಬ್ಬರು. ಇವರ ಕಾಲದಲ್ಲಿ, ಯುರೋಪಿಯರ ಬದಲಾಗಿ ಹಿಂದೀಯರನ್ನು ಸೈನ್ಯಗಳಲ್ಲಿ ಹೆಚ್ಚಿಸಬೇಕೆಂದು ಮಾಡಿದ ಮಹಾ ಪ್ರಯತ್ನಗಳು ವ್ಯರ್ಥವಾಗಿ ಹೋಗಿವೆ. ಹಿಂದೀಯರಿಗೆ ಸೈನ್ಯಾಧಿಕಾರವನ್ನು ಕೊಡುವ ವಿಚಾರದಲ್ಲಿ ಇವರು ವಿರೋಧಿಗಳಾಗಿಯೆ ವರ್ತಿಸಿದ್ದರು. ತಮ್ಮ ವಿರುದ್ಧಭಾವವನ್ನು ಅವರು ಮುಚ್ಚಿಯಲ್ಲಿಟ್ಟಿದ್ದಿಲ್ಲ. ಹೀಗಿರುವ ಕಾರಣ ಸಾಮ್ರಾಜ್ಯದ ಕಲಹಗಳಲ್ಲಿ ಹಿಂದುಸ್ಥಾನವನ್ನು ಒಂದು ಮುಖ್ಯ ಪಣವಾಗಿಟ್ಟು ವರ್ತಿಸುವವರ ಸಾಲಿನವರು ಅವರು. ಸೈನ್ಯಕ್ಕೆ ಸಂಬಳ, ಸರ್ವಿಸು, ಪೆನ್ಶನುಗಳ ಹೆಚ್ಚುಗೆಯಿಂದ ಇನ್ನಷ್ಟು ವ್ಯಯಾಧಿಕ್ಯವನ್ನು ಅವರು ಉಂಟುಮಾಡಲು ಸೂಚನೆಕೊಡಬಹುದು, ಹಿಂದೆಯೂ ಹಿಂದೆ ಮಹಾಯುದ್ಧವಾದಾಗ, ಸೆಂಡಹರ್ಸ್ಟ ಕಮಿಟಿಯ ನೆವದಿಂದ, ಸೈನ್ಯದ ಖರ್ಚು ಅಧಿಕಾಧಿಕವಾಗಿ ಬೆಳೆವಂತೆ ಸಾಮ್ರಾಜ್ಯವಾದಿಗಳು ಪ್ರಯತ್ನಿಸಿದ್ದುದರ ಫಲಗಳನ್ನು ನಾವು ಇದುವರೆಗೆ ಉಣ್ಣುತ್ತಲಿದ್ದೇವೆ.

ಇಂಡಿಯಾ ಸರಕಾರಕ್ಕೆ ಇದು ವರೆಗೆ ಯಾವ ಪ್ರಸ್ತಾವವೂ ಈ ಸಂಸ್ಥೆಯಿಂದ ತಲುಪಿಲ್ಲವೆಂಬ ಮಾತ್ರಕ್ಕೆ ಅದು ತಲುಪಲಾರದು ವೆಂದೆನ್ನ ಬರುವುದಿಲ್ಲ. ಲಂಡನಿನಿಂದ ಸಾಮ್ರಾಜ್ಯಕ್ಕೆ ಸಂಬಂಧಪಡುವ ವಿಚಾರವು ಯಾವ ಕ್ಷಣದಲ್ಲೂ ಇಂಡಿಯಾ ಸರಕಾರಕ್ಕೆ ಸೂಚಿತವಾಗಬಹುದಷ್ಟೆ. ಆದುದರಿಂದ ಜನತೆಯ ಪ್ರತಿನಿಧಿಗಳು ಈ ವಿಷಯದಲ್ಲಿ ಎಚ್ಚರಗೊಂಡಿದ್ದು, ಮೊದಲೇ ಬಲು ಭಾರವಾಗಿ ಬಿದ್ದಿರುವ ಸೈನ್ಯದ ವ್ಯಯವೆಂಬ ಹಿಮಾಲಯವು ಇನ್ನಷ್ಟು ಬೆಳೆದು ದೇಶವನ್ನೆ ಆಕ್ರಮಿಸದಂತೆ ಮುಂಜಾಗ್ರತೆ ತೆಗೆದುಕೊಳ್ಳುವವರಾಗಿ ನಂಬಬೇಕಾಗಿದೆ.

ಯುದ್ಧಕ್ಕೆ ಇದೇ ತಕ್ಕ ಸಮಯ.

ಪೆಸಿಯಿಸ್ಟ ನಾಯಕನಾದ ರೊಬರ್ಟೊ ಫೆರಿನಾಚ್ಚಿ ಎಂಬವನು ಈ ಕೆಳಗಿನ ಸೂಚನೆಯನ್ನು ಪೆಸಿಯಿಸ್ಟ ರಾಷ್ಟ್ರಗಳಿಗೆ ಕೊಟ್ಟಿರುವನು ಬ್ರಿಟನಿನ ಸಂಗ್ರಾಮಬಲದ ಸ್ಥಿತಿಯು ಈಗ ಪ್ರಕೃತಕ್ಕೆ ನೆಟ್ಟಗಿರುವುದಿಲ್ಲ. ಫ್ರಾನ್ಸಿನ ಅಂತರ್ಸ್ಥಿತಿಯು ಕೆಟ್ಟಿರುತ್ತದೆ. ಆದುದರಿಂದ ಯುದ್ಧ ಹೂಡಲು ಇದೇ ತಕ್ಕ ಸಮಯ.

ಮುಸಲೇನಿಯು ಒಲಿದನೆ.

ಬ್ರಿಟಿಷ ಪ್ರಧಾನ ಮಂತ್ರಿ ಚೆಂಬರ್‌ಲೇನರು ಕಳೆದ ವಾರ ಮುಸೊಲೀನಿಗೆ ಒಂದು ವೈಯಕ್ತಿಕ ಪತ್ರ ಬರೆದಿದ್ದು, ಅದಕ್ಕೆ ಆತನ ಸಮಾಧಾನಕರ ಉತ್ತರವು ಬಂದಿರುತ್ತದೆಂದು ತಿಳಿದುಬರುತ್ತದೆ.

ಈ ಪತ್ರವ್ಯವಹಾರದಿಂದ ಬ್ರಿಟನ್ ಇಟಲಿ ವಿರೋಧವು ಸ್ವಲ್ಪಮಟ್ಟಿಗೆ ಕಡಿಮೆಯಾಗಿ, ಶಾಂತಿಸ್ಥಾಪನೆಯ ಸಂಭವಗಳು ಹೆಚ್ಚಿವೆ ಎಂದು ಅನೇಕ ಆಂಗ್ಲೇಯ ಪತ್ರಿಕೆಗಳ ಅಭಿಪ್ರಾಯ.

ಚೀನಾ-ಜಪಾನು ಯುದ್ಧ.

ಏನೂ ಇರಲಿ, ಯುದ್ಧವನ್ನೇ ಮಾಡಿ ತೀರಿಸಬೇಕೆಂದು ಚೀನವು ನಿರ್ಧರಿಸಿದಂತೆ ಕಾಣುತ್ತದೆ. ನಮಗೆ ಪ್ರದೇಶ ಬೇಡ, ನಮಗೆ ಚೀನಿಯರ ಸಹಕಾರ ಮಾತ್ರ ಸಾಕು ಎಂದು ಜಪಾನಿಯರು ಹೇಳುತ್ತಿರುವರು. ಅವರು ತಮ್ಮ ದೇಶವನ್ನು ತೊರೆದು ಹೊರಗೆ ನಡೆಯಬೇಕಾಗಿ ಚೀನಿಯರ ಛಲ.

ಜಪಾನು ಈ ಯುದ್ಧಕ್ಕಾಗಿ ಮಹಾಸಿದ್ಧತೆಗಳನ್ನು ಮಾಡಿ, ಚೀನಕ್ಕೆ ಬೇಕಾದ ಸೈನ್ಯಬಲ, ಶಸ್ತ್ರಶೇಖರ, ವಿಮಾನ ಇತ್ಯಾದಿಗಳು ಕಳುಹಲಾಗಿವೆ.

, ಜಪಾನಿಯರು ಚೀನದಲ್ಲಿರುವ ಜಪಾನಿಯರ ರಕ್ಷಣೆ ಬಗ್ಗೆ ಏರ್ಪಾಡುಗಳನ್ನು ಮಾಡಿರುವರು.

ಈ ಸಿದ್ಧತೆಯ ಭರದಲ್ಲಿ ಅನೇಕ ಸಮರಗಳು ನಡೆದುಬಿಟ್ಟಿವೆ. ಇಕ್ಕಡೆಯವರಿಗೂ ಸರಿಯಾದ ತರದ ನಷ್ಟಗಳು ಉಂಟಾಗಿರಬಹುದು.

ತಮ್ಮ ಜನಾಂಗಿಕರ ರಕ್ಷಣೆ ಬಗ್ಗೆ ಅಮೇರಿಕಾದ, ಒಂದು ಯುದ್ಧನಾವೆಯು ಚೀನಾ ಸಮುದ್ರಕ್ಕೆ ಹೋಗಿರುತ್ತದೆ.

ಚೀನಾ ದೇಶಕ್ಕೆ ಲಂಡನಿನಲ್ಲಿ ಸಾಲವು ದೊರಕಿರುವುದಾಗಿ ತಿಳಿದುಬರುತ್ತದೆ.

ಸ್ಪೈನಿನ ಕಲಹದಂತೆ, ಚೀನಾಪ್ರಕರಣವು ಭಯಂಕರ ರೂಪವನ್ನು ತಾಳುವ ಸಂಭವಗಳುಂಟಾಗಿವೆ.

ಬಿಕ್ಕಟ್ಟಿನ ಪರಿಸ್ಥಿತಿಗಳುಂಟಾಗಬಹುದು.

ಅಂಡಮಾನಗಳಲ್ಲಿನ ಪರಿಸ್ಥಿತಿ.

ಶ್ರೀಯುತ ಇಂದಿರಾ ನೆಹರೂಗಳವರ ಗಂಟಲ ಶಸ್ತ್ರ ಚಿಕಿತ್ಸೆಗಾಗಿ ರಾಷ್ಟ್ರಪತಿಯವರು ಮುಂಬಯಿಗೆ ಬಂದಿರುವರು ಚಿಕಿತ್ಸೆಯು ಡಾ. ಹೀರವಂದ ಯಶಸ್ವಿಯಾಗಿ ನಡೆಯಿತು ರಾಷ್ಟ್ರಪತಿಯವರು ತಮ್ಮ ಮಗಳ ಶುಶ್ರೂಷೆಯನ್ನು ತಾವೆ ಖುದ್ದಾಗಿ ಮಾಡುತ್ತಿರುವರು

ಮೊನ್ನೆ ೩೨ ರಲ್ಲಿ ರಾಷ್ಟ್ರಪತಿಯವರು ಮುಂಬಯಿಯ ಆಜಾದ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ, ಕಾಂಗ್ರೆಸ್ ಮಂತ್ರಿಮಂಡಳಗಳೂ ಪ್ರಜಾವರ್ಗವೂ ಎಂಬುದರ ಕುರಿತಾಗಿ ಭಾಷಣವಿತ್ತರು

ಭಾಷಣದ ಸಾರಾಂಶವು

ಕಾಂಗ್ರೆಸು ಅಧಿಕಾರ ಸ್ವೀಕರಿಸಿದುದರಿಂದ ಸ್ವರಾಜ್ಯ ಸಿಕ್ಕಿದಂತಾಗಲಿಲ್ಲವೆಂದೂ ಸ್ವತಂತ್ರ ಹೋರಾಟವು ನವರಾಜ ಶಾಸನದಲ್ಲಿ ಕಲ್ಪಿಸಿದ ಫೆಡರೇಶನನ್ನು ನಾಶಗೊಳಿಸುವ ತನಕವೂ ಭಾರತ ಶಾಸನವನ್ನು ಕಲ್ಪಿಸುವರೆ ಭಾರತ ಪ್ರಜೆಗಳ ಹಕ್ಕು ದೊರೆಯಲಾಗುವ ತನಕ ನಡೆಯಬೇಕೆಂದೂ ಅಲ್ಲದೆ,

ಮಂತ್ರಿವರ್ಯರಿಗೆ ಪ್ರಜೆಗಳ ಬೆಂಬಲಬೇಕು, ಅವರ ಕುರಿತು ತೀವ್ರವಾದ ಟೀಕೆಯನ್ನು ನಡೆಯಿಸಬಾರದು. ಅವರೊಡನೆ ಸ್ನೇಹಪಕ್ಷದಲ್ಲಿದ್ದು ನಮ್ಮ ಸೇವೆಗಳನ್ನು ಸಲ್ಲಿಸಿಕೊಳ್ಳಬೇಕು

ಫೆಡರೇಶನಿನಿಂದ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಅಡ್ಡಿಗಳುಂಟಾಗುವವು ಅದು ಸ್ಥಾಪನೆಯಾಯಿತೆಂದರೆ ಜನನ್ನು ಎದ್ದುಗೊಳಿಸುವ ಮಹಾ ಕ್ರಾಂತಿಯನ್ನೆ ನಡೆಯಿಸಬೇಕಾಗುವುದು ಆದುದರಿಂದ ನವ ರಾಜಶಾಸನವನ್ನು ಎದುರಿಸುವರೆ, ಕಾಂಗ್ರೆಸ್ ಕಾರ್ಯಕಾರಿ ಮಂಡಳವು ಹಾದಿಗಳನ್ನು ಕಲ್ಪಿಸುತ್ತದೆ

ಸ್ವಾತಂತ್ರ್ಯ ಹೋರಾಟವನ್ನು ಒಲಿಯಿಸುವುದೇ ಅಧಿಕಾರಸ್ವೀಕಾರದ ಮುಖ್ಯೋದ್ದೇಶ ನಮ್ಮ ದರಿದ್ರ್ಯವೂ ಸಂಪೂರ್ಣ ನಿವಾರಣೆಯಾಗಬೇಕಾದರೆ ಬ್ರಿಟಿಶ ಸಾರ್ವಭೌಮತೆಯು ಹಿಂದೂದೇಶದಿಂದ ಹೋಗಬೇಕು ಸ್ವಾತಂತ್ರ ಹೋರಾಟವನ್ನು ಬಲಪಡಿಸುವುದೇ ಕಾಂಗ್ರೆಸ್ ಮಂತ್ರಿಮಂಡಳ ಸಾಧನೆಯಾಗಬೇಕು

ಕಾಂಗ್ರೆಸು ಅಧಿಕಾರಕ್ಕೆ ಬಂದಿದೆ ಎಂದು ಅವರೊಡನೆ, ಅದು ಆಗಬೇಕು ಇದು ಆಗಬೇಕು ಎಂದು ಕೇಳುವುದು ಪ್ರತಿಯೊಬ್ಬರ ಕೆಲಸವಾಗಬಾರದು, ಅವರ ಮೇಲೆ ಸ್ನೇಹಪೂರ್ಣ ತರದಲ್ಲಿ ಒತ್ತಾಯತರಬೇಕು ಅವರು ಆ ಕೋರಿಕೆಗಳನ್ನು ನಡೆಯಿಸದಿದ್ದರೆ ರೇಗಬಾರದು ಅವರನ್ನು ಟೀಕಿಸಬಾರದು ಅದರಿಂದ ಮಂತ್ರಿವರ್ಯರ ಬಲವನ್ನು ಕುಂದಿಸಿದಂತಾಗುವುದು ಅಲ್ಲದೆ ಬಿಕ್ಕಟ್ಟಿನ ಪರಿಸ್ಥಿತಿಗಳುಂಟಾಗಬಹುದು

ಕಾಂಗ್ರೆಸ್ ಮಂತ್ರಿಮಂಡಳಗಳು ಅಧಿಕಾರ ತ್ಯಜಿಸಿ ಹೊರಗೆ ನಡೆಯುವವೆಂಬ ಭಯವಿದ್ದುದರಿಂದ ಗವರ್ನರರು ಅವರ ಕಾರ್ಯಗಳಲ್ಲಿ ಹೆಚ್ಚಿನ ಕೈಹಾಕಲು ಹಿಂಜರಿಯುವರು ಅವರು ಮಾಡಿದ್ದೆಲ್ಲವನ್ನು ಕೆಲಮಟ್ಟಿಗೆ ಸಹಿಸುವರು,

ಪ್ರಾಂತ್ಯಗಳ ಆಡಳಿತದಲ್ಲಿ ಕಾಂಗ್ರೆಸ್ ಮಂತ್ರಿವರ್ಯರು ಪ್ರಜಾಹಿತವನ್ನು ಲಕ್ಷಿಸುವರು

ಮಂತ್ರಿವರ್ಯರ ಮುಂದಿರುವ ಕೆಲಸವು ಸಾಧಾರಣ ತರದಲ್ಲ ಅವರಿಗೆ ಅನೇಕ ಅಡ್ಡಿತಡೆಗಳಿವೆ, ಕಾಂಗ್ರೆಸಿನ ಧ್ಯೇಯ ಸಾಧಿಸುವರೆ ಪ್ರಜೆಗಳು ಅವರೊಡನೆ ಸಹಕರಿಸಬೇಕು

ಪ್ರಜೆಗಳ ಬೆಂಬಲವು ಕಾಂಗ್ರೆಸ್ ಮಂತ್ರಿ ಮಂಡಳಗಳಿಗೆ ಸಲ್ಲಬೇಕು” ವ್ಯರ್ಥ ಅವರ ಟೀಕೆಯನ್ನು ಮಾಡಬೇಡಿರಿ.

ಅಂಡಮಾನಗಳಲ್ಲಿನ ಪರಿಸ್ಥಿತಿ.

೨೦೧ ಜನರು ಉಪವಾಸಸತ್ಯಾಗ್ರಹ ಮುಷ್ಕರ ಹಿಡಿದಿರುವರು, ೪೯ ಜನರು ಕೆಲಸ ಮುಷ್ಕರವನ್ನು ಹಿಡಿದಿರುವರು ಉಪವಾಸಗಾರರಲ್ಲಿ ನವರ ಸ್ಥಿತಿಯು ಕಠಿಣವಾಗಿರುವುದೆಂದು ತಿಳಿದುಬರುತ್ತದೆ ಹಿಂದೂದೇಶದಿಂದ ಕಳುಹಿಸಲಾದ ವೈದ್ಯರು ಅಲ್ಲಿಗೆ ತಲುಪಿದವರು ಕಾಂಗ್ರೆಸ್ ಪ್ರಾಂತ್ಯಗಳು, ಅಂಡಮಾನದಲ್ಲಿರುವ ತಮ್ಮ ಪ್ರಾಂತ್ಯಗಳ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕೆಂದು ಇಂಡಿಯಾ ಸರಕಾರದೊಡನೆ ಕೇಳಿದವರು

ರಾಜಕೀಯ ಕೈದಿಗಳು ಉಪವಾಸಗಾರರ ನಿಲ್ಲಿಸದ ವಿನಹ ಅವರ ಸಲಹೆಗಳ ಕುರಿತು ಆಲೋಚಿಸಲಾಗುವುದಿಲ್ಲವೆಂದು ಬಂಗಾಳ ಮಂತ್ರಿಮಂಡಳದ ಹೇಳಿಕೆ ಕಲ್ಕತ್ತೆಯಲ್ಲಿ ಕವಿ ರವೀಂದ್ರನಾಥರ ನಾಯಕತ್ವದಲ್ಲಿ ಅಂಡಮಾನದಲ್ಲಿನ ರಾಜಕೀಯ ಕೈದಿಗಳ ವಿಮೋಚನೆಯ ಬಗ್ಗೆ ಚಳವಳವು ನಡೆಯುತ್ತಿದೆ

ಅಂಡಮಾನಗಳು ನರಕ ಪ್ರದೇಶಗಳು ಅದೊಂದು ಪೆನಲ್ ಸೆಟ್ಲ್‌ಮೆಂಟ್ ಆಗಿರಬಾರದೆಂದು ರಾಷ್ಟ್ರಪತಿಯವರ ಅಭಿಪ್ರಾಯವಾಗಿರುತ್ತದೆ

ಸಾಗುವಳಿ ಸಾಲಗಳು

ಬಿಹಾರಿನ ರೈತ ಸಂಘವು ಒಂದು ಅವಸರದ ಸಭೆಯನ್ನು ಜರುಗಿಸಿ ರೈತರ ಸಾಲನಿವಾರಣೆಯಾಗುವ ಕುರಿತು ಸರಕಾರದ ಸಹಾಯವನ್ನು ಕೋರಿಯೂ ಅಲ್ಲದೆ ಸಾಲದಗಾರರ ಹಾವಳಿಯಿಂದ ರಕ್ಷಿಸುವ ವ್ಯವಸ್ಥೆಯಾಗಬೇಕೆಂದೂ ಸಾಗುವಳಿ ಕ್ರಮಗಳನ್ನು ಉತ್ತಮಗೊಳಿಸುವ ವ್ಯವಸ್ಥೆಗಳಾಗಬೇಕೆಂದೂ ಇವೇ ಮೊದಲಾದ ರೈತರ ಹಿತಸಂಬಂಧ ಠರಾವುಗಳನ್ನು ಮಾಡಿ ಅದನ್ನು ಕಾಂಗ್ರೆಸ್ ಮಂತ್ರಿಮಂಡಳಕ್ಕೆ ಕಳುಹಿಸಿಕೊಟ್ಟಿರುತ್ತದೆ

೧೯ ಸ್ತ್ರೀಯರು ನೀರುಪಾಲಾದರು

ಗಂಗಾನದಿಯನ್ನು ದಾಟುತ್ತಿರುವಾಗ ಸುಳಿಗಾಳಿಯುಂಟಾಗಿ ಮೊಂಘೀರ್ ನಗರದ ೮೯ ಎರಡು ದೋಣಿಗಳು ಕವಚಿಬಿದ್ದು ೧೯ ಮಂದಿ ಸ್ತ್ರೀಯರು ನೀರುಪಾಲಾಗಿರುವರು ಉಳಿದವರು ಹೇಗಾದರೂ ತಮ್ಮ ಪ್ರಾಣಗಳನ್ನು ರಕ್ಷಿಸಿಕೊಂಡರಂತೆ

ಗಡಿನಾಡಿನಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಬರುವುದೇ?

ಗಡಿನಾಡಿನಲ್ಲಿ ಡಾ ಖಾನ್ ಸಾಹೇಬರ ನಾಯಕತ್ವದಲ್ಲಿ ಕಾಂಗ್ರೆಸ್ ಸರಕಾರದ ರಚನೆಯಾಗುವ ಸಂಬಂಧಗಳಿವೆ ಮೊನ್ನೆ ನಡೆದ ಅಸೆಂಬ್ಲಿಗೆ—ಗಾಂಧಿ ಟೋಪಿಯು ಸಾಹಾಯವಾಗಿ, ಖಾನ್ ಅಬ್ದುಲ್ ಘಫರ್ ಖಾನರಿಗೂ ಮಹಾತ್ಮಾಜಿಯವರಿಗೂ ಗಡಿನಾಡುಗಳಿಗೆ ಬೇಗನೆ ಪ್ರವೇಶ ದೊರಕುವುದಂತೆ ರಾಷ್ಟ್ರಪತಿಯವರು ಸದ್ಯದಲ್ಲೆ ಅತ್ತಕಡೆಗೆ ತೆರಳುವರಂತೆ

ಕೇಂದ್ರ ಎಸೆಂಬ್ಲಿಯ ಅಧಿವೇಶನ.

ಕೇಂದ್ರ ಎಸೆಂಬ್ಲಿಯ ಅಧ್ಯಕ್ಷರ ಆಫೀಸಿನಲ್ಲಿ ಮುಂಬರುವ ಅಧಿವೇಶನಕ್ಕಾಗಿ ಪ್ರಶ್ನೆಗಳ ಮತ್ತು ಎಡ್ಜರ್ನಮೆಂಟ್ ಮೋಶನ್‌ಗಳ ಸುರಿಮಳೆ ಬಂದಿರುವುದೆಂದು ತಿಳಿದುಬರುತ್ತದೆ ಅಂತರ್ರಾಷ್ಟ್ರೀಯ ಸಕ್ಕರೆ ಒಪ್ಪಂದ, ಇಂಡೋ ಬ್ರಿಟಿಶ ವ್ಯಾಪಾರ ಒಪ್ಪಂದ, ಜಂಜಿಬಾರ ಪ್ರಶ್ನೆ, ರೈಲ್ವೆಗಳ ಕುರಿತು ವೆಜ್‌ವುಡ್ ರಿಪೋರ್ಟು ಅಂಡಮಾನಗಳಲ್ಲಿರುವ ಡೆಟಿನ್ಯೂಗಳು ಇವೇ ಮೊದಲಾದುವುಗಳ ಮೇಲೆ ಪ್ರಶ್ನೆಗಳ ಅಡ್ಜರ್ನಮೆಂಟ್ ಮೋಶನುಗಳು ಬರುವವು

ಶ್ರೀ ಸತ್ಯಮೂರ್ತಿಯವರು ಈಗ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಡಿಪ್ಯುಟಿ ಲೀಡರರಾಗಿದ್ದು ಮುಂಬರುವ ಅಧಿವೇಶನದಲ್ಲಿ ಹೆಚ್ಚಿನ ಪರಿಶ್ರಮಿಸುವರಾಗಿ ತಿಳಿದುಬರುತ್ತದೆ ಕೆಲವು ಹೆಚ್ಚಿನ ಸದಸ್ಯರು ಆರಿಸಿ ಬಂದುದರಿಂದ, ಕಾಂಗ್ರೆಸ್ಸಿನ ಬಲವು ಹೆಚ್ಚಿರುವುದು,

ಬಿಕ್ಕಟ್ಟಿನ ಪರಿಸ್ಥಿತಿಯ ನಂತರ, ಕೇಂದ್ರ ಎಸೆಂಬ್ಲಿಯ ಅಧಿವೇಶನವು ಜರಗುವುದು ಇದೇ ಪ್ರಥಮಬಾರಿ ಆದ್ದರಿಂದ, ಈ ಅಧಿವೇಶನದಲ್ಲಿ ಪ್ರಾಮುಖ್ಯ ಘಟನೆಗಳು ನಡೆಯುವವು.

ಕಾಂಗ್ರೆಸ್ ಸಾಮ್ಯವಾದಿಗಳ ಸಲಹೆಗಳು.

ಈ ಮೊದಲು ಕಾಂಗ್ರೆಸ್ ಅಧಿಕಾರ ಸ್ವೀಕರಿಸುವುದನ್ನು ವಿರೋಧಿಸುವ ಈ ಪಕ್ಷವು ಈಗ ಅದು ಅಧಿಕಾರ ವಹಿಸಿದುದರಿಂದ ಕಾಂಗ್ರೆಸ್ ಚುನಾವಣಾ ಪ್ರಸಿದ್ಧ ಪತ್ರದಲ್ಲಿರುವ ಕಾರ್ಯಕ್ರಮವನ್ನು ಕಾಂಗ್ರೆಸ್ ಮಂಡಳಗಳು ಕೈಕೊಳ್ಳಬೇಕೆಂದೂ, ರೈತರ, ಮಜೂರರ ಗೋಳು ನಿವಾರಣೆ ಮಾಡಬೇಕೆಂದೂ ಇವೇ ಮೊದಲಾದ ಸಲಹೆಗಳಿಂದ ಕೂಡಿದ ಒಂದು ಠರಾವನ್ನು ಮಾಡಿರುವರು

ಆಶ್ರಿತ ರಾಜರು ಕಾಂಗ್ರೆಸಿನೊಡನೆ ಸೇರುವರೆ?

ಹಿಂದೂ-ಮುಸ್ಲಿಮ್ ಒಪ್ಪಂದವಾಗುವುದೆ?

ಫೆಡರೇಶನಿಗೆ ಆಶ್ರಿತರಾಜರು ಕೂಡುವಿಕೆಯ ಕುರಿತು ಆಶ್ರಿತರಾಜರ ಮಂತ್ರಿಗಳ ಪರಿಷತ್ತು, ಹಿಂದೆ ಕೂಡಿ, ಫೆಡರೇಶನಿಗೆ ಕೂಡುವಿಕೆಯು ಕೆಲವು ಶರ್ತಗಳು ತಮಗೆ ಒಪ್ಪದ ಕಾರಣ ಆ ಕುರಿತು ಪ್ರವೀಣರನ್ನು ವಿಚಾರಿಸಿ, ತಮ್ಮತಮ್ಮ ಸಲಹೆಗಳನ್ನು ವೈಸ್ರಾಯರಿಗೆ ಕಳುಹಿಸಿಕೊಟ್ಟಿರುವರು

ಫೆಡರಲ್ ಎಸೆಂಬ್ಲಿಯಲ್ಲಿ ಆಶ್ರಿತರಾಜರು ಕಾಂಗ್ರೆಸಿನೊಡನೆ ಕೂಡುವರೆ ಯತ್ನಗಳು ನಡೆಯುವವೆಂದು ತಿಳಿದುಬರುತ್ತದೆ, ಆ ಬಗ್ಗೆ ಪ್ರಾಮುಖ್ಯ ಕಾಂಗ್ರೆಸ್ ನಾಯಕರಿಗೂ—ಆಶ್ರಿತರಾಜರ ಮಂತ್ರಿವರ್ಯರಿಗೂ ಭೇಟಿ ನಡೆಯುವದೆಂದೂ ತಿಳಿದುಬರುತದೆ ಈ ಮಾತುಕತೆಗಳು ಫಲಕಾರಿಯಾದರೆ ಆಗ ಹೊಸತೊಂದು ಮಾರ್ಗಉಂಟಾಗುವುದು ಆಶ್ರಿತರಾಜರೂ ಪ್ರಗತಿಪರ ಪಕ್ಷದೊಡನೆ ಸೇರಿದಂತಾಗುವುದು

ಹಿಂದೂ ಮುಸ್ಲಿಮ ಒಪ್ಪಂದವಾಗುವುದೆ?

ಹಿಂದೂ ಮುಸ್ಲೀಮ ಒಪ್ಪಂದವಾಗುವ ಕುರಿತು ಇತ್ತರೆಗಳ ಅನೇಕ ಪ್ರಮುಖ ನಾಯಕರು ಪ್ರಯತ್ನಪಟ್ಟಿರುವರು, ಆ ಕುರಿತು ಮುಸ್ಲೀಮ ಲೀಗಿನ ಶ್ರೀ ಜಿನ್ನಾ ರವರಿಗೂ, ಶ್ರೀ ರಾಜೇಂದ್ರ ಬಾಬುಗಳಿಗೂ ವಾದ ನಡೆದು ಬೇಗನೇ ಒಪ್ಪಂದವಾಗುವ ಸಂಭವಗಳುಂಟಾಗಿದೆ ಮುಸ್ಲಿಮರು ಕಾಂಗ್ರೆಸ್ಸಿನೊಡನೆ ಸೇರುವಂತೆ ಕಾರಣಗಳನ್ನು ವಿವರಿಸಿ, ಅನೇಕ ಮುಸ್ಲಿಮ ಪ್ರಮುಖರು ವಿನಂತಿಗಳನ್ನು ಮಾಡಿರುವರು ಕಾಂಗ್ರೆಸ್ಸಿನೊಡನೆ ಮುಸ್ಲಿಮರು ಸೇರಿದಲ್ಲಿ ಆಗ ಬಂಗಾಳದಲ್ಲಿ ಕಾಂಗ್ರೆಸು ಸರಕಾರ ಸ್ಥಾಪನೆಯಾಗುವ ಸಂಭವಗಳಿವೆ ಅಲ್ಲದೆ ಹೆಚ್ಚಿನ ಪ್ರಾಂತ್ಯಗಳು ಕಾಂಗ್ರೆಸ್ಸಿನ ಅಧಿಕಾರಕ್ಕೆ ಸೇರಬಹುದು ರಾಷ್ಟ್ರಪತಿಯವರ ಆ ಕುರಿತು ಪರಿಶ್ರಮಪಟ್ಟಿರುವರು.

ಚಿತ್ರಕವಿ “ರವೀಂದ್ರನಾಥ ಠಾಗೂರರವರು”

ಸಂಯುಕ್ತ ಪ್ರಾಂತ್ಯದಲ್ಲಿ ಮುಷ್ಕರ.

ಸಂಯುಕ್ತ ಪ್ರಾಂತ್ಯದ ವಸ್ತ್ರ ವ್ಯಾಪಾರಿಕೇಂದ್ರವಾದ ಕಾನ್‌ಪುರದಲ್ಲಿ ವಸ್ತ್ರದ ಗಿರಣಿಗಳ ಕೆಲಸಗಾರರು ಇವತ್ತಿಗೆ ಅನೇಕ ದಿವಸಗಳಿಂದ ಮುಷ್ಕರ ಹಿಡಿದಿದ್ದು ಅದು ನಿನ್ನೆಗೆ ಕೊನೆಗೊಂಡಿತು, ತಮ್ಮ ಸಂಬಳ ಏರಬೇಕು ತಮ್ಮ ಸಂಘಕ್ಕೆ ಮನ್ನಣೆ ದೊರಕಬೇಕು ತಮ್ಮ ಹೆಚ್ಚಿನ ಕೆಲಸಕ್ಕೆ ತಲಬು ದೊರಕಬೇಕು, ಇವೆ ಮೊದಲಾದವು ಅವರ ಕೋರಿಕೆಗಳು ಈ ಮುಷ್ಕರದಲ್ಲಿ ಸಾಧಾರಣ ೩೦೦೦೦ ಮಂದಿಗಳು ಕೂಡಿದ್ದರು ಪ್ರಧಾನ ಮಂತ್ರಿ ಪಂತರವರೂ ಮತ್ತು ಜಿಲ್ಲಾ ಕಲೆಕ್ಟರರ ಪರಿಶ್ರಮಗಳಿಂದ ಮಜೂರ ಸಂಘದವರಿಗೂ ಗಿರಣಿ ಮಾಲೀಕರಿಗೂ ಒಂದು ತರದ ಒಪ್ಪಂದ ನಡೆದು, ಅವರು ಪುನಃ ಕೆಲಸಕ್ಕೆ ನಡೆಯುವರಾಯಿತು

ಬಂಗಾಳದಲ್ಲಿ ಡೆಟಿನ್ಯೂ ಬಿಡುಗಡೆಯಾಗುವುದೆ?

ಈ ವಿಷಯವು ಬಂಗಾಳದ ಎಸೆಂಬ್ಲಿಯಲ್ಲಿ ಚರ್ಚೆಗೆ ಬಂತು. ಸಾಧಾರಣ ೩೦೦೦ ಮಿಕ್ಕಿದ ವಿದ್ಯಾರ್ಥಿಗಳು ಅಂಡಮಾನ ಕೈದಿಗಳ ಬಿಡುಗಡೆಗಾಗಿ ಡೆಟಿನ್ಯೂಗಳ ಬಿಡುಗಡೆಗಾಗಿ ಎಸೆಂಬ್ಲಿ ಸದನದ ಮುಂದೆ ಪ್ರದರ್ಶನಗಳನ್ನು ನಡೆಯಿಸಿದರು ಡೆಟಿನ್ಯೂಗಳ ಬಿಡುಗಡೆಯು ಕೂಡಲೆ ಆಗಬೇಕೆಂದು, ಕಾಂಗ್ರೆಸ್ ಠರಾವು ಬಂದಿತ್ತು, ಆ ಕುರಿತು ಚರ್ಚೆ ನಡೆದು ಒಟ್ಟಿನಲ್ಲಿ ಡೆಟಿನ್ಯೂ ವಿಚಾರವನ್ನು ಸರಿಯಾಗಿ ಪರಿಶೀಲಿಸಿ ಕ್ರಮೇಣ ಅವರ ಬಿಡುಗಡೆಯಾಗುವುದೆಂದೂ ಹೋಂ ಮೆಂಬರರು ಅಂದರು ಆ ಕುರಿತು ಮತ ತೆಗೆಯಲಾಗಿ ಒಂದು ಸಪ್ಟೆಂಬರದೊಳಗೆ ಡೆಟಿನ್ಯೂ ಬಿಡುಗಡೆಯಾಗಬೇಕೆಂಬ ಠರಾವು ಬಹುಮತದಿಂದ ಮಂಜೂರಾತಿ ಹೊಂದಿರುತ್ತದೆ

ಸೇಲಂನಲ್ಲಿ ಮದ್ಯನಿಷೇಧ.

ಈ ಕುರಿತು ಯೋಜನೆಯನ್ನು ಆಲೋಚಿಸುವರೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಇರ್ತಸೊಂದು ಸಮಿತಿಯವರು ಕೂಡಿ ಒಂದು ಮದ್ಯವು ಸೇಲಮಿನಿಂದ ಹೊರದೇಶಗಳಿಗೆ ಹೋಗದಂತೆಯೂ, ಹೊರದೇಶಗಳಿಂದ ಸೇಲಮಿಗೆ ಬಾರದಂತೆಯೂ ಸರ್ಕಾರದ [illegible] [illegible] [illegible]

ಸೇಲಮಿನ [illegible] ಮಂತ್ರಿ [illegible]

ಅಲ್ಲದೆ [illegible]

THEY WORK WHILE YOU REST.

Industrious Rupees are busy turning out more Rupees to savers in our bank But they do not jump in and go to work of their own free will You have to start them and encourage them The best way is to give them friends Rupees are very sociable, and if they are lonely they do little. But if you keep adding more Rupees in to your account they do their best And the more they work the more you can rest.

RESOURCES OF A CRORE. ESTD: 1906 CANARA BANK, LIMITED.

ಮದ್ಯದಿಂದ ಗಳಿಸಿದ ಹಣದಿಂದ ಪ್ರಜಾಶಿಕ್ಷಣವೇ!

ರಾಷ್ಟ್ರಾಭ್ಯುದಯವಾಗುವಂತ ಪ್ರತಿಯೊಬ್ಬ ಪ್ರಜೆಯು ಶಿಕ್ಷಿತನಾಗಬೇಕು.

ಹಳ್ಳಿಗಳಲ್ಲಿ ಶಿಕ್ಷಣಪ್ರಚಾರವು ಹೆಚ್ಚಬೇಕು, — ಶಿಕ್ಷಣದೊಂದಿಗೆ ವೃತ್ತಿ ತರಬೇತಾಗಬೇಕು, — ಮಹಾ ಹೊರೆಗಳಾದ ವಿಶ್ವವಿದ್ಯಾಲಯಗಳು ಪುನರ್ವ್ಯವಸ್ಥೆಯಾಗಬೇಕು.

ಈ ಕೆಳಗಿನದು, ಅಖಿಲ ಭಾರತ ಕೈಗಾರಿಕಾ ಸಂಘದ ಕಾರ್ಯದರ್ಶಿಗಳಾದ ಭಾರತನ್ ಕುಮಾರಪ್ಪ ಇವರು ವಿದ್ಯಾಭ್ಯಾಸಕ್ಕೆ ಬೇಕಾದ ಆರ್ಥಿಕ ವ್ಯವಸ್ಥೆಯ ಕುರಿತು 'ಹರಿಜನ' ಪತ್ರಿಕೆಯಲ್ಲಿ ಬರೆದ ಲೇಖನದ ಸಾರಾಂಶವಾಗಿರುತ್ತದೆ. ನಮ್ಮ ವಿದ್ಯಾಮಂತ್ರಿಗಳೂ ಈ ಲೇಖನದ ಕಡೆಗೆ ಅತ್ಯಂತ ಲಕ್ಷ್ಯವೀಯಬೇಕು.

ರಾಷ್ಟ್ರಾಭ್ಯುದಯಗೊಳಿಸಲು ಅತಿ ಪ್ರಾಮುಖ್ಯವೆನಿಸುವ ವಿದ್ಯಾಖಾತೆಯು ಕಾಂಗ್ರೆಸ್ ಮಂತ್ರಿಗಳ ಅಧಿಕಾರಕ್ಕೆ ಬಂದಿರುತ್ತದೆ. ಅದಕ್ಕೆ ಬೇಕಾದ ಹಣವು ಅಬಕಾರಿ ಇಲಾಖೆಯಿಂದ ಬರುತ್ತದೆ. ಅಮಲುಕರ ಮದ್ಯಗಳು ಮತ್ತು ಗಾಂಜಾ, ಅಫೀಮು ಇತ್ಯಾದಿಗಳ ಮಾರಾಟದಿಂದ ಉತ್ಪನ್ನವಾಗುವ ಹಣವು ಪ್ರಾಂತ್ಯದ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲ್ಪಡಬೇಕು. ಅಬಕಾರಿ ಇಲಾಖೆಯಿಂದ ಸಮಸ್ತ ಭಾರತಖಂಡದ ಉತ್ಪನ್ನ ರೂ ೧೫,೦೯,೭೩,೫೩೮ ಆಗುತ್ತದೆ. ಇದರಲ್ಲಿ ದೇಶಿಯ ಮದ್ಯದಿಂದ ಉತ್ಪನ್ನವು ೯,೮೨,೧೮,೫೨೫—ಅಬಕಾರಿ ಉತ್ಪನ್ನದ ಶೇಕಡಾ ೬೨ರ ಸಲೆ. ಅಬಕಾರಿ ಇಲಾಖೆಯ ಖರ್ಚು ೧,೮೨,೨೦,೧೩೨ ಕಳೆದು ಏನ್ ಉಳಿತಾಯವು ರೂ. ೧೪,೮೯,೧೦,೩೭೫. ಇದರಲ್ಲಿ ಬ್ರಿಟಿಷ ಇಂಡಿಯಾ ಪ್ರಜೆಗಳ ಶಿಕ್ಷಣಕ್ಕೆ ಸಲ್ಲುವ ಹಣ ರೂ. ೧೧,೩೫,೫೯,೭೯೮

ಮದ್ಯ ನಿಷೇಧವು ಅಖಿಲಭಾರತ ಕಾಂಗ್ರೆಸಿನ ಧ್ಯೇಯಗಳಲ್ಲೊಂದು. ಅಧಿಕಾರಕ್ಕೆ ಬಂದ ಕಾಂಗ್ರೆಸು ತನ್ನ ಈ ಧ್ಯೇಯವನ್ನು ಸಾಧಿಸದೆ ನಿಲ್ಲದು. ಈ ಸಾಧನೆಯಲ್ಲಿ—ಅಬಕಾರಿ ಉತ್ಪನ್ನವು ಮಾಯವಾಗುವುದರಿಂದ—ಪ್ರಜಾ ಶಿಕ್ಷಣಕ್ಕೆ ಹಣವನ್ನು ಹೇಗೆ ಗಳಿಸುವುದು? ಎಂಬ ಮಹಾ ಪ್ರಶ್ನೆಯನ್ನು ಅವರು ಎದುರಿಸಬೇಕಾಗುವುದು.

ಏನೂ ಆಗಲಿ. ಸೆಕೆಂಡರಿ ಮತ್ತು ಪ್ರಾಥಮರಿ ವಿದ್ಯಾಭ್ಯಾಸಕ್ಕೆ ತಗಲುವ ಖರ್ಚಿನಲ್ಲಿ ಕಡಿತವಾಗಬಾರದು. ಗ್ರಾಮಗಳಲ್ಲಿ ಹೆಚ್ಚಿನ ವಿದ್ಯಾಪ್ರಚಾರವಾಗುವಂತೆ ಸರಕಾರದ ಲಕ್ಷ್ಯವಾಗಬೇಕು. ಈಗ ಗ್ರಾಮನಿವಾಸಿಗಳಲ್ಲಿ ಶೇಕಡ ೭ರ ಸಲೆಯವರಿಗೆ ಮಾತ್ರ ಶಿಕ್ಷಣಾಲಯಗಳನ್ನು ಸೇರುವ ಅವಕಾಶವಿದೆ. ನಮ್ಮ ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಶಾಲೆಗಳು ತುಂಬಿರುವಾಗ ಹಳ್ಳಿಗಳಲ್ಲಿ ಬೇಕಾದಷ್ಟು ಶಾಲೆಗಳಿಲ್ಲ. ಹಳ್ಳಿ ನಿವಾಸಿಗಳ ಸಂಖ್ಯೆಯು ನಗರ ನಿವಾಸಿಗಳ ಸಂಖ್ಯೆಗಿಂತ ೧೦ ಪಾಲಷ್ಟು ಇರುವಾಗ ಶಿಕ್ಷಣವೆಚ್ಚದ ಶೇ ೩೦ರ ಸಲೆ ಮಾತ್ರ ಅವರಿಗೆ ಸಲ್ಲುತ್ತದೆ. ಇವು ೧೯೩೧ರ ಅಂಕೆಸಂಖ್ಯೆಗಳು. ೧೯೩೨-೩೩ ಅಂಕೆಸಂಖ್ಯೆಗಳ ಪ್ರಕಾರ ನಗರನಿವಾಸಿಗಳ ಶಿಕ್ಷಣಕ್ಕೆ ತಲಾ ಒಂದರ ಒಂಬತ್ತು ಆಣೆಗಳು ವ್ಯಯಿಸಲ್ಪಡುವಾಗ ಒಬ್ಬ ಹಳ್ಳಿನಿವಾಸಿಗೆ ಬರೆ ೭ ಪೈಗಳು ಸಲ್ಲುತ್ತವೆ. ಹೆಚ್ಚಿನ ಅಬಕಾರಿ ಉತ್ಪನ್ನವು ಹಳ್ಳಿಗಳಲ್ಲಾಗುತ್ತಿರುವಾಗ ಅವರಿಗೆ ಮೇಲಿನ ರೀತಿಯಲ್ಲಿ ಪ್ರತಿಫಲ ದೊರಕುವುದು ನ್ಯಾಯವೆ? ಬಡವರ ಮದ್ಯ ಸೇವನೆಯಿಂದ ಆಗುವ ಉತ್ಪನ್ನವು ಶ್ರೀಮಂತರ ಶಿಕ್ಷಣಕ್ಕಾಗಿ ವೆಚ್ಚವಾಗುತ್ತದೆ. ಶ್ರೀಮಂತರಿಗೆ ಶಿಕ್ಷಣ ಹೊಂದಲು ಹೆಚ್ಚಿನ ಅನುಕೂಲವಿದ್ದುದರಿಂದ ವಿದ್ಯಾಖಾತೆಯ ಹೆಚ್ಚಿನ ವ್ಯಯವು ಹಳ್ಳಿಗಳಲ್ಲಾಗಬೇಕು. ನಗರಗಳ ಶಿಕ್ಷಣಕ್ಕೆ ಬೇಕಾದ ಹಣವನ್ನು ನಗರಗಳ ಶ್ರೀಮಂತರಿಂದ ಶಾಲಾ ಸಂಬಳದ ರೂಪದಲ್ಲಿಯೂ ಸಹಾಯಧನರೂಪದಲ್ಲಿಯೂ ತೆರಬೇಕು. ಈ ತರದ ಅನೇಕ ಶಾಲೆಗಳು ಈಗ ರೂಢಿಯಲ್ಲಿವೆ. ಇವುಗಳು ತಮ್ಮ ಷ್ಟಕ್ಕೆ ತಾನೆ ನಡೆಯುತ್ತವಲ್ಲದೆ, ನಡೆಯಿಸುವವರಿಗೆ ಹಣವನ್ನು ಗಳಿಸುತ್ತವೆ.

ಈಗ ರೂಢಿಯಲ್ಲಿರುವ ಶಿಕ್ಷಣ ಕ್ರಮದಿಂದ ವಿದ್ಯಾವ್ಯಾಸಂಗ ಮುಗಿದ ಕೂಡಲೆ ವಿದ್ಯಾರ್ಥಿಗಳು ಮುಂದಿನ ಜೀವನದ ಹಾದಿ ಕಾಣದವರಾಗುತ್ತಾರೆ. ಶಿಕ್ಷಣಸಹಾಯದಿಂದ ಮುಂದಿನ ಜೀವನದ ಮಾರ್ಗವನ್ನು ಕಲ್ಪಿಸಲು ಅವರಿಗೆ ಸಾಧ್ಯವಿಲ್ಲ. ಶಾಲೆಗಳಲ್ಲಿ ವಿದ್ಯಾರ್ಥಿಗಳ ಮುಂದಿನ ಜೀವನಕ್ಕೆ ಸಹಕಾರಿಯಾಗುವ ರಚನಾತ್ಮಕ ತರದ ಶಿಕ್ಷಣವು ನಡೆಯಬೇಕು. ಗಣಿತ, ಭೂಗೋಳ, ಚರಿತ್ರೆ ಭಾಷೆಗಳು ಇವೆ ಮೊದಲಾದವುಗಳೊಡನೆ ವೃತ್ತಿ ತರಬೇತು ನಡೆಯಬೇಕು. ಶಾಲೆಗಳೆಲ್ಲಾ ಔದ್ಯೋಗಿಕ ಶಿಕ್ಷಣ ಕೇಂದ್ರಗಳಾಗಬೇಕು. ಆಗ ವಿದ್ಯಾರ್ಥಿಗಳ ಬುದ್ಧಿ ಬೆಳವಣಿಗೆಯಾಗುವುದಲ್ಲದೆ, ಅವರ ಕೈಚಮತ್ಕಾರವು ಹೆಚ್ಚಿ, ಅವರು ತಮ್ಮ ವಿದ್ಯಾಭ್ಯಾಸಕ್ಕಾಗಿ ತಾವೇ ಹಣವನ್ನು ಒದಗಿಸುವವರಾಗುವರು. ಅವರು ಶಾಲೆಯಲ್ಲಿ ತಯಾರಿಸಿದ ಒಡವೆಗಳನ್ನು ಮಾರಾಟ ಮಾಡಿ ಹಣ ಗಳಿಸಬಹುದು.

ಮದ್ರಾಸು ಸರಕಾರದ ವಿದ್ಯಾ (ಕಾಂಗ್ರೆಸ್) ಮಂತ್ರಿಗಳಾದ ಡಾ। ಪಿ ಸುಬ್ಬರಾಯನ್‌ರವರು.

ವಿಶ್ವವಿದ್ಯಾಲಯಗಳು ಅತಿಶಯ ವೆಚ್ಚ ತಗಲುವ ಸಂಸ್ಥೆಗಳಾಗಿವೆ. ಅವುಗಳಿಗೆ ಧಾರಾಳ ಧನಸಹಾಯವು ಸರಕಾರದಿಂದ ಸಲ್ಲುತ್ತಿದೆ. ವಿಶ್ವವಿದ್ಯಾಲಯಗಳು ಸ್ವಸಾಮರ್ಥ್ಯವಾಗಿ ನಡೆಯುವಂತಾಗಬೇಕು. ಅವಕ್ಕೆ ಬೇಕಾದ ಹಣವನ್ನು ಅವೇ ಉತ್ಪನ್ನ ಮಾಡಬೇಕು. ಆಗ ವಿಶ್ವವಿದ್ಯಾನಿಲಯದ ವಿದ್ಯಾವ್ಯಾಸಂಗಕ್ಕಾಗಿ ವಿದ್ಯಾರ್ಥಿಗಳು ಹೆಚ್ಚಿನ ಖರ್ಚನ್ನು ತೆರಬೇಕಾಗುವುದು. ಅದರಿಂದ ಒಳ್ಳಿತುಂಟು. ಎಲ್ಲರೂ ಶಾಲಾವಧಿಯಲ್ಲೆ ನಮ್ಮ ಶಿಕ್ಷಣವನ್ನು ಮುಗಿಸಿ ವೃತ್ತಿಗಳನ್ನು ಹುಡುಕುವವರಾಗುವರು. ಅನುಕೂಲವಂತರೂ ಬುದ್ಧಿಶಾಲಿಗಳೂ ಮಾತ್ರ ಪ್ರೌಢ ವಿದ್ಯಾಭ್ಯಾಸವನ್ನು ಹೊಂದುವಂತಾಗುವುದು. ವಿಶ್ವವಿದ್ಯಾಲಯಗಳಿಂದ ಯೋಗ್ಯ ಪದವೀಧರರೇ ಹೊರಡುವರು.

ವಿಶ್ವವಿದ್ಯಾಲಯಗಳು ತಮ್ಮಷ್ಟಕ್ಕೆ ತಾವೆ ನಡೆಯುವಂತೆ ಮಾಡಲು ಅವುಗಳ ವೆಚ್ಚವನ್ನು ಬಹಳವಾಗಿ ಕಡಿಮೆ ಮಾಡಬೇಕು. ವಿಶ್ವವಿದ್ಯಾಲಯಗಳಲ್ಲಿ ಅತಿರೇಕವಾದ ಸಂಬಳ ದೊರಕುವುದರಿಂದಲೆ ಹೆಚ್ಚಿನವರು ಅವುಗಳ ಕಡೆಗೆ ಆಕರ್ಷಿಸಲ್ಪಡುತ್ತಿದ್ದಾರೆ. ಹಣದಾಸೆವುಳ್ಳವರು ಜ್ಞಾನಿಗಳಲ್ಲ. ಅಂತವರು ವಿಶ್ವವಿದ್ಯಾಲಯಗಳಲ್ಲಿ ಇರಲೆಬಾರದು. ವಿಶ್ವವಿದ್ಯಾಲಯಗಳು ವಿದ್ವಾಂಸರದು, ಬರೇ ಕಲಿಕೆಗಾಗಿ ದುಡಿಯುವ ಜನರು ಅಲ್ಲಿರಬೇಕು.

ಮಹಾಜನ ವಿದ್ಯಾಭ್ಯಾಸವನ್ನು ಸರಕಾರವು ಪ್ರಥಮತವಾಗಿ ಕೈಗೊಳ್ಳಬೇಕು. ಪ್ರತಿಯೊಬ್ಬ ಪ್ರಜೆಗೆ ಶಿಕ್ಷಣ ದೊರೆಯಬೇಕು. ಕೆಲವೇ ಮಂದಿ ಅನುಕೂಲ ಪುರುಷರಿಗೆಲ್ಲ. ಶಾಲಾಶಿಕ್ಷಣವು ಹೆಚ್ಚಿನ ಪ್ರಚಾರಕ್ಕೆ ಬರಬೇಕು. ಅಮೇರಿಕಾದಲ್ಲಿ, ಶಾಲೆಗಳಿಂದ ಕಾಲೇಜುಗಳನ್ನು ಸೇರುವವರ ಸಂಖ್ಯೆಯು ಶೇ। ೧೧.೩ರ ಸಲೆಯೂ, ಇಂಗ್ಲಾಂಡಿನಲ್ಲಿ ೨.೩ ಆಗಿರುವಾಗ, ಹಿಂದೂದೇಶದಲ್ಲಿ ಶಾಲೆಗಳಿಂದ ಹೊರಟ ಪ್ರತಿಮೂವರಲ್ಲಿ ಒಬ್ಬನಂತೆ ಕಾಲೇಜನ್ನು ಸೇರುತ್ತಿದ್ದಾರೆ. ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟುದರಿಂದ ಶಾಲಾ ವಿದ್ಯಾಭ್ಯಾಸಕ್ಕೆ ನಿರ್ಲಕ್ಷ್ಯವುಂಟಾಗಿದೆ. ವಿದ್ಯಾರ್ಥಿಗಳನ್ನು ಮುಂದಿನ ಅವರ ಜೀವನಕ್ಕೆ ಸಿದ್ಧಗೊಳಿಸುವ ಬದಲಾಗಿ, ಅದನ್ನು ವಿಶ್ವವಿದ್ಯಾನಿಲಯಕ್ಕೆ ಬೇಕಾದ ರೀತಿಯಲ್ಲಿ ನಡೆಯಿಸುತ್ತಿದ್ದಾರೆ. ೧೯೩೩-೩೪ರಲ್ಲಿ ಪ್ರತಿಯೊಬ್ಬ ಪದವೀಧರನಿಗೆ ಸರಾಸರಿ ರೂ. ೨೦೦—೧೨—೦ ವೆಚ್ಚ ತಗಲಿರುವುದು. ಶಾಲಾ ವಿದ್ಯಾರ್ಥಿಗಾಗಿ ಸರಾಸರಿ ವೆಚ್ಚವು ರೂ ೧೮—೫—೦ ಹಣದ ಕುಟ್ಟಿಯಿರುವ ಸರಕಾರದ ಹೆಚ್ಚಿನ ಲಕ್ಷ್ಯವು ಶಾಲೆಗಳ ಕಡೆಗೆ ಸಲ್ಲತಕ್ಕದ್ದು. ಮಹಾಜನರು ಶಿಕ್ಷಿತರಾಗುವುದು ಅತ್ಯಗತ್ಯವು.

ಶಾಲೆಗಳಲ್ಲಿ ನೂಲುವುದರಲ್ಲೂ ಮತ್ತು ನೇಯುವುದರಲ್ಲೂ ಕಡ್ಡಾಯವಾದ ಶಿಕ್ಷಣವು ದೊರಕಬೇಕು. ಅಲ್ಲದೆ, ಇನ್ನಿತರ ಅನೇಕ ಕೈಗಾರಿಕೆಗಳು ಅಲ್ಲಿ ಬೋಧಿಸಲಾಗಬೇಕು. ಆಗ ಗ್ರಾಮ ಕೈಗಾರಿಕೆಗಳ ಅಭ್ಯುದಯವಾಗುವುದು. ನಮ್ಮ ಯುವಕರು ಶಿಕ್ಷಿತರಾಗುವಾಗ ವೃತ್ತಿತರಬೇತಿಯನ್ನು ಹೊಂದುವರು. ತಮ್ಮ ಜೀವನಮಾರ್ಗವನ್ನು ಕಲ್ಪಿಸುವವರಾಗುವರು.

ಹೀಗೆ ವಿದ್ಯಾಖಾತೆಯನ್ನು ಪುನರ್ವ್ಯವಸ್ಥೆಗೊಳಿಸಿ, ಮಹಾಜನ ಶಿಕ್ಷಣಕ್ಕೆ ಬೇಕಾದ ಹಣವನ್ನು ಗಳಿಸಬಹುದು.

(೯ನೇ ಪುಟದಿಂದ ಮುಂದುವರಿದುದು.)

ನಷ್ಟವಾಗುವುದು. ಹೀಗೆ, ಕಾಂಗ್ರೆಸ್ಸು ಐದು ಯಾ ಹತ್ತು ವರ್ಷಗಳ ಯೋಜನೆಯನ್ನು ಹಾಕಿಕೊಳ್ಳಬೇಕು.

ಅದರಿಂದ ಪ್ರಾಥಮಿಕ ವಿದ್ಯಾಭ್ಯಾಸ, ಗ್ರಾಮಗಳ ಪುನರುತ್ಥಾನ, ರೈತರ ಸಾಲ ನಿವಾರಣೆ, ಇವೆ ಮೊದಲಾದುವುಗಳು ನಡೆಯಬೇಕು. ಇವೆಲ್ಲವುಗಳನ್ನು ಬರೇ ಒಂದು ಯಾ ಎರಡು ವರ್ಷಗಳಲ್ಲಿ ನಡೆಯಿಸುವುದಸಾಧ್ಯ. ಈ ಕೆಲಸಕ್ಕೆ ನಮಗೆ ಪ್ರವೀಣರ ಸಹಕಾರವು ಬೇಕಾಗಿದೆ. ನಿವೃತ್ತ ಸರಕಾರಿ ಉದ್ಯೋಗಸ್ಥರು ತಮ್ಮ ಅನುಭವವನ್ನು ಕಾಂಗ್ರೆಸ್ ಮಂತ್ರಿಮಂಡಳಗಳಿಗೆ ಒದಗಿಸಬಹುದು. ಅಲ್ಪಸಂಖ್ಯಾಕ ಜಾತಿಗಳ ಅನುರಾಗವು ದೊರಕುವಂತೆ ಆಯಾ ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಮಂತ್ರಿಮಂಡಳಗಳು ವರ್ತಿಸಬೇಕು. ಪ್ರಾಂತ್ಯಕೀಯ ಗವರ್ನರರು ಮಂಡಲಕ್ಕೆ ಸರ್ವಾಧಿಕಾರಿಯಾಗಬಾರದು. ಅವರು ಇಂಗ್ಲೆಂಡಿನ ಅರಸರಂತೆ ಬರೇ ಶಾಸನಗವರ್ನರರಾಗಿರಬೇಕು.

ಕಾಂಗ್ರೆಸ್ಸು ಅಲ್ಪ ಸಂಖ್ಯಾಕರಾಗಿರುವ ಪ್ರಾಂತ್ಯಗಳ ಕಡೆಗೆ ನಮ್ಮ ಅತ್ಯಂತ ಲಕ್ಷ್ಯವು ಸಲ್ಲತಕ್ಕದ್ದು. ದುರ್ದೈವವಶಾತ್ ಬಂಗಾಳದಲ್ಲಿ ಕಾಂಗ್ರೆಸ್ಸು ಅಲ್ಪ ಸಂಖ್ಯಾಕವಾಗಿರುವುದು, ಅಲ್ಲಿನ ವಿಚಿತ್ರ ಸ್ಥಿತಿಯಿಂದ—ಹೇಗೆಂದರೆ ಅದು ಅತ್ಯಂತ ಕಾಂಗ್ರೆಸ್ಸು ಪ್ರಾಂತ್ಯವು—ಬಂಗಾಳವು ದಿವಂಗತ ದೇಶಬಂಧು ದಾಸರ ನಾಡು,—ಅದು ಕಾಂಗ್ರೆಸ್ಸಿನ ಆದರ್ಶಗಳಿಗೆ ಎಂದಿಗೂ ಕಡಿಮೆಯೆನಿಸದು.

ಕೋಮುವಾರು ಎವಾರ್ಡು ಇದ್ದಾಗ್ಯೂ, ಪೂನಾ ಪೆಕ್ಟು ಇದ್ದಾಗ್ಯೂ, ಕಾಂಗ್ರೆಸ್ ಪಕ್ಷವೂ ಕೆಲವು ಪ್ರಗತಿಪರ ಪಕ್ಷಗಳೂ ಒಟ್ಟಾಗಿ ಅಲ್ಲಿ ಬೇಗನೇ ರಾಷ್ಟ್ರೀಯ ಮಂತ್ರಿಮಂಡಲವು ರಚನೆಯಾಗಬೇಕು. ಕಾಂಗ್ರೆಸ್ಸಿನವರು ಅಧಿಕ ಮತವನ್ನು ಪಡೆದು, ಅಲ್ಲಿನ ಮಂತ್ರಿಮಂಡಲಗಳನ್ನು ರಚಿಸುವವರಾಗಬೇಕೆಂದು ನಮ್ಮ ಮಹತ್ವಾಕಾಂಕ್ಷೆಯಾಗಿರುತ್ತದೆ. ಈಗ ಅಧಿಕಾರದಲ್ಲಿರುವ ಸರಕಾರವನ್ನು ರದ್ದುಪಡಿಸಿ, ಹೊಸ ಚುನಾವಣೆಯನ್ನು ನಡೆಸಿ, ಕಾಂಗ್ರೆಸ್ಸಿಗೆ ಅಧಿಕ ಮತವನ್ನು ದೊರಕಿಸಿಕೊಳ್ಳಬೇಕು. ಹಿಂದೂ-ಮುಸ್ಲಿಂ ಮೈತ್ರಿಯು ಬೆಳೆಯಬೇಕು. ಅಧಿಕ ಮತವನ್ನು ಪಡೆಯಲು ಇದೇ ಮಹತ್ವದ ಉಪಾಯವು. ಅಂತೆಯೇ ಪಂಜಾಬಿನಲ್ಲೂ ಕಾಂಗ್ರೆಸ್ಸಿಗೆ ಅಧಿಕ ಸ್ಥಾನಗಳು ದೊರಕಬೇಕು. ಎಲ್ಲಾ ೧೧ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ರಚನೆಯಾಗದ ವಿನಹ, ಸ್ವರಾಜ್ಯ ಹೋರಾಟವು ಸಂಪೂರ್ಣವೆನಿಸದು.

ಈಗ, ಶಾಸನಸಭೆಗಳ ಹೊರಗಿನ ಕಾರ್ಯಕ್ರಮಗಳ ಕುರಿತ. ಕಾಂಗ್ರೆಸ್ಸು ಭರತಖಂಡದ ೭ ಲಕ್ಷ ಹಳ್ಳಿಗಳಲ್ಲಿ ಹರಡಬೇಕು. ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಕಾಂಗ್ರೆಸ್ ಕಮಿಟಿಯು ರಚನೆಯಾಗಬೇಕು. ಹಳ್ಳಿಗಳಲ್ಲಿ ಕಾಂಗ್ರೆಸ್ಸಿನ ಕುರಿತಾಗಿ ಮಹತ್ತರದ ಪ್ರಚಾರವು ನಡೆಯಬೇಕು. ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದುದನ್ನು ಪ್ರತಿಯೊಬ್ಬ ಕಾಂಗ್ರೆಸ್ ಪುರುಷನೂ ಸ್ತ್ರೀಯೂ ಅಧಿಕಾರ ವಹಿಸಿದಂತಾಗಬೇಕು. ಕಾಂಗ್ರೆಸ್ ಮಂತ್ರಿಮಂಡಲಗಳ ಸಹಕಾರದಿಂದ, ಅವರು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮವನ್ನು ನಡೆಯಿಸಬೇಕು. ದೃಷ್ಟಾಂತವಾಗಿ,—ಮದ್ಯ ನಿರೋಧದ ಕುರಿತು ಅವರು ಶ್ರಮವಹಿಸಬಹುದು. ಅದು ಯಶಸ್ವಿಯಾಗಿ ನಡೆಯುವಂತೆ ಎಲ್ಲರೂ ಸಾಧಿಸಬಹುದು. ಆ। ಶಾಸನಸಭೆ... ದೇಶದ ... ಒಂದಾದ ರಾಜಕೀಯ ಸಂಸ್ಥೆಯು ... ಶಾಸನಸಭೆಗಳ ಒಳಗೂ, ಹೊರಗೂ ಕಾರ್ಯಕಲಾಪಗಳು ನಡೆಯಬೇಕು. ಕಾಂಗ್ರೆಸ್ ಮಂತ್ರಿನಾಯಕರು ದೃಢ ಪುರುಷರು, ಸ್ವಾರ್ಥ ರಹಿತರು, ದೇಶಭಕ್ತರೂ, ಸ್ವಾತಂತ್ರ್ಯಪ್ರಿಯರೂ, ಆಗಿರುವರೆಂದು ನನ್ನ ನಂಬಿಕೆ. ಭರತಖಂಡದ ಸ್ವರಾಜ್ಯದ ಮತ್ತು ಪಾರ್ಲಿಮೆಂಟರಿ ಚರಿತ್ರೆಯಲ್ಲಿ ಕಾಂಗ್ರೆಸ್ ಮಂತ್ರಿವರ್ಯರು ನೂತನ ಒಂದು ಅಧ್ಯಾಯವನ್ನು ಪ್ರಾರಂಭಿಸುವರು. ಅವರಿಗೆ ಜಯಲಭಿಸಲಿ.

ಕೆಮ್ಮನ್ನು ನಿಲ್ಲಿಸಿರಿ.

ಕೇಂದ್ರ ಅಥವಾ ಪ್ರಾಂತಿಕ ಸರಕಾರದ ಖಜಾನೆಯು ಅಷ್ಟು ತುಂಬಿರುವುದಿಲ್ಲವೆಂದು ಎಲ್ಲರಿಗೂ ತಿಳಿದೇ ಇದೆ. ಇದೇ, ಪ್ರಬಲ ಯೋಚನೆಗಿಟ್ಟಿದೆ. ಸರಕಾರ ನಡೆಸುವ ಉಪಾಯವೇ ತೀವ್ರ ವಿಚಾರಕ್ಕೊಳಪಡುವಂತಿದೆ. ಅತಿ ಚಟುವಟಿಕೆಯುಳ್ಳವರ ಎಲ್ಲ ಶಕ್ತಿಯೂ, ವಿಚಾರವಂತರ ಎಲ್ಲ ವಿವೇಕವೂ ಕೂಡಿದರೆ ಮಾತ್ರ ಏನೊಂದು ಸಾಧ್ಯವಾಗಬಹುದು. ಆದುದರಿಂದ ಕೊಂಗ್ರೆಸ್ ಮಂತ್ರಿಗಳಿಂದಲಾದರೂ ಏನು ಸಾಧ್ಯವಾದೀತೋ ಈ ದರಿದ್ರ ಖಜಾನೆಯಿಂದ? ಮಹಾ ಉತ್ಕೃಷ್ಟ ಆದರ್ಶಗಳನ್ನು ಇಟ್ಟುಕೊಂಡು ಕೊಂಗ್ರೆಸು ಮುಂದರಿಯಲಿಚ್ಛಿಸಿದೆ ನಿಜ, ಆದರೆ ಹಣವಿಲ್ಲ, ಇನ್ನೂ ಆಳಿಕೆಯ ಅಭ್ಯಾಸವಿಲ್ಲ. ಇನ್ನೂ ದೊಡಿವ ಆದಾಯವನ್ನು ಕುಂದಿಸುವ ಬಗೆಯ ಸುಧಾರಣೆಗಳನ್ನು ಕಾಂಗ್ರೆಸು ಕೈಗೊಳ್ಳುವಂತಿದೆ. ತೀರ್ವೆ ಇಳಿಸಬೇಕು, ಮದ್ಯದ ಸುಂಕ ಇಳಿಸಬೇಕು, ಎಂದಿರುವ ಕಾರಣ, ಖಜಾನೆಯಲ್ಲಿ ತುಂಬಲಿರುವ ಹಣ ಕಾಸುಗಳೂ ಕಡಮೆಯಾಗುವ ಸಂಭವವಷ್ಟೆ? ಇದನ್ನು ತಿಳಿದೂ,—ಶಿಕ್ಷಕರು ತಮ್ಮ ನಿರೀಕ್ಷೆಗಳನ್ನು ಬಹಳ ಹೆಚ್ಚಾಗಿಟ್ಟರೆ ಅವರಿಗೂ ಮೋಸ ಉಂಟು, ಹೊಸ ಸರಕಾರವನ್ನು ಕೈಕೊಂಡವರಿಗೂ ಬಾಧೆಯುಂಟು. ಆದುದರಿಂದ ಇದನ್ನು ಸ್ಮರಣೆಯಲ್ಲಿಟ್ಟುಕೊಂಡು, ಸಾಮಾನ್ಯ ಸುಧಾರಣೆಗಳನ್ನೆ ಮಾತ್ರ ನಿರೀಕ್ಷಿಸುವುದು ಹಿತಕರವಾಗಿದೆ. ಜನತೆಯು ರಾಷ್ಟ್ರೀಯ ಸರಕಾರದಲ್ಲಿಟ್ಟ ವಿಶ್ವಾಸವು ಆಗ ಕೆಡಲಾರದು; ಮಂತ್ರಿಗಳಿಗೂ ಧೈರ್ಯ ಹೆಚ್ಚುವುದು.

ಶಿಕ್ಷಣದ ಹೊಸ ಯೋಜನೆಯಾಗುತ್ತದೆಂದು ಎಲ್ಲರೂ ಕೇಳುತ್ತಿರುವಿರಷ್ಟೆ. ಎಷ್ಟೋ ಸಲ ಹೊಸ ತಿದ್ದುಪಡಿಗಳಾಗುತ್ತಿರುವಾಗ ಉಪಾಧ್ಯಾಯರು ತಾವೇನೂ ವಿಮರ್ಶಿಸದೆಯೂ ಅಭಿಪ್ರಾಯ ಕೊಡದೆಯೂ ತಿದ್ದುಪಡಿಗಳನ್ನು ತಲೆಬಾಗಿ ವಹಿಸಿಕೊಂಡಿರುವರು ಈಗ? ಇನ್ನಾದರೂ ಆಗಲಿರುವ ಸುಧಾರಣೆಗಳನ್ನು ಸರಿಯಾಗಿ ವಿಮರ್ಶಿಸಿ, ತಮ್ಮ ಅನುಭವದಂತೆ ಪಡೆವ ಅಭಿಪ್ರಾಯವೇನ ? ಹೇಗೆ ಸುಧಾರಣೆಗಳಾದರೆ ಸರಿಯಾದೀತು? ಎಂದು ಅವರು ಸ್ಪಷ್ಟವಾಗಿ ತಿಳಿಸಬೇಕು. ಹೆತ್ತವರನ್ನು, ಯುನಿವರ್ಸಿಟಿಯನ್ನು, ಕಾಯಿದೆಯನ್ನು, ಇವಾವುವೂ ಉಪಾಧ್ಯಾಯರ ಕೆಲಸವನ್ನು ಇನ್ನಷ್ಟು

ಮಾನ್ಯ ಶ್ರೀನಿವಾಸ ಶಾಸ್ತ್ರಿಯವರು

ಕಠಿಣವಾಗಿ ಮಾಡಿಕೊಟ್ಟಿರುವುದಕ್ಕೆ ದೂರಿದುದೆ ಇಲ್ಲ. ವಿದ್ಯಾಸಂಸ್ಥೆಗಳ ಒಳಗೆ ನಡೆವ ಕಾರ್ಯಗಳನ್ನು ತಿಳಿಯದವನು ತನ್ನನ್ನು ಮಾತ್ರವಲ್ಲದೆ ಲೋಕವನ್ನೇ ತಪ್ಪು ಎಣಿಕೆಗೆ ಒಳಗಾಗಿಸಬಹುದು. ಸುಧಾರಣೆಗಳಿಂದ ಸುಖವನ್ನಾಗಲೀ ದುಃಖವನ್ನಾಗಲೀ ಅಗತ್ಯವಾಗಿಯೂ ಅನುಭವಿಸಲಿರುವ ಉಪಾಧ್ಯಾಯರು ಜನತೆಗೆ ಸುಧಾರಣೆಗಳ ವಿಷಯವಾಗಿ ಸ್ಪಷ್ಟವಾಗಿ ನುಡಿಯುವಂತಾಗಬೇಕೆಂದು ಜನತೆಯೇ ನಿರೀಕ್ಷಿಸಿಯುದೆ.

ಹೊಸ ಸುಧಾರಣೆಗಳು ಆಗಲಿವೆ. ಅವುಗಳಿಂದ ಪ್ರಯೋಜನವೋ ಕೇಡುಕೋ ಉಂಟಾಗುವುದು ನಿಮ್ಮನ್ನೇ ಬಹಳವಾಗಿ ಹೊಂದಿಕೊಂಡಿದೆ. ಕೊಂಗ್ರೆಸ್ಸಿನವರ ಧ್ಯೇಯಗಳು ಉತ್ತಮವಾಗಿರುವುವಾದರೂ, ಅವರ ಕೈಯಲ್ಲಿ ಹಣವು ಹೆಚ್ಚಾಗಿಲ್ಲ. ಅವರ ಕೈಯಲ್ಲಿರುವ ಹಣವನ್ನು ಅವರು ವಿಚಾರದಿಂದ, ಯೋಗ್ಯ ರೀತಿಯಿಂದ ಬಲು ಜಾಗರೂಕತೆಯಿಂದ ವ್ಯಯಿಸಬೇಕಾಗಿದೆ, ಅವರು ಹಾಗೆ ವ್ಯಯಿಸುವಾಗ, ನೀವು ವಿಶೇಷ ಸಾಧಕವಾದ ಸೂಚನೆಕೊಡುವುದಕ್ಕೆ ಎಂದರೆ ಅದು ಕಾರಣವೇ ವಿಶೇಷ ಜವಾಬ್ದಾರಿಯನ್ನು, ಹೊರುವುದಕ್ಕೆ ಅರ್ಹರಾಗಿರುತ್ತೀರಿ.

ಶ್ರೀ ಸಿ. ಜೆ. ವಾರ್ಕಿಯವರು ಮದ್ರಾಸು ಕೊರ್ಪರೇಶನಿನ ಉಪಾಧ್ಯಾಯರ ಕೂಟದಲ್ಲಿ ಭಾಷಣಮಾಡುತ್ತಾ ಹೀಗೆಂದರು:—

ಸರಕಾರವು ಎಲ್ಲ ತರಗತಿಗಳ ಶಿಕ್ಷಣವನ್ನು ವಿಮರ್ಶಿಸಿ ಸುಧಾರಣೆಮಾಡಲಿರುವಾಗ, ನಿಮ್ಮ ಅಭಿಪ್ರಾಯಗಳಿಗೆ ಬೆಲೆಯುಂಟು. ಸುಧಾರಣೆಗಳ ಅಗತ್ಯವು ನಿಮ್ಮ ಇಲಾಖೆಯಲ್ಲಿ ಇರಬೇಕಾಗಿರುವಷ್ಟು—ಮತ್ತಾವ—ಇಲಾಖೆಯಲ್ಲೂ ಇಲ್ಲ. ಮೆಕಾಲೇ ಸಾಹೇಬರ ಕಾಲದ ಕ್ರಮವು ಇನ್ನೂ ಇದೆ; ಅದರೂ, ನಮ್ಮಲ್ಲಿ ಆತ್ಮಗೌರವವನ್ನು ಉಂಟುಮಾಡಿರುವ ಕ್ರಮವೇ ಅದು. ಸುಧಾರಣೆಗಳನ್ನು ಮಾಡುವಾಗ ಹಿಂದಣ ಕ್ರಮಗಳಲ್ಲಿನ ಹಿತಕರ ಅಂಶಗಳನ್ನು ಕಿತ್ತು ಬಿಸುಡಲಾಗದು. ಮೇಲಂತಸ್ತಿನಿಂದಲೇ ಸುಧಾರಣೆಗಳಾಗಬೇಕಾಗಿವೆ. ಸಾಮಾನ್ಯ ಯೋಗ್ಯತೆಯುಳ್ಳ ವಿದ್ಯಾರ್ಥಿಗಳು ಸರಕಾರೀ ಹುದ್ದೆಗಳ ಆಸೆಯಿಂದ ಯೂನಿವರ್ಸಿಟಿ ಶಿಕ್ಷಣಕ್ಕೆ ಮನಗೊಡುವುದು ಇನ್ನು ವ್ಯರ್ಥವಾದೀತು, ಏಕೆಂದರೆ, ಮುಂದೆ ಸರಕಾರೀ ಹುದ್ದೆಗಳಿಗೆ ಈಗ ಇರುವಷ್ಟು ತಳಕು ಉಳಿಯಲಾರದು.

ಎಲ್ಲ ಆರ್ಟ್ಸ್ ಕೊಲೇಜುಗಳನ್ನು ವಜಾಪಡಿಸುವುದು ವಿಹಿತವೆಂದು ಒಬ್ಬ ಎಸೆಂಬ್ಲಿ ಮೆಂಬರರು ಸೂಚನೆ ತರಲಿರುವರು. ಇದನ್ನು ನೋಡಿದರೆ, ಪ್ರತಿನಿಧಿಗಳ ಅಭಿಪ್ರಾಯವು ಯಾವ ಕಡೆಗಿದೆ ಎಂದು ತಿಳಿಯಬಹುದು. ಯೂನಿವರ್ಸಿಟಿ ವಿದ್ಯಾಭ್ಯಾಸವು ಇದುವರೆಗೆ ಯಾವುದರ ಸಲುವಾಗಿ ಜನತೆಗೆ ಅಗತ್ಯವೆನಿಸಿದ್ದಿತೋ ಅಂತಹ ಸರಕಾರೀ ಹುದ್ದೆಗಳ ಪ್ರೇಮವು ಇನ್ನು ಜನತೆಯಲ್ಲಿ ಉಳಿದಿಲ್ಲ. ಎಲ್ಲರಿಗೂ ಸ್ಕೂಲು ಫೈನಲ್ ವರೆಗಣ ವಿದ್ಯಾಭ್ಯಾಸವು ದೊರೆತರೆ ಸಾಕು. ಇಷ್ಟಾದ ಬಳಿಕ, ವೃತ್ತಿಶಿಕ್ಷಣಕ್ಕೆ ಪ್ರತಿಯೊಬ್ಬನಿಗೂ ಅನುಕೂಲತೆ ಇರಬೇಕು. ಪ್ರತಿಯೊಬ್ಬರೂ ಗ್ರೆಡ್ಯುವೇಟರಾಗಬೇಕೆಂದೇನೂ ಇಲ್ಲವಷ್ಟೆ.

ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಎರಡು ಶಾಖೆಗಳನ್ನು ಏರ್ಪಡಿಸುವ ಆಲೋಚನೆ ಇದೆ. ಇದು ಸರಿಯೋ ತಪ್ಪೊ ಎಂಬ ವಿಚಾರವಾಗಬೇಕು. ಹೇಗಿದ್ದರೂ, IV ಫೋರ್ಮಿನಲ್ಲೇ ವಿದ್ಯಾರ್ಥಿಯಾಗಲಿ ಅವನ ಹಿರಿಯರಾಗಲೀ ಮುಂದೆ ವಿದ್ಯಾರ್ಥಿಯು ಯೂನಿವರ್ಸಿಟಿಗೆ ಹೋಗುವುದೇ ಅಥವಾ ವೃತ್ತಿಶಿಕ್ಷಣ ಹೊಂದುವುದೇ ಎಂದು ನಿರ್ಧರಿಸುವುದು ಪ್ರಯಾಸವೆಂದು ನನ್ನ ಅಭಿಪ್ರಾಯ. ಹೀಗೆ ಎರಡು ಶಾಖೆಗಳನ್ನು ಏರ್ಪಡಿಸುವುದು ಯೋಗ್ಯವಲ್ಲವೆಂದು ನನ್ನ ಅಭಿಪ್ರಾಯ. ಕಡ್ಡಾಯವಾಗಿರುವ ಶಿಕ್ಷಣವನ್ನು ವಗಿಸಿ, ಒಂದೆರಡು ಬಗೆಯ ವೃತ್ತಿಗಳನ್ನು ವಿದ್ಯಾರ್ಥಿಯು ಕಲಿಯುವುದು ಲೇಸು. ಹೀಗಾದರೆ ಕೆಲವರಿಗೆ ಯುನಿವರ್ಸಿಟಿಗೂ ಕೆಲವರಿಗೆ ಅಲ್ಲೇ ಪೂರ್ತಿ ಹೊಂದುವುದಕ್ಕೆ ಅಗತ್ಯವಾದ ಶಿಕ್ಷಣದೊರೆಯುದೆನ್ನುತ್ತೇನೆ. ಈ ವಿಷಯವನ್ನು ಶಿಕ್ಷಕರೇ ಚರ್ಚಿಸಿ ನಿರ್ಧರಿಸುವುದು ಯೋಗ್ಯ. ಶಿಕ್ಷಕರಲ್ಲಿದವರೂ ತಮ್ಮ ಅಭಿಪ್ರಾಯವನ್ನು ತಿಳಿಸಬಹುದು; ಇವೆರಡು ಅಭಿಪ್ರಾಯಗಳನ್ನು ಒಳಗೊಂಡು ಚೆನ್ನಾಗಿ ಮಥಿಸಿ, ಸುಧಾರಣೆಮಾಡಬರುವುದು.

ಹಾಯರ್ ಎಲಿಮೆಂಟರಿ ಶಾಲೆಗಳು ಸ್ವಯಂಪರಿಣತವಾಗುವಂತಾಗಬೇಗೆಂದು ಅಭಿಪ್ರಾಯವಿದೆ. ಎಂಟನೇ ತರಗತಿಯಿಂದ ಈಗ ವಿದ್ಯಾರ್ಥಿಗಳು ಹೈಸ್ಕೂಲುಗಳ IV Form ಸೇರುತ್ತಾರೆ. ಮುಂದೆ, ಸರಕಾರದ ಸರ್ಕ್ಯುಲಾರಿನಂತೆ, ಹಳ್ಳಿ ಶಾಲೆಗಳ ಹಾಯರ್ ಎಲಿಮೆಂಟರಿ ಶಾಲೆಗಳಿಂದ ನೇರಾ IV Form ಸೇರಲು ವಿದ್ಯಾರ್ಥಿಗಳಿಗೆ ಸುಲಭವಾಗಲಾರದು. ಉತ್ತಮವಾಗಿರುವ ಹಾಯರ್ ಎಲಿಮೆಂಟರಿ ಶಾಲೆಗಳನ್ನು ಸೆಕೆಂಡರಿ ಶಾಲೆಗಳನ್ನಾಗಿ ಮಾಡುವುದೂ, ಎಲಿಮೆಂಟರಿ ವಿದ್ಯಾಭ್ಯಾಸವನ್ನು 5ನೇ ತರಗತಿಗೆ ಮುಕ್ತಾಯಗೊಳಿಸುವುದೂ ವಿಹಿತವಾಗಿದೆ ಎಂದು ನನ್ನ ಅಭಿಪ್ರಾಯ. ಪ್ರೈಮರಿ ಶಾಲೆಗಳ ಉದ್ದೇಶವು ಅಕ್ಷರತೆಯನ್ನು ಪ್ರಚಾರಗೊಳಿಸಿ, ಸಾಮಾನ್ಯ ತಿಳುವಳಿಕೆ ಹೆಚ್ಚಿಸುವುದಷ್ಟೆ ಆಗಿದೆ. ಇದು ನಿಜವಾದಲ್ಲಿ, ಪ್ರತಿಯೊಂದು ಹಳ್ಳಿಗೂ 5ನೇ ತರಗತಿ ವರೆಗಣ ಪ್ರೈಮರಿ ಶಾಲೆಗಳು ಇದ್ದರೆ ಸಾಕೆನ್ನುತ್ತೇನೆ.

ಕಡ್ಡಾಯ ವಿದ್ಯಾಭ್ಯಾಸಕ್ಕಿಂತ, ಪ್ರೈಮರಿ ಶಾಲೆಗಳಲ್ಲಿ ಪಾಠಕ್ರಮವನ್ನು ತಿದ್ದುವುದು ಅಗತ್ಯವಾಗಿದೆ. ಕಡ್ಡಾಯ ವಿದ್ಯಾಭ್ಯಾಸವು ಅಸಂತುಷ್ಟಿಯನ್ನೂ ಖರ್ಚನ್ನೂ ಉಂಟುಮಾಡುವುದು. ಅದರ ಬದಲಾಗಿ, ಅಗತ್ಯವಾಗಿರುವ ವಿಷಯಗಳನ್ನು ಕಲಿಸಲು ಬೇಕಾದ ಪಾಠಕ್ರಮವನ್ನು ಜಾರಿಗೆ ತಂದರೆ, ಅಕ್ಷರತೆ ಹರಡುವುದು. ಇದಕ್ಕೆ ತಗಲುವ ಖರ್ಚು ಕಡಿಮೆ, ಈಗಣ ಶಾಲೆಗಳಿಗೆ ಆಗುವಷ್ಟು ಕಡಿಮೆ ಬಾಧೆ ತಗಲವುದು.

ಗೌರವಯುಕ್ತವಾಗಿರುವ ವೃತ್ತಿಗೆ ಸೇರಿರುವ ಉಪಾಧ್ಯಾಯರು ತಮ್ಮ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸಿ, ತಮ್ಮ ಉದ್ಯೋಗದಲ್ಲಿ ಹೆಮ್ಮೆಗೊಳ್ಳುವಂತಾಗಬೇಕು. ಏಷ್ಟೋ ಮಂದಿ, ಬೇರೆ ಉದ್ಯೋಗವಿಲ್ಲದೆ, ಉಪಾಧ್ಯಾಯ ವೃತ್ತಿಯನ್ನು ಕೈಕೊಂಡಿರುವರು. ಯೋಗ್ಯ ಉಪಾಧ್ಯಾಯರು ಇರುವದಾದರೆ, ಶಿಕ್ಷಣದ ಕ್ರಮ ಎಂತಹದಾದರೂ ತಪ್ಪಾಗದು, ಕುಂದಿಲ್ಲ. ಅಂತಹ ಯೋಗ್ಯತೆ ಬೇಕು.

ಉಪಾಧ್ಯಾಯರ ಸಹಕಾರವಿಲ್ಲದೆ, ಸರಕಾರವು ಏನೂ ಮಾಡಲಾರದು. ಪ್ರಾಥಮಿಕ ಉಪಾಧ್ಯಾಯರ ಸಂಬಳವೆಂತೂ ಕಡಮೆಯಾಗದು, ಇನ್ನಷ್ಟು ಕಾಲದಲ್ಲಿ, ಸ್ವಲ್ಪ ಹೆಚ್ಚಲೂಬಹುದು. ಆದರೆ, ಇದಕ್ಕೆಲ್ಲ ಸ್ವಲ್ಪ ವಿಳಂಬವಾಗದೆ ನಿರ್ವಾಹವಿಲ್ಲ. ಅದುವರೆಗೆ ಸ್ಥೈರ್ಯವಿರಲಿ.

THEY WORK WHILE YOU REST.

Industrious Rupees are busy turning out more Rupees to savers in our bank. But they do not jump in and go to work of their own free will. You have to start them and encourage them. The best way is to give them friends. Rupees are very sociable, and if they are lonely they do little. But if you keep adding more Rupees in to your account they do their best. And the more they work the more you can rest.

RESOURCES OF A CRORE. ESTD: 1906 CANARA BANK, LIMITED.

ಪರಿವಿಡಿ.

[illegible]

[illegible]

[illegible]

[illegible]

[illegible]

ಗ್ರಂಥ

ಶಾಲಾ ಸಮಯ

ವರ್ತಮಾನ ಸಂಗ್ರಹ.

ವಿವಿಧ ಸಮಾಚಾರಗಳು ೧೧

ಬೆಂಗಳೂರು ಸಮಾಚಾರ ೧೪

ತಾಲೂಕುಗಳಿಂದ ,,

೨೦ ಸಾವಿರ ಆದಿಗಳ ಸೀರೆ ಹಾರ... ೧೪

ಸ್ವದೇಶಾಭಿಮಾನಿ.

ತಾ.೨೦ನೇ ಶುಕ್ರವಾರ ಆಗೋಸ್ಟು ೧೯೩೭

ಶಾಲಾ ಸಮಯ

ತ್ರಿವಾಂಕೂರಿನ ಸರಕಾರವು ಶಿಕ್ಷಣ ಸುಧಾರಣೆಗೆ ಕೈಹಚ್ಚಿ ಬಹಳ ದಿನಗಳಾಗಿಲ್ಲ. ಇತರ ಸಂಸ್ಥಾನಗಳು ರಾಜ್ಯಗಳು ಸುಧಾರಣೆಯ ಕ್ರಮಗಳನ್ನು ವಿಮರ್ಶಿಸಿ ಇನ್ನೂ ತೀರ್ಮಾನ ಮಾಡಿರದೆ ಸುಧಾರಣಾಪ್ರಿಯರೆಂದು ಕೀರ್ತಿಗೊಂಡುತ್ತಿರುವಷ್ಟರಲ್ಲಿ, ಔದ್ಯೋಗಿಕ ಶಿಕ್ಷಣವನ್ನಾಗಿ ಹೇಗೆ ವಿಧಿಸಬಹುದೆಂದು ಇನ್ನೂ ವಿಚಾರಿಸುತ್ತಿರುವುದರೊಳಗೆ, ಈ ಸರಕಾರವು ಕೆಲವು ಏರ್ಪಾಡುಗಳನ್ನು ಮಾಡಿಟ್ಟು, ಅವುಗಳನ್ನು ಎಲ್ಲೆಲ್ಲಿಯೂ ರೂಢಿಗೆ ತರುವ ಮೊದಲು ಕೆಲವು ಪ್ರಾಥಮಿಕ ಶಿಷ್ಟಪದ್ಧತಿಗಳನ್ನು ಇಷ್ಟರಲ್ಲೇ ಮಾಡಿರುವುದು. ಇದರಂತೆ ಬೆಳಗ್ಗೆ 7ರಿಂದ 11ರವರೆಗೆ ಮಾತ್ರ ವಾರದಲ್ಲಿ ಆರು ದಿನ ಪಾಠಕ್ರಮ ನಡೆಯುವುದು. ಮಧ್ಯಾಹ್ನ ನಂತರ, ಔದ್ಯೋಗಿಕ, ಕಲಾ ಅಥವಾ ವ್ಯಾಯಾಮ ಶಿಕ್ಷಣಕ್ಕೆ ಅನುಕೂಲತೆ ಕೊಡಲಾಗುವುದು. ಬೆಳಗ್ಗಿನ ವೇಳೆ ಮಕ್ಕಳಲ್ಲಿ ಚಟುವಟಿಕೆ ತುಂಬಿದ್ದು, ದಿನ ಬೆಳೆಯುತ್ತ ಹೋಗುವಂತೆ ಚಟುವಟಿಕೆ ಕಡಮೆಯಾಗುತ್ತ ಬರುವುದು ಎಂದು ಶಾಸ್ತ್ರಜ್ಞರ ಮಾತಿದೆ. ನಡು ಹಗಲಲ್ಲಿ ಎರಡು ಸಲ ಮನೆಗೆ ಹೋಗಿ ಬರುವ ಅದರಲ್ಲೂ ಆಹಾರವನ್ನು ಸಾವಕಾಶವಾಗಿ ಉಣ್ಣದೆ ಓಡಿಬರುವ ವಿದ್ಯಾರ್ಥಿಗಳಿಂದ ಮಾನಸಿಕ ಕೆಲಸವೇನೂ ಸಾಗಲಾರದೆಂದೂ ಅಭಿಪ್ರಾಯಗಳಿವೆ. ಔದ್ಯೋಗಿಕ ಶಿಕ್ಷಣವು ಶಾಲೆಗಳಲ್ಲಿ ಎಲ್ಲ ತರಗತಿಗಳ ಮಕ್ಕಳಿಗೆ ಒಂದೇ ವೇಳೆ ಸಿಗುವುದು ದುರ್ಲಭ. ಆದಕ್ಕಾಗಿ ಅಲ್ಲಲ್ಲಿನ ಕಾರ್ಖಾನೆಯೇ ಮೊದಲಾದುವುಗಳಿಗೆ ಮಕ್ಕಳನ್ನು ಕಳುಹಿಕೊಡಬೇಕಾಗುವುದು. ಮೊದಲನೆ ತರಗತಿಗಳಲ್ಲಿ ನಾಲ್ಕಾರು ಮಕ್ಕಳನ್ನು ಅವರ ಮನೆಯ ಬಳಿಯ ಯಾವುದೊಂದು ಸ್ಥಾನದಲ್ಲಿ ಕೂಡಿಸಿ ಅಲ್ಲಿಯೇ ಶಿಕ್ಷಣ ಸಿಗುವಂತೆ ವೃತ್ತಿಶಿಕ್ಷಣಕ್ಕೆ ಅನುಕೂಲತೆ ಕಲ್ಪಿಸಿದರೆ ಉತ್ತಮವೆಂದೂ, ನಿರುದ್ಯೋಗಿ ಶಿಕ್ಷಕರಲ್ಲಿ ಹಲವರನ್ನು ವೃತ್ತಿಶಿಕ್ಷಣ ಕಲಿಸುವರೆ ತರಬೇತುಗೊಳಿಸಿದರೆ ಅವರಿಂದ ಈ ಮಕ್ಕಳ ನಿಗಾ ತೆಗೆದುಕೊಳ್ಳುವ ಉಪಯೋಗವಾಗುವುದೆಂದು ನಂಬಲಾಗಿದೆ. ಮಧ್ಯಾಹ್ನವೆಲ್ಲ ಉಪಾಧ್ಯಾಯರಿಗೆ ತಮ್ಮ ಉದ್ಯೋಗಕ್ಕೆ ಸಂಬಂಧವಿರುವ ಹೆಚ್ಚಿನ ಮಾಹಿತಿ ದೊರಕಿಸಿಕೊಳ್ಳಲು ಅವಕಾಶ ಸಿಗುವುದೆಂದೂ ಭಾವಿಸಲಾಗಿದೆ.

ಬಂಗಾಳದ ಮಂತ್ರಿಮಂಡಲ

ದಿನೇ ದಿನೇ ಈ ಮಂತ್ರಿಮಂಡಲದ ಕಾರ್ಯ ವೃತ್ತಾಂತಗಳನ್ನು ಓದುವಾಗ, ಮಂತ್ರಿಮಂಡಲವು ಇನ್ನು ಬಹುದಿನ ಕಳೆಯುವ ಹಾಗಿಲ್ಲವೆಂದೂ, ಅಥವಾ ಬಾಳಿದರೂ ಅಪಕೀರ್ತಿಯನ್ನು ತಂದುಕೊಳ್ಳುವುದೆಂದು ಭಾವಿಸಬೇಕಾಗಿದೆಂದು ಅಲ್ಲಿನ ಪತ್ರಿಕೆಗಳು ಟೀಕಿಸ ಹೊರಟಿವೆ. ಸುತ್ತಲೂ ಕಾಂಗ್ರೆಸ್ ಮಂತ್ರಿಗಳ ಕಾರ್ಯಕ್ರಮದಿಂದ ಬಂಗಾಳದ ಜನತೆಯು ತಮ್ಮ ಮಂತ್ರಿಗಳಿಂದಲೂ ಉದಾರ ಭಾವದ ವಿಚಾರಗಳು ಹೊರಬೀಳುವುದೆಂದು ನಂಬಿ ಕಾಯುತ್ತಿರುವಾಗ, ಬಂಗಾಳದಲ್ಲಿ ಅಂಥ ಔದಾರ್ಯ ಪ್ರದರ್ಶನಕ್ಕಿಂತಲೂ ಹೆಚ್ಚಿನ ಕಾಠಿಣ್ಯವೇ ಬಯಲಾಗುತ್ತಿರುವುದು ಶೋಚನೀಯವಾಗಿದೆ. ಮಂತ್ರಿಮಂಡಲದ ಸಂಖ್ಯೆ ಸಂಬಳ, ಸೆಕ್ರೆಟರಿಗಳು, ಸದಸ್ಯರ ತಲಬು ಮೊದಲಾದುವು ಇತರ ಪ್ರಾಂತ್ಯಗಳಲ್ಲಿನವುಗಳಿಗಿಂತ ವಿಶೇಷ ಅಧಿಕವಾಗಿದ್ದು, ಕಡಮೆ ಉತ್ಪನ್ನವುಳ್ಳ ಬಂಗಾಳಕ್ಕೆ ಸ್ವಯಾಧಿಕ್ಯಕ್ಕೆ ಕಾರಣವಾಗಿವೆ. ಮಂತ್ರಿಗಳಲ್ಲಿ ಶಿರೋಮಣಿಗಳಾಗಿರುವ ಫಜಲುಲ್ ಹುಕ್ಕರು ಮುಖ್ಯ ಸ್ಥಾನದಲ್ಲಿ ಮೆರೆಯುವವರೇ ವಿನಾ, ಮಂಡಲದ ನಾಯಕತ್ವವನ್ನು ಅಧಿಕಾರ ವಾಣಿಯಿಂದ ನಡಿಸುವ ಕರ್ತವ್ಯವನ್ನು ಹಿಂದಣ ಮಂತ್ರಿಮಂಡಲದಲ್ಲಿದ್ದ ಇತರ ಆಧ್ಯರೇ ಪೂರಯಿಸಿ, (ಮೆಕ್‌ಡೊನಾಲ್ಡ ಬೋಲ್ಡವಿನ್ನರ ನೆಶನಲ್ ಸರಕಾರದಂತೆ) ಮೆರೆಯುತ್ತಿರುವರು. ಮುಖ್ಯ ಮಂತ್ರಿಗಳು ಕೊಡುವ ಮಾತುಗಳನ್ನು ಇತರ ಮಂತ್ರಿಗಳು ಪೂರಯಿಸುವ ಹಾಗಿಲ್ಲ. ಅಂದಮಾನದ ಕೈದಿಗಳ ಉಪವಾಸ ವಿಷಯದಲ್ಲಿ ಇವರ ವರ್ತನವು ಜನತೆಯಲ್ಲಿ ಕ್ಷೋಭೆಯನ್ನು ಉಂಟುಮಾಡಿರುವುದು. ಇದು ವರೆಗೆ ಇವರು ಜನತೆಗಾಗಿ ಮಾಡಿದ ಉಪಕಾರವೇನೆಂದು ಬಣ್ಣಿಸುವುದಕ್ಕೇನೂ ದೊರೆವುದಿಲ್ಲ. ಯಾವುದೊಂದು ಬಗೆಯ ಸಂಪದಭ್ಯುದಯ ಕಾರ್ಯಗಳಿಗೆ ಇವರು ಕೈಹಚ್ಚಿದುದಿಲ್ಲ. ಈ ಬಂಜೆತನಕ್ಕೊಂದು ಪ್ರತಿಮೆಯ ಮೂಲಕ ಸ್ಮಾರಕ ಕಟ್ಟಿಸಿದರಾದೀತೆಂದು ಅಲ್ಲಿನ ಪತ್ರಿಕೆಗಳು ಟೀಕಿಸುತ್ತವೆ. ಜನತೆಯಲ್ಲಿ ಉತ್ಸಾಹವು ಕಡಮೆಯಾಗಿ, ಕ್ಷೋಭೆಯು ಹೆಚ್ಚುವಂತಾಗುವಾಗ ಕೊನೆಗೆ ಸಂಜೀವನ ಮಂತ್ರವನ್ನು ಈ ಮಂಡಲವು ಜಪಿಸುತ್ತ 'ಕಾಂಗ್ರೆಸ್ ಪಕ್ಷವು ನಮ್ಮನ್ನು ಹೊರದೂಡುವುದಕ್ಕಾಗಿಯೆ ಹೀಗೆ ಸುಮ್ಮನೆ ಟೀಕಿಸುವುದಕ್ಕಾಗಿಯೂ, ಮುಸ್ಲಿಮರ ಅಧಿಕಾರ ತಪ್ಪಿಸುವುದಕ್ಕಾಗಿಯೆ ಸಹಕರಿಸರಿರುವರಾಗಿಯೂ' ಸಾರತೊಡಗಿದೆ. ಇತರ ಪ್ರಾಂತ್ಯಗಳಲ್ಲಿ ನಡೆವುದನ್ನು ತಿಳಿಯುವ ಜನತೆಯು ಈ ವಿಷಯವನ್ನು ಸರಿಯಾಗಿ ವಿವೇಚಿಸದೆ ಇದ್ದೀತೆ?

ಕಾಂಗ್ರೆಸ್ ಪ್ರಾಂತ್ಯಗಳ ಸಮಾನ ಧೋರಣೆ.

ಮುಖ್ಯವಾಗಿ, ನೆರೆ ಹಾವಳಿ, ನೀರಾವರಿ ಸಂಕಷ್ಟಗಳು, ಕೃಷಿಯ ಅಭ್ಯುದಯ, ವಿದ್ಯುಚ್ಛಕ್ತಿಯ ಉತ್ಪಾದನೆ ಮೊದಲಾದುವು ಯಾವುದೊಂದೇ ಪ್ರಾಂತ್ಯಕ್ಕೆ ಸಂಬಂಧಪಡದೆ ಇರುವ ಕಾರಣ, ಎಲ್ಲ ಪ್ರಾಂತ್ಯಗಳಿಗೆ ಅನ್ವಯಿಸುವಂತಹ ಸುಧಾರಣೆಗಳನ್ನು ಸೂಚಿಸಲು ನಿಪುಣರದೊಂದು ಕಮಿಟಿಯನ್ನು, ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕವಾಗಿ ನಿಯಮಿಸಬೇಕಾಗಿದೆ. ಈ ವಿಷಯಗಳು ಜನತೆಯ ಸೌಖ್ಯಭಿವೃದ್ಧಿಗೆ ಅಗತ್ಯವಾದುವುಗಳು. ಅದರೆ ಇವನ್ನು ತೀರ್ಮಾನಿಸಬೇಕಾದರೆ ಪ್ರಾಂತ್ಯದಲ್ಲೆಲ್ಲ ತಜ್ಞವಿಷಯಕವಾದ ವಿಚಾರಗಳನ್ನು ಒಂದುಗೂಡಿಸಬೇಕು. ಯಾವುದೊಂದು ಪ್ರಾಂತ್ಯಕ್ಕಾಗಿ ಕಾರ್ಯಕ್ರಮ ರಚಿಸಿ ಕೈಕೊಳ್ಳುವಾಗ ಇತರ ನೆರೆಹೊರೆಯ ಪ್ರಾಂತ್ಯದ ಸೌಕರ್ಯಗಳನ್ನೂ ಮನಸ್ಸಿಗೆ ತಂದುಕೊಳ್ಳಬೇಕು. ನದಿಗಳ ನೀರು, ನೆರೆಯಾಗಿ ಹಾವಳಿ ಹಚ್ಚಿಸದಂತಾಗಬೇಕಾದರೆ ಆ ನೀರಿನಿಂದ ವಿದ್ಯುತುತ್ಪಾದನೆಗಾಗಿಯಾಗಲಿ, ಕೃಷಿಯ ಸೌಕರ್ಯಗಳಿಗಾಗಲಿ ನೀರನ್ನು ಉಪಯೋಗಿಸುವ ವ್ಯವಸ್ಥೆಗಳಾಗಬೇಕು. ಆ ನದಿಯೂ ಮೂರು ನಾಲ್ಕು ಪ್ರಾಂತ್ಯಗಳಿಂದ ಹಾದುಹೋಗುವಂತಿದ್ದರೆ, ಪ್ರತಿಯೊಂದು ಪ್ರಾಂತ್ಯದ ಸಲುವಾಗಿಯೂ ಈ ವಿಚಾರಸಂಗ್ರಹವಾಗಬೇಕು. ಅದರಂತೆ ಕೈಗಾರಿಕೆಯ ಅಭಿವೃದ್ಧಿ ಸಾಧಿಸುವುದಕ್ಕಾದರೂ ಎರಡು ಮೂರು ಪ್ರಾಂತ್ಯಗಳು ಸಹಕರಿಸದಲ್ಲದೆ ಸಾಧ್ಯವಾಗಲಾರದಷ್ಟೆ. ಇದಕ್ಕಾಗಿ ಆಯಾ ಪ್ರಾಂತ್ಯಗಳ ಪ್ರತಿನಿಧಿಗಳನ್ನು ಸೇರಿಸಿ ಒಂದು ಕಮಿಟಿಯನ್ನು ನೇಮಿಸಿದರೆ ಮಾತ್ರ ಇದೆಲ್ಲ ಕಾರ್ಯವನ್ನು ಸಾಧಿಸಬಹುದೆಂದು, ಅಂತಹ ನಿಪುಣರನ್ನುಳ್ಳ ಕಮಿಟಿಗಳನ್ನು ಸ್ಥಾಪಿಸಬೇಕೆಂದಾಯಿತು.

ಕಾಂಗ್ರೆಸ್ ಪ್ರಾಂತ್ಯಗಳ ಸಮಾನ ಧೋರಣೆಯ ಕುರಿತು ಪ್ರವೀಣರ ಸಮಿತಿ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ೩೨ ತಾಸುಗಳ ಚರ್ಚೆ.

ಆರು ಕಾಂಗ್ರೆಸ್ ಪ್ರಧಾನ ಮಂತ್ರಿಗಳು ವಾರ್ಧಾದಲ್ಲಿ ಸೇರಿದ್ದರು.

ಎರಡು ಮಾತು.

ವಾರ್ಧಾದಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಪ್ರಾಂತಿಕ ಕಾಂಗ್ರೆಸ್ ಮಂತ್ರಿಕೂಟಗಳ ಪ್ರತಿನಿಧಿಗಳೊಡನೆ ಹಲವು ವಿಷಯಗಳನ್ನು ಚರ್ಚಿಸಿ ಎಲ್ಲ ಪ್ರಾಂತ್ಯಗಳಲ್ಲಿಯೂ ಈ ಮಂತ್ರಿಗಳು ಹೇಗೆ ಒಂದೇ ಧೋರಣೆಯಿಂದ ಮುಂದರಿಯಬೇಕೆಂಬ ವಿಷಯವನ್ನು ಇತ್ಯರ್ಥಿಸಿಯದೆ. ಮೂರು ದಿನಗಳ ಪರಸ್ಪರ ಅಭಿಪ್ರಾಯ ಚರ್ಚೆಗಳಿಂದ ಸಮ್ಮತಿಯನ್ನು ತಿಳಿದುಕೊಂಡು, ಇನ್ನು ಐದು ವರ್ಷಗಳ ವರೆಗೆ ಅಲ್ಲವಾದರೂ ಕೊನೆಯ ಪಕ್ಷ ಮೂರು ವರ್ಷಗಳ ತನಕ ಅಧಿಕಾರ ನಡೆಸಿ ಪ್ರಜಾರಂಜನೆಯನ್ನು ಈ ಮಂತ್ರಿಮಂಡಲಗಳು ಸಾಧಿಸಬೇಕೆಂದು ನಿರ್ಧರವಾದಂತಿದೆ, ಎಂದು ವೃತ್ತಾಂತದಿಂದ ತಿಳಿಯಬರುವುದು. ಸಾಮಾಜಿಕ ಅಭ್ಯುದಯವನ್ನೂ ಜನಾಂಗಿಕ ಸಂಘಟನೆಯನ್ನೂ ಕೂಡಿ ತರುವ, ಸಾಧ್ಯವಾದಲ್ಲಿ ಮಾಡಿ ಮುಗಿಸುವ ಬಗೆಗೆ ಬೇಕಾಗಿರುವ ಎಲ್ಲ ವಿಷಯಗಳೂ ಇಲ್ಲಿ ವಿಮರ್ಶೆಗೆ ಬಂದುವು. ಇದು ವರೆಗಿನ ೧೮ ವರ್ಷಗಳಿಂದ ಕಾಂಗ್ರೆಸು ರಚನಾಶೀಲವಾದ ಕಾರ್ಯಕ್ರಮದಲ್ಲಿ ವಿರೋಧ ತತ್ವಗಳಿದ್ದರೂ ಮುಂದರಿದೇ ಬಂದಿದೆ. ಹಿಂದಣ ಸರಕಾರವು ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಸಹಾನುಭೂತಿಯಿಂದ ಕಂಡುದು ಕಡಮೆ. ಈಗ ಬ್ರಿಟಿಷ ಇಂಡಿಯದ ಮುಕ್ಕಾಲು ಅಂಶ ವಿಸ್ತೀರ್ಣದ ಪ್ರಾಂತ್ಯಗಳ ಮಂತ್ರಿಗಳೆಲ್ಲ ಕಾಂಗ್ರೆಸ್ ಪಕ್ಷದವರಾಗಿರುವ ಕಾರಣವೂ, ಅವರಿಗೆ ಗವರ್ನರರುಗಳ ಸಹಾನುಭೂತಿಯು ಸಾಕಷ್ಟು ದೊರೆತಿರುವ ಕಾರಣವೂ ಈ ಮಂತ್ರಿಗಳಿಂದ ಜನತೆಗೆ ಹೆಚ್ಚು ಪ್ರಿಯಕರಗಳಾಗಿರುವ ಸುಧಾರಣಾದಿಗಳು ಉಂಟಾಗಬಹುದೆಂದು ನಿರೀಕ್ಷಿಸುವುದರಲ್ಲಿ ಹಿಂತೆಗೆಯುವುದೇಕೆ?

ಕೈಗಾರಿಕೆ, ಬೇಸಾಯ ಅಭಿವೃದ್ಧಿ.

ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರಗಳಲ್ಲಿ ಸಕ್ಕರೆ ಕೈಗಾರಿಕೆಯನ್ನು ಉತ್ತಮ ಸ್ಥಿತಿಗೆ ತಂದು ಅದರ ಅಭಿವೃದ್ಧಿಗೆ ಆತಂಕಗಳು ಉಂಟಾಗದ ಹಾಗೆ ಸರಕಾರವು ಪ್ರಯತ್ನಿಸಬೇಕಾಗಿದೆ. ಈಗಣ ದುರ್ದಸೆಯಿಂದ ಕಬ್ಬಿನ ಸಾಗುವಳಿಯೇ ಬೇಡವೆನ್ನುವಂತೆ ಕೃಷಿಕರು ದೂರುತ್ತಿರುವರು. ಈ ದೂರನ್ನು ನಿವಾರಿಸುವ ಹಾಗೆ ಇವೆರಡೂ ಪ್ರಾಂತಿಕ ಸರಕಾರಗಳು ಈ ಕೈಗಾರಿಕೆಗೆ ಸಂಬಂಧಪಡುವ ಎಲ್ಲ ವಿಷಯಗಳನ್ನು ವಿಚಾರಿಸಿ, ವಿಮರ್ಶಿಸಿ, ಕೈಗಾರಿಕೆಯ ಉಪ ಉತ್ಪನ್ನಗಳನ್ನು ಜಬ್ಬಾಗಿ ಉಪಯೋಗಕ್ಕೆ ಬರುವಂತೆ ಏರ್ಪಡಿಸಬೇಕಾಗಿದೆ. ಕಬ್ಬು ಮತ್ತು ಸಕ್ಕರೆ ಮುಂತಾದುವುಗಳ ಮೂಲ ಕ್ರಯಗಳನ್ನು ಸರಕಾರವೇ ಗೊತ್ತುಮಾಡುವುದರಿಂದ ಬೇಸಾಯಗಾರರಿಗೂ ಕಾರ್ಖಾನೆಗಳಿಗೂ ನಷ್ಟವಾಗಲಾರದು. ಹೀಗೆಯೆ ಇಂತಹ ವಿಷಯಗಳಲ್ಲಿ ಎಲ್ಲ ಪ್ರಾಂತ್ಯಗಳು ಕಮಿಟಿಗಳ ಮೂಲಕ ವಿಚಾರವಾಡಿಕೊಂಡು ಸಂಬಂಧಪಡುವ ಸರಕಾರಗಳಿಂದ ಸುಧಾರಣೆಗಳನ್ನು ಮಾಡಿಕೊಳ್ಳುವಂತಾಗಬೇಕೆಂದು ನಿರ್ಧಾರವಾಯಿತು.

ಗ್ರಾಮಸ್ಥರ ಸಾಲ ನಿವಾರಣೆ.

ಗ್ರಾಮಸ್ಥರ ಸಾಲಗಳ ವಿಷಯವೂ ಇದೇ ರೀತಿ ಪರಸ್ಪರ ಕಮಿಟಿಗಳಿಂದ ಆಯಾ ಪ್ರಾಂತ್ಯಗಳು ವಿಚಾರಿಸಿಕೊಂಡು, ಒಂದೆರಡು ವರ್ಷಗಳ ತನಕ ಋಣಬಾಧೆ ತಪ್ಪಿದಂತೆ ಸಾಲಿಗರಿಂದ ಕೃಷಿಕರನ್ನು ಕಾಪಾಡುವಂತಾಗಬೇಕೆಂದೂ ನಿರ್ಧರಿಸಲಾಯಿತು.

ಬಂಗಾಳ ಎಸೆಂಬ್ಲಿ.

ಬಂಗಾಳ ಕೌನ್ಸಿಲಿನ ವಿದ್ಯಮಾನಗಳನ್ನು ನೋಡುತ್ತ, ಬಂಗಾಳದ ಕಾಂಗ್ರೆಸ್ ಪ್ರತಿನಿಧಿಗಳ ಹೇಳಿಕೆಯನ್ನು ಅಂಗೀಕರಿಸಿದ್ದಲ್ಲಿ, ಕಾಂಗ್ರೆಸ್ ಸದಸ್ಯರು ಇತರ ಪಕ್ಷಗಳ ಸದಸ್ಯರೊಡನೆ, ಯಾವುದೊಂದು ವಿಷಯದಲ್ಲಿ ತಮ್ಮ ಅಭಿಮತಕ್ಕೊಪ್ಪುವಾಗ, ಅದರದರ ಪ್ರಾಮುಖ್ಯತೆಯಂತೆ, ಇತರ ಪಕ್ಷಗಳೊಡನೆ ಸಹಕರಿಸಬಹುದಾಗಿಯೂ, ಅದರ ಹಾಗೆ ಮಾಡುವಾಗ ಕಾಂಗ್ರೆಸ್ ಧ್ಯೇಯಗಳಿಗೆ ವಿರೋಧವಾಗದಂತೆ ಎಚ್ಚರಪಡಬೇಕಾಗಿಯೂ ಈ ಕಾರ್ಯಕಾರೀ ಮಂಡಲವು ನಿರ್ಧಾರಮಾಡಿರುವುದು. ಇದರಿಂದ ಕಾಂಗ್ರೆಸ್ ಪಕ್ಷವು ಅಲ್ಲಿನ ಅಧಿಕಾರಾರೂಢ ಪಕ್ಷಕ್ಕೆ ಎದುರಿಸುವ ಬಲವನ್ನು ಹೆಚ್ಚಿಸಿಕೊಳ್ಳುವಂತಾಗುವುದು. ಹಾಗೆಂದು, ಇತರ ಪಕ್ಷಗಳೊಡನೆ ಸೇರಿ ತಾವೂ ಒಂದು ಮಂತ್ರಿಮಂಡಲವನ್ನು ಕಾಂಗ್ರೆಸ್ಸಿನವರು ರಚಿಸಿಕೊಳ್ಳಕೂಡದು. ಅನುಚಿತ್ಯದ ಕಾರ್ಯಕ್ರಮಗಳಲ್ಲಿ ಕಾಂಗ್ರೆಸು ಪಕ್ಷಗಳಿಗೆ ಪ್ರತಿಯೊಂದೂ ಪ್ರಾಂತ್ಯದ ಕೌನ್ಸಿಲುಗಳಲ್ಲಿ ಬೇಕಾದಂತೆ ವರ್ತಿಸಲೂ, ಕಾರ್ಯಕಾರೀ ಮಂಡಲವು ಮೊದಲೇ ಸೂಚಿಸಿದ ನಿಯಮಗಳಿಗೆ ವಿರುದ್ಧವಾಗಿ ಹೋಗದಂತೆಯೂ, ಸೂಚನೆಗಳಾಗಿವೆ.

ಫೆಡರೇಶನು.

ಫೆಡರೇಶನ್ ಸರಕಾರವು ಇಲ್ಲಿ ಸ್ಥಾಪನೆಹೊಂದದಂತೆ ಪ್ರತಿಯೊಂದು ಪ್ರಾಂತಿಕ ಸರಕಾರವೂ ಅಧಿಕಾರ ಪಿರಲಿ, ಇಲ್ಲದಿರಲಿ) ಕಾನೂನು ಹೇಗಿರುವುದೆಂದು ಚೆನ್ನಾಗಿ ವಿಮರ್ಶಿಸಿಕೊಂಡು ಕೇಂದ್ರ ಸರಕಾರಕ್ಕೆ ಬರೆದು ಕೊಳ್ಳಬೇಕೆಂದಾಗಿದೆ. ಇದಕ್ಕೆ ಬದಲಾಗಿ ಒಂದು ಕೊನ್ಸ್‌ಟಿಟ್ಯೂಯೆಂಟ್ ಎಸೆಂಬ್ಲಿಯನ್ನು ಕರೆಯಿಸಿ, ಹೊಸ ರಾಜ್ಯಾಂಗ ಕ್ರಮ ಮಾಡಿಕೊಳ್ಳುವಂತೆ ಕಾಂಗ್ರೆಸು ಪ್ರತಿನಿಧಿಗಳೂ ಪ್ರಯತ್ನಿಸಬೇಕಾಗಿ, ಕಾರ್ಯಕಾರೀ ಕಮಿಟಿಯು ಆಗ್ರಹ ಸೂಚಿಸಿಯದೆ.

ಸೈನ್ಯದ ಖರ್ಚು.

ಸೈನ್ಯದ ಖರ್ಚನ್ನು ಅರ್ಧಕ್ಕರ್ಧ ಇಳಿಸುವರೆ ಪ್ರಯತ್ನಿಸಬೇಕಾಗಿದೆ. ಪ್ರಾಂತ್ಯಗಳಲ್ಲಿ ಇರಲಾದ ದಂಡುಗಳೂ ಪ್ರಾಂತಿಕ ಸರಕಾರಗಳ ಇಚ್ಛೆಯಂತೆ ಅಲ್ಲಿವೆ ಎಂದೂ ಹಿಂದೆ ಸೈನ್ಯಾಧ್ಯಕ್ಷರು ಹೇಳಿದ್ದುಂಟು. ಈ ದೆಸೆಯಿಂದ ಪ್ರಾಂತಿಕ ಸರಕಾರಗಳು ಈಗ ಪ್ರಾಂತ್ಯಗಳಲ್ಲಿರುವ ಬ್ರಿಟಿಷ ದಂಡುಗಳಿಗಾಗಿ ವ್ಯಯವಾಗುವ ೧೩ ಕೋಟಿ ರೂಪಾಯಿಗಳನ್ನು, ಹಿಂದೀ ಸೈನ್ಯವಿಡುವಂತೆ ಸೂಚಿಸಿ ತಪ್ಪಿಕೊಂಡರೆ ಎಂಟು ಕೋಟಿ ರೂಪಾಯಿಗಳ ಉಳಿತಾಯವಾಗುವುದು. ಈ ವಿಷಯವನ್ನು ಕೇಂದ್ರ ಸರಕಾರಕ್ಕೆ ತಿಳಿಸಿ ವರಿಷ್ಠ ನ್ಯಾಯ ಸಭೆಯಲ್ಲಿ ಈ ವಿಷಯ ಚರ್ಚೆ ನಡೆಯುವದಂತಾದಲ್ಲಿ ಪ್ರಾಂತ್ಯಗಳಿಗೆ ಎಂಟು ಕೋಟಿ ರೂಪಾಯಿಗಳು ಇತರ ವ್ಯಯಕ್ಕೆ ದೊರೆತು ಜನತೆಯ ಸೌಖ್ಯಾಭಿವೃದ್ಧಿ ಮಾಡಿಕೊಳ್ಳಲು ಅವಕಾಶವು ಸಿಗುವುದು.

ಗಡಿನಾಡು.

ವಾಯವ್ಯ ಪ್ರಾಂತ್ಯದಲ್ಲಿ ಇನ್ನು ಸ್ವಲ್ಪದರಲ್ಲಿಯೆ ಕಾಂಗ್ರೆಸ್ ಪಕ್ಷವು (ಇನ್ನು ತನಗೆ ಬೇಕಾದ ಮೂರೇ ಸದಸ್ಯರನ್ನು ಕೂಡಿಸಿಕೊಂಡು) ಅಧಿಕ ಬೆಂಬಲ ಪಡೆದು ಅಧಿಕಾರ ಸ್ವೀಕರಿಸಬಹುದೆಂದು ನಿರೀಕ್ಷಿಸಲಡುದಾಗಿದೆ. ಅಲ್ಲಿನ ಮಂತ್ರಿಮಂಡಲವು ಇದು ವರೆಗೆ ಎಷ್ಟೋ ಸಲ ರಾಜಿನಾಮ ಕೊಟ್ಟ, ಕೊಡುವ, ಕೊಡಬಹುದಾದ ವಾರ್ತೆಗಳ ಪರಿಪತ್ರವೇ ಇವೆ. ಇದರಂತೆ ಅಸ್ಸಾಮು, ಬಂಗಾಳ ಪ್ರಾಂತ್ಯಗಳಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಸಿಂಧ ಮತ್ತು ಪಂಜಾಬು ಪ್ರಾಂತ್ಯಗಳಲ್ಲಿ ಸದ್ಯಕ್ಕೆ ಕಾಂಗ್ರೆಸ್ ಅಧಿಕ ಬೆಂಬಲ ಪಡೆಯುವಂತಿಲ್ಲ. ಇವೆರಡು ಪ್ರಾಂತ್ಯಗಳಲ್ಲಿ ಈಗ ಅಧಿಕಾರ ನೋಡುವ ಮಂತ್ರಿಮಂಡಲವು ಕಾಂಗ್ರೆಸ್ ಕಾರ್ಯಕ್ರಮವನ್ನು ತನ್ನ ವಿಧಾನದಲ್ಲೇ ಅನುಸರಿಸುತ್ತಿರುವಂತೆ ವರ್ತಿಸುತ್ತದೆ.

ಜಂಜಿಬಾರಿನಲ್ಲಿ ಭಾರತೀಯರು

ಜಂಝಿಬಾರಿನಲ್ಲಿ ಲವಂಗ ವ್ಯಾಪಾರದ ವಿಷಯ ಸರಕಾರವು ಹಿಂದೀ ವರ್ತಕರಿಗೆ ವಿರುದ್ಧವಾಗುವಂತೆ ಮಾಡಿರುವ ಸೂತ್ರಗಳನ್ನು ಮುರಿಯಲು, ಅಲ್ಲಿನ ಲವಂಗವೇ ಇಲ್ಲಿಗೆ ಬಾರದಂತೆ ತಡೆಯಬೇಕೆಂದು, ಅಂದಮಾನದ ಕೈದಿಗಳನ್ನು ಪುನಃ ಸ್ವದೇಶಕ್ಕೆ ತರುವುದಲ್ಲದೆ ಇನ್ನಲ್ಲಿಗೆ ಕೈದಿಗಳನ್ನು ಕಳುಹಬಾರದೆಂದೂ, ಅಲ್ಲಿಗೆ ಕಳುಹಲಾದ ಕೈದಿಗಳು ಕ್ರಾಂತಿವಿಚಾರವನ್ನಿಟ್ಟಿರುವ ಭರವಸೆಯಿರುವ ಕಾರಣ, ಅಂತಹ ಕೈದಿಗಳ ದಂಡನೆ ರದ್ದುಪಡಿಸಬೇಕೆಂದೂ ಸರಕಾರಕ್ಕೆ ತಿಳಿಸಬೇಕಾಯಿತು. ಕೈದಿಗಳು ಉಪವಾಸವನ್ನು ಮುಗಿಸಬೇಕಾಗಿ ಸೂಚನೆಯಾಗಿದೆ.

ಇನ್ನಿತರ ವಿಚಾರಗಳನ್ನು ಮುಂದಿನ ವಾರ ಬರೆಯಲು ಅನುಕೂಲವಿದೆ.

ನ್ಯಾಸಾರಾಯರು ಮಹಾತ್ಮಾಜಿಯವರೊಡನೆ ಮಾತಾಡಿದ್ದೇನು?

ಕಾಂಗ್ರೆಸ್ ಮಂತ್ರಿಮಂಡಲಗಳಿಂದ ನೂತನ ರಾಜ್ಯಾಂಗ ಘಟನೆಯನ್ನು ಮುರಿಯಲು ಹೇಗೆ ಸಾಧ್ಯವಾದೀತು?

ಗಾಂಧಿಜಿಯವರು ಮತ್ತು ಖಫರ್‌ಖಾನರು ಗಡಿ ನಾಡನ್ನು ಪ್ರವೇಶಿಸುವುದು, ಮತ್ತು ಗ್ರಾಮಾಭ್ಯುದಯ-ಪ್ರಚಾರ ಈ ಎರಡು ವಿಷಯಗಳಲ್ಲದೆ, ಬೇರಾವ ವಿಷಯ ಗಳೂ ಗಾಂಧಿ-ನ್ಯಾಸರಾಯರ ಭೇಟಿಯಲ್ಲಿ ಮಾತಾಡ ಲಾಗಲಿಲ್ಲವೆಂದು ತಿಳಿದುಬರುತ್ತದೆ.

ಕಾಂಗ್ರೆಸು ಸಂಯುಕ್ತ ಘಟನೆಗೆ (ಫೆಡರೇಶನ್) ಒಪ್ಪಿಕೊಂಡರೆ, ಪ್ರಾಂತ್ಯಗಳಲ್ಲಿ ಗವರ್ನರರು ಮಂತ್ರಿ ಗಳ ಕಾರ್ಯಕ್ರಮಗಳಲ್ಲಿ ಕೈಹಾಕುವುದಿಲ್ಲ ಎಂಬ ದಾಗಿ ನ್ಯಾಸರಾಯರು ಗಾಂಧಿಜಿಯವರೊಡನೆ ಚರ್ಚಿಸಿದರೆಂದೂ, ಕೊನೆಗೆ ವರ್ತಮಾನವು ತೀರ ಸುಳ್ಳೆಂದು ತಿಳಿದು ಬರುತ್ತದೆ. ಈ ವಿಷಯವನ್ನು ಶ್ರೀ ಜವಾಹರಲಾಲರು ನಿನ್ನೆ ಸ್ಪಷ್ಟೀಕರಿಸಿದ್ದಾರೆ.

ಫೆಡರೇಶನನ್ನು ಭಾರತೀಯರು ಪೂರ್ಣ ನಿರಾಕರಿ ಸುತ್ತಾರೆ. ಅದು ರೂಢಿಗೆ ಬಾರದಂತೆ ಸರ್ವ ಯತ್ನ ಗಳನ್ನು ನಡೆಸುತ್ತಿದ್ದಾರೆ. ಅಂದ ಮೇಲೆ ಮಹಾತ್ಮಾಜಿ ಯವರು ಆ ಕುರಿತು ಚರ್ಚಿಸುವುದು ಹೇಗೆ ಸಾಧ್ಯ? ಫೆಡರೇಶನು ಅತ್ಯಂತ ಅನಿಷ್ಟಕಾರಿಯಾದ ಒಂದು ಘಟನೆ ಯಾಗಿರುತ್ತದೆ. ಅದನ್ನು ಹಿಂದೂದೇಶದಲ್ಲಿ ಬರಮಾ ಡಲು ಸಹಕರಿಸುವವನು ದೇಶದ್ರೋಹಿಯಾಗುವನು"

ಕಾಂ। ಮಂತ್ರಿ ಮಂಡಳಗಳಿಂದ ನೂತನ ರಾಜ್ಯಾಂಗಘಟನೆಯನ್ನು ಮುರಿಯಲು ಹೇಗೆ ಸಾಧ್ಯವಾದೀತು?

ಇದೊಂದು ರಾಜಕೀಯ ಯುದ್ಧವು. ಕಾಂಗ್ರೆಸಿ ನಲ್ಲಿ ಭೇದಗಳುಂಟುಮಾಡುವರೆ ಗವರ್ನರರು ಮಂತ್ರಿಗ ಳೊಡನೆ ಸಹಕರಿಸುವುದಾದರೆ ಕಾಂಗ್ರೆಸ್ಸಿನ ಬಲವರಿ ಸಲು ಮಂತ್ರಿಗಳು ಗವರ್ನರರೊಡನೆ ಸಹಕರಿಸುತ್ತಿ ದ್ದಾರೆ. ಕಾಂಗ್ರೆಸ್ಸಿಗೆ ಶಕ್ತಿ ಬರುವಂತೆ ಎಲ್ಲಿ ಯಾವಾಗ ಯಾಕೆ ಹೇಗೆ ರಾಜೀನಾಮೆ ಕೊಡಬೇಕೆಂಬ ವಿಷಯವು ಅವರಿಗೆ ಸರಿಯಾಗಿ ತಿಳಿದಿರುತ್ತದೆ. ಮಂತ್ರಿಗಳು ಎಂದಿಗೂ ಸಾಮ್ರಾಜ್ಯಶಾಹೀ ಬಲಗೆ ಸಿಲುಕರು. ಮಂತ್ರಿ ಗಳು ಜಯಶೀಲರಾಗಬೇಕಾದರೆ ಕೌನ್ಸಿಲುಗಳ ಹೊರಗೆ ಸಾರ್ವಜನಿಕರೂ ಕಾಂಗ್ರೆಸ್ ಭಕ್ತರೂ ಅವರಿಗೆ ಬೆಂಬಲ ಕೊಡಬೇಕು" ಮುಂಬಯಿಯಲ್ಲಿ ರಾಷ್ಟ್ರಪತಿಯವರು.

ಮದ್ಯ ನಿಷೇಧವಾದರೆ, ಮುತ್ತೆಗಾರರ ಗತಿಯೇನು?

ಇದಕ್ಕೆ ಮಹಾತ್ಮಾಜಿಯವರು ಈ ಕೆಳಗಿನ ಉತ್ತ ರವನ್ನು ಕೊಟ್ಟಿರುವರು. ತಾಳವೃಕ್ಷದಿಂದ ಬೆಲ್ಲವನ್ನು ತಯಾರಿಸಬಹುದು. ದಕ್ಷಿಣ ಹಿಂದೂದೇಶದಲ್ಲಿ ಸುರೆ ಯನ್ನು ತೆಗಿಯುವವರು ಅನ್ಯಾಯಕರ ವ್ಯಾಪಾರವನ್ನು ಮಾಡುತ್ತಿರುವರಾಗಿ ನನಗೆ ತಿಳಿದುಬಂದಿರುತ್ತದೆ. ಆದರೂ ರಸ ತೆಗೆಯುವುದನ್ನು ಅವರು ನಿಲ್ಲಿಸಬೇಕಾ ಗಿಲ್ಲ. ಮದ್ಯಪ್ರತಿಬಂಧಕ ಕಾಲದಲ್ಲಿ ರಸ ತೆಗಿಯುವು ದಾದರೆ ಸವಿ ರಸವನ್ನು ಮಾತ್ರ ತೆಗಿಯಬೇಕು. ಅದ ರಿಂದ ಅನುಕೂಲಕರ ಸರಾಯಿಯನ್ನು ತಯಾರಿಸುವ ಬದ ಲಾಗಿ ಬೆಲ್ಲವನ್ನು ತಯಾರಿಸಬೇಕು. ಆಂಧ್ರದೇಶದಲ್ಲಿ ಈಚಲ ಮರದಿಂದ ಬೆಲ್ಲ ತಯಾರಿಸುತ್ತಿರುವರಾಗಿಯೂ, ಅದನ್ನು ಪಡಕೊಂಡು ಮತ್ತೆ ಅದರಿಂದ ಮದ್ಯ ತಯಾ ರಿಸುತ್ತಿದ್ದಾರೆಂದು ನಾನು ತಿಳಿಯುತ್ತೇನೆ. ಆದರೆ ಈಗ ಆ ಬೆಲ್ಲದಿಂದ ಮದ್ಯತಯಾರಿಸಬಾರದು. ಸರಕಾರವು ಆ ಬೆಲ್ಲವನ್ನು ಒಂದು ಸಮ್ಮತಕ್ರಯಕ್ಕೆ ಪಡೆಯುವಂತಾಗ ಬೇಕು. ಮದ್ಯಪ್ರತಿಬಂಧದಿಂದ ಮುತ್ತೆಗಾರರಿಗೆ ಯಾವ ತರದ ಹಾನಿಯೂ ಬರಲಾರದು. ಅದರಿಂದ ದೇಹಕ್ಕೆ ಹಾನಿಕರವೆನಿಸುವ ಹೆಂಡದ ಬದಲಾಗಿ, ಬೆಲ್ಲದಂಥ ಅಗ್ಗ ವಾದ ಮತ್ತು ಸತ್ವಯುಕ್ತವಾದ ಆಹಾರವು ದೊರ ಕುವುದು'

ಪೋಲೀಸರು ಪ್ರಜಾ ಸೇವಕರು

ಪೋಲೀಸು ಇಲಾಖೆಯಲ್ಲಿರುವ ಕುಂದುಕೊರತೆ ಗಳನ್ನು ನಿರ್ಮೂಲಗೊಳಿಸುವ ಕುರಿತೂ, ಪೋಲೀಸರು ಜನತಾ ಸೇವಕರಾಗುವಂತೆ ಅವರನ್ನು ಸುಧಾರಿಸುವ ಕುರಿತೂ ಸಂಯುಕ್ತ ಪ್ರಾಂತ್ಯದ ಪ್ರಧಾನ ಮಂತ್ರಿಗಳಾದ ಶ್ರೀ। ಗೋವಿಂದ ವಲ್ಲಭಪಂತರವರು ಪರಿಶೀಲಿಸುತ್ತಿರು ವರು.

"ಪೋಲೀಸರೆಂದರೆ ಪ್ರಜಾಸೇವಕರು. ದೇಶದ ದುರ್ಬಲತೆಗಳನ್ನು ನಿರ್ಮೂಲಗೊಳಿಸಬೇಕಾದರೆ, ಪೋಲೀ ಸರೂ ಪ್ರಜೆಗಳೂ ಪರಸ್ಪರ ಸಹಕಾರದಿಂದ ಇರಬೇಕು. ಪೋಲೀಸರು ಹಿಂದೆ ಮಾಡಿದೆಲ್ಲವನ್ನೂ ನಾನು ಮರೆತು ಬಿಡುವೆನು. ಈಗ ಅವರು, ನೂತನ ಪರಿಸ್ಥಿತಿಗೆ ತಕ್ಕು ದೆನಿಸುವ ರೀತಿಯಲ್ಲಿ ವರ್ತಿಸಬೇಕು. ಯಾವನಾದರೂ ಲಂಚ ಸ್ವೀಕರಿಸಿದನೆಂದರೆ, ಅಥವಾ ಅನ್ಯಾಯವಾಗಿ ಜನಗಳನ್ನು ಪೀಡಿಸಿದರೆ ಅವರನ್ನು ಕಠಿಣ ತರದ ಶಿಕ್ಷೆಗೊ ಳಪಡಿಸಲು ನಾನು ಹಿಂಜರಿಯೆನು" ಎಂಬುದಾಗಿ ಅವರು ಒಂದು ಸಂದರ್ಭದಲ್ಲಿ ಅಂದಿರುವರಾಗಿ ತಿಳಿದುಬರುತ್ತದೆ.

ಅಯುಧ್ಯಯ ಅಧಿವೇಶನವು ಮುಗಿದ ನಂತರ ಪೋಲೀಸು ಇಲಾಖೆಯ ಸುಧಾರಣೆಯ ಕುರಿತಾಗಿ ಶ್ರೀ। ಪಂತರವರು ಸಮಸ್ತ ಪ್ರಾಂತ್ಯದ ಪ್ರವಾಸಗೈಯುವರಾಗಿ ಯೂ ತಿಳಿದುಬರುತ್ತದೆ.

ನೂತನ ರಾಜ್ಯಾಂಗಘಟನೆಯಿಂದ ದೊರಕುವ ಲಾಭವನ್ನು ಪಡೆಯದೆ ಹೊರಬೀಳುವುದು ಮೂಢತನ

ಮುಂಬಯಿ ಕೂಲಿಕಾರರ ಮುಖಂಡರಾದ ನಿಂಬ್ಕ ರರು ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಒಂದು ಪತ್ರವನ್ನು ಮಹಾತ್ಮಾಜಿಯವರಿಗೆ ಬರೆದಿದ್ದರು.

"ತಮಗೂ ಗವರ್ನರರಿಗೂ ತಿಕ್ಕಾಟವುಂಟಾಗಿ, ಬಿಕ್ಕಟ್ಟಿನ ಪರಿಸ್ಥಿತಿ ಬರಬಹುದೆಂಬ ಭಯವು ಮುಂಬಯಿ ಸರಕಾರವು ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡದ ಕಾರಣವೋ?"

ಇದಕ್ಕೆ ಉತ್ತರವಾಗಿ ಮಹಾತ್ಮಾಜಿಯವರು — ಬಿಕ್ಕಟ್ಟಿನ ಪರಿಸ್ಥಿತಿಗಳು ನಮ್ಮಿಂದ ಉಂಟಾಗಲಾರವು. ಒಂದು ವೇಳೆ ಅವು ಉಂಟಾಗುವ ಸಂಭವಗಳುಂಟಾದರೆ ನಾವದನ್ನು ಆನಂದದಿಂದ ಇದುರಾಯಿಸುವೆವು. ನಾವು ಅಧಿಕಾರ ಸ್ವೀಕರಿಸಿದುದು ನೂತನ ರಾಜ್ಯಘಟನೆಯನ್ನು ನಡೆಸಬೇಕೆಂದು. ಅದರಿಂದ ಸಿಗುವ ಲಾಭಗಳನ್ನು ಪಡೆ ಯದೆ ಹೊರಗೆ ಬರುವುದೆಂದರೆ ಮೂಢತನ. ಅದರ ಮೂಲಕ ನಾವು ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಆದರೂ ಈ ವಿಚಾರವು ವರ್ಕಿಂಗ್ ಕಮಿಟಿ ಮುಂದೆ ಇಡಲಾಗುವುದು.

ಚೀನಾದಲ್ಲಿ ಸಂಗ್ರಾಮ ಚಟುವಟಿಕೆಗಳು

ಸಂಧಾನ ಯತ್ನಗಳು ನಿಷ್ಫಲವಾಗಿವೆ. ಜಪಾನಿ ಯರು ಸ್ವಲ್ಪ ಸಮಯ ದೊರಕಿಸಿಕೊಂಡು ಸಿದ್ಧತೆಗಳನ್ನು ಮಾಡುವ ಉದ್ದೇಶದಿಂದಲೆ, ಸಂಧಾನ ಮಾತುಗಳನ್ನು ಹೊರಡಿಸಿದುದು ನಿಜವಾಗಿಯೂ ಅದಕ್ಕೆ ಸಂಧಾನದಲ್ಲಿ ನಂಬಿಕೆಯಿಲ್ಲ.

ನಿನ್ನೆ ದಿನ ಶಾಂಘಾಯಿಯಲ್ಲಿ ಮಹಾ ಗಲಾಟೆಯು ನಡೆಯಿತು. ಚೀನಿಯ ವಿಮಾನಗಳು ಜಪಾನೀಯ ಪ್ರದೇ ಶದ ಮೇಲೆ ಹಾರಿ ಬಾಂಬಿನ ಸುರಿಮಳೆಯನ್ನು ಸುರಿ ದವು. ಆದರೆ ಆ ಬಾಂಬುಗಳು ತಪ್ಪಿ ಬ್ರಿಟಿಷ, ಅಮೇ ರಿಕನ್ ಇತ್ಯಾದಿ ಜನಾಂಗಿಕರ ಪ್ರದೇಶದಲ್ಲಿ ಬಿದ್ದು ಅ ನೇಕ ಮನೆಮಂದಿರಗಳು ಬಸ್ಮವಾದವೆಂದು. ಅನೇಕರು ಮಡಿದಿರುವರೆಂದೂ, ಹೆಚ್ಚು ಮಂದಿಗಳಿಗೆ ಜಖಂ ಆಗಿರು ತ್ತದೆಂದೂ ತಿಳಿದುಬರುತ್ತದೆ. ಜಪಾನೀಯರಲ್ಲೂ ಬೆಂಕಿಗಳ ಹಾವಳಿ ನಡೆದಿರುತ್ತದೆ.

ಚೀನಿಯ ಸರಕಾರದ ಸೈನ್ಯ ಪಡೆಗಳು ಗತ ಯುದ್ಧದ ನಂತರ ಬಿಟ್ಟ ಪ್ರದೇಶಗಳನ್ನು ಮತ್ತೊಮ್ಮೆ ಸೇರಿರುವರು. ಎಲ್ಲಾ ಕಡೆಯಲ್ಲಿ ಅವರು ಸಂಗ್ರಾಮ ಸದ್ಧತೆಗಳನ್ನು ಮಾಡಿರುವರು.

ಚೀನಿಯರು ಬಾಂಬುಗಳನ್ನು ಸುರಿಸಿದುದರ ಪ್ರತಿ ಫಲವಾಗಿ ಬಂದರದಲ್ಲಿರುವ ಜಪಾನೀಯರ ಯುದ್ಧ ಜಹಜುಗಳು ತಮ್ಮ ತೋಪುಖಾನೆಗಳಿಂದ ನಗರದ ಕಡೆಗೆ ಗುಂಡುಗಳನ್ನು ಹೊಡೆದವು. ವಿಲಂಬುಜಹಜುಗಳು ಒಂದೆ ಬಾರಿ ತೋಪು ಹಾರಿಸಿದುದರಿಂದ ಉಂಟಾದ ಶಬ್ದವು ಬಹು ದೂರಕ್ಕೆ ಕೇಳಿ ಬಂತು.

ಜಪಾನೀಯರು ಚೀನಿಯ ಶಾಂಗಾಯಿಯನು ಮುತ್ತಿರುವರಾಗಿ ತಿಳಿದುಬರುತ್ತದೆ.

ಚೀನಾ--ಜಪಾನ್ ಯುದ್ಧದಲ್ಲಿ ಅನ್ಯರು ಕೈಹಾಕುವುದಿಲ್ಲ

ಚೀನಿಯರಲ್ಲಿ ನಡೆಯುವ ಯುದ್ಧದ ಕುರಿತಾಗಿ ಅವರಿಗೊಂದು ಅಂತರಾಷ್ಟ್ರ ಭಯತೋರಿಸಲು ಪ್ರಭುತ್ವ ದ ಜನಾಂಗಗಳು ಹಿಂಜರಿಯುತ್ತಿದ್ದಾರೆ. ಕಾರಣ ಅದ ರಿಂದ ಸಂಧಾನ ಸಂಭವಗಳು ಕಡಿಮೆಯಾಗಬಹುದಂತೆ.

ಚೀನಾದೇಶವು ಜಪಾನಿನ ರಫ್ತುಗಳಿಗೆ ಒಂದು ದೊಡ್ಡ ಮಾರ್ಕೆಟು. ಆದುದರಿಂದ ಚೀನಾ ಜಪಾನ್ ಯುದ್ಧದಿಂದ ಜಪಾನಿನ ವ್ಯಾಪಾರದ ಮೇಲೆ ಭಯಂಕರ ತರದ ಪರಿಣಾಮಗಳು ಉಂಟಾಗಬಹುದು.

ದೇಶದ ಎಲ್ಲಾ ಕೈಗಾರಿಕೆಗಳು ಯುದ್ಧದನುಕೂಲ ಗಾಗಿ ಸಿದ್ಧವಾಗಲು, ಜಪಾನಿನ ಸರಕಾರದ ಆಜ್ಞೆಗಳಾಗಿವೆ.

ಒಟ್ಟಿನ ಮೇಲೆ ಜಪಾನ್ ಚೀನಾ ಸಂಗ್ರಾಮವು ಘೋರರೂಪವನ್ನು ತಾಳಿರುತ್ತದೆ. ಘೋರ ಯುದ್ಧ ಚಟುವಟಿಕೆಗಳು ಜಪಾನಲ್ಲಿ ನಡೆಯುತ್ತಿವೆ.

ಕಲ್ಕತ್ತೆಯಲ್ಲಿ ಲಾಠಿಪ್ರಯೋಗ. ಕೆಲವರು ಕೈದು ಮಾಡಲ್ಪಟ್ಟಿರುವರು.

ಬ್ರಿಟಿಷ ಒಡವೆಗಳ ಮೇಲೆ ಭಹಿಷ್ಕಾರ

ನಿನ್ನೆ ಆದಿತ್ಯವಾರ ದಿನ ಸಮಸ್ತ ಭಾರತದೇಶದ ಲ್ಲೆಲ್ಲಾ, ರಾಷ್ಟ್ರಪತಿಯರ ಆಜ್ಞೆ ಮೇರೆಗೆ ಅಂದಮಾನ ದಿನಾಚರಣೆಯು ನಡೆಯಿತು. ಅಂದು ಕಲ್ಕತ್ತೆಯಲ್ಲಿ ಸಾವಿರಾರು ಮಂದಿ ಸ್ತ್ರೀಯರು ಕೂಡಿ ಮೆರವಣಿಗೆಯಲ್ಲಿ ಸಭೆಜರಗಿಸಲು ಟೌನ್ ಹಾಲಿಗೆ ಹೋಗುತ್ತಿರು ವಾಗ್ಯ-ದಾರಿಯಲ್ಲಿ ಅವರ ಮೇಲೆ ಲಾಠಿ ಪ್ರಯೋಗ ಮಾಡಲಾಯಿತು. ಅವರು ಹಿಡಿದಿದ್ದ ರಾಷ್ಟ್ರೀಯಧ್ವಜ ಗಳನ್ನು ಕಿತ್ತಿಗೆಯಲಾಯಿತು. ಇದರಿಂದಾಗಿ ಹೆಚ್ಚಿನ ಸ್ತ್ರೀಯರಿಗೆ ಜಖಂ ಆಗಿರುವುದೆಂದೂ ವಾರ್ತೆ.

ಸ್ತ್ರೀಯರೇ ಅಂದು ಪ್ರಾಮುಖ್ಯ ಪಾತ್ರವನ್ನು ವಹಿ ಸಿದ್ದು. ಸಾಧಾರಣ ೩೦೦ ಮಂದಿಗಳು ಸೆರೆಹಿಡಿಯಲ್ಪಟ್ಟಿ ರುವರೆಂದೂ ತಿಳಿದುಬರುತ್ತದೆ. ಬಂಗಾಳದಲ್ಲಿ ಪ್ರಾಂತ್ಯ ಕೀಯ ಚಟುವಟಿಕೆಯು ಸ್ಥಾಪನೆಯಾಗಿದ್ದರೂ ಅಲ್ಲಿ ಹಿಂದಿನಂತೆಯೆ ದಬ್ಬಾಳಿಕೆಯೂ ನಡೆಯುತ್ತಿದೆ.

ನಿನ್ನೆ ನಡೆದ ಲಾಠಿ ಪ್ರಯೋಗಕ್ಕೆ ಪ್ರತಿಫಲವಾಗಿ ಬಂಗಾಳದಲ್ಲಿ ಬ್ರಿಟಿಷ ವಸ್ತುಗಳ ಮೇಲೆ ಭಹಿಷ್ಕಾರ ತರಬೇಕಾಗಿ ಆಲೋಚನೆಗಳಾಗಿವೆ.

ಜಂಜೀಬಾರಿನ ಲವಂಗಗಳ ಮೇಲೆ ಭಹಿಷ್ಕಾರ

ಆಫ್ರಿಕಾದ ಜಂಜೀಬಾರಿನ ಸರಕಾರವು ಭಾರತೀ ಯರಿಗೆ ವಿರೋಧವೆನಿಸುವ ಧೋರಣೆಯನ್ನನುಸರಿಸಿದುದ ರಿಂದ ಹಿಂದೂದೇಶದಲ್ಲಿ ಇನ್ನು ಮುಂದೆ ಜಂಜಿಬಾ ರಿನ ಲವಂಗಗಳನ್ನೇ ಉಪಯೋಗಿಸಬಾರದಾಗಿ ಕಾಂಗ್ರೆಸ್ ಕಮಿಟಿಯು ನಿರ್ಧಾರಮಾಡಿರುತ್ತದೆ. ಲವಂಗವು ಜಂಜಿ ಬಾರಿನ ಒಂದು ಪ್ರಾಮುಖ್ಯ ವ್ಯಾಪಾರ ಜಿನಸು. ಅದು ಹೆಚ್ಚಾಗಿ ಹಿಂದೂದೇಶದಲ್ಲೇ ಮಾರಾಟವಾಗುವುದು.

ಪಟೇಲ್ ನರಿಮೆನ್ನರ ವಿವಾದ

ವನ್ನು ಮಹಾತ್ಮಾಜಿಯವರಿಂದ ವಿಚಾರಿಸಲಾಗು ವುದು. ನರಿಮೆನ್ನರ ಈ ವಿಚಾರವನ್ನು ಬಿಟ್ಟಿದ್ದರೂ ಆದರೀಗ ಈ ವಿಚಾ ಮಹಾತ್ಮಾಜಿಯವರ ವಿಚಾರಣೆಗೆ ಒಳಗಾಗಬೇಕಾಗಿದೆ. ಈ ವಿಚಾರಣೆಯಾದ ನಂತರ ಅದರ ಸರಿಯಾದ ವಿವರಗಳನ್ನು ಈ ಮಂಡಲದಲ್ಲಿ ಎಲ್ಲಾ ಕಷ್ಟಿಕರೆಂಬುದನ್ನು ಮಹಾತ್ಮಾಜಿಯವರ ಪ್ರಕಟಿಸುವರಂತೆ.

ಒರಿಸಾ ಕಾಂಗ್ರೆಸ ಸರಕಾರ

ಒರಿಸ್ಸಾ ಪ್ರಾಂತ್ಯದಲ್ಲಿ ಅನೇಕ ವಿಚಾರಗಳ ಕುರಿತು ತಿಳಿವಳಿಕೆ ಪಡೆದುದರಿಂದ ಸರಕಾರದ ಕೆಲಸವು ಸುಲಭವಾಗಿ ನಡೆಯಿಸಲು ಅನುಕೂಲವಾಗಿದೆ. ನೆರೆದಲ್ಲಿ ಈ ಭಾರತವನ್ನು ಕೆಡಿಸುವ ಸಮಸ್ತ ಒರಿಸ್ಸಾವನ್ನು ಒಂದೇ ಮಾಡುವ ಕಾರ್ಯವನ್ನು ಕಾಂಗ್ರೆಸ್ ಮಂತ್ರಿ ಗಳು ಕೈಗೊಳ್ಳುವರು.

ಈ ಪ್ರಾಂತ್ಯದಲ್ಲಿ ೨೦ ಸಾವಿರ ಚದರ ಮೈಲಿನ ಕಷ್ಟ ಪ್ರದೇಶವು ಎರಡು ಬಿಡಿ ಪ್ರದೇಶಗಳ (ಕೋರ ಗಿಟ್ಟ ಪ್ರದೇಶವು ೧೪ ಸಾವಿರ ಚದರಮೈಲು) ಆದ ಪ್ರದೇಶವು ಹೊರಟ್ಟ ಪ್ರದೇಶಗಳೂ ಅನಾವಶ್ಯಕವಾ ಕೊಡಲಿಗಿಡಲ್ಪಟ್ಟಿದೆ. ಸರಕಾರದ ಹೆಚ್ಚಿನ ಅಧಿಕಾರಿಗಳು ಈ ಹೊರಗಿನ ಪ್ರದೇಶಗಳಲ್ಲಿ ಕಾರ್ಯನಡೆಸಬೇಕಾಗುತ್ತದೆ.

ಈ ಹೊರಪ್ರದೇಶದ ಹೆಚ್ಚಿನಂಶವನ್ನು ಸಹಜವಾಗಿ ಮಾಡಲು ಕಾಂಗ್ರೆಸು ಸರಕಾರವು ಸಾಧಿಸುವುದು.

ಒರಿಸ್ಸಾವು ನವೀನವಾಗಿ ರಚನೆಯಾದ ಪ್ರಾಂತ್ಯ. ಆರ್ಥಿಕ ಅನಷ್ಟಸ್ಥಿ ಇತ್ಯಾದಿ ದುರ್ದಶೆಗಳಿರುವುದರಿಂದ ಕಾಂಗ್ರೆಸ್ ಮಂತ್ರಿಗಳಿಗೆ ಮಹಾಪ್ರಶ್ನೆಗಳು ಎದುರು ನೋಡುತ್ತಿದ್ದಾವೆ. ಆದರೂ ರೈತರ ಸಾಲ ಮತ್ತು ಕಷ್ಟ ನಿವಾರಣೆ ವಿದ್ಯಾಭ್ಯಾಸದ ಪುನರ್ವ್ಯವಸ್ಥೆ, ಜೇರಿನ ಸರಬರಾಯಿ ಇವೇ ಮೊದಲಾದುವುಗಳ ಕುರಿತು ಸರ ಕಾರವು ಕಾರ್ಯವನ್ನು ನಡೆಯಿಸುವುದು.

ಮುಂಬಯಿ ಸರಕಾರದ ಕಾರ್ಯಕ್ರಮ

ಮುಂಬಾಯಿ ಸರಕಾರದ ಬಜೇಟು ಸಿದ್ಧವಾಗಿರು ತ್ತದೆ. ಅದರಲ್ಲಿ ೧೭॥ ಲಕ್ಷದ ನಷ್ಟವು ಕಾಣಿಸುತ್ತದೆ. ರೈತರಿಗೆ ಉಪಶಮನ ಹಳ್ಳಿಗಳಿಗೆ ನೀರಿನ ಸರಬರಾಯಿ, ಗ್ರಾಮ ಕೈಗಾರಿಕೆಗಳ ಬೆಳವಣಿಗೆ ಕಾಂಡಯ ಮಾಳ ಹರಿಜನ ವಿದ್ಯಾಭ್ಯಾಸ ಇವೇ ಮೊದಲಾದುವುಗಳಿಗೆ ಅನು ಕೂಲ ದೊರಕಿಸುವ ಬಜೇಟು, ನೂತನ ಇಂಡಿಯಾ ಆಕ್ಟಿನ ಪ್ರಕಾರ ಆರ್ಥಿಕ ಮಂತ್ರಿಗಳಾದ ಶ್ರೀ। ಲಠ್ಠೆ ಯವರು ಇದೇ ತಾ ೧೭ರಲ್ಲಿ ಅಲ್ಲಿಯ ಎಸೆಂಬ್ಲಿಯಲ್ಲಿ ನಿರೂಪಿಸಿದರು. ಗತವರ್ಷದ ಉಳಿತಾಯ ಹಣದಿಂದ ಈ ವರ್ಷದ ನಷ್ಟವು ಭರ್ತಿಮಾಡಲಾಗುವುದು.

ಜೈಲುಗಳಲ್ಲಿ ಕೈಯಿಂದ ನೂಲುವುದನ್ನು ಜಾ ರಿಗೆ ತರಬೇಕಾಗಿ ಆ ಸರಕಾರದ ನಿರ್ಧಾರವಾಗಿರುತ್ತದೆ. ಮಹಾತ್ಮರ ಬೋಧನೆಯ ಮೇಲೆ ಹೊಂದಿಕೊಂಡು ಈ ಪ್ರಾಂತ್ಯದಲ್ಲಿ ಮದ್ಯಪಾನ ನಿಷೇಧದ ವ್ಯವಸ್ಥೆಮಾಡಲಾ ಗುವುದು. ಆಬಕಾರಿ ಮತ್ತು ಆರೋಗ್ಯಖಾತೆಯ ಮಂತ್ರಿ ಗಳಾದ ಡಾ। ಗಿಲ್ಡರರು, ಆ ಬಗ್ಗೆ ಬೇಗನೇ ವಾಧಾರಕ್ಕೆ ತರಲಿರುವರು. ಮಜೂರರ ಕುರಿತು ಸರಕಾರದ ಕಾರ್ಯ ಕ್ರಮದ ರಚನೆಯಾಗಿರುತ್ತದೆ. ಮಜೂರ ಸಂಘಗಳಿಗೆ ಮನ್ನಣೆಯು ದೊರಕುವ ದಾಗಿ ಏರ್ಪಾಡುಮಾಡಲಾಗು ವುದು. ಮಜೂರರಿಗೆ ನ್ಯಾಯವಾದ ಕೂಲಿಗಳೂ ನೌಕ ರ್‍ಯಗಳೂ ದೊರಕುವ ಹಾಗೆ ಏರ್ಪಾಡುಮಾಡಲಾಗುವುದು. ಮುಷ್ಕರಗಳು ಉಂಟಾಗದಂತೆಯೂ ಯತ್ನಗಳೂ ನಡೆ ಯುವವು. ಅನೇಕ ಪುಸ್ತಕಗಳ ಮೇಲಿರುವ ಭಹಿಷ್ಕಾ ರವು ಎತ್ತಲಾಗಿದೆ.

ಜಪಾನೀಯರಿಗೆ ಯುದ್ಧ ಶಸ್ತ್ರಗಳು ಬರಲಿಲ್ಲ

ಚೀನಾದಲ್ಲಿ ಜಪಾನೀಯರಿಗೆ ಬೇಕಾದಷ್ಟು ತುಪಾಕಿ, ಇತ್ಯಾದಿ ಯುದ್ಧಶಸ್ತ್ರಗಳ ಸೇನಾ ಸಂಗ್ರಹವು ಬರಲಿಲ್ಲ. ಅದು ಬರುವುದರೊಳಗಾಗಿ ಜಪಾನೀಯರನ್ನು ಹೊರಗೆ ಓಡಿಸುವ ಉದ್ದೇಶದಿಂದಲೆ ಶಾಂಗಾಯಿಯಲ್ಲಿ ಚೀನಿಯರ ವಿಮಾನಗಳ ಮೂಲಕ ಪ್ರಯತ್ನಪಟ್ಟರು. ಶಾಂಗಾಯಿ ಯಲ್ಲಿ ನಿಲ್ಲಿಸಲ್ಪಟ್ಟ ಜಪಾನಿನ ಯುದ್ಧ ಜಹಜಿನ ಮೇಲೆ ಬಾಂಬುಗಳನ್ನು ಎಸೆದ.

ಜಪಾನೀಯರ ಶಿಸ್ತುಸೇನೆ ಇತ್ಯಾದಿಗಳು ಭಯಂಕರ ಸಂಖ್ಯೆಗಳಿಂದ ಜಪಾನಿನಲ್ಲಿ ತಯಾರಿಸಲ್ಪಟ್ಟವೆ. ಚೀನಾದು ಅದು ಬರುವ ಮೊದಲು ಜಪಾನೀಯರಿಗೆ ವಿರೋಧವಾಗಿ ಆಕ್ರಮವನ್ನು ಮಾಡಿ ದರು.

ಥಕ್ಕನೇ ಸೀನುಬರುವುದು ಶೀತದ ಸೂಚನೆಯು

ಇಂದು ಒಂದೇ ಸೀನಾ ಸ್ವದು ನಾಳೆ ಒಂದು ಭಾರೀ ಶೀತದಲ್ಲಿ ಕ್ರಮೇಣ ಚಳಿಜ (ಸನ್ನಿಪಾತ) ವಾಗಿ ಪರಿಣಮಿಸಬಹುದು. ಥಕ್ಕನೆ ಬಂದ ಶೀನು ನಿಮಗೊಂದು ಎಚ್ಚರಿಕೆಯಾಗಲಿ. ಮುಂದಿನ ಅಪಾಯಗಳಿಂದ ಪಾರಾ ಗಲು ಪೆಪ್ಸ್ ಮಾತ್ರೆಗಳನ್ನು ಸೇವಿಸಿರಿ. ಈ ಪೆಪ್ಸ್ ಮಾತ್ರೆ ಗಳು ಬಾಯಿಯಲ್ಲಿ ಕರಗಿದಾಗ ಅದರಿಂದ ಹೊರಡುವ ಒಂದು ವಿಧದ ಧೂಮವು ನಿಮ್ಮ ಶ್ವಾಸಕೋಶ ಗಂಟಲ ಇತ್ಯಾದಿಗಳನ್ನು ಪ್ರವೇಶಿಸಿ ಅಲ್ಲಿರುವ ರೋಗಾಣುಗಳನ್ನು ಕೊಂದುಬಿಡುವುದು. ನಿಮ್ಮ ಶ್ವಾಸಕೋಶದ ಮತ್ತು ಗಂಟಲಿನ ಶಕ್ತಿಯನ್ನು ಹೆಚ್ಚಿಸುವುದು. ಆದರಿಂದ ಶೀತವನ್ನು ನೀವು ಪಡೆಯ ದಂತೆ ಪೆಪ್ಸ್ ನಿಮ್ಮ ಪ್ರಾಣರಕ್ಷಣೆಯನ್ನು ಮಾಡುತ್ತದೆ.

ಪೆಪ್ಸ್ ಮಾತ್ರೆಗಳು ಸೀಲುಮಾಡಲ್ಪಟ್ಟ ಬಾಟ್ಲಿಗಳಲ್ಲಿ ರೂ. ೧ರಂತೆ ಮಾರಲ್ಪಡುತ್ತದೆ.

ಏಜಂಟರು.—ಮೆಸರ್ಸ್ ದಾಥಾ ಎಂಡ್ ಕೋ, ಪಿ. ಟಿ. ಮದ್ರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್‌ಮಾತ್ರೆಗಳನ್ನು ಸೇವಿಸಿರಿ

ಪೆಪ್ಸ್ PEPS

ತಾಟಸ್ಥ್ಯದ ನಿಜವಾದ ಪರಿಣಾಮ.

ಸ್ಪೈಯಿನಿನಲ್ಲಿ ಸಮರ ನಡೆಯುತ್ತಿದೆ. ಅದ ರಿಂದ ಪ್ರಪಂಚದ ಶಾಂತಿಭಂಗವಾಗದಂತೆ ಬ್ರಿಟನಿನ ಪ್ರಮುಖ- ಲಂಡನಿನ ತಾಟಸ್ಥ್ಯಭಾವ ಸಮಿತಿಯು ಅನೇಕ ಬಾರಿ ಸೇರಿತು. ಇಟೇಲಿ ಮತ್ತು ಜರ್ಮನ್ ದೇಶಗಳು, ದಂಗೆಗಾರರಿಗೆ ವಿಶೇಷ ತರದಲ್ಲಿ ಸಹಾಯಕರಾಗುತ್ತಿದ್ದರೂ, ಲಂಡನಿನ ತಾಟಸ್ಥ್ಯಭಾವ ಸಮಿತಿಗೆ ಅವರ ಪ್ರತಿ ನಿಧಿಗಳನ್ನು ಕಳುಹಿಸಿರುವರು.

ರಷ್ಯಾದೇಶವು ಸ್ಪೈಯಿನಿನ ಸರಕಾರಕ್ಕೆ ಸಹಾಯ ಒದಗಿಸುವುದರಿಂದ, ತಾವೂ ಸ್ಪೈಯಿ ನಿನ ರಣರಂಗಕ್ಕೆ ಇಳಿದಿರುವೆವು, ಎಂದು ಹಿಟ್ಲರ್-ಮುಸಲೀನಿ ವಾದ. ಆದರೆ ರಷ್ಯಾ ದಿಂದ ಸ್ಪೈಯಿನಿನ ಸರಕಾರಕ್ಕೆ, ಸೈನ್ಯ, ಶಸ್ತ್ರ ಇತ್ಯಾದಿಗಳ ರೂಪದಲ್ಲಿ ಸಹಾಯಮಾಡಲು ಅನೇಕ ಅಡ್ಡಂತರಗಳಿವೆ. ರಷ್ಯವು ಸ್ಪೈಯಿನಿ ನಿಂದ ಬಹಳ ದೂರವಿದೆ. ಸ್ಪೈಯಿನಿನಲ್ಲಿ ರಿಪಬ್ಲಿಕನ್ ಗವರ್ನಮೆಂಟಿನ ರಕ್ಷಣೆಯಾಗು ವರೆ, ರಷ್ಯದಿಂದ ಸ್ವಲ್ಪಮಟ್ಟಿಗೆ ಧನಸಹಾಯ ವಾಗಿರಬಹುದು ದಂಗೆಖೋರರು ಸುತ್ತಲೂ ಇರುವ ಈ ಸಮಯದಲ್ಲಿ ಅವರಿಗೆ ಬೇರೆ ತರ ದಲ್ಲಿ ರಷ್ಯದ ಸಹಾಯ ಹೊಂದಲು ಅವ ಕಾಶವಿಲ್ಲ

ದಂಗೆನಾಯಕ ಜನರಲ್ ಫ್ರೆಂಕೊವಿಗಾಗಿ ... ಸಾವಿರ ಇಟೇಲಿಯಾನ ಸೈನಿಕರು, ೨೦ ಸಾವಿರ ಜರ್ಮನರು, ಕಾದಾಡುತ್ತಿರುವಾಗ, ಪೆಸಿಯಿಸ್ಟ ರಾಷ್ಟ್ರಗಳಿಂದ ಅವರಿಗೆ ಧಾರಾಳ ಶಸ್ತ್ರ, ಸಿಡಿಮದ್ದು, ವಿಮಾನಗಳ ಸಹಾಯ ವಾಗುತ್ತಿರುವಾಗ, ಸ್ಪೈಯಿನಿನ ಸರಕಾರಕ್ಕೆ ಅವ ರಿಂದ ಯಾವ ಸಹಾಯವೂ ಒದಗುವುದಿಲ್ಲ. ಲಂಡನಿನ ತಟಸ್ಥಭಾವ ಸಮಿತಿಯಿಂದ ಅವಕ್ಕೆ ಬೇಕಾದ ಶಸ್ತ್ರಗಳು ಹೊರಗಿನ ದೇಶಗಳಿಂದ ದೊರಕದಂತಾಗಿದೆ

ಈ ಫ್ರೆಂಚ್ ಬ್ರಿಟಿಷ ಕಲ್ಪನೆಯಾದ ತಾಟಸ್ಥಭಾವ ಸಮಿತಿಯು ಜನರಲ್ ಫ್ರೆಂಕೊ ವಿಗೆ ಒಂದು ಮಹಾ ವರವೆನಿಸಿದೆ

ಬ್ರಿಟನಿನ ಪ್ರಜೆಗಳ ನಿರ್ಲಕ್ಷ್ಯಭಾವ.

ಬ್ರಿಟನು ಎತ್ತ ಸಾಗುತ್ತಿದೆ? ಕಾನ್ಸರ್ ವೇಟಿವರ ಸರಕಾರದಡಿಯಲ್ಲಿ ಹಿಟ್ಲರ- ಮುಸಲೀನಿಯು ಬೆಳವಣಿಗೆಯಿಂದ, ಮೆಡಿಟರೆ ನಿಯನ್‌ದಲ್ಲಿ ತಮಗೆ ಅನೇಕ ತರದ ಅಡ್ಡಂತರ ಗಳು ಉಂಟಾಗುವುದಾದರೂ ಅದು ಮಾತ ನಾಡದೆ ಸುಮ್ಮನಿದೆ ಜರ್ಮನಿಯು ವಾರ್ಸಲೆ ಒಪ್ಪಂದವನ್ನು ಮುರಿದುಬಿಟ್ಟಿತು, ಆಗಲೂ ಅದು ಸುಮ್ಮನಿತ್ತು ಈಗ ಇಟೇಲಿ ಜರ್ಮನ್ ಪ್ರಬಲತೆಯನ್ನು ಇನ್ನಷ್ಟು ದೃಢಗೊಳಿಸುವ ಸ್ಪೈಯಿ ನಿನ ಪ್ರಕರಣದಲ್ಲಿ ಅದು ವಿಚಿತ್ರಧೋರಣವನ್ನು ಹೊಂದಿದೆ ತಮ್ಮ ಅವಸಾನಕ್ಕೆ ತಾವೆ ಕಾರಣ ರಾಗುವಂತೆ ತಟಸ್ಥಭಾವ ಸಮಿತಿಯನ್ನು ನಿರ್ಮಿಸಿ, ಜನರಲ್ ಫ್ರೆಂಕೋನಿಗೆ ಹೆಚ್ಚಿನ ಸಹಾಯವಾಗುವಂತಾದರು ಪೆಸಿಯಿಸ್ಟರು ಬಲಹೊಂದಿದ ಮೇಲೆ ಬ್ರಿಟಿಷರಿಗೆ ಮತ್ತೆ ಅವರು ಸುಮ್ಮನಿರಲು ಬಿಡುವರೆ? ಪೆಸಿಯಿಸ್ಟ ಬಲವು ವೃದ್ಧಿಯಾಗಿ ಬೇಗನೆ ವಿಜಯಯಾತ್ರೆಯನ್ನು ಹೊರಡಿಸುವುದು ಜರ್ಮನ್ ಜಪಾನ್ ಒಪ್ಪಂ ದದಿಂದ ಪೌರ್ವಾತ್ಯದಲ್ಲಿ ಜಪಾನು ಬ್ರಿಟಿಷರ ಮೇಲೆ ಕೈಮಾಡಬಹುದು

ಬ್ರಿಟನು ಮುಂದಕ್ಕೆ ಬರಬಹುದಾದ ಆ ಅಪಾಯಗಳನ್ನು ಈಗ ನೋಟಕೆಯಲ್ಲಿ ಕಿತ್ತು ಬಿಡುವ ಬದಲಾಗಿ, ವಿಚಿತ್ರ ತರದ ವರ್ತನೆ ಯನ್ನು ಹಿಡಿದು ತಮ್ಮ ವಿರೋಧಿಗಳನ್ನೇ ಪುಷ್ಟೀ ಕರಿಸುತ್ತಿದ್ದಾರೆ.

ಹೀಗಿರುವಾಗ, ಬ್ರಿಟನಿನ ಪ್ರಜಾಪ್ರಭು ತ್ವದ ಅಧಿಕಾರವೆಲ್ಲ ಬ್ರಿಟಿಷ ಪ್ರಜೆಗಳಲ್ಲಿ ಕೆಲವರು, ತಮ್ಮ ಬಹಿರ್ ವ್ಯವಹಾರದ ಕುರಿತು-ಅತ್ಯಂತ ನಿರ್ಲಕ್ಷ್ಯವನ್ನೆ ಹೊಂದಿದಂತೆ ಕಾಣುತ್ತದೆ.

ಕಾರಣ, ಈಗಿನ ವರ್ತನೆಗೆ ಕಾರಣವೆನಿ ಸುವ ಸ್ವಾತಂತ್ರ್ಯಪ್ರಿಯ ಸರಕಾರಕ್ಕೆ ಅದು ಮತ್ತೊಮ್ಮೆ ಮತವಿತ್ತಿರುತ್ತದೆ.

ಬ್ರಿಟಿಷ ಸಾಮ್ರಾಜ್ಯದ ರಕ್ಷಣೆಯಾಗ ಬೇಕಾದರೆ,

ಸರ್ ನೊರ್ಮನ್ ಏಂಜಲರು, 'ಡಿಫೆನ್ಸ್ ಓಫ್ ದಿ ಎಂಪಾಯರ್' ಎಂಬ ಪುಸ್ತಕದಲ್ಲಿ ಬ್ರಿಟಿಷ ಸಾಮ್ರಾಜ್ಯ ರಕ್ಷಣೆ ಕುರಿತು, ಹೀಗೆ ಬರೆದಿರುವರು.

'ಜರ್ಮನಿ, ಜಪಾನು, ಇಟಲಿ ಈ ೩ ದೇಶಗಳು, ನಮ್ಮ ಮೇಲೆ ಯುದ್ಧ ಹೂಡಿದರೆ, ಆಗ ನಮ್ಮ ಗತಿಯೇನು? ಸ್ಥಿತಿಯೇನು? ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿ ರಕ್ಷಣಾ ಏರ್ಪಾಡುಗಳನ್ನು ಕೈಗೊಂಡು ಅವುಗಳನ್ನು ನಡೆಯಿಸುವರೆ ಸಾಧ್ಯವಾದೀತೆ? ಪೌರ್ವಾತ್ಯ ದಲ್ಲಿ, ಮೆಡಿಟರೇನಿಯನ್ ಸಮುದ್ರದಲ್ಲಿ, ನಾರ್ತ್ ಸೀ ಇವೆಲ್ಲಾ ಕಡೆಗಳಲ್ಲಿ ಒಂದೆ ಸಮಯ ರಕ್ಷಣ ಏರ್ಪಾಡುಗಳನ್ನು ನಡೆಯಿಸ ಬಹುದೆ? ನಮ್ಮ ಸರಕಾರವು ಯುದ್ಧಸಿದ್ಧತೆ ಗಾಗಿ ೫೦೦,೦೦೦,೦೦೦ ಪೌಂಡುಗಳನ್ನು ವ್ಯಯಿಸಬೇಕಾಗಿ ನಿರ್ಣಯಿಸುತ್ತಿರುವಾಗ, ಸಾಮ್ರಾಜ್ಯವನ್ನು ಸರ್ವಾಧಿಕಾರಿಗಳ ಹಾವಳಿ ಗಳಿಂದ ಕಾಪಾಡಲು ಒಂದು ಯೋಜನೆಯ ಕುರಿತು ಯತ್ನಪಡುವುದಿಲ್ಲ ಅದು ಸರ್ವಾಧಿ ಕಾರಿ ಎದುರು, ಹಿಂದೆ ಸರಿಯುತ್ತಿದೆ ಹೀಗೆ ಹಿಂದೆ ಹೋಗುತ್ತ ಸದ್ಯದಲ್ಲಿ ತಾವು ಅತ್ಯಂತ ಅಪಾಯಕರ ಸ್ಥಿತಿಗೆ ಬರಬಹುದು ನಮ್ಮ ಸ್ನೇಹಿತರನ್ನೂ, ಮುಂದಕ್ಕೆ ಆಗಬಹು ದಾದ ಸ್ನೇಹಿತರನ್ನೂ ನಮ್ಮ ರಕ್ಷಣೆಯ ಒಗ್ಗಿ ಒಟ್ಟುಗೂಡಿಸುವ ಯತ್ನಗಳನ್ನು ನಾವು ಮಾಡ ಬೇಕು ಈ ಮೈತ್ರಿಗಳನ್ನು ಬೆಳೆಯಿಸುತ್ತಿರುವ ನಮ್ಮ ಯತ್ನಗಳು ಯುದ್ಧಕ್ಕಾರಣವಾಗ-ವು ದೆಂದೂ ನಾವು ಭಯಪಟ್ಟರೆ ಆಗ ನಮ್ಮ ಸ್ಥಿತಿ ಯು ನೆಟ್ಟಗಾಗದು ನಮ್ಮ ರಕ್ಷಣೆಗಾಗಿ, ಇತರ ಮಿತ್ರರಾಷ್ಟ್ರಗಳೊಡನೆ ಒಪ್ಪಂದಗಳಾಗಬೇಕು, ಹೊಸ ಮಿತ್ರರನ್ನು ಹುಡುಕಬೇಕು, ಮತ್ತು ಒಟ್ಟಾಗಿ ರಕ್ಷಣೆ ಮಾಡಿಕೊಳ್ಳುವ ಒಂದು ಯೋ ಜನೆಯು ಕಲ್ಪನೆಯಾಗಬೇಕು ಸಾಮ್ರಾಜ್ಯ ರಕ್ಷಣೆಗೆ ಇದುಒಂದೆ ಒಂದಾದ ಉಪಾಯವು'

'ಬ್ರಿಟನು ತಮ್ಮನ್ನು ರಕ್ಷಿಸಿಕೊಳ್ಳುವ ಒಂದು ಉಪಾಯವಾದ 'ಕಲೆಕ್ಟಿವ್ ಸೆಕ್ಯು ರಿಟಿ' ಪ್ಲೇನನ್ನು ಇತರ ರಾಷ್ಟ್ರಗಳ ಸಹಕಾರ ದಿಂದ ರಚಿಸಿ ರಕ್ಷಣೆಸಾಧಿಸುವುದನ್ನು ಬಿಟ್ಟು, ತನ್ನ ಶಕ್ತಿಯನ್ನು ಸಂಪೂರ್ಣವಾಗಿ ಯುದ್ಧ ಸಿದ್ಧತೆಗಾಗಿ ವ್ಯಯಿಸುತ್ತಿದೆ' ಎಂದು ಮಿ ಗ್ರಿಹೆರ್ವಿ ಪೋಲರ್ ಅಭಿಪ್ರಾಯ

ಐರೋಪ್ಯದ ವಾರ್ತಾಪತ್ರಿಕೆಗಳು.

ಐರೋಪ್ಯದ ಪ್ರಜೆಗಳ ನೇಕಡಾ ೭೫ರ ಸಲೆಯು, ತಮ್ಮ ಸರಕಾರದ ಸಮ್ಮತವಿರುವ, ವಾರ್ತೆಗಳನ್ನು ಮಾತ್ರ ತಮ್ಮ ಪತ್ರಿಕೆಗಳಲ್ಲಿ ಓದಬೇಕು

ಜರ್ಮನಿಯಲ್ಲಿ, ತನ್ನ ಕ್ರಮಕ್ಕೆ ವಿರೋಧ ವೆನಿಸುವ ವಾರ್ತೆಗಳು, ಪ್ರಜೆಗಳ ಕಿವಿಗಳಿಗೆ ಬೀಳದಂತೆ ಹಿಟ್ಲರನು ಅತಿ ಜಾಗರೂಕ ನಾಗಿರುವನು ಅಂದರೆ ಹೊರಗಿನ ಜಗತ್ತಿನ ಸ್ಥಿತಿಯ ಕುರಿತು, ಹಿಟ್ಲರನು ಸಮ್ಮತಿಸುವ ವಿಚಾರಗಳನ್ನು ಮಾತ್ರ ಅವರು ತಿಳಿಯುವವ ರಾಗಬೇಕು ಪ್ರಜಾಪ್ರಭುತ್ವದ ಮಹತ್ವದ ವರ್ತಮಾನಗಳನ್ನು ಕೇಳುವರೆ ಅವರಿಗೆ ಅವ ಕಾಶವೆ ಇಲ್ಲ ಎಲ್ಲಾ ವರ್ತಮಾನ ಪತ್ರಗಳು ಆತನ ಕೈಗಳಲ್ಲಿದ್ದು, ಆತನಿಗೆ ಬೇಕಾದ ರೀತಿ ಯಲ್ಲಿ ಅವುಗಳು ವಾರ್ತೆಗಳನ್ನೂ ಅಭಿಪ್ರಾಯ ವನ್ನೂ ಹೊರ ಸುತ್ತವೆ. ಅಲ್ಲಿ ಪತ್ರಿಕೆಗಳಿಗೆ ಸ್ವಾತಂತ್ರ್ಯವಿಲ್ಲ, ತನ್ನ ಕ್ರಮಗಳ ಕುರಿತು ಪ್ರಜೆಗಳಲ್ಲಿ ಭರವಸೆಗಳುಂಟಾಗುವಂತೆ ಹಿಟ್ಲ ರನು ಪ್ರಸಾರಣೆಯನ್ನು ನಡೆಯಿಸುತ್ತಿದ್ದಾನೆ.

ಇಟೇಲಿಯ ಪ್ರಾಮುಖ್ಯವಾದ ವರ್ತ ಮಾನ ಪತ್ರವು ಮುಸಲೀನಿಯ ಸಂಪಾದಕತ್ವ ದಲ್ಲಿ ನಡೆಯುತ್ತದೆ 'ರಾಷ್ಟ್ರೀಯ ಗೌರವ ದ ನೆವದಿಂದ ಪ್ರಜೆಗಳಲ್ಲಿ ಒಂದು ತರದ ಉತ್ಸಾಹ ವನ್ನುಂಟುಮಾಡಿ, ಆತನು ತನ್ನ ಪೈಶಾಚಿಕ ಕೃತ್ಯಗಳನ್ನು ನಡೆಯಿಸುತ್ತಿದ್ದಾನೆ

ಐರೋಪ್ಯದ ಸರ್ವಾಧಿಕಾರಿ ದೇಶಗಳಲ್ಲಿ ಸರ್ವಾಧಿಕಾರಿಗಳು ವರ್ತಮಾನ ಪತ್ರಗಳ ಮೂಲಕ ಪ್ರಸಾರಣೆಯನ್ನು ನಡೆಯಿಸಿ, ಪ್ರಜಾ ಮತವು ತಮಗೆ ಬೇಕಾದ ರೀತಿಯಲ್ಲಿ ರೂಪು ಹೊಂದುವಂತೆ ಮಾಡುತ್ತಾರೆ

ಆದುದರಿಂದಲೆ ಸರ್ವಾಧಿಕಾರಿಗಳಿಗೆ ಅಷ್ಟು ಬೆಂಬಲ ದೊರಕುವುದು ಅವರು ಜಗ ತ್ತಿನ ಶಾಂತಿಭಂಗಕ್ಕೆ ಕಾರಣರಾಗಿರುವರು

ಫ್ರಾನ್ಸಿನಲ್ಲಿ ನಾಜಿ ...

ಫ್ರಾನ್ಸಿನ ಸಂಗ್ರಾಮ ರಹಸ್ಯಗಳು ಸಂಗ್ರಾ ಮಾಧಿಕಾರಿಗಳ ಮಡದಿಯರಿಂದ ನಾಜಿಗಳು ಪಡೆಯುತ್ತಿರುವ ರಹಸ್ಯಗಳು ಈಗ ಬಯಲಾ ಗಿವೆ.

ಓರ್ವ ಕೈತನ ಕುರಿತು ಸಂದೇಹಗಳುಂಟಾ ದುವು, ಆತನ ಮನೆ ಜಪ್ತಿಮಾಡಿದ್ದರು. ಅನೇಕ ನಕಾಶೆಗಳು, ಪತ್ರಗಳೂ ದೊರಕಿದುವು. ಆತನು ನಾಜಿ ಗೂಢಚಾರಿಗಳ ಏಜಂಟನೆಂದು ಕಂಡು ಹಿಡಿಯಲಾಯಿತು

ಇದೇ ರೀತಿ, ನಾಜಿಗಳಿಂದ ಫ್ರಾನ್ಸಿನಲ್ಲಿ ಅನೇಕ ದ್ರೋಹಿಗಳ ರಚನೆಯಾಗಿರುವುದೆಂದು ತಿಳಿದುಬರುತ್ತದೆ

ಈ ಕುರಿತು ಅನೇಕರನ್ನು ಸೆರೆಹಿಡಿಯ ಲಾಗಿದೆ ಅವರ ಕುರಿತು ವಿಚಾರಣೆಯು ಬೇಗನೆ ನಡೆಯಲಿದೆ

ಸ್ಪೈಯಿನಿನಲ್ಲಿ ಪೆಸಿಯಿಸ್ಟ್ ಪ್ರಭುತ್ವ ಸ್ಥಾಪನೆಯಾದರೆ

ಜರ್ಮನ್ ಮತ್ತು ಇಟೇಲಿಯಾನ ಪೆಸಿ ಯಿಸ್ಟ ಪ್ರಭುತ್ವಗಳು ಇನ್ನಷ್ಟು ಬಲಹೊಂದು ವವು ಅದಕ್ಕಾಗಿಯೆ ಅವರು ಸ್ಪೈಯಿನಿನ ಪ್ರಕರಣದಲ್ಲಿ ಕೈಮಾಡಿದುದು ರಷ್ಯವು ಕೇವಲ ಆದರ್ಶಕ್ಕಾಗಿ ಮಾತ್ರ ಸ್ಪೈಯಿನಿನ ಸರಕಾರ ಸಹಾಯಕವಾದುದು

ಪೆಸಿಯಿಸ್ಟರು ಸರ್ವ ಜಗತ್ತಿನ ಪ್ರಭುತ್ವ ವನ್ನು ಪಡೆಯುವರೆ ಯತ್ನಮಾಡುವರು ಮೆಡಿ ಟರೆನಿಯನ್‌ನಲ್ಲಿ ಬ್ರಿಟಿಷರಿಗೆ ಮಹಾ ಅಡ್ಡಂತರ ಗಳು ಉಂಟಾಗುವುವು ಎಬಿಸಿನಿಯಾದಲ್ಲಿ ಇಟೇಲಿ ಪ್ರಭುತ್ವ ಸ್ಥಾಪನೆಯಿಂದ ಸುಯೇಜ ಕಾಲುವೆ ಹತ್ತಿರವೂ, ಸ್ಪೈಯಿನಿನ ಹತಿರ ಬಾಲ ರಿಕ್ ದ್ವೀಪಗಳಲ್ಲೂ, ಜರ್ಮನ್-ಇಟೇಲಿ ಬಲ ಗಳ ಸ್ಥಾಪನೆಯಿಂದಲೂ, ಬ್ರಿಟನಿಗೆ ಪೌರ್ವಾ ತ್ಯಕ್ಕೆ ತೆರಳುವ ಈ ಹಾದಿಯಲ್ಲಿ ಆತಂಕಗಳು ಉಂಟಾಗುವುವು

ಐರೋಪ್ಯದ ಸರ್ವಾಧಿಕಾರಿಗಳು ಪ್ರಪಂ ಚದ ಶಾಂತಿಭಂಗಕ್ಕೆ ಕಾರಣರಾಗುವರು.

ಸಂಯುಕ್ತ ಅಮೇರಿಕ ವೈದ್ಯರೊಬ್ಬರು ತನ್ನ ಮಗನಿಗೆ ಗುಂಡಿಕ್ಕಿದರು!

ಸಂಯುಕ್ತ ಅಮೇರಿಕದ ಓರ್ವ ಸುಪ್ರ ಸಿದ್ಧ ವೈದ್ಯರು, ತನ್ನ ಮಗನ ರೋಗದ ಕುರಿತು ಹತಾಶರಾಗಿ, ಆತನಿಗೆ ಗುಂಡಿಕ್ಕಿ ಕೊಲೆಗೊಳಿಸಿ ತಾವೂ ಪ್ರಾಣಹತ್ಯಮಾಡಿರುವರು ಮಗನೂ ವೈದ್ಯಕೀಯದಲ್ಲಿ ಪ್ರವೀಣತೆಯನ್ನುಹೊಂದಿದ್ದು ಮುಂದಿನ ವಿದ್ಯಾಭ್ಯಾಸಕ್ಕಾಗಿ ಪೆರಿಸಿಗೆ ತೆರಳಿ ದವನಿಗೆ ನರ್‌ವಸ್ ಕಾಯಿಲೆಯು ಉಂಟಾ ಯಿತು ತಂದೆಯು ಆತನನ್ನು ಅಮೇರಿಕಕ್ಕೆ ತಂದು, ಇವರಿಗೆ ಬಹಳ ಸಮಯದಿಂದ ಯತ್ನ ಪಡುತ್ತಿದ್ದರೂ ಆತನನ್ನು ಗುಣಪಡಿಸಲಾರದೆ ಹತಾಶನಾದನು ಮಗನನ್ನು ಒಂದು ದಿನ ತನ್ನ ಆಫೀಸಿಗೆ ಒಯ್ದು, ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿ, ಆತನಿಗೆ ಗುಂಡಿಕ್ಕಿದರು ತನ್ನ ಮಿತ್ರರಿಗೆ ಒಂದು ಪತ್ರ ಬರೆದಿಟ್ಟು ತಾನೂ ಪ್ರಾಣತ್ಯಾಗವಮಾಡಿಕೊಂಡರು.

ಹಣವನ್ನು ನೀರಿನಂತೆ ವ್ಯಯಿಸಿದ ವನು ಈಗ ಅತ್ಯಂತ ಸರಳ ಜೀವಿಯು

೧೯೩೧ರ ಹಿಂದೆ ಲಂಡನಿನ ಅತ್ಯಂತ ಶ್ರೀಮಂತ ಶ್ರೀಮಂತನೆನಿಸಿದ ಫ್ರಾನ್ಸಿಸ್ ಲೊರೆಂಗನು ಒಂದು ಮಹಾ ಮೋಸಕ್ಕಾಗಿ ಕಾರಾಗೃಹಕ್ಕೆ ಕಳುಹಿಸಲ್ಪಟ್ಟನು ೩೧೭,೦೦೦ ಪೌಂಡುಗಳ ವರೆಗೆ ಜನರನ್ನು ಮೋಸಗೊಳಿಸಿದ್ದನು ಆತ ನಿಗೆ ಏಳು ವರ್ಷದ ಸಜೆಯು ವಿಧಿಸಲಾಗಿತ್ತು.

ಹಣವನ್ನು ನೀರಿನಂತೆ ವ್ಯಯಿಸಿದವನು- ಒಂದು ಪೆಟ್ರೋಲ್ ಸಂಸ್ಥೆಯ ಮುಖಂಡನಾಗಿ ಅಪಾರವಾದ ಸಂಪತ್ತನ್ನುಗಳಿಸಿದವನು, ಒಂದು ದಿವಸ ಜೂಗಾರಾಟದಲ್ಲಿ ೫೦,೦೦೦ ಪೌಂಡು ಹಣಗಳನ್ನು ಪಡೆದರೂ ಅದನ್ನು ... ಮಾಡದವನು ಈಗ ಆತನು ಒಂದು ಚಿಕ್ಕ ಮನೆಯಲ್ಲಿ ನಿವೃತ್ತನಾಗಿರುವನು. ಅತ್ಯಂತ ಸರಳತೆಯಿಂದ ಕಾಲಕ್ಷೇಪಮಾಡುತ್ತಿರುವನು ಶೇರ್ ಬಜಾರದ ಕುರಿತ ಉತ್ತಮ ತರದ ಮಾಹಿತಿಯುಳ್ಳವನಾದರೂ ಆ ವೃತ್ತಿಯನ್ನು ಆತನು ತೊರೆದಿರುವನು ಕಾರಾಗೃಹವಾಸ ದಲ್ಲಿ ಅನೇಕ ಹೊಸ ಸಂಗತಿಗಳನ್ನು ಅವನ ಕಲಿತುದರಿಂದ, ಬಹಳ ಸುಧಾರಣೆಗೆ ಬಂದಿರು ವನಾಗಿ ತಿಳಿದುಬರುತ್ತದೆ

ದಮ್ಮು ಪೂರ್ಣ ಗುಣವಾಗುವ ಉಪಾಯವನ್ನೇ ಕೈಕೊಳ್ಳಬೇಕು.

ಕೆಮ್ಮು ಮತ್ತು ಕಫವಿಕಾರವಿದ್ದವರು "ಎಫಿಡಿನ್" ಮುಂತಾದ ತಾತ್ಕಾಲಿಕ ಆರಾಮವೆನಿಸುವ ಔಷಧಗಳನ್ನು ಎಂದೂ ಉಪಯೋಗಿಸಬಾರದು ಈ ಔಷಧ ಗಳು ರೋಗವನ್ನು ಪೂರ್ಣ ಗುಣಪಡಿಸಲು ನಿರುಪಯೋಗಿ ಎಂಬುದು ನಿಶ್ಚಿತವು ಮತ್ತು ಇಂಥ ಔಷಧಗಳು ಶ್ವಾಸನಲಿಕೆಯಲ್ಲಿ ಹೆಚ್ಚಿಗೆ ನೋವುಂಟುಮಾಡಿ ರೋಗ ವನ್ನು ಉಲ್ಬಣಗೊಳಿಸುತ್ತವೆ

ರೋಗಲಕ್ಷಣವನ್ನು ಪೂರ್ಣ ವಿಚಾರಮಾಡಿ, ರೋಗಿಗೆ ಬೇಗನೆ ಮತ್ತು ಸಾವಧಾನವಾಗಿ ಪೂರ್ಣ ಗುಣ ಮಾಡುವ ಔಷಧವೇ ನಿಜವಾದ ಉಪಾಯವು ಮತ್ತು ಇದೇ ದೃಷ್ಟಿಯಿಂದ ಡಾ|| ಪುರೋಹಿತ ಇವರ— "ಶ್ವಾಸಹಾರಿ ಪ್ಲೇನ" ಮತ್ತು "ಶ್ವಾಸಹಾರಿ ಕಾಂಪಾವುಂಡ" ಈ ಎರಡೂ ಔಷಧಗಳು ದಮ್ಮು ವಿಕಾರವನ್ನು ಪೂರ್ಣ ಗುಣಪಡಿಸುವ ದಿವ್ಯೌಷಧಿಗಳಲ್ಲಿ ಅಗ್ರೇಸರವೆನಿಸಿವೆ ದಮ್ಮು, ಶ್ವಾಸ, ಮುಂಜಾನೆಯ ಕಸಕೆ, ಗಂಟಲು ಕೆರೆಯುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲಾ ರೋಗ ಗುಣಪಡಿಸಲು "ಶ್ವಾಸಹಾರಿ ಪ್ಲೇನ" ಉಪಯೋಗಿಸಬೇಕು ಅಮ್ಲಪಿತ್ತವಿದ್ದವರು "ಶ್ವಾಸಹಾರಿ ಕಂಪೌಂಡ" (ಕೆಂಪು ಪ್ಯಾಕಿಂಗ) ಉಪಯೋಗಿಸುವುದು ಹೆಚ್ಚು ಲಾಭಕರವು.

ಬಹುತರವಾಗಿ ಎಲ್ಲಾ ಶಹರುಗಳಲ್ಲಿ ಕೆಮಿಸ್ಟ ಸ್ಟೋರ್ಸ ಮತ್ತು ಅಂಗಡಿಗಳಲ್ಲಿ ಈ ಔಷಧಗಳು ರೂ. 2, 3-8-0 ಮತ್ತು 6 ಹೀಗೆ ಬೇರೆ ಬೇರೆ ಬೆಲೆಯ 3 ಪ್ಯಾಕಿಂಗ್ ದರ್ಜೆಗಳಲ್ಲಿ ಸಿಗುತ್ತವೆ

ಮಂಗಳೂರು.—ಧಿ. ಪೊಪ್ಯುಲರ್ ಸ್ಟೋರ್ಸ್, ರಥಬೀದಿ

ವಿಜಾಪುರ — { ಶಾಯೋಸಿಯರ ಫಾರ್ಮಸಿ. ಯು. ಬಿ. ಬಾಳಗಾ.

ಹುಬ್ಬಳ್ಳಿ ಗದಗ ಧಾರವಾಡ } ಹುಬ್ಬಳ್ಳಿ ಫಾರ್ಮಸಿ.

ಪುರೋಹಿತ ಶ್ವಾಸಹಾರಿ

ಡಾ|| ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ನವರತ್ನಾ ಚ್ಯವನಪ್ರಾಶಾವ ಲೇಹ

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಶ್ವಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ

ರಾತಲು 1ಕ್ಕೆ ರೂ 2—6—0. ½ ರಾತಲು 1—4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಹೈಪೀರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸು ವದರಲ್ಲಿ ಉಪಕಾರಿಯಾಗದೆ ತೈಲಾಭಂಗಕ್ಕೂ ಒಳ್ಳೆದು.

ಕ್ರಯ 16 oz 3-0 0; 8 oz 1 10 0; 4 oz 0 14 0

ತಯಾರಿಸುವವರು —

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ.-

ಪಾಪ್ಯುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಟ್ಟಿ ಕಾರ್ಕಳ

ಕೆ. ಎಲ್ ಐತಾಳ, ಉಡುಪಿ — ಮೋಡರ್ನ್ ಫಾರ್ಮಸಿ, ಕುಂದಾಪುರ.

ಬಿ. ಜಿ ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರ್ಕೂರ.

ಡಾ। ರಾಮ ಗುರುಕುಲ ಬ್ರಹ್ಮಾವರ.

ಜೊಂಬಾಯಿ ಏಜಂಟರು CHAMSI N RSI & CO.

Chemists Princess Street BOMBAY

KANARA WATCH WORKS

WATCH MAKERS & GENERAL MERCHANTS

Hampankatta MANGALORE

Dealers in — Watches Clocks Timepieces, Rolled Gold Jewellery & Sporting Materials etc



Stockists of West End Zenith Meridian Swiss Watches of latest designs & tastes

Repairers — Watches, Clocks, Timepieces and Gramophones.

Japan 8 Inch Octegon	Rs	6	0	0
8 „ Regulator	„	6	12	0
10 „ Octegon	„	6	8	0
10 „ Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಿಗೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ವ ಗ್ರೆಮಾಫೋನು ರಿಪೇರಿ ಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!

BEST BRILLIANCY

K. R. K. SHET,

Near Mission High School, MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್ ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಒಬ್ಬಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚಹಾ ಪಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ ಶೆಟ್, ಜುವೆಲ್ಲರ್,

ಮಿಶ್ಯನ್ ಹೈಸ್ಕೂಲ ಬಳಿ ಮಂಗಳೂರು.

FOR

Quality Frames & Lens,

Please Visit



Nayaks' Optical Stores

Scientific Opticians

Temple Square MANGALORE

ಪೈಂಟರ್ಸ್

P A I N T E R S

Whenever you require the service of *Please call on or write to:-*

PAINTERS

Simon & Co,

Painters,

Churchgate, Hampankatta No 13 MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸ್ಯಾನ್ ಬೋರ್ಡ್ಸ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ [illegible]

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ರಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್

[illegible]

ವಾಚನ್ನು 3-8-0 ಬಂಗಾರದ ಗಿಲೀಟಿದ್ದಕ್ಕೆ ರೂ. 4—8—0 [illegible] ಆಯತಾಕಾರದಕ್ಕೆ 6—8—0 ಅದರಲ್ಲಿ ಬಂಗಾರದ ಗಿಲೀಟಿದ್ದುದಕ್ಕೆ 8—0 [illegible] ಚೆಗೆ ಬರಿ ರೂ 1—14—0 ಟಿ, ಟ್ರಾಂಬಿಲ್ 1ಕ್ಕೆ ಬರಿ ರೂ 1—1 0 ಮಾತ್ರ

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176 Cross Street CALCUTTA

NOTICE.

In the Court of the District Judge of S Kanara

~~R I A 61/1937,~~ in O. P No 91/1932

In the matter of the minors (1) Annie Lucifer Ambrosia (2) Helen Rose Mary and (3) John Joshua wilhelm

Ezekiel Bangera... .. ..Petitioner

Notice is hereby given to the Relations of the above minors, particularly to Ratni Aroons, Sarah Jacob and Cecil Roberts, that the hearing of the above application for appointing Petitioner as the personal guardian of the said minors stands adjourned to 24-6-37 and that they may appear in Court either in person ~~or by a vakil~~ on the said day at 11 a. m. and file their objections, if any, herein

Mangalore — K Gopalkrishna Rao,

17—1—37 — Vakil for Petitioner

ಶಾಂತಿ ಬಗ್ಗೆ ನೋಬೆಲ್ ಬಹುಮಾನವನ್ನು ಮಹಾತ್ಮಾಜಿಯವರಿಗೆ ಕೊಡಬೇಕಾಗಿ, ಈ ಮೊದಲು ಆ ಬಹುಮಾನ ಪಡೆದ ಆರು ಮಂದಿ ಮಹನೀಯರು ಸೂಚನೆ ಕೊಟ್ಟಿರುವರಾಗಿ ತಿಳಿದುಬರುತ್ತದೆ.

ಮಂಗಳೂರು.

'ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಪುಸ್ತಕಗಳ ಅನಾಹುತ' ಎಂಬ ಶಿರೋನಾಮೆಯುಳ್ಳ ಒಂದು ಲೇಖನವು ನಮಗೆ ಬಂದಿರುತ್ತದೆ. ಜಿಲ್ಲಾ ಬೋರ್ಡಿನ ಪುಸ್ತಕಗಳನ್ನು ಆರಿಸಲು ನೇಮಕವಾದ ಸ್ಟಾಂಡಿಂಗ್ ಕಮಿಟಿಯು ಈ ಪುಸ್ತಕಗಳನ್ನು ಆರಿಸುವ ಧೋರಣೆಯನ್ನು ಕುರಿತು ಟೀಕೆಯು. ಇದರಲ್ಲಿರುತ್ತದೆ. 'ವಿಚಾರಿಸಿದರೆ ಈ ಪುಸ್ತಕಗಳ ಆರಿಸುವಿಕೆಯಲ್ಲಿ ಯಾವ ಸಮಾಧಾನವೂ ಇಲ್ಲ. ಶಾಲಾ ಹುಡುಗರಿರುವ ಪ್ರತಿಯೊಂದು ಮನೆಯಲ್ಲಿಯೂ ಒಂದೊಂದು ಚಿಕ್ಕ ವಾಚನಾಲಯವೇ ಉಂಟಾಗಿದೆ. ಜಿಲ್ಲಾ ಬೋರ್ಡಿನ ವಿದ್ಯಾರ್ಥಿಗಳ ಮೇಲೆ ಇಷ್ಟಾದರೂ ಕನಿಕರವಿಟ್ಟಂತೆ ತೋರುವುದಿಲ್ಲ. ಶಾಲಾಧಿಕಾರಿಗಳು ಕನ್ನಡ ಪುಸ್ತಕ ಅಧಿಕ ಕೆಲವುಗಳ ಅಪ್ರಾಸಕತೆ, ಕೆಲವದರ ಅಧಿಕಬೆಲೆ, ಕೆಲವು ಸಿಲೆಬಸಿಗೆ ಸರಿಯಾಗಿ ಇಲ್ಲದಿರುವಿಕೆ, ಮುಂತಾದುವನ್ನು ವಿನಯದಿಂದ ವಿದ್ಯಾರ್ಥಿಗಳ ಮೇಲಿನ ಕನಿಕರದಿಂದ ಕೇಳಿಕೊಂಡರೆ, ದರ್ಪೋಕ್ತಿಯ ಪ್ರತ್ಯುತ್ತರ, ತಾವಾರಿಸಿದ ಪುಸ್ತಕಗಳನ್ನು ಉಪಯೋಗಿಸಬೇಕೆಂದು ಹುಡುಗರು ಉಪಯೋಗಿಸುವ ಪಠ್ಯಪುಸ್ತಕವನ್ನೂ (Atlas) ಇಂಥದನ್ನೆ ತೆಕ್ಕೊಳ್ಳಬೇಕೆಂದು ಆಜ್ಞೆ ಇನ್ನೇನು? ಇನ್ನು ಮುಂದೆ ಹುಡುಗರು, ಪಾಲಪುಸ್ತಕ, ಪೆನ್ಸಿಲು, ಉಡುಪು ಇತರ ಸಾಮಗ್ರಿಗಳನ್ನು ಡಿ. ಬೋರ್ಡಿನವರ ಹೇಳಿಕೆ ಮೇರೆಗೆ ತೆಗೆದುಕೊಳ್ಳುವ ಪ್ರಸಂಗವೂ ದೂರವಿರಲಾರದು.' ಎಂಬುವ ಅಭಿಪ್ರಾಯದಿಂದ ಈ ಲೇಖವು ಮುಕ್ತಾಯವಾಗಿರುವುದು.

ಉಡುಪಿ ಶ್ರೀಕೃಷ್ಣ ದೇವರ ಮಠದ ಎದುರಿನ ಕನಕ ಕಿಟಿಕಿಯು ಇರುವ ಸ್ಥಳದಲ್ಲಿ ಮಹಾದ್ವಾರವನ್ನಿಡುವ ಕುರಿತು, ಈಗ ಪಾರುಪತ್ಯದಲ್ಲಿರುವ ಪೇಜಾವರ ಮಠದ ಜನರಲ್ ಏಜಂಟರಿಂದ ಒಂದು ಪತ್ರವು ನಮಗೆ ಬಂದಿರುತ್ತದೆ.

'......ಶ್ರೀ ಮಠಕ್ಕೆ ಈಗ ಸರಿಯಾದ ಮಹಾದ್ವಾರವೇ ಇಲ್ಲ. ಎಲ್ಲಿಯೊ ಹಿಂಬದಿಯಿಂದ ಹೇಗೊ ಹೋಗಿ ಎಲ್ಲಿಯೊ ದೇವರ ದರ್ಶನ ಮಾಡುವುದೂ...... ಉತ್ಸವ ಕಾಲದಲ್ಲಿ ಜನಸಂದಣಿಯು ವಿಶೇಷವಾಗಿರುವಾಗ ಈಗಿನ ಇಕ್ಕಟ್ಟಾದ ದ್ವಾರದಿಂದ......ಹೆಂಗಸು ಮಕ್ಕಳು ಅನೇಕ ಉಪದ್ರವಗಳಿಗೆ ಗುರಿಯಾಗುತ್ತಾರೆ. ಆದರೆ ಹೀಗೆ ಮಾಡುವರೆ, ಕೆಲವರ ಆಕ್ಷೇಪವಲ್ಲದೆ, ಅಷ್ಟ ಮಠಾಧಿಪತಿಗಳ ಆಕ್ಷೇಪ......ಹಾಗೆ ಜನರಲ್ಲಿ ಅಸಮಾಧಾನ ಉಂಟಾಗುವುದಾದರೆ ನಾವು ಆಲೋಚನೆಯನ್ನು ತೊರೆದುಬಿಡುವೆವು......ಮಠಾಧೀಶರು ಸಮಾಧಾನಪಡುವಂತೆ ಜನತೆಯ ಬೆಂಬಲ ಬೇಕು.

'ಮಹಾದ್ವಾರ ತೆರೆದರೆ ಹರಿಜನರಿಗೆ ಪ್ರವೇಶಿಸಲು ಅನುಕೂಲವಾಗುವುದೆಂದು...ಕೆಲವರ ಆಕ್ಷೇಪ...... ಚರಿತ್ರಾರ್ಹವಾದ ಕನಕ ಕಿಟಕಿಯನ್ನು ತೆಗೆದಂತಾಗಲಿಲ್ಲವೆ?...ದೇವರ ದರ್ಶನಕ್ಕಾಗಿ ಆ ಕಿಟಕಿಯನ್ನು ಇಡಿಸಲಾಗಿತ್ತು. ಆದರಿಂದ ಅಲ್ಲಿ ಮಹಾದ್ವಾರವನ್ನು ಇಡುವುದರಲ್ಲಿ ಯಾವ ಅಭ್ಯಂತರವೂ ತೋರುವುದಿಲ್ಲ.... ಆದರಿಂದ ಸಾರ್ವಜನಿಕರಿಗೆ ಮಹಾ ಅನುಕೂಲವಾಗುವುದು. ಮನೋವೃತ್ತಿಯು ಸಂಕುಚಿತವಾಗಿದ್ದರೆ ಇಂತಹ ಆಕ್ಷೇಪಗಳು ಹುಟ್ಟುತ್ತವೆ......ಈ ಸಂಸ್ಥೆಯು ಸಾರ್ವಜನಿಕವಾಗಿ ಇರುತ್ತದೆ...ದೇವಸ್ಥಾನಗಳೂ ಮಠಗಳೂ ಜನರನ್ನುದ್ದೇಶಿಸಿಯೆ ನಿರ್ಮಿಸಲ್ಪಟ್ಟಿರುತ್ತವೆ.

ಜನತೆಯು ಈ ಕೆಲಸಕ್ಕೆ ನೆರವಾಗಬೇಕು ಈ ಮಹಾದ್ವಾರವನ್ನು ಇಡುವುದಲ್ಲದೆ, ಅಲ್ಲಿ ಹರಿಜನರಿಗೂ ಪ್ರವೇಶ ದೊರಕಿಸಿ, ಹಿಂದೂಧರ್ಮದ ರಕ್ಷಣೆಯಾಗಲೆಂದು ನಮ್ಮ ಹಾರೈಕೆ.

ಮಹಾಳಿ ಅಥವಾ ಕೊಳೆರೋಗ ಎಂಬ ಶಿರೋನಾಮದ ಒಂದು ಲೇಖನವು ನಮ್ಮ ಓರ್ವ ವಾಚಕಮಹಾಶಯರಿಂದ ಬಂದಿರುವುದು. ಸರಕಾರದ ವ್ಯವಸಾಯ ಖಾತೆಯವರು ಆ ಕುರಿತು ಶ್ರಮವಹಿಸುತ್ತಿದ್ದರೂ ಅಡಿಕೆ ಗೊನೆಗಳಿಗೆ ಎರಡು ಮೂರಾವರ್ತಿ ಸ್ಪ್ರೇ ಮಾಡಿದ್ದರೂ, ಮಹಾಳಿರೋಗ ಹಾವಳಿಯು ಅನೇಕ ತೋಟಗಳಲ್ಲಿ ನಡೆದೇಬಿಟ್ಟಿರುವುದೆಂದೂ ಈ ಕುರಿತು ಸರಕಾರವು ಇನ್ನಷ್ಟು ಹೆಚ್ಚಿನ ಲಕ್ಷ್ಯವನ್ನು ಸಲ್ಲಿಸಬೇಕೆಂದೂ ಈ ಲೇಖದಲ್ಲಿ ಕೋರಲಾಗಿದೆ.

ಗ್ರಾಮ ವಾಚನಾಲಯ ಸಿಟ್ಟಿಗ್ರಾಮದ ಧರ್ಮಾರ್ಥ ವಾಚನಾಲಯದ ಸಭೆಯು ಮೊನ್ನೆ ದಿನ ಸೇರಿತು. ಅನೇಕ ಗ್ರಾಮಮುಖಂಡರು ನೆರೆದಿದ್ದರು. ಸಭೆಯಲ್ಲಿ ಅನೇಕ ಮಹನೀಯರು ವಾಚನಾಲಯಕ್ಕೆ ಸಹಾಯಾರ್ಥವಾಗಿ ಧನಸಹಾಯವನ್ನು ಮಾಡಿದರು. ಅಲ್ಲದೆ ಒಬ್ಬರು ಒಂದು ವಾರಪತ್ರಿಕೆಯನ್ನು ತನ್ನ ಖರ್ಚಿನಿಂದ ಕೊಡಿಸುತ್ತೇನೆಂದು ವಾಗ್ದಾನಮಾಡಿರುತ್ತಾರೆ. ......ಇದೇ ರೀತಿ ನಮ್ಮ ಪ್ರತಿಯೊಂದು ಹಳ್ಳಿಗಳಲ್ಲಿ ವಾಚನಾಲಯ ಇತ್ಯಾದಿಗಳು ಗ್ರಾಮಸ್ಥರ ಪರಸ್ಪರ ಸಹಾಯದಿಂದ ನಡೆದು, ನಮ್ಮ ಹಳ್ಳಿಗರಲ್ಲಿರುವ ಅಜ್ಞಾನವು ದೂರವಾಗಲೆಂಬುದೆ ನಮ್ಮ ಹಾರೈಕೆ.

ದಕ್ಷಿಣ ಕನ್ನಡ ಜಿಲ್ಲಾ ಕುಷ್ಠರೋಗ ನಿವಾರಣ ಸಮಿತಿಯು, ಇದೇ ತಾ. ೧೮ರಲ್ಲಿ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಸಭೆ ಸೇರುವುದಾಗಿ ತಿಳಿದುಬರುತ್ತದೆ.

ಶ್ರೀ ಎಸ್. ಎಸ್. ಕಿಲ್ಲೆಯವರ ಸಂಚಾರ ಕಾರ್ಯಕ್ರಮ–ಜಿಲ್ಲಾ ಕಾಂಗ್ರೆಸ್ ಪ್ರಚಾರ, ಕಾರ್ಯದರ್ಶಿಯರಾದ ಶ್ರೀ ಎಸ್. ಎಸ್. ಕಿಲ್ಲೆಯವರು ಕುಂದಾಪುರ ತಾಲೂಕಿನಲ್ಲಿ ಈ ಕೆಳಗಿನಂತೆ ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಲು, ಅಂತೂ ಕಾಂಗ್ರೆಸ್ ಸದಸ್ಯರನ್ನು ಸೇರಿಸಲು ಸಂಚರಿಸುವರು–

ಆಗೋಸ್ತು ತಾ. ೨೦ರಲ್ಲಿ ಸೀರೆಬೈಲೂರು (ಕಾರ್ಕಳ ತಾಲೂಕು), ತಾ. ೨೧ರಲ್ಲಿ ಕುಂದಾಪುರ, ತಾ. ೨೪-೨೫ರಲ್ಲಿ ವಂಡ್ಸೆ (ಸಾಯಂಕಾಲ ಲಕ್ಕಿ ಸಭೆ), ತಾ. ೨೬ರಲ್ಲಿ ಹಕ್ಲಾಡಿ ಮುಕ್ತಾ, ಕೆಂಚನೂರು (ಸಾಯಂಕಾಲ ಲಕ್ಕಿ ಸಭೆ) ತಾ. ೨೭ರಲ್ಲಿ ಕೆಂಚನೂರು, ರಾತ್ರಿ ಕುಂದಾಪುರ, ತಾ. ೨೮-೨೯ರಲ್ಲಿ ಮಂಗಳೂರು, ತಾ. ೩೦ರಲ್ಲಿ ಕುಂದಾಪುರ, ತಾ. ೩೧ರಲ್ಲಿ ಗಂಗೊಳ್ಳಿ (ಸಾಯಂಕಾಲ ಲಕ್ಕಿ ಸಭೆ) ಸಪ್ಟಂಬರ ತಾ. ೧-೨ರಲ್ಲಿ ಶಿರಮಂಜೇಶ್ವರ (ಸಾಯಂಕಾಲ ಲಕ್ಕಿ ಸಭೆ), ತಾ. ೩ರಲ್ಲಿ ಉಪ್ಪುಂದ (ಸಾಯಂಕಾಲ ಲಕ್ಕಿ ಸಭೆ), ತಾ. ೪, ೫, ೬ರಲ್ಲಿ ಬೈಂದೂರು (ಸಾಯಂಕಾಲ ಲಕ್ಕಿ ಸಭೆ).

ಜಿಲ್ಲಾ ಬೋರ್ಡು ಚುನಾವಣೆ–ಬರುವ ಜಿಲ್ಲಾಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರಾಗಲಿಚ್ಛಿಸುವವರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಅರ್ಜಿಗಳನ್ನು ಕಳುಹಿಸುವ ಸಮಯವು ಇದೇ ತಾ. ೩೧ರ ವರೆಗೆ ಮುಂದರಿಸಲಾಗಿದೆ. ಅರ್ಜಿಮಾಡುವ ಫಾರ್ಮುಗಳು ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ದೊರೆಯುತ್ತವೆಂದು, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಪಿ. ರಾಮರಾಯ ಮಲ್ಯ ಇವರು ತಿಳಿಸುತ್ತಾರೆ.

ಅಂದಮಾನ್ ದಿನಾಚರಣೆ–ಕೆಲಸಗಾರ ಸಂಘಗಳು ಮತ್ತು ಸಮತಾವಾದಿ ಪಕ್ಷದವರು ಒಟ್ಟಾಗಿ ಅಂದಮಾನ್ ದಿನಾಚರಣೆಯನ್ನು ಕಾಂಗ್ರೆಸ್ ಸಮತಾವಾದಿ ಆಫೀಸಿನಲ್ಲಿ ಮಾಡಿದರು. ಶ್ರೀ ಬಿ. ವಿ. ರಾಯರ ಅಧ್ಯಕ್ಷತೆಯಲ್ಲಿ ಶ್ರೀ ಸಿ. ಕೆ. ಗೋವಿಂದನ್, ಕರೀಮುದ್ದೀನ್, ವಿ. ಆರ್. ಪೈ, ಜನಾರ್ಧನ ಮಲ್ಯ, ಎಮ್. ಬಿ. ಹೆಗ್ಡೆಯರ ಭಾಷಣವಾಗಿ, ಉಪವಾಸೀ ಕೈದಿಗಳೊಡನೆ ಸಹಾನುಭೂತಿ ಸೂಚಿಸಿ, ಸರಕಾರದ ವರ್ತನೆಯನ್ನು ಖಂಡಿಸಿ, ಅಂದಮಾನ್ ಶಿಕ್ಷೆಯನ್ನೇ ರದ್ದುಗೊಳಿಸಬೇಕೆಂದು ವಿನಂತಿಸಿ ಕರಾವಾಯಿತು.

ಬಸ್ ಕೆಲಸಗಾರರ ಸಭೆ–ಬಸ್ ಕೆಲಸಗಾರರ ಸಭೆಯೊಂದು ತಾ. ೧೫ರಲ್ಲಿ ಶ್ರೀಮತಿ ಕಮಲಾದೇವಿಯರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷೆಯರು ಚಿಕ್ಕ ಸರಳವಾದ ಭಾಷಣದಲ್ಲಿ ಕೆಲಸಗಾರರು ಸಂಘಸ್ಥಾಪಿಸುವ ಕುರಿತು ವಿವರಿಸಿದರು. ಶ್ರೀ. ಎಮ್. ವಿಟ್ಠಲ ಹೆಗ್ಡೆ ಮತ್ತು ಮಲಬಾರಿನವರೊಬ್ಬರ ಭಾಷಣವಾಗಿ ಸಂಘ ಸ್ಥಾಪಿಸಬೇಕೆಂಬ ಒಮ್ಮತದ ನಿರ್ಧಾರವಾಯಿತು. ಅದಕ್ಕಾಗಿ ಕೆಲಸಮಾಡುವರೆ ತಾತ್ಕಾಲಿಕ ಕಮಿಟಿಯೊಂದನ್ನು ರಚಿಸಲಾಯಿತು.

ಶ್ರೀಮತಿ ಕಮಲಾದೇವಿಯವರು–ಜಿಲ್ಲೆಯ ಇತರ ಕಡೆಗಳಲ್ಲಿ ಕೆಲಸಗಾರ ಸಂಘಗಳನ್ನು ಸ್ಥಾಪಿಸುವರೆ ಕೆಲವು ಕೆಲಸಗಾರರೊಂದಿಗೆ ಉಡುಪಿ, ಕಾರ್ಕಳಗಳಿಗೆ ಸಂಚಾರಕ್ಕೆ ಹೋಗಿರುವರು. ದ. ಕ. ರೈತ ಸಂಘವೊಂದನ್ನು ಸ್ಥಾಪಿಸುವ ಕಾರ್ಯವನ್ನೂ ಜತೆಯಲ್ಲಿಯೇ ಕೈಕೊಂಡಿರುವರು.

ಜನ್ಮದಿನೋತ್ಸವ–ದಕ್ಷಿಣ ಹಿಂದೂಸ್ಥಾನದಲ್ಲೆಲ್ಲ ಮಹಾ ಧಾರ್ಮಿಕ ಪುರುಷನೆಂದು ಪ್ರಸಿದ್ಧಗೊಂಡಿರುವ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಜನ್ಮದಿನೋತ್ಸವವು ಇದೇ ಬರುವ ಆಗೋಸ್ತು ತಿಂಗಳ ತಾ. ೨೨ನೇ ಆದಿತ್ಯವಾರ ಎಲ್ಲೆಲ್ಲಿಯೂ ವಿಜೃಂಭಣೆಯಿಂದ ಆಚರಿಸಲ್ಪಡುವುದು. ಇಂಥಾ ಆಚರಣೆಗಳಲ್ಲಿ ಭಾಗವಹಿಸುವರೆ ಸಾಧ್ಯವಾಗದಿರುವ ಅನೇಕ ಕುಟುಂಬಗಳು ಇರಲೂ ಬಹುದು. ಅಂಥವರು ಆ ದಿನದಲ್ಲಿ ಯಾದರೂ ಅಹಿಂಸಾಧರ್ಮ ಸಾಧಕರಾಗಿ ಮನೆ, ಅಂಗಳ, ದೇಹಗಳನ್ನು ಶುಚಿಯಾಗಿರಿಸಿ, ಹಿರಿಯರಿಗೆ ವಂದಿಸಿ, ಮನೆಯವರೆಲ್ಲರೂ ಒಟ್ಟಾಗಿ ಸೇರಿ, ಸಕಲ ಸಮಾಜಗಳಲ್ಲಿಯೂ ವಿದ್ಯೆಯೂ, ಬುದ್ಧಿಯೂ, ಅಹಿಂಸಾತತ್ವವೂ ಬೆಳೆಯಲೆಂದು ದೇವರನ್ನು ಪ್ರಾರ್ಥಿಸಿದರೆ, ಅಹಿಂಸಾತತ್ವಕ್ಕಾಗಿ ದುಡಿದಂತಾಗುವುದಲ್ಲದೆ, ಅಹಿಂಸಾತತ್ವ ಮೂರ್ತಿಯಾದ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯಂತಹ ಮಹಾಪುರುಷರ ಜನ್ಮದಿನಾಚರಣೆಯನ್ನು ಮಾಡಿದಂತಾಗುವದೆಂದು, ಶ್ರೀ ಯಂ. ಕೆ. ವೈದ್ಯರು ತಿಳಿಸುತ್ತಾರೆ.

ತಾಲೂಕುಗಳಿಂದ

ಅಂಬಲಪಾಡಿ[?]

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ. ಆನೇಗೆ ಸ್ಥಳೀಯ ಕೋಒಪರೇಟಿವ್ ಸೊಸೈಟಿ, ಲಿಮಿಟೆಡ್, ನಂಬ್ರ ೯೫ರ ವರ್ಷಾವಧಿ ಮಹಾಸಭೆಯು ಅಧ್ಯಕ್ಷರಾದ ಶ್ರೀ ಟಿ. ಎಸ್. ಕೇಳು ನಂಬಿಯಾರರ ಸಭಾಧಿಪತ್ಯದಲ್ಲಿ ಸೇರಿತು. ಕಾಂಗ್ರೆಸಿನವರು ಮಂತ್ರಿಪದವಿಯನ್ನು ಸ್ವೀಕರಿಸಿದ ಬಗ್ಗೆ ಅವರನ್ನು ಅಭಿನಂದಿಸಿದುದಲ್ಲದೆ, ಮದ್ರಾಸಿನ ಮಂತ್ರಿಮಂಡಲದವರಲ್ಲಿ ಸಂಪೂರ್ಣ ವಿಶ್ವಾಸವನ್ನು ತೋರಿಸಿಯೂ, ಠರಾವುಗಳಾದುವು. ಬಜೆಟು ಮಂಜೂರಾದುದಲ್ಲದೆ, ಉಪನಿಬಂಧನೆಗಳಿಗೆ ಕೆಲ ಬದಲಾವಣೆಗಳನ್ನೂ ಸೂಚಿಸಿಯೂ ಠರಾವುಗಳಾದುವು. ಸದರಿ ಸಂಘವನ್ನು ಬಡಗಬೆಟ್ಟು ಸಹಕಾರ ಸಂಘ ಮತ್ತು (ಶಿವಳ್ಳಿ) ಟೌನ್ ಬೇಂಕಿನೊಡನೆ ಅಥವಾ ಅವುಗಳಲ್ಲಿ ಯಾವುದಾದರೊಂದರೊಡನೆ ಒಂದುಗೂಡಿ ಶಹರಿನಲ್ಲಿ ಒಂದು ಸಾರ್ವತ್ರಿಕ ಟೌನ್‌ಬೇಂಕನ್ನು ಸ್ಥಾಪಿಸಲನುವಾಗುವಂತೆ ನಿರ್ಣಯವು ಮಂಜೂರಾಯಿತು. ಬಾಕಿ ವರ್ಷಕ್ಕೆ ಶ್ರೀಗಳಾದ ಟಿ. ಎಸ್. ಕೆ. ನಂಬಿಯಾರ್, ಡಾ॥ ಕೆ. ಎಲ್. ಎತಾಳ, ಪಿ. ಎ. ಪೈ, ಕೆ. ಎಸ್. ಪೈ, ಎಚ್. ಎನ್. ನ್ಯಾಕ, ಎಮ್. ವಿ. ಭಟ್ಟ ಮತ್ತು ಪಿ. ವಿ. ಕಮ್ಮಿಯರು ಪಂಚಾಯತರುಗಳಾಗಿ ಆರಿಸಲ್ಪಟ್ಟರು.

ಕಾರ್ಕಳ–ತಾ. ೧೪-೮-೧೯೩೭ರ ದಿನ ಇಲ್ಲಿ ಅಖಿಲಭಾರತ ಅಂಡಮಾನ ಕೈದಿಗಳ ದಿನವನ್ನಾಚರಿಸಿದರು. ಸಾಯಂಕಾಲ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ಪಿ. ಪಿ. ರಾಮಪೋತುವಾಳರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಯಂ. ಎಸ್. ಅಧಿಕಾರಿಯವರು ಸೂಚಿಸಿದ ಪ್ರಕಾರ ಅಂಡಮಾನದ ರಾಜಕೀಯ ಕೈದಿಗಳ ನಿರಶನ ವ್ರತದ ಸಂಬಂಧವಾಗಿ ಬಂಗಾಳ ಮತ್ತು ಇಂಡಿಯಾ ಸರಕಾರದ ವರ್ತನೆಯನ್ನು ಖಂಡಿಸುವ ಮತ್ತು ಈ ಕೈದಿಗಳೊಡನೆ ಹಾರ್ದಿಕ ಸಹಾನುಭೂತಿಯನ್ನು ತೋರಿಸುವ ಠರಾವು ಸರ್ವಾನುಮತಿಯಿಂದ ಮಂಜೂರಾಯಿತು. ಶ್ರೀಗಳಾದ ಕೇಶವ ರಾಮಚಂದ್ರ ಶೆಣೈ, ವಕೀಲ ಪಿ. ವಿ. ಉಪಾಧ್ಯಾಯ, ಕಟಪಾಡಿ ಶ್ರೀನಿವಾಸ ಶೆಣೈ, ಆರ್. ಮಂಜುನಾಥ ಶೆಣೈ ಮತ್ತು ಅಧ್ಯಕ್ಷರು ಠರಾವಿನ ಪರವಾಗಿ ಭಾಷಣಮಾಡಿದರು. ಒಂದೇ ಮಾತರಂ ಹಾಡಿನೊಂದಿಗೆ ಅಂದಿನ ಸಭೆಯು ಮುಗಿಯಿತು.

ಅದೇ ದಿನ ಕಾರ್ಕಳ ಕೇಂದ್ರದ ಉಪಾಧ್ಯಾಯರ ಮಾಸಿಕ ಸಭೆಯು ಕುಕ್ಕುಂದೂರು ಎಲಿಮೆಂಟರಿ ಶಾಲೆಯಲ್ಲಿ ಕಾರ್ಕಳ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರರಾದ ರಾ. ಬಿ. ವೆಂಕಟಪ್ಪಯ್ಯ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಕಳ ಪೇಟೆಗೆ ಮಧ್ಯವರ್ತಿಯಾಗಿ ವ್ಯಾಪಾರ ವಹಿವಾಟು, ಹಲವು ಶಾಲೆಗಳ ಮಕ್ಕಳು ಮಂಗಳು, ಬಂದುಹೋಗುವ ಜನನಿಬಿಡ ಸ್ಥಾನದಲ್ಲಿರುವ ಇಲ್ಲಿಯ ಶೇಂದಿ ಮತ್ತು ಸರಾಯಿ ಅಂಗಡಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ತೆಗೆದುಹಾಕಬೇಕೆಂದು ನಮ್ಮ ಅಪೇಕ್ಷೆ ಇರುತ್ತದೆ. ಇದು ಸಾಧ್ಯವಲ್ಲವಾದ ಪಕ್ಷದಲ್ಲಿ ಅವನ್ನು ಪೇಟೆಯಿಂದ ಅದಷ್ಟು ದೂರಕ್ಕೆ ಒಯ್ಯುವದಾದರೂ ಅಗತ್ಯ. ಅಧಿಕಾರಿಗಳು ಈ ಕಡೆಗೆ ಗಮನವನ್ನು ಕೊಡುವರೇ!

ದಕ್ಷಿಣ ಕನ್ನಡ ಕಲಾವರ್ಧಕ ನಾಟಕಮಂಡಳಿ ಎಂಬ ಹೆಸರಿನಿಂದ ಒಂದು ಸಂಸ್ಥೆಯು ಆರಂಭವಾಗಿ ಕೆಲವು ದಿನಗಳಿಂದ ತಮ್ಮ ದೇಖಾವೆಗಳನ್ನು ತೋರಿಸುತ್ತಿರುವರು. ಬಾಲ್ಯಾವಸ್ಥೆಯಲ್ಲಿರುವ ಈ ಸಂಸ್ಥೆಗೆ ಕಲಾಪ್ರೇಮಿಗಳು ಉಚಿತ ಪ್ರೋತ್ಸಾಹವನ್ನೀಯುವುದು ಅಗತ್ಯವಾಗಿದೆ.

ನಮ್ಮ ಕಾರ್ಕಳ ತಾಲೂಕ್ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ ಪಿ. ವಿ. ಉಪಾಧ್ಯಾಯರು, ಪೋತುವಾಳರು ಅಧಿಕಾರಿಗಳು ಮೊದಲಾದವರು ಇದೇ ತಿಂಗಳ ತಾ. ೨೧ನೆ ದಿನ ದುರ್ಗದಲ್ಲಿಯೂ, ೨೨ನೆ ದಿನ ಮಿಯಾರಿನಲ್ಲಿಯೂ ೨೯ನೆ ದಿನ ಸಾಣೂರಲ್ಲಿಯೂ ಸಾಯಂಕಾಲ ೪ ಗಂಟೆಗೆ ಸಾರ್ವಜನಿಕ ಸಭೆಗಳನ್ನು ಸೇರಿಸಿ ಭಾಷಣಾದಿಗಳನ್ನು ಮಾಡುವರು. ಅಲ್ಲಲ್ಲಿಯವರು ಸಹಕರಿಸಬೇಕಾಗಿ ವಿನಂತಿ.

ತಾ. ೮-೮-೩೭ರ ದಿನ ಇಲ್ಲಿಯ ವಕೀಲ ಶ್ರೀ ಕೆ. ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಮುನಿಯಾಲಿನಲ್ಲಿ ಸಭೆ ಆಗಿ ಶ್ರೀ ಅಂಡಾರು ನಾರಾಯಣ ಅಜಿಲರು ಪ್ರೆಸಿಡೆಂಟರಾಗಿಯೂ, ಕೆ. ಪಾಂಡುರಂಗ ಪೈಯವರು ಸೆಕ್ರೆಟರಿಗಳಾಗಿಯೂ ಗ್ರಾಮ ಕಾಂಗ್ರೆಸ್ ಕಮಿಟಿಯು ಸ್ಥಾಪನೆಯಾಯಿತು.

ಧೂಪದ ಕಟ್ಟೆಯಲ್ಲಿ ಶ್ರೀ ದಾಮೋದರ ಬಂಗೇರರು ತೆರೆದ ಧರ್ಮಾರ್ಥ ವಾಚನಾಲಯದ ಹೊಸ ಕಟ್ಟೋಣ ಪ್ರವೇಶ ಸಮಾರಂಭವು ಶ್ರೀ ಸದಾನಂದ ಕುದ್ವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯು ಮುಗಿದು, ಅದು ತಾಲೂಕಿನಲ್ಲೇ ಉತ್ತಮ ವರ್ಗಕ್ಕೆ ಸೇರತಕ್ಕ ಶಾಲೆ ಎಂದು ವಿದ್ಯಾಂಗದ ಅಧಿಕಾರಿಗಳಿಂದ ಶಿಫಾರಸು ಪಡೆದಿರುವುದು. ಅದಕ್ಕಾಗಿ ಶಾಲಾ ಆಡಳಿತ ಮಂಡಳಿಗೂ ಉಪಾಧ್ಯಾಯ ವೃಂದಕ್ಕೂ ನಮ್ಮ ಅಭಿವಂದನೆಗಳು.

ಹೆಬ್ಬ್ಯಾಡಿ–ಈ ಗ್ರಾಮವು ಹಲವು ಸಮಯದಿಂದ ಒಂದು ವಾಚನಾಲಯಕ್ಕೆ ಹಾತೊರೆಯುತ್ತಿದ್ದರೂ ಇಷ್ಟರತನಕವೂ ಆ ಸುದಿನವು ಬಾರದ್ದರಿಂದ, ಆ ಕೆಲಸವನ್ನು ಈ ವರ್ಷವಾದರೂ ನೆರವೇರಿಸಬೇಕೆಂದು, ಶ್ರೀ ಯಸ್. ಭೋಜರಾವ್, ಯಚ್. ಅಂತಯನಾಯ್ಕ, ಯಚ್. ಶೀನಶೆಟ್ಟಿ, ಯಚ್. ಬರ್ನಿಸ್ ಪ್ರಾಯೀಸ್, ಯಚ್. ನಾರಾಯಣ ಶೆಟ್ಟಿ, ಯಚ್. ಕೃಷ್ಣರಾವ್ ಮತ್ತು ಯಚ್. ಪೀರಯ್ಯನಾಯ್ಕರೇ ಈ ೭ ಜನರು ಸ್ಥಾಪಕರಾಗಿ, ತಾ. ೧೧-೮-೩೭ರಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನೆರವೇರಿಸಿದರು. ನೆರೆದ ಸಭೆಯಲ್ಲಿ ಶ್ರೀ ಯಚ್. ನಾರಾಯಣ ಗಡಿಯಾರ್, ಯಚ್. ಯಂ. ಪಿ. ಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅನಂತರ ಸಭಾಧ್ಯಕ್ಷರಿಂದ ವಾಚನಾಲಯವು ತೆರೆಯಲ್ಪಟ್ಟು, ಹಲವರ ಅಪೇಕ್ಷೆ ಮೇರೆಗೆ, ಅದಕ್ಕೆ "ಹೆಬ್ಬ್ಯಾಡಿ ನೇಸರು ಕ್ಲಬ್" ಎಂಬ ಹೆಸರನ್ನಿಟ್ಟಿತು.

ತುರಿಸಿ, ತೊಂದರೆ ಕೊಡುವ ವ್ರಣ, ಕುರು ಇವುಗಳಿಂದ ಪಾರಾಗಿರಿ.

ತುರಿಸುವ ಜಾಗವು, ಕಲೆಯು ಅಥವಾ ಗಾಯವು ಎಷ್ಟೇ ಚಿಕ್ಕದಿರಲಿ,–ಸಾಂಬಕನ್ನು ಅದರ ಮೇಲೆ ಮೆಲ್ಲಗೆ ಸವರಿರಿ. ಇದು ಕಜ್ಜಿ, ತುರಿಕಜ್ಜಿ ಮತ್ತಿತರ ದೀರ್ಘ ಚರ್ಮರೋಗಗಳನ್ನು ಪರಿಹರಿಸಿರುತ್ತದೆ. ಅಮೂಲ್ಯ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದರಿಂದ ಸಾಂಬಕ್ಕು ಚರ್ಮರಂಧ್ರಗಳನ್ನು ಹೊಕ್ಕು ನೋವನ್ನು ಇಂದ್ರಜಾಲದಂತೆ ತಗ್ಗಿಸಿ, ಕಶ್ಮಲವನ್ನು ಹೊಗಿಸುತ್ತದೆ. ಸಾಂಬಕ್ಕಿನಿಂದ ಗುಣವಾದ ಜಾಗದಲ್ಲಿ ಕಲೆಗಳು ಉಳಿಯುವುದಿಲ್ಲ. ಆದುದರಿಂದ, ನಿಮ್ಮ ಎಲ್ಲಾ ಚರ್ಮವ್ಯಾಧಿಗಳಿಗೂ ಸಾಂಬಕ್ಕನ್ನೆ ಉಪಯೋಗಿಸಲು ಮಾತ್ರಮರೆಯಿರಿ. ಎಲ್ಲಾ ಔಷಧಿ ವ್ಯಾಪಾರಸ್ಥರಲ್ಲೂ ಸಾಂಬಕ್ಕು ರೂ. 1 ಮತ್ತು ರೂ. 2-4-0ರಂತೆ ಮಾರಲ್ಪಡುತ್ತದೆ.

ಸಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರವಿಲ್ಲ.

ಏಜಂಟರು:—ಮೆಸ್ಸರ್ಸ್ ದಾಥಾ ಎಂಡ್ ಕೊ, ಪಿ. ಟಿ. ಮದ್ರಾಸು.

ಸಾಂಬಕ್

Zam Buk

ನೋಟೀಸು.

ಮಂಗಳೂರು ಸಬ್ ಕೋರ್ಟು ಕ್ರಮ ನಂಬ್ರ 47/1921 ಕ್ರಮ ಅರ್ಜಿ ನಂಬ್ರ 142/1922ನೇ ಸ್ಕೀಮು ರೂಲ್ಸು ಪ್ರಕಾರ ಕಾಪು ಶ್ರೀ ಹಳೆ ಮಾರಿಅಮ್ಮ ದೇವರ ಭಂಡಾರದ ಬಾಬ್ತು ಧಾತು ಸಂ॥ರದ ಶ್ರಾವಣ ಶು॥ 12 ತಾರೀಕು 31-7-36ರಿಂದ ಈಶ್ವರ ಸಂ॥ರದ ಆಷಾಢ ಬ॥ 6 ಯು ತಾರೀಕು 29-7-37ರ ವರೆಗಿನ ವರ್ಷ 1ರ ಜಮಾ ಖರ್ಚಿನ ಗೋಶ್ವಾರೆ—

ಜಮಾ						ಖರ್ಚು					
ತಪಶೀಲು	ಕ್ವಾ	[illegible]	[illegible]	[illegible]	ನಗದು	ತಪಶೀಲು	ಕ್ವಾ	[illegible]	[illegible]	[illegible]	ನಗದು
			ಮು	ಶೇ	ರೂ ಆ ಪೈ.				ಮು	ಶೇ	R A P
ಬದಸ್ತಾ ಶಿಲ್ಕು					47 8 4	ದ್ವಿಗೆ ಪೂಜೆ	366	480			162 8 0
ದ್ವಿಗೆ ಪೂಜೆ					1337 6 7	ಕುಂಕುಮಾರ್ಚನೆ					41 8 0
ಕುಂಕುಮಾರ್ಚನೆ					62 4 0	ನವರಾತ್ರಿಗೆ					159 15 4
ದಸ್ತು ಚಾಲ್ತಿ ಜಾರಿ						ಮಾರಿಪೂಜೆಗೆ			3	36½	247 2 7
ಚಿನ್ನ ಬೆಳ್ಳಿ ವಿಕ್ರಿತ ಜಮೆ					402 6 0	ವ್ಯವಹಾರದ ಖರ್ಚು					53 0 0
ನವರಾತ್ರಿಯ ಬಾಬ್ತು					6 11	ಅಸ್ತಿ ಕೀರ್ದಿ					195 7 0
ಮಾರಿ ಪೂಜೆ					383 0 7	ದೇವಸ್ಥಾನ ಮಾಡಿಗೆ					
ಕಸುರ್ಮ ಮರವನ್ನೆಲ್ಲ ವಿಕ್ರಿತ					54 14 0	ಮುಳಿ ಚಪ್ಪರ ಖರ್ಚು ವಗೈರೆ					251 11 3
ವೆಂಕಟ್ರಮಣ ದೇವರ ಭಂಡಾರದಿಂದ ಕೈಕಡ					500 0 0	ತಾ 30 1 36ನೇ					
ಹುಟ್ಟು ಪಾಡಿನಿಂದ ಕೈಕಡ ಜಮೆ					75 0 0	ಮಹಾಸಭೆ ಪ್ರೊಸಿಡಿಂಗ್ಸು ಪ್ರಕಾರ ಶ್ರೀ ವೆಂಕಟರಮಣ ದೇವರಿಗೆ					1001 0 0
ಶ್ರೀಧರ ಶ್ಯಾನುಭಾಗ ಕೈಕಡ ಜಮೆ					131 0 0	ವೆಂಕಟ್ರಮಣ ದೇವರಿಗೆ	50				1 8 0
ಹುಳ್ಳಿ ಎಳ್ಳಕ್ಕಿ ವಿಕ್ರಿತ ಜಮೆ					320 1 0	ಶ್ರೀಧರ ಶ್ಯಾನಭಾಗ ಕೈಕಡ ಜಮೆ ವಜಿನ ಬಗ್ಗೆ					981 0 0
12/30ನೆ ವ್ಯಾಜ್ಯದ ಅಸ್ತಿಯಿಂದ	366	480			155 4 0	ನಗದಿಗೆ ಮಾರಿದ ಅಕ್ಕಿ			10		
... ಸ್ಥಳದ ಬಾಬ್ತು						12/30ನೇ ವ್ಯಾಜ್ಯದ ಸ್ಥಳದಲ್ಲಿ ಕೃತ					26 8 6
ಬೆಂಡಿಕೆಟ್ ಬ್ಯಾಂಕ್ ಸಾಲ					46 12 0 / 1000 0 0	ಭಂಡಾರದ ಪಕ್ಕದ ... ದಲ್ಲಿ ಕೃತ			1		61 10 0
ಹುಟ್ಟುವಳಿ ಬಾಬ್ತು	50		40	3½	409 2 0	ಬೆಂಡಿಕೆಟ್ ಬೆಂಕಿಗೆ					815 0 8
						ಮೂಲಗೇಣಿ ಬಗ್ಗೆ					4 6 9
						... ನಗದು ಶಿಲ್ಕು			1		566 10 6
						ತಾ 29 7 37ಕ್ಕೆ ಶಿ°			3	3½	4 13 5
ಜುಮ್ಲಾ	386	180	140	35¼	4731 0 0	ಜುಮ್ಲಾ	386	180	140	35½	4731 6 0

ಶ್ರೀಧರ ಶಾನುಭಾಗ, ಪಟೇಲ, ಕಾಪು
8—8-'37

ನೋಟೀಸು.

ಮಂಗಳೂರು ಸಬ್ ಕೋರ್ಟು ನಂಬ್ರ 72/1921 ಕ್ರಮ ಅರ್ಜಿ ನಂಬ್ರ 149/1922ನೆ ಸ್ಕೀಮು ರೂಲ್ಸು ಪ್ರಕಾರ ಧಾತು ಸಂ॥ರದ ಶ್ರಾವಣ ಶು 12 ತಾರೀಕು 31—7—36ರಿಂದ 29-7-37ನೇ ಈಶ್ವರ ನಾಮ ಸಂ॥ರದ ಆಷಾಢ ಬ॥ 6 ಯು 29-7-37ರ ವರೆಗಿನ ವರ್ಷ 1ರ ಕಾಪು ಶ್ರೀ ವೆಂಕಟರಮಣ ದೇವರ ಭಂಡಾರದ ಬಾಬ್ತು ಜಮಾ ಖರ್ಚಿನ ಗೋಶ್ವಾರೆ-

ಜಮಾ						ಖರ್ಚು					
ತಪಶೀಲು	ಕ್ವಾ	ಬಿ ಅಕ್ಕಿ		[illegible]	ನಗದು	ತಪಶೀಲು	ಕ್ವಾ	ಬಿ ಅಕ್ಕಿ		[illegible]	ನಗದು
ಗುದಸ್ತ ಜಮೆ		1	34½		19 5 9	ಸರಕಾರ ಕೀರ್ದಿ					96 2 0
ಕಾಣಿಕೆ ಜಮೆ					23 2 0	ನಂದಾದೀಪಗೆಯಾರ					142 6 0
ಹುಟ್ಟುವಳಿ ಅಕ್ಕಿ ನಗ್ದು		30	16	68 2	60 8 3	21					
ಗು॥ ವರ್ಷ 3ರ ಗೇಣಿ						ಅರ್ಚಕರ ಕಲಬು					60 0 0
ದಿಕ್ರಿಯ ಬಾಬ್ತು ಜಮೆ					610 3 8	ಸಮಾರಾಧನೆ ಬಗ್ಗೆ	50				70 10 0
ಮಾರಮ್ಮ ದೇವರ ಭಂಡಾರದಿಂದ	30	5			179 0 0	ಎಂಡೋಮೆಂಟ್ ಟಪ್ಪಾಲು					19 8 0
ಅಪ್ಪು ಕಪಡಿ ಅಕ್ಕಿ		3	6			ನಿತ್ಯ ನೈವೇದ್ಯಕ್ಕೆ		43	14		
ಗೇಣಿ ಅಕ್ಕಿ ವಿಕ್ರಿತ ಜಮೆ					190 11 8	ಎಲೆ ಅಡಿಕೆ ಬತ್ತಿ					
ಅನಂತನವ್ರತ ಮಾನ್ಯರ					50 0 0	ಕ್ವಾ ಅಕ್ಕಿ ಕ್ರಯ	728				89 0 0
ಸಂತರ್ಪಣೆ ದೆಪೋಟಿಟು					20 0 0	ಪಣಕಟ್ಟೆದವರ ಸಂತರ್ಪಣೆ					11 8 0
ತಪ್ಸೀಲು ಜಮೆ					6 0 0	ಅನಂತನ ವ್ರತಕ್ಕೆ					50 6 5
ಶ್ರೀಧರ ಶ್ಯಾನುಭಾಗರ ಕೈಕಡ					137 0 0	ಉತ್ಸವಗಳಿಗೆ					69 0 10
ನಗ್ದಿಗೆ ಪಡಕೊಂಡ ಅಕ್ಕಿ		13	35			ಮಾರಮ್ಮ ದೇವರಿಗೆ ಕೈಕಡ					500 0 0
ಶ್ರೀ ಕಾಶೀಮಠದ ಮಟಮಾನ್ಯದ ಬಾಬ್ತು					0 10 0	ಶ್ರೀಧರ ಶಾ ಭಾಗರ ಕೈಕಡ ಜಮೆ ಬಾಧ ವ್ಯಕ					134 0 0
ನಗದಿಗೆ ಕೊಂಡ ಕ್ವಾ	366					ನಗ್ದಿ ಮಾರಿದ ಅಕ್ಕಿ			69	3	
ಹೊರೆದ ಬಾಬ್ತು ಕ್ವಾ	366					ವ್ಯವಹಾರದ ಖರ್ಚು					62 10 8
						27-7 37ಕ್ಕೆ ಶಿಲ್ಕು	4	30½	7	12	0 5 4
ಜುಮ್ಲಾ	782			121 9½	1305 9 3		782		121-9½		1305 9 3

ಶ್ರೀಧರ ಶ್ಯಾನುಭಾಗ, ಪಟೇಲ
8-8—1947

The Coronation of their Majesties is now over!
But Remember"

Comfortable ***Ideal*** ***Central***

The Coronation Darbar Restaurant

Boarding & Lodging

Opposite Govt College, Hampankatta, Mangalore

A Home in the Motherland

Cleanliness and comfort at moderate cost

A delightful hotel in the centre of the town and nearest to the Rly Station & Bus Station

Gives best Refreshment & dinner service and modern preparations such as Biryani, Fowl Biryani, Pulav Khushka, Chops, Cutlets, Roast, Bheja Khima, Tomato mutton, Roasted Fowl, Omlet, Sumbusa, etc, a speciality

Special lodging arrangements for travellers, Students will find all their food requirements

Please Step in Once and Convince Yourself

S B Mohidin, S. M Syed Ali Saheb (Bhatkali) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೊಜಿಂಗ್

ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಸೌಲಭ್ಯ ಸೌಕರ್ಯ ಸುಖದಾಯಕ

ಶುಚೀಕರವಾದ ಮತ್ತು ರುಚಿಯಾದ ತಿಂಡೀ ಪದಾರ್ಥಗಳು ಸುಲಭ ದರದಲ್ಲಿ ಇನ್ನೆಲ್ಲಿಯೂ ದೊರಕಲಾರವು.

ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಅಫೀಸುಗಳಿಗೆ ತೀರಾ ಸಮೀಪವು.

ಮನೋಲ್ಲಾಸಕರ ಕಾಫಿ, ತಿಂಡಿ, ಊಟ ಉಪಚಾರಗಳು.

ಮೂರ್ಗಿ ಬಿರಿಯಾನಿ, ಬಿರಿಯಾನಿ, ಮುರ್ಗಿ ರೋಸ್ಟ್, ಪುಲಾವ್, ಖುಷ್ಕಾ ಚಾಪ್, ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮಟೊಮಟನ್, ಆಮ್ಲೆಟ್, ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವವು.

ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರಯಾಣಿಕರಿಗೆ ಇರಲಿಕ್ಕೆ ತೃಪ್ತಿಕರವಾದ ಏರ್ಪಾಡು. ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿರುವುದಾದರೆ ಒಂದೊಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ.

ಯಸ್. ಬಿ. ಮೊಹಿದಿನ್,
ಯಸ್. ಎಮ್. ಸಯ್ಯದ್ ಆಲಿ ಸಾಹೇಬ್, (ಭಟ್ಕಳ) } ವ್ಯವಸ್ಥಾಪಕರು.

ಪುತ್ತೂರು ಡಿ ಮುನ್ಸಿಫ ಕೋರ್ಟಿನಲ್ಲಿ
O S 148/1937

ವಾದಿಗಳು—ಲಕ್ಷ್ಮಿ ಅಮ್ಮ

ಪ್ರತಿವಾದಿ-ಸೂರನು ನ್ಯಾಕ, ರಾಮನ್ಯಾಕನ ಮಗ-ಬಲನಾಡು ಗ್ರಾಮದ ಚಿಕೆಲ

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವದೇನೆಂದರೆ

ಮೇಲ್ಕಂಡ ವ್ಯಾಜ್ಯ ವಾದಿಳು ಪ್ರತಿವಾದಿ ಮೇಲೆ ಆಸ್ತಿ ಸ್ವಾಧೀನತೆಗೂ, ಗೇಣಿ ಬಾಕಿಗೂ ಹಾಕಿದ್ದಾಗಿರುತ್ತದೆ ಸದ್ರಿ ವ್ಯಾಜ್ಯವು ತನ್ನ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾ 4-8-1937ಕ್ಕೆ ಇಟ್ಟಿರುತ್ತದೆ ಆ ದಿವಸ ಪ್ರತಿವಾದಿಯು ಹಗಲು 10 ಘಂಟೆಗೆ ತಪ್ಪದೆ ಸ್ವತಹಾ ಆಗಲೀ ವಕೀಲರ ಮುಖಾಂತರವಾಗಲೀ ವ್ಯವಹರಿಸಿಕೊಳ್ಳಬಹುದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನವಾದೀತೆಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟ ಪಡಿಸಿದ್ದಾಗಿರುತ್ತದೆ

(By order of the Court)

Puttur S K. B Achyuta Baliga
14—8—1937 Vakil for Plaintiff

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತ, ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು-ಹಣ್ಣುಗಳು-ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ. ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2—8-0. ಅಡ್ವಾನ್ಸ ಇಲ್ಲದೆ ಆರ್ಡರ್ ಪಡೆಯಲಾಗದು.

ವಿಳಾಸ—

The Royal Seed Co.,

Florists & Seedsmen, 27 Ilpay Thope

ULSOOR, BANGALORE.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ ಆ	ರೂ ಆ
ಶಾಲಿ ಅಕ್ಕಿ	3— 8	4— 0
ಮುಸ್ಕಟಿ	4— 4	4— 6
ಗುಡ್ಡ	3—12	4— 0
ಊರ ಅವ್ವಲ್ ಬೆಳ್ತಿಗೆ	4— 8	5— 0
ರಂಗೂನು ಬೆ. ಗೋ ಗಳ್ಳ	6 — 6	7— 0
ಎಲ್ಲೂರು ಬೆ ಮು. ಗಳ್ಳ	3—14	4— 0
ಸೋದಿ ಗೋಡಿ ಗಳ್ಳ	12 — 8	15— 8
ಕೊಗರಿ ಗೋಡಿ ಗಳ್ಳ	11— 8	16— 8
ಹುರುಳಿ ಗೋಣಿ ಗಳ್ಳ	5— 0	5 — 4
ಕಡಲೆ ಗೋಣಿ ಗಳ್ಳ	9 — 8	10 — 8
ಕೊಂಗಿಬೇಳೆ ಗೋಣಿ ಗಳ್ಳ	11— 0	19— 0
ಉದ್ದು ಗೋಣಿ ಗಳ್ಳ	9— 0	9 — 8
ಹೆಸರು ಗೋಣಿ ಗಳ್ಳ	9—12	10— 8
ಊರುಬೆಲ್ಲ ಖಂಡಿ ಗಳ್ಳ	3 — 0	35— 0
ಉಪ್ಪು ಗೋಣಿ ಗಳ್ಳ	4— 8	5— 4
ಕೊಬ್ಬರಿ ಖಂಡಿ ಗಳ್ಳ	85— 0	90— 0
ಕೊಬ್ರಿ ಹಿಂಡಿ ಖಂಡಿ ಗಳ್ಳ	20 — 0	21— 0
ಎಳ್ಳಿಂಡಿ ಖಂಡಿ ಗಳ್ಳ	20 —	26 — 0
ಕೊಬ್ರಿ ಎಣ್ಣೆ ಮಣ ಗಳ್ಳ	4— 6	6— 4
ಎಳ್ಳೆಣ್ಣೆ ಮಣ ಗಳ್ಳ	6— 0	7— 0
ಟಮಿನಎಣ್ಣೆ ಪಟ್ಟಿಗೆ ಗಳ್ಳ	6— 5	7— 5
ಮೋರಿಸ ಸಕ್ಕರೆ ಮ. ಗಳ್ಳ	3— 11	2 —12
ಮೆಣಸು	4— 8	6— 0
ಸಾಸಿವೆ ಮುಡಿ ಗಳ್ಳ	5 — 8	6— 8
ಕಾಳುಮೆಣಸು ಖ ಗಳ್ಳ	97 — 8	100— 0
ಯೇಲಕ್ಕಿ ದೇಶ ಮಣ ಗಳ್ಳ	80— 0	85— 0
ಗೇರುಬೀಜ ಮು. ಗಳ್ಳ	3 —14	4— 2
ಕಲ್ಲಿದ ಖಂಡಿ ಗಳ್ಳ	50— 0	55— 0
ಕಾಂಡ್ರುಕಗಳು ಮ. ಗಳ್ಳ	14—12	15— 0
ಕಾಂಡ್ರುಚಾಕ್ರಗಳು ಮ. ಗಳ್ಳ	17— 0	18— 0
ಚಿಟ್ಟಬೆಳ್ಳಿ ಸೇರು ಗಳ್ಳ	13— 8	14— 0
ಜಿಕ್ರಾತ ಹಗಡು ಮ. ಗಳ್ಳ	12— 0	13— 0
ಹಪ್ಪು ಗಳ್ಳ	22— 4	22— 6
ಹುಣಸೆ ಹುಳಿ ಖಂಡಿ ಗಳ್ಳ	40— 0	45— 0
ಪೇಟಿಕ್ ಶಾಪ ಖಂಡಿ ಗಳ್ಳ	140— 0	148— 0
ಫಟೇರಿ ಶಾಪ ಖಂಡಿ ಗಳ್ಳ	192— 0	195— 0
ಸುಡಿಕೇರಿ ಖಳ್ಳಿ	67— 0	70— 0

ಶಸ್ತ್ರ ಸಿದ್ಧತೆಯ ಪರಿಣಾಮವೇನಾಗಬಹುದು?

ಅಂತರ್ರಾಷ್ಟ್ರೀಯ ವಿಚಾರಗಳಿಗೂ ಹಿಂದೂದೇಶಕ್ಕೂ ಸಂಬಂಧವಿದೆ.

ಜಗತ್ತಿನ ಮಹಾ ಪ್ರಭುತ್ವಗಳು ಯುದ್ಧ ಸಿದ್ಧತೆಗಾಗಿ ಶಸ್ತ್ರ ಸಿದ್ಧತೆಯ ಮಹಾ ಯೋಜನೆಗಳನ್ನು ಕಲ್ಪಿಸಿಕೊಂಡು, ಮಹಾ ಸಾಲಗಳನ್ನು ತೆತ್ತು ಅಸ್ತ್ರಗಳನ್ನು ನಡೆಯಿಸುತ್ತಿರುವುದು ನಾವು ನೋಡುತ್ತಿದ್ದೇವೆ. ಅಂತ್ಯದಲ್ಲಿ ಇದರ ಪರಿಣಾಮವೇನಾಗಬಹುದು? ಅತಿ ಭೀಕರವೆನಿಸುವ ಸಾಂಪತ್ತಿಕ ಮುಗ್ಗಟ್ಟು ಉಂಟಾಗುವುದೆಂದು ಪ್ರವೀಣರೊಬ್ಬರ ಅಭಿಪ್ರಾಯ. ಆದರೆ, ಅದು ಮುಂದಕ್ಕೆ ಬರಬಹುದಾಗಿ ನಿರೀಕ್ಷಿಸಿದ ಜನಾಂಗಗಳು ಕಡಿಮೆ. ಕಾರಣ, ಈ ತರದ ಯುದ್ಧಸಿದ್ಧತೆಗಳು ನಡೆಯುತ್ತಿರುವಾಗ, ಅದನ್ನು ಅನುಸರಿಸಿ ಬರಬಹುದಾದ ಮುಗ್ಗಟ್ಟಿನ ಪರಿಸ್ಥಿತಿಯನ್ನು ಎದುರಾಯಿಸಲು ಅವರಿಂದ ಯಾವತ್ತೂ ಸಿದ್ಧತೆಗಳಾದುದು ಕಾಣಿಸುವುದಿಲ್ಲ. ಈಗಿನ ಸ್ಥಿತಿಗಳಿಂದ ಮುಂದಕ್ಕೆ ಉಂಟಾಗಬಹುದಾದ ಅಪಾಯ ಇತ್ಯಾದಿಗಳನ್ನು ಸರಿಯಾಗಿ ನಿರೀಕ್ಷಿಸುವ ಒಂದು ಇಲಾಖೆಯನ್ನು ರಚಿಸಬೇಕಾಗಿ ಓರ್ವ ಪ್ರಸಿದ್ಧ ಆಂಗ್ಲೇಯ ಮಹಾನೀಯರ ಸೂಚನೆ—ಬ್ರಿಟಿಷ ಸರಕಾರಕ್ಕೆ.

ಈಗಿನ ಯುದ್ಧ ಭ್ರಮೆಯಿಂದ ಮುಂದಕ್ಕೆ ಅನೇಕ ಶೋಚನೀಯ ಅವಸ್ಥೆಗಳನ್ನು ಅನುಭವಿಸಬೇಕಾಗುವುದು. ಈ ಯುದ್ಧ ಭ್ರಮೆಯಿಂದ ಶಸ್ತ್ರ ಸಿದ್ಧತೆಯಲ್ಲಿ ಮಗ್ನರಾದ ಪ್ರಭುತ್ವಗಳು ಬಹಿರ್ ವ್ಯಾಪಾರದ ನಿರ್ಲಕ್ಷ್ಯ ಮಾಡಿರುವವು. ಪ್ರಕೃತದ ಶಸ್ತ್ರಸಿದ್ಧತಾ ಮಹಾಯೋಜಯಿಂದಲೆ, ಲಾಭವನ್ನುಗಳಿಸುವುದರಲ್ಲೆ ಅವರ ಶ್ರೀಮಂತ ವರ್ಗವು ಮಗ್ನವಾಗಿರುವುದು. ಈ ಯುದ್ಧ ಸಿದ್ಧತೆಯ ಚಟುವಟಿಕೆಗಳು ನಿಂತ ನಂತರ ಬಹಿರ್ ವ್ಯಾಪಾರದಲ್ಲಿ ವಿಶೇಷ ತರದ ಇಳಿತ, ಯುದ್ಧ ಶಸ್ತ್ರಕಾರ್ಖಾನೆಗಳು ಮುಚ್ಚಲ್ಪಟ್ಟು ಅಸಂಖ್ಯಾತ ಮಂದಿಗಳು ನಿರುದ್ಯೋಗಿಗಳಾಗಬೇಕಾಗುವುದು, ಈ ಎರಡು ಕಾರಣಗಳಿಂದ ಮುಂದಕ್ಕೆ ಬರುವ ಸಾಂಪತ್ತಿಕ ಮುಗ್ಗಟ್ಟಿನ ಪರಿಸ್ಥಿತಿಯು ಇನ್ನಷ್ಟು ಭೀಕರವೆನಿಸುವುದು.

ಈ ತರದ ಪರಿಸ್ಥಿತಿಯನ್ನು ಎದುರಾಯಿಸುವರೆ ಬ್ರಿಟನು ಯಾವ ತರದ ಸಿದ್ಧತೆಗಳನ್ನು ಮಾಡಿರುತ್ತದೆ ಎಂದು ಓರ್ವ ಆಂಗ್ಲೇಯ ಮಹನೀಯರ ಪ್ರಶ್ನೆ. ಅದು ವ್ಯಾಪಾರದ ಅಭಿವೃದ್ಧಿ ಕಡೆಗೆ ಅತ್ಯಂತ ಲಕ್ಷ್ಯ ಕೊಡಬೇಕು. ಆ ಕುರಿತು ಅಮೇರಿಕದೊಡನೆ ಸಹಕರಿಸಬೇಕು. ಜಗತ್ತಿನ ವ್ಯಾಪಾರ ವೃದ್ಧಿಯಾಗುವಂತೆ ಯತ್ನ ಪಡಬೇಕು—ಎಂಬದಾಗಿ ಅವರ ಸೂಚನೆಗಳು.

ಆದರೆ ಈಗಿನ ಬ್ರಿಟಿಷ ಸರಕಾರವು ಯಾರ ಮಾತನ್ನು ಆಲಿಸುವ ಹಾಗಿಲ್ಲ. ಮುಗ್ಗಟ್ಟಿನ ಪರಿಸ್ಥಿತಿಯ ಚಿಹ್ನೆಗಳು ಈಗಾಗಲೇ ಕಾಣಿಸಿಕೊಳ್ಳಲು ಪ್ರಾರಂಭವಾಗಿದೆ. ಈಗ ಅತ್ಯಂತ ನಿರ್ಲಕ್ಷ್ಯದಲ್ಲಿರುವ ಬ್ರಿಟಿಷ ಪ್ರಜಾವರ್ಗವು ಆಗ ಸುಮ್ಮನಿರುವುದೆ? ಹಾಗಾದರೆ ಮುಂಬರುವ ಮುಗಟ್ಟಿನಿಂದ ಈಗಿನ ಬ್ರಿಟಿಷ ಸರಕಾರವು ರದ್ದಾಗುವುದೆ? ಅಲ್ಲಿ ಸೌಮ್ಯವಾದಿ ಸರಕಾರದ ಸ್ಥಾಪನೆಯಾಗುವುದೆ? ಅದರಿಂದ ಜಗತ್ತಿನ ಶಾಂತಿರಕ್ಷಣೆಯಾಗುವುದೆ? ಈಗಿನ ~~ಸರಕಾರವು ಅಧಿಕಾರಕ್ಕೆ ಬಂದಂದಿನಿಂದ,~~ ಜಪಾನು ಮಂಚೂರಿಯುವನ್ನು ನುಂಗಿತು, ಮುಸಲಿನಿಯು ಎಬಿಸೀನಿಯವನ್ನು ವಶಪಡಿಸಿಕೊಂಡನು, ಅಲ್ಲಿ ಅತ್ಯಂತ ಕ್ರೂರ ತರದ ಕೃತ್ಯಗಳನ್ನು ನಡೆಯಿಸಿದನು. ಸ್ಪೈನ್ ದೇಶದಲ್ಲಿ ಇಟೇಲಿ, ಜರ್ಮನಿ ದೇಶಗಳು ಕಾಲಿಟ್ಟಿರುವವು. ಆದರೂ ಬ್ರಿಟಿಷ ಸರಕಾರವು ಮಾಡಿದ್ದೇನಿಲ್ಲ. ಮಹಾ ಚುನಾವಣೆಯಲ್ಲಿ ೩ ಮಿಲಿಯ ಜನರು ಮತವನ್ನೆ ಕೊಡದೆ ಆ ಕುರಿತು ತಮ್ಮ ನಿರ್ಲಕ್ಷ್ಯವನ್ನೆ ಸೂಚಿಸಿರುವರು ಎಂದು ಮಿ। ಗ್ರಿಪೆನ್ ಫೋಲರ ಅಭಿಪ್ರಾಯ.

ಇದರಿಂದ ಬ್ರಿಟಿಷ ಪ್ರಜಾವರ್ಗವು ಸರಕಾರದ ಕುರಿತು ಅತ್ಯಂತ ನಿರ್ಲಕ್ಷ್ಯಭಾವದಿಂದಿರುವುದಾದರೂ, ಹಿಂದಿನ ಮುಗ್ಗಟ್ಟಿನ ದೆಸೆಯಿಂದ ಸ್ಥಾಪನೆಯಾದ ರಾಷ್ಟ್ರೀಯ ಸರಕಾರವು ಮುಂದಿನ ಮುಗ್ಗಟ್ಟಿನ ದೆಸೆಯಿಂದಾಗಿ ರದ್ದಾಗಬಹುದು. ಲಂಡನಿನಲ್ಲಿ ಸೌಮ್ಯವಾದಿ (ಜನಹಿತ) ಸರಕಾರದ ಸ್ಥಾಪನೆಯಾಗುವುದೆಂಬ ಊಹನೆಗಳು ಉಂಟಾಗುತ್ತಿವೆ. ಹಿಂದೂದೇಶದ ನವ ರಾಜಶಾಸನವು, ಫೆಡರೇಶನು, ಕೋಮುವಾರು ಎವಾರ್ಡು ಇವೆಲ್ಲಾ ರಚನೆಯಾದುದು ಈ ಸರಕಾರದಿಂದ. ಹಿಂದೂದೇಶದ ಹಿತವು ಅವುಗಳಲ್ಲಿರುವುದಿಲ್ಲ. ಹೀಗಿರುವಾಗ, ಮೇಲೆ ಹೇಳಿದಂತೆ ಇನ್ನೊಂದು ಮುಗ್ಗಟ್ಟಿನ ಸ್ಥಿತಿಯು ಉಂಟಾದರೆ ಈಗಿನ ರಾಷ್ಟ್ರೀಯ ಸರಕಾರವು ಅದರಿಂದ ರದ್ದಾಗುವುದಾದರೆ ಕನ್ಸರ್‌ವೇಟಿವರು ಅಧಿಕಾರದಿಂದ ತಳ್ಳಲ್ಪಡುವುದಾದರೆ, ಆ ರಗ್ಗಟ್ಟಿನ ದಿನವು ಬೇಗನೆ ಒದಗಲೆಂದು ಎಣಿಸುತ್ತದೆ.

ಅಂದರೆ, ಹಿಂದೂದೇಶಕ್ಕೂ ಅಂತರಾಷ್ಟ್ರೀಯ ವಿಚಾರಗಳಿಗೂ ಹೆಚ್ಚಿನ ಸಂಬಂಧವಿದೆ.

ಹಬಸಿ ಚಕ್ರವರ್ತಿಯವರು ಲಂಡನಿನಿಂದ ಹೊರಡಬೇಕಂತೆ

ಹಬಸಿ ಚಕ್ರವರ್ತಿಯರಾದ ಹೈಲೀ ಸೇಲಿಸರು ಲಂಡನಿನಲ್ಲಿದ್ದರೆ ಇಟಲಿ ಇಂಗ್ಲಾಡು ಸ್ನೇಹಕ್ಕೆ ಭಂಗ ಬರುವುದೆಂದ ಭಯವು ಉಂಟಾದರಿಂದ ಅವರು ಬೇಗನೆ ಲಂಡನನ್ನು ಬಿಟ್ಟುಹೋಗಬೇಕೆಂದು ಬ್ರಿಟಿಷರು ಒತ್ತಾಯಪಡಿಸುತ್ತಿರುವರಾಗಿ ತಿಳಿದುಬರುತ್ತದೆ.

ಹಬಸಿ ಚಕ್ರವರ್ತಿಯವರು

ಹಬಸಿಗಳ ಮೇಲೆ ಅತ್ಯಾಚಾರ ನಡೆಯಿಸಿದುದಕ್ಕಾಗಿ ಮುಸಲಿನಿಯನ್ನು ಶಿಕ್ಷಿಸಲು ಹೊರಟ ಜನಾಂಗ ಮಂಡಳವು ಮುಂದೆ ಎಬಿಸೀನಿಯವು ಇಟೇಲಿದೆಂದು ಮನ್ನಿಸಲು ಸಿದ್ಧವಿದೆ ಎಂದು ತಿಳಿದುಬರುತ್ತದೆ.

ಅಂದರೆ ಜನಾಂಗ ಮಂಡಳದಿಂದ ಎಲಾ ಸತ್ವವು ಕಳೆದುಹೋದಂತೆಯೆ.

ಖಾದಿ ಪ್ರಚಾರಕರು—ಅವರು ಮಾಡಬಹುದಾದ ಇತರ ಸುದಾರಣೆಗಳು

ಖಾದಿ ಪ್ರಚಾರಕರ ದೆಸೆಯಿಂದ ಕಸಬುಗಾರರಲ್ಲಿ ಒಂದು ತರದ ಕ್ರಾಂತಿಯು ಉಂಟಾಗಿರುತ್ತದೆ. ಅವರಲ್ಲಿ ಅನೇಕ ಬಗೆಯ ಸುಧಾರಣೆಗಳಾಗಿವೆ. ವೃತ್ತಿಗಾರ ಜೀವನದ ಪ್ರತಿಯೊಂದು ಇಲಾಖೆಗೆ ಪ್ರಚಾರಕರ ಸ್ಪರ್ಶವಾಗಿರುತ್ತದೆ. ಪ್ರಚಾರಕರು ಅಲ್ಲಿ ಅವರ ಸುಧಾರಣೆಯನ್ನು ಮಾಡುತ್ತಿದ್ದಾರೆ. 'ಮಹಾರಾಷ್ಟ್ರ ಖಾದಿ ಪತ್ರಿಕೆ'ಯಲ್ಲಿ ಈ ಕೆಳಗಿನ ಒಂದು ವಾರ್ತೆಯು ಇದೆ.

ಕೊರಂತಾಲಾ ಎಂಬಲ್ಲಿ ಖಾದಿ ಪ್ರಚಾರಕರು ಸ್ಥಳೀಯವಾಗಿ ತಯಾರಾದ ಕಾಗದವನ್ನೆ ಉಪಯೋಗಿಸುತ್ತಿದ್ದಾರೆ. ಅಲ್ಲಿ ಬೆಳೆಯುವ ಒಂದ ನಾರಿನ ಗಿಡದಿಂದ ಸಿದ್ಧವಾಗುವ ಟ್ವಾನ್ ದಾರವನ್ನು ಉಪಯೋಗಿಸಿ ವೃತ್ತಿಗಾರರಿಗೆ ಆ ಕುರಿತ, ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ.

ಕೂಕಲ್ಲಿ ಉಗುಳುವ ಅಭ್ಯಾಸವು ಅನೇಕ ವೃತ್ತಿಗಾರರಲ್ಲಿತ್ತು. ಅಂಥ ಲಾ ಮಂದಿಗಳಿಗೆ ಉಗಳಲು ಮಣ್ಣಿನ ಪೀಕದಾನಿಗಳನ್ನು ಒದಗಿಸಿರುವರು.

ಮಟ್ಪಾಳ್ಳಿ ಎಂಬಲ್ಲಿ ಓರ್ವ ಜಮೀನ್ದಾರನ ಪೆ ನೇಜರನು ಬಿಟ್ಟಿ ಬೇಗಾರಿ ಪದ್ಧತಿಯನ್ನು ನಿಲ್ಲಿಸುವಂತೆ ಆತನನ್ನು ಒತ್ತಾಯಪಡಿಸಿದರು.

ತಾ ಡೂರಿನಲ್ಲಿ ನೇಯುವವರ ಸಾಲಮಾಡದಂತೆ, ಕೆಲವು ಒಳ್ಳೆ ಕ್ರಮಗಳನ್ನನುಸರಿಸುಂತೆ ಒತ್ತಾಯ ನಡೆಯಿಸಲಾಯಿತು. ಇದರ ದೆಸೆಯಿಂದ ವಿವಾಹ ಮ್ಯಾ... ಕ್ಕೆ (ಹೆಚ್ಚೆ ...ಳಿಸಲಾ ... ಚವಲೋಪನಯನ, ... ಇತ್ಯಾದಿ ಸಮಾರಂಭಗಳ ... ಖರ್ಚುಗಳನ್ನು ನಡೆಸು... ದನ್ನು ನಿಲ್ಲಿಸಿದರು. ಸ್ತ್ರೀಯರು ಖಾದಿ ಸೀರೆಗಳನ್ನು ಉಪಯೋಗಿಸುವಂತೆ ಪ್ರಯತ್ನಗಳು ನಡೆದವು. ಇದಕ್ಕಾಗಿ ಸುಲಭ ... ದ ಖಾದಿ ಶೀರೆಗಳನ್ನು ಸಿದ್ಧಪಡಿಸಿದರು. ಇದರಿಂದ ಒಬ್ಬ ವೃತ್ತಿಗಾರನ ಉತ್ಪನ್ನದಿಂದ ಸ್ವಲ್ಪ ಹಣವನ್ನು ಶಿಷ್ಟ ದಿವಸಗಳಿಗೆ ಉಳಿಸುವಂತೆ ಸಾಧಿಸಿದರು.

ಸಾಲ ನೀಡದ ವೃತ್ತಿಗಾರರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು, ಇನ್ನಿತರರೂ ಅದೇ ರೀತಿ ಸುಧಾರಣೆ ಹೊಂದುವಂತೆ ಸಾಧಿಸಿದರು. ಸಿಂದೆವಾಹಿ ಎಂಬಲ್ಲಿ ವೃತ್ತಿಗಾರರಿಗಾಗಿ ಒಂದು ಸಹಕಾರಿ ಸ್ಟೋರನ್ನು ತೆರೆಯುವ ಏರ್ಪಾಡು ಮಾಡಲಾಗಿದೆ.

ಮೇಲಿನದು ಮಹಾರಾಷ್ಟ್ರ ಖಾದಿಯವರ ಒಂದು ಲೇಖದಿಂದ ಆಯ್ದುದಾಗಿರುತ್ತದೆ.

ಖಾದಿ ಪ್ರಚಾರದಿಂದ, ಖಾದಿ ಪ್ರಚಾರ ಒಂದಲ್ಲದೆ ಇನ್ನಿತರ ಅನೇಕ ಮಹತ್ತರದ ಸುಧಾರಣೆಗಳನ್ನು ಸಾಧಿಸಬಹುದು.

ಮೇಲಿನ ಅನುಭವದಿಂದ ನಮ್ಮ ಜಿಲ್ಲೆಗೆ ಉಪಯೋಗವಿದೆಯೆ?

Change of Adrress:

Bangra Ramanath Shanbhogue, Certified Job Typist & Commercial Instructor, has shifted his office to Gonsalves new building Court Road, Mangalore, near Central Co-operative Bank

Charges most moderate

TEST YOUR EYES

By the Electro Ophthalmoscope





All Varieties of Frames & Lenses.

AT

The Mangalore Trading Association Ltd

Sight Testing Ophthalmic Opticians

Car Street, MANGALORE

'Dil Roz' (Regd)

'Dil Roz' is a sure cure for Oriental sores local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess

There is no need of dressing the wounds, nor are baths prohibited

Price Rs. 2

Postage extra

TAHIR DIN,

Anarkali, LAHORE

ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ
ಆದರಿಂದ ಸೌಖ್ಯ, ಆನಂದ
ಇವುಗಳು ಇದ್ದಲ್ಲಿ
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ,
ಶಾಂತಿಗ,
ಜೀವ ಸತ್ವಗಳಿಗ,
ನವಯೌವನಕ್ಕೆ,
ರಾಜಮಾರ್ಗವೆಂದರ

ಜೀವಾಮೃತ

ಆಯುರ್ವೇದಾಶ್ರಮಂ,
... ವಿ ... ಪಿಳ್ಳೈ ... ವೀದಿ,
... ಮದ್ರಾಸ

... ಜಿಲ್ಲೆಯ ... ಏಜಂಟರು —

ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

ಗುಣಖಾತ್ರಿ ಔಷಧ.

ಸ್ತ್ರೀಯರ ಎಲ್ಲಾ ತರದ ಮುಟ್ಟು ದೋಷಗಳಿಗೆ ಸ್ತ್ರೀಯರಿಗೆ ದೇಹವನ್ನು ಪುಷ್ಟೀಕರಿಸುವ ಟಾನಿಕ್

ಲೋಧ್ರ

ಎಲ್ಲಾ ದವಾಖಾನೆಗ
ಳಲ್ಲಿಯೂ ದೊರೆಯುತದೆ

ಕೇಸರಿ ಕುಟೀರಂ

ಮದ್ರಾಸು

ಮಂಗಳೂರು ಪ್ರವರ್ತಕರು ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಸೂತಿಕಾವಾಯು ಅಪಸ್ಮಾರ,

10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

"ವಾಯುಮುಕ್ತಾ"

ಈ ಔಷಧವು ದೇಶೀಯ ವನಸ್ಪತಿಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವ ಸೇವೆಯನ್ನು ಮಾಡುತ್ತದೆ ... ಅಥವಾ ಗರ್ಭಿಣಿಯಾಗಿರುವ ... ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ದುಃಖಿತರಾಗಿದ್ದರೆ ಆ ಸ್ಥಿತಿಯನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದಲ್ಲ ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ ... ಕೂಗು, ಹೊರಳಾಟ ಬಲಹೀನತೆ ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವವು ... ಇಲ್ಲದಿರುವಿಕೆ, ಅಪಸ್ಮಾರ, ಒಮ್ಮೆಲೆ 10 ನಿಮಿಷಗಳಲ್ಲಿ ಮಾಯವಾಗುತ್ತವೆ ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ.

C. L Namawala,

Palace Road, BARODA.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಳಿಕಟ್ಟಾ ಬಜಾರ್, ಮಂಗಳೂರು

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಯ್ಯ ಕರಣೀಕ ಬಿಲ್ಡಿಂಗ್, ಹೂಮಾರ್ಕೆಟು

ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ ರುಚಿಗೂ, ಆರೋಗ್ಯಕ್ಕೂ ಯೋಗ್ಯ ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,

Flower Market South, Mangalore

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿ ಹೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1-4-0(ವಿ ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರ್ಡೇಪಿ,

P. O. Peridepi (ಸೆಲ್ಲೂರು ಜಿ.)

೨೦ ಸಾವಿರ ಅಡಿಗಳ ಮೇಲೆ ಹಾರಾಟ!

…ಧ್ಯದಲ್ಲಿ ವಿಮಾನ ಸಂಚಾರವು ೨೦ ಸಾವಿರ ಅಡಿಗಳ ಎತ್ತರದಲ್ಲಿ ಜರಗುವ ಏರ್ಪಾಡಾಗಬಹುದು. ಅಷ್ಟು ಎತ್ತರದಲ್ಲಿ ವಾಯುಮಂಡಲವು ಇರುವುದಿಲ್ಲ. ಅಲ್ಲಿರುವ ಪ್ರದೇಶಕ್ಕೆ ಸಬ್‌ಸ್ಟ್ರೊಟೊಸ್ಪಿಯರ್ ಎನ್ನುತ್ತಾರೆ. ಜೀವನಾವಶ್ಯಕ ವಾಯುವಿನಿಂದ ಕೂಡಿದ ಕೋಣೆಗಳಿರುವ ಅಖಂಡವಾದ ವಿಮಾನಗಳಲ್ಲಿ ಪ್ರಯಾಣಿಕರು ಕುಳಿತುಕೊಳ್ಳಬೇಕಾಗುವುದು.

ಅಷ್ಟು ಎತ್ತರದಲ್ಲಿ-ತಾಸು ಒಂದರ ೨೫೦ ಮೈಲುಗಳ ವೇಗದಲ್ಲಿ ವಿಮಾನಗಳನ್ನು ಚಲಿಸಬಹುದಂತೆ.

ಈ ಬಗ್ಗೆ ಅಮೇರಿಕಾದ ಒಂದು ವಿಮಾನ ಸರ್ವಿಸಿನ ಸಂಸ್ಥೆಯು ವಿಮಾನಗಳನ್ನು ಸಿದ್ಧಗೊಳಿಸುತ್ತಿದೆ. ಅದರಲ್ಲಿ ದಿವಸ ಸಮಯ ೩೨ ಜನರು ಪ್ರಯಾಣ ಮಾಡಬಹುದು, ರಾತ್ರಿ ಸಮಯ ೧೮ ಅಷ್ಟು ಎತ್ತರದ ಪ್ರದೇಶದಲ್ಲಿ ಜೀವನವಾಯುವಿಲ್ಲವಾದುದರಿಂದ, ವಿಶೇಷಶೀತ ವಿಪರೀತವಿರುವುದರಿಂದ ಅಖಂಡವಾದ ವಿಮಾನವಲ್ಲದೆ, ಬೇರೆ ರೀತಿ ಹಾರಾಡಲು ಸಾಧ್ಯವಿಲ್ಲವಂತೆ

ರೂ ಆತನು ಬೆಳೆಯುತ್ತಾ ಇದ್ದಾನಂತೆ. ಆತನ ಪ್ರಾಯವು ೨೮ ವರ್ಷ

ಅರಬರು ಸಿದ್ಧವಾಗುತಿದ್ದಾರೆ

ಉತ್ತರ ಪೆಲೆಸ್ತೀನದಲ್ಲಿ ಅರಬರು ತೋಪು ಮತ್ತು ಸಿಡಿಮದ್ದು ಶೇಖರಿಸಲು ಪ್ರಾರಂಭಿಸಿರುವರು

ಕಾರಣ ಪೆಲೆಸ್ತೀನದ ವಿಭಜನೆ ಯೋಜನೆ ಪ್ರಕಾರ ಉತ್ತರ ಪೆಲೆಸ್ತೀನವು ಯೆಹೂದಿಯರಿಗೆ ಸೇರುವುದರಿಂದ, ಅವರು ಮುಸ್ಲಿಮರ ಮಸೀದಿಗಳನ್ನೂ ಧರ್ಮ ಸಂಸ್ಥೆಗಳನ್ನೂ ನಾಶಪಡಿಸದಂತೆ ರಕ್ಷಿಸಲು

ಅರಬರ ನಾಯಕನಾದ ಗ್ರೆಂಡ್ ಮುಫ್ತಿಯು ಈ ಬಗ್ಗೆ ಸಿರಿಯಾಕ್ಕೆ ತೆರಳಿ, ಅಲ್ಲಿ £೧೨,೦೦೦ ಕ್ರಯಬಾಳುವ ತೋಪುಗಳನ್ನೂ, ಸಿಡಿಮದ್ದನ್ನೂ ಪಡಕೊಂಡಿರುವನು

ಕೋವಿ, ಪಿಸ್ತೂಲು ಮತ್ತು ತೋಟೆಗಳನ್ನು ಗುಪ್ತವಾದ ರೀತಿಯಲ್ಲಿ ಒಳಗೆ ಸಾಗಿಸುತ್ತಿದ್ದಾರೆ

ಈ ಬಗ್ಗೆ ವ್ಯಯಿಸಲು ಮಹಾನಿಧಿಯೊಂದು ಮುಫ್ತಿಯು ಸಿದ್ಧಪಡಿಸಿರುವನೆಂದು, ಅದರ ಮೌಲ್ಯವು ರಹಸ್ಯದಲ್ಲಿರುವುದೆಂದೂ ತಿಳಿದು ಬರುತ್ತದೆ,

---

ಜೈಲಿನ ಕೋಣೆಗೆ ಆತನು ಅತಿ ದೊಡ್ಡವನಾದನು

ಅಮೇರಿಕಾದ ಬೊಸ್ಟನ್ ಸ್ಟೇಟ್ಸಿನ ಸರಕಾರಕ್ಕೆ ಓರ್ವ ವಿಚಿತ್ರ ಕೈದಿಯು ದೊರಕಿರುವನು ಆತನ ಭಾರವು ೫೩ ಮಣ, ಆತನ ಸೊಂಟದ ಸುತ್ತಳತೆಯು ೫೨ ಇಂಚುಗಳು, ಇನ್ನೂ ಉಬ್ಬುತ್ತಿದ್ದಾನಂತೆ। ಆತನ ಬೆಳವಣಿಗೆಯನ್ನು ನಿಲ್ಲಿಸಲು, ಜೈಲು ಅಧಿಕಾರಿಯವರು ಯತ್ನಿಸುತ್ತಿದ್ದಾರಂತೆ ಬೊಜ್ಜು ಇಳಿಸುವ ಚಿಕಿತ್ಸೆಗೆ ಆತನನ್ನು ಒಳಪಡಿಸಿದ್ದಾರಂತೆ

ಆತನ ಹೆಸರು ಅರ್ನೆಸ್ಟ್ ರೊಯ್ ಎಂದು ಯಾವುದೋ ಒಂದು ತಪ್ಪಿತಕ್ಕೆ ಕಾರಾಗ್ರಹ ಶಿಕ್ಷೆಗೊಳಗಾದಂದಿನಿಂದ, ಆತನಲ್ಲಿ ಈ ವಿಚಿತ್ರತರದ ಬೆಳವಣಿಗೆಯು ಪ್ರಾರಂಭವಾಗಿರುವುದು ಜೈಲಿನ ಕೋಣೆಯಲ್ಲಿ ಆತನನ್ನು ಸೇರಿಸಲು ಅಸಾಧ್ಯವಾಯಿತು ಆತನಿಗಾಗಿ ದೊಡ್ಡ ಬಾಗಿಲಿರುವ ದೊಡ್ಡದೊಂದು ಕೋಣೆಯ ವಿಶೇಷ ತಯಾರಿಯು ನಡೆಯಿತು ಬಡಗಿಗಳು ಆತನಿಗೆ ತಕ್ಕುದಾದ ದೊಡ್ಡ ಮಂಚವನ್ನು ಸಿದ್ಧಗೊಳಿಸಿದರು.

ಆತನಿಗೆ ತಕ್ಕುದಾದ ಉದ್ಯೋಗ ದೊರಕಿಸುವರೆ ಜೈಲು ಅಧಿಕಾರಿಗೆ ಮಹಾ ಸಮಸ್ಯೆಯಾಗಿ, ಆತನು ಕೆಲವು ದಿವಸ ಸುಮ್ಮನೆ ಸಮಯ ಕಳೆಯಬೇಕಾಯಿತು.

ಈಗ ಆತನಿಗೆ ಶಿಕ್ಷೆ ಹೆಚ್ಚಾಗಿರುವ ಮೋಟಾರು ಶಾಪಿನಲ್ಲಿ ಕೆಲಸ ಕೊಟ್ಟಿರುವರು. ಆದ…

ತಮಾಷೆಗಾಗಿ ಹಲ್ಲುಗಳು ಕಿತ್ತಲಾದುವು

ಜರ್ಮನಿಯ ನಾಜಿಗಳಿಂದ ರಚಿತವಾದ ಡೆಟೆನ್ಷನ್ ಕೆಂಪುಗಳ ಕೆಲವು ವಾರ್ತೆಗಳು, ಕೆಳಗೆ ಕೊಡಲಾಗಿವೆ. ಅಲ್ಲಿಂದ ವಿಮುಕ್ತನಾದ ಓರ್ವ ಡಚ್ಚ್ ಕೈದಿಯಿಂದ ಅವು ದೊರಕಿದವು.

ನಾಜಿಗಳಿಗೆ ಬೇಡವಾದವರನ್ನು ಇಲ್ಲಿ ಬಂಧಿಸಲಾಗುವುದು. ಅಲ್ಲಿ ಅತ್ಯಂತ ಕ್ರೂರತರದ ಹಿಂಸೆಗಳು ನಡೆಯುತ್ತಿವೆ

ಜೈಲಿನ ಡಾಕ್ಟರರಿಗೂ, ದಂತವೈದ್ಯನಿಗೂ ಒಂದು ಪಂತ ಬಿತ್ತು ಬರೆ ಅರ್ಧ ಗಂಟೆಯಲ್ಲಿ ತಾನು ಒಬ್ಬನ ಹಲ್ಲುಗಳನ್ನೆಲ್ಲಾ ಕಿತ್ತುಬಿಡುವೆನೆಂದು ದಂತವೈದ್ಯನ ಶಿಫಾರಸು ಒಡನೆ ಓರ್ವ ಕೈದಿಯನ್ನು ಹೊರತರಲಾಯಿತು ಎಲ್ಲರೂ ನೋಡುತ್ತಿದ್ದ ಹಾಗೆ ಆತನ ಹಲ್ಲುಗಳನ್ನು ಕಿತ್ತೆಗೆಯಲಾಯಿತು

ಫ್ರಿಟ್ಜ್ ಎಲ್ಬರ್ಟನೆಂಬವನು, ಮಾಜಿ ಜರ್ಮನಿಯ ಅಧ್ಯಕ್ಷರ ಪುತ್ರನು ನಾಜಿಗಳ ಅಸಮಾಧಾನಕ್ಕೆ ಒಳಗಾಗಿ, ಈ ಕೆಂಪಿನಲ್ಲಿ ಬಂಧಿಸಲ್ಪಟ್ಟವನು ಒಂದು ದಿನ ಅಧಿಕಾರಿಗಳು ಆತನಿಗೆ ತನ್ನ ಕಣಿಯನ್ನು ಅಗೆಯಲು ಅಜ್ಞಾಪಿಸಿದರು

ಕಣಿಯು ಬೇಕಾದಷ್ಟು ಆಳವಾದ ನಂತರ 'ನನಗೆ ಗುಂಡಿಕ್ಕಿ' ಎಂದು ಎಲ್ಬರ್ಟನು ಕಿರಿಚಿದನು ಅಧಿಕಾರಿಗಳು ಗುಳ್ಳೆಂದು ನಕ್ಕರು ಆತನನ್ನು ಭಯಪಡಿಸಲು ಮಾತ್ರ ಅವರು ಹಾಗೆ ಮಾಡಿದ್ದೆಂದರು

---

೧೬ ವರ್ಷಗಳ ನಂತರ ಕಂಡ ಮಗಳನ್ನು ಗುಂಡಿಕ್ಕಿ ಕೊಂದನು

ಥಿಯೊದೊರ್ ಬ್ಲಾಂಡು ಎಂಬವನು, ಹದಿನಾರು ವರ್ಷಗಳ ಹಿಂದೆ, ಸಂಪತ್ತು ಸಾಧಿಸಲು ಅಮೇರಿಕಾಕ್ಕೆ ತೆರಳಿದ್ದನು ರೊಮೆನಿಯಾದಲ್ಲಿರುವ ತನ್ನ ಜನ್ಮನಾಡಿನಿಂದ ತನ್ನ ಪತ್ನಿಯನ್ನೂ ೩ ವರ್ಷ ಪ್ರಾಯದ ಮಗಳನ್ನೂ ಮನೆಯಲ್ಲಿ ಬಿಟ್ಟು ತೆರಳಿದ್ದನು ಅಮೇರಿಕಾದಲ್ಲಿ ಆತನಿಗೆ ಒಳ್ಳೆ ಅದೃಷ್ಟವು ಲಭಿಸಿತು. ಕೆಲವು ದಿವಸಗಳ ಹಿಂದೆ ಥಿಯೊಡರನು, ತನ್ನ ಕುಟುಂಬವನ್ನು ನೋಡಲು ಅತ್ಯಂತ ಕುತೂಹಲವುಳ್ಳವನಾಗಿ, ಸ್ವದೇಶಕ್ಕೆ ಹಿಂತೆರಳಿದನು

ತನ್ನ ಮಾತೃನಾಡನ್ನು ಮುಟ್ಟುವ ಮೊದಲೆ ಒಂದು ಸಣ್ಣ ನಗರದಲ್ಲಿ ಆತನಿಗೆ ರಾತ್ರಿಯಾಯಿತು ಒಂದು ಹೊಟೇಲಿನಲ್ಲಿ ಉಳಕೊಂಡನು

ಎರಡು ತರುಣ ಸ್ತ್ರೀಯರು, ಆತನ ಸೇವೆಗಾಗಿ ಬಂದರು ಒಳ್ಳೆ ಮದ್ಯಸೇವನೆಯಾದ ನಂತರ, ಒಬ್ಬಳು ಆತನನ್ನು ಮಲಗಲು ಸಹಕರಿಸಿದಳು ಥಿಯೊದರನು ಸಿದ್ರಾವಶನಾದ ಮೇಲೆ ಆಕೆಯು ಆತನ ಕಿಸೆಯಲ್ಲಿದ್ದ ಎಲ್ಲಾ ಹಣವನ್ನು ದೋಚಿಕೊಂಡು ಪಲಾಯನಗೈದಳು,

ಮುಂಜಾನೆ ಎದ್ದು, ಬ್ಲಾಂಡನು, ತನ್ನ ಪ್ರಯಾಣವನ್ನು ಮುಂದರಿಸಿ ತನ್ನ ಹಳ್ಳಿಯನ್ನು ಸೇರಿದನು ಆತನ ಮಡದಿ ಮತ್ತು ಮಗಳು ಮನೆಯ ಎದುರಿಗುವ ತೋಟದಲ್ಲಿ ಆತನನ್ನು ಕಾಯುತ್ತಿದ್ದರು

ಹಿಂದೆ ಒಂದು ಮಾತು ತೆಗೆಯದೆ, ಬ್ಲಾಂಡನು ತನ್ನ ಕಿಸೆಯಲ್ಲಿದ್ದ ಪಿಸ್ತೂಲನ್ನು ತೆಗೆದು ತನ್ನ ಮಗಳಿಗೆ ಹೊಡೆದು, ನಂತರ ತಾನೂ ಹೊಡೆದ ಕೊಂದನು

ಮುಂಚಿನ ರಾತ್ರಿ ಆತನೊಡನೆ ವಿಲಾಸಗೈದವಳು ಆತನ ಮಗಳೆಂದು, ಪೋಲೀಸರು ಅನ್ನುತ್ತಿರುವರು

ನೀನು ತಿನ್ನುವಿಯೂ:

ನಿನ್ನ ಪ್ರೀತಿಯ ವಸ್ತುವನ್ನು?
ನಿನಗೆ ಸಿಕ್ಕಲಿಲ್ಲ?
ನಿನಗೆ ಬೇಕೆಂದಾಗ?

ಎಷ್ಟೋ ಜನರು ತಾವು ತಿನ್ನುವ ಆಹಾರದ ವಿಷಯದಲ್ಲಿ ಜಾಗರೂಕರಾಗಿರಬೇಕು ಅವರು ಕೆಲವು ಆಹಾರಗಳನ್ನು ತಿಂದ ಮೇಲೆ, ಹೊಟ್ಟೆಯ ನೋವು ಶುರುವಾಗಿ ಹೊಟ್ಟೆಯ ಅವ್ಯವಸ್ಥೆಯನ್ನುಂಟು ಮಾಡುವುದು ಇದು ಅವರ ಹೊಟ್ಟೆಯು ಸರಿಯಾದ ಸ್ಥಿತಿಯಲ್ಲಿಲ್ಲವೆಂಬುದರ ಸೂಚನೆಯು

ನಿಮ್ಮ ಹೊಟ್ಟೆಯನ್ನು ಸರಿಯಾಗಿಟ್ಟುಕೊಂಡಲ್ಲಿ

ನೀವು ಆರೋಗ್ಯವಲ್ಲಿರುವಿರಿ ಇನೋಸ್ "ಫ್ರುಟ್‌ಸೊಲ್ಟ್" ಇದು ಹೊಟ್ಟೆಯ ಅವ್ಯವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ ಮಲಬದ್ಧತೆ, ಹೊಟ್ಟೆಯ ಜಡತನ ತಲೆನೋವು ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದುಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ ನೀವು ಈ ಉತ್ತಮವಾದ ಪೇಯವನ್ನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು ಇದೇ ಆರೋಗ್ಯವು

ಇನೋ ಇದಕ್ಕೆ ಸೌಮ್ಯ ಸ್ವಾಭಾವಿಕ, ಸುರಕ್ಷಿತವಾದ ಭೇದಿಯಾಗುವ ಗುಣವಿರುವುದು

ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ

Eno's 'Fruit Salt'

E I-K 21

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3 0-0 (ಮೂರು) ವಿ ಪಿ ಛಾರ್ಜ ಬೇರೆ

ಕೆಳಗಿನ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಯಿ 4

Sole Manufacturer **Dr. D N JASANI,** Vithalbhai Patel Road, BOMBAY 4

[illegible]	[illegible]	[illegible]	[illegible]	[illegible]	[illegible]	[illegible]	[illegible]
21	[illegible]	[illegible]	[illegible]	[illegible]	[illegible]	[illegible]	
22	[illegible]	[illegible]	[illegible]	[illegible]	[illegible]	[illegible]	
23	[illegible]	[illegible]	[illegible]	[illegible]	[illegible]	[illegible]	
24	[illegible]	[illegible]	[illegible]	[illegible]	[illegible]	[illegible]	
25	[illegible]	[illegible]	[illegible]	[illegible]	[illegible]	[illegible]	
26	ಗುರು	[illegible]	[illegible]	[illegible]	[illegible]	೧೦	
27	[illegible]	[illegible]	[illegible]	[illegible]	[illegible]	೧೧	

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 months 3½%

Abotion chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for paticulars— **K. R. GURU**, *Managing Director.*

The Canara Banking Corporation, Udipi, Ltd.

ESTD. 1906.

(INCORPORATED IN BRITISH INDIA.)

***Member:*-RESERVE BANK OF INDIA.**

Paid up Capital	**Rs. 2,88,925**
Deposits	**Rs. 37,98,217/-**
Reserves	**Rs. 3,52,213/-**
Govt. Securities	**Rs. 12,46,325/-**

ANNOUNCEMENT

The Mettupalayam Branch of the Corporation has been opened on 11-8-1937 and all kinds of Banking transactions will be undertaken there.

Total Resources exceed Rs. 52,00,000/-

6-8-1937

V. R. Kamath, B. A. LL. B.
Manager.

ಮುಂಬಾಯಿ ═ ಗೋವಾ ═ ಕಾರವಾರು

ಇತ್ಯಾದಿ ಕಡೆಗಳಿಗೆ

ಅತ್ಯಲ್ಪ ಖರ್ಚಿನಿಂದ- ಅತಿ ಸುಖಕರವಾದ ಪ್ರಯಾಣ

ನಮ್ಮ ಬಸ್ಸುಗಳ ಮೂಲಕ

ಕಡೂರು ಮಾರ್ಗವಾಗಿ ಮುಂಬಾಯಿಗೂ, ಶಿವಮೊಗ್ಗಾ ಹಂಪರಕ್ಕಾಗಿ, ಹುಬ್ಬಳ್ಳಿ ಬೆಳಗಾಂ ಮುಂಬ್ಯಾ ಪ್ರಾಂತ್ಯಕ್ಕೂ

ಕಾರವಾರ ಮಾರ್ಗವಾಗಿ ಮುಂಬ್ಯಾ ಪ್ರಾಂತ್ಯಕ್ಕೂ ಅತ್ಯಲ್ಪ ಖರ್ಚಿನಿಂದ ಅತಿ ಸುಖಕರವಾಗಿ ಪ್ರಯಾಣ ಬೆಳೆಸಲನುಕೂಲ

ಊರುಗಳ ಬದಲಾವಣಿ–ನೋಟಗಳ ಬದಲಾವಣಿ–ಜನತೆಯ ಸಂಪರ್ಕ–ಆಹಾರದ ಅನುಕೂಲ

ವಿಶ್ರಾಂತಿ ಗೃಹಗಳ ಏರ್ಪಾಡು–ನೌಕರರ ಸಭ್ಯತೆ

ಇವೆಲ್ಲವೂ ಬಸ್ಸುಪ್ರಯಾಣದಲ್ಲಿದೆ.

ನೀವು ಕಂಡ ಕುಂದುಕೊರತೆಗಳ ಬಗ್ಗೆ ನಮ್ಮ ಸಂಸ್ಥೆಯ ಜೊಯಿಂಟ್ ಮೆನೆಜರರಿಗೆ ಬರೆದು ತಿಳಿಸಿರಿ—

ಜೊಯಿಂಟ್ ಮೆನೇಜರ್ಸ್:

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.

ಮತ್ತು

ಜೊಯಿಂಟ್ ಬುಕಿಂಗ್ ಆಫೀಸು, ಕೊಡಿಯಾಲಬೈಲು.

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by:—

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

Sole Agents:

Panchmal Krishnaya Shenoy & Son,

Bunder, MANGALORE

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ.

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದೂ ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಿತ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:-ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ.

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕೃಶರಾದ ದುರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ.

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ.

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ.

ಸಿಗುವ ಸ್ಥಳ:—

ಷಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Edited Printed & Published By A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ವಿ. ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರದ ತೆರದ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪು. ೩೧. ಮಂಗಳೂರು ತಾ. ೨೭ನೇ ಆಗೋಸ್ತು ೧೯೩೭ (27 - 8 - '37) ಸಂಚಿಕೆ ೩೪

"An ideal young progressive Life Office of India to Insure with or represent."

THE

Commonwealth Assurance Company Ltd., POONA.

Triennial Bonus! On Endowment Rs. 37½ -

Triennial Bonus! On Whole Life Rs. 45 -

NEXT VALUATION 1937-38.

Special features –

(1) Low Premium Rates

(2) Permanent Disability!

(3) Double Indemnity!

(4) Extended Assurance Benifit.

(5) House purchase scheme for Policy holders.

Liberal first year and hereditary renewal commissions for its representatives

Messrs GAWANKAR & SONS,

Chief Agents for Mysore State, Coorg, Ceded Districts, & S. Kanara,

Ahmed Buildings, Chickpet, BANGALORE CITY.

Messrs. FAROOQUI BROTHERS, *Special Agents*, Fort House, Karkal, (South Kanara)

Local Representatives:- The Modern Trading Co., Opp. City Press, Mangalore.

Branches:

Bombay, Calcutta, Delhi, Madras & Nagpur.

[illegible] ಬಂದು [illegible] ನಮ್ಮ [illegible] ವಾದರು.

ಸ್ವದೇಶಕ್ಕೆ ತೆರಳುತ್ತಲೇ, ಇಲ್ಲಿನ ಮುಸ್ಲಿಂ ಬಂಧುಗಳನ್ನು ದೂರ ಅನ್ಯಾಯ ಸಾರಿದರು. ಆದರೆ, ಇಂಗ್ಲಾಂಡು, ಅಮೇರಿಕಾಗಳಲ್ಲಿನವ ರಂತೆ, ಇಜಿಪ್ತದ ಮುಸ್ಲಿಮರು ಇವರನ್ನು ಬೆನ್ನ ಹತ್ತಿದರೆ, ಕೂಡಲೇ ತಮ್ಮ ಹುದ್ದೆಗಳಿಗೆ ರಾಜಿ ನಾಮೆ ಕೊಡಬೇಕೆಂದು ಅಪ್ಪಣೆ ಕೊಟ್ಟರು. ಮುಸ್ಲಿಮರು ಮುಸ್ಲಿಮರ ಆತಿಥ್ಯ ಪಡೆದೂ, ಅವರಿಗೆ ಅಪಕಾರಮಾಡುತ್ತಿರುವುದನ್ನು ಇಜಿಪ್ತ ಸರಕಾರವು ಸಹಿಸದಾಯಿತು. ಇನ್ನವರಿಗೆ ಆತಿಥ್ಯಸತ್ಕಾರಮಾಡುವವರಾರು? ಕೆಲಸವಿಲ್ಲ ದವರಿಗೆ?

o o o o o

ಗೋಂಡಾ ತಾಲೂಕಿನ ತಹಶೀಲ್ದಾರರು ಇನ್ನೂ ಮಾಂಧಾತನ ಕಾಲದಲ್ಲೇ ಜೀವಿಸಿದ್ದಾ ರೆಂದು ನಂಬಿರುವರು ಅವರ ಅಂಗಳದಲ್ಲಿ ಒಬ್ಬ ಸ್ವಯಂಸೇವಕನು ರಾಷ್ಟ್ರಧ್ವಜವನ್ನು ಹಿಡಿದು ಕೂತಿದ್ದುದನ್ನು ಕಂಡು ಕೂಡಲೇ ಪೇದೆ ಯಿಂದ ಅವನನ್ನು ಅಲ್ಲಿಂದ ಓಡಿಸಿದರು

o o o o

ಹದಿನೈದು ವರ್ಷಗಳಿಂದಲೂ ಈತನು ಧ್ವಜಹಿಡಿದುಕೊಂಡೇ ಇರತಕ್ಕವನು ಇವನನ್ನು ಸಾಕ್ಷಿಗಾರನಾಗಿ ಕೋರ್ಟಿಗೊರಲು ಸಮ್ಮನ್ಸು ಇತ್ತು ಹೀಗಾಗಿ ಇವನ ಪಕ್ಷದ ವಕೀಲರು ತಹಶೀಲ್ದಾರರು ಹೀಗೆ ಮಾಡಬಾರದಿತ್ತೆಂದರು "ಕಾಂಗ್ರೆಸ್ ಪಾರ್ಟಿಧ್ವಜವು ನಿಂದನೀಯವಾದುದು" ಎಂದು ತಹಶೀಲ್ದಾರರೆಂದರು 'ಫಲ – ಅಲ್ಲಿನ ಜಿಲ್ಲಾ ಬೋರ್ಡು ಮತ್ತು ಮ್ಯುನಿಸಿಪಾಲಿಟಿ ಬೋರ್ಡು ಸಹ ರಾಷ್ಟ್ರಧ್ವಜವನ್ನು ತಮ್ಮ ಕಟ್ಟಡಗಳ ಮೇಲೆ ಹಾರಾಡಿಸುವಂತಾಗಿದೆ'

o o o o

ತಕ್ಲಿಖಾದಿಯನ್ನು ಮಾರದಂತೆ ಖಾದೀ ಆಕ್ಟ ಗೆಣ್ಣಿಳರಲ್ಲೇ ಮಂಜೂರಾಗಿದೆ ಮದ ರಾಸು ಸರಕಾರವು ಈಗ ಈ ಆಕ್ಟನ್ನು ನಮ್ಮ ಸಂಸ್ಥಾನಕ್ಕೆ ಅನ್ವಯಿಸುವಂತೆ ಗಜೇಟಿನಲ್ಲಿ ಪ್ರಕಟಿಸಿಯದೆ

o o o o

ಸರಕಾರೀ ನೋಕರರೆಲ್ಲರೂ ತಮ್ಮ ಮಾರ್ಥರಿಯಿಂದ ಖಾದಿಯ ಪ್ರಚಾರ ಮಾಡಿ ಅದು ಯಾವುದೊಂದು ಪಕ್ಷವನ್ನು ಸೂಚಿಸುತ್ತಿಲ್ಲವಾದ ಕಾರಣ, ಒಡಜನರಿಗೆ ಅನ್ನದೊರೆವಂತೆ ಮಾಡಲೆಂದೂ ನಮ್ಮ ಮಂತ್ರಿಗಳು ಪ್ರಕಟಿಸಿದ್ದಾರೆ ಸರಕಾರವು ಖಾದಿಯನ್ನು ಇತರ ದೃಷ್ಟಿಯಿಂದ ಕಾಣುತ್ತಿಲ್ಲವೆಂದೂ ಅಧಿಕಾರ ವಾಣಿಯಿಂದ ನುಡಿದಿದ್ದಾರೆ

o o o o

ಅಜ್ಮೀರದ ಜಿಲ್ಲಾ ಸ್ಕೌಟು ಕಮಿಷನರು "ಅಲ್ಲಿನ ಸ್ಕೌಟರು ವಂದೇ ಮಾತರಮ್ ಗಾನ ಹಾಡದಂತೆ ಅಪ್ಪಣೆಕೊಡಿಸಿರುವರಲ್ಲದೆ, ಬೆಡನ್ ಪೊವೆಲ್ಲರಲ್ಲಿ ತಮ್ಮ ಭಕ್ತಿವಿಶ್ವಾಸಗಳಿರುವುವಾಗಿ ಎಲ್ಲ ಸ್ಕೌಟರ ಸಹಿ ಪಡೆದಿದ್ದಾರೆ. ವ್ಯಕ್ತಿ ಸ್ವಾತಂತ್ರ್ಯ, ಆತ್ಮಗೌರವಗಳನ್ನು ಬೋಧಿಸುವ ಕ್ರಮ ಹೀಗಿರಬೇಕು!

o o o o

ತಿಲಕ ಸ್ಮಾರಕದ ದಿನ ಎಂಟು ಅಂಗಡಿಗಳಲ್ಲಿ ರಾಷ್ಟ್ರಧ್ವಜವು ತೂಗುತ್ತಿತ್ತು. ಸೈನ್ಯದ ಅಧಿಕಾರಿಯು ಇದನ್ನು ಸಹಿಸಲಾರದೆ, ಆ ಅಂಗಡಿಗಳನ್ನು ಮುಚ್ಚಲು ಅಪ್ಪಣೆಕೊಟ್ಟನು. ಪಟ್ಟಾಳಕ್ಕೂ ಮುಖಾಸಭೆಗಳಿಗೂ ಇದು ಆತ್ಮ ಸುಕ[illegible]ಗಿ, ಈ ಲೀನ್ಸ್‌ಡೌನಿನ ಅಧಿಕಾರ[illegible]

[illegible] ಗನ್ನ ಮಾರ್ಗವ [illegible] ಮುಂತಾದ [illegible] ಈ ದೇಶಕ್ಕೆ ಹೋಗುವ [illegible] ಆಗಿಯೂ, ವರ್ಷದೊಳಗೆ [illegible] ವಾಗಿ [illegible] ವಾಗಿದೆ. ಇದಕ್ಕಾಗಿ ಯಾರನ್ನು ದೂರಬೇಕು

ಬಿಳೀ ನೋಕರರು ವ್ಯಯಿಸಿದ್ದು ಬರೀ ಕಡಿಮೆ ಎಂದು ತೋರಿಸಲು, ಕರಿ ನೋಕರರು ಪೇಚಾಡುತ್ತಿರುವರಾಗಿ, ಪತ್ರಿಕೆಗಳು ಟೀಕಿಸಿವೆ.

o o o o

ಅಂದಮಾನದ ಒಂದು ಮಾತು. ಮಿಕ್ಕೆಲ್ಲ ಪ್ರಸ್ತಾಪಗಳು ಹಾಗಿರಲಿ ಅಂದಮಾನಿಗೆ ಕೈದಿಗಳನ್ನು ಕಳುಹುವುದಿಲ್ಲವೆಂತಾದರೆ ವರುಷಕ್ಕೆ ೩೩ ಲಕ್ಷ ರೂಪಾಯಿ ಉಳಿತಾಯವಾಗುವುದು

o o o o

ಪೂನಕ್ಕೆ ಸಮೀಪದ ರಸ್ತೆಯಲ್ಲಿ ಹಳ್ಳಿ ಗುಂಡಿಗಳು ಇಲ್ಲಿನ ನೇಶನಲ್ ಗರ್ಲ್ಸ್ ಸ್ಕೂಲಿನ ಹಿಂದಣ ರಸ್ತೆಯ ನಡುಮಧ್ಯದಿಂದ ಕೋಡು ಹರಿಯುತ್ತಿರುವ ಹಾಗೆ! ಮ್ಯುನಿಸಿಪಾಲಿಟಿ ಮಾತೆತ್ತಲಿಲ್ಲ, ಕೈ ಎತ್ತಲಿಲ್ಲ. ಇಲ್ಲಿನ ವಿದ್ಯಾರ್ಥಿನಿಯರೇ ಹತ್ತಿರದ ಗುಡ್ಡದಿಂದ ಕಲ್ಲು ಹೊತ್ತು ತಂದು ರಸ್ತೆ ಸರಿಪಡಿಸಿದರು. ಮ್ಯುನಿಸಿಪಾಲಿಟಿ ಉದ್ಧಾರಹೊಂದಿತು!

o o o o

ನಮ್ಮ ದೇಶದ ಮಹಾಪಂಥ,—ಗೋಣಿ ನಾರಿನ ಉತ್ಪನ್ನ ಅದಕ್ಕಿಂತಲೂ ದೊಡ್ಡ ತಕ್ಷೀರು,—ಇಲ್ಲೇ ಅದನ್ನು ನೇಯುವ ವ್ಯವಸ್ಥೆ ಬ್ರಿಟಿಷರ ದುರವಸ್ಥೆ, ಈ ನಾರು ಪ್ರಪಂಚದಲ್ಲಿ ಮತ್ತೆಲ್ಲಿಯೂ ಉತ್ಪನ್ನವಾಗದಿರುವಾಗ ಆದರೆ ಅದನ್ನು ನೇಯುವ ಹಕ್ಕು ಅವರಿಗೇ ಸಿಗಬೇಕಾಗಿದೆ ಅದಕ್ಕಾಗಿ,—ಇಲ್ಲಿನ ನಾರಿನ ಮೇಲೆ ಅಲ್ಲಿ ಸುಂಕ ಕಡಿಮೆ ಇಲ್ಲಿನ ನಾರಿನಬಟ್ಟೆಯ ಮೇಲೆ ಸುಂಕ ಹೆಚ್ಚು

o o o o o

ಈ ಸುಂಕವನ್ನು ಇನ್ನೂ ಏರಿಸಬೇಕಾಗಿ ಬ್ರಿಟಿಷರ ಒತ್ತಾಯ ಹಾಗೆ ಮಾಡಿದರೆ ಇಲ್ಲಿ ನಾರನ್ನು ನೇಯುವ ಹಾಗಿಲ್ಲ, ತಾವೇ ನೇಯುವಂತಾದೀತು ಎಂದು ನಂಬುಗೆ ಆದರೆ, ಇಲ್ಲಿನ ನಾರಿನ ಬಟ್ಟೆಯ ಮೇಲೆ ಬ್ರಿಟಿಷರು ನೇಕಡಾ ೧೦ರ ಸುಂಕ ವಿಧಿಸುವಾಗ, ಇಲ್ಲಿನ ಕಚ್ಚಾ ನಾರಿನ ಮೇಲೆ ನಮ್ಮ ಸರಕಾರವು ೧೫ರ ಸುಂಕ ವಿಧಿಸಿದರೆ ಏನನ್ಯಾಯವಾದೀತು? ಆದರೆ, ಬ್ರಿಟಿಷರ ಅಪ್ಪಣೆಮನ್ನಿಸುವ ನಮ್ಮ ಸರಕಾರವು ಹೀಗೆ ಮಾಡಿತೆ?

o o o o o

ಮೊಂಬಾಯಿ ಸರಕಾರದ ಆಡಳಿತದ ಖರ್ಚಿನಲ್ಲಿ (ಮುಂದಣ ಆರು ತಿಂಗಳ) ಆರು ಲಕ್ಷ ರೂಪಾಯಿ ಕಡಿಮೆಯಾಗಿದೆ ಭತ್ತೆ, ಪ್ರಯಾಣದ ಖರ್ಚು, ಮಂತ್ರಿಗಳ ಸಂಬಳ ಇವೇ ಮುಖ್ಯವಾಗಿ ಈ ಹಣ ಕೂಡಿದೆ ಇತರ ಇಲಾಖೆಗಳಲ್ಲೂ ಸ್ವಲ್ಪ ಕಡಮೆ ಮಾಡಲಾಗಿ ಒಟ್ಟು ಹತ್ತು ಲಕ್ಷ ರೂಪಾಯಿ ಕೂಡಿ ಬಂದಿದೆ

o o o o

ಜನತೆಗೆ ಸೌಕರ್ಯಕ್ಕಾಗಿರುವ ಕೈಗಾರಿಕೆ ಮೊದಲಾದುವನ್ನು ಸರಕಾರವೇ ಏಕೆ ಕೈಕೊಂಡು ನಡೆಸಬಾರದು? ಹಾಗೆ ಮಾಡಿದ್ದಲ್ಲಿ, ಲಾಭವೆಲ್ಲವೂ ಜನತೆಗೇ ಸೇರುವುದು ಬೇರೆ ತೆರಿಗೆ ವಿಧಿಸುವ ಅಗತ್ಯವಿರದೆಂದು ಮಂತ್ರಿಗಳೆಂದರು. ಮೂರು ಜಿಲ್ಲೆಗಳಲ್ಲಿ ಮದ್ಯಪಾನ ನಿರೋಧ ಮಾಡುವುದು, ಕಂದಾಯ ಮಾಫಿಬಿಡುವುದು, ಗ್ರಾಮಸ್ಥರ ಸಾಲನಿವಾರಣೆಗೆ ಸಂಪೂರ್ಣ ಪ್ರಯತ್ನಿಸಲು ಯೋಗ್ಯ ಸಲಹೆಕೊಡುವ ಕಮಿಟಿ ನೇಮಿಸುವುದು—ಇಷ್ಟು ಸೂಚನೆಗಳಾಗಿವೆ.

o o o o

ಚುನಾವಣೆ ಕಾಲದಲ್ಲಿ ೫೦೦ ರೂಪಾಯಿಗೆ ಮೇಲ್ಪಟ್ಟು ಸಂಬಳವಿರಬಾರದೆಂದು ಮಂತ್ರಿಗಳು ಆಗ ಹೇಳಿರುವುದಕ್ಕಾಗಿ ಮಾತ್ರ ಈಗ ೫೦೦ರಂತೆ ಪಡೆಯುತ್ತಾರೆ. ಇಲ್ಲದಿದ್ದಲ್ಲಿ ಇಷ್ಟೆಷ್ಟೋ ಪಡೆಯುತ್ತಿದ್ದರು ಎಂದು ಹಕ್ಕರು (೩ ಸಾವಿರ ರೂಪಾಯಿ ಕಲಬಿನವರು) ಹೇಳಿ, ಕಾಂಗ್ರೆಸ್ ಮಂತ್ರಿಗಳಲ್ಲಿ ಅಪರಾಧವನ್ನು ಕಂಡರು

o o o o

ಚುನಾವಣೆ ಕಾಲದಲ್ಲಿ ವೋಟು ಪಡೆವುದಕ್ಕಾಗಿ ಹೇಳಿದ ಮಾತುಗಳು ವಾಗ್ದಾನಗಳಲ್ಲವೆಂದು ಅವರು ಈಗ ಬಂಗಾಳದಲ್ಲಿ ರುಜುಪಡಿಸುತ್ತಿರುವರು.

o o o o o

ಚತುರ ವಕೀಲನಿಗೆ ತಿಂಗಳಿಗೆ ೧೫೦೦೦ ರೂಪಾಯಿ ದೊರೆವಾಗ, ತಾವೇಕೆ ೩೫೦೦ ರೂಪಾ ಪಡೆಯಬಾರದು ಎಂದು ಮತ್ತೊಬ್ಬ ಮಂತ್ರಿಗಳ ಆಕ್ಷೇಪ ಸಮಾಧಾನ ಈ ಮಂತ್ರಿಯೆ ಮೊದಲು ಕಾಂಗ್ರೆಸ್ಸಿಗೆ ಸೇರಿ, ೫೦೦ ರೂಪಾ ವೇತನದ ಶರ್ತಕ್ಕೆ ಸಹಿಹಾಕಿದ್ದು, ಅನಂತ ಮಾತ್ರ (ಚುನಾವಣೆಯಾದಾಗ) ಪಕ್ಷ ತೊರೆದವನು ಕಡಿಮೆ ರುಸುಮಿಗೆ ಒಪ್ಪಿ, ಅನಂತರ ೧೫೦೦೦ ರೂ.ಗಳನ್ನು ವಕೀಲರು ಸೆಳೆದುಕೊಳ್ಳುತ್ತಾರೆಯೆ?

ಜಪಾನಿನ ಅತಿಕ್ರಮವನ್ನು ಚೀನಾವು ಎದುರಿಸುವುದು!

ಸ್ವಾತಂತ್ರ್ಯ ರಕ್ಷಣೆಗಾಗಿ, ದೇಶರಕ್ಷಣೆಗಾಗಿ, ಎಲ್ಲ ಚೀನೀಯರು ಶಸ್ತ್ರಧಾರಿಗಳಾಗಿರುವರು!

ಜಪಾನು ಚೀನಾವನ್ನು ಜಯಿಸಬಹುದು—ಆದರೆ ಚೀನೀಯರನ್ನು ಜಯಿಸಲು ಅವರಿಗೆ ಅಸಾಧ್ಯ

ಸೋವಿಯಟ್ ರಷ್ಯಾವು ಸುಮ್ಮನಿರುವುದೆ? ಅಮೇರಿಕಾವು ಸುಮ್ಮನಿರುವುದೆ?

ಬ್ರಿಟನು ಯಾವ ಧೋರಣೆಯನ್ನು ಅನುಸರಿಸುವುದು?

ಅಬಿಸೀನಿಯಾದಲ್ಲಿ ಇಟಲಿಯನರ ತೋಪುಗಳ ಶಬ್ದದ ಪ್ರತಿಧ್ವನಿಯು ಮಾಯವಾಗುವಷ್ಟರೊಳಗೆ, ಜಪಾನು ತನ್ನ ಸಾಮ್ರಾಜ್ಯಮಿಕ ಧೋರಣೆಯ ಪ್ರಕಾರ ವಸಾಹತುಗಳ ಹಬ್ಬುವಿಕೆಗಾಗಿ ಚೀನಾದಲ್ಲಿ ಒಂದು ಮಹಾಯುದ್ಧವನ್ನು ಹೂಡಿರುತ್ತದೆಂದು ವಾರ್ತೆಯು ಬಂದಿರುತ್ತದೆ.

ರೋಮಿನ ಹಿಂದಿನ ಮಹಾಕೀರ್ತಿಯನ್ನು ಮತ್ತೊಮ್ಮೆ ಗಳಿಸಬೇಕೆಂದು ಸರ್ವಾಧಿಕಾರಿ ಮುಸಲೋನಿಯು ಪೆಸಿಯಿಷ್ಟ ಇಟಲಿಯ ಮಹತ್ವಾಕಾಂಕ್ಷೆಯಾಗಿರುವುದಿ. ಅದಕ್ಕೆ ಅನುಕೂಲವಾಗುವಂತೆ ಅಬಿಸೀನಿಯಾ ಯುದ್ಧವು ಅವಶ್ಯವೆಂದು ಅವರಿಗೆ ಕಂಡುಬಂದಿತ್ತು. ಇಟಲಿಯು ಹಿಂದಿನ ಆ ಮಹಾ ಯಶಸ್ಸನ್ನು ಪಡೆಯಲು, ಆದರೊಡನೆ ಅತ್ಯಂತ ಶೂರರಾದ ಧೀರರಾದ, ಒಳ್ಳೆ ತರಬೇತು ಹೊಂದಿದ ಲಕ್ಷಾವಧಿಯುಗಟ್ಲೆ ಸೈನಿಕರಿರುವ ಮಹಾಸೈನ್ಯ ಮಂಡಳವು ಇರಬೇಕು. ಎಬಿಸಿನಿಯಾವು ಆ ಸೈನ್ಯಸಂಗ್ರಹವನ್ನು ಒದಗಿಸುವುದಾಗಿತ್ತು!

○ ○ ○

ಜಪಾನಿಗೆ ಇಟಲಿಗಿಂತ ಹೆಚ್ಚಿನ ಮಹತ್ತರ ಪ್ರಭುತ್ವವನ್ನು ಪಡೆಯುವ ಮಹತ್ವಾಕಾಂಕ್ಷೆಯು ಇರುವುದು ಸಾಧ್ಯವಾದರೆ ಸರ್ವ ಜಗತ್ತಿನ ಒಡೆಯರಾಗಬೇಕೆಂದು ಅವರ ಧ್ಯೇಯವಾಗಿರುವುದು. ಜಪಾನಿನ ಸಂಗ್ರಾಮಿಕರ ಈ ಮಹತ್ವಾಕಾಂಕ್ಷೆಯು ನೆರವೇರಬೇಕಾದರೆ, ಲಕ್ಷಾವಧಿಯುಗಟ್ಲೆ ಸಮರಶೂರರನ್ನು ಅವರು ಸಿದ್ಧಗೊಳಿಸಬೇಕು, ಜಪಾನು ಎಲ್ಲ ವಿಚಾರಗಳಲ್ಲಿ ಸಾಮರ್ಥ್ಯಯಾಗಬೇಕು ಸಣ್ಣದಾಗಿ ಹೇಳಬೇಕಾದರೆ ಜಪಾನು ಚೀನಾವನ್ನು ಪಡೆಯಲೇಬೇಕು.

○ ○ ○ ○

ಎಬಿಸಿನಿಯಾದ ಮತ್ತು ಅದರ ಕೈಬಿಟ್ಟ ರಾಂಗಮುಂದಳಿದ್ದ, ಸ್ವರಾಜ್ಯದನ್ನು ಒಗತ್ತಿಗ ಬಿಟ್ಟುಬಿಟ್ಟಿರುತ್ತದೆ ಆದರೆ ಚೀನಾವನ್ನು ಜಗತ್ತು ಮರೆತುಬಿಡಬಾರದು. ಕಾರಣ, ಜಪಾನಿನ ಸಂಗ್ರಾಮಿಕರ ಈ ಮಹತ್ವಾಕಾಂಕ್ಷೆಯು ಎಸಲೀನಿಯ ಮಹಾಕಾಂಕ್ಷೆಗಿಂತ ಒಮ್ಮೆಲೆ ಇದ್ದು ಚೀನವನ್ನು ನುಂಗಿದೊಡನೆ ಅದು ಅಂತವಾಗದು ಚೀನಾವನ್ನು ವಶೀಕರಿಸಿದ ನಂತರ ಅದು ಅದರ ಕಾರ್ಯ ಸಾಧಿಸುವುದು.

○ ○ ○ ○

ಜಪಾನಿನಿಂದ ಪೌರ್ವಾತ್ಯದ ಶಾಂತಿಭಂಗ ಮಾತ್ರವಲ್ಲದೆ ಸಮಸ್ತ ಜಗತ್ತಿನ ಶಾಂತಿಭಂಗವಾಗುವುದು. ಮಹತ್ತಾದ ಚೀನಾದ ಬದಿಯಲ್ಲಿದ್ದು, ಚೀನಾದ ಅಭಿವೃದ್ಧಿಯಿಂದ ತನ್ನ ಪ್ರಾಮುಖ್ಯತೆಗೆ ಹಾನಿ ಒರುವುದೆಂದೂ, ಅದರಿಂದಾಗಿ ತನ್ನ ಮಹತ್ವಾಕಾಂಕ್ಷೆಗಳನ್ನು ಬಿಟ್ಟುಬಿಡುವ ಸಂದರ್ಭವು ಒರಬಹುದೆಂದು, ಜಪಾನು ತಿಳಿದುದರಿಂದ ಈಗಲೆ ತನ್ನ ಹಬ್ಬುವಿಕೆಯ ಕಾರ್ಯವನ್ನು ಕೈಗೊಂಡಿದೆ.

○ ○ ○ ○

೧೯೩೧ರಲ್ಲಿ ಜಪಾನು ಮಂಚೂರಿಯವನ್ನು ದೋಚಿಕೊಂಡಾಗ, ಯುದ್ಧಸಂಭವದಲ್ಲಿ ಮಂಚೂರಿಯಾದ ಅವಶ್ಯವು ಜಪಾನಿಗಿತ್ತು.

ಯುದ್ಧಶಸ್ತ್ರಗಳ ಸಿದ್ಧತೆಗೆ ಅವಶ್ಯಕವೆನಿಸುವ ದೇವಿನ್ನಾ ತರದ ಕಾರಣಸಾಮಗ್ರಿಗಳಿಗಾಗಿ, ಎಲ್ಲವೂ ಬೇರೆಕಾದ ಸಂಯುಕ್ತ ರಾಜ್ಯಗಳು ದಿಲ್ಲ. ಚೆನ್ನಾಗಿ ಮೇಲೆ ಹೊಂದಿಕೊಂಡಿದೆ. ನಿಮ್ಮ ಶಕ್ತಿ ಸಾಮರ್ಥ್ಯ ಪ್ರಭುತ್ವಗಳೊಡನೆ ಎಷ್ಟಿವೆಯೋ ನೋಡಿವು ಅದು ಉಂಟುಮಾಡಿದೇವಿಯ ವಿರುದ್ಧದಲ್ಲಿ ಅದಕ್ಕೆ ಸೋಲಿಸುವ ಗದರಿಸಿ ಭೀತಗೆರೆದು. ಜಪಾನಿನಮೇಲೆ ಕಠಿಣ ನಿರ್ಮೋಕ್ಷಂಧಗಳನ್ನು ಹೂಡಿ ಅವರು ವಿಜಯವನ್ನು ಪಡೆಬಹುದು. (ಚೀನಾ ಯುದ್ಧದಲ್ಲಿ—



ಜಪಾನರ ಒಂದು ಯುದ್ಧದ ಹಡಗು

ಅವೇರಿಕಾ ಮತ್ತು ಬ್ರಿಟನ್ ಜಪಾನಿಗೆ ವಿರೋಧವಾದ ಧೋರಣೆಯನ್ನು ಅನುಸರಿಸುವರೆಂದು ತಿಳಿದುಬರುತ್ತದೆ;)

ಕಲ್ಲಿದ್ದಲು, ಪೆಟ್ರೋಲಿಯಮ್ ಮತ್ತು ಕಬ್ಬಿಣ ಇವು ಆಧುನಿಕ ಯುದ್ಧದ ಮೂರು ಜವಳಿಕ ವಸ್ತುಗಳು. ಅಮೇರಿಕಾ ಮತ್ತು ರಷ್ಯಾದ ಮಹಾ ವಿರೋಧದ ಎದುರು, ತಾನು ಹಿಡಿದ ಮಂಚೂರಿಯಾದಲ್ಲಿ ಜಪಾನಿಗೆ ಈ ಈ ಮೂರು ವಸ್ತುಗಳು ಪುಷ್ಕಳ ದೊರಕಿವೆ ಆದರೆ ಸಮಸ್ತ ಜಗತ್ತನ್ನೆ ಹಿಡಿಯುವ, ಅವರ ಅತ್ಯಂತ ಭೀಷ್ಮಳವೆನಿಸುವ ಕಾರ್ಯವಿಯ ಮಹತ್ವಾಕಾಂಕ್ಷೆಯನ್ನು ಸಾಧಿಸಬೇಕಾದರೆ ಅದಕ್ಕೆ ಮಂಚೂರಿಯ ಒಂದರಿಂದಲೆ ಉಪಕಾರವಾಗದು.

○ ○ ○ ○ ○

ಅದಕ್ಕಾಗಿಯೆ ಜಪಾನೀಯರ ಕಾರ್ಯಕ್ರಮದಲ್ಲಿ, ಉತ್ತರ ಚೀನಾವನ್ನು ವಶೀಕರಿಸುವುದು, ಎರಡನೆ ಇಸಂ ಆಗಿರುವುದು ತನ್ನ ರಕ್ಷಣೆಗಾಗಿ, ಒಂದು ಯುದ್ಧದಲ್ಲಿ ತೊಡಗುವರೆ ಜಪಾನಿಗೆ ಮಂಚೂರಿಯಾವು ಸಾಕಿತ್ತು ಆದರೆ, ಐಕ್ಯಹೊಂದಿದ ತನ್ನ ವೈರಿಗಳ ಸಮೂಹವನ್ನು ಎದುರಾಯಿಸುವರೆ, ಚೀನಾ ದೇಶದ ಮಹಾ ಆಸರ, ಮಹತ್ತಾದ ಜನಸಂಖ್ಯೆ, ಇತ್ಯಾದಿಗಳ ಬೆಂಬಲವಿರುವುದಾದರೆ, ಮತ್ತೆ ಅದು ದುಡುಕಬೇಕಾಗಿಲ್ಲ ತನ್ನ ಆದರ್ಶಗಳ ಪ್ರಕಾರ ಕಾರ್ಯಗಳನ್ನು ಪೂರೈಸುವರೆ, ಜಪಾನಿಗೆ ಚೀನವು ಅವಶ್ಯವಾಗಿಯೂ ಬೇಕು

○ ○ ○ ○ ○

ಜಪಾನಿನ ಧ್ವಸ್ತಗೊಳಿಸಲಿಕ್ಕೆ ಒಳಗಾದ ಉತ್ತರ ಚೀನಾವು ಅತ್ಯಂತ ಫಲವತ್ತಾದ ಪ್ರದೇಶವು. ಉತ್ತರ ಚೀನಾದ ವಿಭಜನೆಯಾದರೆ—ಈ ಅಪಾದನೆಯು ಸಹಿಸಲ್ಪಟ್ಟರೆ, ಆಗ ಚೀನಾದೇಶದ ಸಾಮರ್ಥ್ಯವು ಮಾಯವಾಗುವುದು. ಐಕ್ಯವಾದ ಒಂದು ಜನಾಂಗವಾಗಬೇಕೆಂಬ, ಚೀನಾದ ಕಾಂಕ್ಷೆಯು ಎಂದಿಗೂ ಕಾರ್ಯರೂಪಕ್ಕೆ ಬಾರದು.

ಕಲ್ಲಿದ್ದಲು ಇಲ್ಲದ ಒಂದೆ ಒಂದು ಪ್ರಾಂತ್ಯವು ಚೀನಾದಲ್ಲಿರುವುದಿಲ್ಲ. ಆದರೆ ಉತ್ತರ ದಕ್ಷಿಣ ಪ್ರಾಂತ್ಯಗಳಾದ ಶಾನ್ಸಿ, ಚ್ಹಲಿ, ಶಾಂಟುಂಗ್ ಮತ್ತು ಹೊನಾನ್ ಪ್ರಾಂತ್ಯಗಳಲ್ಲಿ ಅತ್ಯಂತ ಮಹತ್ತಾದ ಕಲ್ಲಿದ್ದಲಿನ ಸಂಗ್ರಹಗಳಿವೆ. ಆಧುನಿಕ ಕ್ರಮಗಳಿಂದ ಶಾಂಟುಂಗ್ ಶಾಸಿಗಳಿಂದ ವರ್ಷ ಒಂದಕ್ಕೆ ಸಾಧಾರಣ ಒಂದು ಸಾವಿರ ಟನ್ನುಗಳ ಪ್ರಕಾರ, ಇನ್ನು ೩೦ ವರ್ಷಗಳ ತನಕ ಕಲ್ಲಿದ್ದಲನ್ನು ತೆಗೆಯಬಹುದಂತೆ ಉತ್ತರ, ಶಾನ್ಸಿ, ಚ್ಹಲಿ, ಹೊನಾನ್ ಇತ್ಯಾದಿ ಪ್ರದೇಶಗಳಿಂದ, ವರ್ಷ ಒಂದರ ೩೪೫,೦೦೦ ಟನ್ನು ಕಲ್ಲಿದ್ದಲನ್ನು ತೆಗೆಯಬಹುದಂತೆ

ಉತ್ತರ ಚೀನಾದಲ್ಲಿ ಅನೇಕ ಕಬ್ಬಿಣದ ಖನಿಗಳಿವೆ ಆದರೆ ಆಧುನಿಕ ಕ್ರಮಗಳನ್ನನುಸರಿಸಿ, ಅಲ್ಲಿ ಲಕ್ಷ್ಮೀಯ ತರದಲ್ಲಿ ಕಬ್ಬಿಣವು ಸಿದ್ಧವಾಗುವುದಿಲ್ಲ. ಶಾನ್ಸಿ ಪ್ರದೇಶದ ಕಬ್ಬಿಣದ ಘಟಗಳು, ಜಗದ್ವಿಖ್ಯಾತವಾದುವುಗಳು,—ಅವುಗಳು ಅತ್ಯಂತ ಪ್ರಾಚೀನವಾದವುಗಳು.

○ ○ ○ ○ ○

ಉತ್ತರ ಚೀನಾವು ಖಂಡಗಳಲ್ಲಿ ಮಾತ್ರ ಅಧ್ಯವಲ್ಲ ಇಂದಿಗೆ ಸಾವಿರಾರು ವರ್ಷಗಳಿಂದ ಅತ್ಯಂತ ಮಹತ್ತಾದ ಜನಸಂಖ್ಯೆಗೆ ಆಹಾರವನ್ನು ಒದಗಿಸಿದ ಫಲವತ್ತಾದ ಪ್ರದೇಶಗಳು ಅಲ್ಲಿರುತ್ತವೆ ಯಾಂಗ್ಟ್ಸಿ ಪ್ರದೇಶವೂ, ವೈ-ಹೊ ಪ್ರದೇಶವೂ, ನೀರು ಸಾರಿಸಲ್ಪಟ್ಟರೆ, ಉತ್ತಮ ತರದ ಬೆಳೆಗಳನ್ನು ಒದಗಿಸುವ, ಮಣ್ಣಿನಿಂದ ಕೂಡಿರುತ್ತದೆ ಈ ಪ್ರದೇಶಗಳಲ್ಲಿ ಚೀನೀಯ ಸರಕಾರವು, ಬೆಳೆಗಳ ಕುರಿತು ಪರಿಶೋಧನಾ ಕಾರ್ಯವನ್ನು ನಡೆಯಿಸುತ್ತಿದೆ

○ ○ ○ ○ ○

ಯಾವುದರ ಅತಿಕ್ರಮಕ್ಕೆ ಜಪಾನು ಮಹಾ ಸೈನ್ಯಸಂಗ್ರಹಗಳನ್ನೆ ಕಳುಹಿಸಿಕೊಡುತ್ತಿದೆಯೊ, ಯಾವುದನ್ನು ವಶೀಕರಿಸಲು ಅಮೇರಿಕಾದ ಸಂಯುಕ್ತ ರಾಜ್ಯಗಳು, ಬ್ರಿಟನ್ ಮತ್ತು ಸೋವಿಯಟ್ ರಷ್ಯಾ ಮೊದಲಾದ ಪ್ರಭುತ್ವಗಳೊಡನೆ ವೈಕವನ್ನು ಬೆಳೆಯಿಸಲು ಜಪಾನು ಹಿಂಜರಿಯುವುದಿಲ್ಲವೋ, ಯಾವುದನ್ನು ಪಡೆಯಲು ಜಪಾನು ಬಹಳ ವ್ಯಾಕುಲಪಡುವುದೊ ಅಂತಹ ಉತ್ತರ ಚೀನಾವು ಚೀನಾ ದೇಶದ ಅತ್ಯಂತ ಆಧ್ಯಪ್ರದೇಶವು. ಚೀನಾದಿಂದಾಗುವ ಯಾವತ್ತೂ ತರದ ರಪ್ತಿನ ಅಧಿಕಾಂಶವು, ಉತ್ತರ ಚೀನಾಪ್ರದೇಶದಿಂದಾಗುತ್ತದೆ.

○ ○ ○ ○ ○

ಯುದ್ಧಶಸ್ತ್ರಗಳ ಬಲತ್ಕಾರದಿಂದ ಪ್ರಭುತ್ವಕ್ಕೆ ಬಂದ ಜಪಾನು, ಈ ತರದ ಉತ್ತರ ಚೀನಾದಲ್ಲಿ ಮಹಾ ಪ್ರಭುತ್ವ ಹೊಂದಲು ಒಂದು ಸೋಪಾನವಿರುವುದೆಂಬ ನಂಬಿಕೆ ಹೊಂದಿಯುತ್ತದೆ. ಇನ್ನೂ ಉಪಯೋಗಿಸಲಾಗದ ಅಲ್ಲಿನ ಆಸರಗಳಿಂದ, ತನ್ನ ಯೋಗ್ಯತೆಯನ್ನು ವೃದ್ಧಿಪಡಿಸಬಹುದೆಂಬ ದೃಢವಾದ ವಿಶ್ವಾಸವು ಅದಕ್ಕಿದೆ ತನ್ನ ಮಹತ್ವಾಕಾಂಕ್ಷೆಯನ್ನು ಪೂರಯಿಸುವ ಭರವಸೆಯು ಉತ್ತರ ಚೀನದಲ್ಲಿದೆ.

ಇಂದಿನ ದಿನದ ಜಪಾನಿನ 'ವ್ಯಾಪಾರ ಸಾಮ್ರಾಜ್ಯ'ದ ಗಣನೆಯನ್ನು ನೋಡುವ. ಅತ್ಯಂತ ಜಾಗರೂಕತೆಯಿಂದ ಮತ್ತು ಸಾವಧಾನದಿಂದ, ಇದರ ಬೆಳವಣಿಗೆಯು ನಡೆದಿರುತ್ತದೆ ಜಪಾನಿನ "ರಾಜಕೀಯ ಸಾಮ್ರಾಜ್ಯ"ಕ್ಕಿಂತ ಈ ಸಾಮ್ರಾಜ್ಯವು ಹೆಚ್ಚಿನ ಮಹತ್ವದ್ದು ಜಪಾನಿನ ಪ್ರತಿಸ್ಪರ್ಧೆಯಿಂದ ಕಠಿಣ ತರದ ಪರಿಣಾಮಗಳನ್ನು ಹೊಂದದ ಜನಾಂಗಗಳಿಲ್ಲ ಕೈಗಾರಿಕೆಗಳಲ್ಲಿ ಕೀರ್ತಿಯನ್ನು ಪಡೆಯುವುದು ಅವರ ಇಚ್ಛೆಯಲ್ಲದಿದ್ದರೂ, ತನ್ನ ವೈರಿಗಳ ಸಿಗಾರ್ಮಗೊಳಿಸುವುದು ಜಪಾನಿನ ಉದ್ದೇಶವು

○ ○ ○ ○ ○

೧೯೩೩ರಲ್ಲಿ ಮೆಂಚಸ್ಟರಿನ ವಸ್ತ್ರದ ಗಿರಣಿಗಳು ಜಪಾನೀಯರೊಡನೆ ಪ್ರತಿಸ್ಪರ್ಧಿಸವುದರಲ್ಲಿ ಬೇಸತ್ತು, ಜಪಾನಿನ ಮಗ್ಗಗಳನ್ನು ಪಡೆಕೊಂಡರೆ ತಮ್ಮ ಇಷ್ಟಸಿದ್ಧಿಯಾಗುವುದೆಂಬ ಭ್ರಾಂತಿಯಿಂದ ಜಪಾನಿನ ಓನಾಕಾಮಗ್ಗಗಳಿಗೆ ಆರ್ಡರು ಕೊಟ್ಟಿದ್ದರಂತೆ ಆದರೆ ಈ ವಿಚಾರವು ಜಪಾನ್ ಸರಕಾರದ ಗೋಚರಕ್ಕೆ ಬಿದ್ದು, ರವಾನಿಸಲು ಸಿದ್ಧವಾದ ಮಗ್ಗಗಳ ಸರಕಾರದಿಂದ ವಶಮಾಡಲ್ಪಟ್ಟವಂತೆ ಜಪಾನೀಯ ಕೈಗಾರವಂತರ ತಮ್ಮ ಯಾವತ್ತು ಕೈಗಾರ ರಹಸ್ಯಗಳನ್ನು ಹೊರಗೆ ಕೊಡದಾರದಾಗಿ ನಿರ್ಬಂಧಗಳಿವೆ. ಇಂದಿಗೆ ಜಗತ್ತಿನ ಅತ್ಯಂತ ಶ್ರೇಷ್ಟವೆನಿಸುವ ಮೂರು ವಸ್ತ್ರದ ಕೇಂದ್ರಗಳು, ಜಪಾನು, ಚೀನಾದೇಶದ ಯಾಂಗಟ್ಸಿ ಪ್ರದೇಶ ಮತ್ತು ಮೆಂಚಸ್ಟರ್, ಪ್ರಥಮದ ಎರಡು ಕೇಂದ್ರಗಳ ಸಂಪೂರ್ಣ ಅಧಿಕಾರವು ಜಪಾನ ಕೈಗಳಲ್ಲಿದೆ

○ ○ ○ ○ ○

ಈ ತರದ ಪ ಸ್ಥಿತಿಯಲ್ಲಿ ಜಪಾನನ್ನ ಚೀನಾವು ಎದುರಿಸಬೇಕು. ಹಬಿಸಿಗಳ ಆಧುನಿಕ ಸಂಗ್ರಾಮಕ್ಕೆ ಎಷ್ಟು ಸಿದ್ಧರಿದ್ದರೋ, ಅಷ್ಟೆ ಇವರಿರುವರು. ಆದುದರಿಂದ ಅತ್ಯಂತ ಭಯಂಕರ ತರದ ಕೊಲೆಗಳು ನಡೆಯುವುವೆಂದು ಭವಿಷ್ಯವಾಗಿ ಹೇಳಲು ಹೆಚ್ಚಿನ ಭವಿಷ್ಯಜ್ಞಾನವು ಬೇಕಾಗಿಲ್ಲ ಇದಕ್ಕೆ ಒಂದು ದೃಷ್ಟಾಂತವು ಕೆಳಗೆ ಕೊಡಲಾಗಿದೆ. ಅದು ಮಂಚೂರಿಯಾದ ವಶೀಕರಣದ ಸಂಬಂಧದ್ದಾಗಿರುತ್ತದೆ

○ ○ ○

ಮೃತರಾದ ಜಪಾನೀಯರು ೧೭೩೦, ಇದಕ್ಕೆ ಪ್ರತಿರೂಪವಾಗಿ ಚೀನಾದ ಕಡೆಯಲ್ಲಿ ಮೃತರಾದ ಸೈನಿಕರು ೬೦,೨೧೯, ಸ್ವಯಂಸೇವಕರು ೬೬,೬೯೩, ನಾಗರೀಕರು ೧೨೯೩೩, ಪೋಲೀಸರು ೩೯೦, ಜುಮ್ಲಾ ೧೩೯,೫೩೫ ಆದರೂ ಯಾವಾಗಲೂ ಚೀನೀಯರು ಜಪಾನೀಯರನ್ನು ಹಿಂಸಿಸುತ್ತಿದ್ದಾರೆಂದು ಜಪಾನೀಯರ ದೂರು.

ಚೀನಾವು ಅತ್ಯಂತ ದುರ್ದೆಶೆ ಹೊಂದಿದ ದೇಶವು. ವ್ಯಾಪಾರೀ ಜನಾಂಗಗಳಾದ, ಜಪಾನು, ಅಮೇರಿಕಾ, ಫ್ರಾನ್ಸು, ಬ್ರಿಟನ್ ಇತ್ಯಾದಿ ರಾಷ್ಟ್ರಗಳ ಹೊಡೆತಕ್ಕೆ ಅದು ಆಗಿಂದಾಗ್ಗೆ ಒಳಗಾಗಿರುವುದು. ಚೀನೀಯ ಸರಕಾರಕ್ಕೆ ದೃಢತ್ವವಿಲ್ಲ. ಅದರೊಳಗೆ ಐಕ್ಯ

(೧೫ನೇ ಪುಟವನ್ನು ನೋಡುವುದು.)



Distributors for South Kanara —

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು.—ಕಾಮರ್ಸ್ ಸ್ವದೇಶೀ ಎಂಪೋರಿಯಂ.

ಡೊಂಬರ ಆಟದ ಒಂದು ದೃಶ್ಯ—



ತಮ್ಮ ಬಡ ಜೀವನಕ್ಕಾಗಿ, ಜೀವ ಹಂಗನ್ನು ಕೂಡಾ ತೊರೆದು, ಡೊಂಬರು ಕೆಲ ಅದ್ಭುತಕರ ಆಟಗಳನ್ನು ಪ್ರದರ್ಶಿಸಿ ಪ್ರೇಕ್ಷಕವರ್ಗದ ಗಮನವನ್ನು ತಮ್ಮೆಡೆಗೆ ಸೆಳೆದು ಹಣಗಳಿಸಿ ಜೀವಿಸುತ್ತಾರೆ. ಅವರಾಡುವ ಅಂತಹ ಆಟಗಳಲ್ಲಿ ಇದೊಂದು ವಿಚಿತ್ರ ದೃಶ್ಯವು.

THE

BANK OF MANGALORE LTD.,

MANGALORE

ESTD 1931

Branches

Panemangalore Mudabidri & Padubidri

Chairman—**Philip J. Chandran, Esq.,**

Retd. Dt. Registrar of Joint Stock Companies

On & from 1st January 1937

Fixed Deposits will be received at the following rates of interest

For 3 month		3½%
6		4%
12		½%
24	& upward	5½%

Interest Payable Quarterly

Saving Bank deposit 3½% on daily balances

All kinds of banking business transacted

U. R PAI, N. U. PAI, *Managing Directors*

ಕೊರನೇಶನ್ ಸಮಾರಂಭಕ್ಕೆ ಹಿಂದೂದೇಶದಿಂದ ಲಂಡನಿಗೆ ಕಳುಹಿಸಲ್ಪಟ್ಟ ಭಾರತೀಯ ಸೈನ್ಯವರ್ಗವು, ಒಂದು ಆಂಗ್ಲೇಯ ನಾಡಿನ ವೃದ್ಧದಲ್ಲಿರುವ "ಓವಲ್ಟಿನ್" ಕಾರ್ಖಾನೆಯನ್ನು ಸಂದರ್ಶಿಸಿ ಅಲ್ಲಿ ಬಹಳ ಆದರಣೀಯ ರೀತಿಯಲ್ಲಿ "ಓವಲ್ಟಿನ" ಸಿದ್ಧಪಡಿಸುವ ಕ್ರಮವನ್ನು ಕಂಡು ಅವರು ಬಹಳ ಸಂತೋಷಗೊಂಡರು. ಓವಲ್ಟಿನ್ ಗೋ ಶಾಲೆಯಲ್ಲಿರುವ ಬಹುಮಾನ ಪಡೆದ ಜರ್ಸಿ ದನಗಳನ್ನು ನೋಡಿ ಅವರಿಗೆ ಪರಮಾನಂದವೆನಿಸಿತು. ಈ ದನಗಳು ಓವಲ್ಟಿನ್ ನ್ನು ತಯಾರಿಸಲು ಪ್ರತಿನಿತ್ಯವೂ ಅತ್ಯುತ್ತಮ ತರದ ನಿರ್ಮಲವಾದ ಹಾಲನ್ನು ಒದಗಿಸುತ್ತವೆ.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿಕೆ ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ

ಮೃದ್ವಿಕಾಸವ—ನಿಶ್ಶಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಶ್ರೀರಾಂಪುರದ ಊರ ದೇವಿಯು ರ ಊರಿನಲ್ಲಿ ಮಾತ್ರವಲ್ಲ, ಸುತ್ತುಮುತ್ತಲಿನ ಹಳ್ಳಿ, ಊರುಕೇರಿ, ಪೇಟೆ ಪಟ್ಟಣಗಳಲ್ಲಿ ಕೂಡ ಪ್ರಸಿದ್ಧಿಯನ್ನು ಪಡೆದಿದ್ದಳು. ಈಚೆಗೆ ಲವು ವರ್ಷಗಳಿಂದಂತೂ ಚಿಕ್ಕಮಕ್ಕಳಿಂದಾ ರಂಭಿಸಿ ವೃದ್ಧವೃದ್ಧೆಯರ ತನಕ ಎಲ್ಲರು ದೇವಿ ಯ ಗುಣಗಾನ ಮಾಡುವರು; ಅವಳು ಮಹಾ ಮೆಯನ್ನು ಹಾಡಿ ಪುಣ್ಯ ಕಟ್ಟಿಕೊಳ್ಳುವರು.

ದೇವಿಯು ಲೋಕದ ಮಹಾ ಮಾತೆ ಎಂದು ಊರ ಜನರ ವಿಶ್ವಾಸ ಅವಳು ತನ್ನ ಶಕ್ತಿಯುಕ್ತಿಗಳಿಂದ ಸಂತಾನವನ್ನು ಸಾಕಿ ಸಲ ಹುವಳೆಂದು ಅವರ ನಂಬುಗೆ. ಶರಣು ಬಂದ ವರಿಗೆ ಅವಳು ವಾತ್ಸಲ್ಯದಿಂದ ಅಭಯದಾನ ಮಾಡುವಳು; ಮನೋಭಿಷ್ಟ ಸಿದ್ಧ ಮಾಡಿಕೊಡು ವಳು; ಮನೋನುಕೂಲರಾಗಿಲ್ಲದವರನ್ನು ಕೂಡ ಕ್ಷಮಿಸಿ ಅವರ ಕ್ಷೇಮ ಚಿಂತನೆ ಮಾಡು ವಳು ಎಂದು ಅವರ ನಂಬಿಕೆ ಇಷ್ಟು ಉದಾ ರಳಾದ ದೇವಿಯು ಈಚೆಗೆ ಒಂದೆರಡು ವರುಷ ಗಳಿಂದ ಮಾತ್ರ ಮೊದಲಿನ ದೇವಿಯಂತೆ ಇದ್ದಿ ಲ್ಲ. ಅವಳ ಸ್ವಭಾವ ಗುಣ ತೀರ ಬದಲಾಗಿ ಹೋಗಿತ್ತು ಅದೇ ಅವಳ ಅಷ್ಟು ಹೆಚ್ಚಾದ ಪ್ರಸಿದ್ಧಿಗೆ ಮುಖ್ಯ ಕಾರಣ!

ಕಾಲಧರ್ಮದಿಂದ ಶ್ರೀರಾಂಪುರವು ಮೊ ದಲಿನ ಶ್ರೀರಾಂಪುರವಾಗಿರಲಿಲ್ಲ. ಮೊದಲು ಎಲ್ಲರೂ ದೇವಿಯ ಭಕ್ತರು ಹಿಂದುಗಳ ಮಾತು ಅಂತಿರಲಿ, ಕ್ರೈಸ್ತ ಮುಸಲ್ಮಾನರು ಕೂಡ ದೇವಿಗೆ ತಮ್ಮ ಭಕ್ತಿಯ ಕಾಣಿಕೆಯನ್ನು ಕಂದೊಪ್ಪಿಸಿ ಕೃತಾರ್ಥರಾಗುತ್ತಿದ್ದರು ಒಬ್ಬರಿ ಗಲ್ಲವಾದರೆ ಒಬ್ಬರಿಗೆ ಅವಳ ಆಶೀರ್ವಾದ ಬಲ ಇದ್ದೇ ಇದ್ದಿತು ಅದ ಕಾರಣ ಎಲ್ಲ ರಿಗೆ ಅವಳ ಮೇಲೆ ಭಕ್ತಿ, ಆದರ, ಪೂಜ್ಯ ಭಾವನೆ ಇದ್ದಿತು ಪರಂತು, ಸ್ವತಂತ್ರ ವಿಚಾ ರದ ಹೆಸರಿನಿಂದ ಆಸ್ತಿಕ ಧರ್ಮವನ್ನು ತೆಗಳಿ ನಾಸ್ತಿಕ ವಾದದ ಪ್ರಚಾರ ಮಾಡುವ ಕೆಲವು ಧೂರ್ತ ಸಾಹಸಿಗಳು ಅಲ್ಲಲ್ಲಿ ಹುಟ್ಟಿದರು ಅವರು ಹಳೆಯ ದೇವಿ ದೇವತೆಗಳ ವಿರುದ್ಧ ಅಲ್ಲಸಲ್ಲದ ಮಾತುಗಳನ್ನಾಡಲಾರಂಭಿಸಿದರು. ಸಾಮಾನ್ಯ ಜನರಲ್ಲಿ ದೇವಿಯ ಮೇಲಿದ್ದ ಭಕ್ತಿ ಶ್ರದ್ಧೆ ವಿಶ್ವಾಸಗಳು ಕಡಿಮೆಯಾಗುತ್ತ ಬಂದು ವು. ದೇವಿಯ ಭಾಂಡಾರವು ತುಂಬಿಬರು ವದೂ ಕಡಿಮೆಯಾಯಿತು

ಇದರಿಂದ ಊರ ದೇವಿಯ ವಕ್ರದೃಷ್ಟಿ ಯು ಊರ ಜನರ ಮೇಲೆ ಬಿದ್ದಿತು ಮನೋ ನುಕೂಲರಾಗಿಲ್ಲದವರ ಮಾತು ಬಿಡಿರಿ, ಅನು ಕೂಲರಾಗಿದ್ದವರು ಸಹ ಅವಳ ಕ್ರೋಧಾಗ್ನಿ ಯಲ್ಲಿ ಬಿದ್ದು ನಾಶವಾಗ ತೊಡಗಿದರು ಅವಳ ಕೋಪಕ್ಕೆ ಭಾಜನರಾದವರ ಮೇಲೆ ಪೆಟ್ಟೊಂದು ತುಂಡೆರಡು ಎಂಬ ಹಾಗೆ ಅವಳ ವ್ಯವಹಾರ ಕ್ರಮವಾಯಿತು ಕೆಲಕೆಲವರು 'ದೇವಿ ಇಲ್ಲ, ದೇವಿ ಸುಳ್ಳು' ಎನ್ನುತ್ತಿರುವಾಗ 'ದೇವಿ ಇದ್ದಾಳೆ, ದೇವಿ ಸುಳ್ಳಲ್ಲ, ನಿಜ' ಎಂದು ತೋರಿಸಲಿಕ್ಕೆ ಉಳಿದವರ ದುಸ್ಸಾಮರ್ಥ್ಯಗಳನ್ನು ಸುಡಲೇ ಬೇಕು, ಅವರಿಗೆ ಭಯ ಹುಟ್ಟಿಸಿ ಅವರಿಗ ಉಳಿ ಗಾಲವಿಲ್ಲದಂತೆ ಮಾಡಲೇಬೇಕು ಆಗಮಾತ್ರ ದೇವಿಯ ಅಸ್ತಿತ್ವದ ಸಾರ್ಥಕತೆ ಎಂಬಂತೆ ದೇ ವಿಯ ಆಚರಣೆಯಾಯಿತು

ರಾಗ ದ್ವೇಶಗಳಿಂದ ಬದ್ಧಳಾಗಿ ಪ್ರತಿಕಾರ ಭಾವನೆಯಿಂದ ತುಂಬಿದ ದೇವಿಯಿಂದ ಸಿಡು ಬು ಬಂದಿತು, ಮಾರಿ ಬೇನೆ ಬಂದಿತು. ಮನೆ ಮಾರು ಆಸ್ತಿಪಾಸ್ತಿ ಧನಕರು ಮಕ್ಕಳು ಮರಿ ಗಳು ಕಾಲದ ದವಡೆಯಲ್ಲಿ ಸಿಕ್ಕಿ ನುಚ್ಚುನೂ ರಾಗಿ ಹೋಗಲಾರಂಭವಾದುವು. ಎಲ್ಲರು ದೇವಿಗೆ ತ್ರಾಹಿತ್ರಾಹಿ ಎಂದು ಅಡ್ಡ ಬಿದ್ದು ಎದ್ದರು. 'ಎಲ್ಲವೂ ತನ್ನಿಂದಾದುದು. ಇಲ್ಲಿ ಬಿಡುವ ದಿಲ್ಲ. ಚೆನ್ನಾಗಿ ಬುದ್ಧಿ ಕಲಿಸದೆ ಇರುವದಿಲ್ಲ ನಿಮ್ಮ ಶಕ್ತಿ ಸಾಮರ್ಥ್ಯ ಧೈರ್ಯ ,ಸಾಹಸಗಳು ಎಷ್ಟಿವೆಯೋ ನೋಡಿ ಬಿಡುತ್ತೇನೆ. ಆಗಲಿ, ದೇವಿಯ ವಿರುದ್ಧ ನಿಮ್ಮ ಪ್ರಚಾರ!' ಎಂದು ಗದರಿಸಿ ಬೆದರಿಕೆ ಹಾಕಿದಳು. ಪಾತ್ರಿಯ ಮೈಮೇಲೆ ಆವೇಶವಾಗಿ ದೇವಿಯು ಹೀಗೆ ಅ ಪ್ಪಣೆ ಮಾಡಿದಳು.

ದೇವಿಯ ಪಾತ್ರಿ

(ಲೇಖಕ:—ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)

ಏನು ಕೊಟ್ಟರೂ, ಎಷ್ಟು ಕೊಟ್ಟರೂ ದೇ ವಿಗೆ ಈಗ ತೃಪ್ತಿಯಿಲ್ಲ ಜನರು ಕಂಗಾಲಾಗಿ ಬಿಟ್ಟರು. ಒಬ್ಬೊಬ್ಬನಾಗಿ ಊರು ನಿರ್ಜನ ವಾಗುತ್ತ ಬಂದಿತು ಸರಕಾರವು ಬಹಳ ಪ್ರ ಯತ್ನಪಟ್ಟಿತು ಆದರೆ ಊರು ಬಿಟ್ಟು ಹೋ ಗುವ ಜನರನ್ನು ಅದೇ ಊರಿನಲ್ಲಿ ನಿಲ್ಲಿಸಲಿಕ್ಕೆ ಸರಕಾರದಿಂದ ಕೂಡ ಸಾಧ್ಯವಾಗಲಿಲ್ಲ ಅದು ದೇವಿಯನ್ನು ಹೇಗಾದರೂ ಮಾಡಿ ಸಂತೈಸಬೇ ಕೆಂದು ಕೇಶವಯ್ಯನನ್ನು ಅಲ್ಲಿಗೆ ಕಳುಹಿಸಿ ಕೊಟ್ಟಿತು

ಕೇಶವಯ್ಯ ವಿಚಿತ್ರ ಮನುಷ್ಯ ಅವನಿಗೆ ದೇವಿಯ ಸಿದ್ಧಿಯಾಗಿತ್ತೆಂದು ಜನರಲ್ಲಿ ಪ್ರತೀತಿ ಯಿತ್ತು ಅವನು ಮಾಡುವ ಕಾರ್ಯಗಳನ್ನು ಪರಿಶೀಲಿಸಿ ಹಾಗಾಗಿರಬಹುದೇನೋ? ಎಂದು ಸರಕಾರವು ಕೂಡ ನಂಬಿತ್ತು ಅವನ ಅದೊಂ ದು ವಿಶೇಷ ಶಕ್ತಿಯ ಕಾರಣದಿಂದಲೇ ಅದು ಅವನಿಗೆ ಗುಪ್ತ ಪೋಲೀಸ ಖಾತೆಯಲ್ಲಿ ದೊಡ್ಡ ದೊಂದು ನೌಕರಿಯನ್ನು ಕೊಟ್ಟಿದ್ದು ತಂತ್ರ ಮಂತ್ರ, ಮಾಟ ಮೋಡಿ, ಕಾಟದೃಷ್ಟಿಗಳ ಉಪ ದ್ರವನ್ನು ನಿಲ್ಲಿಸಿ ಬಿಡುವದೆಂದರೆ ಆತನಿಗೆ ಕ್ಷಿದ್ಧಿ ಮುರಿದಷ್ಟು ಸುಲಭಕಾರ್ಯ—ಅವನಿಗೆ ಆದ್ದ ರಿಂದ ತಾನೆ ಬಹು ಪ್ರಯತ್ನಮಾಡಿ ಸಾಧ್ಯವಾಗ ದೆ ಹೋದಾಗ ಸರಕಾರವು ಕೇಶವಯ್ಯನನ್ನು ಇದೇ ಕೆಲಸಕ್ಕಾಗಿ ಶ್ರೀರಾಂಪುರಕ್ಕೆ ಕಳುಹಿಸಿ ಕೊಟ್ಟಿತು

ಕೇಶವಯ್ಯ ಊರಿಗೆ ಬಂದ ಮೇಲೆ ಅವ ನ ಸ್ಥಿತಿ ಹೇಗಾದರೂ, ಊರು ಬದುಕಿಕೊಂಡಿ ತು. ಈಗ ದೇವಿಯ ಆಗ್ರಹವೆಲ್ಲ ಕೇಶವ ಯ್ಯನ ಮೇಲೆ ಊರಿನಲ್ಲಿ ದೇವಿಗೆ ನಿಜವಾದ ವಿರೋಧಿ ಅವನೊಬ್ಬನೆ ಅವನನ್ನು ಆಚೆಈಚೆ ಮಾಡಿಬಿಟ್ಟರೆ ಮತ್ತೆ ತನಗೇ ಮೊದಲಿನಂತೆ ಕಾರುಭಾರು ನಡೆಸಲಿಕ್ಕಾಗುತ್ತದೆಂದು ದೇವಿ ಯು ಭಾವಿಸಿ ತನ್ನ ಪೂರಾ ಶಕ್ತಿ ಸಾಮರ್ಥ್ಯ ಗಳನ್ನು ಕೇಶವಯ್ಯನ ಮೇಲೆ ತೋರಿಸ ತೊಡ ಗಿದಳು

ಒಂದು ದಿನ ರಾತ್ರಿ, ಕೇಶವಯ್ಯನ ಮನೆ ಮಾಡಿನ ಮೇಲಿಂದ ಕಲ್ಲುಗಳು ಉರುಳಲಾರಂ ಭಿಸಿದುವು ಬಾಗಿಲು ಬಡೆಯಲಾರಂಭಿಸಿತು ಮನೆ ಸುತ್ತ ಯಾರೋ ಸಳಿಯುತ್ತಿರುವಂತೆ ಕಂಡಿತು ದೇವಿಯ ಉಪದ್ರವ ಎಂದು ಹೇಳ ಲಿಕ್ಕೆ ಬೇರೆ ನಿದರ್ಶನ ಬೇಡವಷ್ಟೆ ಮರುದಿನ ಊರಿನ ಕೆಲವು ಜನರು ಬಂದು ಹೇಳಿದರು— 'ಇದು ದೇವಿಯ ಕಾಟ'' ಎಂದು

'ದೇವಿಯು ಮನುಷ್ಯರಂತೆ, ಅಥವಾ ಅವರಿಗೂ ಕೀಳೆನಿಸಿ ಮನುಷ್ಯರೂಪಿ ದ್ವಿಪಾದ ಹಿಂಸ್ರ ಪಶುಗಳಂತೆ ರಾಗದ್ವೇಶಗಳಿಂದ ಕೂಡಿ ಸುಳ್ಳು ಹೇಳುತ್ತಾಳೆ, ಮೋಸ ಕೊಡುತ್ತಾಳೆ ಕದಿಯುತ್ತಾಳೆ, ಕೊಲ್ಲುತ್ತಾಳೆ, ಹೊಡೆಯು ತ್ತಾಳೆ' ಎಂದು ಜನರು ಹೇಳಿದ ಕತೆಗಳನ್ನು ಕೇಶವಯ್ಯ ಕಿವಿಕೊಟ್ಟು ಕೇಳಿದ ಅವನಿಗೆ ಆಶ್ಚರ್ಯವಾಯಿತು ಆದರೆ ಹೆದರಿಕೆಯಾಗ ಲಿಲ್ಲ ಇಂಥ ಎಷ್ಟೋ ಅನುಭವಗಳು ಅವ ನಿಗೆ ಈ ಮೊದಲು ಅನೇಕ ಬಾರಿ ಆಗಿದ್ದುವು. 'ನೀವು ಯಾರೂ ಹೆದರಬೇಡಿ ನಾನಿದ್ದೇನೆ' ಎಂದು ಬಂದವರಿಗೆ ಅವನು ಸಮಾಧಾನ ಮಾಡಿ ಕಳುಹಿಸಿದನು

ಎರಡನೆ ದಿನ ಗುಡ್ಡಕ್ಕೆ ಬಿಟ್ಟ ದನಗಳು ಮನೆಗೆ ಬರಲಿಲ್ಲ ಮೂರನೆ ದಿನ ಬಾವಿ ನೀರು ರಕ್ತ ಮಿಶ್ರವಾದಂತೆ ಕೆಂಪು ಕೆಂಪಾ ಯಿತು. ನಾಲ್ಕನೆ ದಿನ ಮನುಷ್ಯರ ತಲೆಯೋ ಡುಗಳು ಅಂಗಳದಲ್ಲಿ ಬಿದ್ದಿದ್ದುವು. ಐದನೆ ದಿನ ರಾತ್ರಿ ಗಣಾಂಗಣಗಳು ಮನೆ ಸುತ್ತಲೂ ಕೂಗುವ ಶಬ್ದವಾಯಿತು. ಆರನೆ ದಿನ ಸಾ ಯಂಕಾಲ ಏಳು ಘಂಟೆಯ ಸಮಯಕ್ಕೆ ಬಾವಿ ನೀರು ಸೇದಲಿಕ್ಕೆ ಹೋದ ಆಳು ದೇವಿಯ ರೂ ಪವನ್ನು ಕಂಡು ಅವನು ಹೆದರಿ ಜ್ವರ ಬಂದು ಹಾಸಿಗೆ ಹಿಡಿದ

ಏಂಟನೆ ದಿನ ರಾತ್ರಿ—ಕೇಶವಯ್ಯ ಮಲ ಗಿದ್ದ ಒಂದು ವಿಚಿತ್ರ ಸ್ವರವು ಅವನನ್ನು ನಿದ್ದೆ ಯಿಂದ ಎಚ್ಚರಿಸಿತು 'ಎಲವೋ ಕೇಶವ' ನೀನು ಮಹಾ ಬುದ್ಧಿವಂತನೆಂದು ತಿಳಕೊಂಡಿ ದ್ದಿ. ಎಲ್ಲಾ ಕಡೆಯಲ್ಲಿ ನಡೆದಂತೆ ಇಲ್ಲಿಯೂ ನಡೆವುದೆಂದು ಎಣಿಸಿದ್ದಿ ನನ್ನ ಕಾರಣಿಕ ನಿನ ಗೆ ಗೊತ್ತಾಗಲಿಲ್ಲ ನೋಡು—ಎಚ್ಚರಿಕೆ ಕೊ ಡುತ್ತೇನೆ ಈ ಊರನ್ನು ನಾಳೆಯೇ ಬಿಟ್ಟು ಹೋಗಬೇಕು ಇಲ್ಲವಾದರೆ ಜೋಕೆ ನೋಡು ನಿನ್ನ ಹೆಂಡತಿ ಮನೆಯಲ್ಲಿ ಜ್ವರ ಬಂದು ಮಲ ಗಿದ್ದಾಳೆ ಹೋಗಿ ನೋಡು ನೀನು ಊರು ಬಿಟ್ಟು ಹೋಗದಿದ್ದರೆ ನಾಳೆ ಮನೆ ಸುಟ್ಟು ಸಾಡಡು ನಿನ್ನ ಹೆಂಡತಿ ಖಲಾಸು '

ಮುಂದೆ ಕೇಶವಯ್ಯನಿಗೆ ನಿದ್ದೆ ಬರಲಿಲ್ಲ ಇವು ದೇವಿಯ ಬಾಯಿಯಿಂದ ಬಗತಕ್ಕ ಮಾ ತುಗಳಲ್ಲ ಸ್ವರ ಹೌದು ಎಲ್ಲಿಯೋ ಕೇಳಿ ದಂತಿದೆ ಏನೋ ಇದರಲ್ಲಿ ಒಂದು ರಹಸ್ಯ ವುಂಟು ' ಎಂದು ಹೇಳಿ ಮುಂದಿನ ಉಪಾ ಯ ಆಲೋಚಿಸುವಷ್ಟರಲ್ಲಿ ಬೆಳಗಾಯಿತು

ಕೇಶವಯ್ಯನು ಹೆಂಡತಿ ಮನೆಗೆ ಹೋಗಿ ದ್ದಾನೆಂದು ಮರುದಿನ ಊರಲ್ಲೆಲ್ಲ ಸುದ್ದಿ ಹರ ಡಿತು

ಮಧ್ಯರಾತ್ರಿಯ ಸಮಯ ಅಂಧಕಾರ, ನಿಶಬ್ದ, ಆಗ ಏನೋ ಒಂದ ಕಡ್ಡಿ ಕೀರಿದ ಶಬ್ದ ವಾಯಿತು. ಯಾರೋ ಮನೆಯ ಸುತ್ತ ತಿರು ಗುತ್ತಿರುವ ಹಾಗೆ ತೋರಿತು

ಮನೆಯೊಳಗೆ ಮಲಗಿದ್ದ ಕೇಶವಯ್ಯ ಎದ್ದು ಮೆಲಗೆ ಹೊರಗೆ ಬಂದ ಪುನಃ ಕಡ್ಡಿ ಕೀರಿತು ಅವನು ನಾಲ್ಕು ಸುತ್ತಲೂ ನೋಡಿ ದ ಅಲ್ಲೊಂದು ಸಣ್ಣ ಜ್ಯೋತಿ ಉರಿದು ನೊಂ ದಿಹೋಯಿತು ಆ ಜ್ಯೋತಿಯಲ್ಲಿ ಅವನು ಒಂದು ವಿಚಿತ್ರ ರೂಪವನ್ನು ನೋಡಿದನು—ರಣ ಚಂಡಿಯ ಪ್ರತ್ಯಕ್ಷ ಅವತಾರ ಕೇಶವಯ್ಯ ಒ ಮ್ಮೆಗೆ ಒಂದು ಹಜ್ಜೆ ಹಿಂದೆ ಬಂದ

ಆದರೆ ಹೆಚ್ಚು ಸಮಯ ಕಳೆಯಲಿಲ್ಲ ಜ್ಯೋತಿ ಇದ್ದ ಕಡೆಗೇ ಕೇಶವಯ್ಯ ಮೆಲ್ಲಗೆ ನ ಡೆದುಹೋದ ಸುಮಾರು ಅಷ್ಟು ದೂರಕ್ಕೆ ಹೋದ ಕೈಯಲ್ಲಿ ವಿದ್ಯುಚ್ಛಕ್ತಿಯ ಸೂಟಿಯಿತ್ತು ಅಲ್ಲಿ ಅದರ ಗುಬ್ಬಿ ಒತ್ತಿದ ಸುತ್ತಲೂ ಪ್ರ ಚಂಡ ಪ್ರಕಾಶವು ಹರಿಯಿತು ಎದುರಿಗೆ ನೋಡಿದ ದೇವಿಯು ಕಣ್ಣುಮುಚ್ಚಿ ನಿಂತಿದ್ದಾಳೆ ಅವಳಿಂದ ಆ ದೀಪ ಪ್ರಕಾಶವನ್ನು ನೋಡಲಾ ಗಲಿಲ್ಲ! ಆಶ್ಚರ್ಯ!!

ಕೇಶವಯ್ಯ ಒಂದರೆ ಕ್ಷಣತಡೆದಿದ್ದರೆ ಮನೆ ಎಲ್ಲ ಸುಟ್ಟು ಭಸ್ಮಿಭೂತವಾಗುತ್ತಿತ್ತು ದೇವಿಯ ಒಂದು ಕೈಯಲ್ಲಿ ಎಣ್ಣೆ ಅದ್ದಿದ ವಸ್ತ್ರ ದ ಬತ್ತಿ ಇದ್ದೊಂದರಲ್ಲಿ ಬೆಂಕಿಪೆಟ್ಟಿಗೆ ಇದ್ದಿತು. ಸೂಕ್ಷ್ಮಬುದ್ಧಿಯ ಕೇಶವಯ್ಯನಿಗೆ ದೇವಿಯ ರಹಸ್ಯವು ಆ ಕೂಡಲೇ ಮನಸ್ಸಿಗೆ ಹೊಳೆಯಿತು. ಅವನು ಧೈರ್ಯದಿಂದ ದೇವಿಯ ಕೈ ಹಿಡಿದು ಅವಳನ್ನು ದಟ್ಟಿಸಿ ನೋಡಿದ

ದೇವಿ ಅಂದಳು—'ಕೇಶವಯ್ಯ, ಕ್ಷಮಿಸ ಬೇಕು ಎಲ್ಲಾ ತಪ್ಪಾಯಿತು ಗೇಣುದ್ದ ಹೊಟ್ಟೆ, ಮಾರುದ್ದ ಬಟ್ಟೆಗಾಗಿ ಇಷ್ಟು ಮಾಡಿದೆ ಕ್ಷಮಿಸಬೇಕು ಸರಕಾರದ ರೀತಿ ನೀತಿ ಸಮಾ ಜದ ರೀತಿನೀತಿಗಳಿಂದ ಬದುಕಿ ಉಳಿಯುವದೇ ಕಷ್ಟವಾಯಿತು. ದೊಡ್ಡ ಸಂಸಾರ ಮನೆ ತುಂಬಾ ಮಕ್ಕಳು ಮರಿಗಳು ಅವರಿಗಾಗಿ ಹೀಗೆ ಮಾಡಿದೆ ಕ್ಷಮಿಸಬೇಕು

ಕೇಶವಯ್ಯ ಕಿವಿಕೊಟ್ಟು ದೇವಿಯ ಮಾ ತುಗಳನ್ನು ಕೇಳಿದ, ಒಂದು ನಿಟ್ಟುಸಿರುಬಿಟ್ಟು 'ಇರಲಿ, ಚಿಂತೆ ಇಲ್ಲ. ನನಗೇನೂ ಮಾಡುವ ದಿಲ್ಲ. ನನ್ನೊಂದಿಗೆ ಬಾ ' ಎಂದನು ದೇವಿ ಯೂ ಕೇಶವಯ್ಯನೂ, ಇಬ್ಬರು ಮನೆಯೊಳಗೆ ನಡೆದರು

ಬೆಳಗಾಗಬೇಕಾದರೆ ಕೇಶವಯ್ಯ ದೇವಿ ಯನ್ನು ಬಂಧಿಸಿಟ್ಟಿರುವನೆಂಬ ವರ್ತಮಾನವು ನಾಲ್ಕೈದು ಹರದಾರಿ ದೂರದ ವರೆಗೂ ಹರ ಡಿತು ಎಂಟೂ ಗಂಟೆಯಾಗುವ ಮೊದಲೇ ಸಾವಿರಾರು ಮಂದಿ ಅಲ್ಲಿ ಕೂಡಿದ್ದರು ಕೂಡಿ ದವರು 'ದೇವಿಯ ದರ್ಶನ'ವಾಗಬೇಕೆಂದು ಕೇಶವಯ್ಯನನ್ನು ಒತ್ತಾಯ ಮಾಡಿದರು. ದೇವಿ ಯು ಕೋಣೆಯಿಂದ ಹೊರಗೆ ಬಂದಳು ಅವ ಳನ್ನು ನೋಡಿ ಎಲ್ಲರು ಒಮ್ಮೆಗೆ ಕಣ್ಣುಮುಚ್ಚಿ ಕೊಂಡರು 'ಅಮ್ಮಾ' ದೇವಿ! ಕಾಪಾಡು!'' ಎಂದರು

ಕೇಶವಯ್ಯ ದೇವಿಯ ಎದುರಿಗೆ ಬಂದು ತಲೆಯಿಂದ ಕಾಲಿನ ವರೆಗಿದ್ದ ಉಡಿಗೆ ತೊಡಿಗೆ ಗಳನ್ನು ಒಂದೊಂದಾಗಿ ತೆಗೆದ. ಕೆಳಗಿಟ್ಟನು ದೇವಿಯು ಪಿಟ್ಟೆಂದು ಮಾತನಾಡಲಿಲ್ಲ ಜನರಿ ಗಾದರೊ ಅವಳ ಎದುರು ಬರಲಿಕ್ಕೆ ಸಹ ಹೆದ ರಿಕೆ, ಆದರೆ ಕೇಶವಯ್ಯ ಅವಳ ಮೈ ಮುಟ್ಟ ಲಿಕ್ಕೆ ಸಹಹೆದರುವದಿಲ್ಲ ಎಲ್ಲರೂ ಆಶ್ಚರ್ಯ ಭರಿತರಾದರು. ಕೇಶವಯ್ಯನಿಗೆ ಏನೋ ಒಂ ದು ಸಿದ್ಧಿಯಾಗಿರುವದು ನಿಜವೆಂದರು

ಐದು ಮಿನುಟು ತಡೆದು—ಜನರು ಕಣ್ತೆ ರೆದು ದೇವಿಯನ್ನು ಪುನಃ ನೋಡಿದರು ದೇವಿ ಯು ದೇವಿ ಅಲ್ಲ ದೇವಿಯ ರೂಪವನ್ನು ತಾಳಿ ದ ದೇವಿಯ ಪಾತ್ರಿ ದಾದುಪೂಜಾರಿ ಎಲ್ಲರೂ ಬೆರಗುಗೊಂಡು ಓಹೋ! ಕಳ್ಳ ಪಾತ್ರಿ ಕಳ್ಳ ಪಾತ್ರಿ ' ಎಂದರು ಅನೇಕರು ದಾದುಪೂಜಾರಿ ಯನ್ನು ಹೊಡೆದ ಬಡೆದ ಕೊಲ್ಲಲು ಸಿದ್ಧರಾ ದರು

ಕೇಶವಯ್ಯ ಬೇ ಬೇ ಹಾಗೆನ್ನಕೂಡ ದ ಹಾಗೆ ಮಾಡಿದರೆ ದೇವಿ ಕಳ್ಳ ಪಾತ್ರಿಯಾಗಿ ಬಂದ ಪ್ರಪಂಚದ ಅಂತರಂಗದ ರೂಪವನ್ನು ಬಹಿರಂಗ ಮಾಡಿದ್ದಾಳೆ ದೇವ ರ ಕೈಯಲ್ಲಿ ಅವನ ಮೇಲೆ ಕೃಪೆಮಾಡಬೇ ಕದ ಎಂದ

ಜನರು ಒಬ್ಬರೊಬ್ಬರ ಮುಖ ನೋಡ ತೊಡಗಿದರು

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟೆಂಟ್ಲಿನ ಕಲೆ ವಗ್ಯೆರೆ ಯಾವ ದೋಷ ಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜು ಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ ಎಕ್ಸ್ಪರ್ಟ ಕೆಲಸಗಾರರಿಂದ ಎಲ್ಲರ ಮನ ಸ್ಸನ್ನು ಆಕರ್ಶಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿ ದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,

ಸರಾಫ ಮತ್ತು ಮೆಟಲ್ ಮರ್ಚೆಂಟ್,

ಬಡಗುಪೇಟೆ, ಉಡುಪಿ

ಶ್ರೀಮತಿ ಶಾರದಾ ದೇವಿ ಯವರಿಂದ

ಸಮಾಜದ್ರೋಹಿ ವಂಚಕರ ಮೇಲ್ಮೈ

ವಂಚಿತರಾದರೂ ವಂಚಿಸಲಾರರು

[illegible]

ಅಷ್ಟೇ ಅನ್ನಿಸಿ, ಫ್ರಾನ್ಸ್ ಇಟಾಲಿಯನ್ ನದ ಮೇಲೆ, ಸ್ವಿಟ್ಜರ್‌ಲೆಂಡ್, ಕಾಲುಹಾರಿ, ಸಿಗರೇಟುಗಳನ್ನು ಊದಿ ಮಾಡುವವರೇ. ಆತನ ಕೆಲಸ! ಹಲವು ವೇಳೆ ಧನಿಕ ಸ್ತ್ರೀಯನ್ನು ಚಲಚ್ಚಿತ್ರ ಮಂದಿರಕ್ಕೆ ಕರೆದೊಯ್ಯನು. ಉದ್ಯಾನದಲ್ಲಿ ಮಾತ್ನಾಡುತ್ತ ಅವರು ಕಣಸಾಟವಾಡುತ್ತಿದ್ದರು; ವಿಹಾರಾರ್ಥವಾಗಿ ಎಲ್ಲೆಲ್ಲೂ ತಿರುಗುತ್ತಿದ್ದರು. ಅವನು ಐರ್ಲೆಂಡಿನಲ್ಲಿ ವಿಶೇಷವಾದ ಆಸ್ತಿಯುಳ್ಳ ಮಹಾ ಪುರುಷ! ಇಬ್ಬರಿಗೂ ಪ್ರೇಮವು ಬೆಳೆಯಿತು; ಮದುವೆಯೂ ಯಿತು. ಈ ಸ್ತ್ರೀಯ ಮೊದಲ ಗಂಡನು ಮೃತನಾದ ನಂತರ.

ಮದುವೆಯಾದ ಹಲವು ದಿನಗಳಲ್ಲೇ ಪತ್ನಿಯು ಹೇಳಿದಳು. 'ಇನ್ನು ನಾವು ಊರಿಗೆ ಹೋಗಿ ಸ್ವಂತ ಆಸ್ತಿಯಲ್ಲೇ ಜೀವನ ನಡೆಸೋಣ.'

'ಹಾ; ಅದಾಗದು!' ಎಂದನು ಪತಿ. 'ನನ್ನ ಆಸ್ತಿಯು ನನ್ನ ದಾಯಾದಿಗಳ ಕೈಸಳಲ್ಲಿ ಬಿದ್ದಿದೆ. ಅದನ್ನು ನಾವು ವಶಪಡಿಸಿಕೊಂಡ ನಂತರವೇ ಊರಿಗೆ ಹೋಗೋಣ.' ಪತ್ನಿಯನ್ನು ಸಮಾಧಾನಗೊಳಿಸಿದ ಪತಿ!

ದಿನಗಳು ಹಲವು ಕಳೆದರೂ ಪತಿಗೆ ಊರಿಗೆ ತೆರಳುವ ಯೋಚನೆಯೇ ಇಲ್ಲ. ಪತ್ನಿಯು ಮನೆಯಲ್ಲಿ ಇಷ್ಟಷ್ಟು ದಿನಗಳೂ ಓದು ಕುರುಡು ಕವಡಿಯನ್ನಾದರೂ ಬಿಚ್ಚಲಿಲ್ಲ ಪತಿ. ಪುನಃ ಕೇಳಿದಳು ಪತ್ನಿ. 'ನಮ್ಮ ಆ ಆಸ್ತಿಯ ಗತಿ ಯೇನು?'

ಆತನ ಮೊಗವು ವಿಹ್ವಲವಾಯಿತು. 'ಡಾರ್ಲಿಂಗ್! ಏನು ಹೇಳಲಿ? ಆ ಆಸ್ತಿಯನ್ನು ಜೋಪಾನವಾಗಿಡಲು ಇದ್ದುದೆಲ್ಲ ಹಣವನ್ನೂ ಕಳಕೊಂಡೆನು. ಇನ್ನೂ ಹದಿನೈದು ಸಾವಿರ ಪವನುಗಳು ಸಿಕ್ಕಿದಲ್ಲಿ ಅದನ್ನು ಬಿಡಿಸುವೆನು. ಆ ಆಸ್ತಿಯು ಸಾವಿರ ಕೊಡುವ ಹಣದ ನೂರರಷ್ಟು ಬೆಲೆಯುಳ್ಳದಾಗಿದೆ. ಏನೇ; ಕೊಡುವೆಯಾ? ಆ ಆಸ್ತಿಯನ್ನು ಬಿಡಿಸಿಕೊಂಡ ನಂತರ ಎಷ್ಟು ಹೃದಯದ ಹಾನಿಯಾದ ನೀನು ಅದಕ್ಕೂ ಒಡತಿಯಾಗುವಿ.'

ಮೊದಮೊದಲು ಒಪ್ಪಲಿಲ್ಲ. ಆಕೆ ಕೊನೆಗೆ ಒಪ್ಪಿ, 15000 ಪವನುಗಳನ್ನು 'ಐರ್ಲೆಂಡಿನ ಧನವಾನ'ನಿಗೆ ಕೊಟ್ಟಳು. ಆಸ್ತಿಯನ್ನು ಬಿಡಿಸಲು ಪತಿ ತೆರಳಿದ. ನಂತರ ಆತನ ಪತ್ತೆಯೇ ಇಲ್ಲ. ಆ ಸ್ತ್ರೀ ಪೋಲೀಸರಿಗೆ ದೂರು ಕೊಟ್ಟಳು. ಸ್ಕಾಟ್‌ಲೆಂಡ್ ಯಾರ್ಡಿನ ಅಧಿಕಾರಿಗಳು ಆತನನ್ನು ಹಿಡಿದರು. ಆತನು ಮೊದಲನ್ನೋ ಬಾರಿ ಹೀಗೆಯೇ ವಂಚಿಸಿದ್ದ ನಂತೆ.

ಆದರೆ ಆತನು ಹಣವನ್ನು ತೆಗೆದುಕೊಂಡು ಕಾಣೆಯಾದನೇಕೆ? ಆ ಹಣದಿಂದಲೇ ಹೊಸದೊಂದು ಆಸ್ತಿಯನ್ನು ಪಡಕೊಳ್ಳಬಹುದಿತ್ತಲ್ಲವೇ? ನಂತರ ತನ್ನ ನವವಧುವಿನೊಂದಿಗೆ ಸಂಸಾರ ಮಾಡಿಕೊಂಡಿದ್ದು, ಓರ್ವ ಧನಿಕ ಸ್ತ್ರೀಯ ಗಂಡನೆಂಬ ಅಭಿಮಾನದಿಂದ ಬಾಳಬಹುದಿತ್ತಲ್ಲವೇ?

'ನಿಮಗೆ ಆತನ ಪರಿಚಯವಿಲ್ಲ.' ಸ್ಕಾಟ್‌ಲೆಂಡ್ ಯಾರ್ಡಿನ ಅಧಿಕಾರಿಯೆಂದು 'ಆತನು ಆಕೆಯನ್ನು ವಿವಾಹವಾಗಿ, ಒಂದು ಆಸ್ತಿಯನ್ನು ಕೊಂಡುಕೊಂಡು, (ಯಾಕೆಂದರೆ ಆತನು ಆಕೆಗೆ ತಿಳಿಸಿದ ಐರ್ಲೆಂಡಿನ ಆಸ್ತಿಯ ವಿಚಾರವೆಲ್ಲವೂ ಸುಳ್ಳು!) ಅದರಲ್ಲೇ ವಾಸಿಸಿದ್ದನಾದರೆ ಅದು ಅವನಿಗೆ ಜೇಲಿನಂತಾಗುತ್ತಿತ್ತು. ಏನ್ನು [illegible] ಅಲ್ಲಿನ ಆಕೆಯು ಆತನಿಗಿಂತ ಇಪ್ಪತ್ತು ವರ್ಷಗಳಿಗೆ ಹಿರಿಯಳಾಗಿದ್ದಳು.

ಇಂತಹ ವಂಚಕರ ಮನೋವೃತ್ತಿಯನ್ನು ಮೇಲಿನ ಚಿತ್ರವು ಚೆನ್ನಾಗಿ ಬಣ್ಣಿಸುತ್ತದೆ.

ಅವರು ತಮ್ಮ ಬಲಿಗಳನ್ನು ಬಹಳ ಜಾಗ್ರತೆಯಿಂದ ಆರಿಸುತ್ತಾರೆ. ಕಿರೀಟಧಾರಣೋತ್ಸವದ ನೆವದಿಂದ ಇಂತಹರು ಅನೇಕರು ತುಂಬಿಗದೆಂತೆ ಇಂಗ್ಲಾಂಡಿನೊಳಿದ್ದರು. ಯಾಕೆಂದರೆ ಕಿರೀಟಧಾರಣೋತ್ಸವಕ್ಕಾಗಿ ಇಂಗ್ಲಾಂಡಿಗೆ ದಶದಿಕ್ಕುಗಳಿಂದಲೂ ಹಣವುಳ್ಳ ಸ್ತ್ರೀಯರು ಒಂದು ಹೋಟೆಲುಗಳಲ್ಲಾಗಲೀ, ರೆಸ್ಟೋರೆಂಟುಗಳಲ್ಲಾಗಲೀ ಇರುತ್ತಾರೆಂದು ತಿಳಿದುದರಿಂದ.

ಯೂರೋಪಿನ ಇತರ ದೇಶಗಳಲ್ಲಿ ನಡೆಸುವಷ್ಟು ಕಾರ್ಯಕಲಾಪಗಳನ್ನು ಅವರು ಇಂಗ್ಲಾಂಡಿನಲ್ಲಿ ನಡೆಸಲಾರರು. ಹೊರಗಣ ಪ್ರೇಕ್ಷಕರಲ್ಲಾದರೆ ಅವರಿಗೆ ಪೋಲೀಸರ ಭಯವು ಇರುವುದಿಲ್ಲ. ಪೋಲೀಸರು ಅವರನ್ನು ಹಿಡಿಯುವ ಸಾಹಸಕ್ಕೇನೇ ಹೋಗುವುದಿಲ್ಲ. ರಾಜಕೀಯ ಮಹಾಶಯರ ಪತ್ನಿಗೆ ಇಂತಹ ಧೈರ್ಯವು ಬಂಧದಲ್ಲಿ ಯಾರಾದರೂ ದೊಡ್ಡ ಅಧಿಕಾರಿಗಳ ಹೆಂಗಸರ ಮೇಲೆ ತಮ್ಮ ಬಲೆಯನ್ನು ಬೀಸಿದಲ್ಲಿ ಮಾತ್ರ ಪೋಲೀಸರವರು ಬೆಂಬತ್ತುವರಲ್ಲದೆ, ಅನ್ಯಥಾ ಇಲ್ಲ. ಆದರೆ ಇಂಗ್ಲಾಂಡಿನಲ್ಲಿ ಸ್ಕಾಟ್‌ಲೆಂಡ್ ಯಾರ್ಡಿನಂತಹ ವಿಚಕ್ಷಣ ಗುಪ್ತ ಪೋಲೀಸರುಗಳ ಸಂಸ್ಥೆಯಿರುವಲ್ಲಿ ಈ ವಂಚಕರ ವಂಚನೆಯು ನಡೆಯದು. ಆದುದರಿಂದಾಗಿಯೇ ಇಂತಹ ವಂಚಕರ ಎಷ್ಟೋ ಯತ್ನಗಳು ವಿಫಲವಾಗಿವೆ.

ಇಂತಹ ವಂಚಕರನೇಕರ ಹೆಗಲ ಮೇಲೆ ಕೈಯಿಟ್ಟು, ಪ್ಯಾರೀಸಿನ ಗುಪ್ತ ಪೋಲೀಸರು ಅರಿವಿಲ್ಲದೇ ಅವರನ್ನು ಬಿಟ್ಟಿರುತ್ತಾರೆ. ಅವರ ಲೈಫ್ಯ್ಯಸ್ನು ಹಂಗೇರಿಯ 'ಜಮೀನುದಾರ!' ಅವನು ತನ್ನ ಮಾತುಗಳಿಂದಲೇ ಮರುಳುಗೊಳಿಸಿ, ಪ್ಯಾರಿಸ್, ದೋವಿಲ್ (ಪ್ಯಾರಿಸ್ ಮತ್ತು ಕಾನ್ಸ್‌ನಲ್ಲಿ ಪ್ರೇಮವಿಕ್ರಾಮ) ಕಾತರ ಸ್ತ್ರೀಯರನ್ನು ಮೋಹಗೊಳಿಸಿ, ಸಾವಿರಾರು ಡಾಲರುಗಳನ್ನು ಅರ್ಜಿಸಿದ ಕಿಲಾಡಿ. ಅವನು ಹಲವು ಸಲ ಯಿಂದೀಚೆಗೆ ಆ ವ್ಯಕ್ತಿಯನ್ನು ಬಿಟ್ಟು, ಪ್ಯಾರಿಸಿನಲ್ಲಿ ಆಭರಣಗಳನ್ನು ಕದ್ದ ಗುಂಪಿನೊಂದಿಗೆ ಸೇರಿದ. ಪ್ಯಾರಿಸಿನ ಪತ್ತೇದಾರರು ಸಂಶಯದಿಂದ ಆತನನ್ನು ಹಿಡಿದರು. ಆದರೆ ಅವನ ಮೇಲೆ ಕದ್ದ ಆಭರಣಗಳಾವುವೂ ಸಿಗಲಿಲ್ಲ. ಅದು ಅವನ ತಪ್ಪಲ್ಲ. ಯಾಕೆಂದರೆ ಅವನು ಸೇರಿದ ಚೋರರ ತಂಡವೇ ಆತನನ್ನು ಮೋಸಗೊಳಿಸಿತ್ತು. ಇಂಗ್ಲಾಂಡಿನಲ್ಲಾದರೆ ಆತನ ಸಂಪೇಪಾದನೆಯ ಪ್ರವೃತ್ತಿಯೇ ಸಾಕಿತ್ತು. ಪೋಲೀಸ್ ರಿಕಾರ್ಡಿನಲ್ಲಿ ಆತನ ಹೆಸರನ್ನು ಬರೆದು, ಅದರೆದುರಿಗೊಂದು ಕರಿಕಾಯಿಯ ಗುರುತು ಮಾಡಿದಲು ಅಂದರೆ ಕಾಮಕಾತರ ಸ್ತ್ರೀಯರನ್ನು ಬಲೆಗೆಳೆವ ಒಂದು ಜೇಡನಾದರೂ ತನ್ನ ಬಲೆ ಹರಡುವುದನ್ನು ನಿಲ್ಲಿಸುವಂತಾಗುತ್ತಿತ್ತು.

ಇಷ್ಟೇ ಅಲ್ಲ ಇನ್ನೂ ಹಲವು ತರದ ಸುಳಿಗೆಗಳಿವೆ.

ರಿವೇರಾದಲ್ಲಿ ಧನಿಕಳಾದ, ಬಹಳ ಬಲಹೀನ ಹೃದಯದ ಓರ್ವ ಸ್ಥೂಲ ವಿಧವೆಯಿರುವುದನ್ನು ಕಂಡು ಹಿಡಿದ ಅಮೇರಿಕೆಯ ವಂಚಕ! ಆಕೆಯ ಸಹವಾಸವನ್ನು ಸಂಪಾದಿಸಿದ. ಆಕೆಯು ಮತ್ತೆ ಹೆಚ್ಚು ದಿನ ಬಾಳಲಿಲ್ಲ. ಸಾಯುವಾಗ ಉಯಿಲಿನಲ್ಲಿ ಹಣವೆಲ್ಲವನ್ನು ತನ್ನಹೃದಯದಲ್ಲಿ ಪ್ರೇಮ ಕೃಪೆಯನ್ನುಂಟುಮಾಡಿದ ಆ ಮಹಾಶಯನಿಗೇ ಬಿಟ್ಟುಕೊಟ್ಟಳು. ಆದರೆ ಆ ಉದ್ದ ಮುಸುಡಿನ, ಕಾಪಿಯ ವರ್ಣವುಳ್ಳ ಚರ್ಮದ ಅಸ್ಥಿಪಂಜರದಂತಿದ್ದ ಅಮೇರಿಕೆಯ ಮರಿಯನ್ನು ಕಂಡು, ಆಕೆಯ ವಕೀಲನಿಗೆ ಸಂದೇಹವಾಯಿತು. 'ಬರೇ ಕೆಲವು ದಿನಗಳ ಕೆಲಸಕ್ಕಾಗಿ ನಿನಗೆ ಇಷ್ಟು ಹಣವನ್ನು ಆಕೆಯು ಬರೆದಿಟ್ಟುದನ್ನು ನಾನು ನಂಬಲಾರೆ.' ಕೂಡಲೆ ಉತ್ತರ ಬಂತು. 'ಆ ಹಲವು ದಿನಗಳ ಕಾರ್ಯದಿಂದಲೇ ನನ್ನ ಮೇಲಾದ ಪರಿಣಾಮವನ್ನು ಕಂಡಿರುವೆಯಾ?'

ಆಕೆಯ ಮರಣದ ಸಂಬಂಧವಾದ ಪೋಲೀಸು ರಿಪೋರ್ಟು ವಕೀಲನ ಬಳಿಯಲ್ಲಿತ್ತು. ಡಾಕ್ಟರರ 'ಸರ್ಟಿಫಿಕೇಟ್'ನಲ್ಲಿ, 'ಪ್ರಣಯದ ವಿಚಾರ ತಿಳಿದಾಗ ಆಕೆಯ ಹೃದಯವು ದುರ್ಬಲವಾಗಿತ್ತು. ಯಾವುದೋ ಕಾರಣದಿಂದ ಉಕ್ಕೇರುತ್ತಿತ್ತು. ದುರ್ಬಲ ಹೃದಯದಲ್ಲಿ ಜಾಗ್ರತ ಭಾವನೆಗಳ ಉಕ್ಕೇರುವಿಕೆಯು ಹೃದಯವನ್ನು ಛೇದಿಸಿದುದರಿಂದ, ಆಕೆಯು ಮೃತ್ಯುವಾಗಿದೆ.' ಎಂದಿತ್ತು. ಆದರೆ ಆಕೆಯ ಪ್ರಣಯ ಆಕೆಯನ್ನು ಬೇಕೆಂದೇ ಕೊಂದುದೆಂಬುದಕ್ಕೆ ಇನ್ನೇ ಪುರಾವೆಗಳು ಸಾಕಾಗಿರಲಿಲ್ಲ. ಎಲ್ಲಾದರೂ ಆ ವಿಧವೆ ಮತ್ತು ಬುದ್ಧಿಮತಿಯಾಗಿ ತನ್ನ ಉಯಿಲಿನ ವಿಷಯ ಆತನಿಗೆ ಮೊದಲೇ ತಿಳಿಸಿದುದಾಗಿದ್ದರೆ, ಮರುದಿನದ ಪ್ರಥಮ ಕೆಲಸವು ಆಕೆಯ ಶವದ ಮೃತ್ತಿಕಾ ಸಂಸ್ಕರಣವೇ ಆಗಬಹುದಿತ್ತು!

ಇನ್ನೊರ್ವನು 'ಪ್ಯಾಸನೇಬಲ್' ರೀತಿಯಲ್ಲಿ ಹೋಟೆಲಿಗೋ ಯಾ ಕ್ಲಬ್ಬುಗಳಿಗೋ ತೆರಳಿ, ತನ್ನ ಬಲೆಯಲ್ಲಿ ಸುಲಭವಾಗಿ ಬೀಳತಕ್ಕ ಮೀನುಗಳನ್ನು ಅರಸುತ್ತಾನೆ. ಯಾರೂ ಇಲ್ಲದ ಮೂಲೆಯ ಮೇಜಿನ ಬಳಿ ಯಾರಾದರೂ ತರುಣಿಯು ಕುಳಿತುದನ್ನು ಕಂಡಲ್ಲಿ, ಅಲ್ಲಿಗೇನಾಗುವನು. ಬಹುಮಾನ ಸೂಚಕವಾಗಿ ತಮ್ಮ 'ಹೆಟ್ಟಿ'ನ್ನು ತೆಗೆದು; ವಂದಿಸುವನು. ನಂತರ ಒಂದು ಕೋಕ್‌ಟೈಲಿನ ಪೇಲಿ ಅವರಿಗೆ ಸ್ನೇಹವಾಗುವುದು. ನಂತರ ಆ ನಾಚಿಕೆ ಈ ಮಾತುಗಳನ್ನು ಮಾತನಾಡಿ, ಹಲವು ಸಮಯ ಕಳೆದು ಇಬ್ಬರೂ ಹೋಟೆಲಿನ ಹೊರಗೆ ಕಾಲಿಡುತ್ತಾರೆ. 'ಆತನು' ಒಂದು ಬಾಡಿಗೆಯ 'ಟ್ಯಾಕ್ಸಿ'ಯನ್ನು ಕರೆಯುತ್ತಾನೆ. 'ಬೇಡ, ಸಮಯವಾಯಿತು' ಎನ್ನುತ್ತಾಳೆ. ಆದರೆ ಕೇಳದೇ, 'ಆತನು' ಆಕೆಯನ್ನು 'ಟ್ಯಾಕ್ಸಿ'ಯಲ್ಲಿ ಕುಳ್ಳಿರಿಸಿ, ತನ್ನ ಮಾಳಿಗೆಗೆ ಕರೆದೊಯ್ಯುತ್ತಾನೆ.

ಒಮ್ಮೆ ಆಕೆಯು ಕೋಣೆಯೊಳಗೆ ಕಾಲಿಟ್ಟಳೆಂದರೆ... 'ಆತನ' ವಿಚಾರ ಸರಣಿಯು ಸ್ಪಷ್ಟವಾಗುತ್ತದೆ. ಆಕೆಯು ಒಳ್ಳೆಯ ಮಾತುಗಳಿಂದ ಹಣವನ್ನು ಬಿಚ್ಚುವಳೋ? ಯಾ ರಿವಾಲ್ವರು ತೋರಿಸಬೇಕಾದೀತೋ? ನಂತರವೂ ಕೇಳದಿದ್ದಲ್ಲಿ ಕೊಲೆಮಾಡಬೇಕಾಗುವುದೋ?... ಆಕೆಯು ಬಲಿಯಲ್ಲಿ ಏನೂ ಕಾಸಿಲ್ಲವಾದಲ್ಲಿ, ವ್ಯರ್ಥ ಆಕೆಯ ಕೊಲೆ ಮಾಡುವುದೇಕೆ?

ನಂತರ ಅವರ ಪ್ರಣಯಲೀಲೆಯಾರಂಭವಾಗುತ್ತದೆ. ಆಕೆಯು 'ಬಾ' ಎನ್ನುತ್ತಾಳೆ; ಆತನು 'ಬರು'ತ್ತಾನೆ. ಪ್ರೇಮಸೂಚಕವಾಗಿ ಆತನು ಆಕೆಗೆ ಹೊಗೆಬತ್ತಿಯನ್ನಾಗಲೀ ಒಂದು ಗ್ಲಾಸ್ ವಿಸ್ಕಿಯನ್ನಾಗಲೀ ಕೊಡುತ್ತಾನೆ. ಆಕೆಯು ಸ್ವೀಕರಿಸುತ್ತಾಳೆ. ಆಗ ಆಕೆಗೆ ಯಾವುದರ ಜ್ಞಾನವೂ ಇರುವುದಿಲ್ಲ. ಆಕೆಯು ಮಾರನ ವೃಷ್ಟಶರದ ಆಘಾತಕ್ಕೆ ನೊಂದು, ಬಸವಳಿದ ಬಾಲೆ! ಪ್ರೇಮಿಯ ಪ್ರೇಮೋಪಹಾರದ ಸೇವನೆಯಿಂದ ಆ ಪ್ರಣಯದ ಜ್ಞಾನವೂ ನಶಿಸಿ ಹೋಗುತ್ತದೆ. ಹಲವೇ ಕ್ಷಣಗಳಲ್ಲಿ ಆಕೆಯು ಜ್ಞಾನ ಕಳೆದ್ಕೊಂಡಾಗ ಬೀಳುತ್ತಾಳೆ. ಯಾಕೆಂ 'ಆತನ' ಉಪಹಾರದಲ್ಲಿ ಅಫೀಮಿನ ಅಂಶವಿರುತ್ತದೆ.

ಮತ್ತೆ ಜ್ಞಾನವಾಗುವಾಗ ಬೆಳಗ್ಗೆ ಬೆಳಗಾಗಿದೆ. ಆ ಪ್ರಣಯಿಯ ಪತ್ತೆಯಿಲ್ಲ. ಅಲ್ಲದೇ ಮೈಮೇಲಿದ್ದ ಆಭರಣಗಳೂ ಮಾಯವಾಗಿ ಲವೂ ಮಾಯವಾಗಿವೆ. ಆಕೆಯು ಹೋಟೆಲು ಮನೇಜರನೊಡನೆ ಆ ಸಾಧುವಿಯ ಪತ್ತೆ ಕೇಳುತ್ತಾಳೆ. 'ಆತನು ಪ್ರಾತಃಕಾಲ ನಾಲ್ಕು ಗಂಟೆಗೆ ಆತನ ಕೋಣೆಯನ್ನು ಖಾಲಿಮಾಡಿ, ಊರಿಗೆ ಹೋಗಿದ್ದಾನೆ.' ಎಂಬ ಉತ್ತರ ದೊರಕುತ್ತದೆ. ಊರಾವುದು? ದೇವರೇ ಬಲ್ಲ! ಆಗ ಹೋದುದು ಹೋಗಲಿ ಎಂದು ಕಣ್ಮುಚ್ಚಿ, ಕುಳಿತಿರುವ ಒಂದೇ ದಾರಿಯಲ್ಲದೆ ಬೇರೆ ದಾರಿ ಇಲ್ಲ. ಪೋಲೀಸರಿಗೆ ತಿಳಿಸೋಣವೆಂದರೆ ಮೊದಲೊಂದು ಪ್ರಶ್ನೆಯೇಳುತ್ತದೆ? 'ನೀನೇಕೆ ಅಷ್ಟು ರಾತ್ರಿ ಅವನ ಮಾಳಿಗೆಗೆ ಹೋಗಿದ್ದೆ?'

ಬ್ರಿಟಿಷ್ ಪೋಲೀಸರಿಗಿಂತ ಈ ಕುರಿತು ಹೆಚ್ಚು ಅನುಭವವು ಯುರೋಪಿನ ಇತರ ದೇಶಗಳ ಪೋಲೀಸರಿಗಿದೆ. ಈರೀತಿ ಸ್ತ್ರೀಯರನ್ನು ಹಿಂಸಿಸುವ ಒಬ್ಬ ವಂಚಕನನ್ನು ಹಿಡಿದರೂ ಕೂಡ ಅವನನ್ನು ಶಿಕ್ಷೆಗೆ ಗುರಿಮಾಡುವಷ್ಟು ಸಾಕ್ಷ್ಯಗಳು ದೊರಕುವುದೇ ಇಲ್ಲ. ಕಾರಣವು ಸುಲಭವಾಗಿದೆ: ತಾವು ಆ ರೀತಿ ಆಚರಿಸಿದರೆ ಯಾವ ಸ್ತ್ರೀಯು [illegible] ಎಂಬುದನ್ನು ಅವರು ತಿಳಿದಿರುತ್ತಾರೆ. ಅವರೆದುರು ಸಾಕ್ಷ್ಯಗಳು ಬರಲಾರವು [illegible]

ಸ್ತ್ರೀ ನರ್ವಸ್ ರೋಗಗಳ ಕಳವಳ ಕರೆಸಿಕೊಂಡು

ರೀಯು ಸಂಕಟಪಟ್ಟಳು

ಅಜೀರ್ಣದ ಪರಿಣಾಮದಿಂದ

ಕ್ರುಶನ್ ಲವಣದ ಸೇವನೆಯಿಂದ ಮೂರು ವಾರಗಳೊಳಗೆ ಗುಣಹೊಂದಿದಳು

ಓರ್ವ ಸ್ತ್ರೀಯು ಹೀಗೆಂದು ಬರೆಯುತ್ತಿದ್ದಾಳೆ:— 'ಕ್ರುಶನ್ ಲವಣಗಳನ್ನು ಸೇವಿಸುವ ಮೊದಲು, ನನ್ನಲ್ಲಿ ಅಜೀರ್ಣವೂ, ತಲೆತಿರುಗುವಿಕೆಯೂ, ಅಶಕ್ತತೆ ಇವೆ ಮೊದಲಾದ ಸಂಕಟಗಳನ್ನು ನಾನು ಮೂರು ವರ್ಷಗಳ ಸಮಯ ಅನುಭವಿಸಿದ್ದೆನು.

ಕ್ರುಶನ್ ಲವಣಗಳನ್ನು ಉಪಯೋಗಿಸಿದುದರಿಂದ ನನ್ನಲ್ಲಿ ಅತ್ಯಂತ ಸುಖಭಾವವು ಉಂಟಾಗುತ್ತದೆ. ಸಾಧಾರಣ ಒಂದೂವರೆ ವರ್ಷಗಳಿಂದ ನಾನದನ್ನು ತೆಗೆದುಕೊಳ್ಳುತ್ತಿದ್ದೇನೆ. ಅದರಿಂದ ನನ್ನ ಆರೋಗ್ಯವು ಉತ್ತಮಗೊಂಡಿರುತ್ತದೆ. ಬರಿ ಮೂರು ವಾರಗಳ ಕ್ರುಶನ್ ಸೇವನೆಯಿಂದ ನನ್ನಲ್ಲಿದ್ದ ತಲೆತಿರುಗುವಿಕೆಯು ಮಾಯವಾಯಿತು. ಈಗ ನನ್ನಲ್ಲಿ ನವಚೇತನವೂ, ಉತ್ಸಾಹವೂ ಉಂಟಾಗಿರುತ್ತದೆ. ಕ್ರುಶನ್ ಲವಣಗಳಿಂದ, ಆರೋಗ್ಯವಂತರೂ, ಅನರೂಪವಂತರೂ, ಚಟುವಟಿಕೆಭರಿತರೂ, ಉತ್ಸಾಹವಂತರೂ, ನವಚೇತನ ಹೊಂದಿದವರೂ ಆಗುವಿರಿ.

ಟಿ. ಎಂ.

ನಿಮ್ಮ ಹೊಟ್ಟೆಯನ್ನು ಸ್ವಚ್ಛವಾಗಿಡಲು, ಅದರ ಅಂಗಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು, ಕ್ರುಶನ್ ಒಂದು ನೈಸರ್ಗಿಕ ವಿಧಾನವು. ಅದರಲ್ಲಿರುವ ಆರು ಲವಣಗಳು ನಿಮ್ಮ ಪಿತ್ತಕೋಶ ಮತ್ತು ಮೂತ್ರಪಿಂಡಗಳು ಸರಿಯಾದ ರೀತಿಯಲ್ಲಿ ಕಾರ್ಯಸುವಂತೆ ಮಾಡುತ್ತವೆ. ಯಾವ ಕಶ್ಮಲಗಳು ನಿಮ್ಮ ಉದರದೊಳಗಿದ್ದು ನಿಮ್ಮಲ್ಲಿ ಅನೇಕ ಸಂಕಟಗಳನ್ನು ಉಂಟುಮಾಡುತ್ತದೊ, ಆ ಕಶ್ಮಲಗಳನ್ನು ಹೊರದೂಡಿ, ನಿಮ್ಮ ಉದರವನ್ನು ನಿರ್ಮಲವಾಗಿಡುತ್ತದೆ.

ಕ್ರುಶನ್ ಲವಣಗಳು ನಿಮ್ಮ ರಕ್ತಕ್ಕೆ ಹೊಸ ಹುರುಪನ್ನು ಕೊಡುತ್ತದೆ. ಅದರಿಂದ ನಿಮ್ಮ ಪ್ರಕೃತಿಯೊಂದು ಆರೋಗ್ಯವು ನವಚೇತನಭರಿತವಾಗುತ್ತದೆ.

ಕ್ರುಶನ್ ಲವಣಗಳು, ಎಲ್ಲಾ ದವಾಖಾನೆಗಳಲ್ಲಿ, ಸ್ಟೋರುಗಳಲ್ಲಿ ಮತ್ತು ಬಜಾರುಗಳಲ್ಲಿ ದೊರಕುತ್ತದೆ.

... ಎಂಬ ವೃದ್ಧನನ್ನು ಕುರಿತು ನೀವು ಕೇಳಿರಬಹುದು; ಅವನ ಚಿತ್ರಪಟಗಳನ್ನು ನೋಡಿರಬಹುದು; ಅವನ ವಿಷಯವಾಗಿ ಬರೆದ ಲೇಖನಗಳನ್ನು ಓದಿರಬಹುದು.

ಝುವಾರೋ ಆಗಾ ಪ್ರಪಂಚದಲ್ಲೇ ಅತೀ ವೃದ್ಧನೆಂದು ಪ್ರತೀತಿಯುಂಟು. ಅವನಿಗೆ ೧೬೦ ವರ್ಷಗಳಾಗಬಹುದು. ಅವನ ಆಗಿನಿಂದಲೂ ಅವನಿಗಿಂತಲೂ ೬೦ ವರ್ಷಗಳಿಗೆ ಚಿಕ್ಕವು. ೦೦ ವರ್ಷಗಳಾಗುವ ತನಕ ಅವನ ಬಾಯಿಯಲ್ಲಿ ಒಂದಾದರೂ ಕೂದಲು ಬೆಳೆದಿರಲಿಲ್ಲವಂತೆ. ಅದರಿಂದಾಚೆಗೆ ಕೂದಲು ಬೆಳೆಯಲಾರಂಭವಾಗಿ ತಲೆ ಎಲ್ಲಾ ಕಪ್ಪಾಗಿತ್ತಂತೆ.

ಝುವಾರೋ ಆಗಾನ ಹುಟ್ಟೂರು ತುರ್ಕಿಸ್ಥಾನದಲ್ಲಿ. ಆದರೆ ಅವನು ಪ್ರಪಂಚದಲ್ಲೇ ಅತಿ ದೊಡ್ಡ ವೃದ್ಧನೆಂದು ಯೂರೋಪ, ಅಮೇರಿಕಗಳಲ್ಲಿ ಅವನ ದರ್ಶನ ಪ್ರದರ್ಶನಗಳಾದವು. ಎಷ್ಟೋ ಜನರು ಅವನನ್ನು ಕಂಡು ... ಬಹುಕಾಲ ಬದುಕಿ ಬಾಳಬೇಕೆ—ಎಂದೆನಿಸಿ ... ಹಣ ಖರ್ಚು ಮಾಡಿ ಅವನಿದ್ದಲ್ಲಿಗೆ ಹೋಗಿದ್ದರು.

ಬಂದು ಕೇಳಿದವರಿಗೆ ಝುವಾರೋ ಆಗಾ ... ಮಿತ ಆಹಾರ ... ಪರಿಶ್ರಮ ಮಾಡಿ, ಆರೋಗ್ಯಕರವಾದ ಉತ್ತಮ ಭೋಜನವನ್ನು ಮಾಡಿದರೆ ನನ್ನಂತೆ ನೀವೂ ಸ್ವಸ್ಥಚಿತ್ತರಾಗಿಯೂ ರೋಗಿಗಳಾಗಿಯೂ ದೀರ್ಘಕಾಲ ಬದುಕಬಹುದು. ಅವನ ಈ ಮಾತುಗಳಿಂದ ... ಬಹಳ ಮಂದಿ ಪ್ರಭಾವಿತರಾಗಿದ್ದರು.

ಈಗ, ಝುವಾರೋ ಆಗಾನಿಗಿಂತ ವೃದ್ಧರಾದ ಮನುಷ್ಯರು ಇದ್ದಾರೆಂದು ಹೇಳಿದರೆ ನೀವು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಡಬಹುದು. ಆದರೆ ಹಾಗೆ ಆಶ್ಚರ್ಯಪಡಲು ಕಾರಣವಿಲ್ಲ. ನಿರೀಕ್ಷೆ, ಪರೀಕ್ಷೆ, ಶೋಧನೆಗಳನ್ನು ಮಾಡಿದರೆ ಯಾವ ಆಶ್ಚರ್ಯವೂ ಆಶ್ಚರ್ಯವಾಗಿ ಉಳಿಯುವುದಿಲ್ಲ.

ಲೀ ಜಿಗ್ ಏನ್

ಲೋಕದ ಅತಿ ದೊಡ್ಡ ವೃದ್ಧ

"ಲಕ್ಷ್ಮೀಶ"

ಝುವಾರೋ ಆಗಾನಿಗಿಂತ ವೃದ್ಧನಾದೊಬ್ಬನು ನಿಜಕ್ಕೂ ಈ ಪ್ರಪಂಚದಲ್ಲಿದ್ದಾನೆಂಬ ಸಂಗತಿಯು ಓರ್ವ ಪ್ರವಾಸಿಯು ಹೇಳಿಕೆಯಿಂದ ಗೊತ್ತಾಗಿದೆ. ಈ ಹೊಸ ವೃದ್ಧನಿಂದಾಗಿ ಝುವಾರೋ ಆಗಾನ ಉಜ್ವಲ ಕೀರ್ತಿಯು ... ಅವನ ಹೆಸರೇ ... ಈಗ ಪ್ರಪಂಚದಲ್ಲಿ ... ಎಲ್ಲರ ... ಮೇಲೆ ಈ ಹೊಸ ವೃದ್ಧನ ಹೆಸರೇ ... [illegible]

ಈ ಹೊಸ ವೃದ್ಧನ ಹೆಸರು ಲೀ ಜಿಗ್ ಏನ್ ... ಚೀನ ದೇಶದ ... ಹಳ್ಳಿಯಲ್ಲಿ ... ಲೀ ಜಿಗ್ ಏನ್ ... [illegible]

ಲೀ ಜಿಗ್ ಏನ್ ... ವರ್ಷ ... [illegible]

... ಯಾಗಿಲವೆಂದು ಹೇಳಬಹುದಾಗಿದೆಯಂತೆ.

ಕ್ರಿ. ಶ. ೧೬೭೭-೧೭೩೫ರ ಸಮಯದಲ್ಲಿ ಚೀನಾ ದೇಶವನ್ನು ಕ್ಯಾಂಗ್ ಷಿ ಎಂಬ ಅರಸನು ಆಳಿಕೊಂಡಿದ್ದನು. ತಾನು ಅವನ ಸಮಕಾಲೀನನಾಗಿದ್ದೆನೆಂದು ಲೀ ಜಿಗ್ ಏನ್ ನೇ ಹೇಳುತ್ತಾನೆ. ಆ ಕಾಲದ ಘಟನೆಗಳನ್ನು ಆಗಿನ ಜನರ ನಡೆನುಡಿ, ಆಚಾರ ವಿಚಾರ ರೂಢಿ ಸಂಪ್ರದಾಯಗಳನ್ನು ... ಇದರಿಂದಾಗಿಯೂ ಲೀ ಜಿಗ್ ... ಸ್ಪಷ್ಟವಾಗುವುದು.

ಲೀ ಜಿಗ್ ... [illegible]

... [illegible]

ಝಾಂಕೀ ... [illegible]

ಅಲ್ಲಾಯಾಗಳು ಈಗ ಪ್ರಪಂಚದಲ್ಲೇ ಇದ್ದಾರಲ್ಲ. ಅವರ ಸರಾಸರಿ ಆಯುಷ್ಯ ಪ್ರಮಾಣವು ೨೫-೩೦ ವರ್ಷಗಳು ಮಾತ್ರ. ಈ ಕಾಲದೊಳಗಾಗಿ ಸಾಯುವವರೇ ಬಹಳ ಮಂದಿ. ಈ ಅವಧಿಯನ್ನು ಮೀರಿ ಬದುಕಿದರು ದೊಡ್ಡದೊಂದು ಗಂಡಾಂತರದಿಂದ ಪಾರಾದವರೆಂದು ... ೫೦-೬೦ ವರ್ಷಗಳ ತನಕ ಬದುಕಿದವರನ್ನು ಪುಣ್ಯಶಾಲಿಗಳೂ ಭಾಗ್ಯಶಾಲಿಗಳೂ ... ತಿಳಿಯುತ್ತಾರೆ. ೬೦ನೇ ಜನ್ಮದಿನವನ್ನು ... ಸಂತರ್ಪಣೆ ... ಸಂಭ್ರಮವೂ ... ಆಚರಿಸುತ್ತಾರೆ ... ಅವರಿಗೆ ಒಂದು ಮಹಾ ಪರ್ವದ ದಿನ.

ಶತಸಂವತ್ಸರ ದೀರ್ಘ ... ವೈದಿಕ ಪುರೋಹಿತರ ... ಆಶೀರ್ವಾದ ... ೧೦೦ ವರ್ಷಗಳ ತನಕ ಬದುಕಿ ಬಾಳಿದರೆ ... [illegible]

(೧೫ನೇ ಪುಟವನ್ನು ನೋಡಿರಿ)

ಹೊಟ್ಟೆ ನೋವಿನಿಂದ ನಾನು ನೃತ್ಯ ... ಬಾಯಿಗೆ ... ತ್ರಿದಿನ.

[illegible]

Alex. C. Maclean

[illegible]

ಜೆ ಎಲ್ ಮೊರಿಸನ್ ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್
[illegible]

S. No. 70.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER ORIGINAL

ಪ್ರಮೇಹ ವ್ಯಾಧಿಗೆ ದಿವ್ಯೌಷಧ

[illegible]

ನಕಲಿ ಮದ್ದುಗಳಿಗೆ ... ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ನೋಡಲು ... ಗುರುತನ್ನು ಗಮನಿಸಿ.

ಬೆಲೆ 50 ಗುಳಿಗೆಗಳ ಬುದ್ದಿಯೊಂದಕ್ಕೆ ರೂ ೩ ...

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ ಎನ್ ಜಸಾನಿ, ... ಮುಂಬಯಿ 4

Sole Manufacturer Dr D N JASANI, Vithalbhai Patel Road BOMBAY 4

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು—'ಲಕ್ಷ್ಮಿನಿವಾಸ' ಬಿಲ್ಡಿಂಗ್ಸ್, ಕುಂದಾಪುರ ದ. ಕ.

ಬ್ರೇಂಚ್ ಆಫೀಸುಗಳು:
ಕುಂದಾಪುರ,
ಕುಮಟಾ,
ಕೋಟೇಶ್ವರ,
ಬೈಂದೂರು,
ಗೋಕರ್ಣ,
ವೀರರಾಜೇಂದ್ರಪೇಟೆ,
ಸೋಮವಾರ ಪೇಟೆ,
ಶಿವಮೊಗ್ಗಾ,
ತರಿಕೆರೆ.

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ತೆರೆಯಲ್ಪಡುವುವು.

ಶಿವಮೊಗ್ಗಾ ತಾ 26-8-1937.
ತರಿಕೆರೆ ,, 30-8-1937

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುವು.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಮ್ಮದೇ ಆಗಿರುವ ಅವಶ್ಯವಾದ ಈ ಬೇಂಕಿನಲ್ಲಿಯೇ ನಿಮ್ಮ ವ್ಯವಹಾರಗಳನ್ನು ನಡಿಸಬೇಕಾಗಿ ಕೋರುತ್ತೇವೆ.

Laxmi-Nivas Buildings, Coondapoor, 8-1-1937. } The Agricultural & Industrial Bank, Ltd.

[illegible] ಯಿಂದ ಪ್ರಯೋಜನವೇ ಇಲ್ಲ.

ಅಲ್ಲೇ ಇನ್ನೊಬ, ಧನಿಕ; ಆರಾಮಾಸನದ ಮೇಲೆ, ಕಾಲಮೇಲೆ ಕಾಲುಹಾಕಿ, ಸಿಗರೇಟುಗಳನ್ನು ಬೂದಿ ಮಾಡುವುದೇ ಆತನ ಕೆಲಸ! ಹಲವು ವೇಳೆ ಧನಿಕಸ್ತ್ರೀಯನ್ನು ಚಲಚ್ಚಿತ್ರ ಮಂದಿರಕ್ಕೆ ಕರೆದೊಯ್ದನು. ಉದ್ಯಾನದಲ್ಲಿ ಮಕ್ಕಳಂತೆ ಅವರು ಸೆಣಸಾಟವಾಡುತ್ತಿದ್ದರು; ವಿಹಾರಾರ್ಥವಾಗಿ ಎಲ್ಲೆಲ್ಲೂ ತಿರುಗುತ್ತಿದ್ದರು. ಅವನು ಅಯರ್ಲಾಂಡಿನಲ್ಲಿ ವಿಶೇಷವಾದ ಆಸ್ತಿಯುಳ್ಳ ಮಹಾ ಪುರುಷ! ಇಬ್ಬರಿಗೂ ಪ್ರೇಮವು ಮೊಳೆಯಿತು; ಮದುವೆಯಾಯಿತು. ಆ ಸ್ತ್ರೀಯ ಮೊದಲ ಗಂಡನು ಮೃತನಾದ ನಂತರ.

ಮದುವೆಯಾದ ಹಲವು ದಿನಗಳಲ್ಲೇ ಪತ್ನಿಯು ಹೇಳಿದಳು. 'ಇನ್ನು ನಾವು ಊರಿಗೆ ಹೋಗಿ ಸ್ವಂತ ಆಸ್ತಿಯಲ್ಲೇ ಜೀವನ ನಡೆಸೋಣ.'

'ಹಾ; ಅದಾಗದು!' ಎಂದನು ಪತಿ. 'ನನ್ನ ಆಸ್ತಿಯು ನನ್ನ ದಾಯಾದಿಗಳ ಕೈಗಳಲ್ಲಿ ಬಿದ್ದಿದೆ. ಅದನ್ನು ನಾವು ವಶಪಡಿಸಿಕೊಂಡ ನಂತರವೇ ಊರಿಗೆ ಹೋಗೋಣ.' ಪತ್ನಿಯನ್ನು ಸಮಾಧಾನಗೊಳಿಸಿದ ಪತಿ!

ದಿನಗಳು ಹಲವು ಕಳೆದರೂ ಪತಿಗೆ ಊರಿಗೆ ತೆರಳುವ ಯೋಚನೆಯೇ ಇಲ್ಲ. ಪತ್ನಿಯ ಮನೆಯಲ್ಲಿ ಇದ್ದಷ್ಟು ದಿನಗಳೂ ಒಂದು ಕುರುಡು ಕವಡೆಯನ್ನಾದರೂ ಬಿಚ್ಚಲಿಲ್ಲ ಆತ. ಪುನಃ ಕೇಳಿದಳು ಪತ್ನಿ. 'ತಮ್ಮ ಆ ಆಸ್ತಿಯ ಗತಿಯೇನು?'

ಆತನ ಮೊಗವು ವಿಹ್ವಲವಾಯಿತು. 'ಡಾರ್ಲಿಂಗ್! ಏನು ಹೇಳಲಿ? ಆ ಆಸ್ತಿಯನ್ನು ಜೋಪಾನವಾಗಿಡಲು ಇದ್ದುದೆಲ್ಲ ಹಣವನ್ನೂ ಕಳೆಕೊಂಡೆನು. ಇನ್ನೂ ಹದಿನೈದು ಸಾವಿರ ಪವನುಗಳು ಸಿಕ್ಕಿದಲ್ಲಿ ಅದನ್ನು ಬಿಡಿಸುವೆನು. ಆ ಆಸ್ತಿಯು ಸಾವಿರ ಕೊಡುವ ಹಣದ ನೂರರಷ್ಟು ಬೆಲೆಯುಳ್ಳದಾಗಿದೆ. ಪ್ರಿಯೇ; ಕೊಡುವೆಯಾ? ಆ ಆಸ್ತಿಯನ್ನು ಬಿಡಿಸಿಕೊಂಡ ನಂತರ ನನ್ನ ಹೃದಯದ ರಾಣಿಯಾದ ನೀನು ಅದಕ್ಕೂ ಒಡತಿಯಾಗುವಿ.'

ಮೊದಮೊದಲು ಒಪ್ಪಲಿಲ್ಲ ಆಕೆ ಕೊನೆಗೆ ಒಪ್ಪಿ, 15000 ಪವನುಗಳನ್ನು 'ಅಯರ್ಲಾಂಡಿನ ಧನವಾನ'ನಿಗೆ ಕೊಟ್ಟಳು. ಆಸ್ತಿಯನ್ನು ಬಿಡಿಸಲು ಆತ ತೆರಳಿದ. ನಂತರ ಆತನ ಪತ್ತೆಯೇ ಇಲ್ಲ. ಆ ಸ್ತ್ರೀ ಪೋಲೀಸರಿಗೆ ದೂರು ಕೊಟ್ಟಳು. ಸ್ಕಾಟ್‌ಲಂಡ್ ಯಾರ್ಡಿನ ಅಧಿಕಾರಿಗಳು ಆತನನ್ನು ಹಿಡಿದರು. ಆತನು ಮೊದಲಿನಷ್ಟೇ ಬಾರಿ ಹೀಗೆಯೇ ವಂಚಿಸಿದ್ದನಂತೆ.

ಆದರೆ ಆತನು ಹಣವನ್ನು ತೆಗೆದುಕೊಂಡು ಕಾಣೆಯಾದನೇಕೆ? ಆ ಹಣದಿಂದಲೇ ಹೊಸದೊಂದು ಆಸ್ತಿಯನ್ನು ಪಡಕೊಳ್ಳಬಹುದಿತ್ತಲ್ಲವೇ? ನಂತರ ತನ್ನ ನವವಧುವಿನೊಂದಿಗೆ ಸಂಸಾರ ಮಾಡಿಕೊಂಡಿದ್ದು, ಓರ್ವ ಧನಿಕ ಸ್ತ್ರೀಯ ಗಂಡನೆಂಬ ಅಭಿಮಾನದಿಂದ ಬಾಳಬಹುದಿತ್ತಲ್ಲವೇ?

'ನಿಮಗೆ ಆತನ ಪರಿಚಯವಿಲ್ಲ.' ಸ್ಕಾಟ್‌ಲಂಡ್ ಯಾರ್ಡಿನ ಅಧಿಕಾರಿಯೆಂದು 'ಆತನು ಆಕೆಯನ್ನು ವಿವಾಹವಾಗಿ, ಒಂದು ಆಸ್ತಿಯನ್ನು ಕೊಂಡುಕೊಂಡು, (ಯಾಕೆಂದರೆ ಆತನು ಆಕೆಗೆ ತಿಳಿಸಿದ ಅಯರ್ಲಾಂಡಿನ ಆಸ್ತಿಯ ವಿಚಾರವೆಲ್ಲವೂ ಸುಳ್ಳು!) ಅದರಲ್ಲೇ ವಾಸಿಸಿದ್ದನಾದರೆ ಅದು ಅವನಿಗೆ ಜೇಲಿನಂತಾಗುತ್ತಿತ್ತು. ಜನ್ಮ ಟಾಪು! ಅಲ್ಲದೇ ಆಕೆಯು ಆತನಿಗಿಂತ ಇಪ್ಪತ್ತು ವರ್ಷಗಳಿಗೆ ಹಿರಿಯಳಾಗಿದ್ದಳು.

ಇಂತಹ ವಂಚಕರ ಮನೋಸ್ಥಿತಿಯನ್ನು ಮೇಲಿನ ಚಿತ್ರವು ಚೆನ್ನಾಗಿ ಬಣ್ಣಿಸುತ್ತದೆ.

ಪ್ರೇಮ ಕಾತರ ದೇವಿಯರಿಂದ

ಸಮಾಜದ್ರೋಹಿ ವಂಚಕರ ಮೇಲ್ಮೆ

ವಂಚಿತರಾದರೂ ವಂಚಿಸಲಾರರು

ಅವರು ತಮ್ಮ ಬಲಿಗಳನ್ನು ಬಹಳ ಜಾಗ್ರತೆಯಿಂದ ಆರಿಸುತ್ತಾರೆ. ಕಿರೀಟಧಾರಣೋತ್ಸವದ ನೆಪದಿಂದ ಇಂತಹರು ಅನೇಕರು ತುಂಬಿಗೆಂತೆ ಇಂಗ್ಲಾಂಡಿಗಿಳಿದಿದ್ದರು. ಯಾಕೆಂದರೆ ಕಿರೀಟಧಾರಣೋತ್ಸವಕ್ಕಾಗಿ ಇಂಗ್ಲಾಂಡಿಗೆ ದಶದಿಕ್ಕುಗಳಿಂದಲೂ ಹಣವುಳ್ಳ ಸ್ತ್ರೀಯರು ಒಂದು ಹೊಟೇಲುಗಳಲ್ಲಾಗಲೀ, ರೆಸ್ಟೋರೆಂಟುಗಳಲ್ಲಾಗಲೀ ಇರುತ್ತಾರೆಂದು ತಿಳಿದುದರಿಂದ.

ಯೂರೋಪಿನ ಇತರ ದೇಶಗಳಲ್ಲಿ ನಡೆಸುವಷ್ಟು ಕಾರ್ಯಕಲಾಪಗಳನ್ನು ಅವರು ಇಂಗ್ಲಾಂಡಿನಲ್ಲಿ ನಡೆಸಲಾರರು. ಹೊರಗಣ ದೇಶಗಳಲ್ಲಾದರೆ ಅವರಿಗೆ ಪೋಲೀಸರ ಭಯವು ಇರುವುದಿಲ್ಲ. ಪೋಲೀಸರು ಅವರನ್ನು ಹಿಡಿಯುವ ಸಾಹಸಕ್ಕೇನೇ ಹೋಗುವುದಿಲ್ಲ. ರಾಜಕೀಯ ಮಹಾಶಯರ ಪತ್ನಿಗೆ ಇಂತಹ ದುರವಸ್ಥೆಯು ಬಂದಲ್ಲಿ ಯಾರಾದರೂ ದೊಡ್ಡ ಅಧಿಕಾರಿಗಳ ಹೆಂಗಸರ ಮೇಲೆ ತಮ್ಮ ಬಲೆಯನ್ನು ಬೀಸಿದಲ್ಲಿ ಮಾತ್ರ ಪೋಲೀಸಿನವರು ಬೆಂಬತ್ತುವರಲ್ಲದೆ, ಅನ್ಯಥಾ ಇಲ್ಲ. ಆದರೆ ಇಂಗ್ಲಾಂಡಿನಲ್ಲಿ ಸ್ಕಾಟ್‌ಲೆಂಡ್ ಯಾರ್ಡಿನಂತಹ ವಿಚಕ್ಷಣ ಗುಪ್ತ ಪೋಲೀಸರುಗಳ ಸಂಸ್ಥೆಯಿರುವಲ್ಲಿ ಈ ವಂಚಕರ ವಂಚನೆಯು ನಡೆಯದು. ಆದುದರಿಂದಾಗಿಯೇ ಅಂತಹ ವಂಚಕರ ಎಷ್ಟೋ ಯತ್ನಗಳು ವಿಫಲವಾಗಿವೆ.

ಇಂತಹ ವಂಚಕರನೇಕರ ಹೆಗಲ ಮೇಲೆ ಕೈಯಿಟ್ಟು, ಪ್ಯಾರೀಸಿನ ಗುಪ್ತ ಪೋಲೀಸರು ಅರಿವಿಲ್ಲದೇ ಅವರನ್ನು ಬಿಟ್ಟಿರುತ್ತಾರೆ. ಅವರ ಲ್ಯೂವರ್‌ನು ಹಂಗೇರಿಯ 'ಜಮೀನುದಾರ!' ಅವನು ತನ್ನ ಮಾತುಗಳಿಂದಲೇ ಮರುಳುಗೊಳಿಸಿ, ಬ್ಯಾರಿಟ್, ಡೋವಿಲ್ ಪ್ಯಾರಿಸ್ ಮುಂತಾದಲ್ಲೆಲ್ಲ ಪ್ರೇಮ (ಕಾಮ) ಕಾತರ ಸ್ತ್ರೀಯರನ್ನು ಮೋಸಗೊಳಿಸಿ, ಸಾವಿರಾರು ಡಾಲರುಗಳನ್ನು ಆರ್ಜಿಸಿದ ಕಿಲಾಡಿ! ಅವನು ಹಲವು ಸಮಯದಿಂದೀಚೆಗೆ ಈ ವೃತ್ತಿಯನ್ನು ಬಿಟ್ಟು, ಪ್ಯಾರಿಸಿನಲ್ಲಿ ಆಭರಣಗಳನ್ನು ಕದ್ದ ಗುಂಪಿನೊಂದಿಗೆ ಸೇರಿದ. ಪ್ಯಾರಿಸಿನ ಪತ್ತೇದಾರರು ಸಂಶಯದಿಂದ ಆತನನ್ನು ಹಿಡಿದರು. ಆದರೆ ಅವನ ಮೇಲೆ ಕದ್ದ ಆಭರಣಗಳಾವುವೂ ಸಿಗಲಿಲ್ಲ. ಅದು ಅವನ ತಪ್ಪಲ್ಲ. ಯಾಕೆಂದರೆ ಅವನು ಸೇರಿದ ಚೋರರ ತಂಡವೇ ಆತನನ್ನು ಮೋಸಗೊಳಿಸಿತ್ತು. ಇಂಗ್ಲಾಂಡಿನಲ್ಲಾದರೆ ಆತನ ಸಂದೇಹಜನಕ ಪ್ರವೃತ್ತಿಯೇ ಸಾಕಿತ್ತು. ಪೋಲೀಸ್ ರಿಕಾರ್ಡಿನಲ್ಲಿ ಆತನ ಹೆಸರನ್ನು ಬರೆದು, ಅದರೆದುರಿಗೊಂದು ಕರಿಕಾಯಿಯ ಗುರುತು ಮಾಡಿಡಲು ಅಂದರೆ ಕಾಮಕಾತರ ಸ್ತ್ರೀಯರನ್ನು ಬಲೆಗೆಳೆವ ಒಂದು ಜೀಡನಾದರೂ ತನ್ನ ಬಲೆ ಹರಡುವುದನ್ನು ನಿಲ್ಲಿಸುವಂತಾಗುತ್ತಿತ್ತು.

ಇಷ್ಟೇ ಅಲ್ಲ ಇನ್ನೂ ಹಲವು ತರದ ಸುಳಿಗೆಗಳಿವೆ.

ರಿವೇರಾದಲ್ಲಿ ಧನಿಕಳಾದ, ಬಹಳ ಬಲಹೀನ ಹೃದಯದ ಓರ್ವ ಸ್ಥೂಲ ವಿಧವೆಯಿರುವುದನ್ನು ಕಂಡು ಹಿಡಿದ ಅಮೇರಿಕೆಯ ವಂಚಕ! ಆಕೆಯ ಸಹವಾಸವನ್ನು ಸಂಪಾದಿಸಿದ. ಆಕೆಯು ಮತ್ತೆ ಹೆಚ್ಚು ದಿನ ಬಾಳಲಿಲ್ಲ. ಸಾಯುವಾಗ ಉಯಿಲಿನಲ್ಲಿ ಹಣವೆಲ್ಲವನ್ನು ತನ್ನಹೃದಯದಲ್ಲಿ ಪ್ರೇಮ ಕೃಷಿಯನ್ನುಂಟುಮಾಡಿದ ಆ ಮಹಾಶಯನಿಗೇ ಬಿಟ್ಟುಕೊಟ್ಟಳು. ಆದರೆ ಆ ಉದ್ದ ಮುಸುಡಿನ, ಕಾಪಿಯ ವರ್ಣದ್ದುಳ್ಳ ಚರ್ಮದ ಅಸ್ತಿಪಂಜರದಂತಿದ್ದ ಅಮೇರಿಕೆಯ ಮರಿಯನ್ನು ಕಂಡು, ಆಕೆಯ ವಕೀಲನಿಗೆ ಸಂದೇಹವಾಯಿತು. 'ಬರೇ ಕೆಲವು ದಿನಗಳ ಕೆಲಸಕ್ಕಾಗಿ ನಿನಗೆ ಇಷ್ಟು ಹಣವನ್ನು ಆಕೆಯು ಬರೆದಿಟ್ಟಿದನ್ನು ನಾನು ನಂಬಲಾರೆ.' ಕೂಡಲೆ ಉತ್ತರ ಬಂತು. 'ಆ ಹಲವು ದಿನಗಳ ಕಾರ್ಯದಿಂದಲೇ ನನ್ನ ಮೇಲಾದ ಪರಿಣಾಮವನ್ನು ಕಂಡಿರುವೆಯಾ?'

ಆಕೆಯ ಮರಣದ ಸಂಬಂಧವಾದ ಪೋಲೀಸು ರಿಪೋರ್ಟು ವಕೀಲನ ಬಳಿಯಲ್ಲಿತ್ತು. ಡಾಕ್ಟರರ 'ಸರ್ಟಿಫಿಕೇಟ'ನಲ್ಲಿ, 'ಪ್ರಣಯದ ವಿಚಾರ ತಿಳಿದಾಗ ಆಕೆಯ ಹೃದಯವು ದುರ್ಬಲವಾಗಿತ್ತು. ಯಾವುದೋ ಕಾರಣದಿಂದ ಉದ್ರೇಕಿಸುತ್ತಿತ್ತು. ದುರ್ಬಲ ಹೃದಯದಲ್ಲಿ ಜಾಗ್ರತ ಭಾವನೆಗಳ ಉದ್ರೇಕವಿಕೆಯು ಹೃದಯವನ್ನು ಭೇದಿಸಿದುದರಿಂದ, ಆಕೆಯು ಮೃತ್ಯುವಾಗಿದೆ.' ಎಂದಿತ್ತು. ಆದರೆ ಆಕೆಯ ಪ್ರಣಯಿ ಆಕೆಯನ್ನು ಬೇಕೆಂದೇ ಕೊಂದುದೆಂಬುದಕ್ಕೆ ಇಷ್ಟೇ ಪುರಾವೆಗಳು ಸಾಕಾಗುತ್ತಿಲ್ಲ. ಎಲ್ಲಾದರೂ ಆ ವಿಧವೆ ಮುಂದೆ ಬುದ್ಧಿವಂತಳಾಗಿ ತನ್ನ ಉಯಿಲಿನ ವಿಷಯ ಆತನಿಗೆ ಮೊದಲೇ ತಿಳಿಸಿದುದಾಗಿದ್ದರೆ, ಮರುದಿನದ ಪ್ರಥಮ ಕೆಲಸವು ಆಕೆಯ ಶವದ ವ್ಯಕ್ತಿಕಾ ಸಂಸ್ಕರಣವೇ ಆಗಬಹುದಿತ್ತು!

ಇನ್ನೋರ್ವನು 'ಫ್ಯಾಶನೇಬಲ್' ರೀತಿಯಲ್ಲಿ ಹೊಟಲಿಗೋ ಯಾ ಕ್ಲಬ್ಬುಗಳಿಗೋ ತೆರಳಿ, ತನ್ನ ಬಲೆಯಲ್ಲಿ ಸುಲಭವಾಗಿ ಬೀಳತಕ್ಕ ನೊಣಗಳನ್ನು ಆರಿಸುತ್ತಾನೆ. ಯಾರೂ ಇಲ್ಲದ ಮೂಲೆಯ ಮೇಜಿನ ಬಳಿ ಯಾರಾದರೂ ತರುಣಿಯು ಕುಳಿತುದನ್ನು ಕಂಡಲ್ಲಿ, ಅಲ್ಲಿಗೇನಾಗುವನು. ಬಹುಮಾನ ಸೂಚಕವಾಗಿ ತಮ್ಮ 'ಹೇಟ'ನ್ನು ತೆಗೆದು; ವಂದಿಸುವನು. ನಂತರ ಒಂದು ಕೋಕ್‌ಟೈಲಿನ ಮೇಲೆ ಅವರಿಗೆ ಸ್ನೇಹವಾಗುವುದು. ನಂತರ ಆ ಮಾತು ಈ ದೂರುಗಳನ್ನು ಮಾತನಾಡಿ, ಹಲವು ಸಮಯ ಕಳೆದು ಇಬ್ಬರೂ ಹೊಟೇಲಿನ ಹೊರಗೆ ಕಾಲಿಡುತ್ತಾರೆ. 'ಆತನು' ಒಂದು ಬಾಡಿಗೆಯ 'ಟೇಕ್ಸಿ'ಯನ್ನು ಕರೆಯುತ್ತಾನೆ. 'ಬೇಡ; ಸಮಯವಾಯಿತು.' ಎನುತ್ತಾಳಾಕೆ. ಆದರೆ ಕೇಳದೇ, 'ಆತನು' ಆಕೆಯನ್ನು 'ಟೇಕ್ಸಿ'ಯಲ್ಲಿ ಕುಳ್ಳಿರಿಸಿ, ತನ್ನ ಮಾಳಿಗೆಗೆ ಕರೆದೊಯ್ಯುತ್ತಾನೆ.

ಒಮ್ಮೆ ಆಕೆಯು ಕೋಣೆಯೊಳಗೆ ಕಾಲಿಟ್ಟಳೆಂದರೆ... 'ಆತನ' ವಿಚಾರ ಸರಣಿಯು ಸ್ಪಷ್ಟವಾಗುತ್ತದೆ. ಆಕೆಯು ಒಳ್ಳೆಯ ಮಾತುಗಳಿಂದ ಹಣವನ್ನು ಬಿಚ್ಚುವಳೋ? ಯಾರಿವಾಳ್ವರು ತೋರಿಸಬೇಕಾದಿತೋ? ನಂತರವೂ ಕೇಳದಿದ್ದಲ್ಲಿ ಕೊಲೆಮಾಡಬೇಕಾಗುವುದೋ?... ಆಕೆಯ ಬಳಿಯಲ್ಲಿ ಏನೂ ಕಾಸಿಲ್ಲವಾದಲ್ಲಿ, ವ್ಯರ್ಥ ಆಕೆಯ ಕೊಲೆ ಮಾಡುವುದೇಕೆ?

ನಂತರ ಅವರ ಪ್ರಣಯಲೀಲೆಯಾರಂಭವಾಗುತ್ತದೆ. ಆಕೆಯು 'ಬಾ' ಎನ್ನುತ್ತಾಳೆ; ಆತನು 'ಬರು'ತ್ತಾನೆ. ಪ್ರೇಮಸೂಚಕವಾಗಿ ಆತನು ಆಕೆಗೆ ಹೊಗೆಬತ್ತಿಯನ್ನಾಗಲೀ ಒಂದು ಗ್ಲಾಸ್ ವಿಸ್ಕಿಯನ್ನಾಗಲೀ ಕೊಡುತ್ತಾನೆ. ಆಕೆಯು ಸ್ವೀಕರಿಸುತ್ತಾಳೆ. ಆಗ ಆಕೆಗೆ ಯಾವುದರ ಜ್ಞಾನವೂ ಇರುವುದಿಲ್ಲ. ಆಕೆಯು ಮಾರನ ಪುಷ್ಪಶರದ ಆಘಾತಕ್ಕೆ ನೊಂದು, ಬಸವಳಿದ ಬಾಲೆ! ಪ್ರೇಮಿಯ ಪ್ರೇಮೋಪಹಾರದ ಸೇವನೆಯಿಂದ ಆ ಪ್ರಣಯದ ಜ್ಞಾನವೂ ನಶಿಸಿ ಹೋಗುತ್ತದೆ. ಹಲವೇ ಕ್ಷಣಗಳಲ್ಲಿ ಆಕೆಯು ಜ್ಞಾನ ಶೂನ್ಯಳಾಗಿ ಬೀಳುತ್ತಾಳೆ. ಯಾಕೆಂ 'ಆತನ' ಉಪಹಾರದಲ್ಲಿ ಅಫೀಮಿನ ಅಂಶವಿರುತ್ತದೆ.

ಮತ್ತೆಚ್ಚರಾಗುವಾಗ ಬೆಳ್ಳಗೆ ಬೆಳಗಾಗಿದೆ! ಆ ಪ್ರಣಯಿಯ ಪತ್ತೆಯಿಲ್ಲ. ಅಲ್ಲದೇ ಮೈಮೇಲಿದ್ದ ಆಭರಣಗಳೂ ದುಡ್ಡಿನ ಚೀಲವೂ ಮಾಯವಾಗಿವೆ. ಆಕೆಯು ಹೊಟೇಲು ಮೆನೇಜರನೊಡನೆ ಆ ಆಸಾಮಿಯ ಪತ್ತೆ ಕೇಳುತ್ತಾಳೆ. 'ಆತನು ಪ್ರಾತಃಕಾಲ ನಾಲ್ಕು ಗಂಟೆಗೆ ಆತನ ಕೋಣೆಯನ್ನು ಖಾಲಿಮಾಡಿ, ಊರಿಗೆ ಹೋಗಿದ್ದಾನೆ.' ಎಂಬ ಉತ್ತರ ದೊರಕುತ್ತದೆ. ಊರಾವುದು? ದೇವರೇ ಬಲ್ಲ! ಆಗ ಹೋದುದು ಹೋಗಲಿ ಎಂದು ಕಣ್ಮುಚ್ಚಿ, ಕುಳಿತಿರುವ ಒಂದೇ ದಾರಿಯಲ್ಲದೆ ಬೇರೆ ದಾರಿ ಇಲ್ಲ. ಪೋಲೀಸರಿಗೆ ತಿಳಿಸೋಣವೆಂದರೆ ಮೊದಲೊಂದು ಪ್ರಶ್ನೆಯೇಳುತ್ತದೆ? 'ನೀನೇಕೆ ಅಷ್ಟು ರಾತ್ರಿ ಅವನ ಮಾಳಿಗೆಗೆ ಹೋಗಿದ್ದೆ?'

ಬ್ರಿಟಿಷ್ ಪೋಲೀಸರಿಗಿಂತ ಈ ಕುರಿತು ಹೆಚ್ಚು ಅನುಭವವು ಯುರೋಪಿನ ಇತರ ದೇಶಗಳ ಪೋಲೀಸರಿಗಿದೆ. ಈ ರೀತಿ ಸ್ತ್ರೀಯರನ್ನು ಹಿಂಸಿಸುವ ಒಬ್ಬ ವಂಚಕನನ್ನು ಹಿಡಿದರೂ ಕೂಡ ಅವನನ್ನು ಶಿಕ್ಷೆಗೆ ಗುರಿಮಾಡುವಷ್ಟು ಸಾಕ್ಷ್ಯಗಳು ದೊರಕುವುದೇ ಇಲ್ಲ. ಕಾರಣವು ಸುಲಭವಾಗಿದೆ-ತಾವು ಆ ರೀತಿ ಆಚರಿಸಿದರೆ ಯಾವ ಸ್ಥಿತಿಯಲ್ಲಿರಬಹುದು ಎಂಬುದನ್ನು ಅವರು ತಿಳಿದಿರುತ್ತಾರೆ. ಅವರೆದುರು ಸಾಕ್ಷ್ಯಗಳು ಬರಲಾ

(ಎನೇ ಪುಟದಲ್ಲಿ ನೋಡುವುದು)

3 ವರ್ಷಗಳ ತನಕ ತಲೆತಿರುಗುವಿಕೆಯು ಸಂಕಟಪಟ್ಟಳು

ಅಜೀರ್ಣದ ಪರಿಣಾಮದಿಂದ

ಕ್ರುಶನ್ ಲವಣದ ಸೇವನೆಯಿಂದ ಮೂರೆ ವಾರಗಳೊಳಗೆ ಗುಣಹೊಂದಿದಳು

ಓರ್ವ ಸ್ತ್ರೀಯು ಹೀಗೆಂದು ಬರೆಯುತ್ತಿದ್ದಾಳೆ:—ಕ್ರುಶನ್ ಲವಣಗಳನ್ನು ಸೇವಿಸುವ ಮೊದಲು, ನನ್ನಲ್ಲಿ ಅಜೀರ್ಣವೂ, ತಲೆತಿರುಗುವಿಕೆಯೂ, ಅಶಕ್ತತೆ ಇವೆ ಮೊದಲಾದ ಸಂಕಟಗಳನ್ನು ನಾನು ಮೂರು ವರ್ಷಗಳ ಸಮಯ ಅನುಭವಿಸಿದ್ದೆನು.

ಕ್ರುಶನ್ ಲವಣಗಳನ್ನು ಉಪಯೋಗಿಸುದುದರಿಂದ ನನ್ನಲ್ಲಿ ಅತ್ಯಂತ ಸುಖಭಾವವು ಉಂಟಾಗುತ್ತದೆ. ಸಾಧಾರಣ ಒಂದೂವರೆ ವರ್ಷಗಳಿಂದ ನಾನದನ್ನು ತೆಗೆದುಕೊಳ್ಳುತ್ತಿದ್ದೇನೆ. ಅದರಿಂದ ನನ್ನ ಆರೋಗ್ಯವು ಉತ್ತಮಗೊಂಡಿರುತ್ತದೆ. ಬರೆ ಮೂರು ವಾರಗಳ ಕ್ರುಶನ್ ಸೇವನೆಯಿಂದ ನನ್ನಲ್ಲಿದ್ದ ತಲೆತಿರುಗುವಿಕೆಯು ಮಾಯವಾಯಿತು. ಈಗ ನನ್ನಲ್ಲಿ ನವಚೇತನವೂ, ಉತ್ಸಾಹವೂ ಉಂಟಾಗಿರುತ್ತದೆ. ಕ್ರುಶನ್ ಲವಣಗಳಿಂದ, ಆರೋಗ್ಯವಂತರೂ, ಅನರೂಪವಂತರೂ, ಚಟುವಟಿಕೆಭರಿತರೂ, ಉತ್ಸಾಹವಂತರೂ, ನವಚೇತನ ಹೊಂದಿದವರೂ ಆಗುವಿರಿ.

ಟಿ. ಎಂ.

ನಿಮ್ಮ ಹೊಟ್ಟೆಯನ್ನು ಸ್ವಚ್ಛವಾಗಿಡಲು, ಅದರ ಅಂಗಗಳು ಸರಿಯಾಗಿ ಕಾರ್ಯಿಸುವಂತೆ ಮಾಡಲು, ಕ್ರುಶನ್ ಒಂದು ನೈಸರ್ಗಿಕ ವಿಧಾನವು. ಅದರಲ್ಲಿರುವ ಆರು ಲವಣಗಳು ನಿಮ್ಮ ಪಿತ್ತಕೋಶ ಮತ್ತು ಮೂತ್ರಪಿಂಡಗಳು ಸರಿಯಾದ ರೀತಿಯಲ್ಲಿ ಕಾರ್ಯಿಸುವಂತೆ ಮಾಡುತ್ತವೆ. ಯಾವ ಕಶ್ಮಲಗಳು ನಿಮ್ಮ ಉದರದೊಳಗಿದ್ದು ನಿಮ್ಮಲ್ಲಿ ಅನೇಕ ಸಂಕಟಗಳನ್ನು ಉಂಟುಮಾಡುತ್ತದೋ, ಆ ಕಶ್ಮಲಗಳನ್ನು ಹೊರದೂಡಿ, ನಿಮ್ಮ ಉದರವನ್ನು ನಿರ್ಮಲವಾಗಿಡುತ್ತದೆ.

ಕ್ರುಶನ್ ಲವಣಗಳು ನಿಮ್ಮ ರಕ್ತಕ್ಕೆ ಹೊಸ ಹುರುಪನ್ನು ಕೊಡುತ್ತದೆ. ಅದರಿಂದ ನಿಮ್ಮ ಪ್ರತಿಯೊಂದು ಅಂಗಾಂಗವು ನವಚೇತನಭರಿತವಾಗುತ್ತದೆ.

ಕ್ರುಶನ್ ಲವಣಗಳು, ಎಲ್ಲಾ ದವಾಖಾನೆಗಳಲ್ಲಿ, ಸ್ಟೋರುಗಳಲ್ಲಿ ಮತ್ತು ಬಜಾರುಗಳಲ್ಲಿ ದೊರಕುತ್ತದೆ.

ಕಳೆದ ಕಾಲದ ಮೊದಲು ಝೂರೋ ಆಗಾ ಎಂಬ ವೃದ್ಧನನ್ನು ಕುರಿತು ನೀವು ಕೇಳಿರಬಹುದು; ಅವನ ಚಿತ್ರಪಟಗಳನ್ನು ನೋಡಿರಬಹುದು, ಅವನ ವಿಷಯವಾಗಿ ಬರೆದ ಲೇಖನಗಳನ್ನು ಓದಿರಬಹುದು.

ಝೂರೋ ಆಗಾ ಪ್ರಪಂಚದಲ್ಲೇ ಅತೀ ವೃದ್ಧನೆಂದು ಪ್ರತೀತಿಯಿತ್ತು ಅವನಿಗೆ ೧೫೦-೬೦ ವರ್ಷಗಳಾಗಿರಬಹುದು ಅವನ ಅಗಿನ ಹೆಂಡತಿ ಅವನಿಗಿಂತಲೂ ೮೦ ವರ್ಷಗಳಿಗೆ ಚಿಕ್ಕವಳು. ೧೦೦ ವರ್ಷಗಳಾಗುವ ತನಕ ಅವನ ತಲೆಯಲ್ಲಿ ಒಂದಾದರೂ ಕೂದಲು ಬೆಳೆದಿರಲಿಲ್ಲವಂತೆ ಅದರಿಂದಾಚೆಗೆ ಕೂದಲು ಬೆಳೆಯಲಾರಂಭವಾಗಿ ತಲೆ ಎಲ್ಲಾ ಕಪ್ಪಾಗಿತ್ತಂತೆ

ಝೂರೋ ಆಗಾನ ಹುಟ್ಟೂರು ತುರ್ಕಿಸ್ಥಾನದಲ್ಲಿ ಆದರೆ ಅವನು ಪ್ರಪಂಚದಲ್ಲೇ ಅತಿ ದೊಡ್ಡ ವೃದ್ಧನೆಂದು ಯೂರೋಪ, ಅಮೇರಿಕಗಳಲ್ಲಿ ಅವನ ದರ್ಶನ ಪ್ರದರ್ಶನಗಳಾದುವು ಎಷ್ಟೋ ಜನರು ಅವನನ್ನು ಕಂಡು ಕಣ್ಣುಗಳಿಗೆ ಹಬ್ಬ ಮಾಡಬೇಕು, ಅವನ ದೀರ್ಘ ಜೀವನದ ಮರ್ಮವನ್ನರಿತು ತಾವೂ ಬಹುಕಾಲ ಬದುಕಿ ಬಾಳಬೇಕು—ಎಂದೆಣಿಸಿ ಬಹಳ ಹಣ ಖರ್ಚು ಮಾಡಿ ಅವನಿದ್ದಲ್ಲಿಗೆ ಹೋಗಿದ್ದರು

ಬಂದು ಕೇಳಿದವರಿಗೆ ಝೂರೋ ಆಗಾ ಹೇಳಿದುದಿಷ್ಟು—'ಪರಿಶ್ರಮ ಮಾಡಿರಿ, ಆರೋಗ್ಯಕರವಾದ ಉತ್ತಮ ಭೋಜನವನ್ನು ಮಾಡಿರಿ. ಆಗ ನನ್ನಂತೆ ನೀವೂ ಸ್ವಸ್ಥಚಿತ್ತರಾಗಿಯೂ ನಿರೋಗಿಗಳಾಗಿಯೂ ದೀರ್ಘಕಾಲ ಬದುಕಿ ಬಾಳಬಹುದು.' ಅವನ ಈ ಮಾತುಗಳಿಂದ ಬಹಳ ಮಂದಿ ಪ್ರಭಾವಿತರಾಗಿದ್ದರು

ಈಗ, ಝೂರೋ ಆಗಾನಿಗಿಂತ ವೃದ್ಧನಾದ ಮನುಷ್ಯರು ಇದ್ದಾರೆಂದು ಹೇಳಿದರೆ ನೀವು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಡಬಹುದು ಆದರೆ ಹಾಗೆ ಆಶ್ಚರ್ಯಪಡತಕ್ಕ ಕಾರಣವಿಲ್ಲ ನಿರೀಕ್ಷೆ, ಪರೀಕ್ಷೆ, ಶೋಧನೆಗಳನ್ನು ಮಾಡಿದರೆ ಯಾವ ಆಶ್ಚರ್ಯವೂ ಆಶ್ಚರ್ಯವಾಗಿ ಉಳಿಯುವುದಿಲ್ಲ

ಲೀ ಜಿಗ್ ಯನ್

ಲೋಕದ ಅತಿ ದೊಡ್ಡ ವೃದ್ಧ

"ಲಕ್ಷ್ಮೀಶ"

ಝೂರೋ ಆಗಾನಿಗಿಂತ ವೃದ್ಧನಾದೊಬ್ಬನು ನಿಜಕ್ಕೂ ಈ ಪ್ರಪಂಚದಲ್ಲಿದ್ದಾನೆಂಬ ಸಂಗತಿಯು ಓರ್ವ ಪ್ರವಾಸಿಯ ಹೇಳಿಕೆಯಿಂದ ಗೊತ್ತಾಗಿದೆ ಈ ಹೊಸ ವೃದ್ಧನಿಂದಾಗಿ ಝೂರೋ ಆಗಾನ ಉಜ್ವಲಕೀರ್ತಿಯು ಮಂದವಿದ್ದಿದೆ ಅವನ ಹೆಸರೆತ್ತುವವರು ಈಗ ಪ್ರಪಂಚದಲ್ಲಿ ಒಬ್ಬರೂ ಇಲ್ಲ, ಎಲ್ಲರ ತುದಿನಾಲಿಗೆಯ ಮೇಲೆ ಈ ಹೊಸವೃದ್ಧನ ಹೆಸರೇ ನಲಿದಾಡುತ್ತಿದೆ

ಈ ಹೊಸ ವೃದ್ಧನ ಹೆಸರು 'ಲೀ ಜಿಗ್ ಎನ್' ಎಂದು. ಅವನ ಇರುವುದು ಚೀನ ದೇಶದ ಒಂದು ಹಳ್ಳಿಯಲ್ಲಿ ತಯೂ ಸೀನ್ ಎಂಬುದು ಆ ಹಳ್ಳಿಯ ಹೆಸರು, ಲೀ ಜಿಗ್ ಎನ್‌ನಿಂದಾಗಿ ಒಬ್ಬರಿಂದರೂ ಕಂಡು ಕೇಳದ ಆ ಹಳ್ಳಿಯ ಹೆಸರು ಜನಜನಿತವಾಯಿತು, ವಿಶ್ವವಿಖ್ಯಾತವಾಯಿತು ಹೂವಿನ ಸಹವಾಸದಿಂದ ಹಗ್ಗಕ್ಕೂ ನಾಯಿರಾಡೆ ಬರುವುದೆಂದರೆ ಹೀಗೆ

ಲೀ ಜಿಗ್ ಎನ್‌ನ ಪ್ರಾಯ ೨೫೦ ವರ್ಷಗಳಿಗೂ ಮೀರಿದೆ ಚೀನೀಯರ ಒಂದು ವಿಚಿತ್ರ ಪುರಾತನ ಸಂಪ್ರದಾಯವೆಂದರೆ—ಕೈಬೆರಳುಗಳ ಉಗುರು ಬೆಳೆಸುವುದು ಲೀ ಜಿಗ್ ಯನ್‌ನು ಬೆಳೆಸಿದ ಕೈಉಗುರುಗಳು ಒಂದೊಂದಡಿ ಉದ್ದವಾಗಿರುವುವಂತೆ ಈ ಉಗುರುಗಳ ಅಳತೆಯಿಂದ ಅವನ ವಯಸ್ಸು ೨೫೦ಕ್ಕೆ ಕಡಿಮೆಯಾಗಿಲವೆಂದು ಹೇಳಬಹುದಾಗಿದೆಯಂತೆ

ಕ್ರಿ. ಶ ೧೬೬೨-೧೭೨೩ರ ಸಮಯದಲ್ಲಿ ಚೀನಾ ದೇಶವನ್ನು ಕ್ಯಾಂಗ್ ಈಸಿ ಎಂಬ ಅರಸನು ಆಳಿಕೊಂಡಿದ್ದನು ತಾನು ಅವನ ಸಮಕಾಲೀನನಾಗಿದ್ದೆನೆಂದ ಲೀ ಜಿಗ್ ಯನ್‌ನೇ ಹೇಳುತ್ತಾನೆ, ಆ ಕಾಲದ ಘಟನೆಗಳನ್ನೂ ಆಗಿನ ಜನರ ನಡೆನುಡಿ, ಆಚಾರ ವಿಚಾರ, ರೂಢಿ ಸಂಪ್ರದಾಯಗಳನ್ನೂ ನೋಡಿದವನಂತೆ ವರ್ಣಿಸುತ್ತಾನೆ ಇದರಿಂದಾಗಿಯೂ ಲೀ ಜಿಗ್ ಯನ್‌ನ ಪ್ರಾಯವು ೨೫೦ಕ್ಕೆ ಕಡಿಮೆಯಾಗದೆಂಬುದು ಸ್ಪಷ್ಟವಾಗುವುದು

ಲೀ ಜಿಗ್ ಯನನಿಗೆ ಇಬ್ಬರು ಹೆಂಡಂದಿರಾದರು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು ಮೊದಲಾಗಿ ೧೧ ಪೀಳಿಗೆಗಳಾದುವು ಅಷ್ಟು ಪ್ರಾಯವಾದರೂ ಲೀ ಜಿಗ್ ಯನ್ನನು ಸಂಪೂರ್ಣ ನಿರೋಗಿಯೂ ಸ್ವಸ್ಥಚಿತ್ತನೂ ಆಗಿರುವನು

ಲೀ ಜಿಗ್ ಯನ್‌ನು ಅವೆಯಂತೆ ಕೂತುಕೊಳ್ಳುತ್ತಾನೆ ಹಂಸದಂತೆ ನಡೆಯುತ್ತಾನೆ ನಾಯಿಯಂತೆ ಅಡ್ಡಬಿದ್ದು ನಿದ್ರಿಸುತ್ತಾನೆ ದಿನಾಲೂ ೩೦, ೩೦ ಮೈಲಿ ಕಾಲ್ನಡೆಯಿಂದಲೇ ಸಂಚರಿಸುತ್ತಾನೆ

ಕುತೂಹಲಿಗಳಾದವರು ದೀರ್ಘಾಯುಷ್ಯದ ಮರ್ಮವನ್ನು ಲೀ ಜಿಗ್ ಯನ್‌ನೊಡನೆಯೂ ವಿಚಾರಿಸಿದರು— ಚೆನ್ನಾಗಿ ಕೆಲಸ ಮಾಡುತ್ತೇನೆ ಹೃದಯವನ್ನು ಶಾಂತವಾಗಿಡುತ್ತೇನೆ ಆದ್ದರಿಂದ ಇಷ್ಟು ಕಾಲ ಬದುಕಿ ಬಂದಿದ್ದೇನೆ ಇನ್ನೂ ೫೦ ೧೦೦ ವರ್ಷಗಳ ತನಕ ಬದುಕುವ ಭರವಸೆ ಇದೆ' ಎಂದು ಅವರಿಗೆ ಆ ಮಹಾಶಯನು ಹೇಳಿದನಂತೆ

ಭಾರತೀಯರ ದುರ್ಭಾಗ್ಯದಿಂದ ಅವರಷ್ಟು ಅಲ್ಪಾಯುಗಳು ಈಗ ಪ್ರಪಂಚದಲ್ಲೇ ಇರುವುದಿಲ್ಲ. ಅವರ ಸರಾಸರಿ ಆಯುಷ್ಯ ಪ್ರಮಾಣವು ೨೫-೩೬ ವರ್ಷಗಳು ಮಾತ್ರ. ಈ ಕಾಲದೊಳಗಾಗಿ ಸಾಯುವವರೇ ಬಹಳ ಮಂದಿ ಈ ಅವಧಿಯನ್ನು ಮೀರಿ ಬದುಕಿದರು ದೊಡ್ಡದೊಂದು ಗಂಡಾಂತರದಿಂದ ಪಾರಾದವರೆಂದು ಸರಿ ೫೦-೬೦ ವರ್ಷಗಳ ತನಕ ಬದುಕಿದವರನ್ನು ಪುಣ್ಯಶಾಲಿಗಳೂ ಭಾಗ್ಯಶಾಲಿಗಳೂ ಎಂಬುದಾಗಿ ತಿಳಿಯುತ್ತಾರೆ. ೬೦ನೇ ಜನದಿನವನ್ನು ದಾನದಕ್ಷಿಣೆ ಬ್ರಾಹ್ಮಣ ಸಂತರ್ಪಣ ಮೆರವಣಿಗೆ ಉತ್ಸವಾದಿಗಳಿಂದ ಸಂಭ್ರಮದಿಂದ ಆಚರಿಸುತ್ತಾರೆ ಆ ದಿನ ಅವರಿಗೆ ಒಂದು ಮಹಾ ಪರ್ವದ ದಿನ

ಶತಸಂವತ್ಸರ ದೀರ್ಘ ಆಯುಃ ಎಂದ ವೈದಿಕ ಪುರೋಹಿತರು ಭಾರತೀಯರನ್ನು ಹರಸಿ ಆಶೀರ್ವದಿಸ ನರ ೧೦೦ ವರ್ಷಗಳ ತನಕ ಬದುಕಿ ಬಾಳ ಬೇಕೆಂದರೆ ೨೫೦ರ ಪಾಲಿಗೆ ೨೦

(೧೫ನೇ ಪುಟವನ್ನು ನೋಡುವುದು)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಇಂದಿನ ಅಪ್ರತಿಮ ಔಷಧ ಅಂಗ್ಲೀಯ ಮತ್ತು ಆಯುರ್ವೇದ ಔಷಧಿಗಳೊಂದಿಗೆ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬಾತುಕೊಳ್ಳುವಿಕೆ, ಸರ್ವ ಪ್ರಕಾರದ ಪ್ರಮೇಹ ... ಯಾವುದೇ ಸ್ಥಿತಿಯಲ್ಲಿರಲಿ, ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ... ಸ್ರಾವ ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಗದಿಂದುಂಟಾದ ವ್ಯಾಧಿಗಳಿಗೆ ಖಾತ್ರಿ ...

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಖರ್ಚು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturer **Dr D N JASANI,** Vithalbhai Patel Road, BOMBAY 4

ಹೊಟ್ಟೆವ್ರಣದಿಂದ ನಾನು ಮೃತ್ಯುವಿನ ಬಾಯಿಗೆ ತುತ್ತಾಗುತ್ತಿದ್ದೆನು

ಕೈಸ್ಟ್ ಗಾರ್ಡನ ಉದ್ಯೋಗವು, ಹೊಟ್ಟೆ ಸಂಬಂಧ ಕಾಯಿಲೆಗಳುಂಟಾಗಲು ಅತ್ಯಂತ ಅನುಕೂಲವು ಮಿ॥ ಬೆಲಿಸ್ ಎ ಬೋರ್ವ ಕೈಸ್ಟ್ ಗಾರ್ಡನು, ಹೊಟ್ಟೆವ್ರಣದ ಸಂಕಟವನ್ನು ಹೊಂದುವವನಾದನು ಅದರಿಂದ ಆತನ ವ್ಯಕ್ತಿಲೋಕದ ಶಕ್ತಿಯಕ್ಕೆ ಕೆಡುತ್ತಿದ್ದನು ಎಕ್ಸ್ ಪ್ರಯೋಗದಿಂದ ಆತನ ಉದರದ ಪರೀಕ್ಷೆ ಮಾಡಲಾಯಿತು ಬಹಳ ಸಮಯ ಆತನಿಗೆ ಪಥ್ಯದ ಅನುಪಾನದಲ್ಲಿ ಇಡಲಾಯಿತು ಆದರೆ ಹೊಟ್ಟೆನೋವು ಇದ್ದಂತೆಯೇ ಇತ್ತು ಆತನಿಗೆ ಹಸಿವಿರಲಿಲ್ಲ —ಕೆಲಸ ಮಾಡಲು ಅಸಾಧ್ಯವೇ ಇತ್ತು

ಈಗ ಆತನು ಹೀಗೆ ಬರೆಯುತ್ತಿದ್ದಾನೆ —

" ಮೆಕ್ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರನ್ನು ಉಪಯೋಗಿಸುವುದೆಂದು ನಾನು ನಿರ್ಣಯ ಮಾಡಿದೆನು ನನ್ನ ಉದರನೋವು ಮಾಯವಾದವು, ಮತ್ತೆಂದೂ ಬರಲಿಲ್ಲ ಈಗ ನಾನು ಯಾವತ್ತೂ ಆಹಾರಗಳನ್ನು ಸೇವಿಸುತ್ತಿದ್ದೇನೆ ಆದರೆ ಆಹಾರ ಸೇವನೆಯ ನಂತರ ನಾನು ಒ ದಿಷ್ಟು ನಿಮ್ಮ ಪೌಡರನ್ನು ಸೇವಿಸುತ್ತೇನೆ ಕೆಲಸಕ್ಕೆ ಹೋಗುತ್ತಿರುವಾಗ ನಾನದನ್ನು ಒಯ್ಯುತ್ತಿದ್ದೇನೆ ಅದಿಲ್ಲದೆ ನನಗೆ ಸಮಾಧಾನವಿಲ್ಲ '

ಮೆಕ್ಲೀನ್ ಬ್ರೈಂಡ ಸ್ಟೊಮಕ್ ಪೌಡರ ... ಅಷ್ಟು ವಿಚಿತ್ರ ತರದಲ್ಲಿ ... ವುದಾದರೆ ... ಸಂಕಟಗಳು ... ಮೊದಲ ಮೆಕ್ಲೀನ್ ಪೌಡರನ್ನು ನೀವು ಯಾಕೆ ಸೇವಿಸಬಾರದು ಈಗಲೆ ಮೆಕ್ಲೀನ್ ಪೌಡರನ್ನು ಉಪಯೋಗಿಸಲು ಪ್ರಾರಂಭಿಸಿರಿ ... ಮೆಕ್ಲೀನ್ ಪೌಡರ ... ಪೆಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲೆ

Alex. C. Maclean

ಎ ಒ ಸಹಿಯಿರುವಂತೆಯೂ, ಅದೆ ಸಹಿಯ ... ಕಾಣದ ... ಇವು ಖಾತ್ರಿ ಮೆಕ್ಲೀನ ... ಹುಗಳು—ನಿಮ್ಮ ಹೊಟ್ಟೆ ನೋವನ್ನು ಕೂಡಲೆ ನಿವಾರಿಸುವ ಚಿಹ್ನೆಗಳು

ಇದು ಬಿಲ್ಲೆ ... ಗಳಲ್ಲೂ ದೊರೆಯುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜೆ ಎಲ್ ಮೋರಿಸನ್, ಸನ್ ಎಂಡ್ ಜೋನ್ಸ್, (ಇಂಡಿಯಾ) ಲಿಮಿಟೆಡ್

ಸ್ಟೆಂಡಾರ್ಡ ಬಿಲ್ಡಿಂಗ್ ಹೊರ್ನ್ಬಿ ರೋಡ್ ಮುಂಬಯಿ

S. No. 70

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮಿನಿವಾಸ' ಬಿಲ್ಡಿಂಗ್ಸ್, ಕುಂದಾಪುರ, ದ ಕ.

ಬ್ರೇಂಚ್ ಆಫೀಸುಗಳು:

- ಕುಂದಾಪುರ,
- ಕುಮಟಾ,
- ಕೋಟೇಶ್ವರ,
- ಬೈಂದೂರು,
- ಗೋಕರ್ಣ,
- ವೀರರಾಜೇಂದ್ರಪೇಟೆ,
- ಸೋಮವಾರ ಪೇಟೆ,
- ಶಿವಮೊಗ್ಗಾ,
- ತರೀಕೆರೆ.

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ತೆರೆಯಲ್ಪಡುವುವು.

ಶಿವಮೊಗ್ಗಾ ತಾ 26-8-1937.

ತರೀಕೆರೆ ,, 30-8-1937.

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡಿಸಲ್ಪಡುವುವು.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಮ್ಮದೇ ಆಗಿರುವ ಆದರ್ಶಪ್ರಾಯವಾದ ಈ ಬೇಂಕಿನಲ್ಲಿಯೇ ನಿಮ್ಮ ವ್ಯವಹಾರಗಳನ್ನು ನಡಿಸಬೇಕಾಗಿ ಕೋರುತ್ತೇವೆ.

'Laxmi-Nivas' Buildings, Coondapoor, 8-1-1937. } The Agricultural & Industrial Bank, Ltd.

Sri Rameswara Mutt and Kodanda Ram Temple Reconstruction Fund Account.

RECEIPTS AND PAYMENTS ACCOUNT UP TO 30TH JUNE 1937.

ಶ್ರೀ ರಾಮೇಶ್ವರ ಮಠ ಮತ್ತು ಕೋದಂಡರಾಮ ದೇವಾಲಯದ ಜೀರ್ಣೋದ್ಧಾರ ನಿಧಿಯ ಲೆಖ್ಖಾಚಾರ

1937 ಜೂನ್ ತಿಂಗಳ 30 ತಾರೀಖಿನ ವರೆಗಿನ ಜಮಾ—ಖರ್ಚು.

Receipts (ಜಮಾ)	Rs.	As.	Ps.	Rs.	As.	Ps.
Amount Subscribed (ಚಂದಾ ಪಟ್ಟಿಯಲ್ಲಿ ತೋಟಲಿಗೆ) ...	48764	9	4			
Subscriptions and Donations Collected (ವಸೂಲಾದ ಚಂದಾಗಳು) ...	44909	11	11			
Add: Excess payment received (ಹೆಚ್ಚಾಗಿ ಬಂದ ತೊಟಲಿಗೆ) ..	16	1	0	44,925	12	11
Donations from Messrs. Mijar Annappa Ananth Pai & Sons towards purchase of a plot at Rameswaram (ರಾಮೇಶ್ವರದಲ್ಲಿ ಒಂದು ಸ್ಥಳವನ್ನು ಕೊಳ್ಳುವದಕ್ಕೆ ಮಿಜಾರ್ ಅಣ್ಣಪ್ಪ ಅನಂತ ಪೈ ಮತ್ತು ಮಕ್ಕಳು, ಇವರಿಂದ ಸಹಾಯ ಧನ)				530	0	0
Advance Account (ಮುಂಗಡ ಲೆಖ್ಖಾಚಾರ)						
Amount advanced by Mr. K. S. Pai (ಶ್ರೀ ಕಸ್ತೂರಿ ಸರ್ವೋತ್ತಮ ಪೈಯವರಿಂದ ಸಂದದ್ದು) ..	1768	12	11			
by Mr. B. A. Rao (ಶ್ರೀ ಬಿ. ಎ. ರಾಯರಿಂದ ಸಂದದ್ದು)	100	0	0			
by Mr M. V. Naik (ಶ್ರೀ ಎಂ. ವಿ. ನಾಯಕರಿಂದ ಸಂದದ್ದು)	497	6	0	2 366	2	11
Interest on Savings Bank Account (ಸೇವಿಂಗ್ಸ್ ಬ್ಯಾಂಕ ಖಾತೆಯಿಂದ ಬಡ್ಡಿ)				389	0	1
				48210	15	11

Payments (ಖರ್ಚು)	Rs.	As.	Ps.	Rs.	As.	P
To Building Materials Account (ಕಟ್ಟಡಕ್ಕೆ ಬೇಕಾದ ಸಾಮಾನುಗಳ ಲೆಖ್ಖ)				31,964	12	5
„ Masonary work (ಕಲ್ಲಿನ ಕೆಲಸ)				5 985	1	4
„ Gold work for Kalesa (ಕಲಶ ಬಂಗಾರದ ಕೆಲಸ)				138	0	0
„ Wages (ಕೂಲಿ)				5,997	7	2
„ Remuneration paid to Architects (ಶಿಲ್ಪಿಗಾರರಿಗೆ ವೇತನ)				350	0	0
„ „ to Engineer (ಇಂಜಿನಿಯರುಗಳಿಗೆ ವೇತನ)				935	0	0
„ Sundries (ಬಾಬತುಗಳು)				610	2	6
„ House Rent (ಮನೆ ಬಾಡಿಗೆ)				239	14	0
„ Miscellaneous Charges (ಮಿಸಲೇನಿಯಸ್ ಖರ್ಚು)				165	9	6
„ Postage and Telegrams (ಅಂಚೆ ಮತ್ತು ತಂತಿ)				94	9	9
„ License Fees (ಲೈಸೆನ್ಸ್ ಬಗ್ಗೆ ಖರ್ಚು)				46	15	8
„ Travelling Expenses (includes the travelling expenses of H. H Swamier and personal staff to Rameswaram via Madras as well as that of purohits, cooks and bandsmen) ಪ್ರಯಾಣದ ಖರ್ಚು (ಶ್ರೀ ಸ್ವಾಮಿಯವರು, ಅವರ ಪರಿವಾರದ ಸಮೇತ ಮದ್ರಾಸಿನ ಮಾರ್ಗವಾಗಿ ತೆರಳಿದುದು, ಇದರಲ್ಲಿ ಪುರೋಹಿತ್, ಅಡಿಗೆ ಕೆಲಸಗಾರರ ಇತರ ಸೇವಕರ ಪ್ರಯಾಣ ಖರ್ಚು ಸೇರಿಸಲಾಗಿದೆ)				1,972	12	6
„ Bank Charges (ಬ್ಯಾಂಕಿನ ಚಾರ್ಜು)				0	4	0
„ Price of the plot for the Mutt (ಮಠದ ಸ್ಥಳಕ್ಕೆ ಕೊಟ್ಟ ಮೌಲ್ಯ)				486	0	0
„ Printing and Stationery (ಛಾಪಾ ಮತ್ತು ಸ್ಟೇಶನರಿ)				132	14	3
„ Opening Ceremony Expenses (ಪ್ರಾರಂಭೋತ್ಸವ ಸಮಾರಂಭದ ಬಗ್ಗೆ ಖರ್ಚು)				3,683	12	4
„ Cash & Other balances (ನಗದಿ ಮತ್ತು ಇತರ ಉಳಿತಾಯಗಳು)						
With H H Swamier (ಶ್ರೀ ಸ್ವಾಮಿಯವರಲ್ಲಿ)	3640	4	11			
Fixed Deposit in Canara Bank Ltd for Allahabad Mutt reconstruction (ಕೆನರಾ ಬ್ಯಾಂಕಿನಲ್ಲಿ ಅಲಹಾಬಾದು ಮಠದ ಜೀರ್ಣೋದ್ಧಾರದ ಬಗ್ಗೆ)	1651	0	0			
With Bankers in Current Account (ಬ್ಯಾಂಕಿನಲ್ಲಿ ಕರೆಂಟ್ ಖಾತೆ)	134	7	7	5,425	12	6
				48,210	15	11

Mangalore, ಮಂಗಳೂರು, 21–7–1937

M. Padmanabha Raghunath Pai, *Hony Treasurer,* ಎಂ. ಪದ್ಮನಾಭ ರಘುನಾಥ ಪೈ, ಗೌರವ ಕೋಶಾಧಿಕಾರಿ.

Kasturi Sarvothama Pai, *Hony Secretary,* ಕಸ್ತೂರಿ ಸರ್ವೋತ್ತಮ ಪೈ, ಗೌರವ ಕಾರ್ಯದರ್ಶಿ

BOMBAY, ಬೊಂಬಾಯಿ, 27 7 1937

(*Sd*) **Shri Sukrathendra Thritha Swami,** *H H the Swamier of Kasi Mutt.*

(ಸಹಿ) ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿ, ಕಾಶೀಮಠ.

Examined and found Correct as per Books Maintained (ಈ ಲೆಖ್ಖವನ್ನು ಪರಿಶೋಧಿಸಿ, ಅದು ಸರಿಯಾಗಿರುವುದೆಂದು ಕಂಡುಹಿಡಿದಿರುವೆನು.)

MANGALORE, ಮಂಗಳೂರು, 2—8—1937. (*Hony Auditor*) **A. Umanath Rao,** B A., G D A., D Econ R.A *Registered Accountant*

(ಗೌರವ ಆಡಿಟರು) ಎ. ಉಮಾನಾಥ ರಾವ್, ಬಿ ಎ,

SUBSCRIBERS LIST.

		Subscribed Rs	As	Ps	Paid Rs	As	Ps	Balance Rs	As	Ps
1	Sri Venkatramana Temple, Mangalore	2000	0	0	2000	0	0			
2	Mangalore Collections	16579	0	0	16115	4	0	463	12	0
3	Udipi „	2308	5	0	2244	5	0	64	0	0
4.	Buntwal „	1989	12	3	1989	12	3			
5	Karkal „	1291	14	3	1186	10	3	105	4	0
6.	Karkal Temple	500	0	0	500	0	0			
7.	Bombay Collections	2542	4	0	2542	4	0			
8.	Madras „	2818	3	0	1851	15	0	966	4	0
9	Puttur „	1724	0	0	1415	0	0	309	0	0
10.	Hangarkatta „	227	12	0	217	8	0	10	4	0
11.	Kalyanpur „	1077	13	5	912	12	0	165	1	5
12.	Moolky „	1374	8	0	1206	8	0	168	0	0
13.	Moolky Temple	1500	0	0	1500	0	0			
14.	Kasargode Collections	735	4	0	512	12	0	222	8	0
15.	Uppinangadi & Kadaba Collns	1025	4	0	747	4	0	278	0	0
16	Uppinangadi Temple	55	0	0	55	0	0			
17.	Udiyavar Collections	387	0	0	368	12	0	18	4	0
~~18.~~	~~Modabidri „~~	~~305~~	~~5~~	~~0~~	~~290~~	~~1~~	~~0~~	~~15~~	~~4~~	~~0~~
19.	Kumbla „	470	8	0	296	4	0	174	4	0
20.	Punjalkutta „	188	8	0	159	4	0	29	4	0
21.	Calicut „	488	0	0	472	12	0	15	4	0
22.	Arkal „	43	12	0	35	4	0	8	8	0
23.	Panemangalore, Collections	360	0	0	345	0	0	15	0	0
24.	Mani „	18	12	0	18	12	0			
25.	Beltangady „	116	13	0	95	9	0	21	4	0
26.	Guruvayankere „	78	5	0	61	13	0	16	8	0
27.	Ujre „	58	0	0	52	4	0	5	12	0
28.	Nadigal „	59	12	0	54	8	0	5	4	0
29.	Matti „	14	8	0	14	8	0			
30.	Sampige „	2	8	0	2	8	0			
31.	Bola „	53	0	0	53	0	0			
32.	Bellare „	73	0	0	5	0	0	68	0	0
33.	Padu Pali „	74	12	0	74	12	0			
34	Kal Munkur, Collections	40	0	0	38	0	0	2	0	0
35	Kinnigoli „	106	0	0	106	0	0			
36	Philar „	5	0	0	5	0	0			
37.	Kateel „	20	4	0	20	4	0			
38	Hosangadi „	151	8	0	151	8	0			
39	Munkur „	113	4	0	113	4	0			
40	Mukkadap „	26	4	0	26	4	0			
41	Kavatharu Puttur, Karandire & Kolekadi	62	8	0	62	8	0			
42	Katpadi, Collections	1270	13	0	1224	9	0			
43	Ullal „	772	0	0	752	0	0			
44	Gurpur „	516	10	0	516	10	0			
45	Nanchar „	155	0	0	155	0	0			
46.	Surathkul „	25	0	0	25	0	0			
47	Manjeshwar „	10	0	0	10	0	0			
48	Sagar „	5	4	0	5	4	0			
49	Shirale „	5	0	0	5	0	0			
50	Coondapoor „	616	9	5	560	9	5	56	0	0
51	Kota „	195	8	0	193	0	0	2	8	0
52	Champi „	482	0	0	482	0	0			
53	Mabukal „	58	0	0	38	0	0	20	0	0
~~54.~~	~~Brahmavar „~~	~~351~~	~~8~~	~~0~~	~~294~~	~~4~~	~~0~~	~~57~~	~~4~~	~~0~~
55.	Barkur „	185	0	0	185	0	0			
56.	Salikere „	30	8	0	30	8	0			
57.	Kunjal „	17	0	0	17	0	0			
58.	Vanse „	81	8	0	81	8	0			
59.	Gangolli „	705	2	0	703	14	0	1	4	0
60.	Nagar „	105	0	0	105	0	0			
61.	Hosdurg „	95	0	0	95	0	0			
62.	Kaup Temple	1001	0	0	1001	0	0			
63.	Gurpur Temple	508	0	0	508	0	0			
64.	Bantwal Temple	505	0	0	—	—		505	0	0
	TOTAL	48764	9	4	44909	11	11	3854	13	5

Kasturi Sarvothama Pai, *Hony. Secretary.* **A. Umanath Rao.** **M. Padmanabha Raghunath Pai.** *Hony. Treasurer*

ಪುರೋಹಿತ ಶಿಕ್ಷಣ ಮತ್ತು ಪರೀಕ್ಷೆ.

ಶ್ರೀಗಳಾದ ಬಣ್ಣಂಜೆ ಸುಬ್ಬರಾಯರು (ಗೌಡ ಸಾರಸ್ವತ ಸಮಾಜಸೇವಕ, ಮೂಡಬಿದ್ರೆ) ಪುರೋಹಿತರ ಶಿಕ್ಷಣ ಬಗ್ಗೆ ಮತ್ತು ಪರೀಕ್ಷೆ ಕುರಿತು ವಿಚಾರಗಳಾಗಬೇಕೆಂದು ಶ್ರೀ ಗೋಕರ್ಣಮಠದ ಶ್ರೀ ಸ್ವಾಮಿಯವರಿಗೆ ಅರ್ಪಿಸಿದ ಬಿನ್ನಹ ಪತ್ರ.

ಗೋವಾ ಪ್ರಾಂತ್ಯ ಪರ್ತಗಾಳಿಯಲ್ಲಿ ಇವ ಶ್ರೀಮತ್ ಗೋಕರ್ಣ ಮಠಾಧೀಶ ಶ್ರೀ ಸ್ವಾಮಿಗಳವರ ಚರಣ ಕಮಲಗಳಿಗೆ —

ದಕ್ಷಿಣ ಕನ್ನಡ, ಮಲಬಾರು, ಕೊಚ್ಚಿ, ತಿರುವಾಂಕೂರು ಜಿಲ್ಲೆಗಳಲ್ಲಿರುವ ಗೌಡ ಸಾರಸ್ವತ ಸಮಾಜದ ಜನರ ಈಗಿನ ಸ್ಥಿತಿಯನ್ನು ಲೌಕಿಕ ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೆ ಅದು ಅತ್ಯಂತ ಹೀನವಾಗಿರುತ್ತದೆಂಬುದು ತಿಳಿದವರಿಗೆ ಗೊತ್ತಿದೆ. ಈ ಅಧೋಗತಿಗೆ ಅನೇಕ ಕಾರಣಗಳಿದ್ದರೂ ಇವುಗಳಲ್ಲಿ ಮುಖ್ಯವಾಗಿರುವದು ಈಗಿನ ವೈದಿಕ, ಅವೈದಿಕ ಜನರು ಯಥಾರ್ಥ ಜ್ಞಾನವಿಹೀನರಾಗಿ ತಾವು ಮಾಡಬೇಕಾದ ನಿತ್ಯನೈಮಿತ್ತಿಕ ಕರ್ಮವನ್ನು ಲೋಪ ಮಾಡುವದರಿಂದಲೂ ಅಶಾಸ್ತ್ರ ರೀತಿಯಾಗಿ ನಡಿಸುವದೆಂಬುದನ್ನು ಖಂಡಿತವಾಗಿ ಹೇಳಬಹುದು. ಸಮಾಜದ ದೇವಸ್ಥಾನ ಮತ್ತು ಮಠಗಳಲ್ಲಿ ಶ್ರೀದೇವರುಗಳ ಅರ್ಚನೆಯು ಸರಿಯಾದ ಮಂತ್ರತಂತ್ರೋಕ್ತ ವಿಧಿಪ್ರಕಾರವಾಗಿ ನಡಿಯುವದಿಲ್ಲವಾಗಿರುವದರಿಂದ ಶ್ರೀದೇವರುಗಳ ಸಾನಿಧ್ಯವು ಕುಂದಿ ಜನರ ಮೇಲಿರುವ ಕೃಪೆಯು ಕಡಿಮೆಯಾಗಿರುತ್ತದೆಂಬುದು ಸಹಾ ಅನೇಕರಿಗೆ ತಿಳಿದಿರುತ್ತದೆ. ಸಮಾಜದಲ್ಲಿರುವ ಅವೈದಿಕ ಜನರಿಗೆ ವೈದಿಕ ಜನರು ಗುರುಗಳಾಗಿರುವ "ಯಥಾಗುರು ತಥಾಶಿಷ್ಯ" ಎಂಬ ಗಾದೆಯಂತೆ ವೈದಿಕರ ಸ್ಥಿತಿಯನ್ನು ಉರ್ಜಿತಪಡಿಸಿದಲ್ಲಿ ಅವೈದಿಕ ಜನರ ಸುಧಾರಣೆಯೂ ಸಹಾ ಆಗುವದು. ಈ ವಿಚಾರದಿಂದ ಪೂಜ್ಯ ಪಂಡಿತ ಮದನಮೋಹನ ಮಾಲವೀಯರು ಹಿಂದೂ ಸಮಾಜದ ಉದ್ಧಾರವನ್ನುದ್ದೇಶಿಸಿ ಕಾಶೀ ವಿಶ್ವವಿದ್ಯಾಲಯದಲ್ಲಿ "ಪುರೋಹಿತ ಪರೀಕ್ಷೆ" ಎಂಬ ವಿದ್ಯಾಶಾಖೆಯನ್ನು ಏರ್ಪಡಿಸಿ ವೈದಿಕರಾಗಲಿಕ್ಕೆ ಇಚ್ಛಿಸುವ ಯುವಕರನ್ನು ಮೂರು ವರುಷಗಳ ವರೆಗೆ ವಿಶ್ವವಿದ್ಯಾಲಯದಲ್ಲಿ ಸದ್ರಿ ಪರೀಕ್ಷೆಗೆ ನಿಶ್ಚಯಿಸಲ್ಪಟ್ಟ ಪಾಠಪುಸ್ತಕಗಳಲ್ಲಿ ಶಿಕ್ಷಣೆಯನ್ನು ಕೊಟ್ಟು ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸರ್ಟಿಫಿಕೇಟುಗಳನ್ನು ಕೊಡುವ ನಿಯಮವನ್ನಿಟ್ಟಿರುತ್ತಾರೆ. ಗೌ। ಸಾ। ಸಮಾಜದ ವೈದಿಕ ವರ್ಗದ ಸಣ್ಣ ಹುಡುಗರಿಗೆ ಮೇಲೆ ಹೇಳಿದ ಪುರೋಹಿತ ಪರೀಕ್ಷೆಯ ಪುಸ್ತಕಗಳನ್ನು ನಿಪುಣರಾದ ವಿದ್ವಾಂಸರಿಂದ ದಕ್ಷಿಣ ದೇಶದಲ್ಲಿಯೇ ಶಿಕ್ಷಣ ಕೊಡಿಸಿ, ಪರೀಕ್ಷಿಸಿ, ಪರೀಕ್ಷೆಯಲ್ಲಿ ಜಯಶೀಲರಾದವರಿಗೆ 'ಪುರೋಹಿತ' ನಾಮಾಂಕಿತದ ಬಿರುದಿನ ಪತ್ರವನ್ನು ಕೊಟ್ಟು ಸಮಾಜವನ್ನು ಉದ್ಧರಿಸಬೇಕಾಗಿ ಸಮಾಜದ ವೈದಿಕ ಧರ್ಮಗುರುಗಳಾಗಿರುವ ಶ್ರೀಮತ್ ಕಾಶೀ ಮಠಾಧೀಶ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಗಳ ಸನ್ನಿಧಿಯಲ್ಲಿ ಸಮಾಜ ಸೇವಕನು ಬಂಟ್ವಾಳದ ಕಾಶೀ ಮಠದಲ್ಲಿ ಕಳೆದ ನವಂಬರ ತಿಂಗಳಲ್ಲಿ ಅತ್ಯಗ್ರಹಪೂರ್ವಕ ಸಮಕ್ಷದಲ್ಲಿ ಅರಿಕೆ ಮಾಡಿಕೊಂಡದಕ್ಕೆ ಶ್ರೀ ಸ್ವಾಮಿಗಳವರು ಯಾವ ತರದ ಉತ್ತರವನ್ನು ಸಹ ಕೊಡದಿರುವುದರಿಂದ ಈ ಬಿನ್ನಹ ಪತ್ರದಲ್ಲಿ ಸೂಚಿಸಿರುವ ಕಾರ್ಯವನ್ನು ಸಮಾಜಕ್ಕೆ ಹಸ್ತಾಮಲಕವನ್ನಾಗಿ ಮಾಡುವ ಕಾರ್ಯದಲ್ಲಿ ಪ್ರಕೃತದಲ್ಲಿ ಗೋಕರ್ಣ ಮಠಾಧೀಶರಲ್ಲಿದ್ದು ಬೇರೆ ಯಾರಾದರೂ ವಿದ್ವಾಂಸರೂ ದಕ್ಷರೂ ಉದಾರಹೃದಯರೂ ಆಗಿರುವವರೊಬ್ಬರನ್ನಾದರೂ ಸಮಾಜ ಸೇವಕನು ತಿಳಿಯಲಾರನಾಗಿರುವದರಿಂದ ಭಗವತ್ ಪ್ರೇರಣೆಯಿಂದಲೇ ಈ ಬಿನ್ನಹ ಪತ್ರವನ್ನು ವಿನಯಪೂರ್ವಕವಾಗಿ ಶ್ರೀ ಸ್ವಾಮಿಗಳ ಪಾದ ಕಮಲಗಳಿಗೆ ಕಳುಹಿಸಿರುತ್ತಾನೆ. ಕಾಶೀ ವಿದ್ಯಾಪೀಠದಲ್ಲಿ ನಿಯಮಿಸಿರುವ ಪುರೋಹಿತ ಪರೀಕ್ಷೆಯ ಪುಸ್ತಕಗಳ ಪಠ್ಯ ಕಾರ್ಯಕ್ರಮವನ್ನು ಲಗ್ತಮಾಡಿರುವ ಪಟ್ಟಿಯಲ್ಲಿರುತ್ತದೆ. ಇತ್ತ ಕಡೆಯ ಕೆಲವು ವೈದಿಕ ಹುಡುಗರನ್ನು ಮಾತನಾಡಿಸಿ ನೋಡಿದಲ್ಲಿ ಸದ್ರಿ ಪರೀಕ್ಷೆಯಲ್ಲಿ ಜಯಶೀಲರಾಗಿ ಬರಬೇಕೆಂಬ ಆಶೆಯು ತಮಗೆ ಉಂಟೆಂತಲೂ ಆದರೆ ಕಾಶಿಗೆ ಹೋಗುವರೆ ಮತ್ತು ಅಲ್ಲಿ ಬೇಕಾಗುವ ಅಗತ್ಯದ ಖರ್ಚು ಮಾಡುವದು ತಮಗೆ ಸಾಧ್ಯವಿಲ್ಲವೆಂತ ಹೇಳಿರುತ್ತಾರೆ. ಶ್ರೀ ಗೋಕರ್ಣ ಮಠಾಧೀಶ ಸ್ವಾಮಿಗಳವರು ಪರ್ತಗಾಳಿಯಲ್ಲಿ ಸದ್ರಿ 'ಪುರೋಹಿತ' ಪರೀಕ್ಷೆಯ ಶಿಕ್ಷಣವನ್ನು ಕೊಡುವದಾದರೆ ಇತ್ತ ಕಡೆಯ ವೈದಿಕರ ಹುಡುಗರು ಸ್ವಾಮಿಗಳವರ ಕೃಪೆಗೆ ಶಿಕ್ಷಣ ಪಡೆಯಲಿಕ್ಕೆ ಬಹಳ ಸಂತೋಷಗೊಳ್ಳುವರು. ಇದರಿಂದ ಸಮಾಜದಲ್ಲಿ ಅಧೋಗತಿಗೆ ಹೋಗಿ ನಿಂತಿರುವ ವೈದಿಕ ಧರ್ಮವನ್ನು ಉದ್ಧರಿಸಬೇಕಾಗಿ ಸಮಾಜಕ್ಕೆ ಸೇರಿದ ವೈದಿಕ ಧರ್ಮ ಸ್ಥಾಪನಾಚಾರ್ಯರುಗಳಲ್ಲಿ ಈಗ ಸದ್ಯಕ್ಕೆ ಶ್ರೇಷ್ಠರಾಗಿರುವ ಗೋಕರ್ಣ ಮಠಾಧೀಶ ಶ್ರೀ ಸ್ವಾಮಿಗಳವರ ಪಾದ ಕಮಲಗಳನ್ನು ಪ್ರಾರ್ಥಿಸಿ ಸಾಷ್ಟಾಂಗ ಪ್ರಣಾಮಗಳಿಂದ ಈ ಪತ್ರ ಮುಗಿಸಿ ಇದರ ಪ್ರತ್ಯುತ್ತರ ಅಪ್ಪಣೆಯನ್ನು ಮೇಲೆ ಬರೆದ ಹೆಸರು ವಿಳಾಸಕ್ಕೆ ದಯಪಾಲಿಸಬೇಕಾಗಿ ದೈನ್ಯದಿಂದ ಬೇಡಿಕೊಳ್ಳುತ್ತೇನೆ.

[ಈ ಕುರಿತು ಗೌಡ ಸಾರಸ್ವತ ಬ್ರಾಹ್ಮಣರು ಚಳವಳಿ ನಡೆಯಿಸಿ, ಶ್ರೀ ಸ್ವಾಮಿಯವರು ಆ ಕುರಿತು ಗಮನ ತೆಗೆದುಕೊಳ್ಳುವಂತಾಗಬೇಕು. ಸಂ. ಸ್ವ.]

THEY WORK WHILE YOU REST.

Industrious Rupees are busy turning out more Rupees to savers in our bank. But they do not jump in and go to work of their own free will. You have to start them and encourage them. The best way is to give them friends. Rupees are very sociable, and if they are lonely they do little. But if you keep adding more Rupees in to your account they do their best. And the more they work the more you can rest.

RESOURCES OF A CRORE. ESTD. 1906 CANARA BANK, LIMITED.

ವಿಚಿತ್ರ-ಪ್ರಪಂಚ.

("ವಿಶ್ವಸಂಚಾರ"ದಿಂದ)

ಚುಂಬನ ನಿರಾಕರಣಕ್ಕಾಗಿ ಆತ್ಮಹತ್ಯೆ.

ಆಕೆಯ ಹೆಸರು ಮಿಸೆಸ್ ಮೆಜೋರಿ ಬಡ್ಡಿ! ಈಕೆಯು ಮೋಟರ್ ಗೆರೇಜಿನ ಮಾಲಿಕನಾದ ಜೋನ್ ಬಡ್ಡಿಯ ಪತ್ನಿ! ಮಿಸೆಸ್ ಬಡ್ಡಿಯ ಸ್ನೇಹಿತನು ಎಡ್ವರ್ಡ್ ರ್‍ಯಾಟ್. ಇಬ್ಬರೂ ಸಂಜೆ ವಿಹಾರಾರ್ಥವಾಗಿ ತೆರಳಿದವರು ತಮ್ಮ ಮಿತ್ರನೊಬ್ಬನ ಮನೆಗೆ ಹೋದರು. ಹರಟೆ ಕೊಚ್ಚುತ್ತಾ ಹಲವು ಸಮಯ ಕಳೆಯಿತು. ಮಾತನಾಡುವಾಗ ರ್‍ಯಾಟನಿಂದ ಒಂದು ಮಾತಿಗಾಗಿ ಕೋಪಗೊಂಡು ಮಿಸೆಸ್ ಬಡ್ಡಿಯು ಫಕ್ಕನೆ ಆ ಗೃಹದಿಂದ ಹೊರಬಿದ್ದಳು. ಆದರೆ ರ್‍ಯಾಟನು ಆಕೆಯನ್ನು ಸಮಾಧಾನಗೊಳಿಸ ಹೋಗಲಿಲ್ಲ—ಆತನ ವರ್ತನೆಯ ಕುರಿತು ಮಿತ್ರರು ವಿಪರೀತ ಗ್ರಹಿಸಬಹುದೆಂದು. ಸ್ವಲ್ಪ ಸಮಯದ ನಂತರ ರ್‍ಯಾಟನು ಮನೆಗೆ ಹೋಗುತ್ತಿರುವಾಗ ಪುನಃ ಆಕೆಯು ಗಂಟುಬಿದ್ದಳು. ಆಗ ಅವಳು ಪ್ರಸನ್ನ ಮುಖಿಯಾಗಿದ್ದಳು. ತನ್ನ ವರ್ತನೆಯ ಕುರಿತು ತನ್ನನ್ನು ಕ್ಷಮಿಸಬೇಕೆಂದು ಆಕೆಯು ರ್‍ಯಾಟನೊಡನೆ ಬೇಡಿದಳು. 'ಅದರ ಸೂಚಕವಾಗಿ ಒಂದು ಚುಂಬನವೀಯು' ಎಂದೂ ಹೇಳಿದಳು. ಆದರೆ ರ್‍ಯಾಟನು ಆಕೆಯನ್ನು ಕ್ಷಮಿಸಿರುವೆನೆಂದ. 'ನಿನಗೆ ಮದುವೆಯಾಗಿದೆ. ನನಗೂ ಆಗಿದೆ. ನಾವು ಪರಸ್ಪರ ಚುಂಬಿಸುವುದು ಸರಿಯಲ್ಲ' ಎಂದ. ಆಕೆಯನ್ನು ತನ್ನ ಕಾರಿನಲ್ಲಿ ಕುಳ್ಳಿರಿಸಿ ಮನೆಗೆ ತಂದುಬಿಟ್ಟ. ಇಳಿಗಿಳಿವಾಗ ಆಕೆ ಪುನಃ ಕೇಳಿದಳು. 'ಒಂದೇ ಒಂದು ಚುಂಬನ್ನೀಯಲಾರೆಯಾ?' ಆಗಲೂ ತಿರಸ್ಕರಿಸಿದ ರ್‍ಯಾಟ 'ಈಗಲ್ಲ, ಇನ್ನೊಂದು ದಿನ'! ಎಂದು ಹೇಳಿದ. ಮಿಸೆಸ್ ಬಡ್ಡಿಯು ಮೆಲ್ಲಮೆಲ್ಲನೆ ಮನೆಯ ಮೆಟ್ಟಲನ್ನು ಹತ್ತಿ ಹೋದಳು. ರ್‍ಯಾಟನು ತನ್ನ ಮನೆಗೆ ತೆರಳಿದ. ಮಿಸೆಸ್ ಬಡ್ಡಿಯು ಆಫೀಸಿನಲ್ಲಿ ಕುಳಿತಿದ್ದ ಜೋನ್ ಬಡ್ಡಿಯನ್ನು ನೋಡಿ ತನ್ನ ಕೋಣೆಗೆ ತೆರಳಿದಳು.

ಅಂದೇ ರಾತ್ರಿ ಮಿಸೆಸ್ ಬಡ್ಡಿಯ ತಾಯಿಯು ಮಗಳ ಊಟಕ್ಕೇಕೆ ಬರಲಿಲ್ಲ ಎಂದು ತಿಳಿಯಲು ಆಕೆಯ ಕೋಣೆಗೆ ಹೋದಳು. ಅಲ್ಲಿ ಕತ್ತಿಗೆಗೊಂದು ನೇಣನ್ನು ಸುತ್ತಿ, ಸತ್ತ ಮಗಳ ಕುರ್ಚಿಯ ಮೇಲೆ ಕುಳಿತಿದ್ದಳು. ಎಂದು ಆಕೆಯ ತಾಯಿಯು ನ್ಯಾಯಾಲಯದಲ್ಲಿ ತಿಳಿಸಿದಳು.

ರ್‍ಯಾಟನ ಚುಂಬನಕ್ಕಿಂತ, ಮೃತ್ಯುಚುಂಬನವೇ ಲೇಸೆನ್ನಿಸಿತೇನೋ?

ಕಾಲ್ಚೀಲ ತರಲು ಮರೆತುದಕ್ಕಾಗಿ ಗುಂಡಿಟ್ಟುಕೊಂಡ.

ತಾರುಣ್ಯದಲ್ಲೇ ಕಾಲಿಟ್ಟಿದ ಪತಿಪತ್ನಿಯರೀರ್ವರು —ನೋರ್ಮನ್ ಕ್ಲಾರ್ಕ ಮತ್ತು ಲೂಯಿಸಾ ಕ್ಲಾರ್ಕ! ಒಂದು ದಿನ ಲೂಯಿಸಾಳು ನೋರ್ಮನನೊಡನೆ ಒಂದು ಜೊತೆ ಸಿಲ್ಕಿನ ಕಾಲ್ಚೀಲ ತರಲು ಹೇಳಿದಳು. ಪತಿಯು ಒಪ್ಪಿದ. ಪೇಟೆಗೆ ಹೋದ. ಅಲ್ಲಿ ಬೇರೆ ಕೆಲಸಗಳ ಗಲಾಟೆಯಲ್ಲಿ ಕಾಲ್ಚೀಲದ ವಿಚಾರ ಮರೆತೇ ಹೋಯಿತು. ಬರಿ ಕೈಯಿಂದಲೇ ಮನೆಗೆ ಬಂದ. ಕೂಡಲೇ ಪತ್ನಿಯು ಕೇಳಿದಳು 'ಕಾಲ್ಚೀಲ ತಂದಿರಾ'? ನೋರ್ಮನನು ಇಲ್ಲವೆಂದ. ಲೂಯಿಸಾಳಿಗೆ ಬೇಸರವಾಯಿತೆಂತೆ ತೋರಿತು. ಅದನ್ನು ಗಂಡನು ಕಂಡುಕೊಂಡ. ನೆಟ್ಟನೆ ಮಾಳಿಗೆಗೆ ಹೋಗಿ ರಿವಾಲ್ವರ್ ತಂದ. ಪತ್ನಿಯೊಡನೆ ಹೇಳಿದ 'ನಾನಲ್ಲಾ ಬಲ್ಲೆ' ನೀನು! ಅಥವಾ ನಾನು' ಇಬ್ಬರಲ್ಲೊಬ್ಬರು ಮಾತ್ರ ಈ ಜಗತ್ತಿನಲ್ಲಿರಬೇಕು. ಪತ್ನಿಯು ಅದೇಕೆಂದು ಕೇಳಿದಳು. 'ನೀನು ನನ್ನನ್ನು ಪ್ರೀತಿಸುವುದಿಲ್ಲ. ನನ್ನ ಮೇಲಿರುವ ನಿನ್ನ ಪ್ರೀತಿಗಿಂತ ಹೆಚ್ಚು ಪ್ರೀತಿಯನ್ನು ನೀನು ಮುಖ್ಯವಾಗಿ ತೋರಿಸುತ್ತಿ' ಎಂದೆಂದು ಮುಂದೆ ಬಂದು ತನ್ನ ರಿವಾಲ್ವರಿನೊಳಗಿದ್ದ ಗೋಲಿಗಳೆಲ್ಲಾ ಲೂಯಿಸಾಳಿಗೆ ತೋರಿಸಿ 'ನೀನು ಅಥವಾ ನಾನು' ಎಂದು ಕೂಗಿದ. ಪತ್ನಿಗೆ ಇದು ತಮಾಷೆಯಂತೆ ತೋರಿತು. ಆದರೆ ವಿಪರ್ಯಾಸವಾಯಿತು. ಮರುಕ್ಷಣದಲ್ಲೇ ನೋರ್ಮನನು ತನ್ನ ತಲೆಗೆ ಗುರಿಯಿಟ್ಟು, ಗುಂಡು ಹಾರಿಸಿದ.

'ಜವಾಬ'ನಲ್ಲಿ ದೊರಕುವುದೇ ನೆನಪು? —

ಕುಟುಂಬವನ್ನೇ ಸುಟ್ಟಿತು, ಹುಚ್ಚನ ಕಿಚ್ಚು!

ಪೋಲೆಂಡಿನ ವಾಸೋರ್ವಿ ಎಂಬ ಊರಿನಲ್ಲಿ ಗಿನಿಯಾ ಡೊಬ್ಲೆಸ್ಕಿ ಎಂಬ ಕೆಲಸಗಾರನು ಕೆಲಸ ಮಾಡುವಾಗ್ಗೆ ಫಕ್ಕನೆ ತನ್ನ ಒಂದು ಕೈಯ ನಾಲ್ಕು ಬೆರಳುಗಳನ್ನು ಕಳೆದುಕೊಂಡ. ಎರಡು ದಿನ ಕೆಲಸಕ್ಕೇ ಹೋಗಲಿಲ್ಲ. ಆತನ ಯಜಮಾನನು ಆತನಿಗಾದ ಜಖಮಿಗಾಗಿ ಸ್ವಲ್ಪ ದ್ರವ್ಯವನ್ನು ಕೊಡುವುದೆಂದು ನಿಶ್ಚಯಿಸಿದ. ಈ ಸಂಗತಿಯು ಗಿನಿಯಾನಿಗೆ ತಿಳಿಯಿತು. ಆತನು ಸಂತೋಷದಿಂದ ತನ್ನ ಪತ್ನಿಯೊಡನೆ 'ಇನ್ನು ಕೆಲಸವಿಲ್ಲವಾದರೂ ಸ್ವಲ್ಪ ದಿನವಾದರೂ ಸುಖದಿಂದ ಜೀವಿಸಬಹುದು' ಎಂದ. ಇಡೀ ಮನೆಯವರು ಆ ದಿನ ಉತ್ಸಾಹದಲ್ಲಿದ್ದರು— ಅದೇ ದಿನ ನಡು ರಾತ್ರಿಗೆ ಸರಿಯಾಗಿ ಗಿನಿಯಾನು ಫಕ್ಕನೆ ಎಚ್ಚತ್ತು ಕೂಗಿದ್ದ. 'ಡ್ಯಾನಮ್ಯಾಟ್'ನಂತೆ ಎದ್ದು ನಿಂತು, ಅಲ್ಲೇ ಮೂಲೆಯಲ್ಲಿದ್ದ ಕೊಡಲಿಯೊಂದನೆತ್ತಿಕೊಂಡ. ನೆಟ್ಟಗೆ ಹೆಂಡತಿಯು ಮಲಗಿದ್ದ ಕೋಣೆಗೆ ಹೋಗಿ, ಆಕೆಯ ತಲೆ ಕಡಿದ. ಅಲ್ಲೇ ತಾಯಿಯ ಬಳಿ ಮಲಗಿದ್ದ ಆರು ವರ್ಷದ ಮಗನನ್ನೂ ಎರಡು ವರ್ಷದ ಮಗಳನ್ನೂ ತುಂಡರಿಸಿದ. ಡೊಬ್ಲೆಸ್ಕಿಯು ನಂತರ ಮತ್ತೊಂದು ಕೋಣೆಗೆ ಹೋದ. ಅಲ್ಲಿ ಆತನ ಹೆಂಡತಿಯ ತಂಗಿಯೂ ಆಕೆಯ ಮಗುವೂ ಮಲಗಿದ್ದರು, ಕೈಯಲ್ಲಿದ್ದ ಭೀಕರ ಆಯುಧದಿಂದ ಒಂದೇ ಕಡಿತಕ್ಕೆ ಮಗುವಿನ ಜೀವನ ಲೀಲೆಯು ಕೊನೆಯಾಯಿತು. ಮತ್ತೆ ಎದ್ದು ಕೂಗಲಾರಂಭಿಸಿದ್ದ ತಾಯಿಗೆ ಡೊಬ್ಲೆಸ್ಕಿಯು ಹೊಡೆದ. ನಂತರ ಹುಚ್ಚತನದ ಪರಮಾವಧಿಯೆಂಬಂತೆ ತನ್ನ ಸ್ವಂತ ಮನೆಗೇ ಬೆಂಕಿ ಇಟ್ಟ. ನಂತರ ನೆಟ್ಟನೆ 'ಲೀಜರ್'ಗಳನ್ನಿಡುತ್ತಿದ್ದ ಕಪಾಟಿನ ಒಳಗೆ ಹೋದ. ನೆರೆಯವರು ಬಂದು ನೋಡುವಾಗ ಕುತ್ತಿಗೆಯ ಮೇಲಾದ ಕ್ಷಾರಕತ್ತಿಯ ಭೀಕರ ಗಾಯಗಳಿಂದ ಜ್ಞಾನಶೂನ್ಯನಾಗಿ ಬಿದ್ದಿದ್ದಾನೆ ಗಿನಿಯಾ ಡೊಬ್ಲೆಸ್ಕಿ!

ಪರಶುರಾಮನಿಗೂ ಗಿನಿಯಾ ಡೊಬ್ಲೆಸ್ಕಿಗೂ ಭೇದವಿಷ್ಟೆ—ಪರಶುರಾಮನು ಕ್ಷತ್ರಿಯ ಕುಲಕಂಟಕನಾಗಿದ್ದ, ಗಿನಿಯಾ ಡೊಬ್ಲೆಸ್ಕಿಯು ಸ್ವವಂಶವನ್ನು ಕೊಡಲಿಯಿಂದ ಕತ್ತರಿಸಿದ.

ಸ್ಫೂರ್ತಿ ಯಾ ಭಾವ ಬಂದುದು.

ಪರ್ಸಿ ಕ್ಲಾರ್ಕನು ವಾಡ್ಸ್‌ವರ್ಥ್ ರೋಡಿನ 'ಲೋರಿ ಡ್ರೈವರ್'! ಆತನ ಗ್ಯಾರೇಜಿನ ಒಳಿಯಲ್ಲೇ ಒಂದು ಧನವಂತನ ಗೃಹ. ಯಾವಾಗಲೂ ಕ್ಲಾರ್ಕನು ಲೋರಿಯಲ್ಲಿ ಕುಳಿತು ಆ ಗೃಹದ ಎರಡನೇ ಅಂತಸ್ತಿನ ಕಿಟಕಿಗೆ ನೋಡುವನು. ಅಲ್ಲೊಂದು ಸುಂದರ ಸುಕೋಮಲ ಬಾಲೆಯ ಮುದ್ದುಮೊಗದ ಬೆಳಕು ತೋರುವುದು. ಅದನ್ನು ನೋಡುತ್ತ ನೋಡುತ್ತ ಕ್ಲಾರ್ಕನು ಈ ಲೋಕದ ಪರಿವೆಯನ್ನೇ ಮರೆಯುವನು. ಆತನಿಗೆ ಆಕೆಯ ಮೇಲೆ ಮನಸ್ಸಿತ್ತು. ಆದರೆ ಆತನು ಬಡ ಲೋರಿ ಡ್ರೈವರ್, ಆಕೆಯು ಲಕ್ಷಾಧೀಶನ ಪುತ್ರಿ. ಹಲವು ದಿನಗಳು ಕಳೆದುವು. ಒಂದು ದಿನ ನಡು ರಾತ್ರಿಯಲ್ಲಿ ಅಕಸ್ಮಾತ್ ಆ ಹುಡುಗಿಯ ಹಾಸಿಗೆಯಿಂದೆದ್ದು ಕುಳಿತಳು. ಯಾಕೆಂದರೆ ಯಾರೋ ಆಕೆಯ ಹೆಗಲ ಮೇಲೆ ಕೈಯಿಟ್ಟ ಭಾಸವಾಗಿತ್ತು. ವಿದ್ಯುದ್ದೀಪಗಳ ಗುಂ

ಮುಂದಿನ ಪುಟವನ್ನು ನೋಡಿರಿ.

[illegible]

...ಳನ್ನು ...	[illegible]
...ಕ್ತಿ	[illegible]
...ರು ...ಚಾರರು	[illegible]
... ಎಸ್.	[illegible]
...ಳು	
...ಳದ ಮುಸ್ಲಿಮು ಲೀಗ್	೧೦
...ಮಾನ ಸಂಗ್ರಹ	
...ಧ ಸಮಾಚಾರಗಳು.	೧೧
...ಂಗಳೂರು ಸಮಾಚಾರ	೧೪
...ಲೂಕುಗಳಿಂದ	,,
...ಪಾನ ನಿಷೇಧವು ನಮಗೇಕೆ ಅಗತ್ಯ	೧೩
...ಹಿಕ ಶಿಕ್ಷಣ ಮತ್ತು ಪರೀಕ್ಷೆ	೯
...ಜನಿಕರಲ್ಲಿ ವಿನ್ನಹ	೧೩

ಸ್ವದೇಶಾಭಿಮಾನಿ

...೨೭ನೇ ಶುಕ್ರವಾರ ಅಗೋಸ್ಟು ೧೯೩೭

...ಂಗಾಳದ ಮುಸ್ಲಿಮ ಲೀಗ್

ಅಧಿವೇಶನವು ಸರ್ ವಜೀರ ಹಸ್ಸನರವರ ...ಧ್ಯಕ್ಷತೆಯಲ್ಲಿ ಸೇರಿತು. 'ಮುಸಲ್ಮಾನರು ...ಂಗ್ರೆಸ್ ಕೂಟವನ್ನು ಅವಶ್ಯವಾಗಿಯೂ ...ರುಸಂಖ್ಯೆಯಲ್ಲಿ ಸೇರಬೇಕು. ಕೊಂಗ್ರೆಸಿ...ಡನೆ ಮುಂದರಿವುದರಲ್ಲಿ ಮುಸ್ಲಿಮರು ಹಿಂ...ಳಿದರೆ, ಇತರರೊಡನೆಸಮಾನಸ್ಕಂಧರಾಗಿಕಾ...ಲದಿದ್ದರೆ, ಹಾಗೆ ಸಹಕರಿಸಲು ಶರ್ತಗಳನ್ನು ...ಕಿ ಕೂತರೆ, ಲೀಗಿನ ತತ್ವಗಳಿಗೆ ವಿರೋಧ...ಸ್ಸಿ ಮಾಡಿದಂತಾಗುವುದು. ಎಂದೇ ಈ ...ಧ್ಯಕ್ಷರ ಭಾಷಣ. ಬಂಗಾಳವನ್ನು ಕುರಿತು ...ಳೆಯ ಸರಕಾರದ ಕಗ್ಗತ್ತಲು ಇನ್ನೂ ಮಾಯ...ವಾಗಿಲ್ಲ. ಹಳೆಯ ಅಭ್ಯಾಸ ಪದ್ಧತಿಗಳು ...ನ್ಯಾಯ ಮಾಡುತ್ತಲೂ ಜನಾಭಿಪ್ರಾಯವನ್ನು ...ಕ್ಷಿಸದೆಯೂ ಕಾನೂನನ್ನು ಪಾಲಿಸುತ್ತೇವೆಂಬ ...ವವನ್ನಾಡುತ್ತಲೂ ಈಗಣ ಮಂತ್ರಿಗಳು ಅಧಿ...ರ ನಿರ್ವಹಿಸುತ್ತಾರೆ.' ಹಿಂದುಗಳು ಈ ...ಪ್ರಾಂತ್ಯದಲ್ಲಿ ಕಡಮೆ ಸಂಖ್ಯೆಯಲ್ಲಿರುವರು ...ಬುದನ್ನು ಮರೆಯದೆ ಅವರಿಗೆ ಮುಸ್ಲಿಮರು ...ರವಾಗಬೇಕು ಎಂದು ಸೂಚಿಸಿದರು. ಈ ...ಧ್ಯೆ ಹದಿನೈದರಲ್ಲಿ ೧೦ ಸೂಚನೆಗಳು ಮಂ...ಜೂರಾಗುತ್ತಲೆ, ಕೆಲ ಯುವಕರು ಒಳನುಗ್ಗಲು ...ಪ್ರಯತ್ನಿಸಿ ಗಲಾಟೆ ಎಬ್ಬಿಸಲು, ಸಭೆಯನ್ನು ...ಲ್ಲೀ ಮುಗಿಸಿ, ಪೊಲೀಸರು ಸಭೆಯಲ್ಲಿ ...ವಧಾನ ವುಂಟು ಮಾಡಬೇಕಾಯಿತು. ...ರ್ ಎ. ಎಚ್. ಘಜ್ನಾವಿಯರ ಮನೆ...ಯಲ್ಲಿ ಸಭೆಯ ಕಾರ್ಯವು ಮುಂದರಿಸಿತು. ...ಅಲ್ಲಿ ರಾಜಕೀಯ ಕೈದಿಗಳನ್ನು ಬಿಡುಗಡೆ ...ಮಾಡಬೇಕಾಗಿಯೂ, ಕೆಲವು ಕಡೆಗಳಲ್ಲಿಯಾ...ದರೂ ಮದ್ಯಪಾನವನ್ನುನಿವಾರಿಸಬೇಕಾಗಿಯೂ ಪೊಲೀಸ್ ಖಾತೆಯಲ್ಲಿ ಬಂಗಾಳಿಗಳನ್ನು ಹೆ...ಚ್ಚಾಗಿ ಸೇರಿಸಿಕೊಂಡು ಅವರಿಗೆ ಖಾದೀ ಉಡು...ಪನ್ನು ಕೊಡಿಸಬೇಕಾಗಿಯೂ, ಪೆಲೆಸ್ಟೀನದ ಭಂಗವನ್ನು ಆಕ್ಷೇಪಿಸಬೇಕಾಗಿಯೂ, ಸ್ವಾತಂತ್ರ್ಯ ಸಾಧನೆಗಾಗಿ ಕಾಂಗ್ರೆಸನ್ನೆ ಮುಸ್ಲಿಮರು ಸೇರಬೇಕಾಗಿಯೂ ಠರಾವುಗಳಾದುವು.

ಬ್ರಿಟಿಷ ಸಾಮ್ರಾಜ್ಯದ ವಿಮೆ

ವಿಮೆ ಮಾಡುವಾತನು ತನ್ನ ವಿಮಾಕರಾರಿನಂತೆ ಪ್ರಿಮಿಯಮನ್ನು ಕೊಡಬೇಕೇ,ಬೇಡವೆ? ಪ್ರೀಮಿಯನ್ನು ಕೊಡದೆ, ವಿಮೆ ಮಾಡಿಟ್ಟು, ಸ್ವಪ್ರಯೋಜನ ಗಳಿಸಿಕೊಳ್ಳಬೇಕೆಂದರೆ ಹೇಗಾಗುವುದು? ಈ ಪ್ರಶ್ನೆಯನ್ನು ತೀರ ನಿರಕ್ಷರರೂ ತಿಳಿಯುವರು. ನಮ್ಮ ದೇಶಕ್ಕೊಂದು ಭಾರೀ ...ಕಾರೀ ಸೈನ್ಯಂದೆ ... ಹಾಗೆ ... ೫೦ ಕೋಟಿ ರೂಪಾಯಿಗಳನ್ನು ಖರ್ಚು ಈ ಸೈನ್ಯ ... ಪ್ರತಿವರ್ಷ ಬೇಕಾಗುತ್ತದೆ. ಹಿಂದೀಯರ ಸಂಖ್ಯೆ ಹೆಚ್ಚಿಸಿದರೆ, ೩೦ ಕೋಟಿ ರೂಪಾಯಿಗಳೊಳಗೆ ಸಾಕಾಗುವುದು. ...ದೇಶದ ಭದ್ರತೆಗೆ ಇದು ಬೇಕೆಂದೇ ನಮಗೆ ಬೋಧಿಸಿ ಎಚ್ಚರಿಸಿ ನಮ್ಮ ಖರ್ಚಿನಿಂದ ನಮ್ಮದೆಂಬ ಬ್ರಿಟಿಷ ಸೈನ್ಯವನ್ನು ಇಲ್ಲಿಟ್ಟಿದ್ದಾರೆ. ಈಗ ಚೀನಾ ಜಪಾನು ಸಂಗ್ರಾಮಕ್ಕಾರಂಭವಾದುದೇ, ಹಿಂದೀ ಸೈನ್ಯವನ್ನು ಅತ್ತ ಹಿಂದೀಯರನ್ನು ಕಾಪಾಡಲು ಕಳುಹಿ, ವೈಸ್ರಾಯರು ಎಸೆಂಬ್ಲಿ ಮೆಂಬರರಿಗೆ ತಿಳಿಸಿದ್ದಾರೆ. ಹಿಂದೀ ಸೈನಿಕರು ಹಿಂದೀ ಆಫೀಸರರುಗಳಿಂದ ಈಗಣ ಯುದ್ಧಗಳಲ್ಲಿ ಹಾಕುವುದಕ್ಕೆ ಅಷ್ಟು ಶಕ್ತರಲ್ಲೆಂಬ ಮಾತು ಇಲ್ಲಿಗೆ ಮುಗಿದಂತಾಯಿತು. ಈ ಸೈನ್ಯವನ್ನು ಕಳಿಸಿದುದು ಸಾಮ್ರಾಜ್ಯದ ಕಾರ್ಯಕ್ಕಾಗಿಯಲ್ಲದೆ, ಹಿಂದೂದೇಶದ ಹೊರ ಪ್ರಾಂತ್ಯಕ್ಕಲ್ಲದೆ ಸ್ವದೇಶದ ರಗಳೆ ತೀರಿಸುವುದಕ್ಕಲ್ಲವಷ್ಟೆ. ಈ ದೇಶವನ್ನು ಬಿಟ್ಟಂದಿನಿಂದ ಇವರು ಮರಳುವ ತನಕದ ಖರ್ಚನ್ನು ಬ್ರಿಟಿಷ ಸರಕಾರವೇ ತೆಲುವುದು. ಆದರೆ, ಯಾವಾಗ ನೋಡಿದರೂ, ನಮ್ಮ ಸೈನ್ಯವು ಬ್ರಿಟಿಷ ಸಾಮ್ರಾಜ್ಯದ ಇತರ ಭಾಗಗಳಲ್ಲಿ ಬ್ರಿಟಿಷ ಸೈನ್ಯಗಳ ಸಹಾಯಕ್ಕಾಗಿಯೆ ಇದು ವರೆಗೆ ಕೆಲಸ ಮಾಡುತ್ತಿರುವುದು. ಹೀಗಿರುವಾಗ, ದೇಶದ ರಕ್ಷಣೆಗೆ ಚಿಕ್ಕದೊಂದು ಅಗತ್ಯವಾದಷ್ಟೆ ಹಿಂದೀ ಸೈನ್ಯವನ್ನು ಇಟ್ಟುಕೊಂಡರೆ ಸಾಕಾದೀತೆಂದು ತೋರದೆ? ಹೀಗಿದ್ದರೂ ಬ್ರಿಟಿಷ ಸೈನ್ಯವನ್ನೆ ಸಾವಿಟ್ಟುಕೊಂಡು ಅದರ ಖರ್ಚನ್ನು ನಿರ್ವಹಿಸಬೇಕೆಂದೇಕೆ ಶಾಸನ ಮಾಡಿಯವರು? ಬ್ರಿಟಿಷ ಸೈನ್ಯವು ನಮ್ಮ ದೇಶಕ್ಕೆ ಬೇಕಾಗಿರುವುದಕ್ಕಿಂತ ಹೆಚ್ಚಾಗಿರುವಲ್ಲಿ ಅವರ ಖರ್ಚನ್ನು ಬ್ರಿಟಿಷ ಸರಕಾರವೇ ಏಕೆ ಸಲ್ಲಿಸಬಾರದು? ಸಾಮ್ರಾಜ್ಯದ ರಕ್ಷಣೆಗೆ ಹಿಂದೂ ದೇಶೀಯರು ವಿಮೆಯ ಪ್ರಿಮಿಯಮ್ ತೆರಬೇಕೆ? ಇದೇ ವಿಷಯವನ್ನು ಈ ಸಲ ಎಸೆಂಬ್ಲಿಯಲ್ಲಿ ಚರ್ಚಿಸುವರಂತೆ. ಪ್ರಯೋಜನವೇನೂ ಇರದಾದರೂ, ಈ ವಿಷಯಕವಾದ ಮಾಹಿತಿಯೆಲ್ಲ ಜನರಿಗೆ ಪ್ರಕಟವಾಗಿ ತಿಳಿಯುವಂತಾಗುವುದು.

ಗಡಿನಾಡಿನ ಗಾಂಧಿ

ಖಾನ್ ಅಬ್ದುಲ್ ಗಫರಖಾನರ ಮೇಲೆ ಇದು ವರೆಗೆ ಸರಕಾರವು ವಿಧಿಸಿದ್ದ ಬಹಿಷ್ಕಾರವನ್ನು ಈಗ ರದ್ದು ಮಾಡಿರುವ ಸಂತೋಷದ ವಾರ್ತೆಗೆ ಗಾಂಧಿಜೀಯವರು ವೈಸ್ರಾಯರ ಆಮಂತ್ರಣ ಸ್ವೀಕರಿಸಿ ಸಂಭಾಷಣೆ ನಡೆಸಿದಂದೇ ಪೀಠಿಕೆಯಾಗಿದ್ದಿತಷ್ಟೆ. ಆದರೆ ಖಾನರು ಗಡಿನಾಡನ್ನು ದಾಟಿ ಆಚೆಗೆ ಕಾಲಿಡದಂತೆ ನಿರ್ಬಂಧವೂ ಇನ್ನೂ ಇದೆ. ಖಾನರು ಅತ್ತಣ ಜನರೊಡನೆ ತಾನು ಇದ್ದು ಐದು ವರ್ಷಗಳೊಳಗೆ ಅವರಿಗೆ ಜೀವನೋಪಾಯವನ್ನು ಕಲ್ಪಿಸಿಕೊಡುವಂತೆ ಒಂದು ಸ್ಕೀಮನ್ನು ರಚಿಸಿ ಸರಕಾರಕ್ಕೆ ಕೊಟ್ಟಿದ್ದರು. ಸರಕಾರವು ಆ ಸ್ಕೀಮನ್ನು ಸ್ವೀಕರಿಸಿತು; ಆದರೆ, ಖಾನರನ್ನು ಕೈದುಮಾಡಿತು. ಇಸಿಯ ಫಕೀರನು, ಫಕೀರನೆ ಅಲ್ಲ. ಆತನು ಶ್ರೀಮಂತನು, ತನ್ನವರು ಸುಧಾರಣೆ ಹೊಂದಬೇಕೆನ್ನುವ ಧ್ಯೇಯವುಳ್ಳಾತನು. ಅರಬಸ್ಥಾನ ಭಾರತ ವರ್ಷಗಳಲ್ಲಿ ತುಂಬ ಸಂಚರಿಸಿದಾತನು. ಆತನಿಗೆ ಯೋಗ್ಯ ಸಲಹೆಕೊಟ್ಟು ಸಹಕರಿಸಿದರೆ, ಅತ್ತಣ ಜನರು ಕೈಗಾರಿಕೆಗಳಿಗೆ ಕೈಹಚ್ಚಿದರೆ, ಅವರು ಸ್ವಸ್ಥಚಿತ್ತರಾಗುವರು. ನಂತರ ಸರಕಾರಕ್ಕೆ ಯಾವ ಬಾಧೆಯೂ ತಟ್ಟುದು ಎಂದೇ ಖಾನರ ಮಾತು. ದರಿದ್ರರ ಪಕ್ಷವಾಗಿರುವ ಕೊಂಗ್ರೆಸನ್ನು ಎಲ್ಲರೂ ಸೇರಿ ಶಾಂತರೀತಿಯಿಂದ ಸ್ವದೇಶೋದ್ಧಾರವನ್ನು ಮಾಡಿಕೊಳ್ಳಬೇಕೆಂದೂ, ಪ್ರತಿಯೊಬ್ಬರ ಮನೆಗೂ ತನಗೆ ಪ್ರವೇಶ ಸಿಗುವಂತಾಗಬೇಕು ವಿನಾ ಮೆರವಣಿಗೆಗಳು ಅಗತ್ಯವಲ್ಲೆಂದೂ ಅವರು ಕರಾಚಿಯಲ್ಲಿ ತಿಳಿಸಿರುವರು.

ಪ್ರೊ. ಕೆ. ಟಿ. ಶಾಹರ ಕೆಲ ಸೂಚನೆಗಳು

ನಮಗೆ ಯಾವ ಭಾಷೆಗಳು ...

ನಮ್ಮ ವಿಧ್ಯಾಭ್ಯಾಸ ಯಾವ ಭಾಷೆಯಲ್ಲಿ ನಡೆಯಬೇಕು

ಭಾಷಾಂತರಗಳ ಮೂಲಕ ಭಹೀರ್ ಸಾಹಿತ್ಯ ಸಂಸ್ಕೃತಿ ಇತ್ಯಾದಿ ಸ್ಪರ್ಶವನ್ನು ನಾವು ಮಾಡಿಕೊಳ್ಳಬೇಕು

ಮದ್ಯನಿಷೇಧವು ೩ ವರ್ಷಗಳೊಳಗೆ ಸಂಪೂರ್ಣವಾಗಲು ಸಾಧ್ಯವಿಲ್ಲ,ಅದಕ್ಕೆ ಕನಿಷ್ಟವೆಂದರೆ ಐದುವರ್ಷಗಳಾದರೂ ತಗಲಬಹುದು. ಮದ್ಯನಿಷೇಧದ ಕುರಿತು ಕ್ರಮಗಳು ಕಠೋರವಾಗಿ ಜ್ಯಾರಿಗೆ ತರುತ್ತಿರುವಾಗ,ಅವುಗಳಿಂದ ಯಾರನ್ನೂ ವಿನಾಯಿಸಬಾರದು—ಅದರಿಂದ ದುಷ್ಪರಿಣಾಮಗಳುಂಟಾಗಬಹುದು. ಯುರೋಪೀಯರಿಗೆ ಯಾವತ್ತೂ ಸಮಯದಲ್ಲಿ ಬೇಕಾದಷ್ಟು ಅಮಲು ಪಾನೀಯಗಳನ್ನು ಆಮದು ಮಾಡಲು ಅವಕಾಶಕೊಟ್ಟು, ಎಲ್ಲರಿಗೂ ಒಂದೇ ತರದ ಲೈಸನ್ಸು ಕ್ರಮಗಳಿರಬೇಕು. ಇಲ್ಲವಾದರೆ ಯುರೋಪೀಯನು ಲಾಭದೃಷ್ಟಿಯಿಂದ ತನ್ನ ಸ್ನೇಹಿತರ ಮತ್ತು ಸೇವಕರ ಮೂಲಕ ಕಳ್ಳಾಟಕೆಯ ಮದ್ಯ ವ್ಯಾಪಾರ ಮಾಡಲು ದುಡುಕನು......ಮದ್ಯನಿಷೇಧ ಕಾರ್ಯವು ಸ್ತ್ರೀಯರಿಂದಲೆ ನಡೆಯುವುದೆಂದು ನಾನು ನಂಬುವುದಿಲ್ಲ. ನಿಷೇಧವನ್ನು ಒತ್ತಾಯದಿಂದ ಜ್ಯಾರಿ ಮಾಡುವರೆ, ಉತ್ತಮ ತರದ ವ್ಯವಸ್ಥೆಯಾಗಬೇಕು. ಎಲ್ಲಾ ವಿಚಾರಗಳನ್ನು ಆಲೋಚಿಸಿದರೆ ಈ ವ್ಯವಸ್ಥೆಗೆ ಹೆಚ್ಚಿನ ವೆಚ್ಚ ತಗಲಬಹುದು.

X X X X X

ಹಿಂದೂದೇಶವೂ ಕೈಗಾರಿಕಾವಂತವಾಗಬೇಕು. ರಷಿಯಂಗಳಲ್ಲಿಯಲ್ಲಿ ತಯಾರಿಸುವಿಕೆಗೆ ಮತ್ತು ಉತ್ತಮತರದ ಸಾಮಾನುಗಳನ್ನು ತಯಾರಿಸುವ ಅತ್ಯಂತ ಫಲಕಾರಿಯಾದ ಕೈಗಾರಿಕ್ರಮಗಳು ನಮ್ಮಲ್ಲಿ ರೂಢಿಗೆ ಬರಬೇಕು.

X X X X X

ಬರೆ ಒಂದು ಸಂಬಂಧದೆಸೆಯಿಂದ ಒಬ್ಬನು ಅಪಾರ ಸಂಪತ್ತು ಹೊಂದುತ್ತಿರುವುದನ್ನು ಶೇ. ೧೦೦ರ ಸಲತೆರಿಗೆ ಹಾಕಿ ರದ್ದು ಮಾಡುವುದಕ್ಕೆ ನನ್ನ ಸಂಪೂರ್ಣ ಅನುಮತಿ ಇದೆ. ಐಶ್ವರ್ಯವು ಒಂದು ನಿಯಮಿತ ಮೇರೆಯನ್ನು ದಾಟಿದ ಕೂಡಲೆ, ಅದರ ಮೇಲೆ ಘನವಾದ ತೆರಿಗೆಯನ್ನು ಹೊರಿಸಬೇಕು. ಬಡ್ಡಿ, ಬಾಡಿಗೆ, ಇತ್ಯಾದಿ ಶ್ರಮವಿಲ್ಲದೆ ಗಳಿಸಿದ ಐಶ್ವರ್ಯದ ಮೇಲೆ ಅತಿರೇಕವಾದ ಕಂದಾಯ ಹೊರಿಸಬೇಕು. ಮೇಲಿನ ತರದಲ್ಲಿ ಆಗಬಹುದಾದ ಸರಕಾರದ ಹೊಸ ಉತ್ಪನ್ನವು, ರಾಷ್ಟ್ರಾಭ್ಯುದಯದ ಕಾರ್ಯಗಳಿಗೆ ವಿನಿಯೋಗಿಸ—ಅ ಕುರಿತು ನಮಗಿರುವ ಸಂಕಟನಿವಾರಣೆಯನ್ನು ಮಾಡಬೇಕು.

X X X X X

ವಿದ್ಯಾಖಾತೆಯ ವ್ಯಯವನ್ನು ಇಳಿಸಬಹುದು,— ಹಾಗೆಯೇ ಇತರ ಸಾಮಾಜಿಕ ಸೇವೆಯ ವ್ಯಯವನ್ನೂ ಇಳಿಸಬಹುದು. ಸಮಾಜ ಸೇವೆಗಾಗಿ ಒಂದು 'ಕಾನ್ಸ್ ಕ್ರಿಪ್ಶನ್' (ಕಟ್ಟಾಜ್ಞೆ)ನ್ನು ಹೊರಡಿಸಬೇಕು.

X X X X X

ಭಾರತೀಯ ಸರಕಾರಿ ಉದ್ಯೋಗಸ್ಥರು ಪ್ರತಿಯೊಬ್ಬರೂ ಸ್ವಂತವಾಗಿಯೆ ತಮ್ಮ ಸಂಬಳಗಳನ್ನೂ ಭತ್ತೆಗಳನ್ನೂ ಇಳಿಸಲು ಒಪ್ಪುವಂತೆ ಕಾಂಗ್ರೆಸ್ ಅವರೊಡನೆ ಮನವಿಮಾಡಿಕೊಂಡರೆ, ಆಗ ಎಲ್ಲಾ ಇಲಾಖೆಗಳಿಂದ ಒಟ್ಟು ೩೦ ಯಾ ೪೦ ಕೋಟಿ ರೂಪಾಯಿಗಳ ಉಳಿತಾಯವಾಗಬಹುದು .... ಜಪಾನೀಯ ಸರಕಾರಿ ಉದ್ಯೋಗಸ್ಥರ ಸರಾಸರಿ ಸಂಬಳ ವರ್ಷ ಒಂದರ ರೂ. ೧೦೦೦ ಆಗಿರುತ್ತದೆ. ಅಷ್ಟಕ್ಕೆ ನಮ್ಮ ಉದ್ಯೋಗಸ್ಥರ ಸಂಬಳವನ್ನು ಇಳಿಸಲಿಕ್ಕಾಗದಿದ್ದರೂ, ಅದನ್ನು ರೂ. ೩೫೦೦ಕ್ಕಾದರೂ ಇಳಿಸಿಯೂ ಮತ್ತು ಪ್ರತಿಯೊರ್ವ ಸರಕಾರಿ ಕೆಲಸಗಾರರಿಗೆ ಕಮ್ಮಿ ಎಂದರೆ ರೂ. ೩೦೦ರಿಂದ ೫೦೦ರ ಒಳಗೆ ಸಂಬಳ ದೊರೆವಂತಾದರೆ,—ಆಗಲೂ ಮೇಲಿನ ಉಳಿತಾಯವನ್ನು ಮಾಡಬಹುದು.

X X X X X

ನಮ್ಮ ಪ್ರಕೃತದ ಅವಶ್ಯಗಳು—೧ ಪ್ರಾಂತ್ಯಗಳ ಭೂಕಂದಾಯ ಕ್ರಮದ ಪುನರ್ರಚನೆ; ೨ ರಾಯತವಾರಿ ಮತ್ತು ಟೆಂಪರರಿ ಸೆಟ್ಲಮೆಂಟ್ ಕ್ರಮಗಳು ಆಚರಿಸಲ್ಪಡಬೇಕು; ಸಣ್ಣ ಸಣ್ಣ ಭೂಮಿಸ್ವಾಮಿಕರಿಗೆ ಕಡಿಮೆ ಕಂದಾಯ ಹೊರಿಸಬೇಕು; ಮಹಾ ಹುಟ್ಟುವಳಿಯನ್ನು ಅನುಭವಿಸುವ ಜಮೀನ್ದಾರರ ಮೇಲೆ ಆಧಾಯ ತೆರಿಗೆತರದ ಕಂದಾಯವನ್ನು ಹೊರಿಸಬೇಕು; ಫರ್ಮನೆಂಟ್ ಸೆಟ್ಲ್‌ಮೆಂಟಿನ ಕ್ರಮವು ರದ್ದಾಗಬೇಕು. ೩. ಅಬಕಾರಿ ಉತ್ಪನ್ನದ ರದ್ದು ಮಾಡುವಿಕೆ—ಸಷ್ಟ ಸಾಧಾರಣ ೧೫ ಕೋಟಿ; ವಿದ್ಯಾಖಾತೆಯಲ್ಲಿ ಹೆಚ್ಚಬಹುದಾದವ್ಯಯ ರೂ.೩೫ಕೋಟಿ; ಸಂಬಳ ಇತ್ಯಾದಿಗಳ ಕಡಿತದಿಂದ ಉಳಿತಾಯ ರೂಪಾಯಿ ೩೦ ಕೋಟಿ. ಐಶ್ವರ್ಯದ ಮೇಲೆ, ಮತ್ತು ಬ್ಯಾದಕೆಯಿಂದ ಹೊಂದುವ ಐಶ್ವರ್ಯದ ಮೇಲೆ ತೆರಿಗೆಯನ್ನು ಹೊರಿಸಿ, ಗಳಿಸಬಹುದಾದ ಹಣ ರೂ. ೨೫ ಕೋಟಿ, ಸಮಾಜ ಸೇವೆಗಾಗಿ ಕಾನ್ಸ್‌ಕ್ರಿಪ್ಶನ್ ಬಗ್ಗೆ (ಅದರ ಆಕೈಕೆ ಮತ್ತು ಆಡಳಿತಕ್ಕಾಗಿ) ರೂ. ೩೦ ಕೋಟಿ.

ಈ ಕ್ರಮಗಳಿಂದ ಪ್ರಜೆಗಳ ಉತ್ಕೃಷ್ಟ ಯೋಗ್ಯತೆಯ ಉದ್ಧಾರದಿಂದ ಇನ್ನಷ್ಟು ಉತ್ತಮ ಪರಿಣಾಮಗಳುಂಟಾಗಬಹುದು.

ಹರಿಜನ ಪತ್ರಿಕೆಯಿಂದ.

ನಮಗೆ ಯಾವ ಭಾಷೆ ಬೇಕು

ನಮ್ಮ ಸಾರ್ವಜನಿಕ ಕಾರ್ಯಗಳು ಮತ್ತು ಸರಕಾರಿ ವಿಧ್ಯಾಭ್ಯಾಸವು, ಪ್ರತಿಯೊಂದು ಪ್ರಾಂತ್ಯದ ಭಾಷೆಯಾಗಬೇಕು, ಅಲ್ಲಿ ಆ ಭಾಷೆಯು ಪ್ರಾಮುಖ್ಯವಾಗಬೇಕು. ಪಂಗಡಿಸಲ್ಪಟ್ಟ ಹಿಂದೀಯ ಭಾಷೆಗಳು, ಹಿಂದುಸ್ಥಾನೀ (ಉರ್ದು ಹಿಂದಿ) ಬೆಂಗಾಳೀ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ, ಮಳಿಯಾಳಿ, ಒರಿಯಾ ಅಸ್ಸಾಮಿ, ಸಿಂಧಿ, ಪುಸ್ತು ಮತ್ತು ಪಂಜಾಬಿ.

X X X X

ಆಯಾಯ ಪ್ರದೇಶಗಳ ಭಾಷೆಯಲ್ಲೆ ಸರಕಾರಿ ವಿದ್ಯಾಭ್ಯಾಸವು ನಡೆಯುವಂತೆ ಸರಕಾರದ ದೊರೆತಯಾಗಬೇಕು. ಪ್ರೈಮರಿ ತರಗತಿಯಿಂದ ವಿಶ್ವವಿದ್ಯಾಲಯಗಳ ವರೆಗಿನ ವಿಧ್ಯಾಭ್ಯಾಸವು, ಪ್ರಾಂತ್ಯದ ಭಾಷೆಯಲ್ಲೆ ನಡೆಯಬೇಕು. ಒಂದೇ ಭಾಷೆಯ ಪ್ರಾಂತ್ಯದಲ್ಲಿ ಇತರ ಭಾಷೆಯ ವಿಧ್ಯಾರ್ಥಿಗಳಿದ್ದರೆ, ಅಂಥವರಿಗೆ ಅನುಕೂಲವಾದರೆ ಅವರವರ ಮಾತೃಭಾಷೆಯಲ್ಲಿ ವಿಧ್ಯೆಯನ್ನು ದೊರಕಿಸುವ ಏರ್ಪಾಡುಗಳನ್ನು ಮಾಡಬಹುದು. ಅಂಥ ವಿದ್ಯಾರ್ಥಿ ಸಂಖ್ಯೆ ಹೆಚ್ಚಾಗಿದ್ದರೆ ಅವರ ಸಲುವಾಗಿ ವಿಧ್ಯಾಭ್ಯಾಸವು ಅವರ ಮಾತೃಭಾಷೆಯಲ್ಲಿ ನಡೆಯುವ ಏರ್ಪಾಡು ಮಾಡಬಹುದು. ಆದರೆ ಅವರು ಆ ಪ್ರಾಂತ್ಯದ ಭಾಷೆಯನ್ನು ಒಂದು ಕಡ್ಡಾಯ ವಿಷಯವಾಗಿ ಕಲಿಯತಕ್ಕದು.

X X X X

ವಿಶ್ವವಿಧ್ಯಾಲಯಗಳ ಬೋಧನಾ ಭಾಷೆಯು ಪ್ರಾಂತ್ಯಕೀಯವಾಗಬೇಕು. ಅಲ್ಲಿ ಹಿಂದುಸ್ಥಾನಿ ಉರ್ದು ಯಾ ಹಿಂದಿ ಮತ್ತೊಂದು ಭಹೀರ್ ಭಾಷೆಯು, ಕಡ್ಡಾಯವಾದ ವಿಷಯಗಳಾಗಬೇಕು. ಉಚ್ಚ ತರಗತಿಗಳಲ್ಲಿ ಈ ಕ್ರಮವನ್ನು ಅನುಸರಿಸಬೇಕಾಗಿಲ್ಲ.

X X X X

ಭಹೀರ್ ಸಾಹಿತ್ಯಗಳಿಂದ ಅನೇಕ ಶ್ರೇಷ್ಠ ವರ್ಗದ ಕಾವ್ಯಗಳ ಮತ್ತು ಆಧುನಿಕ ಕಾವ್ಯಗಳನ್ನು ಭಾರತೀಯ ಭಾಷೆಗಳಲ್ಲಿ ಭಾಷಾಂತರಗಳಾಗಬೇಕು, ಅದರಿಂದನಮ ಭಾಷೆಗಳು, ಅವುಗಳ ಉತ್ತಮ ಸಾಹಿತ್ಯ ಸಂಸ್ಕೃತಿ ಇತ್ಯಾದಿಗಳ ಸ್ಪರ್ಶ ಮಾಡಿಕೊಂಡು ಇತರ ದೇಶಗಳ ಸಾಮಾಜಿಕ ಚಳವಳಿಗಳ ಜ್ಞಾನ ಹೊಂದಿಕೊಂಡು ನಮ್ಮ ಬಲವನ್ನು ನಾವು ಹೆಚ್ಚಿಸಿಕೊಳ್ಳಬಹುದು.

ಜವಾಹರಲಾಲ ನೆಹರು

ದಿವಂಗತ ಮಾರ್ಕೋನಿಯ ಸಂಪತ್ತು

ವಾಯರ್‌ಲೆಸ್ ಪ್ರವೀಣ ವಿದ್ವಾಂಸಿಯಾದ ಮಾರ್ಕೋನಿಯು ಕೆಲವು ದಿವಸಗಳ ಹಿಂದೆ ಮೃತನಾದನು. ರೇಡಿಯೊ, ಟೆಲಿಗ್ರಾಫ್ ಇತ್ಯಾದಿಗಳ ಕುರಿತು ಅನೇಕ ಯಂತ್ರೋಪಕರಣಗಳನ್ನು ಸಿದ್ಧಪಡಿಸಿದವನು. ತನ್ನ ಫಲಿತ ಧನದಿಂದ ಅಪಾರ ಸಂಪತ್ತನ್ನೂ ಕೀರ್ತಿಯನ್ನೂ ಗಳಿಸಿದ್ದನು. ಆತನು ಇಟೆಲಿಯಾನನು.

ಮಾರ್ಕೋನಿಯು ತಾನು ಗಳಿಸಿದ ಸಂಪತ್ತನ್ನೆಲ್ಲ ತನ್ನ ಎರಡನೆ ವಿವಾಹದಿಂದ ಜನಿಸಿದ, ಏಳು ವರ್ಷ ವಯಸ್ಸಿನ ಎಲೆಟ್ರಾ ಎಂಬ ಕುಮಾರಿಗೆ ಬಿಟ್ಟಿರುವನು. ಈ ಸಂಪತ್ತಿನ ಮೌಲ್ಯವು ೩ ಮಿಲಿಯ ಪವನುಗಳು. ತನ್ನ ಪತ್ನಿಗೆ (ಈಕೆಯನ್ನು ಆತನು 1927ರಲ್ಲಿ ... ಪ್ರಥಮ ಪತ್ನಿಯನ್ನು ತ್ಯಜಿಸಿದ ಮೂರು ವರ್ಷ ನಂತರ ಮದುವೆಯಾಗಿದ್ದನು. ಮುಂಚೆ ಈಕೆ ... ಓರ್ವ ಕೌಂಟನ ಪತ್ನಿಯಾಗಿದ್ದಳು.) ಜೀವದಲ್ಲಿರುವ ತನಕ ತನ್ನ ಸಂಪತ್ತಿನಿಂದ ಆದಾಯವನ್ನು ಗಳಿಸಬಹುದಾಗಿ ಆತನ ವೀಲಿನಲ್ಲಿರುವುದು.

ಆತನ ಪ್ರಥಮ ಹೆಂಡತಿಯ ಮೂವರು ಮಕ್ಕಳಿಗೆ ಇಟೆಲಿಯಾನ ಕ್ರಮಪ್ರಕಾರ ಎಷ್ಟು ಬಿಡಬೇಕೆಂದಿರುವುದೊ ಅಷ್ಟನ್ನು ಮಾತ್ರ ಬಿಟ್ಟಿರುವನು.

ಆತನ ವೀಲಿನಲ್ಲಿ ರಾಜಕೀಯ ಯಾ ವಿಜ್ಞಾನ ಕುರಿತು ಯಾವ ಸಂದೇಶಗಳೂ ಇರುವುದಿಲ್ಲ.

ಸ್ವದೇಶಾಭಿಮಾನಿಯ

ಬಿಡಿಸಂಚಿಕೆಗಳು ಮಡಿಕೇರಿಯಲ್ಲಿ

ವಿ. ಎಸ್. ಪಕೀರ ಹಮ್ಮದ್

ಏಜಂಟ್: ಸಿ. ಪಿ. ಸಿ. ಕೊ. ಲಿಮಿಟೆಡ್

ಇವರಲ್ಲಿ ದೊರೆಯುವುದು.

ಕಾಂಗ್ರೆಸ್ ರಾಜ್ಯಾಡಳಿತವೆಂದರೇನು?

ಕಾಂಗ್ರೆಸಿಗೆ ಪೋಲಿಸರ ಮತ್ತು ಮಿಲಿಟರಿ ಅಗತ್ಯವಿರಬಾರದು.

ಬಿಹಾರದಲ್ಲಿ ಮಹಾತ್ಮಾಜಿಯವರು ಕಳೆದ ವಾರದ ತಮ್ಮ ಹರಿಜನ ಪತ್ರಿಕೆಯಲ್ಲಿ ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡು ಒಂದು ಲೇಖನವನ್ನು ಬರೆದಿರುವರು

ಹಿಂದೂದೇಶದ ಸರಾಸರಿ ಉತ್ಪನ್ನದೊಡನೆ ವಿಚಾರಿಸಿದರೆ, ಕಾಂಗ್ರೆಸ್ ಮಂತ್ರಿಗಳು ತಮಗೆ ನಿಯಮಿಸಿದ ಸಂಬಳ ಅತಿ ಹೆಚ್ಚೆನ್ನಬಹುದು ಆದರೂ ಇನ್ನು ಆ ಸಮಯ ನಾವು ಬ್ರಿಟಿಷ ಛಾಪಿತೆಯ ಹೊರೆಯನ್ನು ಅನುಭವಿಸಬೇಕು ತಲಬು ಮತ್ತು ಬತ್ತೆಗಳು ಈಗ ನಿಶ್ಚಿತವಾಗಿವೆ. ಈಗಿನ ಪ್ರಶ್ನೆ ಎಂದರೆ, ತಮಗೆ ದೊರೆತ ಸಂಬಳದ ತಲಬಿಗೆ ಅರ್ಹರಾಗಿ ಮಂತ್ರಿಗಳು ಕಾರ್ಯಮಾಡುವರೋ? ಸದಸ್ಯರು ದಿನಪೂರ್ತಿ ರಾಷ್ಟ್ರಸೇವೆಗಾಗಿ ದುಡಿಯುವ ಸೇವಕರಾಗುವರೋ? ಅವರು ಮಾಡಿದ ಸೇವೆಯ ಕುರಿತು ಆಗಿಂದಾಗ್ಯೆ ಕಾಲಂಕುಶವಾಗಿ ವರದಿ ಮಾಡಿಕೊಡುವರೋ? ಬರಿ ಕಲ್ಪನೆಯಿಂದ ಪ್ರಯೋಜನವಿಲ್ಲ.

ಮಂತ್ರಿಗಳು ಸರಳಜೀವಿಗಳಾಗಿ, ಅತ್ಯಂತ ಪರಿಶ್ರಮಗೊಂಡು ಕೆಲಸ ಮಾಡಿದರೆ ಸಾಲದು ಅವರ ಕೈಕೆಳಗಿರುವ ಇಲಾಖೆಗಳು ಸರಿಯಾಗಿ ಚಲಿಸುವಂತಾಗಬೇಕು. ನ್ಯಾಯವು ಸುಲಭವಾಗಿಯೂ ತ್ವರೆಯಲ್ಲೂ ದೊರಕಬೇಕು ಇಂದು ಅದು ತ್ರಿವ ಕರ ಒಂದು ಸೀಗ ವಸ್ತುವು ಜಗಡೆಗಾರರ ಸಂತೋಷವು ಆಗಿರುತ್ತದೆ ಪೋಲೀಸರು ಜನರ ಭೀತಿಯಾಗುವ ಬದಲು ಅವರ ಸ್ನೇಹಿತರಾಗಬೇಕು ಒಟ್ಟು ಬಡ ಹಳ್ಳಿಗರ ಅವಶ್ಯಕತೆಗಳನ್ನು ಒದಗಿಸುವ ತರದಲ್ಲಿ ವಿದ್ಯಾಭ್ಯಾಸದಲ್ಲಿ ಕ್ರಾಂತಿಯು ನಡೆಯಬೇಕು

ರಾಜಕೀಯ ತಪ್ಪಿತಗಳಿಗಾಗಿ ಸೆರೆಮನೆಗೆ ಸೇರಿಸಲ್ಪಟ್ಟವರನ್ನು ಮಂತ್ರಿಗಳು ಅವರಿಗೆ ಬಂಧವಿಮುಕ್ತಿ ಕೊಡುವುದಾದರೆ ಕೊಡಬಹುದು ಆದರೆ ಅದು ಹಿಂಸೆಗೆ ಒಂದು ರಹದಾರಿಯಾಗಬಹುದೋ? ಎಷ್ಟಕ್ಕೂ ಆಗಲಾರದು ಅಹಿಂಸಾ ಧರ್ಮವೇ ಕಾಂಗ್ರೆಸಿನ ಮೂಲ ಸೂತ್ರವಾಗಿರುತ್ತದೆ ಅದರ ವ್ಯಕ್ತಿಗಳಹಿಂಸೆಗಳನ್ನು ಅದು ಹಿಂಸಾಮಯ ರೀತಿಗಳಿಂದ ಎದುರಾಯಿಸುವ ಬದಲಾಗಿ ಹಿಂಸೆಯನ್ನು ಆಚರಿಸಿದ ತಪ್ಪಿತರನ್ನು ಸ್ನೇಹಭಾವದಿಂದ ... ಹಿಂಸೆ ಮೇಲೆ ವಿರೋಧದಿಂದ ಪ್ರಮಾಣವನ್ನು ... ಸುಧಾರಣೆಯನ್ನು ಮಾಡಲು ಯತ್ನಿಸುವುದು ಪೋಲೀಸು ಮತ್ತು ಮಿಲಿಟರಿ ಬೆಂಬಲದಿಂದ ರಾಜ್ಯಾಡಳಿತವನ್ನು ನಡೆಸುವುದು ಕಾಂಗ್ರೆಸಿನ ಇಚ್ಛೆಯಲ್ಲ ಪ್ರಜೆಗಳ ಒಳ್ಳೇ ಮನಸ್ಸನ್ನು ಸಂಪಾದಿಸಿ ಅವರು ರಾಜ್ಯಾಡಳಿತವನ್ನು ನಡೆಯಿಸುವುದು ಯುದ್ಧ ಶಸ್ತ್ರಗಳ ಅಧಿಕಾರದಿಂದ ಅದು ಆಡಳಿತವನ್ನು ನಡೆಯಿಸದು ಅದು ಪ್ರತಿಯೊಂದು ಕಾರ್ಯದಲ್ಲಿ ಪ್ರಜಾಸೇವೆಯನ್ನೆ ತೋರಿಸಿ ಆಡಳಿತವನ್ನು ನಡೆಯಿಸುವುದು

ಬಹಿಷ್ಕರಿಸಲ್ಪಟ್ಟ ಸಾಹಿತ್ಯದ ಮೇಲಿನ ನಿರ್ಬಂಧವು ತೆಗೆಯಲಾಗುತ್ತದೆ ಅಂಥ ನಿರ್ಬಂಧಗಳಿಗೆ ಒಳಗಾದ ಕೆಲವು ಪುಸ್ತಕಗಳಲ್ಲಿ ಕೆಲವು ಹಿಂಸೆಯ ಹಬ್ಬುವಿಕೆಗೆ ಸಾಚಕ ಲೇಖನಗಳಿಗೆ ಕಾರಣವಾಗಿರುವವೆಂದು ಮತ್ತು ಜಾತಿವಾರು ವೈಷಮ್ಯ ಬೆಳೆಯಿಸುವಂತವುಗಳೆಂದು ಒಂದು ವೇಳೆ ಎನಿಸೋಣ ಆಗಲೂ ಕಾಂಗ್ರೆಸ್ ಈ ವಿಚಾರದಲ್ಲಿ ಪ್ರಜಾಮತದ ಸಹಕಾರವನ್ನು ಹೊಂದುವುದು ವಿರೋಧಭಾವ, ಬಂಧಕಾರ್ಯ ಹಿಂಸೆ ಇತ್ಯಾದಿಗಳು ತಮ್ಮ ಪ್ರಾಂತ್ಯಗಳಲ್ಲಿ ಉಂಟಾಗುವ ಸಂಭವಗಳನ್ನು ಮಂತ್ರಿಗಳು ಕಂಡರೆ ಅವನ್ನು ಎದುರಾಯಿಸಲು ಕ್ರಿಮಿನಲ್ ಲಾವನ್ನು ಉಪಯೋಗಿಸುವ ಮೊದಲು ಕಾಂಗ್ರೆಸ್ ವ್ಯವಸ್ಥೆಗಳ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಹಾಯವನ್ನು ಪಡೆಯುವುದು ಲೇಸು ಪೋಲೀಸ ಮತ್ತು ಮಿಲಿಟರಿ ವರ್ಗಗಳನ್ನು ಸೋಮಾರಿಗಳಂತೆ ಮಾಡಿಬಿಟ್ಟರೆ ಕಾಂಗ್ರೆಸಿಗೆ ಅದರಿಂದ ಮಹಾ ಪ್ರಶಸ್ತಿ ಬರುವುದು (ಕಾಂಗ್ರೆಸ್ ರಾಜ್ಯವು ರಾಮರಾಜ್ಯವಾಗಬೇಕು) ಯಾವದಾದರೂ ಒಂದು ಸಂದಿಗ್ಧದಲ್ಲಿ ಕಾಂಗ್ರೆಸಿಗೆ ಪೋಲಿಸರ ಅಗತ್ಯಬಿದ್ದಂದರೆ ಅದು ಕಾಂಗ್ರೆಸಿನ ಮಹಾ ಸೋಲೆಂದು ಭಾವಿಸಲಾಗುವುದು ಪೋಲಿಸರ ಮತ್ತು ಮಿಲಿಟರಿಯ ಸಹಾಯವಿಲ್ಲದೆ ರಾಜ್ಯಾಡಳಿತವನ್ನು ನಡೆಯಿಸುವುದು ನೂತನ ರಾಜ್ಯಾಂಗರಚನೆಯನ್ನು ಸಾರ್ಥಕಪಡಿಸುವ ಒಂದು ಶ್ರೇಷ್ಠ ಉಪಾಯವಾಗಿರುತ್ತದೆ

ಆದಾಯವನ್ನು ಹೆಚ್ಚಿಸುತ್ತಾರೆ . ಅಖಿಲ ಭಾರತದ ಮೂರರಲ್ಲೊಂದಂಶ ಖಾದಿಯು ನಮ್ಮ ಪ್ರಾಂತ್ಯದಲ್ಲಿ ಸಿದ್ಧವಾಗುತ್ತದೆ. ಗಿರಣಿಗಳು ಇದನ್ನು ನಾಶಪಡಿಸದೇ ಕೆಂದು ಹಾತೊರೆಯುತ್ತವೆ ಬಂಧುಗಳೇ, ಇಂತಹ ಮಹತ್ವದ ವ್ಯವಸಾಯವನ್ನು ನಾಶಪಡಿಸಲು ನೀವು ಬಿಡುವಿರಾ? ಖಾದಿ ವ್ಯವಸಾಯದಿಂದ ನಮ್ಮ ಬಡ ಬಂಧುಗಳಿಗೆ ಸಹಾಯಕಾರವಾಗುತ್ತದೆ ಖಾದಿಯು ನನ್ನ ಪ್ರೀತಿಯ ವಸ್ತುವು ನನ್ನನ್ನು ಸಂತೋಷಪಡಿಸುವುದಕ್ಕಾಗಿ ನೀವದನ್ನು ಧರಿಸಬೇಕಾಗಿಲ್ಲ ಅದು ನಿಮ್ಮ ಹೃದಯಕ್ಕೆ ಹಿಡಿಸಿ ನೀವು ಖಾದಿಯನ್ನು ಧರಿಸುವಂತಾಗಬೇಕು ಇದಕ್ಕೆ ರಾಜಕೀಯ ಬಣ್ಣವಿಲ್ಲ ಆದುದರಿಂದ ಸರಕಾರಿ ನೌಕರರು ಖಾದಿ ಧರಿಸಬೇಕೆಂದು ನನ್ನ ಇಚ್ಛೆ ಸರಕಾರದವರು ಒತ್ತಾಯಪಡಿಸುವುದಕ್ಕಿಂತಲೂ ಅವರಾಗಿಯೇ ಸ್ವಯಂಸ್ಫೂರ್ತಿಯಿಂದ ಖಾದಿಯನ್ನು ಧರಿಸಬೇಕು"

ಸರಕಾರಿ ನೌಕರರು ಖಾದಿಯನ್ನು ಧರಿಸಬೇಕು.

ಮದ್ರಾಸಿನ ಪ್ರಧಾನ ಮಂತ್ರಿಗಳಾದ ರಾಜಗೋಪಾಲಾಚಾರ್ಯರು, ಪ್ರಾಂತ್ಯದ ಸರಕಾರಿ ನೌಕರಿಯಲ್ಲಿರುವವರೆಲ್ಲರನ್ನುದ್ದೇಶಿಸಿ, ಖಾದಿಯನ್ನು ಕೊಂಡುಕೊಳ್ಳಿರೆಂದು ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಅಕ್ಕತೊಳಿನ ಹಾಗೂ ಕೈಮಗ್ಗದ ಬಟ್ಟೆಗನೇ ಖಾದಿ ಬಟ್ಟೆ ಎನ್ನುತ್ತಾರೆ. ನಮ್ಮ ಬಂಧುಗಳು-ಹಳ್ಳಿಗರು ಹೊಲಗಳಲ್ಲಿ ದುಡಿದು ಬಂದರೆ, ನಮ್ಮ ಭಗಿನಿಯರು ಮನೆಯಲ್ಲಿ ರಾಟೆಯನ್ನು ತಿರುಗಿಸಿ, ನಮ್ಮ ಪ್ರಾಂತ್ಯದ

ಚೀನಾಕ್ಕೆ ಭಾರತೀಯ ಸೈನ್ಯಮಂಡಳ

ಚೀನಾದೇಶದ ಶಾಂಗ್ಹಾಯಿಯಲ್ಲಿ ಉಂಟಾದ ಪರಿಸ್ಥಿತಿಯಿಂದಾಗಿ ರಕ್ಷಣಾ ಕಾರ್ಯಕ್ಕಾಗಿ ಹಿಂದೂದೇಶದಿಂದ ಎರಡು ಭಾರತೀಯ ಸೈನ್ಯ ದಳಗಳನ್ನು ಅಲ್ಲಿಗೆ ಕಳುಹಿಸಿಕೊಡಬೇಕೆಂದು ಇಂಡಿಯಾ ಸರಕಾರದ ನಿರ್ಧಾರವಾಗಿರುತ್ತದೆ ಅವುಗಳು ಹೊಂಗ್‌ಕೊಂಗ್ ಮತ್ತು ಸಿಂಗಾಪೂರದಲ್ಲಿ ಅಂತರಾಷ್ಟ್ರೀಯ ರಕ್ಷಣಾ ಕೆಲಸಕ್ಕೆ ಭಾರತೀಯ ರಕ್ಷಣಾರ್ಥವಾಗಿಯೂ ಉಪಯೋಗಿಸಲಾಗಿ ಚೀನಾದೇಶದ ಪರಿಸ್ಥಿತಿಯು ತಣಿದ ನಂತರ ಹಿಂತಿರುಗಿಸಲಾಗುವುವು ಮೇಲಿನ ಅಧ್ಯಾಪನೆಯು ದೊರೆತ ಎರಡು ಸೈನ್ಯದಂಡುಗಳು ಸಂಪೂರ್ಣ ಭಾರತೀಯವಾಗಿದ್ದು, ಎರಡು ಸೇವಂದಂಬಾದಿನಲ್ಲಿ ನಿಲ್ಲಿಸಲ್ಪಟ್ಟವುಗಳು ಹಿಂದೂದೇಶವನ್ನು ಬಿಟ್ಟ ನಂತರ ಈ ದಂಡುಗಳ ವ್ಯಯವು ಬ್ರಿಟಿಷ ಖಜಾನೆಯಿಂದ ಕೊಡಲಾಗುವುದು.

ಈ ವಿಷಯವನ್ನು ವೈಸ್ರಾಯರ ಸೇನಾಪತಿಗಳೂ ಕೇಂದ್ರ ಸರಕಾರದ ಎಸೆಂಬ್ಲಿಯ ವಿವಿಧ ಪಕ್ಷದ ಮುಖಂಡರನ್ನು ಬರಗೊಳಿಸಿ ಒಂದು ಸಭೆ ಕರೆದು ಅಲ್ಲಿ ಚೀನೀಯ ಪರಿಸ್ಥಿತಿಯ ಕುರಿತು ವಿವರಿಸಲಾಗಿ ಇಂಡಿಯಾ ಸರಕಾರದ ಮೇಲಿನ ನಿರ್ಧಾರವು ಅವರಿಗೆ ತಿಳಿಸಲಾಯಿತು ಈ ಸಭೆಯ ಕುರಿತು ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ನಾಯಕರಾದ ಶ್ರೀ ಭೂಲಾಭಾಯಿದೇಸಾಯಿಯವರೂ ಡೆಪ್ಯುಟಿ ನಾಯಕರಾದ ಶ್ರೀ ಸತ್ಯಮೂರ್ತಿಗಳೂ ಈ ಕೆಳಗಿನ ಅಭಿಪ್ರಾಯದ ಒಂದು ಪ್ರಕಟಣೆಯನ್ನು ಮಾಡಿರುವರು

ಸಾರ್ವಜನಿಕ ವ್ಯವಹಾರಗಳ ಕುರಿತು ಬರಬಹುದಾದ ಯಾವತ್ತೂ ಆಹ್ವಾನಗಳಿಗೆ ಉತ್ತರಕೊಡುವುದು ನಮ್ಮ ಈಗಿನ ಧೋರಣೆಯಾಗಿರುವುದರಿಂದ ವೈಸ್ರಾಯರು ಕರೆದ ಈ ಸಭೆಗೆ ಹೋಗುವುದು ನಮ್ಮ ಕರ್ತವ್ಯವೆಂದು ನಾವು ಬಗೆದೆವು ಇದರಿಂದ ವೈಸ್ರಾಯರ ವಿನಯವರ್ತನೆಯಾಗಿರುತ್ತದೆ ಇದೇ ತರದಲ್ಲಿ ಪ್ರತಿಯೊಂದು ಮಹತ್ವದ ವಿಚಾರಗಳ ಅಭಿಪ್ರಾಯವಾಗಬೇಕಾಗಿದ್ದಾಗ ಎಸೆಂಬ್ಲಿಯ ಪಕ್ಷ ನಾಯಕರನ್ನು ವಿಚಾರಿಸುವ ಪದ್ಧತಿಯನ್ನು ಬೆಳೆಯಿಸುವುದರಲ್ಲಿ ಉತ್ತಮವಿದೆ

ಸರಕಾರದ ಈ ಅಭಿಪ್ರಾಯದಿಂದ ಈ ಕೆಳಗಿನ ಕೆಲವು ಸಂಗತಿಗಳು ವ್ಯಕ್ತವಾಗುತ್ತವೆ

ಹಿಂದೂದೇಶದಲ್ಲಿ ಕೇಳಿಸಲ್ಪಟ್ಟದ್ದು ಮತ್ತು ತರಬೇತು ಹೊಂದಿದ ಸೈನ್ಯವರ್ಗವು ಹಿಂದೂದೇಶದ ರಕ್ಷಣೆಯಿಂದಕ್ಕೆ ಮಾತ್ರವಲ್ಲದೆ, ಬ್ರಿಟಿಷ ಸಾಮ್ರಾಜ್ಯಶಾಹಿ ರಕ್ಷಣೆಯ ಬಗ್ಗೆ ಉಪಯೋಗಿಸಲಾಗುವುದು ಹೀಗಿರುವಾಗ, ಹಿಂದೂದೇಶದ ಮಿಲಿಟರಿ ವೆಚ್ಚದ ಒಂದಂಶವನ್ನು ಬ್ರಿಟಿಷ ಖಜಾನೆಯಿಂದ ಕೊಟ್ಟು, ಹಿಂದೂದೇಶದ ಮಿಲಿಟರಿ ವೆಚ್ಚವನ್ನು ಕಡಿಮೆಮಾಡಬಹುದಲ್ಲವೆ ಈ ಎರಡು ಸೈನ್ಯವರ್ಗಗಳು ಸಂಪೂರ್ಣ ಭಾರತೀಯವಾಗಿದ್ದು, ಅದರ ಅಧಿಕಾರಿಗಳೂ ಹಿಂದೀಯರಿದ್ದು ಭಾರತೀಯರಲ್ಲಿ ಸಂಗ್ರಾಮ ಶೂರತೆಯ ಯೋಗ್ಯತೆಯಿರುವುದೆಂದೂ, ಭಾರತೀಯರಲ್ಲಿ ತಮ್ಮ ದೇಶರಕ್ಷಣೆಗೆ ಬೇಕಾದ ಸಂಗ್ರಾಮ ಯೋಗ್ಯತೆಯಿರುವುದಿಲ್ಲ, ಆದ್ದರಿಂದ ಇಲ್ಲಿ ಬ್ರಿಟಿಷ ಸೈನ್ಯವನ್ನು ಇಡಲಾಗಿದೆ ಎಂದು ಆಗಿಂದಾಗ್ಯೆ ಹೊರಡುವ ಮಾತುಗಳಲ್ಲಿ ಸಾರವಿಲ್ಲವೆಂದೂ ಸರಕಾರದ ಮೇಲಿನ ಅಭಿಪ್ರಾಯದಿಂದ ಖಚಿತವಾಗುವುದು

ಈ ಸೈನ್ಯವರ್ಗಗಳು ಸರಕಾರದ ಆಜ್ಞೆಯಲ್ಲಿ ಕಳುಹಿಸಲ್ಪಟ್ಟ ಕಾರ್ಯಕ್ಕೆನೇ ಉಪಯೋಗಿಸಲ್ಪಡುವುವಾದರೆ, ಅದನ್ನು ಅತ್ತಕಡೆಗೆ ಕಳುಹಿಸಿಕೊಡುವದರ ನಮ್ಮ ಆಕ್ಷೇಪವಿಲ್ಲ ಈ ದಂಡುಗಳ ಅಲ್ಲಿನ ವ್ಯಯವು ಬ್ರಿಟಿಷ ಖಜಾನೆಯಿಂದ ಕೊಡಲಾಗುವುದೆಂಬ ವಿಚಾರವು ಸಮಾಧಾನಕರವು.

ಶಾಂಗ್ಹಾಯಿ ನಗರವು ಬೆಂಕಿಪಾಲಾಗಿರುತ್ತದೆ.

ಘೋರ ಕದನಗಳು ಪ್ರಾರಂಭವಾಗಿವೆ.

೫೦ ಸಾವಿರ ಜಪಾನೀಯ ಸೈನಿಕರು, ಚೀನಾದಲ್ಲಿಳಿದಿರುವರು.

ಶಾಂಗಾಯಿಯಲ್ಲಿ ಅತ್ಯಂತ ಭೀಕರವೆನಿಸುವ ಯುದ್ಧವು ನಡೆಯುತ್ತಿದೆ ಚೀನಿಯರೂ ಜಪಾನೀಯರ ಅತಿಕ್ರಮವನ್ನು ವಿರೋಧಿಸುವ ಕಾರ್ಯವು ಸ್ವಲ್ಪ ಫಲಕಾರಿಯಾಗಿತ್ತು ಚೀನಾ ಸೈನ್ಯ ಬಲದ ಸಂಖ್ಯೆಯು ಜಪಾನೀಯರಿಗಿಂತ ಅಧಿಕವಿದ್ದರೂ ಅವರೊಡನೆ ಆಧುನಿಕ ಸೌಕರ್ಯಗಳಿರುವುದಿಲ್ಲ ಶಾಂಗಾಯಿ ಪಟ್ಟಣವು ನೀರು ದಾರಿಯ ಮೂಲಕ ಸೇರಲು ಅನುಕೂಲವಾಗಿರುವುದರಿಂದ ಜಪಾನೀಯರಿಗೆ ನಗರದ ಅತಿ ಸಮೀಪಕ್ಕೆ ಯುದ್ಧ ಜಹಜಗಳ ಸಹಕಾರವು ದೊರೆಕಿರುತ್ತದೆ ಅನ್ಯ ಜನಾಂಗಿಕರು ಶಾಂಗ್ಹಾಯಿಯನ್ನು ತೊರೆಯಬೇಕಾಗಿದೆ ಸಾವಿರಾರುಮಂದಿಗಳು ಈಗಾಗಲೆ ಹೊರಟರು ... ಜನಾಂಗಿಕರ ಸಂಸ್ಥೆಗಳಿಗೂ ಸಂಚಯಗಾರರಿಗೂ (ಮುಖ್ಯವಾಗಿ ಬ್ರಿಟಿಷರಿಗೆ ಮತ್ತು ಅಮೇರಿಕನರಿಗೆ) ಭಯಂಕರ ನಷ್ಟ ಉಂಟಾಗಿರುವುದೆಂದು ತಿಳಿದು ಬರುತ್ತದೆ ತಮಗೆ ಉಂಟಾದ ನಷ್ಟಗಳನ್ನು ಜಪಾನೀಯರು ಮತ್ತು ಚೀನಿಯರು ಭರ್ತಿಮಾಡಬೇಕಾಗಿ ಬ್ರಿಟಿಷ ಮತ್ತು ಅಮೇರಿಕಾ ಸರಕಾರಗಳ ಕೋರಿಕೆಗಳು ಹೊರಟಿವೆ

ಸಮಸ್ತ ಶಾಂಗ್ಹಾಯಿ ಪಟ್ಟಣವು ಬೆಂಕಿಪಾಲಾಗಿರುತ್ತದೆ ಅಸಂಖ್ಯಾತ ಕಟ್ಟಡಗಳು ಉರಿಯುತ್ತಿವೆ ... ಅತ್ಯಂತ ಭಯಂಕರವೆನಿಸುವ ಬೆಂಕಿಯು ಅಲ್ಲಿ ಉರಿಯುತ್ತದೆ ಅಂತರಾಷ್ಟ್ರೀಯರು ಉಳಕೊಳ್ಳುವ ಪ್ರದೇಶದಲ್ಲಿ ಬೆಂಕಿ ಉಂಟಾಗಿದೆ

ಚೀನಿಯರು ಪೋಟಂಗ್ ಎಂಬಲ್ಲಿ ಜಪಾನೀಯರ ಸೈನ್ಯ ಪಡೆಗಳು ಇಳಿಯದಂತೆ ಯತ್ನಿಸ್ಸಿದರಂತೆ ಈ ಯತ್ನವು ಜಪಾನೀಯರ ಯುದ್ಧ ಜಹಜುಗಳ ತೋಫುಗಳ ಗುಂಡಿನ ಸುರಿಮಳೆಯಿಂದಲೂ ವಿಮಾನಗಳ ಸುರಿಮಳೆಯಿಂದಲೂ ಎದುರಾಯಿಸಲಾಯಿತಂತೆ

ಜಪಾನೀಯರ ೫೦,೦೦೦ ಸೈನಿಕರು ಚೀನಾದಲ್ಲಿ ಇಳಿದಿರುವರಾಗಿ ತಿಳಿದುಬರುತ್ತದೆ

ಶಾಂಗ್ಹಾಯಿಯಲ್ಲಿರುವ ಜಪಾನೀಯರ ಕೆಲವು ಗಿರಣಿಗಳ ಸುಡಲ್ಪಟ್ಟವಂತೆ

The Kerala Tea Syndicate,

PONANI—(S. Malabar.)

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Edited Printed & Published By A. S. Kamath at the Sharada Press, Car Street, Mangalore.

ಚೀನಾ ಜಾಪಾನು ಸಮರ

ಜಾಪಾನಿನ ವೈಮಾನಿಕರು ಬ್ರಿಟಿಷ ರಾಯಭಾರಿಯ ಮೇಲೆ ಗುಂಡೆಸೆದು ಈಗ ಬ್ರಿಟಿಷರ ಆಗ್ರಹಕ್ಕೊಳಪಟ್ಟಿರುವರು.

ಚೀನದ ಗುಂಡುಗಳು ಯುನೈಟೆಡ್ ಸ್ಟೇಟ್ಸಿನ ಹಡಗನ್ನು ತಗಲಿ, ಚೀನವು ಆ ರಾಷ್ಟ್ರದ ದೂರಿಗೆ ಒಳಗಾಗಿದೆ.

ಜಪಾನಿನ ವ್ಯಥೆ! ಚೀನದ ಭರವಸೆ!

ಪರಸರಕಾರಗಳ ನಷ್ಟ ಭರ್ತಿಮಾಡುವ ವಾಗ್ದಾನವನ್ನು ಚೀನವು ಕೊಟ್ಟಿದೆ—ಜಪಾನಿನ ಮಂತ್ರಾಲೋಚನೆಯ ಫಲ.

ಚೀನದ 'ಪ್ರೆಸಿಡೆಂಟ್ ಹೂವರ್' ಎಂಬ ಹಡಗನ್ನು ನಾಲ್ಕು ವಿಮಾನಗಳು ಮುತ್ತಿ, ಗುಂಡು ಚೆಲ್ಲಿದುವು. ಹಡಗಿನವರಲ್ಲಿ ಒಬ್ಬನು ಮಡಿದಿರುವನು, ಏಳು ಮಂದಿ ಗಾಯಹೊಂದಿರುವರು. ಬ್ರಿಟಿಷ ಯುದ್ಧನಾವೆಗಳು ವಾರ್ತೆ ಕೇಳಿದೊಡನೆ ಹಡಗಿನ ಕಡೆಗೆ ಧಾವಿಸಿದುವು. ಇನ್ನು ಅಮೇರಿಕದ ಯುದ್ಧನಾವೆಗಳಾವುವೂ ಚೀನದ ಹತ್ತಿರದ ಕಡಲಿಗೆ ಶಾಂತಿಯಾಗುವ ತನಕ ಬರುವುದಿಲ್ಲ ಎಂದು ಸರ್ಕಾರವು ಮಾಡಿದೆ.

ಜಪಾನಿನ ಸೈನ್ಯಗಳನ್ನು ಒಯ್ಯುವ ಹಡಗುಗಳಿಗೆ ಅಮೇರಿಕದ ಈ ಹಡಗು ಹತ್ತಿರವಿದ್ದುದರಿಂದ, ಅವುಗಳ ಮೇಲೆ ಚೆಲ್ಲಿದ ಗುಂಡು ನಿರುದ್ದೇಶವಾಗಿ ಈ ಹಡಗಿನ ಮೇಲೆ ಬಿತ್ತಾಗಿ ಚೀನವು ಮನೋವ್ಯಥೆ ಪ್ರಕಟಿಸಿಯದೆ. ಅಮೇರಿಕದ ಹಡಗಿಗೆ ಉಂಟಾದ ನಷ್ಟವನ್ನು ಚೀನವು ಪೂರಯಿಸಿಕೊಡಲೂ ವಾಗ್ದಾನ ಮಾಡಿಯದೆ.

ಜಪಾನಿನ ಯುದ್ಧನಾವೆಗಳು ಬ್ರಿಟಿಷ ಸ್ಟೀಮರುಗಳನ್ನು ತಡೆದು ಅವನ್ನು ಹುಡುಕಿದುವೆಂದೂ, ಅವುಗಳಲ್ಲಿ ಏನೇನ ಸರಕು ಇತ್ತೆಂಬುದನ್ನು ಪರಿಶೋಧಿಸಿದುವೆಂದೂ ಪ್ರಕಟವಾಗಿದೆ.

ಚೀನಾದೇಶದಲ್ಲಿ ೧೮ ಮತ್ತು ೪೫ ವಯಸ್ಸಿನ ಎಲ್ಲ ಗಂಡಸರನ್ನು ಕೂಡಲೆ ಸೈನ್ಯಕ್ಕೆ ಸೇರುವಂತೆ ಸರಕಾರದ ಆಜ್ಞೆಯಾಗಿದೆ.

ಫ್ರೆಂಚರ ಕಥೊಲಿಕ ಸೆಮಿನೆರಿಯನ್ನು ಒಂದು ಸಾವಿರ ಮಂದಿ ಚೀನದ ಸೈನಿಕರು ನುಗ್ಗಿ ಲುಟಾಯಿಸಿದರೆಂದು ತಿಳಿದುಬಂದಿದೆ. ಸೆಮಿನೇರಿಯ ಅಂಗಳದಲ್ಲಿ ೫೦೦೦ ಚೀನೀಯರಿಗೆ ಆಶ್ರಯ ಕೊಡಲಾಗುತ್ತು. ಹನ್ನೆರಡು ಮಂದಿ ಪಾದರಿಗಳನ್ನೂ ಹನ್ನೆರಡು ಮತಾಂತರ ಹೊಂದಿದ ಚೀನೀಯರನ್ನೂ ಲೂಟಿಗಾರರು ಕೊಂಡೊಯ್ದಿರುವರು.

ಬ್ರಿಟಿಷರಿಗೆ ಸೇರಿರುವ ಹೊಂಗ್ ಕೊಂಗ್ ದ್ವೀಪದಲ್ಲೀಗ ಚೀನದ ನಾನಾ ಭಾಗಗಳಿಂದ ಆಶ್ರಯಹುಡುಕಿ ಬರುವ ಜನರ ಸಂಖ್ಯೆ ಹೆಚ್ಚುತ್ತ ಬರುತ್ತಲಿದೆ. ಇವರಲ್ಲಿ ಹಲವರನ್ನು ಸಿಂಗಾಪುರ, ಮಲಯಾ ಪ್ರಾಂತ್ಯಗಳಿಗೆ ಕಳುಹದಿದ್ದರೆ ಹೊಂಗ್‌ಕೊಂಗಿನಲ್ಲಿ ಆರೋಗ್ಯ ಕೆಡುವ ಸಂಭವವಿದೆ ಎಂದೂ ಪ್ರಕಟವಾಗಿದೆ.

ಚೀನದೊಡನೆ ಎಂತಹ ರಾಜೀಪ್ರಸ್ತಾಪವಾದರೂ ಅಸಾಧ್ಯವಾಗುವಂತೆ, ಜಾಪಾನಿನ ಮುಖ್ಯಮಂತ್ರಿಗಳು ಒಂದು ಭಾಷಣ ಮಾಡಿ,—ಈಗ ನಮ್ಮ ಸೈನ್ಯದ ಬಲವನ್ನು ಇಮ್ಮಡಿ ಮಾಡಲಾಗಿದೆ ಅಗತ್ಯವಿರುವಲ್ಲಿ ಇನ್ನೊಂದು ವರ್ಷದ ತನಕ ನಾವು ಯುದ್ಧಮಾಡಲೇ ಬೇಕಾಗುವುದು. ಸೈನ್ಯವನ್ನು ಇನ್ನೂ ಮುಮ್ಮಡಿ ಮಾಡಲೂ ನಾವು ಸಿದ್ಧರು. ದಕ್ಷಿಣ ಚೀನದ ಕಡೆಗೆ ನುಗ್ಗಬೇಕು'' ಎಂದು ಅಪ್ಪಣೆ ಮಾಡಿರುವರು.

ಚೀನವು ಜಾಪಾನಿನ ಆಸ್ಪತ್ರೆ ಹಡಗನ್ನು ಗುಂಡಿಕ್ಕಿ ಧ್ವಂಸ ಮಾಡುವುದಗಲ್ಲಿತ್ತೆಂದೂ, ಜಾಪಾನು ವಿಷವಾಯುಗಳನ್ನು ಹರಡಿಸುವ ಬೊಂಬುಗಳನ್ನು ಚೆಲ್ಲಿ ಚೀನೀಯರನ್ನು ಕಾದಾಡುತ್ತಿದೆಯೆಂದೂ ಎರಡೂ ಕಡೆಯ ದೂರುಗಳು ಪ್ರಕಟವಾಗಿವೆ.

ಚೀನದಲ್ಲಿ ನಡೆವ ಯುದ್ಧವು ಇತರ ಯಾವ ಸರಕಾರಗಳಿಗೂ ವಿರುದ್ಧವಾಗಿಲ್ಲವೆಂದು ಜಪಾನಿನ ಹೇಳಿಕೆ.

ಚೀನೀಯರು ಜಪಾನಿನ ನಿಶಾನಿಯ ವಿಮಾನಗಳನ್ನು ಹಾರಾಡಿಸುತ್ತಾರೆಂದು ಜಪಾನು ಇತರ ಸರಕಾರಗಳಿಗೆ ತಿಳಿಸಿ, ಅಂತಹವು ಮಾಡುವ ನಷ್ಟಗಳಿಗೆ ತಾನು ಬಾಧ್ಯವಲ್ಲೆಂದು ಮೊದಲೇ ಸಾರಿಬಿಟ್ಟಿದೆ.

ಈ ಮಧ್ಯೆ, ಚೀನಕ್ಕೂ ರಷ್ಯಕ್ಕೂ ಒಂದು ಸಂಧಾನ ನಡೆದಿದೆ ಎಂದೂ, ಅದರ ಪ್ರಕಾರ, ಇತರರ ದಾಳಿಯನ್ನು ತಡೆವುದಕ್ಕೆ ಒಂದು ಸರಕಾರವು ಮತ್ತೊಂದರ ಸಹಾಯಕ್ಕೆ ಬರಬೇಕಾಗಿದೆಯಾದುದರಿಂದ, ಜಾಪಾನಿಗೆ ವಿರುದ್ಧವಾಗಿ ರಷ್ಯವು ದುಮುಕಬಹುದೋ ಎಂದು ಒಂದು ಸಂದೇಹಪಡಬೇಕಾಗಿದೆ ಎಂದೂ ಜಾಪಾನು ಪ್ರಕಟಿಸಿದೆ. ರಷ್ಯವು ಈ ವಾರ್ತೆಯನ್ನು ಸುಳ್ಳೆಂದಿಲ್ಲ.

ಮೊಂಚೂರಿಯವನ್ನು ಚೀನದಿಂದ ಕಡಿದು ಅದಕ್ಕೊಂದು ಬೇರೆ ರಾಜ್ಯಕ್ರಮವನ್ನು ಏರ್ಪಡಿಸಿ ತನ್ನ ಅಂಕೆಯಲ್ಲಿ ಜಾಪಾನು ಇಟ್ಟುಕೊಂಡ ಹಾಗೆಯೆ ಮಂಗೋಲಿಯಾ ಪ್ರಾಂತ್ಯವನ್ನು ಪ್ರತ್ಯೇಕಿಸಿ, ಅದನ್ನು ಸ್ವತಂತ್ರ ರಾಜ್ಯವೆಂದೆನ್ನಿಸಿ ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕಾಗಿ ಜಾಪಾನು ಈಗ ಪ್ರಯತ್ನಿಸುತ್ತಿದೆ.

ಮಂಗೋಲಿಯದಲ್ಲಿರುವ ೫೦೦೦೦ ಸೈನಿಕರು ಜಪಾನಿಗೆ ಸಹಾಯ ಮಾಡಿ ಚೀನವನ್ನು ವಿರೋಧಿ[illegible]

[illegible] ಬ್ರಿಟಿಷ ರಾಯಭಾರಿ [illegible] ಮೋಟರಿನಲ್ಲಿ ಬ್ರಿಟಿಷ ಧ್ವಜ ಕಟ್ಟಿ ಪ್ರಯಾಣ ಮಾಡುವಾಗ, ಆತನ ಮೇಲೆ ಜಪಾನಿನ ವಿಮಾನಗಳು ಗುಂಡೆಸದುವು. ಗಾಯಗೊಂಡವರನ್ನು ಬಲುದೂರದ ಆಸ್ಪತ್ರೆಗೆ ಕೊಂಡೊಯ್ದರು. ಜೀವದ ಆಸೆ ಆಗ ಇದ್ದಿಲ್ಲ. ಈಗ ಬಲು ಜತನದ ಫಲವಾಗಿ ಇನ್ನೇನೂ ಅಪಾಯವಿಲ್ಲವೆಂದು ವೈದ್ಯರೆನ್ನುತ್ತಾರೆ.

ಬ್ರಿಟಿಷ ಸರಕಾರವು ಈ ವೃತ್ತಾಂತವನ್ನು ಇಷ್ಟು ದಿನ ಕೂಲಂಕಷವಾಗಿ ವಿಚಾರಿಸಿ, ಈಗ ಕಠಿನಸ್ವರದಿಂದ ಒಂದು ಪತ್ರವನ್ನು ಜಪಾನಿಗೆ ಬರೆದಿರುವುದಾಗಿ ತಿಳಿದುಬಂದಿದೆ, 'ಜಾಪಾನು ಈ ದುಷ್ಕೃತ್ಯಕ್ಕಾಗಿ ಒಂದು ಕ್ಷಮಾಪಣೆ ಯಾಚಿಸಬೇಕು. ಈ ದುಷ್ಕೃತ್ಯ ಮಾಡಿದವರನ್ನು ಸರಿಯಾಗಿ ದಂಡಿಸಬೇಕು. ಇಂತಹ ದುಷ್ಕೃತ್ಯಗಳಾಗದಂತೆ ಭರವಸೆ ಕೊಡಬೇಕು. ಜಾಪಾನಿನ ಉತ್ತರವು ಇನ್ನೂ ತಲಪಿಲ್ಲ. ಒಳ್ಳೆಯ ಯೋಚನೆಯಾಗುತ್ತಿರಬೇಕು.

ಅಬಿಸೀನಿಯವನ್ನು ಇಟಲಿಯು ನುಗ್ಗಿದಾಗಲಾದರೂ, ಈ ರೀತಿಯ ಕೇಪಿಯನ್ನು ಇಂಗ್ಲೆಂಡು ತೋರಿಸಿಲ್ಲವೆನ್ನುತ್ತಾರೆ.

ಸ್ಪೆಯಿನಿನ ಬಳಿ ಇಂಗ್ಲೆಂಡಿನ ಜಹಜುಗಳಿಗೆ ನಾನಾ ಬಾಧೆಗಳುಂಟಾದರೂ ಇಷ್ಟು ಜೋರಾಗಿ ಇಟಲಿ ಅಥವಾ ಜರ್ಮನ್ ಸರಕಾರಗಳಿಗೆ 'ನೋಟು' ಬರೆದುದಿಲ್ಲ.

ಚೀನದ ಸರ್ವಸೈನ್ಯಾಧ್ಯಕ್ಷನನ್ನೇ ಕೊಲ್ಲಲು ಹಾಕಿದ ಗುಂಡು ಬ್ರಿಟಿಷ ರಾಯಭಾರಿಗೆ ತಗಲಿದುದಾಗಿ ಮತ್ತೊಂದು ವಿವರ. ಹೀಗೂ ಯುದ್ಧವಾಗುವ ಕ್ರಮವು ಇದೆಯೆ ಎಂದು ವಿಲಾಯತಿಯಲ್ಲಿ ಆಶ್ಚರ್ಯಪಡುತ್ತಾರೆ.

ಮದ್ರಾಸು ಎಸೆಂಬ್ಲಿ

ಪ್ರಥಮಾಧಿವೇಶನ! ಗವರ್ನರರ ಆಶಾವಾದಿ ಭಾಷಣ.

ಆಕ್ಟು ರದ್ದಾಗಬೇಕೆಂಬ ಬಹುಮತ ನಿರ್ಣಯ.

ಈಗಿನ ಆಕ್ಟು, ದೊಡ್ಡದೊಂದು ಗೂಡು. ಅದು ಕಾರಣ ನಮ್ಮ ಗೌರವಕ್ಕೆ ಕುಂದು. ನೌಕರರು ಜನಾಂಗಕ್ಕಿಂತ ಹೆಚ್ಚಿನವರೆಂದು ವಿಧಿಸುವ ಪ್ರಜಾಸತ್ತೆಯ ನಿರಾಕರಣ ತತ್ವವುಳ್ಳ ಈ ಆಕ್ಟು ರದ್ದಾಗಬೇಕು. ಫೆಡರೇಶನಿನಿಂದ ಪ್ರಜಾಸತ್ತೆಯನ್ನು ಇನ್ನಷ್ಟು ನಿರ್ಬಂಧಿಸುವ ಕಾರಣ, ರಾಜ್ಯಗಳಲ್ಲಿನ ಜನತಾ ಜವಾಬ್ದಾರಿಯಿಂದ ಪ್ರತಿನಿಧಿಗಳು ಕೂಡಿದ ಫೆಡರೇಶನ್ ಎಸೆಂಬ್ಲಿಯಿಂದ ಪ್ರಾಂತಿಕ ಸರಕಾರಗಳ ಮೇಲೂ ಅಧಿಕಾರ ನಡೆಸುವಂತಾಗಕೂಡದು, ಕೊಂಗ್ರೆಸ್ ಪ್ರಾಂತ್ಯಗಳಲ್ಲಿ ಸರಕಾರವು ಇದನ್ನು ಎದುರಿಸಿಯೇ ಕಾದುವುದು.

ಮಾನ್ಯ ಗವರ್ನರ ಸಾಹೇಬರು ಶಾಸ್ತ್ರಕ್ಕೆ ತಕ್ಕಂತೆ ಮಾತ್ರ ಸ್ವಸ್ತಿವಾಚನ ಮಾಡಿಲ್ಲ. ಈಗಣ ಮಂತ್ರಿಮಂಡಲದ ಪೂರ್ಣ ಸ್ನೇಹವನ್ನು ಸಂಪಾದಿಸಿಯೆ, ತನ್ನಲ್ಲಿ ಉಂಟಾದ ಅಭಿಪ್ರಾಯಗಳನ್ನು ಹೊರಗೆಡವಿದರು. ಈಗಣ ನವ ಸುಧಾರಣೆಯಲ್ಲಿ, ಮಂತ್ರಿ ಮಂತ್ರಿಮಂಡಲವು ಅಪ್ಪಣೆ ಕೊಡುವುದನ್ನು ವಿಧೇಯತೆಯಿಂದ ಕೈಗೊಂಡು ನಡೆಯುವುದೇ ಸರ್ವಿಸ್ಸು ಸಿಬ್ಬಂದಿಯ ಕರ್ತವ್ಯವೆಂದ[illegible] ನೌಕರರಿಗೆಲ್ಲ ಎಚ್ಚರಿಕೆ ಕೊಟ್ಟರು. ಮಂತ್ರಿಗಳು ಯಾವ ಪಂಗಡದವರೇ ಆದರೂ ಅವರಿಗೆ ಪ್ರಜೆಗಳ ಬೆಂಬಲವಿದ್ದು ಅವರು ಪ್ರಜಾಪ್ರತಿನಿಧಿಗಳಾಗಿರುವ ಕಾರಣ, ಅವರ ಸೂಚನೆಗೆ ತಕ್ಕಂತೆ ನೌಕರರು ನಡೆಯಬೇಕೆಂದೇ ಗವರ್ನರರ ಸೂಚನೆಯಾಗಿತ್ತು. ಆದರೆ [illegible] ಇನ್ನು ಕಾಣುತ್ತಿರುವ ಮಟ್ಟಿಗೆ ನೌಕರರ [illegible] ವಿಧೇಯತೆಯಿಂದ ಸಹಕರಿಸುತ್ತಲೇ ಇದ್ದಾರೆಯಾದರೂ ತಮ್ಮ ತಲಪಿನ ವಿಷಯದಲ್ಲಿ ಇನ್ನು ಮಂತ್ರಿಗಳ ಸೂಚನೆಗೆ ಮ[illegible] ನಡೆಯಬೇಕು. ಕೆಲವು [illegible] ಪ್ರಜೆಗಳ ಹಿತಕಾರ್ಯಗಳನ್ನು ಮಾಡುವುದಕ್ಕಾಗಿ ಬಿಟ್ಟುಕೊಡುವ [illegible] ಸರಕಾರವು ಅವರನ್ನು ಕೇಳಿಕೊಂಡುದಕ್ಕೆ ಎಷ್ಟು [illegible] ಉತ್ತರಗಳು ಬಂದಿವೆಯೋ ತಿಳಿದಿಲ್ಲ. ಆದರೂ ಮುಖ್ಯಮಂತ್ರಿಗಳು ಈ ವಿಷಯವಾಗಿ ಇನ್ನೂ ಇನ್ನೂ ಮಾತೆತ್ತುತ್ತ ಉದ್ಗಾರವೆತ್ತಿಸುವ ಕಾರಣ ಹೆಚ್ಚಿನ ತೃಪ್ತಿಯೇನೂ ಅವರಿಗೆ ಉಂಟಾಗಿಲ್ಲವೆಂದು ತೋರುವುದು. ಸ್ವೇಚ್ಛೆಯಾಗಿ, ನೌಕರರಿಗೆ ಒಂದು ಮಾದರಿ ಹಾಕಿಕೊಡಲು ಗವರ್ನರ ಸಾಹೇಬರೇ ಮುಂದೆ ಬರಬೇಕಾಗಿದೆ ಎಂದು ಹೇಳಬಹುದು. ಇವರು ತಮ್ಮ ಸಂಬಳದಲ್ಲಿ ಕೆಲವಂಶ ಬಿಟ್ಟುಕೊಡುವರಾದರೆ ಪ್ರಜಾಭಕ್ತಿಯು ಇವರನ್ನು ಪೂಜಿಸದೆ ಇರಲಾರದು. ಹಾಗೂ ಗವರ್ನರರು ಇಂತಹ ತ್ಯಾಗ ಮಾಡಿರುವರೆಂದ ಪ್ರಕಟವಾಗಿಲ್ಲ. ಈ ಸುಸಂದರ್ಭವನ್ನು ಅವರು ಕಳೆದುಕೊಳ್ಳಬಾರದೆಂದು ಪ್ರಜೆಗಳ ಪ್ರಾರ್ಥನೆಯಿದೆ.

ರಾಜಕೀಯಾಭಿಪ್ರಾಯಗಳ ಸಲುವಾಗಿ ಸದಸ್ಯರು ತಮ್ಮೊಳಗೆ ಹಗೆತನ ಬೆಳಸಿಕೊಳ್ಳಬಾರದೆಂದೂ ಗವರ್ನರರು ಬೋಧಿಸಿರುವುದು ಸಮಸ್ತ ಸದಸ್ಯರೂ ಒಂದೇ ಕುಟುಂಬದಂತೆ ನಡೆದುಕೊಳ್ಳಬೇಕೆಂದು ಸೂಚಿಸಿದಂತಾಗಿದೆ.

ವಿಲಾಯತಿಯಲ್ಲಿ ಪ್ರಜಾಸತ್ತೆಯಲ್ಲಿರುವ ವಿಶ್ವಾಸವು ಕುಂದುತ್ತ ಬರುತ್ತದೆಯಾದರೂ, ಈ ದೇಶದಲ್ಲಿ ಅದೇ ಮುಖ್ಯವಾಗಿದ್ದು ದೇಶಾಭಿವೃದ್ಧಿಗೆ ಹಿತವಾಗುವ ಶಕ್ತಿಯಾಗಲೆಂದೂ ಗವರ್ನರರು ಸೂಚಿಸಿ ಹಾರಯಿಸಿರುವರು. ಕೆಲವೇ ಮಂದಿ ಮುಖಂಡರ ಮಾತಿನಂತೆ ಎಲ್ಲ ಪ್ರಾಂತ್ಯಗಳ ಕೊಂಗ್ರೆಸ್ ಮಂತ್ರಿಗಳೂ ನಡೆಯುವಂತಾದುದು ಪ್ರಜಾಸತ್ತೆಗೆ ವಿರೋಧವೆನ್ನುವವರಿದ್ದಾರೆ, ಈ ಕೆಲವೇ ಮಂದಿ, ಪ್ರಜಾಪ್ರತಿನಿಧಿಗಳಲ್ಲಿ ಅಗ್ರಗಣ್ಯರಾಗಿರುವ ಕಾರಣ, ಅವರ ಮಾತೇ ಸಮಸ್ತ ಪ್ರಜಾಕೋಟಿಯ ವಾಕ್ಯಪ್ರಮಾಣವೆಂದು ಮಂತ್ರಿಮಂಡಲಗಳು ನಡೆವುದರಲ್ಲಿ ತಪ್ಪೇನಿದೆ?

ಕೆಲವು ಹಿತಕರವಾದ ನಿಯಮಗಳನ್ನು ಮಾಡಿಟ್ಟುಕೊಂಡು, ಸಭಾಕಾರ್ಯವು ಸಾಗುವಂತಾಗಬೇಕೆಂದೂ ಅವರ ಸೂಚನೆ. ಚರ್ಚಾಕಾಲದಲ್ಲಿ ಯಾವ ಬಾಜುಗೂ ಅಡ್ಡಬರದೆ, ಸ್ಪೀಕರರು ಪ್ರತಿಯೊಬ್ಬರಿಗೂ ನಿಷ್ಪಕ್ಷವಾಗಿ ನ್ಯಾಯ ಸಲ್ಲಿಸುತ್ತ ಬರುವಂತಾಗುವುದೇ ಮೊದಲನೆ ಸೂತ್ರವಾಗಿರಬೇಕು. ಶ್ರೀ ಪಟೇಲರವರ ಮಾದರಿಯನ್ನು ಅಧ್ಯಕ್ಷರು ಅನುಸರಿಸಲಿ ಎಂದರೆ ಎಲ್ಲ ಸೂಚನೆ ಮುಗಿಯಿತು.

ಸಭಾಗೃಹದಲ್ಲಿ ದೂರವಾಗಿ ಕೂತಿದ್ದ ಸರ್ ಕೆ. ವಿ. ರೆಡ್ಡಿ (ನಮ್ಮ ಮಾಜಿ ಮುಖ್ಯ ಮಂತ್ರಿಗಳನ್ನು) ಶ್ರೀ ರಾಜಗೋಪಾಲಾಚಾರ್ಯರು ಎದುರುಗೊಳ್ಳುತ್ತಲೇ ತಮ್ಮೊಡನೆ ಕರೆದು ತಂದು ತಮ್ಮ ಇದಿರಿನ ಸ್ಥಾನದಲ್ಲೆ ಸದಸ್ಯರ ಕೋಲಾಹಲದೊಡನೆ ಕುಳ್ಳಿರಿಸಿದರು. ಶ್ರೀ ಶಾಸ್ತ್ರಿಗಳು ದೂರದಲ್ಲೇ ಕೂತರು. ಹಿಂದಣ [illegible] ತ್ರಿಗಳೆಲ್ಲ ಸಂಗತಗಳಾಗಿ ಹಿಂದೆ ಕೂತಿದ್ದರು. [illegible] ಅಂಗವಸ್ತ್ರ ಧರಿಸಿ ಬಂದಿದ್ದರು. ಶ್ರೀ ಸಾಂಬಮೂರ್ತಿಯವರು [illegible] ಲದೊಡನೆ ಬಂದ, ತಮ್ಮ ಉಚ್ಚಾಸನವನ್ನು [illegible] 'ವಂದೇ ಮಾತರಂ' ಗಾನವಾಗ[illegible] ಎಲ್ಲ ಸದಸ್ಯರ [illegible] ದಿದ್ದರು.

ಅನಂತರ ಗವರ್ನರ ಸಾಹೆಬರ ಆಗಮನ ಬರುತ್ತಲೇ, ಶ್ರೀ ಸಾಂಬಮೂರ್ತಿಯವರನ್ನೂ ಶ್ರೀ ರಾಮರಾಯರನ್ನೂ ಹಸ್ತಲಾಘವದಿಂದ ಮನ್ನಿಸಿ, ತಮ್ಮ ಆಸನವನ್ನೇರಿದರು. ಬಳಿಕ ಭಾಷಣ ಮಾಡಿದರು. ಕೊನೆಯಲ್ಲಿ 'ಇತರ ಸಂಸ್ಥಾನಗಳಿಗೆ ಮಾದರಿಯಾಗುವ ರೀತಿಯಲ್ಲಿ ಈ ಸಭೆಯು ಕಾರ್ಯನಿರ್ವಹಿಸಲಿ' ಎಂದೆನ್ನುತ್ತ, ಸರ್ವರನ್ನು ವಂದಿಸಿ ಸಭಾ[illegible] ದಿಂದ ಸ್ವಗೃಹಕ್ಕೆ ತೆರಳಿದರು.

ಆಸ್ಸಾಮ ಎಸೆಂಬ್ಲಿಯಲ್ಲಿ ಸರಕಾರದ ಮಂತ್ರಿಗಳು ಇದ ಕೂಟ ಹತ್ತು ಸಲ ವಿರುದ್ಧ ನಿರ್ಣಯಗಳಿಗೆ ತಲೆಬಾಗಬೇಕಾಯಿತು. ಇನ್ನು ಕೊಂಗ್ರೆಸಿಗೇ ಏಕೆ ಅಧಿಕಾರವನ್ನು ಬಿಟ್ಟುಕೊಡುತ್ತಿಲ್ಲವೋ ತಿಳಿಯದು. ಆದರೂ, ಕೆಲದಿನಗಳಲ್ಲಿ ಕೊಂಗ್ರೆಸ್ ಮಂತ್ರಿಗಳು ಅಲ್ಲಿಯೂ ಅಧಿಕಾರ ನಡೆಸಬಹುದಾಗಿ ಅಂದಾಜು.

೦ ೦ ೦ ೦ ೦

ಜೆಮ್ಶೆಡಪುರದಲ್ಲಿ ಉಕ್ಕಿನ ಕಾರ್ಖಾನೆಯಲ್ಲಿ ಮುಷ್ಕರ ಉಂಟಾಗಿದೆ. ೭೦೦ ಮಂದಿ ಕೆಲಸ ತಡೆದರು. ಕಾರ್ಖಾನೆಯು ಮುಚ್ಚಿ, ಕೆಲಸಗಾರರನ್ನು ಒಳಗೆ ಬಾರದಂತೆ ತಡೆದಿದೆ.

೦ ೦ ೦ ೦ ೦

ಸಿಂಧ ಕೌನ್ಸಿಲಿನಲ್ಲೂ ಕೊನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯನ್ನೆ ಸರಕಾರವು ಕರೆದು ಈ ಆಕ್ಟನ್ನು ರದ್ದುಮಾಡಬೇಕೆಂಬ ಸೂಚನೆ ಬಂದಾಗ ಹಿಂದೂ ಮುಸ್ಲಿಮರಲ್ಲಿ ಐಕ್ಯವಿಲ್ಲದರಿಂದ ಬ್ರಿಟಿಷರು ಇಲ್ಲಿರುವುದು. ಅಗತ್ಯವೆಂದು ಮುಖ್ಯ ಮಂತ್ರಿಗಳು ನುಡಿದು, 'ಒಕ್ಕಟ್ಟಾಗೋಣ ಮೊದಲು!' ಎಂದು ಬೋಧಿಸಿದರು.



Distributors for South Kanara:—

Raghavendra Ranga P. I. Car Street Mangalore.

ಕುಂದಾಪುರ ಪ್ರವರ್ತಕರು—ಕಾಮತ್ಸ್ ಸ್ವದೇಶೀ ಎಂಪೋರಿಯಂ.

S. U. N. & Co.,

Silk Merchants,

Chaukhamba, BENARES CITY.

ಹುಗಿನ ಕರಕ(ಕಾಶಿ) ಬನಾರಿಸ್ ಶೀರೆ ಕಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಹುಗ ಕ್ರಯ ಕುಂಬಾ ಸುಲಭ. ಖಾತ್ರಿ ಮಾಲು. 10 ಮೊಳದ 2¼ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣ ತರದ್ದು 18 ಮೊಳ್ಳೆ ಬುಟ್ಟಿ ಶೀರೆಗಳು ರೂ. 85ರಿಂದ ರೂ. 55. ಸ್ವದಲು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 16, ಅಗಲ 2¼ ರೂ. 20 ರಿಂದ 85ರ ವರೆಗೆ. ಬೇರೆ ಮಾಲುಗಳ ಕಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನಾರಿಸ್ ಸಿಟಿ.

THE

BANK OF MANGALORE LTD.,

MANGALORE.

ESTD. 1931.

Branches:-

Panemangalore, Mudabidri & Padubidri.

Chairman:—**Philip J. Chandran, Esq.,**

Retd. Dt. Registrar of Joint Stock Companies.

On & from 1st of January 1937,

Fixed Deposits will be received at following rates of interest.

For	3 months	3¼%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors.*

"An ideal young progressive Life Office of India to Insure with or represent"

The Commonwealth Assurance Co.,

LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 37½. ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms. Apply to:-

Messrs. GAWANKAR & SONS,

Chief Agents for Mysore state, Coorg, Ceded Districts & S. Kanara

AHMED BUILDINGS, CHICKPET, BANGALORE CITY.

Messrs. Farooqui Brothers, *Special Agents,*

Fort House, Karkal, (South Kanara.)

Local Representatives:—THE MODERN TRADING CO., Mangalore.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.

ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ.

ಚಂದ್ರಮರ್ಸ್—ವಾಂತಿಭೇದಿ, ಅತಿಸಾರಕ್ಕೆ.

ಕೃಷ್ಣಾರಿಷ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ಮೃದ್ವೀಕಾಸವ—ನಿಶ್ಶಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಅಸ್ತಮಾನ

ದೃಶ್ಯ

ಬರೆದವರು 'ಲೀಲಾವತಿ'

(ಬರೆದವರು ... ಶಿವ ... ಯಾವ ಅಕಾಲದಲ್ಲಿ ಆಯಿತೆಂದೂ, ಅವನ ಮರಣಕ್ಕೆ ಅವನ ದ್ವಿತೀಯ ಪತ್ನಿ ಸೋಯರಾಬಾಯಿ ಕಾರಣಳೆಂದೂ ಪ್ರತೀತಿಯಿದೆ. ಹಾಲಿನಲ್ಲಿ ವಿಷವನ್ನು ಬೆರಸಿ ಕುಡಿಯಲು ಕೊಟ್ಟಳೆಂದೂ, ಅದೇ ಶಿವಪ್ರಭುವಿನ ಮರಣಕ್ಕೆ ಹೇತುವಾಯಿತೆಂದೂ, ಹಲವರ ಮನಸ್ಸಿನಲ್ಲಿ ಬೇರೂರಿ ನಿಂತಿದೆ. ಈ ಸಂಶಯಾಸ್ಪದ ವಿಷಯವನ್ನು ನಿಜವಾಗಿ ನಡೆದ ವಿಷಯವೆಂದು ಭಾವಿಸಿಕೊಂಡು ಮುಂದೆ ನಡೆದುದನ್ನು ರೂಪಿಸಿದ್ದೇನೆ. ವಿಷವನ್ನು ಪಾನಮಾಡಿ ನರಳುತ್ತಿರುವ ಶಿವಾಜಿಯನ್ನು ದೂರದಿಂದ ನೋಡುತ್ತಿದ್ದ ಅವಳ ಮನಸ್ಸಿನಲ್ಲಿ ಯಾವ ರೀತಿಯ ಭಾವನೆಗಳು ಮೂಡಿರಬಹುದೆಂದೂ, ಯಾವ ರೀತಿಯ ಮಾತುಗಳಿಗೆ ಎಡೆಕೊಟ್ಟಿರಬಹುದೆಂದೂ ನನಗೆ ಹೊಳೆದಂತೆ ಬರೆದಿದ್ದೇನೆ. ಹೀಗೆ ಅವಳು ಮಾತನಾಡಿದಳೆಂದೂ, ಇಂಥಾ ಭಾವನೆಗಳೇ ಅವಳಲ್ಲಿ ಮೊಳೆದುವೆಂದೂ ಸಿದ್ಧಾಂತಪಡಿಸುವ ಧೈರ್ಯವಿಲ್ಲ. ಊಹಿಸಿ ಬರೆದಿದ್ದೇನೆ. ಬೇರೆ ಭಾವಿಸಬಾರದು.) ಸೋಯರಾಬಾಯಿ — ನನ್ನ ಕೋರಿಕೆಯನ್ನು ಹೇಗೆ ಪೂರೈಸಿಕೊಂಡೆ ನೋಡು! ವಿಷ ಮಿಶ್ರಿತ ಹಾಲನ್ನು ಕುಡಿದು ಹೇಗೆ ಹಾಸಿಗೆಯಲ್ಲಿ ಹೊರಳಾಡುತ್ತಿರುವನೆಂಬ! ಅದೋ! ಯಮದೂತನ ಬರವನ್ನು ಕಾದ ದೃಷ್ಟಿಯಿಂದ ನೋಡುತ್ತಿರುವನು!

ಶಾಂತಾಬಾಯಿ—ನಿನ್ನ ಮನಸ್ಸು ಅದೆಷ್ಟು ಕಠಿಣ ತಾಯಿ? ಅವನು ನರಳುತ್ತಿರುವುದನ್ನು ಕಂಡು ಕಲ್ಲು ಕೂಡ ಕರಗೀತು ಅಯ್ಯೋ!

ಸೋಯರ—ನೀನು ನನಗೆ ನೆರವಾಗ ಲೆಂದು, ಎಲ್ಲಿಯಾದರೂ ನನ್ನ ಮನಸ್ಸು ನೊಂದು, ನಾನು ಮಾಡುವುದು ಅನ್ಯಾಯವೆಂದು ತಿಳಿದು, ಅನುಚಿತ ಕಾರ್ಯಗಳಿಗೆ ನಾನು ಇಂಬು ದಂತೆ ನೋಡಿಕೊಳ್ಳಲೆಂದು ನೀನೇ ಹೀಗೆ ಮಾಡಿದರೆ? ನನ್ನನ್ನು ಸಂತೈಸುವುದನ್ನು ಬಿಟ್ಟು ನೀನೇ ಅಧೀರೆಯಾಗಿ ಬಿಟ್ಟರೆ?

ಶಾಂತ—ಗಂಡನನ್ನು, ಅದರಲ್ಲಿಯೂ, ಹಿಂದೂಗಳಿಗೆಲ್ಲ ಚಿರಪ್ರಿಯನಾದ ದೊಡ್ಡ ಛತ್ರಪತಿಯನ್ನು—ಹೆಂಡತಿ ರಾಕ್ಷಸೀ ಕಾಂಕ್ಷೆಯಿಂದ ಸ್ವಹಸ್ತದಿಂದಲೇ ವಿಷ ಬೆರಸಿಟ್ಟ ಹಾಲನ್ನು ಕೊಟ್ಟು ಅವನಿಗೆ ಅಕಾಲ ಮರಣವನ್ನು ತರುವುದೆಂದರೆ ಯಾರ ಹೃದಯ ಅಳ ಕಲಿಕ್ಕಿಲ್ಲ? ಯಾರ ಮನಸ್ಸು ಬೇಯಲಿಕ್ಕಿಲ್ಲ? ಯಾರ ದೇಹದಲ್ಲಿ ವಿದ್ಯುತ್ ಪ್ರವಾಹವಾಗಲಿಕ್ಕಿಲ್ಲ. ನೀನು ಮಾನವಿಯಲ್ಲ ದಾನವಿ

ಸೋಯರ—ಹೌದು ದಾನವಿ ನನ್ನ ಆಶೆಯನ್ನು ಮಗನು ಸಿಂಹಾಸನವನ್ನಲಂಕರಿಸಬೇಕೆಂಬ ಇಚ್ಛೆಯನ್ನು ನೆರವೇರಿಸಿಕೊಳ್ಳಲು ನಾನು ಯಾವುದನ್ನೂ ಮಾಡಿಯೇನು! ಯಾವ ಆಟವನ್ನೂ ಹೂಡಿಯೇನು! ಆ ಕಾಲದಲ್ಲಿ ನನ್ನ ಮನಸ್ಸು, ಕಲ್ಲಿಗಿಂತ ಕಠಿಣ

ಶಾಂತ—ಛತ್ರಪತಿಗಳ ಮರಣಕ್ಕೆ ನೀನು ಕಾರಣೀಭೂತಳೆಂದು ತಿಳಿದುಬಂದರೆ, ನಿನ್ನ ಸ್ವಹಸ್ತದಿಂದಲೇ ಅವರ ನಿರ್ಮೂಲ ಮಾಡಿದರೆ ಅದು ಜಗತ್ತಿಗೆ ಹೊಳೆಯಿತೆಂದಾದರೆ ನೀನು ಜಗತ್ತಿನ ದೃಷ್ಟಿಯಿಂದ ಪಾಪಿಣಿಯಾಗಲಿಕ್ಕಿಲ್ಲವೇ?-ಜನರು ನಿನ್ನನ್ನು ಕಲಿಯುಗದ ಕೈಕೇಯಿ ಎಂದು ನಿಂದಿಸರೇ? ಯುವರಾಜ ಸಾಂಭಾಜೀ ಮಹಾರಾಜರು ಕೋಪದ ಕಿಡಿಗಳನ್ನೇ ನಿನ್ನ ಮೇಲೆ ಉಗುಳಲಿಕ್ಕಿಲ್ಲವೇ?

ಸೋಯರ—ಜನರು ನನ್ನನ್ನು ಜರೆಯಲಿ, ಸಾಂಭಾಜಿ ನನ್ನ ಕುತ್ತಿಗೆಯನ್ನು ಕತ್ತರಿಸಲಿ, ನಾನು ಹೆದರುವುದಿಲ್ಲ. ನನ್ನ ಮಗ ಈ ಸಿಂಹಾಸನವನ್ನಲಂಕರಿಸುವುದನ್ನು ಕಂಡರೆ ತೀರಿತು

ಶಾಂತ—ನಿನ್ನ ಗೌರವವೆಲ್ಲಿ ಉಳಿಯಿತು?

ಸೋಯರ—ಗೌರವಕ್ಕೆ ಬೆಂಕಿ ಹಾಕು. ಅದು ಬರಿಯ ಬಡಿವಾರದ ಮಾತು ಕೈಲಾಗದ ಹೇಡಿಗಳಿಗೆ ಹೇಳಿಸಿದ್ದು. ನನ್ನ ರಾಜಾರಾಮನು ರಾಜನಾದರೆ ತೀರಿತು. ಸಾಂಭಾಜಿ ನನ್ನ ಮಗನ ಕಿಂಕರನಾಗಿ, ಸಿಂಹಾಸನದ ಸೇವೆ ಮಾಡುತ್ತ 'ಜಯ ಎಂದು ಜೀಯ ಎಂದು' ಹೇಳುತ್ತ ತಿರುಗುವುದನ್ನು ಕಂಡರೆ ತೀರಿತು ಇದಕ್ಕೆ ತೊಂದರೆ ಬಂದರೆ ಮೋಹದ ಮಾಯೆಯನ್ನು ಬೀರಿ ಆಶೆಯನ್ನು ಪೂರೈಸಿಕೊಂಡೇನು!

ಶಾಂತ—ಶಿವಪ್ರಭುವಿನ ಹಸ್ತದಿಂದ ನಿನ್ನ ದಾರಿ ಸುರಕ್ಷಿತವಾಯಿತೇ? ಸಾಂಭಾಜಿ ಹಿರಿಯನು. ಅವನು ನಿಜವಾದ ಅಧಿಕಾರಿಯಲ್ಲವೇ? ಅವನಿರುವವರೆಗೆ ರಾಜಾರಾಮನಿಗೆ ಆ ಬಾಧ್ಯತೆ ಬರುವುದು ಹೇಗೆ?

ಸೋಯರ—ಬರುವುದು ಹೇಗೆ? ನನ್ನ ಇಚ್ಛೆಯ ಅರ್ಥವನ್ನು ಇಂದು ತೀರಿಸಿಕೊಂಡೆ ಅದನ್ನು ನೀನು ಮರೆತೆಯಾ? ನನ್ನ ಆಜ್ಞೆಯಂತೆ ವರ್ತಿಸದೆ ಹೋಯಿತು ಅವಜ್ಞೆಗೈದನೆಂದಾದರೆ ಅವನೂ ನಾಳೆ ತನ್ನ ಪಾಲಿನ ಹೇವರನ್ನು ಇದಿರುಗೊಳ್ಳಬೇಕಾದೀತು

ಶಾಂತ—ಅನ್ಯಾಯದಿಂದ ಗಳಿಸಿದ ಈ ಅಧಿಕಾರ ನನಗೆ ಬೇಡವೆಂದು ನುಡಿದರೆ? ಆಗೇನು ಮಾಡುವೆ?

ಅಮ್ಮಾ ನೀನು ಈ ಅಡ್ಡ ದಾರಿಯನ್ನು ಏಕೆ ಹಿಡಿದೆ? ನಿನ್ನ ಮಗನು ರಾಜನಾಗಬೇಕೆಂಬ ಕೃಪೆಯಿಂದ ಮಹಾರಾಜರನ್ನೇಕೆ ಕೊಂದೆ? ಸಾಂಭಾಜಿಯ ರಕ್ತವನ್ನು ಹೀರಲು ಈಗೇಕೆ ಹೀಗೆ ನಾಲಗೆ ಚಾಚಿ ನಿಂತಿರುವೆ? ಮಹಾರಾಜರನ್ನೇ ಒಡಂಬಡಿಸಿ, ನಿನ್ನ ಮಗನನ್ನು ಗದ್ದುಗೇರುವಂತೆ ಮಾಡಬಾರದಿತ್ತೇ? ಅವರು ನಿನ್ನ ಇಚ್ಛೆಯನ್ನು ಮಾನ್ಯಮಾಡುತ್ತಿದ್ದರು'

ಸೋಯರ—ಅದು ಕನಸಿನ ಗಂಟು ಶಾಂತ ಮಹಾರಾಜರೊಡನೆ ಕೇಳಿಕೊಂಡಿದ್ದೇನೆ ಕಲ್ಲು ಕೂಡ ಕರಗುವಂತೆ ಬೇಡಿಕೊಂಡಿದ್ದೇನೆ ಹೆಂಗುಸೊಬ್ಬಳ ಆರ್ತನಾದ ಅವರ ಧೃಢನಿಶ್ಚಯವನ್ನು ಸಡಿಲು ಮಾಡಲಿಲ್ಲ. ಅವರ ನೊಂದು... ಸಾಂಭಾಜಿಯೆಂದರೆ ಅವರ ಜೀವ ನಾನು ವಕ್ತ ರಾಜನೆಂದರೆ ಹಾಗೇ ಹಾಗೇ ನನ್ನ ಆಶೆಯನ್ನು ಅವರು ಮಾನ್ಯಮಾಡಲಿಲ್ಲ ಅದನ್ನು ನಾನು ಹೀಗೆ ತೀರಿಸಿಕೊಂಡೆ

ಶಾಂತ—ತೀರಿಸಿಕೊಂಡೆ ಎಂದು ಹೇಳುವುದು ಹೇಗೆ ಸಾಂಭಾಜಿಯು ಸಾಧಾರಣ ಮೂರ್ತಿಯೇ? ಅಷ್ಟ ಪ್ರಧಾನಿಗಳೇನು ವ್ಯಾಘ್ರಗಳೇ? ರಾಜಾರಾಮನೆಂದರೆ—ನಿನ್ನ ಮಗನೇ ಆಗಿದ್ದರೂ ಆಟದ ಬೊಂಬೆಯೇ?

ಸೋಯರ—ಅಹುದು ಸಾಂಭಾಜಿ ಸಾಧಾರಣ ಮೂರ್ತಿಯಲ್ಲ ಆದರೆ ಈಗ ಕೈಲಾಗದ ಹೇಡಿ ಕಲುಷದ ಬಲೆಯಲ್ಲಿ ಬಿದ್ದು ನರಳುತ್ತಿರುವ ಒಂದು ಹುಳ ಕುಡಿಯುವುದಕ್ಕಿಷ್ಟು ಮದ್ಯ ಮನಸೋಕ್ತ ಸುಖಪಡುವುದಕ್ಕೆಂದು ಅವನ ಮಧ್ಯೆ ಹಲವು ಮಂದಿ ಸ್ತ್ರೀಯರನ್ನು ಬಿಟ್ಟರಾಯಿತು ಅದನ್ನೇ ರಾಜವೈಭವವೆಂದು ತಿಳಿದುಕೊಂಡಾನು ಇನ್ನು ಪ್ರಧಾನರು ಅವರದೇನು ಗಹನದ ಮಾತು? ಭಂಡಾರದಲ್ಲಿ ಹಣವಿದೆ ನನ್ನಲ್ಲಿ ರೂಪವಿದೆ ಯೌವ್ವನದ ಮೇರೆಯನ್ನು ಇನ್ನೂ ನಾನು ದಾಟಿಹೋಗಿಲ್ಲ ಈ ಬಲೆಯನ್ನು ಬೀಸಿಯೇ ನಾನು ಮಹಾರಾಣಿಯಾದೇನು! ಮರಾಟೆಯವರನ್ನು ಉದ್ಧರಿಸಲು ಬಂದ ಮಹಾ ಮಾಯೆಯಾದೇನು? ನನ್ನ ಮಗನು ನನ್ನ ಆಜ್ಞೆಯನ್ನು ಅವಜ್ಞೆಗೈಯ್ಯಲಾರನು. ನಡೆದರೆ ತಿಳಿದೇ ಇದೆಯಲ್ಲ.

ಶಾಂತ—ಹಾಗೆ ನುಡಿಯಬಾರದು. ಅಂಥಾ ವಿಚಾರಗಳಿಗೆ ನೀವು ಇಂಬುಗೊಡಬಾರದು. ಎಷ್ಟೆಂದರೂ ಒಂಬತ್ತು ತಿಂಗಳು ಹೊತ್ತು ಹೆತ್ತು, ಸಾಕಿ ಸಲಹಿದ ನಿನ್ನ ಪ್ರತಿಬಿಂಬವಲ್ಲವೇ?

ಸೋಯರ—ನಿನ್ನ ಧರ್ಮಬೋಧನೆ ನನಗೆ ಬೇಡ. ಕೇಳಿ ಸಾಕಾಗಿದೆ.

ಶಾಂತ—ಅಯ್ಯೋ! ಅಯ್ಯೋ!

ಸೋಯರ—ಏನು? ಏನು? ಶಾಂತಾ?

ಶಾಂತ—ಸೂರ್ಯನು ಮುಳುಗಿದನು

ಸೋಯರ—ಕತ್ತಲೆಯಾಗಿಲ್ಲ, ಹೊತ್ತಿದೆ ಸೂರ್ಯನು ಮುಳುಗಿದೆ ಎಂದೆಯಲ್ಲ. ಹುಚ್ಚು ಗಿಚ್ಚು ಕಗಲಿಕೊಂಡಿತೇನು ನಿನಗೆ?

ಶಾಂತ—ನೋಡು! ನಿಜವಾಗಿಯೂ ಮುಳುಗಿದನು ಕಣ್ಣುಗಳನ್ನು ಬಿಡಿಸಿ ನೋಡು!

ಸೋಯರ—ಏ ಭ್ರಾಂತೇ!

ಶಾಂತ—ಮರಾಟರ ಸೂರ್ಯನು ಅಸ್ತಂಗತನಾದನು ನೋಡಬಾರದೇ ಮಲಗಿರುವುದನ್ನು ಇನ್ನು ಏಳಲಾರೆ, ನೀಚರ ಮುಖಾವಲೋಕನವನ್ನು ಮಾಡಲಾರೆ ಎಂದು ದೀರ್ಘ ನಿದ್ರಾಸಕ್ತನಾದುದನ್ನು! ಮುಖ ಕಪ್ಪಿಟ್ಟಿದೆ ಅಂಗಾಂಗಗಳು ಮರಗಟ್ಟಿವೆ ಅಯ್ಯೋ! ನನ್ನ ಕಣ್ಣುಗಳು ಈ ದೃಶ್ಯವನ್ನು ನೋಡುವುದಕ್ಕೆ ಮುಂಚೆಯೇ ಕುರುಡಾಗಿ ಬಿಡುತ್ತಿದ್ದರೆ

ಸೋಯರ—ನೀನು ಇಂಥಾ ಹೇಡಿಯೆಂದು ನಾನು ಭಾವಿಸಿರಲಿಲ್ಲ ರಣರಂಗಕ್ಕೆ ಇಳಿದ ಮೇಲೆ ನೋಡಬಾರದುದು ಎಂಬುದಿಲ್ಲ ಅಧೈರ್ಯಪಟ್ಟರೆ ಪ್ರಯೋಜನವಿಲ್ಲ

ಶಾಂತ—ಆದರೆ ಈ ದೃಶ್ಯವನ್ನು ಕಂಡರೆ ಮೈಯಲ್ಲಿ ನಡುಕ ಹುಟ್ಟುತ್ತಿರುವುದ ರಕ್ತ ಹೆಪ್ಪುಗಟ್ಟುತ್ತಿರುವುದು ಹೆಂಡತಿಯಿಂದ ಗಂಡನ ಮರಣ—ಅಯ್ಯೋ ನೆನಸುವುದಕ್ಕೇ ಸಾಧ್ಯವಿಲ್ಲ ಅವನೊಡನೆ ಸಂತೋಷದಿಂದ ಕೂಡಿ ಕಳೆದ ದಿನಗಳೊಂದಾದರೂ ನೆನಪಿಗೆ ಬರುವುದಿಲ್ಲವೇ? ರಾಜಾರಾಮನಿಗೆ ಜನ್ಮವಿತ್ತು, ತಿಂಗಳೆರಡು ಹಾಸುಗೆ ಹಿಡಿದು ಮಲಗಿದಾಗ ನಿನ್ನ ಹತ್ತಿರಕ್ಕೆ ದಿನಾಲೂ ಬಂದು, ನಿನ್ನ ಮೈಮೇಲೆ ಕೈಯಾಡಿ, ಕೆದರಿದ ನಿನ್ನ ಕಚಂಗಳನ್ನು ಉಗುರುಗಳಿಂದ ಸರಿಪಡಿಸುತ್ತ 'ದೇವರು ಕೈಬಿಡಲಿಕ್ಕಿಲ್ಲ ಅಂಬಾಭವಾನಿಯ ಕೃಪೆ ಇದ್ದೇ ಇದೆ ನಿನಗೆ ಗುಣವಾದೀತು ಎಂದು ನುಡಿದ ಸಮಾಧಾನಪಡಿಸುತ್ತಿದ್ದ ಆ ದಿನಗಳಾದರೂ ನಿನ್ನ ಮನಸ್ಸಿಗೆ ಹೊಳೆಯುವುದಿಲ್ಲವೇ?

ಸೋಯರ—ನಾನು ಮಹಾರಾಣಿ' ನನಗೆ ನಿನ್ನ ಉಪದೇಶ ನಾಲಿಗೆಯನ್ನು ಬಿಗಿಹಿಡಿ!

ಶಾಂತ—ಇನ್ನು ಹಾಗೆ ಹೇಳುವುದಿಲ್ಲ

ಸೋಯರ—ನನ್ನ ಮನದಲ್ಲೇನಾದರೂ ವ್ಯತ್ಯಾಸವಾಗಿದೆಯೇ?

ಶಾಂತ—ಎಂದಿನಂತೆ ಚಂದವಾಗಿಯೇ ಇದೆ

ಸೋಯರ—ಈ ಕಣ್ಣುಗಳೋ?

ಶಾಂತ—ತುಸ ಕೆಂಪಾಗಿವೆ

ಸೋಯರ—ಮನಸ್ಸು ಬಹಳ ನೋಯುತ್ತಿದೆ. ಸಂತೋಷಪಡಿಸಲು ಸ್ವಲ್ಪ ಹಾಡು ನೋಡೋಣ

ಶಾಂತ—ಏನನ್ನು ಹಾಡಲಿ?

ಸೋಯರ—ಏನನ್ನಾದರೂ ಮರಾಟೀ ಹಾಡಾದೀತು ಬೇಡ ಅದ ಬೇಡ ಕೇಳಿದರೆ ಮೈಯಲ್ಲಿ ನಡುಕ ಹುಟ್ಟುತ್ತದೆ

ಶಾಂತ—ಒಂದಿಷ್ಟು ಹಾಲು ಕುಡಿದರೆ ಶಾಂತವಾದೀತು

ಸೋಯರ—ಹಾಲು! ಏನು ಹೇಳಿದೆ ಶಾಂತಾ?

ಶಾಂತ—ಹಾಲು! ಅಮ್ಮಾ! ಅಮ್ಮಾಜೀ!

ಸೋಯರ—ಹೂಂ! ಅದರ ಸುದ್ದಿ ಎತ್ತಬೇಡ ನನಗೆ ಬಹಳ ಹಸಿವೆ ಶಾಂತಾ! ತಿಂದಿಯೇನನ್ನಾದರೂ ತಾ ನೋಡೋಣ. ಇದು ನಮ್ಮ ಸೂತ್ರವೆಂದು ಬೇರೆಯವರಿಗೆ ತಿಳಿದಿಲ್ಲ. ಯಾರಾದರೂ ಅವರ ಮರಣವಾರ್ತೆಯನ್ನು ತಿಳುಹಿದರೆ, ನನಗರುಹಲೆಂದು ಅಳುತ್ತಳುತ್ತ, ಹೇಗೆ ಬಾಯಿ ಬಿಡಲಿ ಎಂದು ನುಡಿಯುತ್ತ ಓಡಿಬಾ ತಿಳಿಯಿತೇ? ಸುದ್ದಿ ಹೇಳಿದ ಕೂಡಲೇ ನಾನು ಭೂಮಿಗೆರಗುತ್ತೇನೆ. ನೀನು 'ನೀರು! ನೀರು! ಸಹಾಯ! ಸಹಾಯ!' ಎಂದು ಕೂಗಿ ಬಿಡು. ನಮ್ಮೀ ವರ್ತನೆಯನು ಕಂಡು ನಮ್ಮ ಮೇಲೆ ಬರಬಹುದಾದ ದೂರು ದೂರವಾದೀತು ತಿಳಿಯಿತೇನು!

ಶಾಂತ—ಆಯಿತು! ಅಮ್ಮಾಜೀ! (ಹೋಗುವಳು ಮತ್ತೊಬ್ಬಳು ದಾದಿ ಬರುವಳು)

ದಾದಿ—ಅಮ್ಮಾಜೀ!

ಸೋಯರ—ಏನು?

ದಾದಿ—ಅಮ್ಮಾಜೀ! ಅಮ್ಮಾಜೀ!

ಸೋಯರ—ಏನಾಯಿತು? ಹೇಳಬಾರದೇ?

ದಾದಿ—ಯಾವ ಬಾಯಿಯಿಂದ ಹೇಳಲಿ

ಸೋಯರ—ಬೇಗ ಹೇಳು! ಏನು ಅನರ್ಥ ಒದಗಿತು!

ದಾದಿ—ಏನು ಹೇಳಲಿ, ಮಹಾರಾಜರು ನಮ್ಮನ್ನೆಲ್ಲರನ್ನು ತೊರೆದು ಅತ್ತ ಕಡೆಗೆ ಹೋದರು ಅಯ್ಯೋ! ಅಯ್ಯೋ!

ಸೋಯರ—ಏನು? ಏನಾಯಿತು? ಹೋದರು. ಹೋದರು (ಬೀಳುವಳು)

Canara Bank Ltd,
City Mangalore.
ಕೆನರಾ ಬೇಂಕ್ ಲಿಮಿಟೆಡ್
ಸಿಟಿ ಮಂಗಳೂರು.

NOTICE

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನು ಅಗಲೀ ಬಡ್ಡಿಯನ್ನಾಗಲೀ ಪ್ಯಾದೆಗೆ ಕೊಡದೆ ಇರುವಲ್ಲಿ ಅವರಿಗೆ ಆ ಬಗ್ಗೆ ಬಿಟ್ಟ ರಿಜಿಸ್ಟ್ರಿ ನೋಟಿಸುಗಳು ಅನಂತರ ಹಿಂತಿರುಗಿ ಬಂದಿರುತ್ತವಾಗಿ, ವಾಪಾಸ ಬಂದಿರುವದರಿಂದ ಸದರೀ ಸಾಲಗಾರರ ಕ್ವಾದೆ ತೀರವಾರಿಸ್ತಾರೆ. ಈ ಬಗೆಯಲ್ಲಿ ... ತಕ್ಕ ಅಸಲು ಬಡ್ಡಿ ಹಣಗಳನ್ನು ಇದೇ ತಾರೀಖು 14 9–1937ನೇ ಮಂಗಳವಾರ ದಿವಸ ಬೇಂಕಿಗೆ ಪಾವತಿ ಮಾಡಿ ಅಡವಿಟ್ಟ ಆಭರಣಗಳನ್ನು ಬಿಡಿಸಿಕೊಂಡು ಹೋಗ ... ತಪ್ಪಿದಲ್ಲಿ ಅವುಗಳನ್ನು ಅದೇ ದಿನ ಮಧ್ಯಾಹ್ನ 2 ... ಆಗಲಿ ... ಇತರ ದಿನ ... ತಿರಿಗಿ ನೋಟೀಸು ಕೊಡದೇನೇ ... ಡೋಂಗರಕೇರಿ ಆಫೀಸಿನಲ್ಲಿ ... ಏಲಂ ಮಾಡಲಾಗುವದಾಗಿ ಈ ಮೂಲಕ ... ಪಡಿಸಲಾಗಿದೆ

ಲೋನ್ ನಂಬ್ರ 1 547 37 ... ಹೆಸರು ಮತ್ತು ... ಬಂದರ ... ಇದ್ದಬ್ಬ ... ಸಾಲದ ಮೊಬಲಗು ರೂ 75— ... ಬಡ್ಡಿ ವಗೈರೆ ರೂ. 4 5 0 ... ಈ ನೋಟೀಸಿನ ಖರ್ಚು ...

Office of the Bank City Mangalore 31–8–1937 } J D Mukund Kini Agent

---

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪೀರಿಯರ ಟೆಂಟ್ಸಿನ ಕಳೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚಂಟ್,
ಬಡಗುಪೇಟೆ, ಉಡುಪಿ

'ಬೇರೆ ಬೇರೆ ಶೋಧಗಳನ್ನು ಮಾಡುತ್ತಿದ್ದರೆ ನೀವೂ ಒಂದು ದಿನ ಪ್ರಸಿದ್ಧ ವಿಜ್ಞಾನಿಗಳಾಗಬಹುದು' ಎಂದು ಎಲಿಯಲ್ಲಿ ಜೀವಾಣುಗಳ ಪಾಠ ಮಾಡುತ್ತ ಸ್ವಶಾಸ್ತ್ರದ ಉಪಾಧ್ಯಾಯರು ಹೇಳಿದರು.

ಮರುದಿನ ಒಬ್ಬ ಹುಡುಗನು ಬಂದು ನಾನು ಒಂದು ಹೊಸ ಶೋಧ ಮಾಡಿರುವೆನೆಂದನು.

'ಏನು?'

'ಪಕ್ರೋಡೆ ಎಲೆ (ಕೆಸು) ಯನ್ನು ಹಸಿ ತಿಂದರೆ ಬಾಯಿ ತುರಿಸುತ್ತದೆ.

'ಹೌದು, ಏನಾಯಿತು?'

'ಇತರ ಎಲೆಗಳಲ್ಲಿರುವುದಕ್ಕಿಂತ ಪತ್ರೋಡೆ ಎಲೆಯಲ್ಲಿ ಜೀವಾಣುಗಳು ತುಂಬ ಇರುತ್ತವೆ. ಆದ್ದರಿಂದ ಪತ್ರೋಡೆ ಎಲೆ ಹಸಿ ತಿಂದರೆ ಬಾಯಿ ತುರಿಸುತ್ತದೆ.'

'ಇತರ ಎಲೆಗಳು ಯಾಕೆ ಬಾಯಿ ತುರಿಸುವುದಿಲ್ಲ?'

'ಅವುಗಳಲ್ಲಿ ಜೀವಾಣುಗಳು ಕಡಿಮೆ ಎಂದೆನಲ್ಲ?'

'ಬೇಯಿಸಿದ ಪತ್ರೋಡೆ ಯಾಕೆ ಬಾಯಿ ತುರಿಸುವುದಿಲ್ಲ?'

'ಬೇಯಿಸಿದಾಗಲೂ ಸುಟ್ಟಾಗಲೂ ಜೀವಾಣುಗಳು ನಾಶವಾಗುತ್ತವೆ ಎಂದು ನಿನ್ನೆ ನೀವೇ ಹೇಳಿದ್ದೀರಿ ಆದ್ದರಿಂದ ಬೇಯಿಸಿದ ಪತ್ರೋಡೆ ಬಾಯಿ ತುರಿಸುವುದಿಲ್ಲ''

'ಶಾಬ್ಬಾಸ್ ಹುಡುಗ, ನಿನ್ನ ಕಲ್ಪನಾಶಕ್ತಿಗೆ ತಲೆದೂಗಿದೆ'' ಎಂದು ಹೇಳಿ ಉಪಾಧ್ಯಾಯರು ಅವನ ಬೆನ್ನು ತಟ್ಟಿದರು

०　०　०　०　०

ಶಿಕ್ಷಿತರು ತಲೆ ಇಲ್ಲದವರು

'ಈಗಿನ ಶಿಕ್ಷಿತರಿಗೆ ತಲೆ ಇಲ್ಲ'' ಎಂದೊಬ್ಬರು ಹೇಳಿದರು ಶಿಕ್ಷಿತರೊಳಗೆ ನಾನೂ ಕೂಡಿದ್ದೇನಲ್ಲ, ಅದಕ್ಕೋಸ್ಕರ ನಾನವರನ್ನು ಪ್ರತಿಭಟಿಸಿದೆ 'ಏನಯ್ಯಾ ಹೀಗೆ ಖಂಡಾಬಟ್ಟೆ ಮಾತನಾಡುತ್ತೀರಿ?' ಎಂದು ಸ್ವಲ್ಪ ಜೋರಾಗಿಯೇ ಕೇಳಿದೆ

ನನ್ನ ಜೋರಿಗೆ ಅವರು ಕೆದರಲಿಲ್ಲ ಬೆದರಲಿಲ್ಲ 'ಹೌದು, ನಾನು ಖಂಡಾಬಟ್ಟೆ ಮಾತನಾಡುತ್ತೇನೆ, ಯಾಕೆಂದರೆ ನಾನೂ ಒಬ್ಬ ಶಿಕ್ಷಿತನಿದ್ದೇನೆ' ಎಂದರವರು

ನನಗೆ ನಗು ಬಂದಿತು 'ನಾವಿಬ್ಬರು ಶಿಕ್ಷಿತರು, ಇಬ್ಬರೂ ತಲೆ ಇಲ್ಲದವರು—ಇರಲಿ, ಈ ಪ್ರಸ್ತಾವ ಯಾಕೆ ಬಂತೆಂದು ಹೇಳಿ' ಎಂದು ಅವರನ್ನು ಕೇಳಿದೆ

'ನೋಡಿ, ನಿಮ್ಮ ವಿದ್ಯಾ ಇಲಾಖೆಯ ಡೈರೆಕ್ಟರರು ಎಂದು ಒಬ್ಬರು ಇದ್ದಾರಂತಲ್ಲ''

'ಹೌದು'

'ಅವರು ಆ ದಿನ ಹಾಗೇಕೆ ಮಾತನಾಡಿದರಯ್ಯಾ?'

'ಏನೆಂದು?'

''ಎಲ್ಲರನ್ನು ಬಿಡಿ, ಮ್ಹಾಳಪ್ಪನನ್ನು ಹಿಡಿ' ಎಂದ ಹಾಗೆ ಅವರಿವರು ಮಾಡಿದ ತಪ್ಪುಗಳಿಗೆ ಕೇವಲ ಉಪಾಧ್ಯಾಯರನ್ನೇ ಗುರಿಮಾಡಿ, ಉಪಾಧ್ಯಾಯರಿಂದಾಗಿಯೇ ಶಿಕ್ಷಣದ ಪ್ರಚಾರ ಪ್ರಸಾರ ಆಗಲಿಲ್ಲ ಎಂದರಲ್ಲ, ಏನನ್ನಬೇಕು ಇದಕ್ಕೆ?'

'ಹೌದು, ಅವರು ಹೇಳುವ ಕಾಲ, ನಾವು ಕೇಳುವ ಕಾಲ' ಬೇರೊಂದು ದೇಶದಲ್ಲಾಗಿದ್ದರೆ ಅಂಥ ಬೇಜವಾಬುದಾರಿಯಿಂದ ಮಾತನಾಡುವ ಅಧಿಕಾರಿಗಳನ್ನು ಹಿಂದಕ್ಕೆ ಕರೆಸಬೇಕೆಂದು ದೊಡ್ಡ ಆಂದೋಲನವೇ ನಡೆಯುತ್ತಿತ್ತು

'ಅವರು ಹೀಗೆ ಮಾತನಾಡಲಿಕ್ಕೆ ಏನು ಕಾರಣ ಗೊತ್ತೆ?'

'ಇಲ್ಲ, ನೀವೇ ಹೇಳಿಬಿಡಿ.'

'ಶಿಕ್ಷಣ ಖಾತೆಗೆ ದೊರೆಯುವ ದುಡ್ಡು ಕುಡುಕರಿಂದ ಬರುವಂಥಾದ್ದು. ಕುಡುಕರಿಂದ ಎಷ್ಟು ದುಡ್ಡು ಲಾಭವಾಗುತ್ತದೊ, ಅಷ್ಟನ್ನು ಕೊಂಚ ಕಡಿಮೆಯಾಗಿಯೇ, ಸರಕಾರವು ಶಿಕ್ಷಣಖಾತೆಗೆ ಉಪಯೋಗಿಸುತ್ತದೆ, ಕುಡುಕರಿಂದ ಬಂದ ಹಣದ ಪ್ರಭಾವವದು! ಕುಡುಕರಿಗೂ ಶಿಕ್ಷಿತರಿಗೂ ನಂಟು—ಗಂಟು! ಕುಡುಕರಿಂದ ಬಂದ ಹಣ ತಿಂದುದರ ಫಲವಾಗಿ ಸ್ವಲ್ಪವಾದರೂ ಅವರ ಬುದ್ಧಿ ಶಿಕ್ಷಿತರಿಗೆ ಬಾರದಿರಬಹುದೆ? ಆದ್ದರಿಂದ ಅವರು ಹಾಗೆ ಮಾತನಾಡಿದರು; ಆದ್ದರಿಂದ ನಾನು ಪುನಃ ಹೇಳುತ್ತೇನೆ-ಶಿಕ್ಷಿತರಿಗೆ ಒಬ್ಬರಿಗೂ ತಲೆ ಇಲ್ಲ''

ನಾನು ಹೌದೆನ್ನಲೂ ಇಲ್ಲ, ಅಲ್ಲವೆನ್ನಲೂ ಇಲ್ಲ. ಯಾವುದು ಹೇಳಿದರೂ ಕೆಟ್ಟೆನೆಂದು ನನಗೆ ಚೆನ್ನಾಗಿ ಗೊತ್ತಿತ್ತು

०　०　०　०　०

ಪತಿಪತ್ನಿ ಸಂಗ್ರಾಮ

ನಾನು ನನ್ನ ಮಿತ್ರನ ಮನೆಗೆ ಹೋಗಿದ್ದಾಗ, ಅವನು ಕೆಂಪು ಕೆಂಪು ಕಣ್ಣು ಮಾಡಿ ಹೊರಗೆ ಇರುತಿದ್ದ. ನಾನು ಕೇಳಿದೆ–ಮಿತ್ರಾ! ಏನು ವಿಶೇಷ?'

ನನ್ನಾಕೆ ಬಂದು ಹೇಳಿದಳು—ನಮ್ಮ ರಾಧೆ ಈಗ ತವರುಮನೆಯಲ್ಲೇ ಇದ್ದಾಳೆಂದು '

'ಯಾಕಂತೆ?'

'ಅವಳಿಗೂ ಅವಳ ಗಂಡನಿಗೂ ಜಗಳವಾಯಿತಂತೆ '

'ಯಾಕಾಗಿ?'

'ಗಂಡ ಹೇಳಿದನಂತೆ—ನಾನು ನಿನ್ನನ್ನು ಹೆಚ್ಚು ಪ್ರೀತಿಸುತ್ತೇನೆ—ಎಂದು, ಅವಳು ಹೇಳಿದಳಂತೆ-ಅಲ್ಲ, ನಾನೇ ನಿಮ್ಮನ್ನು ಹೆಚ್ಚಿಗೆ ಪ್ರೀತಿಸುವುದು-ಎಂದು

'ಮತ್ತೆ?'

'ಅದೇ ಮಾತಿನ ಮೇಲೆ ಇಬ್ಬರಿಗೂ ಜಗಳವಾಗಿ ಅವಳು ಈಗ ತವರುಮನೆಯಲ್ಲಿದ್ದಾಳಂತೆ.'

'ಅದಕ್ಕಾಗಿ ನೀವೇಕೆ ಕಣ್ಣು ಕೆಂಪು ಮಾಡಿದಿರಿ?'

'ನಾನು ನನ್ನಾಕೆಗೆ ಹೇಳಿದೆ-ನೀನು ಹೇಳುವುದು ಸುಳ್ಳು ಎಂದು

'ಆಗ?'

'ಆಗ ಅಕೆ—ನಾನು ನಿಮ್ಮನ್ನು ಪ್ರೀತಿಸುವದಿಲ್ಲವೆ? ನಿಮ್ಮೊಡನೆಯೂ ಸುಳ್ಳು ಹೇಳುತ್ತೇನೆಯೇ?' ಎಂದಳು

'ನೀವೇನು ಹೇಳಿದಿರಿ?'

'ಸುಳ್ಳು, ನಾನು ನಿನ್ನನ್ನು ಪ್ರೀತಿಸುವದಿಲ್ಲವೆ? ನಾನು ನಿನ್ನೊಡನೆ ಸುಳ್ಳು ಹೇಳುತ್ತೇನೆಯೆ?–ಎಂದು ಹೇಳಿದ

'ಸರಿ! ಆ ಮೇಲೆ''

'ಮಾತಿಗೆ ಮಾತು ಬಂದು ನಾನವಳ ಕೆನ್ನೆಗೆ ಎರಡು ಏರಿಸಿಬಿಟ್ಟೆ ರಾಧೆಯಂತೆ ಅವಳೂ ಈಗ ತವರುಮನೆಗೆ ಹೋಗಲಿಕ್ಕೆ ಹೊಂಟಿದ್ದಾಳೆ

'ಹೂಂ'

'ನನಗೆ ಸಿಟ್ಟು ಬಂದಿತು ಇನ್ನೆರಡು ಏರಿಸಿಬಿಟ್ಟೆ ಈಗ ಮೂಲೆಯಲ್ಲಿ ಕೂತು ಅಳುತಿದ್ದಾಳೆ

ನನಗೆ ನಗು ಬಂದಿತು ಗಂಡಹೆಂಡಿರು ಹೇಗೆ ಮಾತನಾಡಿಕೊಳ್ಳಬೇಕೆಂದು ಇವರು ತಿಳಿದುದು ಹೀಗೆ, ಇವರ ಜೀವನ ಹೇಗೋ ಈ ಮುಂದೆ ತಿಳಿಯದು. ಪತಿಪತ್ನಿಯರ ಪ್ರೇಮ ಸಂಗ್ರಾಮಕ್ಕೆ ಇಂಥ ಮಾತ್ರ ಕಾರಣವೂ ಸಾಕು! ಇಂಥ ದಂಪತಿಗಳು. . . . . ಪಾಪ!

ರಾಗಿ ಬೀಸುವುದು ತಪ್ಪೀತೆ?

ಒಂದು ಊರಲ್ಲಿ ಒಬ್ಬ ಅರಸನಿದ್ದನಂತೆ. ಅವನು ಬಹಳ ಕೆಟ್ಟವನಾಗಿದ್ದನಂತೆ. ಯುದ್ಧದಲ್ಲಿ ಅವನು ಸತ್ತು ಇನ್ನೊಬ್ಬ ಅರಸನು ಬಂದನಂತೆ. ನಮಗಿನ್ನು ಸ್ವರ್ಗವೇ ಸಿಕ್ಕಿದಂತಾಯಿತೆಂದು ಪ್ರಜಾವರ್ಗವು ಸಂತೋಷಸಾಗರದಲ್ಲಿ ತೇಲಿತಂತೆ ರಾಗಿ ಬೀಸಿ ಬಡತನದಿಂದ ಜೀವನ ಮಾಡುತ್ತಿದ್ದ ಒಬ್ಬಾಕೆಯ ಮಗ ಬಂದು ಈ ವರ್ತಮಾನವನ್ನು ತನ್ನ ತಾಯಿಗೆ ಹೇಳಿದನಂತೆ. ಆಗ ಅವಳು ಹೇಳಿದಳಂತೆ—ಮಗೂ! ಯಾರು ಹೋದರೇನು? ಯಾರು ಬಂದರೇನು? ನನಗೆ ರಾಗಿ ಬೀಸುವುದು ತಪ್ಪೀತೆ?– ಎಂದು.

ಹಾಗೆಯೇ ಈಗ ಜಸ್ಟೀಸ್ ಪಕ್ಷ ಹೋದ ಮೇಲೆ ಇಂಟೆರಿಮ್ ಪಕ್ಷ ಬಂತು ಅದೂ ಹೋದ ಮೇಲೆ ಕಾಂಗ್ರೆಸ್ ಪಕ್ಷ ಬಂತು. ಯಾರು ಬಂದರೇನು? ನಾವು ರಾಗಿ ಬೀಸುವುದು ತಪ್ಪೀತೆ? ಎಂದು ಪ್ರಾಥಮಿಕ ಶಾಲೆಗಳ ಬಡ ಉಪಾಧ್ಯಾಯರು ಕೇಳುತ್ತಾರೆ. ನಾನು ಹೇಗೆ ಹೇಳಬಹುದು? ಪರಿಣಾಮದಿಂದ ನೋಡಬೇಕು ಆದ್ದರಿಂದ ಈ ಬಡ ಉಪಾಧ್ಯಾಯರಿಗೆ ಈಗ ಇಷ್ಟೆ ಹೇಳುತ್ತೇನೆ–ಉಪಾಧ್ಯಾಯರೆ ಅವಸರ ಕೆಟ್ಟದು ಸ್ವಲ್ಪ ತಾಳಿಕೊಳ್ಳಿ, ಕಾಲವೇ ನಿಮ್ಮ ಪ್ರಶ್ನೆಗೆ ಉತ್ತರ ಕೊಡುವುದು, ಉತಾವಳಿ ಬೇಡ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘ ಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ದುರ್ಬಲತೆ, ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತಾಗಿ ಯಾವ ಸ್ಥಿತಿಯಲ್ಲಿ ಇರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ರೋಗವನ್ನು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3–0–0 (ಮೂರು) ವಿ ಪಿ ಚಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N JASANI,** Vithalbhai Patel Road, BOMBAY 4

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂದಾಪುರ ದ ಕ

ಬ್ರೇಂಚ್ ಆಫೀಸುಗಳು
ಕುಂದಾಪುರ,
ಕುಮಟಾ,
ಕೋಟೇಶ್ವರ,
ಬೈಂದೂರು,
ಗೋಕರ್ಣ,
ವೀರರಾಜೇಂದ್ರಪೇಟೆ,
ಸೋಮವಾರ ಪೇಟೆ,
ಶಿವಮೊಗ್ಗಾ,
ತರಿಕೆರೆ.

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ತೆರೆಯಲ್ಪಡುವುವು.

ಶಿವಮೊಗ್ಗಾ ತಾ 26–8–1937.
ತರಿಕೆರೆ ,, 30–8–1937.

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡಿಸಲ್ಪಡುವುವು.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಮ್ಮದೇ ಆಗಿರುವ ಅದರ್ಶಪ್ರಾಯವಾದ ಈ ಬೇಂಕಿನಲ್ಲಿಯೇ ನಿಮ್ಮ ವ್ಯವಹಾರಗಳನ್ನು ನಡಿಸಬೇಕಾಗಿ ಕೋರುತ್ತೇವೆ.

'Laxmi-Nivas' Buildings,
Coondapoor, 8–1–1937.

The Agricultural & Industrial Bank, Ltd

ಶಿಕ್ಷಣವೆಂದರೇನು?

ವಿಚಾರಶೀಲ ಹಿಂದೂದೇಶದ ಬಗ್ಗೆ ಯಾವ ತರದ ಅತ್ಯಂತ ಫಲಕಾರಿ ವ್ಯವಸ್ಥೆಯಿರಬೇಕು?

... ಕೈವೃತ್ತಿಗಳ ಮೂಲಕ ಶಿಕ್ಷಣ ನಡೆಯಬೇಕೆಂದು ತಾನು ಈ ಮೊದಲು ಸೂಚಿಸಿದ್ದೆನು. ಕೈವೃತ್ತಿಗಳು ಅವರಿಗೆ ಬೋಧಿಸಲ್ಪಡಬೇಕು. ಅದರಲ್ಲಿ ಶಿಕ್ಷಣವಿರುವುದು. ನಾನು ಯೋಚಿಸಲ್ಪಟ್ಟ ಸ್ಕೀಮಿನ ಪ್ರಕಾರ ಅಕ್ಷರಗಳಲ್ಲಿಯು ಶಬ್ದಗಳನ್ನು ಚಿತ್ರಿಸುವ ಕೈಯೂ ಉಪಕರಣಗಳನ್ನು ಉಪಯೋಗಿಸುವುದು ಕಣ್ಣಿನಿಂದ ಜೀವನ ವಿಷಯಗಳ ಗೋಚರವಾಗುವುದು ಕಿವಿಯು ಶಬ್ದಗಳನ್ನು ಮತ್ತು ವಿಷಯಗಳ ಅರ್ಥವನ್ನು ಲಾಲಿಸುವುದು. ಈ ರೀತಿ ತರಬೇತು, ಸಂಪೂರ್ಣವಾಗಿ ಸೈಸರ್ಗಿಕ ರೀತಿಯದಾಗಿದ್ದು, ಅತ್ಯಂತ ಫಲದಾಯಕವೂ, ಕಡಿಮೆ ವ್ಯಯದ್ದೂ ಆಗಿರುವುದು ನನ್ನ ಶಾಲೆಯ ಮಕ್ಕಳು ಬರೆಯುವ ಮೊದಲೇ ಅತ್ಯಂತ ತ್ವರೆಯಲ್ಲಿ ಓದಲು ಅರಿಯುವರು. ಆಗ ಮಕ್ಕಳು, ಈಗಲೂ ನಾನು ಬರೆಯುತ್ತಿರುವ ರೀತಿ ಹೇಗೆ ತರದ ಅಕ್ಷರಗಳನ್ನು ಬರೆಯಲಾರರು. ನನ್ನ ಯೋಜನೆ ಮೇರೆಗೆ ಶಾಲೆಗಳು ರೂಢಿಗೆ ಬಂದರೆ, ಅವುಗಳು ಓದುವಿಕೆ ಮತ್ತು ಬರೆಯುವಿಕೆಯಲ್ಲಿ ಅತ್ಯಂತ ಪ್ರಗತಿಪರ ಶಾಲೆಗಳೊಡನೆ ಪ್ರತಿಸ್ಪರ್ಧಿಸಬಹುದು ಎಂಬುದಾಗಿ ಮಹಾತ್ಮಾಜಿಯವರು ಶಿಕ್ಷಣದ ಕುರಿತು ಅನೇಕ ಅಭಿಪ್ರಾಯಗಳು ಅವರಿಗೆ ಬಂದಿರಲು, ಅವುಗಳಿಗೆ ತಾತ್ಕಾಲಿಕ ಉತ್ತರವಾಗಿ ಹೇಳಿನದನ್ನ ತಮ್ಮ ಕಳೆದ ವಾರದ ಹರಿಜನ ಪತ್ರಿಕೆಯಲ್ಲಿ ಬರೆದಿರುವರು

ಮಹತ್ಕಾರ್ಯ

ಸಂಪೂರ್ಣ ಮದ್ಯ ನಿಷೇಧಗಳನ್ನು ಇನ್ನು ಮೂರು ವರ್ಷಗಳಲ್ಲಿ ಸಾಧಿಸಿಬಿಟ್ಟರೆ, ಪ್ರಾಂತ್ಯಗಳಲ್ಲಿಯ ವಿಂಲಿಟರಸಿ ಅಗತ್ಯವಿರುವುದಿಲ್ಲವೆಂದು ಜಗತ್ತಿಗೆ ವ್ಯಕ್ತಪಡಿಸಿದರೆ, ಇದರಿಂದ ನಾವು ಹಿಂದೂದೇಶಕ್ಕೆ ಮಹಾ ಪ್ರಶಸ್ತಿಯನ್ನು ತಂದಂತಾಗುವುದು ಯಾವತ್ತು ಜನಾಂಗವು ಗಳಿಸಿದ ಕೀರ್ತಿಯನ್ನು ಅದು ಪಡೆಯುವುದು. ಪ್ರತಿಯೊಬ್ಬನನ್ನು ವಿಚಾರಶೀಲನನ್ನಾಗಿ (ಕುಡಿಕನಲ್ಲನಾಗಿ) ಮಾಡುವುದು. ಅತ್ಯಂತ ಪ್ರಾಮುಖ್ಯ ಕೆಲಸವು ಆ ಬಗ್ಗೆ ವಿನಿಯೋಗಿಸಲಾಗುವ ಶಕ್ತಿಯು ಹಾಳಾಗದು. ಪ್ರಾಯಭರಿತರನ್ನು ಕಂಡ,ಶಿಕ್ಷಣವುಅದರಿಂದನಡೆದು, ಒಬ್ಬ ನಾಗರಿಕನ ಕಣ್ಣಿಗೆ ತೋರುವ ಶಕ್ತಿಯನ್ನು ಹೆಚ್ಚಿಸಬಹುದು ಎಂದು ಮದ್ಯ ನಿಷೇಧದ ಕುರಿತು ಮಹಾತ್ಮಾಜಿಯವರು ಒಬ್ಬರೊಡನೆ ಆಡಿದ ಮಾತುಗಳಾಗಿರುತ್ತದೆ ಕಾಂಗ್ರೆಸ್ ಅಧಿಕಾರ ಸ್ವೀಕಾರ ನಿರ್ಧಾರ ಮಾಡಿದ ಲಾಗಾಯಿತು ಮದ್ಯ ನಿಷೇಧದ ಸಮಸ್ಯೆ ಮತ್ತು ಭೂರಿ ಜನರ ಶಿಕ್ಷಣ ಸಮಸ್ಯೆ ಇವುಗಳ ಕುರಿತು ಹಗಲಿರುಳು ದಣಿಯುತ್ತಿದ್ದಾರೆ. ಆ ಸಮಸ್ಯೆಗಳ ಕುರಿತು ಅನೇಕ ನೂತನ ಆಲೋಚನೆಗಳೂ ಯೋಜನೆಗಳು ಅವರಿಂದ ಈಗ ಪಡೆಯಬಹುದು.

ವಿಚಾರಶೀಲ ಹಿಂದೂದೇಶದ ಬಗ್ಗೆ ಯಾವ ತರದ ಅತ್ಯಂತ ಫಲಕಾರಿ ವ್ಯವಸ್ಥೆಯಿರಬೇಕು?

"ಈಗಿರುವ ಅಬಕಾರಿ ಶಿಲಂದಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಉಪಯೋಗಿಸಬಹುದೆಂದು ನಾನು ಈ ಮೊದಲೇ ತಿಳಿಸಿರುವೆನು. ಸರಕಾರದಿಂದ ಬಹಳ ಮುಂದಕ್ಕೂ ಮದ್ಯ ನಿಷೇದವಾಗದೆಂಬ ಅಭಿಪ್ರಾಯವು ಅವರಲ್ಲಿತ್ತು. ಆದರೆ ಕಾಂಗ್ರೆಸ್ ಈ ವಿಚಾರದಲ್ಲಿ ಈಗ ಸುಮ್ಮನಿರದು, ಬೇರೆಯವರನ್ನು ಸುಮ್ಮನಿರಲು ಬಿಡದು ಎಂದು ಅವರಿಗೆ ತಿಳಿದುದರಿಂದ ಅವರು ಕಾಂಗ್ರೆಸ್ಸಿನ ಕಾರ್ಯಕ್ರಮಕ್ಕೆ ಮತ್ತು ಧೋರಣೆಗೆ ಸರಿಯಾಗಿ ನಡೆಯುವರು. ಆದರೆ ಈ ಕುರಿತು ಸ್ವಯಂ ವ್ಯವಸ್ಥೆಗಳು ಹೆಚ್ಚು ಫಲಕಾರಿ ಎನಿಸುವುದು. ಪ್ರೊಫೆಸರರು, ಉಪಾಧ್ಯಾಯರು, ಕಾಲೇಜಿನ ವಿದ್ಯಾರ್ಥಿಗಳು ಇವರೆಲ್ಲಾ ಪ್ರತಿ ದಿನ ಈ ಬಗ್ಗೆ ಎರಡು ತಾಸುಗಳ ಪರಿಶ್ರಮ ಹೊಂದುವಂತೆ ಕರೆಯಬಹುದು ಕುಡಿಕರು ಸಂದರ್ಶಿಸುತ್ತಿರುವ ಪ್ರದೇಶಗಳಿಗೆ ಹೋಗಿ, ಅವರೊಡನೆ ಕಲೆತು, ಮಾತನಾಡಿ, ಅವರಿಗೆ ಮದ್ಯಸೇವನೆಯು ದುಷ್ಪರಿಣಾಮಗಳ ಕುರಿತು ಜ್ಞಾನಕೊಡಬೇಕು ಅಥವಾ ಶಾಂತ ತರದಲ್ಲಿ ಶಿಕ್ಷಣ ರೂಪದ ಪಹರೆ (ಪಿಕೆಟಿಂಗನ್ನು) ನಡೆಯಿಸಬೇಕು ವೈದ್ಯಕೀಯ ವೃತ್ತಿಯವರ ಈ ಸಮಸ್ಯೆಯ ಕಡೆಗೆ ಹೆಚ್ಚಿನ ಲಕ್ಷ್ಯವು ಬೇಕು ಜನರು ಕುಡಿಯುವದು ಯಾಕೆ? ಎಂಬುದನ್ನು ಇವರೆಲ್ಲರೂ ಕೂಡಿ ಕಂಡುಹಿಡಿಯಬೇಕು, ಅಲ್ಲದೆ, ಮದ್ಯದ ಬದಲಾಗಿ ಇತರ ಆರೋಗ್ಯದಾಯಕ, ಚೇತನಭರಿತ ಪಾನೀಯಗಳನ್ನು ಸೇವಿಸುವಂತೆ ಪ್ರೇರೇಪಿಸಬೇಕು ನಂತರ ನಮ್ಮ ಸಹೋದರಿಯರಿರುವರು ಅಸಹಕಾರ ಚಳವಳದ ಸಮಯ ಇವರು ಮಹತ್ತಾದ ಕಾರ್ಯವನ್ನು ಮಾಡಿರುವರು. ಈಗಿನ ಹೆಚ್ಚಿನ ಶುಭದಾಯ ಸಮಯವನ್ನು ಅವರು ಈ ಕಾರ್ಯಕ್ಕಾಗಿ ಮುಕ್ತಮನಸ್ಸಿನಿಂದ ವ್ಯಯಿಸಬೇಕು. ಅವರ ಹಾಜರಿಯು ಒಂದು ಬಲವಾದ ತಡೆಯಾಗುವುದಲ್ಲದೆ ಅವರಿಗೆ ಏನೂ ಕಷ್ಟಗಳು ಒದಗಲಾರವು ಹಿಂದೆ ಪೋಲೀಸರು ನಿರ್ಲಕ್ಷ್ಯಭಾವದಿಂದ ಸುಮ್ಮನೆ ನೋಡುತ್ತಿದ್ದುದು ಮಾತ್ರವಲ್ಲದೆ, ದುಷ್ಟರೊಡನೆ ಸಹಕರಿಸಿರುವರು ಈ ಪವಿತ್ರ ಕಾರ್ಯದಲ್ಲಿ ಈಗ ಅದರ ಸಹಕಾರ ದೊರಕುವುದೆಂದು ಸ್ಥಿರ ಈ ಅವರ ಖಚಿತಮಾಡಿಕೊಳ್ಳಬಹುದು ನಂತರ ಟೆಂಪರೆನ್ಸ ಸಂಘಗಳಿವೆ ಈಗಿನ ವರೆಗೆ ಇವುಗಳೆಲ್ಲಾ ನಿರ್ಜೀವ ಸ್ಥಿತಿಯಲ್ಲಿರುವವು ಅವುಗಳು ಜೀವಹೊಂದಬೇಕು ಚೇತನ ಧರಿಸಬೇಕು. ಈ ಪವಿತ್ರ ಕಾರ್ಯದಲ್ಲಿ ಮುಂದೆ ಬರುವಂತೆ ನಾವು ಅವರೊಡನೆ ಕೇಳಿಕೊಳ್ಳಬೇಕು ಒಂದು ನಿಷೇದ ಲೀಗನ್ನು ಸ್ಥಾಪಿಸಿ ಮದ್ಯ ನಿಷೇದ ಚಟುವಟಿಕೆಗಳೆಲ್ಲ ಅದರ ನಾಯಕತ್ವದಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಬಹುದು. ಅಬಕಾರಿ ಇಲಾಖೆಯ ಉತ್ಪನ್ನವು ಮದ್ಯ ನಿಷೇದಕ್ಕಾಗಿ ಉಪಯೋಗಿಸಬಹುದು ಈ ಹಾಳು ಹಣವನ್ನು ಆ ಬಗ್ಗೆ ಉಪಯೋಗಿಸಲು ಯಾವ ನಿರ್ಬಂಧಗಳಿರುವುದಿಲ್ಲ

ಈ ದುಷ್ಟಟವಿರುವ ಹಾಳು ಪ್ರದೇಶಗಳನ್ನು ಹಿಡಿದು, ಅಲ್ಲಿ ನಿಮ್ಮ ಪರಿಶ್ರಮಗಳು ನಡೆಯುವುದು ಪ್ರಾಮುಖ್ಯವು. ಗಡಂಗುದಾರರ ಸಭೆ ಸೇರಿಸಿ, ಅವರ ಮದ್ಯದಂಗಡಿಗಳನ್ನು ವಿಶ್ರಾಮ ಮಂದಿರಗಳನ್ನಾಗಿ ಮಾಡಿ, ಸತ್ಯವಾದ ರೀತಿಯಲ್ಲಿ ಹಣವನ್ನು ದುಡಿಯುವ ದಾರಿಯನ್ನು ತೋರಿಸಿಕೊಡಬೇಕು. ಈ ಸ್ಥಳಗಳನ್ನು ಹಾನಿಯಿಲ್ಲದ ವಿಶ್ರಾಂತಿ ಕೇಂದ್ರಗಳನ್ನಾಗಿ ಮಾರ್ಪಡಿಸಬಹುದಾಗಿ ನಾನು ಈ ಮೊದಲೆ ಸೂಚಿಸಿರುವೆನು.

'ಮಹಾತ್ಮಾಜಿ'

ಮೋಟರ ಡ್ರ್ಯಾವರರ ಗೋಳು

ಕೆಲವು ದಿನಗಳ ಹಿಂದೆ ಕೆಲವು ಮೋಟಾರ ಡ್ರ್ಯಾವರರ ಜೀವನದ ಅಂತರಂಗ ನಿರೀಕ್ಷಣೆ ಮಾಡುವ ಒಂದು ಸಂದರ್ಭವು ನನಗೆ ಪ್ರಾಪ್ತವಾಗಿತ್ತು. ಅತ್ಯಧಿಕ ಪರಿಶ್ರಮ ತೆಗೆದುಕೊಂಡೂ ಹೆಚ್ಚಿನ ಮಂದಿ ಡ್ರ್ಯಾವರರು ಅತ್ಯಲ್ಪ ವೇತನವನ್ನು ಪಡೆದು ಕಷ್ಟದ ಜೀವನವನ್ನು ಮಾಡುತ್ತಿದ್ದಾರೆಂಬುದು ಮಾತ್ರವಲ್ಲ, ಎಲ್ಲಾ ಡ್ರ್ಯಾವರರು ತಮ್ಮ ಸಂಬಳದ ಒಂದು ದೊಡ್ಡ ಅಂಶವನ್ನು ಜುಲುಮಾನೆ ಮೊದಲಾದುವುಗಳ ರೂಪದಲ್ಲಿ ಕೊಡಬೇಕಾಗಿ ಒಂದು ವಿಶೇಷ ನಷ್ಟವನ್ನನುಭವಿಸಬೇಕಾಗುತ್ತದೆಂಬುದೂ ಆಗ ನನಗೆ ಅವರೊಡನೆ ನಡೆದ ಮಾತುಕತೆಗಳಿಂದ ಸ್ಪಷ್ಟವಾಯಿತು. 'ಮೋಟರ ಕೆಲಸಗಾರರ ಜೀವನದ ಸಮಸ್ಯೆಗಳನ್ನು ಕುರಿತು ಈಗ ಚರ್ಚಿಸುವುದಿಲ್ಲ. ಒಂದು ಜರೂರಿ ವಿಷಯದ ಕಡೆಗೆ ಮಾತ್ರ ಸಂಬಂಧಪಟ್ಟವರ ಲಕ್ಷ್ಯವನ್ನು ಸೆಳೆಯಲಿಚ್ಛಿಸುತ್ತೇನೆ

ತಮ್ಮ ಅಸ್ತಿತ್ವವುಂಟೆಂದು ತಿಳಿಸಲಿಕ್ಕಾಗಿಯೋ ತಮ್ಮ ಉಪಯುಕ್ತತೆಯ ಪ್ರದರ್ಶನ ಮಾಡಲಿಕ್ಕಾಗಿಯೋ ಕೆಲಕೆಲವು ಪೋಲೀಸರು, ತಸ್ಕರಗಾರರನ್ನು ಹುಡುಕುವುದರಲ್ಲಿ ಮಾತ್ರವಲ್ಲ, ತಕ್ಸೀರುಗಳ ಸೃಷ್ಟಿನೆ ಮಾಡುವುದರಲ್ಲಿ ಕೂಡ ತಮ್ಮ ಸಮಯವನ್ನು ಕಳೆಯುತ್ತಿದ್ದಾರೆಂಬ ವಿಷಯವನ್ನು ಹಲವು ದಿನಗಳಿಂದ ಕೇಳುತ್ತಿರುತ್ತೇವೆ ಹೇಗಾದರೂ ಮಾಡಿ ಕೆಲಕೆಲವು ಅಪಾದನೆಗಳನ್ನು ಜನರ ಮೇಲೆ ಹೊರಿಸಿ ಅವರನ್ನು ದಂಡನೆಗೆ ಗುರಿಮಾಡದಿದ್ದರೆ ತಾವು ಯಾವ ಕೆಲಸವನ್ನೂ ಮಾಡದೆ ಸೋಮಾರಿಗಳಾಗಿ ಕಾಲಹರಣ ಮಾಡುತ್ತಿದ್ದೇವೆಂದು ಮೇಲಧಿಕಾರಿಗಳು ಎಣಿಸಬಹುದು. ಅಥವಾ ಜನಮುಖಂಡರು ತಿಳಕೊಂಡಾರು ಎಂಬ ಸಂದೇಹದಿಂದ ಈ ಕೆಲವು ಪೋಲೀಸರು ಹಾಗೆ ಮಾಡುತ್ತಿರಬಹುದೆಂದು ಊಹಿಸಲಿಕ್ಕೆ ಎಡೆ ಇರುತ್ತದೆ.

ಆ ಮಾತು ಹೇಗಿದ್ದರೂ ಈ ಕೆಲವು ಪೋಲೀಸರ ವಕ್ರದೃಷ್ಟಿಗೆ ಬಡಪಾಯಿಗಳಾದ ಕೆಲ ಡ್ರ್ಯಾವರರು ಬಿದ್ದು, ಕಾಯಿದೆಕಾನೂನುಗಳಿಗೆ ವಿರೋಧವಾಗಿ ನಡಕೊಂಡರೆಂಬ ಅಪಾದನೆಗೆ ವ್ಯರ್ಥ ಗುರಿಯಾಗುತ್ತಿದ್ದಾರೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ನಿಯಮಿತ ವೇಗದಿಂದ ಮೋಟರನ್ನು ನಡೆಸುತ್ತಿದ್ದರೂ, ಇಬ್ಬರು ಪೋಲೀಸರು ತನ್ನ ಮೇಲೆ ಮಿತಿಮೀರಿದ ವೇಗದಿಂದ ಮೋಟರ ಓಡಿಸಿದನೆಂಬ ಅಪಾದನೆ ಹೊರಿಸಿದ ಪರಿಣಾಮವಾಗಿ ಹೇಗೆ ತಾನು ವ್ಯರ್ಥವಾಗಿ ೧೫ ರೂಪಾಯಿ ದಂಡನೆ ತೆರಬೇಕಾಯಿತೆಂಬ ಹೃದಯದ್ರಾವಕ ಕತೆಯನ್ನು ಮೊನ್ನೆ ಒಬ್ಬ ಬಸ್ ಡ್ರ್ಯಾವರರು ನನ್ನ ಕೂಡೆ ಹೇಳಿ, ಇಂಥ ಅನ್ಯಾಯಗಳಿಗೆ ಏನೂ ಪರಿಹಾರೋಪಾಯ ಇರುವುದಿಲ್ಲವೇ ಎಂದು ಅವರು ನನ್ನನ್ನು ಪ್ರಶ್ನಿಸಿದರು. "ನೀವು ಒಳ್ಳೇ ಚತುರ ವಕೀಲರ ಮೂಲಕ ಈ ಅನ್ಯಾಯವನ್ನು ಏಕೆ ಪ್ರತಿಭಟಿಸಲಿಲ್ಲ? ಎಂದು ನಾನು ಕೇಳಿದಾಗ— "ಸ್ವಾಮೀ, ನನ್ನಂಥ ಬಡ ಡ್ರ್ಯಾವರನಿಗೆ ಅದು ಹೇಗೆ ಸಾಧ್ಯ? ಜುಲುಮಾನೆ ಕೊಡುವುದಕ್ಕಿಂತಲೂ ಹೆಚ್ಚಿಗೆ ಹಣವನ್ನು ನಾನ ನಿರಪ ಎಂಬುದನ್ನು ಸಾಬೀತ ಮಾಡಲಿಕ್ಕೆ ಖರ್ಚು ಮಾಡಬೇಕಾಗುತ್ತದೆ ಅದಕ್ಕಿಂತ ಅನ್ಯಾಯಕ್ಕೆ ತಲೆಕೊಡುವುದೇ ವಾಸಿಯೆಂದು ತೋರುವುದು" ಎಂದು ಆ ಡ್ರ್ಯಾವರರು ಹೇಳಿದರು. ನಿಜವೇ! ಕೋರ್ಟು ಬಜೇಲಿಗಳ ಜಗಲಿ ಹತ್ತುವುದೆಂದರೆ ಈಗ ಮನೆಮಾರು ಮಾರಿಕೊಳ್ಳುವುದೆಂದೇ ಅರ್ಥ

ಮೋಟರ ಡ್ರ್ಯಾವರರ ಮೇಲೆ ಅನುಸಿಕ್ಕವೆಂಬಂತೆ ಆಗುತ್ತಿರುವ ಇಂಥಾ ಅನ್ಯಾಯ ಆಕ್ರಮಣಗಳನ್ನು ತಡೆಯುವ ಸದುಪಾಯಗಳನ್ನು ಯೋಚಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಗತ್ಯವಾಗಿದೆ ಪೋಲೀಸರೇ ವೇದನ ಋಷಿಗಳು, ಅವರಾಡಿದ ಮಾತೇ ವೇದವಾಕ್ಯ, ಅವರ ಸಾಧನೆಯೇ ಅಪಾದನೆಯ ರುಜುವಾತಿಗೆ ಆಧಾರ ಶಿಲೆ ಎಂದಿರುವ ಸರ್ವ ಸಾಧಾರಣ ಅಭಿಪ್ರಾಯವನ್ನು ಮೂಲೆಗೊತ್ತುವುದು ಅವಶ್ಯಕವಾಗಿದೆ ಮತ್ತೆ ಪೋಲೀಸರ ಅಪಾದನೆಗಳ ತಪ್ಪು ರುಜು ಮಾಡುವ ಭಾರವು ಪೋಲೀಸರ ಮೇಲೆಯೇ ಇನ್ನಷ್ಟು ಬೀಳಬೇಕು ನ್ಯಾಯದೇವಿಯ ಒಲಿಮೆಯಿಂದ ಮೇಲೆ ನಿರಪರಾಧಿಗಳಾದವರು ಒಲಿಸೀಳದ ಹಾಗೆ ನ್ಯಾಯಾಧಿಪತಿಗಳು ಎಚ್ಚರಿಕೆಯಿಂದಲೂ ಮುತುವರ್ಜಿಯಿಂದಲೂ ಕೆಲಸಮಾಡಿ ನ್ಯಾಯದಾನಮಾಡಬೇಕು

ಮಂಗಳೂರಲ್ಲಿ ಸ್ಥಾಪಿತವಾಗಿರುವ ಬಸ್ ಕೆಲಸಗಾರರ ಸಂಘವು ಡ್ರ್ಯಾವರರ ಮೇಲೆ ಆಗುತ್ತಿರುವ ಕೆಲವು ಪೋಲೀಸ ಅಪಾದನೆಗಳನ್ನು ಪ್ರವೀಣ ವಕೀಲರ ಮೂಲಕ ಕಾನೂನಿನ ಒರೆಗಲ್ಲಿಗೆ ಹಚ್ಚಿ, ಆ ಕೆಲವು ಪೋಲೀಸರ ಅತಿರೇಕಗಳಿಂದ ಡ್ರ್ಯಾವರರನ್ನು ರಕ್ಷಿಸುವರೆಂದು ನಂಬುತ್ತೇನೆ.

ಕಟಪಾಡಿ ಶ್ರೀನಿವಾಸ ಶೆಣೈ, ಕಾರ್ಕಳ



L F S 14

... ಹೇಗೆ?

ಬೇಸಿಗೆ ಕಾಲದ ಬಿಸಿಲಿನ ತಾಪವನ್ನು ಪರಿಹರಿಸುವುದು ಹೇಗೆ ಎಂಬುದು ಎಲ್ಲರ ಮನಸ್ಸಿನಲ್ಲಿಯೂ ಪ್ರಧಾನವಾಗಿ ಏಳುವ ಪ್ರಶ್ನೆ. ಅದರಲ್ಲಿಯೂ ಭಾರತ ವರ್ಷದಲ್ಲಿ ಈ ಸಮಸ್ಯೆಯು ಅತಿ ತೊಡಕಾದುದು. ಏಕೆಂದರೆ ಇಲ್ಲಿ ಅಸಂಖ್ಯಾತ ಪ್ರಜೆಗಳು, ಮೈದಾನಗಳಲ್ಲಿಯೇ ವಾಸಿಸುತ್ತಿರುವುದರಿಂದ ಬೇಸಿಗೆಯ ಬಿಸಿಲಿನ ಝಳವನ್ನೂ ಸೆಕೆಯನ್ನೂ ತಪ್ಪಿಸಿಕೊಳ್ಳುವುದು ಅವರಿಗೆ ಅಸಾಧ್ಯ. ಅತಿ ಸೆಕೆಯಾಗಿರುವ ಕೊಠಡಿಗಳಲ್ಲಿನ ಉಸಿರು ಹಿಡಿಯುವ ಹವದಿಂದ ತಪ್ಪಿಸಿಕೊಳ್ಳಲು ತಂಪಾದ ಗಾಳಿಯನ್ನು ಸೇವಿಸುವುದಕ್ಕಾಗಿ ಅವರುಗಳು ಉದ್ಯಾನವನಗಳಿಗೆ ಹೋಗಿ ಅಲ್ಲಿನ ಮರಗಳ ತಣ್ಣಗಿನ ನೆರಳಿನಲ್ಲಿ ಕುಳಿತು ವಿಶ್ರಾಂತಿ ಪಡೆಯುವುದು ಒಂದು ಮಾರ್ಗ. ಹಾಗೆಯೇ ಮಧ್ಯಾಹ್ನದ ಫಲಾಹಾರದೊಡನೆ ಒಂದು ಬಟ್ಟಲು ಬಿಸಿಬಿಸಿ ಟೀ ಕುಡಿದು ಆಯಾಸವನ್ನು ಪರಿಹರಿಸಿಕೊಳ್ಳುವುದು ಒಂದು ಮಾರ್ಗ.

ಹೀಗೆ ಬೇಸಿಗೆಯ ಬೇಗೆಯು ಹೆಚ್ಚಿದಂತೆಲ್ಲಾ ಪ್ರತಿಯೊಬ್ಬರ ಮನಸ್ಸೂ ಉದ್ಯಾನವನಗಳ ಕಡೆಗೂ ಟೀ ಪಾನೀಯಗಳ ಕಡೆಗೂ ಆಕರ್ಷಿಸಲ್ಪಡುವುದು ಸಹಜ. ಪಟ್ಟಣವಾಸದ ಪರಂಪರೆಗಳಲ್ಲಿ ಒಳ್ಳೆಯ ಗಾಳಿಯ ಸೇವನೆಗಾಗಿ ಉದ್ಯಾನವನಗಳಿಗೆ ಹೋಗುವುದು ಮತ್ತು ಒಂದು ಬಟ್ಟಲು ಬಿಸಿ ಬಿಸಿ ಟೀ ಕುಡಿದು ದಾಹವನ್ನು ಅಡಗಿಸಿಕೊಳ್ಳುವುದು ಇವು ಅತಿ ಸುಲಭಸಾಧ್ಯವಾದ ಸೌಖ್ಯಾನುಭವಗಳೆನ್ನುವುದರಲ್ಲಿ ಸಂದೇಹವಿಲ್ಲ. ತಂಪನ್ನು ಅನುಭವಿಸಲು ಅನೇಕ ಜನರು, ಅನೇಕ ಬಾಹ್ಯಸಾಧನಗಳಿಗೆ ಅವಕಾಶ ಕೊಡುವುದು. ಈ ಸಾಧನಗಳಿಂದ ದಾಹಶಾಂತಿಯನ್ನೂ ತಂಪನ್ನೂ ಹೊಂದುವುದರಲ್ಲಿ ಸಫಲರಾದವರು ಬಹಳ ಕಮ್ಮಿ.

ಟೀ ಕುಡಿಯುವ ಅಭ್ಯಾಸವುಳ್ಳವರನ್ನನೇಕರನ್ನು ಕೇಳಿದಲ್ಲಿ 'ನಾವು ತಂಪಾಗಿ ಇರುವ ಉದ್ದೇಶದಿಂದ ಅನೇಕ ತಣ್ಣಗೆಯ ಪಾನೀಯಗಳನ್ನು ಸೇವಿಸಿರುವೆವು. ಆದರೆ ಅವು ಯಾವುವೂ ಪ್ರಯೋಜನಕರವಾಗಲಿಲ್ಲ. ಸೆಖೆ ಹೆಚ್ಚಿದ ಹಾಗೆಲ್ಲಾ ಬಿಸಿ ಬಿಸಿ ಪಾನೀಯವೇ ತಂಪನ್ನು ಉಂಟುಮಾಡುತ್ತವೆ' ಎಂದು ಹೇಳಿರುವರು.

ಈ ಕಾರಣದಿಂದ ಅವರುಗಳು ಎಲ್ಲರೂ ಬಿಸಿ ಬಿಸಿ ಟೀಯನ್ನಲ್ಲದೆ ಮತ್ತಾವ ಪಾನೀಯವನ್ನೂ ಉಪಯೋಗಿಸರು. ಉರಿಯುವ ಬೇಸಿಗೆಯಲ್ಲೂ ಅವರು ಟೀಯನ್ನೇ ಉಪಯೋಗಿಸುವರು. ಒಂದು ಥರಮಾಸ್ ಪ್ಲಾಸ್ಕಿನಲ್ಲಿ ಬಿಸಿ ಬಿಸಿ ಟೀಯನ್ನು ತುಂಬಿಸಿಕೊಂಡು ಊರ ಹೊರಗಿನ ತೋಟಗಳಿಗೆ ಹೋಗಿ ವನಭೋಜನ ಮಾಡುವುದರ ಆನಂದವೇ ಆನಂದ.

ಟೀ ಕುಡಿಯುವವರ ಈ ವಿಶ್ವಾಸವು ಹೊಸದಲ್ಲ. ಅದು ಅನುಭವದಿಂದ ಬಂದ ಮಾತು. ಟೀಯು ಉತ್ಸಾಹವನ್ನುಂಟುಮಾಡಿ ಆಲಸ್ಯವನ್ನು ತೊಲಗಿಸುವುದೆಂಬ ಸಂಗತಿ ಪೂರ್ಣ ಅನುಭವದಿಂದ ಬಂದ ಮಾತು. ಬಿಸಿ ಬಿಸಿ ಟೀಯಿಂದ ತಂಪನ್ನುಂಟುಮಾಡಿಕೊಳ್ಳುವುದರಲ್ಲಿ ಒಂದು ತತ್ವವಿದೆ.

ವಾಚಕರ ತಿಳಿವಳಿಕೆಗಾಗಿ ಇಂಗ್ಲೆಂಡಿನ ಪತ್ರಿಕೆಗಳಿಂದ ಎತ್ತಿದ ಮೂರು ಅಭಿಪ್ರಾಯಗಳನ್ನು ನಾವು ಇಲ್ಲಿ ಕೊಡುವೆವು. ಇವು ಸುಪ್ರಸಿದ್ಧ ವೈದ್ಯರ ಅಭಿಪ್ರಾಯ. ತಂಪಾದ ಪಾನೀಯಗಳು ಎಷ್ಟೇ ಸುಖಕರವಾಗಿದ್ದರೂ ಬಿಸಿಬಿಸಿ ಟೀ ಕುಡಿದು ಪಡೆಯುವುದಕ್ಕಿಂತ ಹೆಚ್ಚು ತಂಪು ಮತ್ತಾವ ಪಾನೀಯದಿಂದಲೂ ದೊರೆಯುವುದಿಲ್ಲವೆಂಬುದು ಅವರ ವಾದ. ತಮ್ಮ ವಾದವನ್ನು ಪುಷ್ಟಿಸಲು ಅವರು ಹೀಗೆ ಹೇಳಿರುವರು:—

'ಭರತ ಖಂಡದಿಂದ ತಂಪಾದ ಉತ್ತಮ ಪಾನೀಯವೊಂದು ಇಲ್ಲಿಗೆ ಆಮದಾಗುತ್ತಿದೆ. ಅದಕ್ಕೆ ಟೀ ಎಂದು ಹೆಸರು. ಟೀ ಕುಡಿದರೆ ರಕ್ತನಾಳಗಳಲ್ಲಿ ಒಂದು ವಿಚಿತ್ರ ಚೈತನ್ಯವುಂಟಾಗುವುದು. ಎಲ್ಲ ವಿಧವಾದ ಉತ್ತೇಜಕ ಪಾನೀಯಗಳಂತೆಯೇ ಟೀಯೂ ರಕ್ತನಾಳಗಳನ್ನು ಸಂಕುಚಿಸಿ ಚರ್ಮದ ಬಳಿ ಇರುವ ರಕ್ತವನ್ನು ಬೇಗ ಹೀರುವುದು. ಇದರಿಂದ ಶರೀರದ ಉಷ್ಣವು ತೊಲಗಿ ತಂಪುಂಟಾಗುವುದು.

'ಡೆಯಿಲಿ ಎಕ್ಸ್‌ಪ್ರೆಸ್'

ಅನೇಕ ವಿಧವಾದ ಪ್ರಯೋಗಗಳ ಮೂಲಕ ಸಂಶೋಧಿಸಿದ ನಂತರವೂ ಸ್ವಂತ ಅನುಭವದ ಮೂಲಕವೂ ಬಿಸಿಬಿಸಿ ಟೀಗಿಂತ ಶ್ರೇಷ್ಠ ಪಾನೀಯವು ಇನ್ನಿಲ್ಲವೆಂದು ನನಗೆ ನಿರ್ಧಾರವಾಗಿರುವುದು. ಮಂಜುಗಡ್ಡೆಗಳನ್ನು ಹಾಕಿದ ಪಾನೀಯಗಳನ್ನು ಸೇವಿಸುವುದರಿಂದ ತಂಪಾದಂತೆ ತೋರಿದರೂ ಬಿಸಿ ಬಿಸಿ ಟೀಯ ಸೇವನೆಯಿಂದ ಮೈಯಲ್ಲಿ ಚೆನ್ನಾಗಿ ಬೆವರಿ ಶರೀರದ ಉಷ್ಣವು ಕಮ್ಮಿಯಾಗುವುದೆಂಬುದು ಶಾಸ್ತ್ರ ಸಮ್ಮತವಾದುದು.

'ಡೆಯಿಲಿ ದಿಸ್‌ಪ್ಯಾಚ್'

ನಮ್ಮ ದೇಹವು ಆರೋಗ್ಯದಿಂದಿರಬೇಕಾದರೆ ದೇಹದ ಉಷ್ಣವು 90-6 ಡಿಗ್ರಿಗಳಿರಬೇಕು. ಬೇಸಿಗೆಯಲ್ಲಿ ಶರೀರವಾದ್ಯಂತವೂ ಒಂದು ವಿಧವಾದ ನೀರು ಪ್ರವಹಿಸುವುದರಿಂದ ಅಷ್ಟು ತಾಪವಿರುವುದಿಲ್ಲ. ಇಲ್ಲವಾದರೆ ಬೇಸಿಗೆಯ ಬೇಗೆಯನ್ನು ತಡೆಯಲು ಸ್ವಲ್ಪವೂ ಸಾಧ್ಯವಾಗುತ್ತಿರಲಿಲ್ಲ. ಈ ನೀರು ದೇಹದೊಳಗೆಲ್ಲಾ ಸಂಚರಿಸಿ ಸಣ್ಣ ನಾಳಗಳ ಮೂಲಕ ಚರ್ಮವನ್ನು ಪ್ರವೇಶಿಸಿ ಬೆವರಿನ ರೂಪದಲ್ಲಿ ಹೊರಗಡೆ ಕಾಣಿಸಿಕೊಂಡು ಗಾಳಿಯ ಸೋಂಕಿನಿಂದ ಆರಿಹೋಗುವುದು. ಬಿಸಿಬಿಸಿ ಟೀಯಿಂದ ದೇಹಕ್ಕೆ ತಂಪಾಗುವುದು. ಬಿಸಿ ಟೀಯಿಂದ ಬೆವರು ಹೆಚ್ಚಿ ಆ ಬೆವರು ಗಾಳಿಯಲ್ಲಿ ಆರುವುದರಿಂದ ಟೀಯು ಶರೀರದಲ್ಲಿ ಸೇರಿಸುವ ಶಾಖಕ್ಕಿಂತ ನೂರಕ್ಕೆ ಐವತ್ತರಷ್ಟು ಹೆಚ್ಚು ಚೈತನ್ಯವು ಶರೀರವನ್ನು ಸೇರುವುದು.

'ಡೆಯಿಲಿ ಟೆಲಿಗ್ರಾಫ್'

ಶಿಶುಗಳ ಶಾಖ

ಎಪ್ರಿಲ್ ಕಡೇ ವಾರದಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಬೀಸುತ್ತಿದ್ದ ಉಷ್ಣವಾಯುವಿನಿಂದ ಅತಿ ಸೆಕೆಯಾಗಿತ್ತು. ಎಪ್ರಿಲ್ 30ನೆಯ ತಾರೀಖಿನ 'ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಪ್ರಸಿದ್ಧ ವೈದ್ಯರೊಬ್ಬರ ಅಭಿಪ್ರಾಯವು ಪ್ರಕಟವಾಗಿತ್ತು. 'ಎಷ್ಟೋ ಕಾಲವಾಗಲೀ ಐಸ್ ಮುಂತಾದುವುಗಳಿಂದ ತಣ್ಣಗೆ ಮಾಡಿರುವ ತಂಪಾದ ಪಾನೀಯಗಳಿಗಿಂತ ಬಿಸಿ ಬಿಸಿ ಟೀಯು ಹೆಚ್ಚು ತಂಪನ್ನುಂಟುಮಾಡುವುದು.'

ಬೇಸಿಗೆಯಲ್ಲಿ ಟೀಯೇ ಅಪಾಯ ರಹಿತವೂ ಸರ್ವ ಶ್ರೇಷ್ಠವೂ ಆದ ಪಾನೀಯವೆಂಬುದು ಈಗ ಜಗತ್ತಿಗೇ ವಿದಿತವಾಗಿದೆ.

ನೂತನ ಮತ್ತು ಬಹಳ ಆಕರ್ಷಣೀಯವಾದ ಲಕ್ಸ್ ಟಾಯಿಲೆಟ್ ಸಾಬೂನು

ನೀವು ಲಕ್ಸ್ ಟಾಯಿಲೆಟ್ ಸಾಬೂನನ್ನು ಹಿಂದೆ ಎಂದೂ ಅಪೇಕ್ಷಿಸದಷ್ಟು ಈಗಿನ ಹೊಸ ಪ್ಯಾಕಿನದನ್ನು ಅಪೇಕ್ಷಿಸುವಿರಿ. ಅದರ ಮನೋಹರವಾದ ಬಣ್ಣವು ಅದಕ್ಕೆ ಒಂದು ಹೊಸ ಕಾಂತಿಯನ್ನು ಕೊಡುತ್ತದೆ.

ಅದರ ರ್‍ಯಾಪರ್ ಒಂದನ್ನೇ ಬದಲಾಯಿಸಿಲ್ಲ. ಬಿಲ್ಲೆಯನ್ನೂ ಸಹಾ ಬದಲಾಯಿಸಿದೆ. ಈಗ ಇದು ಹೊಸದಾಗಿ ಬಹಳ ಆಕರ್ಷಣೀಯವಾದ ಆಕಾರದಲ್ಲಿದೆ.

ಅತಿ ಮುಖ್ಯವಾದ ಲಕ್ಸ್ ಟಾಯಿಲೆಟ್ ಸಾಬೂನಿನ ಗುಣಗಳು ಮೊದಲಿನಂತೆಯೇ ಇವೆ. ನಾವು ನಿಮ್ಮ ಸಂತೋಷಕ್ಕೂ, ಮನಃತೃಪ್ತಿಗೂ ಅನುಕೂಲಿಸುವಂತೆ ಅದರ ಆಕಾರವನ್ನು ಮಾತ್ರ ವ್ಯತ್ಯಾಸ ಮಾಡಿರುತ್ತೇವೆ.

ಮೇರಿಯಂ ಹಾಪ್‌ಕಿನ್ಸ್

ಹೇಳುವುದೇನೆಂದರೆ:

"ಲಕ್ಸ್ ಟಾಯಿಲೆಟ್ ಸಾಬೂನಿನಿಂದ ಚರ್ಮವನ್ನು ಬಹಳ ಕೋಮಲವಾಗಿಯೂ, ಮೃದುವಾಗಿಯೂ ಮತ್ತು ಚೊಕ್ಕಟವಾಗಿಯೂ ಇಟ್ಟುಕೊಳ್ಳುವುದು ಬಹಳ ಸುಲಭ. ನಾನು ಅದನ್ನೇ ಯಾವಾಗಲೂ ಉಪಯೋಗಿಸುತ್ತೇನೆ!"

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP

ಇಂಡಿಯಾದಲ್ಲೇ ವನಸ್ಪತಿಗಳ ಶುದ್ಧವಾದ ಎಣ್ಣೆಯಿಂದಲೇ ತಯಾರಿಸಿದುದು

S-LTS 306 2&A

LEVER BROTHERS (INDIA) LIMITED
KANARESE

ಸ್ಪೈಯಿನಿನಲ್ಲಿ ಒಳ ಜಗಳ

ಸರಕಾರವು ಹಿಂದೆಗೆದು ಮುಂದರಿಯುತ್ತದೆ.

ದಂಗೆಖೋರರು ಮುಂದರಿಸಿ ತಡೆದು ನಿಂತಿದ್ದಾರೆ.

20000 ಸೈನಿಕರು ದಂಗೆಖೋರರಿಗೆ ಶರಣಾಗತರಾಗುವಂತಾಯಿತು.

ದಂಗೆಖೋರರು ಸೆಂಟೆಂಡರ ಪ್ರಾಂತ್ಯದಲ್ಲಿ ಮುಂದರಿದು ಜಯಹೊಂದುದಕ್ಕಾಗಿ ಮುಸ್ಸೊಲಿನಿಯ ಅಭಿವಂದನೆಗಳು ಇದನ್ನೇ ದಿಕೊಂಡು, ಫ್ರೆಂಚ ಸರಕಾರವು ಇಟಲಿಯ ಈ ವರ್ತನೆಯನ್ನು ವಿಮರ್ಶಿಸಬೇಕಾಗಿ ಜನಾಂಗ ಸಂಘಕ್ಕೆ ದೂರಿಟ್ಟೇ ಇದೆ!

ಸ್ಪೆಯಿನ್ ಸರಕಾರದ ನಾವೆಗಳನ್ನು ಇಟಲಿಯೇ ಧ್ವಂಸ ಮಾಡುತ್ತಿದೆ ಎಂಬ ವಿಷಯವನ್ನು ಪ್ರತ್ಯೇಕವಾಗಿ ಆಲೋಚಿಸುವುದು ಅನಗತ್ಯವೆಂದು ಜನಾಂಗಸಂಘದ ಟೀಕೆ!

ಸ್ಪೆಯಿನಿನ ಸರಕಾರೀ ಪಕ್ಷಗೊಳಗೆನೆ ಇತ್ತಂಡಗಳಾಗಿವೆ ಎಂದೂ ಒಂದು ವಾರ್ತೆ.

ಮತ್ತೊಂದು ಬ್ರಿಟಿಷ ಹಡಗಿನ ಮೇಲೆ ಗುಂಡಿಕ್ಕಿರುವರೆಂದೂ ಸ್ಪೆಯಿನಿಂದ ವಾರ್ತೆ. ಆಗೊಸ್ತು ತಿಂಗಳಲ್ಲಿ ಹೀಗೆ ಬ್ರಿಟಿಷ ಹಡಗುಗಳ ಮೇಲೆ ಗುಂಡು ಹಾಕಿದ್ದು ಹದಿನೇಳು ಸಲವಾಗಿದೆ.

ಇನ್ನು ಭೂಮಧ್ಯ ಸಮುದ್ರದಲ್ಲಿ ಬ್ರಿಟಿಷ ಹಡಗುಗಳು ತಮ್ಮ ಜವಾಬ್ದಾರಿಯ ಮೇಲೆಯೆ ಪ್ರಯಾಣ ಮಾಡತಕ್ಕದು ಎಂದು ಬ್ರಿಟಿಷ ಸರಕಾರದ ಅಪ್ಪಣೆ.

ಶಿಕ್ಷಣ ಸುಧಾರಣೆ.

ಕಾಂಗ್ರೆಸ್ ಮಂತ್ರಿಮಂಡಲವು ರಚನೆ ಹೊಂದುವ ಮೊದಲೇ ಸರಕಾರವು ಶಿಕ್ಷಣ ಕ್ರಮಗಳಲ್ಲಿ ತಿದ್ದುಪಾಟುಗಳನ್ನು ಸೂಚಿಸಲಿಕ್ಕೆ ಒಂದು ಇಸ್ತಿಹಾರನ್ನು ಪ್ರಕಟಿಸಿದ್ದಿತು. ಅಂದಿನಿಂದ ಇದು ವರೆಗೂ, ಟೀಕಾದಿಪ್ಪಣಿ ಟೀಕೆ ಟಿಪ್ಪಣಿಗಳು ಪ್ರಕಟವಾಗುತ್ತಲೇ ಇವೆ. ಅಗಾಧ ಜ್ಞಾನವುಳ್ಳ ವಿದ್ವಾಂಸರೂ ಜನತೆಯ ಭವಿಷ್ಯದ ಚಿಂತನಾಕಾಲುಗೂ ಈ ವಿಷಯ ಭಾಷಣಗಳನ್ನೂ ಲೇಖನಗಳನ್ನೂ ಪ್ರಕಟಿಸುತ್ತಲೇ ಇರುವರು. ಮಂತ್ರಿಗಳೂ ನಾನಾ ಹೊಸ ಸೂಚನೆಗಳನ್ನೂ ಹೊರಗೆಡಹುತ್ತಾರೆ ಅಂತೂ ಕಠಿಣ ವಿಮರ್ಶೆಯಾಗದೆ ಮುಂದರಿವುದು ಅಪ್ರಯುಕ್ತವೆಂದು ದಿನೇ ದಿನೇ ಸ್ಪುಟವಾಗುತ್ತಲಿದೆ

ಈ ಮಧ್ಯೆ, ವಿದ್ಯಾ ಇಲಾಖಾ ಸೆಕ್ರೆಟರಿಯವರೂ ಮಂತ್ರಿಗಳೂ ಅಲ್ಲಲ್ಲಿನ ಕೇಂದ್ರಗಳಿಗೆ ಸಂಚರಿಸಿ ವಿದ್ವಾಂಸರ ಹಾಗೂ ಶಿಕ್ಷಣದಲ್ಲಿ ಪರಿಶ್ರಮವುಳ್ಳವರ ಟೀಕೆಟಿಪ್ಪಣಿಗಳನ್ನು ಪಡೆಯುವರೆ ಆತುರಪಟ್ಟಿದ್ದಾರೆ ಪ್ರೊಫೆಸರ್ ಕಾರ್ಕಿಯವರ ಸವಾರಿ ನಮ್ಮಲ್ಲಿಗೇ ಚಿತ್ತಯಿಸಿದ್ದು ಇಲ್ಲಿ ಅಭಿಪ್ರಾಯಗಳನ್ನು ಸಂಗ್ರಹಿಸಿರುವರು.

ವಿದ್ಯಾಂಗದ ಡೈರೆಕ್ಟರ ಸಾಹೇಬರು ಶಿಕ್ಷಕರ, ಅಕ್ಷರತೆಯ ಪ್ರಚಾರದ ಮತ್ತು ಶಿಕ್ಷಣದ ವಿಷಯಕವಾಗಿ ಕಠಿಣ ಟೀಕೆಯನ್ನು ಮಾಡುವುದರ ಮೂಲಕ, ಬಹಳವಾಗಿ ಜನತೆಯಲ್ಲಿ ಕುತೂಹಲವನ್ನೂ ಆತುರವನ್ನೂ ಉಂಟುಮಾಡಿರುತ್ತಾರೆ ಅಂತೂ, ಏನೋ ಒಂದು ಹೊಸ ಯುಗವು ಮೂಡುವುದರಲ್ಲಿದೆ ಎಂದೇ ಸೂಚನೆಗಳಾಗುತ್ತಲಿವೆ

ಕಾಂಗ್ರೆಸು ಅಧಿಕಾರ ಸ್ವೀಕರಿಸುವ ಮೊದಲು, ಚುನಾವಣೆಗೆ ಹೊರಡುವ ಮೊದಲು ಬಹಿರಂಗಪಡಿಸಿದ ಪತ್ರಕದಲ್ಲಿನ ಕೆಲ ವಚನಗಳನ್ನು ಈಗಲೇ ನಡಿಸಬೇಕು ಖಾದೀ ಪ್ರಚಾರ, ಹಿಂದುಳಿದವರ ಹಾಗೂ ಗ್ರಾಮಗಳ ಉನ್ನತಿ, ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸ ಪ್ರಚಾರ, ಕೈಗಾರಿಕೆಗಳ ಅಭಿವೃದ್ಧಿ ಮೊದಲಾದುವು ಮಾತ್ರವಲ್ಲದೆ, ಹಿಂದೀ ಪ್ರಚಾರ ಮೊದಲಾದ ವಿಷಯಗಳೂ ಮೂಲ ತತ್ವಗಳಾಗಿ ಈ ಪತ್ರಿಕೆಯಲ್ಲಿವೆ ಎಂದು ಎಲ್ಲರಿಗೂ ತಿಳಿದೇ ಇದೆ

ಸ್ತ್ರೀಯರಿಗೂ ಸಮಾನಸ್ವಂದತೆಯನ್ನು ಪುರುಷರೊಡನೆ ಪಾಲಿಸ ... ಜಗಳ ಐಕ್ಯಕ್ಕೆ ಬೇಕಾದುವ ಸಾಧನಗಳನ್ನು ಮಾಡುವುದೂ ಕಾಂಗ್ರೆಸ್ಸಿನ ಕಾರ್ಯಕ್ರಮವಾಗಿದೆ ಅವೆಲ್ಲವನ್ನು ಅತಿ ಕಡಮೆ ಹಣದಲ್ಲಿ, ಸೇವಾಧರ್ಮವನ್ನು ಬೋಧಿಸಿಯೇ, ಈ ಬಡ ದೇಶದಲ್ಲಿ ಸಾಧಿಸಿ ಉದ್ಧಾರವಾದಲೇ ಬೇಕೆಂದು ಕಾಂಗ್ರೆಸ್ಸಿನ ಸಾಧನೆಯಿದೆ

ಪ್ರಾಥಮಿಕ ಶಿಕ್ಷಣವು ಆಗುವಷ್ಟು ಚೆನ್ನಾಗಿ ಪ್ರಚಾರವಾಗಿಲ್ಲ, ವ್ಯಯಕ್ಕೆ ತಕ್ಕಷ್ಟು ಪ್ರಯೋಜನವಾಗಿಲ್ಲ, ಮೂಲತಃ ವಿದ್ಯಾಭ್ಯಾಸದ ಗೊತ್ತುಗುರಿಗಳೇ ಸರಿಯಾಗಿಲ್ಲ, ಶಿಕ್ಷಿತರಿಗೆ ಉದ್ಯೋಗ ದೊರೆಯುತ್ತಿಲ್ಲ, ಮೇಲ್ತರಗತಿಗೆ ಏರುತ್ತಹೋಗುವವರಿಲ್ಲರಲ್ಲಿ ತಕ್ಕ ಯೋಗ್ಯತೆಯಿಲ್ಲ, ಯುನಿವರ್ಸಿಟಿಯ ಗುರಿ ಮತ್ತು ಖರ್ಚಿನ ಭಾರದಿಂದ ಬುಡವೇ ಕುಸಿಯುವಂತೆ ಆಗಿದೆ ಎಂಬಿತ್ಯಾದಿ ಕುಂದುಗಳನ್ನು ಧಾರಾಳವಾಗಿ ಪ್ರಕಟಿಸುತ್ತಲೇ ಭಾಷಣಾದಿಗಳು ನಡೆಯುತ್ತವೆ.

ದೇಹದಾರ್ಢ್ಯವನ್ನು ಹೆಚ್ಚಿಸಲೂ, ಶಾಲಾ ~~ಸಮಯವನ್ನೇ ಬದಲಾಯಿಸಬೇಕೆಂದೂ~~, ವ್ಯಾಯಾಮವೂ ಪುಸ್ತಕಪಾಠದಷ್ಟೇ ಅಗತ್ಯವೆಂದೂ, ಉದ್ಯೋಗ ಶಿಕ್ಷಣವಿಲ್ಲದೆ ಓದುಬರಹದಿಂದ ಲಾಭವು ಕಡಮೆ ಎಂದೂ, ಕೃಷಿಪ್ರಧಾನವಾಗಿರುವ ಈ ದೇಶವಾಸಿಯರಿಗೆ ಗ್ರಾಮಪಾಠಶಾಲೆಗಳೇ ಮುಖ್ಯವೆಂದೂ, ಅವುಗಳೂ ತೀರ ಸಾಮಾನ್ಯಭಾವದಿಂದ ನಡೆದರೆ ಅತ್ಯವಶ್ಯಕವಾಗಿ, ಅವುಗಳ ಖರ್ಚನ್ನೆ ಅವೇ ಪೂರಯಿಸಿಕೊಳ್ಳುವಂತಾಗಬೇಕೆಂದೂ ಸಹ ಇನ್ನು ಬೇರೆ ಸೂಚನೆಗಳೂ ಬಂದಿವೆ.

ಪ್ರಾಥಮಿಕ ವಿದ್ಯಾಭ್ಯಾಸವು ಸಾಧಾರಣ ೬ನೇ ವಯಸ್ಸಿನಿಂದ ೮ ವರ್ಷಕಾಲದ ಅವಧಿಯುಳ್ಳದಾಗಿ, ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಮುಗಿವಂತಾಗಬೇಕೆಂದು ಸಲಹೆ. ಈಗ ಇರುವ ಈ ತರಗತಿಯ ಶಾಲೆಗಳು ನಕಲಿ ಸೆಕೆಂಡರಿ ಶಾಲೆಗಳಾಗಿವೆ ಎಂದು ದೂರು ಇವುಗಳ ಉದ್ದೇಶವು ಬೇರೆಯಾಗಿದ್ದರೂ, ಸೆಕೆಂಡರಿಗಳೊಡನೆ ಸ್ಪರ್ಧೆಗೆ ನಿಂತು ಇವು ದಿಕ್ಕುಕೆಟ್ಟಿವೆ ಎಂದು ವಿಮರ್ಶೆ ಅದಕ್ಕಾಗಿ, ಇವುಗಳಿಂದ ಉತ್ತೀರ್ಣರಾಗುವವರನ್ನು ಸೆಕೆಂಡರಿಗೆ ಸೀದಾ ಸೇರಿಸದಂತೆ, ಒಂದು ವರ್ಷದ ವಜಾಮಾಡುತ್ತ, ಪಾಠಕ್ರಮವನ್ನೂ ವರ್ಗ್ಯವಿಷಯಗಳನ್ನೂ ಪ್ರತ್ಯೇಕಿಸಿ ಎಷ್ಟೆಂದರೂ ಎಲಿಮೆಂಟರಿ ಶುದ್ಧ ಎಲಿಮೆಂಟರಿಯೇ ಆಗುವ ಹಾಗೆ ಏರ್ಪಡಿಸಬೇಕೆಂದು ಅಧಿಕಾರವಾಣಿಯಿಂದ ಸೂಚಿಸಲಾಗಿದೆ. ಅವೇ ಎಂಟು ವರ್ಷ ಪಾಠಕ್ರಮಗಳುಳ್ಳ ಸೆಕೆಂಡರಿ ಶಾಲೆಗಳಿಗೆ ಸಿಗುವ ಗ್ರಾಂಟು ಕಡಿಮೆ, ಖರ್ಚು ಹೆಚ್ಚು, ಸಿಬ್ಬಂದಿಯ ಯೋಗ್ಯತೆ ಮತ್ತು ಉಪಕರಣಾದಿಗಳ ಖರ್ಚು ಹೆಚ್ಚಿನದು,—ಹೀಗಿರುವ ಕಾರಣ, ಅಲ್ಪ ಖರ್ಚಿನಲ್ಲಿ ಅಧಿಕ ಪ್ರಯೋಜನ ದೊರೆವ ಎಲಿಮೆಂಟರಿ ಶಾಲೆಗಳನ್ನು ಸೆಕೆಂಡರಿಯ ಸಾಲಿಗೆ ಬಾರದಂತೆ, ವಿದ್ಯಾರ್ಥಿಗಳಿಗೆ ದೊರೆವ ಶಿಕ್ಷಣದ ಮೊತ್ತವನ್ನೇ ಪಲ್ಲಟಿಸಿಬಿಟ್ಟರೆ ಎಲ್ಲವೂ ಸಾಕಾಗುವುದೆಂದು ಅಧಿಕಾರಿಗಳ ಅಭಿಪ್ರಾಯ ಎಲಿಮೆಂಟರಿ ಹಳ್ಳಿಗೆ, ಸೆಕೆಂಡರಿ ನಗರಕ್ಕೆ ಎಂದೂ ಮತ್ತೊಂದು ವಿಭಜನೆಯಾದಂತಿದೆ

ಕಡ್ಡಾಯವಾಗಿ ಧರ್ಮಾರ್ಥವಾಗಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಪ್ರಚಾರ ಹೊಂದಬೇಕೆಂದು ದೃಢಕನದಿಂದ ದೇಶಹಿತೈಷಿತೆಯ ವಿಶ್ವಾಸದಿಂದ ಸಾರುವ ಕಾಂಗ್ರೆಸ್ಸಿನ ಮಂತ್ರಿಮಂಡಲವು ಈ ಭಾಗದಲ್ಲಿ ಹೇಗೆ ನಿರ್ಧರಿಸುವುದೋ ನೋಡಬೇಕು ಅಲ್ಪವ್ಯಯದಲ್ಲಿ ಸೆಕೆಂಡರಿಯಷ್ಟೆ ಶಿಕ್ಷಣಹೊಂದಲು ಅನುಕೂಲವಾದ ಹಾ ಎಲಿಮೆಂಟರಿ ಶಾಲೆಗಳ ದರ್ಜೆಯನ್ನು ಸೆಕೆಂಡರಿಯಿಂದ ಪ್ರತ್ಯೇಕಿಸಿದರೆ, ಸೆಕೆಂಡರಿಗೂ ಎಲಿಮೆಂಟರಿಗೂ ಅಜಗಜಾಂತರವನ್ನೇನೂ ಮಾಡುವ ಅಗತ್ಯಕಂಡರೆ,—ಎಲಿಮೆಂಟರಿಯಲ್ಲಿ ದೊರೆವ ಶಿಕ್ಷಣದ ಮೊತ್ತವು ಕಡಮೆಯಾಗಬೇಕು ಅಥವಾ ಸೆಕೆಂಡರಿ ಶಿಕ್ಷಣದ 'ಜಾತಿ' ಬೇರೆಯಾಗಬೇಕು, ಸೆಕೆಂಡರಿ ಶಿಕ್ಷಣವು ಎಲಿಮೆಂಟರಿಯಲ್ಲಿ ದೊರೆವಂತಾಗಬಾರದು ಎಂದೇನೋ ಅಂತರಂಗವಿರುವಂತೆ ಕಾಣುತ್ತದೆ ಆಗುವಷ್ಟು ಉತ್ತಮ ಶಿಕ್ಷಣಹೊಂದುವರೆ ಪ್ರತಿಯೊಬ್ಬ ಗ್ರಾಮದ ವಿದ್ಯಾರ್ಥಿಯೂ ಅರ್ಹನಾಗಿರುವಾಗ, ಸೆಕೆಂಡರಿ ವಿದ್ಯಾಕ್ರಮವೆ ಎಲಿಮೆಂಟರಿಗಳಿಗೆ ಏಕಾಗಬಾರದು? ಅಥವಾ ಎಲಿಮೆಂಟರಿ ವಿದ್ಯಾಕ್ರಮವೇ ಸೆಕೆಂಡರಿಗಳಿಗೆ ಏಕೆ ಅನ್ವಯಿಸಬಾರದು? ಎಂಬ ಪ್ರಶ್ನೆಗಳು ಹುಟ್ಟುತ್ತವೆ ಜಾತಿಭೇದದ ಗಣನೆ ಇಲ್ಲದೆ ಸರ್ವ ವಿದ್ಯಾರ್ಥಿಗಳಿಗೂ ಶಿಕ್ಷಣ ದೊರೆಯಬೇಕಾಗುವಾಗ, ಶಾಲೆಗಳಿಗೆ ಪುನಃ ಜಾತಿಭೇದದಂತೆ ಬಾಳಬೇಕೆನ್ನುವ ತಿದ್ದುಪಡಿ ಏತಕ್ಕೆ ಎಂಬುದನ್ನು ವಿವರಿಸಬೇಕಾಗಿದೆಯಲ್ಲವೆ?

ಎಲಿಮೆಂಟರಿ ತರಗತಿಗಳು ಮುಗಿಯುತ್ತ ಅದರ ಸಮಾಪ್ತಿಯ ಸರ್ಟಿಫಿಕೇಟು ಸಿಗುವ ಪರೀಕ್ಷೆಯಿದೆ. ಅಲ್ಲಿಂದ ಉತ್ತೀರ್ಣರಾದವರು ಸೆಕೆಂಡರಿಗೆ ಸೇರುವಾಗ, ಒಂದು ವರ್ಷದ ವಜಾ ಕಾರಣದಿಂದ, ಕೆಳತರಗತಿಗೆ ಸೇರಿದ ಬಳಿಕ IV ಫೋರ್ಮಿನಲ್ಲಿ ಪುನಃ ಪರೀಕ್ಷೆಗೆ ಕೂತು ಭವಿಷ್ಯವನ್ನು ನಿರ್ಣಯಿಸಿಕೊಳ್ಳಬೇಕಾಗಿದೆ. ಗ್ರಾಮದ ಮಕ್ಕಳಲ್ಲಿ ಎಂಟನೇ ತರಗತಿಯಿಂದ ಪಾಸಾಗುವ ತಿಂಗಳಲ್ಲಿ ೫ ಮಂದಿಯಂತೆ ಏನೋ ಸರಾಸರಿಯಾಗಿ IV ಫೋರ್ಮಿಗೆ ಸೇರಬರುವವರಾದರೂ, ಅವರಿಗೆ ಆ ಕ್ಲಾಸು ಪಾರಾಗಲು ಎರಡು ವರ್ಷಗಳಾದರೂ ಬೇಕಾಗಿವೆ. ಈಗಣ ಕ್ರಮದಲ್ಲಿ, ಒಂದೇ ವರ್ಷದಲ್ಲಿ ಅವರು ಪಾರಾಗುವುದೇ ಹೆಚ್ಚಾಗಿ ತೋರುತ್ತಿದೆ. ಹೀಗೆ ಆತಂಕವಿಡುವುದೇಕೆ? ಸೆಕೆಂಡರಿ ಶಾಲೆಯೊಡನೆ ಹೋಲಿಸುವಾಗ ತೀರ ಕಡಮೆ ಖರ್ಚಿನಲ್ಲಿ ಓದುತ್ತಿದ್ದ ಹುಡುಗನು ಇನ್ನೊಂದು ವರ್ಷ ಹೆಚ್ಚಿಗೆ ಖರ್ಚುಮಾಡುವುದರಿಂದ ನಷ್ಟವಿಲ್ಲ; ಅದನಿಗೆ ಸೆಕೆಂಡರಿ ತರಗತಿಗಳಲ್ಲಿನ ಅಧಿಕ ಜ್ಞಾನವು ದೊರೆಯಲು (ಇಂಗ್ಲಿಷೇ ಮುಖ್ಯವಾಗಿ) ಎರಡು ವರ್ಷಗಳು ಬೇಕು; ಅದೂ ಅಲ್ಲದೆ, ಯೋಗ್ಯರಾದ ೮ನೇ ತರಗತಿಯ ಮಕ್ಕಳಿಗೆ ಸರಕಾರವು ಪ್ರತ್ಯೇಕ ವೇತನಕೊಡುವ ಏರ್ಪಾಡುಗಳನ್ನೂ ಸಾಕಷ್ಟು ಮಾಡಲಿಕ್ಕಿದೆ ಎಂದೂ ಸಮಾಧಾನ ಹೇಳಲಾಗಿದೆ

ದೇಶಭಾಷೆಯು ಎಲಿಮೆಂಟರಿ ಶಾಲೆಗಳಲ್ಲಿ ಪ್ರಾಮುಖ್ಯತೆ ಹೊಂದುವುದು. ೮ನೇ ತರಗತಿ ಪಾಸಾಗುವ ವಿದ್ಯಾರ್ಥಿಗೆ ದೇಶಭಾಷಾ ಸಾಹಿತ್ಯದ ವಿಶೇಷ ಪರಿಚಯವು ಉಂಟಾಗುವಂತೆ ಮಾಡಿ, ಜೀವನಕ್ಕೆ ಸಂಬಂಧಪಡುವಷ್ಟೆ ಮಾತ್ರ, ಇತರ ವಿಷಯಗಳನ್ನು ಬೋಧಿಸಲಾಗುವುದು ಸೆಕೆಂಡರಿ ಶಾಲೆಗಳಲ್ಲಿ ಇಂಗ್ಲಿಷಿಗೂ ಹೆಚ್ಚಿನ ಗಮನವಿದೆ ಮಾತ್ರವಲ್ಲದೆ ಇತರ ವಿಷಯಗಳಲ್ಲಿಯೂ ಕೋಲಂಕಷವಾಗಿ (ಅದು ಜೀವನಕ್ಕೆ ಸಂಬಂಧಪಡಲಿ ಇಲ್ಲದಿರಲಿ) ಶಾಸ್ತ್ರೀಯವಾಗಿ ಬೋಧಿಸಲಾಗುವುದು ಹೀಗೇಕೆ ವ್ಯವಸ್ಥೆಯಾಗುವಂತಿದೆ ಕನ್ನಡದಲ್ಲಿ ತಕ್ಕಷ್ಟು ಪ್ರವೀಣತೆಯಿದ್ದರೆ, ವಿಷಯಜ್ಞಾನವು ಬೆಳೆದು ಮನಸ್ಸು ಪರಿಪಕ್ವವಾಗುವಾಗ, ಇಂಗ್ಲಿಷನ್ನು ಈಗ ಎಂಟು ವರ್ಷಗಳಲ್ಲಿ ಕಲಿಯ ಬಹುದಾದುದನ್ನು, ವಯಸ್ಕನಾದ ವಿದ್ಯಾರ್ಥಿಯು ಬರೀ ನಾಲ್ಕೇ ವರ್ಷಗಳಲ್ಲಿ ಸಾಧಿಸಿ, ಕಲಿತುಕೊಳ್ಳಬಹುದೇ ಆಗದೇ ಎಂಬ ವಿಚಾರವಾಗಿ ಹೆಚ್ಚಿನ ವಿಮರ್ಶೆನಡೆದಂತೆ ತೋರಿಬರುತ್ತಿಲ್ಲ ಇದು ಸಾಧ್ಯವೆಂತಾದಲ್ಲಿ, ಅನ್ಯಭಾಷಾ ಪರಿಚಯವು ಸುಲಭಗ್ರಾಹ್ಯವಾಗಿರುವುದಾದರೆ, ಅನವಶ್ಯಕವಾಗಿರುವ ಇಂಗ್ಲಿಷಿನ ಪ್ರಾಬಲ್ಯ ಕ್ಷಿತಿಜವನ್ನು ಕುಂದಿಸಬಹುದು ಅಥವಾ ಇತರ ವಿಷಯಗಳಿಗೆ ಕೊಡುವ ಸಮಯವನ್ನು ಸ್ವಲ್ಪ ಸಂಕೋಚಿಸಿ, ಇಂಗ್ಲಿಷಿಗೆ ತಕ್ಕಷ್ಟು ಸಮಯವನ್ನು ಕೂಡಿಸಬಹುದು. ಈಗ ಇಂಗ್ಲಿಷಿನ ಒತ್ತಾಟದಿಂದ ಕನ್ನಡವನ್ನು ಇಂಗ್ಲಿಷಿನ ಅರ್ಧದಷ್ಟು ಸಮಯಕ್ಕೆ ಮಾತ್ರ ಸೆಕೆಂಡರಿ ಶಾಲೆಗಳಲ್ಲಿ ಕಲಿಸುತ್ತ, ಅದರಿಂದುದು ವಿಪರೀತ ಪರಿಣಾಮಯನ್ನು ... ಕಾಲದ ಪರೀಕ್ಷೆಯಲ್ಲಿ ... ಮಾರ್ಕುಗಳು (ನೂರರಲ್ಲಿ) ಸಿಗುವಂತೆ ಮಾಡಿ, ವಿದ್ಯಾರ್ಥಿಗಳ ಆಯುಷ್ಯವನ್ನು ... ಈ ಹಿಂಸೆಗೆ ನಿವಾರಣೋಪಾಯಗಳಾವುವೂ ಇಲ್ಲವೆ?

ಇನ್ನೂ ಹಿಂದೀ, ರಾಷ್ಟ್ರಭಾಷೆಯ ಸೇರ್ಪಡೆಯೊಂದಿದೆ ಇದನ್ನು ೬, ೭, ೮ ತರಗತಿಗಳಲ್ಲಿ ಕಡ್ಡಾಯವಾಗಿ ಬೋಧಿಸಬೇಕೆಂದೂ ಆಗಿದೆ. ಕಾಂಗ್ರೆಸ್ಸಿನ ಧ್ಯೇಯ ನಿಜ, ಆಗಬೇಕಾದುದೂ ನಿಜ ಕೀರ್ತಿಯೂ ನಮ್ಮ ಸಂಸ್ಥಾನಕ್ಕೆ ಖಂಡಿತ. ಮುಂದಿನ ಯುವಕರಿಗೆ ಅವರ ಜೀವನ ಸಂಗ್ರಾಮದಲ್ಲಿ ಹೋರಾಡಲು ಇನ್ನೊಂದು ಅಸ್ತ್ರ ದೊರೆವುದು ಉತ್ತಮವೆಂಬುದೂ ಸಹಜವಾಗಿಯೂ ಪ್ರೋತ್ಸಾಹಾರ್ಹವೇ. ಆದರೆ, ಇದರಲ್ಲಿ ಪ್ರವೀಣತೆ ಎಷ್ಟಿರಬೇಕು? ಇದು ಸಂಭಾಷಣೆಗಷ್ಟೆ ಸಾಕೆ? ಅಥವಾ ದೇಶಭಾಷೆಯಷ್ಟೆ ಗುಣದೊರೆಯಬೇಕೆ? ಇದನ್ನು ಭಾಷೆಯಾಗಿ ಕಲಿಸುವುದೇ ಅಥವಾ ವಿಷಯವಾಗಿ ಕಲಿಸುವುದೇ? ಇದನ್ನು ಕೂಡಿಸುವಾಗ ವರ್ಗ್ಯವಿಷಯಗಳಲ್ಲಿನ ಯಾವುದನ್ನ ಕಳೆಯುವರು? ಅಥವಾ ಇಳಿಸುವರು? ಈ ವಿಚಾರಗಳಾವುವೂ ತಿಳಿದಿಲ್ಲ. ನಮ್ಮ ವಿದ್ಯಾರ್ಥಿಗಳು ಯೂರೋಪಿಯ ವಿದ್ಯಾರ್ಥಿಗಳಂತೆ ೧೧–೧೪ ವಯಸ್ಸಿನೊಳಗಾಗಿ ೩–೪ ಭಾಷೆಗಳನ್ನು ಕಲಿತುಕೊಳ್ಳಲು ಹಿಂತೆಗೆಯರೆಂದು ಮಂತ್ರಿಯವರೊಡನೆ ನಾವೂ ಒಪ್ಪೋಣ, ಆದರೆ, ಅವನ್ನು ಪರೀಕ್ಷೆಗಾಗಿ ಕಲಿಯುವುದೇ, ಬರೀ ವ್ಯವಹಾರಜ್ಞಾನಕ್ಕಾಗಿಯೆ? ಪರೀಕ್ಷೆಗಾಗಿ ಲ್ಯಾಟಿನ, ಗ್ರೀಕ್, ಫ್ರೆಂಚು ಗಳನ್ನು ಕಲಿಯುವ ಇಂಗ್ಲಿಷ್ ವಿದ್ಯಾರ್ಥಿಗಳು ಅವನ್ನು ನಮ್ಮಲ್ಲಿನ ಚಳಿಗಾಲದ ಮಳೆಯಷ್ಟೆ (೫–೩–೧ ಇಂಚು) ಮಾತ್ರ ಮನಸ್ಸಿನಲ್ಲಿ ಇಂಗಿಕೊಂಡರೆ ಸಾಕೆ? ಇನ್ನು ವಿಚಾರಗಳನ್ನು ಮುಂದೆ ಬರೆವೆವು

WANTED

A Mistress or a Master, as a private teacher for some children of a Land-Holder in a country house Apply with copies of testimonials starting the minimum pay expected to **"C"** C/o "*Swadeshabhimani Mangalore*

Change of Address:

Bingra Ramnath Shanbhogue Certified ... Typist & Commercial Instructor has shifted his office to ... new building Court Road Mangalore near Central Co-operative Bank

Charges most moderate

THEY WORK WHILE YOU REST.

Industrious Rupees are busy turning out more Rupees to savers in our bank. But they do not jump in and go to work of their own free will You have to start them ~~and encourage them~~. The best way is to give them friends Rupees are very sociable and if they are lonely they do little. But if you keep adding more Rupees in to your account they do their best. And the more they work the more you can rest.

RESOURCES OF A CRORE. ESTD. 1906 CANARA BANK, LIMITED.

ಅಗ್ರಲೇಖ
ಮದರಾಸು ಹೊಸ ಸರಕಾರದ ಮೊದಲನೆ ಆಯವ್ಯಯ ೧೦
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು . . . ೧೧
ಬೆಂಗಳೂರು ಸಮಾಚಾರ . . ೧೪
ಕಾಲೇಜುಗಳಿಂದ . . . ,,

ಸ್ವದೇಶಾಭಿಮಾನಿ.

ತಾ. ೩ನೇ ಶುಕ್ರವಾರ ಸಪ್ಟಂಬರ ೧೯೩೭

ಮದ್ರಾಸು ಹೊಸ ರಾಜ್ಯ ಭಾರದ ಮೊದಲನೆ ಆಯವ್ಯಯ

ಶ್ರೀ। ರಾಜಗೋಪಾಲಾಚಾರ್ಯರು ಬಹು ವಿವೇಕದಿಂದ, ಹೆಚ್ಚಿಗೆ ಜಂಬ ವಿಜೃಂಭಣೆಗಳಿಲ್ಲದೆ ಒಂದು ಆಯವ್ಯಯಗಳ ಪಟ್ಟಿಯನ್ನು ಮೊನ್ನೆ ಎಸೆಂಬ್ಲಿಯಲ್ಲಿ ಪ್ರಕಟಿಸಿದರು ಈಗ ರಾಜ್ಯದಾಡಳಿತವೆಲ್ಲ ಪ್ರಜಾಪ್ರತಿನಿಧಿಗಳಿಗೆ ಸಂದಿರುವ ಪ್ರಯುಕ್ತವೂ ನಮ್ಮ ಪ್ರಾಂತ್ಯದ ಆರ್ಥಿಕ ಸ್ಥಿತಿಯು ಉತ್ತಮವಾಗಿರಬೇಕಾಗಿರುವ ಕಾರಣವೂ ಬಹಳ ನಿಪುಣತೆಯಿಂದ, ಈ ಅಂದಾಜನ್ನು ಸೃಜಿಸಿರುವರು

ನಮ್ಮ ಸಂಸ್ಥಾನದ ಈಗಣ ಸ್ಥಿತಿಯು ಭದ್ರವಾಗಿದೆ ಸಾಲಕ್ಕಿಂತ ಮೂಲಗಳು 18 ಕೋಟಿ ಹೆಚ್ಚಾಗಿವೆ, ಮೂವತ್ತುವರೆ ಕೋಟಿ ವ್ಯಯಿಸಿರುವುದರಲ್ಲಿ ಸುಮಾರು 24 ಕೋಟಿಯಷ್ಟು ಲಾಭವನ್ನು ಉಂಟು ಮಾಡುವುದಾಗಿದೆ ಇದೇ ವರ್ಷಾಂತ್ಯದೊಳಗೆ, ಈಗ ತಾನೆ ಎತ್ತಿರುವ ೧॥ ಕೋಟಿ ಸಾಲ ಸಮೇತವಾಗಿಯೂ, ಸಂಸ್ಥಾನದಿಂದ ಹೊರ ಸಲ್ಲಬೇಕಾಗಿರುವುದೆಲ್ಲವನ್ನು ಕಳೆದರೂ, 12 ಕೋಟಿ ರೂಪಾಯಿಯ ಮೂಲವೇ ಹೆಚ್ಚಾಗುವುದೆಂದು ಲೆಕ್ಕವಿದೆ ಹೀಗಿದ್ದರೂ ಈಗ ಸಾಲವು ಸುಲಭ ಬಡ್ಡಿಗೆ ದೊರೆಯುವುದೆಂದು ಇನ್ನೂ ಇನ್ನೂ ಸಾಲವೆತ್ತದೆ, ಇನ್ನೂ 45 ವರ್ಷಗಳ ತನಕ ವರ್ಷ ವರ್ಷವೂ ಖರ್ಚು ಹೆಚ್ಚುತ್ತ ಬರುವ ಕಾರಣ, ಮುಂದಣ ಖರ್ಚನ್ನು ಸರಿಪಡಿಸಿಕೊಳ್ಳದೆ ನಿರ್ವಾಹವಿಲ್ಲವೆಂದು ಮಂತ್ರೀಶರು ನುಡಿದರು ಹೀಗೆ ಮೂಲದ ಬಲವು ಹೆಚ್ಚುವಂತೆ ಸಾಲಕ್ಕೆ ಹೆದರಿ ಪ್ರಜಾಕೋಟಿಗೆ ಬೇಕಾಗುವ ಸೌಕರ್ಯಗಳನ್ನು ಕೂಡಿಸಿಕೊಡಲು ಇವರು ಅಪಾರ ಪರಿಶ್ರಮವನ್ನೆ ವ್ಯಯಿಸಿರುವರೆಂಬು ಅವರ ಭಾಷಣದಿಂದ ಗೊತ್ತಾಗುವುದು

ನೀರಾವರಿ ಕೆಲಸ, ಕೈಗಾರಿಕೆಗಳ ಅಭಿವೃದ್ಧಿ, ವಿದ್ಯುಚ್ಛಕ್ತಿಯ ವಿತರಣ ಮೊದಲಾದುವಕ್ಕೆಂದು 162 ಲಕ್ಷ ರೂಪಾಯಿಗಳನ್ನು ಈ ವರ್ಷ ಖರ್ಚುಮಾಡುವರು ಇವೆಲ್ಲವೂ [illegible] ಟಾ ಕೋಟಿಗೆ ಸುಖ ಸೌಕರ್ಯಗಳನ್ನು ಹೆಚ್ಚಿ[illegible]ವುದಕ್ಕಾಗಿಯೇ ನಡೆಯಬೇಕಾಗಿರುವ ಕರ್ತವ್ಯಗಳು, ಇವನ್ನು ಕಣ್ಣಲ್ಲಿಟ್ಟುಕೊಂಡೇ ಮಂತ್ರಿಗಳು ಮುಂದೆ ಕಾರ್ಯಭಾರವನ್ನು ಹೂಡಿಕೊಂಡುದು ಚೆನ್ನಾಗಿದೆ, ಸ್ತುತ್ಯವಾಗಿದೆ.

ಕಾಂಗ್ರೆಸ್ ಮಂತ್ರಿಗಳು ತಯಾರಿಸಿರುವ ಈ ಅಂದಾಜಿನಲ್ಲಿ, ಅವರ ಧ್ಯೇಯದಷ್ಟು ಚೆನ್ನಾಗಿ ಅವರಿಗೆ ಮುಂದರಿಯಲು ಸದ್ಯಕ್ಕೆ ಸಾಧ್ಯವಿಲ್ಲವೆಂದು ಮಂತ್ರಿವರ್ಯರು ತಿಳಿಸಿಯೇ ಇರುವರು. ಆದರೂ, ನೀರಾವರಿ ಕೆಲಸಗಳಿಗೆ ೫॥ ಲಕ್ಷ, ವಿದ್ಯಾಭ್ಯಾಸ ಪ್ರಚಾರಕ್ಕೆ ೨॥ ಲಕ್ಷ [illegible] ಲಕ್ಷ ಹೆಚ್ಚು [illegible] ಬೇಕಾದ ವರ್ಷಕ್ಕಿಂತ ಹೆಚ್ಚಿಗೆ ವ್ಯಯಿಸಲು ನಿರ್ಧಾರವಾಗಿದೆ. ಇದ್ದುದರೊಳಗೆ ಅಭಿವೃದ್ಧಿ ಸಾಧಿಸಬೇಕೆಂಬ ಈ ಮಂತ್ರಿಗಳು ಇಷ್ಟು ಉತ್ತಮ ಫಲ ಕೊಡುವ ಸಾಧನೆ ಮಾಡಿರುವುದು ಬಹಳ ಶ್ಲಾಘನೀಯವಾಗಿದೆ ಬೇಸಾಯಗಳಿಗೆ ಹಿತವಾಗಲೆಂದು, ತೀರ್ವೆಯನ್ನು ಇಳಿಸಿದರೆ ಮಾತ್ರ ಆಗಲಾರದು. ಹಲವು ಸಣ್ಣ ಮೊಬಲಗುಗಳಲ್ಲಿ ವ್ಯರ್ಥವಾಗಿ ಹೋಗುವ ಮೊತ್ತವನ್ನು ಬೇಸಾಯಗಾರರ ಹಿತಕ್ಕಾಗಿ ವ್ಯಯಿಸುವುದುತ್ತಮವೆಂದು ಮಂತ್ರಿಗಳು ತಿಳಿದೇ ಇರುವರು. ಬೇಸಾಯಗಾರರು ಸಾಲದಿಂದ ವಿಮೋಚನೆ ಹೊಂದುವಂತಾದರೆ ಅದೇ ಹೆಚ್ಚಿನದು ಎಂದು ಶ್ರೀ ಆಚಾರ್ಯರ ನಂಬಿಕೆಯಿದೆ. ಸಾಲದ ಉರುಳಿನಿಂದ ಬೇಸಾಯಿಗಳ ಕೊರಳು ತಪ್ಪುವಂತಾದ್ದಲ್ಲಿ ಅವರ್ಯ್ಯ ಇನ್ನೂ ಸಾಲ ಎತ್ತದಂತೆ ನಿವಾರಿಸಿದಲಿ, ಪ್ರತಿಯೊಬ್ಬನಿಗೂ ಮಹದುಪಕಾರವನ್ನೆ ಮಾಡಿದಂತಾಗುವುದು

ಸೇಲಂ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ ಮಾಡಲು ಸೂಚಿಸಿರುವುದು ಬರೀ ಬರಿದು ಪ್ರಯತ್ನವಾಗಿಲ್ಲ, ಅದು ಒಂದು ಕ್ರಮವನ್ನೆ ಜಾರಿಗೆ ತರುವುದರ ಮೊದಲನೆ ಸಾಧನೆಯಾಗಿದೆ ಸರಕಾರವು ಮದ್ಯಪಾನವನ್ನು ನಿರ್ಮೂಲಿಸಿಯೋ ಬಿಡಬೇಕಾಗಿ ನಿರ್ಧರಿಸಿಯದೆ, ಇನ್ನು ಬೇರೆ ಮಾತಿಲ್ಲ, ವಿಮರ್ಶೆಯ ಅಗತ್ಯವಿಲ್ಲ ಇದರಿಂದ ಉಂಟಾಗುವ ನಷ್ಟವನ್ನು ತುಂಬುವ ಹಣ ಕೂಡಿಕೆಯ ಉಪಾಯ ಕೋರುವ ತನಕ ಮಾತ್ರ ವಿಳಂಬವಾದೀತಲ್ಲದೆ, ಮದ್ಯಪಾನವನ್ನು ನಿರ್ಮೂಲಿಸುವುದಕ್ಕೆ ಸರಕಾರವು ಹಿಂದೆಗೆಯುವುದಿಲ್ಲ ಈ ಕಾರ್ಯದಲ್ಲಿ ಸರಕಾರಕ್ಕೆ ನಾನಾ ಬಗೆಯ ಇತರ ದೋಷಗಳನ್ನು ಎದುರಾಡಿ ಹೋರಾಡುವ ಪ್ರಸಂಗ ಎದ್ದೀತು ಅದನ್ನು ಕುರಿತಾಗಿ ಮುಂದೆ ಮಂತ್ರಿಗಳು ಸರಕಾರದ ಉಪಾಯಗಳನ್ನು ತಿಳಿಸುವರು ಈಗ ತಾನೆ ಅವನ್ನು ಕುರಿತು ಟೀಕಿಸಬಹುದಾಗಿದೆ ಈ ಚರ್ಚೆಯನ್ನು ಇಲ್ಲಿ ನಿಲ್ಲಿಸುವುದುತ್ತಮ

ಕೈನೂಲು ಕೈಮಗ್ಗದ ಬಟ್ಟೆಗಳನ್ನಲ್ಲದೆ ಇತರ ಬಟ್ಟೆ ಮಾರಾಟ ಮಾಡುವವರ ಮೇಲೆ ಒಂದು ತೆರಿಗೆ ವಿಧಿಸಬೇಕೆಂದೂ ಆ ತೆರಿಗೆಯಿಂದ ಕೈಮಗ್ಗದವರಿಗೆ ಸಹಾಯಕೊಡಬೇಕೆಂದೂ ಸೂಚನೆಯಾಗಿದೆ ಈ ತೆರಿಗೆಯಿಂದ ಗಿರಣಿಯ ಪರದೇಶದ ಬಟ್ಟೆ ವ್ಯಾಪಾರಗಳಿಗೆ ಎಷ್ಟು ಮತ್ತು ಯಾವ ಬಗೆಯ ತೊಂದರೆಗಳಾಗಬಹುದೋ, ಬಡವರಿಗೆ ಅಂತಹ ಬಟ್ಟೆ ಅಗ್ಗವಾಗಿ ದೊರೆಯದೆ ಏನು ಅಡಚಣೆ ಉಂಟಾಗಬಹುದೋ ಅದನ್ನು ಕುರಿತಾಗಿ ಮಂತ್ರಿಗಳು ಮುಂದೆ ಸರಿಯಾಗಿ ವಿವರಿಸಿ ಚರ್ಚಿಸುವರೆಂದು ನಂಬಿದ್ದೇವೆ

ಪ್ರತಿ ಹಳ್ಳಿಗೆ ನೀರು ಸರಬರಾಯಿ ಪಟ್ಟಣಗಳಿಗೆ ಚರಂಡಿಗಳ ಪೂರಯಿಕೆ, ಅಗುವಷ್ಟು ಹೆಚ್ಚಿನ ವೈದ್ಯ ಸಹಾಯ, ದೊಡ್ಡ ಗ್ರಾಮಗಳಲ್ಲಿ ವಿನೋದಾದಿಗಳಿಗಾಗಿ ಸೌಕರ್ಯಗಳು ಮೊದಲಾದುವನ್ನು ಮೊದಲು ಪೂರಯಿಸಿ, ಅನಂತರವೇ ನಾನಾ ದೊಡ್ಡ ಕಚೇರಿ ಕಟ್ಟಡಗಳ ವಿಷಯ ಎಣಿಸಲಾದೀತು ಎಂದು ಮಂತ್ರಿಗಳೆಂದಿರುವರು ಲೋಕಲ್ ಬೋರ್ಡುಗಳು ತಿಳಿಸಿದ ಈ ಬಗೆಯ ಎಲ್ಲ ಸೂಚನೆಗಳನ್ನು ಮಂಜೂರು ಮಾಡಿ ರೇಡಿಯೊ ಮೂಲಕ ಹಳ್ಳಿಗಳಲ್ಲಿ ಪ್ರೌಢ ಶಿಕ್ಷಣ ಪ್ರಚಾರಕ್ಕೂ ಒಪ್ಪಲಾಗಿದೆ ಹೀಗೆ ಮಾಡುವುದರಿಂದ, ಗ್ರಾಮವಾಸಿಯರಿಗೆ ಆತ್ಮಾನಂದದಿಂದ ಜೀವನವು ಕಳೆಯುವ ಸುಯೋಗವು ಒದಗುವುದು ಅವರ ಆರೋಗ್ಯ ಹೆಚ್ಚುವದು, ಆನಂದವು ಹೆಚ್ಚುವುದು; ಹಳ್ಳಿಗಳಲ್ಲಿ ಬಾಳಲು ಜನರು ಆಶಿಸುವಂತಾಗುವುದು.

ಸರಕಾರದ ನೋಕರರ ಸಂಬಳಗಳಲ್ಲಿ ಸೇಕಡಾ ೨॥ಯಿಂದ ೩ರ ತನಕ ಕಡಿತವಿರುವುದಾಗಿಯೂ ತಿಳಿಸಲಾಗಿದೆ

ಕಾಂಗ್ರೆಸು ಮುನ್ನಡೆಯಲು ಉಪಕ್ರಮಿಸಿರುವುದಾದಗೂ, ಆರ್ಥಿಕ ಸ್ಥಿತಿಯನ್ನು ಹಾಳು ಮಾಡಲು ಸಿದ್ಧವಾಗಿಲ್ಲ. ಅಂತೂ ಜನತೆಯ ಜೀವನ ಸುಖವು ಹೆಚ್ಚುವಂತೆ ಮಾಡಲು ಇಷ್ಟು ಚೆನ್ನಾಗಿ ಸೂಚಿಸುವ ಯೋಜನೆಗಳು ಕಾಂಗ್ರೆಸ್ ಆಡಳಿತದ ಶುಭಲಕ್ಷಣಗಳನ್ನೆ ಪ್ರದರ್ಶಿಸುತ್ತವೆ ಎನ್ನಬೇಕು.

ಲಂಕಾಶೈಯರಿನವಾಯಿತು, ಇನ್ನು ದಿನ ಬಂದಿದೆ ನೊಟಿಂಗ್ಹ್ಯಾಮ್!

ಹತ್ತಿಬಟ್ಟೆ ನೂಲು ಮೊದಲಾದುವುಗಳ ಕೈಗಾರಿಕೆಯಲ್ಲಿ ಲಂಕಾಶೈಯರಿನವರ ಜೀವನ ನಡೆಯಬೇಕಾಗಿದೆ; ಇವುಗಳಿಗೆ ಗಿರಾಕಿಗಳು ಕಡಿಮೆಯಾದುದೇ ಅವರಿಗೆ ಗತಿ ಮತಿ ಎರಡೂ ತಪ್ಪುವುದು ಸಹಜ. ಅದಕ್ಕಾಗಿ, ಭಾರತವರ್ಷದ ದೇಶೀಯ ಕೈಗಾರಿಕೆಗಳನ್ನಾಗಲಿ, ಅಗ್ಗವಾಗಿ ಇಲ್ಲಿಗೆ ಬರತಕ್ಕ ಪರದೇಶೀಯ ಬಟ್ಟೆಬರೆಗಳ ಆಮದನ್ನಾಗಲಿ ಲಂಕಶಯರು ಶಾಂತಬುದ್ಧಿಯಿಂದ ನೋಡದೆ ಆಗಾಗ, ಕಾಲು ಕೆರೆದು ಕೂಗುವುದುಂಟು ಹೋದ ತಿಂಗಳಲ್ಲಿ, ಡಂಡೀಯ ಸಣಬುನಾರಿನ ಕೈಗಾರಿಕೆಯವರು, ನಮ್ಮಲ್ಲಿಂದಲೇ ನಾರನ್ನು ಪಡೆದು ನಮಗೆ ಬಟ್ಟೆ ನೇದುಕೊಡುವವರಾದರೂ ಇಲ್ಲಿ ನಾರು ನೇಯುವ ಕಾರ್ಖಾನೆಗಳಲ್ಲಿ ಧಾರಾಳ ಕೈಗಾರಿಕೆ ನಡೆವುದನ್ನು ತಿಳಿದು ಕರ್ಕಶವಾಗಿ ಕೂಗಿಟ್ಟರ ಈಗ ಚರ್ಮದ ಕೈಗಾರಿಕೆಯ ನೊಟಿಂಗ್ಹ್ಯಾಮ್! ಭಾರತೀಯರ ರಪ್ಪುಗಳು ಕೆಲವೇ ವರ್ಷಗಳಲ್ಲಿ ನಾಲ್ಕು ಮಿಲ್ಲಿಯ ಪವನು ಹೆಚ್ಚುಗುತ್ತ ಬಂದಿವೆ ಹೀಗಾಗಿ, ಚರ್ಮದ ವ್ಯಾಪಾರವೂ ಹೆಚ್ಚಿದ ಇದರಿಂದ ನೊಟಿಂಗ್ಹ್ಯಾಮಿನಿಂದ ಅವರ ತರಿಸಿಕೊಳ್ಳುವ ಸರಕು ಕಡಿಮೆಯಾಗಿದೆ ಅಲ್ಲಿನ ಕೂಲಿ ಕಡಿಮೆ ಹೀಗಾಗಿ [illegible] ಆಗವಂಗಿದೆ ಎಂದು [illegible], [illegible] ಸಾಮ್ರಾಜ್ಯದ ಇತರ ಭಾಗಗಳಲ್ಲಿ ಕೈಗಾರಿಕೆ ತಾವು ಸ್ಪರ್ಧೆಗೆ ನಿಲುವ ಹಾಗಿಲ್ಲದುದನ್ನು [illegible] ಕೊಂಡು, ಅಗ್ಗದ ಕೈಗಾರಿಕೆಗೆ [illegible] ಸುವ ಪ್ರಯತ್ನವಾಗ ಬಂತೆ ಸೂಚಿಸುತ್ತಿವೆ ಅಂತೂ, ಶಾಂತವೃತ್ತಿಯಿಂದ ಒದ ಕಲಾರದ ಬ್ರಿಟಿಷ ಕೈಗಾರಿಕೆಗಳು ಇಂಡಿಯಾ ಸ್ವೇಶದ ಬಡೆದು ಇಲ್ಲಿ ಪ ಜೀವ ಹೀರಿಕೊಳ್ಳಬೇಕೆಂದು ಲವಲವಿಸುತ್ತಿರುವುದೇಕೋ ತಿಳಿಯದು

ಅಂದಮಾನದಲ್ಲಿನ ಉಪವಾಸಿಗಳು

[illegible]ಲ್ಲಿ ಎಂಟು ಮಂದಿ ವಿನಹ ಉಳಿದವರೆಲ್ಲರ ಉಪವಾಸ ತ್ಯಜಿಸಿದರೆಂದು ತಾ ೨೯ರಲ್ಲಿ ತಿಳಿದು, ಬಂಗಾಳವೂ ಇತರ ಪ್ರಾಂತ್ಯಗಳೂ ತೃಪ್ತಿಹೊಂದಿವೆ, ಬಂಗಾಳ ಸರಕಾರವು ತುಂಬ ತಲಣದಿಂದ ವ್ಯಕ್ತವಾಗಿದೆ ಎಂದೂ ಸೂಚಿಸಲಾಗಿದೆ ಆದರೆ, ಹಾಗೆ ಉಪವಾಸ ತ್ಯಜಿಸಿದ ಬಳಿಕವೇ ಅವರನ್ನು ಪುನಃ ಸ್ವದೇಶಕ್ಕೆ ತರಲಾಗುವ ವಿಷಯ ಆಲೋಚಿಸಲಿಂದೀತೆಂದು ಬಂಗಾಳ ಸರಕಾರವು ಎದಿದ್ದಿತ ಬಂಗಾಳ ಸರಕಾರದ ಮಾತಿಗೆ ತಾವು ಅಡ್ಡ ಬರುವುದಿಲ್ಲ ಎಂದು ಇಂಡಿಯಾ ಸರಕಾರದ ಮಂತ್ರಿ ಮುಂದಿಯವರೂ ತಿಳಿಸಿದ್ದರು ಈಗ ಅವರನ್ನು ಪುನಃ ತರುವುದೇ, ಬೇಡವೇ, ಎಂಬ ವಿಷಯ ಪರ್ಯಾಲೋಚಿಸುವುದಕ್ಕೆ ಒಂದು ಕಮಿಟಿಯನ್ನು ನೇಮಿಸುವುದೆಂದು ಬಂಗಾಳದ ಮಂತ್ರಿಗಳ ಮಾತು ಹೊರಟಿದೆ ಈ ವಾಗವೇ ಬೇರೆ ಪ್ರಾಂತಿಕ ಸರಕಾರಗಳು ತಮ್ಮ ನಾಡಿಗೆ ಸಂಬಂಧವುಳ್ಳ ಈ ಬಂದಿವಾನ ಉಪವಾಸಿಗಳನ್ನು ತಮಗೆ ಒಪ್ಪಿಸಿಕೊಡಬೇಕೆಂದು ಇಂಡಿಯಾ ಸರಕಾರಕ್ಕೆ ಮೊದಲೇ ಬಿನ್ನವಿಸಿಕೊಂಡಿವೆ ಇಂಡಿಯಾ ಸರಕಾರದ ಉತ್ತರವು ಸಮಾಧಾನಕರವಾಗಿ ಇನ್ನೂ ಬಂದಿಲ್ಲ ಉಪವಾಸಿಗಳನ್ನು ಇತ್ತ ಮರಳಿ ತರುವುದಕ್ಕೆ ಇಷ್ಟಿಷ್ಟು ಕಾಲವು ಬೇಕೆಂಬುದೂ ನಿಜವೇ ಆದರೂ, ಅವರನ್ನು ತರಬೇಕೇ ಬೇಡವೇ ಎಂಬುದ ಕ್ಕೆಂದು ಕಮಿಟಿಯೂ ಅದರ ಇತ್ಯರ್ಥವೂ ಬೇಕೆ? ಕಮಿಟಿ ಸೇರಲಿ, ಇನ್ನೇನಿದೆಯೋ ಅದಾಗಲಿ ಆದರೆ, ಇನ್ನೂ ಅಂದಮಾನದಲ್ಲಿ ಈ ಕೈದಿಗಳನ್ನು ಇರಿಸುವುದೂ, ಇನ್ನು ಇತರ ಕೈದಿಗಳನ್ನು ಅಂದಮಾನಕ್ಕೆ ಕಳುಹುವುದೂ ಬಂಗಾಳ ಸರಕಾರಕ್ಕೆ ಧರ್ಮವೂ ಅಲ್ಲ, ನ್ಯಾಯವೂ ಎನಿಸದು ಇದಕ್ಕೆ ತಪ್ಪಿ ಆ ಸರಕಾರವು ನಡೆದರೆ, ಅಂತಹ ಕೈದಿಗಳನ್ನು ಕಾಯುವ ಕೆಲಸವನ್ನು ಇಂಡಿಯಾ ಸರಕಾರವು ಒಪ್ಪಿಕೊಳ್ಳುವುದೂ ಚಂದವಲ್ಲ.

ಸೆಕೆಂಡರಿ ಶಾಲೆಗಳಲ್ಲಿ

ಹೈಸ್ಕೂಲ್ ತರಗತಿಗಳಲ್ಲಿನ ಶಿಕ್ಷಣವೆಲ್ಲ ಇತರ ಶಾಲೆಗಳ ಮಟ್ಟಿಗೆ ಕನ್ನಡವೋ ಅಥವಾ ಮುಸ್ಲಿಮರಿಗಾದರೆ ಉರ್ದುವೋ ಆಗಬೇಕೆಂದು ಮೈಸೂರು ಸರಕಾರವು ನಿರ್ಧರಿಸಿ ಕೆಲವು ವರ್ಷಗಳಾದುವು. ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶಗಳ ಮೇಲೆ ಯೂನಿವರ್ಸಿಟಿಗಳ ನಿಗಾ ಬಂದಿದೆಯಷ್ಟೆ ಅದಕ್ಕಾಗಿ ಯುನಿವರ್ಸಿಟಿಯ ಅಧಿಕಾರಿಗಳು ದೇಶಭಾಷೆಯ ಮೂಲಕ ಸೆಕೆಂಡರಿ ಶಿಕ್ಷಣ ಕೊಟ್ಟಿರುವುದನ್ನು ಕುರಿತಾಗಿ ವಿಮರ್ಶಿಸಬೇಕಾಯಿತು ವಿದ್ಯಾಂಗದ ಡೈರೆಕ್ಟರರೇ ಇದಕ್ಕಾಗಿ ಎಲ್ಲ ವಿಮರ್ಶೆಯನ್ನು ಬರೆದು ಒಪ್ಪಿಸಿದ್ದರು ಇತಿಹಾಸ, ಭೂಗೋಲ, ನಾಗರಿಕ ಧರ್ಮ, ಗಣಿತ ಇವಿಷ್ಟನ್ನೂ ವಿಜ್ಞಾನವನ್ನೂ ಕನ್ನಡದ ಮೂಲಕವೇ ಕಲಿತು ಪರೀಕ್ಷೆಕೊಟ್ಟ ವಿದ್ಯಾರ್ಥಿಗಳ ಫಲಿತಾಂಶಗಳು ಉತ್ತಮವಾಗಿದ್ದುವೆಂದು ಅವರು ಅಂಕೆಸಂಖ್ಯೆಗಳಿಂದ ರುಜುಪಡಿಸಿದ್ದರು ಅನ್ಯಭಾಷೆಯ ಮೂಲಕ ವಿಷಯ ಜ್ಞಾನವನ್ನು ಮಾಡುವುದು ಕಠಿನವೆಂದು ತಿಳಿದೇ ಇದ್ದರೂ, ಲೋಕರೂಢಿಯ ಸಲುವಾಗಿ, ವಿಶ್ವಾಸವನ್ನು ಹುಟ್ಟಿಸಲು ಈ ವರದಿ ಬೇಕಾಯಿತು [illegible] ಇವರೇ ವಿದ್ಯಾರ್ಥಿಗಳು ಎಲ್ಲ ವಿಷಯಗಳನ್ನು ಕನ್ನಡದಲ್ಲಿ ಕಲಿತ [illegible] ಇಂಗ್ಲಿಷ ಭಾಷೆಯಲ್ಲಿ ಇತರ ಜ್ಞಾನವೇನ [illegible] ಒಳ್ಳೆ ಮಾರ್ಕುಗಳನ್ನು [illegible] ಪಡೆದಿದ್ದರೆಂದು ವಿಶದವಾಗಿದೆ ಇನ್ನು ದೇಶಭಾಷೆಯಲ್ಲೇ ಯಾವತ್ತು ಶಿಕ್ಷಣ [illegible] ಆತಂಕವೆಂದರೆ, ಅದನ್ನು [illegible] ರದ ಶಿಕ್ಷಕರೇ [illegible] ವಿದ್ಯಾರ್ಥಿಗಳು ಅಲ್ಲ ಪರೀಕ್ಷಕರೂ [illegible] ಶಾಸ್ತ್ರವು ಅಲ್ಲ'

ಶಿಕ್ಷಣ ಸುಧಾರಣೆ

[illegible] ಶ್ರೀ। [illegible] ವಿದ್ಯಾ [illegible] ಶಾಲೆಗಳನ್ನು [illegible] ಸರಕಾರವು [illegible] ಸಂಪೂರ್ಣತೆಗೆ [illegible] ಸರಕಾರದ ಉದ್ದೇಶವಾಗಿ [illegible] ವಿದ್ಯಾರ್ಥಿಗಳನ್ನು [illegible] ಶಿಕ್ಷಣವು [illegible] ಆದರೆ ಎಲ್ಲ ಶಿಕ್ಷಣವೂ ದಿನಗಳ್ಲ [illegible] ಕಾರಣ, ಉಪಾಧ್ಯಾಯರು [illegible] ಉಪಾಧ್ಯಾಯ [illegible] ಗಳಂತೆ [illegible] ಮಾಡಿ ಕೆಲಸ ನಡೆಸ [illegible] ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲ್‌ಗಳನ್ನು [illegible] ಅವುಗಳ ಬದಲಾಗಿ ಪ್ರತ್ಯೇಕವಾದೊಂದು ಕಮಿಟಿಯನ್ನು ಸ್ವತಂತ್ರವಾಗಿ ಜಿಲ್ಲಾ ಬೋರ್ಡಿಗೆ [illegible] ಕಮಿಟಿಗಳ [illegible] ಸಿಬ್ಬಂದಿ ಇಡುವ ಬದಲು ಇವನ್ನು ಜಿಲ್ಲಾ ಬೋರ್ಡಿಗೇ [illegible] ಕಾಂಗ್ರೆಸ್ [illegible] ಅದಕ್ಕೆ ಒಬ್ಬೊಬ್ಬ [illegible] ಕಾರ್ಯದರ್ಶಿಯನ್ನಾಗಿ ನೇಮಿಸಬೇಕೆಂದೂ, ಈ ಕಮಿಟಿಗಳು ಆಯಾ ಗ್ರಾಮದಲ್ಲಿ ವಿದ್ಯಾಭಿವೃದ್ಧಿಯನ್ನು [illegible] ವಹಿಸಿಕೊಳ್ಳುವಂತಾಗಬೇಕೆಂದೂ ಸಹ ಆಲೋಚನೆ ಇದೆ ಬೇರೆ ಕೈಗಾರಿಕೆ ಶಾಲೆಗಳ ಇರವೇಕೋ, ಅಥವಾ ಎಲ್ಲ ಶಾಲೆಗಳಲಿ ಕೈಗಾರಿಕೆ ಶಿಕ್ಷಣವಾಗತಕ್ಕದೋ ಎಂಬುದು ಅಷ್ಟು ನಿಷ್ಕರ್ಷೆಯಾಗಲಿಲ್ಲ ಹಿಂದೀಯನ್ನಂತೂ, ಮೊದಲನೆ ಮೂರು ಫೋರ್ಮುಗಳಲ್ಲಿ ಕಡ್ಡಾಯವಾಗಿ ಕಲಿಸುವಂತಾಗಬೇಕೆಂದೂ, ಅದು ಕಾಂಗ್ರೆಸಿನ ಭಾಷೆಯೆಂದಲ್ಲ, ರಾಷ್ಟ್ರದ ಭಾಷೆಯೆಂದೇ ಅದರ ಪ್ರಚಾರಕ್ಕಾಗಿ ಪ್ರಯತ್ನಿಸಬೇಕೆಂದೂ ನಿರ್ಧಾರ ಇತಿಹಾಸ, ಭೂಗೋಲ, ವಿಜ್ಞಾನ ಪಾಠಗಳಿಂದ ಕೆಲವಂಶವನ್ನು ಹೊರಗಿಕ್ಕಿ, ಹಿಂದೀ ಕಲಿಸಲು ಸಮಯ ಕೊಡಲಾಗುವುದೆಂದೂ ಸೂಚಿತವಾಗಿದೆ.

ಹಿಂದೂದೇಶ.

ಪೆಲೆಸ್ತೀನದಲ್ಲಿ ಪುನಃ ಚಿಲ್ಲರೆ ಖೂನಿಗಳಾಗುತ್ತಲೇ ಇವೆ. ಯೆಹೂದಿ ಕೂಲಿಗಳನ್ನು ದಾರಿಯಲ್ಲಿ ಹೊಂಚು ಹಾಕಿ ಇಬ್ಬರನ್ನು ಕೊಂದರು. ಅರಬಿಯನನೊಬ್ಬನು ತನ್ನ ಮನೆಗೇ ಹೋಗುತ್ತಾ ಗುಂಡೇಟು ತಗಲಿ ಸತ್ತನು. ಇನ್ನಿಬ್ಬರು ಅರಬರೂ ಗುಂಡಿಗೆ ಆಹುತಿಯಾದರು. ಹೀಗೆ ಪೆಲೆಸ್ತೀನದಲ್ಲಿ ಇನ್ನೂ ಪ್ರಜಾಕ್ಷೋಭೆ ನಿಂತಿಲ್ಲ. ಮದ್ರಾಸಿನಲ್ಲೂ ಹಾಗೆಯೇ. ಪುನಃ ಒಬ್ಬರಿಬ್ಬರನ್ನು ಆಗಾಗ ಕೊಲ್ಲುವ ಕ್ರಮವುಂಟಾದ ಕಾರಣ, ಪೋಲೀಸ್ ಕಮಿಶನರು ಮದ್ರಾಸಿನ ಭಾಗದಲ್ಲಿ ಕಠಿನ ಶಿಸ್ತನ್ನು ಜ್ಯಾರಿಗೆ ತಂದಿರುವರು. ಎಷ್ಟೆಂದರೂ ಆಗಾಗ ಸಾಮಾಜಿಕ ಕಲಹಗಳನ್ನು ಉದ್ರೇಕಗೊಳಿಸುವ ಕೆಲ ತಂಡಗಳು ಇನ್ನೂ ತಲೆಯೆತ್ತಿವೆ. ಅದೇ ಕಾರಣ,—ಶಾಂತಿ ಇಲ್ಲ.

ಬಂಗಾಳದ ಜೈಲುಗಳಲ್ಲಿನ ಕೈದಿಗಳು ಅಲ್ಲಿನ ಅವ್ಯವಸ್ಥೆಯ ಕ್ರಮದಿಂದ ರೋಗಿಗಳಾಗಿ ಬಿಡುತ್ತಾರೆಂದು ಒಂದು ಟೀಕೆಯು ಅಲ್ಲಿನ ಎಸೆಂಬ್ಲಿಯಲ್ಲಿ ಉಂಟಾದಾಗ ಮಂತ್ರಿಗಳು,—ಕೈದಿಗಳು ಇತರ ಜನರಿಗಿಂತ ಆರೋಗ್ಯಶಾಲಿಗಳಾಗಿರುವರು. ಅವರಲ್ಲಿ ಸೇಕಡಾ ಅರ್ಧದಷ್ಟು ದೇಹದ ತೂಕ ಹೆಚ್ಚಾಗಿದೆ ಎಂದರು. "ಹಾಗಾದರೆ ನೀವು ಮುಂದಾಗಿ ನಾವೆಲ್ಲರೂ ಜೈಲು ಸೇರಿ ತೂಕ ಹೆಚ್ಚಿಸಿಕೊಂಡರಾಗದೆ?" ಎಂದು ಸದಸ್ಯರೊಬ್ಬರು ಕೇಳಿದರು. "ನಾನು ದೇಹ ತೂಕ ಇಳಿಸಬೇಕೆಂದಿದ್ದೇನಲ್ಲ" ಎಂದರು ಮಂತ್ರಿಗಳು.

ವೈಸ್ರಾಯರು ಸಧ್ಯದಲ್ಲಿ ಲಾಹೋರಿಗೆ ಹೋಗಲಿರುವರು. ಅಮೃತಸರದಲ್ಲಿ ಹಿಂದುಗಳು ಒಂದುವರೆ ಮೈಲು ಉದ್ದದ ಒಂದು ಮೆರವಣಿಗೆ ಹಿಡಿದು ನಡೆದು ಸಭೆ ಸೇರಿ, ಎಂದಿನ ವರೆಗೆ ಗೋಹತ್ಯೆಗಾಗಿ ಅಷ್ಟು ಪ್ರಯಾಸ ನಡೆಯುತ್ತದೆಯೋ (ಅಂದರೆ ಈಗ ಹೊಸ ತೊಂದು ಕಸಾಯಿಕೋಣೆ ಕಟ್ಟಿಸುವರಂತೆ) ಅದುವರೆಗೆ ಇಂತಹ ಹಿಂಸೆಯನ್ನು ತಡೆವ ಹಾಗೆ, ವೈಸ್ರಾಯರ ಈ ಸಂದರ್ಶನಾದಿಗಳನ್ನು ಬಹಿಷ್ಕರಿಸಬೇಕಾಗಿ ನಿರ್ಧಾರ ಮಾಡಿದರು.

ಇಂಡಿಯಾ ಸರಕಾರವು ಫೆಡರೇಶನ್ ಸಲುವಾಗಿ ಗೋಪನವಾಗಿ ಸ್ಥಳೀಯ ರಾಜರುಗಳೊಡನೆ ಪರಾಮರ್ಶೆ ನಡೆಸುತ್ತಲಿದ್ದರೂ, ಅವರು ಪಡುವ ಅಭಿಪ್ರಾಯಗಳನ್ನು ಈಗ ಹೊರಗೆಡಹುವದಿಲ್ಲವಾಗಿ ಎಸೆಂಬ್ಲಿಯಲ್ಲಿ ತಿಳಿಸಲಾಗಿದೆ.

ಅಂಡಮಾನಿನ ಕೈದಿಗಳಲ್ಲಿ ಇನ್ನು ಬರೇ ೮ ಮಂದಿ ಮಾತ್ರ ಉಪವಾಸ ಹಿಡಿದಿರುವರೇ ಹೊರತು, ಇತರರು ಪುನಃ ಆಹಾರ ತೆಗೆದುಕೊಳ್ಳುತ್ತಿದ್ದಾರೆ. ಈಗ ಸರಕಾರವು ಹಾಗಿದ್ದಾನಂತೆ, ಅವರನ್ನು ಬಿಡುವರೆ ಸಿದ್ಧನಾಗಬೇಕು. ಇತರ ಕ್ರಾಂತಿಕಾರೀ ಕೈದಿಗಳು ಸಹ ಈಗ ಜೈಲಿನಿಂದ ಹೊರಬಂದುದೇ ಇನ್ನು ತಾವು ಕೊಂಗ್ರೆಸಿನೊಡನೆ ಸೇರಿ ಶಾಂತರೀತಿಯ ಚಳವಳಗಳಲ್ಲಿ ಭಾಗವಹಿಸುವೆವು ಎನ್ನುತ್ತಾರೆ. ಹೀಗಿರುವಾಗ, ಅಂಡಮಾನದ ಕೈದಿಗಳನ್ನು ಇನ್ನೂ ಸ್ವದೇಶಕ್ಕೆ ಕರೆಸಿ ಹಿಂತೆಗೆಯಬಾರದು, ಅಲ್ಲಿಗೆ ಇನ್ನು ಕೈದಿಗಳನ್ನು ಕಳಿಸಲಾಗದು ಎಂದು ಬಂಗಾಳದ ಎಸೆಂಬ್ಲಿಯಲ್ಲಿ ಒತ್ತಾಸೆಗಳಾಗುತ್ತಿವೆ.

ಶ್ರೀ ಎಚ್. ಸಿ. ರಾಜಾರವರು ಐದೇ ವರ್ಷಗಳಲ್ಲಿ ಇಡೀ ಸಂಸ್ಥಾನಗಳಲ್ಲಿ ಮದ್ಯಪಾನ ನಿವಾರಣೆ ಮಾಡುವುದಕ್ಕಾಗಿ ಒಂದು ಮಸೂದೆಯನ್ನು ಈಗ ಚರ್ಚೆಗೆ ತರಲಿರುವರು.

ಮದ್ರಾಸು ಸರಕಾರವು ಗ್ರಾಮಹಿತ ಸಾಧನೆಗೋಸ್ಕರವಾಗಿ ವಿನಿಯೋಗ ಮಾಡಬೇಕೆಂದಿರುವ ರೂ. ೧೫ ಕೋಟಿಯ ಸಾಲವು ಮೂರು ತಾಸುಗಳೊಳಗೆಲ್ಲ ಬಂದಾಯಲಾಗಿದೆ.

ಕೆಟ್ಟಿಪ್ಪದಲ್ಲಿ ಸರಕಾರದ ಇವನಾರತಿ ಇಲಾಖಾ ಆಫೀಸಿನಲ್ಲಿ ಬೆಂಕಿ ಹಬ್ಬಿತು. ಎಲ್ಲ ರೆಕಾರ್ಡುಗಳೂ ನಷ್ಟವಾದುವು. ೫೦೦೦ ರೂಪಾಯಿಯ ಸೊತ್ತು ನಷ್ಟವಾಯಿತು. ಲೆಕ್ಕಪತ್ರದ ರೆಕಾರ್ಡೆಲ್ಲ ಸುಟ್ಟುಹೋಯಿತು. ಹೇಗೆ ಬೆಂಕಿ ಹತ್ತಿತೆಂದು ತಿಳಿದಿಲ್ಲ.

ಖಾನ್ ಬಹದ್ದೂರ್ ಅಬ್ದುಲ್ ಗಫರ್ ಖಾನರು "ವಾಯುವ್ಯ ಪ್ರಾಂತ್ಯದಲ್ಲೂ ಕೊಂಗ್ರೆಸ್ ಮಂತ್ರಿಗಳೇ ಕೆಲಸಕ್ಕೆ ಕೈಹಚ್ಚುವ ಸಂದರ್ಭವಿದೆ. ಹಸಿವು, ಅಜ್ಞಾನ, ರೋಗರುಜಿನಗಳು, ಅಲ್ಪಸಂಪನ್ನತೆ, ಇಂಥ ಇದನ್ನು ನಿವಾರಿಸುವುದಕ್ಕೆ ಇಲ್ಲಿನ ಕೊಂಗ್ರೆಸ್ ಸರಕಾರವು ಅಗತ್ಯವಾಗಿಯೂ ಇತರ ಪ್ರಾಂತ್ಯಗಳಿಗೆ ಮಾದರಿಯಾಗುವ ರೀತಿಯಲ್ಲಿ ಪ್ರಯತ್ನಿಸುವುದು" ಎಂದರು.

ಮದ್ರಾಸು ಕೊರ್ಪರೇಶನಿನ ಬೋಯ್ ಸ್ಕೌಟು ದಳವನ್ನು ಸೇವಾಸಮಿತಿದಳಕ್ಕೆ ಸೇರಿಸುವರೆ ನಿಶ್ಚಯವಾಗಿದೆ.

ಮೌಲಾನಾ ಶೌಕತ್ ಅಲಿಯವರಿಗೆ ಅವರು ದೇಶಹಿತಕ್ಕಾಗಿ ಮಾಡಿರುವ ಉದ್ಯಮ ಸೇವೆಗಳನ್ನು ಶ್ಲಾಘಿಸಿ, ಹೈದ್ರಾಬಾದಿನ ನಿಜಾಮರು ಮಾಸಿಕವಾಗಿ ರೂ. ೩೦೦ರಂತೆ ಪೆನ್ಶನನ್ನು ಇನ್ನು ೧೫ ವರ್ಷಗಳ ತನಕ ಕೊಡಿಸುವುದುಮಾಡಿರುವರು.

ಗಾಂಧೀಜಿಯವರು ವೈಸ್ರಾಯರ ಮುಖಾಂತರವಾಗಿ ಅಂಡಮಾನ ಕೈದಿಗಳಿಗೆ ಉಪವಾಸ ತ್ಯಜಿಸಿ, ಜನತೆಯ ಮೇಲೆ ಅವರ ಕಷ್ಟನಿವಾರಣಾ ಕಾರ್ಯ ಹೊರಿಸಿರೆಂದು ಕಳುಹಿದ ಸಂದೇಶದಂತೆ, ಕೈದಿಗಳು ಉಪವಾಸವನ್ನು ತ್ಯಜಿಸಿದ ಹಾಗೂ, ಕ್ರಾಂತಿಕಾರರೆಂಬವರು ಇನ್ನು ಯಥಾರ್ಥವಾಗಿ ಹಾಗೆ ಮಾಡದೆ, ದೇಶೋದ್ಧಾರಕ್ಕಾಗಿ ಶಾಂತರೀತಿಯಿಂದ ವರ್ತಿಸುತ್ತೇವೆಂದು ಮಹಾತ್ಮಾಜಿಯವರಿಗೆ ಅಂಡಮಾನದಿಂದ ಬರೆದ ಹಾಗೂ ತಿಳಿದು ಬಂದಿದೆ ಮಾತ್ರವಲ್ಲ, ಈ ಪತ್ರವ್ಯವಹಾರವೆಲ್ಲ ಪ್ರಕಟವಾಗಿದೆ. ಮಹಾತ್ಮಾಜಿಯವರು ಕ್ರಾಂತಿಕಾರರ ಬಾಯಿಯಿಂದಲೇ ಅವರ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಿ, ಅವರಿಂದಲೇ ಶಾಂತಿ ಸಂಧಾನಗಳನ್ನು ಮಾಡುವ ಯುಕ್ತಿಯು ಬಹಳ ಗೌರವಯುಕ್ತವಾಗಿದೆ. ಇನ್ನು ಈ ತಿಂಗಳಲ್ಲೇ ಕೆಲ ದಿನಗಳೊಳಗೆ ೧೬ ಮಂದಿಗಳೊಳಗೆ ದೂರದೇಶಗಳ ಕೈದಿನಲ್ಲಿ ವಿಚಾರಣೆಯಿಲ್ಲದೆ ಇರುವ ಕೈದಿಗಳನ್ನು ಬಂಗಾಳ ಸರಕಾರವು ಬಂಗಾಳಕ್ಕೇ ತರಿಸಿಕೊಳ್ಳುವುದು. ಅಂಡಮಾನದಿಂದಲೂ ಸಮಸ್ತ ಕೈದಿಗಳನ್ನೂ ಸದ್ಯದಲ್ಲೇ ಬಿಡುಗಡೆಮಾಡಲು ವಿಮರ್ಶೆಗಳೂ ನಡೆಯುತ್ತವೆ.

ವಾಯುವ್ಯ ಪ್ರಾಂತ್ಯದ ಕೌನ್ಸಿಲಿನಲ್ಲಿರುವ ಇಂಡಿಪೆಂಡೆಂಟ್ ಪಕ್ಷವು ಕೊಂಗ್ರೆಸಿನೊಡನೆ ಸೇರಿಯೆ ಕೆಲಸ ಮಾಡುವುದಾಗಿ ಭರವಸೆ ಕೊಟ್ಟಿದೆ. ಇನ್ನು ಆ ಪ್ರಾಂತ್ಯದ ಸರಕಾರವೂ ಕೊಂಗ್ರೆಸ್ ಮಂತ್ರಿಗಳ ಅಧಿಕಾರಕ್ಕೆ ಬರಬಹುದು. ಅಬ್ದುಲ್ ಗಫರ್ ಖಾನರು ಈಗಲೆ ಗವರ್ನರರವರನ್ನು ಕಂಡು ಸಂಭಾಷಣೆ ಮಾಡಿರುವರು. ಇದರ ಫಲ ಪರಿಣಾಮಗಳನ್ನು ಸದ್ಯದಲ್ಲೇ ತಿಳಿದುಕೊಳ್ಳುವಂತಾಗುವುದು.

ಮದ್ರಾಸು ಸರಕಾರವು ೧೫ ಕೋಟಿ ರೂಪಾಯಿ ಸಾಲ ಎತ್ತುವುದಾಗಿ ಪ್ರಕಟಿಸಿದ್ದುದೇ ತಡ ಸಾಲ ಕೊಡಲು ಸಿದ್ಧವಾಗಿ ಬಂದವರಲ್ಲಿ ಸೇಕಡಾ ೨೫ರಂತೆ ಮಾತ್ರದವರ ಮೊಬಲಗು ಕೂಡಿಸಿದ್ದಲ್ಲಿ ಅದು ೧೫ ಕೋಟಿ ರೂಪಾಯಿಯಾಯಿತು. ಮದ್ರಾಸು ಸಂಸ್ಥಾನದ ಆರ್ಥಿಕ ಸ್ಥಿತಿಯೂ ಈಗಣ ಮಂತ್ರಿಗಳಲ್ಲಿ ವಿಶ್ವಾಸವೂ ಎಷ್ಟು ಚೆನ್ನಾಗಿ ಉತ್ತಮವಿದೆ ಎಂದು ಇದರಿಂದ ಸ್ಪಷ್ಟವಾದೀತು. ಅಷ್ಟು ಹಣವೂ ಮೂರೇ ತಾಸುಗಳಲ್ಲಿ ಜಮೆಯಾಯಿತು.

ಧ್ರೋಲ ಸಂಸ್ಥಾನದ ಠಾಕೋರ ಸಾಹೇಬರು ವಯಸ್ಸಾಗಿರುವ ಕಾರಣ, ತಮ್ಮ ಗಾದಿಯನ್ನು ಹಿರಿಯ ಮೊಮ್ಮಗನಿಗೆ ಒಪ್ಪಿಸುವರೆ ವೈಸ್ರಾಯರ ಅಪ್ಪಣೆ ಕೇಳಿರುವರು. ಈ ರಾಜ್ಯವು ೨೮೩ ಮೈಲು ವಿಸ್ತಾರವುಳ್ಳದ್ದಾಗಿ, ೨೪೦೦೦ ಜನಸಂಖ್ಯೆಯಿಂದ ಕೂಡಿದ್ದು, ಮೂರು ಲಕ್ಷ ರೂಪಾಯಿ ಉತ್ಪನ್ನವುಳ್ಳದ್ದು.

ಮದ್ರಾಸು ಕೋರ್ಪರೇಶನಿನ ಪ್ರಾಥಮಿಕ ಶಾಲೆಗಳಲ್ಲೆಲ್ಲಾ ಹಿಂದೀ ಕಲಿಸುವ ಏರ್ಪಾಡಾಗಿದ್ದು, ಸಂತೋಷಕ್ಕೆ ಕಾರಣವಾಗಿದೆ.

ನಾಸಿಕ ಕೊಂಗ್ರೆಸ ಅಧಿವೇಶನಕ್ಕೆ ಅಧ್ಯಕ್ಷರಾಗಲು, ಮಹಾತ್ಮಾಜಿಯವರೂ ಜವಾಹರಲಾಲರೂ ಶ್ರೀ ಸುಭಾಷಚಂದ್ರಬೋಸರೇ ಅಧ್ಯಕ್ಷಸ್ಥಾನವನ್ನು ವಹಿಸಬೇಕಾಗಿ ಕೋರಿ ಪತ್ರ ಬರೆದಿರುವರಾಗಿ ವಾರ್ತೆ ಪ್ರಕಟವಾಗಿದೆ.

ಜಪಾನ್ ಚೀನವನ್ನು ನುಗ್ಗುತ್ತಿದೆಯಲ್ಲದೆ, ಅಲ್ಲಿಂದ ದಕ್ಷಿಣ ಚೀನವನ್ನೂ ಗೆದ್ದು, ಮುಂದ ಭಾರತವರ್ಷದೊಳಗೂ ಕಾಲಿಡುವ ಸೂಚನೆ ಕೊಟ್ಟಿರುವ ಕಾರಣ, ಚೀನದ ಕಡೆಗೆ ಭಾರತೀಯರು ಒಲಿಯಬೇಕೆಂದು ಚೀನದ ವಾರ್ತಾ ಪತ್ರಗಳು ಇಲ್ಲಿನ ಪತ್ರಿಕೆಗಳಿಗೆ ತಿಳಿಸಿವೆ. ಎಸೆಂಬ್ಲಿಯಲ್ಲೂ ಈ ವಿಷಯ ಪ್ರಶ್ನೆಗಳಾಗಿವೆ.

ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತ್ಯವಾಗಬೇಕೆಂದು, ಬಳ್ಳಾರಿ ಕರ್ನಾಟಕ ಸಂಘದಲ್ಲಿ ಶ್ರೀ ರೇವಣಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ನಿರ್ಣಯವಾಯಿತು. ಶ್ರೀ ರಾಮರಾಯರು ಮದ್ರಾಸಿನಲ್ಲಿ ಇದಕ್ಕಾಗಿ ನಡೆಸುವ ಚಳವಳವು ಜಯವಾಗಲೆಂದೂ ಮನ್ನಿಸಲಾಯಿತು.

ವಜೀರಸ್ಥಾನದಲ್ಲಾಗುವ ಕದನದಲ್ಲಿ ಇಬ್ಬರು ಆಫೀಸರರು ಮಡಿದಿರುವರು, ಎಂಟು ಜನರಿಗೆ ಗಾಯವಾಗಿದೆ.

ಕೈಮಗ್ಗದ ನೂಲಿನ ಉದ್ಯಮವನ್ನು ಹೆಚ್ಚಿಸುವದಕ್ಕಾಗಿ ಈ ವರ್ಷ ಸರಕಾರವು ಎರಡು ಲಕ್ಷ ರೂಪಾಯಿಗಳನ್ನು ಸಹಾಯವೀಯುವುದು.

ನಮ್ಮ ಸಂಸ್ಥಾನದಲ್ಲಿರುವ ಮ್ಯುನಿಸಿಪಲ್ ಕಮಿಶನರರುಗಳಲ್ಲಿ (೮೨ ಮಂದಿ) ಬರೇ ಇಬ್ಬರು ಮಾತ್ರ ಮುಸ್ಲಿಮರು ಎಂಬ ಆಕ್ಷೇಪವನ್ನು ಎಸೆಂಬ್ಲಿಯಲ್ಲಿ ಸೂಚಿಸಲು, ಆ ವಿಷಯವು ಸರಕಾರವು ವಿಚಾರ ಮಾಡುವದಂತೆ ಬೇರೊಂದು ಸೂಚನೆಯನ್ನು ಕರೆದೇಕೆಂದು ಮುಖ್ಯ ಮಂತ್ರಿಗಳು ಎಂದರು. ಡೆಪ್ಯುಟಿ ಕಲೆಕ್ಟರರ ಹುದ್ದೆಗಳನ್ನು ವಜಾ ಮಾಡುವ ಮತ್ತು ಜಾತಿಯನ್ವಯ ನೇಮಕ ಮಾಡುವ ಕ್ರಮಗಳನ್ನು ಜಾರಿಮಾಡುವ ಯಾವ ಯೋಚನೆಯೂ ಸದ್ಯಕ್ಕೆ ಸರಕಾರಕ್ಕಿಲ್ಲವೆಂದೂ ತಿಳಿಸಲಾಗಿದೆ.

ಮದ್ರಾಸ್ ಸರಕಾರದ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರ್ಯರು.



ಕಾಫಿ ಬೆಳೆ.

ಈ ವರ್ಷ ಕೊಡಗಿನಲ್ಲಿ ಮಳೆ ಕಡಮೆಯಾಗಿದೆ. ಕಾಫಿ ಮತ್ತು ಬತ್ತ ಎರಡಕ್ಕೂ ಈ ಮಳೆ ಸಾಲದು. ಕಾಫಿ ಬೆಳೆ ಈ ವರ್ಷ ಕಡಮೆಯಾದರೂ, ಬೆಲೆ ಹೆಚ್ಚು ಬಹುದು. ಫಲಿತ್ಯವು ಮಾತ್ರ, ಕಳೆದ ವರ್ಷಕ್ಕಿಂತ ೨೦೦೦ ಮಣ ಹೆಚ್ಚುವುದು ಎಂದು ಅಂದಾಜಿದೆ.

ಸೇಲಂ ಜಿಲ್ಲೆಯಲ್ಲಿ ಮದ್ಯಪಾನ ತ್ಯಾಗ

ಇದರಿಂದ ಸರಕಾರಕ್ಕೆ ೨೬ ಲಕ್ಷ ರೂಪಾಯಿ ನಷ್ಟವಾಗುವುದಾದರೂ ಜನರಿಗೆ ಒಂದು ಕೋಟಿ ರೂಪಾಯಿ ದೊರೆಯುವುದು. ಹೀಗೆ ಎಲ್ಲಾ ಜಿಲ್ಲೆಗಳಲ್ಲಿ ಪ್ರಯತ್ನಿಸಿದರೆ, ಎಷ್ಟು ಸಂಪತ್ತು ಹೆಚ್ಚುವುದೆಂದು ವಿವರಿಸಿ, ಸರಕಾರವು ಖಂಡಿತವಾಗಿಯೂ ಇಡೀ ಸಂಸ್ಥಾನವನ್ನು ಮದ್ಯರಾಕ್ಷಸನ ಹಾವಳಿಯಿಂದ ಬಿಡುಗಡೆಮಾಡುವ ದೀಕ್ಷೆ ಹಿಡಿದಿದೆ ಎಂದು ಮಂತ್ರಿಗಳು ವಿವರಿಸಿರುವರು.

In the High Court of Judicature at BOMBAY.

Ordinary Original Civil Jurisdiction

ಕ್ರಮ ನಂಬ್ರ 288/1932

ಶ್ರೀನಿವಾಸ ಎನ್. ಶಿರಾಲಿ . . . ವಾದಿ

ಜೆಪ್ಪು ಗಣೇಶರಾವ್ ಮತ್ತು ಇತರರು—

ಪ್ರತಿವಾದಿಗಳು.

ಈ ಮೇಲಿನ ಕೋರ್ಟಿನ 1935ರ ಫೆಬ್ರವರಿ ತಾ. 1ರಲ್ಲಿ ನೀಡಲಾದ ಕನ್ಸೆಂಟ ಡಿಕ್ರಿ ಪ್ರಕಾರ ಮತ್ತು ಜಡ್ಜರ ತಾ. 26-6-36, 12-2-37, 20-4-37, 5-7-37 ಗಳಲ್ಲಿ ಕೊಡಲಾದ ಅಪ್ಪಣೆಗಳ ಪ್ರಕಾರ, ಕೋರ್ಟಿನ ಕಮಿಶನರು ಸಪ್ಟಂಬರ ತಾ. 23ನೇ ಹಗಲು ಘಂಟೆ 3-30 (S. T.)ಗೆ ಸರಿಯಾಗಿ, ತಮ್ಮ ಆಫೀಸಿನಲ್ಲಿ ಈ ಕೆಳಗೆ ನಮೂದಿಸಲಾದ ಸ್ಥಿರಾಸ್ತಿಗಳನ್ನು 3 ಲೋಟುಗಳನ್ನಾಗಿ ಮಾಡಿ, ಬಹಿರಂಗವಾಗಿ ಏಲಂ ಮಾಡುವರು.

1ನೇ ಲೋಟು: ಮದ್ರಾಸು ಅಧಿಪತ್ಯ ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳ ತಾಲೂಕು, ಮೂಡಬಿದ್ರಿ ಡಿಸ್ಟ್ರಿಕ್ಟ್ ರೆಜಿಸ್ಟ್ರೇಶನಿನಲ್ಲಿರುವ ಕಾಪರಂಜಿರ ಗ್ರಾಮದಲ್ಲಿರುವ ನಂಬ್ರ 64, ಸರ್ವೆ ನಂಬ್ರ 12, 13, 14, 141, 142ರ ಒಟ್ಟು ವಿಸ್ತೀರ್ಣ 12 ಎಕ್ರೆಗಳು ಮತ್ತು 42 ಸೆಂಟ್ಸು ನೆಲ.

2ನೇ ಲೋಟು: ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಟವನಿನಲ್ಲಿರುವ ನಂಬ್ರ 99, ಹಳೆನಂಬ್ರ P. 374, 89/ABದ ಸರಾಸರಿ 10 ಅಡಿ ತೀರ್ವೆಯ 84 ಸೆಂಟ್ಸುಗಳ ವಿಸ್ತೀರ್ಣದ ಪ್ರದೇಶ.

3ನೇ ಲೋಟು: ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ತಾಲೂಕು ಒಟ್ಟಾಳದಲ್ಲಿರುವ ನಂಬ್ರ 66 (ಹಳೆ ನಂಬ್ರ 80 ಮತ್ತು 47) ಸರ್ವೆ ನಂಬ್ರ 78, 79, 80, 143, 163, 165, 204 ಮತ್ತು 206, ಒಟ್ಟು ವಿಸ್ತೀರ್ಣ 29 ಎಕ್ರೆ 58 ಸೆಂಟ್ಸುಗಳ ಭೂಮಿ. ಭೂಕಂದಾಯ ರೂ. 89-13-0.

ಹೆಚ್ಚಿನ ವಿವರಗಳಿಗೆ ಮತ್ತು ವಿಕ್ರಯದ ಶರತುಗಳಿಗೆ ಮೇಲ್ಕಾಣಿಸಿದ ಕೋರ್ಟಿನ ಕಮಿಶನರರೊಡನೆ ಅರ್ಜಿ ಮಾಡಿಕೊಳ್ಳುವುದು ಯಾ 6-10 Dean Lane, Hamam Street, Fort, Bombayಯಲ್ಲಿರುವ ವಾದಿ ಪ್ರತಿವಾದಿಗಳ ವಕೀಲರಾದ ಫರನ್ನಿ ದಿನ್ನಾಶಾ ಮತ್ತು ನಂದಾಲಾಲ ಇವರ ಆಫೀಸಿಗೆ ಬರೆದು ಕೊಳ್ಳುವುದು.

ಈ ನೋಟೀಸಿನ ತಾ. 29 ಜುಲ್ಯ 1937.

G. R. Khairaz,

Offg. Commissioner.

ಆಶ್ಚರ್ಯಕರ ತರದ ಶ್ವಾಸನೀಯ ಗುಣಕಾರಿ ಔಷಧಿ.

ಈ ವಿಚಿತ್ರ ತರದ ಪೆಪ್ಸ್ ಮಾತ್ರೆಗಳು ಶ್ವಾಸಕೋಶವನ್ನು ಗುಣಪಡಿಸುವ ವಿಶೇಷ ಶಕ್ತಿಯುಳ್ಳ ಪ್ಯಾನ್‌ಸ್ಟ್ಟದ ತಂಪಿನ ಗಾಳಿಯು ನಿಮ್ಮ ಗಂಟಲುಗಳಿಗೆ ಮತ್ತು ಶ್ವಾಸಕೋಶಗಳಿಂದ ತರುವುದು. ಅದು ಬಾಯಿಯಲ್ಲಿ ಕರಗುತ್ತಿರುವಾಗ, ಉಂಟಾಗುವ ಧೂಮದಿಂದ ಗಂಟಲಲ್ಲಿ, ಶ್ವಾಸಕೋಶಗಳಲ್ಲಿ, ಎದೆಯಲ್ಲಿರುವ ರೋಗಾಣುಗಳನ್ನು ನಾಶಪಡಿಸುವುದು. ಶ್ವಾಸಕೋಶದ ಪ್ರಮುಖ್ಯ ಭಾಗಗಳನ್ನು ಸೇರಿ ಬೇಗನೆ ನಿಮ್ಮ ಕೆಮ್ಮು, ಶೀತ, ಮತ್ತು ಬ್ರೊಂಕೈಟಿಸ್ ರೋಗಗಳನ್ನು ಗುಣಪಡಿಸುತ್ತದೆ. ಪೆಪ್ಸ್ ಗುಳಿಗೆಗಳಿಂದ ಗಂಟಲಿನಲ್ಲಿ ಒಂದು ತರದ ಸಂತುಷ್ಟಿ ಉಂಟಾಗಿ, ಶ್ವಾಸಕೋಶಗಳಲ್ಲಿರುವ ಕಫವನ್ನು ಹೊರದಿಸುತ್ತದೆ. ನಿಮ್ಮ ಎದೆಯನ್ನು ಮತ್ತು ಶ್ವಾಸಕೋಶವನ್ನು ಬಲಪಡಿಸುತ್ತದೆ.

ಕೆಮ್ಮು, ಶೀತ ಮತ್ತು ಬ್ರೊಂಕ್ಯಾಟಿಸ್‌ಗಳಿಗೆ ಪೆಪ್ಸ್‌ನ್ನು ಸೇವಿಸಿರಿ.

ಏಜಂಟರು:—ಮೆಸ್ಸರ್ಸ್ ದಾಥಾ ಎಂಡ್ ಕೊ., ಪಿ. ಟಿ. ಮದ್ರಾಸು.

ಎಲ್ಲಾ ಔಷಧಿ ಮಾರಾಟಗಾರರಲ್ಲಿ ಪೆಪ್ಸ್ ಬಾಟ್ಲಿ 1ಕ್ಕೆ ರೂ. 1ರಂತೆ ದೊರಕುತ್ತದೆ.

ಪೆಪ್ಸ್ PEPS

ಡೆನ್‌ಮಾರ್ಕಿನಲ್ಲಿ ಯೆಹೂದಿಯರ ವರ್ಕ್‌ಶಾಪ್ ಶಾಲೆ.

ನಮ್ಮ ವಿದ್ಯಾಭ್ಯಾಸವು ಸ್ವಾವಲಂಬಿಯಾಗಬೇಕಾದರೆ, ನಮ್ಮ ಶಾಲೆಗಳು ವರ್ಕ್ ಶಾಪ್ ಶಾಲೆಗಳಾಗಿ ಪರಿವರ್ತಿಸಬೇಕು. ಈ ಯೋಚನೆಯಲ್ಲಿ ಸಾರವಿದೆ. ಇದೊಂದು ಕ್ರಾಂತಿಯ ಆಲೋಚನೆ ಈ ತೆರದ ವರ್ಕ್‌ಶಾಪ್ ಶಾಲೆಗಳು ಪೆಲೆಸ್ಟೀನದ ಯೆಹೂದಿಯರಲ್ಲಿ ಅನೇಕ ಇವೆ ಜರ್ಮನಿಯಲ್ಲಿ ನಾಜಿಗಳು ತಲೆದೋರುವ ಮುಂಚೆ ಎಹೂದಿಯರ ಈ ತರದ ಒಂದು ಶಾಲೆಯಿದ್ದಿತು ಹಿಟ್ಲರನು, ಯೆಹೂದಿಯರನ್ನು ಗಡಿಪಾರುಮಾಡಿದಾಗ, ಈ ಶಾಲೆಯ ಉಪಾಧ್ಯಾಯರು ಸುಂದರವಾದ ಶಾಲೆ,ವಿಸ್ತಾರವಾದ ಕಟ್ಟಡಗಳಿಂದ ಕೂಡಿದ ವರ್ಕ್ ಶಾಪ್, ಪುಸ್ತಕಭಂಡಾರ, ಬೃಂದಾವನ ಇತ್ಯಾದಿಗಳಿಂದ ಕೂಡಿದ ತಮ್ಮ ಶಾಲೆಯನ್ನು ತೊರೆದು, ಜರ್ಮನಿಯನ್ನು ಬಿಟ್ಟು ಡೆನ್‌ಮಾರ್ಕಿಗೆ ತೆರಳಿ, ಅಲ್ಲಿ ಅದೇ ತರದ ಒಂದು ಶಾಲೆಯನ್ನು ಸ್ಥಾಪಿಸಿರುವರು ಆ ಶಾಲೆಯು ಮೆಲ್ಲಮೆಲ್ಲನೆ ಪ್ರಗತಿ ಹೊಂದುತ್ತಿದೆ

" . ಮಕ್ಕಳು ಬಾಲ್ಯಾವಸ್ಥೆಯಲ್ಲಿ ಹೊರಗಣ ಲೋಕದ ಅರಿವನ್ನು ಸಂವೇದನೆ ಮೂಲಕ ಮಾಡಿಕೊಳ್ಳುತ್ತಿದ್ದಾರೆ ಸಂವೇದನೆಯನ್ನು ಅನುಭವರೂಪಕ್ಕೆ ತರುವುದ ನಂತರದ ಮೆಟ್ಟು, ಸುತ್ತಕ್ಕೆ ನಡೆಯುವ ಘಟನೆಗಳ ಕಾರಣಗಳನ್ನೂ ಅರ್ಥವನ್ನೂ ತಿಳಿಯುವುದು ಮೂರನೆಯ ಮೆಟ್ಟವು. ಡೆನ್‌ಮಾರ್ಕಿನಲ್ಲಿ, ಜರ್ಮನಿಯಿಂದ ಅಟ್ಟಲ್ಪಟ್ಟ ಯೆಹೂದಿ ಉಪಾಧ್ಯಾಯರಿಂದ ಸ್ಥಾಪನೆಯಾದ ಈ ವರ್ಕ್‌ಶಾಪ್ ಶಾಲೆಯಲ್ಲಿ ವಿದ್ಯಾರ್ಥಿಗಳು ಮೇಲೆ ಸೂಚಿಸಿದ ಒಂದನೇ ಮೆಟ್ಟಿನಲ್ಲಿರುವರು

ಉಪಾಧ್ಯಾಯರು ಮೇಜಿನ ಹತ್ತಿರ ಕೂತುಕೊಳ್ಳುವ ಬದಲು, ತನ್ನ ಕಣ್ಣು, ಕೈ ಕಾಲುಗಳನ್ನೂ ಉಪಯೋಗಿಸುತ್ತಿದ್ದಾರೆ ಹಾಗೆನೇ ವಿದ್ಯಾರ್ಥಿಗಳು ನಾಡು, ಅದರ ವನಸ್ಪತಿವರ್ಗ, ಮೃಗಗಳು, ಹವಾಗುಣಗಳ ಬದಲಾವಣೆ, ಜನರು ಹೇಗೆ ಕೆಲಸಮಾಡುತ್ತಿದ್ದಾರೆ, ಹೇಗೆ ಜೀವನ ಸಾಗಿಸುತ್ತಿದ್ದಾರೆ ಅವರ ಕ್ರಮ ರೂಢಿ ಇತ್ಯಾದಿಗಳನ್ನು ನಿರೀಕ್ಷಿಸುತ್ತ-ಸುತ್ತಲಿರುವ ನಾಡಿನ ಸಂಚಾರವನ್ನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಮಾಡುತ್ತಿದ್ದಾರೆ ಮಕ್ಕಳು, ತಮ್ಮ ಮನೆಗಳನ್ನು ಕಾರ್ಖಾನೆಗಳನ್ನೂ, ಗಿರಣಿಗಳನ್ನೂ, ಮಾರ್ಗ ರಚನೆ ಇತ್ಯಾದಿಗಳಲ್ಲಿ ಪರಿಶೋಧನೆಯನ್ನು ನಡೆಸುತ್ತಿದ್ದಾರೆ ಈ ಕೆಳಗಿನವುಗಳು ಪರಿಶೋಧನೆಗೆ ಒಳಪಟ್ಟ ಕೆಲವು ವಿಷಯಗಳು

ನೆರೆಯಲ್ಲಿರುವ ಕಬ್ಬಿಣ ಕಾರ್ಖಾನೆ, ತಮ್ಮ ಮನೆಯಲ್ಲಿನ ಸೀಮೆ ಎಣ್ಣೆ ದೀಪಗಳು ಮತ್ತು ಮೇಣದ ಬತ್ತಿಗಳು, ಟೊವೆ ಬೊವಲದ ಸಾಗುವಳಿ-ಇತ್ಯಾದಿ ವಿಷಯಗಳಲ್ಲಿ ಭೋದನೆ ಇಲ್ಲ ಸಂಚಾರ, ಆಟ, ಪಂದ್ಯಾಟ ಗಾಯನ ಮತ್ತು ಕೂಲಿವಾರು ಕೆಲಸ (ತೋಟ ಮತ್ತು ಮನೆ ವಿಚಾರದಲ್ಲಿ) ಇತ್ಯಾದಿ ಅಲ್ಲಿನ ದೈನಿಕ ಕಾರ್ಯಕ್ರಮ ಕಸಬುದಾರರು, ರೈತಾಪಿ ಜನರು ವಾಸವಾಗಿರುವ ಅತ್ಯಂತ ಸರಳನಾಡಿನಲ್ಲಿ ನಾವು ಜೀವಿಸುತ್ತಿದ್ದೇವೆ ಈ ವಾತಾವರಣವು ಮತ್ತು ಮನೆಯಲ್ಲಿನ ಕೆಲಸ, ಮಕ್ಕಳ ಸಾಮಾಜಿಕ ಜೀವನ ಇವು ಅವರ ತಿಳುವಳಿಕೆಯ ಅಡಿಕಟ್ಟಾಗಿರುತ್ತವೆ . ಮನೆಕೆಲಸವೆಲ್ಲವನ್ನೂ ಉಪಾಧ್ಯಾಯರೆ ಮಾಡುತ್ತಿದ್ದಾರೆ ಅಡಿಗೆ, ತೊಳೆಯುವುದು, ದುರುಸ್ತಿ ಮತ್ತು ತೋಟದ ಕೆಲಸ ಇವೆಲ್ಲಾ ಉಪಾಧ್ಯಾಯರೇ ಮಾಡುತ್ತಿದ್ದಾರೆ ಬಾಲಕರು ಆ ಕಾರ್ಯಗಳಲ್ಲಿ ಭಾಗಿಗಳಾಗಲು ಆರಂಭಮಾಡಿರುವರು ಸ್ವಲ್ಪ ಸಮಯದಲ್ಲೇ ಆ ಶಾಲೆಯು ಒಂದು ವರ್ಕ್ ಶಾಪ್ ಆಗಿ ಮಾರ್ಪಟ್ಟಿತು. ಮಕ್ಕಳ ಕಲಕಲ ಧ್ವನಿಯಿಂದ ಕೂಡಿತು,

"ಎಲ್ಲರೂ ಸಹೋದರಭಾವವನ್ನು ಹೊಂದಿಕೊಂಡು, ಅದಷ್ಟು ಹೊಣೆಗಾರಿಕೆಯನ್ನು ಹೊಂದುವವರಾದರು. , ನಾವಿಂದು ಯಾವಾಗಲೂ ಮಾರ್ಪಡುತ್ತಿರುವ ಜಗತ್ತಿನಲ್ಲಿ ದ್ವೇತ. ಯಾವತ್ತೂ ಮಾರ್ಪಾಟುಗಳು ಬರಲಿ, ಬಾಧೆ ಇರಲಿ, ಅಸಂಯಭಾವವಿಲ್ಲದೆ, ತಮ್ಮ ತಮ್ಮ ಜೀವನ ಪಾತ್ರವನ್ನು ನಡೆಯಿಸುವರೆ, ಕೆಲಸಮಾಡಲು ಆಲೋಚಿಸಲು ಶಕ್ತರಾಗಬೇಕು, ಸ್ತ್ರೀಪುರುಷರು

ಈ ತರದ ಚಟುವಟಿಕೆಗಳನ್ನು ನಡೆಯಿಸುವ, ನಮ್ಮ ಹಳ್ಳಿಗಳ ವಾತಾವರಣಗಳಿಗೆ ತಕ್ಕುದೆನಿಸುವ "ವರ್ಕ್ ಶಾಪ್" ಶಾಲೆಗಳು ನಮ್ಮಲ್ಲಿ ಸ್ಥಾಪನೆಯಾಗಬೇಕೆಂದು ಶ್ರೀಯುತ ಮಹಾದೇವ ದೇಸಾಯಿಗಳು ಮೇಲಿನ ಶಿರೋನಾಮದ ಕೆಳಗೆ ಬರೆದ ಲೇಖನದಲ್ಲಿ ಸೂಚನೆಯನ್ನು ಕೊಟ್ಟಿರುವರು

ಪನಮಾ ಪ್ರದೇಶದಲ್ಲಿ ಸಂಪತ್ತು ದೊರಕಿತು

ಮೆಕ್ಸಿಕೋದ ಪನಾಮ ಪ್ರದೇಶದಲ್ಲಿ ಗಡಿಗಳನ್ನು ಹಾಕುತ್ತಿರುವ ಕೆಲವು ಸರಕಾರಿ ಉದ್ಯೋಗಸ್ಥರಿಗೆ, ಅಲ್ಲಿರುವ ಕಾಡಿನ ಗುಹೆಯೊಂದರಲ್ಲಿ ರೂ ೭೮,೦೦೦,೦೦೦ ಮೌಲ್ಯದ ಭಂಗಾರದ ಗಟ್ಟಿಗಳು ದೊರಕಿವೆ ಎಂದೂ, ಆ ಗಟ್ಟಿಗಳ ಮೇಲೆ ಸ್ಪೆನಿಶ್ ರಾಜರ ಕಿರೀಟದ ಮುದ್ರೆಯಿರುವುದೆಂದೂ ತಿಳಿದುಬರುತ್ತದೆ ಈ ಪ್ರದೇಶದಲ್ಲಿ ೩೦೦ ವರ್ಷಗಳ ಹಿಂದೆ ಭಂಗಾರದ ಖನಿಗಳಿದ್ದುವೆಂದು ಊಹಿಸಲಾಗಿದೆ ಈ ಸಂಪತ್ತಿನ ಅರ್ಧಾಂಶವು ಆ ಉದ್ಯೋಗಸ್ಥರಿಗೆ ಕೊಡಲಾಗುವುದು ಅರ್ಧಾಂಶವು ಸರಕಾರಕ್ಕೆ ಹೋಗುವುದು

೨೦ ವರ್ಷಗಳ ನಂತರ ದೃಷ್ಟಿ ಬಂತು

ಮೇರಿ ಎಲಟ್ ಹಜ್ಬನ್ ಎಂಬ ಓರ್ವ ಇಂಗ್ಲಾಂಡಿನ ತರುಣಿಯು ಎಂತಜ್ವರದ ದೆಸೆಯಿಂದ ತನ್ನ ಕಣ್ಣುಗಳ ದೃಷ್ಟಿಯನ್ನು ೨೦ ವರ್ಷಗಳ ಹಿಂದೆ ಕಳಕೊಂಡಿದ್ದಳು ಮೊನ್ನೆ ಥಕ್ಕನೆ ಅವಳಿಗೆ ದೃಷ್ಟಿಗೋಚರವಾಗಿದೆಂದು ತಿಳಿದುಬರುತ್ತದೆ

ಹುಚ್ಚರ ಆಸ್ಪತ್ರೆಯಲ್ಲಿ ಪ್ರಣಯ

ಇಂಗ್ಲಾಂಡಿನ ಒಲಕ್‌ಪ್ಲಿನಲ್ಲಿನ ಸೆಕ್ರಿ ಹುಚ್ಚರ ಆಸ್ಪತ್ರೆಯಲ್ಲಿರುವ ಓರ್ವ ತರುಣನಿಗೂ ತರುಣಿಗೂ ಉಂಟಾದ ಮೋಹದ ಪರಿಣಾಮವಾಗಿ ಇಬ್ಬರೂ ಆಸ್ಪತ್ರೆಯ ಕಾವಲುಗಾರರಿಂದ ತಪ್ಪಿಸಿಕೊಂಡು ಪಲಾಯನ ಮಾಡಿರುವರು ಇಬ್ಬರಲ್ಲೂ ವಿಶೇಷ ತರದ ಹುಚ್ಚು ಇರಲಿಲ್ಲ ತರುಣಿಯ ದೋಷವೆಂದರೆ ತಡೆಯಲಸಾಧ್ಯವಾದ ಕೋಪ ತರುಣನು ಅಪಸ್ಮಾರ ರೋಗಿಯು ಅವರನ್ನು ಕಂಡುಹಿಡಿಯಲು ನಡೆದ ಪೋಲೀಸರ ಪ್ರಯತ್ನಗಳು ನಿಷ್ಫಲವಾಗಿವೆ

ಹಿಂದೂದೇಶದ ಬದ್ಲಿ ವೈಸ್ರಾಯರ ಮೇಲೆ ಅಪಾದನೆ ಹೊರಿಸಲಾಯಿತು.

ತಾನು ಹಿಂದೂದೇಶದ ಬದ್ಲಿ ವಾಯಿಸ್ರಾಯನಾಗಿದ್ದೇನೆಂದು ಹೇಳಿಕೊಳ್ಳುವ ಒಬ್ಬನಿಗೆ, ಮೆಂಚೆಸ್ಟರಿನ ಹೊಟೇಲೊಂದರಲ್ಲಿ, ಮೋಸದಿಂದ ಉಳಕೊಳ್ಳುವ ಸ್ಥಳ ಮತ್ತು ಆಹಾರ ಪಡಕೊಂಡದಕ್ಕೆ ಜೈಲುಪ್ರಾಪ್ತಿಯಾಗಿರುತ್ತದೆ ಆತನು ಓರ್ವ ವೈದ್ಯನಂತೆ ಕಾಣಿಸುತ್ತಿರುವನೆಂದ ಪೋಲೀಸರ ಹೇಳಿಕೆ ಅಲ್ಲದೆ, ಅವನೊಡನಿದ್ದ ಪತ್ರ ಇತ್ಯಾದಿಗಳಿಂದ ಅವನು ಉಚ್ಚಹುದ್ದೆಗಳಲ್ಲಿದ್ದನೆಂದೂ, ಒಂದು ಫ್ರೆಂಚ್ ಸೇನಾದ್ದಳದ ಕೆಪ್ಟನನಾಗಿದ್ದನೆಂದೂ, ಹಿಂದೂದೇಶದ ರಾಜಕೀಯ ಏಜಂಟನಾಗಿದ್ದನೆಂದೂ ತಿಳಿದುಬರುತ್ತದೆ ಅವನ ಹೆಸರು ಜೇಮ್ಸ್ ಹೊಲಿ ಡಾಯ್ಲ ಎಂದು ಆತನ ವಯಸ್ಸು ೪೩ ವರ್ಷ ಈಗ ಇವನೊಡನೆ ಒಂದೇ ಒಂದು ಚಿಕ್ಕಾಸೂ ಇರುವುದಿಲ್ಲ.

ಗ್ರೆಟ್ನಾಗ್ರೀನಿನಲ್ಲಿನ ವಿಚಿತ್ರ ಕೊಲೆ!

ಯುವಕ-ಯುವತಿಯರು ಪರಸ್ಪರರಲ್ಲಿ ಪ್ರೇಮಪೂರಿಸಿ, ಊರುಬಿಟ್ಟು ಪರವೂರಲ್ಲಿ ವಿವಾಹವಾಗುವುದು (ತಂದೆತಾಯಿಗಳಿಗೆ ತಿಳಿಯದಂತೆ) ಇದು ವಿಶೇಷವಲ್ಲ. ಆದರೆ, ಗ್ರೆಟ್ನಾಗ್ರೀನಿನಲ್ಲಿ ವಿವಾಹವಾದ ಜೋನ್‌ಮೆಲ್ಡರನ್ ಮತ್ತು ಚಾರ್ಲಟ್ ಕೆಲ್ವಿಸನ್ ಇವರ ಪ್ರಣಯನಾಟ್ಯದ ಅಂತ್ಯವು ಕರುಣಾಜನಕವಾಗಿದೆ ಮತ್ತು ಹಣಕ್ಕಾಗಿ ಮಕ್ಕಳನ್ನು ಮದುವೆಮಾಡಿಸುವ ಹುಚ್ಚರಿಗೆ ಬೊಟ್ಟು ತೋರಿ, ನಗುವಂತೆ ಇದೆ

ಮೆಂಚೆಸ್ಟರಿನಲ್ಲಿಯ ಹಳ್ಳಿಯಲ್ಲಿ ವಿಲ್ಲಿಯಮ್ ಮೆಲ್ಡರನ್ ಮತ್ತು ಸರ್ ಎಂಟನಿ ಕೆಲ್ವಿಸನ್‌ರು ನೆರೆಹೊರೆಯವರು ಇಬ್ಬರೂ ಧನಿಕರಾಗಿದ್ದರು, ಇಬ್ಬರಿಗೂ ಹೇರಳ ಆಸ್ತಿ ಇದ್ದಿತು ಆದರೆ, ಅವರಲ್ಲಿ ಒಂದು ವಿಚಾರದಲ್ಲಿ ಭೇದವಿತ್ತು ಮೆಲ್ಡರನನ್ನು ಎಲ್ಲರೂ ಮೆಚ್ಚುತ್ತಿದ್ದರು ಎಂಟನಿಯನ್ನು ದ್ವೇಷಿಸುತ್ತಿದ್ದರು ಊರವರು ಒಬ್ಬನನ್ನು ಮೆಚ್ಚಿ, ಇನ್ನೊಬ್ಬನನ್ನು ದ್ವೇಷಿಸಹತ್ತಿದರೆ, ಅವರೆಲ್ಲರ ಮೇಲೂ ತನ್ನ ಹೊಟ್ಟೆಯುರಿಯನ್ನು ಕಾರಲಾರದೆ ದ್ವೇಷಿಸಲ್ಪಟ್ಟವನು ಮೆಚ್ಚುಗನನ್ನು ದ್ವೇಷಿಸಹತ್ತುವುದು ಲೋಕದ ವಾಡಿಕೆ ಸರ್ ಎಂಟನಿಯೇನು ಜಗದೆಣಿಕೆಗೆ ಸಿಗದವನಲ್ಲ ಆತನು ತನ್ನ ಒಬ್ಬಳೇ ಒಬ್ಬ ಮಗಳಾದ ಚಾರ್ಲಟ್ ಎಂಬವಳನ್ನು ಮೆಲ್ಡರನ್ನನ ಮಗನಾದ ಜೋನನಿಗೆ ಕೊಟ್ಟು, ವಿವಾಹಮಾಡಿ, ಮೆಲ್ಡರನ ಆಸ್ತಿಯನ್ನು ಬಗಲಿಗೆ ತುರುಕಿಸಿಕೊಳ್ಳುವ ಯೋಚನೆ ಮಾಡಹತ್ತಿದನು ಮುಂದಾಗಿ ನಿಷ್ಕರ್ಷಿಸಿದಂತೆ ಇಬ್ಬರೂ ಆಸ್ತಿವಂತರು ಮಾತನಾಡಿಕೊಂಡು ವಿವಾಹವನ್ನು ನಿಶ್ಚಯಿಸಿದರು ಅದರ ಮೊದಲೊವೆ, ಕೆಲ್ವಿಸನ್ನನ ಮನೆಗೆ ಹೋಗಿ, ಜೋನ್ ಮೆಲ್ಡರನ್ನನು ಚಾರ್ಲಟಳಿಗೆ ಭೇಟಿಮಾಡನ ಯಾವ ಕಾರಣದಿಂದ ತನ್ನನ್ನು ಮೆಲ್ಡರನ್ನನಿಗೆ ವಿವಾಹ ಮಾಡಿಕೊಡುವನೆಂಬುದನ್ನು ಚಾರ್ಲಟಳು ಚೆನ್ನಾಗಿ ತಿಳಿದಿದ್ದಳು ಆದರೆ, ಅರ್ಧಗಂಟೆಯ ನಂತರ ಕಾರಿನಲ್ಲಿ ಕುಳಿತು ಮನೆಯತ್ತ ತೆರಳಿದ ಜೋನನಿಗೆ ಗುಡ್‌ಬ್ಯಾ ಹೇಳುವಾಗ ತಾನ ಜೋನನಲ್ಲಿ ಅನುರಕ್ತಳಾಗಿರುವೆನೆಂಬುದು. ಆಕೆಗೆ ತಿಳಿದಿತು ಜೋನನಾದರೂ ತನ್ನ ಜೀವನದ ಸಂಗಾತಿಯನ್ನು ತನ್ನ ಆನಂದ, ಕಷ್ಟನಷ್ಟಗಳ ಸಹಭಾಗಿಯನ್ನು ಚಾರ್ಲಟ್‌ಳಲ್ಲಿ ಕಂಡ ಕೊಂಡ

ಸರ್ ಎಂಟನಿಗೆ ಸಂತಸವಾಯಿತು ತನ್ನ ಸಹಾಯಕ್ಕೆ ದೇವತೆಗಳು ಕೂಡ ಸಹಾಯಕರಾಗಿರುವರೆಂದು ತಿಳಿದ ವಿವಾಹದ ನಿಶ್ಚಿತವು ಪ್ರಕಟವಾಯಿತು

ಒಂದು ದಿನ ಸಾಯಂಕಾಲ ಜೋನನು ಕೆಲ್ವಿಸಳ ಮನೆಯಿಂದ ಹಿಂತಿರುಗಿ ಬಂದಾಗ, ಆತನ ತಂದೆಯು ಚಿಂತಾಕ್ರಾಂತನಾಗಿದ್ದನು ಮಗನು ಏನೆಂದು ಕೇಳಿದ ಮಗೂ, ನನ್ನ ಆಸ್ತಿಯನ್ನೆಲ್ಲಾ ಸಾಲಗಾರರ ಉಪಟಳಕ್ಕಾಗಿ ಅಡವಿಟ್ಟಿದ್ದೇನೆ ಇನ್ನು ವಿವಾಹದ ಖರ್ಚು. ? ದೇವರೆ' ಎಂದ ತಂದೆ ಅಂದೇ ರಾತ್ರೆ ಜೋನನು ಈ ವಿಷಯದ ಕುರಿತು ಚಾರ್ಲಟಳಿಗೆ ಪತ್ರ ಬರೆದ ಪತ್ರವೋದಿ ಕ್ರುದ್ಧನಾದನು ಸರ್ ಎಂಟನಿ ಚಾರ್ಲಟಳೊಡನೆ ನೆಟ್ಟಗೆ ಮೆಲ್ಡರನನ ಮನೆಗೆ ಬಂದನು "ತಿಳಿದಿರಲಿ, ನಾನು ನನ್ನ ಮಗಳನ್ನು ಓರ್ವ ಬಡಪಾಯಿ, ಸಾಲದ ಹೊರೆ ಹೊತ್ತ ಕತ್ತೆಯ ಮಗನಿಗೆ ಕೊಡಲಾರೆ' ಎಂದನಾತ ಕೋಪದಿಂದ ಈಗ ಚಾರ್ಲಟಳು ಮುಂದೆ ಬಂದು 'ತಂದೆ, ನಾನು ನನ್ನ ಹೃದಯವನ್ನು ಜೋನನಿಗರ್ಪಿಸಿದ್ದೇನೆ ಅದನ್ನು ಹಿಂದೆ ತೆಗೆದುಕೊಳ್ಳುವ ಅಧಿಕಾರವು ನನಗಿಲ್ಲ ಅಲ್ಲದೆ ಕೊಟ್ಟ ಮಾತನ್ನು ಮುರಿಯುವಷ್ಟು ಕೃತಘ್ನಳು ನಾನಲ್ಲ.'

ಸರ್ ಎಂಟನಿಯು ನಕ್ಕನು ಎಂತಹ ಪ್ರಸಂಗದಲ್ಲಾದರೂ ಆಕೆಯು ಮನೆಬಿಟ್ಟು ಹೊರಹೋಗದಂತೆ ಭದ್ರತೆಯಿರಿಸಿದ.ನಾರಿಯು ಅಬಲೆಯಾದರೂ, ಅವಶ್ಯ ಸಂದರ್ಭಗಳಲ್ಲಿ ಸಬಲೆ! 'ತನ್ನನ್ನು ಇಲ್ಲಿಂದ ಪಾರುಗಾಣಿಸಬೇಕೆಂದು ಜೋನನಿಗೆ ಪತ್ರ ಬರೆದಳು. ಆತನು ಒಂದ ದಿನವನ್ನು ನಿಷ್ಕರ್ಷಿಸಿ, ಸಿದ್ಧನಾಗುವೆನೆಂದ. ಚಾರ್ಲಟಳೂ ಒಪ್ಪಿದಳು. ನಿಶ್ಚಯಿಸಿದ ದಿನ ಬಂತು. ಅಂದು ಸಾಯಂಕಾಲದಲ್ಲಿ ಉದ್ಯಾನದಲ್ಲಿ ಕೆಲಸಮಾಡುತ್ತಿದ್ದ ಸೇವಕನೊಬ್ಬನು ಗೋಡೆಗೊರಗಿ ಏಣಿಯಿಟ್ಟು ತೆರಳಿದ ಆ ಏಣಿಯ ಕೊನೆಯು ಚಾರ್ಲಟಳ ಕೋಣೆಯ ತುದಿಗೆ ಮುಟ್ಟುವಂತಿತ್ತು. ಸೂರ್ಯನು ಮುಳುಗಿದ ಜಗತ್ತನ್ನೆಲ್ಲ ಅಂಧಕಾರವು ಮುಸುಕಿತು, ಆ ಸಮಯದಲ್ಲಿ ಚಾರ್ಲಟಳು ಕಿಟಿಕಿಯಿಂದ ಏಣಿಯ ಮೂಲಕವಾಗಿ ಕೆಳಗಿಳಿದಳು, ಮೊದಲೇರ್ಪಡಿಸಿದಂತೆ, ತೋಟದ ಬಾಗಿಲು ತೆರೆದಿದ್ದಿತು ಸದ್ದಿಲ್ಲದೆ ಬಾಗಿಲಿನಿಂದ ಪಾರಾಗಿ ಹೊರಬಂದಳು ದಾರಿಯ ಬದಿಯಲ್ಲಿನ ಮರವೊಂದರ ಕೆಳಗೆ ಕತ್ತಲೆಯಲ್ಲಿ ಒಂದು ಕುದುರೆಯ ಗಾಡಿಯು ನಿಂತಿದ್ದಿತು, ಗಾಡಿಯಲ್ಲಿ ಜೋನನಿದ್ದ ಆತನು ಚಾರ್ಲಟಳ ಕೈಹಿಡಿದ ಗಾಡಿಯಲ್ಲಿ ಕುಳ್ಳಿರಿಸಿದ "ನಾವೀಗ ಧಾವಿಸಬೇಕಾಗಿದೆ" ಚಾರ್ಲಟಳೆಂದಳು ಬೇಗನೆ ತಂದೆಯು ನಾನು ಕಾಣೆಯಾದ ಸಂಗತಿಯನ್ನು ತಿಳಿಯುವನು ನಂತರ ಆತನು ನನ್ನನ್ನು ಪೃಥ್ವಿಯ ಕೊನೆಯ ವರೆಗೂ ಹಿಂಬಾಲಿಸದಿರನು' 'ಹೆದರಬೇಡ' ಎಂದಿಷ್ಟೇ ನುಡಿದ ಜೋನ್

ಕುದುರೆಗಳು ಮುಂದಡಿಯಿಟ್ಟುವು ಗಾಡಿ ಓಡಿತು ನೆಟ್ಟಗೆ ಹೋದರು ನವವಧುವರರು! ಮಾರ್ಗವೆಲ್ಲಿಗೊಯ್ಯುವುದೋ ಅಲ್ಲಿಗೆ ಅದರಂತ್ಯದ ವರೆಗೆ! ಅವರ ಮನಸ್ಸಿನ ಕಿವಿಗಳಿಗೆ ಆವುದೋ ಅವ್ಯಕ್ತ ವ್ಯಕ್ತಿಯ ಪಾದಧ್ವನಿಯು ಕೇಳಿಸುತಿದ್ದಿತು ಅದು ಸರ್ ಎಂಟನಿದೆಂಬುದು ಹೊಳೆಯಹತ್ತಿತು, ಅದು ತನ್ನ ಹಿಂದಯೇ ಬರುತ್ತಿದೆ ಎಂಬುದನ್ನೂ ಅರಿತರು ಆದರೆ ಏನೊಂದೂ ವಿಘ್ನವಿಲ್ಲದೇ ಗ್ರೆಟ್ನಾಗ್ರೀನಿತನಕ ಬಂದರು

ಆ ಮಾಸದಿಂದ ಬೇಸತ್ತ ವಧೂವರರು ಗೆಟ್ನಾಗ್ರೀನಿನಲ್ಲಿಯ ಒಂದು ವಿಶ್ರಾಂತಿ ಗೃಹದಲ್ಲಿ ಉಳಿದುಕೊಂಡಿರಾಗಿ, ಒಂದೇ ಕೋಣೆಯನ್ನು ಸೇರಿದರು

ಅಲ್ಲಿಗೆ ಬಂದ, ಅಲ್ಲಿ ಅವರನ್ನು ಕಂಡ ಆ ಧನಪಿಶಾಚಿ ಹಣಕ್ಕಾಗಿ ತನ್ನ ಮಗಳ ಸೌಭಾಗ್ಯವನ್ನೇ ಸೂರೆಗೊಳಿಸಲಾಶಿಸಿದ್ದ ಮುದಿಗೂಬೆ ಒಂದು ಮಲಗುವ ಕೋಣೆಯ ಬಾಗಿಲಿಗೊದ್ದ ಹಳೆ ಹಲಿಗೆಯ ಬಾಗಿಲು ಮುರಿದು ಬಿದ್ದಿತು. ಹಾಸಿಗೆಯಲ್ಲಿ ಮಲಗಿದ್ದ ಪತಿಪತ್ನಿಯರು ಗಾಬರಿಗೊಂಡು ನೋಡಿದರು ಸರ್ ಎಂಟನಿಯ ಕೈಯಲ್ಲಿ ತುಂಬಿದ ರಿವಾಲ್ವರ್ ಇದೆ

'ಚಾರ್ಲಟ್‌ಳು ನನ್ನ ಹೆಂಡತಿ, ಆಕೆಯು ನನ್ನ ಧರ್ಮಪತ್ನಿ' ಎಂದು ಕೂಗಿದ ಜೋನ್ ಅವೇ ಅವನ ಕೊನೆಯ ಮಾತುಗಳು ರಿವಾಲ್ವರು ಕೂಗಿತು, ಗುಂಡು ಹಾರಿತು, ಮೃತ್ಯುಸದನದ ಬಾಗಿಲು ತೆರೆಯಿತು. ಹಣೆಯನ್ನು ಹೊಕ್ಕ ಗುಂಡು ಮೆದುಳನ್ನು ಹಾಂಸಿತು ಜೋನನ ನಿರ್ಜೀವ ದೇಹವು ನೆಲಕ್ಕೆ ಬಿದ್ದಿತು ಚಾರ್ಲಟ್‌ಳು ಜ್ಞಾನಶೂನ್ಯೆಯಾದಳು ಮಗಳನ್ನು ಮನೆಯಲ್ಲಿಟ್ಟು ಬಂದ ತಂದೆಯು ಮಗಳ ಜ್ಞಾನಶೂನ್ಯ ದೇಹವನ್ನು ಗಾಡಿಯ ಮೂಲಕ ಮನೆಗೊಯ್ದ ಮಗಳು ಎಚ್ಚೆತ್ತರೂ ಹೆಚ್ಚು ದಿನ ಬಾಳಲಿಲ್ಲ ಪ್ರೇಮಿಗಿತ್ತ ವಚನವನ್ನು ಮುರಿಯದೆ, ಪರಲೋಕದಲ್ಲಿ ಭೇಟಿಯಾಗಲು ತೆರಳಿದಳು

ಸರ್ ಎಂಟನಿಯು ಗತಿಯೇನಾಯಿತೆಂದು ಯಾರಿಗೂ ತಿಳಿಯದು ಪೋಲೀಸರು ಬೆನ್ನು ಹತ್ತಿದುದರಿಂದ ಎಲ್ಲೋ ಪರದೇಶಕ್ಕೆ ಹೋಗಿರಬಹುದೆಂದು ಊಹೆ ಅಂತೂ ನಂತರ ಆತನನ್ನು ಅಲ್ಲಾರೂ ಕಾಣಲಿಲ್ಲ.

ಪ್ರಣಯ ನಾಟ್ಯದ ಅಂತ್ಯವು ಈ ರೀತಿಯಾಗುವುದೆಂದು ಯಾರೆಣಿಸಿದ್ದರು.

ನವರತ್ನಾ ಚ್ಯವನಪ್ರಾಶಾವ ಲೇಹ

ಕಫವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ
ನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ
ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು
ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ
ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ,
ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ
ರಾತಲು 1ಕ್ಕೆ ರೂ 2—6—0. ½ ರಾತಲು 1-4—0. ¼ ರಾತಲು 0-12-0.

ನವರತ್ನಾ 'ಬ್ರಾಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಹೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸು ವದರಲ್ಲಿ ಉಪಕಾರಿಯಾಗಿದೆ. ಕೈಲಾಭಂಗಕ್ಕೂ ಒಳ್ಳೆದು.
ಕ್ರಯ 16 oz 3-0-0; 8 oz 1 10 0; 4 oz 0 14 0

ತಯಾರಿಸುವವರು:—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:-
ಫಾಫುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಟ್ಟಿ ಕಾರ್ಕಳ.
ಕೆ. ಎಲ್. ಐತಾಳ್, ಉಡುಪಿ — ಮೊಡರ್ನ್ ಫಾರ್ಮಸಿ, ಕುಂದಾಪುರ.
ಟಿ. ಜಿ ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರ
ಡಾ। ರಾಮ ಗುರುಕುಲ ಬ್ರಹ್ಮಾವರ.
ಬೊಂಬಾಯಿ ಏಜಂಟರು:-CHAMSI NRSI & CO.
Chemists Princess Street BOMBAY

KANARA WATCH WORKS

WATCH MAKERS & GENERAL MERCHANTS
Hampankatta MANGALORE

Dealers in — Watches, Clocks, Timepieces, Rolled Gold Jewellery & Sporting Materials etc,



Stockists of West End, Zenith Meridian, Swiss Watches of latest designs & tastes

Repairers — Watches, Clocks, Timepieces and Gramophones

Japan 8 Inch Octegon	Rs	6	0	0
„ 8 „ Regulator	„	6	12	0
„ 10 „ Octegon	,	6	8	0
„ 10 „ Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೀಕರಿಗೆ ಸದಾ ಸಿದ್ಧವಿರುವುವು ವಾಚು, ಗಡಿಯಾರ, ವ ಗ್ರಾಮಾಫೋನು ರಿಪೇರಿ ಗಳನ್ನು ಗ್ರಾಹಕರ ಮೆಚ್ಚುಗೆಗೆ ಸಂಧಾನ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು
ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಯನ್ ಹೈಸ್ಕೂಲ್ ಬಳಿ ಮಂಗಳೂರು

FOR
Quality Frames & Lens,
Please Visit



Nayaks' Optical Stores

Scientific Opticians
Temple Square MANGALORE

ಪೈಂಟರ್ಸ್

Whenever you require the service of
Please call on or write to:-

Simon & Co.,

Painters,
Churchgate Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ ಸೈನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿ ಪಡೆಯಿರಿ.
ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

PAINTERS

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ವಾಪಸ್



ನಿಕ್ಕಲ್ ಮಾಡಿದ ... ರ ... 3 ... ಬೆಲೆ 1ಕ್ಕೆ ರೂ 2 15 0 ಅದರಲ್ಲಿ ... ಮಾಡಿದ್ದು 3-6-0 ಬಂಗಾರದ ಗಿಲ್ಟಿದ್ದಕ್ಕೆ ರೂ 4—8—0 ... ರೂ 5 0 0 ... ಆಯತಾಕಾರದಕ್ಕೆ 6-8-0 ಅದರಲ್ಲಿ ಬಂಗಾರದ ಗಿಲ್ಟಿದ್ದುದಕ್ಕೆ 7-8 0 ... ಬೆಲೆ ಬರಿ ರೂ 1—14—0 ... 1ಕ್ಕೆ ಬರಿ ರೂ 1—1—0 ...
ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176 Cross Street CALCUTTA

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತ ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು-ಹಣ್ಣುಗಳು—ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಅಲ್ ಕಮಿಷನ್ ಪಡೆಯುತ್ತೇವೆ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2—8-0. ಅಡ್ವಾನ್ಸ್ ಇಲ್ಲದ ಆರ್ಡರ್ ಪಡೆಯಲಾಗದು.
ವಿಳಾಸ:—

The Royal Seed Co.,
Florists & Seedsmen, 27 Ilpay Thope
ULSOOR BANGALORE.

ಎಲಿಮೆಂಟರಿ ಉಪಾಧ್ಯಾಯರ ಸಂಘ

(ಶನಿವಾರ ಫ಼ೆಬ್ರ ಕೊನೆ ...)

ಕರಸಿದೆ ನಮ್ಮ ಪಾಲಿನ ಕಂಟಿತ ದ್ರವ್ಯ ಸಹಾಯವನ್ನು ಮಾಡಲು ಹಿಂಜರಿಯಬೇಡಿರಿ ನಾವೆಲ್ಲರೂ ಐಕ್ಯಮತ್ಯದಿಂದ ಕೂಡಿಕೊಂಡು ನಮ್ಮ ಸಂಕಷ್ಟ ನಿವಾರಣೆಗಾಗಿ ಹೆಣಗುವ. ಚೆಕ್ಕಿಗೆ ಪ್ರತ್ಯೇಕ ಬಿಡಾರವೆಂಬಂತೆ ವರ್ತಿಸ ಬೇಡಿ ನಮ್ಮಲ್ಲಿ ಸಂಘಶಕ್ತಿಯಿದೆ ಎಂದು ಜನತೆಗೆ ತೋರಿಸಿಕೊಡುವ

ಸಂಘವನ್ನು ಆದಷ್ಟು ಬೇಗನೇ ರಿಜಿಸ್ಟ್ರು ಮಾಡಬೇಕಾಗಿದೆ ಹೀಗಿರಲು ಇದನ್ನು ಮುಗಿದು ಹಾಕಲು ಪ್ರಯತ್ನಿಸಬೇಡಿರಿ ತಮ್ಮಗಳ ಅಭಿಪ್ರಾಯಗಳನ್ನು ಸ್ಪಷ್ಟಗೊಳಿಸಿರಿ.

ಶ್ರೀ ಪರಮಾತ್ಮನು ನಮ್ಮೆಲ್ಲರಿಗೆ ಸದ್ಬುದ್ಧಿಯನ್ನು ಕರುಣಿಸಲಿ.

ಬಿ. ಬೋಜ ರಾವ್.

ತಾಲೂಕುಗಳಿಂದ

[illegible] ಶ್ರೀ [illegible] ಎಂಬ ಊರಿನಲ್ಲಿ ಸ್ಥಳೀಯ ಬ್ರಸ್ ಕೆಲಸಗಾರರನ್ನು ಶ್ರೀಮತಿ ಕಮಲಾದೇವಿಯವರು [illegible] ಸ್ವದೇಶಿ ಆವಶ್ಯಕತೆ ಮತ್ತು ಮಹಾತ್ಮರ ಕುರಿತು ಭಾಷಣಮಾಡಿ, ಎಲ್ಲರೂ ಮಂಗಳೂರು ಸಂಘಕ್ಕೆ ಸದಸ್ಯರಾಗಿ ಸೇರಬೇಕೆಂದು ಕೋರಿದರು.

ಕಳೆದ ವಾರದಲ್ಲಿ ಮಿಯಾರು, ಪಾಳೆ, ದುರ್ಗ ಇವುಗಳಲ್ಲಿ ಕ್ರಮವಾಗಿ ಶ್ರೀಗಳಾದ, ದೇವರಾಜ ಹೆಗ್ಡೆರು, ರಾಮ ಪೊದುವಾಳರು ಮತ್ತು ಅನಂತರಾಮ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಗಳಾಗಿ ಮಿಯಾರಿಗೆ ಶ್ರೀ ದೇವರಾಜ ಹೆಗ್ಡೆರು ಮತ್ತು ರಾಮಕೃಷ್ಣ ನಾಯಕರು, ಪಾಳೆಕ್ಕೆ ಚಿಪ್ಪುಣಿಕಾರ ವೆಂಕಟೇಶ ಭಟ್ಟರು ಮತ್ತು ಜ್ಯೋತಿ ಲಕ್ಷ್ಮೀನಾಭಭಟ್ಟರು ದುರ್ಗಕ್ಕೆ ಅನಂತ ರಾಮ ಭಟ್ಟರು ಮತ್ತು ಸದಾಶಿವ ರಾವರು—ಅಧ್ಯಕ್ಷ ಕಾರ್ಯದರ್ಶಿಯರಾಗಿ ಗ್ರಾಮ ಕಾಂಗ್ರೆಸ ಕಮಿಟಿಗಳ ಸ್ಥಾಪನೆಯಾಯಿತು.

ತಾಲೂಕು ಕಾಂಗ್ರೆಸ ಕಮಿಟಿಯ ಕಾರ್ಯನಿರ್ವಾಹಕ್ಕಾಗಿ ಇಲ್ಲಿಯ ಪ್ರಸಿದ್ಧ ಶ್ರೀ ಯಸ್ ಮಹಾಬಲ ಶೆಟ್ಟಿಗಾರರು ತಮ್ಮ ವೈದ್ಯಶಾಲೆಯ ಮೇಲುಪ್ಪರಿಗೆಯನ್ನು ಬಾಡಿಗೆ ಇಲ್ಲದೇನೇ ಬಿಟ್ಟುಕೊಟ್ಟಿರುವುದಕ್ಕಾಗಿ ತಾಲೂಕು ಕಾಂಗ್ರೆಸ ಕಮಿಟಿಯು ಶ್ರೀ ಶೆಟ್ಟಿಗಾರರಿಗೆ ತಮ್ಮ ಧನ್ಯವಾದಗಳನ್ನು ಕೊಡುತ್ತದೆ ಮತ್ತು ಕೃತಜ್ಞತೆಯನ್ನು ತೋರಿಸುತ್ತದೆ.

ಶ್ರೀ ನಾರಾಯಣ ಕಿಲ್ಲೆಯವರ ಸಂಚಾರ ಕಾರ್ಯಕ್ರಮ:— ತಾ ೬ ೮ ೩೬ ನೇ ಮಂಗಳವಾರ ಸಾಯಂಕಾಲ ಘಂಟೆ ೪ಕ್ಕೆ ಹೆಬ್ರಿ ತಾ ೭ನೇ ಬುಧವಾರ ಸಾಯಂಕಾಲ ಘಂಟೆ ೬—೩೦ಕ್ಕೆ ಬೆಳ್ವೆ, ತಾ ೮ನೇ ಗುರುವಾರ ಸಾಯಂಕಾಲ ಘಂಟೆ ೫ ೩೦ಕ್ಕೆ (ಹಳೇ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ) ಕಾರ್ಕಳ ತಾ ೧೦ನೇ ಶುಕ್ರವಾರ ಸಾಯಂಕಾಲ ಘಂಟೆ ೪ಕ್ಕೆ ಮೂಡಬಿದ್ರೆ, ತಾ ೧೧ನೇ ಶನಿವಾರ ಸಾಯಂಕಾಲ ಘಂಟೆ ೪ಕ್ಕೆ ವೇಣೂರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀಯುತ ನಾರಾಯಣ ಕಿಲ್ಲೆಯವರು ಮೇಲ್ಕಾಣಿಸಿದ ಸ್ಥಳಗಳಿಗೆ ಸಭೆಯ ದಿನ ಬೆಳಗ್ಗೆ ಹೋಗಿ ಸಾಯಂಕಾಲದ ವರೆಗೆ ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸುವ ಕಾರ್ಯವನ್ನು ಮಾಡುವರು. ಸಾಯಂಕಾಲ ಸಾರ್ವಜನಿಕ ಸಭೆ ಸೇರುವುದು. ಆ ಸಭೆಯಲ್ಲಿ ಶ್ರೀಗಳಾದ ಕಿಲ್ಲೆಯವರು ವಕೀಲ್ ಪಿ ವಿ ಉಪಾಧ್ಯಾಯರು, ವಕೀಲ್ ಕೆ ಮಂಜಪ್ಪ ಹೆಗಡೇರು, ಮತ್ತು ವಕೀಲ್ ಯಂ ಯಸ್ ಅಧಿಕಾರಿಗಳು ಮೊದಲಾದವರು ಭಾಷಣಮಾಡುವರು. ಆಯಾಯ ಸ್ಥಳಗಳ ಮಹಾಜನರು ಕಾಂಗ್ರೆಸ್ ಸದಸ್ಯರಾಗಿ ಸೇರುವುದಲ್ಲದೆ ಸಾಯಂಕಾಲ ಸಭೆಗೆ ಬಂದು ಸಹಕರಿಸಬೇಕಾಗಿ ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಬಾರಕೂರು.— ಸುಪ್ರಸಿದ್ಧ ಸಮಾಜವಾದಿಗಳಾದ ಶ್ರೀಮತಿ ಕಮಲಾದೇವಿಯವರು ಮತ್ತು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಮಂಜುನಾಥ ನಾಯ್ಕರೂ ಶ್ರೀಯುತ ಕೆ ಶಾಂತಪ್ಪ ಶೆಟ್ಟರೂ, ತಾ ೨೯—೮—೩೬ನೇ ಆದಿತ್ಯವಾರ ೧೧ ಗಂಟೆಗೆ ಇಲ್ಲಿಗೆ ಬಂದರು. ಇಲ್ಲಿಯ ಸಿಂಹಾಸನ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀಯುತ ಜೋಸೆಫ್ ಪಿ ಸಿಕ್ವೇರ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಕೆ ಕೆ ಶೆಟ್ಟರು ಶ್ರೀಮತಿ ಕಮಲಾದೇವಿಯವರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಶ್ರೀಮತಿಯವರು ಸಮತಾವಾದನೆಂದರೇನ ? ಎಂಬ ವಿಷಯದ ಮೇಲೆ ಭಾಷಣವನ್ನು ಮಾಡಿ ಕಾಂಗ್ರೆಸಿಗೆ ಎಲ್ಲಾ ಮತಗಳವರು ಬೆಂಬಲವನ್ನು ಕೊಡಬೇಕೆಂದೂ ಕಾಂಗ್ರೆಸ್ ಯಾವುದೋ ಒಂದು ಜಾತಿಯ ಅಥವಾ ಧರ್ಮದ ಸಂಸ್ಥೆಯಲ್ಲವೆಂದೂ ಅದು ಎಲ್ಲರ ಹಿತವನ್ನು ರಕ್ಷಿಸುವ ಏಕಮಾತ್ರ ಸಂಸ್ಥೆಯೆಂದೂ ತಿಳಿಸಿದರು. ಶ್ರೀಯುತ ನಾಯಕ ಮಂಜುನಾಥ ನಾಯ್ಕರು ಕಾಂಗ್ರೆಸ್ ಅಧಿಕಾರ ಸ್ವೀಕಾರ ಮಾಡಿದ್ದಾರೆ ಎಂತ ನಾವು ಸುಮ್ಮನೆ ಕುಳಿತುಕೊಳ್ಳಬಾರದು. ಕಾಂಗ್ರೆಸಿನ ಗುರಿಯು ಅಧಿಕಾರ ಸ್ವೀಕಾರ ಮಾತ್ರವಲ್ಲ ಸಂಪೂರ್ಣ ಸ್ವಾತಂತ್ರ್ಯವೆಂದೂ ತಿಳಿಸಿ, ಪ್ರತಿ ಹಳ್ಳಿಗಳಲ್ಲಿಯೂ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ ಕಾಂಗ್ರೆಸಿಗೆ ಬೆಂಬಲವನ್ನು ಕೊಟ್ಟು, ಕಾಂಗ್ರೆಸ್ ಮಂತ್ರಿಮಂಡಲಗಳಿಂದ ಇಲ್ಲಿಗೆ ಬೇಕಾಗುವ ಸಹಾಯತೆಯನ್ನು ಪಡೆಯಬಹುದೆಂದರು. ಕಾಂಗ್ರೆಸ್ ಮೆಂಬರರಾಗಿ ಕೊಟ್ಟ ಳ ಆಣೆಗಳು ಯಾವ ರೀತಿಯಲ್ಲಿ ವ್ಯಯವಾಗುವುದು ಎಂದು ತಿಳಿಸಿ ತಮ್ಮ ಭಾಷಣವನ್ನು ಮುಗಿಸಿದರು. ಅಧ್ಯಕ್ಷರಾದ ಶ್ರೀ ಜೋಸೆಫ್ ಪಿ ಸಿಕ್ವೇರರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದ ನಂತರ ಸಭೆಯು ಚದರಿತು.

ಉಡುಪಿ

(ನಮ್ಮ ಸ್ವಂತ ವಾರ್ತಾಹರರಿಂದ)

ಕುಂದಾಪುರ ತಾಲೂಕಿಗೆ ಕಾಂಗ್ರೆಸ್ ಪ್ರಚಾರಕ್ಕಾಗಿ ಹೋಗಿದ್ದ ಶ್ರೀ ಕೆ. ಕೆ. ಶೆಟ್ಟಿ ಮತ್ತು ಶ್ರೀಮತಿ ಕಮಲಾದೇವಿಯವರು ತಾ. ೨೯ನೇ ಪ್ರಾತಃಕಾಲ ೯ ಗಂಟೆಗೆ ಹಂಗಾರಕಟ್ಟೆ, ಸುಮಾರು ೧೧ ತಾಸಿಗೆ ಬಾರಕೂರು ಮತ್ತು ಅಪರಾಹ್ನ ೩-೩೦ಕ್ಕೆ ಬ್ರಹ್ಮಾವರಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣಗಳನ್ನೂ ತಾಲೂಕು ಕಾಂಗ್ರೆಸ್ ಕಮಿಟಿಯ ಅಪೇಕ್ಷೆಯಂತೆ ಕೊಟ್ಟರು. ಶ್ರೀ ಹಾಂಗಾರ ಮಂಜುನಾಥ ನಾಯ್ಕರು ಸ್ಯಾಬರಕಟ್ಟೆ, ಕೋಟ, ಹಂಗಾರಕಟ್ಟೆ, ಕೋಟೇಶ್ವರ, ಶೀರೂರು ಮತ್ತು ಪಡೂರುಗಳನ್ನು ಸಂದರ್ಶಿಸಿ ಕಾಂಗ್ರೆಸ ಸದಸ್ಯರನ್ನು ಸೇರಿಸುವ ಕಾಂಗ್ರೆಸ್ ಸಮಿತಿಗಳನ್ನು ಸ್ಥಾಪಿಸುವ ಮೊದಲಾದ ಪ್ರಚಾರಕಾರ್ಯವನ್ನು ಕಳೆದವಾರ ನೆಡೆಸಿದರು. ಶ್ರೀ ಬಿ ಕೃಷ್ಣಯ್ಯ ಹೆಗ್ಡೆಯರೂ ಕೋಟೆಕ್ಕೆ ಹೋಗಿದ್ದರು.

ತಾ. ೩೦ನೇ ಆವಂ ಹ [illegible] ಸ್ಥಳೀಯ ಮುನ್ಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ನಗರಾಧ್ಯಕ್ಷರಾದ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ನಾಲ್ವರು ಸದಸ್ಯರು ಗೈರಹಾಜರಿದ್ದರು. ಪ್ರಥಮತಃ ಪಿ ಜಿ, ಆಚಾರ್ಯರ ಸದ್ರಿ ಮುನಿಸಿಪಾಲಿಟಿಯ ಆರ್ಥಿಕ ಪುಸ್ತಕದ ದೆಸೆಯಿಂದ ಹಳೆ ಕೆಲಸಿನ ಕಮಿಷನರ ಬದಲಿಗೆ ರೂ. ೬೩೪ ಮಾಹೆಯಾನ ಸಂಬಳದವರು ಸರಕಾರದವರು ಕೊಡಿಸಬೇಕೆಂಬ ಠರಾವು ಮುಂದೆ ಬಂತು. ಅದನ್ನು ಸಮರ್ಥಿಸಿ ಮಾತನಾಡುತ್ತ ಸದ್ಯದ ಕಮಿಶನರ ಮೇಲೆ ವ್ಯಕ್ತಿಶಃ ಯಾವ ಆಕ್ಷೇಪಗಳಿಲ್ಲದಾಗಿ ಹೇಳಿದರು. ಶ್ರೀ ಎಲ್ ಎಸ್ [illegible] ಸದ್ರಿ ಠರಾವು ಕ್ರಮಬದ್ಧವಲ್ಲವೆಂಬುದಾಗಿ ಆಕ್ಷೇಪವೆತ್ತಿದರು. ಅಧ್ಯಕ್ಷರು ಅದನ್ನು ಸಮರ್ಥಿಸಿ ಠರಾವನ್ನು ಸಭೆಯ ಮುಂದಿಡಲು ಆಕ್ಷೇಪಿಸಿ ತೆಗೆದುಹಾಕಿದರು. ಆದರೆ ಹಿಂದಣ ಸಭೆಯೊಂದರಲ್ಲಿ ಡಾಕ್ಟರು ಸೆನಿಟರಿ ಇನ್ಸ್‌ಪೆಕ್ಟರರಿಗೆ ಹೆಚ್ಚು ಕಲಬು ಇದ್ದಾಗ್ಯೂ ಮತ್ತು ರೂ ೧೦ನ್ನು ಎಲೋವೆನ್ಸಾಗಿ ಕೊಡಬೇಕೆಂದು ಠರಾವು ತಂದು ಅಂಗೀಕೃತಮಾಡಿದ್ದರ ಧೋರಣೆ ಅಥವಾ ಇರಾದೆಯೇನೆಂಬುದಾಗಿ ಹಲವರಲ್ಲಿ ಅನುಮಾನ ಹುಟ್ಟಿಸಿರುತ್ತದೆ. ಮುನಿಸಿಪಲ್ ಶಾಲಾ ಉಪಾಧ್ಯಾಯರ ಸಂಬಳದ ಕಡಿತವನ್ನು ತೆಗೆದ ಹಾಕಿ [illegible] ತೀರ್ಮಾನವಾಯಿತು. ಮುನಿಸಿಪಾಲಿಟಿಯನ್ನು ರದ್ದುಗೊಳಿಸಬೇಕೋ ಬೇಡವೋ ಎಂಬುದಾಗಿ ಜನತಾಭಿಪ್ರಾಯವನ್ನು ತಿಳಕೊಳ್ಳುವರೆ ನಿರ್ಣಯವೂ ಹಣವೂ ಮಂಜೂರಾಗಬೇಕೆಂದು ಶ್ರೀ ಬಿ ವಾಸುದೇವರಾಯರ ಸೂಚನೆ ಬಂದಾಗ ಮುನಿಸಿಪಾಲಿಟಿಯನ್ನೆ ರದ್ದುಮಾಡಬೇಕೆಂದು ಶ್ರೀ ಎಂ ವಿ ಭಟ್ಟರ ಸೂಚನೆಯು ಇನ್ನೂ ತೀರ್ಮಾನಕ್ಕೆ ಬಾಕಿಯಿರುವುದರಿಂದ ಇವುಗಳೆರಡನ್ನೂ ಮುಂದಕ್ಕೆ ವಿಚಾರಿಸಬಹುದೆಂದಾಯಿತು. ಬಾಕಿ ವಿಷಯಗಳು ಸಾಮಾನ್ಯದವುಗಳಾಗಿದ್ದುವು.

ಪಾದಿಕೆಯಂತೆ ಶ್ರಾ ಬ ೬ನೇ ದಿನ ಶ್ರೀ ಕೃಷ್ಣ ಜಯಂತಿ ಪೂಜಾದಿಗಳೂ, ಅಕ್ಕಿ ಹಿಟ್ಟಿ ಹಿಂಡಿ ಉತ್ಸವವೂ ಶ್ರೀಕೃಷ್ಣ ಸನ್ನಿಧಿಯಲ್ಲಿ ಜರಗಿಸಲ್ಪಟ್ಟವು. ಕೆಲವು ವೇಷಧಾರಿಗಳು ಕ್ರಮಕ್ಕೆ ವಿರೋಧವಾಗಿ ವರ್ತಿಸಿದರೆಂದು ಶನಿವಾರ ರಾತ್ರಿ ಲೋಕಪಿನಲ್ಲಿ ದಸ್ತಿಟ್ಟು ಪ್ರಾತಃಕಾಲ ಬಿಡುಗಡೆಮಾಡಲ್ಪಟ್ಟರು. ಈ ಬಗ್ಗೆ ನಿಷೇಧಸೂಚಕ ಸಭೆಯೂ ಸೇರಿತು. ಕೆಲಸಗಾರಯಗಳೂ ಮುಂಜೂರಾಗಿವೆ.

ತಾ ೨೯ನೇ ರಾತ್ರಿ ೯ ೩೦ಕ್ಕೆ ಸಮತಾವಾದಿ ಪಕ್ಷದ ಅಭ್ಯಾಸವರ್ಗದ ಪ್ರಥಮ ವರ್ಗವು ಶ್ರೀಮತಿ ಕಮಲ ದೇವಿಯವರಿಂದ ಪ್ರಾರಂಭಿಸಲ್ಪಟ್ಟಿತು. ವರ್ಗದ ಯುವಕರು ಸದ್ಯ ಸಪ್ಟಂಬರ ತಿಂಗಳಲ್ಲಿ ಕಾಂಗ್ರೆಸ್ ಸದಸ್ಯರನ್ನು ಹೆಚ್ಚಿಸುವ ದಾಖಲೆ ಮಾಡುವ ಕಾರ್ಯಕ್ಕೆ ತೊಡಗಬೇಕೆಂದು ಕೇಳಿಕೊಂಡಂತೆ, ಕೆಲವು ಉಮೇದ್ವಾರರು ಸದ್ರಿ ಕಾರ್ಯಕ್ಕೆ ಒಪ್ಪಿಕೊಂಡು ಕಾರ್ಯಾರಂಭಮಾಡಿರುತ್ತಾರೆ.

ಬಂಟ್ವಾಳ:— ಇಲ್ಲಿಯ ಬೋರ್ಡು ಶಾಲೆಯ (ಹಳೆ ಬಿ. ತಹಸೀಲ್ದಾರ ಕಚೇರಿಯು) ಮಾಡಿನ ರೀಪುಗಳು ತುಂಡಾಗಿ ಬಹಳ ಅಪಾಯಕರ ಸ್ಥಿತಿಯಲ್ಲಿರುವುದರಿಂದ ೯ ಸರ್ಕಲಿನ ಇನ್ಸ್‌ಪೆಕ್ಟರು ಮುಂಬರೂ ಇದರ ಕಡೆಗೆ ಗಮನಕೊಡದೆ ಇರುವುದರಿಂದಲೂ ಡಿಸ್ಟ್ರಿಕ್ಟ್ ಬೋರ್ಡ್ ಈ ವಿಷಯದಲ್ಲಿ ಯಾವದೊಂದು ಆಲೋಚನೆಮಾಡದೆ ಇರುವುದರಿಂದಲೂ ಜಿಲ್ಲಾ ಕಲೆಕ್ಟರವರು ೧ ಗಂಟೆಯ ಮಾತಿಗೆ ಇಲ್ಲಿಗೆ ಬಂದು ಸ್ವತಃ ತನಿಖೆಮಾಡಿ ಹೊಸ ರೀಪುಗಳನ್ನು ಜೋಡಿಸುವಂತೆಯೂ, ಹೊಸ ಹಂಚುಗಳನ್ನು ಹಾಕಿಸುವಂತೆಯೂ ಮಾಡಿದರೆ ಶಾಲಾಮಕ್ಕಳ ಪ್ರಾಣ ರಕ್ಷಿಸಿದಂತಾಗುತ್ತಿತ್ತು.

“ಹಯಾತುಲ ಇಸ್ಲಾಂ ಸಂಘ—ಗೂಡಿನ—ಬಳಿ” ಸದ್ರಿ ಸಂಘವನ್ನು ಆಗೋಸ್ತು ತಿಂಗಳ ತಾ ೧೬ನೇ ದಿನ ರಿಜಿಸ್ಟ್ರಿಮಾಡಲ್ಪಟ್ಟಿರುತ್ತದೆ. ಪ್ರಸ್ತುತ ಸಂಘದ ಕಳೆದ [illegible]

ಸೈಕಲ್ ಇಜ್ಞರೊಲ್ ಕಮಿಟಿಯಲ್ಲಿ ಈ ಕೆಳಗೆ ಕಾಣುವ ಕೆಲವು ಠರಾವುಗಳನ್ನು ಸರ್ವಾನುಮತದಿಂದ ಪಾಸು ಮಾಡಲ್ಪಟ್ಟಿವೆ.

೧. ಪಲಸ್ತೈನಿನಲ್ಲಿ ಬ್ರಿಟಿಷು ಕೈಕೊಂಡ ದಬ್ಬಾಳಿಕೆಯನ್ನೂ, ರೋಯಲ್ ಕಮಿಶನರ ವಿಭಜನ ಪದ್ಧತಿಯನ್ನೂ ಗೂಡು ಮುಸ್ಲಿಮರ ಈ ಸಭೆಯು ಅತ್ಯಂತ ಘೋರತರವಾಗಿ ಖಂಡಿಸುತ್ತ ಕಠಿಣವಾಗಿ ಆಕ್ಷೇಪಿಸುತ್ತದೆ. ಈ ವಿಭಜನ ಪದ್ಧತಿಯಿಂದ ಲೋಕಮುಸ್ಲಿಮರಿಗುಂಟಾದ ಮನೋಕ್ಲೇಶವನ್ನು ಪರಿಹರಿಸಲು ಉಪಯುಕ್ತವಾದ ಒಂದು ರೀತಿಯನ್ನು ಕೈಕೊಳ್ಳಬೇಕಾಗಿ ಈ ಸಭೆಯು ಬ್ರಿಟನನ್ನು ಎಚ್ಚರಿಸುತ್ತದೆ.

೨. ರಾಯಲ್ ಕಮಿಶನರ ವಿಭಜನ ನಿರ್ದೇಶವನ್ನು ನಿರ್ಮೂಲಮಾಡಲಿಕ್ಕೆ ಸರ್ವ ವಿಧದಲ್ಲೂ ಚಳವಳ ಹೂಡಬೇಕೆಂದೂ, ಅದರೊಂದಿಗೆ ಪಲಸ್ತೈನಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸುವ ಬಗ್ಗೆ ಕಠಿಣವಾದ ಪ್ರತಿಜ್ಞೆಯನ್ನು ಕೈಕೊಳ್ಳಬೇಕೆಂದೂ ಇದಕ್ಕೆ ಲೋಕಮುಸ್ಲಿಮರ ಸಹಾಯಾನುಭೂತಿಗಳು ದೊರಕೀತೆಂದೂ ಪಲಸ್ತೈನ್ ಮುಸ್ಲಿಮರನ್ನು ಎಚ್ಚರಿಸುತ್ತದೆ.

೧ನೇ ಠರಾವನ್ನು ಇಂಡಿಯಾ ವೈಸರಾಯರಿಗೂ, ೨ನೇ ಠರಾವನ್ನು ಪಲಸ್ತೈನಿನ ಗ್ರಾಂಡ್ ಮುಫ್ತಿಯರಿಗೂ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

ಕಾಸರಗೋಡು:— ಶ್ರೀರಾಮ ಪೇಟೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಇದೇ ಬರುವ ತಾ ೪-೯-೩೬ನೇ ಶನಿವಾರ ರಾತ್ರಿ ಹೂವಿನಪೂಜೆ ಮಾಡುವುದಾಗಿ ನಿಶ್ಚಯಿಸುವುದರಿಂದ ಶ್ರೀರಾಮನ ದಯೆಯಿಂದ ಜರಗುವ ಈ ಸಮಾರಂಭಕ್ಕೆ ಭಕ್ತಾದಿ ಜನರು ಬಂದು ಈ ಸಮಾರಂಭವನ್ನು ಚಂದಗಾಣಿಸಿಕೊಡಬೇಕಾಗಿ ಶ್ರೀರಾಮ ಮಂಡಳಿಯವರು ಅಪೇಕ್ಷಿಸುತ್ತಾರೆ. ಸರ್ವರಿಗೂ ಸುಸ್ವಾಗತವಿದೆ. ಈ ಸಂದರ್ಭದಲ್ಲಿ ಇಲ್ಲಿಯ ಪೇಟೆಯ ಮಧ್ಯಸ್ಥಳದಲ್ಲಿಯೇ ಶ್ರೀರಾಮಮಂದಿರದ ನಂದಿರದನ್ನು ಕಟ್ಟಿಸಬೇಕಾಗಿ ಕೆಲವು ಯುವಕರು ಉತ್ಸಾಹಪೂರ್ವಕ ಕೆಲಸಮಾಡುತ್ತಿರುವರು.

ಮುಲ್ಕಿ: ಗ್ರಾಮ. ಕರ್ನಾಟಕ ಕಾಂಗ್ರೆಸ್ ಕಮಿಟಿಯ ಪರವಾಗಿ ತಾ ೨೫—೮—೩೬ರಲ್ಲಿ ಗ್ರಾಮ ನಿವಾಸಿಗಳು ಒಟ್ಟುಗೂಡಿ ಕಾಂಗ್ರೆಸಿನಲ್ಲಿ ಮೆಂಬರರನ್ನು ಸೇರಿಸಿಕೊಳ್ಳುವ ಉದ್ಯೋಗವನ್ನು ಮಾಡುತ್ತಾ ಗ್ರಾಮದ ನಾನಾ ಭಾಗಗಳಲ್ಲಿ ಸಂಚರಿಸಿ ಅಂಬಲಪಾಡಿಯಲ್ಲಿ ಹೋಗಿ ಫುಲ್ಲ ಯಕೋಡಿ ಚಂದುನಾಯ ರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ೨ ಘಂಟೆಯ ಸಮುದ್ರ [illegible] ಸಂಧ್ಯಾಕೃಷ್ಣಯ್ಯ [illegible] ಕಾಂಗ್ರೆಸಿನ ಮೆಂಬರರು [illegible] ಭಾಷಣಮಾಡಿದರು. [illegible] ಶ್ರೀ ಕೃಷ್ಣನಾಯರ [illegible] ಅನೇಕರನ್ನು ಸೇರಿಸಿದ ಮೇಲೆ ಬಾಲಕರ ರಾಷ್ಟ್ರಧ್ವಜವಂದನೆಯ ನಂತರ ಅಧ್ಯಕ್ಷರ ಉಪಸಂಹಾರ ಭಾಷಣದ ನಂತರ ಸಭೆಯು ಮುಕ್ತಾಯವಾಯಿತು.

ಎಮ್ಮೆಗಳು — ಈ ವರ್ಷದ ಮಳೆಯು ಕೂಡಿ ತಿಂಗಳ ಆರಂಭದಿಂದ ಎಡೆಬಿಡದೆ ಸುರಿದಿರುವುದರಿಂದ ಕೆಲವು ತಗ್ಗುಸ್ಥಾನದ ಗದ್ದೆಗಳನ್ನು ನೆಡಲಿಕ್ಕೆ ಆಗದೆ ಹಾಗೆಯೇ ಬಿಟ್ಟಿರುವುದರಿಂದಲೂ ಮತ್ತು ಮಳೆಯು ಹೆಚ್ಚಾಗಿ ಬಂದು ಗದ್ದೆಗಳಲ್ಲಿ [illegible] ನಿಂತು ಪೈರು ಕೊಳೆತುಹೋಗಿರುವುದರಿಂದಲೂ ಮತ್ತು ಕಳೆದ ಎರಡು ಮೂರು ವಾರಗಳಿಂದ ಮಳೆ ಬಾರದಿರುವುದರಿಂದ ಬತ್ತದ ಬೆಟ್ಟು ಗದ್ದೆಗಳ [illegible] ಕೆಲವು ರೈತರು ತುಂಬಾ ನಷ್ಟಕ್ಕೆ ಗುರಿಯಾಗಿರುವರೆ ಇಷ್ಟುಮಾತ್ರವಲ್ಲದೆ ಸ್ಥಳೀಯ ಬೆಳೆಗೆ [illegible] ಇರುವುದರಿಂದ ತುಂಬಾ ಕಷ್ಟದಲ್ಲಿ ಸಿಕ್ಕಿರುವರು.

ಮೂಲ್ಕಿ:— ಸ್ಥಳೀಯ ಸೆಂಟ್ರಲ್ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ ೧೪—೮—೩೬ರಲ್ಲಿ ಸ್ಥಳೀಯ ಬೋರ್ಡ್ ಮಾಡುಗಿ [illegible]

ಮಂಗಳೂರು.

ದ. ಕ. ಜಿಲ್ಲಾ ಬೋರ್ಡಿನ ಸಂಬಳದ ಸಹಕಾರಿ ಸಭೆಯೊಂದು ಇನ್ನು ತಾ ೧೧—೯—೩೬ನೇ ಶನಿವಾರ ದಿನ ಬೆಳಗ್ಗೆ ಘಂಟೆ ೧೧ರಿಂದ ೧೨ ವರೆಗೂ ಅನಂತರ ಮಧ್ಯಾಹ್ನ ಘಂಟೆ ೨—೩೦ರಿಂದ ೪ರ ವರೆಗೂ ಮಂಗಳೂರಿನ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಕೂಡಲಿರುವುದು. ೧೯೩೬—೩೭ರ ಎಡ್‌ಮಿನಿಸ್ಟ್ರೇಶನ್ ರಿಪೋರ್ಟನ್ನು ಈ ಸಭೆಯ ಮುಂದೆ ಇಡಲಾಗುವುದು.

ಪ್ರೊಫೆಸರ್ ವಾರ್ಕೀಯವರ ಆಗಮನ— ಮದ್ರಾಸ್ ಸರಕಾರದ ವಿದ್ಯಾಮಂತ್ರಿಗಳ ಪಾರ್ಲಿಮೆಂಟರಿ ಸೆಕ್ರಿಟರಿಗಳಾದ ಪ್ರೊಫೆಸರ್ ಸಿ ಜೆ ವಾರ್ಕೀಯವರು ಕಳೆದ ತಾ ೨೬ಕ್ಕೆ ಮಂಗಳೂರಿಗೆ ಚಿತ್ತೈಸಿದ್ದರು. ಅವರನ್ನು ಇದಿರುಗೊಳ್ಳಲು ಅನೇಕ ಮಂದಿ ಕಾಂಗ್ರೆಸ್ ಮುಖಂಡರು ರೈಲ್ವೆ ಸ್ಟೇಶನಿಗೆ ಹೋಗಿದ್ದರು.

ವಿದ್ಯಾರ್ಥಿಗಳ ಸಂಘದ ಅವಶ್ಯಕತೆ— ತಾ ೨೮ನೇ ಸಾಯಂಕಾಲ ಮಂಗಳೂರಿನ ಟೌನ್ ಹಾಲಿನಲ್ಲಿ ಪ್ರೊ ವಾರ್ಕೀಯವರು ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ‘ವಿದ್ಯಾರ್ಥಿಗಳ ಸಂಘದ ಆವಶ್ಯಕತೆ’ ಎಂಬ ವಿಷಯವಾಗಿ ಭಾಷಣವಿತ್ತರು. ಪ್ರೊ ಬಿ ಜಿ ಹೆಚ್ ಸೇಥರು ಅಗ್ರಾಸನ ವಹಿಸಿದ್ದರು.

ಮದ್ರಾಸ್ ಸರಕಾರದ ವಿದ್ಯಾಪ್ರಸಾರದ ಯೋಜನೆ— ಮದ್ರಾಸ್ ಸರಕಾರದವರು ಒಂದು ಯೋಜನೆಯನ್ನು ಮಾಡಿರುವರು. ಇದನ್ನು ಜಾರಿಗೆತರಬೇಕಾದರೆ ವಿದ್ಯಾಪ್ರಸಾರಕಾರ್ಯದಲ್ಲಿ ಸಂಬಂಧಿಸಿರುವ ಮಹನೀಯರ ಅಭಿಪ್ರಾಯಗಳನ್ನು ತಿಳಿಯಲು ಪ್ರೊ. ವಾರ್ಕೀಯವರು ಕಳೆದ ತಾ ೨೬ರಲ್ಲಿ ಜಿಲ್ಲಾ ಬೋರ್ಡ ಆಫೀಸಿನಲ್ಲಿ ಒಂದು ಸಭೆ ಜರಗಿಸಿದರು. ಅದಕ್ಕೆ ಕಾಲೇಜುಗಳ ಪ್ರಿನ್ಸಿಪಾಲರುಗಳೂ ಹೈಸ್ಕೂಲು ಹೆಡ್‌ಮಾಸ್ತರರೂ, ಶಾಲಾ ಮೆನೇಜರರೂ, ಜಿ ಬೋ ಪ್ರೆಸಿಡೆಂಟರೂ, ಮುನಿಸಿಪಲ್ ಅಧ್ಯಕ್ಷರೂ ಕಮಿಷನರೂ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳೂ ಇನ್ಸ್‌ಪೆಕ್ಟರೂ ಬಂದಿದ್ದರು. ಅನೇಕ ವಿಷಯಗಳಲ್ಲಿ ಚರ್ಚೆಯು ನಡೆದು ಹೆಚ್ಚಿನವರ ಅಭಿಪ್ರಾಯವನ್ನು ಪ್ರೊ ವಾರ್ಕೀಯವರು ತಿಳಿದುಕೊಂಡರು.

ಸರಕಾರದಿಂದ ಆಕ್ಷೇಪಾರ್ಹವಾದ ಪುಸ್ತಕಗಳು— ೧೯೦೬ರಿಂದ ಇವತ್ತಿನ ವರೆಗೆ ಸರಕಾರದವರು ಅನೇಕ ಪುಸ್ತಕಗಳನ್ನು ಜಪ್ತಿ ಮಾಡಿರುವರು. ಆದರೆ ಇದೀಗ ಕಾಂಗ್ರೆಸ ಮಂತ್ರಿಗಳು ಪುಸ್ತಕಗಳ ಮೇಲೆ ಈ ಪ್ರಕಾರದ ನಿರ್ಬಂಧವಿರಬಾರದೆಂದು ಗೊತ್ತುಮಾಡಿರುವರು. ಇದರಿಂದ ಕನ್ನಡದಲ್ಲಿ ಇವತ್ತಿನ ವರೆಗೆ ಜಪ್ತಾದ ಪುಸ್ತಕಗಳ ಹೆಸರುಗಳನ್ನು ಕರ್ನಾಟಕ ಕಾಂಗ್ರೆಸ ಕಮಿಟಿಯ ದ್ವಾರದಲ್ಲಿ ಕಳುಹಿಸಿದರೆ ಸರಕಾರದವರಿಗೆ ಬರೆದು ತಿಳಿಸುವೆವು ಎಂದು ಶ್ರೀ ಮಂಗೇಶರಾಯರು ಇದರ ತಿಳಿಸುತ್ತಾರೆ.

[illegible] ಸಾಪಬಂತು ಕೊಲೆಕಾಡಿ [illegible] ಶಾಲೆಯ [illegible] ಉಪಾಧ್ಯಾಯ ಶ್ರೀ ಯಂ ಮಂಜಪ್ಪ [illegible] ಅಧ್ಯಕ್ಷರಾಗಿದ್ದರು. [illegible] ಪಿಪ್ಪ ಚಟುವಟಿಕೆಗಳನ್ನು [illegible] ಎಸ್ [illegible] ಎಂಬ ವಿಷಯದ ಮೇಲೆ ಉಪನ್ಯಾಸ ಇವೇ ಮೊದಲಾದ ಕಾರ್ಯಭಾಗಗಳು ನಡೆದುವು. ಮುಂದಿನ ಸಭೆಯು ಇದೇ ಬರುವ ತಿಂಗಳ ತಾ ೧೮ನೇ ಶನಿವಾರ ಅಪರಾಹ್ನ ಘಂಟೆ ೨ ೩೦ಕ್ಕೆ ಕಾಪು ಬೋರ್ಡ್ ಹುಡುಗಿಯರ ಶಾಲೆಯಲ್ಲಿ ಕೂಡಲಿರುವುದು.

ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ಕಳೆದ ತಾ ೨೮ಕ್ಕೆ ಶ್ರೀಕೃಷ್ಣ ಜಯಂತಿ ಸಮ್ಬಂಧ ಉಪನ್ಯಾಸ ಭಜನೆ ಪೂಜೆ ಇತ್ಯಾದಿಗಳು ಜರಗಿದುವು. ಶಾಲೆಗೆ [illegible] ವಿದ್ಯಾರ್ಥಿಗಳ [illegible] ನಡೆದಿತ್ತು.

ವಿದ್ಯಾರ್ಥಿಗಳಿಗೆ ಸುಸಮಯ! ಇಂಗ್ಲೀಷ್ ಮತ್ತು ಕನ್ನಡ ಅರ್ಥಗಳೆರಡೂ!

೯೭೨೦ ಪುಟಗಳು! **ಒಂದೇ ಡಿಕ್ಷನರಿಯಲ್ಲಿ!** ಬೆಲೆ ರೂ. ೨ ಮಾತ್ರ!

ಪರಿಷ್ಕರ್ತರ — ಶ್ರೀಯುತ ಡಿ. ಕೆ ಭಾರದ್ವಾಜರು



ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ ಮತ್ತು ಅನೇಕ ಶಾಲಾ ಹೆಡ್‌ಮಾಸ್ತರ್ ಮೊದಲಾದವರ ಮೆಚ್ಚುಗೆ ಪಾತ್ರವಾಗಿ ಮೈಸೂರು ಸರಕಾರದವರಿಂದ ಎಲ್ಲಾ ಮಿಡ್ಲ ಸ್ಕೂಲ್, ಹೈಸ್ಕೂಲ್ ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲ್ ಮತ್ತು ಟ್ರೈನಿಂಗ್ ಕಾಲೇಜುಗಳ ಲೈಬ್ರರಿಗಳಿಗೆ ಮಂಜೂರು ಪಡೆದಿರುವ "ಸ್ಟೂಡೆಂಟ್ಸ್ ಮಾಡರ್ನ ಕನ್‌ಸೈಜ್ ಡಿಕ್ಷನರಿ" ಎಂಬ ಸುಮಾರು ೯೭೨೦ ಪುಟಗಳ ಎಲ್ಲಾ ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕವಾದ, ಶಬ್ದಕೋಶವನ್ನು ಪ್ರಕಾಶಪಡಿಸಿರುತ್ತೇವೆ "

ಪ್ರಕಾಶಕರು: ಪಿ. ಸಿ. ಶಾಬಾದಿಮಠ,

ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುವುದು

ಮಂಗಳೂರು ಏಜೆಂಟ್ —

ಸ್ಕೂಲ್ ಬುಕ್ ಕಂಪೆನಿ,

ರಥಬೀದಿ ಮಂಗಳೂರು, ದ ಕ

ಡಾಕ್ಟರ್ ಯು ರಾಮರಾವ್ ಅವರ ಅಭಿಪ್ರಾಯದಲ್ಲಿ ಇದನ್ನು ಅವರು ಓದಿಕೊಂಡು ಅತಿ ಉಪಯುಕ್ತವಾದುದೆಂದೂ ತಮ್ಮಗೆ ಮೆಚ್ಚುವಂಥದ್ದಾಗಿ ಕನ್ನಡಿಗರೆಲ್ಲರ ಆದರಕ್ಕೆ ಅರ್ಹವಾದುದೆಂದೂ ತಿಳಿದುಬಂದಿದೆ.

...ಪ್ಪ ಬಿಸಿಯ ಚಹಾ...

...ಬೇಸಿಗೆಯಲ್ಲಿ ತಂಪನ್ನನುಭವಿಸುವುದು ಹೇಗೆ ಎಂಬುದು ಭರತಖಂಡದ ಜನರಿಗೆ ನಿರಂತರ ಪ್ರಶ್ನೆಯಾಗಿದೆ. ಏಕೆಕ್ಕೆಂದರೆ ಇಲ್ಲಿನ ಜನರು ಬೇಸಿಗೆಯ ಬೇಗೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಮೈದಾನ ಪ್ರದೇಶದಲ್ಲಿರುವ ಅಸಂಖ್ಯಾತ ಪ್ರಜಾಕೋಟಿಯು ಆರು ತಿಂಗಳ ಬೇಸಿಗೆಯ ಬೇಗೆಯನ್ನು ಅನುಭವಿಸಲೇ ಬೇಕು. ಗತ್ಯಂತರವಿಲ್ಲ.

ಎಪ್ರಿಲ್ ತಿಂಗಳಿನಿಂದ ಉಷ್ಣವು ಅಧಿಕವಾಗುವುದು ಭರತಖಂಡದ ಸಹಜ ಹವಾಗುಣ. ಹೀಗೆ ಉಷ್ಣವು ಅಧಿಕವಾದಂತೆಲ್ಲಾ ಶಾರೀರಿಕ ಅಸೌಖ್ಯವೂ ಹೆಚ್ಚಾಗುವುದು. ಈ ಅಸೌಖ್ಯವನ್ನು ಯಾರೂ ಅಲಕ್ಷ್ಯ ಮಾಡಲಾಗದು. ಎಲ್ಲರೂ ಸೌಖ್ಯ ಹಾದಿಯನ್ನೇ ಹುಡುಕುವರು. ಬೇಸಿಗೆ ಬಂದರೆ ದೇಹವನ್ನು ತಂಪಾಗಿರಿಸುವುದು ಹೇಗೆ ಎಂಬ ಯೋಚನೆಯಲ್ಲಿ ಮಗ್ನರಾಗುತ್ತೇವೆ. ನಮ್ಮ ನಮ್ಮ ದೇಹದ ಉಷ್ಣವನ್ನು ಕಡಿಮೆಮಾಡಿಕೊಳ್ಳುವುದೆಂತು ಎಂಬ ಸಮಸ್ಯೆಯನ್ನು ಬಗೆಹರಿಸಲು ಪ್ರಾರಂಭಿಸುತ್ತೇವೆ. ನಾವು ತಂಪನ್ನನುಭವಿಸಬೇಕು, ಅದು ಹೇಗೆ? ಉಷ್ಣದ ಪರಿಣಾಮಗಳಿಗೆ ಮನುಷ್ಯನು ಸಿಕ್ಕಿಬೀಳುವುದು ಸಹಜ. ಸಿಕ್ಕಿಬೀಳುವಾಗ ಅನೇಕ ಅಂಶಗಳನ್ನು ಪರ್ಯಾಲೋಚಿಸಬೇಕು. ಉಷ್ಣದ ಪರಿಣಾಮಗಳಿಗೆ ಮುಖ್ಯವಾಗಿ ಸೂರ್ಯನ ಕಿರಣಗಳೂ, ನಮ್ಮ ಬಟ್ಟೆಬರೆಗಳೂ, ನಾವು ವಾಸಮಾಡುವ ಮನೆಗಳೂ ನಮ್ಮ ಅಂಗಸಾಧನೆ ಕ್ರಮಗಳೂ ಮುಖ್ಯ ಕಾರಣ ಆದರೆ ಹೀಗೆ ಕೆರಳಿದ ದೇಹದ ಉಷ್ಣವನ್ನು ಯಾವ ಬಗೆಯಲ್ಲಾದರೂ ಇಳಿಸುವುದು ನಮ್ಮೆಲ್ಲರಿಗೂ ಸೇರಿದ ಸಾಮಾನ್ಯ ಸಮಸ್ಯೆ.

ದೇಹದ ಉಷ್ಣವು ಜಾಸ್ತಿಯಾದರೆ ಒಂದು ಲೋಟಾ ಟೀ ಕುಡಿದರೆ ತಂಪಾಗುವುದೆಂಬ ನಂಬಿಕೆ ಅನೇಕರಲ್ಲಿ ಮೂಡಿದೆ. ಏತಕ್ಕೆ? ಶರೀರ ಸಹಿಸುವಷ್ಟು ಬಿಸಿ ಬಿಸಿ ಟೀಯನ್ನು ಕುಡಿಯುವುದರಿಂದ ಬೆವರು ಜಾಸ್ತಿಯಾಗಿ ಉಷ್ಣವು ಕಡಿಮೆಯಾಗುತ್ತದೆ. ಬ್ರಿಟಿಷ ವೈದ್ಯಪ್ರವೀಣರೊಬ್ಬರು 'ಡೈಲಿ ಟೆಲಿಗ್ರಾಫ್' ಪತ್ರಿಕೆಯಲ್ಲಿ ಮಕ್ಕಳ ಅನುಬಂಧದಲ್ಲಿ ಒಂದು ಲೇಖನ ಬರೆಯುತ್ತಾ "ಬೆವರಿನಿಂದ ನಮ್ಮ ಚರ್ಮವು ತಂಪಾಗಿ ಉಷ್ಣವು ಅಧಿಕವಾಗಿ ನಿಲ್ಲುವುದು. ಬಿಸಿ ಬಿಸಿ ಟೀಯಿಂದ ತಂಪೇರುವುದು, ಮತ್ತು ಬೆವರು ಧಾರಾಕಾರವಾಗಿ ಸುರಿಯುವುದು ಹಾಗೆ ಬೆವರುವಾಗ ಒಂದು ಲೋಟಾ ಟೀಯಿಂದ ನೂರಕ್ಕೆ ಐವತ್ತರಷ್ಟು ಹೆಚ್ಚು ಉಷ್ಣವು ದೇಹದಿಂದ ಹೊರಗೆ ಹೋಗುವುದು"

ಪ್ರತಿಯೊಬ್ಬ ಟೀ ಕುಡಿಯುವವರೂ ಈ ಮಾತನ್ನು ಅನುಭವದಿಂದ ಹೇಳುತ್ತಾರೆ. ಬಿಸಿ ಬಿಸಿ ಟೀ ಕುಡಿದ ಕೂಡಲೆ ಬೆವರೇರಿ ಸೌಖ್ಯವೇರ್ಪಡುವುದು. ತಣ್ಣೀರನ್ನು ಕುಡಿದರಾಗಲೀ ಮಂಜುಗಡ್ಡೆ ನೀರನ್ನು ಕುಡಿದರಾಗಲೀ ಈ ಅನುಭವವುಂಟಾಗುವುದಿಲ್ಲ. ಬಾಯಾರಿಕೆಗೆ ನೀರು ಸರಿಯಾದ ಪಾನೀಯವಲ್ಲವೆಂದು ಸುಪ್ರಸಿದ್ಧ ವೈದ್ಯರೇ ಒಪ್ಪಿಕೊಂಡಿರುತ್ತಾರೆ. ಕಲ್ಕತ್ತೆಯ ವಿಖ್ಯಾತ ವೈದ್ಯರೊಬ್ಬರು 30-4-37ನೇ 'ಸ್ಟೇಟ್ಸ್‌ಮೆನ್' ಪತ್ರಿಕೆಯಲ್ಲಿ ಒಂದು ಲೇಖನ ಬರೆದು 'ಮಂಜುಗಡ್ಡೆಯ ಸಂಪರ್ಕವಿರುವ ಅನೇಕ ಪಾನೀಯಗಳಿಗಿಂತ ಬಿಸಿ ಟೀಯೇ ತಂಪಾದುದು' ಎಂದು ಹೇಳಿರುವರು.

ಅಲ್ಲದೆ ಬೊಂಬಾಯಿನ 'ಇಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯಲ್ಲಿ ತಂಪನ್ನನುಭವಿಸುವುದು ಹೇಗೆ? ಎಂಬ ಶಿರೋನಾಮೆಯಲ್ಲಿ ಒಂದು ಲೇಖನ ಬರೆದು "ಬೇಸಿಗೆ ಕಾಲದಲ್ಲಿ ಐಸ್ ಕ್ರೀಮ್ ಮತ್ತು ಮಂಜುಗಡ್ಡೆ ಪಾನೀಯಗಳಿಗಿಂತ ಬಿಸಿ ಬಿಸಿ ಟೀಯೇ ಉತ್ತಮವಾದುದು" ಎಂಬುದಾಗಿ ಬರೆಯಲ್ಪಟ್ಟಿದೆ.

ಬಿಸಿ ಬಿಸಿ ಟೀಯನ್ನು ಬೇಸಿಗೆ ಕಾಲದಲ್ಲಿ ಕುಡಿದಷ್ಟೂ ದೇಹಕ್ಕೆ ತಂಪಾಗುವುದು. ಬೇಸಿಗೆ ಕಾಲಕ್ಕೆ ಬಿಸಿ ಟೀ ತಕ್ಕ ಪಾನೀಯ. ಬಿಸಿ ಬಿಸಿ ಟೀಯನ್ನು ಕುಡಿದು ಅನುಭವಪಟ್ಟವರೆಲ್ಲಾ "ಬಿಸಿಲು ಹೆಚ್ಚಿದಂತೆಲ್ಲಾ ಬಿಸಿ ಬಿಸಿ ಪಾನೀಯ"ವೆಂಬ ಪ್ರಕೃತಿನಿಯಮವನ್ನನುಸರಿಸುತ್ತಿರುವರು. ಬೇಸಿಗೆಯ ಬೇಗೆಯನ್ನು ನಿವಾರಿಸಲು ಬಿಸಿ ಬಿಸಿ ಟೀಯೇ ನಮ್ಮ ಏಕಮಾತ್ರ ಸಲಹೆ.

NOTICE

In the Court of the District Judge of South Kanara.

Original Petition No. 73 of 1937.

In the matter of Babjan Saheb, a minor.

Between:—

Yusuf Saheb ... ... Petitioner

and

1. Mariyambi, 2. Dawood Saheb... Respondents.

Notice is hereby given that on 16-8-1937 the abovenamed petitioner has presented an application to the above court praying that the Petitioner Yusuf Saheb, son of Mahammad Suleman Saheb, residing at Gollerkery near Webster Market, Mangalore Town, may be appointed guardian of the person and property of the abovenamed minor, and for other relief, and that the 9th day of September 1937 has been fixed for hearing of the application, and that if any person or persons interested desire to oppose the said application, or to apply for the appointment of any person other than the said petitioner as guardian of the person or property of the said minor they must appear on the said 9th day of September 1937 in above court, in person, or by a duly authorised Pleader and be prepared to adduce any documentary and oral evidence upon which they rely, and that in default of their appearance, the said application will be heard and determined in their absence. Any relation or friend of the said minor may appear and be heard upon the said application and may inspect and obtain a copy of the petition; and it is not necessary to present any petition for this purpose.

Mangalore, 28-8-1937 } B Vaikunta Baliga, Vakil for Petitioner.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	1— 8	4— 0
ಮುಸ್ಕಿ ..	4— 4	4— 8
ಗುಡ್ಡು ...	3—12	4— 0
ಕೂರ್ ಅವ್ವಲ್ ಬೆಳ್ತಿಗೆ ...	4— 8	5— 0
ರಂಗೂನು ಬೆ. ಗೋ. ಗೆ...	6 — 8	7— 0
ಎಲ್ಲೂರು ಬೆ. ಮು. ಗೆ...	3—14	4— 0
ಗೋಧಿ ಗೋಣಿ ಗೆ ...	12 — 8	15— 8
ತೊಗರಿ ಗೋಣಿ ಗೆ ...	11— 8	18— 8
ಹುರುಳಿ ಗೋಣಿ ಗೆ ...	5— 0	5 — 4
ಕಡಲೆ ಗೋಣಿ ಗೆ ...	9 — 8	10 — 8
ತೊಗರಿಬೇಳೆ ಗೋಣಿಗೆ...	11— 0	19— 0
ಉದ್ದು ಗೋಣಿ ಗೆ ...	9— 0	9 — 8
ಹೆಸರು ಗೋಣಿ ಗೆ ...	9—12	10— 8
ಕೂರುಬೆಲ್ಲ ಖಂಡಿ ಗೆ ...	8?— 0	35— 0
ಉಪ್ಪು ಗೋಣಿ ಗೆ ...	4— 8	5— 4
ಕೊಬ್ರಿ ಖಂಡಿ ಗೆ ...	85— 0	90— 0
ಕೊಬ್ರಿ ಹಿಂಡಿ ಖಂಡಿ ಗೆ...	20 — 0	21— 0
ಎಳ್ಳಿಂಡಿ ಖಂಡಿ ಗೆ ...	25 —	26 — 0
ಕೊಬ್ರಿ ಎಣ್ಣೆ ಮುಡಿ ಗೆ...	4— 6	8— 4
ಎಳ್ಳೆಣ್ಣೆ ಮುಡಿ ಗೆ ...	6— 0	7— 0
ಹರಳೆಣ್ಣೆ ಪೆಟ್ಟಿಗೆ ಗೆ...	6— 5	7— 5
ಮೋರಿಸ್ ಸಕ್ಕರೆ ಮು. ಗೆ...	2— 11	2 —12
ಮೆಣಸು ...	4— 8	6— 0
ಸಾಸಿವೆ ಮುಡಿ ಗೆ ...	5 — 8	6— 8
ಕಾಳುಮೆಣಸು ಖ. ಗೆ ...	97 — 8	100— 0
ಮೆಂತ್ಯ ...	80— 0	85— 0
ಗೇರುಬೀಜ ಮು. ಗೆ ...	3 —14	4— 2
ಶುಂಠಿ ಖಂಡಿ ಗೆ ...	50— 0	55— 0
... ಮು. ಗೆ...	14— 12	15— 0
... ಮು. ಗೆ	17— 0	18— 0
... ಗೆ ...	13— 8	14— 0
... ಮು. ಗೆ...	12— 0	12— 0
ಕದಲು ಗೆ ...	22— 4	22— 6
... ಖಂಡಿ ಗೆ	40— 0	45— 0
... ಖಂಡಿ ಗೆ	140— 0	148— 0
... ಖಂಡಿ ಗೆ...	192— 0	195— 0
... ...	67— 0	70 — 0

The Coronation of their Majesties is now over! But Remember

Comfortable *Ideal* *Central*

The Coronation Darbar Restaurant

Boarding & Lodging

Opposite Govt College Hampankatta Mangalore

A Home in the Motherland

Cleanliness and comfort at moderate cost.

A delightful hotel in the centre of the town and nearest to the Rly Station & Bus Station

Gives best Refreshment & dinner service and modern preparations such as Biryani, Fowl Biryani Pulav Khushka, Chops, Cutlets, Roast, Bheja Khima, Tomato mutton Roasted Fowl Omlet Sumbusa, etc a speciality

Special lodging arrangements for travellers, Students will find all their food requirements

Please Step in One and Convince Yourself

S B Mohidin, S. M Sayed Ali Saheb (Bhatkal) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಸೌಲಭ್ಯ ಸೌಕರ್ಯ ಸುಖದಾಯಕ

ಶುಚೀಕರವಾದ ಮತ್ತು ರುಚಿಯಾದ ತಿಂಡೀ ಪದಾರ್ಥಗಳು ಸುಲಭ ದರದಲ್ಲಿ ಇನ್ನೆಲ್ಲಿಯೂ ದೊರಕಲಾರವು.

ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಆಫೀಸುಗಳಿಗೆ ತೀರಾ ಸಮೀಪವು. ಮನೋಲ್ಲಾಸಕರ ಕಾಫಿ, ತಿಂಡಿ, ಊಟ ಉಪಚಾರಗಳು

ಮುರ್ಗಿ ಬಿರಿಯಾನಿ, ಬಿರಿಯಾನಿ, ಮುರ್ಗಿ ರೋಸ್ಟ್, ಪುಲಾವ್, ಖುಷ್ಕಾ ಚಾಪ್, ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮಟೊಮಟನ್, ಆಮ್ಲೆಟ್, ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವವು

ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರಯಾಣಿಕರಿಗೆ ಇರಲಿಕ್ಕೆ ತೃಪ್ತಿಕರವಾದ ಏರ್ಪಾಡು. ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿರುವುದಾದರೆ ಒಂದೊಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ.

ಯುಸ್. ಬಿ. ಮೊಹಿದಿನ್,
ಯುಸ್. ಎಮ್. ಸಯ್ಯದ್ ಆಲಿ ಸಾಹೇಬ್, (ಭಟ್ಕಳ) } ವ್ಯವಸ್ಥಾಪಕರು.

ಮದ್ಯದಂಗಡಿಗಳು ವಿಶ್ರಾಂತಿಗೃಹಗಳಾಗಿ ಮಾರ್ಪಡಬೇಕು

ವಿದ್ಯಾ ಸಮಸ್ಯೆ ಮತ್ತು ಮದ್ಯನಿಷೇಧದ ಕುರಿತು ಮಹಾತ್ಮರ ಅಭಿಪ್ರಾಯಗಳು.

ಈಗಿನ ವಿದ್ಯಾವಂತರು ಒಬ್ಬ ಕುಡಿಕನಿಗಿಂತ ಹೆಚ್ಚಿನ ಸಂಸ್ಕೃತಿಯುಳ್ಳವರಲ್ಲ' ಒಂದು ವೇಳೆ ಶಿಕ್ಷಣವಿಲ್ಲದಿದ್ದರೂ ಕೊರತೆಯಾಗದು, ಸಂಪೂರ್ಣ ಮದ್ಯ ನಿಷೇಧವು ನಮಗೆ ಬೇಕು.

"ಮದ್ಯದಿಂದ ಗಳಿಸಿದ ಉತ್ಪನ್ನದಿಂದ ನಮ್ಮ ಮಕ್ಕಳ ವಿದ್ಯಾಭ್ಯಾಸ ನಡೆಯುವುದು, ನವಸುಧಾರಣೆಗಳ ನಿರ್ದಯಾತ್ಮಕ ನಿಂದಾಸ್ತುತಿಯು, ಇದೆ ವಿದ್ಯಾ ಸಮಸ್ಯೆಯು. ಅದರಿಂದ ನಾವು ದಿಗಿಲುಪಡಬೇಕಾಗಿಲ್ಲ. ಆ ಸಮಸ್ಯೆಯ ಸುಧಾರಣೆಯಲ್ಲಿ ಯಾವತರ್‍ಹ ತರದ ವ್ಯಯಗಳನ್ನಾದರೂ ಸಹಿಸಬಹುದು. ಆದರೆ ಮದ್ಯನಿಷೇಧವೆಂಬ ನಮ್ಮ ಆದರ್ಶಕ್ಕೆ ಎಂದಿಗೂ ಹಾನಿ ಬರಬಾರದು. ಮದ್ಯದ ಉತ್ಪನ್ನ ವಿನಹ ನಮ್ಮ ಮಕ್ಕಳ ಶಿಕ್ಷಣ ನಡೆಯದು ಎಂಬುದನ್ನು ಆಲೋಚಿಸುವರೆ ನಮ್ಮಲ್ಲಿ ಅತ್ಯಂತ ಲಜ್ಜಾಸ್ಪದವೆನಿಸಬೇಕು. ಮದ್ಯನಿಷೇಧದಿಂದ ಒಂದು ವೇಳೆ ನಮ್ಮ ಮಕ್ಕಳ ಶಿಕ್ಷಣವು ನಿಂತು ಬಿಡುವ ಸಂಭವ ಬಂದರೂ, ಅದೊಂದು ಕಡಿಮೆ ತರದ ಕೆಡುಕೆಂದು ನಾವು ಭಾವಿಸಬೇಕು. ಇಂದಿನ ದಿನಗಳ ರೂಢಿಯಲ್ಲಿರುವ ಕ್ರಮಗಳಿಗನುಸಾರವಾಗಿಯೆ ನಮ್ಮ ಮಕ್ಕಳ ಶಿಕ್ಷಣವಾಗಬೇಕೆಂಬ ಆಲೋಚನೆಯು ನಮ್ಮನ್ನು ಪೀಡಿಸದಿದ್ದರೆ, ಮೇಲಿನ ಸಮಸ್ಯೆಯಿಂದ ನಾವು ದಿಗಿಲು ಹೊಂದಲಾರೆವು".

ಮೇಲಿನದು ಕಾಂಗ್ರೆಸು ಅಧಿಕಾರ ಸ್ವೀಕರಿಸಿದಂದಿನಿಂದ ಆ ಸಮಸ್ಯೆ ಕುರಿತು ಅನೇಕ ಮಾತುಕತೆಗಳನ್ನು ನಡೆಯಿಸಿ, ಆ ಕುರಿತು ಅತ್ಯಂತ ಲಕ್ಷ್ಯವನ್ನು ಕೊಟ್ಟ ಮಹಾತ್ಮಾಜಿಯರ ಅಭಿಪ್ರಾಯವಾಗಿರುತ್ತದೆ. ಶಿಕ್ಷಣ ಪ್ರವೀಣರು ಒಟ್ಟು ಕೂಡಿ ನಮ್ಮ ಅತಿ ವಿಶಾಲವಾದ ಗ್ರಾಮ್ಯ ಪ್ರಜಾವರ್ಗದ ಆವಶ್ಯಕಗಳನ್ನು ಒದಗಿಸುವ ತರದ ಶಿಕ್ಷಣ ಕ್ರಮವು ರಚಿಸುವಂತೆ ಮಹಾತ್ಮಾಜಿಯವರು ಒತ್ತಿ ಹೇಳುತ್ತಿರುವುದು,–ಇದೇ ಕಾರಣದಿಂದ.

"ಅಂದರೆ, ಈಗ ಸೆಕೆಂಡರಿ ವಿದ್ಯಾಭ್ಯಾಸ ಕ್ರಮವನ್ನು ರದ್ದುಗೊಳಿಸಿ, ಮೆಟ್ರಿಕ್ ತರಗತಿ ತನಕ ವಿದ್ಯಾಭ್ಯಾಸವು ಹಳ್ಳಿ ಶಾಲೆಯಲ್ಲಿ ನಡೆಯಬೇಕೆಂದು ನಿಮ್ಮ ಸಲಹೆಯೆ?" ಎಂದೊಬ್ಬರು ಪ್ರಶ್ನಿಸಲು, "ನಿಜವಾಗಿಯೂ. ನಮ್ಮ ಮಾತೃಭೂಮಿಯಲ್ಲಿ ಎರಡೆ ವರ್ಷಗಳಲ್ಲಿ ಕಲಿಯಲು ಸಾಧ್ಯವಿರುವ ವಿಷಯಗಳ ಅಭ್ಯಾಸವು ಅನ್ಯ ಭಾಷೆಯಲ್ಲಿ ಏಳು ವರ್ಷಗಳ ತನಕ ನಡೆಯುವುದು, ನಿಮ್ಮ ಸೆಕೆಂಡರಿ ವಿದ್ಯಾಭ್ಯಾಸವಲ್ಲವೆ? ಮಕ್ಕಳು ತಮ್ಮ ವಿಷಯಗಳನ್ನು ಅನ್ಯ ಭಾಷೆಯಲ್ಲಿ ಅಭ್ಯಾಸಿಸುವ ಮಹಾಹೊರೆಯನ್ನು ನೀವು ತೆಗೆದು ಬಿಟ್ಟರೆ, ಮತ್ತು ಅವರು ತಮ್ಮ ಕೈಕಾಲುಗಳನ್ನು ಒಳ್ಳೆ ಲಾಭಯುಕ್ತ ರೀತಿಯಲ್ಲಿ ಉಪಯೋಗಿಸುವಂತೆ ನೀವು ಬೋಧಿಸಿದರೆ, ಆಗ ವಿದ್ಯಾ ಸಮಸ್ಯೆಯು ಅತಿ ಸುಲಭವೆನಿಸುವುದು. ಆಗ ಏನೊಂದು ಸಂಶಯವಿಡದೆ ಮದ್ಯದ ಉತ್ಪನ್ನಕ್ಕೆ ಅಪ್ಪಣೆಕೊಡಬಹುದು. ಆದರೆ ಮೊದಲು ಈ ಮದ್ಯದ ಉತ್ಪನ್ನದ ಅರ್ಪಣೆಯಾಗಬೇಕು. ನಂತರ ಶಿಕ್ಷಣಕ್ರಮ ವಿಧಿಗಳ ಕುರಿತು ಆಲೋಚಿಸಬೇಕು; ಈ ಮಹತ್ತಾದ ಕಾರ್ಯವನ್ನು ಕೈಗೊಂಡು, ಆ ಸುಧಾರಣೆಗಳ ಪ್ರಾರಂಭವಾಗಬೇಕು.

"ಮದ್ಯನಿಷೇಧದ ಕುರಿತು ಬರಿ ಪ್ರಕಟಣೆಯಿಂದ ಮದ್ಯನಿಷೇಧವಾಗುವುದೊ? ಅದರಿಂದ ಮದ್ಯದ ಹಾನಿಯನ್ನು ಇಂದಿಷ್ಟು ಕಡಿಮೆಯಾಗದೆ ವ್ಯರ್ಥ ನಾವು ಹಣವನ್ನು ಕಳಕೊಂಡಂತಾದರೆ?"

"ಪ್ರಕಟಣೆಯ ನಂತರ ಸುಮ್ಮನಿರಬೇಕಾಗಿ ಅದರ ಅರ್ಥವಲ್ಲ. ಪ್ರತಿಯೊಬ್ಬರು ಆ ಕುರಿತು ಸೇವೆಯನ್ನು ಕೈಕೊಳ್ಳುವಂತೆ, ಅವರಲ್ಲಿ ತಿಳುವಳಿಕೆಯನ್ನುಂಟುಮಾಡಬೇಕು. ಆ ಬಗ್ಗೆ ಒಂದು ದೊಡ್ಡ ಶಿಬಂದಿಯೆ ಇರುವುದು. ಅಬಕಾರಿ ಇನ್ಸ್‌ಪೆಕ್ಟರರು ಅವರ ಮೇಲುದ್ಯೋಗಸ್ಥರು, ಅವರ ಕೆಳಸೋತರರ ಶಿಬಂದಿ, ಇವರೆಲ್ಲರೂ ಮುಂದಕ್ಕೆ ಮದ್ಯನಿಷೇಧಸಂಬಂಧ ಕಾರ್ಯವನ್ನು ನಡೆಯಿಸಬೇಕು. ಮದ್ಯನಿಷೇಧ ಸಂಪೂರ್ಣವಾಗಿ ರೂಢಿ ಬರುವಂತೆ ಮಾಡುವುದು ಅವರ ಕರ್ತವ್ಯವಾಗಬೇಕು. ಪ್ರತಿಯೊಂದು ಮದ್ಯದ ಅಂಗಡಿಯು (ಗಡಂಗು) ವಿಶ್ರಾಮ ಕೇಂದ್ರವಾಗಿ ಮಾರ್ಪಡಬೇಕು. ಮದ್ಯ ಸೇವನೆಯು ಅತಿರೇಕವಾಗಿ ನಡೆಯುವ ಸ್ಥಳದ ಕುರಿತು ನಿಮ್ಮ ಅತ್ಯಂತ ಲಕ್ಷ್ಯವಾಗಬೇಕು. ಗಿರಣಿ ಮಾಲಿಕರು ಮತ್ತು ಫೆಕ್ಟರಿ ಯಜಮಾನರು ಕೆಲಸಗಾರರ ವಿಶ್ರಾಮಕ್ಕಾಗಿ ಕಬ್ಬಿನ ರಸ, ಆಟ, ಪ್ರದರ್ಶನ ಇತ್ಯಾದಿಗಳನ್ನು ಪಡೆಯಲನುಕೂಲವಾಗುವ ವಿಶ್ರಮ ಮಂದಿರಗಳನ್ನು ಏರ್ಪಡಿಸುವಂತೆ ನೀವು ಒತ್ತಾಯಪಡಿಸಬೇಕು. ಪ್ರತಿಯೊಬ್ಬರು ಮದ್ಯನಿಷೇಧದ ಕುರಿತು ಶ್ರಮಪಡುವಂತೆ ನೀವು ಸಾಧಿಸಬೇಕು. ಹಳ್ಳಿ ಉಪಾಧ್ಯಾಯನು ಇತರ ಗ್ರಾಮಾಧಿಕಾರಿಗಳು ಇವರೆಲ್ಲರೂ ಮದ್ಯನಿಷೇಧ ಚಳವಳಿ" ಸೇವಕರಾಗಬೇಕು.

"ಸರಿ. ಆದರೆ ಅನೇಕ ಕಡೆಗಳಲ್ಲಿ ಗ್ರಾಮಾಧಿಕಾರಿಗಳೆ ಮದ್ಯ ಸೇವನೆಯಲ್ಲಿ ನಿರತರಾಗಿ ಅಮಲುಕೋರರೊಡನೆ ಸೇರುವುದು, ಅನೇಕ ಕಡೆಗಳಲ್ಲಿ ಕಾಣಬಹುದು, ಅವರ ವಿಷವೇನು?"

"ಪ್ರತಿಯೊಂದು ಶಾಲಾ ವಿದ್ಯಾರ್ಥಿ ಮದ್ಯನಿಷೇಧದ ಕುರಿತು ಕೆಲಸಗಾರನಾಗಬೇಕು. ಮಂತ್ರಿಗಳು ತಮ್ಮ ಪ್ರಾಂತ್ಯದ ಪ್ರವಾಸ ಮಾಡುತ್ತಿರುವರು. ಅವರು ಮದ್ಯದ ಅಂಗಡಿಯಾಗಿದ್ದುದು ವಿಶ್ರಮ ಮಂದಿರವಾಗಿ ಮಾರ್ಪಟ್ಟ ವಿಶ್ರಾಂತಿ ಗೃಹಗಳನ್ನು ಸಂದರ್ಶಿಸಿ ಅಲ್ಲಿ ಸಾಮಾನ್ಯ ಜನರೊಡನೆಬೆರೆತು ಅಲ್ಲಿ ತಯಾರಿಸುವ ಪಾನೀಯವನ್ನು ಕುಡಿದು, ಆ ವಿಶ್ರಾಮ ಸ್ಥಳಗಳು ಅತ್ಯಂತ ರೂಢಿಗೆ ಬರುವಂತಾಗಬೇಕು.

"ಮದ್ಯನಿಷೇಧವು ಅಮೇರಿಕಾದಲ್ಲಿ ಯಶಸ್ವಿಯಾಗಿ ನಡೆಯಲಿಲ್ಲ ಎಂಬ ಆಲೋಚನೆಯಿಂದ ಪೀಡಿತರಾಗಬೇಡಿರಿ. ಅಲ್ಲಿ ಕುಡುಕತನವು ಒಂದು ದುರ್ಗುಣವೆಂದು ಭಾವಿಸಲಾಗುವುದಿಲ್ಲ, ಅಲ್ಲಿ ಸಾಧಾರಣ ಎಲ್ಲರೂ ಕುಡಿಯುತ್ತಾರೆ. ಹಿಂದೂದೇಶದ ಧರ್ಮಗಳ ಪ್ರಕಾರ ಕುಡುಕತನವು ಒಂದು ಪಾಪ ಕರ್ತವ್ಯವೆಂದೆಣಿಸಲಾಗಿದೆ. ಕುಡಿಯುವುದು ಇಲ್ಲಿನವರ ಸ್ವಾಭಾವಿಕ ಕ್ರಮವಲ್ಲ. ಕೆಲವೇ ಮಂದಿಗಳು ಮಾತ್ರ ಈ ದುರ್ಗುಣವನ್ನು ಆಚರಿಸುವರು".

ಇದು ಮೇಲಿನ ವಿಷಯದ ಕುರಿತು ಮಹಾತ್ಮಾಜಿಯವರ ಆಲೋಚನಾತರಂಗ ಒಂದು ನೋಟವಾಗಿರುತ್ತದೆ. ಮತ್ತು ಇದೆ ತರದಲ್ಲಿ ಇತರ ಕಾಂಗ್ರೆಸ್ಸಾಧಿಪರು ಆಲೋಚಿಸಬೇಕಾಗಿ ಅವರ ಇಚ್ಛೆಯಾಗಿರುತ್ತದೆ. ಮದ್ರಾಸಿನ ಶ್ರೀ ರಾಜಗೋಪಾಲಾಚಾರಿಯವರು ಮದ್ಯನಿಷೇಧವು ಅತ್ಯಂತ ಯಶಸ್ವಿಯಾಗಲು ಸಾಧಿಸುತ್ತಿದ್ದಾರೆ. ಒಂದೆಡೆಯಲ್ಲಿ ಭಾಷಣ ಮಾಡುತ್ತಿರುವಾಗ ಅವರು ಆ ಕುರಿತು ಹೀಗೆಂದಿರುವರು. "ಜನರು ದಯಾಳುಭಾವದವರಾದರೆ ತಮಗೆ ವಿದ್ಯಾಭ್ಯಾಸವಿಲ್ಲದಿದ್ದರೂ ಕೊರತೆಯಲ್ಲಿ ಮದ್ಯನಿಷೇಧವು ಅತ್ಯಗತ್ಯವು, ಎನ್ನುವರು. ಈ ತರದ ಶಿಕ್ಷಣದಿಂದ ಯಾವ ಫಲವಿದೆ! ಕುಡಿಕನು ಮದ್ಯಸೇವನೆಯಿಂದ ಅಮಲು ಹೊಂದುತ್ತಿರುವಾಗ, ವಿದ್ಯಾವಂತನು ತನ್ನ ಭೋಗವಸ್ತುಗಳಿಂದ ಅಮಲು ಹೊಂದುತ್ತಿದ್ದಾನೆ. ಈ ವಿದ್ಯಾವಂತನಲ್ಲಿ ಆ ಕುಡಿಕತನಗಿಂತ ಹೆಚ್ಚಿನ ಸಂಸ್ಕೃತಿಯು ಇರುವುದಿಲ್ಲ.

ಬೆಕ್ಕಿಗೆ ಸೇವಾಶ್ರಮ.

ಬೆಕ್ಕುಗಳ ರಕ್ಷಣಾರ್ಥವಾಗಿ ಲಿಂಕಶಯರಿನ ಆಢ್ಯರೊಬ್ಬರು ಬಿಟ್ಟ ೧೨೦೦೦ ಪವನುಗಳನ್ನು ವ್ಯಯಿಸಲು ಒಂದು ರಕ್ಷಣಾಲಯವನ್ನು ಏರ್ಪಡಿಸುವರೆಂದು ಕೇಳಲು ನಿಮಗೆ ಎಷ್ಟು ಆಶ್ಚರ್ಯವಾಗದು.

ಆದರೆ, ಒಂದೆ ಬೆಕ್ಕಿಗಾಗಿ ಮಹಾನಿಧಿಗಳನ್ನೆ ಬಿಟ್ಟ ಅನೇಕರಿರುವರು. ಅವರನ್ನು ನೀವು ಕೇವಲ ಹುಚ್ಚರೆಂದೆ ತಿಳಿಯುವಿರಿ. ಹದಿನೆಂಟನೆ ಶತಮಾನದಲ್ಲಿ ಪ್ರಾನ್ಸಿನ ಪ್ರಸಿದ್ಧ ಗಾಯಕಿಯೊಬ್ಬಳು ತನ್ನ ಗಾಯನ ಕೌಶಲ್ಯದಿಂದ ಗಳಿಸಿದ ಸರ್ವ ಸಂಪತ್ತನ್ನು ತನ್ನ ಪ್ರೀತಿಯ ಬೆಕ್ಕಿಗೆ ಬಿಟ್ಟು ಮೃತಳಾದಳು. ತಾನು ಗಾಯನ ಅಭ್ಯಾಸವನ್ನು ಮಾಡುತ್ತಿರುವಾಗ ತನ್ನ ಸಮಾಧಾನ ಯಾ ಸಮ್ಮತವನ್ನು ಸೂಚಿಸಿ, ಆ ಬೆಕ್ಕು ಅವಳ ಶ್ರೇಷ್ಠತೆಗೆ ಕಾರಣವಾಗಿತ್ತಂತೆ.

ಆದರೆ ಗಾಯಕಿಳ ಕುಟುಂಬದವರ. ಸರ್ವವೂ ಬೆಕ್ಕಿಗೆ ಹೋಗಲು ಬಿಡಲಿಲ್ಲ. ಕೋರ್ಟಿನಲ್ಲಿ ಸಾಧಿಸಿ ಅವಳ ಆ ಆಸ್ತಿಗಳನ್ನು ಪಡೆದರು. ಹೀಗೆ ಬೆಕ್ಕುಗಳಿಗೆ, ನಾಯಿಗಳಿಗೆ ಪ್ರೀತಿಯಿಂದ ಮಹಾನಿಧಿಗಳನ್ನು ಬಿಟ್ಟ ಅನೇಕ ದೃಷ್ಟಾಂತಗಳಿವೆ.

ಜರ್ಮನಿಯಲ್ಲಿ ಕುದುರೆ ಮಾಂಸ.

ಗತ ವರ್ಷದಲ್ಲಿ ಜರ್ಮನಿಯ ಕಳಿಂಗ್ಸ್ ಪ್ರದೇಶದಲ್ಲಿ ಮಾಂಸಕ್ಕಾಗಿ ೧೨೫೦೦೦ ಕುದುರೆಗಳ ಕೊಲೆ ನಡೆದಿರುವುದಾಗಿ ತಿಳಿದು ಬರುತ್ತದೆ. ನಾಜಿನಾಯಕರೊಬ್ಬರು, ಕುದುರೆ ಮಾಂಸದ ಸೇವನೆಯು ಹೆಚ್ಚಾಗುವಂತೆ ಪ್ರಚಾರಣೆಯನ್ನು ನಡೆಯಿಸುತ್ತಿದ್ದಾರೆ. ಅವರ ಬೋಧೆಯನ್ನು ಎಲ್ಲರೂ ಅನುಸರಿಸುವುದಾದರೆ ಪ್ರತಿಯೊರ್ವ ಜರ್ಮನಿಯನು ಕುದುರೆ ಮಾಂಸಹಾರಿಯಾಗಬಹುದು.

ಕುದುರೆ ಮಾಂಸವು, ದನದ ಮಾಂಸ, ಕುರಿಯ ಮಾಂಸ, ಹಂದಿಯ ಮಾಂಸ ಇವುಗಳಂತೆ ರುಚಿಕರವಾಗಿರುವುದೆಂದು ಮೇಲಿನ ನಾಜಿನಾಯಕರ ಹೇಳಿಕೆ. ಅಲ್ಲದೆ ಕುದುರೆ ಮಾಂಸವನ್ನು ತಿನ್ನುವುದು ಪ್ರಾಚೀನ ಜರ್ಮನೀಯರ ಕ್ರಮವಂತೆ.



TEST YOUR EYES

By the Electro Ophthalmoscope



All Varieties of Frames & Lenses.

AT

The Mangalore Trading Association Ltd.

Sight Testing Ophthalmic Opticians,

Car Street, MANGALORE

"Dil Roz" (Regd)

'Dil Roz' is a sure cure for Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited.

Price Rs. 2.

Postage extra

TAHIR DIN,

Anarkali, LAHORE



ಸ್ತ್ರೀಯರ ಎಲ್ಲಾ ತರದ ಮುಟ್ಟು ದೋಷಗಳಿಗೆ ಸ್ತ್ರೀಯರಿಗೆ ದೇಹವನ್ನು ಪುಷ್ಟೀಕರಿಸುವ ಟಾನಿಕ್.

ಲೋಧ್ರ

ಎಲ್ಲಾ ದವಾಖಾನೆಗಳಲ್ಲಿಯೂ ದೊರೆಯುತ್ತದೆ

ಕೇಸರಿ ಕುಟೀರಮ್

ಮದ್ರಾಸು

ಮಂಗಳೂರು ಪ್ರವರ್ತಕರು· ದಿ ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ. ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ. ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣಬೇಧಿಗಳು, ಕೈಕಾಲುಗಳು ಸಣ್ಣವಾಗಿ ಹೋಗಿ, ಇವುಗಳಿಂದ ನರಳಿ, ಒಳಲಿ ಎಷ್ಟೋ ಮಂದ್ವಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ಸೊರಗಿ ಹೋಗುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ'ವೊಂದೇ. ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ

ಎಳೆಯ ಮಕ್ಕಳನ್ನು ರಕ್ಷಿಸುವುದೊಂದರೆ–

ಬಾಲಭಾಸ್ಕರ

ಆಯುರ್ವೇದಾಶ್ರಮಂ,
೧೫೧, ಗೋವಿಂದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸು

ದ. ಕ. ಜಿಲ್ಲಾ ಏಜಂಟರು

ಪೋಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಲಿಕಟ್ಟಾ ಬಜಾರ್, ಮಂಗಳೂರು.

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ತೃಪ್ತಿಪಡೆಯಿರಿ.

CITY BISCUIT WORKS,

Flower Market South, Mangalore.

ಮದನಕಾಮೇಶ್ವರ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1–4–0(ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸದನ, ಕೊಡಗು,
P: O. Peridepi (ಕೊಡಗು ಜಿ.)

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

"ವಾಯುವಿಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯಕೂಡದು. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ, ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಲ್ಲ ವಿಧದ ಅಪಸ್ಮಾರ, ಮುಚ್ಛೆ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುತ್ತವೆ. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲಿ ದೂರವಾಗುತ್ತವೆ. ಮತ್ತು ರೋಗಿಯು ಶಾಂತಿಯನ್ನೂ ಆರೋಗ್ಯವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2–0–0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಆಲಾಯಿದಾ.

C. L. Namawala,

Palace Road, BARODA.

ಅಜೀರ್ಣವು ಗುಣವಾಗುವುದು!

ನಿಮ್ಮ ಹೊಟ್ಟೆಯನ್ನು ನಿರ್ಮಲವಾಗಿ ಇಡಿ!

ತಲೆಸಿಡಿತ, ಪಿತ್ತ, ಪಿತ್ತರೋಗ ಉದ್ರೇಕ, ಇತ್ಯಾದಿ ಸಂಕಟಗಳಿಂದ ನೀವು ಪೀಡಿತರಾಗಿರುವಿರಾದರೆ ಈ ಕೆಳಗಿನ ಒಂದು ವಾರ್ತೆಯು ನಿಮ್ಮಲ್ಲಿ ಹುರುಪನ್ನುಂಟುಮಾಡುವುದು. ಈ ಸಂಕಟಗಳಿಗೆ ಹೆಚ್ಚಾಗಿ ಹೊಟ್ಟೆಯು ಮೂಲ ಕಾರಣವು. ಅಲ್ಲಿ ಶೇಖರವಾಗುವ ವಾಯುವಿನಿಂದ ಜೀರ್ಣಕ್ಕೆ ತಡೆಯುಂಟಾಗಿ, ಉಂಟಾದ ವಿಷವೆಲ್ಲವೂ, ನಿಮ್ಮ ಅಂಗಾಂಗಗಳನ್ನು ಸೇರುವುದರಿಂದಲೇ, ನಿಮ್ಮಲ್ಲಿ ಆ ಸಂಕಟಗಳು ಉಂಟಾಗುತ್ತಿರುವುವು.

Alex. C. Maclean

ಈ ಸಹಿಯಿರುವಂತೆಯೂ, ಅದೆ ಸಹಿಯಿಂದ ಕೂಡಿದ ಕೆಂಪು ಮುದ್ರೆಯು ಲೇಬಲ್ ಮತ್ತು ಬಾಟ್ಲಿಗಳ ಮೇಲೆ ಇರುವುದನ್ನು ಗಮನಿಸಿರಿ. ಇವು ಖಾತ್ರಿ ಮೆಕ್ಲೀನ್ ಬ್ರೇಂಡಿನ ಕುರುಹುಗಳು— ಈ ಔಷಧಿಯು ಸಾಧಾರಣ ತರದ ಜಾತಿನೆಯಾಗಿದ್ದು, ಹೊಟ್ಟೆಯಲ್ಲಿರುವ ವಿಷ ಕಣಗಳನ್ನೆಲ್ಲಾ ಹೊರದೂಡುವುದು. ಎರಡು ಯಾ ಮೂರು ಬಾರಿಯ ಸೇವನೆಯಿಂದಲೇ ನಿಮ್ಮ ಹೊಟ್ಟೆಯು ನಿರ್ಮಲವಾಗಿ, ಆರೋಗ್ಯಕರ ಸ್ಥಿತಿಯನ್ನು ಹೊಂದುವುದು

ಮೇಲಿನ ತರದ ಸಂಕಟದ ಚಿಹ್ನೆಗಳನ್ನು ಕಂಡೊಡನೆ ಮೆಕ್ಲೀನ್ ಬ್ರೇಂಡನ್ನು ಸೇವಿಸಿರಿ. ಇದರಿಂದ ಬೇಗನೆ ಗುಣಹೊಂದುವಿರಿ, ಇತರ ನಕಲಿ ಔಷಧಿಯನ್ನು ಸೇವಿಸಿ, ಸಮಯವಿಳಂಬ ಮಾಡಬೇಡಿ. ಸಂಕಟವನ್ನನುಭವಿಸುತ್ತಿರುವಾಗ, ಔಷಧಿಯ ಪರೀಕ್ಷೆಯಲ್ಲಿ ತೊಡಗಬೇಡಿರಿ. ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಅತ್ಯಂತ ವಿಶ್ವಾಸನೀಯ ಔಷಧಿಯು. ಪುಡಿಯೂ, ಮಾತ್ರೆರೂಪದಲ್ಲಿಯೂ ಸಿಕ್ಕುತ್ತದೆ. ಬಿಡುಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ ಎಲ್. ಮೊರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್

ಸ್ಟಾಂಡಾರ್ಡ್ ಬಿಲ್ಡಿಂಗ್, ಹೊರ್ನ್ಬಿ ರೋಡ್, ಮುಂಬೈ.

S No 71.

ಮುಖ್ಯವಾದ ಪ್ರಸಿದ್ಧ ಪತ್ರಿಕೆ!

ಸನ್‌ಲೈಟ್ ಸಾಬೂನು

ಈಗ ಅನುಕೂಲವಾದ ಹೊಸ ಪ್ಯಾಕಿನಲ್ಲಿ ದೊರೆಯುತ್ತದೆ.



ಲೈಟು ಸಾಬೂನು ಇನ್ನೂ ಮೊದಲಿನಸೈಜಿನ ಪ್ಯಾಕಿನಲ್ಲಿಯೂ ದೊರೆಯುತ್ತದೆ.

ಸನ್‌ಲೈಟ್ ಸಾಬೂನನ್ನು ಉಪಯೋಗಿಸುವವರ ... ಅನುಕೂಲಕ್ಕೋಸ್ಕರವೇ ಈ ... ಎರಡು ದೊಡ್ಡ ಸಾಬೂನುಗಳನ್ನು ... ತಯಾರಿಸಿ ... ಈ ಸಾಬೂನುಗಳನ್ನು ... ಹೊಸವರಂತೆಯೇ ... ಪ್ಯಾಕಿನ ಸನ್‌ಲೈಟನ್ನು ಕೇಳಿರಿ ... ಎಲ್ಲಾ ತರಹದ ಬಟ್ಟೆಗಳನ್ನು ಒಗೆಯುವುದಕ್ಕೆ ಸನ್‌ಲೈಟ್ ಉತ್ತಮವಾದದ್ದು ... ಸನ್‌ಲೈಟ್ ಸಾಬೂನು ನಿಮ್ಮ ಹಣವನ್ನು ಉಳಿಸುತ್ತದೆ

ಸನ್‌ಲೈಟ್ ಸಾಬೂನು

ಇಂಡಿಯಾದಲ್ಲೇ ... ತಯಾರಿಸಲ್ಪಡುವುದು

X-S 1247 268A

LEVER BROTHERS (INDIA) LIMITED

KANARESE

ದ. ಕ. ಜಿಲ್ಲಾ ಬೋರ್ಡ್ಸ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ.

ಜಿಲ್ಲೆಯ ಎಲ್ಲಾ ಉಪಾಧ್ಯಾಯ ಬಂಧು ಭಗಿನಿಯರಲ್ಲಿ ವಿಜ್ಞಾಪನೆ.

ಬಂಧು ಭಗಿನಿಯರೇ!

ಇದೇ ಕಳೆದ ತಾ ೪-೮-೧೯೩೭ರಲ್ಲು ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರ್ ಟ್ರೈನಿಂಗ್ ಶಾಲೆಯಲ್ಲಿ ನೆರೆದು ಬಂದ ಜಿಲ್ಲಾ ಬೋರ್ಡ್ಸ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಸಮ್ಮೇಳನದಲ್ಲಿ 'ಜಿಲ್ಲಾ ಬೋರ್ಡ್ಸ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ'ವನ್ನು ಸ್ಥಾಪಿಸಿದುದು ಸರಿಯಷ್ಟೆ. ಸದ್ರಿ ಸಂಘದ ಕ್ರಮನಿಬಂಧನೆಗಳನ್ನು ತಯಾರಿಸಲು ಏರ್ಪಡಿಸಿದ್ದ ಸಮಿತಿಯು ತಾರೀಕು ೨೯-೮-೧೯೩೭ರಲ್ಲು ಮಂಗಳೂರಲ್ಲಿ ಕೊಂಗ್ರೆಸ್ ಕಚೇರಿಯಲ್ಲಿ ಸೇರಿ, ಚರ್ಚಿಸಿ ಸಂಘದ ನಿಬಂಧನೆಗಳನ್ನು ತಯಾರಿಸಿತು. ಅದೇ ಸಂದರ್ಭದಲ್ಲಿ ಡೆಪ್ಯುಟೇಷನ್ ಕೊಂಡುಹೋಗುವ ಕುರಿತೂ ಆಲೋಚಿಸಲಾಯಿತು ಸಿರೀಕ್ಷಿತ ಹಣವು ಕೂಡಿಕೆಯಾಗದ್ದರಿಂದ ಅದನ್ನು ಸ್ವಲ್ಪ ಮುಂದೆ ಹಾಕಬೇಕೆಂದು ನಿರ್ಧರಿಸಲಾಯಿತು ಕನ್ನಡ್ಕ ಶ್ರೀಮಾನ್ ಎ ಬಿ ಶೆಟ್ರಿಗೆ ಬರಕೊಂಡು ಡೆಪ್ಯುಟೇಷನ್ ಕೊಂಡುಹೋಗುವ ವಿಷಯ ಅವರ ಅಭಿಪ್ರಾಯವನ್ನು ಕೇಳಲಾಯಿತು ಸದ್ರಿ ಮಹಾಶಯರೂ ಮೊಳಹಳ್ಳಿ ಶಿವರಾಯರೂ ಈ ಸಂದರ್ಭವನ್ನು ಸ್ವಲ್ಪ ಮುಂದೆ ಹಾಕುವುದು ಒಳ್ಳೆತೆಂದೂ ಪ್ರಕೃತ ೬ ತಿಂಗಳ ಬಜೇಟು ತಯಾರಿಸಿರುವುದರಿಂದ ಅದರಲ್ಲಿ ಬದಲಾವಣೆ ಮಾಡಲಿಕ್ಕೆ ಸಾಧ್ಯವೇ ಇಲ್ಲವೆಂದೂ ಅಭಿಪ್ರಾಯ ಕೊಟ್ಟರು. ಡೆಪ್ಯುಟೇಷನ್ ಕಮಿಟಿಯವರು ತಿರಿಗೊಮ್ಮೆ ತಾರೀಕು ೨೨-೮-೧೯೩೭ರಲ್ಲು ಮಂಗಳೂರಲ್ಲಿ ಕೊಂಗ್ರೆಸ್ ಕಚೇರಿಯಲ್ಲಿ ಸೇರಿ ಈ ಕುರಿತು ಆಲೋಚಿಸಿದರು. ಪಾರ್ಲಿಮೆಂಟರಿ ಸೆಕ್ರೆಟರಿ ಪ್ರೊ| ವಾರ್ಕಿಯವರ ಮಂಗಳೂರಿಗೆ ದಯಮಾಡಿಸುವ ಸಮಯ ಅವರನ್ನು ಕಂಡು ಮಾತಾಡಬೇಕೆಂದು ಗೊತ್ತುಮಾಡಿಕೊಂಡರು. ಅಂತೆಯೇ ತಾರೀಕು ೨೬-೮-೧೯೩೭ರಲ್ಲು ಅವರನ್ನು ಕಂಡು ನಮ್ಮ ಡೆಪ್ಯುಟೇಷನಿಗೆ ತಕ್ಕ ಬೆಂಬಲ ಮತ್ತು ಸಹಾಯ್ಯ ಕೊಟ್ಟು ನಡಿಸಬೇಕೆಂದು ಕೇಳಿಕೊಳ್ಳಲು ಅವರು ಈಗಲೇ ಡೆಪ್ಯುಟೇಷನ್ ಬಂದು ಪ್ರಯೋಜನವಿಲ್ಲವೆಂತಲೂ ಬರುವ ಸಪ್ಟೆಂಬರ ಇಲ್ಲವೆ ಒಕ್ಟೋಬರ ಮೊದಲನೆ ವಾರದಲ್ಲಿ ಒಂದರೆ ಸಾಕೆಂತಲೂ ಅಪ್ಪಣೆ ಕೊಡಿಸಿದರು ಹೀಗಾಗಿ ಡೆಪ್ಯುಟೇಷನ್ ಅಕ್ಟೋಬರ ಮೊದಲನೇ ಹಪ್ತೆಯಲ್ಲಿ ಕೊಂಡುಹೋಗುವುದೆಂದು ನಿಶ್ಚಯಮಾಡಿರುತ್ತದೆ

ಬಂಧು ಭಗಿನಿಯರೇ, ಇದೇ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ ಉಪಾಧ್ಯಾಯರಾದ ನಮ್ಮೊಳಗೆನೇ ಪರಸ್ಪರವಿಶ್ವಾಸವಿಲ್ಲ ಪ್ರೇಮವಿಲ್ಲ ಒಕ್ಕಟ್ಟಿಲ್ಲ ಅದರ ಬದಲು ಅವಿಶ್ವಾಸ-ದ್ವೇಷ-ಅಸೂಯೆ-ಬಿಕ್ಕಟ್ಟು ಇವೇ ಪ್ರಾಧಾನ್ಯವಾಗಿವೆ ಇವೇ ನಮ್ಮ ದಾಸ್ಯತ್ವಕ್ಕೆ ಕಾರಣವಾಗಿದೆ ಜಿಲ್ಲಾ ಉಪಾಧ್ಯಾಯರ ಸಂಘವನ್ನು ಮಾಡಿ ತನ್ಮೂಲಕ ನಮ್ಮ ಮೇಲ್ಮೆಯನ್ನು ಸಾಧಿಸುವದೆಂದರೆ ಅದು ಹಲವರಿಗೆ ಬೇಡವಾಗಿದೆ ಉಡುಪಿ, ಕಾರ್ಕಳ, ಕುಂದಾಪುರ ಈ ತಾಲೂಕುಗಳ ಹೆಚ್ಚಿನವರು ತಟಸ್ಥರಾಗಿರುತ್ತಾರೆ ಇದು ತುಂಬ ಶೋಚನೀಯವಾಗಿದೆ. ನಮ್ಮ ಪುರೋಭಿವೃದ್ಧಿಯಲ್ಲಿ ಸ್ಥಾನಮಾನಗಳನ್ನು ಮುಖ್ಯವಾಗಿರಿಸಿಕೊಂಡು ತಾಟಸ್ಥ್ಯ ವೃತ್ತಿಯನ್ನು ತಾಳುವುದು ನ್ಯಾಯವಲ್ಲ ಈ ಜಿಲ್ಲಾ ಸಂಘದ ಕ್ರಮ. ನಿಬಂಧನೆಗಳನ್ನು ಮಾನ್ಯ ಶ್ರೀ| ಮೊಳಹಳ್ಳಿ ಶಿವರಾಯರಿಗೆ ತೋರಿಸಿದ್ದಲ್ಲಿ ಅವರು ತುಂಬ ಸಂತೋಷಪಟ್ಟುದಲ್ಲದೆ ಕೆಲವೊಂದು ಸೂಚನೆಗಳನ್ನೂ ಕೊಟ್ಟು ಇದನ್ನು ಆದಷ್ಟು ಬೇಗ ರಿಜಿಸ್ಟ್ರಿ ಮಾಡಬೇಕೆಂದು ಸೂಚಿಸಿರುವರು ವಿದ್ಯಾಧಿಕಾರಿಗಳಲ್ಲಿ ಕೆಲವರೂ ಹಲವು ಸೂಚನೆಗಳನ್ನು ಕೊಟ್ಟಿರುವರು. ಹೀಗೆ ಉಪಾಧ್ಯಾಯರಲ್ಲದ ಇತರರಿಗೆ ನಮ್ಮ ಮೇಲ್ಮೆಯ ಮಟ್ಟಿಗೆ ಸಂತೋಷ ಸಮಾಧಾನವಿರುವಾಗ ಉಪಾಧ್ಯಾಯರಾದ ನಾವೇ ಹಿಂಜರಿದು ತಟಸ್ಥರಾಗಿ ಕುಳಿತುಕೊಳ್ಳುವುದು ಸಮಂಜಸವಲ್ಲ ಡೆಪ್ಯುಟೇಷನ್ ಕೊಂಡುಹೋಗುವ ಖರ್ಚಿಗೆ ಪ್ರತೀ ಒಬ್ಬ ಬೋರ್ಡ್ಸ್ ಶಾಲಾ ಅಧ್ಯಾಪಕ ಅಧ್ಯಾಪಕಿಯು ಬರೀ ಆಣೆ ಆರಂತೆ ಕಳುಹಿಸಿ ಕೊಡಬೇಕೆಂದು ವಿನಂತಿಮಾಡಿಕೊಂಡರೂ, ಕುಂದಾಪುರ, ಉಡುಪಿ, ಕಾರ್ಕಳ ಈ ಭಾಗದವರು ಹೆಚ್ಚಿನ ಮಟ್ಟಿಗೆ ಮಾನ್ಯಮಾಡಲಿಲ್ಲ. ಬಹುಶಃ ಈಗ ಸೂಚಿಸಿದ ಡೆಪ್ಯುಟೇಷನ್ ಮೆಂಬರರ ಮೇಲೆ ಅವರಿಗೆ ಅಷ್ಟೊಂದು ಭರವಸೆಯುಲ್ಲವೆಂಬಂತೆ ತೋರುತ್ತದೆ ಹಾಗಿದ್ದರೆ ನಾನೂ ಸಂಘದ ಕಾರ್ಯದರ್ಶಿ ಶ್ರೀ| ಕೆ. ರಾಮರಾಯರೂ ಹಿಂದೆ ನಿಲ್ಲುತ್ತೇವೆ ಅದೂ ಅಲ್ಲದೆ ಈ ಅಧ್ಯಕ್ಷ ಕಾರ್ಯದರ್ಶಿ ಸ್ಥಾನಗಳನ್ನು ಬೇರೆಯವರಿಗೆ ಬಿಟ್ಟುಕೊಡಲೂ ನಾವು ಸಿದ್ಧರೇ ಇರುತ್ತೇವೆ ನಮಗೆ ಸ್ಥಾನಮಾನ ಬೇಡ ನಮಗೆ ಕೆಲಸ, ಸೇವೆ ಬೇಕು. ಈ ಕೆಲಸಗಳಿಲ್ಲದಿದ್ದರೂ ನಾವು ನಮ್ಮಿಂದ ಕೂಡಿದ ಸೇವೆಯನ್ನು ಸಂತೋಷದಿಂದ ಮಾಡಲಿಕ್ಕೆ ಸಿದ್ಧರಿದ್ದೇವೆ.

ಆದುದರಿಂದ ಉಪಾಧ್ಯಾಯ ಬಂಧು ಭಗಿನಿಯರೇ ಇದರಲ್ಲಿ ಸಂಕುಚಿತ ಅಭಿಪ್ರಾಯಕ್ಕೆ ಎಡೆಕೊಡಬೇಡಿ ಈ ಮೊದಲು ವಿನಂತಿಮಾಡಿಕೊಂಡಂತೆ ದಯವಿಟ್ಟು ನಮ್ಮೊಡನೆ ಸಹ

(೧೯ನೇ ಪುಟವನ್ನು ನೋಡಿರಿ)

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಛಕ್ರೈರ್ಮಹಾರ್ಘೈರ್ನ ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥

ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

೩೧, ಮಂಗಳೂರು ತಾ. ೧೦ನೇ ಸಪ್ಟಂಬರ ೧೯೩೭. (10-9-'37) ಸಂಚಿಕೆ ೩

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	82,08,000	5,04,466	15,14,855	1,16,58,706
1930	59,97,500	9,83,867	28,00,970	2,06,68,328
1933	94,16,500	15,12,692	50,04,871	3,07,98,484
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances. Family Safe Guard Policy a special feature.

Application for agencies will be received from honest and respectable gentlemen.

Organisers appointed with pay and allowance.

Gentlemen with organising ability and who can guarantee Business need apply.

KOCHIKAR BROTHERS,

Madras Branch Secretaries.

Post Box 337, Mount Road, MADRAS

Phone No. 8245.

Apply to any of the following Offices:-

Ottapalam	Central Station Road, Trivandrum.	Visveshwarapuram Circle, Bangalore City.	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No. 4

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಬೊಡಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುಂಟಕ್ಕಿ, ಹುಳುಕಡ್ಡಿ, ಚಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ. ಮದರಾಸು. ಕಲ್ಕತ್ತಾ.

ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುತ್ತದೆ.

AMRUTANJAN DEPOTS BOMBAY MADRAS CALCUTTA

[illegible] ವಿಚಾರಗಳನ್ನು ಕಂಡು ಈ ವಿಷಯ [illegible]ಸುವಂತಾಗಿರುವುದು "ದೃಷ್ಟಿ ಬದಲಾವಣೆ" ಸೂಚಿಸಿದೆ.

o o o o o

ಅತ್ತ "ಅಂಡಮಾನದ ಬದಲು ಮತ್ತೊಂದು ದ್ವೀಪಾಂತರವಾಸ ಯೋಗ್ಯವಾದ ಸ್ಥಾನವೊಂದನ್ನು ಹುಡುಕುವುದು ಇಂಡಿಯಕ್ಕೂ ಅಗತ್ಯ, ಸರಕಾರಕ್ಕೂ ಅವಶ್ಯ" ಎಂದು ಗಾರ್ಡಿಯನ್ ಪತ್ರಿಕೆ ಸೂಚಿಸಿಯದೆ. ಬಂಗಾಳದ ದಯೆಯೊಂದಿದ್ದರೆ ಈ ವಿಷಯದಲ್ಲಿ ಯಾರೂ ಕಂಗಾಲಾಗುವ ಅಗತ್ಯವಿರದು.

o o o o

ಮಂತ್ರಿಗಳಿಗೆಲ್ಲ ಅಸಾಮಾನ್ಯ ಉಪಚಾರಗಳಿಂದ ಮಂತ್ರವಾದ ಮಾಡುವುದು ಇನ್ನಗತ್ಯವುಂಟೆ? ಕೆಲವು ಇಂತಹ ಸ್ವಾಗತ ಸಂಭ್ರಮಗಳು ಕುರುಚಿ ಸೂಚಕವಾಗಿವೆ. ಭೋಜನಗಳಂತೂ ಅರುಚಿಗೆ ಕಾರಣವಾಗುತ್ತವೆ. ತಂದೆ ಮನೆಗೆ ಬಂದೊಡನೆ ಮಗ, ಹೆಂಡತಿ ಮುಂತಾದವರು ಮಾಲೆ ಹಾಕಿ, ವಾದ್ಯ ಬಾರಿಸಿ, ಪದ್ಯ ಹಾಡಿ, ಸ್ತೋತ್ರ ಹೊಗಳಿ, ಸ್ವಾಗತ ಮಾಡುವುದುಂಟೆ? ಎಂದು ಶ್ರೀ ರಾಜಗೋಪಾಲಾಚಾರ್ಯರು ಎಂದುದನ್ನು ಗಾಂಧಿಜೀಯವರು ಪ್ರಕಟಿಸಿರುವರು. ಹಲವರಿಗಂತೂ ಫೋಟೋ ಎತ್ತುವಾಗ ಮಂತ್ರಿಗಳ ಹಿಂದೆ ನಿಲ್ಲುವ ರೀವಿಯು ಮರ್ಜಿ ಹೋಯಿತು!

o o o o o

ಹಾಗೆಯೆ ಜೈಲಿನಿಂದ ಬಿಡುಗಡೆ ಹೊಂದಿದವರನ್ನು ಸ್ವಾಗತೀಕರಿಸುವ, ಅವರೂ ಇತರರೂ ಮಹಾ ಭಾಷಣಗಳನ್ನು ಮಾಡುವ ಅದೊಂದು ವಿಶೇಷ ಸಂಭವವೂ ಈಗ ತಾನೆ ಬಹಳವಾಗಿದೆ. ಇದು ಮಂತ್ರಿಗಳಿಗೂ ಹಿತವಲ್ಲ, ಭಾಷಣಕರ್ತರಿಗೂ ಉಚಿತವಲ್ಲ. ಹೆಚ್ಚೇಕೆ, ಮಂತ್ರಿಗಳೇ ರಾಜತಂತ್ರವನ್ನು ಕುರಿತಾಗಿ ವಿವರಿಸಿ ಭಾಷಣ ಮಾಡುವುದಕ್ಕೂ ಒಂದು ನಿಯಮವಿರಬೇಕು, ಮಿತಿ ಇರಬೇಕು. ಬಾಯೂಡಿಸುವ, ಆಕಳಿಸುವ ಅವಕಾಶವುಂಟಾದಾಗಲೂ ಸರಕಾರವು ಹೀಗೆ ಮಾಡಲು ನಿಷ್ಕರ್ಷಿಸುವುದು ಎಂದು ಭವಿಷ್ಯವಾದವನ್ನಾಡುವುದು ಬೇಸರಕ್ಕೆ ಹೇಗೆಯೋ ಹಾಗೆಯೆ ವಿರಸಕ್ಕೂ ಕಾರಣವಾಗಿದೆ,—ಹಲವರಿಗೆ!

o o o o

ಬರ್ಮವನ್ನು ಪ್ರತ್ಯೇಕಿಸಬೇಕೆಂದು ಸಾಮ್ರಾಜ್ಯಶಾಹಿಗೆ ತೋರಿತು. ಸಾಧನ ಪೂರ್ವಕವಾಗಿ ಅದನ್ನು ಕತ್ತರಿಸಿ ಬೇರೆ ಇಡಲಾಯಿತು. ಅದರ ಸಂರಕ್ಷಣೆಗೇನು ಉಪಾಯ? ಸೈನ್ಯದ ಖರ್ಚು ಕೊಟ್ಟರೆ ಬರ್ಮವು ಒಂದೂವರೆ ಕಾಲಿನಲ್ಲಿ ನಿಲ್ಲಬೇಕಾಗುವುದು. ಅದಕ್ಕಾಗಿ ಸೈನ್ಯದ ಮತ್ತು ಖರ್ಚು ಇಂಡಿಯದ ರಕ್ಷಣೆಗಾಗಿ ಬರ್ಮದಲ್ಲಿರಬೇಕಾಯಿತು. ಬರ್ಮದಲ್ಲಿದ್ದು ನಮ್ಮ ರಕ್ಷಣೆ, ನಮ್ಮ ಹಣದ ಭಕ್ಷಣೆ ಎರಡೂ ಮಾಡುವ ಭಾರವು ಈ ಬಡ ಸೈನ್ಯಕ್ಕೆ!

o o o o

ನಮ್ಮ ಸೈನ್ಯವು ಬರ್ಮದ ರಕ್ಷಣೆಮಾಡುವಾಗ, ಬರ್ಮದಿಂದ ಲಾಭಸಂಪಾದನೆ ಮಾಡುವವರು ಯಾರು? ಅವರೇಕೆ ಈ ಎರಡುಮೂರು ಕೋಟಿ ರೂಪಾಯಿಗಳನ್ನು ತೆರಬಾರದು? ಅಥವಾ ಆ ಲಾಭಾಂಶದ ಒಂದಂಶವನ್ನಾದರೂ ನಮ್ಮ ಖಜಾನೆಗೇಕೆ ತೆರಬಾರದು? ಬರ್ಮವನ್ನು ಪ್ರತ್ಯೇಕಿಸಿದವರು ಈ ಮೊಬಲಗನ್ನು ನಮ್ಮ ಖಜಾನೆಗೆ ತುಂಬಿಸಲು ಜವಾಬ್ದಾರರೇ,ಅಲ್ಲವೆ?

o o o o o

[illegible] ಮೂಲಕವೇ ನಮ್ಮ ಸರಕಾರಕ್ಕೆ [illegible] ಇದರ ವಿವರಗಳನ್ನು ಇಂಗ್ಲೆಂಡಿನಲ್ಲಿ ಪ್ರಕಟಿಸಲಾಗಿದೆ,—ಇಲ್ಲಿ ತಲ್ಪ ಮಾತ್ರವೇ?–ಇಲ್ಲ. ಅದರ ನಕಲುಗಳೂ ದೊರೆಯುತ್ತಿಲ್ಲ!

o o o o

ಉ-ಹೂಂ! ಒರಿಸ್ಸಾದಲ್ಲಿನ ಕಾಂಗ್ರೆಸ್ ಮಂತ್ರಿಗಳಿಂದ ನಿರೀಕ್ಷಿಸಿರುವಷ್ಟೇನೂ ಆಗಲಿಲ್ಲ. ಮದ್ಯಪಾನ ನಿರೋಧಕ್ಕೆ ಚಿಕ್ಕಾಸಿನ ಬೆಲೆಯೂ ಅಲ್ಲಿ ಸಿಗಲಿಲ್ಲ. ಸರಕಾರ ಬಡವಾಗಿದೆ. ಹಣಕ್ಕೇನು ಮಾಡೋಣ? ಜಮೀನ್ದಾರ ಶ್ರೀಮಂತರ ಆಯದ ಮೇಲೆ ತೆರಿಗೆ ಹಾಕಲೂ ಧೈರ್ಯವಿಲ್ಲ. ಮದ್ಯದ ಸುಂಕಬಿಡಲೂ ಸಾಧ್ಯವಿಲ್ಲ. ಆ ಬಜೆಟು ಏನೋ ಆಗಿದ, ಹಿಂದಿನ ಯುಗದ ಬಜೆಟೇ ಅದು!

o o o o

ಮಹಾತ್ಮಾಜಿಯವರು ಅಸಹಕಾರ ಚಳವಳಕ್ಕೆ ಕೈಕೊಟ್ಟಾಗ, ಶ್ರೀ ಸಿ. ಆರ್. ರೆಡ್ಡಿಯವರ ಮನಸ್ಸಾಕ್ಷಿ ಭಗ್ ಎಂದು ಉರಿದು, ಅವರು ತಮ್ಮ ಪದವಿಗೆ ರಾಜೀನಾಮೆಯಿತ್ತರು! ಕಾಂಗ್ರೆಸ್ ರೆಡ್ಡಿಗಳಾದರು. ಕಳೆದ ಚುನಾವಣೆಯಲ್ಲಿ ಇವರಿಗೆ ಮುಖಂಡತನ ಸಿಗಲಿಲ್ಲ; ರೇಗಿ ಬಿದ್ದರು. ಕಾಂಗ್ರೆಸ್ಸನ್ನು ವರ್ಜಿಸಿದರು- ಹಿಂದಣ ಹುದ್ದೆಗೇ ಬಂದರು. ಇವರ ದೃಷ್ಟಿ ಶ್ರೀ ರಾಜಗೋಪಾಲಾಚಾರ್ಯರ ಮೇಲೆ!

o o o o

ಅವರೀಗ ಮುಖ್ಯ ಮಂತ್ರಿಗಳಾಗಿ, ತಮಗೆ ಯುಕ್ತಕಂಡಂತೆ, ಆಳತೊಡಗಿರುವರು. ರೆಡ್ಡಿಯವರಿಗೆ ಇದು ಯುಕ್ತವೆನಿಸುವುದಿಲ್ಲ. "ಸಂತರು ಆಳತೊಡಗಿದರೆ, ಸಾಮಾನ್ಯರ ಆಳಿಕೆಗಿಂತ ಅದರಲ್ಲಿ ಅಳುಕು ಹೆಚ್ಚು" ಎಂದರು. ಗಳಿಗೆಗೊಂದು ಬಗೆ ಮನಸ್ಸಾಕ್ಷಿಯುಳ್ಳವರು ಆಳ ತೊಡಗಿದರೆ ಹೇಗಾದೀತಯ್ಯ? ಹೇಳಬಹುದೆ?

o o o o

ತನ್ನವರನ್ನು ಕಾಪಾಡುವುದಕ್ಕಾಗಿ ಪ್ರತ್ಯಕ್ಷ ಅವತಾರವೆತ್ತಿದವರೇ ತಾವೆಂಬಂತೆ ದುಡಿಯುವ ಸ್ವಾಮಿ ಸಹಜಾನಂದರಂಥ ಸಂನ್ಯಾಸಿಗಳನ್ನು ಪ್ರೇರೀಕರಿಸಿದವರೇ, ಎಸೆಂಬ್ಲಿ ಮೆಂಬರರಾಗಿದ್ದು. ಮೆಂಬರರಿಗೆ ಮೂರನೆ ತರಗತಿಯ ರೈಲು ಪ್ರಯಾಣವೆಂಬುದು ಅಸಹನೀಯವೆನ್ನುವಾಗ,—ರೈಲ್ವೆಯವರಲ್ಲಿ "ವಿನಾಶಾಯ ಚ ದುಷ್ಕೃತಾಮ್" ವಚನದಂತೆ ಏನೋ ದುಷ್ಕೃತಿಗಳಿರುವುದನ್ನು ಅವರು ತಿದ್ದುಕೊಳ್ಳುವಂತಾಗಿ, ಸಮಸ್ತ ಮೂರನೇ ತರಗತಿಯ ಸಂಚಾರೀಪ್ರಾಣಿಗಳಿಗೂ ಸುಖವುಂಟಾಗುವುದರಲ್ಲಿ ಇನ್ನೂ ಸಂದೇಹವೇಕೆ?

o o o o

ಸ್ಪೈನು ಚೀನಾಗಳಲ್ಲಾಗುವುದಕ್ಕೆಲ್ಲ ಇಂಡಿಯಾ ಸರಕಾರವು ಯಾವ ಎಣಿಕೆಯನ್ನೂ ಕೊಡುವ ಆವಶ್ಯಕತೆಯಿಲ್ಲವೆಂದು ನುಡಿದ ಪಾರ್ಸನ್ಸ್ ಸಾಹೇಬರೇ, ಇಲ್ಲಿನ ಸೈನ್ಯವನ್ನು ಚೀನಕ್ಕೆ ಕಳುಹುವಾಗ ಏಕೆ ಅಡ್ಡಿ ಬರಲಿಲ್ಲವೊ ತಿಳಿಯಲೇ ಇಲ್ಲ.

o o o o

ಚೀನಕ್ಕೆ ಯಾವ ಸರಕಾರವೂ ಯೂರೊಪಿನಲ್ಲಿ ಬೆಂಬಲವಿದ್ದುದು ಕಂಡುಬರುತ್ತಿಲ್ಲ. ಅವರಿಗೂ ಅದು ಎಣಿಕೆಗೆ ಬಾಹಿರವಾಗಿದೆ. ಜಪಾನು ಈ ಚೀನದಲ್ಲಿ ಆಡುತ್ತಿರುವ ನಾಟಕವನ್ನೆ ಆಡದ ಯೂರೋಪಿಯ ಮುಖ್ಯ ಸರಕಾರವು ಯಾವುದೊಂದು ಇದೆಯಾದರೆ, ಅದೇ ತಾನೆ ಚೀನದ ಬೆಂಬಲಕ್ಕೆ ಬರುವ ಆಲೋಚನೆ ಮಾಡಬಹುದಾಗಿತ್ತು!

o o o o

ಮೊಲಕ್ಕೆ ಹಲವು ಗೆಳೆಯರಿದ್ದರು. ಬೇಟೆ [illegible]

ಸುಖವಾದ ಆರಾಮವುಳ್ಳ ನಿದ್ರೆಗೆ ಖಾತ್ರಿಯಾದ ದಾರಿಯೆಂದರೆ, ಓವಲ್ಟಿನ್ನನ್ನು ನಿಮ್ಮ ಶಯನಸಮಯದ ಪಾನೀಯವಾಗಿ ಮಾಡುವುದು. ಅದು [illegible] ನರಗಳಿಗೆ ಹೆಚ್ಚು ಪೌಷ್ಟಿಯ ಆಹಾರವನ್ನುಂಟುಮಾಡಿ ನಿಮಗೆ ಬೆಳಿಗ್ಗೆ ಏಳುವಾಗ ಚುರುಕಾಗಿ ಚೇತನವುಳ್ಳವರಾಗಿ [illegible] ಆ ಗಾಢವಾದ ಶಾಂತ ನಿದ್ರೆಯನ್ನುಂಟುಮಾಡುತ್ತದೆ.

ಓವಲ್ಟಿನನ್ನು ಪ್ರಕೃತಿಯಲ್ಲಿರುವ ಅಮೂಲ್ಯ ಪದಾರ್ಥಗಳಾದ, ಪಕ್ವ ಬಾರ್ಲಿ ಸತ್ವದಿಂದಲೂ, ದನದ ನವ ಕೆನೆಹಾಲಿನಿಂದಲೂ ಮಾಡಿದಾಗಿದ್ದು, ಶ್ರೇಷ್ಠ ವಿಟಮಿನ್ಸ್‌ಗಳಿಂದ ಕೂಡಿದ್ದಾಗಿರುತ್ತದೆ. ಓವಲ್ಟಿನು ಪೌಷ್ಟಿಯುಕ್ತ ಸಂಪೂರ್ಣ ಗುಣದ ಆಹಾರವಾದ್ದರಿಂದ, ನಿಮಗೆ ಅದು ಆರೋಗ್ಯ, ಶಕ್ತಿ, ಚೇತನ್ಯವನ್ನುಂಟುಮಾಡಲಿಕ್ಕೆ ಬೇಕಾಗುವ ಎಲ್ಲಾ ಶಕ್ತಿವರ್ಧಗಳನ್ನು ಒದಗಿಸುತ್ತದೆ.

ಅಪ್ಪಟ 'ಓವಲ್ಟಿನ್'ನ್ನು ಪಡೆಯಿರಿ. ಗುಣದಲ್ಲಿಯೂ, ಕ್ರಮದಲ್ಲಿಯೂ, ಇದರ ಸರಿಸಮಾನವಾದದ್ದು ಯಾವುದೂ ಇಲ್ಲ. ಕೃತಕ ಬದಲಿಯಗಳನ್ನು ತ್ಯಜಿಸಿರಿ.

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಇದು ತಯಾರಿಕೆಯಲ್ಲಿ ಹಸ್ತಸ್ಪರ್ಶ ಕವಾಗಿಲ್ಲ.

ಏಜಂಟರು:—ಜೇಮ್ಸ್ ರೈಟ್ 85 ಎ ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.
ಬೊಂಬಾಯಿ ಮತ್ತು ಮದ್ರಾಸುಗಳಲ್ಲೂ ಸಿಗುತ್ತದೆ.

OV/476

ತಪ್ಪಿಸಿಲ್ಲ. ಚೀನಕ್ಕೆ ೯ ಮಹಾ ರಾಷ್ಟ್ರಗಳ ಸ್ನೇಹಬರೆದ- ಕರಾರು ಇದೆ. [illegible]ಗಾರನ ಬಾಯಿಯಿಂದ ಅದನ್ನು ತಪ್ಪಿಸುವ[illegible]ಬಹುದೆ ಎಂದು, ನೋಡಬೇಕು.

o o o o

ಚೀನಕ್ಕೆ ಸಹಾಯ ದೊರೆತರೆ, ಜಾಪಾನಿಗೆ ತನ್ನ ಅಪರಾಧವು ತಿಳಿದೀತು. ಇಷ್ಟರಲ್ಲೇ ಜಾಪಾನಿನ ಸಾಲವು ಕಳೆದ ವರ್ಷದ ಒಂದೂವರೆಯಷ್ಟಾಗಿದೆ. ರಷ್ಯದ ಸಹಾಯವು ಚೀನಕ್ಕೆ ದೊರೆತಿದೆಯಾದರೂ, ಅದು ಸಾಕೆ?

ಜೈಲಿನಲ್ಲಿದ್ದವರ ಭಾರ ಹೆಚ್ಚುತ್ತದೆಂದು ಬಂಗಾಳದ ಮಂತ್ರಿಗಳ ಟೀಕೆ,–ಶಿಫಾರಸು! ಭಾರ ಹೆಚ್ಚಿದರೆ ಆರೋಗ್ಯವೂ ಹೆಚ್ಚುವುದೇ? ವಿಮಾ ಕಂಪೆನಿಗಳನ್ನು ವಿಚಾರಿಸಿದರೆ ಗುಟ್ಟು ತಿಳಿದೀತು. ತೂಕ ಹೆಚ್ಚುತ್ತ ಬಂದರೆ, ಲೋಕ ಬಿಡುವ ಹೊತ್ತು ಹತ್ತಿರವಾಗುತ್ತದೆಂದು ಅವರ ಹೇಳಿಕೆ. ಮಂತ್ರಿಗಳು ಸ್ವಲ್ಪ ವಿಚಾರಿಸಿದರೆ ಉತ್ತಮ. ಅವರು ತೂಕ ಇಳಿಸಬೇಕೆಂದೇ ನಿರ್ಧರಿಸಿದ್ದು ಜೈಲಿನಲ್ಲೇ ಜೀವಿಸುವ ಏರ್ಪಾಟು [illegible]

ಜಪಾನು ಮುಂದೊತ್ತಿತು. ಚೈನಾದಲ್ಲಿ ಕಾಳಗದ ಕಹಳೆ ಕೂಗಹತ್ತಿತು. ಎರಡು ಸಹೋದರ ಜನಾಂಗಗಳು ಪರಮಾರಿಕನದಿಂದ ಎದೆಗೆದೆಯನ್ನಾನಿಸಿ, ಕಾಲನ ಕರೆಯನ್ನೀಕ್ಷಿಸುತ್ತಿವೆ. ಜಪಾನು ಚೈನಾದಲ್ಲಿ ವಿಜಯಯಾತ್ರೆಯನ್ನು ಹೂಡಿದೆ.

ನಾಗರಿಕತೆಯು ಹೆಗ್ಗುರುತು ರಕ್ತತೃಷ್ಣೆಯೆ? ಅಹುದಾಗಿರಬಹುದು. ಬಲವುಳ್ಳ ರಾಷ್ಟ್ರಗಳು ಬಲಹೀನ ರಾಷ್ಟ್ರಗಳನ್ನು ನುಂಗಹತ್ತಿವೆ. ನಿರ್ಭಯವಾಗಿ, ಬಹಿರಂಗವಾಗಿ ಮಾನವ ಜನಾಂಗದ ಕೊಲೆಯನ್ನೇ ಮಾಡಹತ್ತಿವೆ. ಯಾವ ಸರಕಾರವು ಒಬ್ಬನಿಂದಿನ್ನೊಬ್ಬನು ಮಡಿವುದನ್ನು 'ಕೊಲೆ'ಯೆಂದು ನಿರ್ಧರಿಸಿ, ಅದಕ್ಕೊಂದು ಶಿಕ್ಷೆಯನ್ನು ನಿರ್ಮಿಸಿತೋ, ಅದೇ ಸರಕಾರವು—ಸರಕಾರಗಳು ರಣರಂಗದಲ್ಲಿ ಸಾವಿರಾರು ಕೊಲೆಗಳಾಗುವುದನ್ನು ಅರಳಿದ ಕಣ್ಣುಗಳಿಂದ ನೋಡಿ, ಶಿಕ್ಷಿಸದೆ ರಕ್ಷಿಸುತ್ತಿವೆ. ಮತ್ತು ಕೂಗುತ್ತಿವೆ-ಶಾಂತಿಸ್ಥಾಪನೆಯು ನಮ್ಮ ಉದ್ದೇಶ್ಯವೇ!

ಜಪಾನಿನ ಸಾಮ್ರಾಜ್ಯ ತೃಷ್ಣೆಯು ಮಂಚೂರಿಯಾದ ವಿಜಯದಿಂದಲೇ ಅಡಗಲಿಲ್ಲ. ಜಗತ್ತಿನ ಮತವನ್ನು ಮುರಿದು, ಭಂಗಿಸಿ, ಚೈನದಲ್ಲಿ ತನ್ನ ಸೈನ್ಯದ ಮುನ್ನಡೆಗಾಗಿ ಹಾತೊರೆಯುತ್ತಿದೆ. ಈ ಸಾರಿ ಲೀಗ್ ಒಫ್ ನೇಶನ್ಸಿಂದ ಹೊರೆಹಾರುವ ಸರಿಯಿಲ್ಲ, ಇತರರ ಮಾತುಗಳಿಗೆ ಕಿವಿಗೊಡ್ಡುವ ಕಾರಣವಿಲ್ಲ, ಆದರೆ ತನ್ನಲ್ಲಿರುವಷ್ಟು ಸೇನೆಯನ್ನು, ರಣರಂಗದಲ್ಲಿ ವೈರಿಗಳ ತಲೆಗಳನ್ನು ಭೂತಗಳಿಗೆ ಕಡಿದಿಕ್ಕಲು ಬೇಕಾದ ಸಾಮಗ್ರಿಗಳನ್ನು ಚೈನಾದಲ್ಲಿ ಸಾಗಿಸುವ ಸಂಗ್ರಾಮವೊಂದೇ!!

ಸಾಮ್ರಾಜ್ಯ ತೃಷ್ಣೆಯಿಂದ ನಿರ್ಜೀವ ಶೈತ್ಯದ ಮೇಲೆ ತನ್ನೆಡಗಾಲನ್ನಿಟ್ಟು, ಅಖಿಲಜಗದ ವಿಜಯಕ್ಕಾಗಿ ಹಾತೊರೆಯುತ್ತ, ನರ್ತಿಸುವ ಜಪಾನಿನ ಸಾಮ್ರಾಜ್ಯಶಾಹಿಯು (Imperialism) ಮತ್ತೊಂದು ಅವತಾರವಿದು. ಅದೇ ಸಮಯದಲ್ಲಿ ನಾಗರಿಕರೆಂದು ಹೊಗಳಿಸಿಕೊಳ್ಳಲ್ಪಟ್ಟವರು ನಿಃಶಸ್ತ್ರರಾದ ಚೀನಿಯರ ಮೇಲೆ ವಿಮಾನಗಳಿಂದ 'ಬಾಂಬು'ಗಳನ್ನೆಸೆದು, ಅನಿರೀಕ್ಷಿತವಾದ ಚೀನಿಯರ ಕಣ್ಣಸೆ ರುಧಿರದ ಕಾಲುವೆಯನ್ನು ಹರಿಸಿಡುತ್ತಾರೆ. ಜನರನ್ನು ಯಾವ ಕರ್ತೃಗಳಾಗಿದರೂ ಒಪ್ಪಿ, ಸಂಧಿಗೆ ಸಿದ್ಧವಾಗುವಂತೆ ಮಾಡುವ ಜಪಾನಿನ ಅಪ್ ಟು-ಡೇಟ್ ರೀತಿಗಳಲ್ಲಿ ಇದೊಂದು!!

ಜಪಾನಿಗೆ ತಿಳಿದಿದೆ—ಅದರ ಶ್ರೇಯೋಪಥವು ಚೈನಾದ ವಿಶಾಲ ಬಯಲುಗಳಿಂದ ಸಾಗುತ್ತಿದೆಯೆಂದು.

ಅದೇ ರೀತಿಯಲ್ಲಿ ಎರಡು ವರ್ಷಗಳ ಹಿಂದೆ ಮುಸಲೋನಿಯು ಲೀಗ್ ಒಫ್ ನೇಶನ್ಸನ್ನು ಧಿಕ್ಕರಿಸಿ, ಇಂಗ್ಲಾಂಡಿನೊಡನೆ ಸಂಗ್ರಾಮದ ಸಂಭವವಿದ್ದರೂ ಲೆಕ್ಕಿಸದೆ, ಎಬಿಸೀನಿಯಾವನ್ನು ಬಗಲಿಗೆ ಹಾಕಿದ.

ಜಪಾನಿನ ಸಾಮ್ರಾಜ್ಯಶಾಹಿಯಂತೆ ಇಟಲಿಯ ಫಾಸಿಸಮ್ ಸಹಿತ ಯಾರಿಂದಲಾದರೂ ಎಮ್ಮೆನೇ ಮುರಿಯಲ್ಪಡದಿದ್ದಲ್ಲಿ, ವಿಚಿತ್ರ ರಭಸದಿಂದ ಮುಂದೊತ್ತುವ ಗುಣವುಳ್ಳದಾಗಿರುತ್ತದೆ. ಮುಸೋಲಿನಿಯು ಕನವರಿಸುತ್ತಿರುವ ರೋಮನ್ ಸಾಮ್ರಾಜ್ಯದಂತೆ ವಿಸ್ತೃತವಾಗಲಿರುವ ಇಟಲಿಯನ್ ಸಾಮ್ರಾಜ್ಯದ ಹಗಲುಗನಸು ನಿಶ್ಚಿತವಾದ ಸತ್ಯದ ಸ್ಥಿತಿಗೆ ಬರಬೇಕಾದಲ್ಲಿ, ಎಬಿಸೀನಿಯಾ, ಅದರಲ್ಲಿನ ಆರ್ಥಿಕ ಬೆಳೆಗಳು, ಅಲ್ಲದೇ ಅಲ್ಲಿನ ವಿಶಾಲ ಖನಿಜ ಸಂಪತ್ತು—ಇವೇ ಮೊದಲು ಇಟಲಿಗೆ ದೊರಕಬೇಕಾಗಿದ್ದುದು ಸಹಜ. ಎಬಿಸೀನಿಯಾದಲ್ಲಿ ಮುಸೋಲಿನಿಯು ನಡೆಸಿದ ಕ್ರೂರಕರ್ಮಗಳನ್ನು ನೋಡಿದರೆ, ಯಾ ಆತನು ಎಬಿಸೀನಿಯಾದ ವಿಜಯಕ್ಕಾಗಿ ಪಟ್ಟ ಆತುರವನ್ನು ಕಂಡರೆ, ಮುಸೋಲಿನಿಗೆ ಆ ಕನಸು ಎಷ್ಟು ಹೃದಯಸ್ಪರ್ಶಿಯಾಗಿರುವುದೆಂಬುದನ್ನು ಕಂಡುಕೊಳ್ಳಬಹುದು. ಐದು ವರ್ಷಗಳ ಹಿಂದೆ ಜಪಾನು ಮಂಚೂರಿಯಾದಲ್ಲಿ ನಡೆಸಿದ ಕಾರ್ಯ

ಯುರೋಪಿನ ರಾಷ್ಟ್ರಗಳ ಶ್ರೇಯೋಪಥ

ಎಬಿಸೀನಿಯಾದಿಂದ, ಮಂಚೂರಿಯಾದಿಂದ, ಚೈನಾದಿಂದ ಸಾಗುತ್ತಿದೆಯೇ?

ನಾಗರಿಕತೆಗೆ ಹಿಡಿದಿದೆ ರಕ್ತತೃಷ್ಣೆ!

ಶಾಂತಿಸ್ಥಾಪನೆಗೆ ನೆತ್ತರಿನ ಹೊಳೆಯು ಅವಶ್ಯಕತೆ!

ಗಳನ್ನೂ ಮುಸೋಲಿನಿಯು ಎಬಿಸೀನಿಯಾದಲ್ಲಿ ನಡೆಸಿದ ಕ್ರೌರ್ಯವನ್ನೂ ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸಿದಲ್ಲಿ,—ಜಪಾನು ಬಹಳ ಮೃದುಹೃದಯವುಳ್ಳದಾಗಿತ್ತೆಂದು ತಿಳಿಯಬಹುದು.

ಎಬಿಸೀನಿಯಾದ ದಟ್ಟ ಕಾಡುಗಳಲ್ಲಿ—ಇಟಲಿಯ ಸೈನ್ಯಸಾಗಿತ್ತು' ವಿಷವಾಯು ಬೀಸುತಿತ್ತು. ವಿಮಾನಗಳು ಬಾಂಬುಗಳ ಮಳೆಗರೆಯುತಿದ್ದವು. ಇಷ್ಟೆಲ್ಲಾ ಸರಕರಣೆಗಳು ಬೇಕಾದವು—'ಇಪ್ಪತ್ತನೇ ಶತಮಾನ ಮಾರ್ಕಿನ ರೋಮನರ ನಾಗರೀಕತೆಯನ್ನು ಎಬಿಸೀನಿಯಾದಲ್ಲಿ ಬಿತ್ತಲು' ಆ ಕಾರಣದಿಂದಲೇ ಜಗತ್ತು ರಾಮ ರಾವಣರ, ಕೌರವ ಪಾಂಡವರ ಕೊಳುಗುಳವನ್ನು ಮಿಗಿಸುವ ಯುದ್ಧವನ್ನು ಕಂಡಿತು. ಆ ಕಾರಣದಿಂದಲೇ ರಣರಂಗದಲ್ಲಿ ಬಿದ್ದವರ ಸಂಖ್ಯೆಯು ಮ್ಯಜುಮ್ಮೆನಿಸುವ ೧೦೦,೦೦೦ಕ್ಕೆ ಮುಟ್ಟಿತು.

ಮುಸೋಲಿನಿಯ ದೃಷ್ಟಿಯಲ್ಲಿ ಇಟಲಿಯ ಶ್ರೇಯೋಪಥವು ಎಬಿಸೀನಿಯಾದ ಸಿಬಿಡಕರು ರಾಜಗಳ ನಡುವೆ ಸಾಗಿತ್ತು!

ಜಪಾನಿನ ಸಾಮ್ರಾಜ್ಯಶಾಹಿಯೊಡನೆ ಸ್ನೇಹವಿದ್ದು, ಇಟಲಿಯ ಫಾಸಿಸಮ್‌ದೊಡನೆ ಕೈಗಳಲ್ಲಿ ಕೈಗಳಿಟ್ಟು ಮುನ್ನಡೆವ ಜರ್ಮನಿಯನ್ನು ತನ್ನ ಸೇನಾ ಸಮೂಹಗಳಿಂದ ತುಂಬಿಸಿಬಿಟ್ಟಿದ್ದಾನೆ ಬಹುರಹಿತ ಹಿಟ್ಲರ್! ಅವನ ದೆಸೆಯಿಂದ ಜರ್ಮನಿಯು 'ಕಾದಾಡುವ ಶಕ್ತಿಯಾಗಿದೆ' ಹಿಟ್ಲರನು ಕೈಸರನಿಗೆ ಸಾಮ್ರಾಜ್ಯ ವಿಸ್ತರಣೆಯಲ್ಲಿ ಮೊದಲ ಪಾಠವನ್ನು ಕಲಿಸುವ ಯೋಚನೆಯಲ್ಲಿದ್ದಾನೆ. ಹಿಂದಿನಂತೆಯೇ ಈಗಲೂ ಜರ್ಮನಿಯು ತನ್ನ ಭೀಕರ ಯುದ್ಧಸಾಮಗ್ರಿಗಳಿಂದ ಫ್ರಾನ್ಸಿಗೆ ಆಗಾಗ ಅಪಸ್ಮಾರ ರೋಗವನ್ನು ಹಿಡಿದಿರಿಸಿರುತ್ತದೆ. ವಿಜಯ ಮತ್ತು ಸಾಮ್ರಾಜ್ಯ ವಿಸ್ತರಣ ಎಂಬ ಉನ್ನತ ಧ್ಯೇಯ ಹರಿನರಳು ಹಿಟ್ಲರನ ಕಣ್ಮುಂದೆ ನಲಿಯುತ್ತಿದೆ. ಆತನನ್ನು ನಲಿಸುತ್ತಲೂ ಇದೆ.

ಈ ರೀತಿಯಲ್ಲಿ ಯುದ್ಧಸನ್ನದ್ಧ ಜರ್ಮನಿಯು ಯುರೋಪಿನ ರಾಜಕೀಯಾಕಾಶದಲ್ಲಿ ಗುಡುಗಿನಂತೆ ಗರ್ಜಿಸುತ್ತಿದೆ, ಮಿಂಚಿನಂತೆ ಮಿಂಚುತ್ತಿದೆ. ಯಾರ ತಲೆಗೆ ಸಿಡಿಲು ಬಡಿವುದೆಂಬುದನ್ನು ಬಲ್ಲವರಾರು?

ಜರ್ಮನಿಯ ಶ್ರೇಯೋಪಥವು ಸಮಗ್ರ ಯುರೋಪಿನ ನಡುವಿನಿಂದ ಸಾಗಿದೆ—ಇದು ಹಿಟ್ಲರನ ದಿವಾಸ್ವಪ್ನ!

ಇದೇ ಸಮಯದಲ್ಲಿ ಫ್ರಾನ್ಸ್, ಇಂಗ್ಲಾಂಡ್ ಮುಂತಾದ ರಾಷ್ಟ್ರಗಳು ಇತರರಂತೆ ಶಸ್ತ್ರಾಸ್ತ್ರಗಳನ್ನು ಧಾರಣಮಾಡಿ, ಲೀಗ್ ಒಫ್ ನೇಶನ್ಸನ ಸಭಾ ಮಂದಿರದಲ್ಲಿ ಕುಳಿತು, ಆಸನ್ನ ಮರಣವಾದ ಸಂಸ್ಥೆಗೆ ಜೀವದಾನ ಕೊಡುವ ಉದ್ದೇಶದಿಂದ ಅದರ ಶ್ವಾಸಕೋಶಗಳಿಗೆ ಗಾಳಿಯೂದುತ್ತಿವೆ. ಆದರೆ ನಿಷ್ಫಲವಾಗಿ' ವಿನಾಕಾರಣವಾಗಿ'' ವ್ಯರ್ಥವಾಗಿ!''

ಆವೆರಡು ರಾಷ್ಟ್ರಗಳು ಶಾಂತವಾಗಿ ಕುಳಿತು ನೋಡುತ್ತಿವೆ ಜಗತ್ತಿನ ರೀತಿಯನ್ನು' ತಮ್ಮ ಬಿಸಿ ನೆತ್ತರನ್ನು ಬಹಳಾಗಿ ಸುರಿಸಿ, ಸಂಪಾದಿಸಿದುದನ್ನು ಅಕಾರಣವಾಗಿ ಈ ವಿಜಯ ಯಾತ್ರೆಯ ಮೂಲಕ ಕಳೆದುಕೊಳ್ಳುವ ಯೋಚನೆಯಿಲ್ಲ.

ಈಗ 'ತೋರುತ್ತಿದೆ—ಈ ಎರಡೂ ಶಕ್ತಿಗಳು ಸೇರದ ಯುದ್ಧವು ಒಂದು 'ಭಯಂಕರ' ರೀತಿಯದಾಗಲಿಕ್ಕಿಲ್ಲವೆಂದು, ಯಾರೊತನೆಯಾದರೂ ಕಾದಾಡಲು ಯೋಗ್ಯವಾದ ರಾಷ್ಟ್ರಗಳೆಂದರೆ ಇವೆರಡು.' ಆದರೆ ಎರಡೂ ತಟಸ್ಥವಾಗಿವೆ. ಯುದ್ಧವನ್ನೆಸಗಲು ಕಾರಣಗಳ ಕಡಿಮೆಯಾಗಿದ್ದಿಲ್ಲ. ನೆಪಕ್ಕಾಗಿ ಎಬಿಸೀನಿಯವನ್ನಾಗಲೀ ಇಂದಿನ ಸ್ಪೈನನ್ನಾಗಲೀ ಯಾಚಿಸಿ, ಯುದ್ಧವನ್ನು ಹೂಡಬಹುದಿತ್ತು. ಆದರೆ ಇಲ್ಲ, ಎರಡೂ ಶಾಂತಿಯನ್ನಾಂತು ಕುಳಿತಿವೆ.

ತನ್ನ ರಾಷ್ಟ್ರವನ್ನು ಅಭಿವೃದ್ಧಿಗೂ ಪ್ರಸಿದ್ಧಿಗೂ ತರಬೇಕೆಂದೆಣಿಸಿದ ರಾಷ್ಟ್ರವಿಲ್ಲವೆಂದಲ್ಲಿ ತಪ್ಪಾಗಲಾರದು. ತಮ್ಮ ರಾಜ್ಯಗಳನ್ನು ಅಭಿವೃದ್ಧಿಗೊಳಿಸಿ ಶಾಂತಿಸ್ಥಾಪನೆ ಮಾಡುವೆವೆಂದು ಒಬ್ಬ ಇಂಗ್ಲರಷ್ಟೇ ಹೇಳುತ್ತಿಲ್ಲ. ಅದೋ! ಹಿಟ್ಲರನು ಕೂಡ ತನ್ನ ರಾಜನೀತಿಯನ್ನು ಸ್ವಲ್ಪ ವ್ಯತ್ಯಾಸಗೊಳಿಸಿ ತನ್ನ ಸಾಮ್ರಾಜ್ಯವನ್ನೆ ಸ್ವಲ್ಪ ವಿಸ್ತರಿಸಿ ಇತಿ' ಜಗತ್ತಿನಲ್ಲಿ ಶಾಂತಿಸ್ಥಾಪನೆ ಮಾಡಬಹುದೆಂದೆಣಿಸುತ್ತಾನೆ. ಮುಸೋಲಿನಿಯು ಅದೇ ಧ್ಯೇಯಕ್ಕಾಗಿ ತಾನು ಸವೆಸುತ್ತಾನೆ. ಜಪಾನು ಸಹಿತ ತನ್ನ ಗುರಿಯನ್ನು ಅದೇ ದೃಷ್ಟಿಯಲ್ಲಿ ನೋಡುತ್ತಿದೆ. ಅದೇ ರೀತಿಯಲ್ಲಿ ಅಮೇರಿಕಾ ಮತ್ತು ಸೋವಿಯಟ್ ರಷ್ಯಾ' ಪ್ರತಿಯೊಬ್ಬನೂ ಜಗತ್ತನ್ನು ಅಭಿವೃದ್ಧಿಗೊಳಿಸಿ, ಅದರಲ್ಲಿ ಶಾಂತಿಸ್ಥಾಪನೆ ಮಾಡುವ ಉಪೇಕ್ಷಣೆಯನ್ನು ಕೈಕೊಂಡಿದ್ದಾನೆ. ಪ್ರತಿಯೊಬ್ಬನೂ ಒಂದೊಂದು ಹಾದಿಯನ್ನು ಹಿಡಿದು ಅದೇ ಗುರಿಯನ್ನು ಮುಟ್ಟುವ ನಿಶ್ಚಯದಲ್ಲಿದ್ದಾನೆ. ಆದರೆ ಇಡೀ ಯುರೋಪು ಪ್ರಾಣಹಾರೀ ಶಸ್ತ್ರಾಸ್ತ್ರಗಳ ಸಂಘರ್ಷಣೆಯಿಂದ ಸಜೀವವಾಗಿ ಎದ್ದು ನಿಂತಿದೆ!

ಶಾಂತಿಸ್ಥಾಪನೆಗಾಗಿ ಹೆಣಗುವ ಕೆಲವು ರಾಜಕಾರಣ ಪಟುಗಳು 'ನೆತ್ತರ ಹೊಳೆ ಹರಿಸುವುದರಿಂದ ಶಾಂತಿಯು ಪ್ರಸ್ಥಾಪಿತವಾಗದು; ಒಂದು ಜನಾಂಗವು ಅಷ್ಟು ಕಷ್ಟಪಟ್ಟು ಸಾಧಿಸುವ ಧ್ಯೇಯವು ಜಗತ್ತಿನಲ್ಲಿಲ್ಲ,' ಎಂದು ಕೂಗಹತ್ತಿದ್ದಾರೆ. ನಿಜವಾಗಿಯು ಜನಾಂಗವು ಜನಿಸುವಾಗಲೇ ಧ್ಯೇಯವು ನಿಶ್ಚಿತವಾಗಿಲ್ಲ, ಆದರೆ ಅವರವರ ರಾಜಕಾರ್ಯಗಳ ಪ್ರೈವೇಟ್ ಆಫೀಸಿನಲ್ಲಿ!

ಒಟ್ರ್ರಾಂಡ್ ರಸ್ಸೆಲ್ ಅಲ್ಡುವಸ್ ಹಕ್ಸ್ಲೀ ಮತ್ತು ಲಿಟ್ಟನ್ ಸ್ಟ್ರೇಚೀ ಮುಂತಾದ ಆಂಗ್ಲ ಪ್ರಭೃತಿಗಳು ಇಂದಿನ ಯುದ್ಧರಂಗಗಳ ಕುರಿತಾದ ಅಭಿಪ್ರಾಯಗಳಿಗಾಗಿ ಜೇಲುಗಳನ್ನು ಕಂಡರು. ಬೆವರ್ಲಿ ನಿಕೊಲಸ್ ಎಂಬ ಶಾಂತ್ಯೇಚ್ಛುವು ನಿರಾಶೆಯಿಂದ ಹೇಳಿದ್ದನಂತೆ. ಸ್ವಪ್ರಯತ್ನದಿಂದ ಒಂದು ರಾಷ್ಟ್ರವನ್ನು ಮೊಣಕಾಲೂರುವಂತೆ ಮಾಡಿದ ಜಾಹರೊಫ್‌ನನ್ನು ಇಡೀ ರಾಷ್ಟ್ರವೇ ಸನ್ಮಾನಿಸುತಿತ್ತು. ಆದರೆ ಯಾರಿಂದಲೂ ಮಾನಿಸಲ್ಪಡದ ಶಾಂತ್ಯೇಚ್ಛು ನಾನು!

ರಣರಂಗದ ಪ್ರಸಿದ್ಧ ಕವಿಯಾದ ಸೀಜ್‌ಫ್ರೀಡ್ ಸೆಸ್ಸೂನ್ ಮಹಾಶಯನು ಮಹಾಯುದ್ಧದ ಸಮಯದಲ್ಲಿ ತಾನಾರನ್ನೂ ಕೊಲ್ಲಲಿಚ್ಛಿಸಲಾರೆ ಎಂಬುದನ್ನು ಕಂಡುಕೊಂಡ, ಆತನನ್ನೂ ಕೂಡಲೆ ಆಸ್ಪತ್ರೆಗೆ ಸಾಗಿಸಿ, ಕೆಲಸದಿಂದ ರಜೆಯಿತ್ತರು. ಕಾರಣ—ನರಗಳ ದುರ್ಬಲತೆ!

ಇಂತಹ ಘೋರ ಯುದ್ಧಾವಸ್ಥೆಯನ್ನು ಹೊಕ್ಕಿದೆ ಜಪಾನು. ಅದು ತನ್ನ ಧ್ಯೇಯದೆಡೆ ಧೈರ್ಯವಾಗಿ ಸಾಗುತ್ತಿದೆ. ಆದರೆ ಅದು ಶ್ರೇಯೋಪಥದಲ್ಲಿ ಸಾಗುತ್ತಿರುವಾಗ ಪರರ ಗತಿ' ಕೇಳುವವರಾರು?

B Chronicle ನ ಒಂದು ಲೇಖನದ ಆಧಾರದಿಂದ

ಅಮೇರಿಕಾದ ಓರ್ವ ವೈದ್ಯರ ಅಭಿಪ್ರಾಯದ ಪ್ರಕಾರ, ಹಿಂದೆ ಕೆಲ ಚೀನಿಯರು, ತಹಾ ನೀರನ್ನು ಕುಡಿಯುವ ಅಭ್ಯಾಸದಲ್ಲಿ ತೊಡಗಿದ್ದರು. ಬಾಯಾರಿಕೆಗೆ ಚಹಪಾನವನ್ನು ಮಾಡುವುದು ಅವರ ಅಭ್ಯಾಸವಾಗಿತ್ತು. ಅಲ್ಲಿ ಕೊಲೇರಾ ರೋಗವು ತಲೆದೋರಿತು. ಚಹಪಾನದ ಅಭ್ಯಾಸ ಮಾಡದಿದ್ದವರಲ್ಲಿ ಅನೇಕರು ಮಡಿದರು. ಉಳಿದವರೆಂದರೆ, ಚಹಪಾನ ಅಭ್ಯಾಸ ಮಾಡಿದವರು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ತೀವ್ರ ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ ಇವುಗಳು ಪರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4.



Distributors for South Kanara.—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

S. U. N. & Co.

Silk Merch

Chaukhamba, BENARES CITY.

ಈಗಿನ ತರಹ(ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ ಖಾತ್ರಿ ಮಾಲು. 10 ಮೊಳದ 2½ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣ ತರದ್ದು 18 ಮೊಳ ಬುಟ್ಟಿ ಶೀರೆಗಳ. ರೂ 35ರಿಂದ ರೂ 55 ಪಡಬು ಸಾದಾ ಶೀರೆ 18 ಮೊಳ ರೂ 32ರಿಂದ ರೂ. 65 ಉದ್ದ ಮೊಳ 16, ಅಗಲ 2½ ರೂ 20 ರಿಂದ 35ರ ವರೆಗೆ ಬೇರೆ ಮಾಲುಗಳ ಕಟಲಾಗ ಉಚಿತವಾಗಿ ಕಳುಹಿಸಲಾದೀತು

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನಾರೆಸ್ ಸಿಟಿ.

THE

BANK OF MANGALORE LTD.,

MANGALORE.

ESTD 19..

Branches -

Panemangalore Mudabidri & Padubidri

Chairman—**Philip J. Chandran, Esq.,**

Retd. Dt Registrar of Joint Stock Companies

On & from 1st of January 1937,

Fixed Deposits will be received at following rates of interest

For	3 months	3½%
„	6	4%
„	12 „	5%
„	24 & upwards	5½%

Interest Payable Quarterly

Saving Bank deposit 3½% on daily balances

All kinds of banking business transacted

U. R. PAI, N. U. PAI, *Managing Directors*

"An ideal young progressive Life Office of India to Insure with or represent"

The Commonwealth Assurance Co.,

LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 37½. ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms. Apply to—

Messrs. GAWANKAR & SONS

Chief Agents for Mysore State Coorg, Ceded Districts & S Kanara

AHMED BUILDINGS CHICKPET BANGALORE CITY

Messrs. Farooqui Brothers, *Special Agents*

Fort House, Karkal, (South Kanara.)

Local Representatives —THE MODERN TRADING CO, Mangalore.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ— ಗರ್ಭಶೂಲೆ, ಗರ್ಭಸ್ರಾವಕ್ಕೆ

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ

ಕೃಷ್ಣಾರಿಕ್—ಶ್ವಾಸಖಾಸ, ದುರ್ಬಲತೆ, ನೇತ್ರ ಚರ್ಮವ್ಯಾಧಿಗಳಿಗೆ.

ವೃದ್ಧಿಕಾಸವ— ನಿತ್ರಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ

ಹಿಮಸಾಗರ ತೈಲ— ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಅರಬರ ಮಹತ್ವಾಕಾಂಕ್ಷೆ

ಪೆಲೆಸ್ತೀನದ ಪ್ರಕರಣದ ರಹಸ್ಯಗಳು.

ಜರ್ಮನಿ ಇತ್ಯಾದಿ ಕಡೆಗಳಿಂದ ಅಟ್ಟಲ್ಪಟ್ಟ ಯೆಹೂದಿಯರು, ಪೆಲೆಸ್ತೀನದಲ್ಲಿ ನೆಲೆಸಿಕು ವ್ಯಾಪಾರ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿರುವರು. ಟರ್ಕಿಗೆ ವಿರೋಧವಾಗಿ ಹೆಣಗಾಡಿದ, ಒಂದಾನೊಂದು ದಿನ ಬ್ರಿಟಿಷರಿಗಾಗಿ ಶಸ್ತ್ರಧಾರಿಗಳಾದ, ಈಗ ಮತ್ತೊಮ್ಮೆ ಶಸ್ತ್ರಧಾರಿಗಳಾದ ಅರಬೀಯರ ಮಧ್ಯದಲ್ಲಿ ಈ ಯೆಹೂದಿಯರು ನೆಲೆನಿಂತಿರುವರು. ಪೆಲೆಸ್ತೀನವು ಯೆಹೂದಿ ಸಂಸ್ಕೃತಿಯ ಪುನರುತ್ಥಾನದ ಹೊಸ ಭೂಮಿ ಎಂದು ಅವರ ಅಭಿಪ್ರಾಯವಾಗಿರುವುದು.

x x x x

ಪೆಲೆಸ್ತೀನವು ತುರ್ಕಿದೇಶದ ಹಿಡಿತದಿಂದ ಬಿಡುಗಡೆ ಹೊಂದಿದ ನಂತರ, ಒಂದು ಮ್ಯಾಂಡೇಟಾಗಿ ಬ್ರಿಟಿಷರ ಕೈಗಳಿಗೆ ಬಂದಾಗ, ಕ್ರಮೇಣ ಅಲ್ಲೊಂದು, ಪೂರ್ವ ಐರೋಪ್ಯ,ರಷ್ಯಾ ಇತ್ಯಾದಿ ಕಡೆಗಳಿಂದ ಬಂದ ಯೆಹೂದಿಯರೂ, ಕ್ರಿಸ್ತ, ಮುಸ್ಲಿಮ ಮತ್ತು ಅರಬೀಯರೂ ಇರುವ ಸ್ವಾತಂತ್ರ ದೇಶದ ಸ್ಥಾಪನೆಯಾಗುವುದೆಂಬ ಆಶೆಯು ಅವರಲ್ಲಿತ್ತು

x x x x

ಆದರೆ ಬ್ರಿಟಿಷ ಸೈನಿಕ ಮತ್ತು ಪೋಲೀಸರಿಂದ, ಯೆಹೂದಿಯರ ಮತ್ತು ಅರಬರ ನಡುವೆ ಶಾಂತಿಸ್ಥಾಪಿಸಲು ಯಾಕೆ ಅಸಾಧ್ಯವಾಯಿತೆಂಬ ಪ್ರಶ್ನೆಯು ಜನಾಂಗಮಂಡಳವು ಕೇಳುತ್ತಿದೆ. ದಂಗೆಗಳ ಮೇಲೆ ದಂಗೆ ನಡೆಯಿಸುವ ಅರಬೀಯರನ್ನು ಮತ್ತು ಯೆಹೂದ್ಯರನ್ನು ತಣಿಸಲು ಅವರಿಂದ ಯಾಕೆ ಅಸಾಧ್ಯವೆನಿಸಿತು?

ಡಿವೆಲರಾನ ದೇಶದಲ್ಲಿ ೩೦ ಸಾವಿರ ಸೈನಿಕ ದಂಡಿಗೆ, ಶಾಂತಿಸ್ಥಾಪಿಸಲು ಅಸಾಧ್ಯವೆನಿಸಿದಾಗ, ಅನೇಕ ಕಷ್ಟಗಳಿಂದ ಕೂಡಿದ ಪೆಲೆಸ್ತೀನದಲ್ಲಿ ಶಾಂತಿಸ್ಥಾಪಿಸಲು, ಪ್ರತಿಯೊಬ್ಬ ಅರಬನಿಗೂ, ಯೆಹೂದಿಗೂ ಒಬ್ಬೊಬ್ಬ ಸೈನಿಕನಾಕಬೇಕಾಗುವುದು ಅರಬನು ವೈಯಕ್ತಿಕ ಭಾವವುಳ್ಳವನು, ಸ್ವಮತ ಭ್ರಾಂತನು ದ್ವೇಷವು ಆತನಲ್ಲಿ ಮೂಡಿತೆಂದರೆ,ಆತನು ಮಹಾ ಕೊಲೆಗಾರನಾಗುವನು ತನ್ನ ಪ್ರಾಣದ ಗಣನೆಯು ಕೂಡ ಆತನಿಗಿರದು ವೈರಿಯು ರಕ್ತ ಚೆಲ್ಲುವುದಕ್ಕೆ ಅವನು ಏನನ್ನೂ ಮಾಡಲು ಸಿದ್ಧನಿರುವನು ಆತನು ಕೊಲೆಮಾಡುವನು—ಕೊಲೆಮಾಡಲ್ಪಡುವನು

x x x x

ರಾಷ್ಟ್ರೀಯ ಅರಬಿ ಹಿಂಸಾತ್ಮಕ ಕೂಟಗಳು ಅತ್ಯಂತ ಭಯಂಕರವಾದವುಗಳ ಎಂದು ಪೆಲೆಸ್ತೀನದಲ್ಲಿ ನಿಲ್ಲಿಸಿದ ಬ್ರಿಟಿಷ ಗುಪ್ತ ಪೋಲೀಸರ ಅಭಿಪ್ರಾಯವಂತೆ ಆದರಿಂದ ಅರಬಿಯರಿರುವ ದೊಡ್ಡ ಪೆಲೆಸ್ತೀನ, ಯೆಹೂದಿಯರ ಸಣ್ಣ ಪೆಲೆಸ್ತೀನ ಎಂಬುದಾಗಿ ಪೆಲೆಸ್ತೀನವನ್ನು ವಿಭಜಿಸಿ,-ಇವರೀರ್ವರೊಳಗೆ ಶಾಂತಿ ಸ್ಥಾಪಿಸುವುದು ಲೇಸೆಂದು ಬ್ರಿಟಿಷರು ತಿಳಿದಿರುವರು

ಇದೆ ಯೋಜನೆಯು ಜಗತ್ತಿನಲ್ಲೆಲ್ಲಾ ಪ್ರತಿಕೂಲತೆಗಳನ್ನು ಹೊರಡಿಸಿಬಿಟ್ಟಿರುವುದು

ಆದರೆ ಈ ಪೆಲೆಸ್ತೀನದ ಪ್ರಕರಣದ ಹಿಂದೆ ಮಹಾ ಒಳಸಂಚುಗಳೂ, ಮಹತ್ವಾಕಾಂಕ್ಷೆಗಳೂ ಇರುವವು. ಬ್ರಿಟನು ಒಂದು ಅರಣ್ಯವಾಗಿದ್ದಾಗ, ಮೆಡಿಟರೆನಿಯನ್ ಸಾಗರದಲ್ಲಿ ಸಂಸ್ಕೃತಿ ಇತ್ಯಾದಿ ವಿಚಾರಗಳಲ್ಲಿ ಮಹಾ ಕೀರ್ತಿಯನ್ನು ಗಳಿಸಿದ ಇಟಲಿಯು, ತನ್ನ ಈಗಿನ ಮಹತ್ವಾಕಾಂಕ್ಷೆಯನ್ನು ಸಾಧಿಸಲು, ಆಸ್ಯಾದ ಮೇಲೆ ಕೈಮಾಡುವ ಉದ್ದೇಶದಿಂದ, ಪೆಲೆಸ್ತೀನವನ್ನು ಸೇರಿರುವುದು.

x x x x

ಯೆಹೂದಿಯರು ತಮ್ಮ ಮೇಲೆ ಸಫಲ ಕರಣೆ ನಡೆಯಿಸಲು ಬಂದಿರುವರೆಂದು ಎಲ್ಲಾ ಅರಬೀಯರ ಅಭಿಪ್ರಾಯವಾಗಿರುತ್ತದೆ ನಾಜಿ ಜರ್ಮನಿಯಿಂದ ಅಟ್ಟಲ್ಪಟ್ಟ ರೂಟೆನ್‌ಬರ್ಗ ಎಂಬ ಯೆಹೂದಿಯು ಪೆಲೆಸ್ತೀನದ ಜೋರ್ಡನ್ ನದಿಯ ನೀರಿನ ಪ್ರವಾಹದಿಂದ ವಿದ್ಯುತ್ತಚಕ್ತಿಯನ್ನು [illegible] ಒಂದು ಮಹಾ ಯೋಜನೆಯನ್ನು ನಡೆಯಿಸಿಬಿಟ್ಟು, ಸಮಸ್ತ ಅರಬಿ ಮನೆಗಳು ಈ ಮೊದಲು ಮಯಣದ ಬತ್ತಿಯಿಂದ ಪ್ರಕಾಶಿಸಲ್ಪಡುತಿದ್ದುದನ್ನು ವಿದ್ಯುತ್‌ಜ್ಯೋತಿಯಿಂದ ಪ್ರಕಾಶಮಾನವಾಗುವಂತೆ ಮಾಡಿಬಿಟ್ಟಿರುವನು-ಇದೂ ಕೂಡ ತಮ್ಮ ಮೇಲೊಂದು ಯೆಹೂದಿ ಸಫಲಕರಣೆಯೆಂದು ಅರಬಿಯರ ಮತವಾಗಿರುತ್ತದೆ

"ನಾವು ಬ್ರಿಟಿಷರೊಡನೆ ಕೂಡಿ, ತುರ್ಕಿ ಆಳ್ವಿಕೆಯಿಂದ ಪಾರಾಗಲು ಕಾದಾಡಿದೆವು ಆದರೆ, ಅದರಿಂದ ಯಹೂದಿ ಸಫಲಕರಣೆಯ ಹೊರೆಯನ್ನು ಹೆಗಲ ಮೇಲೆ ಹೊರುವಂತೆ ಸಿದ್ಧವಾದಂತಾಯಿತು" ಎಂಬುದು ಅರಬರ ಈಗಿನ ಅಭಿಪ್ರಾಯ

೧೯೧೮ರಲ್ಲಿ ಪೆಲೆಸ್ತೀನದಲ್ಲಿ ೬೫೦,೦೦೦ ಅರಬೀಯರು, ೬೦,೦೦೦ ಯೆಹೂದಿಯರು ಇದ್ದರು-ಆಗವರು ಶಾಂತತೆಯಲ್ಲಿ ಜೀವಿಸುತ್ತಿದ್ದರು

ಇಂದು ಅರಬೀಯರು ಒಂದು ಮಿಲಿಯಕ್ಕೆ ಹೆಚ್ಚಿರುವರು ಆದರೆ ಹೊರದೇಶಗಳಿಂದ ಯೆಹೂದಿಯರು ಬರುತ್ತಾ ಇದ್ದು ಅವರ ಸಂಖ್ಯೆ ೪೦೦,೦೦೦ಕ್ಕೆ ಏರಿರುತ್ತದೆ: ಯೆಹೂದಿಯರು ಬರುವಾಗ ಅವರೊಡನೆ ಧನಸಂಗ್ರಹವನ್ನು ತಂದಿರುವರು ಆದರಿಂದ ಅವರು ನೆಲವನ್ನು ಪಡಕೊಂಡಿರುವರು ಅನೇಕ ಫೆಕ್ಟರಿಗಳನ್ನೂ ಜನಭರಿತ ನಗರಗಳನ್ನೂ ವಿಶ್ವವಿದ್ಯಾನಿಲಯಗಳನ್ನೂ ಸ್ಥಾಪಿಸಿರುವರು

x x x x

ಇವರಲ್ಲಿ, ಪೆಲೆಸ್ತೀನದ ೩೦೦ ಅರಬ ರಾಜ್ಯಕುಟುಂಬಗಳಿಗೂ, ಅರಬಿ ರೈತರಿಗೂ, ಅರಬಿ ವರ್ತಕರಿಗೂ ಸಾಮಾನ್ಯ ಅರಬನಿಗೂ, ಟ್ರಾನ್ಸ್‌ಜೋರ್ಡನ್, ಅರಬಿಯಾ, ಇರಾಕ್, ಸಿರಿಯಾ ಇತ್ಯಾದಿ ಕಡೆಗಳೊಳಗಿನ ಅರಬೀಯರಿಗೂ ಸಮಾಧಾನವಿಲ್ಲ ಕಾರಣ ಅರಬೀಯರು ಮಹತ್ವಾಕಾಂಕ್ಷೆ ಉಳ್ಳವರು

ಮೆಡಿಟರೇನಿಯನ್ ರಾಜ್ಯದ ಅಧಿಕಾರವು ಶತಮಾನದ ಮೇಲೆ ಅರಬ ಅಧಿಕಾರ ನಡೆಯುವ ದಿನವೊಂದಿತ್ತು ಅರಬ ಸಾಮ್ರಾಜ್ಯದ, ಸಾಹಿತ್ಯ ಪುರುಷರಿಂದ, ವಿಜ್ಞಾನಿಗಳಿಂದ, ತತ್ವಜ್ಞಾನಿಗಳಿಂದ ಪಾಶ್ಚಾತ್ಯ ಸಂಸ್ಕೃತಿಗೆ ಮಹದುಪಕಾರವಾಗಿರುತ್ತದೆ ಸ್ಪೇಯಿನ್ ಇತ್ಯಾದಿ ಮೆಡಿಟರೇನಿಯನ್ ಪ್ರದೇಶದಲ್ಲಿ ಅರಬಿ ಸೈನಿಕರ, ಸಾಮ್ರಾಟರ ಸಾಹಸದ ಕುರುಹುಗಳಿವೆ

ಕಳೆದ ಮಹಾಯುದ್ಧದ ನಂತರ ಪ್ರಸಿದ್ಧ ಅರಬ ರಾಜ್ಯದ ಪುನರುತ್ಥಾನ ಮಾಡಬೇಕೆಂಬ ಮಹದಾಶೆಯು ಅರಬ ಅರಸನಾದ ಹುಸ್ಸೇನನಿಗಿತ್ತು. ಆದರೆ, ಬ್ರಿಟನ, ಇಟೇಲಿ, ಫ್ರಾನ್ಸ್ ಇತ್ಯಾದಿಯರ ವಿರೋಧ ಕಾಂಕ್ಷೆಗಳಿಂದಾಗಿ, ಆತನ ಆಶೆಯು ಮೂಲೆಪಾಲಾಯಿತು.

ಆದರೆ ಈ ಮಹದಾಶೆಯು ಈಗಲೂ ಇರುತ್ತದೆ ಮುಸಲೋನಿಯು ಈ ಬಗ್ಗೆ ಅವರಲ್ಲಿ ಹೊಸತೊಂದು ಸ್ಫೂರ್ತಿಯನ್ನು ಹುಟ್ಟಿಸಿರುವನು ನಾನು ಇಸ್ಲಾಮಿನ ರಕ್ಷಕನೂ, ಅರಬಿ ಮಹದಾಶೆಯನ್ನು ಪೂರೈಸಿಕೊಡುವವನೂ ಎಂದು ಆತನು ಸಾರಿರುವನು

x x x x

ಇರಾಕಿನ ಫೈಸಾಲಿನ ಮರಣಾನಂತರ ಆತನ ರಾಜ್ಯದೊಳಗಿನ ಅಂತಃಕಲಹದ ಪರಿಣಾಮವಾಗಿ, ಆತನ ರಾಜ್ಯದಲ್ಲಿ ಛಿದ್ರಗಳುಂಟಾದವು ಇಲ್ಲಿನ ಎಣ್ಣೆ ಖನಿಜಗಳು ಬ್ರಿಟಿಷರ ವಶದಲ್ಲಿವೆ ಬ್ರಿಟಿಷ ನೌಕಾ ಮಂಡಳಕ್ಕೆ ಮತ್ತು ವಾಯುಬಲಕ್ಕೆ ಆಫ್ರಿಕದ ಮತ್ತು ಆಸ್ಯಾದ ತಮ್ಮ ಸಾಮ್ರಾಜ್ಯರಕ್ಷಣೆಗೆ ಬೇಕಾದ ಎಣ್ಣೆ ಅಲ್ಲಿರುವುದು ಆದರೆ ಯಿಬ್ನ ಸೋಡನು, ವಿಖ್ಯಾತನಾಗಿರುವನು-ಸಮಸ್ತ ಅರೆಬಿಯಾದಲ್ಲಿ

೧೯೧೬ರಲ್ಲಿ ಆತನು ಒಂದು ಸಣ್ಣ ರಾಜ್ಯದ ರಾಜನಾಗಿದ್ದನು ಆದರೆ ಆತನೊಡನೆ ಮತ್ತಕ್ತರ, ಧೀರ, ವೀರರೆಣಿಸಿಕೊಂಡ ಸೈನಿಕರಿರುವ ಸೈನ್ಯಮಂಡಳವಿದೆ ಈ ಬಲದಿಂದ ಆತನು ಅರಬಿಯರನ್ನು ತುರ್ಕಿಯಿಂದ ಸ್ವತಂತ್ರಗೊಳಿಸಿದನು

ಬ್ರಿಟಿಷರು ಅರಬಸಾಮ್ರಾಜ್ಯದ ಬೆಳವಣಿಗೆಯನ್ನು ಸಹಿಸದಿರುವುದರಿಂದಲೆ ಅವರು, ಯೆಹೂದಿಯರಿಗೆ ಪ್ರೋತ್ಸಾಹ ಕೊಡುವುದೆಂದು ಮುಸಲೋನಿಯಿಂದ ಸಮಸ್ತ ಅರಬ ದೇಶದಲ್ಲೆಲ್ಲಾ ಸಾರಲಾಗಿ, ಅವರ ಉದ್ರೇಕಗೊಂಡಿರುವರು

ಪಾಶ್ಚಾತ್ಯ ಜನಾಂಗಗಳ ಬಲವು ಕುಂದುವ ತನಕ ಸುಮ್ಮನಿದ್ದು ಇಬ್ನ ಸೋಡನು ಕೊನೆಗೆ ತನ್ನ ಸಾಹಸದ ಕಾರ್ಯವನ್ನು ಪ್ರಾರಂಭಿಸಿದನು ಒಂದೊಂದೆ ರಾಜ್ಯವನ್ನು ಹಿಡಿಯಲಾರಂಭಿಸಿದನು ೧೯೨೪ರೊಳಗೆ ಅರಬ ದೇಶದ ಅತ್ಯಂತ ಆಢ್ಯವೆನಿಸುವ ಪ್ರದೇಶವನ್ನು ತನ್ನ ಬದಿಗೆ ಸೇರಿಸಿಬಿಟ್ಟನು ಇರಾಕ್, ಟ್ರಾನ್ಸ್‌ಜೋರ್ಡನ್ ಇತ್ಯಾದಿ ಸ್ಥಳಗಳನ್ನು ತನ್ನ ಅಧೀನದೊಳಗೆ ಮಾಡಿಕೊಳ್ಳಬೇಕಾಗಿ ಆತನು ಯತ್ನಪಟ್ಟನು

ಇಷ್ಟೆಲ್ಲಾ ನಡೆಯುತ್ತಿರುವಾಗ, ಬ್ರಿಟಿಷರು ಸುಮ್ಮನೆ ನಿರೀಕ್ಷಿಸುವವರಾದರು ಮುಸಲೋನಿಯು ಅಲ್ಲಿನ ಇಮೆನ್ನ ಎಂಬಲ್ಲಿ ಒಳಸಂಚು ನಡೆಯಿಸಿ, ಅಲ್ಲಿನ ಸುಲ್ತಾನನನ್ನು ಲಂಚದ ಮೂಲಕ ತನ್ನ ಬದಿಗೆ ಸೇರಿಸಿಕೊಂಡನು. ಆದರೂ ಬ್ರಿಟನು ಮೌನವಾಗಿತ್ತು.

ಆದರೆ ಇಬ್ನ ಸೋಡನ ಚಟುವಟಿಕೆಗಳು ಇರಾಕ್,ಟ್ರಾನ್ಸ್‌ಜೋರ್ಡನ್ ಇತ್ಯಾದಿಗಳ ಕಡೆ ಹರಡಲು,-ಬ್ರಿಟನು, ಜೇತರಿಸಿಕೊಂಡಿತು, "ಇಲ್ಲಿಗೆ ನಿನ್ನ ಸಾಹಸಗಳು ನಿಲ್ಲಲಿ" ಎಂದು ಬಿಟ್ಟರು ಆತನು ತನ್ನ ಸಾಹಸಗಳನ್ನು ನಿಲ್ಲಿಸಿಬಿಟ್ಟನು.

x x x x

ಇಬ್ನ ಸೋಡನ ಮಹತ್ವಾಕಾಂಕ್ಷೆಗಳು ಅಲ್ಲಿಗೇನೆ ನಿಂತುಬಿಡಲಿಲ್ಲ ಇನ್ನೊಂದು ಮಹಾಯುದ್ಧದ ಪರಿಣಾಮವಾಗಿ,ಐರೋಪ್ಯದ ಸರ್ವನಾಶವಾದರೆ, ಪೆಲೆಸ್ತೀನವು ಅರಬಿ ಸಾಮ್ರಾಜ್ಯದ ಕೇಂದ್ರವಾಗಬೇಕೆಂಬ ಆಶೆಯು ಅವನಿಗಿರುತ್ತದೆ

ಅಂದರೆ ಈ ತರದ ವಿರೋಧಭಾವಗಳಿದ್ದಲ್ಲಿ ಬ್ರಿಟನಿನ ಶಾಂತಿಸ್ಥಾಪನೆ ಯತ್ನಗಳಿಗೆ ಫಲದೊರೆಯುವುದು ಸಂದೇಹಕರ ಇನ್ನೊಂದು ಮಹಾಯುದ್ಧದ ಸಂಧಾನದಲ್ಲಿ ಅರಬಿ ಸೈನ್ಯಬಲದ ಸಹಾಯವನ್ನು ಕಳಕೊಳ್ಳುವ ಇಚ್ಛೆಯು ಬ್ರಿಟನಿಗಿರುವುದಿಲ್ಲ

x x x x

ಯೆಹೂದಿಯರು ಜಗತ್ತಿನ ಯಾವತ್ತೂ ಭಾಗದಲ್ಲಿ ಶಾಂತಿ ದೊರಕದೆ, ತಮ್ಮ ಮೂಲಸ್ಥಾನವಾದ ಇಲ್ಲಾದರೂ, ಅದು ದೊರೆಯುವುದೆಂಬ ಆಶೆ ಹೊಂದಿದವರಾಗಿ, ಅಲ್ಲಿಗೆ ತೆರಳಿದ್ದರು ಆದರೆ ಅಲ್ಲಿ ಅವರ ಶಾಂತಿ ದಿವಸಗಳು ಇನ್ನೂ ಮೂಡಲಿಲ್ಲ

ಮುದ್ರಣ ವಾಚನಾಲಯ, ಮುಂಬಾಯಿ

ಇದೇ ಸಪ್ಟಂಬರ ತಾ ೬ರಿಂದ ಈ ನೇಲಿನ ವಾಚನಾಲಯದ ವಿಳಾಸವನ್ನು 22, ಪೋಲೀಸ್ ಕೋರ್ಟ ಲೇನ, ಫೋರ್ಟ ಇಲ್ಲಿಗೆ ಬದಲಾಯಿಸಲಾಗಿದೆ ವಾಚನಾಲಯಕ್ಕೆ ಬರುವ ಎಲ್ಲಾ ಕಾಗದ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಮುಂದಕ್ಕೆ ಈ ಮೇಲಿನ ವಿಳಾಸಕ್ಕೆ ಕಳುಹಿಸತಕ್ಕದ್ದು ಕನ್ನಡಾಭಿಮಾನಿಗಳಾದ ವಾಚಕಮಹಾಶಯರುಗಳು ಈ ವಿಳಾಸಕ್ಕೆ ಬಂದು ಎಂದಿನಂತೆ ಪ್ರಯೋಜನವನ್ನು ಹೊಂದಬೇಕಾಗಿ ಗೌರವ ಜತೆಕಾರ್ಯದರ್ಶಿಗಳ ವಿಜ್ಞಾಪನೆ ಇದೆ

ಹಿಂದೂದೇಶದಲ್ಲಿ ಬೆಳೆಯಿಸಿದ ಎರಡು ರಾತ್ತಲ ಒರೆಂಜ ಪಿಕೊ ಚಹಾವಿಗೆ, ಜಗತ್ತಿನಲ್ಲಿ ಅತ್ಯಂತ ಹೆಚ್ಚಾದ ಬೆಲೆಯು ದೊರಕಿರುತ್ತದೆ ೩೩ ಪೌಂಡು ೧೩ ಶಿ ೪ ಪೆ ಗಳು ಈ ಚಹಾವನ್ನು ಪಡಕೊಂಡವರು ಮಾಜಿ ಬ್ರಿಟಿಷ ರಾಣಿಯವರಾದ ಮೇರಿಯವರು

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂದಾಪುರ. ದ ಕ.

ಬ್ರೇಂಚ ಆಫೀಸುಗಳು:
ಕುಂದಾಪುರ,
ಕುಮಟಾ,
ಕೋಟೇಶ್ವರ,
ಬೈಂದೂರು,
ಗೋಕರ್ಣ,
ವೀರರಾಜೇಂದ್ರಪೇಟೆ,
ಸೋಮವಾರ ಪೇಟೆ,
ಶಿವಮೊಗ್ಗಾ,
ತರೀಕೆರೆ.

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ತೆರೆಯಲ್ಪಡುವುವು.

ಶಿವಮೊಗ್ಗಾ ತಾ 26-8-1937.
ತರೀಕೆರೆ ,, 30-8-1937.

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುವು.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಪ್ಪಾದೇ ಆಗಿರುವ ಆದರ್ಶಪ್ರಾಯವಾದ ಈ ಬೇಂಕಿನಲ್ಲಿಯೇ ನಿಮ್ಮ ವ್ಯವಹಾರಗಳನ್ನು ನಡೆಸಬೇಕಾಗಿ ಕೋರುತ್ತೇವೆ.

'Laxmi-Nivas' Buildings,
Coondapoor, 8-1-1937.

The Agricultural & Industrial Bank, Ltd.

ಜೀವನವು ಹೀಗೇಕೆ?

"ಕೃಷ್ಣಮಿತ್ರ" ಮುಂಬಾಯಿ

[illegible] ನಮ್ಮೂರ ಆದ್ಯ ಗೃಹಸ್ಥರು ಹಾಗೂ ಸರಕಾರಿ ಉದ್ಯೋಗಸ್ಥರು, ನಮ್ಮ ತಂದೆಯವರು ಅವರ ಕೆಳನೌಕರರು. ರಾಯರಿಗೆ ಇಬ್ಬರು ಹೆಣ್ಣುಮಕ್ಕಳು. 'ಮಾಲತಿ'ಯು ನನಗಿಂತ ಚಿಕ್ಕವಳು.

ಶಾಲೆಯಿಂದ ಕೆಳಗೆ ಇಳಿದರೆ ಪೇಟೆ, ಪೇಟೆಯಲ್ಲಿಯೇ 'ಮಾಲತಿ'ಯವರ ಮನೆ ಆದ್ದರಿಂದ ಸಂಜೆ ಶಾಲೆ ಬಿಟ್ಟಕೂಡಲೇ ನಾನೂ ಮಾಲತಿಯೊಡನೆ ಅವರ ಮನೆಗೆ ಹೋಗುತ್ತಿದ್ದೆನು. ಮರುದಿವಸದ ಮನೆಲೆಕ್ಕ, ಕಾಪಿ, ಎಲ್ಲವೂ ಆ ದಿವಸದ ಸಂಜೆಯೊಳಗೆ ತೀರುತ್ತಿತ್ತು ಮಾಲತಿಯಿಂದಾಗಿ ಸಂಜೆಯ ಕಾಫಿ ನನಗೂ ದೊರೆಯುತ್ತಿತ್ತು ಕೇಶವರಾಯರಿಗೆ ನನ್ನ ಮೇಲೆ ತುಂಬಾ ಮಮತೆ, ನನ್ನನ್ನು ಕಂಡರೆ "ಏನು ಅಳಿಯನವರು ಹೇಗಿದ್ದೀರಿ"? ಎಂದು ಮೆಲುನಗುತ್ತಾ ಬೆನ್ನು ತಟ್ಟುತ್ತಿದ್ದರು

ನಾಗರಪಂಚಮಿ, ಗೋಕುಲಾಷ್ಟಮಿ, ಚೌತಿ, ಯುಗಾದಿ, ಮೊದಲಾದ ಎಲ್ಲಾ ಪ್ರಮುಖ ಹಬ್ಬಗಳಿಗೆ ನಾನು ಮಾಲತಿಯೊಡನೆ ಹಾಜರಿರುತ್ತಿದ್ದೆ ಹಬ್ಬದ ಊಟದ ಸಮಯ, ಲಾಡು ಹೋಳಿಗೆಗಳು ಇತರರಿಗಿಂತ ಎರಡು ಪಾಲಾಗಿ ಮಾಲತಿಯ ತಾಯಿಯವರು ನನ್ನ ಎಲೆಯ ಮೇಲೆ ಬಡಿಸುತ್ತಿದ್ದರು "ನಮ್ಮ ಅಳಿಯನವರು, ಅವರಿಗೆ ಹೆಚ್ಚು" ಎಂದು ಮಾಲತಿಯಂತೂ ಆ ದಿನದ ಮಟ್ಟಿಗೆ ರಾಣಿಯೆಂದೇ ಹೇಳಬಹುದಿತ್ತು ಹಪ್ಪಳ, ಚೆಂಡಿಗೆ, ಲಾಡು, ಕಡುಬುಗಳನ್ನು ಮಾಲತಿಯವರ ಮನೆಯಲ್ಲಿ ತಯಾರಿಸಿದರೆ ಅದರ ಒಂದಂಶವು ನಮ್ಮ ಮನೆಯ ಅಡಿಗೆಯ ಕೋಣೆಯಲ್ಲಿ ಮೆರೆಯುತ್ತಿದ್ದವು

ನಾನು ದಿನನಿತ್ಯದಂತೆ ಮಾಲತಿಯವರ ಮನೆಗೆ ಹೋಗಿದ್ದೆ ಹೊರಗಡೆ ಜಗಲಿಯಲ್ಲಿ ಯಾರ ಸುಳಿವೂ ಕಂಡುಬರಲಿಲ್ಲ, ರಾಯರಂತೂ ಸರ್ಕೀಟಿಗೆ ಹೋಗಿದ್ದರು ನಡುಕೋಣೆಯನ್ನು ದಾಟಿ ಅಡಿಗೆ ಕೋಣೆಗೆ ಕಾಲಿಟ್ಟೆ, ಕೋಣೆಯ ಆಚೆ ತಲೆಯಲ್ಲಿ ಮಾಲತಿಯವರ ಸಂಬಂಧಿಕರು ಉಪಹಾರ ತೆಗೆದುಕೊಳ್ಳುವುದರಲ್ಲಿ ಮಗ್ನರಾಗಿದ್ದರು ಮಾಲತಿಯ ತಾಯಿಯವರು ಅವರನ್ನು ಆದರಿಸುವದರಲ್ಲಿಯೇ ಮಗ್ನರಾಗಿದ್ದರು, ಮಾಲತಿಯಂತೂ ಅಲ್ಲಿಗೆ ಬಂದಿರುವ ತನ್ನ ಹೋಲಿಕೆಯ ಹುಡುಗಿಯರೊಡನೆ ಆಡುವುದರಲ್ಲಿ ತಲ್ಲೀನಳಾಗಿದ್ದಳು ನನ್ನನ್ನು ಕೇಳುವವರಾರು? ಅಲ್ಲಿಯೇ ಕಂಬದಂತೆ ನಿಂತುಬಿಟ್ಟೆ, ಆದರೆ ಪ್ರಯೋಜನವಿಲ್ಲ, ನನ್ನನ್ನು ಕರೆಯಲಿಲ್ಲವೆಂದು ನನಗೊಂದು ಸಣ್ಣ ಸಿಟ್ಟು—ನೇರಾಗಿ ಹೊರಗೆ ನಡೆದೆ

ಮರುದಿವಸ ಸೋಮವಾರ ಸಂಜೆ ಕ್ಲಾಸಿನಿಂದ ಹೊರಗೆ ಬರುವಾಗ ಮಾಲತಿಯು ದಿನನಿತ್ಯದಂತೆ ಕಾದುನಿಂತಿದ್ದಳು ನಾನು ಚಾ ಚೂ ಮಾತಾಡಲಿಲ್ಲ, ಇಬ್ಬರೂ ಒಟ್ಟಿಗೆ ಬಂದೆವು ಆದರೆ ನಾನು ನಡಿಗೆಯನ್ನು ತೀರಾ ಮೆಲ್ಲಗೆ ಮಾಡಿ ಹಿಂದೆ ಬಿದ್ದೆ

ಮಾಲತಿ "ರಮೇಶ, ಮನೆಗೆ ಬರುವುದಿಲ್ಲವೆ?

"ನನಗೆ ಸಿಟ್ಟು ತಿಳಿಯಿತೆ? ನಾನು ನಿಮ್ಮ ಮನೆಗೆ ಬರುವುದಿಲ್ಲ

ಮಾಲತಿ 'ಅದಿರಲಿ, ಲೆಕ್ಕ ಮಾಡುವುದಿಲ್ಲವೆ?

ಕೋಪಿ

"ಅದೆಲ್ಲಾ ನಮ್ಮ ಮನೆಯಲ್ಲಿಯೇ

ಮಾಲತಿ "ನಿನಗೆ ಎಳ್ಳುಂಡೆ ಬೇಡವೆ?

"ನಮ್ಮ ಮನೆಯಲ್ಲಿಯೂ ಎಳ್ಳುಂಡೆಗೆ ಕೊಮೆಯಿಲ್ಲ ತಿಳಿಯಿತೇ?"

ಮಾಲತಿ: "ಗೊತ್ತುಂಟು! ನನ್ನ ತಾಯಿಯವರು ನಿನ್ನೆ ಮಧ್ಯಾಹ್ನ ನಿಮ್ಮಲ್ಲಿಗೆ ಕಳುಹಿಸಿಕೊಟ್ಟದ್ದು ತಿಳಿಯಿತೇ?

"ನೋಡು' ಮಾಲತೀ ಹೆಚ್ಚು ಮಾತಾಡಬೇಡ ನನಗೆ ಮತ್ತು ಸಿಟ್ಟು ಬರುತ್ತದೆ

ಮಾಲತಿ. "ಇಷ್ಟೊಂದು ಸಿಟ್ಟೇಕೆ ರಮೇಶ?

"ನನಗೆ ಸಿಟ್ಟಿಲ್ಲ! ನಿಮ್ಮ ಮನೆಗೆ ನಾನು ಬರುವುದಿಲ್ಲ.

ಮಾಲತಿ, 'ಅಮ್ಮನವರು ನಿನ್ನನ್ನು ಕೇಳಿದರೆ!

'ನಾನು ಬರುವುದಿಲ್ಲವೆಂದು ಹೇಳಿಬಿಡು'

ಮಾಲತಿ 'ತಂದೆಯವರು . "

'ಅವರಿಗೂ ಹಾಗೆಯೇ ತಿಳಿಸು'

ಮಾಲತಿ: 'ನಾವು ಲೆಕ್ಕ ಮಾಡುವುದಾದರೂ ಎಲ್ಲಿ?'

'ನಾನು ನಮ್ಮಲ್ಲಿ, ನೀನು ನಿನ್ನ ಮನೆಯಲ್ಲಿ

ಮಾಲತಿ. 'ಅದು ಹಾಗೇಕೆ? ರಮೇಶ'

'ನಿಶ್ಶಬ್ದ, ನಿರುತ್ತರ

ಮರುದಿವಸ ನಮಗೆ ಸೆಖೆ ರಜೆಗೆ ಆರಂಭ

○ ○ ○ ○

ಆದಲು ನಾನು ಇತರ ಹುಡುಗರೊಡನೆ ಕೆಳಗಿನ ಬಯಲಿಗೆ ಹೋಗಿದ್ದೆ, ಸುಮಾರು ೩ ಗಂಟೆಗೆ ನನ್ನ ತಾಯಿಯವರು ನನ್ನನ್ನು ಕರೆದರು ಪೇಟೆಗೆ ಹೋಗಿ ಚಿಮಿಣಿ ಎಣ್ಣೆ ತರಲು ಇರಬಹುದೆಂದು ತಿಳಿದು ದುಡುಕುತ್ತಾ ಬಂದೆ ಮಾಲತಿಯ ತಾಯಿಯವರು ಅಡಿಗೆ ಕೋಣೆಯಲ್ಲಿದ್ದರು

"ಏನು ರಮೇಶ, ನೀನು ನಮ್ಮತ್ತ ಕಡೆಗೆ ಸುಳಿಯದೆ ಸುಮಾರು ದಿವಸಗಳಾಯಿತು, ನೀನು ನಮ್ಮಲ್ಲಿಗೆ ಇನ್ನು ಬರುವುದಿಲ್ಲವಂತೆ, ಏಕೆ? ಮಾಲತಿಯ ತಂದೆಯವರು ನಿನ್ನನ್ನು ಕೇಳುತ್ತಾರೆ ಈಗ ಬರುವಿಯಾ? ಎಂದು ಅವರು ಕೇಳಿದರು.

"ನಾನು ಬರುವುದಿಲ್ಲ 'ವೆಂದು ಸರಾಗವಾಗಿ ಹೇಳಿದೆ

"ಈ ದಿನ ಹೋಳಿಗೆ ಮಾಡಿರುತ್ತದೆ, ನಿನ್ನ ಹೋಳಿಗೆಯು ನಿನ್ನನ್ನು ಕಾಯುತ್ತಿದೆ ಎಂದು ನಗುತ್ತಾ ಅಡಿಕಣ್ಣಾಗಿ ಸೂಕ್ಷ್ಮದೃಷ್ಟಿಯಿಂದ ನನ್ನ ಮುಖವನ್ನು ಪರೀಕ್ಷಿಸುತ್ತಾ ಹೇಳಿದರು

'ನಾನು ಹೋಳಿಗೆ ತಿನ್ನುವುದಿಲ್ಲವೆಂದು, ಅರೆಮನಸ್ಸಿನಿಂದ ಆದರೆ ನನ್ನ ಅಭಿಮಾನಕ್ಕೆ ಭಂಗ ಬಾರದಂತೆ ಸ್ಪಷ್ಟವಾಗಿ ಉಸುರಿದೆ

ರಮೇಶ 'ಹುಡುಗರು ಛಲ ಹಿಡಿಯಬಾರದು ತಿಳಿಯಿತೇ? ಎಂದು ನನ್ನ ತಾಯಿಯವರು ಎಚ್ಚರಿಸಿದರು ಇಲ್ಲಮ್ಮಾ! ನಾನು ಹೋಗುವುದಿಲ್ಲ ನನಗೆ ಹೋಳಿಗೆ ಬೇಡವೆಂದು ಸುಮ್ಮನೆ ನಿಂತುಕೊಂಡೆ

○ ○ ○ ○

ಸೆಖೆ ರಜೆಯ ಮೊದಲೇ ನಮ್ಮ ಪರೀಕ್ಷೆಯು ಮುಗಿದಿತ್ತು ಶಾಲೆ ಸುರುವಾದ ಮರುದಿನವೇ ಪರೀಕ್ಷೆಯ ಫಲಿತಾಂಶವನ್ನು ಓದಿ ಹೇಳಿದರು ಮಾಲತಿಯು ಪಾಸಾದಳು, ನಾನೂ ಪಾಸಾದೆ ಮಾಲತಿಯು ಮುಗುಳು ನಗುತ್ತಾ ನಿಂತಿದ್ದಳು

'ನಾವಿಬ್ಬರೂ ಪಾಸಾದರೆ ನಮ್ಮ ಅಮ್ಮನವರು ನಮಗೆ ಜಾತ್ರೆಗೆ ನಾಲ್ಕು ರೂಪಾಯಿಯನ್ನು ಕೊಡುತ್ತೇನೆಂದು ಹೇಳಿರುತ್ತಾರೆ, ಎಂತ ಹೇಳಿದಳು ಮಾಲತಿ

ಜಾತ್ರೆಗೆ ನಮ್ಮಿಬ್ಬರಿಗೆ ನಾಲ್ಕು ರೂಪಾಯಿಯೆಂದರೆ ಕೊಪ್ಪರಿಗೆ ಸಿಕ್ಕಿದಂತೆ ಆಯಿತು, ನನ್ನ ಸಿಟ್ಟು ಹೋಯಿತು, ಇಬ್ಬರೂ ಜಿಗಿಯುತ್ತಾ ನಡೆದೆವು

ಕೇಶವರಾಯರು ರಿಕಾರ್ಡುಗಳನ್ನು ಮಗುಚುತ್ತಿದ್ದರು "ಅಪ್ಪಾ' ನಾವಿಬ್ಬರೂ ಪಾಸು, ಬಂದು ಹೇಳುತ್ತಾ ಮಾಲತಿಯು ದಡದಡನೆ [illegible] ಹೋದಳು ನಾನು ಹೊರಗೆ ಜಗಲಿಯಲ್ಲಿ ನಿಂತೆ, ಕಾರಣ ಸಿಟ್ಟಾಗಿ, ಈಗ ರಾಜಿಪ್ರಸ್ತಾಪಕ್ಕಾಗಿ ಬರುವುದಲ್ಲವೆ? ಆದ್ದರಿಂದ ಸ್ವಲ್ಪ ಸಂಕೋಚ

"ಏನು' ಅಪರೂಪದ ಅಳಿಯನವರು, ಚೆನ್ನಾಗಿ ಕಲಿತು ಮುಂದಕ್ಕೆ ಹುಶಾರಾಗಬೇಕು ಎಂದು ಮಾಲತಿಯ ತಂದೆಯವರು ಬೆನ್ನು ತಟ್ಟಿ ಹೆಗಲಿಗೆ ತೂಗಹಾಕಿದ್ದ; ಪುಸ್ತಕಗಳ ಚೀಲವನ್ನು ತೆಗೆದು ಅಲ್ಲಿಯೇ ಮೇಜಿನ ಮೇಲೆ ಇಟ್ಟರು.

ಉದರಶೂಲೆಯಿಂದ ಮಲಗಲಿಕ್ಕಾಗುತ್ತಿರಲಿಲ್ಲ.

ಒಂದೊಂದು ಬಾರಿ ಅನೇಕ ವಾರಗಳ ತನಕ ನರಳುತ್ತಿದ್ದನು

ಈ ಕೆಳಗಿನ ಒಂದು ಪತ್ರದಲ್ಲಿ, ಉತ್ತೇಜನವು ಕೂಡಲೆ ಗುಣವಾಗುವ ವಿಷಯ ಭರವಸೆಯು ಪ್ರತಿಯೋರ್ವ ಹೊಟ್ಟೆನೋವಿನಿಂದ ನರಳುವವರಿಗೆ ಸಿಗುವವು ಮಿ ಎಚ್ ಎಫ್. ಎಚ್ ಹೆಸ್ಟಿಂಗ್ಸ್‌ರು ಹೀಗೆನ್ನುತ್ತಿದ್ದಾರೆ –

ಹೊಟ್ಟೆವ್ಯಾಧಿಗಳ ದೆಸೆಯಿಂದ ಒಂದೊಂದು ಬಾರಿ ಅನೇಕ ವಾರಗಳ ತನಕ ನೋವು ಮತ್ತು ಆಹಾರವನ್ನು ಸೇವಿಸಲಿಕ್ಕಾಗದೆ, ಅದರಿಂದ ನನ್ನ ಉದ್ಯೋಗವನ್ನು ಸಾಧಿಸಲು ಸಾಧ್ಯವಾಗದೆ, ಬಹಳ ನರಳಿ ಕೊನೆಗೆ ಓರ್ವ ಮಿತ್ರನ ಶಿಫಾರಸಿನ ಮೇರೆಗೆ ಅಲೆಕ್ಸ್ ಸಿ ಮೆಕ್ಲೀನ್‌ರ ಹೊಟ್ಟೆ ಪುಡಿಯನ್ನು ಉಪಯೋಗಿಸಿದೆ ನಾನು ಖಾತ್ರಿಯಾದ ಮೆಕ್ಲೀನ್ ಪೌಡರನ್ನು ಉಪಯೋಗಿಸಿದೆ ಅದರ ಫಲಕಾರಿ ಗುಣಗಳನ್ನು ಏನೆಂದು ಹೇಳಲಿ

'ಮುಂದಕ್ಕೆ ಸಿಟ್ಟು ಹುಡಿಯಿಲ್ಲದೆ ನಾನು ಮನೆಯಲ್ಲಿರಲಾರೆನು ನಾನದನ್ನು ಒಂದು ಮಹಾ ವಿಚಿತ್ರವೆಂದು ಕರೆಯುವೆನು ಅದರಿಂದ ನನ್ನಲ್ಲಿರುವ ಮಹಾ ಶೂಲೆಯು ಉಪಶಮನಹೊಂದಿದೆ ಅನೇಕ ಬಾರಿ ನಿದ್ರೆಯಿಲ್ಲದೆ ನಾನು ರಾತ್ರಿಯನ್ನು ಕಳೆದಿರುವೆನು. ನಾನು ಪಡೆದ ಬಾಟ್ಲಿಯಿಂದ ನನಗೆ ವಿಚಿತ್ರತರದ ಉಪಶಮನವು ದೊರೆಕಿರುತ್ತದೆ

ಮುಂದಕ್ಕೆ ನಾನು ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ವಿಶೇಷವಾಗಿ ಶಿಫಾರಸು ಮಾಡುವೆನು

H F H

ಮುಂದಕ್ಕೆ ಹೊಟ್ಟೆನೋವಿನಿಂದ ನರಳುವದಿಲ್ಲ ದೃಢ ಸಂಕಲ್ಪ ಮಾಡಿರಿ ನಿಮ್ಮ ಹೊಟ್ಟೆನೋವನ್ನು ಮೆಕ್‌ಲೀನ್ ಬ್ರೇಂಡ್ ಹೊಟ್ಟೆ ಹುಡಿಯಿಂದ ನಿವಾರಿಸಿ ಹೊಟ್ಟೆಯನ್ನು ಸರಿಪಡಿಸಿರಿ ಇಂದೆ ಒಂದು ಬಾಟ್ಲಿಯನ್ನು ಪಡೆಯಿರಿ ಆದರೆ ಮೆಕ್‌ಲೀನ್ ಬ್ರೇಂಡ್ ಖಾತ್ರಿ ದಾದಿಯು ದೊರಕುವಂತೆ ಜಾಗ್ರತರಾಗಿರಿ

ಎಲ್ಲಾ ಔಷಧಾಲಯಗಳಲ್ಲಿ ದೊರೆಕುತ್ತದೆ

J L Morison Son & Jones (India Ltd
Standard Bldg Hornby Road Bombay

ನಕಲಿ ಮ್ಯಾಲಿನ ಕುರಿತು ಜಾಗ್ರತೆ

ಪೆಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲಿರುವ ಅಲೆಕ್ಸ್ ಸಿ ಮೆಕ್ಲೀನ್" ಎಂಬ ಸಹಿಯಿಂದ ನೀವು ಖಾತ್ರಿ ಮೆಕ್‌ಲೀನ್ ಬ್ರೇಂಡನ್ನು ಕಂಡು ಹಿಡಿಯಬಹುದು ಅಲ್ಲದೆ ಪೆಟ್ಟಿಗೆಯ ಮೇಲೆ ಒಂದು ಕೆಂಪು ಮುದ್ರೆಯು ಇರುವದು ಅದನ್ನು ಚಿಲ್ಲರೆಯಾಗಿ ಮಾರುವುದಿಲ್ಲ ಬಾಟ್ಲಿಗಳಲ್ಲೂ ಪೆಟ್ಟಿಗೆಗಳಲ್ಲೂ ಅದು ಮಾರಲ್ಪಡುತ್ತದೆ (ಹುಡಿಯ ಮಾತ್ರೆಗಳು)

ಸಹಿಯನ್ನು ಗಮನಿಸಿರಿ—

Alex C. Maclean



MACLEAN Brand Stomach Powder

ಮಾಲತಿಯ ತಾಯಿಯವರು ನಡುಕೋಣೆಯ ಬಾಗಿಲ ಬಳಿ ನಿಂತು 'ಬಹಳ ಅಪರೂಪ ಎಂದು ನಗುತ್ತಾ ಒಳಗೆ ಬರುವಂತೆ ಸೂಚಿಸಿದರು ಸುರುಗುವ ಗಿಂಡಿಯಲ್ಲಿ ಕಾಫಿ ಮತ್ತು ಸಣ್ಣ ತಾಟೊಂದರಲ್ಲಿ ರವೆಲಾಡು ನನ್ನ ಎದುರಿಗೆ ಬಂದು ನಿಂತಿತು ಸದ್ಯಕ್ಕೆ ಎಲ್ಲರೊಡನೆ ರಾಜಿಯಾಯಿತು ಹೀಗೆ ಎಷ್ಟೋ ರಾಜಿ ಕೋಪಗಳ ಪರ್ಯಾಯಗಳು ಅನೇಕ ಸಲ ನಡೆದಿದ್ದುವು

ಹೀಗೆ ಕೆಲವು ವರುಷಗಳು ಕಳೆದುಹೋದುವು

ಸಂಜೆ ಶಾಲೆಯಿಂದ ಬರುವಾಗ ಮಾಲತಿಯ ಮನೆಯ ಹತ್ತಿರ ಮಾರ್ಗದ ಬದಿಯಲ್ಲಿ, ಜೋಡೆತ್ತಿನ ಎರಡು ಗಾಡಿಗಳು ನಿಂತಿದ್ದುವು, ಮಾಲತಿಯ ತಾಯಿಯವರು ಸಾಮಾನುಗಳನ್ನು ಭದ್ರವಾಗಿ ಸಾಗಿಸುವ ಯೋಜನೆಯಲ್ಲಿ ನಿರತರಾಗಿದ್ದರು ರಾಯರಂತೂ ಸಾಮಾನಿನ ಪಟ್ಟಿಯನ್ನು ತಯಾರಿಸಿ ಕೈಯಲ್ಲಿ ಹಿಡಿದುಕೊಂಡು ಗಾಡಿಯ ಬಳಿ ನಿಂತು ಎಲ್ಲವೂ ಪರಿಷ್ಕಾರವಾಗಿರುವುದೊ ಎಂದು ಎಣಿಗೆ ಹಾಕುತ್ತಿದ್ದರು ರಾತ್ರಿಯಾಗುತ್ತಲೇ ಗಾಡಿಗಳು ಹೊರಟವು

ಮೇಜು ಕುರ್ಚಿಗಳನ್ನೂ ಗೋಡೆಯ ಚಿತ್ರಪಟಗಳನ್ನೂ ತೆಗೆದು ಖಾಲಿಯಾದ ವಿಶಾಲವಾದ ಚೌಕಿರಲ ಜಗಲಿಯ ಬದಿಯಲ್ಲಿ ಕಂಬಕ್ಕೆ ಒರಗಿ ಕುಳಿತಿದ್ದೆ 'ಜಗಲಿ' ತೂಗು ಲಾಂದ್ರವೊಂದು ಹೊಗೆ ತುಂಬಿ ಮಯಕ್ಕಾದ ಮಂದ ಪ್ರಕಾಶದಿಂದ ಮಾಡಿನ ಪಕ್ಕಾಸಿಗೆ ತೂಗಿಸಿದ ಕೊಕ್ಕೆಗೆ ಸಿಕ್ಕಿಕೊಂಡು ನಿಸ್ತೇಜವಾಗಿ ಉರಿಯುತಿತ್ತು. ಎದುರಿಗೆ ತುಂಡು ಮೋಡಗಳಿಂದ ತುಂಬಿ ಕದಲಿದ ಆಕಾಶ, ಅಲ್ಲೊಂದು ನಕ್ಷತ್ರಗಳು ಕಂಡೂ ಕಾಣದಂತೆ ಮಿನುಗುತ್ತಿದ್ದುವು ಮಾಲತಿ ಮೆಲ್ಲ ಬಂದು ನನ್ನ ಬಳಿಯಲ್ಲಿ ನಿಂತಳು ಸತರ [illegible] ಇತಳು, ತುಂಬಿದ ಮುಖವು ಯಾವುದೋ ಒಂದು ವಿಚಾರದಲ್ಲಿ ತಲ್ಲೀನವಾಗಿದ್ದಿತು

"ನಾಳೆ ಇಷ್ಟು ಹೊತ್ತಿಗೆ ನೀವೆಲ್ಲರೂ ಬಂಟ್ವಾಳದಲ್ಲಿ" ಎಂದು ನಾನು ಹೇಳಿದೆ

ಮಾಲತಿ 'ಹೌದು! ರಮೇಶ ನಮಗೆ ವರ್ಗವಾಗಿರುವ ಊರಿನ ಹೆಸರು ಬಂಟ್ವಾಳವಂತೆ, ಇಲ್ಲಿಂದ ಎಷ್ಟು ದೂರವಿರಬಹುದು?"

'ಯಾರಿಗೆ ಗೊತ್ತು? ಆದರೆ ಈಗ ಇಲ್ಲಿಂದ ಬಿಟ್ಟ ಎರಡು ಗಾಡಿಗಳು ನಾಳೆ ಬೆಳಗ್ಗೆ ಅಲ್ಲಿಗೆ ಮುಟ್ಟುವುದೆಂದು ನನ್ನ ತಂದೆಯವರು ಹೇಳಿದುದನ್ನು ನಾನು ಕೇಳಿರುತ್ತೇನೆ

ಮಾಲತಿ ರಮೇಶ, ನಿನ್ನ ತಂದೆಯವರು ಬಂಟ್ವಾಳಕ್ಕೆ ಯಾವಾಗಲಾದರೂ ಬಂದಲ್ಲಿ, ನಮ್ಮ ಅಮ್ಮನವರ ಕೂಡೆ ಹೇಳಿ, ನಿನಗೆ ಎಳ್ಳುಂಡೆಯ ಒಂದು ಡಬ್ಬಿಯನ್ನು ಕಳುಹಿಸುತ್ತೇನೆ, ತಿಳಿಯಿತೆ

ಮಾಲತಿಯವರ ಇಲ್ಲಿಂದ ಬಿಡುಗಡೆಯಾದ ಮೇಲೆ ಸಂಜೆಯ ಕಾಫಿಗೆ ಹಾಗೂ ಕಾಡ ಬೇಡಿ ತಿನ್ನುವ ಪರಿಪಾಠಕ್ಕೆ ಇನ್ನು ಮುಂದೆ ಸೊನ್ನೆ ಎಂದು ನನಗೆ ಆಗ ಹೊಳೆಯಿತು

"ನಿನ್ನ ತಂದೆಯವರು, ಬಂಟ್ವಾಳಕ್ಕೆ ಬರುವ ಸಮಯ ನೀನೂ ಬರಬೇಕು" ಎಂದಳು ಮಾಲತಿ

(ಮಲನೇ ಪುಟವನ್ನು ನೋಡಿರಿ)

ಮೊಗವೀರ ಯುವಕ ಸಂಘ ಮುಂಬಾಯಿ.

ಮೊಗವೀರ ಯುವಕರನ್ನೆಲ್ಲಾ ಸಂಘಟಿತರನ್ನಾಗಿಸಿ, ಜನಜಾಗ್ರತಿಗೊಳಿಸಿ, ಸಮಾಜದಲ್ಲಿ ಮನೆಮಾಡಿಕೊಂಡಿರುವ ಅನೇಕ ಧೂರ್ತ ಪದ್ಧತಿಗಳನ್ನು ಬೇರುಸಹಿತ ಕಿತ್ತೊಗೆದು, ಸಮಾಜೋನ್ನತಿಮಾಡುವ ಅನೇಕ ಸದುದ್ದೇಶಗಳನ್ನು ಮುಂದಿಟ್ಟುಕೊಂಡು ಕಳೆದ ೩ ವರ್ಷಗಳಿಂದ ಯುವಕ ಸಂಘವು ಕಾರ್ಯಸಾಧನೆಯನ್ನು ಮಾಡುತ್ತಿದೆ ಈ ವರ್ಷದ ಆಡಳಿತ ಸಭೆಯವರು ಈ ಸಂಘದ ಧ್ಯೇಯಗಳು ಸುಲಭವಾಗಿ ಕಾರ್ಯರೂಪಕ್ಕೆ ಬರುವಂತೆ, ಪ್ರಚಾರ ಕಮಿಟಿಯೊಂದನ್ನು ಏರ್ಪಡಿಸಿ, ವ್ಯಾಖ್ಯಾನ, ಲೇಖನ ಮತ್ತು ತರ್ಕಸಭೆಗಳ ಮೂಲಕ ಜನಜಾಗ್ರತಿಗೊಳಿಸುವರೆ ನಿರ್ಧರಿಸಿ ಕಳೆದ ತಾ ೨೭ನೇ ರವಿವಾರ ಅಪರಾಹ್ನ ಘಂಟೆ ೩ಕ್ಕೆ ಮೊಗವೀರ ರಾತ್ರಿ ಶಾಲಾ ಮಂದಿರದಲ್ಲಿ ಶ್ರೀಮಾನ್ ಎಚ್ ಎಸ್. ಕಲ್ಯಾಡರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿಸಿ, 'ಯುವಕ ಚಳವಳದ ಆವಶ್ಯಕತೆ' ಎಂಬ ವಿಷಯದಲ್ಲಿ ವ್ಯಾಖ್ಯಾನ ಮಾಡಿಸಿದರು. ಕೋಮ್ರೇಡ್ ಎಫ್ ಎಂ ಪಿಂಟೋ, ಶ್ರೀಯುತರುಗಳಾದ ಶ್ರೀನಿವಾಸ ರಾವ್ ಚಂದ್ರಕಾವಿ, ಎಸ್ ಕೆ ಮೈಂದನ್, ವಿ ಕೆ ಕೋಟ್ಯಾನ್, ಎಸ್ ವಿ ಕಾಂಚನ್ ಮೊದಲಾದವರು ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿ ಮತ್ತು ಬೇರೆ ಬೇರೆ ಸಮಾಜಗಳಲ್ಲಿ ಯುವಕ ಚಳವಳವು ಯಾವ ರೀತಿಯಲ್ಲಿ ಜನ್ಮ ತಾಳಿತೆಂದೂ, ಅದು ರಾಷ್ಟ್ರೀಯ, ಸಾಮಾಜಿಕ ಮತ್ತು ರಾಜನೈತಿಕ ಉನ್ನತಿಗೆ ಎಷ್ಟು ಅನುಕೂಲವಾಗಿರುತ್ತದೆಂದೂ ವಿವರಿಸಿ ಹೇಳಿ,'' ಹಿಂದೂಸ್ಥಾನದಲ್ಲಿ ಯುವಕ ಚಳವಳವು ಬಹು ನಿರ್ಬಲವಾಗಿದೆ. ಯುವಕರೆಂದರೆ ಸಮಾಜದ ಆಧಾರಸ್ತಂಭ. ಅವರಲ್ಲಿ ಸ್ವಾರ್ಥತೆಯು ಇರುವುದಿಲ್ಲ ಅವರಲ್ಲಿ ತಮ್ಮ ಸಮಾಜದ ಹಾಗೂ ತಮ್ಮ ದೇಶವ ಉದ್ಧಾರವಾಗಬೇಕೆಂಬ ಚಿಂತನೆಯು ಯಾವಾಗಲೂ ಪೀಡಿಸುತ್ತಿರುವುದು ಅವರು ಸಮಾಜದಲ್ಲಿ ಯಾವುದೊಂದು ಕ್ರಾಂತಿಯನ್ನು ಹೂಡುವುದಕ್ಕೂ ಜಯಾಪಜಯಗಳ ಕಡೆಗೆ ಲಕ್ಷ್ಯಗೊಡುವುದಿಲ್ಲ ಕಾರ್ಯಸಾಧನೆಯು ಪವಿತ್ರವಾದ ಜ್ಞಾನತಂತುವು ಅವರನ್ನು ಕಾರ್ಯರಂಗಕ್ಕೆ ಇಳಿಸಿಬಿಡುತ್ತದೆ ಎಷ್ಟೋ ಸಮಾಜ ಮತ್ತು ರಾಷ್ಟ್ರಗಳ ಯುವಕರು ಕಂಕಣಬದ್ಧರಾಗಿ ಮುಂದೆ ಬಂದು ತಮ್ಮಲ್ಲಿರುವ ಬಡತನ, ಅವಿದ್ಯೆ, ಅಜ್ಞಾನ, ಅನಾಚಾರ, ಅಂಧರೂಢಿ ಮುಂತಾದುವುಗಳನ್ನು ನಾಮಾವಶೇಷ ಮಾಡುವರೆ ಪಟ್ಟ ಪ್ರಯತ್ನದ ಫಲವಾಗಿಯೇ ಅದು ಇಂದು ಸುಖಸಂಪತ್ತಿನಲ್ಲಿಯೂ, ವಿದ್ಯೆಯಲ್ಲಿಯೂ ಮುಂದರಿದು ಆದರ್ಶಪ್ರಾಯವಾಗಿವೆ. ಹಿಂದೂಸ್ಥಾನದ ಪ್ರಚಲಿತ ಸ್ಥಿತಿಯಲ್ಲಿ ಯುವಕ ಚಳವಳವು ಹಳ್ಳಿಯಲ್ಲಿ ಪ್ರಾರಂಭವಾಗಿ ಪಟ್ಟಣದಲ್ಲಿ ಅಂತ್ಯವಾಗಬೇಕು ಅಸಂಖ್ಯಾತ ಭಾರತೀಯರು ಇಂದಿಗೆ ನಿರಕ್ಷರಕುಕ್ಷಿಗಳಾಗಿ, ತಮ್ಮ ತಳಮಳಿಸುವ ಹೊಟ್ಟೆಗೆ ಒಪ್ಪೊತ್ತಿನ ಕೂಳಿಗೆ ಕೂಡಾ ಗತಿಯಿಲ್ಲದೆ ನಿಜವಾದ ಜೀವನಗುರಿಯ ಅರಿವಿಲ್ಲದೆ ಒದ್ದಾಡುತ್ತಾರೆ. ಅಂಥವರನ್ನೆಲ್ಲ ಮುಂದೆ ತಂದರೆ ನಮ್ಮ ಹಿಂದೂಸ್ಥಾನದ ಗತವೈಭವವನ್ನು ಪುನರುಜ್ಜೀವನಗೊಳಿಸಿದಂತಾಗುವುದು'' ಎಂದು ತಿಳಿಸಿದರು

ಅಧ್ಯಕ್ಷರು ತನ್ನ ದೀರ್ಘ ಮತ್ತು ಭಾವಪೂರ್ಣ ಭಾಷಣದಲ್ಲಿ ಮೊಗವೀರ ಯುವಕ ಸಂಘವು ಕೈಕೊಂಡ ಕಾರ್ಯವನ್ನು ಶ್ಲಾಘಿಸಿ, ಮೊಗವೀರ ಸಮಾಜದ ಕಲ್ಯಾಣಕ್ಕಾಗಿ ಯೋಗ್ಯ ಸಲಹೆಗಳನ್ನಿತ್ತರಲ್ಲದೆ, ಯುವಕರೆಲ್ಲರೂ ಆದರ್ಶ ಜೀವನವನ್ನು ಸಾಗಿಸಿ, ತಮ್ಮ ಸ್ತ್ರೀಯರಿಗಿರುವಂತಾ ಕಷ್ಟಗಳನ್ನು ಪಾರುಮಾಡಿ, ಅವರಿಗೆ ಯೋಗ್ಯ ವಿದ್ಯೆಯನ್ನು ಕೊಟ್ಟು ಅವರ ಶಾರೀರಿಕ ಮತ್ತು ಆತ್ಮಿಕ ಉನ್ನತಿಯನ್ನು ಮಾಡಬೇಕೆಂದರು.

ಕೊನೆಗೆ ಅಧ್ಯಕ್ಷರಿಗೂ ಎಲ್ಲ ಭಾಷಣಕಾರರಿಗೂ ಮತ್ತು ಸಭಿಕರಿಗೂ ಧನ್ಯವಾದಗಳನ್ನರ್ಪಿಸಿ ಸಭೆಯು ವಿಸರ್ಜನೆಯಾಯಿತು.

ಕಾರ್ಯದರ್ಶಿ.

ಭಾರತೀಯ ಚಾಪಾನದಿಂದ



ನಿಮ್ಮ ಆರೋಗ್ಯವನ್ನು ಪಾಲಿಸಿ

"ಆರೋಗ್ಯವೇ ಸಂಪತ್ತು" ಒಂದು ಸಾಮಾನ್ಯ ಹೇಳಿಕೆ, ಆದರೆ ಎಷ್ಟು ನಿಜ ಹಲವು ಬಟ್ಟಲು ಚಾವನ್ನು ನಿತ್ಯವೂ ಕುಡಿಯುವುದರಿಂದ ಬಹಳ ಕರ್ಚಾಗುವುದಿಲ್ಲದೇ ದೇಹವನ್ನು ಆಯಾಸದಿಂದಲೂ ಈ ದೇಶದ ತೀಕ್ಷ್ಣ ಹವಾದಿಂದಲೂ ಕಾಪಾಡುವುದು ನಿಮ್ಮ ಶರೀರಕ್ಕೆ ಶಕ್ತಿಯನ್ನೂ ಆರೋಗ್ಯವನ್ನೂ ಕೊಡುವ ಭಾರತೀಯ ಚಾ ಪಾನ ಮಾಡಿರಿ

ಚಾ ತಯಾರಿಸುವ ವಿಧಾನ

ನಿರ್ಮಲವಾದ ನೀರನ್ನು ಕಾಸಿ ಶುಚಿಯಾದ ಬಿಸಿ ಪಾತ್ರೆಯನ್ನು ಬೆಚ್ಚಗೆ ಮಾಡಿ ಅದರಲ್ಲಿ ತಲಾ ಒಂದು ಚಮಚ ಕೊಡಿಸಿಕೊಂಡು ಜಮೆತಾ ಉತ್ತಮವಾದ ಭಾರತೀಯ ಚಾ ಸೊಪ್ಪನ್ನು ಹಾಕಿ ನೀರು ಚೆನ್ನಾಗಿ ಕುದಿದ ಮೇಲೆ ಅದರ ಮೇಲೆ ಸುರಿಯಿರಿ ಐದು ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ ಹಾಲು ಸಕ್ಕರೆ ಬೆರಸಿ ಸೇವಿಸಿ.

ಹಿಂದೂದೇಶದ ಆನಂದ, ಹೆಮ್ಮೆ-ಭಾರತೀಯ ಚಾ

I K 40

ಶ್ರೀ ಕಾತ್ಯಾಯಿನಿ ಯಕ್ಷಗಾನ ಮಿತ್ರಮಂಡಲಿ, ಮುಂಬಯಿ

ಕಳೆದ ತಾ. ೩೧-೭-೩೩ರಲ್ಲಿ ಮತ್ತು ೨೧-೮-೩೩ರಲ್ಲಿ ರಾತ್ರಿ ಘಂಟೆ ೮ಕ್ಕೆ ಸುರತ್ಕಲ್ 'ಶ್ರೀ ಸದಾಶಿವ ತಥಾ ಶ್ರೀ ಗಣಪತಿ ದೇವಸ್ಥಾನ'ದ ಪರವಾಗಿ ಗುತ್ತಿಕೊಪ್ಪ ಉಗ್ಗ ಕರ್ಕೇರ, ಕಾಂಪರ ಗುರಿಕಾರ, ಎಮ್. ಶೇಷಪ್ಪ ಶ್ರೀಯನ್ ಮತ್ತು ಎಂ. ಕೃಷ್ಣಪ್ಪ ಶ್ರೀಯನ್ ಇವರು ಈ ದೇವಸ್ಥಾನದ ಉದ್ಧಾರಕ್ಕಾಗಿ ಅನೇಕ ಕಷ್ಟನಷ್ಟಗಳನ್ನು ಪಡಕೊಂಡು ಈ ಮೇಲಿನ "ಶ್ರೀ ಕಾತ್ಯಾಯಿನಿ ಯಕ್ಷಗಾನ ಮಿತ್ರಮಂಡಳಿ'' ಯವರೊಡನೆ, ಕೇಳಿಕೊಂಡಲ್ಲಿ "ಶಶಿಕಲಾ ಸ್ವಯಂವರ'' ಮತ್ತು 'ವೀರಮಣಿ ಕಾಳಗ' ವೆಂಬೆರಡು ಯಕ್ಷಗಾನ ಪ್ರಸಂಗವನ್ನು ಬಯಲಾಟ ರೂಪವಾಗಿ ಆ ದಿನ ಒಳ್ಳೇ ಉತ್ಸಾಹದಿಂದ ಆಡಿ ತೋರಿಸಿದರು; ಅಲ್ಲದೆ ರಾತ್ರಿ ಸಮಯ ಇಲೆಕ್ಟ್ರಿಕ್ ಲ್ಯಾಟಿನ ವಿಷಯದಲ್ಲಿ 'ದಿ ಮೋರ್ನಿಂಗ್ ಪ್ರೋಪ್ಸ್ ರಿಪ್ರೆಸೆಂಟ್ಸ'ನ ಮ್ಯಾನೇಜರಾದ ಮಿ| ಕೋಧಾರಾಂ, ಇವರು ಅನೇಕ ಸಹಾಯವನ್ನಿತ್ತಿರುವರು

ಈ ಆಟದಲ್ಲಿ ದೇವರ ಸಹಾಯಕ್ಕೆ ಏನೂ ಅನುಕೂಲವಾಗದ ಕಾರಣ ಇನ್ನು ಬೇರೆ ಯಾವ ವಿಧದಲ್ಲಿಯಾದರೂ ನಮ್ಮ ಮಿತ್ರರು ಯಾ ದೇಶಾಭಿಮಾನಿಗಳೆಲ್ಲರೂ ಸಹಾಯವನ್ನೀಯುವರೆಂದೂ, ಅಂದು ಆಟ ನೋಡಲು ಬಂದ ಮಹನೀಯರಿಗೆ "ಶ್ರೀ ಸದಾಶಿವ ತಥಾ ಶ್ರೀ ಗಣಪತಿ'' ದೇವರು ಒಳ್ಳೇ ಬುದ್ಧಿಯನ್ನು ಕೊಟ್ಟು ಅವರವರ ಮನಸ್ಸನ್ನು ಶಾಂತಪಡಿಸಬೇಕಾಗಿ ಕೋರುವೆನು

"ಶ್ರೀ ಕಾತ್ಯಾಯಿನಿ ಯಕ್ಷಗಾನ ಮಿತ್ರಮಂಡಳಿ''ಯವರು ಈ ದೇವಸ್ಥಾನದ ಸಹಾಯಾರ್ಥವಾಗಿ ಪಡಕೊಂಡ ಕಷ್ಟವನ್ನು ನೋಡಿ ಪ್ರಯೋಜನವಿಲ್ಲ, ಇವರಿಗೆ ಮತ್ತು ಇವರ ಮಂಡಳಿಗೆ ಆ "ಶ್ರೀ ಜಗಧೀಶರು'' ಒಳ್ಳೇ ಸಹಾಯವನ್ನೊದಗಿಸುವರೆಂದು ಹೇಳದೆ ತಪ್ಪಾಗಲಾರದು

ಈ ಮೇಲೆ ಕಾಣಿಸಿರುವ 'ಶ್ರೀ ಸದಾಶಿವ ತಥಾ ಶ್ರೀ ಗಣಪತಿ' ದೇವರ ದೇವಾಲಯದ ಗರ್ಭಗ್ರಹದ ಮಟ್ಟಿನ ಮಾಡನ್ನು ಯೋಗ್ಯವಾದ ಹಾಗೂ ಅಲಂಕಾರಯುಕ್ತವಾದ ರೀತಿಯಲ್ಲಿ ಕಟ್ಟಲು ಬಂದಿರುವ ಈ ಸಂದರ್ಭದಲ್ಲಿ ಸ್ವದೇಶಾಭಿಮಾನಿಯರೆಲ್ಲರೂ ಪ್ರೋತ್ಸಾಹಕರೇ ಯುವಿರಾಗಿ ಬೇಡುವೆನು.

ಕೃಷ್ಣಪ್ಪ, ಟಿ. ಶ್ರೀಯನ್.

ಯುದ್ಧಸನ್ನಾಹವು ಏದೆ ವರ್ಷದಲ್ಲಿ ಮುಗಿಯುವುದು

ಸ್ಪೇಯಿನಿನಲ್ಲಿ ಜಗತ್ತಿಗೆ ಒಂದು ಪಾಠವಾಗಿರುತ್ತದೆ.

ಸಾಂಪತ್ತಿಕ ಸ್ಥಿತಿಗಳ ವಿಚಾರವಾಗಬೇಕು, ಆದರಿಂದ ಈಗ ನಡೆಯುವ ಮಹಾ ಯುದ್ಧ ಸನ್ನಾಹಗಳು ಬಹಳ ಕಾಲ ಬಾಳುವ ಹಾಗಿಲ್ಲ.

ಸ್ಪೇಯಿನಿನ ಪ್ರಕರಣದಿಂದ ಪಾಶ್ಚಾತ್ಯದ ಇತರ ಯುದ್ಧಸನ್ನದ್ಧರಾದ ಜನಾಂಗಗಳಿಗೆ ಒಂದು ಮಹಾ ಪಾಠವಾಗಿರುತ್ತದೆ. ನರಕೊಲೆಯು ಸ್ಪೇಯಿನಿನಲ್ಲಿ ನಡೆಯುತ್ತಾ ಇದೆ. ಅಲ್ಲಿ ಸದ್ಯದ ಸ್ಥಿತಿಯನ್ನು ಪರಿಶೀಲಿಸಿದರೆ, ಈ ತರದ ಕೊಲೆಯು ಇನ್ನೂ ಒಂದು ವರ್ಷ ಸಮಯ ನಡೆಯಬಹುದೆಂದು ಊಹಿಸಬಹುದಾಗಿದೆ. ಅಲ್ಲಿ ಈ ತರದ ಕೊಲೆಯು ನಡೆಯುತ್ತಿರುವಾಗ, ಅಲ್ಲಿನ ಇತರ ಜನಾಂಗ ಅವಕ್ಕಾಗಿ ಸುಮ್ಮನೆ ನಿರೀಕ್ಷಿಸುತ್ತಿದ್ದರೂ, ಅವರಲ್ಲಿ ಆ ಕುರಿತು ಒಂದು ಕುತೂಹಲವು ಇರುವುದು.

ಎಲ್ಲರ ದೃಷ್ಟಿ ಗೋಚರವು ಸ್ಪೇಯಿನಿನ ಕಡೆ ಸರಿದಿರುತ್ತದೆ. ಆಧುನಿಕ ಯುದ್ಧೋಪಕರಣಗಳಿಂದ ಯುದ್ಧವು ಹೇಗೆ ಸಾಗುವುದು, ಎಷ್ಟು ಸಮಯ ನಡೆಯುವುದು, ಇವೆ ಮೊದಲಾದ ವಿಚಾರಗಳು ಸ್ಪೇಯಿನಿನ ಯುದ್ಧರಂಗದಲ್ಲಿ ಹೊಳೆದು ಕಾಣಿಸುತ್ತವೆ. ಆಧುನಿಕ ಯುದ್ಧವು ಅತಿ ಬೇಗನೆ ಮುಗಿಯುವುದೆಂಬುದಾಗಿ ಇದ್ದ ನಂಬಿಕೆಯು ಗಾಳಿ ಪಾಲಾಗಿರುತ್ತದೆ.

ಕೊಮ್ಯುನಿಷ್ಟ ಸ್ಪೇಯಿನಿನಲ್ಲಿ ಕಾಲಿಡದಂತೆ ಹಿಟ್ಲರ್ ಮುಸಲೋನಿಯವರು, ಸೈನ್ಯ ತಂಡಗಳ ಶಸ್ತ್ರಸಂಗ್ರಹ ಇತ್ಯಾದಿಗಳಿಂದೊಡಗೂಡಿ, ದಂಗೆಗಾರರಿಗೆ ಸಹಾಯಕರಾಗಿ ಸ್ಪೇಯಿನಿನ ಯುದ್ಧರಂಗದಲ್ಲಿ ಇಳಿದುಬಿಟ್ಟರು. ಆದರೆ ಈಗ ಇಬ್ಬರು ತಮ್ಮ ಈ ಮೇಲಿನ ಅವಸರದ ನಿರ್ಧಾರಕ್ಕಾಗಿ ವ್ಯಥೆಪಡುತ್ತಿದ್ದಾರೆ. ಸ್ಪೇಯಿನಿನ ಪ್ರಕರಣದಲ್ಲಿ ಕೈಹಾಕಿದೆ, ತಪ್ಪೆಂಬ ಭಾವನೆಯು ಅವರಲ್ಲಾಗಿರುತ್ತದೆ.

ಕಾರಣ ಅವರು ಈ ಮೊದಲು ಹಾಕಿಕೊಂಡ ಅಂದಾಜುಗಳೆಲ್ಲಾ ಮೂಲೆಪಾಲಾಗಿವೆ—ಸ್ಪೇಯಿನಿನ ಯುದ್ಧರಂಗದಲ್ಲಿ ಅಲ್ಲದೆ, ಪಾಶ್ಚಾತ್ಯದ ಇತರ ಸಂಗ್ರಾಮಿಕ, ನಾವಿಕ ವಾಯುಬಲ, ಇತ್ಯಾದಿ ಯುದ್ಧ ನಾಯಕರ ಕಣ್ಣುಗಳು ತೆರೆಯಲ್ಪಟ್ಟವೆ.

o o o

ಅತಿ ಬೇಗನೆ ಸರ್ವನಾಶ ಮಾಡುವ ಆಧುನಿಕ ಯುದ್ಧೋಪಕರಣಗಳಿಂದ ಮುಂದಿನ ಮಹಾ ಯುದ್ಧವು ಪ್ರಾರಂಭವಾದ ಕೆಲವೇ ದಿನಗಳಲ್ಲಿ ಕೊನೆಗೊಳ್ಳುವುದೆಂಬ ಅವರ ಆಶೆಯು ನಿರಾಶೆಯಾದುದು ಸ್ಪೇಯಿನಿನ ಯುದ್ಧರಂಗದಲ್ಲಿ ಕಾಣಿಸುತ್ತದೆ. ವಾಯುಮಂಡಳದಿಂದ ಅತಿಕ್ರಮ, ವಿಷವಾಯು ಪ್ರಯೋಗ, ಅತ್ಯಂತ ಭಯಂಕರ ಬಾಂಬುಗಳಿಂದ ದಾಳಿ, ಇವುಗಳಿಂದ ಸರ್ವ ನಾಶಮಾಡಿ ವೈರಿಯನ್ನು ಕ್ಷಿಪ್ರದಲ್ಲಿ ಸದೆಬಡೆಯುವುದೆಂಬ ಭಾವನೆಯು ಸತ್ಯವಲ್ಲವೆಂದು ಸ್ಪೇಯಿನ ಯುದ್ಧರಂಗದಿಂದ ತಿಳಿಯಬಹುದು.

ಯುದ್ಧಕ್ಕಾಗಿ ಟೊಂಕ ಕಟ್ಟಿದ ಜನಾಂಗಗಳು, ಸಾಂಪತ್ತಿಕ ವಿಚಾರಗಳನ್ನೆ ಮರೆತುಬಿಟ್ಟು, ಯುದ್ಧಸನ್ನದ್ಧ ಕಾರ್ಯಗಳಲ್ಲಿ ತೊಡಗಿದ್ದರು. ಯುದ್ಧವು ಬಹಳ ದೀರ್ಘ ಸಮಯ ನಡೆಯದೆಂಬ ಭಾವನೆಯು ಇದ್ದುದರಿಂದ ಇನ್ನೊಂದು ಮಹಾ ಯುದ್ಧದ ವ್ಯಯದ ಗಣನೆಯು ಅವರೂ ಮಾಡದವರಾಗಿದ್ದರು. ಪ್ರಾರಂಭದ ಅತಿಕ್ರಮದಲ್ಲೆ ಅತ್ಯಂತ ಬಲಶಾಲಿಯಾದವರಿಗೆ ಅವರ ಭಯಂಕರ ತರದ ನಾಶಗೊಳಿಸುವ ಉಪಕರಣಗಳಿಂದ, ಜಯವು ಖಂಡಿತವೆಂಬ ಅಭಿಪ್ರಾಯವು ಇದ್ದಿತು. ಯುದ್ಧದ ಸಾಂಪತ್ತಿಕ ವಿಚಾರದ ಪ್ರಾಮುಖ್ಯತೆಯು ಅವರಿಗೆ ಹೊಳೆಯಲಿ ಇಲ್ಲ.

ನಿಜ ಇನ್ನೊಂದು ಮಹಾ ಯುದ್ಧವು ಉಂಟಾದರೆ, ನವನಾಗರೀಕತೆಯು ಸರ್ವನಾಶವಾಗುವುದು, ಖಂಡಿತವೆಂದು, ಅನೇಕ ಪ್ರವೀಣರ ಮತವಾಗಿತ್ತು.

ಇವರೆಲ್ಲಾ ಸ್ಪೇಯಿನಿನಲ್ಲಿ ನಡೆಯುವ ಯುದ್ಧ ಚಟುವಟಿಕೆಗಳನ್ನು ನಿರೀಕ್ಷಿಸುವವರಾದರು. ಆಧುನಿಕ ಯುದ್ಧೋಪಕರಣಗಳ ಸಫಲತೆಯ ಕುರಿತು, ಅದು ಅವರಿಗೊಂದು ಪರಿಶೋಧನಾ ರಂಗವಾಯಿತು.

ಪರಿಶೋಧನೆಯ ಫಲಿತಾಂಶವೇನು? ಸ್ಪೇಯಿನಿನಲ್ಲಿ ವಾಯುಮಂಡಳದಿಂದ ಬಾಂಬುಗಳ ಮೂಲಕ ಭಯಂಕರ ತರದ ಅತಿಕ್ರಮಗಳು ನಡೆದವೆ. ಆದರೆ ನಾಗರೀಕ ಜನರು ಅವುಗಳಿಂದ ಭೀತಿಭ್ರಮರಾದುದು, ಸ್ಪೇಯಿನಿನಲ್ಲಿ ಕಾಣಿಸಲಿಲ್ಲ. ಇಕ್ಕಡೆಯವರು, ಅತ್ಯಂತ ಧೈರ್ಯ ಸ್ಥೈರ್ಯವನ್ನು ತೋರಿಸಿದರು. ಸದಾಕಾಲ ತಮ್ಮ ಸುತ್ತಲು ನಡೆಯುವ ಭಯಂಕರತೆಯನ್ನು ನೋಡಿ ನೋಡಿ ಅವರಲ್ಲಿ ಆ ಕುರಿತು ಸಹಜ ಭಾವವು ಉಂಟಾಗ ಹತ್ತಿತು. ತಮ್ಮ ದೇಶದಲ್ಲಿ ಭಯಂಕರ ತರದ ಯುದ್ಧ ಚಟುವಟಿಕೆಗಳು ನಡೆಯುತ್ತಿದ್ದರೂ, ಸ್ಪೇಯಿನ ಜನರು ಶಾಂತಚಿತ್ತದಿಂದ ತಮ್ಮ ನಿತ್ಯ ಕ್ರಮವನ್ನು ನಡೆಯಿಸುತ್ತಿದ್ದಾರೆ.

ಅಂದರೆ, ಆಧುನಿಕ ಯುದ್ಧಕ್ರಮಗಳ ಭಯಂಕರತೆಯು ಎಲ್ಲಿ ಹೋಯಿತು? ಸರ್ವನಾಶ ನಡೆಯಿಸುವ ವಿಮಾನ ಅತಿಕ್ರಮಗಳ ವಿಚಾರವೇನು? ಮಾರ್ಗಗಳಲ್ಲಿ ಬೊಂಬುಗಳು ಬೀಳುತ್ತಿದ್ದಾವೆ, ಕಟ್ಟಡಗಳು ಉರುಳುತ್ತಿದ್ದಾವೆ, ಆದರೆ ಸ್ಪೇಯಿನಿನ ಜನರ ಈಗಿನ ಮನೋಭಾವವನ್ನು ಕಂಡರೆ, ಅಲ್ಲಿ ಭಯಂಕರ ತರದ ಒಂದು ಯುದ್ಧವು ನಡೆಯುತ್ತವೆಂದು ಹೇಳಲು ಅಸಾಧ್ಯವೆನಿಸುತ್ತದೆ.

o o o

ಇಷ್ಟರ ವರೆಗಿನ ತಮ್ಮ ತಿಳುವಳಿಕೆಯು ತಪ್ಪೆಂದು ಹಿಟ್ಲರ ಮುಸಲೋನಿ ಇವರಲ್ಲಿ ಈಗ ಹೊಳೆದಿರುತ್ತದೆ. ವ್ಯಯದ ಗಣನೆ ಮಾಡದೆ ಅತ್ಯಂತ ಬಲಶಾಲಿ ಸಾಂಗ್ರಾಮಿಕ ಜನಾಂಗಗಳಾಗುವಂತೆ, ಅವರೀರ್ವರು ಮಹಾ ಯುದ್ಧಸನ್ನದ ಕಾರ್ಯಗಳನ್ನು ಹೊರಡಿಸಿದರು. ಆದರೆ ರಾಷ್ಟ್ರಗಳನ್ನು ಉಳಿಸಿಬಿಡುವುದು, ಅಷ್ಟು ಸುಲಭದ ಕಾರ್ಯವಲ್ಲವೆಂದು ಈಗ ಅವರಿಗೆ ತಿಳಿದುಬಂದಿರುತ್ತದೆ. ಬೇರೆ ರಾಷ್ಟ್ರಗಳ ಸರ್ವ ನಾಶಕ್ಕಾಗಿ ನಿರ್ಮಿಸಿದ ಯುದ್ಧಯಂತ್ರವು, ತಮ್ಮ ಮೇಲೆ ತಿರುಗಿ ಬೀಳಬಹುದೆಂಬ ಭಯವು ಅವರಲ್ಲಿ ಉಂಟಾಗಿರುತ್ತದೆ. ಇಟೇಲಿ ಜರ್ಮನಿ ರಾಷ್ಟ್ರಗಳಲ್ಲಿ ಭಯಂಕರ ತರದ ಸಾಂಪತ್ತಿಕ ಪರಿಸ್ಥಿತಿಯು ಉಂಟಾಗಿರುತ್ತದೆ. ಈ ವಿಚಾರದಲ್ಲಿ ಬ್ರಿಟನು ಮತ್ತು ಫ್ರಾನ್ಸ ಸ್ವಲ್ಪ ಸುಧಾರಿತ ಸ್ಥಿತಿಯಲ್ಲಿದ್ದಾರೆನ್ನಬಹುದು. ಯುದ್ಧಸನ್ನಾಹವು ಹೀಗೆ ನಡೆನಡೆಯುತ್ತ ಹೋದರೆ, ಸದ್ಯದಲ್ಲಿ ಮುಸಲೋನಿ ಹಿಟ್ಲರರು ದಿವಾಳಿ ಮುಖವನ್ನು ಕಾಣಬೇಕಾಗುವುದು.

ಸ್ಪೇಯಿನಿನಲ್ಲಿ ದೊರೆತ ಪಾಠದಿಂದ, ಕಾರ್ಯ ಪ್ರಾರಂಭಿಸುವ ಮೊದಲು, ರಾಷ್ಟ್ರಗಳು ತುಸು ಆಲೋಚಿಸುವಂತಾಗಿದೆ.

ಒಂದು ಜನಾಂಗದ ಸಾಂಪತ್ತಿಕಸ್ಥಿತಿಯು ಕೆಟ್ಟುಬಿಟ್ಟರೆ, ಆಗ ಗತಿಯೇನು? ಯುದ್ಧಶಸ್ತ್ರಗಳಿಂದ ಹಸಿವನ್ನು ತಣಿಯಲು ಅಸಾಧ್ಯ. ಪ್ರಜೆಗಳ ಹಸಿವನ್ನು ತಣಿಯುವುದು ಒಂದು ಪ್ರ[illegible] ಸಮಸ್ಯೆಯು.

o o o

ಆದರೆ ಹಿಟ್ಲರ್ ಮುಸಲೋನಿಯವರು ಮೂಢಮತಿಗಳಲ್ಲ. ಸ್ಪೇಯಿನಿನಿಂದ ಅವರಿಗೊಂದು ಪಾಠವಾಗಿರುತ್ತದೆ. ಅದನ್ನು ಅವರು ಸರಿಯಾಗಿ ತಿಳಿದುಕೊಂಡಿರುವರು. ಆದುದರಿಂದ ಸದ್ಯದಲ್ಲಿ ಅವರು ಪೈಶಾಚಿಕ ಕಾರ್ಯಗಳನ್ನು ನಿಲ್ಲಿಸಬಹುದು. ತಮ್ಮ ರಾಷ್ಟ್ರದ ಸಾಂಪತ್ತಿಕ ವಿಚಾರಗಳ ಕಡೆಗೆ ಹೆಚ್ಚಿನ ಗಮನವನ್ನು ಕೊಡುವವರಾಗುವರು.

"NACET"

ಕಡಿಮೆ ಬೆಲೆಯ ಅತ್ಯುತ್ತಮ ಬ್ಲೇ



8 ಆಣೆಗಳಿಗೆ ಬ್ಲೇಡುಗಳು 10

ಅತಿ ಕಡಿಮೆ ಬೆಲೆಯ ಬ್ಲೇಡುಗಳಲ್ಲಿ ಈ ಮೊದಲು ಅಸಾಧ್ಯವೆನಿಸಿದ ವಿಶಿಷ್ಟತೆಯಿಂದ ಕೂಡಿದ್ದು 'ನೆಸೆಟ' ಬ್ಲೇಡುಗಳು ಅತ್ಯಂತ ಜನಜನಿತವಾಗಿವೆ. ಪ್ರತಿಯೊಂದು ಪೆಕೇಟಿನಲ್ಲಿರುವ ಬ್ಲೇಡು ಒಳ್ಳೆ ಹರಿತವಾಗಿದ್ದು, ಬಹಳ ಸಮಯದ ಬಾಳಿಕೆಯಿಂದ ಕೂಡಿದ್ದು, ಚೊಕ್ಕಟವಾದ ತ್ವರಿತಯುಕ್ತ ಕ್ಷೌರವನ್ನು ಕೊಡುವುದು. ನೆಸೆಟ್ ಬ್ಲೇಡು ಮೂರು ಗಂಟೆಗಳುಳ್ಳ ಸೆಪ್ಟಿ ರೇಜರಿನಲ್ಲಿ ಉಪಯೋಗಿಸಬಹುದು

INZ

ಎಡೆಬಿಡದ ದಣುವಿನಿಂದ ಸ್ತ್ರೀಯು ಕೋಪಭಾವದವಳಾದಳು

ಇತರರೊಡನೆ ಜೀವಿಸಲು ಅನರ್ಹಳಾದಳು

ಕ್ರುಶನ್ ಲವಣಗಳಿಂದ ಆಕೆಯು ತನ್ನ ಸಂಕಟವನ್ನು ನೀಗಿದಳು

ಓರ್ವ ಸ್ತ್ರೀಯು ಹೀಗೆ ಬರೆದು ತಿಳಿಸ್ಸಳೆ: 'ನನ್ನ ಪ್ರಾಯವು ೪೫. ಆದರೆ ಕೆಲವು ದಿವಸಗಳಲ್ಲಿ ನೂರು ವರ್ಷ ವಯಸ್ಸಿನ ಭಾರವು ನನ್ನಲ್ಲಿ ಇರುವುದು. ನನ್ನಲ್ಲಿ ಕಾರಣವಿಲ್ಲದೆ ದಣುವುಂಟಾಗುವುದು. ಆಗ ನನ್ನ ನರಗಳ ಶಕ್ತಿಯು ಕುಂದಿ, ನನ್ನಲ್ಲಿ ಕೋಪಾವೇಶವು ಉಂಟಾಗಿ, ಇತರರೊಡನೆ ಜೀವಿಸಲು ನಾನು ಅಯೋಗ್ಯಳೆನ್ನಿಸುತ್ತಿದ್ದೆ. ಕೆಲಸ ಮಾಡಲು ನನಲ್ಲಿ ಶಕ್ತಿಯೆ ಇರಲಿಲ್ಲ. ನನ್ನಲ್ಲಿ ಯಾವಾಗಲೂ ಒಂದು ತರದ ನಿಸ್ತೇಜಭಾವವು ಉಂಟಾಗಿ ಜೀವಿಸುವುದೆ ಬೇಡವೆಂದು ನನಗೆ ಎನಿಸುತಿತ್ತು. ಅದಕ್ಕೆಲ್ಲಾ ನನ್ನ ನರಗಳು ಕಾರಣವೆಂದ ವೈದ್ಯರು ಸೂಚಿಸಿದರು. ನಾನು ಕ್ರುಶನ್ ಲವಣಗಳನ್ನು ಉಪಯೋಗಿಸಿದೆನು. ಅದನ್ನು ಉಪಯೋಗಿಸಲಾರಂಭಿಸಿದಂದಿನಿಂದ ನಾನು ಸಂಪೂರ್ಣ ಹೊಸಬಳಾಗಿರುತ್ತೇನೆ. ಜೀವನದಲ್ಲಿ ಉಲ್ಲಾಸವೂ ಸಚೇತನವೂ ಉಂಟಾಗಿರುತ್ತದೆ. ನನ್ನಲ್ಲಿ ಶಕ್ತಿಯು ಬಂದಿರುತ್ತದೆ. ಕೆಲಸಮಾಡಲು ಉತ್ಸಾಹವುಂಟಾಗಿರುತ್ತದೆ.'

ಕೆಟ್ಟ ಆರೋಗ್ಯವು ಹೆಚ್ಚಿನವರಲ್ಲಿ ಕೋಪಿಷ್ಠತೆಗೆ ಕಾರಣವು. ದೇಹವು ಸ್ವಚ್ಛವಾಗಿರದಿದ್ದರೆ ಅನೇಕ ಸಂಕಟಮಯ ಪೀಡನೆಗಳುಂಟಾಗುತ್ತವೆ. ನಿಮ್ಮ ದೇಹದಿಂದ ವಿಷವನ್ನು ಹೊರಗಟ್ಟಿರಿ. ಆಗ ನಿಮ್ಮ ಮನಸ್ಸಿನ ನಿಸ್ತೇಜಭಾವವು ಮಾಯವಾಗುವುದು. ನೀವು ಉಲ್ಲಾಸವಂತರಾಗುವಿರಿ.

ಪ್ರತಿದಿವಸ ಒಂದಿಷ್ಟು ಕ್ರುಶನ್ ಲವಣವನ್ನು ಸೇವಿಸಿ, ಅದು ನಿಮ್ಮ ದೇಹದೊಳಗಿನ ಕಶ್ಮಲಗಳನ್ನೂ ವಿಷಗಳನ್ನೂ ಹೊರದೂಡುವುದು.

ನಿಮ್ಮ ಅಂಗಾಂಗಗಳಿಗೆ ಶುದ್ಧ ರಕ್ತವನ್ನು ದೊರಕಿಸಿ, ಅವುಗಳಲ್ಲಿ ಹುರುಪನ್ನೂ ಚೇತನವನ್ನೂ ಉಂಟುಮಾಡುವುದು. ಎಲ್ಲಾ ಬಜಾರುಗಳಲ್ಲೂ ಸ್ಟೋರುಗಳಲ್ಲೂ ಕ್ರುಶನ್ ಲವಣವು ಮಾರಲ್ಪಡುತ್ತದೆ.

NOTICE

ದಕ್ಷಿಣ ಕನ್ನಡ ಸಬೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ

ಸ್ಮಾಲ ನಂಬ್ರ 143/1937

ಹೂವಯ್ಯ ಭಂಡಾರಿ — ವಾದಿ

ಎದ್ರು

ಜಾರಪ್ಪ ರೈ — ಪ್ರತಿವಾದಿ

ಸದ್ರಿ ಪ್ರತಿವಾದಿ ಮಂಗಳೂರು ತಾಲೂಕು ವಾಮಂಜೂರು ಗ್ರಾಮದಲ್ಲಿರುವ ಕೆಲ್ಲರ್ಾದೂಮ ಸೆಟ್ರ ಮೊಮ್ಮಗ ಜಾರಪ್ಪ ರೈಯರಿಗೆ

ಮೇಲ್ಕಂಡ ವಾದಿಯು ದಾವಾ ಪ್ರೋನೋಟಿನ ಬಾಬ್ತು ರೂಪಾಯಿ 670-0-0 ಮುಂದಿನ ಬಡ್ಡಿ ಮತ್ತು ಕೋರ್ಟು ಖರ್ಚು ಸಮೇತ ನಿಮ್ಮಿಂದ ಬರಮಾಡಿಕೊಳ್ಳುವರೆ ದಾಖಲ್ಮಾಡಿದ ಸದ್ರಿ ವ್ಯಾಜ್ಯವು ನಿಮ್ಮ ಹೆಂಬಲಾತಿ ಒಳ್ಳೆ ತಾ 28-9-1937ಕ್ಕೆ ಇಟ್ಟಿರುತ್ತದೆ. ಆದ್ದರಿಂದ ನೀವು ಸದ್ರಿ ತಾ 28-9-1937ಕ್ಕೆ ಪೂರ್ವಾಹ್ನ 11 ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ಯಾ ಅಧಿಕಾರ ಹೊಂದಿದ ವಕೀಲರ ಮೂಲಕವಾಗಲೀ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ವ್ಯಾಜ್ಯವು ನಿಮ್ಮ ಗೈರಹಾಜರಿನಲ್ಲಿಯೇ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು

H Vasudeva Kamath,
ವಾದಿಕಡೆ ವಕೀಲ

The Canara Banking Corporation
Udipi, Ltd Coondapoor

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ಮ್ಯಾದೆಗೆ ಕೊಡದೆ ಇರುವುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರು ನಿರಾಕರಿಸಲ್ಪಟ್ಟಿರುವುದಾಗಿ ವಾಪಸು ಬಂದಿರುವ ಕಾರಣ ಸದ್ರಿ ಸಾಲಗಾರರ ವಾರಿಸುದಾರರು ತಮ್ಮ ತಮ್ಮ ಪಕ್ಕಗಳನ್ನು ಬೇಂಕಿಗೆ ಹಾಜರುಪಡಿಸಿ ಬೇಂಕಿಗೆ ಸಲತಕ್ಕ ಅಸಲು ಬಡ್ಡಿ ಮತ್ತು ಜನ್ಯ ರಿಜಿಸ್ಟ್ರಿ ನೋಟೀಸು ಖರ್ಚು ಸಮೇತ ಇದೇ 1937ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 25ನೇ ಶನಿವಾರ ದಿವಸದ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಸದ್ರಿ ನಗಗಳನ್ನು ಇದೇ ಇಸವಿ ಸಪ್ಟಂಬರ ತಿಂಗಳ ತಾರೀಕು 28ನೇ ಮಂಗಳವಾರ ದಿವಸ ಮಧ್ಯಾಹ್ನ ಘಂಟೆ 12ಕ್ಕೆ ಸರಿಯಾಗಿ ಯಾ ತದನಂತರ ಬೇಂಕಿನವರಿಗೆ ಯುಕ್ತ ತೋರುವ ದಿವಸಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂಬ್ರ J. L 159/35 ಸಾಲಗಾರರ ಹೆಸರು, ಹಾಲಾಡಿಯಲ್ಲಿರುವ ವೀರಣ್ಣ ಶೆಟ್ರ ಮೊಮ್ಮಗ ಹಾಲಾಡಿ ರಾಮಯ್ಯ ಶೆಟ್ರ ಸಾಲದ ಮೊಬಲಗು ರೂ. 325-0-0.

ತಾ 15 2-1936ರಿಂದ ಬಡ್ಡಿ ಬರಬೇಕು.

ಈ ನೋಟೀಸು ಖರ್ಚು ಸಹಾ ಬರಬೇಕು

ಬೇಂಕಿನ ಆಫೀಸು, ಕುಂದಾಪುರ — **K. Nagesha Kamath,**

ಶೀತವಲಯದಲ್ಲೂ ಅಪಾಯಕರ?

ಶ್ರಮಜೀವಿಗಳು ಮದ್ಯವನ್ನು ತೊರೆಯಬಹುದು.

ಕಾರ್ಖಾನೆಗಳಲ್ಲಿ ಇರುವ ಕ್ರಮಗಳ ಪ್ರಕಾರ, ಅಲ್ಲಿನ ಮಜೂರರ ಕೆಲಸವು ಅತ್ಯಂತ ಶ್ರಮಯುಕ್ತವೂ ಹರ್ಷಚಿತ್ತವಿಲ್ಲದ್ದೂ ಆಗುವುದು. ಮಳೆಗಾಲದಲ್ಲಿ, ಗದ್ದೆಯಲ್ಲಿ ಶ್ರಮಿಸುವ ರೈತನಿಗೆ ವ್ಯಾಟೆಚ್ಚಗೆ ಮಾಡಲು ಏನಾದರೊಂದು ಬೇಕೇಬೇಕಂತೆ. ಅವರಿಗಾಗಿ ವಿಶ್ರಾಮಯುಕ್ತವೆನಿಸುವ, ಉಲ್ಲಾಸದಾಯಕ ಆರೋಗ್ಯಕರ ಪಾನೀಯಗಳನ್ನು ವೈದ್ಯಕೀಯ ಜನರಿಂದ ಕಂಡುಹಿಡಿಯಲಾಗಬೇಕು. ಶ್ರಮಜೀವಿಗಳಾದ ಮಜೂರರು, ಒಂದು ಕಾಲುರಾತ್ಲ ಬೆಲ್ಲದಿಂದ ಮತ್ತು ಒಂದಿಷ್ಟು ನೀರುಳ್ಳಿಯಿಂದ ಹೆಚ್ಚಿನ ಪ್ರಯೋಜನವನ್ನು ಹೊಂದಬಹುದು. ಮಜೂರರು ಹಾಗೂ ಶ್ರಮಜೀವಿಗಳು ಮದ್ಯವನ್ನು ಆಶಿಸದಂತೆ ಅವರ ಕೆಲಸದ ಕ್ರಮದಲ್ಲಿ ಕೆಳಗಿನ ಬದಲಾವಣೆಗಳನ್ನು ಮಾಡಬೇಕಾಗಿ ಒಬ್ಬರ ಸೂಚನೆ.

ನಗರಗಳಲ್ಲಿ (೧) ಕೆಲಸದ ಸಮಯಕ್ಕೆ ಒಂದು ನಿಯಮಿತ ಮೇರೆ ಇಡಬೇಕು. (೨) ಗಾಡಿಯನ್ನು ಎಳೆಯುವರ ಹೊರೆಗೆ ಒಂದು ಮಿತಿಯಿರಬೇಕು. (೩) ಭಾರವಾದ ಸಾಮಾನುಗಳನ್ನು ಅತ್ತ ಇತ್ತ ಮಾಡುವುದು ಹೆಚ್ಚಾಗಿ ಬೆಳಗ್ಗೆ ಯಾ ಸಂಜೆಗೆ ನಡೆಯಬೇಕು. (೪) ಬೇಸಿಗೆ ಕಾಲದಲ್ಲಿ ೧೨ರಿಂದ ೩ರ ವರೆಗೆ ಎಲ್ಲರಿಗೂ ವಿಶ್ರಾಂತಿದೊರೆಯಬೇಕು.

ಬೆಳೆ ಕೊಯ್ಯುವ ಸಮಯದಲ್ಲಿ ರೈತರು ಹೆಚ್ಚಾಗಿ ಬಿಸಿಲಲ್ಲಿಯೇ ದುಡಿಯುತ್ತಿರುವುದರಿಂದ, ಮದ್ಯ ಪಾನೀಯಗಳನ್ನು ಆಶಿಸುವವರಾಗುತ್ತಾರೆ. ಅವರು ಮುಂಜಾನೆ ಗಂಟೆ ೫-೩೦ರಿಂದ ೧೦-೩೦ರ ವರೇಗೆ, ಸಾಯಂಕಾಲ ೩ರಿಂದ ೬ರ ವರೆಗೆ ಮಾತ್ರ ಕೆಲಸಮಾಡಬೇಕು. ಕೆಲವೆಡೆಗಳಲ್ಲಿ ಸಂಜೆ ಸಮಯ ಕೊಯ್ಯುವ ರೂಢಿಯಿರುವುದು. ಪೈರನ್ನು ಬಡಿಯುತ್ತಿರುವಾಗ ಬಿಸಿಲಿಗೆ ನಿಲ್ಲುವುದು ರೈತರ ಕ್ರಮವು. ಪೈರಿನಿಂದೊರಡುವ ಅಂದೊಂದು ಕಪಟ ಕಾಡಿನಿಂದ ವ್ಯಥೆಯುಂಟಾಗುವುದುಂಟಾಗಿ, ಅದನ್ನು ಮರೆತು ಬಿಡಲು ರೈತರು ಮದ್ಯಕುಡಿಯುವುದುಂಟು. ಈ ತರದ ಕೆಲಸವನ್ನು ಮಾಡುತ್ತಿರುವಾಗ ರೈತರು ಅಂಗಿಯನ್ನು ತೊಟ್ಟುಕೊಂಡರೆ, ಆಗ, ಅವರಲ್ಲಿ ಮೇಲಿನ ಕೋರಿಕೆಯುಂಟಾಗದು.

ಮದ್ಯಪಾನದ ಬದಲಾಗಿ, — ಬೆಲ್ಲ, ಹುಣಿಸೆರಸ, ಕಾಮಕಸ್ತೂರಿ ಬೀಜ ಇತ್ಯಾದಿಗಳಿಂದ ಕೂಡಿದ ಪಾನಕವನ್ನು ಕುಡಿಯಬಹುದು; ಒಳ್ಳೆ ತರದ ಹುಳಿ ಮಜ್ಜಿಗೆಯನ್ನೂ ಕುಡಿಯಬಹುದು.

ಶೀತವಲಯದಲ್ಲೂ ಅಪಾಯಕರ.

ಶೀತವಲಯಗಳಲ್ಲಿರುವವರಿಗೆ, ದೇಹಕ್ಕೆ ಉಷ್ಣವನ್ನು ಕೊಡಲು ಮದ್ಯಪಾನವು ಅತ್ಯಗತ್ಯವೆಂದು ಕೆಲವರ ಅಭಿಪ್ರಾಯವಾಗಿರುವುದು. ಆದರೆ ಶೀತವಲಯದವರು ಮದ್ಯಸೇವನೆಯಿಂದ ಮಹಾ ಅಪಾಯಕ್ಕೆ ತುತ್ತಾಗಬಹುದೆಂದು ಪ್ರವೀಣರೊಬ್ಬರ ಖಚಿತಪಡಿಸಿರುವರು. ಮದ್ಯಪಾನದಿಂದ ಮೈಯ ಉಷ್ಣವು ಹೆಚ್ಚುವುದಿಲ್ಲ. ಉಷ್ಣ ಏರಿದ ರಕ್ತವು ಮೇಲಕ್ಕೆ ಬಂದು, ಹೊರಮೈ ಉಷ್ಣವನ್ನು ಹೆಚ್ಚಿಸುವುದು. ಆದರೆ ಈ ರಕ್ತವು, ಸುತ್ತಲಿನ ಶೀತಮಯವಾತಾವರಣದಿಂದ ತಣ್ಣಗಾಗಿ, ಸಂಪೂರ್ಣ ದೇಹದ ಉಷ್ಣವು ಕಡಿಮೆಯಾಗುವ ಸಂಭವಗಳುಂಟಾಗುವುದು. ಆದರೆ ಶೀತವನ್ನು ಎದುರಿಸಲು ಮದ್ಯಪಾನವನ್ನು ಮಾಡಿದರೆ ಶೀತದಿಂದ ರಕ್ಷಣೆ ಹೊಂದುವ ಬದಲಾಗಿ, ಶೀತದ ಬಾಧೆಗೆ ಒಳಗಾಗಬಹುದಂತೆ. ನಮ್ಮ ದೇಶಕ್ಕೆ ಈ ವಿಚಾರವು ಅನ್ವಯಿಸತಕ್ಕದ್ದಲ್ಲ. ಧಾರಾಳ ಸೂರ್ಯರಶ್ಮಿಗಳು, ನಮಗೆ ದೊರಕುತ್ತಿರುವಾಗ ನಾವು ದೇಹದ ಉಷ್ಣದ ಬಗ್ಗೆ ಯಾವುದಾದರೂ ಇತರ ಉಪಾಯಗಳ ಕುರಿತು ಆಲೋಚಿಸಲೇ ಬೇಕಾಗಿಲ್ಲ.

ಜೂಜಾಡುವುದು ಮತ್ತು ದುರ್ವ್ಯಸನಗಳು.

ಈ ವಿಷಯದ ಮೇಲೆ ಮಹಾತ್ಮಾಜಿಯವರು ಈ ಕೆಳಗಿನ ಅಭಿಪ್ರಾಯವನ್ನೊಳಗೊಂಡ ಒಂದು ಲೇಖನವನ್ನು ಬರೆದಿರುವರು.

ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದ ಪ್ರಾಂತ್ಯಗಳಲ್ಲಿನ ಅನೇಕರಲ್ಲಿ ಅನೇಕ ತರದ ಆಶಯಗಳು ಹುಟ್ಟಿರುವವು. ಇವುಗಳಲ್ಲಿ ಕೆಲವು ಸಹಜವಾದವುಗಳೂ ನಡೆಸಲು ಸಾಧ್ಯವಾದವುಗಳಾಗಿರುವವು. ಆದರೆ, ಕೆಲವು ಆಶಯಗಳನ್ನು ನಡೆಯಿಸಲು ಸಾಧ್ಯವಿಲ್ಲ. ಜೂಜುಖೋರರಿದ್ದಾರೆ,— ಕಾಂಗ್ರೆಸ್ ಮಂತ್ರಿಮಂಡಳದಿಂದ ತಮಗೆ ಬಹಳ ಅನುಕೂಲವಾಗುವುದೆಂಬ ಅಭಿಪ್ರಾಯ ಇವರಲ್ಲಿರಬಹುದು. . . . . ಹೀಗೆನೆ ಕುಡಿಕತನದ ವಿಚಾರ, ವೇಶ್ಯಾಗೃಹಗಳ ವಿಚಾರ, ಇವೆಲ್ಲಾ ಕೆಡುಕುಗಳನ್ನು ನಿಲ್ಲಿಸಲು ಅಸಾಧ್ಯವಾದುದರಿಂದ, ಕಳ್ಳಾಟಿಕೆಯಲ್ಲಿ ಅವುಗಳು ನಡೆದು ಪ್ರಜೆಗಳಿಗೆ ಹಾನಿಬರುವ ಬದಲು, ಅದನ್ನು ಸರಕಾರವು ಕ್ರಮಬದ್ಧವಾಗಿ ಮಾಡಿಬಿಟ್ಟರೆ, ಆಗ ಆ ದುಷ್ಟ ಚಟಗಳು ನಡೆಯುದಿದ್ದರೆ, ಅವುಗಳನ್ನು ನಡೆಯಿಸುವವರಿಗೆ ಅವುಗಳು ಸುರಕ್ಷಿತವಾಗಬಹುದೆಂಬ ಅಭಿಪ್ರಾಯ ಕೆಲವರಲ್ಲಿದೆ. ಈ ತರದ ಭಾವವನ್ನು ಮಂತ್ರಿಗಳು ಹೊಂದಲಾರರೆಂದು ನನ್ನ ನಂಬಿಕೆಯಾಗಿರುತ್ತದೆ. ವೇಶ್ಯಾವೃತ್ತಿಯ ಕುರಿತು ವಿಶೇಷ ತರದ ವಿರೋಧಪ್ರಚಾರವು ಸ್ತ್ರೀಯರಿಂದಲೇ ನಡೆಯಬೇಕು. ಇದು ೨ ತರದ್ದಾಗಬೇಕು. (೧) ಜೀವನಕ್ಕಾಗಿ ತನ್ನ ಶರೀರವನ್ನು ವ್ಯಾಪಾರಮಾಡುವ ಸ್ತ್ರೀಯರಲ್ಲಿ, ಪ್ರಚಾರ. (೨) ಅವರನ್ನು ಉಪಯೋಗಿಸುತ್ತಿದ್ದವರಲ್ಲಿ ಪ್ರಚಾರ. ಹಲವು ವರ್ಷಗಳ ಹಿಂದೆ ಮುಂಬಾಯಿಯಲ್ಲಿ ಸಾಲ್ವೆಶನ್ ಆರ್ಮಿಯವರು ಮಹಾ ಅಪಾಯಗಳನ್ನು ಎದುರಾಯಿಸಿ, ವೇಶ್ಯಾಗೃಹಗಳ ಎದುರು ಪಿಕೆಟಿಂಗ್ ನಡೆಯಿಸಿದರು. ಈಗಲೂ ಈ ತರದ ಯೋಜನೆಗಳನ್ನು ಮಹತ್ತರದ ರೂಪದಲ್ಲಿ ಉಪಯೋಗಿಸಬೇಕು.

ಕುದುರೆ ಜೂಜಿನ ಕುರಿತು.. ಈ ದುರಭ್ಯಾಸವು ಪಾಶ್ಚಾತ್ಯರಿಂದ ಬಂದುದಾಗಿರುತ್ತದೆ. ನನ್ನ ಇಚ್ಛೆಯು ನಡೆಯುವುದಾದರೆ, ಈಗ ರೂಢಿಯಲ್ಲಿರುವ ಈ ಕುದುರೆ ಜೂಜಿಗಿರುವ ರಕ್ಷಣಾಕ್ರಮಗಳನ್ನು ಕೂಡ ತೆಗೆದುಬಿಡುತ್ತಿದ್ದೆನು . . . . ಆತ್ಮಶುದ್ಧಿಯು . . . ೧೯೨೦ರ ಕಾಂಗ್ರೆಸ್ಸಿನ ಮಹಾ ನಿರ್ಣಯವಾಗಿರುವುದರಿಂದ, ಈ ತರದ ದುರ್ವ್ಯಸನಗಳಿಂದ ಆಗುವ ಉತ್ಪನ್ನದ ಕಡೆಗೆ ಕಾಂಗ್ರೆಸ್ಸಿನ ದೃಷ್ಟಿಸರಿಯಲೇ ಬಾರದು. ಆದುದರಿಂದ ಕಾಂಗ್ರೆಸ್ ಮಂತ್ರಿಗಳು ಉಚ್ಚವರ್ಗ ಮೊದಲ್ಗೊಂಡು ಇದ್ದ ಈ ಜೂಜಾಟದ ದುರಭ್ಯಾಸವನ್ನು ಹೋಗಲಾಡಿಸುವರೆ ಪ್ರಯತ್ನಿಸಬೇಕು.

ಸಂತತಿ ಪ್ರತಿಬಂಧದ ಪರಿಣಾಮ ವೇನಾಯಿತು.

ನ್ಯೂಜೀಲೆಂಡಿನಲ್ಲಿ ಸಂತತಿ ಪ್ರತಿಬಂಧಕ ಕ್ರಮಗಳಿಂದ ಮಹಾ ಹಾವಳಿಯುಂಟಾಗಿರುವುದೆಂದು ತಿಳಿದುಬರುತ್ತದೆ. ಅಲ್ಲಿನ ಜನಸಂಖ್ಯೆ ವರ್ಷ ವರ್ಷ ಏರುವ ಬದಲಾಗಿ ಕುಂದುತ್ತಾ ಬರುತ್ತಿದೆ. ಜನರ ನೀತಿಯು ಕೆಟ್ಟುಹೋಗಿರುತ್ತದೆ. ಇದೆ ತರದಲ್ಲಿ ವಿದ್ಯಮಾನಗಳು ನಡೆಯುತ್ತಾ ಹೋದರೆ ಒಂದಾನೊಂದು ದಿನ ಸಂಪೂರ್ಣ ಜನವರ್ಗವು ಮಾಯವಾಗಬಹುದಂತೆ. ಮೊದಲು ಸಾವಿರಕ್ಕೆ ೪೦ರ ಪ್ರಕಾರದಿಂದ ಜನಸಂಖ್ಯೆಯು ಹೆಚ್ಚುವಿಕೆಯು ಈಗ ೧೬ಕ್ಕೆ ಇಳಿದಿರುತ್ತದೆ. ಸಂತತಿ ಪ್ರತಿಬಂಧಕ ಕ್ರಮಗಳು ಒಂದು ಕುಟುಂಬದ ಮಹಾ ಮಂತ್ರವಾಗಿರುತ್ತದೆ. ಮತ ಪ್ರಚಾರಕರು, ಸಾಮಾಜಿಕ ಕೆಲಸಗಾರರು, ಇತ್ಯಾದಿಯವರು ಅದನ್ನು ಪ್ರೋತ್ಸಾಹಿಸುವುದರಿಂದ . . . ಸದ್ಯದಲ್ಲಿ ಭಯಂಕರ ಪರಿಣಾಮಗಳುಂಟಾಗಬಹುದು.

ಮುಂಬಾಯಿ ಸರಕಾರದ ಬಜೆಟು.

ಮಂತ್ರಿಗಳ ಸಂಬಳ ಕಡಿತದಿಂದ ಉಳಿತಾಯ ೧೦ ಲಕ್ಷ. ಕಾಂಗ್ರೆಸ್ ಸರಕಾರದಿಂದ ಮುಂದಕ್ಕೆ ನೇಮಿಸಲಾಗುವವರಿಗೆ ರೂ. ೫೦೦ಕ್ಕೆ ಮಿಕ್ಕಿದ ತಲಬಿನ ಅಳತೆಯು ದೊರಕದು. ಸ್ವಲ್ಪ ಮಟ್ಟಿನ ಕಂದಾಯ ಮಾಫಿಯನ್ನು ಮಾಡಿರುವರು. ರೈತಾಪಿವರ್ಗ ಸಾಲ ವಿಮೋಚನೆ ಕುರಿತು, ಸರಕಾರವು ಲಕ್ಷ್ಯವನ್ನು ತೋರಿಸಿರುವುದು. ಆ ಬಗ್ಗೆ ಸೂಚನೆಗಳನ್ನು ಕೊಡಲು ಎರಡು ಸಮಿತಿಗಳ ರಚನೆಯಾಗುವುದು. ಗ್ರಾಮ ಸಾಂಪತ್ತಿಕ ವಿಚಾರವು ಸಂಪೂರ್ಣವಾಗಿ ಪರಿಶೀಲಿಸಲಾಗುವುದು. ಹಳ್ಳಿಗಳಲ್ಲಿ ಒಳ್ಳೆ ಕುಡಿಯುವ ನೀರಿನ ಸರಬರಾಯಿ ಆಗುವಂತೆ ಪ್ರತಿಯೊಂದು ಹಳ್ಳಿಯಲ್ಲಿ ಬಾವಿ, ಕೆರೆ ಇತ್ಯಾದಿಗಳನ್ನು ತೋಡಲು ಮುಂದಿನ ಆರು ತಿಂಗಳುಗಳಲ್ಲಿ ರೂ. ೧೦ ಲಕ್ಷವನ್ನು ವ್ಯಯಿಸಬೇಕೆಂದಾಗಿದೆ. ಈ ವಿಚಾರದಲ್ಲಿ ಹರಿಜನರ ಕುರಿತು ಹೆಚ್ಚಿನ ಗಮನ ಮಾಡಲಾಗುವುದು. ಹಳ್ಳಿಗಳನ್ನು ಸೇರುವರೆ, ಯೋಗ್ಯ ರಸ್ತೆಗಳನ್ನು ನಿರ್ಮಿಸುವರೆ ರೂ. ೩॥ ಲಕ್ಷ ವಿಂಗಡಿಸಲಾಗಿದೆ. ಈ ರಸ್ತೆ ನಿರ್ಮಾಣ ಕಾರ್ಯದಲ್ಲಿ ಹಳ್ಳಿಗಳ ಸಹಕಾರವು—ಧರ್ಮಾರ್ಥ ಕೆಲಸ ಇತ್ಯಾದಿಗಳು ಕೋರಲಾಗಿವೆ.

ಸರಕಾರ ಸ್ಟೋರಿಗೆ ಎಲ್ಲಾ ಅವಶ್ಯಗಳನ್ನು ಸ್ವದೇಶಿಯಲ್ಲೇ ಪಡಕೊಳ್ಳಬೇಕಾಗಿ ಕಾಂಗ್ರೆಸ್ ಸರಕಾರದ ನಿರ್ಣಯವಾಗಿರುವುದು. ಇಲ್ಲಿ ಖಾದಿಗೆ ಹೆಚ್ಚು ವಿಶಿಷ್ಟತೆಯನ್ನು ಕೊಡಲಾಗುವುದು. ಅಲ್ಲದೆ ಗುಡಿ ಕೈಗಾರಿಕೆಗಳಿಗೆ ಸರಕಾರದ ಸ್ಟೋರಿನ ಧೋರಣೆಯಿಂದ ಪ್ರೋತ್ಸಾಹ ದೊರಕುವಂತೆ ಮಾಡುವರು. ಅಲ್ಲದೆ ಗುಡಿಕೈಗಾರಿಕೆಗಳನ್ನು ಉರ್ಜಿತಗೊಳಿಸಲು ಯೋಜನೆಗಳನ್ನು ಹಾಕಿಕೊಳ್ಳಲು ಒಂದು ಕಾರ್ಯಕ್ರಮವನ್ನು ರಚಿಸಲು ಈಗ ರೂ. ೧೫೦೦೦೦ ವಿಂಗಡಿಸಲಾಗಿದೆ. ಮುಂದಕ್ಕೆ ಸರಕಾರವು ಈ ಸಮಸ್ಯೆಯ ಕಡೆಗೆ ಅತ್ಯಂತ ಲಕ್ಷ್ಯವನ್ನು ಕೊಡುವುದಾಗಿ ತಿಳಿದುಬರುತ್ತದೆ. ಗುಡಿ ಕೈಗಾರಿಕೆಗಳ ಅಭ್ಯುದಯ ಕುರಿತು ಸರಕಾರವು ಪರಿಶೋಧನೆಗಳನ್ನು ನಡೆಯಿಸಬೇಕು. ಈ ಪರಿಶೋಧನೆ ಫಲಗಳನ್ನು ಹಳ್ಳಿಗಳಲ್ಲಿ ಬೋಧಿಸುವುದು,—ಗುಡಿ ಕೈಗಾರಿಕೆಯಲ್ಲಿ ಕೆಲ ಮಟ್ಟಿನ ಸುಧಾರಣೆಗಳನ್ನು ನಡೆಯಿಸುವುದು. ಒಳ್ಳೆ ಫಲದಾಯಕ ಕ್ರಮಗಳ ಕುರಿತು ಉತ್ತಮ ತರದ ಪ್ರಚಾರ ನಡೆಯಿಸುವುದು . . . . .

ಆಡಳಿತ ಖರ್ಚನ್ನು ಕಡಿಮೆಮಾಡಬೇಕಾಗಿ ಯೋಜನೆಗಳಿದ್ದರೂ, ಆಡಳಿತ ಯೋಗ್ಯತೆಯು ಇನ್ನಷ್ಟು ಉತ್ತಮಗೊಳ್ಳುವ ಯತ್ನಗಳಾಗುವವು.

ನಂತರ ಸಾರ್ವಜನಿಕ ಉಪಯುಕ್ತತೆಯ ಸಂಸ್ಥೆಗಳಿಂದ ಲಾಭ ಹೊಂದುವ ಕುರಿತು, ಈ ಬಜೆಟಿನಲ್ಲಿವೆ. ಜನರಿಂದ ಈ ತರದಲ್ಲಿ ಪಡೆದ ಲಾಭವನ್ನು ಜನರ ಹಿತಕ್ಕಾಗಿ ವಿನಿಯೋಗಿಸುವುದು ಸರಕಾರದ ಇಚ್ಛೆಯಾಗಿರುವುದು, ಹೀಗೆ ಲಾಭಕರವೆನಿಸುವ ಅನೇಕ ಸಾರ್ವಜನಿಕ ಉಪಯುಕ್ತತೆಯ ಸಂಸ್ಥೆಗಳ ಕುರಿತು ಆಲೋಚನೆಯು ಸರಕಾರಕ್ಕಿರುವುದು.

ಭೂಕಂದಾಯ ಕ್ರಮಗಳ ಕುರಿತು, ಸಂಪೂರ್ಣ ಮಾರ್ಪಾಟುಗಳು ಮಾಡಲಾಗುವವು. ದಣಿವಿಲ್ಲದೆ ಭೂಮಿಯ ಫಲವನ್ನು ಅನುಭವಿಸುವವರ ಮೇಲೆ ಘನವಾದ ತೆರಿಗೆ ಹೊರೆಗಳನ್ನು ಹೊರಿಸುವ ಆಲೋಚನೆಗಳಿವೆ. ಶ್ರಮಕಾರಿ ರೈತನಿಗೆ ಕಂದಾಯ ಹೊರೆಯನ್ನು ಲಘು ಮಾಡುವ ಯತ್ನಗಳು ನಡೆಯುವವು. ಅಲ್ಲದೆ ಮದ್ಯನಿಷೇಧದಿಂದ ನಾಶವಾಗುವ ಉತ್ಪನ್ನವನ್ನು ಭರ್ತಿ ಮಾಡಲು ಮರಣ ಕಂದಾಯ, ಭೋಗವಸ್ತುಗಳ ಮೇಲೆ ತೆರಿಗೆ ಇತ್ಯಾದಿ ಪ್ರಾಂತ್ಯಕೀಯ ಮಂತ್ರಿಗಳ ಪರಿಷತ್ತು ನಡೆದು ನಿರ್ಣಯಿಸಲಾಗುವ ಹೊಸ ತರದ ತೆರಿಗೆಗಳಿಂದ ಹಣ ಕೂಡಿಸಲಾಗುವುದು.

ಹೀಗೆ ನೂತನ ರಾಜ್ಯಾಂಗ ಘಟನೆಯಿಂದ ಸಫಲವನ್ನು ಹೊಂದಲು, ಮಂತ್ರಿಗಳು ಸರ್ವಯತ್ನಗಳನ್ನು ಮಾಡಿ, ತಮ್ಮ ಯತ್ನಗಳು ಎಲ್ಲಾ ನಡೆದಿದ್ದರೂ ತಮ್ಮ ಸುತ್ತಲು ನಿರ್ಬಂಧ ಸಂಕಷ್ಟಗಳಿವೆ ಎಂದೂ, ಜಗತ್ತಿಗೆ ವ್ಯಕ್ತಪಡಿಸುವರು – ರಾಷ್ಟ್ರಭಾವವು ಹತೋಟಿ ಬಾರದೆ ಉಕ್ಕೇರಿ ಬರುವುದನ್ನು ತಪ್ಪಿಸುವರೆ ಈ ನಿರ್ಬಂಧ ಸಂಕಷ್ಟಗಳ ಮಾಯವಾಗಬೇಕೆಂದು ಆಗ ತಿಳಿಯುವುದು.

ಉದಕಮಂಡಲದಲ್ಲಿ ಪ್ಲೇಗು

ಉದಕಮಂಡಲದಲ್ಲಿ ಪ್ಲೇಗಿನ ಇಲಿಗಳು ಸಾಯುವುದು ಇನ್ನೂ ನಿಂತಿಲ್ಲ. ಇಷ್ಟರ ತನಕ ಪ್ಲೇಗಿನಿಂದ ೨೦ ಜನರ ಮರಣವಾಗಿರುತ್ತದೆ. ಪ್ಲೇಗನ್ನು ತಡೆಯುವರೆ ನಗರ ಸಭೆಯವರೂ ಸರಕಾರದವರೂ ಯೋಗ್ಯ ಸಾಧನಗಳನ್ನು ವಹಿಸಿರುವರು.

WANTED

A Mistress or a Master, as a private teacher for some children of a Land-Holder in a country house. Apply with copies of testimonials starting the minimum pay expected to "C" C/o "*Swadeshabhimani Mangalore*..

THEY WORK WHILE YOU REST.

Industrious Rupees are busy turning out more Rupees to savers in our bank. But they do not jump in and go to work of their own free will. You have to start them and encourage them. The best way is to give them friends. Rupees are very sociable, and if they are lonely they do little. But if you keep adding more Rupees in to your account they do their best. And the more they work the more you can rest.

RESOURCES OF A CRORE. ESTD: 1906 **CANARA BANK, LIMITED.**

ಒಳಪುಟದಲ್ಲಿ

ಟಿಪ್ಪಣಿಗಳು
ಚೀನವನ್ನು ಹೀಗೇಕೆ?
ಯುರೋಪಿನ ರಾಷ್ಟ್ರಗಳ ತ್ರಿಯಾಕ್ಷ ... ೩
ಯುದ್ಧ ಸನ್ನಿಹಿತವು ಎದೇ ವರ್ಗಗಳಿಂ
ಮುಗಿಯುವುದು ೪
ಅರಬಿಯರ ಮಹತ್ವಾಕಾಂಕ್ಷೆ ೫
ಅಗ್ರಲೇಖ
ರಣರಂಗದ ವಾರ್ತೆ ೧೦
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು ೧೧
ಪ್ರಾಂತಗಳೊಳಗಿನ ಸಮಾಚಾರ ೧೩
ತಾಲೂಕುಗಳಿಂದ

ಸ್ವದೇಶಾಭಿಮಾನಿ

ತಾ. ೧೦ನೆ ಶುಕ್ರವಾರ ಸಪ್ಟಂಬರ ೧೯೩೭

ರಣರಂಗ ವಾರ್ತೆ.

ಜಾಪಾನಿನ ಅಭಿಯೋಗವು ಚೀನದೊಳಗಾಗಿ ಎರಡು ತಿಂಗಳು ಕಳೆದುವು. ಭರವಸೆ ಮತ್ತು, ಇಷ್ಟರಲ್ಲೆ ಚೀನದ ದೋಸೆಯ ಒಂದು ಚಾಪೆಯ್ಯುಡಿತ ಸುಲಭವಾಗಿ ಮಂಚೂರಿಯದ ಗಾತ್ರದ್ದು, ನುಂಗಿಯೂ ಆಗುವುದೆಂದು. ಯುದ್ಧ ಡಂಗುರ ಹೊಯಿಸದೆ, ಕ್ಷೇತ್ರಸಿದ್ಧತೆ ತೋರದೆ, ಬರೀ ಗಲಾಟೆಯೆಬ್ಬಿಸಿ, ಚೀನವನ್ನು ಅಲ್ಲಲ್ಲೇ ಅನಿರೀಕ್ಷಿತ ಕಾಳಗದಲ್ಲಿ ಸುಲಭವಾಗಿ ಮೊಣಕಾಲೂರಿಸಬಹುದೆಂದು ಜಾಪಾನು ನಂಬಿಯೇ ಇತ್ತು. ಪ್ರಬಲರಾಷ್ಟ್ರ, ದೊಡ್ಡಾಳುಗಳ ನೆರವಿ, ಚೀನವೊಂದು ರಷ್ಯದ ಹಾಗೆ ಉದ್ದಗಲ, ಜನಾಂಗವೆಲ್ಲ ಹಿಂಡುಗಟ್ಟಿದ ರೀತಿ, ಜಡವಾಗಿದ್ದುದು ಕುಂಭಕರ್ಣನ ನಿದ್ದೆ ಮುಗಿದು ಎದ್ದ ಪ್ರಕಾರ, ಎಲ್ಲ ಹಾಗೆಯೆ ಆದರೆ ಎಚ್ಚತ್ತ ಚೀನ ಬಲ ಕಡಿಮೆಯಾಗಿದ್ದರೂ, ಛಲಕೊಟ್ಟಿದೆ ಗೆಲವು ಸುಲಭವಾಗಲಿಲ್ಲ. ಸೋಲಬಹುದಾದರೂ ಥಕ್ಕನೆ ಸೋಲದು ಜಾಪಾನಿನ ಸಿಡಿಲ ಬಡೆಯಲೇ ಬೇಕು, ಆ ವಜ್ರಾಯುಧವನ್ನು ತಡೆವುದಕ್ಕೆ ಇತರ ಅಭ್ಯಂತರಗಳುಂಟಾಗಬೇಕು ದರ್ಪ, ಧೂರ್ತತೆ, ಜಾಪಾನಿನವು. ಸೋತರೆ ಪ್ರಲಯಾರಂಭವೆಂದು ಚೀನದ ನಂಬಿಕೆ ಸ್ವಾತಂತ್ರ್ಯವೆಂದರೇನೆಂದು ಒಂದು ತುತ್ತು ರುಚಿಸಿದವನಿಗೆ, ಅವನು ದುರ್ಬಲನಾದರೂ, ಕಿಡಿ ಹಾರಿಸಿಯಾದರೂ ಜೀವವಿದೆಯೆಂದು ತೋರಿಸದಿರಲಾದೀತೆ? ಐದು ವರ್ಷ ಜಾಪಾನಿನ ಹುಲಿಯುಗುರ ಆಶೀರ್ವಾದ ಪಡೆದು ಚೀನದ ತಲೆ ಬೆನ್ನು ಗಾಯಗಳಾಗಿವೆ ಹೊರತು, ಆಶೀರ್ವಚನದಿಂದೇನೂ ಫಲವಾಗಿಲ್ಲ ಇನ್ನೂ ಪೌರ್ವಾತ್ಯ ನಾಡುಗಳಲ್ಲಿ ಸುಧಾರಣೆ ಹರಡಿಸಿ, ಜಾಗ್ರತೆಯೆಬ್ಬಿಸಿ, ಶಾಂತಿ ಸ್ಥಾಪಿಸಿ, ತಾನು ಕರ್ತವ್ಯ ನೆರವೇರಿಸಿ ಜೀವನ್ಮುಕ್ತನಾಗಬೇಕೆಂದು ಜಾಪಾನಿನ ಮನೋಧ್ಯೇಯವಂತೆ,—ಪ್ರಕಟವಾಗಿಯೇ ಇದೆ. ಇಟಲಿಯೂ ಸಾರಿದುದು ಇಷ್ಟೆ 'ಯುದ್ಧ ಮಾಡುವವರೇ ಅಲ್ಲ. ಶಾಂತಿ ಎಲ್ಲರಿಗಿಂತ ನಮಗೇ ಬೇಕಾದುದು. ಅಂಧಕಾರವಿರದಂತೆ ಸುಧಾರಣೆ ಬೆಳಗಿ, ಅಬಿಸೀನಿಯವನ್ನು ಕಾಪಾಡುತ್ತೇವೆ' ಎಂದವರು ಇಟಲಿಯವರು. ಈ ಮಾತನ್ನೆ ಇಂದಿಗೂ ಸ್ಪೇಯಿನಿನ ಸರಕಾರ ಮುರಿಯುವ ಪುಂಡರಿಗೆ ಇಟಲಿಯು ಸಾರಿ, ಅಭಿನಂದಿಸುತ್ತಿದೆ. ಆ ನಾಟಕಕ್ಕೆ ಇಲ್ಲಿ ಆಡಲು ಜಾಪಾನು ರಂಗಸ್ಥಳಕ್ಕಿಳಿದಿದೆ. ಅಭಿನಯಾರಂಭದಲ್ಲೇ, ದಂತಭಗ್ನವಾಗಿದೆ. ಸೈನ್ಯದ ಖರ್ಚು ಇಷ್ಟರಲ್ಲೆ ಹಿಂದೂವರೆ ಪಾಲಾಗಿದೆ; ರಾಜ್ಯದ ಸಾಲವೂ ಹಾಗೆಯೆ.

ಜಾಪಾನಿನ ಸಾಮ್ರಾಜ್ಯಾಭಿಲಾಷೆಗೂ ಚೀನಾದ ಸ್ವಾತಂತ್ರ್ಯಾಭಿಲಾಷೆಗೂ ಎಣ್ಣೆ ಸೀಗೆ. ಇದರಿಂದಲೇ ಚೀನವೆಲ್ಲ ಒಂದಾಗಿದೆ. ಜಾಪಾನಿಗೆ ವಿರುದ್ಧತೆ ಜನತೆಗೆ ಸ್ವಾತಂತ್ರ್ಯ—ಇವೇ ಎರಡು ತತ್ವಗಳನ್ನೆ ಚೀನಾ ಸರಕಾರವು ಇದಿರಲ್ಲಿಟ್ಟಿದೆ.

ಕಿವುಡನು ಸತ್ತ ಬಳಿಕ, ಅವನ ಕಿವಿಗೆ ಮಧುರ ಸಂಗೀತವೆ? ಜನಾಂಗಸಂಘದ ಹೆಣದ ಬಳಿಗೆ ಚೀನವು ದೂರು ಕೊಂಡೊಯ್ಯುವುದೆ? ಜೀವದಿಂದಿದ್ದಾಗ ಆ ಸಂಘವು ಅಬಿಸೀನಿಯದ ದೂರಿಗೆ ಕಿವುಡಾಗಿದ್ದಿಲ್ಲವೆ? ಇಷ್ಟರಲ್ಲೆ ಅಬಿಸೀನಿಯದ ವಾರ್ಷಿಕ ಶ್ರಾದ್ಧಕ್ಕೂ ಅಲ್ಲಿ ಸಿದ್ಧವಾಗಿದೆ. ಅದರಲ್ಲೂ ದೂರೇನೆಂದು? ಪ್ರತ್ಯಕ್ಷ ಕುರುಡರಿಗೂ ಕಾಣುವ ನಿಷ್ಕಾರಣವಾದ ಅಭಿಯೋಗಕ್ಕಾಗಿ, ಯಾರೊಡನೆ ದೂರಿಡುವುದು ಅಗತ್ಯ! ಆದರೂ, ಬರೀ ಕಳೇಬರದ ಸನ್ನಿಧಾನದಲ್ಲಿಯೆ? ಅಥವಾ ಲೀಗು ಏನನ್ನೆ ಹೇಳಬಹುದಾದರೂ, ಕೇಳುವುದಕ್ಕೆ ಜಾಪಾನು ಸಿದ್ಧವೆ? ಹಿಂದೆ 1932ರಲ್ಲಿ ಲೀಗು ಜಾಪಾನು ಮಂಚೂರಿಯದಲ್ಲಿ ಅಭಿಯೋಗಮಾಡಿದ ವ್ಯಭಿಚಾರ ಕ್ರಮವನ್ನು ಖಂಡಿಸಿದ ಒಕ್ಕಣೆ ಲೀಗಿನ ರಿಕಾರ್ಡಿನಲ್ಲಿಯೇ ಇದೆ ಇಷ್ಟೆಯೆ? ಲೀಗು ಈ ಚೀನದ ದೂರನ್ನು ಆಲಿಸಿ ಅದನ್ನು ವಿಚಾರಿಸತೊಡಗಿದರೆ, ಚೀನದ ಆಯುಷ್ಯ ಸೌಭಾಗ್ಯಗಳು ತೀರುವಂತಿವೆ. ವಿಚಾರಣೆಯಲ್ಲಿ ಪಕ್ಷ ಪ್ರತಿಪಕ್ಷದಳ ವಾಕ್ಸ್ಪರ್ಧೆಯಿಂದ ತಾನೆ ಮಂಚೂರಿಯವು ಜಾಪಾನಿನ ಹೊಟ್ಟೆ ಸೇರಿತು' ಹಾಗೆಯೆ ಅಬಿಸೀನಿಯವೂ ಇಟಲಿಗೆ ಉಪವನವಾಯಿತು' ಯಾರ ಮೇಲೂ ಯಾವ ಅಧಿಕಾರವೂ ಇಲ್ಲದೆ ವಿಭ್ರಂಭಣೆಯ ಅವತಾರವಾಗಿ, ಹಳೆಯ ಗುಡಿಯ ಬಲಿಕಲ್ಲಾಗಿ ಮಾತ್ರ ಉಳಿದಿದೆ, ಈ ಲೀಗ್ ಒಫ್ ನೇಶನ್ಸ್ ಸಂಘ!

ಆದರೆ, ಚೀನಕ್ಕೆ ಸಹಾಯಕರಿಲ್ಲವೆ. ದಿಲ್ಲ ಅಮೇರಿಕೆ, ಇಂಗ್ಲೆಂಡು, ಫ್ರಾನ್ಸು, ರಷ್ಯಗಳಿವೆ, ರಷ್ಯವು ವಿಮಾನಾದಿಗಳ ಸಹಾಯ ಕಳುಹಿಸಿಯದೆ. ಜಾಪಾನಿನ ಕೈತಡೆವುದಕ್ಕೆ ಇವೆಲ್ಲ ರಾಷ್ಟ್ರಗಳು ಅರ್ಹ, ಇವುಗಳಿಗೂ ತಕ್ಕಷ್ಟು ಪ್ರಯೋಜನ ದೊರೆಯಲೂ ಅನುಕೂಲ. ಇವು ಮಾತಕ್ತಿದರೆ, ಜಾಪಾನು ನೆಲನೋಡ್ತಿ ಕಾಲ್ಕಿಟ್ಟೀತು. ವ್ಯಾಪಾರ ವಹಿವಾಟುಗಳನ್ನು ಇವು ಕಡೆದರೆ, ಜಾಪಾನು ಕಣ್ಣುಬಿಟ್ಟು ನೋಡಬೇಕಾಗುವುದು. ಆದರೆ ಯುದ್ಧಜ್ವರಪೀಡಿತ ಜಾಪಾನಿಗೆ ಈ ಧೋರಣೆಯೇ ಯುದ್ಧಮಾಡಲು ಕಲೆಗೆಡಿಸೀತು, ಆದರೆ, ಈ ಪ್ರಚಂಡ ನಾಲ್ವರೊಡನೆ ಯುದ್ಧಮಾಡಲು ಮೊದಲು ನೂರು ಸಲ ಕೈತಡೆದು, ಜ್ವರದಿಂದ ಗುಣಹೊಂದಿ ಸಮಾಧಾನಕ್ಕೆ ಬಂದು, ಮುಂದಿನ ನಡತೆ ತಿದ್ದಿಕೊಳ್ಳಲು ಸಿದ್ಧವಾದೀತು.

ಗಳಲನೇ ಸೆಕ್ಷನು

ಹಿಂದೆ ಪ್ರತಿಯೊಂದು ಕಡೆ ಈ ಸೆಕ್ಷನಿನ ಜಯಘೋಷವೇಳುತ್ತಿತ್ತು. ಕೊಂಗ್ರೆಸ್ ಪಕ್ಷದವರಿಗೆ ಇದರ ಅನುಭವ ಚೆನ್ನಾಗಿರಬೇಕು. ಜನರ ಸ್ವತಂತ್ರ ಸಂಚಾರ, ಭಾಷಣ, ಸಭೆ ಮೊದಲಾದುವನ್ನು ಬೇಕಾದಾಗ ಬೇಕಾಗುವಷ್ಟು ಅವಧಿಗೆ ನಿರ್ಬಂಧಿಸುವ ಅಸ್ತ್ರವಿದೇ. ಕೊಂಗ್ರೆಸು ಅಧಿಕಾರಕ್ಕೆ ಬರುತ್ತಲೇ, ಪೀಡಕ ಕಡೆಗಳನ್ನು ಸಡಿಲಿಸುವುದಲ್ಲ ನಿರ್ನಾಮಗೊಳಿಸಬೇಕೆಂದೇ ಕೊಂಗ್ರೆಸಿಗೆ ಮಾತಿದ್ದುದರಿಂದ, ಇನ್ನೀ ಸೆಕ್ಷನು ರದ್ದಾಗುವುದು, ಅಥವಾ ಇದ್ದೂ ಉಪಯೋಗಕ್ಕೆ ಬಾರದು ಎಂದು ನಂಬಿಕೆಯಾಗಿತ್ತು. ಆದರೆ, ಇದು ಈಗ ಮದ್ರಾಸಿನಲ್ಲೇ ಜ್ಯಾರಿಯಲ್ಲಿದೆ, ಅಲ್ಲಿ ಕೆಲವರು ಪುಂಡರು ಇನ್ನಿತರರನ್ನು ಹಿಂಸಿಸುತ್ತಲೇ ಇರುವ ಕೇರಿಗಳುಂಟು, ಅಲ್ಲಿ ಅನ್ಯಾಯಗಳಾಗಬಹುದಾಗಿ ಎಣಿಸಲೂ ಕಾರಣವುಂಟು. ಅದಕ್ಕಾಗಿ ಈ ಸೆಕ್ಷನಿನ ಪ್ರಯೋಗಕ್ಕೂ ಕಾರಣವುಂಟು. ಇದರಿಂದ ಈ ವಾರದಲ್ಲಿ ಜೈನರದೊಂದು ಮೆರವಣಿಗೆ ಮನ್ನಾ ಆಗಿದೆ. ಮೆರವಣಿಗೆಗಳ ಪ್ರಯೋಜನಾದಿಗಳನ್ನು ಕುರಿತು ಚರ್ಚಿಸಿ ಫಲವಿಲ್ಲ. ಎಂದಿನಿಂದಲೂ ಮೆರವಣಿಗೆಯಾಗಿ ಹೋಗುವ ಹಕ್ಕು ಉಳ್ಳವರಿಗೆ ಇದು ಮನೋವ್ಯಥೆಗೆ ಕಾರಣವಾಗಿದೆ. ಮೆರವಣಿಗೆಯಿಂದೇನು? ಧರ್ಮವನ್ನು ಆಚರಿಸುವ ಜ್ಞಾನಿಗಳಿಗೆ ಏಕಾಂತತೆ ಶ್ರೇಯಸ್ಕರವೆಂದರೂ ಅಡ್ಡಿಯಿಲ್ಲ, ಹಾಗೆಯೆ ಮಂತ್ರಿಗಳಿಗೆ ಭೋಜನಾದಿಗಳು, ಅಭಿವಂದನಾ ಸಭೆಗಳು, ಧ್ವಜವಂದನಾ ಸಮಾರಂಭಗಳು ಈ ತತ್ವದಲ್ಲಿ ಮತವಣಿಗೆಗಳ ತರಗತಿಗೇ ಸೇರುತ್ತವೆ. ಇವೆಲ್ಲವೂ ನಮ್ಮ ಜನತೆಯ ಹಕ್ಕುಗಳು. ಈ ಹಕ್ಕುಗಳನ್ನು ನಾವು ಬಳಸಲಾರೆವಾದರೆ ಮತಿಗೆ ತಾಪವುಂಟಾಗುವುದು.

ಕಾನೂನುಕ್ರಮಗಳಹೆಸರಲ್ಲಿ ಈ ಸೆಕ್ಷನಿಗೆ ಹಿಂದೆ ಮಹತ್ವವಿತ್ತು. ಯಾವುದನ್ನು ಎಲ್ಲಿ ಅಟಕಾಯಿಸಬೇಕೋ ಅಲ್ಲಿ ನ್ಯಾಯಪ್ರಕಾರವಾಗಿ ಅಟಕಾಯಿಸುವುದಕ್ಕೆ ಈ ಸೆಕ್ಷನು ಸದ್ವ್ಯವಹಾರವಾಗಿತ್ತು. ಶಾಂತಿಗೆ ಭಂಗವುಂಟಾದೀತೆಂದು ತಿಳಿಯಬಹುದಾಗಿ ನೆನೆಸಲು ಅನುಕೂಲವುಂಟಾಗುವುದೆಂದು ರಿಪೋರ್ಟು ತಲಪುತ್ತಲೆ, ಈ ಸೆಕ್ಷನು ಡಂಗುರ ಮೂಲಕವಾದ ಗರ್ಜನೆಯಿಂದ ಶಾಂತಿಸ್ಥಾಪನೆ ಮಾಡುವುದಾಗಿ ನಂಬಿಕೆ ಇತ್ತು ಆದರೆ, ಶಾಂತಿಭಂಗಮಾಡುವವರಿಗೆ ತಡೆಹಾಕಬೇಕೆಂಬ ಕಾರಣದಿಂದ ಹುಟ್ಟಿದ ಈ ಸೆಕ್ಷನು, ಶಾಂತವಾಗಿರುವವರಿಗೂ ತಡೆಹಾಕುತ್ತಿದ್ದುದೇ ವಿಶೇಷ ಧ್ವಜವಂದನೆಮಾಡುವ ಶಾಂತಕೊಂಗ್ರೆಸಿನವರಿಗೆ ಪೀಡಕರಾಗಿ ಕೆಲವರು ಪುಂಡರು ಬರಬಹುದೆಂಬುದಕ್ಕೆ, ಈ ಸೆಕ್ಷನನ್ನು ಸಾರಿ, ಧ್ವಜವಂದನೆಯ ಶಾಂತಿಯೇ ಹಾಳಾಗಿ ಹೋಗಿಲ್ಲವೆ? ಹಾಗೆಯೆ ಮೆರವಣಿಗೆ ಹೊರಡಿಸುವ ಹಕ್ಕುಳ್ಳವರಿಗೆ ಇನ್ಯಾರಾದರೂ ಬಾಧೆಕೊಡಬಹುದಾದಲ್ಲಿ, ಅವರನ್ನು ತಡೆಯುತಕ್ಕುದೇ 'ಕಾನೂನು ಕ್ರಮವಾಗಬೇಕಲ್ಲದೆ, ಮೆರವಣಿಗೆಯೇ ಕೂಡದೆಂದು ಈ ಸೆಕ್ಷನು ತಡೆಹಾಕಿದರೆ, ಯಾವ ಭವಿಷ್ಯಕಂಟಕವನ್ನು ನಿವಾರಿಸಿದಂತಾಯಿತು, ಅಥವಾ ಜನತೆಯ ಯಾವ ಹಕ್ಕನ್ನು ನಿರ್ಬಾಧಿಕವಾಗಿ ಕಾಪಾಡಿದಂತಾಯಿತು? ಇಷ್ಟೆ ಸಾಮಾನ್ಯರ ತಲೆಯಲ್ಲಿ ಹುಟ್ಟುವ ಭಾವನೆಗಳು

ಹಿಂದಿಯಿಂದ ತಮಿಳು ಕೆಟ್ಟೀತು

ಮುಂದೆ ಹೋಗಬೇಕನ್ನುವವರಿಗೆ ಹಿಂದಿಯೊಂದಿದ್ದರೆ, ಅವರು ಹಿಂದುಮುಂದು ನೋಡಿ ಎಂದು ಬೇಕೋ ಅಂದು ಎತ್ತೆತ್ತಲೂ ಈ ದೇಶದಲ್ಲಿ ಸುಖವಾಗಿರಬಹುದೆಂದು ಕೊಂಗ್ರೆಸಿನ ತತ್ವ, ಮದ್ರಾಸು ಮಂತ್ರಿಗಳ ಆಸೆ, ಅದಕ್ಕಾಗಿ ಸದ್ಯದಲ್ಲೆ ಮಾಧ್ಯಮಿಕ ಮೂರು ತರಗತಿಗಳಲ್ಲಿ ಹಿಂದೀ ಶಿಕ್ಷಣವಾಗಲೇ ಬೇಕೆಂದು ಶಾಸನ ಮಾಡುವ ಸೂಚನೆ ಮಾತೃಭಾಷೆಗಳ ಪ್ರಾಮುಖ್ಯತೆ ಕುಂದಬಾರದು, ಇಂಗ್ಲಿಷು ಬೇಕು, ಸಂಸ್ಕೃತವಿರದೆ ಸಂಸ್ಕೃತಿ ಲೋಪ ಹಿಂದೀಯಂತೂ ಅವಶ್ಯಕ—ಇದೇ ಈಗ ಶಿಕ್ಷಣ ಸುಧಾರಣೆಗಾಗಿ ಮಾಡುವ ಪೇಚಾಟದ ಪ್ರಥಮಫಲ. ಮಗು ಹಿಂದಿ ಕಲಿತರೆ, ಮನೆ ತುಂಬ ಹಿಂದಿ ಹರಡುವುದು. ಅಜ್ಜಂದಿರಿಗೂ ಹಿಂದಿ ಬಂದೀತು ನಾಳಿನ ಮಾತೆಯರು ಸಂತಾನಕ್ಕೆಲ್ಲ ಹಿಂದಿ ಓದಿಸಿ, ಬೇಬಿಗಳ ಸಾಮ್ರಾಜ್ಯದಲ್ಲಿ ಹಿಂದೀ ಭಾಷೆ, ಹಿಂದೀ ಬಂಧುಗಳನ್ನು ಕಲ್ಪಿಸಿಕೊಟ್ಟಾರು. ಕೋಟಿ ರೂಪಾಯಿಗಳ ಪರಿಶ್ರಮದಿಂದ ನೂರು ವರ್ಷಗಳಲ್ಲಾಗಬಹುದಾದ ಪರಿಣಾಮವು ಇಷ್ಟರಲ್ಲಿ ಹತ್ತು ವರ್ಷಗಳಲ್ಲೇ ಕೈಗೂಡುವುದು ಎಂದು ಸೂಚಿತವೂ ಆಗಿದೆ ಆದರೆ ಮದ್ರಾಸಿನಲ್ಲಿ ಗೊಂದಲವೆದ್ದಿದೆ ಮಂತ್ರಿ ಸರಕಾರ ಹೇಳುವುದನ್ನೆ ಸರಿಯೆಂದು ನಂಬಿಯೂ ತಿಳಿಯದೆಯೂ ಅಭಿವಂದಿಸುವ ಒಂದು ತರಗತಿಯ ಜನವಿದ್ದೇ ಇದೆ ವಿರುದ್ಧವಾಗಿರುವವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವದರಲ್ಲಿ ತಪ್ಪಿಲ್ಲವಷ್ಟೆ. ವಿದ್ಯಾವಂತರ ಮಾತಿರಲಿ ಅವರಲ್ಲಿ ಯಾವಾಗಲೂ ಎರಡು ಪಕ್ಷವಿಲ್ಲದಿದ್ದಲ್ಲ ಅವರು ವಿದ್ಯಾವಂತರಾಗರು. ಮುಖ್ಯವಾಗಿ ಬ್ರಹ್ಮನ ಬಾಯಿಂದ ಸರಸ್ವತಿಯನ್ನು ಕರೆದ ತಮಿಳು ಉಚ್ಚಾರಗಳು ಇನ್ನು ಮರೆತು ಹೋಗಬಹುದೇನೋ! ತಮಿಳೆಂದರೆ ವೇದಗಳ ಮೊದಲೇ ಸುಸಂಸ್ಕೃತವಾದ ಭಾಷೆ. ಅದರದೊಂದು ಶಬ್ದಕೋಶ ರಚಿಸಲು ಮದ್ರಾಸು ಯುನಿವರ್ಸಿಟಿಗೆ ಲಕ್ಷಾಂತರ ರೂಪಾಯಿ ವೆಚ್ಚವಾಗಿದೆ, ಇನ್ನೂ ಮುಗಿದಿಲ್ಲ. ಹಿಂದಿ ಈ ಸಮಾಜದಲ್ಲಿ ನುಗ್ಗಿದರೆ ತಮಿಳರ ಭಾಷಾ ಪ್ರೇಮಕ್ಕೆ ಲಾಂಛನ, ಹಾನಿ, ಇತ್ಯಾದಿಯಾಗಿ ಅಣ್ಣಮಲೈ ಯುನಿವರ್ಸಿಟಿಯ ತಮಿಳು ಪ್ರೊಫೆಸರರೇ ದೂರಿಟ್ಟಿರುವರು. ಮುಖ್ಯವಾಗಿ, ನಾಳೆಗೆ ಹಿಂದಿಯಲ್ಲಿ ಕೆಲಸ ಸುಲಭವೆಂದೂ, ತಮಿಳನಾಲಗೆಯ ತಿಕ್ಕಾಟಕ್ಕೂ ಹಾನಿಯಿದೆ ಎಂದೂ ತಿಳಿಯಬೇಕು. ಅಂತೂ ಹಿಂದಿಯನ್ನು ಶಾಲೆಗಳೊಳಗೆ ಆಮದುಮಾಡಲೇ ಬಾರದು. ಬೇಕಾದವರು ಕಲಿತುಕೊಳ್ಳಬಹುದು, ಹಿಂದಿಗಾಗಿ ತಮಿಳನ್ನು ಯಾತೂ ಕೈಬಿಡಬಾರದು, ಎಂದು ಬೋಧಿಸಲಾಯಿತು.

ದಿವ್ಯ ಕಸಾಯಿಖಾನೆ

ಯೊಂದನ್ನು ಸೈನಿಕರ ಆಹಾರವನ್ನು ಒದಗಿಸುವುದಕ್ಕಾಗಿ ಸರಕಾರವು ಲಾಹೋರಿನ ಬಳಿ ಕಟ್ಟಿಸುವುದೆಂದು ತಿಳಿದೇ ಅತ್ತಲೂ ಎತ್ತೆತ್ತಲೂ ಆಕ್ಷೇಪ ಸೂಚಕವಾದ ಹಾಹಾಕಾರ ಉಂಟಾಗಿದೆ. ದಿನಕ್ಕೆ ಎಂಬತ್ತು ಜಾನುವಾರುಗಳೇ ನೋ ಬೇಕಾಗುತ್ತವೆಂದೂ ತಿಳಿಸಲಾಗಿದೆ. ಈ ಹೊಸ ಏರ್ಪಾಡಿನಿಂದ ವಾರ್ಷಿಕವಾಗಿ ಒಂದು ಸಾವಿರ ಜಾನುವಾರುಗಳು ಕಡಮೆ ಬಲಿಕೊಟ್ಟು ಸೈನ್ಯದ ಹೊಟ್ಟೆಗೆ ತಣಿಯುವುದಾಗಿಯೂ ವಿಶ್ವಾಸವಿದೆ. ಹಣ್ಣು, ಹೂ, ಹಾಲುಗಳನ್ನು ಚಳಿಚಳಿಯಾಗಿಟ್ಟು ಒಯ್ದರೆ ಅವು ಹಾಳಾಗುವುದಿಲ್ಲ, ಅದರಂತೆ, ಮಾಂಸ. ಅದಕ್ಕಾಗಿ ಈ ಹೊಸ ರವಾನಾಕ್ರಮವೂ ಜ್ಯಾರಿಗೆ ಬರುವುದಕ್ಕೆ ಇದು ಉತ್ತಮ ಸಂದರ್ಭವೆಂದೂ ಸೂಚಿತವಾಗಿದೆ ಹಣ್ಣು, ಹೂ, ಹಾಲುಗಳು ಮಾತಾಡಲಾರವು ಹಸುಗಳು ಮಾತಾಡುವುದಿಲ್ಲವಾದರೂ ಕೂಗಿಡಬಲ್ಲವು. ಇವುಗಳು ಎಂದಾದರೂ ಒಂದು ಉಸಿರು ಮಾತಾಡಬಹುದಾದರೆ, 'ಮನುಷ್ಯರ ಬಾಯಿಂದ ನಮ್ಮನ್ನು ಳಿಸಿ' ಎಂದೇ ಒಮ್ಮೆಗೆ ಕೂಗಿಟ್ಟು ಮೌನವಾದಾವು ಅತಿ ನಿಂಬಯಾಸವಾಗಿ ನೋವು ಕಡಮೆಯಾಗಿ ಶಾಸ್ತ್ರೀಯರೀತ್ಯಾ ಕೊಲ್ಲುವುದಾದರೂ, ಪ್ರಾಣಿಯೊಂದು ಸಾಯುವುದು ಬಹಳ ಸುಧಾರಿತ ಕ್ರಮದ ಗೃಹಸ್ಥವಳಿಗೆಯಿಂದ ಯಮಬಾಧೆ ಕೊಡದೆ ಯಮನಿಗೊಪ್ಪಿಸುವ, ಮಾರಿಹಬ್ಬಕ್ಕೂ ಈ ಉದ್ಯಮಕ್ಕೂ ಬಹಳ ಭೇದವಿಲ್ಲೆನೂ ಕಾಣದ ಲಕ್ಷಾಂತರ ಜನರು ಸರಕಾರಕ್ಕೆ ಬಿನ್ನವಿಸಿಕೊಂಡಿದ್ದಾರೆ ಇದ್ದಕ್ಕೆ ಕೆಲಸದಾಳುಗಳು ಕೆಲಸಮಾಡದೆ ಹೋದುದರಿಂದ, ಖಾನೆಯ ಕೆಲಸ ಕೊನೆ ಮುಟ್ಟಿಲ್ಲ ಅಷ್ಟೆ. ಭಾರತ ವರ್ಷದಲ್ಲಿರುವಷ್ಟು ದನಗಳು ಮತ್ತೆಲ್ಲಿಯೂ ಇಲ್ಲ, ಅವನ್ನು ನೇಕಡಾ ೩ರಂತೆ ವಾರ್ಷಿಕವಾಗಿ ಕಡಮೆ ಮಾಡಿದರೂ ಹಾನಿಯಿಲ್ಲ; ಅವನ್ನು ಉತ್ತಮ ಮಾಂಸ ಕೊಡುವಂತೆ ಬೆಳೆಸುವುದಕ್ಕೆ ಜನರು ಕಲಿತರೆ ಹಣವುಂಟು; ಇತ್ಯಾದಿ ಈ ಖಾನೆಯ ಪ್ರತ್ಯಕ್ಷ ಅಪ್ರತ್ಯಕ್ಷ ಪ್ರಯೋಜನಗಳನ್ನು ಈಗ ಪ್ರಕಟಿಸಲಾಗಿದೆ.

ಜೈಲುಗಳ ಸುಧಾರಣೆ

ಜೈಲುಗಳನ್ನು ಬಂಧೀಖಾನೆಯೆಂದೇ ಕರೆಯುತ್ತಿದ್ದರೆ ಸರಿಯೇನೋ! ಖಾನೆಗಳಲ್ಲಿ ಇದೂ ಒಂದು ಕಸಾಯಿಖಾನೆಗೆ ಎಬೆಟ್ವಾಯ್ರ್ ಎಂಬ ಹೆಸರಿದ್ದಂತೆ, ಬಂದೀಖಾನೆಗೂ ಜೈಲು ಎಂಬ ಹೆಸರಿದೆ. ಅರ್ಥ ಅಷ್ಟೆ ಶೋಕಕಾರಕ. ಜೈಲುಗಳ ಸುಧಾರಣೆಯಾಗಬೇಕಾದರೆ, ಈಗ ಜೈಲಿನ ಅಧಿಕಾರಿಗಳಾಗಿರುವರು ಒಮ್ಮೆಗೆ ಇತರ ಇಲಾಖೆಗಳಲ್ಲಿ ಕೆಲಸಮಾಡುವಂತಾಗಬೇಕು ಇವರನ್ನು ಸೈನ್ಯಗಳಿಗೆ ಕಳಿಸಿದರೆ ಸರಿಹೋಗುವುದು ಇಂದಿನಿಂದಲೂ ಕಟ್ಟಿತಂದ ಪರಂಪರೆಯ ಆಡಳಿತ ಕ್ರಮವನ್ನು ಇವರು ಎಷ್ಟೆಂದರೂ ತಿದ್ದಿಕೊಳ್ಳಲು ಕಷ್ಟವೆಂದೇ ಎಂತಹ ಹೊಸ ಕ್ರಮಗಳನ್ನು ರೂಢಿಗೆ ತರಬೇಕಾದರೂ ಸಾಧ್ಯವಾಗದು. ಬಡ ರೋಗೀ ಬಂಧುಗಳನ್ನು ಯೋಗ್ಯ ಉಪಚಾರ ಪೂರ್ವಕ ಶ್ರದ್ಧೆಯಿಂದ ಗುಣಪಡಿಸಿ, ಅವರ ಕ್ಷೇಮಕ್ಕಾಗಿ ಕಾಳಜಿತೆಯುಳ್ಳಂತಹರನ್ನೆ ಈ ಇಲಾಖೆಗೆ ವರ್ಗಾಯಿಸಿದರೆ ಉತ್ತಮ ಮುಖ್ಯಮಂತ್ರಿಗಳೂ ಮಂತ್ರಿಗಳೂ ಅಲ್ಲಲ್ಲಿ ಮಾಜಿ ಕೈದಿಗಳಾಗಿ ಅಧಿಕಾರ ನೋಡುತ್ತಿರುವಾಗ, ಜೈಲುಗಳನ್ನು ಸರಿಗೊಳಿಸಲು ಇತರರ ಸೂಚನೆಗಳೇಕೆ? ಬಂದೀವಾಸ ಅನುಭವಿಸಿದವರನ್ನೆ ಜೈಲಿನ ಆಡಳಿತಕ್ಕೆ ನೇಮಿಸಿದರೆ ಚೆನ್ನಾಗುವುದೆಂಬ ಅಭಿಪ್ರಾಯವಿದೆ.

ಕಾಂಗ್ರೆಸು ಬಲವಂತವಾಗಬೇಕಾದರೆ ಏನಾಗಬೇಕು.

ಅಧಿಕಾರ ಸ್ವೀಕಾರ. ಮಹಾತ್ಮಾಜಿಯವರ ಅರ್ಥ.

ಅಧಿಕಾರ ಸ್ವೀಕಾರದ ತಮ್ಮ ಅರ್ಥವನ್ನು ಕೂಲಂಕಷವಾಗಿ ವಿವರಿಸಬೇಕಾಗಿ ಶ್ರೀ। ಶಂಕರರಾವ್ ದೇವರವರು ಮಹಾತ್ಮಾಜಿಯವರೊಡನೆ ವಿನಂತಿಮಾಡಿಕೊಳ್ಳಲು ಅವರು ಈ ಕೆಳಗಿನ ಅಭಿಪ್ರಾಯಗಳನ್ನೊಳಗೊಂಡ, ಅಗ್ರಲೇಖವನ್ನು ಕಳೆದವಾರದ ಹರಿಜನ ಪತ್ರಿಕೆಗಳಲ್ಲಿ ಬರೆದಿರುವರು

ಹಿಂಸೆಗೆ ಅಹಿಂಸೆ,

ಹಿಂದೂದೇಶವು ಬ್ರಿಟಿಷ್ ಪ್ರಭುತ್ವಕ್ಕೆ ಒಳಗಾಗಿರುವುದು ಒಂದು ಶಾಪವು ಎಂಬ ಅಭಿಪ್ರಾಯವನ್ನು ೧೯೨೦ರಿಂದ ಕಾಂಗ್ರೆಸ್ ಮನೋಭಾವವುಳ್ಳ ಮಿಲಿಯಗಟ್ಟಲೆ ಜನರು ಹೊಂದಿರುವರು ಬ್ರಿಟಿಷ್ ಯುದ್ಧಪಡೆಗಳಿಂದ, ಶಾಸನಸಭೆಗಳ ಮೂಲಕ [illegible] ಹಂಚುವಿಕೆಯಿಂದ, ನ್ಯಾಯಸ್ಥಾನಗಳು, ವಿದ್ಯಾಸಂಸ್ಥೆಗಳು, ಆರ್ಥಿಕ ಧೋರಣೆ, ಇತ್ಯಾದಿಗಳ ಮೂಲಕ ಈ ಶಾಪದ ಪುಷ್ಟೀಕರಣವು ನಡೆದಿರುತ್ತದೆ ಕೋಟಿಗಳಿಗೆ ಬೆದರಬಾರದಾಗಿ ಕಾಂಗ್ರೆಸು ಸಂಕಲ್ಪಮಾಡಿಕೊಂಡಿತು ಮೇಲಿನ ತರದ ವ್ಯವಸ್ಥಿತ ಹಿಂಸೆಯನ್ನು, ವ್ಯವಸ್ಥೆಗೊಂಡಿದ ಅಹಿಂಸೆಯಿಂದಲೂ ಶಾಸನಭಂಗದ ಮೂಲಕವೂ ಸತ್ಯಾಗ್ರಹ ಮೂಲಕವೂ ಎದುರಿಸಬೇಕಾಗಿ ಅದು ನಿರ್ಣಯಿಸಿತು ಈ ಯೋಜನೆಗೆ ಆಶ್ಚರ್ಯಕರ ರೂಪವು ಇದ್ದು, ಅದೇ ನಮ್ಮ ರಚನಾತ್ಮಕ ಕಾರ್ಯಕ್ರಮವಾಯಿತು. ೧೯೨೦ರಲ್ಲಿ ನಿಯಮಿಸಿದ ಕಾರ್ಯಕ್ರಮದ ಮಟ್ಟಿಗೆ ನಮ್ಮ ರಾಷ್ಟ್ರವು ವಿಫಲಯಾಯಿತು

"ಈ ಧೋರಣೆಯಲ್ಲಿ ಬದಲಾವಣೆ ಇಲ್ಲ

ನಮ್ಮ ಅಂದಿನ ಈ ಧೋರಣೆಯು ಬದಲಾಗಲಿಲ್ಲ ಅದರ ತರ್ಕಗಳೂ ಕೂಡ ಕಾಂಗ್ರೆಸಿನಿಂದ ಬದಲಾಗಲಿಲ್ಲ ನಂತರ ಜರುಗಿದ ಘಟನೆಗಳು ೧೯೨೦ರ ಮನೋಭಾವವನ್ನು ದೃಢೀಕರಿಸಿರುವುವು.

ನಮ್ಮ ಆಡಳಿತದಾರರು ಮತಾಂತರ ಹೊಂದಬೇಕು

ಇಂಗ್ಲೀಷರ ಆಳಿಕೆಯು ೧೯೨೦ರ ಧೋರಣೆಯ ಆಡಿಕಟ್ಟು, ಬ್ರಿಟಿಷ ಪ್ರಭುತ್ವ ಶಾಪಪ್ರವೃತ್ತ, ನಿರ್ದಯಾತ್ಮಕವು, ಆದರೆ ಅವುಗಳ ಹಿಂದಿರುವ ಜನರು, ಆ ತರದವರಲ್ಲ ನಮ್ಮ ಆಳಿಕೆಗಾರರನ್ನು ಮತಾಂತರಗೊಳಿಸುವ ಕಾರ್ಯದಲ್ಲಿ ಅಹಿಂಸಾಧಾರಿಗಳಾಗಿ, ನಾವು ತೊಡಗಿದ್ದೇವೆ. ಅವರ ನಾಶವು ನಮ್ಮ ಉದ್ದೇಶವಲ್ಲ, ಅವರಿಗೆ ಸಮಸ್ಥಾನ ಇರಲಿ ಇಲ್ಲದಿರಲಿ, ಅವರನ್ನು ಮತಾಂತರಗೊಳಿಸುವುದೇ ನಮ್ಮ ಧ್ಯೇಯವು ಆದರೂ ಅವರಿಗೆ ಆ ಕುರಿತು ವಿರೋಧಭಾಸವಿದ್ದಾಗ್ಯೂ, ಅವರ ಅಧಿಕಾರದ ಆಧಾರಕ್ಕಾಗಿ ನಿರ್ಮಿಸಿದ ಕೋಟೆ ಇತ್ಯಾದಿಗಳನ್ನು ಉಪಯೋಗದವುಗಳಲ್ಲವೆಂದು ನಾವು ಮಾಡಿಬಿಟ್ಟರೆ, ಆಗ ಅವರು ಒಂದೆ ನಮಗೆ ಬಗ್ಗಬೇಕಾಗುವುದು, ಇಲ್ಲದಿದ್ದಲ್ಲಿ ಕಾರ್ಯರಂಗವನ್ನು ತೊರೆದು ನಡೆಯಬೇಕಾಗುವುದು ಅಥವಾ ನಮ್ಮೊಡನೆ ನಮ್ಮ ಒಡೆಯರಾಗಿರುವ ಬದಲು ನಮ್ಮೊಡನೆ ಸಹಕರಿಸುವ ಸ್ನೇಹಿತರಾಗಿರಬೇಕಾಗಿರುವುದು

ಕಾಂಗ್ರೆಸು ಬಲವಂತವಾಗಬೇಕಾದರೆ ಏನಾಗಬೇಕು?

ಈ ಮನೋಭಾವನೆಯಿಂದ ಕಾಂಗ್ರೆಸ್ಸು ಶಾಸನ ಸಭೆಗಳನ್ನು ಸೇರಿರುವದಾದರೆ, ಬ್ರಿಟಿಷ್ ಆಡಳಿತದಾರರು ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಬಹಳ ಕಾಲ ಸಹಿಸುವದಾದರೆ, ಆಗ ನೂತನ ಇಂಡಿಯಾ ಆಕ್ಟನ್ನು ನಾಶಪಡಿಸುವುದರಲ್ಲಿ, ಸಂಪೂರ್ಣ ಸ್ವಾತಂತ್ರ್ಯಸಾಧನೆಯಲ್ಲಿ ಕಾಂಗ್ರೆಸ್ ಬಹಳವಾಗಿ ಮುಂದುವರಿದಂತಾಗುವುದು, ನಾನು ನಮೂದಿಸಿದ ಶರತುಗಳನ್ನು ಹೊಂದಿಕೊಂಡು, ಕಾಂಗ್ರೆಸ್ ದೀರ್ಘಕಾಲ ಅಧಿಕಾರದಲ್ಲಿರುವುದರಿಂದ ಕಾಂಗ್ರೆಸಿನ ಬಲಾಭಿವೃದ್ಧಿಯಾಗಿ, ಅದು ಅವಿರೋಧಿತವಾಗಿ, ಅದಕ್ಕೆ ತನ್ನ ಧ್ಯೇಯಸಾಧನೆಯು ಸಾಧ್ಯವಾಗುವುದು, ಈ ತರದ ಫಲವು ದೊರೆಕಬೇಕಾದರೆ ಸಮಸ್ತ ಭಾರಿ ಜನರು ಅಹಿಂಸಾವಾದಿಗಳಾಗಬೇಕು, ಅಂದರೆ ಕೋಮುಗಳಲ್ಲಿ ಅತ್ಯಂತ ಐಕ್ಯದ ಸ್ನೇಹವು ಇರಬೇಕು, ಅಸ್ಪೃಶ್ಯತಾ ನಿವಾರಣೆಯಾಗಬೇಕು, ಮದ್ಯ ನಿಷೇಧವಾಗಬೇಕು, ಅಫೀಮು ಇತ್ಯಾದಿ ಅಮಲುಕರ ಪದಾರ್ಥಗಳ ಸೇವನೆಯೂ ನಿಲ್ಲಬೇಕು, ಸ್ತ್ರೀಯರಿಗೆ ಸಮಾಜದಲ್ಲಿ ಯೋಗ್ಯ ಸ್ಥಾನ ದೊರಕಬೇಕು, ಹಿಂದೂದೇಶದ ಮಿಲಿಯಗಟ್ಟಲೆ ಶ್ರಮಜೀವಿಗಳ ಉದ್ಧಾರವಾಗಬೇಕು ಧರ್ಮಾರ್ಥ ಮತ್ತು ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ನಡೆಯಬೇಕು ವಿದ್ಯಾವಂತರನ್ನು ಶಿಕ್ಷಿತರಾಗಿ ಮಾಡಿ, ಅವರಲ್ಲಿರುವ ಅಂಧಶ್ರದ್ಧೆಗಳನ್ನು ನಾಶಗೊಳಿಸಬೇಕು ಕೆಲವೆ ಮಂದಿಗಳ ಅವಶ್ಯಕತೆಗಳನ್ನು ಒದಗಿಸುವ ಬದಲಾಗಿ ಹಿಂದೂದೇಶದ ಮಿಲಿಯಾದಿ ಜನರ ಅವಶ್ಯಗಳನ್ನು ಒದಗಿಸುವ ಉದ್ಯಮವ್ಯವಸ್ಥೆಗಳಾಗಬೇಕು ನ್ಯಾಯವು ಸರಳವಾಗುವಂತೆಯೂ ಸುಲಭವಾಗಿ ದೊರೆಯುವಂತೆ ನ್ಯಾಯವ್ಯವಸ್ಥೆ ಮಾರ್ಪಾಟು, ಜೈಲುಗಳನ್ನು ಸುಧಾರಣಾಗೃಹಗಳನ್ನಾಗಿ ಮಾಡುವುದು, ಅಲ್ಲಿ ತಪ್ಪಿತಕ್ಕೆ ಶಿಕ್ಷೆ ಒದಗಿಸುವ ಬದಲು ತಪ್ಪಿತರನ್ನು ಶಿಕ್ಷಿತಗೊಳಿಸಬೇಕು

ನನ್ನಲ್ಲಿ ಸಂಕಲ್ಪವಿದ್ದರೆ ಮೇಲೆ ಸೂಚಿಸಿದ ಪ್ರತಿಯೊಂದು ಇಸಮುಗಳನ್ನೂ ಯಾವ ಅಡ್ಡಂತರಗಳಿಲ್ಲದೆ ಕಾರ್ಯರೂಪಕ್ಕೆ ತರಬಹುದು

ನೂತನ ಇಂಡಿಯಾ ಆಕ್ಟು

ಅಧಿಕಾರ ಸ್ವೀಕರಿಸಬೇಕೆಂದು ಯೋಚಿಸಿದಾಗ ನೂತನ ಇಂಡಿಯಾ ಆಕ್ಟನ್ನು ನಾನು ಓದಲಿಲ್ಲ ಅಂದಿನಿಂದ ಪ್ರೊ। ಕೆ ಟಿ ಷಾ ಬರೆದ ಪ್ರಾಂತಿಕ ಆಟೋನೊಮಿ ಎಂಬ ಗ್ರಂಥವನ್ನು ಕಲಿಯುತ್ತಿದ್ದೇನೆ ಅದು ನೂತನ ಇಂಡಿಯಾ ಆಕ್ಟಿನ ಕುರಿತು ತೀಕ್ಷ್ಣವಾದ ವಿಮರ್ಶೆಯಾಗಿರುತ್ತದೆ ಆ ಆಕ್ಟಿನಲ್ಲಿರುವ ಲೋಪಗಳು ಸ್ಪಷ್ಟವಾಗಿ ವಿವರಿಸಲಾಗಿದೆ ಆದರೆ ಕಾಂಗ್ರೆಸ್ಸಿನ ಮೂಲತಂತ್ರದ ಪರಿಣಾಮದಿಂದ ಸಮಸ್ತ ವಾತಾವರಣವು ಬದಲಾವಣೆಯಾಗುತ್ತದೆ ನಾನು ಸೂಚಿಸಿದ ಕಾರ್ಯಕ್ರಮಗಳನ್ನು ಕೈಗೊಂಡು ಅವುಗಳನ್ನು ನಡೆಸಲು, ನೂತನ ಆಕ್ಟಿನಲ್ಲಿ ಅಡ್ಡಂತರಗಳೇನೂ ತೋರುವುದಿಲ್ಲ ದೇಶದಲ್ಲಿ ಹಿಂಸೆಯಿಲ್ಲವಾದರೆ ಮಾತ್ರ ನೂತನ ಆಕ್ಟಿನ ವಿಶೇಷ ಅಧಿಕಾರಗಳೂ ಸೇಫ್ ಗಾರ್ಡುಗಳು ಉಪಯೋಗಕ್ಕೆ ಬರುವವು ಅಥವಾ ಅಲ್ಪಸಂಖ್ಯಾತರೂ ಅಧಿಕ ಸಂಖ್ಯಾತ ಕೋಮುಗಳಿಗೆ ಕಿತ್ತಾಟವುಂಟಾದ ಸಂಭವದಲ್ಲಿ—ಇದು ಹಿಂಸೆಗೆ ಇನ್ನೊಂದು ಶಬ್ದವು

ಹಿಂದೂದೇಶದಲ್ಲಿ ತನ್ನ ಆಡಳಿತವನ್ನು ನಡೆಸುವ ಯೋಗ್ಯತೆಯೂ ಇಲ್ಲವೆಂಬ ಆಪಾದನೆಯೂ ಬ್ರಿಟಿಷ ಆಳ್ವಿಕೆಯನ್ನು ಸ್ಥಿರಗೊಳಿಸುವ ಯತ್ನವೂ ಈ ಆಕ್ಟಿನ ಪ್ರತಿಯೊಂದು ಕಡೆಯಲ್ಲಿ ಕಾಣಿಸುತ್ತದೆ ಅಲ್ಲದೆ ಹಿಂದೀಯ ಮಹಾಜನಗಳನ್ನು ಬ್ರಿಟಿಷರ ಕಡೆಗೆ ಒಲಿಸುವ ಮಹಾ ಶೋಧನೆಯೇ ಈ ಇಂಡಿಯಾ ಆಕ್ಟು ಪರಿಶೋಧನೆಯು ಫಲಹೊಂದದಿದ್ದರೆ ಬ್ರಿಟಿಷ ಪ್ರಭುತ್ವವನ್ನು ಅವರು ತೊರೆದುಬಿಟ್ಟರೆ ಬಿಡಲಿ ಎಂಬ ಭಾವವು ಅದರಲ್ಲಿ ಕಾಣಿಸುತ್ತಿರುವುದು ಈ ತರದ ಮಹಾ ಪ್ರಕಾರವನ್ನು ಮತಾಂತರಗೊಳಿಸಲು ಕಾಂಗ್ರೆಸ್ಸು ತೊಡಗಿರುತ್ತದೆ ಕಾಂಗ್ರೆಸ್ ಅಹಿಂಸಾಧರ್ಮ, ಸತ್ಯಾಗ್ರಹ ನೀತಿ ಅತ್ಯಮೂಲ್ಯ ಅವುಗಳಿಗೆ ಸರಿಯಾಗಿ ನಡೆಸಿದರೆ ಅದು ತಾನು ಹಿಡಿದ ಕಾರ್ಯದಲ್ಲಿ ವಿಜಯಿಯಾಗುವುದರಲ್ಲಿ ಸಂದೇಹವಿಲ್ಲ

ಪಂಜಾಬಿನಲ್ಲಿ ಜೋಯಿಂಟ್ ಮತದಾರರ ಪಟ್ಟಿ.

ಪಂಜಾಬಿನಲ್ಲಿ ಜೋಯಿಂಟ್ ಮತದಾರ ಪಟ್ಟಿಯನ್ನು ರೂಢಿಗೆ ತರುವ ಕುರಿತು, ಶ್ರೀ। ಸತ್ಯಮೂರ್ತಿಯವರೂ ಶ್ರೀ। ಭುಲಾಭಾಯಿ ದೇಸಾಯಿಯವರೂ ಅಲ್ಲಿನ ಪ್ರಧಾನ ಮಂತ್ರಿ ಸಿಕಂದರ್ ಹಯಾತ್ ಖಾನರೊಡನೆ ವಿಚಾರಿಸಿದರಾಗಿ, ಆ ಕುರಿತು ಸಮಾಧಾನವುಂಟಾಗಿರುವುದಾಗಿ ತಿಳಿದುಬರುತ್ತದೆ,

ಇನ್ನೊಂದು ಕಾಂಗ್ರೆಸ್ ಪ್ರಾಂತ್ಯ

ಗಡಿನಾಡಿನ ಪ್ರಾಂತ್ಯದಲ್ಲಿ ಪ್ರಾರಂಭದಲ್ಲಿ ರಚನೆಯಾದ ಮಂತ್ರಿಮಂಡಳದ ಮೇಲೆ ಅಧಿಕ ಸದಸ್ಯರ ಅವಿಶ್ವಾಸ ಠರಾವು ಬಂದು, ಆ ಮಂತ್ರಿ ಮಂಡಳವು ರದ್ದಾಗಿ ಡಾ। ಖಾನ್ ಸಾಹೇಬರ ನಾಯಕತ್ವದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳದ ರಚನೆಯಾಗಿರುವುದು, ಇತರ ಮಂತ್ರಿಗಳ ಆರಿಸುವಿಕೆಯೂ ನಡೆದಿರುತ್ತದೆ. ಈ ಬಗ್ಗೆ [illegible] ಬಹಳ ಪರಿತೃಪ್ತಿಪಟ್ಟಿರುವರು.

ಹಿಂದೀಯು ಕಡ್ಡಾಯವಾಗಿ ಬೋಧಿಸಲಾಗುವುದು.

ಶಿಕ್ಷಣಾ ಪ್ರವೀಣರ ಪರಿಷತ್ತು

ಇದೇ ಸಪ್ಟಂಬರ ತಾ ೫ರಲ್ಲಿ ಮದ್ರಾಸಿನಲ್ಲಿ ಪ್ರಧಾನಮಂತ್ರಿ ಮಾನ್ಯ ರಾಜಗೋಪಾಲಾಚಾರ್ಯರ ಅಧ್ಯಕ್ಷತನದಲ್ಲಿ ಹಿಂದೀ ಪ್ರಚಾರಕಟ್ಟಡದಲ್ಲಿ ಜರಗಿತು. ಅಲ್ಲಿ, ಶಿಕ್ಷಣ ಸುಧಾರಣೆಯ ಕುರಿತಾಗಿ ಯೋಜನೆಗಳನ್ನು ಕಲ್ಪಿಸುವ ಕುರಿತು ವಿಚಾರಮಾಡಲಾಯಿತು, ಶಾಲಾ ಸಮಯದಲ್ಲಿ ಬದಲಾವಣೆ, ಫೋರ್ಸ್ಟ್ ಫಾರ್ಮಿನ ಅವಧಿಯಲ್ಲಿ ಹಿಂದೀಯನ್ನು ಬೋಧಿಸುವುದು, ಶಿಕ್ಷಣವು ಮಾತೃಭಾಷೆಯಲ್ಲೇ ನಡೆಯುವಂತೆ ಮಾಡುವುದು ಇವೇ ಮೊದಲಾದ ಶಿಕ್ಷಣದ ಸುಧಾರಣೆಗಳ ಕುರಿತು ಆಲೋಚಿಸಲಾಯಿತು. ಅನೇಕ ಶಾಲಾ ಉಪಾಧ್ಯಾಯರು, ಕಾಲೇಜು ಪ್ರೊಫೆಸರು ಮತ್ತಿತರ ಶಿಕ್ಷಣಪ್ರವೀಣರು ಅಂದು ನೆರೆದಿದ್ದರು

"ಶಿಕ್ಷಣವನ್ನು ಒಳ್ಳೇ ರೀತಿಯಲ್ಲಿ ವ್ಯವಸ್ಥೆಗೊಳಿಸುವುದು ಒಂದು ಪ್ರಾಮುಖ್ಯ ವಿಷಯವು ಹಿಂದೂದೇಶದ ವಿವಿಧ ಭಾಷೆ ಇತ್ಯಾದಿ ಸಮಸ್ಯೆಗಳಿಂದ ಅದೊಂದು ಮಹಾ ಸಮಸ್ಯೆಯಾಗಿರುವುದು. ಈ ಪರಿಷತ್ತಿನಲ್ಲಿ ಈ ವಿಚಾರಗಳನ್ನು ಪರಿಶೀಲಿಸಬೇಕಲ್ಲದೆ ಆ ಕುರಿತ ಕಾರ್ಯವು ಮುಂದೆ ಸಾಗಿಸಲು ಸಾಧ್ಯವಿಲ್ಲ ಕಾರಣ ಸುಧಾರಣೆಗಳನ್ನು ಒಮ್ಮೆಲೇ ಕೈಗೊಳ್ಳಲು ಸಾಧ್ಯವಿಲ್ಲ ಕ್ರಮಕ್ರಮೇಣವಾಗಿ ಅವುಗಳನ್ನು ನಾವು ನಡೆಯಿಸಬೇಕು" ಎಂಬುದಾಗಿ ಪ್ರಧಾನ ಮಂತ್ರಿಗಳು ತಮ್ಮ ಪ್ರಾರಂಭ ಭಾಷಣದಲ್ಲಿ ತಿಳಿಸಿದರು.

ನಂತರ ಸೂಚನೆಗಳನ್ನು ಸೂಚಿಸಿ ಅನೇಕರು ಭಾಷಣಮಾಡಿದರು. ಶಾಲಾ ಸಮಯದ ಬದಲಾವಣೆ, ಶಿಕ್ಷಣವು ಮಾತೃಭಾಷೆಯಲ್ಲಿಯೇ ನಡೆಯುವ ವಿಚಾರ, ಹಿಂದೀ ಬೋಧನೆ ಇತ್ಯಾದಿಗಳ ಕುರಿತು ಅನೇಕ ಸೂಚನೆಗಳಾದುವು ಈ ಕಲ್ಪನೆಗಳನ್ನು ಕಾರ್ಯರೂಪಕ್ಕೆ ತರಲು ವಿಚಾರವನ್ನು ಸರಿಯಾಗಿ ಆಲೋಚಿಸಬೇಕು. ಬಹಳ ಹಿಂದಿನ ಕಾಲದಿಂದ ರೂಢಿಯಲ್ಲಿರುವ ಕ್ರಮವನ್ನು ಒಮ್ಮೆಲೆ ಬದಲಾಯಿಸುವುದು ಅಸಾಧ್ಯ ಆದರೆ ಸುಧಾರಣೆಗಳ ಪ್ರಾರಂಭವು ಒಂದು ಕಡೆಯಿಂದ ಪ್ರಾರಂಭವಾಗಬೇಕು ಎಲ್ಲಾ ಕಾಲೇಜುಗಳೂ ಶಾಲೆಗಳೂ ವಿವಿಧ ಭಾಷೆಗಳನ್ನು ಕಲಿಸಿ, ಆ ಕುರಿತು ಇರುವ ಅವಶ್ಯಕತೆಗಳನ್ನು ಪೂರೈಸಬಹುದು. ಸ್ಥಳೀಯ ಸಂಸ್ಥೆಗಳಿಗೆ ಸರಿಯಾದ ರೀತಿಯಲ್ಲಿ ಶಾಲಾ ಸಮಯವನ್ನು ಬದಲಾಯಿಸಬಹುದು ಮನೆಯಲ್ಲಿ ತಂಟೆಕೊಡುವ ಮಕ್ಕಳ ಬಾಧೆಯಿಂದ ತಾಯಿಗಳು [illegible] ಶಾಲೆಗಳ ಕುರಿತು [illegible] ಅಭಿಪ್ರಾಯವು ಇರಬಹುದು [illegible] ಮಕ್ಕಳ ಶಿಕ್ಷಣಕ್ಕೆ ಉತ್ತಮ ಸ್ಥಳವು [illegible] ಮಾತ್ರವಲ್ಲದೆ [illegible] ಸ್ಥಳೀಯ ಅವಶ್ಯಗಳಿಗೆ ಸರಿಯಾದ ರೀತಿಯಲ್ಲಿಯಿರುವುದಿಲ್ಲ ಅದರಿಂದ ಅಲ್ಲಲ್ಲಿನ ಅವಶ್ಯಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣದ ವ್ಯವಸ್ಥೆಯಾಗಬೇಕು. ಮಾತೃಭಾಷೆಗೆ ಶಿಕ್ಷಣದಲ್ಲಿ ಪ್ರಾಮುಖ್ಯ ಸ್ಥಾನವು ದೊರಕಬೇಕು. ಹಿಂದೀಗೆ ಉಪಸ್ಥಳವು ದೊರಕಬೇಕು ಆಂಗ್ಲೇಯ ಭಾಷೆಯು ಅಷ್ಟು ಮಹತ್ತರವಾದ ವಿಷಯವಲ್ಲ ಪ್ರವೀಣರನ್ನು [illegible] ಫಸ್ಟ್ ಸೆಕೆಂಡ್ ಥರ್ಡ್ ಫಾರಮುಗಳಲ್ಲಿ ಹಿಂದೀಯು ಬೋಧಿಸಲಾಗಬೇಕೆಂಬ ನಿರ್ಣಯಕ್ಕೆ ಬಂದಿರುವೆನು ಶಿಕ್ಷಣದಲ್ಲಿ ಎಲ್ಲಾ ಹಂತಗಳಲ್ಲಿ ಮಾತೃಭಾಷೆಗೇ ಪ್ರಾಮುಖ್ಯತೆಯು ದೊರಕಬೇಕು. ಸಂಸ್ಕೃತಿ ಬೆಳೆಯುವ ಇತರ ಭಾಷೆಗಳನ್ನು ಕಲಿಯುವ ಉಚ್ಚ ತರಗತಿಗಳಲ್ಲಿ ಅವಕಾಶ ದೊರಕಬೇಕು" ಎಂಬುದಾಗಿ ಪ್ರಧಾನ ಮಂತ್ರಿವರ್ಯರು ಸಭಾಕಾರ್ಯವನ್ನು ಅಂತ್ಯಗೊಳಿಸುವ ತಮ್ಮ ಭಾಷಣದಲ್ಲಿ ತಿಳಿಸಿದರು

ಅಂಡಮಾನದ ಕೈದಿಗಳು

ಹಿಂಸಾತ್ಮಕ ಚಟುವಟಿಕೆಗಳನ್ನು ನಡೆಯಿಸಿ ಅಂಡಮಾನಗಳನ್ನು ಸೇರಿದ ರಾಜಕೀಯ ಕೈದಿಗಳು ಈಗ ಹಿಂಸಾತ್ಮಕ ಕ್ರಮಗಳನ್ನು ನಿಂದಿಸುವುದರಿಂದ ಅವರ ಬಿಡುಗಡೆಯ ಕುರಿತು ಆಲೋಚಿಸಲು ಬಂಗಾಳ ಪ್ರಧಾನ ಮಂತ್ರಿಗಳಿಗೆ ಮಹಾತ್ಮಾಜಿಯವರು ತಂತಿ ಕಳುಹಿಸಿದರ ಪರಿಣಾಮವಾಗಿಯೂ, ಅಂಡಮಾನದ ಕೈದಿಗಳು ಹೂಡಿದ ಮುಷ್ಕರವನ್ನು ನಿಲ್ಲಿಸಿದುದರಿಂದಲೂ, ಬಂಗಾಳ ಮಂತ್ರಿವರ್ಗದ ಗವರ್ನರರು ಅಧ್ಯಕ್ಷತನದಲ್ಲಿ ಸೇರಿ ಆ ಕುರಿತು ಏನು ಮಾಡಬೇಕೆಂಬುದಾಗಿ ಆಲೋಚಿಸುವದಾಗಿಯೂ ಆ ಬಗ್ಗೆ ಎಲ್ಲಾ ಪಕ್ಷದ ನಾಯಕರ ಪರಿಷತ್ತು ಒಂದು ಬೇಗನೆ ಸೇರುವುದಾಗಿ ತಿಳಿದುಬರುತ್ತದೆ.

ಕರ್ನಾಟಕದ ಶಾಸನಪುರುಷರಿಗೆ ಸತ್ಕಾರ.

ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತ್ಯವಾಗಿ ರಚನೆಯಾಗಬೇಕೆಂದು ಕೌನ್ಸಿಲಿನ ಅಧ್ಯಕ್ಷ ಡಾ। ಯು ರಾಮರಾಯರು, ಪೊನ್ನೆ ಮುಂಬಯಿನ ಕರ್ನಾಟಕ ಮಿತ್ರ ಮಂಡಳಿಯ ಆಶ್ರಯದಲ್ಲಿ ಜರಗಿದ ಸತ್ಕಾರಕೂಟದಲ್ಲಿ ಮಾಡಿದ ಭಾಷಣದಲ್ಲಿ ಸೂಚಿಸಿದರು. ಅಲ್ಲದೆ, ಕನ್ನಡಿಗರ ಯೋಗ್ಯತೆಗಳನ್ನು ಹೊಗಳಿದರು. ಶ್ರೀಯುತ ಕಾರಂತರು, ಕರ್ನಾಟಕದ ವಿಷಯ ಕೆಲವು ಮಾತುಗಳನ್ನಾಡಿ ಕೋಮುವಾರು ಬೇಧವು ನಾಶವಾಗಬೇಕೆಂದು ಹೇಳಿದರು ಹೀಗೆ ಹಲವು ಮಹನೀಯರು ಭಾಷಣ ಮಾಡಿದ ತರುವಾಯ ಸಭೆಯು ವಿಸರ್ಜನೆಯಾಯಿತು.

ಮದ್ಯನಿಷೇಧ.

ಸೇಲಂ ಜಿಲ್ಲೆಯಲ್ಲಿ ಮದ್ಯನಿಷೇಧವು ಸದ್ಯದಲ್ಲೇ ಜಾರಿಗೆ ಬರುವುದು ಆ ಕುರಿತು ಅಲ್ಲಿ ಎಲ್ಲಾ ಸಿದ್ಧತೆಗಳಾಗುತ್ತಿವೆ ಸೇಲಂ ಜಿಲ್ಲೆಯು ಮೈಸೂರಿನ ಬೆಂಗಳೂರು ಜಿಲ್ಲೆಯ ಹತ್ತಿರವಿರುವುದರಿಂದ, ಮೈಸೂರು ಸಂಸ್ಥಾನವು ಮದ್ಯನಿಷೇಧವನ್ನು ಕೈಗೊಳ್ಳುವಂತೆ ಮದರಾಸು ಸರಕಾರವು ಅದರೊಡನೆ ಪತ್ರವ್ಯವಹಾರ ಮಾಡಿರುತ್ತದೆ ಮೈಸೂರು ಆ ಕುರಿತು ಮದ್ರಾಸು ಸರಕಾರದೊಡನೆ ಸಹಕರಿಸಲು ಸಿದ್ಧವಿರುವುದಾಗಿ ತಿಳಿದು ಬರುತ್ತದೆ

ಕಲ್ಕತ್ತೆಯ ಕೆಲಸಗಾರರ ನಿರ್ಣಯ.

ಕಲ್ಕತ್ತೆಯಲ್ಲಿ ೩೦,೦೦೦ ಮಂದಿ ಕೆಲಸಗಾರರು ಸಭೆಕೂಡಿ ತಮಗೆ ಮುಷ್ಕರವನ್ನು ನಿಲ್ಲಿಸುವರೆ ತಮ್ಮ ಕೋರಿಕೆಗಳನ್ನು ಪೂರೈಸಲಾಗುವದೆಂಬುದಾಗಿ ದೊರೆತ ಪ್ರಧಾನ ಮಂತ್ರಿಗಳ ವಾಗ್ದಾನವು ನಡೆಯುವಂತೆ ಸರಕಾರದೊಡನೆ ಕೋರಬೇಕಾಗಿ ನಿರ್ಣಯಮಾಡಲಾಯಿತು.

ಮಹಾತ್ಮಾಜಿಯವರ ದೇಹಾಲಸ್ಯ

ಇಂದಿಗೆ ಬಹಳ ದಿವಸಗಳಿಂದ ಮದ್ಯನಿಷೇಧ ಶಿಕ್ಷಣ ಸುಧಾರಣೆ ಇತ್ಯಾದಿಗಳ ಕುರಿತು ತರ್ಕ ಬರವಣಿಗೆ ಇತ್ಯಾದಿಗಳನ್ನು ಮಾಡುತ್ತಿದ್ದ ಮಹಾತ್ಮಾಜಿಯವರು ದೇಹಾಲಸ್ಯವನ್ನು ಹೊಂದಿರುವರಾಗಿಯೂ ಅವರು ಸ್ವಸ್ಥಚಿತ್ತರಾಗಿ ಬೇಗನೆ ಗುಣಹೊಂದುವಂತೆ ಇನ್ನು ಕೆಲವು ದಿವಸಗಳ ವರೆಗೆ ಅವರೊಡನೆ ಯಾರೂ ಪತ್ರವ್ಯವಹಾರ ನಡೆಯಿಸಬಾರದಾಗಿಯೂ ಅವರ ಭೇಟಿಗೆ ಯಾರೂ ಬರಬಾರದಾಗಿಯೂ ಶ್ರೀ। ಜಮ್ನಾಲಾಲರ ಪ್ರಕಟನೆಯಾಗಿರುತ್ತದೆ

ಚೀನಾ ಜಪಾನ್ ಸಮರ

ಈ ಯುದ್ಧವು ದೀರ್ಘಕಾಲ ನಡೆಯಬಹುದೆಂಬ ಊಹೆಯು ಜಪಾನಿನ ಸರಕಾರಕ್ಕೆ ಇದ್ದಂತೆ ಕಾಣುತ್ತದೆ ದೀರ್ಘಕಾಲದ ಯುದ್ಧದ ಧನವ್ಯಯದಿಂದ ಸೈನಿಕರು ಶಕ್ತಿಹೀನರಾಗದಂತೆ ಜಪಾನೀಯ ಸರಕಾರವು ಸರ್ವ ಸಿದ್ಧತೆಗಳನ್ನು ಮಾಡುವುದರಲ್ಲಿ ಉದ್ಯುಕ್ತವಾಗಿರುತ್ತದೆ ಸೈನಿಕರು ಸರಿಯಾಗಿ ಕಾದಾಡಬೇಕಾದರೆ ಅವರ ಹೊಟ್ಟೆಗೆ ಸರಿಯಾಗಿ ಬೀಳಬೇಕು ಎಂಬುದನ್ನು ಜಪಾನೀಯ ಸರಕಾರವು ತಿಳಿದೇ ದೇಶದ ಎಲ್ಲಾ ಕೈಗಾರಿಕೆ ಮತ್ತು ಸಾಂಪತ್ತಿಕ ಅಂಗಗಳನ್ನು ಯುದ್ಧ ಅವಶ್ಯಗಳಿಗೆ ಒಪ್ಪಿಸಿಬಿಟ್ಟಿದೆ. ಜಪಾನಿನ ಸಾಂಪತ್ತಿಕ ಸ್ಥಿತಿಯು ಶಾಂತ ಸಮಯದಲ್ಲೂ ನೆಟ್ಟಗಿರುವುದಿಲ್ಲ ಈಗ ಅವಸ್ಥೆಯು ಏನಾಗುವುದೋ ಎಂಬ ಭೀತಿ ಕೆಲವರಲ್ಲುಂಟಾಗಿದೆ ಇದೆ ಕಾರಣದಿಂದ ಚೀನಿಯರಿಗೆ ವಿರೋಧವಾಗಿ ಪ್ರಜೆಗಳೆಲ್ಲರೂ ಐಕ್ಯ ಹೊಂದುವಂತೆ ವಿನಂತಿ ಮಾಡಿಕೊಳ್ಳಲು ಚಕ್ರವರ್ತಿಯರೆ ಮುಂದೆ ಬಂದಿರುವರು ಯುದ್ಧರಂಗಗಳಲ್ಲಿ ಈಗಿನ ಸಮರವು ನಡೆಯುತ್ತಿದೆ ಜಪಾನಿನ ಅಧೀನದಲ್ಲಿರುವ ಮಂಚೂರಿಯ ಸೈನ್ಯಮಂಡಳವು ಅವರನ್ನು ಕೈಬಿಡುವುದಾಗಿ ಒಂದು ವಾರ್ತೆಯಿದೆ ಅಂದರೆ ಜಪಾನೀಯರ ಕುರಿತು ಅಲ್ಲಿಯೂ ಅಸಮಾಧಾನವುಂಟಾಗಿರುವುದೆಂದೂ ಈ ಯುದ್ಧದಲ್ಲಿ ಜಪಾನೀಯರು ತಮ್ಮದೇ ಸೈನಿಕರ ಮೇಲೆ ಹೊಂದಿಕೊಂಡಿರಬೇಕಾಗುವುದೆಂದು ಮೇಲಿನ ಸಂಗತಿಯಿಂದ ವ್ಯಕ್ತವಾಗುತ್ತದೆ ಮಂಚೂರಿಯದಲ್ಲಿ ಕರಬೇಕಾಗಿರುವ ಸೈನ್ಯದಿಂದ ಅವರಿಗೆ ಎಳ್ಳಷ್ಟರೂ ಫಲ ದೊರೆಯದಂತೆ ಸೋವಿಯಟ್ ಸರಕಾರವು ಚೀನಿಯರಿಗೆ ಬೇಕಾದ ಯುದ್ಧ ಶಸ್ತ್ರಗಳನ್ನು ಸಿಡಿಮದ್ದನ್ನೂ ವಿಮಾನಗಳನ್ನೂ ಒದಗಿಸುವುದರಿಂದ ಯುದ್ಧವು ದೀರ್ಘಕಾಲ ಬೆಳೆ, ಜಪಾನೀಯರ ಕ್ರಮಗಳು ವ್ಯರ್ಥವಾಗಬಹುದಂತೆ.

WANTED an experienced accountant, knowing both English and Canarese. Apply with testimonials & minimum pay required to- Srinivas Ranga Pai, Car Street, Mangalore.

...ಸಂಖ್ಯಾದ ಜನರನ್ನು ಹಸಿವಿನಿಂದ ರಕ್ಷಿಸಲು, ...ನೀರಾವರಿಯು ಅತ್ಯಗತ್ಯವು. ಅದರಲ್ಲಿ ದೇಶ ...ಶವು ನೀರಿರುವುದು.

ಹಿಂದೂದೇಶದಲ್ಲಿ ನೀರಾವರಿಗೆ ಒಳಗಾದ ಪ್ರದೇಶವು ನೀರಾವರಿ ವಿಚಾರದಲ್ಲಿ ಹಿಂದೂ ದೇಶದ ನಂತರ ಬರುವ ೬ ದೇಶಗಳ ಒಟ್ಟು ಪ್ರದೇಶದಷ್ಟಿದೆ. ಈ ೬ ದೇಶಗಳಲ್ಲಿ ಅಮೇರಿಕದ ಸಂಯುಕ್ತ ರಾಷ್ಟ್ರಗಳು ಕೂಡಿವೆ. ೭೫,೦೦೦ ಮೈಲು ನೀರು ಕಾಲುವೆಗಳಿವೆ ೪೦ ಮಿಲಿಯ ಎಕ್ರೆ ಭೂಪ್ರದೇಶಕ್ಕೆ ಅವುಗಳಿಂದ ನೀರು ದೊರಕುತ್ತದೆ. ೫೦ ಮಿಲಿಯ ಜನರಿಗೆ ಉದ್ಯೋಗ ದೊರಕಿಸುತ್ತದೆ

ಈ ಮಟ್ಟಿನಲ್ಲಿ ಮಾತ್ರವಲ್ಲದೆ, ನೀರಾವರಿ ಯೋಜನೆಗಳಲ್ಲೂ ಹಿಂದೂದೇಶವು ಮಹಾ ಪ್ರಶಸ್ತಿಯನ್ನು ಪಡೆದಿದೆ. ಜಗತ್ತಿನಲ್ಲಿ ಅತ್ಯಂತ ಮಹತ್ತಾದ ನೀರಾವರಿ ಯೋಜನೆಗಳನ್ನು ಅದು ಕೈಕೊಂಡು ನಡೆಯಿಸಿಬಿಟ್ಟಿದೆ ಅವುಗಳಲ್ಲಿ ಅತಿ ಮಹತ್ತಾದುದೆಂದರೆ, ಸಿಂಧಪ್ರಾಂತ್ಯದ ಸಕ್ಕೂರ್ ಬೆರೇಜ್ (ಅಣೆಕಟ್ಟು) ಯೋಜನೆಯು ಹೀಗೆ ಮಹತ್ತಾದ ಯೋಜನೆಗಳು ಅನೇಕವುಗಳು ಹಿಂದೂದೇಶದಲ್ಲಿರುವುದಲ್ಲದೆ, ಇನ್ನೆಷ್ಟೊ ಚಿಕ್ಕ ಯೋಜನೆಗಳಿವೆ

ಪಂಜಾಬಿನ ಚೆನಾಬ್ ಕಾಲುವೆಯಿಂದ ೫ ಮಿಲಿಯ ಎಕ್ರೆ ಭೂಪ್ರದೇಶಕ್ಕೆ ನೀರು ದೊರಕುತ್ತದೆ. ಸಾಧಾರಣ ೧ ಮಿಲಿಯ ಎಕ್ರೆಗಿಂತ ಕಡಿಮೆಯಾಗದ ಭೂಪ್ರದೇಶಕ್ಕೆ ನೀರು ಒದಗಿಸುವ ಆರು ಯೋಜನೆಗಳಿವೆ ಸಟ್ಲೆಜ್ ಕಣಿವೆಯಲಿನ ನೀರಾವರಿ ಯೋಜನೆಯು, ಐಗುಪ್ತ ಮತ್ತು ಸುಡಾನ್ ದೇಶಗಳಲ್ಲಿರುವ ಒಟ್ಟು ಭೂಪ್ರದೇಶಕ್ಕೆ ಆಗುವಷ್ಟು ನೀರನ್ನು ಒದಗಿಸುತ್ತದು ಅಧರಂತೆಯೇ ಸಂಯುಕ್ತ ಪ್ರಾಂತ್ಯದ ಶಾರ್ದಾ ಕಾಲುವೆಯು.

ಸಕ್ಕರ್ ಅಣೆಕಟ್ಟು ಯೋಜನೆಯಿಂದ ಒಟ್ಟು ೬,೫೦೦ ಮೈಲು ನೀರಿನ ಕಾಲುವೆಗಳು ದೊರೆಯುತ್ತವೆ ಕಾವೇರಿ ನೀರಾವರಿ ಯೋಜನೆಯಿಂದ ೫,೪೦೦ ಮೈಲು ನೀರಿನ ಕಾಲುವೆಗಳು ದೊರೆಯುತ್ತವೆ ೪,೦೦೦ ಮೈಲು ಉದ್ದದ ಕಾಲುವೆಗಳಿರುವ ಇನ್ನು ೪ ಯೋಜನೆಗಳಿವೆ

ಹಿಂದೂದೇಶದಲ್ಲಿ ನಾರ್ತಾರ್ಣಂದವೆನಿಸುವ ಅನೇಕ ಅಣೆಕಟ್ಟುಗಳಿವೆ ಮುಂಬಾಯಿ ಪ್ರಾಂತ್ಯದ ಬಾಟಗ್ಹಾರ್ ಎಂಬಲ್ಲಿರುವ ಲ್ಯಾಡ್ ಅಣೆಕಟ್ಟಿನಲ್ಲಿ ೫೧ ಮಿಲಿಯ ಘನ ಅಡಿಗಳು ಕಲ್ಲುಕಟ್ಟಣೆಯು ಇರುವುದು ಈ ವಿಚಾರದಲ್ಲಿ ಅದು ಅತಿ ಪ್ರಖ್ಯಾತವಾದ ಐಗುಪ್ತದ ಅಸ್ಸೋನ್ ಅಣೆಕಟ್ಟನ್ನು ಹಿಮ್ಮೆಟ್ಟಿಸಿದೆ ಲ್ಯಾಡ್ ಅಣೆಕಟ್ಟು, ಅದರಗಿಂತ ೨೦೦೦ ಅಡಿ ಚಿಕ್ಕದಾದರೂ, ಅದು ಅದರಗಿಂತ ೭೦ ಅಡಿ ಎತ್ತರವಿರುವುದು ಮುಂಬಾಯಿಯ ಭಂಡಾರದರಾದಲ್ಲಿರುವ ಮಿಲ್ಸನ್ ಅಣೆಕಟ್ಟು ೧ ಮೈಲು ಉದ್ದವಿದ್ದು, ೨೭೦ ಅಡಿ ಎತ್ತರಕ್ಕೆ ಏರುತ್ತದೆ ಉದ್ದದ ಮಟ್ಟಿಗೆ ಹೈದರಾಬಾದಿನ ನಿಜಾಮುಸಾಗರ ಅಣೆಕಟ್ಟು ಅತಿ ಪ್ರಖ್ಯಾತವೂ, ಕಲ್ಲುಕಟ್ಟಣೆ ಮಟ್ಟಿಗೆ ಮದ್ರಾಸಿನ ಮೆಟ್ಟೂರು ಅಣೆಕಟ್ಟು ಪ್ರಖ್ಯಾತವಾದುದು ನಿಜಾಮುಸಾಗರ ಅಣೆಕಟ್ಟಿನ ಉದ್ದವು ೧೬,೦೦೦ ಅಡಿಗಳೂ, ಅಂದರೆ ಸಾಧಾರಣ ಮೂರು ಮೈಲುಗಳು. ಮೆಟ್ಟೂರಿನ ಅಣೆಕಟ್ಟಿನಲ್ಲಿ ಸಾಧಾರಣ ೫೪,೭೦೦೦೦೦ ಘನ ಅಡಿ ಕಲ್ಲುಕಟ್ಟಣೆಯು ಇರುವುದು

ಈ ಮಹತ್ತಾದ ಅಣೆಕಟ್ಟುಗಳಲ್ಲಿ ಅನೇಕ ವಿಶಿಷ್ಟತೆಗಳಿವೆ ಸಂಯುಕ್ತ ಪ್ರಾಂತ್ಯಗಳ ಗಂಗಾಕಾಲುವೆಯು, ೪೦೦೦ ಮೈಲು ಉದ್ದವಿದ್ದು, ಸೆಕುಂಡು ಒಂದರ ೪೫೪೦ ಘನ ಅಡಿ ನೀರನ್ನು ಸುರಿಸಿ, ೫ ಮಿಲಿಯ ಎಕ್ರೆ ಭೂಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ. ಇದರ ಒಂದು ಅದ್ಭುತ ಕಾರ್ಯವೆ ಆಗಿರುತ್ತದೆ,

ಮದ್ರಾಸಿನ ಪೆರಿಯಾರು ಅಣೆಕಟ್ಟು ಹೊಸ-ಬಗೆದ್ದು. ಇದನ್ನು ನಿರ್ಮಿಸಲು ಮಹಾ ಕಷ್ಟಗಳನ್ನು ಅನುಭವಿಸಬೇಕಾಯಿತು ಪಶ್ಚಿಮ ಘಟ್ಟಗಳಿಂದ ಹಿಂದೂಸಾಗರಕ್ಕೆ ಇಳಿಯುತ್ತಿರುವ ಈ ನದಿಯು, ಬಂಗಾಳಕೊಲ್ಲಿಯಲ್ಲಿ ಸುರಿಯುವಂತೆ ಮಾಡಿರುವರು ೧ ಮೈಲು ಉದ್ದವಿರುವ ಸುರಂಗದ ಮೂಲಕ ಈ ಸುರಂಗವನ್ನು ಅಖಂಡ ಬಂಡೆಯಲ್ಲಿ ಕೊರೆದಿರುವರು ಈ ಅಣೆಕಟ್ಟುಗಳಿಗಾಗಿ ತಗಲಿದ ವೆಚ್ಚದ ವಿಚಾರ. ಒಟ್ಟು ೧೫೦ ಕೋಟಿ ರೂಪಾಯಿಗಳು ವ್ಯಯಿಸಲ್ಪಟ್ಟಿವೆ ಈ ಯೋಜನೆಗಳ ದೆಸೆಯಿಂದ ಈಗ ವರ್ಷಂಪ್ರತಿ ೧೦೦ ಕೋಟಿ ರೂಪಾಯಿಗಳ ಬೆಳೆಗಳನ್ನು ಬೆಳೆಯಿಸುತ್ತಿದ್ದಾರೆ ಅದರಿಂದ ಸರಕಾರದ ಉತ್ಪನ್ನವು ೧೩ ಕೋಟಿ ರೂಗಳು ಅವುಗಳ ಆರೈಕೆಗೆ ಖರ್ಚು ೫ ಕೋಟಿ ರೂಗಳು ಇವುಗಳನ್ನು ಕಳೆದು ವರ್ಷಂಪ್ರತಿ ೮ ಕೋಟಿ ರೂಪಾಯಿಗಳ ಉಳಿತಾಯವು ಆಗುತ್ತದೆ ಅಂದರೆ ವ್ಯಯಿಸಿದ ಹಣಕ್ಕೆ ಸೇಕಡಾ ೫ ಸಲಿ ಬಡ್ಡಿ ದೊರಕಿದಂತಾಗುತ್ತದೆ.

ಜರ್ಮನಿಯಲ್ಲಿ ಯುದ್ಧ ಶಸ್ತ್ರಸಿದ್ಧತೆಗಳು ಸ್ವಲ್ಪ ನಿಂತುಬಿಟ್ಟಿವೆ.

ಕಬ್ಬಿಣ ಮತ್ತು ಇತರ ಯುದ್ಧಶಸ್ತ್ರ ಸಿದ್ಧತೆಗೆ ಪ್ರಾಮುಖ್ಯವೆನಿಸುವ ಲೋಹಗಳು ಕಡಿಮೆಯಾಗಿ, ಜರ್ಮನಿಯ ಯುದ್ಧಶಸ್ತ್ರ, ನಾವೆ ಇತ್ಯಾದಿಗಳ ಸಿದ್ಧತೆಗೆ ಸ್ವಲ್ಪ ತಡೆ ಬಂದಿರುತ್ತದೆ ನೌಕಾ ರಚನಾಸಂಸ್ಥೆಗಳಲ್ಲಿ ಕಬ್ಬಿಣ, ಉಕ್ಕು, ತಾಮ್ರ ಇವುಗಳ ಅಭಾವದಿಂದ ಆಗಿಂದಾಗ್ಗೆ ಕೆಲಸವು ನಿಂತುಬಿಡುತ್ತದೆ ಕೆಲಸಗಾರರಿಗೆ ರಜೆಕೊಟ್ಟು, ಲೋಹಗಳು ಒದಗಿದಾಗ, ಆ ಫ್ಯಾಕ್ಟರಿಗಳು ಅವರನ್ನು ಮತ್ತೆ ಕರೆಯುತ್ತಿದ್ದಾರೆ. ಸರಕಾರಿ ನೌಕಾ ಸಂಸ್ಥೆಗೆ ಉಕ್ಕಿನ ಅಭಾವದಿಂದ, ನಿಯಮಿತ ಪಟ್ಟಿಯ ಪ್ರಕಾರ ಜಹಜುಗಳನ್ನು ನಿರ್ಮಿಸಲು ಅಸಾಧ್ಯವೆನಿಸಿದೆ ಇದೇ ಕಾರಣದಿಂದ ಯುದ್ಧ ವಿಮಾನಗಳ ಸಿದ್ಧತೆಗೂ ಅಡ್ಡಂತರವು ಒದಗಿರುತ್ತದೆ

ಮೇಲಿನ ಸಂದರ್ಭಗಳಲ್ಲಿ ಕೆಲಸಗಾರರಿಗೆ ತಲಬಿಲ್ಲದ ರಜೆಯು ಕೊಡಲಾಗುತ್ತದೆಂದು ವದಂತಿಯಿದೆ

ಟಿಂಗ್ ಸ್ಟಿನ್ ಪರಿಶೋಧನೆ.

ಚೀನೀಯ ಗ್ರಾಮಾಭ್ಯುದಯ ಸಂಘ ಮತ್ತು ಭೂರಿಜನರ ಶಿಕ್ಷಣವ್ಯವಸ್ಥೆ, ಇವುಗಳ ಪರಿಶ್ರಮದ ಫಲವಾಗಿ ಕೈವೃತ್ತಿಯಿಂದ ಹೆಚ್ಚು ಒಡವೆಗಳು ಸಿದ್ಧವಾಗುತ್ತಿವೆ ಈ ಸಂಸ್ಥೆಯ ಶಿಕ್ಷಣಭಾಗವನ್ನು ಬಿಟ್ಟು, ಅದರ ಸಾಂಪತ್ತಿಕ ಭಾಗದ ಕುರಿತು ವಿಚಾರಿಸೋಣ ಟಿಂಗ್ ಸ್ಟಿನ್ ಎಂಬುದು ೪೭೨ ಹಳ್ಳಿಗಳಿರುವ ಒಂದು ಆದರ್ಶ ಜಿಲ್ಲೆಯು ಜನಸಂಖ್ಯೆ ೩೯೭,೨೦೦ ಇದರ ಉತ್ಪನ್ನದ ಶೇ| ೫೦ರ ಸಲಿ ಸಾಗುವಳಿಯಿಂದ ಬರಬೇಕು ೮೦ ಸಲಿ ಗ್ರಾಮಕೈಗಾರಿಕೆಗಳಿಂದ, ಹತ್ತಿಯನ್ನು ಉತ್ತಮಗೊಳಿಸುವುದು ರೋಗರಹಿತ ಶ್ರಮಗಳನ್ನು ಕಂಡುಹಿಡಿಯುವುದು ಉತ್ತಮ ಪ್ರಾಣಿವರ್ಗವನ್ನು ಬೆಳೆಸುವುದು – ಈ ಪರಿಶೋಧನೆಯ ಪ್ರಾಮುಖ್ಯ ವಿಚಾರಗಳು

'ಚೀನಿಯ ರೈತರು ತಮಗೆ ಬೇಕಾದ ಕಾರಣ ಸಾಮಾಗ್ರಿಗಳನ್ನು ತಾವೇ ಸಿದ್ಧಗೊಳಿಸುತ್ತಿದ್ದಾರೆ ಗುಡಿಕೈಗಾರಿಕೆಗಳಿಂದ ತಮ್ಮ ಆಹಾರಸಾಮಾಗ್ರಿ, ವಸ್ತ್ರ, ಉಪಕರಣ ಇತ್ಯಾದಿಗಳನ್ನು ತಮ್ಮ ಉಪಯೋಗದ ಬಗ್ಗೂ ರಫ್ತಿಗಾಗಿಯೂ ತಯಾರಿಸುತ್ತಿದ್ದಾರೆ ಮನೆಗಳ ಆವಶ್ಯಕತೆಗಳನ್ನು ಒದಗಿಸಿಕೊಡಲು ರೈತ ಕುಟುಂಬಗಳಲ್ಲಿ ಹಣವನ್ನು ಉಂಟುಮಾಡುವ ತರದಲ್ಲಿ ಗ್ರಾಮಕೈಗಾರಿಕೆಗಳ ಪುನರುತ್ಥಾನದ ಕುರಿತೂ ಪರಿಶೋಧನೆಯು ನಡೆಯಿಸಲಾಗುತ್ತದೆ ಗ್ರಾಮಕೈಕಾರಿಕೆಗಳ ಉದ್ಧಾರದಿಂದ ರೈತನ ಫಲವಿಲ್ಲದಸಮಯವನ್ನ ಫಲದಾಯಕವಾಗುವಂತೆಯೂ, ಬೆಳೆಯು ತಪ್ಪಿದ ಸಮಯದಲ್ಲಿ ಅವನಿಗೆ ಒಂದು ಆಧಾರ ಸಿಗುವಂತೆಯೂ ಮಾಡಿರುವರು ಅಲ್ಲದೆ, ಸುವ್ಯವಸ್ಥಿತ ಏರ್ಪಾಡುಗಳಿಂದ, ಗ್ರಾಮಕೈಗಾರಿಕೆಗಳ ಒಡವೆಗಳ ಮಾರಾಟ ಇತ್ಯಾದಿ ನಡೆಸಿ, ಗ್ರಾಮಕೈಗಾರಿಕೆಗಳಿಗೆ ಹಿತಸಾಧಿಸುತ್ತಿರುವರು ಟಿಂಗ್ ಸ್ಟಿನ್‌ದಲ್ಲಿನ ೬೮ ಕುಟುಂಬಗಳಲ್ಲಿ ೪೦,೦೦೦ ಜನರು ನೂಲುತ್ತಿದ್ದಾರೆ ೩೦,೦೦೦ ಜನರು ನೇಯುತ್ತಿರುವರು ಒಂದು ಪರಿಶೋಧನಾ ವರ್ಕ್‌ಶಾಪನ್ನು ತೆರೆಯುವ ವ್ಯವಸ್ಥೆ ಮಾಡಲಾಗಿದೆ ಅಲ್ಲಿ, ತಯಾರಿಸುವುದರ ಖರ್ಚು ಕಡಮೆ ಮಾಡುವ ಉಪಾಯ, ಹೆಚ್ಚಿನ ಒಡವೆಗಳನು ತಯಾರಿಸುವ ನವೀನ ವಿಧಾನಗಳೂ ನಡೆಯಿಸಲಾಗುವುದು

ಎಲ್ಲಾ ನೂತನ ಯಂತ್ರಗಳು ಕೈಬಲದಿಂದಲೇ ಚಾಲಾಗುತ್ತಿವೆ. ಸ್ಥಳೀಯ ಹತ್ತಿಯಿಂದಲೇ ನೂಲು ಬಟ್ಟೆಯನ್ನು ತಯಾರಿಸುತ್ತಿರುವರು ವರ್ಕ್‌ಶಾಪಿನಲ್ಲಿ ಎಪ್ರೆಂಟಿಸರನ್ನು ತರಬೇತುಗೊಳಿಸಿ ಅವರವರ ಹಳ್ಳಿಗಳಲ್ಲಿರುವ ಸಹಕಾರ ಸಂಘಗಳ ಕೈಕೆಳಗೆ ವರ್ಕ್‌ಶಾಪುಗಳನ್ನು ಸ್ಥಾಪಿಸುವಂತೆ ಕಳುಹಿಸಿಕೊಡುತ್ತಾರೆ ಒಟ್ಟಿನಲ್ಲಿ ಗ್ರಾಮಕೈಗಾರಿಕೆಯು ಒಳ್ಳೇ ಭಾಭದಾಯಕ ತರದಲ್ಲಿ ನಡೆಯಿಸುವ ಕ್ರಮಗಳನ್ನು ರೂಢಿಗೆ ತರುವುದು ಈ ಪರಿಶೋಧನೆಯ ಮುಖ್ಯ ಉದ್ದೇಶವಾಗಿರುತ್ತದೆ ಅಲ್ಲದೆ, ಪರಸ್ಪರ ಸಹಾಯದ ಬಗ್ಗೆ ಸಹಕಾರ ಸಂಘದ ಏರ್ಪಾಡುಗಳಾಗಿವೆ ಎಲ್ಲಾ ಪಡಕೊಳ್ಳುವಿಕೆಗಳೂ ಮಾರಾಟವೂ ಸಹಕಾರ ಸೂತ್ರದಲಿ ನಡೆಯುತ್ತದೆ ಅಲ್ಲದೆ, ಗ್ರಾಮಕೈಗಾರಿಕೆಗಳ ಉದ್ಧಾರದ ಬಗ್ಗೆ ಪ್ರಚಾರನಡೆಸಲು ರೈತರದೇ ಒಂದು ಸಂಘವಿರುವುದು

ಟಿಂಗ್‌ಸ್ಟಿನ್ ಪರಿಶೋಧನೆಯ ಆರೋಗ್ಯ ವಿಭಾಗ

ಈ ಪರಿಶೋಧನೆಯ ಆರೋಗ್ಯ ವಿಭಾಗವು ನಡೆಯಿಸಿದ ಸರ್ವೆ ಪ್ರಕಾರ (೧೯೩೨ರಲ್ಲಿ) ಈ ಜಿಲ್ಲೆಯಲ್ಲಿ ಸಾಯುತ್ತಿರುವ ಶೇ| ೩೦ ಸಲಿ ಜನರಿಗೆ ವೈದ್ಯಕೀಯ ಸಹಾಯವು ದೊರಕುತ್ತಿರಲಿಲ್ಲ, ಒಟ್ಟುಇದ್ದ ೪೭೨ ಹಳ್ಳಿಗಳಲ್ಲಿ ೩೨೦ ಹಳ್ಳಿ ಯಾವತ್ತೂ ತರದ ವೈದ್ಯಕೀಯ ಏರ್ಪಾಡುಗಳೇ ಇರಲಿಲ್ಲ ಉಳಿದ ಹಳ್ಳಿಗಳಲ್ಲಿ ಸಾಧಾರಣ ತರದ ತಮ್ಮದೇ ಔಷಧಿಗಳನ್ನು ಮಾರಾಟ ಮಾಡುತ್ತಿರುವ ವೈದ್ಯರು ಒಬ್ಬೊಬ್ಬರು ಇದ್ದರು ಆದರೆ, ಈಗಿನ ಏರ್ಪಾಡಿನ ಪ್ರಕಾರ ಮೂರು ಬಗೆಯ ಆರೋಗ್ಯ ಸೇವಾ ಸೌಕರ್ಯಗಳು ಉಂಟಾಗಿವೆ ಗ್ರಾಮ ಆರೋಗ್ಯ ಕೆಲಸಗಾರ, ಸಬ್ ಡಿಸ್ಟ್ರಿಕ್ಟ್ ಆರೋಗ್ಯ ಕ್ಷೇತ್ರ, ಜಿಲ್ಲಾ ಆರೋಗ್ಯ ಕೇಂದ್ರ

ಹಳ್ಳಿ ಆರೋಗ್ಯ ಕೆಲಸಗಾರರನ್ನು ಅಲ್ಲಿನ ಹಿರಿಯವರ ಶಿಪಾರಸ್ಸಿನ ಮೇಲೆ ಆರಿಸಿ, ಅತನಿಗೆ ಆರೋಗ್ಯವಿಚಾರವಾಗಿ ಹತ್ತು ದಿವಸದ ತರಬೇತು ಕೊಡಲಾಗುವುದು ೧ ಜನನಮರಣಗಳನ್ನು ಬರೆದಿಡುವುದು, ೨ ಮೈಲಿಗೆಕಜ್ಜ ಬಾರದಂತೆ ತನ್ನ ಹಳ್ಳಿಗರಿಗೆ ದಾಕು ಹಾಕುವುದು, ೩. ನೀರು ಹಾಳಾಗದ ರೀತಿಯಲ್ಲಿ ತನ್ನ ಬಾವಿಯನ್ನು ಸರಿಪಡಿಸಿ ಕಟ್ಟುವುದು. ೪. ತನ್ನಿಂದ ಸಾಧ್ಯವಿದ್ದಷ್ಟುಮಟ್ಟಿಗೆ ವೈದ್ಯಕೀಯ ಸಹಾಯವನ್ನೊದಗಿಸುವುದು, ೫ ತನಗೆ ಅಸಾಧ್ಯವೆನಿಸಿದ ರೋಗಿಗಳನ್ನು ಸಬ್ ಡಿಸ್ಟ್ರಿಕ್ಟ್ ಕ್ಷೇತ್ರಕ್ಕೆ ಕೊಂಡೊಯ್ಯುವುದು, ೬. ಸಬ್ ಡಿ| ಆರೋಗ್ಯ ಕ್ಷೇತ್ರಕಕ್ಕೂ ಜನರಿಗೂ ಒಳ್ಳೆ ಸ್ಪರ್ಶವುಂಟಾಗುವಂತೆ ಅತ್ಯಂತ ಸಹಕಾರಿಯಾಗುವುದು. ಇವುಗಳು ಹಳ್ಳಿ ಆರೋಗ್ಯ ಕೆಲಸಗಾರರ ಕರ್ತವ್ಯಗಳು ಸಬ್ ಡಿಸ್ಟ್ರಿಕ್ಟ್ ಸ್ಟೇಶನು ಆತನ ಕೆಲಸದ ನಿಗಾವಣೆಯನ್ನು ಮಾಡುವುದು. ಸಬ್ ಡಿಸ್ಟ್ರಿಕ್ಟ್ ಆರೋಗ್ಯ ಸ್ಟೇಷನಿನಲ್ಲಿ ಓರ್ವ 'ಬಿ' ಗ್ರೇಡ್ ವೈದ್ಯನೂ, ಓರ್ವ ಡ್ರೆಸ್ಸರನೂ ಓರ್ವ ದಾದಿಯೂ ಇರುವರು ಇಲ್ಲಿ ಒಂದು ಚಿಕಿತ್ಸಾಲಯವು ನಡೆಯಿಸಲಾಗುತ್ತದೆ

ಅದಲ್ಲದೆ ಹಳ್ಳಿ ಆರೋಗ್ಯ ಕೆಲಸಗಾರರ ಮೇಲ್ತನಿಖಿ, ಸ್ಥಳೀಯ ಸೂಳಗಿತ್ತಿಯರ ಮೇಲ್ತನಿಖಿ, ಶಾಲೆಗಳಲ್ಲಿ ಆರೋಗ್ಯ ಶಿಕ್ಷಣ ಮತ್ತು ದಾಕು ಹಾಕುವುದು – ಇವುಗಳು ಆ ವೈದ್ಯನ ಇತರ ಕರ್ತವ್ಯಗಳು. ಪ್ರತಿಯೊಂದು ವಾರದಲ್ಲಿ ಜಿಲ್ಲಾ ಆರೋಗ್ಯ ಕೇಂದ್ರದಲ್ಲಿ ಈ ಸಬ್ ಡಿಸ್ಟ್ರಿಕ್ಟ್ ವೈದ್ಯರ ಪರಿಷತ್ತು ನಡೆಯುವುದು.

ಜಿಲ್ಲಾ ಆರೋಗ್ಯಕೇಂದ್ರದಲ್ಲಿ ೫೦ ಹಾಸಿಗೆಗಳೂ ಒಂದು ಪರಿಶೋಧನಾಲಯವೂ, ಆಡಳಿತ ಆಫೀಸು ಇತ್ಯಾದಿಗಳಿರುವುವು. ಸಾಂಕ್ರಾಮಿಕ ರೋಗ, ಶಾಲೆಗಳಲ್ಲಿ ಆರೋಗ್ಯ, ದಾದಿಯರ ತರಬೇತು, ಮಕ್ಕಳ ಆರೋಗ್ಯ, ಸೂಳಗಿತ್ತಿಯರ ತರಬೇತು, ವೈದ್ಯಕೀಯ ವಿದ್ಯಾರ್ಥಿಗಳಿಗೆ ತರಬೇತು ಇತ್ಯಾದಿ ಈ ಜಿಲ್ಲಾ ಕೇಂದ್ರದಲ್ಲಿ ನಡೆಯುತ್ತದೆ.

ನಮ್ಮಲ್ಲಿಯೂ ಈಗ ಮೇಲಿನ ತರದ ಆಡಳಿತ ಶಿಬ್ಬಂದಿಯಿರುವುದು ಹಳ್ಳಿಗರ ಆರೋಗ್ಯ ರಕ್ಷಣೆಯ ಬಗ್ಗೆ ಇವರು ಪರಿಣಾಮಕಾರೀ ರೀತಿಯಲ್ಲಿ ಕಾರ್ಯಸುವಂತೆ ಮಾತ್ರ ನಾವು ಸಾಧಿಸಬೇಕು.

ಸಾರ್ವಜನಿಕ ಆರೋಗ್ಯ ಪರಿಶೋಧನೆ.

ಸಂಯುಕ್ತ ಅಮೇರಿಕಾದ ರೊಕ್‌ಫೆಲ್ಲರ್ ನಿಧಿಯಿಂದ ದೊರಕಿದ ೧೭-೮೭ ಲಕ್ಷ ರೂ.ಗಳ ಸಹಾಯದಿಂದ ಅಖಿಲಭಾರತ ಶೌಚ್ಯ ಮತ್ತು ಸಾರ್ವಜನಿಕ ಆರೋಗ್ಯಸಂಸ್ಥೆಯು ಏರ್ಪಡಿಸಲಾಗಿದೆ.

ಈ ಸಂಸ್ಥೆಯು ಹಿಂದೂದೇಶದ ಕೊಲೆರಾ, ಪ್ಲೇಗ್, ಮಲೇರಿಯಾ ಇತ್ಯಾದಿ ಸಾಂಕ್ರಾಮಿಕ ರೋಗಗಳ ಕುರಿತು ಪರಿಶೋಧನೆಯನ್ನು ನಡೆಯಿಸಿ, ಪ್ರಜೆಗಳನ್ನು ಅವುಗಳಿಂದ ಸುರಕ್ಷಿತಗೊಳಿಸುವ ಅನೇಕ ಉಪಾಯಗಳನ್ನು ಕಂಡುಹಿಡಿದಿರುವುದು ಸಾಂಕ್ರಾಮಿಕ ರೋಗಗಳ ಬರುವಿಕೆಯನ್ನು ಮುಂದಾಗಿ ತಿಳಿಯುವ ಉಪಾಯಗಳನ್ನ ಈ ಸಂಸ್ಥೆಯಿಂದ ಕಂಡುಹಿಡಿಯಲಾಗಿದೆ

ಇಲ್ಲಿ ಪೌಷ್ಟಿಕದ ಕುರಿತು ಅನೇಕ ಶೋಧಗಳು ನಡೆದಿರುತ್ತವೆ ಹಿಂದೂದೇಶದ ಆಹಾರದಲ್ಲಿ ಬೇಕಾದ ಪ್ರೊಟೈನ್ಸುಗಳೂ, ಕೆಲವು ಲವಣಗಳೂ, ವಿಟಮಿನ್‌ಗಳು ಇಲ್ಲದಿರುವುದನ್ನು ಈ ಸಂಸ್ಥೆಯಿಂದ ಕಂಡುಹಿಡಿಯಲಾಗಿದೆ.

ಅನಿರ್ಮಲತೆಯಿಂದ ಉಂಟಾಗುವ ವಿಷದಿಂದಲೆ ಬಾಳಂತಿಯರು ಮೃತರಾಗುವರೆಂದೂ ಅಲ್ಲದೆ ಇನ್ನಿತರ ಕಾರಣಗಳಿಂದ ಮೃತರಾಗುವರೆಂದೂ, ಈ ತರದ ಮರಣಗಳನ್ನು ನಿಲ್ಲಿಸುವರಿ ಉಪಾಯಗಳನ್ನು ಕಂಡುಹಿಡಿದಿರುವರು

ಈ ಸಂಸ್ಥೆಯು ಇಂಡಿಯಾ ಸರಕಾರದ ಅಧೀನದಲ್ಲಿ ನಡೆಯುತ್ತದೆ ಸಾರ್ವಜನಿಕ ರಕ್ಷಣೆ ಬಗ್ಗೆ ಅವರ ಆರೋಗ್ಯವನ್ನು ಉತ್ತಮಗೊಳಿಸುವ ಬಗ್ಗೆ ಅನೇಕ ವಿಚಾರಗಳ ಮೇಲೆ ವ್ಯಯಿಸಲು, ಇಂಡಿಯಾ ಸರಕಾರವು ಗ್ರೇಂಟುಗಳನ್ನು ಒದಗಿಸುವುದಾಗಿ ತಿಳಿದುಬರುತ್ತದೆ.

ಚೀನಾದಲ್ಲಿ

ಚೀನಾದಲ್ಲಿ ಯುದ್ಧವು ಅತ್ಯಂತ ಭೀಕರತೆಯಿಂದ ಸಾಗುತ್ತಿದೆ ಸಾವಿರಾರು ಮಂದಿಗಳ ಕೊಲೆಯು ನಡೆಯುತ್ತದೆ ಜಪಾನೀಯ ಯುದ್ಧ ಹಡಗುಗಳು ವಿಮಾನಗಳು ಭಯಂಕರ ತರದ ಧಾಳಿ ನಡೆಸುತ್ತಿವೆ ಚೀನಿಯರು ಜಪಾನೀಯರ ಆತಿಕ್ರಮವನ್ನು ಎದುರಾಯಿಸುತ್ತಿದ್ದಾರೆ, ಇತ್ತ ಹೆಯುವರಿಗೂ ಇಷ್ಟರ ತನಕ ಯಾವತ್ತೂ ವಿಧದಲ್ಲಿ ಸೋಲುಬೀಳುಗಳುಂಟಾಗಲಿಲ್ಲ

ಸರ್ವಾಧಿಕಾರಿಗಳ ಬಾಲ್ಯ: ೨ | ಬರುವ ವಾರ: ಮುಸೋಲೇನಿ

ಹಿಟ್ಲರ್.

ಬೆಳೆಯ ಗುಣವು ಮೊಳೆಯಲ್ಲಿಯೇ ತಿಳಿಯುವುದು. ಅಂತೆಯೇ, ಹಿಟ್ಲರರ ಬಾಲ್ಯದ ಸ್ಥಿತಿಗತಿಗಳನ್ನು ತಿಳಿದುಕೊಂಡರೆ, ಅವರ ಇಂದಿನ ಗಂಭೀರ ಕಟುಸ್ವಭಾವದ ಅರಿವು ನಮಗಾಗದಿರದು. ವಿಧಿಯ ಕೈಗೂಸಾಗಿ ಬೆಳೆದವರವರು. ಇಂದು ವಿಧಿಯ ಕೃಪೆಯಿಂದಾತಿಯೇ ಜರ್ಮನಿಯ ಸರ್ವಾಧಿಕಾರಿಗಳೆಂದೆನಿಸಿ, ಸರ್ವತಂತ್ರ ಸ್ವತಂತ್ರರಾಗಿರುವರು.

ಹರ್ ಎಡೋಲ್ಫ್ ಹಿಟ್ಲರರ ತಂದೆಯು ಬಿಳ್ಳು ಬಡ ರೈತಾಪಿ ಹೆಂಗಸಿನ ಮಗ. ಎಲೋಯಸ್ ಸ್ಕಿಕ್ ಗ್ರೂಬರ್ ಎಂದು ಅವರ ಹೆಸರು ತನ್ನ ನಲ್ವತ್ತನೆಯ ವಯಸ್ಸಿನಲ್ಲಿ ಅವರು ಹಿಟ್ಲರ್ ಎಂಬ ಹೆಸರನ್ನು ಇಟ್ಟುಕೊಂಡರು. ಎಡೋಲ್ಫ್ ಹಿಟ್ಲರರ ಸ್ವಭಾವದ ಮೇಲೆ ಇವರು ತನ್ನ ವಿಚಿತ್ರ ವ್ಯಕ್ತಿತ್ವದ ಮುದ್ರೆಯನ್ನು ಒತ್ತಿರುವರು.

ಎಲೋಯಸ್ ಸ್ಕಿಕ್ ಗ್ರೂಬರರು ಹದಿಮೂರು ವರ್ಷ ಪ್ರಾಯದಲ್ಲಿ ತನ್ನ ಹುಟ್ಟೂರನ್ನು ಬಿಟ್ಟು, ವಿಯನ್ನಕ್ಕೆ ಹೋಗಿ ಅಲ್ಲೊಬ್ಬ ಸಮಗಾರನ ವೃತ್ತಿಯನ್ನು ಕೈಗೊಂಡರು ಆದರೆ ಅವರಿಗೆ ಅದರಲ್ಲಿ ತೃಪ್ತಿಯುಂಟಾಗಲಿಲ್ಲ. ಏನಾದರೂ ವಿಶೇಷ ಕೆಲಸಗಳನ್ನು ಮಾಡಿ, ಕೀರ್ತಿ ಸಂಪಾದಿಸಬೇಕೆಂದು ಅವರ ಕಾಂಕ್ಷೆಯಾಗಿತ್ತು. ಇದಕ್ಕಾಗಿ ಅವರು ಸಮಗಾರನ ವೃತ್ತಿಯನ್ನು ಬಿಟ್ಟು ಸಿವಿಲ್ ಸರ್ವಿಸಿಗೆ ಸೇರಿದರು.

ತನ್ನ ನಲ್ವತ್ತೈದನೆಯ ವಯಸ್ಸಿನಲ್ಲಿ ಅವರು ಮದುವೆ ಮಾಡಿಕೊಂಡರು. ಅವರ ಹೆಂಡತಿ—ಎನ್ನಾ ಗ್ಲೇಸ್ ಹೋರರು—ಅವರಿಗಿಂತಲೂ ಪ್ರಾಯದಲ್ಲಿ ಹದಿನಾಲ್ಕು ವರ್ಷಕ್ಕೆ ದೊಡ್ಡವರು. ಆದರೆ ಈ ದಾಂಪತ್ಯವು ದೀರ್ಘಕಾಲ ಬಾಳಲಿಲ್ಲ. ಕೆಲವೇ ಸಮಯದಲ್ಲಿ ಗಂಡಹೆಂಡಿರು ಬೇರೆಯಾದರು. ದಾಂಪತ್ಯ ವಿಚ್ಛೇದನಾದ ಅಲ್ಪಾವಧಿಯಲ್ಲಿಯೇ ಎನ್ನಾ ಗ್ಲೇಸ್ ಹೋರರು ತೀರಿಕೊಂಡರು.

ಯಾವಾಗಲೂ ಮುಂಗೋಪಿ

ಮೊದಲನೆಯ ದಾಂಪತ್ಯ ವಿಚ್ಛೇದವಾದ ಒಂದೇ ತಿಂಗಳಲ್ಲಿ ಎಲೋಯಸ್ ಸ್ಕಿಕ್ ಗ್ರೂಬರರು ಎರಡನೆಯ ವಿವಾಹವನ್ನು ಮಾಡಿಕೊಂಡರು. ವಿವಾಹವಾದ ಒಂದೇ ವರುಷದಲ್ಲಿ ಅವರ ಈ ದ್ವಿತೀಯ ಭಾರ್ಯೆಯು ಕಾಲಾಧೀನರಾದರು. ಇದಾದ ಹತ್ತು ತಿಂಗಳುಗಳೊಳಗೆ ಅವರು ಮೂರನೆಯ ಸಂಬಂಧವನ್ನು ಮಾಡಿಕೊಂಡರು. ಕ್ಲಾರಾ ಫೆಲ್ಜರ್ಲ್—ಅವರ ಮೂರನೆಯ ಮಡದಿಯು ಅವರಿಗಿಂತ ಇಪ್ಪತ್ತಮೂರು ವರ್ಷಗಳಿಗೆ ಚಿಕ್ಕವರು. ೧೮೮೯ನೇ ಏಪ್ರಿಲ್ ತಾ. ೨೦ರಲ್ಲಿ ಅವರ ಎಡೋಲ್ಫನಿಗೆ ಜನ್ಮವಿತ್ತರು.

ಅಗ್ಗೆ ಎಡೋಲ್ಫರ ತಂದೆಯು 52 ಸಂವತ್ಸರಗಳ ಮುದುಕರು. ಇನ್ನು ದುಡಿದುದು ಸಾಕೆಂದು ಅವರು ಕೆಲಸದಿಂದ ನಿವೃತ್ತಿ ಹೊಂದಿ ಒಸ್ಟ್ರಿಯದಲ್ಲಿ ಲಿನ್ಜ್ ಎಂಬಲ್ಲಿ ಒಂದು ಮನೆಯನ್ನು ಕ್ರಯಕ್ಕೆ ಪಡೆದುಕೊಂಡು ಅಲ್ಲಿ ಸುಖದಿಂದ ಸಂಸಾರಿಕ ಜೀವನವನ್ನು ನಡೆಸತೊಡಗಿದರು.

ಎಲೋಯಸ್ ಸ್ಕಿಕ್ ಗ್ರೂಬರ್ ಹಿಟ್ಲರರು ಬಹಳ ಹಮ್ಮಿನ, ಹಟಮಾರಿ ಸ್ವಭಾವದ ಪುರುಷರು. ಊರವರೆಲ್ಲರೂ ತನ್ನನ್ನು 'ಹರ್' ಎಂದೇ ಸಂಬೋಧಿಸಬೇಕೆಂದು ಅವರ ಭಾವನೆಯಾಗಿತ್ತು. ತನ್ನ ನೆರೆಕೆರೆಯವರೊಡನೆ ಜಗಳ ಮಾಡಿ ಅವರು ಅತ್ಯಲ್ಪ ಸಮಯದಲ್ಲೇ ಊರವರ ಅವಕೃಪೆಗೆ ಪಾತ್ರರಾದರು.

ಉದ್ಯೋಗವಿಲ್ಲದ ನರನು ಪಶುವಿಗೆ ಸಮಾನನಂತೆ. ಕಾರಣ ಆತನ ನಿರುದ್ಯೋಗಿ ಮೆದುಳು ಇಲ್ಲದ ದುಷ್ಟ ಆಲೋಚನೆಗಳನ್ನು ಮಾಡುವುದು, ದುಷ್ಟಕೃತ್ಯಗಳನ್ನೂ ಚಿಂತಿಸುವುದು. ಅದರಂತೆ ಮೊದಲೇ ಜಗಳಗಂಟ ಸ್ವಭಾವದ ಸ್ಕಿಕ್ ಗ್ರೂಬರರು ಈಗ ಉದ್ಯೋಗವಿಲ್ಲದೆ, ಪ್ರತಿಯೊಬ್ಬ ಮಿತ್ರನೊಡನೆಯೂ ಕಲಹವನ್ನು ಹೂಡಿ, ಅವರ ಮೈತ್ರಿಯನ್ನು ಕಳಕೊಂಡರು. ಇದರಿಂದ ಅವರಿಗೆ ಸಾಂಸರ್ಗಿಕ ಜೀವನವೂ ಇಲ್ಲವಾಯಿತು. ಆದುದರಿಂದ ಸ್ವಾಭಾವಿಕವಾಗಿ ಅವರು ತನ್ನ ಕುಟುಂಬವನ್ನು ಆಳುವುದರಲ್ಲಿಯೇ ತನ್ನ ಆಯುಷ್ಯದ ದಿನಗಳನ್ನು ನೂಕತೊಡಗಿದರು. ತನ್ನ ಮನೆಯಲ್ಲಿ ಅವರೊಬ್ಬ ಸರ್ವಾಧಿಕಾರಿಯಂತೆ ವರ್ತಿಸತೊಡಗಿದರು.

ತನ್ನ ಮಗನಾದ ಎಡೋಲ್ಫನನ್ನು ಕರೆಯಬೇಕಾದರೆ ಅವರು ಸಿಳ್ಳುಹಾಕುತ್ತಿದ್ದರು ವಿನಹ ಆತನನ್ನು ಹೆಸರಿನಿಂದ ಕೂಗಿ ಕರೆಯುತ್ತಿದ್ದಿಲ್ಲ. ಆ ಸಿಳ್ಳಿನ ಶಬ್ದವನ್ನು ಕೇಳಿದೊಡನೆ ಎಡೋಲ್ಫನು ಎಲ್ಲಿದ್ದರೂ ಬಂದೇ ಬರಬೇಕು. ಬಂದವನು ಓರ್ವ ಸಿಪಾಯಿಯಂತೆ ತಟಸ್ಥವಾಗಿ ನಿಂತು, ತಂದೆಯ ಆಜ್ಞಾನುಕೂಲವಾಗಿ ವರ್ತಿಸಬೇಕು.

'ನನ್ನ ತಂದೆಯವರನ್ನು ನಾನು ಮನ್ನಿಸುತ್ತಿದ್ದೆ, ಆದರೆ ತಾಯಿಯನ್ನು ಪ್ರೀತಿಸುತ್ತಿದ್ದೆ'' ಎಂಬುದಾಗಿ ತನ್ನ ಮಾತಾಪಿತೃಗಳ ಕುರಿತು "ಮೈನ್ ಕಾಂಪ್" ಎಂಬ ಪುಸ್ತಕದಲ್ಲಿ ಹಿಟ್ಲರರು ಬರೆದಿರುವರು. ನಿಜವಾಗಿಯೂ ತನ್ನ ತಾಯಿಯನ್ನು ಆಧರಿಸಿಕೊಂಡೇ ಅವರು ಬೆಳೆದವರೆನ್ನಬೇಕು.

ಅವರ ತಾಯಿಯು ಅವಿದ್ಯಾವತಿಯಾದ ಸಾಮಾನ್ಯ ಹೆಂಗಸು. ಬಡವರ ಮನೆಯ ಹೆಣ್ಣು. ಹುಟ್ಟಿದಂದಿನಿಂದ ಪ್ರತಿಯೊಂದು ಕೆಲಸವನ್ನು ಅವರೇ ಕಷ್ಟಪಟ್ಟು ಮಾಡುತ್ತಿದ್ದರು. ತಂದೆ ಶಿಸ್ತಿನವರು, ಹಟಮಾರಿ ಸ್ವಭಾವದವರು. ತಾಯಿ ಅವಿದ್ಯಾವತಿ, ಕಷ್ಟಕ ಜೀವಿ. ತಂದೆತಾಯಿಗಳ ಈ ಬಗೆಯ ನಡೆನುಡಿಗಳೇ ಹಿಟ್ಲರರ ಸ್ವಭಾವವನ್ನು ರೂಪಿಸಿದ ಆದಿಶಕ್ತಿಗಳು.

ಈ ಬಗೆಯ ವಾತಾವರಣದಲ್ಲಿ ಹಿಟ್ಲರರು ಬೆಳೆದರು. ಮೊದಲಿಂದಲೂ ಅವರು ಆಟಪ್ರಿಯರಲ್ಲದೆ ಪಾಠಪ್ರಿಯರಲ್ಲ. ಶಾಲೆಗೆ ಹೋದಾಗ ಅವರು ಅನೇಕ ತಂಟೆಕೋರ ದೊಡ್ಡ ದೊಡ್ಡ ಹುಡುಗರೊಡನೆ ಕಲೆತು, ಆಟದ ಬಯಲಿನಲ್ಲಿ ಕಾಲಯಾಪನೆ ಮಾಡುತ್ತಿದ್ದರಲ್ಲದೆ ಮನೆಯಲ್ಲಿ ಮೌನಿಯಾಗಿ ಪುಸ್ತಕ ಕೀಟದಂತಿರುವುದಿಲ್ಲ. ಮಗನ ಈ ಬಗೆಯ ಆಚರಣೆಯು ತಾಯಿಗೆ ಹಲವೊಮ್ಮೆ ಚಿಂತೆಗೆ ಕಾರಣವಾಗಿತ್ತು.

ಆ ಸಮಯದಲ್ಲಿ 'ನಾನು ಮುಂದೆ ಯಾವ ವೃತ್ತಿಯನ್ನು ಅನುಸರಿಸಬೇಕೆಂದು ಆಲೋಚಿಸದಿದ್ದರೂ ನನ್ನ ತಂದೆಯವರ ವೃತ್ತಿಯಲ್ಲಿ ನನಗೆ ಅಪೇಕ್ಷೆಯಿದ್ದಿಲ್ಲ. ಬಾಲ್ಯದಲ್ಲಿಯೇ ನಾನು ನನ್ನ ಅನೇಕ ಮಂದಿ ಮಿತ್ರರೊಡನೆ, ಅನೇಕ ವಿಷಯಗಳ ಕುರಿತು ಮಾತನಾಡಿ, ಚರ್ಚಿಸಿ, ನನ್ನ ವಾಕ್ಚಾತುರ್ಯವನ್ನು ಬೆಳೆಸಿದ್ದೆನು. ನನ್ನ ಪಾಠಗಳನ್ನು ನಾನು ಚೆನ್ನಾಗಿ ಕಲಿಯುತ್ತಿದ್ದೆ ಮತ್ತು ನನ್ನ ಸಹಪಾಠಿಗಳಿಗೊಬ್ಬ ನಾಯಕನಾಗಿದ್ದೆ. ನನ್ನ ಗುರುಹಿರಿಯರಿಗೆ ನನ್ನನ್ನು ಅಂಕೆಯಲ್ಲಿಡುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ.'

ಮನೆಯಲ್ಲಿ ಅತೃಪ್ತಿ.

ಮೊದಲಿಂದಲೂ ಎಡೋಲ್ಫನು ಆಟ, ಕೂಟ, ಹೊಡೆದಾಟಗಳಲ್ಲಿ ಗಟ್ಟಿಗನು. ಇಂತಹ ಪ್ರಸಂಗಗಳಲ್ಲಿ ತಲೆದೋರಿದ ವೈರವನ್ನು ತೀರಿಸಿಕೊಳ್ಳಲು, ಊರ ಬಳಿಯ ಗುಡ್ಡ, ಕಾಡು ಬೆಟ್ಟಗಳೇ ರಣಭೂಮಿಯಾಗಿ ಅವನಿಂದ ಉಪಯೋಗಿಸಲ್ಪಟ್ಟವು. ತಾನೊಬ್ಬ ನಾಯಕನೆಂಬುದರಲ್ಲಿ ಆತನಿಗೆ ಬಹಳ ಹೆಮ್ಮೆಯಿತ್ತು. ಶಾಲೆಗೆ ಹೋಗುವುದೆಂದರೆ ಆತನಿಗೆ 'ಶುಕ್ರವಾರ' ಕಲಹವೆಂದರೆ ಯಾವಾಗಲೂ 'ಮೂರು ವಾರ'. ಶಾಲೆಯ ಏಕಪ್ರಕಾರದ ಜೀವನವು ಎಡೋಲ್ಫನಿಗೆ ರುಚಿಸದಾಯಿತು. ಅದಕ್ಕಿಂತ ಆಕರ್ಷಕವಾದ ಬೇರೇನಾದರೂ ವಿಷಯವಿದೆಯೇ ಎಂದು ಅವನು ಹುಡುಕತೊಡಗಿದನು.

ಸಮೀಪದಲ್ಲಿರುವ ಒಂದು ಇಂಗ್ರೇಜಿಗೆ ಹೋಗಿ, ಅಲ್ಲಿ ಕೆಲಸಮಯದ ತನಕ ಆತನು ಸಂಗೀತಾಭ್ಯಾಸ ಮಾಡತೊಡಗಿದನು. ಇಂಗ್ರೇಜಿಯಲ್ಲಿ ನಡೆಯುವ ಅಭೂತಪೂರ್ವವಾದ ವೈಭವ, ಸಂಭ್ರಮಾದಿಗಳು ಆತನ ಮನಸ್ಸನ್ನು ಆಕರ್ಷಿಸಿದುವು. ಈ ಜಗತ್ತಿನಲ್ಲಿ ಧರ್ಮಗುರುವಾಗಿ ಬಾಳುವುದೇ ಅತ್ಯುಚ್ಚವಾದ ಧ್ಯೇಯವೆಂದು ಆಗ ಆತನಿಗೆ ಕಂಡಿತು.

ದೊಡ್ಡವನಾದ ಮೇಲೆ ತಾನೂ ಒಬ್ಬ ಧರ್ಮಗುರುವಾಗಬೇಕೆಂದು ಎಡೋಲ್ಫ್ ಹಿಟ್ಲರರ ಬಗೆದರು. ಆದರೆ ಅವರ ಈ ಇಚ್ಛೆಯು ಅಪೂರ್ಣವಾಗಿಯೇ ಅಲ್ಲಿಗಲ್ಲಿಯೇ ಅದೃಶ್ಯವಾಯಿತು. ಕಾರಣ, ಅವರ ಸ್ವಭಾವಕ್ಕನುಗುಣವಾದ ವಿಷಯಗಳತ್ತ, ಅವರ ಚಿತ್ತವು ನಂತರ ಸೆಳೆಯಲ್ಪಟ್ಟಿತು.

ಅಕಸ್ಮಾತ್ತಾಗಿ ಅವರ ಇದೀ ದೃಷ್ಟಿ ಕೋನವೇ ಪರಿವರ್ತನೆಗೊಂಡಿತು. ತನ್ನ ತಂದೆಯ ಪುಸ್ತಕಾಲಯದಲ್ಲಿದ್ದ, ೧೮೭೦ರಲ್ಲಿ ಫ್ರೆಂಚರಿಗೂ ಪ್ರಶ್ಯನರಿಗೂ ನಡೆದ ಯುದ್ಧದ ಕುರಿತು ಉಲ್ಲೇಖಿಸಿದ, ಆದೊಂದು ಪುಸ್ತಕವೇ ಅವರ ಈ ಬಗೆಯ ಮಾರ್ಪಾಟಿಗೆ ಮುನ್ನುಡಿಯಾಯಿತೆನ್ನಬಹುದು.

"ನಾನು ಆ ಪುಸ್ತಕವನ್ನು ಓದಿ ಚೆನ್ನಾಗಿ ಮನನ ಮಾಡಿಕೊಂಡೆ. ಅಂದಿನಿಂದ ಯುದ್ಧಕ್ಕೆ ಸಂಬಂಧಪಟ್ಟ ವಿಷಯಗಳಲ್ಲೇ ನನ್ನ ಆಸಕ್ತಿಯು ಬೆಳೆಯತೊಡಗಿತು."

ಅಂದಿನಿಂದ ಹಿಟ್ಲರರು ಸೈನಿಕ ಜೀವನದ ಕುರಿತು ಸವಿಗನಸುಗಳನ್ನು ಕಾಣತೊಡಗಿದರು, ಮತ್ತು ತನ್ನ ಪಾಠಗಳತ್ತ ಗಮನವನ್ನು ಕೊಡದಾದರು.

ಆಗಾಗ್ಗೆ ಮನೆಯಲ್ಲಿ ಅವರ ಹಿರಿಯರಿಗೂ ಅವರಿಗೂ ಜಗಳಗಳಾಗತೊಡಗಿದವು. ಕಲಿಯಲೊಲ್ಲೆನೆಂದ ಮಗ. ಕಲಿಯಬೇಕೆಂದ ತಂದೆ. ಮಗನೂ ತನ್ನಂತೆ ಓರ್ವ ಸಿವಿಲ ನೌಕರನಾಗಬೇಕೆಂದು ತಂದೆಯ ಇಚ್ಛೆ. ಆದರೆ ಸಿವಿಲ್ ನೌಕರನಾಗಿ ಸ್ವಾತಂತ್ರ್ಯವನ್ನು ಕಳಕೊಂಡು, ಡೆಸ್ಕಿನ ಬಳಿ ಕುಳಿತುಕೊಂಡು ಫಾರಮುಗಳನ್ನು ಬರೆಯುವ ಆ ಅಸಹನೀಯ ಬದುಕಿನಲ್ಲಿ ಮಗನಿಗೆ ಜಿಗುಪ್ಸೆ. ಪರಂತು ತಂದೆ ಮಗನ ವಿವಾದದಲ್ಲಿ, ಮಗನೇ ಮಣಿಯಬೇಕಾಯಿತು. ಪ್ರೌಢ ವಿದ್ಯಾಭ್ಯಾಸಕ್ಕಾಗಿ ಲಿನ್ಜಿಗೆ ತೆರಳಬೇಕಾಯಿತು.

ಲಿನ್ಜಿನಲ್ಲೂ ತನ್ನ ಭವಿಷ್ಯದ ಕುರಿತು ಹಿಟ್ಲರರು ಚಿಂತಿಸತೊಡಗಿದರು. ಮತ್ತೆ ಚಿತ್ರಕಾರನಾಗುವುದೇ ಲೇಸೆಂದು ನಿರ್ಧರಿಸಿದರು. ತನ್ನ ಈ ನಿರ್ಧಾರದ ಕುರಿತು ತಂದೆಯೊಡನೆ ಪ್ರಸ್ತಾಪಿಸಿದೊಡನೆ 'ಏನ? ಚಿತ್ರಕಾರನೆ? ಆಗದಾಗದು. ನಾನಿರುವ ತನಕ ನಿನ್ನನ್ನು ಚಿತ್ರಕಾರನಾಗಲು ಬಿಡೆನು'' ಎಂದು ಅವರು ಮಗನನ್ನು ಗದರಿಸಿಬಿಟ್ಟರು.

ಅವರು ಮಗನ ಮೇಲೆ ಕೋಪಗೊಂಡರು. ಆದರೆ ಮಗನು ಮಾತ್ರ ಈ ಬಾರಿ ಕೇಳುವಂತಿರಲಿಲ್ಲ. ತನಗೆ ಚಿತ್ರಕಾರನಾಗಲು ಬಿಡದಿದ್ದರೆ ತಾನು ಕಲಿಯುವುದನ್ನೇ ಬಿಟ್ಟುಬಿಡುವೆನೆಂದು ಹಿಟ್ಲರರು ಹೇಳಿದರು. ಅದರಂತೆ ನಡೆದೇ ಬಿಟ್ಟರು. ಶಾಲೆಯಲ್ಲಿ ಅವರಿಗೆ ತನ್ನ ತರಗತಿಯಲ್ಲಿ ಕಡೆಯ ಸ್ಥಾನವು ದೊರಕಿತು. ಅಲ್ಲದೆ ಇನ್ನೊಂದು ವರ್ಷವನ್ನು ಅದೇ ತರಗತಿಯಲ್ಲಿ ಕಳೆದರು.

ಚರಿತ್ರೆಯ ಅಧ್ಯಯನದಲ್ಲಿ ಹಿಟ್ಲರರಿಗೆ ತುಂಬಾ ಆಸಕ್ತಿ. ಅವರು ಚರಿತ್ರೆಯ ಉಪಾಧ್ಯಾಯರಾಗಿದ್ದ ಡಾ। ಲಿಯೊಪೋಲ್ಡ್ ಪೋಷ್ ಎಂಬವರು ತಮ್ಮ ಸ್ಫೂರ್ತಿದಾಯಕವಾದ ಮಾತುಗಳಿಂದ, ಹಿಟ್ಲರರ ಈ ಆಸಕ್ತಿಯನ್ನು ಇನ್ನಷ್ಟು ಹುರಿಗೊಳಿಸಿದರು. ಲಿಯೊಪೋಲ್ಡ್ ಪೋಷರು ಓರ್ವ ದೇಶಪ್ರೇಮಿಗಳು. ಆಗ್ಗೆ ಸಿಂಹಾಸನಾಧಿಕಾರಿಗಳಾಗಿದ್ದ ಹೆಪ್ಸಬರ್ಗ ಮನೆತನದವರನ್ನು ಅವರು ನಿಂದಿಸುತ್ತಿದ್ದರಲ್ಲದೆ, ಹೋಯನ್ ಝೋಲರ್ನ ಮನೆತನದವರ ಮತ್ತು ಬಿಸ್ ಮಾರ್ಕರ ವೀರಕೃತ್ಯಗಳನ್ನು ಬಹಳವಾಗಿ ಹೊಗಳುತ್ತಿದ್ದರು.

ಸಾಮ್ರಾಜ್ಯದ ಕನಸುಗಳು.

ದೇಶಪ್ರೇಮಿಯಾದ ಒಸ್ಟ್ರಿಯದ ಪ್ರತಿಯೊಬ್ಬ ಪ್ರಜೆಯೂ ಜರ್ಮನ ಸಾಮ್ರಾಜ್ಯದೊಡನೆ ಐಕ್ಯಹೊಂದಲು ಆತುರಪಡುತ್ತಿದ್ದನು. ಜರ್ಮನರ ಸಂತೃಪ್ತ ಜೀವನವನ್ನು ಕಂಡು ಪ್ರತಿಯೋರ್ವನು ಅಸೂಯೆ ಪಡತೊಡಗಿದನು. ಒಸ್ಟ್ರೋ ಹಂಗೇರಿಯನ್ ರಾಜ್ಯವನ್ನು ನಾಶಗೊಳಿಸಿ, ಜರ್ಮನರೊಡನೆ ಒಂದಾಗುವುದೇ ತಮಗೆ ಹಿತದ ದಾರಿಯೆಂದು ಪ್ರತಿಯೊಬ್ಬನು ಬಗೆದನು. ಇವೇ ಮೊದಲಾದ ಆಲೋಚನೆಗಳನ್ನೇ ಡಾ। ಪೋಷರು ತನ್ನ ವಿದ್ಯಾರ್ಥಿಗಳ ಹೃದಯದಲ್ಲಿ ಮುದ್ರೆಯೊತ್ತತೊಡಗಿದ್ದರು. ಇಂದೂ ಎಡೋಲ್ಫ್ ಹಿಟ್ಲರರ ಮನಸ್ಸು ಅವನ್ನೇ ಪ್ರತಿಧ್ವನಿಸುತ್ತಿರುವುದು. ಬಾಲ್ಯದಲ್ಲಿ ತನ್ನ ಗುರುವಿನ ಪಾಠಗಳನ್ನು ಕೇಳಿಕೊಂಡು ಹಿಟ್ಲರರು ಅವರನ್ನುವಂತೆ ಒಬ್ಬ 'ದಂಗೆಖೋರ'ರಾದರು.

ಹಿಟ್ಲರರಿಗೆ ಹದಿಮೂರು ವರ್ಷಗಳಿದ್ದಾಗ ಅವರ ಪಿತನು ಮೃತಿಯನ್ನೈದಿದನು. ಆದರೆ ವಿದ್ಯಾಭ್ಯಾಸದಲ್ಲಿ ಅಸಂತುಷ್ಟಿಪಟ್ಟ ಅವರಿಗೆ, ಶಾಲೆಯನ್ನು ಬಿಡಲು ಅವರ ಮಾತೆ ಸಮ್ಮತಿಸಲಿಲ್ಲ.

ಈ ಸಮಯದಲ್ಲಿ ಅವರು ಅಸ್ವಸ್ಥರಿದ್ದರು. ಅವರನ್ನು ಇನ್ನು ಸ್ವಲ್ಪ ಸಮಯದ ತನಕ ಶಾಲೆಗೆ ಕಳುಹಿಸಬಾರದಾಗಿ ವೈದ್ಯರು ಬೋಧಿಸಿದ ಪ್ರಕಾರ ವೈದ್ಯರ ಮಾತು ಹಿಟ್ಲರರ ಹಿತಕ್ಕಾಯಿತು.

ಒಂದು ವರುಷದ ತನಕ ಅವರು ಮನೆಯಲ್ಲೇ ಕುಳಿತುಬಿಟ್ಟರು. ಅದರ ನಂತರ ತಾಯಿಯು ಪುನಃ ಅವರನ್ನು ಶಾಲೆಗೆ ಕಳುಹಿದಳು. ಪರಂತು ಶಾಲೆಯ ಪಾಠವನ್ನು ಅವರು ಸರಿಯಾಗಿ ಮಾಡದೆ ಇದ್ದುದರಿಂದ ಆ ಶಾಲೆಯನ್ನೇ ತೊರೆದು, ತಾಯಿಯ ನಿರ್ಬಂಧದಿಂದಾಗಿ ಅವರು ಬೇರೊಂದು ಶಾಲೆಯನ್ನು ಸೇರಿದರು.

ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಅಲ್ಲಿಯೂ ಹಿಟ್ಲರರು ಯಾವುದರ ಕಡೆಗೂ ಗಮನವನ್ನು ಕೊಡದೆ ಸೋಮಾರಿಯಾಗಿ ಕಾಲಯಾಪನೆ ಮಾಡತೊಡಗಿದರು. ತಾಯಿಯು ಬೇಸರಪಟ್ಟು ಕೊನೆಗೆ ಅವರನ್ನು ಶಾಲೆ ಬಿಡಿಸಿದಳು. ಹಿಟ್ಲರರ ಮನೋವಾಂಛಿತವು ಸಫಲವಾಯಿತು. ಅವರು ಮನೆಯಲ್ಲೇ ಇದ್ದು, ಮನೆಗೆಲಸದಲ್ಲಿ ತನ್ನ ತಾಯಿಗೆ ಸಹಾಯ ಮಾಡಿಕೊಂಡು ನಾಲ್ಕೈದು ವರುಷಗಳನ್ನು ಸುಖದಿಂದ ಕಳೆದರು. ಇನ್ನೆಷ್ಟು ಕಾಲದ ತನಕ ಅವರು ಇದೇ ರೀತಿಯಲ್ಲಿ ಸಮಯವನ್ನು ಕಳೆದರು. ಇನ್ನೆಷ್ಟು ಕಾಲದ ತನಕ ಅವರು ಇದೇ ರೀತಿಯಲ್ಲಿ ಸಮಯವನ್ನು ಕಳೆಯುತ್ತಿದ್ದರೋ ಹೇಳಲಾಗುವಂತಿಲ್ಲ. ಆದರೆ ಈ ಸಂದಿಗ್ಧ ಸಮಯದಲ್ಲಿ ಅವರ ತಾಯಿಯು ತೀರಿಕೊಂಡಳು.

ಇನ್ನು ತನ್ನ ಉದರ ಪೋಷಣೆಯ ಭಾರವು ಹಿಟ್ಲರರ ಹೆಗಲ ಮೇಲೆಯೇ ಬಿತ್ತು. ತಾನು ದುಡಿಯಬೇಕು ಹೊಟ್ಟೆ ತುಂಬಬೇಕು ಎಂಬ ಪರಿಸ್ಥಿತಿಯು ಅವರಿಗೆ ಬಂದೊದಗಿತು. ಆಗ ಅವರು ೨೦ ವರ್ಷದ ಯುವಕ. ಏನಾದರೊಂದು ಉದ್ಯೋಗವನ್ನು ಸಂಪಾದಿಸಬೇಕೆಂಬ ಆಕಾಂಕ್ಷೆಯಿಂದ ಅವರು ವಿಯನ್ನಕ್ಕೆ ತೆರಳಿದರು. ಸುಖಮಯವಾದ ಬಾಲ್ಯದ ದಿನಗಳನ್ನು ಕಳೆದುವು. ಹಿಟ್ಲರರು ಯೌವನದ ಅಂತಸ್ತಿನಲ್ಲಿ ಪದಾರ್ಪಣಗೈದರು.

[illegible]

ರಲ್ಲಿ ಸಾಲಕೊಟ್ಟವನು ಶೇಕಡಾ ಯದ್ವಾತದ್ವಾ ಶೇಕಡಾ 10ರ ಬಡ್ಡಿಯನ್ನು ಪಡೆದವನು ವನ್ನು ಬಹುಮಾರವಾಗಿ ಸಂಕಲ್ಪ ಮಾಡಿತು ಸೇರಲಿರುವನು. 1917-'31ರಲ್ಲಿ ಜನಸು ವರು. ಈ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವವರು 5 ರೂಪಾಯಿಗಳ ಜುಲ್ಮಾನೆ ತೆರಬೇಕಿತ್ತ. ಈ ಸಂಕಲ್ಪದಿಂದ ಅಲ್ಲಿಯವರಿಂದ ಆಂಗ್ಲಗೆ ರೂ. ೩೦೦೦ರ ವ್ಯಾಪಾರವಾಗುತಿದ್ದುದು ಈಗ ರೂ. ೩೦೦ಕ್ಕೆ ಇಳಿದಿರುವುದಂತೆ.

ಫೆಡರೇಷನಿನ ಕುರಿತು ಇಂಡಿಯಾ ಸರಕಾರವು ಪ್ರಾಂತ್ಯಗಳೊಡನೆ ವಿಚಾರಿಸಲು ಸಿದ್ಧವಿಲ್ಲವೆಂದು ಕೇಂದ್ರ ಎಸೆಂಬ್ಲಿ ಪ್ರಶ್ನೋತ್ತರದಿಂದ ತಿಳಿದುಬರುತ್ತದೆ.

ಮೆಡಿಟರೇನಿಯನಿನಲ್ಲಿ ಸ್ಪೆನಿಶ್ ಧಂಗೆಖೋರರು ಕಲ್ಲಿದ್ದಲು ಕೊಂಡೊಯ್ಯುವ ಬ್ರಿಟಿಷರ ಜಹಜೊಂದನ್ನು ಮುಳುಗಿಸಿದರು.

ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪುನರ್ವ್ಯವಸ್ಥಾ ಕಾರ್ಯವನ್ನು ಶ್ರೀ। ಸುಭಾಷ್ಚಂದ್ರಬೋಸರು ಹಿಡಿದಿರುವರು

ಸ್ವದೇಶಾಭಿಮಾನಿ

ತಾ. ೪ನೇ ಶುಕ್ರವಾರ ಫೆಬ್ರವರಿ ೧೯೩೮

ರೈತರ ಋಣವಿಮೋಚನೆ

ಇದಕ್ಕಾಗಿ ಮದ್ರಾಸು ಸರಕಾರವು ಹೊರಡಿಸಿದ ಮಸೂದೆಯು ಅಲ್ಪಸ್ವಲ್ಪ ತಿದ್ದುಪಡಿಗಳೊಡನೆ ಎಸೆಂಬ್ಲಿಯಲ್ಲಿ ಮಂಜೂರಾಯಿತು ಇನ್ನೂರೈವತ್ತು ತಿದ್ದುಪಡಿಗಳಲ್ಲಿ ಎರಡು (ಅತಿ ಸಾಮಾನ್ಯ) ಅಂಗೀಕೃತವಾದುವು ಅಧಿಕ ಮತ ಬೆಂಬಲವುಳ್ಳ ಮಂತ್ರಿಮಂಡಲವಿರುವಲ್ಲಿ, ಚರ್ಚೆಗಳ ಪರಿಸ್ಥಿತಿಯು ಹೀಗಾಗುವುದು ಚರ್ಚೆ ಮಾಡಬೇಕೆಂದು ಮುಂದರಿವವರಿಗೆ ತಮ್ಮ ಮಾತಿಗೇನೂ ಬೆಲೆಯಿಲ್ಲದೆ ಹೋಗುವುದೆಂಬ ಅಂಜಿಕೆಯು ಯಥಾರ್ಥವಾಗಿಯೂ ಉಂಟಾಗುವುದು ತೀವ್ರವಾಗಿ ಮಸೂದೆ ಅಂಗೀಕೃತವಾಗಬೇಕೆಂದೂ, ಎಲ್ಲಕ್ಕೂ ಮುಖ್ಯ ಮಂತ್ರಿಗಳೇ ಜವಾಬ್ದಾರರಾಗಿರಬೇಕೆಂದೂ ಮಂತ್ರಿಮಂಡಲದ ವ್ಯವಸ್ಥೆಯಿದ್ದು, ಚರ್ಚೆ ಪೂರ್ತಿಯಾಗಿ ನಡೆದುದೆನ್ನಲು ಬಯಸ್ತಿಲ್ಲ ಮೂರು ದಿನಗಳಲ್ಲಿ ಸಿಲೆಕ್ಟ್ ಕಮಿಟಿಯು ರಿಪೋರ್ಟು ಬರೆದುದು, ನಾಲ್ಕು ದಿನಗಳಲ್ಲಿ ಎಸೆಂಬ್ಲಿಯಲ್ಲಿ ಚರ್ಚೆ ನಡೆದು, ಬಿಲ್ಲು ಮಂಜೂರಾದುದೂ ಅವಸರವನ್ನೆ ಸೂಚಿಸುವುದಲ್ಲವೆ?

ಈ ಮಸೂದೆಯ ಕಲಮುಗಳನ್ನು ವಿರೋಧಿಸಿ ವಿಮರ್ಶಿಸಿದವರ ಸಂಖ್ಯೆ ಧಾರಾಳವಿದೆ ಪತ್ರಿಕೆಗಳಲ್ಲೆಲ್ಲ ಅತಿರೇಕವಾದ ಟೀಕೆಗಳಾಗಿದ್ದುವು ಆದರೆ ಇಂತಹದೊಂದು ಕಾನೂನು ಉಂಟಾಗದಿರುವಲ್ಲಿ ರೈತರ ಕಷ್ಟಸಂಕಷ್ಟಗಳು ನಿವಾರಣೆ ಹೊಂದವೆಂಬ ಖಚಿತ ನಂಬಿಕೆಯು ಮಂತ್ರಿಮಂಡಲದಲ್ಲಿದ್ದುದರಿಂದ, ಇವನ್ನು ಪರಿಗಣಿಸಲೇ ಇಲ್ಲ ವಿಮೋಚನೆಗಾಗಿ ಮಾಡಿರುವ ನಿಯಮಗಳು ಕೆಲವು ಕಡೆ ಸಾಕಷ್ಟು ದೂರಹೋಗವು, ಇನ್ನೆಷ್ಟು ಅಂದಾಜಿನಲ್ಲೇ ಉಳಿದಂತಿವೆ ಇಳಿಸಿದ ಸಾಲವನ್ನು ತೆರುವುದಕ್ಕೆ ರೈತನಲ್ಲಿ ಸಾಮರ್ಥ್ಯವೂ ಅನುಕೂಲತೆಗಳೂ ಉಂಟಾಗುವಂತೆ ಮಾಡಿರುವುದೇನೂ ಇಲ್ಲ. ಈ ಬಗೆಯ ಕಾನೂನು ಇರುವುದರಿಂದ ಇನ್ನು ರೈತನಿಗೆ ಸಾಲ ದೊರೆವುದೂ ಕಠಿಣವಾಗಲಾರದೆಂಬ ಅಂಜಿಕೆ ಇದೆ

ಸಾಂಪತ್ತಿಕ ದುರ್ಗತಿಯಿದ್ದ ವರ್ಗಗಳು; ಮತ್ತು ಹಾಗಿಲ್ಲದ ವರ್ಗಗಳು ಎಂಬೊಂದು ಭೇದವನ್ನು ಕಲ್ಪಿಸಿ, ದಾಮದುಪ್ಪಟ ಕ್ರಮವನ್ನು ಅಂಗೀಕರಿಸಿರುವುದೂ ಏನೋ ಒಂದು ಮಾಯಾ ಚಿತ್ರದಂತಿದೆ. 1927ನೇ ಇಸ್ವಿಯಲ್ಲಿ ಸಾಲ ಕೊಟ್ಟು ಶೇಕಡಾ 10ರ ಬಡ್ಡಿಯನ್ನು ಕ್ರಮವಾಗಿ ವಸೂಲ್ಮಾಡಿಕೊಂಡವನು ಗೆದ್ದವನಾಗಿ ಧಾರಣೆ ಏರಿಳಿತವಾದರೂ, ಅದು ಲೆಕ್ಕಕ್ಕಿಲ್ಲ.

ಹಳೆ ಬಾಕಿಯಿರುವ ಗೇಣಿಯನ್ನು ಕೆತ್ತಲ್ಲದೆ ಹಿಂದಣ ಬಾಕಿಗೆ ರಿಯಾಯಿತಿ ಸಿಗಲಾರದೆಂಬುದರಿಂದ ಸದ್ಯದ ಗೇಣಿ ತೆರುತ್ತವರಿದ್ದಾರು, ಇಳಿಸಿದ ಸಾಲವನ್ನ ತೆರಲು ಮತ್ತೆ ಅವರು ಪ್ರಯತ್ನ ಮಾಡುವರೇ, ಅಥವಾ ಕಂದಾಯವನ್ನು ಸರಕಾರವು ಇಳಿಸೀತೇ? ಎಂಬುದು ಸ್ಪಷ್ಟವಾಗಿಲ್ಲ

ಬೇಂಕುಗಳಿಗೆ ಸಲುವ ಸಾಲಗಳ ವಿಷಯದಲ್ಲಿ ಮಂತ್ರಿಯವರೇ ಮೂರು ದಿನಗಳೊಳಗೆ ನಾಲ್ಕಾರು ಸಲ ತಮ್ಮ ಅಭಿಪ್ರಾಯ ಬದಲಾಯಿಸಿದರು ಹೊಸ ಹೊಸ ಆತಂಕಗಳು ತೋರಿದಂತೆ, ನವನವೀನ ತಿದ್ದುಪಾಟುಗಳಾದುವು ಮಂತ್ರಿಗಳ ಸೆಕ್ರೆಟರಿಯವರೇ ಕೆಲ ತಿದ್ದುಪಡಿಗಳನ್ನು ಸೂಚಿಸಿದ್ದುದರಿಂದ, ಕಾಂಗ್ರೆಸ್ ಪ್ರತಿನಿಧಿಗಳಲ್ಲಾದರೂ ಈ ಬಿಲ್ಲಿನ ವಿಷಯವಾಗಿ ಐಕ್ಯಾಭಿಪ್ರಾಯವಿದ್ದಿಲ್ಲ ಎನ್ನಬೇಕು

ಸಾಲ ಕೊಟ್ಟವನ ಮತ್ತು ಪಡೆದವನ ಮನಸ್ಸುಗಳಿಗೆ ತೃಪ್ತಿಯಾಗುವ ಹಾಗೆ, ಈ ಕಾನೂನಿನಲ್ಲಿ ಇನ್ನೆಷ್ಟೋ ಬದಲಾವಣೆಗಳಾಗಲು ಅವಕಾಶವಿದೆ ರೈತರಿಗೆ ರಿಯಾಯಿತಿ ತೋರಿಸಬೇಕೆಂದು ಕಾರ್ಯಕ್ರಮವಲ್ಲಿದ್ದಂತೆ ಮಂತ್ರಿಗಳು ಅಧಿಕ ಬೆಂಬಲದಿಂದ ಸಾಧಿಸಿದರು ನಿಜ ಇನ್ನು ಇಷ್ಟು ಧೈರ್ಯಕ್ಕಾಗಿ ಅವರನ್ನು ವಂದಿಸಬಹುದು, ಆದರೆ ಕಾನೂನಿನಲ್ಲಿ ತೋರುವ ನ್ಯೂನಗಳು ಬಹಳವಾಗಿ ಅವನ್ನು ಕ್ವಚಿಯಲ್ಲಿಯೆ ತಿದ್ದಬೇಕಾಗುವುದ

ಮಿ। ಜಿನ್ನಾರವರು

ನ್ಯೂಡಿಲ್ಲಿಯಲ್ಲಿ 20000 ಜನರ ಮುಂದೆ ಒಂದು ಮಾನಪತ್ರವನ್ನು ಸ್ವೀಕರಿಸಿ ಪುನಃ ತಮ್ಮ ಹೇಳಿಕೆಯನ್ನು ವಿವರಿಸಿದವರು 'ಏಳು ಪ್ರಾಂತ್ಯಗಳಲ್ಲಿರುವ ಕಾಂಗ್ರೆಸು ಮಂತ್ರಿಗಳು, ಮುಸ್ಲಿಮರ ಮುಂದೆ ಹೇಗೆ ನಡೆದವರೆಂದು, ಈಗಲೇ ತಿಳಿಯಬಹುದು ಹಿಂದೂಗಳಿಗಿಂತ ಶಿಕ್ಷಣದಲ್ಲೂ ರಾಜಕೀಯ ಮತ್ತು ಸಾಂಪತ್ತಿಕ ವಿಷಯಗಳಲ್ಲೂ ಮುಸ್ಲಿಮರು ಕೆಳತರಗತಿಯಲ್ಲಿರುವರು ಆದುದರಿಂದ ಗೌರವಯುಕ್ತವಾಗಿ ಮುಸ್ಲಿಮರು ಬಾಳಬೇಕಾದರೆ, ಅವರೆಲ್ಲರೂ ಒಂದಾಗಬೇಕು ಮುಸ್ಲಿಮರ ಭಾಗ್ಯವು ಕಾಂಗ್ರೆಸಿನ ಕೈಯಲ್ಲಿ ಪ್ರಕಾಶ ಹೊಂದುವುದಿಲ್ಲವೆಂದೇ ಅನುಭವದಿಂದ ಹೇಳಬಹುದ ಮುಸ್ಲಿಮರ ಸಹಾಯದಿಂದಲೇ ಕಾಂಗ್ರೆಸು ಇಷ್ಟು ಉನ್ನತಿಗೆ ಬಂದಿದೆ ಹಾಗೆಯೆ ಎಲ್ಲ ಮುಸ್ಲಿಮರೂ ಲೀಗನ್ನು ಸೇರಿದರೆ, ಅದೂ ಅಷ್ಟೇ ಉನ್ನತಿಗೆ ಬಂದೀತು ಈಗ ಪೆಲೆಸ್ತೀನ ವಿಚಾರವಾಗಿಯೂ ಶಾಹೀದ್‌ಗಂಜ್ ವಿಚಾರವಾಗಿಯೂ ಏನುಮಾಡಬಹುದೋ ಅದನ್ನು ಹೇಳುವೆನು'

ಮಿ। ನೂರಿಯವರು (ಬೊಂಬಾಯಿಯ ಮಂತ್ರಿಯವರು)

ಅದೇ ಕಾಲದಲ್ಲಿ ಬೊಂಬಾಯಿಯಲ್ಲಿ ಬೊರಾಯುತ್ ಲೀಗ್ ಸಂಘದಲ್ಲಿ ಭಾಷಣ ಮಾಡುತ್ತ – ಗುಲಾಮನಾಗಿರುವುದೊಂದು ಪಾಪವೆಂದು ನಂಬುವ ಮುಸ್ಲಿಮರೆಲ್ಲರು ಸ್ವಾತಂತ್ರ್ಯಕ್ಕಾಗಿ ಒಂದಾಗಬೇಕು ಕಾಂಗ್ರೆಸಿನೊಡನೆ ಸೇರಿದಲ್ಲಿ ತಮ್ಮ ಸಂಸ್ಕೃತಿಯೂ ಮತವೂ ಹೋಯಿತೆಂದು ಮಿಥ್ಯಾವಾದ ಹೇಳುವವರನ್ನು ನಂಬದಿರಿ ಮುಸ್ಲಿಮರ ಧರ್ಮವನ್ನು ಕುಂದಿಸುವುದಕ್ಕೆ ಯಾವುದಕ್ಕೂ ಶಕ್ತಿಸಾಲದು ಪ್ರಜಾಸತ್ತೆ ಸಮಾಜವಾದ ಇವನ್ನೆ ಆಧರಿಸಿ ಇಸ್ಲಾಂ ಮತ ಇರುವುದು ಕೆಲವರು ಸ್ವಾರ್ಥ ಸಾಧನೆಗಾಗಿ, 'ಇಸ್ಲಾಂ ಹೋಗುವುದಲ್ಲಾ!' ಎನ್ನುವ ವ್ಯರ್ಥಾಲಾಪ ಮಾಡುತ್ತಿರುವರು. ಇಷ್ಟು ದೊಡ್ಡ ಮತ್ತೊಂದು ಸುಳ್ಳಿಲ್ಲ. ಮುಸ್ಲಿಮರು ಆದುದರಿಂದ ಕಾಂಗ್ರೆಸು ಸ್ವಾತಂತ್ರ್ಯಕ್ಕಾಗಿ ಹೋರಾಡುವಲ್ಲಿ ಅದನ್ನೆ ಸೇರಬೇಕು ಎಂದರು.

ಅದರಿಂದ ಭಯಾತ್ರಧಾಕ್ಯ [illegible]

ಇಂಗ್ಲೆಂಡಿಗೂ ಜಪಾನಿಗೂ ಯುದ್ಧವಾದರೆ, ಇಂಡಿಯವು ಏನು ಮಾಡೀತು? ಶ್ರೀ। ಎಫ್. ಇ. ಜೇಮ್ಸ್‌ರವರು ಅಭಿಪ್ರಾಯಪಡುವಂತೆ, ಪೂರ್ವಭೂಭಾಗದಲ್ಲೆಲ್ಲ ಮುಂದಾಳಾಗಲು ಜಪಾನು ಯುದ್ಧ ಹೂಡಬಹುದು. ಶ್ರೀ। ಸುಭಾಶಚಂದ್ರರು ನಾವೆಲ್ಲ ದೇಶರಕ್ಷಣೆ ಮಾಡಲು ಕಲಿಬೇಕು ಹೊಂದುವುದು ಅಗತ್ಯವೆನ್ನುವರು ಪರಕೀಯರು ಸ್ವದೇಶವನ್ನು ನುಗ್ಗುವಾಗ, ಅವರನ್ನು ಎದುರಿಸಲು ಸಾಕಷ್ಟು ಬಲವು ನಮ್ಮಲ್ಲಿರಲೇಬೇಕು ಆ ಬಲವು ಇನ್ನಷ್ಟು ದೃಢವಾಗಬೇಕಾದರೆ ನಮ್ಮಲ್ಲಿ ವಿಶೇಷವಾದ ದೇಶಭಕ್ತಿಯಿರಬೇಕು ಜಪಾನು ಈಗ ಮುಸ್ಲಿಮ ರಾಷ್ಟ್ರಗಳೊಡನೆ ವಿಶೇಷವಾದ ಸ್ನೇಹವನ್ನು ಬೆಳೆಸಲಿಚ್ಛಿಸಿರುವುದೆಂದೂ, ಚೀನಕ್ಕೆ ಯುದ್ಧೋಪಕರಣಗಳನ್ನು ಒದಗಿಸುವುದನ್ನು ಇಂಗ್ಲೆಂಡು ತಡೆಯದಿದ್ದರೆ, ಇಂಗ್ಲೆಂಡಿನ ಮೈತ್ರಿಯು ಮುಗಿಯಬಹುದೆಂದೂ ಜಪಾನು ಎನ್ನುತ್ತದೆ ಚೀನದಲ್ಲಿ ಗೆದ್ದ ಬಳಿಕ, ಇಂಡಿಯಾ ಕಡೆಗೆ ಸವಾರಿಯೆ?

ಶ್ರೀ। ವಲ್ಲಭಭಾಯಿ ಪಟೇಲರು

ಕಾಂಗ್ರೆಸ್ಸು ಮತ್ತು ಫೆಡರೇಶನು

ವಾರ್ಧಾದಲ್ಲಿ ನಾಯಕರ ಸಭೆ

ಶ್ರೀ।ಗಳಾದ ಜವಾಹರಲಾಲ ನೆಹರು, ಸರದಾರ್ ವಲ್ಲಭಭಾಯಿ ಪಟೇಲ, ಸುಭಾಷ್ಚಂದ್ರ ಬೋಸ, ಜಿಯರಾಮದಾಸ ದೌಲತ್ ರಾಮ್ ಇವರೇ ಮೊದಲಾದ ಕಾಂಗ್ರೆಸ್ ನಾಯಕರು ವರ್ಕಿಂಗ್ ಕಮಿಟಿಯ ಸಭೆಗಾಗಿ ವಾರ್ಧಾಕ್ಕೆ ತೆರಳಿರುವರು

ಮಹಾತ್ಮಾಜಿಯವರು ಶ್ರೀ।ಗಳಾದ ನೆಹರು ಮತ್ತು ಬೋಸರೊಡನೆ ನೂತನ ಇಂಡಿಯಾ ಆಕ್ಟಿನ ಫೆಡರೇಶನ ಕುರಿತ ಕಾಂಗ್ರೆಸ್ಸಿನ ಮನೋಭಾವದ ವಿಚಾರವೆತ್ತಿರುವರೆಂದು ತಿಳಿದುಬರುತ್ತದೆ ಫೆಡರೇಶನನ್ನು ವಿರೋಧಿಸುವ ಕುರಿತು ಈ ಸಭೆಯಲ್ಲಿ ಚರ್ಚಿಸಲಾಗುವುದೆಂದು ತಿಳಿದುಬರುತ್ತದೆ



ಮಹಾತ್ಮಾಜಿಯವರು

ಈ ಬಾರಿಯ ವರ್ಕಿಂಗ್ ಕಮಿಟಿಯ ಸಭೆಯಲ್ಲಿ, ಏಳು ಕಾಂಗ್ರೆಸ್ ಪ್ರಾಂತ್ಯಗಳ ಮಂತ್ರಿಗಳು ಮಾಡಿದ ಕೆಲಸವು ವಿಮರ್ಶಿಸಲಾಗುವುದಲ್ಲದೆ, ಹರಿಪುರ ಕಾಂಗ್ರೆಸ್ಸಿನಲ್ಲಿ ಆಗಬೇಕಾದ ಠರಾವುಗಳ ರಚನಾ ಕೆಲಸವೂ ನಡೆಯುವುದೆಂದು ತಿಳಿದುಬರುತ್ತದೆ

ಹಿಂದೀಯರಿಗೆ ಸಂಗ್ರಾಮ ಕಲಿಬೇಕು

ಈ ಕುರಿತು ಠರಾವೊಂದು ಬಂಗಾಳದ ಎಸೆಂಬ್ಲಿಯಲ್ಲಿ ಚರ್ಚಿಸಲ್ಪಡಲಾಯಿತು. ಹಿಂದೀಯರಲ್ಲಿ ಸಂಗ್ರಾಮ ಯೋಗ್ಯತೆಯಿಲ್ಲದಿರುವುದರಿಂದ, ಅನ್ಯ ಜನಾಂಗಗಳ ಆಕ್ರಮಣಗಳನ್ನು ತಡೆಯುವವರೆ ನಮಗೆ ಅಸಾಧ್ಯವಾದುದರಿಂದ, ನಾವು ಸ್ವಾತಂತ್ರ್ಯಕ್ಕೆ ಅರ್ಹರಲ್ಲವೆಂದು ಬ್ರಿಟಿ

ನವರಾಷ್ಟ್ರಪತಿ–ಸುಭಾಷ್ಚಂದ್ರಬೋಸರು

ಷರು ಹೇಳುತ್ತಿರುತ್ತಾರಲ್ಲದೆ, ಹಿಂದೀಯರನ್ನು ಸಂಗ್ರಾಮ ಶೂರರನ್ನಾಗಿ ಮಾಡಲು ಯಾವತ್ತೂ ಕಾರ್ಯಸಾಧನೆ ಮಾಡಲಿಲ್ಲವೆಂದೂ, ಬದಲಾಗಿ ಅವರು ಹಿಂದೀಯರು ಸಂಗ್ರಾಮಶೂರರಾಗದತೆ ಅಡ್ಡಿ ಹಾಕುತ್ತಿರುವರೆಂದೂ ಅಭಿಪ್ರಾಯಗಳು ಈ ಚರ್ಚೆಯಲ್ಲಿ ಹೊರಟವು ಪೌರ್ವಾತ್ಯದಲ್ಲಿ ಅಶಾಂತಿಯು ತಲೆದೋರಿದ ಈ ವೇಳೆಯಲ್ಲಿ ಹಿಂದೀಯರು ತಮ್ಮ ರಕ್ಷಣೆಗಾಗಿ ಸಿದ್ಧವಾಗಬೇಡವೆ? ಹಿಂದೀಯರು ಬೇಗನೆ ತಮ್ಮ ರಕ್ಷಣಾಕಾರ್ಯವನ್ನು ತಾವೇ ಹೊರುವಂತೆ, ಅವರ ಕಲಿಬೇಕಿನ ವ್ಯವಸ್ಥೆಯಾಗಬೇಕಾಗಿ ಅಲ್ಲಿ ಸೂಚಿಸಲಾಯಿತು

ಬೇಲೂರಿನಲ್ಲಿ ರಾಮಕೃಷ್ಣ ದೇವಾಲಯ

ಕಲ್ಕತ್ತದ ಬೇಲೂರಿನಲ್ಲಿ ರಾಮಕೃಷ್ಣ ದೇವಾಲಯದ ರಚನೆಗಾಗಿ 7 ಲಕ್ಷ ರೂಗಳ ಧನಸಹಾಯ ಕೆತ್ತ ಅಮೇರಿಕಾದ ವಿವೇಕಾನಂದ ಭಕ್ತರಾದ, ಮಿಸೆಸ್ ಪ್ರೊನ್‌ಸೆಸ್ಸರ್ ಮತ್ತು ಮಿಸ್ ಹೆಲನ್ ರೂಬೆಲ್ ಎಂಬವರಿಗೆ ಮತ್ತು ಅವರಿಗೆ ಸ್ಫೂರ್ತಿಯಿತ್ತ ಸ್ವಾಮಿ ಅಖಿಲಾನಂದಜಿಯವರಿಗೆ ಕಲ್ಕತ್ತೆಯ ಆಲ್ಬರ್ಟ್ ಹಾಲಿನಲ್ಲಿ ಬಂಗಾಳದ ಜನರ ಪರವಾಗಿ ಒಂದು ಬಿನ್ನಪವು ಅರ್ಪಿಸಲಾಯಿತು ಈ ದೇವಾಲಯವು ವಿಶ್ವಧರ್ಮದ ಕುರುಹೆಂದೂ, ಶ್ರೀ ರಾಮಕೃಷ್ಣ ವಿವೇಕಾನಂದರ ಸಂದೇಶದ ಕುರುಹೆಂದೂ, ಅಭಿಪ್ರಾಯಪಟ್ಟ ಸ್ವಾಮಿ ಅಖಿಲಾನಂದರು ಅಭಿಪ್ರಾಯಪಟ್ಟು ಬಿನ್ನಪಕ್ಕೆ ಉತ್ತರವಾಗಿ ಭಾಷಣವಿತ್ತರು

ಮಂತ್ರಿಮಂಡಲಗಳಿಗೆ ಸಾಮ್ಯವಾದಿಗಳ ಕರೆ

ಡಿಲ್ಲಿಯ ಕಾಂಗ್ರೆಸ್ ಸಾಮ್ಯವಾದಿಗಳ ಸಭೆಯೊಂದು ಸೇರಿ, ಫೆಡರೇಶನ್ ಯೋಜನೆಯನ್ನು ವಿರೋಧಿಸಿಯೂ, ಕಾಂಗ್ರೆಸ್ ಮಂತ್ರಿಮಂಡಲಗಳೂ ಇಡೀ ಜನಾಂಗವೂ ಅದನ್ನು ವಿರೋಧಿಸುವ ಯೋಜನೆಗಳಾಗಬೇಕೆಂದೂ, ಮಹಾಜನಗಳು ಆ ಕುರಿತು ಚಳವಳಿ ನಡೆಯಿಸುವಂತೆ ಸಿದ್ಧತೆಗಳಾಗಬೇಕಾಗಿಯೂ, ರಾಜಕೀಯ ಕೈದಿಗಳನ್ನು ಇನ್ನೂ ಕಾಲವಿಳಂಬ ಮಾಡದೆ ವಿಮೋಚನೆಗೊಳಿಸಬೇಕಾಗಿಯೂ ಕೋರಿ ಠರಾವುಗಳಾದುವು

ಮಹೋದಯ ಯೋಗ

ಮೊನ್ನೆ ತಾ ೩೧ರಲ್ಲಿ ನಡೆದ ಮಹೋದಯ ಯೋಗದ ಸಮಯ ಪವಿತ್ರವಾದ ಗಂಗಾ ಯಮುನಾ ಸಂಗಮ ತೀರದಲ್ಲಿ ಸ್ನಾನಮಾಡಲು ಅಲಹಾಬಾದಿನಲ್ಲಿ ಸಾಧಾರಣ ೩೫ ಲಕ್ಷ ಯಾತ್ರಿಕರು ಕೂಡಿ ಬಂದಿದ್ದರೆಂದೂ, ಈ ಮಹೋದಯ ಮೇಳದಲ್ಲಿ ಗಡಿನಾಡಿನಿಂದ ಹಿಂತಿರುಗಿದ ರಾಷ್ಟ್ರಪತಿ ನೆಹರೂಗಳವರು ಕೂಡ ಭಾಗವಹಿಸಿದ್ದರೆಂದು ತಿಳಿದುಬರುತ್ತದೆ ಕಠಿಣವಾದ ಚಳಿಯಿದ್ದಾಗ್ಯೂ ಕೂಡ ಜನರು ಭಕ್ತಿಯಿಂದ ಕೂಡಿದವರಾಗಿ ಈ ಮೇಳದಲ್ಲಿ ಕೂಡಿಬಂದಿದ್ದರು

ಮಂಗಳೂರು.

ಬೆಟ್ಟೋರವರ ಸ್ಮಾರಕ ನಿಧಿ.

ಇಲ್ಲಿಯ ಗವರ್ನ್‌ಮೆಂಟ್ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಭೆಯೊಂದರಲ್ಲಿ "ಕಾಲೇಜ್ ಡೇ" ಆಚರಣೆ ದಿವಸ್ಯ ದಿವಂಗತ ಬೆಟ್ಟೋರರ ಸ್ಮಾರಕನಿಧಿಗೆಂದೊಂದು ನಾಟಕ ಪ್ರದರ್ಶನವನ್ನೇರ್ಪಡಿಸಬೇಕೆಂಬ ಠರಾವು ಮಾಡಲಾಗಿತ್ತು. ಇಂತಹ ಠರಾವುಗಳನ್ನು ಅನೇಕ ಕಡೆಗಳಲ್ಲಿ ಅನೇಕ ರೀತಿಯಲ್ಲಿ ಮಾಡಿಕೊಂಡಿದ್ದರೂ, ಹೆಚ್ಚಿನ ಕಡೆಗಳಲ್ಲಿ ಕಾರ್ಯಗಳು ಗುರಿಮುಟ್ಟಿಲ್ಲ ಇದೆ ಅದೇ ರೀತಿಯಲ್ಲಿ ಇಲ್ಲಿಯೂ ಆಗಬಾರದೆಂದೇ ನಮ್ಮಲ್ಲಿ ಹೆಚ್ಚಿನವರ ಆಸೆ. ಆದರೆ ಇಷ್ಟರ ವರೆಗೆ ಸ್ಮಾರಕ ನಿಧಿಯ ನಾಟಕವಾಗುವ ಆಶಾದಾಯಕ ಚಿಹ್ನೆಯೊಂದು ಯಾವ ಕಡೆಯಿಂದಲೂ ತೋರಿಬರುವುದಿಲ್ಲ. ಈ ಪುಣ್ಯಕಾರ್ಯಕ್ಕೆ ಶ್ರೀಮಾನ್ ಎಸ್. ಎನ್ ಹೊಳ್ಳರು ಸಂಚಾಲಕ (Convenor)ರಾಗಿ ಚುನಾಯಿಸಲ್ಪಟ್ಟಿರುವರು. ಅವರಿಗೆ ಅಖಿಲ ಭಾರತ ಚಟುವಟಿಕೆಗಳಲ್ಲಿ ಭಾಗವಹಿಸಲು ಪರದೇಶಕ್ಕೆ ಹೋಗುವ ಸಂದರ್ಭವೊದಗಿದೆಯೆಂದು ಪ್ರಚಾರವಾಗಿದೆ ಈ ತಿಂಗಳು ಕೊನೆಗೆ ೮ನೇ ತಿಂಗಳಲ್ಲಿ ಪರೀಕ್ಷೆಯ ಗಲಾಟೆ, ನಂತರ ರಜಾಕಾಲ, ಆದ ನಂತರ ಮಳೆಗಾಲ ಆದುದರಿಂದ ತಕ್ಕುದಾದ ಸಮಯವು ಈ ತಿಂಗಳೇ ಆಗಿರುವಾಗ ಇನ್ನೂ ಸಂಬಂಧಪಟ್ಟವರ ಕಡೆಯಿಂದ ನಾನಾವೇ ತೋರಿಬಂದರೆ ಠರಾವಿನ ಗತಿಯನ್ನು ತಿಳಿಸುವುದೆಂತು? ನಾವು ಆರಂಭಶೂರರೆನಿಸಿಕೊಳ್ಳಲಾರೆವೇ? ಆಯಸ್ಕಾ ಸ್ವದೇಶಾಭಿಮಾನಿಯೋ ಸೇವಾದರೂ ಇವರನ್ನು ಎಚ್ಚರಿಸಬಾರದೇ?

ಬೆಟ್ಟೋರರ ಶಿಷ್ಯ

ಮಹಾ ಶಿವರಾತ್ರೆ

ನಡೆಯುವ ಗೋಕರ್ಣ ಜಾತ್ರೆಗೆ ಹೋಗುವವರ ಅನುಕೂಲಕ್ಕಾಗಿ, ಬೊಂಬೇ ಸ್ಟೀಮ್ ನೇವಿಗೇಶನ್ ಕಂಪೆನಿಯವರು ಫೆಬ್ರವರಿ ೨೬ ತಾರೀಖು ಶುಕ್ರವಾರ ಮಾರ್ಚ್ ತಾ ೧ ಮಂಗಳವಾರ ಮತ್ತು ಮಾರ್ಚ್ ತಾ ೪ ಶುಕ್ರವಾರ, ಈ ದಿವಸಗಳಲ್ಲಿ ಮಂಗಳೂರು ಬಂದರಿಂದ ಸ್ಟೀಮರುಗಳನ್ನು ಬಿಡುವ ವ್ಯವಸ್ಥೆ ಮಾಡಿರುವರಾಗಿಯೂ ರಿಯಾಯತಿ ದರಗಳ ಏರ್ಪಾಡು ಮಾಡಿರುವರಾಗಿ ಈ ಕಂಪೆನಿಯ ಸ್ಥಳೀಯ ಆಫೀಸಿನವರು ತಿಳಿಸುತ್ತಾರೆ

ಕೃತಕ ಅಸೆಂಬ್ಲಿ

ಸೈಂಟ್ ಅಲೋಶಿಯಸ್ ಕಾಲೇಜಿನ ಯೂನಿಯನಿನ ಕೃತಕ ಎಸೆಂಬ್ಲಿಯ ಸಭೆಯೊಂದು ಕಳೆದ ಶುಕ್ರವಾರ ದಿವಸ ಇಂಗ್ಲಿಷ್ ಲೆಕ್ಚರರಾದ ಶ್ರೀ ಮೆಥ್ಯೂ ಫೋರ್ಕರ್ ರ ಅಧ್ಯಕ್ಷತನದಲ್ಲಿ ಜರಗಿ, ಪ್ರಶ್ನೋತ್ತರ ಇತ್ಯಾದಿಗಳು ನಡೆದು ಹಿಂದೂಸ್ಥಾನದಲ್ಲಿ ಸೌಮ್ಯವಾದದ ಮೊದಲು ಸ್ವರಾಜ್ಯ ಬರಬೇಕು ಎಂಬ ವಿಷಯ ಚರ್ಚೆ ನಡೆದಿತು ಸ್ವರಾಜ್ಯ ಸಾಧನೆಯ ದೃಷ್ಟಿಯಿಂದ ... ಅತ್ಯಧಿಕ ವಿಷಯಗಳನ್ನು ಬದಿಗಿಡಬೇಕಾಗಿ, ಇತ್ಯಾದಿ ತರದ ಅಭಿಪ್ರಾಯಬಟ್ಟ ಅನೇಕ ಭಾಷಣವಿತ್ತರು ಈ ಠರಾವನ್ನು ವಿರೋಧಿಸಿ ಅನೇಕರು ಭಾಷಣವಿತ್ತರು ಆದರೆ ಯಾವುದೆಂದು ಇತ್ಯರ್ಥವಾಗದೆ ಸಭೆಯು ಮುಕ್ತಾಯವಾಯಿತು

ಕೆನರಾ ಗರ್ಲ್ಸ್ ಸ್ಕೂಲ್ ಡೇ

ಸ್ಥಳೀಯ ಕೆನರಾ ಗರ್ಲ್ಸ್ ಸ್ಕೂಲಿನ ಹಳೆ ವಿದ್ಯಾರ್ಥಿನಿಯರ ದಿನ ಮತ್ತು ವಾರ್ಷಿಕೋತ್ಸವವು ಕಳೆದ ಶನಿವಾರ ಮತ್ತು ಆದಿತ್ಯವಾರ ದಿವಸಗಳಲ್ಲಿ ನಡೆದುವು ಶನಿವಾರ ದಿವಸ ಬೆಳಗ್ಗೆ ಹಳೆ ವಿದ್ಯಾರ್ಥಿನಿಯರ ಬಗ್ಗೆ ಆಟಗಳು ನಡೆದು ಮಧ್ಯಾಹ್ನ ಔತಣ ಕೂಟ ನಡೆದು, ಸಂಜೆಯಲ್ಲಿ ಆಟಗಳಲ್ಲಿ ಗೆದ್ದವರಿಗೆ ಇನಾಮು ಹಂಚೋಣವು ನಡೆದ, ಅಂದಿನ ಕಾರ್ಯಕಲಾಪಗಳು ಮುಗಿದವು

ಆದಿತ್ಯವಾರ ದಿವಸದ ಸಮಾರಂಭವು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಶ್ರೀಮತಿ ಎಚ್. ಪಿ. ಪಿ ರೊಡ್ರಿಗೆಸ್ಸರ ಅಧ್ಯಕ್ಷತನದಲ್ಲಿ ನಡೆಯಿತು. ಶಾಲೆಯ ಹಳೆ ವಿದ್ಯಾರ್ಥಿನಿಗಳಾದ ಶ್ರೀಮತಿ ಸುಶೀಲಾ ಬಾ ನಾಯಕರು ಶಾಲೆಯ ಟೋಸ್ಟನ್ನು ಸೂಚಿಸಿದರು ನಂತರ, ವಿವಿಧ ವಿನೋದಗಳಿಂದ ಕೂಡಿದ ಕಾರ್ಯಕ್ರಮವು ನಡೆದು ಸಮಾರಂಭವು ಕೊನೆಗೊಂಡಿತು.

ಸ್ಥಾಪನಾಚಾರ್ಯರ ದಿನ:

ಸ್ಥಳೀಯ ಡಿಪ್ರೆಸ್ಡ್ ಕ್ಲಾಸ್ ಮಿಶನಿನ ಸ್ಥಾಪನಾಚಾರ್ಯರ ದಿನಾಚರಣೆಯು ಆದಿತ್ಯವಾರ ದಿವಸ, ಇಂಪೀರಿಯಲ್ ಬೇಂಕಿನ ನಿವೃತ್ತ ಸುಪರಿಂಟೆಂಡೆಂಟರಾದ ಶ್ರೀ ಎಮ್. ಅಣ್ಣಪ್ಪನವರ ಅಧ್ಯಕ್ಷತನದಲ್ಲಿ ಜರಗಿತು. ಪ್ರಾರ್ಥನೆಯೊಂದಿಗೆ ಸಮಾರಂಭವು ಪ್ರಾರಂಭವಾಗಿ, ದಿವಂಗತ ರಂಗರಾಯರ ಗುಣಕಥನ ಮಾಡಿ, ಶ್ರೀ ಎಮ್. ಎಸ್. ಮಾಧವರಾಯರು ಮೊದಲಾದ ಮಹನೀಯರುಗಳಿಂದ ಭಾಷಣಗಳಾದುವು. ದಿವಂಗತರ ಸ್ಥಾಪನೆ ಮಾಡಿದ ಸಂಸ್ಥೆಯ ಉತ್ತರೋತ್ತರಾಭಿವೃದ್ಧಿಗಾಗಿ ಮಾಡಿದ ಅಧ್ಯಕ್ಷ ಭಾಷಣದೊಂದಿಗೆ ಸಭೆಯು ಮುಕ್ತಾಯವಾಯಿತು ಸೆಕ್ರೆಟರಿ ಶ್ರೀ ವೆಂಕಟೇಶ ಶೈ ಮತ್ತು ಶ್ರೀ ದೇವರಾಯರ ಕೃಪೆಯಿಂದಲೂ ಅಂದು ಮಧ್ಯಾಹ್ನ ಮಿಶನಿನ ಶಾಲಾ ಹುಡುಗರ ಔತಣ ಕೂಟವೊಂದು ನಡೆಯಿತು.

ಹರಿಜನ ಸೇವಕ ಸಂಘ.

ಜಿಲ್ಲಾ ಹರಿಜನ ಸೇವಕ ಸಂಘದ ಕೂಟವೊಂದು ಸ್ಥಳೀಯ ಕಲ್ಚರಲ್ ಕ್ಲಬ್ಬಿನಲ್ಲಿ ಡಾ। ಆಡಪ್ಪರ ಅಧ್ಯಕ್ಷತನದಲ್ಲಿ ನಡೆಯಿತು. ಹರಿಜನ ಸೇವಕ ಸಂಘದ ದಿಲ್ಲಿಯ ಕೇಂದ್ರದವರಿಂದ ಹೊರಟ ಒಂದು ಯೋಜನೆಯ ಪ್ರಕಾರ ಹರಿಜನ ಸೇವೆಗಾಗಿ ಕೆಲಸಗಾರರನ್ನು ಜೀವನಸದಸ್ಯರಾಗಿ ಕೂಡಿಸಿಕೊಳ್ಳುವ ಕುರಿತು ಚರ್ಚಿಸಲಾಗಿ, ಅದು ಈ ಜಿಲ್ಲೆಯಲ್ಲಿ ಸಾಧ್ಯವಿಲ್ಲವೆಂದು ಇತ್ಯರ್ಥವಾಯಿತು,

ಶೀತಾನದಿಯಲ್ಲಿ ಜಾನುವಾರುಗಳ ಸಂತೆ.

ದಕ್ಷಿಣ ಕನ್ನಡ ಜಿಲ್ಲಾ ಇಕೊನೊಮಿಕ್ ಸಂಘದ ವತಿಯಿಂದ ಶೀತಾನದಿಯಲ್ಲಿ ತಾ ೧೪-೧೫-೧೬ರಲ್ಲಿ ಜಾನುವಾರುಗಳ ಸಂತೆಯೊಂದು ನಡೆಯಿತು. ಒಂದು ಸಾವಿರಕ್ಕೆ ಮಿಕ್ಕಿದ ಆಕಳುಗಳೂ, ಇಂದಕ್ಕೆ ಮಿಕ್ಕಿದ ಕುರಿ ಮತ್ತು ಆಡುಗಳೂ ಸಂತೆಗೆ ಬಂದಿದ್ದವು ೧೫೦ ಆಕಳುಗಳು ಮಾತ್ರ ಮಾರಾಟವಾಗದೆ ಉಳಿದಿದ್ದುವು. ಈ ಸಂತೆಯ ಕುರಿತು ಒಳ್ಳೆ ಜಾಹೀರಾತನ್ನು ನಡೆಸಲು ಹೆಚ್ಚು ಸಮಯ ದೊರಕದ ದೃಷ್ಟಿಯಲ್ಲಿ ಈ ಸಂತೆಯು ಬಹಳ ಯಶಸ್ವಿಯಾಗಿ ನಡೆಯಿತೆನ್ನಬೇಕು ಒಳ್ಳೇ ಆಕಳುಗಳು ಈ ಸಂತೆಗೆ ಬಂದಿದ್ದು, ಅವುಗಳಿಗೆ ಒಳ್ಳೇ ಧಾರಣೆಯು ದೊರೆಯುತ್ತದೆ ಜಾನುವಾರು ಮಾರಾಟಗಾರರಲ್ಲಿ ಸಂತೆಯ ಏರ್ಪಾಡಿನಿಂದ ತುಂಬಾ ಸಮಾಧಾನ ಉಂಟಾಗಿತ್ತು ಈ ಸಂತೆಯು ಜನಜನಿತವಾಗುವಂತೆ, ಉತ್ತಮ ಆಕಳುಗಳಿಗೆ ಪಾರಿತೋಷಕವಾಗಿ ಕೊಡಲು ರೂ ೨೫-೦-೦ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸಂಘದಿಂದ ಸಹಾಯ ಧನವಾಗಿ ದೊರಕಿತ್ತು

ಬಂದರದಲ್ಲಿ ಬೆಂಕಿ ಅನಾಹುತ

ನಿನ್ನೆ ಬೆಳಗಿನ ಸಮಯ ಪೋರ್ಟ್ ಟ್ರಸ್ಟಿನ ಕಡ್ಡಿನ ಹಿರಿದಿಯಲ್ಲಿರುವ ಕೋಟೆಕಾರು ವಿಠಲ ಸಾಹುಕಾರರ ಪೋರ್ಟ್ ರೆಸ್ಟೋರೆಂಟ್‌ನಲ್ಲಿ ಉಂಟಾದ ಬೆಂಕಿಯಿಂದ ಹೋಟೇಲಿನ ಕಟ್ಟಡವೂ ರಕ್ಷಿಸಿದುವ ಭಂಡಸಾಲೆಯಿಂದ ಬೆಲ್ಲದ ನಡುವ ಕಟ್ಟಡಕ್ಕೂ ಬೆಂಕಿತಗಲಿ ಒಟ್ಟು ರೂಪಾಯಿ ೩೦೦೦ ಕ್ಕೂ ಮಿಕ್ಕುವ ಸಾಮಾನು ಇತ್ಯಾದಿಗಳು ಸುಟ್ಟುಹೋಗಿವೆ ಹೋಟೇಲಿನ ಕೆಲಸಗಾರರು ಸರ್ವಸಿಗೆ ತೆರೆದ ವಾಯು ಸಾಧಾರಣ ೪ ಗಂಟೆಗೆ ಹಿಂತಿರುಗುವುದರಷ್ಟರೊಳಗೆ ಬೆಂಕಿಯುಂಟಾದುದೆಂದು ತಿಳಿದುಬರುತ್ತದೆ. ಬೆಂಕಿಯ ಕಾರಣಗಳು ತಿಳಿದುಬರಲಿಲ್ಲ ವಾರ್ತೆಯು ಪ್ರಥಮವಾಗಿ ಪೋರ್ಟ್ ಟ್ರಸ್ಟಿನ ಉಗ್ರಾಣದಿಂದ ಪೋನಿನ ಮೂಲಕ ಪೋರ್ಟ್ ಆಫೀಸರರಿಗೆ ತಿಳಿದುಬರಲು, ಅವರದನ್ನು ಫೋನ್ ಮೂಲಕ ಪೋಲೀಸ್ ಸುಪರಿಂಟೆಂಡೆಂಟರಿಗೆ ತಿಳಿಸಿ ಅನಾಹುತವದ್ದ ಕಡೆಗೆ ತಮ್ಮ ಕಾರಿನಲ್ಲಿ ಧಾವಿಸಿದರು. ಅಷ್ಟರೊಳಗೆ ಪೋಲೀಸ್ ಸುಪರಿಂಟೆಂಡೆಂಟರು ರಿಜರ್ವ್ ಪೋಲೀಸ್ ಫೌಜಿನೊಂದಿಗೆ ಅಲ್ಲಿ ಬಂದು ಬೆಂಕಿಯನ್ನು ನಂದಿಸುವ ಕಾರ್ಯದಲ್ಲಿ ತೊಡಗಿದರು ಪೋರ್ಟ್ ಆಫೀಸರ ಮತ್ತು ಪೋಲೀಸ್ ಸುಪರಿಂಟೆಂಡೆಂಟರ ಮತ್ತು ಪೋಲೀಸರ ಸಾಹಸದಿಂದ ಬೆಂಕಿಯು ಇತರ ಕಟ್ಟಡಗಳಿಗೆ ಹರಡದಂತೆ ತಡೆಯಲಾಯಿತು ಪೋಲೀಸರು ಸಾಧಾರಣ ಬೆಳಗ್ಗೆ ೬ ಗಂಟೆ ತನಕ ಪರಿಶ್ರಮಿಸಿದವರಾಗಿ ತಿಳಿದುಬರುತ್ತದೆ. ನಮ್ಮ ನಗರ ಸಭೆಯವರು ಒಂದು ಫಾಯರ್ ಇಂಜಿನನ್ನು ಇಡುವ ವ್ಯವಸ್ಥೆಯನ್ನು ಇನ್ನಾದರೂ ಮಾಡಬಾರದೆ?

ಅಪಘಾತ.

ಉಳ್ಳಾಲದ ಹತ್ತಿರ ಮಾಣುವೊಂದು ಓಡುವ ಟ್ರೈನಿನ ಅಡಿಯಲ್ಲಿ ಬಿದ್ದು ಮೃತವಾಗಿರುವುದೆಂದು ವಾರ್ತೆ ಬಂದಿದೆ

ಮಂಗಳೂರು ರಥೋತ್ಸವ.

ಮಂಗಳೂರು ಶ್ರೀ ವೆಂಕಟ್ರಮಣ ದೇವಾಲಯದ ರಥೋತ್ಸವ ಸಮಾರಂಭವು ಧ್ವಜಾರೋಹಣದೊಂದಿಗೆ ನಿನ್ನೆಯಿಂದ ಪ್ರಾರಂಭವಾಗಿರುತ್ತದೆ. ಇದೇ ತಿಂಗಳ ತಾ ೭ರಲ್ಲಿ ರಥಾರೋಹಣವು ನಡೆಯುವುದು

ಹೊಸ ಟ್ರಸ್ಟಿ ಮಂಡಳ.

ಮಂಗಳೂರು ಶ್ರೀ ವೆಂಕಟ್ರಮಣ ದೇವಾಲಯದ ಮುಂಚಿನ ಟ್ರಸ್ಟಿ ವರ್ಗವು ತಮ್ಮ ಹುದ್ದೆಗೆ ರಾಜಿಯಿತ್ತು, ಅವರ ಬದಲಿಗೆ ಸ್ಥಳೀಯ ಪ್ರಸಿದ್ಧ ವ್ಯಕ್ತಿಗಳಾದ ಶ್ರೀಮಾನ್ ಎಂ. ಪದ್ಮನಾಭ ರಘುನಾಥ ಪೈಗಳವರು, ಶ್ರೀಮಾನ್ ಎಂ. ವೆಂಕಟೇಶ ಪೈಗಳವರು, ಶ್ರೀಮಾನ್ ಎ ದಾಮೋದರ ಪೈಗಳವರು ಇರುವ ಟ್ರಸ್ಟಿ ಮಂಡಳವು ರಚನೆಯಾಗಿರುವುದೆಂದು ತಿಳಿದು ಬರುತ್ತದೆ. ಈ ಟ್ರಸ್ಟಿ

ತಾಲೂಕುಗಳಿಂದ

ಮೂಡಬಿದ್ರಿ:

ಮೂಡಬಿದ್ರಿ ಉಪಾಧ್ಯಾಯರ ಸಂಘದ ಜನೇಸಾಮಾನ್ಯ ಸಭೆಯು ಇದೇ ಜನವರಿ ತಾ ೩೧ರಲ್ಲು ಕಾರ್ಕ್ಕಳ ಶಾಲಾ ಹೆಡ್ಮಾಸ್ತರರಾದ ಮ. ರಾ. ರಾ. ಪಿ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ದಿಗಂಬರ ಜೈನ ಹಾ। ಪ್ರೈ ಶಾಲಾ ಹೊಸ ಕಟ್ಟೋಣದಲ್ಲಿ ಜರಗಿತು ಸಂಘದ ೬೬ ಮೆಂಬರರ ಪೈಕಿ ೪೪ ಮಂದಿ ಹಾಜರಿದ್ದರು. ಗುಲಾಬ್‌ಬಾವದ ಬೈಲ್ ಶಾಲಾ ಹೆಡ್ಮಾಸ್ತರರಾದ ಮ. ರಾ ರಾ ಜೆ. ಎಸ್ ಪಕೀರರು ಜನೇ ಕ್ಲಾಸಿನ ಮಕ್ಕಳಿಗೆ ಭೂಮಿಯ ದುಂಡಗಿರುವ ವಿಷಯ ಮಾದರಿ ಪಾಠವನ್ನು ಕೊಟ್ಟರು ಬರುವ ಸಭೆಯು ಫೆಬ್ರವರಿ ೧೯ಕ್ಕೆ ಬೆಳುವಾಯಿ ಶಾಲೆಯಲ್ಲಿ ಜರುಗಿಸಲ್ಪಡುತ್ತದೆ

ಅದೇ ದಿನ ರಾತ್ರಿ ಸಿದ್ಧ ಹೊಸ ಶಾಲಾ ಕಟ್ಟೋಣದಲ್ಲಿ ಗುರುಪುರ ಶ್ರೀ ಶಾರದಾರಾಜ ನಾಟಕ ಸಭೆಯವರು 'ಚಕ್ರವ್ಯೂಹ' ಎಂಬ ಪುರಾಣ ನಾಟಕವನ್ನು ಇದರ ಹಿಂದೂ ಹಾ। ಪ್ರೈ ಶಾಲಾ ಪ್ರೋತ್ಸಾಹಕ್ಕೆ ಅಭಿನಯಿಸಲ್ಪಟ್ಟಿತು. ಸುಶ್ರಾವ್ಯಗಾನವೂ ನೇತ್ರಾಕರ್ಷಕ ದೃಶ್ಯಗಳೂ ಇದ್ದುವು ಶ್ರೀ ಕೃಷ್ಣನ ಮತ್ತು ಅರ್ಜುನನ ಪಾತ್ರಗಳು ಬಹುಶೋಭನವಾಗಿದ್ದುವು

ಬಂಟ್ವಾಳ:

ಕಳೆದ ತಾ ೩೦-೧-೩೮ನೆಯ ಆದಿತ್ಯವಾರ ಇಲ್ಲಿಯ ಮೊಡರ್ನ್ ಯೂನಿಯನ್ ಕ್ಲಬ್ಬಿನ ವಾರ್ಷಿಕೋತ್ಸವವು ಮ। ರಾ। ರಾ। ಜನ್ನಾಚಾರ್ಯರು, ಸಬ್ ಕಲೆಕ್ಟರ್, ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಮೊದಲು ಉಪಾಹಾರ, ಗಾಯನ, ಮೊದಲಾದ ಕಾರ್ಯಕ್ರಮಗಳಿಂದ ನಂತರ, ಅಧ್ಯಕ್ಷರು ಇಂದಿನ ಯುಗದಲ್ಲಿ ಕ್ಲಬ್ಬುಗಳ ಅವಶ್ಯಕತೆಯ ಕುರಿತು ಮಾತನಾಡಿದುದಲ್ಲದೆ ಇಂತಹ ಕ್ಲಬ್ಬುಗಳಲ್ಲಿ ಆಗಬೇಕಾದ ಸುಧಾರಣೆಗಳ ಕುರಿತೂ ಕೆಲವು ಸೂಚನೆಗಳನ್ನು ಸಭಿಕರ ಮುಂದಿಟ್ಟರು ಕ್ಲಬ್ಬಿನ ಅಧಿಕಾರಿಗಳು ತಮ್ಮ ವರದಿಯಲ್ಲಿ ಪ್ರದರ್ಶಿಸಿದ ಸುಧಾರಣೆಗಳನ್ನೂ ಅಧ್ಯಕ್ಷರು ಸೂಚಿಸಿದವುಗಳನ್ನೂ ಆದಷ್ಟು ಬೇಗ ಜಾರಿಗೆ ತಂದು, ಈ ಕ್ಲಬ್ಬನ್ನು ಆದರ್ಶ ಕ್ಲಬ್ಬಾಗಿ ಮಾಡುವರಾಗಿ ನಂಬಲಾಗಿದೆ

ಕುಂಬಳೆ.

ಇಲ್ಲಿ ತಾ ೨೬-೧-೩೮ಕ್ಕೆ ಕುಂಬಳೆ ಸಂಯುಕ್ತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಕೆ ಕೃಷ್ಣ ಭಟ್ಟರ ಮುಂದಾಳುತನದಲ್ಲಿ ಸ್ವಾತಂತ್ರ್ಯ ದಿನ ಆಚರಣೆಯು ಸಾಂಗವಾಗಿ ನಡೆಯಿತೆಂದು ವರದಿಗಾರರು ತಿಳಿಸುವರು

ವಿದ್ಯಾರ್ಥಿಗಳ ಪರಿಷತ್ತು

ಪಶ್ಚಿಮ ಕರಾವಳಿಯ ವಿದ್ಯಾರ್ಥಿಗಳ ಪರಿಷತ್ತು ಸ್ಥಳೀಯ ಕೆನರಾ ಹೈಸ್ಕೂಲಿನ ಕ್ರೀಡಾಂಗಣದಲ್ಲಿ ರಚಿಸಿದ ಸ್ಥಳದ ಮುಂದಿನ ತಾ ೩ ರಂದು ಶ್ರೀ ಅಶೋಕ ಮೆಹ್ತಾರವರ ಅಧ್ಯಕ್ಷತನದಲ್ಲಿ ಜರಗುವುದು ಈ ಪರಿಷತ್ತಿಗಾಗಿ ವಿದ್ಯಾರ್ಥಿ ನಗರವು ಮೊನ್ನೆ ದಿವಸ ನಗರ ಸಭಾಧ್ಯಕ್ಷರಾದ ಡಾ ಎ. ಶೆಟ್ಟಿಯವರಿಂದ ತೆರೆಯಲ್ಪಟ್ಟಿತು

ಶ್ರೀಗಳಾದ ಬಂಟ್ವಾಳ ವೆಂಕಟ್ರಾಯರ ನಿಧನ

ಸದ್ಯ ಜಿಲ್ಲೆಯ ಗೌರವಾನ್ವಿತ ವ್ಯಕ್ತಿಯೂ ವೃದ್ಧರೂ ನಿವೃತ್ತ ಜಡ್ಜರಾದ ಶ್ರೀಗಳಾದ ಬಂಟ್ವಾಳ ವೆಂಕಟ್ರಾಯರು ಮುಂಬಯಿಯಲ್ಲಿ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ

ಸಿಲೋನಿನ ಕುರಿತು ಭಾಷಣ

ಸಿಲೋನಿನ ತೆಂಗಿನ ಆತಿಥ್ಯ ನಿಪುಣ ಸಂಸ್ಥೆ ಉತ್ಪತ್ತಿಯು ಕಸ್ತವಿದ್ದ ಸುಂದರದೇಶ ... ನಿಸರ್ಗ ಸೌಂದರ್ಯದಿಂದ ಶೋಭಾಯಮಾನವಾದ ಊರದು, ಅಲ್ಲಿ ಹವಾಯುತ್ತಮ ... ಅಭಿಪ್ರಾಯ ಪಡುತ್ತ ಶ್ರೀಗಳಾದ ಎ ಶ್ರೀನಿವಾಸಪೈಗಳು, ತಮ್ಮ ಸಿಲೋನಿನ ಪ್ರವಾಸದ ಕುರಿತು ಸ್ಥಳೀಯ ಥಿಯೋಸೊಫಿಕಲ್ ಲಾಜಿನಲ್ಲಿ ಸುರಸವಾದ ಭಾಷಣ ಕೊಟ್ಟರು ಸಿಲೋನು ಅತಿಫಲವತ್ತಾದ ಪ್ರದೇಶವೂ, ಅಲ್ಲಿನ ರಸ್ತೆಗಳು ನೇರವಾಗಿವೆ, ಅಲ್ಲಿನ ನಿಸರ್ಗದ ಸೌಂದರ್ಯದಿಂದ ಮನೋಲ್ಲಾಸವಾಗುತ್ತದೆ, ಸಿಂಹಳದ ಜನರು ಅಲ್ಲಿಗಳು ಅಲ್ಲಿನ ಸರಕಾರದ ನೌಕರರು ಅತಿರೇಕವಾದ ಸಂಬಳಗಳು ದೊರೆಯುತ್ತವೆ, ಅಲ್ಲಿ ಭಿಕ್ಷುಕರು ಮನೆ ಬಾಗಿಲಿಗೆ ಬರುತ್ತಿರುವುದಿಲ್ಲ ಸಿಂಹಳ ದ್ವೀಪದವರು ಹೆಚ್ಚಾಗಿ ಪಾಶ್ಚಾತ್ಯರನ್ನು ಅನುಕರಿಸುತ್ತಿದ್ದಾರೆ, ಸಿಂಹಳ ದೇಶದಲ್ಲಿ ಒಂದೇ ಧರ್ಮವಿದೆ, ಅದು ಬೌದ್ಧಮತ ಎಂಬುದು ಶ್ರೀ ಪೈಗಳವರ ಭಾಷಣದ ಸಾರಾಂಶ.

ಅಧ್ಯಕ್ಷತೆಯಲ್ಲಿ ಸ್ವತಂತ್ರ ಸನ್ನಿವೇಶದೆಯನ್ನು ಆಚರಿಸಲಾಯ್ತು, ಕೊಪ್ಪಾಡಿ ಬಂಟ್ವಾಳ ಸರ್ಕಲಿಗೆ ಡಿ. ಕಾಂಗ್ರೆಸ್ ಕಮಿಟಿಗೆ ಇಲ್ಲಿಯ ಕೆನರಾ ಬ್ಯಾಂಕಿನ ಏಜಂಟರಾದ ಮ. ರಾ ಮಾಧವ ಅನಿರುದ್ಧನ ಭಟ್ಟರೂ, ಮ. ರಾ. ಬೊಂಬೈ ಪ್ರೊವಿನ್ಶಿಯಲ್ ಕೊಂಗ್ರೆಸಿನ ಮಾಜಿ ಡಿ. ಕಾರ್ಯದರ್ಶಿಗಳಾದ ಬಿ ದೇವಪ್ಪ ಆಳ್ವರು ಉಮೇದ್ವಾರರಾಗಿದ್ದರು, ಶ್ರೀ ಮಾಧವ ಅನಿರುದ್ಧನ ಭಟ್ಟರು ತಮ್ಮ ನಾಮ ಪತ್ರಿಕೆಯನ್ನು ಹಿಂದ ತೆಗೆದ್ದರಿಂದ ಬಿ. ದೇವಪ್ಪ ಆಳ್ವರು ಚುನಾಯಿಸಲ್ಪಟ್ಟರು

ಉಡುಪಿ:

ತಾ ೩೦ ೧. ಕಮಿಟಿಯ ವಾರ್ಷಿಕ ಸಾಧಾರಣ ಸಭೆಯು ತಾ ೩೧ಕ್ಕೆ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಕ್ಷರಾದ ಶ್ರೀ ಪಿ ಮಂಜುನಾಥ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು ಕೇಂದ್ರ ಕಮಿಟಿಗಳಿಂದ ಬರಬೇಕಾಗಿದ್ದ ಆಗ ಪ್ರತಿನಿಧಿಗಳ ಪೈಕಿ ೬೩ರ ಬಗ್ಗೆ ಮಾತ್ರ ಚುನಾವಣೆಯ ವರದಿ ಬಂದಿದ್ದು, ೪೪ ಮಂದಿ ಹಾಜರಿದ್ದರು, ಪ್ರಾರ್ಥನೆಯಾದೊಡನೆ ದಿವಂಗತ ಶ್ರೀಮತಿ ಸ್ವರೂಪರಾಣಿ ನೆಹರೂರವರ ಮತ್ತು ಶ್ರೀ ಕೆ ಕೆ ಶೆಟ್ಟರು ವಿಷಯ ಶೋಕದ ಠರಾವಾಯಿ, ದುಃಖಸೂಚಕ ಠರಾವು ಎಲ್ಲರೂ ನಿಂತು ಸರ್ವಾನುಮತಿಯಿಂದ ಮಂಜೂರಾಯಿತು ಗತವರ್ಷದ ವರದಿಯನ್ನೂ ಲೆಕ್ಕಪತ್ರವನ್ನೂ ಓದಿ ಹೇಳಲಾಗಿ ಸ್ವಲ್ಪ ಚರ್ಚೆಯ ನಂತರ ಸರ್ವಾನುಮತದಿಂದ ಮಂಜೂರಾದುವು, ಹೊಸ ವರ್ಷಕ್ಕೆ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಮಂಗಳೂರ ಲಕ್ಷ್ಮೀನಾರಾಯಣ ನಾಯಕರು ಸೂಚಿಸಲಾಗಿ ಅನುಮೋದಿಸಲಾಯಿತು. ಶ್ರೀ ಮಂಗಳೂರ ಮಂಜುನಾಥ ನಾಯಕರು ಸೂಚಿಸಲ್ಪಟ್ಟು ಅನುಮೋದಿಸಲಾದ ಅವರು ತಮ್ಮ ಹೆಸರನ್ನು ಹಿಂತೆಗೆದುದರಿಂದ ಮೊದಲಿನವರೇ ಸರ್ವಾನುಮತದಿಂದ ಆರಿಸಲಾದರು ಶ್ರೀ ಮಂಜುನಾಥ ನಾಯಕರು ಕಳೆದ ವರ್ಷದಲ್ಲಿ ಕೊಂಗ್ರೆಸ್ ಕಾರ್ಯಗಳಿಗೆ ತನ್ನೊಡನೆ ಸಹಕರಿಸಿದ ಸದಸ್ಯರುಗಳಿಗೂ ಸಿಬ್ಬಂದಿಗಳಿಗೂ ಕೃತಜ್ಞತೆಯ ವಂದನೆಗಳನ್ನು ಅರ್ಪಿಸಿದರು. ಆ ಮೇಲೆ ಹೊಸ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ನಾಯಕರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ತಮ್ಮನ್ನು ಆರಿಸಿದ್ದಕ್ಕಾಗಿ ವಂದಿಸಿ ಎಲ್ಲರೂ ಸಹಕರಿಸಬೇಕಾಗಿ ಕೇಳಿಕೊಂಡರು. ಶ್ರೀಗಳಾದ ಕೆ ಬಿ ಶೆಟ್ಟರು, ಕೆ ಕೆ ಶೆಟ್ಟರು ಮೊದಲಾದವರು ಅಧ್ಯಕ್ಷರನ್ನು ಅಭಿನಂದಿಸಿ ಭಾಷಣಮಾಡಿದರು ಹೊಸವರ್ಷದ ಕಾರ್ಯಕಾರಿ ಮಂಡಳಿಗೆ ಒಟ್ಟಿಗೆ ೧೮ ಜನರ ಆವಶ್ಯಕತೆಯಿದ್ದು ಶ್ರೀ ಕೆ ಹೆಗ್ಡೆಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ ಕೆ ಶೆಟ್ಟಿ ಮತ್ತು ಕೆ ಶ್ರೀನಿವಾಸ ಪೈ ಜೊತೆ ಕಾರ್ಯದರ್ಶಿಗಳಾಗಿಯೂ ಶ್ರೀ ... ರಾಮರಾಯರು ಖಜಾಂಚಿಯಾಗಿಯೂ, ಶ್ರೀಮತಿ ಪಿ ಮನೋರಮಾ ಬಾಯಿ ಶ್ರೀಗಳಾದ ಕೆ ಎಲ್ ಕಾಮತ್ ಕಿಣಿ, ಆರ್ ಎಸ್ ಅಂದ್ರಾಡೆ, ಎಲ್ ಎಸ್. ನಾಯಕ್, ಬಿ ಎಸ್ ಹೆಗ್ಡೆ ಎ ಕೆ ಹೆಗ್ಡೆ, ಬಿ ಬಿ ಕಾಮತ್, ಕೆ ಕೆ ಕಾಮತ್, ಕೆ. ವಿ ಶೆಣೈ, ಕೆ ಜಿ ಶೆಟ್ಟಿ, ಕೆ ಆರ್. ಪ್ರಭು ಯು. ಎಸ್ ಕಾಮತ್, ಎಚ್ ಎಸ್ ಹೆಗ್ಡೆಯವರನ್ನು ಕಾರ್ಯಕಾರಿ ಮಂಡಳಿಯ ಇತರ ಸದಸ್ಯರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು ಅನಂತರ ತಾಲೂಕು ರಾಜಕೀಯ ಪರಿಷತ್ತನ್ನು ಜರಗಿಸುವ ವಿಚಾರ ಮುಂದೆ ಬಂದು ಚರ್ಚೆಯಾಗಿ, ಅದನ್ನು ಬರಗಾಲವೂ ಹೊಳ್ಳೆಯಿಂದಲೂ ಕಟಪಾಡಿ ಕೇಂದ್ರ ಕಮಿಟಿಯವರ ಆಹ್ವಾನವನ್ನು ಸ್ವೀಕರಿಸಿ ಪರಿಷತ್ತನ್ನು ಮೇ ೧೫ನೇ ತಾ ೧೫ರೊಳಗೆ ಜರಗಿಸತಕ್ಕದ್ದೆಂದೂ ನಿರ್ಧರಿಸಲಾಯಿತು. ಸಭಾಂತ್ಯದಲ್ಲಿ ಶ್ರೀ ಕೆ ಕೆ ಶೆಟ್ಟರ ಎಲ್ಲರಿಗೆ ಧನ್ಯವಾದಗಳನ್ನು ಅರ್ಪಿಸುತ್ತ, ಶ್ರೀ ಪಿ ಮಂಜುನಾಥ ನಾಯಕರು ಈ ಮೊದಲಿನಂತೆ ಇನ್ನು ಮುಂದಕ್ಕೂ ಕೊಂಗ್ರೆಸು ಕಮಿಟಿಗೆ ಬೆಂಬಲ ಪ್ರೋತ್ಸಾಹವೀಯಬೇಕೆಂದು ಕೇಳಿಕೊಂಡರು ಶ್ರೀ ನಾಯಕರು ತನ ಕೊಂಗ್ರೆಸು ಸೇವೆ ಮತ್ತು ಜನತಾ ಸೇವೆಗೆ ಸದಾ ಸಿದ್ಧನಿದ್ದೇನೆಂದೂ ಕೊಂಗ್ರೆಸು ಕೆಲಸದಲ್ಲಿ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲರೂ ಒಮ್ಮನಸಿನಿಂದ ದೇಶಹಿತವನ್ನು ಸಾಧಿಸಬೇಕೆಂದರು ಶ್ರೀಗಳಾದ ಟಿ ವಿ ಶೆಟ್ಟಿ, ಟಿ. ಆರ್ ಪೈ ಮತ್ತು ಯು ಎಸ್ ಕಾಮತರು ಸಭೆಯ ಅಪ್ಪಣೆ ಪಡೆದು, ಈವರೆಗಿನ ಅಧ್ಯಕ್ಷರುಗಳ ತ್ಯಾಗ ಸೇವಾದಿ ಸದ್ಗುಣಗಳ ಕುರಿತು ಭಾಷಣಗಳನ್ನಿತ್ತು ಕೃತಜ್ಞತೆಯನ್ನು ಸೂಚಿಸಿದರು ವಂದೇ ಮಾತರಂ ಹಾಡಿ ಸಭಾವಿಸರ್ಜನೆಯಾಯಿತು

ತಾ ೩ನೇ ರಾತ್ರಿ ಶ್ರೀ ಸಿ. ಬಿ. ಮಲ್ಲಪ್ಪನವರ ಚಂದ್ರಮೌಳೀಶ್ವರ ನಾಟಕ ಸಭೆಯವರು ಭಕ್ತಿಪ್ರಧಾನ ನಾಟಕವನ್ನಾಡಿ ಅದರ ಉತ್ಪನ್ನವನ್ನು ಇಲ್ಲಿಯ ನಿಷ್ಕಾರಣ ಸ್ಕಾಲರ್‌ಶಿಪ್ ಹಾಗೆ ಅಬ್ದುಲ್ಲಾ ವ್ಯಾಯಾಮ ಶಾಲೆಯ ಸಹಾಯಾರ್ಥವಾಗಿ ಕೊಟ್ಟರು ... ಅದೇ ನಾಟಕ ಸಭೆಯವರ ಗಾಯನ ಕಚೇರಿಯನ್ನು ತಾ ೩ನೇ ಆದಿತ್ಯವಾರ ಸಾಯಂಕಾಲ ಜರಗಿಸಿದರು.

ಸಂತೋಷ, ಸ್ವತಂತ್ರದ ಸಂತೋಷ— ಇವುದೇ ಸಂಸಾರದ ಜಯಘೋಷವಾಗಬೇಕೆ? ಕಾಣುತ್ತದೆ. ಭಾರತವರ್ಷವು ಹೊಸ ಯುಗದಲ್ಲಿ ಪದಾರ್ಪಣೆ ಮಾಡಿದೆ. ಪವಿತ್ರ ಚೈತನ್ಯ ಪ್ರಕಟನಕ್ಕಾರಂಭವಾಗಿದೆ; ನಮ್ಮ ಹೃದಯಗಳು ಪುಲಕಿತವಾಗಿವೆ, ಮತ್ತು ನಮ್ಮ ಹೃದಯಗಳು ಉಲ್ಲಾಸದಿಂದ ತುಂಬಿವೆ ಎಲ್ಲರ ದೃಷ್ಟಿ ಕಾಂಗ್ರೆಸ್ ಮಂತ್ರಿಮಂಡಲಗಳ ಕಡೆಗೆ ಹರಿದಿದೆ. ಜನರು ದೊಡ್ಡ ದೊಡ್ಡ ಆಶೆಗಳನ್ನು ಕಟ್ಟಿಕೊಂಡಿದ್ದಾರೆ; ಗಾಳಿಗೋಪುರಗಳನ್ನು ರಚಿಸಿದ್ದಾರೆ; ಎಲ್ಲರೂ ಆನಂದ ತುಂದಿಲರಾಗಿದ್ದಾರೆ. ಎಲ್ಲಿಯ ತನಕ ಅವರ ಚಿರಸಂಚಿತ ಅಭಿಲಾಷೆಗಳು ಪೂರ್ಣವಾಗುವವು ಎಂಬುದನ್ನು ಹೇಳುವುದು ಅಸಾಧ್ಯ ಯಾಕೆ ಈಗಿನ ಪರಿಸ್ಥಿತಿಯಲ್ಲಿ ದೊಡ್ಡ ದೊಡ್ಡ ಆಶೆಗಳನ್ನು ಕಟ್ಟಿಕೊಂಡಿರುವದು ಹೆಡ್ಡತನ. ನವೀನ ಶಾಸನ ವಿಧಾನದ ಮೂಲಕ ಭಾರತದ ಹಿತವು ಎಷ್ಟರ ಮಟ್ಟಿಗೆ ಆದೀತು ಎಂಬ ವಿಷಯವು ಯಾರ ಮನಸ್ಸಿನಿಂದಲೂ ಗುಪ್ತವಾಗಿ ಇರುವುದಿಲ್ಲ. ಮಂತ್ರಿಗಳ ಮಾರ್ಗದಲ್ಲಿ ಯಾವ ಯಾವ ಅಡ್ಡಿಗಳಿವೆ, ಏನೇನು ತಡೆಗಳಿವೆ ಎಂಬುದು ಸಹ ಜನರಿಗೆ ತಿಳಿದಿದೆ. ಆದರೂ ಕೂಡ ಜನರು ಆಶಾವಾದಿಗಳಾಗಿದ್ದಾರೆ! ಯಾಕಾಗಕೂಡದು? ಸಣ್ಣ ಸಣ್ಣ ವಿಷಯಗಳಲ್ಲಿ ಮಂತ್ರಿಮಂಡಲಗಳು ಸ್ವತಂತ್ರವಾಗಿವೆ ಆ ಸಣ್ಣ ವಿಷಯಗಳಲ್ಲಿ ಪ್ರಯತ್ನಿಸಲಿಕ್ಕಾದರೂ ಮಂತ್ರಿಮಂಡಲಗಳು ಯಾಕೆ ವಿಲಂಬ ಮಾಡಬೇಕು?

ಕಾಂಗ್ರೆಸೀ ಪ್ರಾಂತ್ಯಗಳ, ಪ್ರಾಯಶಃ ಅಧಿಕಾಂಶ ಮಂತ್ರಿಗಳು ಜೈಲುಯಾತ್ರೆಯನ್ನು ಮಾಡಿದವರಾಗಿದ್ದಾರೆ. ಅವರಿಗೆ ಜೈಲುಗಳ ಅನುಭವವಿದೆ, ಜೈಲುಗಳ ರಹಸ್ಯ ತಿಳಿದಿದೆ ಜೈಲುಗಳ ಹೃದಯ ವಿಭೇದಕ ಕರುಣಕತೆಗಳು ಅವರಿಗೆ ಗೊತ್ತಿವೆ. ಅಲ್ಲಿಯ ಘಟನೆಗಳನ್ನು ಅವರು ನೋಡಿದ್ದಾರೆ. ಆದಕಾರಣ, ಅವರಿಂದ ಜೈಲುಗಳ ಶಾಸನವ್ಯವಸ್ಥೆಯಲ್ಲಿ ಸುಧಾರಣೆಯಾಗಬಹುದೆಂದು ಜನರು ನಂಬಿದ್ದಾರೆ. ಮಹಾತ್ಮಾ ಗಾಂಧಿಜಿಯವರು ಈ ವಿಷಯಕವಾದ ತಮ್ಮ ಸಂದೇಶವನ್ನು ಮೊದಲೇ ಕೊಟ್ಟುಬಿಟ್ಟಿದ್ದಾರೆ ಆದುದರಿಂದ ಈ ವಿಷಯ ಹೆಚ್ಚಿಗೆ ಬರೆಯುವ ಆವಶ್ಯಕತೆಯಿರುವುದಿಲ್ಲ ಆದರೂ, ಅಲ್ಪ ಸ್ವಲ್ಪ ಬರೆಯುವದು ಹೆಚ್ಚೆನಿಸಿಕೊಳ್ಳಲಾರದು. ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟು ಕಾಂಗ್ರೆಸ್ಸೀ ಮಂತ್ರಿಗಳ ಧ್ಯಾನವನ್ನು ಆ ಕಡೆಗೆ ಎಳೆಯುವ ಪಕ್ಷಸ್ವಾತಂತ್ರ್ಯ ಪ್ರತಿಯೊಬ್ಬನಿಗೆ ಇರುವುದಷ್ಟೆ?

'ಸರಕಾರ್ ಸಲಾಂ'

ಈ ಎರಡು ಶಬ್ದಗಳನ್ನು ಯಾವ ರಾಷ್ಟ್ರೀಯ ಕೆಲಸಗಾರನು ಮರೆತಿರಬಹುದು? ಈ ಎರಡು ಶಬ್ದಗಳಿಂದಾಗಿಯೇ ಭಾರತೀಯ ಜೈಲುಗಳಲ್ಲಿ ಭಯಂಕರ ಹತ್ಯಾಕಾಂಡಗಳು ನಡೆದಿರುವವು, ಅನೇಕ ಮಂದಿ ಕೈದಿಗಳು ತರತರದ ಯಾತನೆಗಳನ್ನು ಅನುಭವಿಸಬೇಕಾಗಿ ಬಂದಿರುವದು. ಜೈಲಿನ ಹೊರಗಿರುವ ಜನರಿಗೆ 'ಸರಕಾರ್ ಸಲಾಂ'ನ ಅರ್ಥ ಆಗದಿರಬಹುದು ಆದ್ದರಿಂದ ಅದರ ಕುರಿತು ಎರಡು ಮಾತು ಹೇಳುತ್ತೇವೆ

ಪ್ರತಿ ದಿನ ಜೈಲುಗಳಲ್ಲಿ ಕೈದಿಗಳ ನಿರೀಕ್ಷಣೆಯಾಗುತ್ತದೆ. ಆಗ ಜೈಲು ಸುಪರಿಂಟೆಂಡೆಂಟರು ನಿರೀಕ್ಷಣೆಮಾಡಲಿಕ್ಕೆ ಬರುತ್ತಾರೆ. ಅವರು ಬರುವದೆಂದರೆ—ಅವರದೊಂದು ಮೆರವಣಿಗೆ ಹೊರಟಂತೆ! ಅವರು ಮೆರವಣಿಗೆ ಹೊರಡುವ ಕಾಲಕ್ಕೆ ಎಲ್ಲವೂ ನಿಶ್ಶಬ್ದ, ನೀರವ! ಮೆರವಣಿಗೆಯಲ್ಲಿ ಎಲ್ಲರ ಮುಂದೆ ಜೈಲು ವಾರ್ಡರನಿರುತ್ತಾನೆ ಅವನ ಹಿಂದಿನಿಂದ ಶಿಸ್ತಿನ ಪೋಷಾಕಿನಲ್ಲಿ ಜೈಲಿನ ಬೇರೆ ಬೇರೆ ಅಧಿಕಾರಿಗಳು! ಎಲ್ಲರ ಹಿಂದೆ ಸುಪರಿಂಟೆಂಡೆಂಟ ಸಾಹೇಬರಿರುವರು. ಇವರ ನಡಿಗೆ—ಮದೋನ್ಮತ್ತ ಆನೆಯಂತಿರುವದು; ನೋಡಿದರೆ ಎದೆ ಧಸಕ್ಕೆನ್ನುವದು.

ಭಾರತೀಯ ಜೈಲುಗಳ ಶಾಸನ ವ್ಯವಸ್ಥೆ!

ಲೇಖಕ:—ಶ್ರೀ ಮಹಾಮಾಯಾ ಪ್ರಸಾದ ಸಿಂಹ.

ದುರ್ಭಾಗಿಗಳಾದ ಕೈದಿಗಳು ತಮ್ಮ ದೊನ್ನೆ, ಗಿಂದಲು ಮತ್ತು ಹಿಸ್ಟ್ರಿ-ಟಿಕೇಟು (History Ticket) ತೆಗೆದುಕೊಂಡು ಆ ಸಮಯಕ್ಕೆ ಸಾಲಾಗಿ ನಿಲ್ಲಬೇಕು. ಮೆರವಣಿಗೆ ಬರುವಾಗ "ಸರಕಾರ್ ಸಲಾಮ್" ಎಂಬ ಕರ್ಣಕಠೋರ ಶಬ್ದವು ಕೈದಿಗಳ ಕಿವಿಗಳನ್ನು ಬಾಣದಂತೆ ಭೇದಿಸಿ ಒಳಹೋಗುವದು ಆಗ ಪ್ರತಿಯೊಬ್ಬ ಕೈದಿಯು ಹಿಸ್ಟ್ರಿ ಟಿಕೇಟನ್ನು ಒಂದು ಕೈಯಲ್ಲಿ ಹಿಡಿದು, ಮುಂದೇನೂ ಆಜ್ಞೆಯೋ ಎಂದು ಥರಥರನೆ ನಡುಗುತ್ತ ಎಟೆನ್ಶನ್ ಆಗಿ ನಿಲ್ಲಬೇಕು. ಹೀಗೆ ನಿಲ್ಲುವುದರಲ್ಲಿ ಅಲ್ಪ ಸ್ವಲ್ಪ ಹೆಚ್ಚು ಕಡಿಮೆ ಆಯಿತು ಎಂದರೆ, ಸರಿ, ಆ ಕೈದಿಯ ಭವಿಷ್ಯವು ನಿರಾಶಾಮಯವಾಗುವುದು. ಸುಪರಿಂಟೆಂಡೆಂಟ ಸಾಹೇಬರ ಮೆರವಣಿಗೆ ಆಗಿ ಮುಗಿದ ಬಳಿಕವೇ ಕೈದಿಗಳ ಹಾರಿಹೋದ ಪ್ರಾಣಗಳು ಮರಳಿ ಬರುವವು ಏನೊಂದೂ ತೊಂದರೆಗಳಿಲ್ಲದೆ ಆ ದಿನ ಮೆರವಣಿಗೆ ಆಯಿತೆಂದರೆ, ಕೈದಿಗಳು ಪ್ರಸನ್ನವದನರಾಗುವರು, ಇಲ್ಲವಾದರೆ ಅವರ ಮುಖದಲ್ಲಿ ದುಃಖಛಾಯೆಯು ಹರಡಿಕೊಳ್ಳುವುದು ಇದೇ ಈಗ ಜೈಲುಗಳ 'ಸರಕಾರ್ ಸಲಾಂ'! ಇಂಥ ಪದ್ಧತಿಯಲ್ಲಿ ಯಾವ ನ್ಯಾಯ, ಯಾವ ಧರ್ಮ ಯಾವ ಕರ್ತವ್ಯದ ಪಾಲನೆಯಾಗುತ್ತದೆಂದು ವಾಚಕರಾದರೂ ಆಲೋಚಿಸಿರಿ ಅಥವಾ ಅದರ ಪಾಲನೆಯಿಂದಾಗುವ ಲಾಭವೇನೆಂದಾದರೂ ನೋಡಿಕೊಳ್ಳಿರಿ. 'ಇದು ಕೈದಿಗಳ ಸ್ವಾಭಿಮಾನದ ಮೇಲೆ ಆಘಾತವನ್ನುಂಟುಮಾಡುವ ದುಷ್ಟ ಕ್ರೂರ ಪದ್ಧತಿ ಅಲ್ಲವಾದರೆ ಮತ್ತೇನಾಗಬಹುದು?

ಭೋಜನ

ಜೈಲುಗಳಲ್ಲಿ ಸರ್ವಸಾಧಾರಣ ಕೈದಿಗಳ ಭೋಜನ ವ್ಯವಸ್ಥೆಯನ್ನು ನೋಡಿ ಹೃದಯವು ದ್ರವೀಭೂತವಾಗದೆ ಇರುವುದಿಲ್ಲ ಬೆಳಿಗ್ಗೆ ಕಿಚಡಿಅನ್ನ ಕೊಡಲಾಗುತ್ತದೆ ಈ ಕಿಚಡಿಅನ್ನವನ್ನು ವರ್ಣಿಸಬೇಕಾದದ್ದಿಲ್ಲ ಮಧ್ಯಾಹ್ನ ಬಿಸಿ ಅನ್ನ ಮತ್ತು ಸಾಯಂಕಾಲ ರೊಟ್ಟಿ ಸಿಕ್ಕುತ್ತದೆ ಇದಕ್ಕಾಗಿ ಎಲ್ಲಕ್ಕೂ ಕೀಳಾದ ಅಕ್ಕಿಯನ್ನು ಉಪಯೋಗಿಸುತ್ತಾರೆ. ಜೈಲುಗಳ ತೋಟಗಳಲ್ಲಿ ತುಂಬಾ ತರಕಾರಿಗಳನ್ನು ಬೆಳೆಸುತ್ತಾರೆ ಅವನ್ನು ಕೈದಿಗಳಿಗೆ ಕೊಡುತ್ತಿರಬಹುದೆಂದು ಜನರು ಎಣಿಸಿಯಾರು ಹಾಗೇನೂ ಇಲ್ಲ. ಬೆಳೆಸುವವರು ಕೈದಿಗಳು ನಿಜ, ಆದರೆ ತಿನ್ನುವವರು ಮಾತ್ರ ಅವರಲ್ಲ ಆ ತರಕಾರಿಗಳು ಏನಾಗುತ್ತವೆ ಎಂಬುದನ್ನು ಹೇಳುವ ಆವಶ್ಯಕತೆ ಇಲ್ಲ ಅವು ಕೈದಿಗಳಿಗೆ ಸಿಕ್ಕುವದಿಲ್ಲ ಎಂಬುದನ್ನು ನಿಶ್ಚಯವಾಗಿ ಹೇಳಬಹುದು. ಕುಂಬಳಕಾಯಿ ಹೂಗಳು ಏನಾಗುತ್ತವೆ, ಯಾರೂ ಕೇಳಕೂಡದು ಆದರೆ, ಹೂಕ್ಯಾದ ಮೇಲೆ ಉಳಿದ ದಂಟುಸೊಪ್ಪು ಎಲ್ಲಿಯೊ ಸ್ವಲ್ಪ ಈ ಕೈದಿಗಳಿಗೆ ಸಿಕ್ಕುವುದು

ರೊಟ್ಟಿ

ರೊಟ್ಟಿಗೆ ಬೇಕಾದ ಹಿಟ್ಟನ್ನು ಕೈದಿಗಳು ಬೀಸುವರು. ಆದರೆ, ಬೀಸಿದ ಹಿಟ್ಟಿನ ರೊಟ್ಟಿ ಮಾತ್ರ ಕೈದಿಗಳಿಗೆ ಸಿಕ್ಕುವುದಿಲ್ಲ. ಕೈದಿಗಳು ರೊಟ್ಟಿ ಬೀಸುವುದು ಯಾರಿಗಾಗಿ? ಯಾರು ಹೇಳಬಲ್ಲರು? ಕೈದಿಗಳಿಗೆ ಸಿಕ್ಕುವ ರೊಟ್ಟಿ—ಅರ್ಧ ಸುಟ್ಟಿದ್ದು ಅಥವಾ ಪೂರ್ಣ ಸುಟ್ಟುಹೋದದ್ದು ಆಗಿರುತ್ತದೆ. ಅದು ಕೂಡ ಅವರಿಗೆ ಹೊಟ್ಟೆತುಂಬ ಸಿಕ್ಕುವುದಿಲ್ಲ. ಕಸಕಡ್ಡಿಗಳಿಂದ ಬೆರೆತ ರೊಟ್ಟಿಯನ್ನು ಹೊಟ್ಟೆತುಂಬ ತಿನ್ನಲಿಕ್ಕೂ ಆಗುವುದಿಲ್ಲ.

ಎಣ್ಣೆ

ಜೈಲಿನ ಎಣ್ಣೆಯೆಂದರೆ ಅದು ಬಹು ಉತ್ಕೃಷ್ಟವಾದ್ದು. ಅದನ್ನೇ ಕೈದಿಗಳ ಉಪಯೋಗಕ್ಕೆ ಕೊಡುತ್ತಾರೆಂಬ ಪ್ರತೀತಿ ಬಹು ಕಾಲದಿಂದ ಇದೆ ನಿಜ, ಜೈಲಿನ ಎಣ್ಣೆ ಉತ್ಕೃಷ್ಟವಾಗದೆ ಹೇಗೆ ಉಳಿದೀತು? ಪಶುಗಳಂತೆ ಮನುಷ್ಯರನ್ನೇ ಗಾಣಗಳಿಗೆ ಕಟ್ಟಿ ಜೈಲಿನಲ್ಲಿ ಎಣ್ಣೆ ತೆಗೆಯುತ್ತಾರೆ ದುಃಖದ ವಿಷಯವೆಂದರೆ ಕೈದಿಗಳೇ ಲಜ್ಜಾಮಾನಗಳನ್ನು ಮಾರಿ, ಬೆವರು ರಕ್ತ ಹರಿಸಿ, ಗಾಣದೂಡಿ ತೆಗೆದ ಎಣ್ಣೆ ಅವರಿಗೆ ಸಿಕ್ಕುವುದಿಲ್ಲ! ಹೌದು, ಪಲ್ಯದೊಂದಿಗೆ ಸ್ವಲ್ಪ ಎಣ್ಣೆ ಸೇರುವುದುಂಟು, ಎಲ್ಲಿಯಾದರೂ ಮೈಗೆ ತಿಕ್ಕಲಿಕ್ಕೆ ಸ್ವಲ್ಪ ಕೊಡುವದಿದೆ ಕೈದಿಗಳಿಗೆ ಪೌಷ್ಟಿಕ ಪದಾರ್ಥಗಳನ್ನು ತಿನ್ನಕೊಡಲಿಕ್ಕೆ ಜೈಲುಗಳು ಮಾವನ ಮನೆಗಳೆ? ಇಂಥ ಪರಿಸ್ಥಿತಿಯಲ್ಲಿ ಹೇಗೆ ಬದುಕಿ ಉಳಿಯುತ್ತಾರೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ ಅನ್ನದೊಂದಿಗೆ ತುಪ್ಪವಿಲ್ಲ, ಕುಡಿಯಲಿಕ್ಕೆ ಹಾಲಿಲ್ಲ, ಮಾಂಸವಿಲ್ಲ, ಮೀನು ಇಲ್ಲ — ಯಾವಾಗಲೂ ಒಂದೇ ಪ್ರಕಾರ - ತಿಂದು ತಿಂದು ಬೇಸರ ಬರುವ ಕಿಚಡಿ ಅನ್ನ

ಪಾಯಖಾನೆ

ಜೈಲಿನ ಪಾಯಖಾನೆಗಳು ಬಹಳ ನಿರ್ಮಲವಾಗಿರುತ್ತವೆ ಎಂದು ನಾವು ಹೇಳಬೇಕಾದ್ದೇನಿದೆ? ಒಮ್ಮೆಗೆ ಅಲ್ಲಿಗೆ ಹೋಗಿ ಬಂದರೆ ಎಲ್ಲ ಸಂಗತಿಗಳು ನಿಮಗೇ ತಿಳಿದು ಬರುವವು. ಪಾಯಖಾನೆಗಳಲ್ಲಿ ಮುಚ್ಚುಮರೆ ಇಲ್ಲ! ಎಲ್ಲರೂ ಒಂದೇ ಸಲ ಒಬ್ಬರೆದುರು ಒಬ್ಬರು ಕೂತು ಪಾಯಖಾನೆ ಮಾಡಬೇಕು ಕೊಟ್ಟ ಸಮಯದೊಳಗಾಗಿ ಪಾಯಖಾನೆ ಮಾಡಬೇಕು! ಶೌಚಾದಿಗಳನ್ನು ಪಾಯಖಾನೆಗಳೊಳಗೆ ಮಾಡಬಾರದು, ಹೊರಗೆ ಬಂದು ಎಲ್ಲರೂ ಎಲ್ಲರೆದುರಿಗೆ ಮಾಡಬೇಕು! ಆ ಕಾಲದಲ್ಲಿ ಪಾಯಖಾನೆಯಾದರೆ ದೊಡ್ಡ ಆಪತ್ತೇ ಸರಿ! ಆ ಕಾಲದಲ್ಲಿ ಪಾಯಖಾನೆ ಮಾಡುವದು ದೊಡ್ಡ ಅಪರಾಧ! ಈ ಅಪರಾಧಕ್ಕಾಗಿ ಶಿಕ್ಷೆಯನ್ನು ಅನುಭವಿಸಬೇಕು! ಇಷ್ಟು ಮಾತ್ರವೆ? ಎಲ್ಲಿಯಾದರೂ ರಾತ್ರಿ ಕಾಲಕ್ಕೆ ಪಾಯಖಾನೆಯಾದರೆ, ಮರುದಿನ ಉಪವಾಸ! ಅನ್ನಾಹಾರಗಳಿಲ್ಲ!'—ಹೀಗಿದೆ, ಭಾರತೀಯ ಜೈಲುಗಳ ವ್ಯವಸ್ಥೆ!

ಆರಾಮು, ನಿದ್ರೆ

ಚಳಿಯಾಗಿರಲಿ, ಮಳೆ ಬರುತ್ತಿರಲಿ, ಛಳಿಯಿರಲಿ, ಏನೇ ಆಗಲಿ, ಸರಿಯಾಗಿ ಸಾಯಂಕಾಲ ೬ ಗಂಟೆಗೆ ಕೈದಿಗಳು ತಮ್ಮ ತಮ್ಮ ಸೆಲ್ಲುಗಳಲ್ಲಿಯೋ ವಾರ್ಡುಗಳಲ್ಲಿಯೋ ಒಂದಾಗಿ ಇರಲೇಬೇಕ ಯಾರೊಡನೆಯಾದರೂ ಮಾತನಾಡಕೂಡದು, ಅತ್ತಿತ್ತ ಚಲಿಸಲೂ ಕೂಡದು. ಸುಮ್ಮಗೆ ಬಿದ್ದಲ್ಲೇ ಬಿದ್ದುಕೊಂಡಿರಬೇಕು ಹೀಗೇನಾದರೂ ಮಾಡದಿದ್ದರೆ ಮರುದಿನ ಬೆಳಗಾಗಬೇಕಾದರೆ ಕೈಗೆ ಕೋಳ ಬೀಳುವುದು ಸೆಲ್ಲುಗಳಲ್ಲಿ ರಾತ್ರಿಕಾಲದಲ್ಲಿ ಬೆಳಕಿನ ವ್ಯವಸ್ಥೆಯೇ ಇಲ್ಲ ಹೌದು, ೫೦, ೬೦ ಮಂದಿ ಮಲಗಿಕೊಳ್ಳುವ ವಾರ್ಡುಗಳಲ್ಲಿ ಮಾತ್ರ ಒಂದು ಮಿಣುಕು ದೀಪವು ಉರಿಯುತ್ತ ಇರುತ್ತದೆ ಅದನ್ನು ಸಣ್ಣದು ಯಾ ದೊಡ್ಡದು ಸಹ ಮಾಡಲಿಕ್ಕೆ ಕೂಡದು ರಾತ್ರಿಕಾಲದಲ್ಲಿ ಗಂಟೆ ಗಂಟೆಗೆ ಕೈದಿಗಳ ಲೆಕ್ಕವಾಗಬೇಕು, ಆ ಲೆಕ್ಕವನ್ನು ಕೈದಿಗಳೇ ಮಾಡಬೇಕು. ಲೆಕ್ಕವಾಗುವ ಕಾಲಕ್ಕೆ ಎಲ್ಲಿಯಾದರೊಬ್ಬನು ಮಲಗಿಬಿಟ್ಟನು ಅಥವಾ ಲೆಕ್ಕದಲ್ಲಿ ಅಲ್ಪಸ್ವಲ್ಪ ಹೆಚ್ಚುಕಡಿಮೆ ಆಯಿತೆಂದರೆ, ಬಂತು ಆಪತ್ತು! ಬಡಿಕೆ ತಿಗಣೆ ಇವುಗಳಿಂದ ಇಡೀ ರಾತ್ರಿ ನಿದ್ರೆಯಿಲ್ಲ. ಕೈದಿಗಳಿಗೆ ಬೇಕಾದಷ್ಟು ಆಹಾರವನ್ನು ಕೊಡುವದಿಲ್ಲ. ಯಾಕೆಂದರೆ ಅಜೀರ್ಣವಾಗಿಬಿಟ್ಟರೆ ಮೋಸವಷ್ಟೆ! ಆದರೆ, ಚಳಿಗಾಲದಲ್ಲಿ ಕೂಡ ಕೈದಿಗಳಿಗೆ ಹೊದೆದುಕೊಳ್ಳಲಿಕ್ಕೆ ಒಂದು ಕಂಬಳಿಯನ್ನಾದರೂ ಯಾಕೆ ಕೊಡುವುದಿಲ್ಲವೆಂದು ಗೊತ್ತಾಗುವುದಿಲ್ಲ.

ಉಡಿಗೆತೊಡಿಗೆ.

ಒಂದು ಚಡ್ಡಿ, ಒಂದು ಕುರ್ತಾ, ತಲೆ ಮೇಲೆ ವಿಚಿತ್ರ ಪ್ರಕಾರದ ಒಂದು ಟೊಪ್ಪಿಗೆ ಅಲ್ಲದೆ ಕೈದಿಗಳಿಗೆ ಬೇರೆ ಯಾವ ಪೋಷಾಕನ್ನೂ ಕೈದಿಗಳಿಗೆ ಕೊಡುವುದಿಲ್ಲ ಎಲ್ಲ ಋತುಕಾಲಗಳಲ್ಲಿ ಇದೊಂದೇ ಪ್ರಕಾರದ ಉಡಿಗೆ ಇರುವದು ಅದರಲ್ಲಿ ವ್ಯತ್ಯಾಸವಾಗುವುದೇ ಇಲ್ಲ.

ಔಷಧಿ ಚಿಕಿತ್ಸೆ

ಜೈಲುಗಳಲ್ಲಿ ಔಷಧಿ ಚಿಕಿತ್ಸೆಯ ವ್ಯವಸ್ಥೆ ಹೆಸರು ಪೂರ್ತಿಗೆ ಮಾತ್ರ ಇರುವದು. ಔಷಧಿ ಕಡಿಮೆಯಾದರೆ ನೀರು ಬೆರಸುವರು ಹಾಲು ಕಡಿಮೆಯಾದರೆ ನೀರು ಬೆರಸುವರು ಹೀಗೆ ಜೈಲುಗಳಲ್ಲಿ ನೀರಿಗೆ ಮಹತ್ವಪೂರ್ಣ ಸ್ಥಾನವು ಪ್ರಾಪ್ತವಾಗಿದೆ ಅನೇಕಾನೇಕ ರೋಗಗಳಲ್ಲಿ ನೀರೊಂದೇ ರಾಮಬಾಣ ಔಷಧಿಯಾಗಿರುವದ ಜೈಲುಗಳಲ್ಲಿ ಸರ್ವಸಾಧಾರಣ ರೋಗಗಳು ರೋಗಗಳೇ ಅಲ್ಲ!

ಥಾಲಿ ಮತ್ತು ಗಿಂದಲು

ಜೈಲುಗಳ ಥಾಲಿಗಿಂದಲುಗಳು ಅತ್ಯಂತ ಪ್ರಸಿದ್ಧವಾಗಿರುವವು ಈ ಥಾಲಿಗಿಂದಲುಗಳು ಕಬ್ಬಿಣದವಾಗಿರುತ್ತವೆ. ಮತ್ತೆ ಅವು ಕಡಾಯಿಗಳಂತೆ ಸ್ವಚ್ಛವಿರುವವು! ಇವೆರಡರಿಂದಲೇ ಕೈದಿಗಳ ಎಲ್ಲಾ ಕೆಲಸಗಳಾಗಬೇಕು ಜೈಲುಗಳಲ್ಲಿ ಕಬ್ಬಿಣದ ಥಾಲಿಗಿಂದಲುಗಳನ್ನು ಯಾಕೆ ಉಪಯೋಗಿಸುತ್ತಾರೊ ಗೊತ್ತಿಲ್ಲ.

ಪರಿಶ್ರಮ

ಕೈದಿಗಳು ಜೈಲಿಗೆ ಹೋಗಬೇಕಾದರೆ ಮೊದಲು ಡಾಕ್ಟರರು ಅವರ ಪರೀಕ್ಷೆಮಾಡುತ್ತಾರೆ ಆ ಮೇಲೆ ಅವರಿಗೆ ಯಾವ ಶಿಕ್ಷೆಯಾಗಿದೆಯೋ ಅದೇ ತರಹದ ಕೆಲಸವು ಕೊಡಲ್ಪಡುತ್ತದೆ ಕಠಿಣ ಸಜೆಯಾದವರಿಗೆ ಹಿಟ್ಟು ಬೀಸುವ ಅಥವಾ ಗಾಣವಾಡುವ ಕೆಲಸ, ಸುಲಭ ಸಜೆಯಾದವರಿಗೆ ಹಗ್ಗ ಹೊಸೆಯುವ ಒಟ್ಟಿನೇಯುವ ಕೆಲಸ ಹೀಗೆ ಇರುತ್ತದೆ ಒಪ್ಪಿಸಿದ ಕೆಲಸ ಮಾಡದಿದ್ದರೆ ಆಪತ್ತೇ ಸರಿ ಮಾಡಿದರೆ ಕೆಲಸ ಪೂರ್ಣ ಆಗದೆ ಇದ್ದರೂ ಸ್ವಲ್ಪ ಕುಂದುಕೊರತೆ ಇದ್ದರೂ ಕೂಡ ಗಂಡಾಂತರಕ್ಕೆ ಸಿಕ್ಕಿಬಿದ್ದ ಹಾಗಾಗುವದು. ಕೈದಿಯು ಬಲಿಷ್ಠನಾಗಿರಲಿ ನಿರ್ಬಲನಾಗಿರಲಿ, ಯಾರೂ ಅದರ ವಿಚಾರಮಾಡ ವುದಿಲ್ಲ ಕಠಿಣ ಸಜೆಯಾದವರ ಜೈಲು ಜೀವನವು ನರಕವಾಸಕ್ಕೆ ಸಮಾನ! ಎಷ್ಟು ಗೋದಿಯನ್ನು ಬೀಸಲಿಕ್ಕೆ ಕೊಡುತ್ತಾರೊ ಅಷ್ಟನ್ನು ಸಮಯಕ್ಕೆ ಸರಿಯಾಗಿ ಬೀಸಿ ಮುಗಿಸಲೇ ಬೇಕು ಹೀಗೆ ಮಾಡದಿದ್ದರೆ ಮೊದಲು ಬೈಗಳ ಸುರಿಮಳೆ, ಆಮೇಲೆ ಬೆತ್ತದೇಟಿನ ಹೊಡೆತಯಿರುವದು ವಾರ್ಡರ ಮತ್ತು ಜಮಾದಾರರು ಕೂಡಿ ಇಷ್ಟು ಶಿಕ್ಷೆಕೊಟ್ಟ ಮೇಲೆ ಅವರು ಸುಪರಿಂಟೆಂಡೆಂಟರಿಗೆ ರಿಪೋರ್ಟು ಮಾಡುತ್ತಾರೆ ಆಗ ಇವರೆಲ್ಲರ ಎಷ್ಟು ನಿರ್ದಯತಾಪೂರ್ಣ ವ್ಯವಹಾರವಿರುವುದೆಂದರೆ—ಅವರು ರಾಕ್ಷಸರಿಗಿಂತಲೂ ಕಠಿಣರಾಗಿ ತೋರುವರು ಸರ್ವಸಾಧಾರಣ ತಪ್ಪಿಗಾಗಿ ದೊಡ್ಡ ದೊಡ್ಡ ಶಿಕ್ಷೆಯನ್ನು ಕೊಟ್ಟ ಆ ಅಧಿಕಾರಿಗೆ ತೃಪ್ತಿಯಿರುವುದಿಲ್ಲ

ಫಾಶೀ

ಫಾಶೀ ಕೊಡುವದು ಸರಿಯೋ ತಪ್ಪೋ ಎಂಬುದನ್ನು ಚರ್ಚಿಸುವದು ಈ ಲೇಖನದ ವಿಷಯವಾಗಿರುವುದಿಲ್ಲ. ಆದರೂ ಫಾಶಿ ಹೇಗೆ ಕೊಡುತ್ತಾರೆಂಬುದನ್ನು ಸ್ವಲ್ಪ ಹೇಳುವದು

4ನೇ ಪುಟಕ್ಕೆ ಮುಂದರಿಸಿದೆ.

ಮಂಗಳೂರು.

ಸ್ಟೀಮರ್ ಚಲಾವಣೆ. (ಮಂಗಳವಾರದ ಹೊರಡುವಿಕೆ) ದಿ ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿ, ಲಿಮಿಟೆಡ್, ಇವರ ಮಂಗಳೂರಿಗೆ ಪ್ರತಿ ಸೋಮವಾರ ಬೆಳಿಗ್ಗೆ ತಲುಪುತಿದ್ದ ಸ್ಟೀಮರು ಇನ್ನು ಮೇಲೆ ಆದಿತ್ಯವಾರ ದಿವಸಗಳಲ್ಲಿ ಸಾಯಂಕಾಲ ೪ ಘಂಟೆಗೆ ಮಂಗಳೂರಿಗೆ ತಲುಪುವುದು. ಪ್ರಯಾಣಿಕರ ಮಷೀನು ಬೆಳಿಗ್ಗೆ ೭-೩೦ ಘಂಟೆಗೆ ದಕ್ಕೆಯಿಂದ ಬಿಡಲಾಗುವುದು. ಕ್ಲಪ್ತತೆಯನ್ನು ಯಾರೂ ವಿರೋಧಿಸಲಾಗದು. ಪ್ರಯಾಣಿಕರು ಟಿಕೇಟುಗಳನ್ನು ಪಡಕೊಳ್ಳಲಿಕ್ಕೂ, ತಮ್ಮ 'ಲಗ್ಗೇಜ್' ಸಾಮಾನುಗಳನ್ನು ತಪಾಸಿಕೊಳ್ಳಲಿಕ್ಕೂ, ಬೆಳಿಗ್ಗೆ ೭-೩೦ ಘಂಟೆಯೊಳಗಾಗಿ ಬಂದರದಲ್ಲಿ ಹಾಜರಿರಬೇಕು.

(ಶುಕ್ರವಾರದ ಹೊರಡುವಿಕೆ) ಇದು ವರೆಗೆ ಮಂಗಳೂರಿಗೆ ಗುರುವಾರ ದಿವಸಗಳಲ್ಲಿ ಬಂದು ಶನಿವಾರ ದಿನಗಳಲ್ಲಿ ಹಿಂತಿರುಗುವ ಸ್ಟೀಮರು ಇದು ಮೊದಲ್ಗೊಂಡು ಶುಕ್ರವಾರ ಬೆಳಿಗ್ಗೆ ಮುಂಬಾಯಿ ಬಂದರಕ್ಕೆ ಹೊರಡುವುದು.

ಮಂಗಳೂರಿನ ಪ್ರೆಸ್ ಕೆಲಸಗಾರರ ದ್ವಿತೀಯ ಮಹಾಸಭೆ:— ಈ ಸಭೆಯು ಇದೇ ತಾ. ೧೨-೯-'೩೭ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೯-೩೦ಕ್ಕೆ ರಥಬೀದಿಯಲ್ಲಿರುವ ಮಂಗಳೂರು ಕಾಂಗ್ರೆಸ್ ಸಮಾಜವಾದಿ ಆಫೀಸಿನಲ್ಲಿ ಜರಗುವುದು. ಆದುದರಿಂದ ಪ್ರೆಸ್ ಕೆಲಸಗಾರರೆಲ್ಲರೂ ಈ ಸಭೆಗೆ ತಪ್ಪದೆ ಬರಬೇಕಾಗಿ ಇದರ ಜತೆ ಕಾರ್ಯದರ್ಶಿಗಳಾದ ಕೆ. ಎ. ಶೆಟ್ಟಿ ಇವರು ತಿಳಿಸುತ್ತಾರೆ.

ಮಂಗಳೂರು ಮಹಿಳೆಯರ ಸಂಘ: ಶ್ರೀಮತಿ ಕಮಲಾ ದೇವಿಯವರ ಕೆಲಸದ ಪರಿಣಾಮವಾಗಿ ಮಂಗಳೂರು ಮಹಿಳೆಯರ ಮಹಾಸಭೆಯೊಂದು ಇದೇ ತಾ. ೩೦-೮-'೩೭ರಲ್ಲಿ ಮಂಗಳೂರಿನ ಬೆಸೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ನೆರೆಯಿತು. ಮಹಿಳೆಯರ ಕೆಲಸದ ಕುರಿತು ಅಭಿಪ್ರಾಯ ವಿನಿಮಯವು ನಡೆಯಿತು. ಕೊನೆಗೆ ಅಖಿಲ ಭಾರತ ಮಹಿಳಾ ಸಭೆಯ ಕರ್ನಾಟಕ ಶಾಖೆಯಾಗಿ ಇಲ್ಲಿ ಒಂದು ಸಂಘವನ್ನು ಸ್ಥಾಪಿಸಬೇಕೆಂಬ ನಿರ್ಧಾರವಾಯಿತು. ಸ್ತ್ರೀಯರ ಹಿತಸಾಧಕ ಹಾಗೂ ಮಹಿಳಾ ಜಾಗೃತಿ ಸಮಿತಿಯೊಂದನ್ನು ರಚಿಸಲಾಯಿತು. ಕಾರ್ಖಾನೆಗಳಲ್ಲಿ ಕೆಲಸಮಾಡುವ ಕೂಲಿಗಾರ ಹೆಂಗಸರಲ್ಲಿ ಪ್ರಚಾರವನ್ನು ಮಾಡುವದೆ ಒಂದು ಸಮಿತಿಯನ್ನು ರಚಿಸಲಾಯಿತು. ಅಲ್ಲದೆ ಸಂಘದ ಅಧ್ಯಕ್ಷೆ, ಕಾರ್ಯದರ್ಶಿ, ಖಜಾಂಚಿಯರ ಚುನಾವಣೆಯು ನಡೆಯಿತು.

ಜಿಲ್ಲಾ ಬೋರ್ಡ್ ಚುನಾವಣೆ— ಲೋಕಲ್ ಬೋರ್ಡ್ ಆಕ್ಟಿನಲ್ಲಿ ಈಗಿನ ಮಂತ್ರಿಮಂಡಲದವರು ತಿದ್ದುಪಡಿ ಮಾಡಲಿರುವರೆಂದೂ ಎಲೆಕ್ಟೊರರ ಪಟ್ಟಿಯನ್ನೆ ಈ ಚುನಾವಣೆಗಳಲ್ಲಿ ಉಪಯೋಗಿಸುವ ಸಂಭವವಿದೆಯೆಂದೂ ತಿಳಿದುಬಂದಿರುವುದರಿಂದ ಬರುವ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದ್ವಾರರಾಗಲು ಅರ್ಜಿ ಹಾಕುವ ಸಮಯವನ್ನು ಜಿಲ್ಲಾ ಕಾಂಗ್ರೆಸ್ ಚುನಾವಣಾ ಸಮಿತಿಯವರು ಒಂದು ತಿಂಗಳಿಗೆ ಮುಂದರಿಸಿರುವರು ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಾದ ಹಿ. ರಾಮರಾಯ ಮಲ್ಯ ಅವರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಕೆಲಸಗಾರರ ಪರಿಷತ್ತು ಸೇರುವುದು.

ಜಿಲ್ಲೆಯ ಕೆಲಸಗಾರರಲ್ಲಿ ಮತ್ತು ಮಹಾಜನರಲ್ಲಿ ವಿನಂತಿ—ಇದೀಗ ಕೆಲಸಗಾರರ ಜಾಗೃತಿಯ ಕಾಲ. ಈ ಮಾತಿಗೂ ದಕ್ಷಿಣ ಕನ್ನಡಕ್ಕೂ ಸಂಬಂಧವಿಲ್ಲವೆನ್ನಬಹುದೆ? ಕೆಲಸಗಾರರ ಪ್ರಾಮುಖ್ಯತೆಯನ್ನು ನಾವು ಮರೆಯಲು ಸಾಧ್ಯವೆ? ಕೆಲಸಗಾರರ ಜಾಗೃತಿಯು — ಅವರ ಪ್ರಾಮುಖ್ಯತೆಯು ಒಂದು ಅನಾವಶ್ಯ ಕಲ್ಪನೆ ಮಾತ್ರವಾಗಿರುತಿದ್ದರೆ ನಾವು ನಮ್ಮ ಜಿಲ್ಲೆಯ ಮಟ್ಟಿಗೆ ಅದು ಬೇಡವೆನ್ನಬಹುದಿತ್ತು. ಇದು ಹಾಗಲ್ಲ. ಬಸ್ ಕೆಲಸಗಾರರ, ಬೀಡಿ ಕೆಲಸಗಾರರ, ಹೊಟೆಲು ಕೆಲಸಗಾರರ, ಪ್ರೆಸ್ ಕೆಲಸಗಾರರ ಪ್ರಾಮುಖ್ಯತೆಯನ್ನು ನಾವು ಹೇಗೆ ಮರೆಯಲಿ? ನಮ್ಮ ನಿತ್ಯಜೀವನದ ಅನುಕೂಲತೆಗಳನ್ನು ಒದಗಿಸಿಕೊಡುವವರು ಇವರೇ! ಇವರೆಲ್ಲ ಒಮ್ಮನಸ್ಸಿನಿಂದ ತಾವೂ ಇದ್ದೇವೆಂಬುದನ್ನು ತೋರಿಸುವ ಸಲುವಾಗಿಯಾದರೂ ಒಂದೇ ಒಂದು ದಿನ ತಮ್ಮ ಕೆಲಸದ ಕೈ ಬಿಟ್ಟು ನಿಂತುಕೊಂಡರೆಂದರೆ ಆ ದಿನವು ನಮಗೆಲ್ಲಾ ಹದಿನೈದನೇ ಶತಮಾನದ ಒಂದು ದಿನವಾಗಬಹುದು! ಅದ್ದರಿಂದ ಮಹಾಜನರೆ, ಅವರ ಪ್ರಾಮುಖ್ಯತೆಯನ್ನು ಮನಗಾಣಿರಿ! ಕೆಲಸಗಾರ ಬಂಧುಗಳೇ, ನೀವೂ ನಿಮ್ಮ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಿರಿ. ಮಂಗಳೂರಿನಲ್ಲಿ ಸ್ಥಾಪಿಸಲಟ್ಟಿರುವ (ಪ್ರೆಸ್ ಕೆಲಸಗಾರರ ಸಂಘ) 'ಬಸ್ ಕೆಲಸಗಾರರ ಸಂಘ' 'ಬೀಡಿ ಕೆಲಸಗಾರರ ಸಂಘ' 'ಹೊಟೆಲು ಕೆಲಸಗಾರರ ಸಂಘ'—ಇವೆಲ್ಲಾ ಸಂಘಗಳು ಒಟ್ಟಾಗಿ ದ. ಕ. ಜಿಲ್ಲಾ ಕೆಲಸಗಾರರ ಪರಿಷತ್ತನ್ನು ಕರೆಯಬೇಕೆಂದು ನಿರ್ಧರಿಸಿರುವೆವು. ಬರುವ ನವಂಬರದಲ್ಲಿ ಆ ಪರಿಷತ್ತು ಸೇರಲಿರುವದು. ಅದಕ್ಕಾಗಿ ಸ್ವಾಗತ ಸಮಿತಿಯು ರಚಿಸಲ್ಪಟ್ಟಿರುವದು. ಎಲ್ಲಾ ಕೆಲಸಗಾರರೂ ಸಹಕರಿಸಿರಿ! ಮಹಾಜನರೂ ಪ್ರೋತ್ಸಾಹಿಸಿರಿ!! ಮೇಲಿನ ಕೆಲಸಗಾರರ ಸಂಘಗಳು ಇಲ್ಲದ ಕಡೆಗಳಲ್ಲಿ ಕೂಡಲೇ ಸಂಘಗಳನ್ನು ಸ್ಥಾಪಿಸಿ ಪರಿಷತ್ತಿಗೆ ಪ್ರತಿನಿಧಿಗಳನ್ನು ಕಳುಹಿಸಲು ತಯಾರಾಗಿರಿ! ಅದಕ್ಕಾಗಿ ಬೇಕಾಗುವ ಮಾಹಿತಿಗೆ ನಮಗೆ ಬರೆದುಕೊಳ್ಳಿರಿ! 'ನಮ್ಮ ಶಕ್ತಿಯೊಂದೇ ನಮ್ಮನ್ನು ಕಾಪಾಡುವ ಸಾಧನ'—ಎಂಬ ಅಚಲ ವಿಶ್ವಾಸದಿಂದ ಮುಂದೊತ್ತಿರಿ!!

ಸ್ವಾಗತ ಸಮಿತಿ,
ದ. ಕ. ಜಿಲ್ಲಾ ಲೇಬರ್ ಪರಿಷತ್ತು.

ಮದ್ರಾಸು ಅಧಿಪತ್ಯದ ಗ್ರಾಮಾಧಿಕಾರಿಗಳ ಸಂಘ— ಈ ಸಂಘದ ಕಾರ್ಯದರ್ಶಿಯವರು ನಮ್ಮ ಜಿಲ್ಲೆಯ ಗ್ರಾಮಾಧಿಕಾರಿಗಳ ಅವಗಾಹನೆ ಬಗ್ಗೆ ಈ ಕೆಳಗಿನ ಒಂದು ಪ್ರಕಟಣೆಯನ್ನು ಕಳುಹಿಸಿ ಕೊಟ್ಟಿರುವರು. ಈಚೆಗೆ ನಾನು 'ಮದ್ರಾಸು ಮೈಲು' ಪತ್ರಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಶ್ಯಾನುಭೋಗರ ಪರಿಷತ್ತಿನ ವಾರ್ತೆಯನ್ನು ಓದಿದೆನು. ಅಲ್ಲಿ ಅವರು ತಮ್ಮ ಹಿತಸಾಧನೆಯ ಕೆಲವು ನಿರ್ಣಯಗಳನ್ನು ಮಾಡಿರುವರು. ಆದರೆ ಮದ್ರಾಸು ಅಧಿಪತ್ಯದ ಗ್ರಾಮಾಧಿಕಾರಿ ಸಂಘದ ಕಾರ್ಯದರ್ಶಿಯಾಗಿ, ಅವುಗಳು ಸಂಕುಚಿತ ಮನಸ್ಸನ್ನು ಪ್ರಕಟಿಸುತ್ತವೆಂದು ತಿಳಿಸಲು ನಾನು ಇಚ್ಛಿಸುತ್ತೇನೆ. ಅವುಗಳಿಂದ ಅವರ ಅಭ್ಯುದಯವಾಗುವ ಬದಲಾಗಿ ಅವರಿಗೆ ಹಾನಿ ಉಂಟಾಗಬಹುದು.

ಎಲ್ಲಾ ಗ್ರಾಮಾಧಿಕಾರಿಗಳ ಐಕ್ಯದಿಂದ ಕಾರ್ಯ ಸಾಧಿಸುವುದರಲ್ಲಿ ಒಳ್ಳಿದಿದೆ ಎಂಬುದಾಗಿ ಈ ಪತ್ರಿಕೆಯ ಮೂಲಕ ಸಂಬಂಧಪಟ್ಟ ಎಲ್ಲವರೊಡನೆ ನನ್ನ ವಿನಂತಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ಯಾನುಭೋಗ, ಪಟೇಲ ಇತ್ಯಾದಿ ಗ್ರಾಮಾಧಿಕಾರಿಗಳು ಕೂಡಿ ಒಂದು ಸಂಘವನ್ನು ಸ್ಥಾಪಿಸಬೇಕು. ಅದನ್ನು ಪ್ರಾಂತ್ಯಕೀಯ ಸಂಘದೊಡನೆ ಕೂಡಿಸಬೇಕು. ಹಾಗೆ ಮಾಡಿದರೆ ಹಿತವುಂಟು.

'ಒಕ್ಕಟ್ಟಿನಲ್ಲಿ ಬಲವಿದೆ' ಎಂಬ ನಾಣ್ಣುಡಿಗೆ ಸರಿಯಾಗಿ ಗ್ರಾಮಾಧಿಕಾರಿಗಳು ಐಕ್ಯವಾಗಿ ಯಾವತ್ತು ಕಾರ್ಯಗಳನ್ನು ನಡೆಯಿಸುವಂತಾಗಬೇಕು.

ನಿಮ್ಮ ಜಿಲ್ಲೆಯ ಸಂಘವನ್ನು ಅಧಿಪತ್ಯದ ಸಂಘದೊಡನೆ ಕೂಡಿಸುವದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ (ಪಿ. ರಾಮಸ್ವಾಮಿ, ಕಾರ್ಯದರ್ಶಿ, ಮದ್ರಾಸು ಅಧಿಪತ್ಯ ಗ್ರಾಮಾಧಿಕಾರಿಗಳ ಸಂಘ, ೪೫ ತಂಬು ಚೆಟ್ಟಿ ಬೀದಿ, ಮದ್ರಾಸು).

ಮೂಲ್ಕಿ:— ಬರುವ ಜಿಲ್ಲಾ ರಾಜಕೀಯ ಪರಿಷತ್ತು ಮೂಲ್ಕಿಯಲ್ಲಿ ಜರುಗಿಸಲ್ಪಡುತ್ತದೆಂದು ತಿಳಿದು ಬರುತ್ತದೆ.

ಶ್ರೀಯುತ ಕಾರ್ನಾಡ ಮಂಜುನಾಥ ನಾಯಕರು ಮೂಲ್ಕಿ ಪರವಾಗಿ ಉಮೇದುವಾರರಾಗಿ ಡಿ. ಬೋರ್ಡಿಗೆ ನಿಲ್ಲುತ್ತಾರೆಂದು ತಿಳಿದುಬಂದಿತ್ತಷ್ಟೆ. ಈಗ ತನ್ನ ಉಮೇದ್ವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿರುತ್ತಾರಾಗಿ ತಿಳಿದುಬರುತ್ತದೆ.

ಇದೇ ಬರುವ ಅಕ್ಟೋಬರ ಮಧ್ಯ ವಾರದಿಂದ ಪ್ರಾರಂಭವಾಗಿ ಸ್ಟೀಮರುಗಳು ಮೂಲ್ಕಿಯಲ್ಲಿ ಪೆಸೆಂಜರರ ಬಗ್ಗೆ ನಿಲ್ಲುತ್ತವೆಯೆಂದು ಖಂಡಿತವಾಗಿ ತಿಳಿದುಬರುತ್ತದೆ.

ಹೆಜಮಾಡಿ:— ಹಿಂದೂ ಮಹಾಸಭೆಯ ಮೈಸೂರು ಶಾಖಾ ಕಾರ್ಯದರ್ಶಿಯರಾದ ಶ್ರೀಯುತ ಅಲೆವೂರು ಶೇಷಪ್ಪಯ್ಯ ಇವರು ತಾ. ೨೯-೮-'೩೭ರಲ್ಲಿ ಕೋಡಿಯಲ್ಲೂ ತಾ. ೩೧-೮-'೩೭ಕ್ಕೆ ಇಲ್ಲಿಯೂ ಹಿಂದೂ ಸಂಘಟನೆಯ ವಿಚಾರದಲ್ಲಿ ಭಾಷಣಮಾಡಿದರು. ಮೇಲಿನ ಎರಡೂ ಕಡೆಗಳಲ್ಲಿಯೂ ಅದೇ ದಿನಗಳಲ್ಲಿ ಮೂಲ್ಕಿ ಕಾಂಗ್ರೆಸ್ ಕಮ್ಮಿಟಿ ಮುಖಾಂತರ ಪ್ರಚಲಿತ ಕಾಂಗ್ರೆಸ್ ಮಂತ್ರಿಗಳ ಕಾರ್ಯಕ್ರಮಗಳ ವಿಚಾರದಲ್ಲಿ ಭಾಷಣಗಳು ಕೂಡಾ ನಡೆದುವು.

ಎಲ್ಲೂರು:— ಇಲ್ಲಿಯ ಪಟೇಲರೂ ಪಂಚಾಯತ ಕೋರ್ಟು ಪ್ರೆಸಿಡೆಂಟರೂ ಆಗಿರುವ ಎಲ್ಲೂರುಗುತ್ತು ಚಂದು ಯಾನೆ ದೂಮಪ್ಪ ಸೆಟ್ಟಿಯವರ ಪ್ರಯತ್ನದಿಂದಲೂ, ನಿಸ್ವಾರ್ಥ ದೃಷ್ಟಿಯ ಕೆಲ ಮಹಾಶಯರ ಉದಾರ ಪ್ರೋತ್ಸಾಹದಿಂದಲೂ ದೂನ್ನ ಟಪ್ಪಾಲು ಇಲಾಖೆಯವರು ಇದೇ ೧-೯-'೩೭ನೇ ಬುಧವಾರ ದಿವಸ ಗ್ರಾಮಕೇಂದ್ರವಾದ ಎಲ್ಲೂರು ದೇವಸ್ಥಾನದ ಪಕ್ಕದಲ್ಲಿ ಒಂದು ಟಪ್ಪಾಲು ಕಛೇರಿಯನ್ನು ತೆರೆದಿರುವರು. ಊರ ಮಹನೀಯರ ಮನವಿಗೆ ಗಮನಕೊಟ್ಟು, ಇದ್ದ ತೊಡಕುಗಳನ್ನು ವಿಮರ್ಶನಾತ್ಮಕ ದೃಷ್ಟಿಯಿಂದ ಮಾನ್ನ ಅಲಕ್ಷಿಸದೆ ಸ್ಥಾಪಿಸಿದ ಈ ಟಪ್ಪಾಲು ಕಛೇರಿಯು ಅಭಿವೃದ್ಧಿಗೊಂಡು ನೆಲೆಸಲಿ.



ತಾಲೂಕುಗಳಿಂದ.

ಉಡುಪಿ
(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ. ೬ನೇ ಸಾಯಂಕಾಲ ೬ ತಾಸಿಗೆ ಶ್ರೀ ಪೇಜಾವರ ಮಠದ ವ್ಯಾಖ್ಯಭವನದಲ್ಲಿ ಸರಸ್ವತಿ ಭಂಡಾರದಲ್ಲಿ ಪೇಜಾವರ ಮಠದ ಶ್ರೀ ವಿಶ್ವಜ್ಞ ತೀರ್ಥ ಶ್ರೀಪಾದಂಗಳವರ ಭಾವಚಿತ್ರ ಅನುವರಣ ಸಮಾರಂಭವು ಡಿ. ಮ್ಯುರಾದ ಶ್ರೀ ಆರ್. ಎಮ್. ವಿ. ಎಸ್. ರಾಯರ (ಎಮ್. ಎ. ಬಾರ್-ಎಟ್-ಲಾ) ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಗವರ್ನಮೆಂಟು ಕಾಲೇಜಿನ ಪಂಡಿತರಾದ ಶ್ರೀ ಸೀತಾರಾಮಾಚಾರ್ಯರಿಂದ ಜರಗಿಸಲ್ಪಟ್ಟಿತು.

ಕಳೆದ ಆಗೋಸ್ತು ತಾ. ೩೦ರಲ್ಲಿ ಜರಗಿದ ಸ್ಥಳೀಯ ಮ್ಯುನಿಸಿಪಲ್ ಸಭೆಯಲ್ಲಿ ಮ್ಯುನಿಸಿಪಲ್ ಕಮಿಶನರರು ಮಾಹೆಯಾನ ರೂ. ೭೫ರ ಸಂಬಳದವರನ್ನು ಕೊಡಿಸಬೇಕೆಂಬ ಸರಳವಾದವನ್ನು ಕೇಳಿಕೊಳ್ಳುವಂತೆಯೂ, ಸದ್ಯದ ಕಮಿಶನರರ ಮೇಲೆ ಯಾವ ದೋಷಾರೋಪಣೆಯಿಲ್ಲವೆಂದೂ, ಅವರೇ ಈ ಕಡಿಮೆ ಸಂಬಳಕ್ಕೆ ದಯವಿಟ್ಟು ಒಪ್ಪುವುದಾದರೆ ಅವರೇ ನಮ್ಮ ಕಮಿಶನರರಾಗಬಹುದೆಂದೂ ಡಾ॥ ಟಿ. ಜಿ. ಆಚಾರ್ಯರ ಸೂಚನೆಯನ್ನು ಶ್ರೀ ಎಲ್. ಎಸ್. ನಾಯಕರು ತಂದ ಆಕ್ಷೇಪದಿಂದಾಗಿ ಮಾನ್ಯ ಅಧ್ಯಕ್ಷರ ಸೂಚನೆಯನ್ನು ಎಜೆಂಡಾದಲ್ಲಿರಿಸಲು ಒಪ್ಪಲಿಲ್ಲವಷ್ಟೆ. ಈ ಬಗ್ಗೆ ಜನತೆಯಲ್ಲಿ ಉಳಿದ ಸದಸ್ಯರ ಮಟ್ಟಿಗೆ ತಪ್ಪು ಅಭಿಪ್ರಾಯ ಉಂಟಾಗಿರುತ್ತದೆ. ಜನಹಿತ ದೃಷ್ಟಿಯಿಂದ ಮ್ಯುನಿಸಿಪಾಲಿಟಿಯು ಮಿತವ್ಯಯವಾಗಬೇಕೆಂದು ಪ್ರಯತ್ನಪಟ್ಟರೂ ಡಾ॥ ಆಚಾರ್ಯರನ್ನು ಪುರಸ್ಕರಿಸಲಿಲ್ಲವೆಂದೂ ಮ್ಯುನಿಸಿಪಾಲಿಟಿ ಬೇಡವೆಂದೂ ತಮಗೆಲ್ಲ ತಿಳಿದುದಷ್ಟೆ ತೋರಿತು. ಈ ವ್ಯಾಸಕ್ಕೆ ಯಾವ ಸದಸ್ಯನಾಗಲಿ ಧುರೀಣನಾಗಲಿ ಉತ್ಸುಕನಿಲ್ಲವೆಂದೂ ಭಾವನೆಯಾಗಿದೆ. ಆದರೆ ಮ್ಯುನಿಸಿಪಾಲಿಟಿಯು ಹಿಂದಣ ಸಭೆಯೊಂದರಲ್ಲಿ ಮೊದಲೇ ಹೆಚ್ಚಿನ ಸಂಬಳದವರೆಂದು ಜನತೆಯಲ್ಲಿ ಅಸಮಾಧಾನ (ಸ್ವತಃ ಇವರ ಯಾವ ದೋಷ ಕೊರತೆಗಳಿಲ್ಲದಿರಲು) ಸೆನಿಟರಿ ಇನ್ಸ್‌ಪೆಕ್ಟರಿಗೆ ಮಾಹೆಯಾನ ರೂ. ೧೦ನ್ನು ಎಲ್ಲೊವನ್ಸಾಗಿ ಶಿಫಾರಸು ಮಾಡಿ ಪತ್ರ ಬರಲು, ಸರ್ವಾನುಮತದಿಂದ ಬಡ್ತಿಯನ್ನು ಅಂಗೀಕರಿಸಲಾಗಿತ್ತು. ಅಂದು ಡಾ॥ ಆಚಾರ್ಯರೂ ಹಾಜರಿದ್ದರು. ಮ್ಯುನಿಸಿಪಲ್ ಸಿಬ್ಬಂದಿಯ ಖರ್ಚನ್ನು ಯಥಾರ್ಥವಾಗಿ ತಗ್ಗಿಸಬೇಕೆಂದಿದ್ದರೆ ಅಂದು ಡಾ॥ ಆಚಾರ್ಯರು ಒಂದು ಉಪಸೂಚನೆಯನ್ನು ತಂದು ನೋಡಬಹುದಿತ್ತು. ಇಲ್ಲವೆ ತಕ್ಕ ಕಾಲದಲ್ಲಿ ಸೆನಿಟರಿ ಇನ್ಸ್‌ಪೆಕ್ಟರ ಮತ್ತು ಕಮಿಶನರರ ಸಂಬಳವನ್ನು ಕಡಿಮೆಮಾಡಬೇಕಾಗಿ ಯುಕ್ತರೀತಿಯಲ್ಲಿ ಸಭೆ ಕರೆಯಿಸಿ, ಚರ್ಚಿಸಬಹುದಿತ್ತು. ಕಮಿಶನರರನ್ನು ನೇಮಿಸುವ ಹಕ್ಕು ಸ್ವಾತಂತ್ರ್ಯವು ಸಂಪೂರ್ಣ ಸರಕಾರದ್ದೇ ಇರುತ್ತ ಸಂಬಳವನ್ನು ನಿಶ್ಚಯಿಸುವುದು ಕೌನ್ಸಿಲಿನ ಅಧಿಕಾರವಲ್ಲವಾಗಿ, ಹೆಚ್ಚಿನ ಸಂಬಳದ ಇನ್ಸ್‌ಪೆಕ್ಟರರನ್ನು ಸರಕಾರದವರೇ ನೇಮಿಸಿದ್ದಾಗಿ ಸುಮ್ಮನೆ ಗೊಂದಲವೆಬ್ಬಿಸಿ ಜನತೆಯಲ್ಲಿ ಅಸಮಾಧಾನ ಇಲ್ಲವೆ ತಪ್ಪು ಗ್ರಹಿಕೆಯಾದಂತಾದುದು ಶೋಚನೀಯ! ಅಲ್ಲದೆ ಸೆನಿಟರಿ ಇನ್ಸ್‌ಪೆಕ್ಟರರ ಸಂಬಳ ಹೆಚ್ಚಿಸಬೇಕೆಂಬ ಠರಾವು ಡಾ॥ ಆಚಾರ್ಯರದ್ದಲ್ಲ; ಅವರು ಮಾತ್ರ ಉಳಿದವರೊಡನೆ ಸರ್ವಾನುಮತಿಗೆ ಸಹಕರಿಸಿದ್ದೇ ಅನುಮಾನ ಹುಟ್ಟಿಸಿದ್ದಾಗಿದೆ.

ಶ್ರೀ ಕೃಷ್ಣ ದೇವರ ಸನ್ನಿಧಿಯಲ್ಲಿ ಶ್ರೀ ಕೃಷ್ಣ ಜಯಂತಿ ವಿಟ್ಲಪಿಂಡಿ ಹಬ್ಬದ ಬಗ್ಗೆ ವೇಷಧಾರಿಗಳನ್ನು ಸ್ವೀಕರಿಸಿಕೊಳ್ಳುವ ವೇಷಭೂಷಣಗಳನ್ನು ಕಳೆಯುವಂತೆ ಮಾಡಿ, ಮರುದಿನ ವಾಪಾಸು ಕೊಟ್ಟು ಸಂತೋಷ ಉತ್ಸವಕ್ಕೆ ಭಂಗ ತಂದ ಬಗ್ಗೆ ಪೋಲಿಸ್ ಅಧಿಕಾರಿಗಳ ವರ್ತನ ಖಂಡಿಸಿ, ಕಳೆದ ತಾ. ೨ರ ಸಾಯಂಕಾಲ ಮಹಾಸಭೆಯು ರಥಬೀದಿಯಲ್ಲಿ ನಡೆದು ವಾಡಿಕೆಯಾಗಿ ನಡೆದು ಬರುವ ಸಂಗತಿಯಲ್ಲಿ ಅಡ್ಡ ಬಂದುದಕ್ಕೆ ಖಂಡಿಸಿ ನಿರ್ಣಯಗಳು ಮೇಲಧಿಕಾರಿಗಳಿಗೆ ಕಳುಹಲಾಗಿದ್ದವಷ್ಟೆ; ಕಳೆದ ವಾರ ಜಿಲ್ಲಾ ಪೋಲೀಸ್ ಸುಪರಿಂಟೆಂಡರು ಉಡುಪಿಗೆ ಬಂದು ಮಹನೀಯರನೇಕರ, ಕೆಲ ವೇಷಧಾರಿಗಳ ಮತ್ತು ಸಂಬಂಧಪಟ್ಟ ಪೋಲಿಸು ಅಧಿಕಾರಿಗಳ ಹೇಳಿಕೆ ತೆಗೆದರೆಂದು ತಿಳಿದುಬರುತ್ತದೆ. ಫಲಿತಾಂಶ ಗೊತ್ತಾಗಿಲ್ಲ.

ಪುತ್ತೂರು ದಸರಾ ಉತ್ಸವದ ಉಪನ್ಯಾಸ ಕಾರ್ಯಕ್ರಮಗಳು— ಪುತ್ತೂರು ಹಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಅಕ್ಟೋಬರ ತಾ. ೫ರಿಂದ ತಾ. ೧೪ರ ತನಕ ಎಂದಿನಂತೆ ಉತ್ಸವ ಜರಗುವುದು. ಪ್ರತಿದಿನ ಸಾಯಂಕಾಲ ಘಂಟೆ ೬ಕ್ಕೆ ಈ ಉಪನ್ಯಾಸಗಳು ನಡೆಯುವುವು.

ತಾ. ೫ಕ್ಕೆ ಶ್ರೀ ಗೇರೂರು ರಾಮಸ್ವಾಮಿ ಐಯ್ಯಂಗಾರರು—ಹಳ್ಳಿಯ ಸಂಸ್ಕೃತಿ. ತಾ. ೬ಕ್ಕೆ ಶ್ರೀ ಸಂ. ಶ್ರೀಕಂಠಯ್ಯನವರು—'ಹೊಸಗನ್ನಡ ಕವಿತೆಗಳು'. ತಾ. ೭ಕ್ಕೆ ಶ್ರೀ ರಾಂ. ಭಾ. ಜೋಶಿಯವರು—'ಕದಡ ಹುಟ್ಟು'. ತಾ. ೮ಕ್ಕೆ ಶ್ರೀ ಟಿ. ನಾರಾಯಣ ಭಟ್ಟರು—ಮುದ್ರಣ ಕಲೆ. ತಾ. ೯ಕ್ಕೆ ಶ್ರೀ ಚ. ಮಲ್ಲಪ್ಪ, ಬಿಜಾಪುರ—ಅರವಿಂದರ ಸಂದೇಶ. ತಾ. ೧೦ಕ್ಕೆ ಶ್ರೀ ಡಿ. ವಿ. ಗುಂಡಪ್ಪನವರು—ವೇದಾಂತದ ಭವಿಷ್ಯ. ತಾ. ೧೧ಕ್ಕೆ ಶ್ರೀ ಸಿಂಪಿ ಲಿಂಗಣ್ಣನವರು 'ಜಾನಪದ ಕಾವ್ಯ'. ತಾ. ೧೨ಕ್ಕೆ ಶ್ರೀ ಮಾಧವಾಚಾರ್ಯ—'ಸೌಂದರ್ಯೋಪಾಸನೆ'. ತಾ. ೧೩ಕ್ಕೆ ಶ್ರೀ ಆರ್. ಶ್ರೀ. ಮುಗಳಿಯವರು—ನಾಟಕ ಪ್ರಯೋಗಗಳು. ತಾ. ೧೪ಕ್ಕೆ ಶ್ರೀ ಎಸ್. ಎಸ್. ಮಾಳವಾಡ—ವಿಶ್ವದ ಸಾಧುಗಳೂ ಸಾಹಿತ್ಯವೂ. ಇದಲ್ಲದೆ ತಾ. ೯, ೧೦ ದಿವಸ ಶ್ರೀಮಾಸ್ತಿ ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಉತ್ಸವವು ಜರಗುವುದು.

ಕಾರ್ಕಳ:— ಸ್ಥಳೀಯ ಆರ್ಯಸಮಾಜ ನೇತೃತ್ವದಲ್ಲಿ ತಾ. ೨೯-೮-'೩೭ ದಿನ ಇಲ್ಲಿಯ ಬೋರ್ಡ್ ಹೈಸ್ಕೂಲ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ದಿನವು ಆಚರಿಸಲ್ಪಟ್ಟಿತು. ಸಾಯಂಕಾಲ ೫ ಘಂಟೆಗೆ ಇಲ್ಲಿಯ ವಕೀಲ ಶ್ರೀ ಪಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆದು, ಹಲವರ ಭಾಷಣಾದಿಗಳೂ ಆಯಿತು.

ಅದೇ ದಿನ ಸಾಣೂರಿನಲ್ಲಿ ಶ್ರೀ ರಾಮರಾಯ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಒಂದು ಕಾಂಗ್ರೆಸ್ ಸಭೆ ಸೇರಿ ಶ್ರೀಗಳಾದ ಲಕ್ಷ್ಮಣ ಕಾಮತ್, ಅಧಿಕಾರಿ ಹಿರಿಯಣ್ಣ ಶೆಟ್ಟರು, ನಾರಾಯಣ ಜೋಯಿಸರು ಕಾಂಗ್ರೆಸ್ಸಿನ ಕಾರ್ಯಕ್ರಮ ಮತ್ತು ಗ್ರಾಮ ಸಮಿತಿಯನ್ನು ಸ್ಥಾಪಿಸುವ ಆವಶ್ಯಕತೆಯನ್ನು ಕುರಿತು ಭಾಷಣಗಳನ್ನು ಮಾಡಿದ ಬಳಿಕ ರಾಮಯ್ಯ ಶ್ಯಾನುಭಾಗರು ಅಧ್ಯಕ್ಷರಾಗಿಯೂ, ಹಿರಿಯಣ್ಣ ಶೆಟ್ಟರು ಕಾರ್ಯದರ್ಶಿಯಾಗಿಯೂ, ಮುಕುಂದ ಕಮ್ತಿ, ವೆಂಕಟೇಶ ಶೆಣೈ, ಪುಂಡಲೀಕ ನಾಯಕ, ಸೋಮಯ್ಯ ಅಗಸ, ಅನಂತಾಚಾರಿ ಮತ್ತು ಚಕ್ರಬ್ರಹ್ಮಯ್ಯರು ಸದಸ್ಯರಾಗಿಯೂ ಗ್ರಾಮ ಕಾಂಗ್ರೆಸ್ ಸಮಿತಿಯು ಸ್ಥಾಪನೆಯಾಯಿತು.

ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೪೧-೮-'೩೭ರ ದಿನ ಇಲ್ಲಿಯ ಹೆಲ್ತ್ ಇನ್ಸ್‌ಪೆಕ್ಟರ ಶ್ರೀ ರಾಮ ಮೇನನರು ಮಾಯಾ ಲಾಂದ್ರದ ಸಹಾಯದಿಂದ ಮಲೇರಿಯ ಮತ್ತು ಸಿಡುಬು ರೋಗಗಳ ಕಾರಣ, ಉತ್ಪತ್ತಿ ಹರಡುವಿಕೆ ಮತ್ತು ನಿವಾರಣೆಯ ಕುರಿತು ಭಾಷಣ ಮಾಡಿ ಆರೋಗ್ಯ ಪ್ರಚಾರ ಮಾಡಿದರು.

ಕಾರ್ಕಳದ ದೊಡ್ಡಿಳ ಹರಿಜನ ವಸತಿಯು ಪ್ರಾಯಸ್ಥ ಅಶಿಕ್ಷಿತ ಹರಿಜನರಿಗಾಗಿ ಒಂದು ಶಿಕ್ಷಣ ತರಗತಿಯನ್ನು ಇಲ್ಲಿಯ ಹರಿಜನ ಸೇವಾ ಸಂಘದ ಆಶ್ರಯದಲ್ಲಿ ತಾ. ೧-೯-'೩೭ರ ದಿನ ತೆರೆದಿರುತ್ತದೆ. ಪ್ರತಿ ...

ನವರತ್ನಾ ಚ್ಯವನಪ್ರಾಶಾವಲೇಹ

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ

ರಾತಲು 1ಕ್ಕೆ ರೂ 2—6—0. ½ ರಾತಲು 1-4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಪೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸುವದರಲ್ಲಿ ಉಪಕಾರಿಯಾಗಿದೆ ತೈಲಾಭ್ಯಂಗಕ್ಕೂ ಒಳ್ಳೆದು.

ಕ್ರಯ 16 oz 3-0-0; 8 oz 1 10 0; 4 oz 0 14—0

ತಯಾರಿಸುವವರು.—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪಾಪ್ಯುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಟ್ಟಿ ಕಾರ್ಕಳ.
ಕೆ. ಎಲ್. ಐತಾಳ, ಉಡುಪಿ — ಮೊಡರ್ನ್ ಫಾರ್ಮಸಿ, ಕುಂದಾಪುರ,
ಬಿ. ಜಿ ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರು.
ಡಾ॥ ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NRSI & CO

Chemists Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in — Watches Clocks Timepieces Rolled Gold. Jewellery & Sporting Materials etc,



Stockists of West End, Zenith Meridian, Swiss Watches of latest designs & tastes

Repairers — Watches Clocks, Timepieces and Gramophones

Japan 8 Inch	Octegon	Rs 6	0	0
8	Regulator	6	12	0
„ 10 „	Octegon	6	8	0
„ 10	Regulator „	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೀಳಂಗೆ ಸದಾ ಸಿದ್ಧವಿರುವುವು ವ ತ ಗಡಿಯಾರ, ವ ಗ್ರಾಮೊಫೋನು ರಿಪೇರಿ ಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿ ಅ ಲ್ಪಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು

BEST BRILLIANCY

K. R. K. SHE.,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್ ಕೆ ಶೆಟ್, ಜುವೆಲ್ಲರ್

ಮಿಶ್ಯನ್ ಹೈಸ್ಕೂಲ್ ಬಳಿ ಮಂಗಳೂರು

FOR

Quality Frames & Lens,

Please Visit



Nayaks' OpticalStores

Scientific Opticians,
Temple Square MANGALORE

ಪೈಂಟರ್ಸ್

PAINTERS

Whenever you require the service of *Please call on or write to:*—



Simon & Co,

Painters,

Churchgate Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸ್ಕ್ರೀನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿ ಪಡೆಯಿರಿ

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶೀಘ್ರ ಮಾರಾಟ ಗಟ್ಟಿಯಾದ ಯಂತ್ರಸಾಮಗ್ರಿಗಳು ಸಲವಾಗಿ ಸಮಯ ತೋರಿಸುವ ಗಡಿಯಾರಗಳು ಅತಿ ಕಮ್ಮಿ ಬೆಲೆಗಳು ... ವರ್ಷದ ಗ್ಯಾರಂಟಿ 8 ದಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ಬಿಟ್ಟಿಯು ... ಸಿಕ್ಕೆಲಿನ ಉರುಟು ವಾಚು 1ಕ್ಕೆ ರೂ 2-15 0 ಅದರಲ್ಲಿ ಉತ್ತಮವಾದ್ದಕ್ಕೆ 8 0 ಬಂಗಾರದ ಗಿಲಿಟಿದ್ದಕ್ಕೆ ರೂ 4—8—0 ಕೀಯು ರೂ 5 0-0. ಸ್ಕ್ವೇರ ಆಯತಾಕಾರದಕ್ಕೆ 6 8-0 ಅದರಲ್ಲಿ ಬಂಗಾರದ ಗಿಲಿಟಿದ್ದಕ್ಕೆ 7-8-0 ರಿಸ್ಟ್ ವಾಚಿಗೆ ಬಾಗಿ ಬರಿ ರೂ 1-14-0 ಬಿ. ಬ್ಯಾಂಡ್ 1ಕ್ಕೆ ಬರಿ ರೂ 1-15 0 ಮಾತ್ರ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176 Cross Street CALCUTTA

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತೆ ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು—ಹಣ್ಣುಗಳು—ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2-8-0 ಅಡ್ವಾನ್ಸ್ ಇಲ್ಲದ ಆರ್ಡರ್ ಪಡೆಯಲಾಗದು

ವಿಳಾಸ —

The Royal Seed Co,

Florists & Seedsmen, 27 Ilpay Thope
ULSOOR, BANGALORE

Change of Address:

Bangra Ramanath Shanbhogue, Certified Job Typist & Commercial Instructor has shifted his office to Gonsalves new building Court Road, Mangalore, near Central Co-operative Bank

Charges most moderate —

ಸ್ವದೇಶಾಭಿಮಾನಿ ಪತ್ರಿಕೆಗೆ ಇಂದೇ

ವಿದ್ಯಾ ರೀ ಒರ್ಗೆನೈಜೇಶನ್

ಬ್ರಿಟಿಶ್ ಮತ್ತು ಯುರ್ದ ಮನುಷ್ಯನು ವಿದ್ಯಾಮಂತ್ರಿಯವರಿಗೂ, ಮುಖ್ಯ ಮಂತ್ರಿಯವರಿಗೂ, ಡೈರೆಕ್ಟರರಿಗೂ ಪ್ರೊಫೆಸರ ವಾರ್ಕಿಯವರಿಗೂ ಕಳುಹಿಸಿಕೊಟ್ಟ ಸೂಚನೆಗಳು.

ಯುನಿವರ್ಸಿಟಿ ವಿದ್ಯಾಭ್ಯಾಸ

ಎಲ್ಲಾ ಗವರ್ನಮೆಂಟ ಕೊಲಿಜುಗಳನ್ನು ಸಂಪೂರ್ಣ ಕೊಲೀಜುಗಳಾಗಿ ಮಾಡಬೇಕು. ಯಾಕೆಂದರೆ ಈಗಿನ ಕಾಲದಲ್ಲಿ ಸಾರ್ವಜನಿಕ ಅಂದರೆ ಎಲ್ಲಾ ಜಾತಿ ಮತದವರನ್ನು ಸರಿಸಮಾನವಾಗಿ ನಡಿಸುವ ಕೊಲಿಜುಗಳು ಅಗತ್ಯವಾಗಿವೆ. ಖಾಸಗಿ ಕೊಲಿಜುಗಳಲ್ಲಿ ಎಷ್ಟೆಂದರೂ ಸ್ವಾರ್ಥವಿದೆ. ಖರ್ಚು ಕಡಿಮೆ ಮಾಡುವದಕ್ಕಾಗಿ ಈಗಿನ ಖರ್ಚಿನಲ್ಲಿಯೇ ಸಂಪೂರ್ಣ ಕೊಲಿಜಿನ ಖರ್ಚು ನಡಿಯುವಂತೆ ಕೊಲಿಜುಗಳಲ್ಲಿರುವ ಹೈಸ್ಕೂಲ ಡಿಪಾರ್ಟಮೆಂಟುಗಳನ್ನು ತೆಗೆದುಹಾಕಬೇಕು. ಇಲ್ಲವಾದರೆ ಹೈಸ್ಕೂಲ ಮತ್ತು ಕೊಲಿಜಿನ ಫೀಸಿನ ದರವನ್ನು ಕಡಿಮೆಮಾಡಿ ಆದಷ್ಟು ಹೆಚ್ಚು ಮಂದಿ ಹುಡುಗ ಹುಡುಗಿಯರು ಕಲಿಯುವಂತೆ ಮಾಡಿದರೆ ಆದಾಯವು ಕಮ್ಮಿಯಾಗಲಾರದು. ಪ್ರೊಫೆಸರರ ಮತ್ತು ಪ್ರಿನ್ಸಿಪಾಲರ ಸಂಬಳ ಕಡಿಮೆ ಮಾಡಬಹುದು.

ಎಲಿಜಬಲ್ ಲಿಸ್ಟು

ಸೆವೆಂತ್ ಫೊರ್ಮಿನಲ್ಲಿ ಆಗುವ ಪಬ್ಲಿಕ ಪರೀಕ್ಷೆಯಲ್ಲಿ ಪಾಸಾದವರ ಎರಡು ಎಲಿಜಬಲ್ ಲಿಸ್ಟ ತಯಾರಿಸುವಂತೆ ಮಾಡಬೇಕು. ಒಂದು ಲಿಸ್ಟಿನಲ್ಲಿ ಹೆಚ್ಚು ಮಾರ್ಕು ಸಿಕ್ಕಿದವರ ಹೆಸರುಗಳನ್ನು ಕೊಡಬೇಕು. ಇನ್ನೊಂದರಲ್ಲಿ ಎಲ್ಲಾ ಸರಕಾರಿ ಕೆಲಸಗಳಿಗೂ ಹೋಗತಕ್ಕವರ ಹೆಸರುಗಳನ್ನು ಕೊಡಬೇಕು. ಎರಡಕ್ಕೂ ಪರ್ಸೆಂಟೇಜ ನಿರ್ಣಯಿಸಬೇಕು. ಈ ರೀತಿಯಲ್ಲಿ ಮಾಡಿದರೆ ಒಳ್ಳೇ ವಿದ್ವಾಂಸರಾದ ಹುಡುಗರು ಮಾತ್ರವೇ ಕೊಲಿಜುಗಳಲ್ಲಿ ಕಲಿಯುವಂತಾಗುವುದು. ಕಲಿಸಲಿಕ್ಕೂ ಸುಲಭವಾಗುವದು. ಕೊಲಿಜುಗಳಲ್ಲಿ ಈಗಿನ ಹಾಗೆ ಸರಾಸರಿ ಹುಡುಗರು ಕಲಿಯದಂತೆ ತಡೆಗಟ್ಟಿದಂತಾಗುವುದು. ಸರಕಾರಿ ಕೆಲಸಕ್ಕೆ ಹೋಗುವವರಿಗೂ ದಾರಿಮಾಡಿಕೊಟ್ಟಂತಾಯಿತು.

ಸೆಕೆಂಡರಿ ವಿದ್ಯಾಭ್ಯಾಸ

ಸೆಕೆಂಡರಿ ಶಾಲೆಗಳ ಫೀಸನ್ನು 1 ಫೋರ್ಮಿನಿಂದ 7ನೇ ಫೋರ್ಮು ವರೆಗೆ ಕಡಿಮೆ ಮಾಡಬೇಕು. (ಮದರಾಸು 4ನೆ ಎಡಿಶನ್ ಎಜ್ಯುಕೇಶನ ರೂಲ್ಸ್ ನೋಡಿರಿ) ಹೈ ಮತ್ತು ಮಿಡ್ಲ ಸ್ಕೂಲುಗಳಲ್ಲಿರುವ ಫಸ್ಟ್ ಫೋರ್ಮಿಗಿಂತ ಕೆಳಗಿನ ದರ್ಜೆಗಳನ್ನು ತೆಗೆದು ಹಾಕಬೇಕು. ಈ ರೀತಿಯಲ್ಲಿ ಮಾಡಿದರೆ ಸ್ಥಳವು ಸಾಕಷ್ಟು ಸಿಕ್ಕುವದು. ಸಂಬಳ ಕಡಿಮೆಮಾಡಿದ್ದರಿಂದ ಮಕ್ಕಳ ಸಂಖ್ಯೆ ಹೆಚ್ಚಾಗಿ ಶಾಲೆಯ ಆದಾಯವು ಹೆಚ್ಚುವದು. ಕೆಳಗಿನ ದರ್ಜೆಗಳನ್ನು ತೆಗಿಯುವುದರಿಂದ ಉಪಾಧ್ಯಾಯರ ಸಂಖ್ಯೆಯು ಕಡಿಮೆಯಾಗಿ ಶಾಲೆಯ ಖರ್ಚು ಕಡಿಮೆಯಾಗುವದು. ಶಾಲಾ ಉಪಾಧ್ಯಾಯರ ಸಂಬಳದ ದರವನ್ನು ಅಲ್ಪಸ್ವಲ್ಪ ತಗ್ಗಿಸಬೇಕು. ಬಡ ರೈತರ ಹಣ ಉಳಿಯುವದಲ್ಲವೆ?

ಹ್ಯಾಯರ ಎಲಿಮೆಂಟರಿ ವಿದ್ಯಾಭ್ಯಾಸ

ಹ್ಯಾಯರ ಎಲಿಮೆಂಟರಿ ಶಾಲೆಗಳ ಈಗಿನ ಕಡೆಯ ಸ್ಟೆಂಡಾರ್ಡ ಆದ 8ನೇ ಸ್ಟೆಂಡಾರ್ಡಿಗೆ ಒಂದು ಯಾ ಎರಡು ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ಪಬ್ಲಿಕ್ ಪರೀಕ್ಷೆ ಮಾಡಬೇಕೆಂದು ಇರುವ ಆಲೋಚನೆಯ ಪ್ರಕಾರ ಆ ಪರೀಕ್ಷೆ ಪಾಸಾದವರು ಹೈಸ್ಕೂಲುಗಳಿಗೆ ಸೇರಲು ಸಾಧ್ಯವಿಲ್ಲವೆಂದು ಡೈರೆಕ್ಟರರು ಅಲ್ಲಲ್ಲಿ ಕೊಟ್ಟ ಭಾಷಣಗಳಿಂದ ತಿಳಿದು ಬರುತ್ತದೆ. ಹೀಗಾದರೆ ಹಳ್ಳಿಗಳಲ್ಲಿರುವ ಹ್ಯಾಯರ ಎಲಿಮೆಂಟರಿ ಶಾಲೆಗಳು ನಿರ್ಪಯೋಗವಾಗುವವು. ಅನುಕೂಲವಿರುವ ಹುಡುಗನು ಹೈಸ್ಕೂಲಿನ ಫಸ್ಟ್ ಫೋರ್ಮಿಗೆ ಸೇರಿಯಾನು. ಬುದ್ಧಿವಂತರೇ ಆಗಿದ್ದು ಸ್ವಲ್ಪ ಹೆಚ್ಚು ವಿದ್ಯೆ ಕಲಿಯಬೇಕೆಂಬ ವಿದ್ಯಾರ್ಥಿಗಳ ಅವಸ್ಥೆಯೇ ಹಾಳಾಗುವದು. ಆದುದರಿಂದ ಈಗಿನ ಹ್ಯಾಯರ ಎಲಿಮೆಂಟರಿ ಶಾಲೆಗಳಲ್ಲಿ 9ನೇ ಸ್ಟೆಂಡಾರ್ಡನ್ನು ತೆರೆದು ಮದರಾಸು ಸಂಸ್ಥಾನದ ಎಲ್ಲಾ ಜಿಲ್ಲೆಗಳಿಗೂ ಮೊದಲಿನ, ಅವರ ಸೆಕೆಂಡರಿ ಪರೀಕ್ಷೆಯಂತೆ ಒಂದು ಪರೀಕ್ಷೆ ಮಾಡಿ ಅದರಲ್ಲಿ ಪರ್ಸೆಂಟೇಜನ್ನು ನಿರ್ಣಯಿಸಿ ಎರಡು ಪಟ್ಟಿ ತಯಾರಿಸಿ ಹೆಚ್ಚು ಪರ್ಸೆಂಟೇಜ ಮಾರ್ಕು ಸಿಕ್ಕಿದವರನ್ನು ಹೈಸ್ಕೂಲಿನ 5ನೆ ಫೋರ್ಮಿಗೆ ಸೇರುವಂತೆಯೂ ಅನುಕೂಲ ಮಾಡಬಹುದು ಕಡಿಮೆ ಪರ್ಸೆಂಟ ಮಾರ್ಕು ಸಿಕ್ಕಿದವರನ್ನು ಸರಕಾರಿ ಕೆಲಸಕ್ಕಾಗಲೀ ಇತರ ಖಾಸಗಿ ಕೆಲಸಕ್ಕಾಗಲೀ ಸೇರುವಂತೆ ಅನುಕೂಲಮಾಡಿದಂತಾಗುವುದು. ಎಲ್ಲಾ ಹ್ಯಾಯರ ಎಲಿಮೆಂಟರಿ ಶಾಲೆಗಳು ನಿರ್ಪಯೋಗವಾಗದೆ ಊರ್ಜಿತ ಸ್ಥಿತಿಯಲ್ಲಿ ಉಳಿಯುವವು. ಬಡ ಹುಡುಗರಿಗೆ ತಮ್ಮ ಊರುಗಳಲ್ಲಿಯೇ ಕಡಿಮೆ ಸಂಬಳದಲ್ಲಿ ಹೆಚ್ಚು ವಿದ್ಯಾಭ್ಯಾಸ ಮಾಡಿದಂತಾಗುವುದು. ಮೇಲೆ ಕಲಿಯಲು ಅನುಕೂಲಯುದ್ದವರಿಗೆ ಹೈಸ್ಕೂಲುಗಳಲ್ಲಿ ಕಲಿಯಲಿಕ್ಕೂ ಅನುಕೂಲವಾಗುವುದು. ಹೈಸ್ಕೂಲುಗಳಿಗೆ ಮಕ್ಕಳ ಸಂಖ್ಯೆಯೂ ಸ್ವಲ್ಪ ಹೆಚ್ಚಿಗೆ ಸಿಕ್ಕುವದು.

ಲೋವರ ಎಲಿಮೆಂಟರಿ ಶಾಲೆಗಳು

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಗಳಿಗೂ ತಮಿಳು ದೇಶದ ಗ್ರಾಮಗಳಿಗೂ ರಾತ್ರಿ ಹಗಲಿನಂಥಾ ವ್ಯತ್ಯಾಸಗಳಿವೆ. ನಮ್ಮ ಗ್ರಾಮಗಳಲ್ಲಿ ಮನೆಗಳು ಈಗಿನ ಸರ್ವೆ ಗ್ರಾಮಗಳಲ್ಲಿ ದೂರ ದೂರ ಇವೆ. ಆದುದರಿಂದ ಗ್ರಾಮಕ್ಕೊಂದು ಶಾಲೆ ಈ ಜಿಲ್ಲೆಯಲ್ಲಿ ಇಡಲಿಕ್ಕೆ ಸಾಧ್ಯತೆ ಇಲ್ಲ. ಹಳೆಯ ಗ್ರಾಮಗಳಾಗಿದ್ದ ಈಗಿನ ಸರ್ವೆ ಗ್ರಾಮಗಳ ಒಂದೊಂದು ಬ್ಲೋಕಿಗೆ (heml.t) 5ನೇ ದರ್ಜೆ ವರೆಗಿನ ಒಂದೊಂದು ಶಾಲೆ ಅಗತ್ಯವಿದೆ. ಹುಡುಗರಿಗೊಂದು ಹುಡುಗಿಯರಿಗೊಂದು ಅವರಿಗೊಂದು ಇವರಿಗೊಂದು ಶಾಲೆ ಬೇಡ ಎಲ್ಲಾ ಜಾತಿಮತ, ಹೆಣ್ಣು ಗಂಡು ಮಕ್ಕಳಿಗೆ ಒಂದೇ ಶಾಲೆ ಸಾಕು. ಖರ್ಚು ಶೇಕಡಾ 75ರಷ್ಟು ಕಡಿಮೆಯಾಗುವದು. ಹುಡುಗಿಯರಿಗೆ ಕಸೂತಿ ಕಲಿಸಲಿಕ್ಕೆ ಒಂದು ಉಪಾಧ್ಯಾಯಿನಿ ಇಟ್ಟರೆ ಸಾಕು. ಈಗಿನ ಕೆಥೊಲಿಕ ಹುಡುಗರ ಶಾಲೆಯಲ್ಲಿ ಕೆಳಗಿನ ಕ್ಲಾಸು ಕಲಿಸಲಿಕ್ಕೆ 4-5 ಮಂದಿ ಉಪಾಧ್ಯಾಯಿನಿಯರನ್ನು ಇಡಕೂಡದೆಂದು ಕಟ್ಟಾಜ್ಞೆ ಮಾಡಬೇಕು. ಹೀಗೆ ಮಾಡದೆ ಇದ್ದರೆ ಗಂಡಸರು ಉಪಾಧ್ಯಾಯರಿಗೇನು ಗತಿ? ಹುಡುಗಿಯರ ಶಾಲೆಗಳಲ್ಲಿ ಗಂಡಸರನ್ನು ಉಪಾಧ್ಯಾಯರಾಗಿ ನೇಮಿಸಲೇ ಬಾರದೆಂದು ಸರಕಾರಿ ಹುಕುಂ, ಹುಡುಗರ ಶಾಲೆಯಲ್ಲಿಯೂ ಉಪಾಧ್ಯಾಯಿನಿಯರೆ ತುಂಬಿದರೆ ಉಪಾಧ್ಯಾಯರ ಗತಿಯೇನು? ಗಂಡಸು ಉಪಾಧ್ಯಾಯರಿಗೆ ಏನು ಗತಿ? ಉಪಾಧ್ಯಾಯಿನಿಯರಾದರೆ ಯಾವಾಗಲೂ ಕನ್ನಿಕೆಯರಾಗಿದ್ದು ಒಬ್ಬಂಟಿಗರಾಗಿರಬಹುದು. ಉಪಾಧ್ಯಾಯರಿಗೆ ಹೆಂಡತಿ ಮಕ್ಕಳಿದ್ದಾರಲ್ಲವೆ? ಮೇಲಧಿಕಾರಿಗಳೆ ಚೆನ್ನಾಗಿ ಆಲೋಚಿಸಿರಿ ನಿಮಗೂ ಪತ್ನಿ ಪುತ್ರರಿದ್ದಾರಲ್ಲವೇ. ಆದ್ದರಿಂದ ಹುಡುಗರ ಶಾಲೆಗಳಲ್ಲಿ ಒಂದೊಂದು ಉಪಾಧ್ಯಾಯಿನಿಯನ್ನು ನೇಮಿಸಿದರೆ ಸಾಕೆಂದು ಹುಕುಂ ಹೊರಡಿಸುವುದು ಒಳ್ಳೇದು

(೬ನೇ ಪುಟವನ್ನು ನೋಡುವುದು)

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಭಾದ್ರಪದ ಶು। ೬ ಶನಿವಾರದಿಂದ, ಭಾದ್ರಪದ ಶು। ೧೨ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇಯ (ಸಿಂಹ ಸೂರ್ಯ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
11	ಶನಿ	೬	೧೨	ಅನುರಾಧ	೬೨	೨೬	[illegible]
12	ಶನಿ	೭	೧೭	ಅನುರಾಧ	೧	೨೮	
13	ಸೋ	೮	೨೨	ಜ್ಯೇಷ್ಠ	೭	೨೪	[illegible]
14	ಕುಜ	೯	೨೬	ಮೂಲ	೧೩	೨೯	
15	ಬುಧ	೧೦	೩೨	ಪೂ ಷಾ.	೧೯	೩೦	
16	ಗುರು	೧೧	೪೩	ಉ. ಷಾ.	೨೩	೩೧	
17	ಶುಕ್ರ	೧೨	೩೪	ಶ್ರವಣ	೨೬	೧	

THE PIE-MONEY BANK LTD,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6%. 1 Year 5%. For 6 months 4%. 3 months 3½%.

Auction chit Funds ranging from Rs 100, to Rs 5000 run regularly on systematic lines. Unique Banking facilities to Businessmen and interested Public.

Apply for particulars— **K. R. GURU**, *Managing Director*

The Canara Banking Corporation, Udipi, Ltd.

ESTD. 1906.

(INCORPORATED IN BRITISH INDIA.)

Head Office: UDIPI.

Members:- RESERVE BANK OF INDIA / CLEARING HOUSE, MADRAS.

3 Months	2½%	12 Months ...	3½%
6 or 9 Months	3 %	24 Months	4 %

Total Resources exceed Rs. 52,00,000/-

8—9—1937

V. R. Kamath, B. A. LL. B. *Manager.*

ನವರತ್ನಾ 'ಚ್ಯವನಪ್ರಾಶಾವಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟುಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹವಿದು. ಕೆಮ್ಮು, ಶ್ವಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ.

ರಾತಲು 1ಕ್ಕೆ ರೂ. 2-6-0. ½ ರಾತಲು 1-4-0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಫೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸುವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳೆದು.

ಕ್ರಯ 16 oz 3-0-0; 8 oz 1 10 0; 4 oz 0 14-0

ತಯಾರಿಸುವವರು:—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪಾಪ್ಯುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಣೈ ಕಾರ್ಕಳ.
ಕೆ. ಎಲ್. ಐತಾಳ, ಉಡುಪಿ — ಮೊಡರ್ನ್ ಫಾರ್ಮಸಿ, ಕುಂದಾಪುರ.
ಬಿ. ಜಿ ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರು.
ಡಾ। ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NRSI & CO.

Chemists Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in Watches, Clocks, Timepieces, Rolled Gold Jewellery & Sporting Materials etc.



Stockists of West End, Zenith Meridian, Swiss Watches of latest designs & tastes

Repairers – Watches, Clocks, Timepieces and Gramophones

Japan 8 Inch Octegon	Rs.	6	0	0
„ 8 „ Regulator	„	6	12	0
„ 10 „ Octegon		6	8	0
„ 10 Regulator		7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಂತೆ ಸದಾ ಸಿದ್ಧವಿರುವುವು ವ ತ ಗಡಿಯಾರ, ವ ಗ್ರಿಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ

ಕೆನರಾ ವಾಚ್-ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಯನ್ ಹೈಸ್ಕೂಲ್ ಬಳಿ ಮಂಗಳೂರು

FOR

Quality Frames & Lens

Please Visit



Nayaks' Optical Stores

Scientific Opticians

Temple Square MANGALORE

ಪೈಂಟರ್ಸ್

Whenever you require the service of



Please call on or write to:-

Simon & Co,

Painters.

Churchgate, Hampankatta No 18 MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ

ಸೈನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿ ಪಡೆಯಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

PAINTERS

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶ್ರೀಷ್ಮ ಮೂಂಟ ಪಟ್ಟಿಯಾದ ಯಂತ್ರಸಾಮುಗ್ರಿಗಳು ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು ಅತಿ ಕಮ್ಮಿ ಬೆಲೆಗೆ ಮೂರು ವರ್ಷದ ಗ್ಯಾರಂಟಿ 8 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ಟೈಮ್ಪೀಸು ಉಚಿತ ರೋಲ್ಡ ಗೋಲ್ಡ ಸಿಕ್ಕೇಸ ಉರುಟು ವಾಚು 1ಕ್ಕೆ ರೂ 2-15-0 ಅದರಲ್ಲಿ ಉತ್ತಮವಾದದ್ದು 3-8-0 ಬಂಗಾರದ ಗಿಲಿಟಿದ್ದದಕ್ಕೆ ರೂ 4-6-0 ರೇಡಿಯಂ ರೂ 5-0-0 ಸಿಕ್ಕೇಸ ಆಯತಾಕಾರದಕ್ಕೆ 6-8-0 ಅದರಲ್ಲಿ ಬಂಗಾರದ ಗಿಲಿಟಿದ್ದುದಕ್ಕೆ 7-8-0 ಲಿವರ್ ಪಾಕೆಟ್ ವಾಚಿಗೆ ಬರಿ ರೂ 1-14-0 ಟೈಮ್ಪೀಸ್ 1ಕ್ಕೆ ಬರಿ ರೂ 1-15-0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು.

M. L. Watch Co., 176 Cross Street CALCUTTA

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತ ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು-ಹಣ್ಣುಗಳು-ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2-8-0 ಅಡ್ವಾನ್ಸ್ ಇಲ್ಲದೆ ಆರ್ಡರ್ ಪಡೆಯಲಾಗದು

ವಿಳಾಸ:—

The Royal Seed Co,

Florists & Seedsmen, 27 Ilpay Thope
ULSOOR, BANGALORE

Change of Address:

Bangra Ramanath Shanbhogue, Certified Job Typist & Commercial Instructor, has shifted his office to Gonsalves new building Court Road, Mangalore, near Central Co-operative Bank

Charges most moderate –

ಸ್ವದೇಶಾಭಿಮಾನಿ ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ವಿದ್ಯಾ ರೀ ಒರ್ಗೆನ್ಯಾಜೇಶನ್

ಒಬ್ಬ ರಿಟಾಯರ್ಡ ಮನುಷ್ಯನು ವಿದ್ಯಾಮಂತ್ರಿಯವರಿಗೂ, ಮುಖ್ಯ ಮಂತ್ರಿಯವರಿಗೂ, ಡಾಯರೆಕ್ಟರರಿಗೂ ಪ್ರೊಫೆಸರ ವಾರ್ಕರಯವರಿಗೂಕ ಉಹಿಸಿಕೊಟ್ಟ ಸೂಚನೆಗಳು.

ಯುನಿವರ್ಸಿಟಿ ವಿದ್ಯಾಭ್ಯಾಸ

ಎಲ್ಲಾ ಗವರ್ನಮೆಂಟ ಕೊಲೆಜುಗಳನ್ನು ಸಂಪೂರ್ಣ ಕೊಲೇಜುಗಳಾಗಿ ಮಾಡಬೇಕು ಯಾಕಂದರೆ ಈಗಿನ ಕಾಲದಲ್ಲಿ ಸಾರ್ವಜನಿಕ ಅಂದರೆ ಎಲ್ಲಾ ಜಾತಿ ಮತದವರನ್ನು ಸರಿಸಮಾನವಾಗಿ ನಡಿಸುವ ಕೊಲೆಜುಗಳು ಅಗತ್ಯವಾಗಿವೆ. ಖಾಸಗಿ ಕೊಲೆಜುಗಳಲ್ಲಿ ಎಷ್ಟೆಂದರೂ ಸ್ವಾರ್ಥವಿದೆ ಖರ್ಚು ಕಡಿಮೆ ಮಾಡುವುದಕ್ಕಾಗಿ ಈಗಿನ ಖರ್ಚಿನಲ್ಲಿಯೇ ಸಂಪೂರ್ಣ ಕೊಲೆಜಿನ ಖರ್ಚು ನಡಿಯುವಂತೆ ಕೊಲೆಜುಗಳಲ್ಲಿರುವ ಹ್ಯಾಸ್ಕೂಲ ಡಿಪಾರ್ಟಮೆಂಟುಗಳನ್ನು ತೆಗೆದುಹಾಕಬೇಕು ಇಲ್ಲವಾದರೆ ಹೈಸ್ಕೂಲ ಮತ್ತು ಕೊಲೆಜಿನ ಫೀಸಿನ ದರವನ್ನು ಕಡಿಮೆಮಾಡಿ ಅದನ್ನು ಹೆಚ್ಚು ಮಂದಿ ಹುಡುಗ ಹುಡುಗಿಯರು ಕಲಿಯುವಂತೆ ಮಾಡಿದರೆ ಆದಾಯವು ಕ ಮೆಯಾಗಲಾರದು ಪ್ರೊಫೆಸರರ ಮತ್ತು ಪ್ರಿನ್ಸಿಪಾಲರ ಸಂಬಳ ಕಡಿಮೆ ಮಾಡಬಹುದು

ಎಲಿಜಬಲ್ ಲಿಸ್ಟ

ಸೆವೆಂತ್ ಫೊರ್ಮಿನಲ್ಲಿ ಆಗುವ ಪಬ್ಲಿಕ ಪರೀಕ್ಷೆಯಲ್ಲಿ ಪಾಸಾದವರ ಎರಡು ಎಲಿಜಬಲ್ ಲಿಸ್ಟ ತಯಾರಿಸುವಂತೆ ಮಾಡಬೇಕು ಒಂದು ಲಿಸ್ಟಿನಲ್ಲಿ ಹೆಚ್ಚು ಮಾರ್ಕು ಸಿಕ್ಕಿದವರ ಹೆಸರುಗಳನ್ನು ಕೊಡಬೇಕು ಇನ್ನೊಂದರಲ್ಲಿ ಎಲ್ಲಾ ಸರಕಾರಿ ಕೆಲಸಗಳಿಗೂ ಹೋಗತಕ್ಕವರ ಹೆಸರುಗಳನ್ನು ಕೊಡಬೇಕ ಎರಡಕ್ಕೂ ಪರ್ಸೆಂಟೇಜ ನಿರ್ಣಯಿಸಬೇಕು ಈ ರೀತಿಯ ಲಿ ಮಾಡಿದರೆ ಒಳ್ಳೇ ವಿದ್ಯಾಂಸರಿರುವ ಹುಡುಗರು ಮಾತ್ರವೇ ಕೊಲೆಜುಗಳಲ್ಲಿ ಕಲಿಯುವಂತಾಗುವುದು ಕಲಿಸಲಿಕ್ಕೂ ಸುಲಭವಾಗುವದು ಕೊಲೆಜುಗಳಲ್ಲಿ ಈಗಿನ ಹಾಗೆ ಸರಾಸರಿ ಹುಡುಗರು ಕಲಿಯದಂತೆ ತಡೆಗಟ್ಟಿದಂತಾಗುವುದು ಸರಕಾರಿ ಕೆಲಸಕ್ಕೆ ಹೋಗುವವರಿಗೂ ದಾರಿಮಾಡಿಕೊಟ್ಟಂತಾಯಿತು

ಸೆಕೆಂಡರಿ ವಿದ್ಯಾಭ್ಯಾಸ

ಸೆಕೆಂಡರಿ ಶಾಲೆಗಳ ಫೀಸನ್ನು 1 ಫೋರ್ಮಿನಿಂದ 7ನೇ ಫೋರ್ಮು ವರೆಗೆ ಕಡಿಮೆ ಮಾಡಬೇಕು (ಮದರಾಸು 4ನೆ ಎಡಿಶನ್ ಎಜ್ಯುಕೇಶನ ರೂಲ್ಸ್ ನೋಡಿರಿ) ಹ್ಯಾ ಮತ್ತು ಮಿಡ್ಲ ಸ್ಕೂಲುಗಳಲ್ಲಿರುವ ಫಸ್ಟ ಫೋರ್ಮಿಗಿಂತ ಕೆಳಗಿನ ದರ್ಜೆಗಳನ್ನು ತೆಗೆದು ಹಾಕಬೇಕು ಈ ರೀತಿಯಲ್ಲಿ ಮಾಡಿದರೆ ಸ್ಥಳವು ಸಾಕಷ್ಟು ಸಿಕ್ಕುವದು. ಸಂಬಳ ಕಡಿಮೆಮಾಡಿದ್ದರಿಂದ ಮಕ್ಕಳ ಸಂಖೆ ಹೆಚ್ಚಾಗಿ ಶಾಲೆಯ ಆದಾಯವು ಹೆಚ್ಚುವದು ಕೆಳಗಿನ ದರ್ಜೆಗಳನ್ನು ತೆಗಿಯುವುದರಿಂದ ಉಪಾಧ್ಯಾಯರ ಸಂಖೆಯು ಕಡಿಮೆಯಾಗಿ ಶಾಲೆಯ ಖರ್ಚು ಕಡಿಮೆಯಾಗುವದು ಶಾಲಾ ಉಪಾಧ್ಯಾಯರ ಸಂಬಳದ ದರವನ್ನು ಅಲ್ಪಸ್ವಲ್ಪ ತಗ್ಗಿಸಬೇಕು. ಬಡ ರೈತರ ಹಣ ಉಳಿಯುತದಲ್ಲವೆ?

ಹ್ಯಾಯರ ಎಲಿಮೆಂಟರಿ ವಿದ್ಯಾಭ್ಯಾಸ

ಹ್ಯಾಯರ ಎಲಿಮೆಂಟರಿ ಶಾಲೆಗಳ ಈಗಿನ ಕಡೆಯ ಸ್ಟೆಂಡಾರ್ಡ ಆದ 8ನೇ ಸ್ಟೆಂಡಾರ್ಡಿಗೆ ಒಂದು ಯಾ ಎರಡು ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ಪಬ್ಲಿಕ್ ಪರೀಕ್ಷೆ ಮಾಡಬೇಕೆಂದು ಇರುವ ಆಲೋಚನೆಯ ಪ್ರಕಾರ ಆ ಪರೀಕ್ಷೆ ಪಾಸಾದವರು ಹ್ಯಾಸ್ಕೂಲುಗಳಿಗೆ ಸೇರಲು ಸಾಧ್ಯವಿಲ್ಲವೆಂದು ಡ್ಯಾರೆಕ್ಟರರು ಅಲ್ಲಲ್ಲಿ ಕೊಟ್ಟ ಭಾಷಣಗಳಿಂದ ತಿಳಿದು ಬರುತ್ತದೆ ಹೀಗಾದರೆ ಹಳ್ಳಿಗಳಲ್ಲಿರುವ ಹ್ಯಾಯರ ಎಲಿಮೆಂಟರಿ ಶಾಲೆಗಳು ನಿಸ್ಸಾರವಾಗುವವು. ಅನುಕೂಲವಿರುವ ಹುಡುಗನು ಹ್ಯಾಸ್ಕೂಲಿನ ಫಸ್ಟ ಫೋರ್ಮಿಗೆ ಸೇರಿಯಾನು ಬುದ್ಧಿವಂತರೋ ಆಗಿದ್ದು ಸ್ವಲ್ಪ ಹೆಚ್ಚು ವಿದ್ಯೆ ಕಲಿಯಬೇಕೆಂಬ ವಿದ್ಯಾರ್ಥಿಗಳ ಅವಸ್ಥೆಯೇ ಹಾಳಾಗುವದು ಆದುದರಿಂದ ಈಗಿನ ಹ್ಯಾಯರ ಎಲಿಮೆಂಟರಿ ಶಾಲೆಗಳಲ್ಲಿ 9ನೇ ಸ್ಟೆಂಡಾರ್ಡನ್ನು ತೆರೆದು ಮದರಾಸು ಸಂಸ್ಥಾನದ ಎಲ್ಲಾ ಜಿಲ್ಲೆಗಳಿಗೂ ಮೊದಲಿನ, ಅವರ ಸೆಕೆಂಡರಿ ಪರೀಕ್ಷೆಯಂತೆ ಒಂದು ಪರೀಕ್ಷೆ ಮಾಡಿ ಅದರಲ್ಲಿ ಪರ್ಸೆಂಟೇಜನ್ನು ನಿರ್ಣಯಿಸಿ ಎರಡು ಪಟ್ಟಿ ತಯಾರಿಸಿ ಹೆಚ್ಚು ಪರ್ಸೆಂಟೇಜ ಮಾರ್ಕು ಸಿಕ್ಕಿದವರನ್ನು ಹ್ಯಾಸ್ಕೂಲಿನ 5ನೆ ಫೊರ್ಮಿಗೆ ಸೇರುವಂತೆಯೂ ಅನುಕೂಲ ಮಾಡಬಹುದು. ಕಡಿಮೆ ಪರ್ಸೆಂಟ ಮಾರ್ಕು ಸಿಕ್ಕಿದವರನ್ನು ಸರಕಾರಿ ಕೆಲಸಕ್ಕಾಗಲೀ ಇತರ ಯಾವ ಕೆಲಸಕ್ಕಾಗಲೀ ಸೇರುವಂತೆ ಅನುಕೂಲವಾಡಿದಂತಾಗುವುದು ಎಲ್ಲಾ ಹ್ಯಾಯರ ಎಲಿಮೆಂಟರಿ ಶಾಲೆಗಳು ನಿಸ್ಸಾರವಾಗದೆ ಊರ್ಜಿತ ಸ್ಥಿತಿಯಲ್ಲಿ ಉಳಿಯುವವು ಬಡ ಹುಡುಗರಿಗೆ ತಮ್ಮ ಊರುಗಳಲ್ಲಿಯೇ ಕಡಿಮೆ ಸಂಬಳದಲ್ಲಿ ಹೆಚ್ಚು ವಿದ್ಯಾಭ್ಯಾಸ ಮಾಡಿದಂತಾಗುವುದು ಮೇಲೆ ಕಲಿಯಲು ಅನುಕೂಲವುಳ್ಳವರಿಗೆ ಹ್ಯಾಸ್ಕೂಲುಗಳಲ್ಲಿ ಕಲಿಯಲಿಕ್ಕೂ ಅನುಕೂಲವಾಗುವುದು ಹ್ಯಾಸ್ಕೂಲುಗಳಿಗೆ ಮಕ್ಕಳ ಸಂಖೆಯು ಸ್ವಲ್ಪ ಹೆಚ್ಚಿಗೆ ಸಿಕ್ಕುವದು

ಲೋವರ ಎಲಿಮೆಂಟರಿ ಶಾಲೆಗಳು

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಗಳಿಗೂ ಕಮಿಳು ದೇಶದ ಗ್ರಾಮಗಳಿಗೂ ಮಾತ್ರ ಹಗಲಿರುಳು ವ್ಯತ್ಯಾಸಗಳಿವೆ ನಮ್ಮ ಗ್ರಾಮಗಳಲ್ಲಿ ಮನೆಗಳು ಈಗಿನ ಸರ್ವೆ ಗ್ರಾಮಗಳಲ್ಲಿ ದೂರ ದೂರ ಇವೆ ಆದುದರಿಂದ ಗ್ರಾಮಕ್ಕೊಂದು ಶಾಲೆ ಈ ಜಿಲ್ಲೆಯಲ್ಲಿ ಇಡಲಿಕ್ಕೆ ಸಾಧ್ಯವೆ ಇಲ್ಲ ಹಳೆಯ ಗ್ರಾಮಗಳಾಗಿದ್ದು ಈಗಿನ ಸರ್ವೆ ಗ್ರಾಮಗಳ ಒಂದೊಂದು ಬ್ಲೋಕಿಗೆ (hemlet) 5ನೇ ದರ್ಜೆ ವರೆಗಿನ ಒಂದೊಂದು ಶಾಲೆ ಅಗತ್ಯವಿದೆ ಹುಡುಗರಿಗೊಂದು ಹುಡುಗಿಯರಿಗೊಂದು ಅವರಿಗೊಂದು ಇವರಿಗೊಂದು ಶಾಲೆ ಬೇಡ ಎಲ್ಲಾ ಜಾತಿಮತ, ಹೆಣ್ಣು ಗಂಡು ಮಕ್ಕಳಿಗೆ ಒಂದೇ ಶಾಲೆ ಸಾಕು. ಖರ್ಚು ಶೇಕಡಾ 75ರಷ್ಟು ಕಡಿಮೆಯಾಗುವದು. ಹುಡುಗಿಯರಿಗೆ ಕಸೂತಿ ಕಲಿಸಲಿಕ್ಕೆ ಒಂದು ಉಪಾಧ್ಯಾಯಿನಿ ಇಟ್ಟರೆ ಸಾಕು. ಈಗಿನ ಕೆಥೊಲಿಕ ಹುಡುಗರ ಶಾಲೆಯಲ್ಲಿ ಕೆಳಗಿನ ಕ್ಲಾಸು ಕಲಿಸಲಿಕ್ಕೆ 4–5 ಮಂದಿ ಉಪಾಧ್ಯಾಯಿನಿಯರನ್ನು ಇಡಕೂಡದೆಂದು ಕಟ್ಟಾಜ್ಞೆ ಮಾಡಬೇಕು ಹೀಗೆ ಮಾಡದೆ ಇದ್ದರೆ ಗಂಡಸರು ಉಪಾಧ್ಯಾಯರಿಗೇನು ಗತಿ? ಹುಡುಗಿಯರ ಶಾಲೆಗಳಲ್ಲಿ ಗಂಡಸರನ್ನು ಉಪಾಧ್ಯಾಯರಾಗಿ ನೇಮಿಸಲೇ ಬಾರದೆಂದು ಸರಕಾರಿ ಹುಕುಂ, ಹುಡುಗರ ಶಾಲೆಯಲ್ಲಿಯೂ ಉಪಾಧ್ಯಾಯಿನಿಯರೆ ತುಂಬಿದರೆ ಉಪಾಧ್ಯಾಯರ ಗತಿಯೇನು? ಗಂಡಸು ಉಪಾಧ್ಯಾಯರಿಗೆ ಏನು ಗತಿ? ಉಪಾಧ್ಯಾಯಿನಿಯರಾದರೆ ಯಾವಾಗಲೂ ಕನ್ನಿಕೆಯರಾಗಿದ್ದು ಒಬ್ಬಂಟಿಗರಾಗಿರಬಹುದು ಉಪಾಧ್ಯಾಯರಿಗೆ ಹೆಂಡತಿ ಮಕ್ಕಳಿದ್ದಾರಲ್ಲವೆ? ಮೇಲಧಿಕಾರಿಗಳೆ ಚೆನ್ನಾಗಿ ಆಲೋಚಿಸಿರಿ ನಿಮಗೂ ಪತ್ನಿ ಪುತ್ರರಿದ್ದಾರಲ್ಲವೇ ಆದ್ದರಿಂದ ಹುಡುಗರ ಶಾಲೆಗಳಲ್ಲಿ ಒಂದೊಂದು ಉಪಾಧ್ಯಾಯಿನಿಯನ್ನು ನೇಮಿಸಿದರೆ ಸಾಕೆಂದು ಹುಕುಂ ಹೊರಡಿಸುವುದು ಒಳ್ಳೇದು

(೧೫ನೇ ಪುಟವನ್ನು ನೋಡುವುದು)

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಭಾದ್ರಪದ ಶು ೬ ಶನಿವಾರದಿಂದ, ಭಾದ್ರಪದ ಶು ೧೨ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇಯ (ಸಿಂಹ ಸೌರ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
11	ಶನಿ	೬	೧೭	ಅನುರಾಧ	೬೦	೨೬	[illegible]
12	ರವಿ	೭	೧೭	ಅನುರಾಧ	೧	೨೮	
13	ಸೋಮ	೮	೨೨	ಜ್ಯೇಷ್ಠ	೭	೨೮	
14	ಕುಜ	೯	೨೬	ಮೂಲ	೧೩	೨೯	
15	ಬುಧ	೧೦	೩೦	ಪೂ ಷಾ	೧೯	೩೦	
16	ಗುರು	೧೧	೩೩	ಉ ಷಾ	೨೩	೩೧	
17	ಶುಕ್ರ	೧೨	೩೪	ಶ್ರವಣ	೨೬	೧	

THE PIE-MONEY BANK LTD,

Maidan Road MANGALORE

Undertakes all kinds of Banking Business Current Account at 2½ per annum Savings Bank Deposits at 4½% per annum

FIXED DEPOSITS

For 3 Years 6% 1 Year 5% For 6 months 4% 3 months 3½%

Accepts Trust Funds ranging from Rs 100/ to Rs 5000 run regularly on systematic lines Unique Banking facilities to Businessmen and interested Public

Apply for particulars— K R. GURU, *Managing Director*

The Canara Banking Corporation, Udipi, Ltd.

ESTD. 1906.

(INCORPORATED IN BRITISH INDIA.)

Head Office: UDIPI.

Members:- RESERVE BANK OF INDIA
CLEARING HOUSE, MADRAS.

3 Months	2½%	12 Months	3½%
6 or 9 Months	3 %	24 Months	4 %

Total Resources exceed Rs. 52,00,000/-

8—9—1937

V. R. Kamath, B. A. LL. B
Manager.

ಬಂಗಾಳೀ ವಿದ್ಯಾರ್ಥಿಯೋರ್ವನ ರುಧನಾಟ್ಯ

ಕಲ್ಕತ್ತಾದ ವಿಶ್ವವಿದ್ಯಾಲಯದಲ್ಲಿ ಯಂ. ... ಎರಡು ಪಡೆದು, ಮುಂದಿನ ವಿದ್ಯಾಭ್ಯಾಸಕ್ಕಾಗಿ ಗ್ಲಾಸ್ಗೋದ ವಿಶ್ವವಿದ್ಯಾಲಯವನ್ನು ಸೇರಿದ್ದ ವಿದ್ಯಾರ್ಥಿ—ಉಪೇಂದ್ರರಂಜನ ವಿಶ್ವಾಸ, ಇವನು ವಿದ್ಯಾಲಯದಲ್ಲಿ ಕಲಿಯುತ್ತಿರುವಾಗ್ಗೆ ಹಿಲ್ ಹೆಡ್ಡ್‌ನಲ್ಲಿಯ ಒಂದು ಬಾಡಿಗೆಯ ಕೋಣೆಯಲ್ಲಿರುತಿದ್ದ. ಅದರ ಸಮೀಪದ ಮನೆಯ ಜೋನ್‌ಗ್ರೇಂಟ್ ಮಿಲ್ಲರ್ ಎಂಬ ದಂತವೈದ್ಯರದಾಗಿತ್ತು. ಮಿಲ್ಲರರಿಗೆ ಅವರ ಹಿರಿಯ ಮಗಳು ಅಲ್ಮಾಗ್ರೇಂಟ್ ಮಿಲ್ಲರ್. ಒಂದು ದಿನ ಸಾಯಂಕಾಲ ವಿಶ್ವಾಸನು ತನ್ನ ಕೋಣೆಯ ಕಿಟಕಿಯ ಬಳಿ ಕುಳಿತು ಓದುತ್ತಿರಲು, ಯಾರೋ ನಕ್ಕಂತೆ ಕೇಳಿಸಿತು ನೋಡಲು ಅಲ್ಮಾ!–ಉದ್ಯಾನದಲ್ಲಿ ಕುಳಿತು, ಗುಲಾಬಿಯ ಹೂಗಳೊಡನೆ ಆಡುತ್ತಿದ್ದಳು; ಮುದ್ದಿಡುತಿದ್ದಳು. ಅಲ್ಮಾಳು ನಿರುಪಮಲಾವಣ್ಯವತಿಯಾದುದರಿಂದ ವಿಶ್ವಾಸನು ಆಕೆಯಲ್ಲಿ ಅನುರುಕ್ತನಾದ. ಆಕೆಯ ತಂದೆಯ ಸಮ್ಮತಿಯಿಂದ ವಿಶ್ವಾಸ ಹಾಗೂ ಅಲ್ಮಾರ ವಿವಾಹವಾಯಿತು ಅಲ್ಮಾಗ್ರೇಂಟ್ ಮಿಲ್ಲರಳು ಅಲ್ಮಾ ವಿಶ್ವಸ ಎಂದು ಕರೆಯಲ್ಪಡುವಂತಾಯಿತು.

ಕೆಲವು ತಿಂಗಳುಗಳ ವರೆಗೆ ಅವರು ಸುಖವಾಗಿ ಬಾಳಿದರು ವಿಶ್ವಾಸನಿಗೊಂದು ಗಂಡು ಮಗು ಹುಟ್ಟಿ, ನಮ್ಮ ಕಥಾನಕದ ಕಾಲಕ್ಕೆ ಒಂಬತ್ತು ಪೂರ್ಣಿಮಾ ಚಂದ್ರರನ್ನು ಕಂಡಿದ್ದ. ಈ ಅವಧಿಯಲ್ಲಿ ಪತಿಪತ್ನಿಯರೊಳಗೆ ಸ್ವಲ್ಪ ಕಲಹವೆದ್ದಿತು. ಹಣದ ವಿಷಯದಲ್ಲಿ ಬಹಳ ಹೊತ್ತು ವಾದಿಸಿದರು ನಂತರ ವಾದದ ಫಲವಾಗಿ ಅಲ್ಮಾ ವಿಶ್ವಾಸಳು ಪತಿಯ ಮನೆಯನ್ನು ತ್ಯಜಿಸಿ, ತಂದೆ ಮನೆಯಲ್ಲಿ ಮಗುವಿನೊಂದಿಗೆ ವಾಸಿಸಹತ್ತಿದಳು ಆದರೂ ವಿಶ್ವಾಸನು ಶಾಂತನಾಗಿದ್ದ ಯಾವುದೊಂದು ಗೋಜಿಗೂ ಹೋಗದೆ ತನ್ನ ಪಾಲಿಗೆ ತಾನಿದ್ದ

ರುದ್ರನಾಟ್ಯವಾದ ದಿನ ಸಾಯಂಕಾಲ ೫॥ ಗಂಟೆಗೆ ವಿಶ್ವಾಸನು ಹಿಲ್ ಹೆಡ್ಡಿನ ಬೆಲ್ಮಂಟ್ ಬೀದಿಯಲ್ಲಿದ್ದ ತನ್ನ ಕೋಣೆಯನ್ನು ಹೊಕ್ಕ

ಸ್ವಲ್ಪ ಸಮಯದೊಳಗೇ ಹೊರಬಂದ ನೆಟ್ಟಗೆ 'ಗೇರೇಜಿಗೆ ಹೋಗಿ ಒಂದ ಟೇಕ್ಸಿಯನ್ನು ಬಾಡಿಗೆಗೆ ನಿಶ್ಚಯಿಸಿ, ಅಲ್ಮಾಳು ವಾಸಿಸುತ್ತಿದ್ದ ಲಾರೆನ್ಸ್ ಸ್ಟ್ರೀಟ್‌ಗೆ ಹೊರಟ. ಸಾಧಾರಣ ಆರು ಗಂಟೆಗೆ ಟೆಕ್ಸಿಯು ಆ ಮನೆಯ ಎದುರಿಲ್ಲಿ ನಿಂತಿತು

ಟೇಕ್ಸಿಯು ನಿಂತೊಡನೆ ವಿಶ್ವಾಸನು ಅದರಿಂದ ಕೆಳಹಾರಿದ ಬಾಗಿಲಿನೆಡೆ ಧಾವಿಸಿದ ಬಾಗಿಲು ಮುಚ್ಚಿದ್ದಿತು 'ಬೆಲ್' ಒತ್ತಿದ ಒಳಗಿಂದ ಪದಧ್ವನಿಯು ಕೇಳಿಸಿತು, ಚಿಲಕ ತೆಗೆಯುವ ಸದ್ದೂ ಕೇಳಿಬಂತು ಬಾಗಿಲು ಅರೆತೆರೆದು ಸ್ತ್ರೀವ್ಯಕ್ತಿಯೊಂದು ಇಣಿಕಿತು ವಿಶ್ವಾಸ ನೋಡಿದ—ಅಲ್ಮಾ ಅವಳು! ಅವಳೊಡನೆ ವಿಶ್ವಾಸನು ಒಂದರೆಕ್ಷಣ ಏನನ್ನೋ ಮಾತನಾಡಿದ ಕೊನೆಗೆ ಫಕ್ಕನೆ ಕಿಸೆಯಿಂದ ರಿವಾಲ್ವರನ್ನು ಅಬಲೆ ಬಾಲೆಗೆ ಗುರಿಯಿಟ್ಟ ಗುಂಡು ಹಾರಿತು ತನ್ನ ಕರ್ತವ್ಯವನ್ನು ಪೂರೈಸಿತು. ಅಲ್ಮಾ ವಿಶ್ವಾಸಳು ನೆಲಕ್ಕೆ ಬಿದ್ದಳು

ಇದನ್ನು ಕಂಡು ಟೇಕ್ಸಿ ಚಾಲಕನು ತನ್ನ ಸ್ಥಾನವನ್ನು ಬಿಟ್ಟೆದ್ದು, ವಿಶ್ವಾಸನ ಮೇಲೆ ಹಾರಿದ. ಆತನ ರಿವಾಲ್ವರನ್ನು ಕಸಕೊಳ್ಳ ಲೆತ್ನಿಸಿದ ಆದರೆ ಮತಿಗೆಟ್ಟ ವಿಶ್ವಾಸನು ಅವನನ್ನೂ ರಿವಾಲ್ವರಿನ ಆಹುತಿಯಾಗಿಸಿದ ಗುಂಡು ಆತನ ಹೃದಯ ಪ್ರದೇಶವನ್ನು ಭೇದಿಸಿ ಬೆನ್ನಿನೊಳು ಹೊಕ್ಕು ಪಾರಾಯಿತು

ವಿಶ್ವಾಸನು ಕೂಡಲೆ ಮೂಳಿಗೆಯ ಮೆಟ್ಟಿಲನ್ನೇರಿ ಮಿಲ್ಲರರ ಕೋಣೆಗೆ ಹೋದ. ಕೆಳಗೆ ಹತರಾದವರನ್ನು ವಚರಿಸಲು ಮಾರ್ಗದಲ್ಲಿ ಸಾಗುತಿದ್ದವರು ಬಂದರು. ಅಷ್ಟರಲ್ಲಿ ವಿಶ್ವಾಸನು ಪುನಃ ಧಡಲ್ಲನೆ ಕೆಳಗಿಳಿದು ಬಂದು ಕೂಗಿದ 'ನಡೆಯಿರಿಲ್ಲಿಂದ ಎಲ್ಲರೂ. ಮುಟ್ಟಬೇಡಿರಿ ಆ ಶವಗಳನ್ನು; ಇಲ್ಲವಾದ ನನ್ನ ರಿವಾಲ್ವರು ನಿಮ್ಮನ್ನು ಮಾರ್ಗದಲ್ಲೇ ಮಲಗಿಸಲು ಶಕ್ತವಿದೆ''. ಜನರು ದೂರ ಸರಿದರು.

ಹುಚ್ಚನಂತೆ ಫಕ್ಕನೆ ತಿರುಗಿ, ಪುನಃ ಮಾಳಿಗೆಗೇರಿ ಹೋದ ,ಅರೆಕ್ಷಣದಲ್ಲೇ ರಿವಾಲ್ವರಿನ ನಾಲ್ಕು 'ಢಂ, ಢಂ'ಗಳು ಕೇಳಿಸಿದವು.

ಮಾರ್ಗದಲ್ಲಿ ಬೀಟಿಗಾಗಿ ಸಾಗುತಿದ್ದ ಪೋಲೀಸರೀರ್ವರು ಈ ಗಲಾಟೆಯನ್ನು ಕೇಳಿ ಓಡಿಬಂದರು. ಕೋಣೆಯ ಬಾಗಿಲು ಹಾಕಿತ್ತು. ಒದ್ದು, ಒಡೆದು, ಬೀಳಿಸಿದರು ಪ್ರೇತಕಂಡವರಂತೆ ಮುಂದಟ್ಟ ಕಾಲನ್ನು ಹಿಂದಕ್ಕೆಳೆದರು

ಕೋಣೆಯಲ್ಲಿ ಕುರ್ಚಿಯ ಮೇಲೆ ಶಾಂತಮೂರ್ತಿಯಾಗಿ ವಿಶ್ವಾಸನು ಕುಳಿತಿದ್ದನು. ಕೈಲಿದ್ದ ರಿವಾಲ್ವರಿನಿಂದ ಹಾರಿದ ಗುಂಡೊಂದು ಆತನ ಮಸ್ತಕವನ್ನು ಭೇದಿಸಿತ್ತು. ಜೊನ್ ಗ್ರಾಂಟ್ ಮಿಲ್ಲರನು ಮಲಗುವ ಕೋಣೆಯಲ್ಲಿ ರಕ್ತದ ಮಡುವಿನಲ್ಲಿ ಮುಳುಗಿದ್ದ ಆತನ ದ್ವಿತೀಯ ಪುತ್ರಿಯಾದ ಜೋನಳು ಮತ್ತೊಂದು ಕೋಣೆಯಲ್ಲಿ ಬಿದ್ದಿದ್ದಳು ವಿಶ್ವಾಸನ ಒಂಭತ್ತು ತಿಂಗಳ ಮಗುವಾದ ಅಲ್ಮಾ ವಿಶ್ವಾಸನ ಶವವೂ ಅದೇ ಕೋಣೆಯಲ್ಲಿತ್ತು

ಗ್ಲಾಸ್ಗೋದ ಆ ಪ್ರಸಿದ್ಧ ಕುಟುಂಬದಲ್ಲಿ ಈ ರುದ್ರನಾಟ್ಯದ ನಂತರ ಬದುಕಿ, ಉಳಿದವರೆಂದರೆ ಮೂವರು ಮಾತ್ರ ಪೇಟೆಗೆ ತರಕಾರಿ ತರಲು ಹೋದ ಮಿಸೆಸ್ ಮಿಲ್ಲರ್—ವಿಶ್ವಾಸನ ಅತ್ತೆ! ಮತ್ತು ಸಂಬಂಧಿಕರೊಬ್ಬರ ಮನೆಗೆ ಊಟಕ್ಕೆ ಹೋದ ಆಕೆಯ ಇಬ್ಬರು ಮಕ್ಕಳು'

"ಸ್ವದೇಶಾಭಿಮಾನಿ"ಯ ಸಂಪಾದಕರಿಗೆ—

ಅಯ್ಯಾ,

ತಾ ೨೭ ೮-೧೯೩೭ರ ತಾರೀಕಿನ ನಿಮ್ಮ ಪತ್ರಿಕೆಯಲ್ಲಿ ಶ್ರೀ ರಾಮೇಶ್ವರ ಮಠ ಮತ್ತು ಕೋದಂಡರಾಮ ದೇವಾಲಯದ ಜೀರ್ಣೋದ್ಧಾರ ನಿಧಿಯ ಬಾಬ್ತು ತಾ ೩೦-೬-೧೯೩೭ನೆ ವರೆಗಿನ ಜಮಾ ಖರ್ಚು ಪ್ರಕಟವಾಗಿರುತ್ತದಷ್ಟೆ ಅದರಲ್ಲಿ ಕಾಪು ದೇವಸ್ಥಾನದಿಂದ ರೂಪಾಯಿ ೧೯೦ ಎಂತ ಬರೆಸಿದೆ ಅದನ್ನು ಜೀರ್ಣೋದ್ಧಾರದ ಲೆಕ್ಕಾಚಾರದಲ್ಲಿ ಸೇರಿಸುವಾಗ ಆಡಿಟ್ ಮಾಡಿ ಸರಿಯಾಗಿರುವದೆಂದು ಕಂಡುಹಿಡಿದ ಆಡಿಟರು ಕೋಶಾಧಿಕಾರಿಗಳು, ಕಾರ್ಯದರ್ಶಿಯವರು ಸದ್ರಿ ಬಾಬ್ತು ಯಾರಿಂದ ಯಾರ ಬಗ್ಗೆ ಬಂದದ್ದು ಎಂಬ ರಿಕಾರ್ಡು ಪರಿಶೀಲಿಸಿ ನೋಡಲಿಲ್ಲವೋ, ಅಥವಾ ಅದು ಪರಿಶೀಲಿಸಲ್ಪಟ್ಟೀ ಸೇರಿಸಿದ್ದರೆ ಸದ್ರಿ ಹಣವು ಮಠದ ಲೆಕ್ಕದಲ್ಲಿ ಜೀರ್ಣೋದ್ಧಾರದ ಬಗ್ಗೆ ಎಂತ ಇದ್ದದ್ದು ಮೊತ್ತಬಳಿಗೆ ಸಂಬಂಧಿಸಿಕೊಂಡಿದ್ದಾಗಿರಬೇಕು ಆದರೆ, ಹಣವು ತಾರೀಕು ೨೦-೮ ೧೯೩೭ನೇ ನಿಮ್ಮ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಮೊದಲೆ ಈ ಪೇಟೆಯವರು ಪ್ರಕಟಪಡಿಸಿದ್ದಾರೆ

ಶ್ರೀಧರ ಶ್ಯಾನುಭಾಗ,
ಪಟೇಲ, ಕಾಪು.
ತಾ. ೫ ೯-೧೯೩೭

'ಸ್ವಚ್ಛವಾದ ಗಾಳಿ ಮತ್ತು ಬೆಳಗ್ಗಿನ ಗಾನದಲ್ಲಿ ಒಂದು ಬಟ್ಟಲು ಚಹಾ ಇವುಗಳಿಂದ ಅತ್ಯಂತ ಆರೋಗ್ಯವಂತನಾಗಿರುತ್ತೇನೆ' ಎಂಬುದು ಹಗಲಿರುಳು ರೈಲ್ವೇ ಇಂಜಿನ್ ಡ್ರೈವರನಾಗಿ ದುಡಿಯುವ ಒಬ್ಬನ ಅಭಿಪ್ರಾಯವು

ನಿಮ್ಮ ಚರ್ಮವನ್ನು ಆರೋಗ್ಯಕರವಾಗಿ ಇಡಿರಿ. ಮತ್ತು ಅದರ ಮೇಲೆ ಕಲೆಗಳಿಲ್ಲದಂತೆ ನೋಡಿರಿ.

ಮಲಗುವ ಸಮಯ ಮೈಗೆಲ್ಲಾ ಸಾಂಬಕ್ಕನ್ನು ಲೇಪಿಸಿರಿ

ಪ್ರತಿ ರಾತ್ರಿಯೂ ಮೈಗೆಲ್ಲ ಸಾಂಬಕ್ಕನ್ನು ಲೇಪನಮಾಡಿರಿ ನಿಮ್ಮ ಚರ್ಮದ ಮೇಲೆ ಕಜ್ಜಿಗಳು, ಕಲೆಗಳು ಇತ್ಯಾದಿ ಚರ್ಮರೋಗಗಳು ಉಂಟಾಗಲಾರವು, ಸಾಂಬಕ್‌ನಲ್ಲಿರುವ ವನಸ್ಪತಿ ತೈಲವು, ಚರ್ಮದ ಒಳಗೆ ಹೋಗಿ ಅಲ್ಲಿರುವ ಟಿಶ್ಯೂಗಳಿಗೆ ಒಳ್ಳೆಯ ಆಹಾರವನ್ನೊದಗಿಸಿ ಚರ್ಮವು ಸರಿಯಾಗಿ ಬೆಳೆಯುವಂತೆ ಮಾಡುವವು ಅದರಿಂದ ನೋವು ಉಪಶಮನವಾಗುವುದು ಉರಿಯು ಮಾಯವಾಗುವುದು ಚರ್ಮದೊಳಗೆ ಸೇರಿರುವ ಕೆಟ್ಟ ಪದಾರ್ಥಗಳನ್ನು ಹೊರಗೆಡಹುವುದು ಸಾಂಬಕ್ಕು ಲೋಕದ ಮೆಚ್ಚುಗೆಗೆ ಪಾತ್ರವಾಗಿರುತ್ತದೆ ಎಲ್ಲಾ ಕಡೆಗಳಲ್ಲಿ ಡಾಕ್ಟರರೂ ನರ್ಸುಗಳೂ ಇದನ್ನು ಕೊಂಡಾಡುತ್ತಿದ್ದಾರೆ ಎಲ್ಲಾ ದವಾಖಾನೆಗಳಲ್ಲೂ ಪೆಟ್ಟಿಗೆ 1ಕ್ಕೆ ರೂಪಾಯಿ 2-1-0ರಂತೆ ಸಿಗುತ್ತದೆ

ಏಜಂಟರು
ಮೆಸ್ಸರ್ಸ್ ದಾಧಾ ಎಂಡ್ ಕೊ, ಪಿ ಟಿ ಮದ್ರಾಸು.
ಸಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರವಿಲ್ಲ

ಸಾಂಬಕ್
Zam-Buk

ಮುದ್ದಾದ ಮುದ್ರಣವನ್ನು ಬಯಸುವಿರಾದರೆ, ಶಾರದಾ ಛಾಪಖಾನೆ

ರಥಬೀದಿ ಮಂಗಳೂರು,—ಇಲ್ಲಿಗೆ ಬನ್ನಿರಿ, ವಿಚಾರಿಸಿರಿ.

TEST YOUR EYES

By the Electro Ophthalmoscope





All Varieties of Frames & Lenses.

AT

The Mangalore Trading Association Ltd.

Sight Testing Ophthalmic Opticians,

Car Street, MANGALORE

'Dil Roz' (Regd)

'Dil Roz' is a sure cure for Oriental sores local sores, all kinds of deep rooted sores, skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2.

Postage extra

TAHIR DIN,

Anarkali, LAHORE

ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಅದರಿಂದ ಸೌಖ್ಯ, ಆನಂದ
ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ.
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ

ಜೀವಾಮೃತ

ಆಯುರ್ವೇದಾಶ್ರಮಂ,
೧೫೯ ಗೋವಿಂದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸ್.

ದ ಕ ಜಿಲ್ಲೆಯ ಏಜಂಟರು —

ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು

ಸದಾ ಉಪಯೋಗಿಸಿರಿ

ಲೋಧ್ರ ಲಲನೆಯರ ಸೌಖ್ಯಾರೋಗ್ಯಗಳಿಗೆ

ಕೇಸರೀ ಕುಟೀರಂ ರಾಯಪೇಟೆ ಮದರಾಸು.

ಮಂಗಳೂರು ಪ್ರವರ್ತಕರು— ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಶಾಸ್ತ್ರೀಯ ರೀತ್ಯಾ ತಯಾರಿಸಿದ
ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು
ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,
Flower Market South, Mangalore.

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬ ರೂ 1-4-0 (ವಿ.ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿದೇಪಿ,
P. O. Peridepi (ನೆಲ್ಲೂರು ಜಿ.)

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ ಅನಾರೋಗ್ಯದಲ್ಲಿರುವ ಅಥವಾ ಗರ್ಭವತಿಯಾಗಿರುವ ಸಾಧಾರಣ ಸ್ತ್ರೀಯರೆ ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ ಬಡಬಡಿಕೆ ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎದೆಬಡಿತ ಅಪಸ್ಮಾರ, ದುಃಖಿತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒಮ್ಮೆಲೆ 10 ನಿಮಿಷಗಳಲ್ಲಿ ಮಾಯವಾಗುತ್ತವೆ ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ

C. L. Namawala,
Palace Road, BARODA.

ಜೀವನವು ಹೀಗೇಕೆ

(ಹಿಂದಿನ ಸಂಚಿಕೆಯಿಂದ ಮುಂದುವರಿಯುವುದು)

"ಅಪ್ಪನವರು ನನ್ನನ್ನು ಕರೆದೊಯ್ಯಲು ನಿಮ್ಮಲ್ಲಿಗೆ ಬಂದರೆ ಇಲ್ಲಿ ಶಾಲೆಗೆ ಹೋಗಬೇಕಿಲ್ಲವೇ?

ಮಾಲತಿ, ಸರಿ! ಇಲ್ಲಿ ನೀನು ಶಾಲೆ ಬಿಡು, ನಾನು ನನ್ನ ಅಮ್ಮನವರ ಕೂಡೆ ಹೇಳುತ್ತೇನೆ. ನೀನೂ ಬಂಟ್ವಾಳದಲ್ಲಿ ಶಾಲೆಗೆ ಹೋಗಬಹುದು. ಸರಿ ಆಗದೆ?"

"ಇಲ್ಲ! ಮಾಲತಿ ನಾನು ಬರುವ ರಜೆಗೆ ನಿಮ್ಮಲ್ಲಿಗೆ ತಂದೆಯವರೊಡನೆ ಬರುತ್ತೇನೆ.

ಮಾಲತಿಯು ಬೆಂಗಳೂರು ಕೋರ್ನಾರ್ಡಿನ ಸೆರಗಿನಿಂದ ನಾಜೂಕಾಗಿ ತಯಾರಿಸಿದ ಹಳದಿ ಕೆಂಬಣ್ಣದ ಲಂಗವನ್ನು ತೊಟ್ಟಿದ್ದಳು. ಹೆಗಲಲ್ಲಿ ಗುಂಡಿಗಳಿರುವ ಸೊಂಟದ ಬಳಿಯವರೆಗೆ ಬರುವ ಗುಲಾಬಿ ವರ್ಣದ ಮೇಲಂಗಿಯನ್ನು ಹಾಕಿದ್ದಳು. ಕುತ್ತಿಗೆಯಲ್ಲಿ ಚಿನ್ನದ ಚೈನೊಂದು ಕೆಳಗಿಳಿದು, ಎದೆಯ ಕೆಳಗೆ ಸೊಂಟದ ಮೇಲುಗಡೆ ಚೌಕಳಿಯಿಂದ ಶೋಭಿಸುತ್ತಿತ್ತು. ಬಿದಿರು ಗಂಟಿನ ಚಿನ್ನದ ಬಳೆಗಳು ನಿಡಿದಾದ ಪುಟ್ಟ ಕೈಗಳಲ್ಲಿ ಅಂದವಾಗಿ ಬಾಚಿ ಸಡಿಲವಾಗಿ ಹೆಣೆದು ಕಟ್ಟಿದ ನೀಳ ಜಡೆಯು ಸೊಂಟದಿಂದಲೂ ಕೆಳಗೆ ಮೀರಿ ಹೋಗಿ ಜೋಲುತ್ತಿತ್ತು. ಚಿನ್ನದ ಚೌಕಟ್ಟಿನಿಂದ ಬಿಗಿದ ಮೂರು ಮುತ್ತುಗಳ ನಡುವಿನಿಂದ ಇಳಿದ ಕೆಂಪು ಹರಳು ಕಿವಿಗಳಲ್ಲಿ ಮಿನುಗುತ್ತಾ ಪ್ರಶಾಂತವಾದ ಮುಖದ ಮೆರುಗನ್ನು ಮತ್ತಷ್ಟು ಏರಿಸಿದ್ದವು. ದುಂಡುಮುಖಕ್ಕೆ ಆಯತವಾದ ನೇರಾದ ಮೂಗನ್ನು ತೀರಾ ಸಣ್ಣವಳೆಂದು ಇನ್ನೂ ಚುಚ್ಚಿಸಿದ್ದಿಲ್ಲ. ನಮ್ಮೂರನ್ನು ಬಿಟ್ಟು ಅಗಲುವ ಬೇಸರವೂ ಹೊಸ ಊರನ್ನು ನೋಡುವ ಲವಲವಿಕೆಯು ಎಳೆ ಪ್ರಾಯದ ನಗುಮುಖದಲ್ಲಿ ತಾಂಡವವಾಡುತ್ತ ಮಾಲತಿಯನ್ನು ಪೀಡಿಸುವಂತೆ ತೋರುತ್ತಿತ್ತು.

'ಮಾಲತಿ'ಯ ತಾಯಿಯವರು ನನ್ನ ಬಳಿಗೆ ಬಂದರು ಕೈಯಲ್ಲಿ ಬೆಳ್ಳಿಯ ಊಟದ ಬಟ್ಟಲು, ಅದರೊಡನೆ ಬಾಗಿದ ಕೈ ಇರುವ ಸೊಗಸಾದ ಹಾಲು ಕುಡಿಯುವ ಬೆಳ್ಳಿಯ ಲೋಟೆಯೊಂದು. 'ಇದು ನನಗೆ ಕಲಿತು ನೀನು ಜಾಣನಾಗಬೇಕು' ಎಂದರು. ಮಾಲತಿಯು ಅವರ ಬಳಿ ನಿಂತಿದ್ದು ಅವರ ಕೈಯಲ್ಲಿದ್ದ ಬೆಳ್ಳಿಯ ಬಟ್ಟಲಿನ ಕಡೆಗೂ ನನ್ನ ಕಡೆಗೂ ನಿರೀಕ್ಷಿಸುತ್ತಿದ್ದಳು. ಇನ್ನೊಂದು ಗಳಿಗೆಯೊಳಗೆ 'ಮಾಲತಿ'ಯು ನನ್ನ ಹತ್ತಿರದಿಂದ ಇಲ್ಲಿಂದ ಅಗಲುವಳು ಎಂದು ನನಗೆ ಅನಿಸಿತು. ಕೈಯಲ್ಲಿ ಬಟ್ಟಲನ್ನು ಹಿಡಿದುಕೊಂಡು ಸ್ತಬ್ಧನಾಗಿ ಅಲ್ಲಿಯೇ ನಿಂತುಬಿಟ್ಟೆ, 'ಮಾಲತಿ'ಯು ಹತ್ತಿರ ಬಂದು 'ರಮೇಶ' ಇದನ್ನು ನಿನ್ನೆ ಅಮ್ಮನವರು ಪೇಟೆಯಿಂದ ತರಿಸಿದ್ದು ಎಂದು ಅದರ ಸುತ್ತಲಿನ ಕಾಗದವನ್ನು ಅದಕ್ಕೆ ಹೊಂದಿಕೆಯಾಗುವಂತೆ ಸರಿಯಾಗಿ ಹೊದಿಸಿ ತಿರುಗಿ ನನ್ನ ಕೈಯಲ್ಲಿಟ್ಟಳು.

ಮತ್ತೊಂದು ಗಳಿಗೆಯಲ್ಲಿ ಮಾರ್ಗದ ಬದಿಯಲ್ಲಿ ಬಸ್ಸಿನ ಸ್ವರ ಕೇಳಿತು. ರಾಯರು ಮುಷ್ಟಿ ಹಿಡಿದ ಬಲಕೈಯನ್ನು ನನ್ನ ಕೈಯೊಳಗೆ ತುರುಕಿಸಿ ಒಂದು ನೋಟನ್ನು ಇಟ್ಟು ಬಸ್ಸು ಹತ್ತಿದರು. 'ಮಾಲತಿ'ಯು ಅವಳ ತಾಯಿಯ ಪಕ್ಕದಲ್ಲಿ ಒಂದು ಬದಿಗಾಗಿ ಕುಳಿತಳು, ಬುಸುಗುಟ್ಟುತ್ತಾ ನಿಂತಿದ್ದ 'ಬಸ್ಸು' ಉದ್ದವಾದ ನಿಟ್ಟುಸಿರನ್ನು ಬಿಡುತ್ತಾ ಚಲಿಸ ತೊಡಗಿತು. 'ರಮೇಶ' ಎಂದು ಮಾಲತಿಯು ಪುಟ್ಟ ಕೈಯನ್ನು ಮೇಲೆ ಎತ್ತಿದಳು, ಬಸ್ಸಿನ ಸ್ವರದೊಂದಿಗೆ ಬೆರತು ಮುಳುಗಿಹೋದ ಆ ದೀನ ಇಂಪು ಸ್ವರವು ಇನ್ನೂ ನನ್ನ ಹೃದಯ ಪಟಲದಲ್ಲಿ ಆಗಾಗ ಮಿಡಿಯುತ್ತಲಿದೆ.

'ಮಾಲತಿ' ಹೋದ ... ಒಂದೆರಡು ತಿಂಗಳ ... ಗಿ ವರುಷ ಮೂರಾಯಿತು, ... ಅಲ್ಲಿಯ ತನಕ ಹೋಗಲು ನನಗೆ ಸಮಯವೇ ಒದಗಲಿಲ್ಲ. ಬಂಟ್ವಾಳದಿಂದ ತಿರುಗಿ ಪುತ್ತೂರಿಗೆ ವರ್ಗವಾಯಿತು, ಪುತ್ತೂರಿಗೆ ಖಂಡಿತವಾಗಿ ಹೋಗಲೇ ಬೇಕೆಂದು ನಿಶ್ಚಯಿಸಿದ ದಿನ ನಿಶ್ಚಯ ಮಾಡುತ್ತಾ ವರುಷ ಒಂದು ಹಾರಿಹೋಯಿತು.

ಅಂತೂ ಇಂತೂ ದಸರಾ ರಜೆಯು ಬಂತು 'ಮಾಲತಿ'ಯನ್ನು ನೋಡುವ ನೆವನದಿಂದಾಗಿ 'ದಸರಾ' ಸಮ್ಮೇಳನವನ್ನು ನೋಡುವ ಸಂಧಿಯೂ ಅಲ್ಲಿ ಒದಗಿ ಬಂದಿತು. ದಸರಾ ಸಮ್ಮೇಳನವು ಸಮಾಪ್ತಿಯಾಗುವ ವರೆಗೆ ಪುತ್ತೂರಲ್ಲಿ ನಿಲ್ಲಲು ಯಾವ ತರದ ಅಡ್ಡಿಯೂ ಇಲ್ಲ.

ಮೂರುಗಂಟೆಗೆ ಬಿಟ್ಟ ಬಸ್ಸು ಆರು ಗಂಟೆಯ ಒಳಗೆ ಪುತ್ತೂರಿನ ಪೇಟೆಯ ಮಧ್ಯಕ್ಕೆ ಬಂದುಬಿಟ್ಟಿತು. ಇಡೀ ದಿವಸದ ಚಿಟಿ, ಚಿಟಿ, ಮಳೆಯಿಂದಾಗಿ ಅಲ್ಲಲ್ಲಿ ಮಾರ್ಗವು ಕೆಸರು ಗದ್ದೆಯಂತಾಗಿತ್ತು ಕಾಲನ್ನು ಜಾಗ್ರತೆಯಿಂದ ಎತ್ತಿ ಹಾಕದಿದ್ದರೆ ಕೆಸರು ಬೆರೆತ ಕೆಂಬಣ್ಣದ ನೀರೆಲ್ಲ ಸಿಡಿದು ಉಟ್ಟ ವಸ್ತ್ರದ ಅಂದವೇ ಬೇರೆಯಾಗುವ ಸಂದರ್ಭ. ಮಾಲತಿಯವರ ಮನೆಯು ಹತ್ತಿರವಾದಷ್ಟಕ್ಕೆ ಆ ಪೋರಿಯನ್ನು ನೋಡುವ ಆತುರವು ಹೆಚ್ಚಾಗ ತೊಡಗಿತು, ದಿನಂಪ್ರತಿ ಒಡನಾಡುತ್ತಿದ್ದ ಮಾಲತಿಯನ್ನು ನಾಲ್ಕೈದು ವರುಷಗಳ ನಂತರ ತಿರುಗಿ ನೋಡುವದೆಂದರೆ ಮನಸ್ಸು ಹೇಗಾಗಬೇಕು?

ಮನೆಯ ಮುಂದುಗಡೆ ಅರಸಿನ ನೀರುಳ್ಳಿ, ನೀರಳೆ, ಗುಲಾಬಿ ಬಿಳಿ ಬಣ್ಣದ ಮುತ್ತು ಹಳದಿ ಕೆಂಪು ಚಟ್ಟಿಗಳುಳ್ಳ ಸಂಜೆಮಲ್ಲಿಗೆಗಳು ಅರಳಿ ಮೊಳೆಯ ತುತುರು ಹಸಿಗಳು ಅದರ ಎಸಳುಗಳಲ್ಲಿ ಕಳಿತ ಹೂಗಳ ಬಣ್ಣವನ್ನು ಮತ್ತೂ ಪುಟವೇರಿಸಿದ್ದವು. ಎರಡು ಮೂರು ದಿವಸಗಳಿಂದ ಅರಳುತಿದ್ದ 'ಹೂ'ಗಳು ಬಾಡಿ ಮುದುಡಿಕೊಂಡು ಕೆಲವು ತೊಟ್ಟಿನಲ್ಲಿ ಜೋಲಾಡಿಕೊಂಡಿದ್ದವು. ಕೆಲವು ಗಿಡಗಳ ಕೆಳಗೆ ನೆಲದಲ್ಲಿ ಹರಡಿಕೊಂಡಿದ್ದವು.

ಮನೆಯೊಳಗೆ ಕಾಲಿಟ್ಟೆ 'ಮಾಲತಿ'ಯ ತಾಯಿಯವರು ಕೋಣೆಯ ಹೊರಗಡೆ ಜಗಲಿಯಲ್ಲಿ ಬಾಗಿಲಿನ ಬಳಿಯಲ್ಲಿ ಕುಳಿತಿದ್ದರು. ಕೆದರಿದ ತಲೆ ... ಕರಗಿ ಒಳಲಿದ ಮುಖವು, ಮಾಸಿದ ಸೀರೆ. ಕೇಶವರಾಯರು ಆಫೀಸಿನ ಮೇಜಿನ ಹಿಂದುಗಡೆಯಲ್ಲಿ ಕುರ್ಚಿಯಲ್ಲಿ ಕಳವಳಗೊಂಡವರಾಗಿ ಮೌನವಾಗಿ ಕುಳಿತು ಏನನ್ನೋ ಆಲೋಚಿಸುತ್ತಿದ್ದರು. ನನ್ನನ್ನು ನೋಡಿದೊಡನೆ 'ಮಾಲತಿ'ಯ ತಾಯಿಯವರು ಗಟ್ಟಿಯಾಗಿ ಅತ್ತರು, ರಾಯರು ಮೌನವಾಗಿ ಕಣ್ಣೀರು ಸುರಿಸುತ್ತಾ ಕೈವಸ್ತ್ರದಿಂದ ಒರಸಿಕೊಳ್ಳ ತೊಡಗಿದರು. ಒಳಗಡೆ ನಡುಕೋಣೆಯಲ್ಲಿ ಮಣೆಯ ಮೇಲಿರುವ ಪುಟ್ಟ ಗಿಂಡಿಯ ಬಳಿಯಲ್ಲಿ ಸಣ್ಣ ಜ್ಯೋತಿಯೊಂದು ನಿಧಾನವಾಗಿ ಉರಿಯುತಲಿತ್ತು.



ಸನ್‌ಲೈಟ್ ಸಾಬೂನು
ಅದೇ ಆಶ್ಚರ್ಯಕರವಾದ ಸಾಬೂನು ಆದರೆ
ಬೇರೆ ಅನುಕೂಲವಾದ
ಹೊಸ ಸೈಜಿನಲ್ಲಿ

ಸನ್‌ಲೈಟು ಸಾಬೂನು ಇನ್ನೂ ಮೊದಲಿನ ಸೈಜಿನ ಪ್ಯಾಕಿನಲ್ಲೂ ದೊರೆಯುತ್ತದೆ.

ನಿಮ್ಮ ಅನುಕೂಲಕ್ಕೋಸ್ಕರ ಸುಪ್ರಸಿದ್ಧಿಯಾದ ಸನ್‌ಲೈಟ್ ಸಾಬೂನು ಈಗ ಮೂರು ದೊಡ್ಡ ಸಾಬೂನು ಗಳಿಂದ ಕೂಡಿದ ಪೆಟ್ಟಿಗೆಯಲ್ಲಿ ದೊರೆಯುತ್ತದೆ. ಈ ಹೊಸ ಪೆಟ್ಟಿಗೆಯು ಸನ್‌ಲೈಟು ನಿಮ್ಮ ತಾತ್ಕಾಲಿಕ ಉಪಯೋಗಕ್ಕೆ ಬರುವಂತೆ ಸಹಾಯಕವಾಗಿದೆ. ಪ್ರತಿಯೊಂದು ಸಾಬೂನು ಯಾವಾಗಲೂ ಹೊಸದಾಗಿರುವಂತೆ ಬೇರೆ ಬೇರೆ ಕಾಗದಗಳಿಂದ ಸುತ್ತಲ್ಪಟ್ಟಿದೆ. ನಿಮ್ಮ ವ್ಯಾಪಾರಗಾರರಲ್ಲಿ ಇದು ಇದೆ. ಈದಿನವೇ ಅವರನ್ನು ಹೊಸಪ್ಯಾಕಿನ ಸನ್‌ಲೈಟನ್ನು ಕೇಳಿರಿ.

... ಉತ್ತಮವಾದ ಸನ್‌ಲೈಟನ್ನು ಬಿಟ್ಟರೆ ಯಾವ ಸಾಬೂನು ... ಇದು ಬಹುಬೇಗ ಮತ್ತು ಸುಲಭವಾಗಿ, ಹೆಚ್ಚಾಗಿ ಒಗೆಯದೆ ಕೊಳೆಯನ್ನೆಲ್ಲಾ ಹೋಗಿಸುತ್ತದೆ. ಸನ್‌ಲೈಟನ್ನು ಉಪಯೋಗಿಸುವುದರಿಂದ ಬಟ್ಟೆಗಳು ಎಷ್ಟು ಬಿಳಿಯಾಗಿ ಶುಭ್ರವಾಗಿರುತ್ತವೆಂಬುದನ್ನು ಅದೇ ತೋರಿಸಿಕೊಡುತ್ತದೆ

ಇಂಡಿಯಾದಲ್ಲೇ ವನಸ್ಪತಿಗಳ ಶುದ್ಧ ಎಣ್ಣೆಯಿಂದ ತಯಾರಿಸಲ್ಪಟ್ಟಿದೆ.

X-S 1248 288A
LEVER BROTHERS (INDIA) LIMITED
KANARESE

ಚಾ ಪಾನವು ಆರೋಗ್ಯಕರವೆ?

ಈ ಕುರಿತು ಅನೇಕ ವೈದ್ಯಕೀಯ ಪ್ರವೀಣರ ಶೋಧನೆ ನಡೆಯಿತು, ಮಿತಿಯುದ್ದು ಚಾ ಪಾನಮಾಡಿದರೆ, ಅದರಿಂದ ಆರೋಗ್ಯಕ್ಕೆ ಹಾನಿಯಿಲ್ಲ ಎಂಬುದನ್ನು ಖಚಿತಮಾಡಿರುವರು. ಚಾ ಪಾನದಿಂದ ನಿಮ್ಮಲ್ಲಿ ಉಲ್ಲಾಸವು ಉಂಟಾಗುವುದು. ಉತ್ತಮ ತರದ ಚಹಾದಲ್ಲಿ ಒಳ್ಳೆ ವಿಶ್ರಾಮದಾಯಕ ಗುಣಗಳಿವೆ.

WANTED.

ದಕ್ಷಿಣ ಕನ್ನಡ ಮಲಬಾರು ಮತ್ತು ಕೊಡಗು ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿ ಪ್ರಪಂಚದಲ್ಲೆಲ್ಲಾ ಪ್ರಸಿದ್ಧಿಹೊಂದಿ ರಿಜಿಸ್ಟರ್ ಆಗಿರುವ ಟಾನ್‌ಸೆನ್ ಮಾತ್ರೆಗಳ ವ್ಯಾಪಾರ ನಡಿಸಲಿಕ್ಕೆ ಯೋಗ್ಯ ಏಜಂಟರುಗಳು ಬೇಕಾಗಿದ್ದಾರೆ. ಸಂಬಳ ರೂ 25—0—0 ಮತ್ತು T A ಸುಲಭ ಶರ್ತಗಳಿಗೆ ಅಂಚೆ ಚೀಟಿನೊಂದಿಗೆ ಇಂದೇ ಬರೆಯಿರಿ

R Pinto, Manager,
TAN-SEN HOUSE LTD
Hampankatta MANGALORE.

ಎಲಿಮೆಂಟರಿ ಎಜ್ಯುಕೇಶನ್
(ದಕ್ಷಿಣ ಕನ್ನಡದ ಮುಖ್ಯ ವಿಷಯಗಳು)

ಟ್ರೈನಿಂಗ ಶಾಲೆಗಳು

ಹೆಂಡತಿ ನ್ಯಾಯದ ಎಲಿಮೆಂಟರಿ ಗ್ರೇಡುಗಳ ಟ್ರೈನಿಂಗಿಗೆ ಒಂದೇ ಶಾಲೆ ಸಾಕು. ಬೇರೆ ಬೇರೆ ಇದ್ದರೆ ಇಬ್ಬರು ಮುಖ್ಯ ಉಪಾಧ್ಯಾಯರು, ಎಲ್ಲಾ ಡಬ್ಬಲ್ ಉಪಾಧ್ಯಾಯರು, ಡಬ್ಬಲ್ ಪೇದೆಗಳು ಎಲ್ಲಾ ಡಬ್ಬಲ್ ಬೇಕಾಗುವದು. ಒಂದೇ ಮಾಡಿದರೆ ಎಲ್ಲಾ ಸಿಂಗಲ್ ಸಿಂಗಲ್ ಸಾಕು. 8—9ನೇ ದರ್ಜೆ ವರೆಗಿನ ಒಂದೇ ಮೋಡಲ್ ಸೆಕ್ಷನ್ ಸಾಕು. ಹೆಂಗಸರಿಗೂ ಒಂದು ಜಿಲ್ಲೆಗೆ ಒಂದು ಟ್ರೈನಿಂಗ ಶಾಲೆ ಸಾಕು. ಇದರಿಂದ ಶೇಕಡಾ 50ರಷ್ಟು ಖರ್ಚು ಕಡಿಮೆಯಾಗುವುದು.

ಇನ್ಸಪೆಕ್ಟಿಂಗ ಆಫೀಸರರು

ಒಂದು ಜಿಲ್ಲೆಗೆ ಒಬ್ಬ ಎಜ್ಯುಕೇಶನಲ್ ಆಫೀಸರರು ಸಾಕು. ಜೂನಿಯರ ಡಿಪ್ಟಿ ಅಥವಾ ಸುಪರವ್ಯಾಜರರ ಸಂಖ್ಯೆ ಹೆಚ್ಚಿಸಿ ಒಬ್ಬೊಬ್ಬರಿಗೆ 60 ಶಾಲೆಗಳಂತೆ ಮೇಲು ತನಿಖೆಗೆ ಕೊಡಬೇಕು. ಆಗ ಶಾಲೆಗಳ ಕೆಲಸ ಸರಿಯಾಗಿ ನಡೆಯುವದು. ದಿವಸಕ್ಕೆ 2 ಶಾಲೆಗಳಂತೆ ನೋಡಿಕೊಳ್ಳಬಹುದು. ಖರ್ಚು ಕಡಿಮೆಯಾಗುವಂತೆ ಇವರ ಸಂಬಳ ಮತ್ತು ಭತ್ತೆ ಕಡಿಮೆ ಮಾಡಬೇಕು.

ಎಲಿಮೆಂಟರಿ ಶಾಲೆಗಳ ಗ್ರೇಂಟು

ಇದು ಎಲ್ಲಾ ಎಲಿಮೆಂಟರಿ ಶಾಲೆಗಳಿಗೂ ತಿಂಗಳಿಗೊಂದಾವರ್ತಿ ಕೊಡುವಂತೆ ಏರ್ಪಾಡಾಗಬೇಕು. ಇಲ್ಲದಿದ್ದರೆ ಉಪಾಧ್ಯಾಯರು ಒಂದು ವರ್ಷದ ವರೆಗೆ ಅಂದರೆ ವರ್ಷಾವಧಿ ಗ್ರೇಂಟು ಬರುವ ವರೆಗೆ ಆಕಾಶಕ್ಕೆ ನೋಡಿ ಇರಬೇಕಾಗುತ್ತದೆ. ಇನ್ಸಪೆಕ್ಟರರು ಎಷ್ಟು ಕಠಿಣ ರಿಮಾರ್ಕು ಬರೆದರೂ ಕೇಳಿಸಿಗಿಲ್ಲದ ಉಪಾಧ್ಯಾಯರು ಈ ರಿಪೋರ್ಟುಗಳಿಗೆ ಮರ್ಯಾದೆ ಕೊಡಲು ಸಾಧ್ಯವಿದೆಯೇ? ಇನ್ಸಪೆಕ್ಟರರಿಗೆ ತಿಂಗಳಿಗೊಂದಾವರ್ತಿ ಸಂಬಳ ಭತ್ತೆ ಸಿಕ್ಕುತ್ತದೆ. ಪೇದೆಗೆ ವರ್ಷಕ್ಕೊಂದಾವರ್ತಿ ಮೂರು ಕಾಸು ಸಿಕ್ಕುತ್ತದೆ. ಮೊಫರ್ ನೋಟೀಸು ಎಲ್ಲಾ ಬರಖಾಸ್ತು ಆಗಬೇಕು. ಶಾಲೆಗೆ 15 ನಿಮಿಷ ಮುಂಚೆಯೇ ಬರಬೇಕು. ಇನ್ಸಪೆಕ್ಟರರು ಶಾಲಾ ಪರೀಕ್ಷೆಗೆ 15 ದಿವಸ ಹಿಂದೆ ಮುಂದೆ ಬರಬಹುದು. ಆದುದರಿಂದ ವರ್ಷಾವಧಿ ಪರೀಕ್ಷೆಗೆ ದಿನ ನಿರ್ಣಯಿಸುವಂತೆ ಹುಕುಂ ಆಗಬೇಕು.

ಎಕ್ವಿಟೆನ್ಸ್ ರೂಲ್ ಇಡಬೇಕಂತೆ

ತಿಂಗಳಿಗೊಂದಾವರ್ತಿ ಖಾಸಗಿ ಶಾಲೆಗಳಲ್ಲಿ ಸಂಬಳ ಸಿಕ್ಕದೆ ಇದ್ದರೆ ಎಕ್ವಿಟೆನ್ಸ್ ರೂಲು ಇಟ್ಟು ಮಾಡುವದೇನು? ಸೊನ್ನೆ ಸೊನ್ನೆ ಹಾಕಿ ದಸ್ಕತು ಹಾಕಬೇಕೆ? ಅದರಲ್ಲಿಯೂ ಮೆನೆಜರರಿಗೆ ಸಹಾಯವಾಗುವಂತೆ (monthly or ಎನ್ನುವಲ್ಲಿ Annually) ಎಂಬ ಶಬ್ದವನ್ನು ಡ್ಯಾರೆಕ್ಟರರು ಉಪಯೋಗಿಸಿದ್ದಾರೆ. ಈ ಎನ್ನುವಲ್ಲಿ (ವರ್ಷಕ್ಕೊಮ್ಮೆ ಸಂಬಳ) ಎಂಬ ಶಬ್ದ ತೆಗೆಯದೆ ನಿರ್ವಾಹವಿಲ್ಲ. ಮೆನೆಜರರು ಉಪಾಧ್ಯಾಯರಿಗೆ ಸಂಬಳ ಕೊಡದೆ ಉಪವಾಸ ಹಾಕಿ ಕೊಲ್ಲುತ್ತಾರೆ. ಎಲಿಮೆಂಟರಿ ಶಾಲೆಗಳ ಮುಖ್ಯಾಲುವಾಗಿ ಮೆನೆಜರರ ಕೈಯಲ್ಲಿ ಮುಕ್ಯಾಲಿಲ್ಲ. ಸರಕಾರದವರು ಗ್ರೇಂಟು ಕೊಟ್ಟರೆ ಮೆನೆಜರರ ಮರ್ಜಾದೆಗೆ ಸ್ವಲ್ಪ ಹಣ ತೆಗೆದು ಕಷ್ಟ ಇದೆ ಎಂದು ಹೇಳಿ ಏನಾದರೂ ಮಾಡುತ್ತಾರೆ. ಇನ್ನು ಎಕ್ವಿಟೆನ್ಸ್ ರೂಲಿನಲ್ಲಿ ಬಾಕಿ ಇಟ್ಟ ಹಣವೆಂದಿದೆ. ಈ ಕಲಂ ತೆಗಿಯಬೇಕು. ಈ ಕಲಂ ಮೆನೆಜರರೇ ಸಂಬಳ ಕೊಡುವುದು ಅಗತ್ಯವಿಲ್ಲ. ಬಾಕಿ ಇಡಬಹುದೆಂದು ಹೇಳುತ್ತದೆ.

ಎಜ್ಯುಕೇಶನ್ ಕೌನ್ಸಿಲ

ಇದನ್ನು ತೆಗೆದುಹಾಕಿ ಇದರ ಅಧಿಕಾರ ಅಂದರೆ ರಿಕೊಗ್ನಿಶನ ಮತ್ತು ಗ್ರೇಂಟ ಕೊಡುವ ಅಧಿಕಾರವನ್ನು ಮೊದಲಿನಂತೆ ಡಿಸ್ಟ್ರಿಕ್ಟ ಇನ್ಸಪೆಕ್ಟರರಿಗೂ ಎಜ್ಯುಕೇಶನಲ್ ಆಫೀಸರರಿಗೂ ಕೊಟ್ಟರೆ ಎಯಿಡೆಡ್ ಶಾಲೆಯ ಮೆನೇಜರರು ಬಚಾವಾದಾರು. ಡಿಸ್ಟ್ರಿಕ್ಟ ಬೋರ್ಡಿನ ಎಜ್ಯುಕೇಶನ ಸ್ಟೆಂಡಿಂಗ ಕಮಿಟಿಗೆ ಕೊಟ್ಟರೆ 8ನೇ ದರ್ಜೆ ವರೆಗೆ ಮಾಫ್ ಕಡ್ಡಾಯಗಳನ್ನು ನಿರ್ವಾಹ ಮಾಡುತ್ತಾರೆ.

ಕಡ್ಡಾಯ ಮಾಫ್ ಶಿಕ್ಷಣ

ಮೇಲಿನ ರೀತಿಯಲ್ಲಿ ಖರ್ಚು ಕಡಿಮೆ ಮಾಡಿದರೆ ಕಡ್ಡಾಯ ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಹಣ ಸಿಗುವುದರಲ್ಲಿ ಸಂದೇಹವಿಲ್ಲ.

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಳೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಜಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ.

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುತ್ತದೆ.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ ಉಡುಪಿ

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ರಾಶಿ ಅಕ್ಕಿ	3— 8	4— 0
ಮುಸ್ಕಿ	4 — 4	4— 8
ಗುಡ್ಡ	3—12	4— 0
ಊರ ಅವ್ವಲ್ ಬೆಳ್ತಿಗೆ	4— 8	5— 0
ರಂಗೂನು ಬಿ. ಸೋ. ಗಳ್ಳೆ	6 — 8	7— 0
ಎಲ್ಲೂರು ಬೆ. ಮು. ಗಳ್ಳೆ	3—14	4— 0
ಗೋಧಿ ಗೋಣಿ ಗಳ್ಳೆ	12 — 8	15— 8
ತೊಗರಿ ಗೋಣಿ ಗಳ್ಳೆ	11— 8	18— 8
ಹುರುಳಿ ಗೋಣಿ ಗಳ್ಳೆ	5— 0	6 — 4
ಕಡಲೆ ಗೋಣಿ ಗಳ್ಳೆ	9 — 8	10 — 8
ತೊಗರಿಬೇಳೆ ಗೋಣಿ ಗಳ್ಳೆ	11— 0	19— 0
ಉದ್ದು ಗೋಣಿ ಗಳ್ಳೆ	9— 0	9 — 8
ಹೆಸರು ಗೋಣಿ ಗಳ್ಳೆ	9—12	10— 8
ಊರುಬೆಲ್ಲ ಖಂಡಿ ಗಳ್ಳೆ	30— 0	35— 0
ಉಪ್ಪು ಗೋಣಿ ಗಳ್ಳೆ	4— 8	5— 4
ಕೊಬ್ರಿ ಖಂಡಿ ಗಳ್ಳೆ	85— 0	90— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	20 — 0	21— 0
ಎಳ್ಳಿಂಡಿ ಖಂಡಿ ಗಳ್ಳೆ	25 —	26 — 0
ಕೊಬ್ರಿ ಎಣ್ಣೆ ಮಣ ಗಳ್ಳೆ	4— 6	6— 4
ಎಳ್ಳೆಣ್ಣೆ ಮಣ ಗಳ್ಳೆ	6— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ	6— 5	7— 5
ದೋರಿನ ಸಕ್ಕರೆ ಮ. ಗಳ್ಳೆ	2— 11	2 —12
ಮೆಣಸು	4— 8	6— 0
ಸಾಸಿವೆ ಮುಡಿ ಗಳ್ಳೆ	5 — 8	6— 8
ಕಾಳುಮೆಣಸು ಖ ಗಳ್ಳೆ	97 — 8	100— 0
ಯೇಲಕ್ಕಿ ಬೀಜ ಮಣಗಳ್ಳೆ	80— 0	85— 0
ಗೇರುಬೀಜ ಮು ಗಳ್ಳೆ	3 —14	4— 2
ಕಬ್ಬಿಣ ಖಂಡಿ ಗಳ್ಳೆ	50— 0	55— 0
ತಾಂಬ್ರದ ತಗಡು ಮ ಗಳ್ಳೆ	14— 12	16— 0
ತಾಂಬ್ರದ ಪಾತ್ರಗಳು ಮ ಗಳ್ಳೆ	17— 0	18— 0
ಚೀನಬೆಳ್ಳಿ ಸೇರು ಗಳ್ಳೆ	13— 8	14— 0
ಹಿತ್ತಾಳೆ ತಗಡು ಮ. ಗಳ್ಳೆ	12— 0	12— 0
ಪವನು ಗಳ್ಳೆ	22— 4	22— 6
ಹುಣಿಸೆ ಹುಳಿ ಖಂಡಿ ಗಳ್ಳೆ	40— 0	4 — 0
ನೇಟಿವ್ ಕಾಫಿ ಖಂಡಿ ಗಳ್ಳೆ	140— 0	148— 0
ಫ್ರೆಂಚ್ ಕಾಫಿ ಖಂಡಿ ಗಳ್ಳೆ	192— 0	195— 0
ಮಡಿಕೇರಿ ಏಲಕ್ಕಿ	67— 0	70

Byndoor 9th July 1937

From

J M. BANAVALI,
Byndoor Camp

To

The Agent,
The Combined Booking Office,
Byndoor (S K)

Dear Sir

Received the Tin which I had missed in your office at Udipi on 6 7 1937 and which your Udipi Office so kindly and promptly sent to me I am really startled to see the efficient Management and promptness of the staff in rendering every assistance to the travelling passengers. I cannot therefore restrain myself from thanking the Management and the staff.

Yours faithfully
(Sd.) **J. M Banavali**

(True Copy)

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by:—

The West Coast Soap Factory,

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

[illegible]

[illegible] ಎಮ್. ಕೆ. [illegible]

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ವಿರಾಜ, (S. M. C.

ಗಲ೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾರಾಮಿಶ್ರಿ, ಕಲ್ಕದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2-8-0. ಮೂರು ಬಾಟ್ಲಿಗಳಿಗೆ ರೂ. 7-0-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1-8-0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೋರ್ಸ ಹೌಸ್, ಶ್ರೀರಾಮಪೇಟೆ, ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಗಾಂ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ

ಡೋಂಗರ್‌ಕೃತ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಷಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Edited Printed & Published by [illegible] at the [illegible]ada Press, Car Sreet, Mangalore.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವ್ಹಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರದಲ್ಲಿ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮುಕ್ತ ವಿಷವ ಸುಡುಕ ಬರುತಿರುವ ॥
ಗರಲಕವರಂಜಿದರೆ? ಸಾಧಿಯುನು । ಮರಿತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಮಂಗಳೂರು ತಾ. ೧೭ನೇ ಸಪ್ಟಂಬರ ೧೯೩೭. (17-9-'37) ಸಂಚಿಕೆ [illegible]

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	USINESS IN FORCE
1926	32,08,000	5,04,466	15,14,855	1,16,58,706
1930	59,97,500	9,83,367	28,00,970	2,06,68,328
1933	94,16,500	15,12,692	50,04,871	3,07,98,434
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances. Family Safe Guard Policy a special feature.
Application for agencies will be received from honest and respectable gentlemen.
Organisers appointed with pay and allowance.
Gentlemen with organising ability and who can guarantee Business need apply.

KOCHIKAR BROTHERS,

Madras Branch Secretaries,

Post Box 337, Mount Road, MADRAS.

Phone No. 8245.

Apply to any of the following Offices:-

Ottapalam	Central Station Road, Trivandrum.	Visveshwarapuram Circle, Bangalore City.	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No. 4

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಚೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಈ ಅಂಗಡಿಯಲ್ಲಿ ದೊರೆಯುವದು.

...—ನೋಟಗಳು

...ಹಡಗು ಕಳೆದಿರುವ ... ಅನುಗಿಸುವುದಕ್ಕೆ ... ಹಡಗುಗಳನ್ನು ಗೊತ್ತು ಹಚ್ಚಿ ದಂಡಿಸ ಲಿಕ್ಕೆ ಒಂದು ಪರಿಷತ್ತು ಸೇರಿತು. ರಷ್ಯಾ ಸರಕಾರವು ಈ ಪಾಪಿಯೆಲ್ಲ ಇಟಲಿಯದೇ ಎಂದು ಧೈರ್ಯದಿಂದ ತಿಳಿಸಿದ್ದುದೇ ಅಲ್ಲದೆ, ಅಲ್ಲವೆಂದು ಇಟಲಿ ಹೇಳಲಿ ಎಂದಿತು. ಇಟಲಿಗೆ ಹೀಗೆ ಕಂಡಂತೆ ಹೇಳಿದುದರಿಂದ ಕೆಂಡದಂಥ ಕೋಪ ಬಂತು. ನಾವು ಪರಿಷತ್ತಿಗೆ ಬರೋದಿಲ್ಲ ಎಂದಿತು. ಜರ್ಮನಿಯೂ ಹಾಗೆಯೆ. ಉಳಿದ ಒಂಭತ್ತು ಸರಕಾರಗಳು ಸೇರಿ ಒಂದು ಸೂಚನೆ ಮಾಡಿ ಸಹಿ ಹಾಕಿವೆ.

ಂ ಂ ಂ ಂ

ಮುಖ್ಯ ಬಾಧೆ ಸಬ್ ಮೆರಿನುಗಳಿಂದ ಜಲಾಂತರಗಾಮಿ ನಾವೆಗಳು' ಯಾರವೆಂದು ಗೊತ್ತಿಲ್ಲ. ಬೇಕಾದ ಹಡಗಿಗೆ ಗುರಿಹಿಡಿದು ಕರುಳು ಹಿಸುಕಿ ನಾಶಮಾಡುತ್ತಿವೆ ಇನ್ನಿವು ನೀರ ಮೇಲೆ ತೋರಿಸಿಕೊಳ್ಳದೆ ಇದ್ದಲ್ಲಿ ಇವನ್ನು ಮಿಕ್ಕ ಒಂಭತ್ತು ಸರಕಾರಗಳ ಹಡಗು ಪಡೆ ನಾಶಪಡಿಸುವುದು ನಿಶ್ಚಿತವೆಂದು ಸಾರಲಾಗಿದೆ ಅಡಗಿರಬಾರದು, ಮುಖ ತೋರಿಸಲಿ ಎಂದು ಮುಖ ತೋರಿಸಿದರೆ ಯಾರೆಂದು ಬಯಲಾಗುವುದು ಆಗ ನೋಡೋಣ – ಎಂದೇ ಹಂಚಿಕೆ

ಂ ಂ ಂ ಂ ಂ

ಚೀನವು ಸೋತಿಲ್ಲ ಜಾಪಾನು ಗೆದ್ದಿಲ್ಲ ಯುದ್ಧ ಸಾಗುತ್ತಲೇ ಇದೆ ಆದರೂ ಚೀನದಲ್ಲಿ ಒಂದು ಯುದ್ಧನಾಗುತ್ತಿದೆ ಎಂದೇನೂ ಡಂಗುರ ಸಾರಿದ್ದಿಲ್ಲ ಇಟಲಿಯು ಅಭಿಸಿನಿಯದಲ್ಲಿ ಯುದ್ಧ ಮಾಡುತ್ತಲೆ ಅಥವಾ ಮಾಡಿದೆ ಎಂದು ಆ ಯುದ್ಧ ಮುಗಿದು ಅಬಿಸೀನಿಯವೆಲ್ಲ ಇಟಲಿಯ ಕೈಸೇರುವ ತನಕವೂ ಸಾರಲಾಗಿದ್ದಿತೆ? ಹಾಗೆಯೆ ಈಗಿನ ಯುದ್ಧಗಳ ಕ್ರಮ

ಂ ಂ ಂ ಂ

ಬ್ರಿಟಿಷ ಚಕ್ರವರ್ತಿಗಳು ಇಲ್ಲಿಗೆ ಬರುವ ವರ್ಷದ ಚಳಿಗಾಲದಲ್ಲಿ ಬಿತ್ತೈಸಿ ಢಿಲ್ಲಿಯಲ್ಲಿ ಒಂದು ದರ್ಬಾರು ಉತ್ಸವ ನೆರವೇರಿಸಲಿದ್ದಾರೆಂದು ಇಂಗ್ಲೆಂಡಿನ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ ಇದು ಸತ್ಯವೋ ಸುಳ್ಳೋ ಎಂದು ತಿಳಿದುಬರಬೇಕಾದರೆ ಪಾರ್ಲಿಮೆಂಟು ಪುನಃ ಸೇರಬೇಕು. ದೇಶದಲ್ಲಿ ಸಮಾಧಾನವಿದ್ದು, ತುಂಬಾ ಆದರದಿಂದ ಈ ಉತ್ಸವ ನೆರವೇರುವ ಲಕ್ಷಣಗಳನ್ನು ಕಾಣುತ್ತಲೆ ಚಕ್ರವರ್ತಿಗಳ ಪ್ರಯಾಣದ 'ಪ್ರೋಗ್ರಾಂ' ಪ್ರಕಟವಾದೀತು, ಅದನ್ನೀಗ ತ್ವರೆಯಲ್ಲಿ ಕಾಯಬಹುದಾಗಿದೆ

ಂ ಂ ಂ

ಜಗತ್ತಿನ ದೃಷ್ಟಿಯೆಲ್ಲವೂ ಈಗ ಶಂಘಾಯಿಯ ಮೇಲೆ ಇದೆ ಜಾಪಾನಿನ ೮೦ ಹಡಗುಗಳು ೨೦೦ ವಾಯುನಾವೆಗಳು ಅಲ್ಲಿವೆ ಚೀನಿಯರು ಇದು ವರೆಗೆ ಜಾಪಾನಿನ ೪೪ ವಾಯು ವಿಮಾನಗಳನ್ನು ಧ್ವಂಸಗೊಳಿಸಿದ್ದಾರೆ ಚೀನಿಯ ೧೫ ವಿಮಾನಗಳೂ ಬಲಿಬಿದ್ದಿವೆ ೧೮೦೦೦೦ ಜಾಪಾನಿಯರು ಉತ್ತರ ಮಾರ್ಗವಾಗಿ ೫೦ ಮೈಲಿಗೆ ಒಳನುಗ್ಗಿದ್ದಾರೆ

ಂ ಂ ಂ ಂ

ಚೀನಿಯರ ಸೈನ್ಯದಲ್ಲಿ—ಒಂದು ವಿಭಾಗದಲ್ಲಿ ಮಾತ್ರ—೫೦೦ ಮಂದಿ ಸ್ತ್ರೀಯರು ಇದ್ದಾರೆಂದು ಗೊತ್ತಾಗಿದೆ 'ಯಮನನ್ನು ಎದುರಿಸುವವರು' ಎಂದೇ ಈ ಧೀರೆಯರ ಹೆಸರು ಎಂತೂ ಈ ವರ್ಷ ಈ ಯುದ್ಧ ಮುಗಿಯುವ ಹಾಗಿಲ್ಲೆಂದು ಜಾಪಾನಿನ ರಣ ಮಂತ್ರಿಯರೇ ಹೇಳಿರುವರು.

ಂ ಂ ಂ ಂ

ಗಡಿನಾಡಿನ ಪ್ರಾಂತ್ಯವೂ ಕೊಂಗ್ರೆಸ್ ಮಂತ್ರಿಗಳದಾಯಿತು ರಾಜಕೀಯ ಕೈದಿಗಳನ್ನು ಕೂಡಲೆ ಬಿಡುವ ವ್ಯವಸ್ಥೆಯಾಗಿದೆ ಹೆಚ್ಚಿನ ಮಟ್ಟಿಗೆ ಮದ್ರಾಸಿನ ಮಂತ್ರಿಮಂಡಲವು ಸುಧಾರಿಸಲು ಪ್ರಯತ್ನಿಸುತ್ತಿರುವುದನ್ನೇ ಅಲ್ಲಿಯೂ ಕೈಕೊಳ್ಳುವರೆಂದು ನಂಬಲಾಗಿದೆ. ಏಳು ಪ್ರಾಂತ್ಯಗಳಲ್ಲಿ ಕೊಂಗ್ರೆಸಾಯಿತು, ಉಳಿದ ನಾಲ್ಕು ಏನಂತೆ?

...ಶಿಕ್ಷಿತ ನಿರುದ್ಯೋಗಿಗಳಿಗೆ ಕಲಾ ಹತ್ತಿ ವಸ್ತ್ರ ಸ್ಥಳ, ಇವರ ಕೃಷಿ ಅವರ ಕೈಯಿಂದಲೇ ಸಹಕಾರ ಸಹಾಯ್ಯ, ತಿಂಗಳಿಗೆ ಖಂಡಿತವಾಗಿ ೨೫ ರೂಪಾಯಿ ಉತ್ಪನ್ನವಾಗುವಷ್ಟು ಅನುಕೂಲ ಸಂದರ್ಭ,—ಇಷ್ಟೆಲ್ಲವನ್ನೂ ಅಹ್ಲಾಮಲೆ ಯುನಿವರ್ಸಿಟಿಯವರು ತಮ್ಮ ಗ್ರ್ಯಾಜುವೇಟರುಗಳಿಗಾಗಿ ಸೌಕರ್ಯ ಮಾಡಿ ಕೊಟ್ಟಿರುವರು. ಎಷ್ಟು ಮಂದಿ ಪದವೀಧರರಿಗೆ ಪೇಸಿನ ಬದಲಾಗಿ ನೇಗಿಲು ಕೈಹಿಡಿಯುವುದೋ ನೋಡಬೇಕೆಂದು ಯೂನಿವರ್ಸಿಟಿಯವರ ಅಭಿಪ್ರಾಯ

ಂ ಂ ಂ ಂ

ಹಿಂದೀ ಸಂಸ್ಕೃತಿ ಉಳಿಯುವಂತೆ ಇದುವರೆಗೆ ಕಾಪಾಡಿದವರು ಸ್ತ್ರೀಯರು ಮುಂದೆಯೂ ಅವರೇ ನಮ್ಮ ಧರ್ಮೋದ್ಧಾರಕರಾಗಬೇಕು. ಈ ಧರ್ಮವೊಂದಿಲ್ಲದಿರುವಲ್ಲಿ ಭಾರತೀಯರು ಗತಿಗೆಡುವರು ಪುರಾಣಗಳ ಮತ್ತು ಶಾಸ್ತ್ರದ ಸರಿಯಾದ ತಿಳಿವಳಿಕೆ ಹರಡಿಸ ಪುದು ಕ್ಲಬ್ಬುಗಳಿಂದ ಸಾಧ್ಯವಿದೆ ಹಿಂದೂ ಶಾಸ್ತ್ರದ ರೀತಿ ನೀತಿಗಳನ್ನರಿಯದೆ ನಮ್ಮ ಮಕ್ಕಳು ಧರ್ಮಜ್ಞಾನವಿಲ್ಲದಿರುವರು ಧರ್ಮಜ್ಞಾನ ಕೊಡುವ ಕರ್ತವ್ಯವು ತಾಯಂದಿರದು ಅವರು ಈ ಕರ್ತವ್ಯ ಪಾಲಿಸುವಂತಾಗಲಿ – ಎಂದು ಶ್ರೀ ರಾಜಗೋಪಾಲಾಚಾರ್ಯರು ಮೈಲಾಪುರ ಲೇಡಿಸ್ ಕ್ಲಬ್ಬಿನಲ್ಲಿ ಭಾಷಣಮಾಡಿದರು

ಂ ಂ ಂ ಂ

ಮಹಾತ್ಮಾಜಿಯರೇ ರಾಮರಾಜ್ಯಕ್ಕೆ ಹೋಲಿಸಿರುವ ಮೈಸೂರು ಸರಕಾರದಲ್ಲಿ ಪ್ರಜಾಜನರ ಮೆರವಣಿಗೆಗಳು ಬೊಗಳಾದುವೂ, ಇನ್ನು ಆರು ತಿಂಗಳ ತನಕ ಬೆಂಗಳೂರಲ್ಲಿ ನಡೆಯದಂತೆ ತಡೆದ ಅಪ್ಪಣೆ ಹೊರಟಿರುವುದು, ಸಖೇದಾಶ್ಚರ್ಯವನ್ನುಂಟು ಮಾಡಿದೆ ಜನತೆಗೆ ಇರುವ ಕೆಲವೇ ಹಕ್ಕುಗಳನ್ನು ಹೀಗೆ ರದ್ದು ಪಡಿಸುವುದು ಯುಕ್ತವೇ? ಎಂಬ ವಿಚಾರವನ್ನು ಮುಂದರಿದ ಪ್ರಜಾಪಕ್ಷಪಾತಿಯೆಂದು ಹೆಸರ್ಗೊಂಡ ಮಹಾರಾಜರೂ ಇತ್ಯರ್ಥಿಸಬಾರದೆ?

ಂ ಂ ಂ ಂ

ದಕ್ಷಿಣದಲ್ಲಿ ಈ ಬಗೆಯ ತಡ ಹಾಕುವ ಕಾರ್ಯಭಾರವು ಹೈದ್ರಾಬಾದ್ ಸಂಸ್ಥಾನದಲ್ಲಿ ಮಾತ್ರ ಇತ್ತು ಲೈಸನ್ಸು ಪಡೆಯಲು ಕೋರ್ಟಿನಿಂದ ಕೋರ್ಟಿಗೆ ದಿನದಿಂದ ದಿನಕ್ಕೆ ಅರ್ಜಿ ಮಾಡುವವರದೊಂದು ಮೆರವಣಿಗೆ ಹೋಗುವಂತಾಗಿ ಅದೇ ಒಂದು ಬಗೆಯ ನ್ಯೂಸೆನ್ಸ್ ಆಗ ಪುದಲ್ಲವೆ? ಹಾಗೆ ಅಪ್ಪಣೆ ಪಡೆದು ಮೆರವಣಿಗೆಯೂ ಮೆರೆಯಿಸಬಹುದಾದರೂ ಏನನ್ನು, – ಹಾಕಿರುವ ತಡೆಯನ್ನೇ?

ಂ ಂ ಂ ಂ

ಮೈಸೂರು ಸರಕಾರವು ಕೆಲವು ಸುಧಾರಣೆಗಳನ್ನು ಮಾಡಬೇಕಾಗಿ ಪ್ರಜಾವರ್ಗವು ಪ್ರಕಟಿಸಿಯದೆ ಅವುಗಳ ವಿಚಾರವಾಗಿ ಇತ್ಯರ್ಥವಾಗಬೇಡವೆ?

ಂ ಂ ಂ ಂ ಂ

ದಾನಧರ್ಮಗಳಿಗೆ ಹೆಸರ್ಗೊಂಡ ನಮ್ಮ ದೇಶದಲ್ಲಿ ಅದು ಕಾರಣವೇ ಭಿಕ್ಷಾಟನೆಯು ಒಂದು ವೃತ್ತಿಯಾಗಿದೆ ಇದಕ್ಕೆ ಭಂಡವಾಳವೇ ಬೇಡ ಬೇಡುವ ಬುದ್ಧಿಯಿದ್ದರಾಯಿತು ಬೇಡುವುದು ಕೂಡಾ ಅಗತ್ಯವಿಲ್ಲ ಬೇಡುವವರ ಸಮಸ್ಯೆ ದೊಡ್ಡದು ಏಕೆ ಬೇಡುವರೆಂಬುದನ್ನು ಮೂಲಶೋಧನೆ ಮಾಡುತ್ತ ಸಿದ್ಧಾರ್ಥನು ರಾಜ್ಯವನ್ನೆ ತ್ಯಜಿಸಿ ವನವಾಸಿಯಾಗಿ ಒಂದು ಧರ್ಮವನ್ನೆ ಸ್ಥಾಪಿಸಿದನು ಆದುದರಿಂದ ಕಾರಣ ಹುಡುಕಿ, ಈ ಪೀಡೆಯನ್ನು ನಿಲ್ಲಿಸ ಬರುವಹಾಗಿಲ್ಲ

ಂ ಂ ಂ ಂ

ಸಂಪತ್ತಿನ ದುರ್ವ್ಯವಸ್ಥೆಯಿಂಥಾಗಿ ಬೇಡುವವರ ಪೀಡೆ ಹೆಚ್ಚುವುದು ಬೇಡುವ ನಿರ್ಗತಿಕರಲ್ಲಿ ಸಹ ಪಂಗಡಗಳಾಗಿ ಹೊಡೆದಾಡಿಕೊಳ್ಳುವರು ಬದುಕುವ ಆಸೆಯಿಂದ ಬೇಡುವವರುಂಟು ಬೇಡುವುದಕ್ಕಾಗದಿದ್ದರೆ ಕಳ್ಳರಾಗುವರು, ಮೋಸಗಾರರಾಗುವರು ಇದೇನು ಸಾಗದಿರುವಲ್ಲಿ ಹೇನು ತಗಣೆಗಳಾಗಿ ಉಪಜೀವಿಗಳಾಗುವರು ಒಬ್ಬನ ಕೂಡಿಕೆ ಮತ್ತೊಬ್ಬನ ಬೇಡಿಕೆಗೆ ಕಾರಣವಾಗುತ್ತದೆಂದು ಅರ್ಥಶಾಸ್ತ್ರದ ಮಾತು

ಂ ಂ ಂ ಂ

ಹಾಗೆಂದು ಧರ್ಮಕೊಟ್ಟರೆ, ಕೊಡುವವನು ಅತೃಪ್ತನಾಗಿ ಕೊಡುವನು, ಪಡೆಯುವವನೂ ಅತೃಪ್ತನಾಗಿಯೇ ಪಡೆಯುವನು. ಇಬ್ಬರೂ ಒಂದೇ ವರ್ಗದವರಾದಾಗ ಮಾತ್ರ, ಬೇಡುವುದೇ ಜೀವನೋದ್ಯೋಗವಾಗಿ ಎಲ್ಲರಿಗೂ ತೃಪ್ತಿಯಾಗುವುದೇನೊ? ಬೇರೆ ಸಮಾಧಾನವಿದೆಯೆ?

ಂ ಂ ಂ ಂ ಂ

ಖಾದಿ ವಿರೋಧಿಗಳಿಗೆ, ಮದ್ರಾಸು ಸರಕಾರವು ಎರಡು ಲಕ್ಷ ರೂಪಾಯಿಗಳನ್ನು ಈ ವರ್ಷ ಖಾದಿ ನೂಲುವವರಿಗೆ ಕೊಡುವುದುಂಟೆಂದು ಬಹಳ ಅಸಮಾಧಾನವಾಗಿದೆ ಮದರಾಸಿನ ಚೇಂಬರ್ ಒಫ್ ಕೊಮರ್ಸಿನಂಥ

(೧೨ನೇ ಪುಟಕೆ ಮುಂದುವರಿಸಿಯದೆ.)

ಪ್ರಣಯದ ಸುದಾರಸವು ಮೃತ್ಯುವಿನ ಕಾಲಕೂಟವೇ?

ಭೇಟಿಯಾಗುತ್ತಾರೆ: ಪ್ರೇಮಿಸುತ್ತಾರೆ: ಸುಖಿಸುತ್ತಾರೆ

ನಂತರ... ???

ಅವರ ಪ್ರಣಯವು ಮೃತ್ಯುಶಯ್ಯೆಯಲ್ಲಿ ಕೊನೆಗಾಣುತ್ತದೆ.

ಕಾರಣ....???

ಪ್ರೊಫೆಸರ್ ಕ್ರೆಮರ್ ಮಹಾಶಯರ ಉಪನ್ಯಾಸಗಳಲ್ಲಿದೆ ಅವುಗಳಿಗೆ ಉತ್ತರ!

ಒಬ್ಬನ ಇನ್ನೊಬ್ಬಳನ್ನು ಪ್ರೀತಿಸುವನು, ಆಕೆಯು ತನ್ನ ಪ್ರೇಮವನ್ನು ಆತನಿಗೆ ಅರ್ಪಿಸಿರುವಳು ಅವನು ಆಕೆಯಲ್ಲಿ ತನ್ನ ಜೀವನದ ಸಂಗಾತಿಯನ್ನು ಕಾಣುತ್ತಾನೆ, ಆಕೆಯು ಆತನಲ್ಲಿ ತನ್ನ ಜೀವನದ ಮಾರ್ಗದರ್ಶಕನನ್ನು ಕಂಡಿದ್ದಾಳೆ ಆದರೆ ಹಲವು ಕಾರಣಾಂತರಗಳಿಂದ ಇವರಿಬ್ಬರ ಮಿಲನವು ದುಷ್ಕರವಾಗುತ್ತದೆ ಇಬ್ಬರ ಮನಸ್ಸೂ ಕಠಿನವಾಗಿದ್ದಲ್ಲಿ, ಡ್ಯೂಕ್ ಆಫ್ ವಿಂಡ್ಸರರಂತೆ ಅವರು ಎಲ್ಲವನ್ನೂ ತ್ಯಜಿಸುತ್ತಾರೆ ಹಾಗಿರದಿದ್ದಲ್ಲಿ ಯಾರಾದರೊಬ್ಬರು ಆತ್ಮತ್ಯಾಗ ಮಾಡಿ ಉಳಿದವನ(ಳ)ಗೆ ಅನುಸರಿಸುವಂತೆ ಹೇಳುತ್ತಾರೆ ಅಲ್ಲಿಗೆ ಎರಡು ಪ್ರೇಮಿಪಕ್ಷಿಗಳ ಅಂತ್ಯವು ನೀರಿನಲ್ಲಿ ಕೊನೆಗೊಳ್ಳುತ್ತದೆ ಇದಕ್ಕೆ ಉದಾಹರಣೆಗಳೆಷ್ಟಿಲ್ಲ?

ಗರ್ಲರಲ್ಲಿ ಹೇಪ್ಸ್‌ಬರ್ಗಿನ ಚಕ್ರವರ್ತಿ ಫ್ರಾನ್ಸಿಸ್ ಜೋಸೆಫ್‌ರ ಯುವರಾಜ ರೂಡೊಲ್ಫನು ಮೇಯರ್ಲಿಂಗಿನಲ್ಲಿ ತನ್ನ ಭವ್ಯ ಭವನದಲ್ಲಿ ಮೇರೀ ವೆಟ್ಸೆರಾ ಎಂಬವಳನ್ನು ಕೊಂದು ತಾನೂ ಗುಂಡಿಟ್ಟುಕೊಂಡು ಸತ್ತ ರೂಡೊಲ್ಫನಿಗೆ ಬೆಲ್ಜಿಯಮ್‌ನ ರಾಜಕುಮಾರೀ ಸ್ಟೆಫೇನೀಯೊಡನೆ ವಿವಾಹವಾಗಿತ್ತು ಅವರು ರೋಮನ್ ಕೆಥೊಲಿಕರಾದುದರಿಂದ ದಾಂಪತ್ಯವಿಚ್ಛೇದನದ ಆಸೆಯು ಗಾಳಿಗೋಪುರವಾಗಿತ್ತು ಅಲ್ಲದೆ ರಾಜಕುಮಾರನ ವಿವಾಹವಾಗಿರದಿದ್ದರೂ ಆತನು ವೆಟ್ಸೇರಾಳನ್ನು ವಿವಾಹವಾಗುವುದು ಅಶಕ್ಯವಿತ್ತು ಯಾಕೆಂದರೆ ಆಸ್ಟ್ರಿಯಾ ಮತ್ತು ಹಂಗೇರಿ ರಾಜ್ಯಗಳ ಗದ್ದಿಗೆಯ ಮೇಲೆ ಕುಳಿತುಕೊಳ್ಳಲಿರುವ ಯುವರಾಜನು ತನ್ನದೇ ಯೋಗ್ಯತೆಯುಳ್ಳ ಅಂದರೆ ರಾಜಕುಮಾರಿಯನ್ನೆ ವಿವಾಹವಾಗಬೇಕಾಗಿತ್ತು. ವಿಶಾಲ ವಿಚಾರಗಳ ನಾಟ್ಯರಂಗವಾದ ಆತನ ಮನಸ್ಸು ತನ್ನ ತಂದೆಯ ಮನಸ್ಸಿನ ವ್ಯತಿರಿಕ್ತ ರೂಪವಾಗಿತ್ತು ವೆಟ್ಸೇರಾಳೊಡನೆ ಹುಟ್ಟಿದ ಪ್ರಣಯವು ಅರಸನಿಗೆ ಕ್ರೋಧೆಯನ್ನುಂಟುಮಾಡಿತು ಆತನ ಇಚ್ಛೆಗೆ ವ್ಯತಿರಿಕ್ತವಾಗಿ ನಡೆವಷ್ಟು ಧೈರ್ಯವು ಯುವರಾಜನಲ್ಲಿರಲಿಲ್ಲ ಅಲ್ಲದೆ ವೆಟ್ಸೆರಾಳ ಪ್ರಣಯದ ಬೀಜವು ಬಲವಾಗಿ ಬಿತ್ತಲ್ಪಟ್ಟು, ಮೊಳಕೆಯೊಡೆದಿತ್ತು ಆತ್ಮಹತ್ಯೆಯೊಂದೇ ಈ ಬಲೆಯಿಂದ ಬಿಡುಗಡೆ ಹೊಂದುವ ಸುಲಭೋಪಾಯವೆಂದು ಆತನು ಚಿಂತಿಸಿದ ಅಲ್ಲೇ ಮೇಯರ್ಲಿಂಗಿನಲ್ಲಿ ರಾಜಕುಮಾರ ರೂಡೊಲ್ಫನು ಮೇರೀ ವೆಟ್ಸರಾಳನ್ನು ಕೊನೆಯ ಬಾರಿ ಚುಂಬಿಸಿ, ತನ್ನ ಕೈಯಲ್ಲಿನ ರಿವಾಲ್ವರಿಗೆ ಆಕೆಯ ಎದೆಯನ್ನು ಗುರಿಯಾಗಿರಿಸಿದ–ಗುಂಡು ಹಾರಿತು. ವೆಟ್ಸೇರಾ ಭೂಪತಿತಳಾದಳು ರೂಡೊಲ್ಫನು ರಿವಾಲ್ವರನ್ನು ತನ್ನ ತಲೆಗೆ ಆನಿಸಿಹಿಡಿದ ಟ್ರಿಗ್ಗರ್' ಎಳೆದ ಮೆದುಳು ಚೂರುಚೂರಾಗಿ ಹಾರಿಹೋಯಿತು

ಇಂತಹ ಅನೇಕ ಉದಾಹರಣೆಗಳಿವೆ. ಬಲ್ಗೇರಿಯಾದಲ್ಲಿನ ಇಸ್ಕರ್‌ನ ಸುಂದರ ಕಣಿವೆಯಲ್ಲಿರುವ ಕೋಗಲ್ ಜಸ್ಕಿ ಧರ್ಮಶಾಲೆಯಲ್ಲೊಂದು ಇಂತಹ ಆತ್ಮಹತ್ಯೆ ನಡೆಯಿತು ಸೆಕೆಗಾಲದಲ್ಲಿ ಅಲ್ಲಿನ ಪಾದ್ರಿಗಳು, ವಿಹಾರಾರ್ಥವಾಗಿ ಬಂದ ಜನರಿಗೆ ಧರ್ಮಶಾಲೆಯಲ್ಲಿನ ಕೋಣೆಗಳನ್ನು ಬಾಡಿಗೆಗೆ ಕೊಡುತ್ತಿದ್ದರು ವಿಹಾರಕ್ಕಾಗಿ ಬಂದವರಲ್ಲಿ ೧೭ ವರ್ಷದ ಸುಂದರ ಸುಕೋಮಲ ಬಾಲೆಯೋರ್ವಳಿದ್ದಳು! ಹೆಸರು–ಮೇರಿಯಾ ಟುಡೊರೋವಾ ಡಿಮಿಟ್ರೋವಾ ಎಂದು ಆಕೆಗೆ ಆ ಧರ್ಮಶಾಲೆಯಲ್ಲಿದ್ದ ಫಾದರ್ ಎಂಟೆ ಎಂಬ ಪಾದ್ರಿಯ ಮೇಲೆ ಕಣ್ಣು ಬಿತ್ತು ಪ್ರೇಮವೂ ಬೆಳೆಯಿತು ಅಲ್ಲಿ ರೋಮನ್ ಕೆಥೊಲಿಕ್ ಪಾದ್ರಿಗಳಿಗಿರುವಂತಹ ಕಠಿಣ ನಿರ್ಬಂಧಗಳಿಲ್ಲವಾದುದರಿಂದ ಇವರಿಬ್ಬರಿಗೂ ಏಕಾಂತವಾಸವು ದೊರೆಯುತ್ತಿತ್ತು ಆ ಹುಡುಗಿಯು ತನ್ನ ತಂದೆತಾಯಿಗಳೊಡನೆ ಹಾಸ್ಯಕ್ಕಾಗಿ 'ನಾನೊಬ್ಬ ಪಾದ್ರಿಯನ್ನು ವಿವಾಹವಾಗಲೇ?' ಎಂದು ಕೇಳಿದಳು. ತಂದೆ-ತಾಯಿಗಳ ಆಗದ ಸೀನುವಿನವುಳ್ಳ ಯಾರಾದರೂ ಸುಹಾಜನವನ್ನು ವಿವಾಹವಾಗಬೇಕು ಪಾದ್ರಿಯನ್ನಲ್ಲ ಎಂದರಂತೆ "ಅವರಿಗೂ ಬೇರೆ ಹಾದಿಯೇ ತೋರಲಿಲ್ಲ ಆ ಪಾದ್ರಿಯ ತನ್ನ ಪಾದ್ರಿತ್ವದ ದ ಹೊರಗಾದಲ್ಲಿ ಆ ಹುಡುಗಿಯನ್ನು ಸಂಕವುದು ಆತನಿಂದ ಸಲ್ಲದ ಕೆಲಸವಾಗಿತ್ತು ಆದರೆ ತನ್ನದಾಗಬೇಕಾದ ವಸ್ತುವು ಇನ್ನೊಬ್ಬರನ್ನು ಸೇರುವುದನ್ನು ನೋಡಲು ಸಾಧ್ಯವಿಲ್ಲ ಅವರಿಗೆ ಬೇರೆ ಹಾದಿಯೇನೂ ತೋಚಲಿಲ್ಲ ಮೃತ್ಯುವನ್ನೇ ಶರಣುಹೋಗುವುದೆಂದು ನಿಶ್ಚಯಿಸಿದರು ಒಂದು ದಿನ ರಾತ್ರಿ ಮಿಸ್ ಡಿಮಿಟ್ರೋವ್ ಎಂಟೆಯ ಹಾಸಿಗೆಯ ಮೇಲೆಯೇ ಮಲಗಿ ಇಬ್ಬರೂ ಮೃತ್ಯುವನ್ನೆದುರುನೋಡುತ್ತಿದ್ದರು ಆ ಹುಡುಗಿಯು ಎದೆಗೆ ಬಂದೂಕಿನ ಗುಂಡಿಯನ್ನು ಹೊಡೆಯುವಾಗ ಫಾದರ್ ಎಂಟೆಯು ತಾಕತ್ತಿನ ಸಹಾಯದಿಂದ ಬದುಕಿ ಉಳಿದ ಪೋಲೀಸರು ಆತನನ್ನು ಕೈದುಮಾಡಿದರು, ನಂತರ ಜಾಮೀನಿನ ಮೇಲೆ ಬಿಟ್ಟುಕೊಟ್ಟರು ಆದರೂ ತನಗಾಗಿ ತೀರಿದ ಆ ಹುಡುಗಿಯನ್ನು ಪಾದ್ರಿ ಮರೆಯಲಿಲ್ಲ ಆಕೆಯ ಸಮಾಧಿಯ ಮೇಲೆ ಗುಂಡಿಟ್ಟುಕೊಂಡು ಪಾದ್ರಿಯು ಸತ್ತುಹೋದ

ಅಸೂಯೆ, ಮುಯ್ಯಿ ಮುಂತಾದ ಭಾವನೆಗಳು ಜಾಗ್ರತವಿರುವ ವ್ಯಕ್ತಿಗಳು ತಮ್ಮ ಜೀವನವನ್ನು ನಾಶಗೊಳಿಸಿದ ಸ್ತ್ರೀಯನ್ನು ಕೊಲೆಮಾಡಲೂ ಹಿಂಜರಿಯಲಾರವು ತಮಗೆ ಅಸಂತೋಷವನ್ನು ಹುಟ್ಟಿಸಿದ ಹುಡುಗಿಯು ಸೌಖ್ಯದಲ್ಲಿರುವಳೆಂಬುದನ್ನು ಎಣಿಸುವಾಗಲೇ ಅವರ ಮೈಯಲ್ಲಿನ ರಕ್ತವು ಕುದಿಯತೊಡಗುತ್ತದೆ 'ನನ್ನವಳಾಗಲಾರೆಯಾದರೆ ಇನ್ನೋರ್ವನವಳೂ ಆಗಲಾರೆ' ಎಂಬುದೇ ಅವರ ಧ್ಯೇಯ. ಇಂತಹ ಒಂದು ಸಂಗತಿಯು ವಿಯನ್ನಾದಲ್ಲಿ ನಡೆದಿದೆ ಸಾಥೊಲೊಜಿಕಲ್ ವಿದ್ಯಾಲಯದಲ್ಲಿನ ಫೆಲಿಕ್ಸ್ ಫಯಾಲಾ ಎಂಬ ಫೊಟೋಗ್ರಾಫರನೊಬ್ಬನು ಅದೇ ವಿದ್ಯಾಲಯದಲ್ಲಿ ಟೈಪಿಸ್ಟಳಾಗಿದ್ದ ಬರ್ತಾ ಗ್ರೂಥೋರ್ ಎಂಬ ತನ್ನ ನಲ್ಲೆಯನ್ನು ಕೊಂದನು ಯಾಕೆಂದರೆ ಆಕೆಯು ಈತನನ್ನು ವರನನ್ನಾಗಿ ಒಪ್ಪಲಿಲ್ಲ ಸಾಧಾರಣ ಹನ್ನೆರಡು ಸಲ ಆಕೆಯು ಆತನನ್ನು ತಿರಸ್ಕರಿಸಿದಳು ನಂತರ ಒಂದು ದಿನ ಫೆಲಿಕ್ಸ್ ಫಯಾಲಾನು ಆಕೆಗೊಂದು ಹಣ್ಣನ್ನು ಕಳುಹಿಸಿದನು. ಅದೇ ದಿನ ರಾತ್ರಿ ಮನೆಗೆ ಹೋಗುವಾಗ ಆಕೆಗೆ ಫೆಲಿಕ್ಸ್ ಫಯಾಲಾನ ಒಂದು ಪತ್ರ ಸಿಕ್ಕಿತು ಅದರಲ್ಲಿತ್ತು 'ನನ್ನ ವಿರಹಿತ ಜೀವನವು ನನಗೆ ಮರಣಕ್ಕೆ ಲೇಸು. ನಾನಂತೂ ಸಾಯುವೆನು [illegible] ಕರೆದೊಯ್ಯುವೆನು' ಆ ರುಚಿಯ ಸಿಹಿ ತಿಂದು ಫೆಲಿಕ್ಸ್ ಫಯಾಲಾನು ತನ್ನ ಕೋಣೆಯಲ್ಲಿ ಸತ್ತು ಬಿದ್ದಿದ್ದ ಕಾರಣ–ವಿಷಗಾಳಿ ಸೇವನೆ

ಮರುದಿವಸಗಳ ನಂತರ ಬರ್ತಾಳ ಹ್ಯಾಂಡ್ ಬ್ಯಾಗಿನ ಸಂಶಯಗ್ರಸ್ತಳಾಗಿ ಆಕೆಯು ಫೆಲಿಕ್ಸ್ ಫಯಾಲನ ಪತ್ರವನ್ನು ಪೋಲೀಸರ ಕೈಯಲ್ಲಿತ್ತಳು ಅವರು ಆ ಹಣ್ಣಿನಲ್ಲಿ ಸ್ಟ್ರಿಕ್ನೈನ್ ಜ್ವರ ಬರುವಂತಹ ವಿಷಧವಿದ್ದುದನ್ನು ಕಂಡುಹಿಡಿದರು ಫಯಾಲಾನು ಆ ವಿಷಧಿಯ ಕೆಲಸವನ್ನು ಕೊನೆಗಾಣಿಸುವುದರ ಬಲ ಧೈರ್ಯದಿಂದ ಮುಂದೆ ತೆರಳಿದ ಆದರೆ ಬರ್ತಾಳ ಬದುಕಿ ಉಳಿದಳು ವಿಯನ್ನಾದ ಪ್ರಸಿದ್ಧ ವೈದ್ಯರೆಲ್ಲರೂ ಕೂಡಿ ಬರ್ತಾಳನ್ನುದುರಿಸಿ ಸಿಕ್ಕ ಮೃತ್ಯುವಿನೊಡನೆ ಕಾದಾಡಿ, ಜಯಿಯಾದರು ಹಲವೇ ದಿನಗಳಲ್ಲಿ ಬರ್ತಾಳು ನೆಟ್ಟಗಾಗಿ, ಕ್ರೈಮಿಸೀ ನಗರದಿಂದ ಹಿಂತಿರುಗಿ ಬಂದಳ

ತನ್ನ ಪ್ರಿಯನ ಮೇಲೆ ಸೇಡು ತೀರಿಸಿದ ಕೆಮಿಲ್ಲಾ ರಿಬಿಕಾ ಎಂಬವಳೂ ವಿಯನ್ನದಲ್ಲೇ ಇದ್ದವಳ. ಅಲ್ಲಿಯೇ ಆಕೆಯು ತನ್ನ ಪ್ರಿಯನಾದ ಕೋಬರ್ಗ್‌ನ ರಾಜಕುಮಾರ ಲಿಯೋ ಪೋಲ್ಡನ ಕೊಲೆಗೈದಳು ಮೊದಲು ರಾಜಕುಮಾರನು ಆಕೆಯ ಪ್ರೇಮಪಾಶದಲ್ಲಿ ಸಿಲುಕಿದ ಹಲವು ವಾರಗಳ ಬೇಡಿಕೆಯ ನಂತರ ಆಕೆಯು ಆತನ ಗೃಹಿಣಿಯಾದಳು ಆಕೆಗಾಗಿ ಒಂದು ಭವ್ಯ ಮಂದಿರವನ್ನು ಯುವರಾಜನು ಬಿಟ್ಟುಕೊಟ್ಟ ಆಕೆಯು ರಾಜ್ಯದ ಆಸೆಯಿಂದ ತನ್ನನ್ನು ವಿವಾಹವಾಗೆಂದು ಯುವರಾಜನಿಗೆ ತಿಳಿಸಿದಳು. ತನ್ನ ಯೋಗ್ಯತೆಗಿಂತ ಕೀಳು ಹುಡುಗಿಯ ವಿವಾಹವಾಗಿ ಪಿತ್ರಾರ್ಜಿತವಾಗಿ ಬಂದ ಸಿಂಹಾಸನವನ್ನು ತ್ಯಜಿಸುವುದು ಯುವ [illegible] ಜಗಳಗಳಾಗಿ ಯುವರಾಜನಿಗೆ ಜೀವನವು ನರಕದಂತೆ ತೋರತೊಡಗಿತು

ಕಡೆಗೆ ಈ ಸಂಗತಿಯು ಅರಸನ ಕಿವಿಗೆ ಬಿದ್ದಿತು. ಅದಕ್ಕೊಂದು ಅಂತ್ಯವನ್ನು ಕಲ್ಪಿಸುವುದರ ಆಜ್ಞೆ ರಾಜಾಜ್ಞೆಯಾಯಿತು ಯುವರಾಜನಿಗೂ ಅದೇ ಬೇಕಿತ್ತು ಆತನು ಆಕೆಯನ್ನು ೪ ಮಿಲಿಯ ಕ್ರೌನ್ (ನಾಣ್ಯ) ಗಳನ್ನು ಕೊಟ್ಟು, ತನ್ನ ಛಾಯಾಚಿತ್ರಗಳನ್ನೂ ಪ್ರಣಯಪತ್ರಗಳನ್ನೂ ಹಿಂತಿರುಗಿಸೆಂದು ಆಕೆಯೊಡನೆ ಕೇಳಿದ ಕೊನೆಯ ಬಾರಿ ಆಕೆಯನ್ನು ನೋಡಲು ಯುವರಾಜನು ಆಕೆಯ ಮಹಲಿಗೆ ಹೋದ ೪ ಮಿಲಿಯ ಕ್ರೌನ್‌ಗಳನ್ನು ಕೊಂಡೊಯ್ದಿದ್ದ

ನಂತರ ಏನಾಯಿತೆಂದು ಯಾರೂ ಅರಿಯರು ಆ ಮನೆಯಲ್ಲಿದ್ದ ಯಾರೋ ರಿವಾಲ್ವರು ಹಾರಿದ ಸದ್ದನ್ನು ಕೇಳಿ, ಕೋಣೆಗೆ ಓಡಿ ಬಂದು ಬಾಗಿಲು ಬಡಿದರು ಬಾಗಿಲಿಗೆ ಚಿಲುಕ ಹಾಕಿತ್ತು ಆದರೆ ಒಳಗೆ ಯಾರೋ ನರಳುತ್ತಿದ್ದರು "ಒಮ್ಮೆ ಯಾರಾದರೂ ಬಾಗಿಲು ತೆರೆಯಿರಿ ನಾನು ಸಾಯುತ್ತಿದ್ದೇನೆ. ಕುರುಡನಾಗಿದ್ದೇನೆ..." ಬಾಗಿಲನ್ನು ಒಡೆದು ತೆರೆದರು ಕೋಣೆಯ ನಡುವಿನಲ್ಲಿ ಲಿಯೋ ಪೋಲ್ಡನು ಬಿದ್ದಿದ್ದ ಒಂದು ಕಣ್ಣಿದ್ದಲ್ಲಿ ಬರೀ ಒಂದು ದೊಡ್ಡ ತೂತು ಮಾತ್ರವಿತ್ತು ಮಾಂಸಖಂಡಗಳೆಲ್ಲಾ ಹೊರಬಂದಿದ್ದುವು. ಮನುಷ್ಯನಿಗೆ ಅತೀತವಾದ ಯಾತನೆಯನ್ನು ಆತನು ಅನುಭವಿಸುತ್ತಿದ್ದ. ಕೆಮಿಲ್ಲಾಳು ಆತನೆಡೆ ೫ ಗುಂಡುಗಳನ್ನು ಹಾರಿಸಿದ್ದಳು. ನಂತರ ತಾನೇ ಗುಂಡಿಗೆ ಗುರಿಯಾಗಿದ್ದಳು. ಆಕೆಯ ಮೃತದೇಹವು ಅರ್ಧನಗ್ನಾವಸ್ಥೆಯಲ್ಲಿ ಹಾಸಿಗೆಯ ಮೇಲೆಯೇ ಬಿದ್ದಿತ್ತು.

ಇನೋ ತೆಗೆದುಕೊಳ್ಳುವ ಮೊದಲು

ಪದೇ ಪದೇ ನೆಗಡಿ, ಮಂದ ಮತ್ತು ಚಟುವಟಿಕೆ ಇಲ್ಲ ಮುಂಗೋಪಿ

ಇನೋ ತೆಗೆದುಕೊಂಡ ಮೇಲೆ

ಯೋಗ್ಯತೆ ಒಳ್ಳೆಯ ಹಸಿವು ಚುರುಕು ಮತ್ತು ಆನಂದ

ನಿಮ್ಮ ಹೊಟ್ಟೆಯನ್ನು ಸರಿಯಾಗಿಟ್ಟುಕೊಂಡಲ್ಲಿ

ನೀವು ಆರೋಗ್ಯದಲ್ಲಿರುವಿರಿ ಇನೋಸ್ ಫ್ರುಟ್ ಸೋಲ್ಟ್" ಇದು ಹೊಟ್ಟೆಯ ಅವ್ಯವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ ಮಲಬದ್ಧತೆ ತಲೆನೋವು ನಿದ್ರಾಭಂಗ ಮುಂತಾದ ರೋಗಗಳನ್ನು ಬೇರು ಸಹಿತ ತೆಗೆದು ಹಾಕವುದು.

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರುಗಳಿಂದ ಹೊಗಳಿಸಿಕೊಂಡಿದೆ ನೀವು ಈ ಉತ್ತಮವಾದ ಪೇಯವನ್ನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು ಇದೇ ಆರೋಗ್ಯವು.

ಇನೋ ಇದಕ್ಕೆ ನಿಮ್ಮ ಸ್ವಾಭಾವಿಕ ಸುರಕ್ಷಿತ ಮಂದ ಭೇದಿಯಾಗುವ ಗುಣವಿರುವುದು

ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸೋಲ್ಟಿನ ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ

Eno's 'Fruit Salt'

E F 20



Distributors for South Kanara:—

Raghavendra Ranga Pai Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

S. U. N. & Co.,

Silk Merchants,

Chaukhambu, BENARES CITY.

ಈಗಿನ ಕರಹ(ಕಾಶಿ) ಬನಾ
ರಿಸ್ ಶೀರೆ ಕಮಗೆ ಬೇಕಾ
ದರೆ ನಮ್ಮನ್ನು ಮರೆಯಬೇ
ಡಿರಿ. ಈಗ ಕ್ರಯ ಕುಂಬಾ
ಸುಲಭ. ಖಾತ್ರಿ ಮಾಲು
10 ಮೊಳದ 2¼ ಅಗಲದ
ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ. 45ರಿಂದ
150. ಸಾಧಾರಣ ತರದ್ದು 18 ಮೊಳ ಬುಟ್ಟಿ
ಶೀರೆಗಳು ರೂ. 35ರಿಂದ ರೂ. 55. ವಡಲು
ಸಾದಾ ಶೀರೆ 18 ಮೊಳ ರೂ. 32ರಿಂದ ರೂ
65. ಉದ್ದ ಮೊಳ 16, ಅಗಲ 2¼ ರೂ. 20
ರಿಂದ 35ರ ವರೆಗೆ. ಬೇರೆ ಮಾಲುಗಳ್ಳ ಕೇ
ಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ
ಚೌಕಂಭಾ, ಬನಾರಿಸ್ ಸಿಟಿ

THE

BANK OF MANGALORE LTD.,

MANGALORE.

ESTD. 1931.

Branches:-

Panemangalore, Mudabidri & Padubidri.

Chairman:—**Philip J. Chandran, Esq.,**

Retd. Dt. Registrar of Joint Stock Companies.

On & from 1st of January 1937,

Fixed Deposits will be received at following rates of interest.

For	3 months		3½%
„	6 „		4%
„	12 „		5%
„	24 „	& upwards	5½%

Interest Payable Quarterly.

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors.*

THEY WORK WHILE YOU REST.

Industrious Rupees are busy turning out more Rupees to savers in our Bank. But they do not jump in and go to work of their own free will. You have to start them and encourage them. The best way is to give them friends. Rupees are very sociable and if they are lonely they do little. But if you keep adding more Rupees in to your account they do their best. And the more they work the more you can rest.

RESOURCES OF A CRORE.

ESTD: 1906

CANARA BANK, LIMITED.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೇ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.

ಗರ್ಭಪಾಲ—ಗರ್ಭಶೂಲಿ, ಗರ್ಭಸ್ರಾವಕ್ಕೆ.

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ.

ಶ್ವಸ್ಕಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರದ ಚರ್ಮವ್ಯಾಧಿಗಳಿಗೆ.

ವೃದ್ಧಿಕಾಸವ—ನಿಶ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಕಿಣ್ಣನ ಮಾಹಿತಿಗೂ ಕಟಲಾಗಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಪಾಪದ ಪೂಜಾರಿ

(ಅನುವಾದಕ ಶ್ರೀ ಲಕ್ಷ್ಮೀಶ)

ನಗರದ ಮಧ್ಯಭಾಗದಲ್ಲಿ ಶ್ರೀ ಕೃಷ್ಣನ ಬಹು ದೊಡ್ಡ ದೇವಾಲಯವಿದ್ದಿತು. ದೇವಾಲಯವನ್ನು ಕಟ್ಟಿಸಲಿಕ್ಕೆ ಲಕ್ಷಾಂತರ ರೂಪಾಯಿಗಳ ಖರ್ಚಾಗಿದ್ದಿತು. ಅದರ ಶೋಭೆಯು ನೋಡತಕ್ಕದ್ದಾಗಿತ್ತು. ಬಹು ವಿಶಾಲವಾದ ಪ್ರದೇಶದಲ್ಲಿ ಅದರ ರಚನೆಯಾಗಿದ್ದಿತು; ಮೂರ್ತಿಯ ಮುಂದುಗಡೆಯೇ ರಂಗ ಮಂಟಪವಿದ್ದಿತು. ಪ್ರತಿ ದಿನ ರಂಗ ಮಂಟಪದಲ್ಲಿ ಸಾವಿರಾರು ಮಂದಿ ನೆರೆಯುತ್ತಿದ್ದರು. ಬಹು ಜನ ಭಕ್ತರು ಇಲ್ಲಿಗೆ ನಿತ್ಯವೂ ಬರುತ್ತಿದ್ದರು, ಮತ್ತು ದೇವರಿಗೆ ಹಣಕಾಸುಗಳ ಕಾಣಿಕೆಯನ್ನು ಅರ್ಪಿಸುತ್ತಿದ್ದರು. ತಿಂಗಳು ತಿಂಗಳಿಗೆ ೫೦೦ ರೂಪಾಯಿಗಳ ಉತ್ಪತ್ತಿ ಇರುತ್ತಿತ್ತು; ಅಲ್ಲದೆ, ಊರಿನ ಶ್ರೀಮಂತ ಶೇಟಗಿರಿರಾಯರು ತಿಂಗಳಿಗೆ ೨೦೦ ರೂಪಾಯಿಗಳಂತೆ ಪೂಜೆ ವಿನಿಯೋಗಾದಿಗಳ ಬಗ್ಗೆ ಪ್ರತ್ಯೇಕ ಕಳುಹಿಸಿ ಕೊಡುತ್ತಿದ್ದರು. ಇಷ್ಟು ಹಣವನ್ನು ರಾಮಾಚಾರಿಯು ಸ್ವಾಹಾ ಮಾಡುತ್ತಿದ್ದನು.

ರಾಮಾಚಾರಿ, ದೇವಾಲಯದ ಅರ್ಚಕನಾಗಿದ್ದ. ಅವನಿಗೆ ಊರಿನಲ್ಲಿ ಮರ್ಯಾದೆ ಇತ್ತು, ಆದರವಿತ್ತು. ಎಲ್ಲಿ ನೋಡಿದರಲ್ಲಿ ಜನರು ರಾಮಾಚಾರಿಯ ಹೊಗಳು ಭಟ್ಟರಾಗುತ್ತಿದ್ದರು. ರಾಮಾಚಾರಿಯು ಇದಕ್ಕೆ ಯೋಗ್ಯನಾಗಿದ್ದನೆಂದೇ ಹೇಳಬಹುದು ಅವನು ಸಂಸ್ಕೃತದ ಕೆಲವು ಓಲೆ ಗ್ರಂಥಗಳನ್ನು ಓದಿದ್ದನು. ಶ್ರೀ ಕೃಷ್ಣನ ಪರಮ ಉಪಾಸಕನಾಗಿದ್ದನು, ಇತರರನ್ನು ತಿರಸ್ಕಾರದಿಂದ ಕಾಣುತ್ತಿದ್ದನು. ಅವನು ಹೋದ ಬೀದಿಯ ಹುಡುಗರು, ಅವನನ್ನು ನೋಡಿ 'ಸೀತಾರಾಮ ಸೀತಾರಾಮ' ಎಂದು ರಾಗ ಹಾಡುತ್ತಿದ್ದರು. ಸೀತಾರಾಮನ ಹೆಸರು ಕೇಳಿದೊಡನೆ ಆಚಾರಿ ಸಿಟ್ಟಾಗುತ್ತಿದ್ದನು. ಸೀತಾರಾಮನೆಂದರೆ ಅವನಿಗೆ ಆಗುತ್ತಿದ್ದಿಲ್ಲ. ಕೃಷ್ಣನ ಆರತಿ ಪೂಜೆಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದನು. ಬೇರಾದ ನ ಇತರೆ ಕೆಲಸಗಳು ಸಮಯಕ್ಕೆ ಸರಿಯಾಗಿ ಆಗದಿರಲಿ, ಕೃಷ್ಣನ ಆರತಿ ಮಾತ್ರ ತಕ್ಕ ಸಮಯಕ್ಕೆ ಆಗದೆ ಇರುತ್ತಿರಲಿಲ್ಲ. ಅವನು ನೇಮ ನಿಯಮಗಳನ್ನು ಎಷ್ಟು ಮಾತ್ರಕ್ಕೂ ಮೀರುತ್ತಿರಲಿಲ್ಲ. ಒಂದ ಭಕ್ತ ಜನರು ಸೇವೆ ಮಾಡುವದರಲ್ಲಿ ಎಳ್ಳಷ್ಟು ಕುಂದುಕೊರತೆ ತೋರಿಸಿದರೆಂದರೆ, ರಾಮಾಚಾರಿ ಸಿಟ್ಟಿನಿಂದ ಉರಿದು ಹೋಗುತ್ತಿದ್ದನು. ಹೇಳುತ್ತಿದ್ದ—'ಜನಸ್ಸಿಯಾಮಕ ನಮ್ಮ ಕೃಷ್ಣ; ಅವನ ಶಾಸ್ತ್ರೋಕ್ತ ಪೂಜೆಯಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಯಿತೆಂದರೆ, ನಿಮ್ಮ ಸಂಸಾರವೇ ಅಳಿದು ಹೋದೀತು!'

ಆದರೂ ಕ್ರಮವರಿತು ನಡೆಯುವ ಭಕ್ತ ಜನರೊಂದಿಗೆ ಅವನು ಯಾವಾಗಲೂ ಪ್ರೇಮವನ್ನಿಡುತ್ತಿದ್ದನು. ಅದ್ದರಿಂದ ಅವನನ್ನು ಕಾಣಲಿಕ್ಕೆ ಅವನೊಂದಿಗೆ ಮಾತುಕತೆ ಬೆಳೆಸಲಿಕ್ಕೆ ಪ್ರಾಯಃ ಜನರು ಪ್ರತಿ ನಿತ್ಯ ಬಂದು ಹೋಗುತ್ತಿದ್ದರು.

x x x x

ಭಕ್ತ—'ಆಚಾರ್ಯರೇ! ದೊಡ್ಡ ಗೊಂದಲವೇ ಎದ್ದು ಬಿಟ್ಟಿದೆ. ಧರ್ಮ ಉಳಿದೀತೋ ನಾಶವಾದೀತೊ, ನನಗೊಂದೂ ಗೊತ್ತಾಗುತ್ತಿದಿಲ್ಲ!

ಆಚಾರ್ಯ—'ಏನಾಯಿತು? ಏನಾಯಿತು?'

ಭಕ್ತ—'ಏನು ನೀವು ಕೇಳಲಿಲ್ಲವೆ? ಗಾಂಧಿಯ ಮಾತು. ಅವನು ಹೇಳಿದ್ದಾನಂತೆ—ಹರಿಜನರು ಮಂದಿರ ಪ್ರವೇಶ ಮಾಡುವದಾದರೆ ಅವರನ್ನು ತಡೆಯಬಾರದು—ಎಂದು.'

ಆಚಾರ್ಯ—(ಮೈ ತೆಗೆದು)—'ಏನು? ಹೊಲೆಯರು ಮಂದಿರ ಪ್ರವೇಶ ಮಾಡಬೇಕು! ಎಂದಾದರೂ ಹೀಗೆ ಆಗಬಹುದೆ? ಹರೇಕೃಷ್ಣ!'

ಭಕ್ತ—'ಇಷ್ಟು ಮಾತ್ರವಲ್ಲ, ಹರಿಜನರ ಮಂದಿರ ಪ್ರವೇಶಕ್ಕೆ ಬಿಡುವದಿಲ್ಲವಾದರೆ ತಾವು ಉಪವಾಸ ತೆಗೆದು ಪ್ರಾಣ ಬಿಡುವೆವೆಂದು ಗಾಂಧಿಯವರು ಹೇಳಿದ್ದಾರಂತೆ.'

ಆಚಾರ್ಯ—'ಇಂಥ ಉಪವಾಸಗಳಿಂದ ಏನಾದೀತು? ಗಾಂಧಿಯು ಹೇಳಿದನೆಂದು ನಾವು ನಮ್ಮ ಧರ್ಮವನ್ನು ಎಷ್ಟು ಮಾತ್ರಕ್ಕೂ ಬಿಡಲಾರೆವು. ಛೀ ಛೀ ಇಂಥ ಮಾತುಗಳನ್ನು ಆಡಿದ ಮಾತ್ರದಿಂದಲೇ ಪಾಪವು ಅಂಟೀತು. ಕಪ್ಪೇರಿ! ತಾವು ಚಿಂತಿಸಬೇಡಿ. ನಾನಿರುತ್ತ ಇಂಥ ಅನರ್ಥವು ಎಷ್ಟು ಮಾತ್ರಕ್ಕೂ ನಡೆಯಲಿಕ್ಕಿಲ್ಲ. ಗೊತ್ತಾಯಿತೆ?'

ಭಕ್ತ 'ಜನರು ಬಂದು ಆಗ್ರಹ ಮಾಡಿದರೆ?'

ಆಚಾರ್ಯ—'ಆಗ ನೋಡಿಕೊಂಡೇನು! ತಾವು ಘಾಬರಿಯಾಗಬೇಡಿ. ನನ್ನ ಶರೀರವು ಇರುತ್ತ ಒಬ್ಬನೇ ಒಬ್ಬ ಹೊಲೆಯನಾದರೂ ಮಂದಿರ ಪ್ರವೇಶ ಮಾಡಲಾರ—ಖಂಡಿತ ತಿಳಿಯಿರಿ.'

x x x x

'ಪ್ರಭುಗಳೇ! ಬನ್ನಿ! ಏನು, ಅಪರೂಪವಾಗಿ ಬಂದುಬಿಟ್ಟಿರಿ?

'ಆಚಾರ್ಯರೆ, ಸ್ವಲ್ಪ ಅಗತ್ಯದ ಕೆಲಸವಿತ್ತು ಬಂದೆ.'

'ಆಗಲಿ, ಏನು ಅಗತ್ಯದ ಕೆಲಸ, ಹೇಳಿ; ತಮ್ಮ ಮಾತನ್ನು ನಾನೆಂದಿಗೂ ಮೀರಿದವನಲ್ಲ.'

'ಅದೇನೋ ಸರಿಯೆ! ನನ್ನ ಮೇಲೆ ತಮಗೆ ವಿಶೇಷ ಅನುಗ್ರಹವಿರುವದು ನನಗೆ ತಿಳಿದಿದೆ. ಆದರೆ ಈ ಸಲ ಮಾತ್ರ ಒಂದು ವಿಶೇಷ. . . .'

'ಹೇಳಿ, ಹೇಳಿ! ಒಂದಿಷ್ಟು ಲೋಪ ಬಾರದಂತೆ ಕೆಲಸ ಮಾಡುವೆನು.'

'ನೋಡಿ, ಗಾಂಧಿಯವರನ್ನು ನಾವು ಹೇಗಾದರೂ ಮಾಡಿ ಬದುಕಿಸಬೇಕು.'

'ಏನು, ಅವರಿಗೆ ರೋಗ ಬಂದಿದೆಯೆ? ಹಾಗಾದರೆ ಸರಕಾರಿ ಡಾಕ್ಟರರಿಗೆ ಅರ್ಜಿ ಮಾಡೋಣ. ಅವರು ಒಳ್ಳೆ ಪ್ರವೀಣರು!'

'ಅದಲ್ಲ, ಹರಿಜನರಿಗೆ ಮಂದಿರ ಪ್ರವೇಶ ಮಾಡ ಬಿಡದಿದ್ದಲ್ಲವಾದರೆ ಪ್ರಾಣ ತೆಗೆದುಕೊಳ್ಳುವೆನೆಂದು ಅವರು ಶಪಥ ಹಾಕಿಕೊಂಡಿದ್ದಾರೆ.'

'ಏನಯ್ಯಾ, ಈ ಮಾತು? ಹೊಲೆಯರು ರಂಗ ಮಂಟಪಕ್ಕೆ ಬರಬಹುದೆ? ಎಂದೂ ಆಗದು, ಎಂದೂ ಆಗದು. ನನ್ನಿಂದಾಗಿ ಈ ಅಪವಿತ್ರ ಕೆಲಸ ಎಷ್ಟು ಮಾತ್ರಕ್ಕೂ ಆಗದು.'

'ಆಚಾರ್ಯರೆ, ನಿಮಗೆ ಭ್ರಮೆಯಾಗಿದೆ ಎಂದು ತೋರುತ್ತದೆ. ಹರಿಜನರು ಕೂಡ ಹಿಂದುಗಳೇ ಆಗಿದ್ದಾರೆ. ಅವರ ಹಕ್ಕು ಅಧಿಕಾರಗಳನ್ನು ನಾವು ಅವರಿಗೆ ಅಗತ್ಯ ಬಿಟ್ಟುಕೊಡಬೇಕು. ಅಷ್ಟು ಮಾತ್ರದಿಂದ ತಾವು ಭ್ರಷ್ಟರಾಗುವುದಿಲ್ಲ.'

'ಪ್ರಭುಗಳೇ! ನೀವು ಇದೇನು ಹೇಳುತ್ತಿದ್ದೀರಿ. ಗಾಂಧಿಯಂತೆ ನೀವೂ—ರಾಮರಾಮ ಎಂದು ಇದ್ದುದರ ಫಲವಿದು. ಇದು ಕಲಿಯುಗ, ಕಲಿಯುಗದಲ್ಲಿ ಸತ್ಯಯುಗದ ಕಾರ್ಯವು ಸಾಧ್ಯವಲ್ಲ.'

'ಹಾಗಾದರೆ ನಮ್ಮ ಹರಿಜನ ಬಂಧು ಬಾಂಧವರು ಕ್ರೈಸ್ತ ಮುಸಲ್ಮಾನರಾಗಬೇಕೆಂದು ನಿಮ್ಮ ಅಭಿಪ್ರಾಯವೆ?'

'ಅದೇನೂ ನನಗೆ ತಿಳಿಯದು. ಇದು 'ಧರ್ಮ'ದ ಮಾತಪ್ಪ! ಧರ್ಮ ಶಾಸ್ತ್ರಗಳಲ್ಲಿ ಹೇಗೆ ಹೇಳಿಯದೋ ಹಾಗೆ ಆಗಬೇಕು. ಹೊಲೆಯರು ರಂಗ ಮಂಟಪಕ್ಕೆ ಬರಲಿ, ನಮ್ಮ ಕೃಷ್ಣ ಸಿಟ್ಟಿಗಳಿ—ಅಂದರೆ ಮತ್ತೆ ನನ್ನ ಹೆಸರು ಕೂಡ ಉಳಿಯಲಿಕ್ಕಿಲ್ಲ. ಈ ಲೋಕ ಪರಲೋಕ ಎರಡೂ ನನ್ನ ಪಾಲಿಗೆ ಕನಸಿನ ಗಂಟು ಆದೀತು! ಪ್ರಭುಗಳೇ! ಇದೊಂದು ಕೆಲಸ ನನ್ನಿಂದ ಎಷ್ಟು ಮಾತ್ರಕ್ಕೂ ಆಗದು.'

x x x x

ಹೆಮಿಲ್ಟನ್ ಸಾಹೇಬರು ದೊರೆಸಾನಿಯೊಂದಿಗೆ ಊರಿಗೆ ಬಂದರು. ಬಂಗಲೆಯಲ್ಲಿ ಅವರ ಸ್ವಾಗತೋಪಚಾರಗಳ ಏರ್ಪಾಡು ಆಯಿತು. ಈ ಊರಿನಲ್ಲಿ ನೋಡತಕ್ಕಂಥ ಸ್ಥಾನಗಳು ಯಾವ್ಯಾವುವು ಇರುವವೆಂದು ಅವರು ಊರಿನ ಪಟೇಲರನ್ನು ಕೇಳಿದರು. ಪಟೇಲರು 'ನಮ್ಮೂರ ದೇವಸ್ಥಾನವು ಬಹು ಭವ್ಯವಾದ್ದು, ಎಲ್ಲರೂ ನೋಡತಕ್ಕದ್ದಾಗಿದೆ' ಎಂದರು.

ಹೆಮಿಲ್ಟನ ಸಾಹೇಬರ ತಂದೆ ಕ್ರೈಸ್ತಮತಕ್ಕೆ ಸೇರಿದ್ದರು. ಅವರು ತೀಕ್ಷ್ಣ ಬುದ್ಧಿಯವನಾಗಿದ್ದ. ಹಿಂದೂ ಆಗಿ ಇರುತ್ತ ಹಿಂದೂ ಸಮಾಜದಲ್ಲಿ ತನಗೆ ಸ್ಥಾನಮಾನಗಳಿಲ್ಲವೆಂದು ತಿಳಿದೊಡನೆ ಅವನು ಮತಾಂತರ ಹೊಂದಿ ಕ್ರೈಸ್ತನಾಗಿದ್ದ. ಅವನ ಮಗ ಹೆಮಿಲ್ಟನ ಸಾಹೇಬರು ಈಗ ಡಿಪ್ಟಿಕಲೆಕ್ಟರರು ದೊರೆಸಾನಿಯೊಂದಿಗೆ ಗಾಡಿಯಲ್ಲಿ ಕೂತು ದೇವಾಲಯದ ಎದುರಿಗೆ ಬಂದರು. ಗಾಡಿಯಿಂದಿಳಿದು ಇಬ್ಬರೂ ದೇವಾಲಯದ ಮೆಟ್ಟಲುಗಳನ್ನು ಹತ್ತಿದರು. ರಾಮಾಚಾರಿ ಬಂದು ಇಬ್ಬರಿಗೂ ಸಾಷ್ಟಾಂಗ ನಮಸ್ಕಾರ ಮಾಡಿದ. ಇಬ್ಬರನ್ನು ಕೈ ಮುಗಿದು ರಂಗ ಮಂಟಪದ ತನಕ ತೆಗೆದುಕೊಂಡು ಹೋದ. ಆಚಾರಿ ಹೇಳಿದ—'ಬನ್ನಿ ಸ್ವಾಮಿ—ಒಳಗೆ ಬರಬಹುದು. ನಮ್ಮ ಕೃಷ್ಣನ ದರ್ಶನ ಅಲ್ಲಿ ತನಕ ಬಂದು ತೆಗೆದುಕೊಳ್ಳಬಹುದು.' ಎಂದು ಗರ್ಭಗುಡಿಯನ್ನು ತೋರಿಸಿದ ದೊರೆ—ದೊರೆಸಾನಿ, ಇಬ್ಬರೂ ಕಾಲಿಗೆ ಬೂಟ್ಸು ಹಾಕಿಕೊಂಡಿದ್ದರು. ಹಾಗೆಯೇ ಅವರು ಮೂರ್ತಿ ಇರುವ ತನಕ ಹೋದರು; ಇಡೀ ದೇವಾಲಯವನ್ನು ಸುತ್ತಿಕೊಂಡು ಬಂದರು.

ಒಬ್ಬರಿಬ್ಬರು ಭಕ್ತರು ರಾಮಾಚಾರಿಯನ್ನು ಕೇಳಿದರು—'ಏನರಿ, ನಾವು ಒಳಗೆ ಬರಬೇಕಾದರೆ ಮೆಟ್ಟು ಹೊರಗೆ ಇಟ್ಟು ಬರಬೇಕೆನ್ನುತ್ತೀರಿ. ಇವರೊಡನೆ ಆ ಪ್ರಸ್ತಾಪವೇ ಇಲ್ಲ!' 'ಛೀ ಛೀ ಈಗ ಆ ಮಾತೆತ್ತಬೇಡಿ. ಮತ್ತೆ ಸಂಪ್ರೋಕ್ಷಣೆ ಮಾಡಿದರಾಯಿತು. ಅವರು ಡಿಪ್ಟಿಕಲೆಕ್ಟರರು!'

ಒಬ್ಬ ಹೊಲೆಯನು ರಂಗ ಮಂಟಪದ ತನಕ ಹೋದರೆ ಕೂಡ ದೇವಾಲಯವು ಭ್ರಷ್ಟವಾಗುವದು. ಆದರೆ ಒಬ್ಬ ಕ್ರೈಸ್ತ ಅಥವಾ ಮುಸಲ್ಮಾನನು ಬೂಟ್ಸು ಹಾಕಿಕೊಂಡು ಗರ್ಭಗುಡಿಯ ತನಕ ಹೋದರೂ ಪರವಾ ಇಲ್ಲ, ಮಂದಿರವು ಭ್ರಷ್ಟವಾಗುವುದಿಲ್ಲ! ಅಯ್ಯಬ್ಬಾ ಬುದ್ಧಿಯೆ!

x x x x

ಇವತ್ತು ಎಲ್ಲರೂ ದೇವಾಲಯಕ್ಕೆ ಓಡ್ಯಾಡಿ ಹೋಗುತ್ತಿದ್ದಾರೆ. ಸಾವಿರ ಮಂದಿ ಕಿಕ್ಕಿರಿಕೊಳ್ಳುವ ರಂಗ ಮಂಟಪದಲಿ ಎರಡು ಮೂರು ಸಾವಿರ ಮಂದಿ ಬಂದು ಕೂಡಿದ್ದಾರೆ.

ಅಲ್ಲಿ ಕಮಲಾ ನಾಯ್ಕ ಸಾನಿಯ ಸಂಗೀತ ಖಚೇರಿ ನಡೆಯುವದು. ಫಾತಿಮಾಬೀಬಿಯ ನರ್ತನವೂ ಇದೆ. ಬುಡಾನ ಸಾಹೇಬರು ತಬಲಿ ಬಡೆಯಲಿಕ್ಕೆ, ಜೆಸ್ಟೀನ್ ಪಿಂಟೋ ಮತ್ತು ಆಂಜು ಸಿಕೇರ ಫಿಟೀಲು ಮತ್ತು ಹಾರ್ಮೋನಿಯಮ ಬಾರಿಸಲಿಕ್ಕೆ ಕೂತಿದ್ದಾರೆ. ರಾಮಾಚಾರಿ ಸಂಗೀತ ನರ್ತನ ನೋಡಿ ಸ್ವರ್ಗಸುಖದ ಅನುಭವ ಮಾಡುತ್ತಿದ್ದಾನೆ. ಕಮಲಾ ನಾಯ್ಕ ಸಾನಿ ಮತ್ತು ಫಾತಿಮಾಬೀಬಿಯ ಹಾವಭಾವ—ರಸ ಭಂಗಿಗಳಿಗೆ ಮನಸೋತು ಹೋಗಿದ್ದಾನೆ. ಅಷ್ಟರಲ್ಲಿ ಗುಜುಗುಜು ಆಯಿತು. ಭಕ್ತ ಹರಿರಾಮನು ಶ್ರೀ ಕೃಷ್ಣನ ದರ್ಶನಕ್ಕೆ ಬಂದಿದ್ದಾನೆಂದಾಯಿತು. ಅವನು ರಂಗಮಂಟಪವನ್ನು ಏರಿ ನಿಂತಿದ್ದಾನೆಂದಾಯಿತು. ರಾಮಾಚಾರಿಯು ಒಮ್ಮಿಂದೊಮ್ಮೆಗೆ ಹುಲಿ ಬಂತು ಸಿಂಹ ಬಂತು ಎಂದು ಕೇಳಿದ ಹಾಗೆ ಎದ್ದು ನಿಂತನು. ಹರಿರಾಮನ ಮೇಲೆ ಬೈಗಳ ಕಲ್ಮಳೆಯನ್ನು ಸುರಿಸಿದನು—'ಅರೇ ಮೂರ್ಖ! ದೇವಸ್ಥಾನವನ್ನು ಭ್ರಷ್ಟ ಮಾಡಿದೆಯಾ? ಸಂಪ್ರೋಕ್ಷಣೆಗೆ ಯಾರು, ನಿನ್ನ ಅಪ್ಪ ಕೊಡುವನೆ?' ಎಂದು ಗದರಿಸಿ ಕೇಳಿದ.

ಹರಿರಾಮ—'ಸ್ವಾಮಿ, ಕಮಲಾ ನಾಯ್ಕ ಸಾನಿ, ಫಾತಿಮಾ ಬೀಬಿ ಮತ್ತು ಬುಡಾನ ಸಾಹೇಬರಿಗಿಂತ ನಾನು ನೀಚನೆ? ವಿಧರ್ಮಿಗಳಾದ ಇವರು ರಂಗ ಮಂಟಪವನ್ನು ಸೇರಿದ್ದರಿಂದ ಮಂದಿರವು ಪವಿತ್ರವಾಗುವದೆ? ಮೋಹರೇ ತಪ್ಪು ಬುದ್ಧಿಯೆ!'

ರಾಮಾಚಾರಿ—'ಇಲ್ಲಿಂದ ಓಡಿ ಹೋಗುತ್ತೀಯಾ ಅಥವಾ ಲಾತಿಯ ಪೂಜೆಯಾಗಬೇಕೆ?

ಹರಿರಾಮನು ಹರಿಜನ ಭಕ್ತ. ಅವನು ರಾಮಾಚಾರಿಯ ಗದರಿಕೆಯ ಮಾತುಗಳಿಗೆ ಸೊಪ್ಪು ಹಾಕಲಿಲ್ಲ. ರಾಮಾಚಾರಿಯು ಕೈಯ್ಯ ದೊಣ್ಣೆಯಿಂದ ಚೆನ್ನಾಗಿ ಪ್ರಹಾರ ಮಾಡಿದ. ಹರಿರಾಮನು ರಾಮಾಚಾರಿಯ ಆ ಘಾತಗಳನ್ನು ಸಹಿಸಲಾರದೆ, ಕೃಷ್ಣನ ಮೂರ್ತಿಯ ಮುಂದೆ ಬಿದ್ದು ಸತ್ತನು.

ಬೆಳಗಾಗಬೇಕಾದರೆ ಈ ವರ್ತಮಾನ ಊರಿನಲ್ಲೆಲ್ಲ ಹರಡಿತು. ಹರಿರಾಮನ ಸ್ಮಶಾನ ಯಾತ್ರೆಗೆ ಸಾವಿರಾರು ಮಂದಿ ಕೂಡಿದ್ದರು. ರಾಮಾಚಾರಿಯನ್ನು ಬಹಳವಾಗಿ ಜನರು ಹುಡುಕಿದರು. ಆದರೆ ಎಲ್ಲಿಯೂ ಅವನ ಪತ್ತೆಯಾಗಲಿಲ್ಲ.

(ಶ್ರೀ ವಿಶ್ವಪ್ರಕಾಶ, ಬಿ. ಎ. ಎಲ್. ಎಲ್. ಬಿ. ಯವರ ಹಿಂದೀ ಕಥೆ)

"NACET"

ಕಡಿಮೆ ಬೆಲೆಯ ಅತ್ಯುತ್ತಮ ಬ್ಲೇಡು

8 ಆಣೆಗಳಿಗೆ ಬ್ಲೇಡುಗಳು 10

ಅತಿ ಕಡಿಮೆ ಬೆಲೆಯ ಬ್ಲೇಡುಗಳಲ್ಲಿ ಈ ವರೆಗೂ ಅಸಾಧ್ಯವೆನಿಸಿದ ವಿಶಿಷ್ಟತೆಯಿಂದ ಕೂಡಿದ್ದು 'ನಸೆಟ್' ಬ್ಲೇಡುಗಳು ಅತ್ಯಂತ ಜನಜನಿತವಾಗಿವೆ. ಪ್ರತಿಯೊಂದು ಪೆಕೇಟಿನಲ್ಲಿರುವ ಬ್ಲೇಡು ಒಳ್ಳೆ ಹರಿತವಾಗಿದ್ದು, ಬಹಳ ಸಮಯದ ಬಾಳ್ವಿಕೆಯಿಂದ ಕೂಡಿದ್ದು, ಚೊಕ್ಕಟವಾದ ತ್ವರಿತಯುಕ್ತ ಕ್ಷೌರವನ್ನು ಕೊಡುವುದು. ನಸೆಟ್ ಬ್ಲೇಡು ಮೂರು ಗಾಟಗಳುಳ್ಳ ಸೆಫ್ಟಿ ರೇಜರಿನಲ್ಲಿ ಉಪಯೋಗಿಸಬಹುದು.

I.N.Z

ಹೀಗಾದರೆ, ಹೀಗೆ ಮಾಡಿ!

(ಲಕ್ಷ್ಮಿ [illegible])

[illegible] ಇದು [illegible] ಸಮಾಜ ಸುಧಾರಕರೂ [illegible] ಶೋಷಣೆಯ [illegible] ಮದ್ರಾಸಿನ ಹಿಂದೀ ಪ್ರಚಾರಕರಲ್ಲಿ [illegible] ಒಂದು ಲೇಖನದಲ್ಲಿ ಹೇಳುತ್ತಾರೆ. [illegible] ಲೇಖನದಲ್ಲಿ ಈ ವಿಷಯವಾಗಿ [illegible] ಬರೆಯುವದೇನೆಂದರೆ—

ಸ್ತ್ರೀಗೆ ಯಾವ ಬಂಧನವೂ ಇಲ್ಲದಂಥ ಒಂದು ಕಾಲವು ಇತ್ತು. ಆ ಕಾಲದಲ್ಲಿ ಆಕೆಯು ತನ್ನ ಇಚ್ಛೆಗೆ ಬಂದ ಪುರುಷನನ್ನು ಕೂಡಿ ಬಾಳಬಹುದಾಗಿತ್ತು. ಹೀಗೆಂದು ಪಾಂಡು ರಾಜನು ಕುಂತಿಗೆ ಹೇಳಿಯೂ ಇದ್ದನು. ಇದಾದ ಮೇಲೆ ಸ್ತ್ರೀಯು ಯಾರಾದರೂ ಒಬ್ಬನನ್ನು ಮಾತ್ರ ಕೂಡಿಕೊಂಡು ಇರಬೇಕಾದ ಕಾಲವು ಬಂದಿತು. ಆದರೆ ಪತಿವ್ರತೆಯಾಗಿ ಇರುವದ [illegible] ಅವಳು ಬೇರೆ ಪುರುಷರೊಂದಿಗೆ [illegible] ಹೋಗಬಾರದೆಂಬ ನಿರ್ಬಂಧವೇನೂ ಆಗ ಇದ್ದಿರಲಿಲ್ಲ. ಇಂಥ ನೂರಾರು ದೃಷ್ಟಾಂತಗಳು ಮಹಾಭಾರತದಲ್ಲಿ ಸಿಕ್ಕುತ್ತವೆ. ಯುದ್ಧದಲ್ಲಿ ಗೆದ್ದು ಬಂಧುಬಾಂಧವರಿಂದ ಕಸಕೊಂಡು ಮದುವೆಯಾದ ಸ್ತ್ರೀಯರಿಗೆ ಕೂಡ ಈ ಸ್ವಾತಂತ್ರ್ಯವು ಇರುತ್ತಿತ್ತು. ಆಗ ವರದಕ್ಷಿಣೆ ಕೊಡಬೇಕಾದ ಆವಶ್ಯಕತೆ ಇದ್ದಿರಲಿಲ್ಲ, ಆತ್ಮಘಾತ ಮಾಡಿಕೊಳ್ಳಬೇಕಾಗಿಯೂ ಇರಲಿಲ್ಲ.

ಮೆಲ್ಲಮೆಲ್ಲಗೆ ನಮ್ಮ ಪೂರ್ವಜರು ಪತಿಪತ್ನಿಯರೊಳಗಿನ ಪರಸ್ಪರ ಸಂಬಂಧದ ಕುರಿತು [illegible] ನಿಯಮಗಳನ್ನು ಮಾಡಿದರು, ಮತ್ತು ಸಮಯಕ್ಕನುಸಾರ ಮಾಡುತ್ತ ಹೋದರು. [illegible] ಶಾಂತಿವನ್ನು ಹೇಳುವದಾದರೆ [illegible] ಕಟ್ಟಿಕೊಂಡು ಸಂಸಾರ [illegible] ಇರಬೇಕಾದರೆ ಆಗ ಇಂಥ ನಿಯಮಗಳ ಅಗತ್ಯ ಕೂಡ ಇದ್ದಿತು. ಬೇರೆ ಬೇರೆ ಮನೆತನಗಳ ಇಬ್ಬರು ಇಂಥಹ ಒಂದು ಮನೆಯಲ್ಲಿ ಆ ಜೀವನ ಇರಬೇಕಾ[illegible]ವದೆಂಬ ವಿಶ್ವಾಸವು ಅವರಿಗೆ ಉಂಟಾದ ಮೇಲೆ ಆ ಮನೆಯನ್ನು ಅವರು ತಮ್ಮದೆಂದು [illegible]ಯುವ ಹಾಗೆ ಇರಲಿಲ್ಲ; ನಮ್ಮ ಪೂರ್ವಜರು ಬಹಳ ದೂರದರ್ಶಿಗಳಾಗಿದ್ದರೆಂಬುದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಅದರ ಪರಿಣಾಮದಿಂದಾಗಿಯೇ, ಅನೇಕಾನೇಕ ಆಕ್ರಮಣಗಳಾಗಿಯೂ ನಮ್ಮ ಮನೆಮಾರುಗಳ ವ್ಯವಹಾರವು ಇನ್ನೂ ಸ್ಥಿರವಾಗಿ ಉಳಿದುಕೊಂಡಿದೆ.

ಆದರೆ ಇದು ನಡೆದ ಸಾವಿರಾರು ವರ್ಷಗಳು ಕಳೆದ ಮೇಲೆ ಕೆಲವು ಲೋಭಿ ಜನರು ನಮ್ಮ ಸಮಾಜದಲ್ಲಿ ಹುಟ್ಟಿ ವರದಕ್ಷಿಣೆಯ ಸಂಪ್ರದಾಯವನ್ನು ಮಾಡಿದರು. ಆ ಕಾಲದಲ್ಲಿ [illegible]ಗಳಲ್ಲಿ ಬಹಳ ಮಂದಿ ಪುರುಷರು [illegible] ಕಾರಣದಿಂದ ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಅಧಿಕವಾಗಿದ್ದಿರಬಹುದು; [illegible] ಜನಗಣತಿ ಆಗಳ ಇರುತ್ತಿದ್ದ [illegible] ಪುರುಷ ಸಂಖ್ಯಾಮಾನವು [illegible] ಇದ್ದಿರಬಹುದು; ಅಥವಾ [illegible] ಉಪಜಾತಿಗಳಾಗಿ [illegible]

[illegible] ದಕ್ಷಿಣೆಯ ವರರು [illegible] ಸ್ವಾಹಕರೂ ಹಲ್ಲು ಕೊಡಬೇಕೆಂಬ ಪದ್ಧತಿಯು ಉಂಟಾಯಿತು. ವರದಕ್ಷಿಣೆಯ ಬೇಡಿಕೆಯು ದಿನ ಹೆಚ್ಚಾಗುತ್ತ ಹೋಗುತ್ತ ಬೆಳೆಯುತ್ತ ಬಂದಿತು. ಅದರ ದುಷ್ಪರಿಣಾಮಗಳನ್ನೇ ನಾವಿಂದು ಅನುಭವಿಸುತ್ತಿದ್ದೇವೆ.

ಈಗ ಪರಿಸ್ಥಿತಿ ಎಲ್ಲಿಯ ವರೆಗೆ ಬಂದು ಮುಟ್ಟಿದೆ ಎಂದರೆ—ಮಗಳು ವಿವಾಹ ಯೋಗ್ಯಳಾಗಿ ಬೆಳೆಯದೆ ಇರುವಳಾದರೂ ಕೂಡ ತಂದೆ ತಾಯಿಗಳು ಅವಳಿಗೆ ಒಬ್ಬ ಗಂಡನನ್ನು ಹುಡುಕಲು ಪ್ರಯತ್ನಿಸುತ್ತಾರೆ; ಮತ್ತು ಸಮಾಜದಲ್ಲಿ ಅವರ ದೃಷ್ಟಿಯಿಂದ ಒಬ್ಬ ಯೋಗ್ಯ ವರನು ದೊರೆತರೆ ಅವನನ್ನು ಕ್ರಯಕ್ಕೆ ಪಡೆಯಲಿಕ್ಕೆ ತೊಡಗುತ್ತಾರೆ. ಒಬ್ಬರೊಬ್ಬರಿಗಿಂತ ವರನ ಕ್ರಯವನ್ನು ಏರಿಸುತ್ತಾರೆ. ಇದರಿಂದ ಎಷ್ಟೋ ಕಡೆ ಹೊಯ್ದಾಟ ಬೈದಾಟಗಳೂ ಆಗುತ್ತವೆ. 'ವರನನ್ನು ಕ್ರಯಕ್ಕೆ ಕೊಂಡುಕೊಳ್ಳುವದು' ಎಂಬ ಶಬ್ದವನ್ನು ನಾನು ಉದ್ದೇಶ ಪೂರ್ವಕವಾಗಿ ಉಪಯೋಗಿಸಿರುವೆನು. ಯಾಕೆಂದರೆ ವರದಕ್ಷಿಣೆಗೆ ಬೇರೆ ಯಾವ ಅರ್ಥವನ್ನೂ ನಾನು ಮಾಡಲಾರದವನಾಗಿದ್ದೇನೆ.

ವರದಕ್ಷಿಣೆಯ ಕ್ರಮವನ್ನು ಈಗ ಪ್ರತಿಯೊಬ್ಬನೂ ಕೆಟ್ಟದೆಂದು ಹೇಳುತ್ತ ಇದ್ದಾನೆ. ಆದರೆ ಸಮಯ ಬಂದಾಗ ಮಾತ್ರ ವರನ ಬೆಲೆಯನ್ನು, ಹೀಗೆ ಹೇಳುವವರೇ ಏರಿಸುತ್ತಾರೆ. ಇದನ್ನು ಅಜ್ಜಗಳ ವ್ಯಾಪಾರವೆಂದು—ಇವರನ್ನು [illegible] 'ಏನು ಮಾಡೋಣ ನನಗೆ ವರದಕ್ಷಿಣೆ ತೆಗೆದುಕೊಳ್ಳಬಾರದೆಂದೇ ಇಚ್ಛೆ ಆದರೆ ಅಮ್ಮ ಅಜ್ಜಿ ಕೇಳುವದಿಲ್ಲ' ಎಂದು ಹೇಳುವರು. ಆದರೆ ಇವರ ಈ ಮಾತು ಸಂಪೂರ್ಣ ಸುಳ್ಳು ಎಂಬುದು ಎಲ್ಲರಿಗೆ ಗೊತ್ತಿದ್ದದೇ ಆಗಿರುವದು.

ವರದಕ್ಷಿಣೆಯ ಕ್ರಮವನ್ನು ಹೇಗೆ ಮುರಿಯಬಹುದು—ಎಂಬುದೀಗ ಪ್ರಶ್ನೆ. ಮನುಷ್ಯನೆಂಬವನು ಸ್ವಭಾವತಃ ಲೋಭಿಯಾಗಿದ್ದಾನೆ. ತನ್ನ ಕಾರ್ಯಸಾಧನೆಯಾಗುವಾಗ ಅವನಿಗೆ ಇತರರ ಸುಖದುಃಖಗಳ ಲಕ್ಷ್ಯವಿಲ್ಲ. ನನ್ನ ಅಭಿಪ್ರಾಯ ಏನೆಂದರೆ—ಎಂದಿನ ತನಕ ಕನ್ಯಾಪಕ್ಷದವರು ಹಾಸಿಗೆ ನೋಡಿ ಕಾಲು ನೀಡುವದಿಲ್ಲವೋ, ಹೆಣ್ಣು ಮಕ್ಕಳನ್ನು ಸಮೀಪದಲ್ಲಿಯೇ ಮದುವೆಮಾಡಿ ಕೊಡುವ ಇಚ್ಛೆಗೆ ತಿಲಾಂಜಲಿ ಕೊಡುವದಿಲ್ಲವೋ ಅಂದಿನ ತನಕ ಅವರು ವರದಕ್ಷಿಣೆಯ ನಿಯಮದಿಂದಾಗುವ ಕಷ್ಟನಷ್ಟಗಳನ್ನು ಅನುಭವಿಸಲೇ ಬೇಕಾಗುವದು. ವರಪಕ್ಷದವರಿಗೆ ತಲೆ ತಗ್ಗಿಸಲೇ ಬೇಕಾಗುವದು.

ನಮ್ಮ ದುರ್ಭಾಗ್ಯದಿಂದ ನಮ್ಮ ಸಮಾಜವು ಎಷ್ಟು ಜಾತಿ ಉಪಜಾತಿಗಳಿಂದ ಒಡೆದು ಹೋಗಿರುವದೆಂದರೆ ನಾವು ಬೃಹತ್ ಹಿಂದೂ ಸಮಾಜದ ಸದಸ್ಯರಾಗಿರುವೆವು ಎಂಬುದನ್ನು ಕೂಡ ನಾವು ಮರೆತುಹೋಗಿದ್ದೇವೆ. ಪ್ರಾಚೀನ ಕಾಲದಲ್ಲಿ ಜಾತಿ ವರ್ಣಗಳು ಇದ್ದುವಾದರೂ ಹಿಂದೂಗಳೆಲ್ಲರೂ ಒಂದಾಗಿದ್ದರು. ಅವರು ತಮ್ಮತಮ್ಮೊಳಗೆ ವಿವಾಹ ಸಂಬಂಧವನ್ನು ಮಾಡಿಕೊಳ್ಳುತ್ತಿದ್ದರು; ಮತ್ತು ಅವರಿಗೆ ಹುಟ್ಟಿದ ಮಕ್ಕಳು ಕೂಡ ತಾವು ಇಚ್ಛಿಸಿದ ಜಾತಿ (ವರ್ಣ)ಯಲ್ಲಿ ಇರಬಹುದಾಗಿತ್ತು—ಹೀಗೆಂದು ಶಾಸ್ತ್ರಗಳ ಪ್ರಮಾಣವನ್ನು ಕೊಟ್ಟು ಡಾಕ್ಟರ ಭಗವಾನ ದಾಸರಂಥ ಪಂಡಿತೋತ್ತಮರು [illegible] ಸಿದ್ಧಮಾಡಿ ತೋರಿಸಿದ್ದಾರೆ.

ಆದ್ದರಿಂದ ಸಮಾಜದ ಉಪರೋಕ್ತ ಲೋಭಿ ಜನರನ್ನು ದಾರಿಗೆ ತರುವ ಒಂದೇ ಒಂದು ಉಪಾಯ, ಎಂದರೆ—ನಾವು ಹಿಂದೂ-ಹಿಂದೂಗಳಲ್ಲಿ ಪರಸ್ಪರ ಯಾವ ಭೇದವನ್ನೂ ಇಟ್ಟುಕೊಳ್ಳಬಾರದು. ಮುಸಲ್ಮಾನ ಬಾಂಧವರನ್ನು ಕೂಡ ನಾನು ಹಿಂದುಗಳ ಶ್ರೇಣಿಗೇ ತರಲಿಕ್ಕೆ ಸಿದ್ಧನಾಗುತ್ತಿದ್ದೆ. ಆದರೆ ಅವರಲ್ಲಿ ಹೆಚ್ಚಿನವರ ದೃಷ್ಟಿಯು ಇನ್ನೂ ಪೆಲೆಸ್ತೀನ, ಟರ್ಕಿ ಅಫಗಾನಿಸ್ಥಾನಗಳ ಕಡೆಗೆ ಇರುವದು. ಅವರ ದೃಷ್ಟಿ ಭಾರತದ ಕಡೆಗೆ ತಿರುಗುವದೇ ಇಲ್ಲ. ಅವರ ಸಂಗತಿ ಹೇಗಿದ್ದರೂ ಹಿಂದೂ-ಹಿಂದೂಗಳೊಳಗಿನ ಭೇದಭಾವದ ನಾಶವಾಗುವದು ಅಗತ್ಯವಾಗಿದೆ.

ವರದಕ್ಷಿಣೆಯ ಕೆಟ್ಟ ಪದ್ಧತಿಯು ಹಿಂದೂ ಸಮಾಜದ ಪ್ರತಿಯೊಂದು ಸಣ್ಣ ದೊಡ್ಡ ಜಾತಿಯಲ್ಲಿ ಇರುವಾಗ—ಹಿಂದು ಹಿಂದುಗಳೊಳಗಿನ ಭೇದ ಭಾವದ ನಾಶವಾಗಿ ಪರಸ್ಪರ ವಿವಾಹ ಸಂಬಂಧ ಆಗುವದರಿಂದ ಈ ದುಷ್ಟ ಪದ್ಧತಿಯ ನಾಶವು ಹೇಗಾಗಬಹುದೆಂದು ನೀವು ಕೇಳಬಹುದು. ನಾನು ಹೇಳುವದೇನೆಂದರೆ ಜಾತಿ ಭೇದವು ಹೋದುದಾದರೆ ವಿವಾಹ ಸಂಬಂಧ ಮಾಡುವ ಕ್ಷೇತ್ರವು ವಿಸ್ತಾರವಾಗುವದು. ಮತ್ತು ಯಾವ ಜಾತಿಯಲ್ಲಿ ಹುಡುಗರು ಹೆಚ್ಚಾಗಿದ್ದಾರೋ ಅವರಿಗೆ ಹೆಚ್ಚಿಗೆ ಹುಡುಗಿಯರು ಇರುವ ಜಾತಿಯಿಂದ ಹುಡುಗಿಯರು ಸಿಕ್ಕುವರು. ಈಗಲಾದರೋ ನಾವು ಹಾಗೆ ಮಾಡುವ ಹಾಗೆ ಇಲ್ಲ. ಇದರ ಪರಿಣಾಮ—ಎಷ್ಟೋ ಹುಡುಗರಿಗೆ ಹುಡುಗಿಯರು ಸಿಕ್ಕುವದಿಲ್ಲ, ಮತ್ತು ಎಷ್ಟೋ ಹುಡುಗಿಯರಿಗೆ ಹುಡುಗರು ದೊರೆಯುವದಿಲ್ಲ. ಹೀಗಾಗಿ ಕೆಲಕೆಲವು ಸಂದರ್ಭಗಳಲ್ಲಿ ಹುಡುಗಿಯರು ಆತ್ಮಘಾತ ಮಾಡಿಕೊಳ್ಳಬೇಕಾಗುತ್ತದೆ.

ಒಬ್ಬ ಹಿಂದೂ ಪುರುಷನು ಒಬ್ಬ ಹಿಂದೂ ಸ್ತ್ರೀಯನ್ನು ವಿವಾಹ ಮಾಡಿಕೊಳ್ಳಬಹುದಾಗಿದ್ದರೆ ಮತ್ತು ಜಾತಿಮತ ಭೇದವು ಇರುತ್ತಿದ್ದಿಲ್ಲವಾದರೆ ನಮ್ಮ ಇಂದಿನ ಎಷ್ಟೋ ಕಷ್ಟಗಳು ದೂರವಾಗುತ್ತಿದ್ದುವು. 1931ನೆ ಜನ ಗಣತಿಯಿಂದ ಭಾರತ ವರ್ಷದಲ್ಲಿ ಪುರುಷರಿಗಿಂತ ಸ್ತ್ರೀಯರು ಕಡಿಮೆಯಾಗಿದ್ದಾರೆಂಬುದು ತಿಳಿದು ಬಂದಿದೆ. ಎಲ್ಲ ಪುರುಷರು ಮದುವೆಮಾಡಿಕೊಳ್ಳುವ ಇಚ್ಛೆಯನ್ನು ಪ್ರಕಟಿಸಿ ಒಬ್ಬೊಬ್ಬರು ಬರೇ ಒಬ್ಬೊಬ್ಬ ಸ್ತ್ರೀಯನ್ನು ಮಾತ್ರ ಮದುವೆ ಮಾಡಿದ್ದಾದರೂ ಕೂಡ ಎಷ್ಟೋ ಮಂದಿ ಪುರುಷರು ಅವಿವಾಹಿತರಾಗಿಯೇ ಇರಬೇಕಾಗುತಿತ್ತು. ಆಗ ಅವಿವಾಹಿತ ಸ್ತ್ರೀ ಒಬ್ಬಳಾದರೂ ಉಳಿಯುವ ಹಾಗೆ ಇದ್ದಿರಲಿಲ್ಲ. ವಿಧವೆಯರು ಕೂಡ ಸಧವೆಯರಾಗಬೇಕಾಗುತಿತ್ತು. ಆದರೆ ನಮ್ಮಲ್ಲಿ ಎಷ್ಟೋ ಮಂದಿ ಪುರುಷರು ಒಬ್ಬರನ್ನಲ್ಲ ನಾಲ್ಕು ನಾಲ್ಕು ಮಂದಿ ಸ್ತ್ರೀಯರನ್ನು ಮದುವೆಯಾಗುತ್ತಾರೆ. ಹೀಗಿದ್ದರೂ ಎಷ್ಟೋ ಮಂದಿ ಅವಿವಾಹಿತ ಸ್ತ್ರೀಯರೂ ವಿಧವೆಯರೂ ಇರುವರು. ಇದೆಲ್ಲ ಜಾತಿಭೇದದ ಪ್ರತಾಪದಿಂದಾಗಿದೆ.

ಸಮಗ್ರ ಭಾರತದಲ್ಲಿ 35,28,37,778 ಸ್ತ್ರೀಪುರುಷರಿದ್ದಾರೆ. ಅವರಲ್ಲಿ ಹಿಂದೂಗಳು 23,80,98,658 ಆಗಿದ್ದಾರೆ. ಈ ಹಿಂದುಗಳಲ್ಲಿ 12,21,72,534 ಪುರುಷರೂ 11,64,86,119 ಸ್ತ್ರೀಯರೂ ಇದ್ದಾರೆ. ಹೀಗೆ ಪುರುಷರಿಗಿಂತ ಸ್ತ್ರೀಯರು 57,86,416 ಕಡಿಮೆಯಾಗಿರುವರು. [illegible] ಪ್ರಾಂತ್ಯದಲ್ಲಿ ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಅಧಿಕವಾಗಿರುವದಿಲ್ಲ. ಕೇವಲ ಮದ್ರಾಸ ಪ್ರಾಂತ್ಯದಲ್ಲಿ 1000ಕ್ಕೆ 30ರಂತೆ ಸ್ತ್ರೀಯರು ಹೆಚ್ಚಿಗೆ ಇರುತ್ತಾರೆ. ಪಂಜಾಬಿನಲ್ಲಿ ಪ್ರತಿ ನೂರು ಪುರುಷರ ಹಿಂದೆ ಸರಿ 87 ಸ್ತ್ರೀಯರಿರುವರು. ಆದ್ದರಿಂದ ಪ್ರಾಂತ ಭೇದ ಜಾತಿ ಭೇದ ನಾಶವಾಗಿ ಬಿಟ್ಟರೆ, ಹುಡುಗಿಯರಿಗೆ ವಿವಾಹ ಮಾಡಲಿಕ್ಕೆ ಯಾವ ಕಷ್ಟವೂ ಬರುವದಿಲ್ಲ. ಮತ್ತು ನಾವು ಸಮಾಚಾರಪತ್ರಗಳಲ್ಲಿ ಓದುವಂಥ ಭೀಷಣ ಆತ್ಮಹತ್ಯಾ ವ್ಯಾಪಾರಗಳೂ ಆಗಲಿಕ್ಕಿಲ್ಲ. ಯಾಕೆಂದರೆ ತಂದೆ ತಾಯಿಗಳು ಅತ್ಯಂತ ಸಂತೋಷದಿಂದ ಹುಡುಗಿಯನ್ನು ಎತ್ತಿ ಕೊಡುವಾಗ, ಹುಡುಗಿಯನ್ನು ಕದ್ದು ತಂದು ಮಾರುವ ಆವಶ್ಯಕತೆ ಯಾರಿಗೂ ಉಳಿಯುವದಿಲ್ಲ.

ಇಷ್ಟೇ ಅಲ್ಲ, ಪ್ರಾಂತ್ಯ ಭೇದ ಜಾತಿ ಭೇದವನ್ನು ನಾಶಮಾಡಿಕೊಂಡಿದ್ದಾದರೆ ವರಶುಲ್ಕವನ್ನು ಕೇಳುವ ಲೋಭಿ ಜನರೂ ದಾರಿಗೆ ಬರುವರು. ಪುರುಷರು ಸ್ತ್ರೀಯರಿಗಿಂತ ಕಡಿಮೆಯಾಗಿದ್ದಾರೆ. ಸಾಲ ಮಾಡಿ,—ಮನೆಮಾರು ಮಾರಿ—ಹುಡುಗಿಗೆ ಮದುವೆಮಾಡಿಸಬೇಕಾದ ಅಗತ್ಯವಿಲ್ಲ. ಈಗ ಇರುವದಿಲ್ಲ ಎಂಬ ವಾಸ್ತವಿಕಾಂಶವು ಕನ್ಯಾಪಕ್ಷದವರಿಗೂ ಕನ್ಯೆಗೂ ತಿಳಿದು ಬಂದಾಗ ಅವರು ಲೋಭಿ ವರ ಪಕ್ಷದವರನ್ನು ಉಪೇಕ್ಷೆಯಿಂದ ಕಾಣಬಹುದು. ಇಂಥ ಉಪೇಕ್ಷಾ ಭಾವದಿಂದ ಎಷ್ಟೋ ಕೆಲಸವಾಗುವದು. ಆದರೆ ಈ ಸಂದರ್ಭದಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿ ಏನೆಂದರೆ – ಎಲ್ಲ ಹೆಣ್ಣು ಮಕ್ಕಳಿಗೆ ಶ್ರೀಮಂತ ಮನೆತನದ ಗಂಡು ಮಕ್ಕಳೇ ಗಂಡಂದಿರಾಗಬೇಕೆಂಬ ಹಠವಿರಬಾರದು. ಎಲ್ಲ ಗಂಡು ಮಕ್ಕಳಿಗೆ ಶ್ರೀಮಂತ ಮಾವಂದಿರೇ ಸಿಕ್ಕಬೇಕೆಂಬ ಆಗ್ರಹವಿರಬಾರದು. ಒಬ್ಬ ಹುಡುಗ ಅಥವಾ ಹುಡುಗಿಯನ್ನು ಅನೇಕ ಮಂದಿ ಮೆಚ್ಚಿಕೊಂಡ ಪರಸ್ಪರ ದ್ವೇಷವು ಬೆಳೆಯದಂತೆಯೂ ನೋಡಿಕೊಳ್ಳಬೇಕಾಗಿದೆ.

ಈಗ ರೈಲು ಮತ್ತು ಅದಕ್ಕಿಂತಲೂ ವೇಗದ ವಾಹನಗಳುಂಟಾಗಿವೆ. ಇದರಿಂದಾಗಿ ಬಹು ದೂರದ ಪ್ರದೇಶಗಳು ಕೂಡ ಸಮೀಪವಾಗಿ ಬಿಟ್ಟಿವೆ. ದೂರ ದೂರ ಪ್ರದೇಶಗಳಲ್ಲಿ ವಿವಾಹ ಸಂಬಂಧವನ್ನು ಮಾಡದಿರುವ ಪ್ರಾಚೀನ ಕಾಲದ ಯಾವ ಕಾರಣಗಳೂ ಈಗ ಉಳಿದಿರುವದಿಲ್ಲ. ಆದ್ದರಿಂದ ಈ ಸಂಚಾರ ಸುಕೂಲತೆಗಳ ಉಪಯೋಗವನ್ನು ನಾವು ಅವಶ್ಯ ತೆಗೆದುಕೊಳ್ಳಬೇಕು. ಬಂಗಾಲ ಅಥವಾ ಮದ್ರಾಸಿನ ಹುಡುಗಿಯರನ್ನು ಪಂಜಾಬಿ ಹುಡುಗರಿಗೆ ಕೊಟ್ಟರೆ ಏನಡ್ಡಿ?

ವರದಕ್ಷಿಣೆ ಬೇಡುವವರನ್ನು ನಾವೆಂದಿಗೂ ಮದುವೆಯಾಗುವದಿಲ್ಲವೆಂದು ಹಿಂದು ಹುಡುಗಿಯರು ದೃಢ ಪ್ರತಿಜ್ಞೆ ಮಾಡಿದಲ್ಲಿ ಸ್ವಲ್ಪ ಕಾಲದಲ್ಲಿಯೇ ಅವರು ವಿಜಯಿಗಳಾಗುವರು. ಯಾಕೆಂದರೆ—ಮೊದಲನೆಯದಾಗಿ ಹಿಂದೂ ಸಮಾಜದಲ್ಲಿ ಹುಡುಗಿಯರ ಸಂಖ್ಯೆ ಬಹಳ ಕಡಿಮೆಯಾಗಿರುತ್ತದೆ. ಎರಡನೆಯದಾಗಿ ಪುರುಷರಿಗೆ ಆಗ ತಮಗೆ ಯೋಗ್ಯ ಸ್ತ್ರೀಯರು ಸಿಕ್ಕುವದು ಕಷ್ಟವಾಗುತ್ತದೆ. ಆದ್ದರಿಂದ ಅಂಥ ಸಂದರ್ಭದಲ್ಲಿ ಪುರುಷರು ಸ್ತ್ರೀಯರಿಗೆ ಶರಣರು ಶರಣಾಗುವರು, ಹುಡುಗರು ಹುಡುಗಿಯರಿಗೆ ಬಗ್ಗಲೇ ಬೇಕಾಗುವುದು.

ಹೀಗೆ ಮಾಡಿ ನಾವು ವರದಕ್ಷಿಣೆಯ ನಿಯಮವನ್ನು ಸುಲಭದಿಂದ ಮುರಿಯಬಹುದಾಗಿದೆ. ಕನ್ಯೆಯರೂ ಕನ್ಯಾಪಕ್ಷದವರು ವಿಚಾರ ಮಾಡಿ ಈ ಸುಲಭೋಪಾಯವನ್ನು ಕೈಕೊಳ್ಳಲಿ.

(ಬೇರೆ ಪತ್ರಿಕೆಯಿಂದ ತೆಗೆದುಕೊಂಡದ್ದು)

...ಕೆಲವು ತಿಂಗಳ ನಂತರ, ಆತನ ಕಣ್ಣಿನೊಳ ಹೊಕ್ಕ ಬಂದೂಕಿನ ಗುಂಡವು ಹೊರಗೆ ಬಂದಾಗ ಒಪ್ಪಿರೆಯೆಂಗ್ ಮೋಟಾರಿನ ಮೇಲಿಯೇ ಲಿಯೋಪೋಲ್ಡನು ಪ್ರಾಣವನ್ನು ತ್ಯಜಿಸಿದನು.

ಇನ್ನೊಂದು ವಿಚಿತ್ರ ಕಥೆಯು ಮಹಾಯುದ್ಧದ ಸಮಯದಲ್ಲಿ ರೋಮೇನಿಯಾದಿಂದ ಕೇಳಬಂದಿತ್ತು. ಮಲತಾಯಿಯ ಉಪಟಳಕ್ಕೆ ಬೇಸತ್ತ ಐಂಜಲಾ ಗಾಲ್ಸ್ಕಾ ಎಂಬ ತರುಣಿಯು ಮನೆಯನ್ನು ಬಿಟ್ಟೋಡಿ, ಮಹಾಯುದ್ಧದ ಸಮಯದಲ್ಲಿ ಪುರುಷವೇಷದಿಂದ ಸೈನ್ಯವನ್ನು ಸೇರಿದಳು. ಯುದ್ಧದಲ್ಲಿ ಆಕೆಗೆ ಗಾಯಗಳಾದವು. ಆ ಸಮಯದಲ್ಲಿ ಆಕೆಯ ನಿಜವೇಷವು ಹೊರಬಿತ್ತು. ನಂತರ ಆಕೆಯು ನರ್ಸ್ ಆದಳು. ಅಲ್ಲಿ ಗಾಯಗೊಂಡು ಬಿದ್ದಿದ್ದ ಓರ್ವ ಗುಪ್ತಚಾರನ ಮೇಲಿನ ಪ್ರೇಮದಿಂದ ತಾನೂ ಗುಪ್ತಚಾರೆಯಾದಳು.

ಆಕೆಯು ಮಹಾಯುದ್ಧದಲ್ಲಿ ಆಸ್ಟ್ರಿಯಾ ಹಂಗೇರಿಯ ಪರವಾಗಿ ರಷ್ಯಾದ ಎದುರು ಕೆಲಸಮಾಡಿದಳು. ಅಕಸ್ಮಾತ್ ಯುದ್ಧ ಮುಗಿಯುವ ವೇಳೆಯಲ್ಲಿ ಸ್ವಲ್ಪ ಹಣವನ್ನು ಕೂಡಿಹಾಕಿದಳು. ಆದರೂ ಆಕೆಯು ಕೆಲಸದಿಂದ ನಿವೃತ್ತಳಾಗದೆ ರೋಮೇನಿಯನ್ ಗವರ್ನ್‌ಮೆಂಟಿನ ಪರವಾಗಿ ಕೆಲಸಮಾಡುತ್ತಿದಳು.

ಈಗ್ಗೆ ಕೆಲವು ವರ್ಷಗಳ ಹಿಂದೆ ಆಕೆಯು ನಿವೃತ್ತಳಾದಳು. ಹಳ್ಳಿಯಲ್ಲಿನ ಮನೆಯೊಂದರಲ್ಲಿ ತಾನು ಅತಿಶಯವಾಗಿ ಪ್ರೀತಿಸುತ್ತಿದ್ದ, ರೊಮೇನಿಯದ ಸೈನ್ಯದಲ್ಲಿ ಸೈನಿಕನಾಗಿದ್ದ ಜೊನ್ ಕೊಕೊರಾರುವಿನೊಡನೆ ವಾಸಿಸುತ್ತಿದಳು. ಒಂದು ದಿನ ಆಕೆಯು ತನ್ನ ಕೋಣೆಯಲ್ಲಿಯೇ ಮೃತಳಾಗಿ ಬಿದ್ದಿದ್ದಳು. ಅದೇ ಕೋಣೆಯಲ್ಲಿ ಮತ್ತೊಂದು ಶವವಿತ್ತು. ಅದು ಆಕೆಯ ಪ್ರಿಯತಮನದು. ಸಾಯುವ ಮೊದಲು ಬರೆದಿಟ್ಟ ಪತ್ರದಲ್ಲಿ ಆ ಗುಪ್ತಚಾರಳು ತಾನು ಜರುಗಿಸಿದ ಕೆಲಸಗಳೆಲ್ಲವನ್ನು ಬರೆದಿದ್ದಳು. ಆಕೆಯು ಮಹಾಯುದ್ಧದಲ್ಲಿ ರಷ್ಯದ ಎದುರೆಂದು ತೋರಿಸಿದರೂ ರಷ್ಯಾದ ಪರವಾಗಿಯೇ ಕೆಲಸ ಮಾಡಿದ್ದಳಂತೆ. ಇಂತಹ ಸಂದರ್ಭಗಳಲ್ಲಿ-ಎರಡೂ ಪಕ್ಷದವರನ್ನು ಮೋಸಗೊಳಿಸುವ ಕಾರ್ಯದಲ್ಲಿ ಆಕೆಯ ಜೀವವು ಬಹಳ ಅಪಾಯದಲ್ಲಿದ್ದಿತು. ಆಕೆಯು ಅನೇಕ ತರದ ಕಷ್ಟಗಳನ್ನು ಅನುಭವಿಸಿದಳು. ಮನುಷ್ಯರಿಗಿಂದ ಹೆಚ್ಚು ಕಠಿಣವಾದ ಆ ಎದೆಯು ಕೂಡ ಭೇದಿಸಿತು-ತಾನು ಪ್ರೀತಿಸುವ ಸೈನಿಕನು ಬೇರೊಬ್ಬಳಿಗಾಗಿ ತನ್ನನ್ನು ತ್ಯಜಿಸಲಿರುವನೆಂಬುದನ್ನು ಕೇಳಿದೊಡನೆ, ಹೇಗೂ ಆಕೆಯು ಆತನನ್ನು ಬಿಡತಕ್ಕವಳು. ಆದರೆ ಆತನು ಮತ್ತೊಬ್ಬಳೊಡನೆ ಸುಖವಾಗಿರಬಹುದೆಂಬ ಯೋಚನೆಯೇ ಆಕೆಯನ್ನು ಕೊಲೆಯಂತಹ ಭೀಕರ ಕೃತ್ಯಕ್ಕೆ ನೂಕಿತು. ಬಾಲ್ಯದಿಂದಲೂ ಅಡಗಿದ್ದ ಕಿಚ್ಚು ಹೊರಹೊಮ್ಮಿ ಎರಡು ಜೀವಗಳನ್ನು ಈ ಲೋಕದಿಂದ ಹಾರಿಸಿಕೊಂಡು ಹೋಯಿತು.

ಈ ಎಲ್ಲಾ ಮೃತ್ಯುಗಳು ಉಂಟಾಗುವುದು ಮನುಷ್ಯನ ಮನಸ್ಸಿನ ದುರ್ಬಲತೆಯಿಂದ! ಬಂದ ಎಡರುಗಳಿಗೆದೆಗೊಟ್ಟು, ಕಷ್ಟ-ನಷ್ಟಗಳನ್ನು ಬೇದಿಯ ಕಲ್ಲಿನಂತೆ ಭಾವಿಸಿ, ಮುಂದೊತ್ತುವಷ್ಟರ ಸ್ಥೈರ್ಯವು ಮನಸ್ಸಿಗಿರುವುದಿಲ್ಲ. ಅಲ್ಲದೆ ಎಂತಹ ಕಠಿಣ ಪ್ರಸಂಗ ಬಂದಾಗಲೂ ಅದರಿಂದ ಪಾರಾಗಲು ಮೃತ್ಯುವಿನ ಹೊರತು ಮತ್ತೊಂದು ದಾರಿಯಿರುವುದನ್ನು ಮನಸ್ಸು ಹುಡುಕಲಾರದಷ್ಟು ಅಶಕ್ತವಾಗಿರುತ್ತದೆ. ಇದನ್ನು ಗುಣಮಾಡಬಹುದು, ಆದರೆ [illegible]

ಈಗಿನ [illegible] ವಿದ್ಯಾಭ್ಯಾಸವು [illegible] [illegible] ಬೆಳೆಯುತ್ತಿದೆ. ಈಗಿನ ವಿದ್ಯಾರ್ಥಿಗಳಲ್ಲಿ [illegible] ಸ್ಥೈರ್ಯವು ಪ್ರಶಂಸನೀಯವಾಗಿದೆ. ಇಂತಹ ಈ ವಿದ್ಯಾಭ್ಯಾಸದಿಂದ ಮುಂದಿನ ಜನಾಂಗವಾದ ಇಂದಿನ ಹುಡುಗರ ಸ್ಥೈರ್ಯವು ಬೆಳೆಯುತ್ತ ಹೋಗಬಹುದು. ಆ ಸ್ಥೈರ್ಯದ ದೆಸೆಯಿಂದ ಇನ್ನುಮುಂದೆ ಎರಡು ಮೂರು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯು ಬಹಳ ಕಡಿಮೆಯಾಗಬಹುದೆಂದು ನಿರೀಕ್ಷೆ. ಯಾಕೆಂದರೆ ಇಂದಿನ ಆಧುನಿಕ ವಿದ್ಯಾಭ್ಯಾಸದಲ್ಲಿ ಎಂತಹ ಕಠಿಣ ಪ್ರಸಂಗದಲ್ಲಿಯೂ ಮೃತ್ಯುವಿಗೆ ಶರಣುಹೊಕ್ಕದೆ ಇರುವ ಸ್ಥೈರ್ಯವು ಬೆಳೆಯುತ್ತಿರುತ್ತದೆ. ಬೆಳೆಯುತ್ತಿರಲಿ ಹಾರೈಕೆ!

ಭಾರತೀಯರ ಚಹಾ ಕಾನವಾಡಿ



ದೇಹಕ್ಕೆ ಬಲ ಪಡೆಯಿರಿ

ದೇಹವೇ ಆತ್ಮದ ದೇವಾಲಯವೆನ್ನುವರು. ದೇಹವನ್ನು ಆರೋಗ್ಯವಿಂದಿಡುವುದು ನಮ್ಮ ಮುಖ್ಯ ಕೆಲಸ. ಇದು ಸುಲಭವಲ್ಲ. ನಮ್ಮ ಜಡಭರಿತವಾದ ಸ್ವಭಾವವೂ ನಿತ್ಯ ಕೆಲಸಗಳಿಂ ದುಂಟಾಗುವ ಆಯಾಸವೂ ಇದಕ್ಕೆ ಅಡ್ಡಿ ಮಾಡದಂತೆ ಆರೋಗ್ಯ ಮಾರ್ಗಗಳನ್ನಾಚರಿಸಬೇಕು. ಜಡ ನಿವಾರಣೆಗೂ, ದೇಹಾಲಸ್ಯವನ್ನು ತೊರೆದು ಪ್ರಾಣವನ್ನು ಹೆಚ್ಚಿಸುವುದಕ್ಕೂ ಚಾ ಸೇವನೆಯನ್ನು ತಪ್ಪದೆ ಮಾಡಿ. ಭಾರತೀಯ ಚಾ ಒಹು ಶುಚಿಯಾದುದು. ದೇಹಕ್ಕೆ ಹಾನಿಕರವಲ್ಲ.

ಚಾ ತಯಾರಿಸುವ ವಿಧಾನ

[illegible]

ಹಿಂದೂದೇಶದ ಆನಂದ, ಹೆಮ್ಮೆ ಭಾರತೀಯ ಚಾ

I K, 39

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 481/1937

ಮಹಮ್ಮದ ಬ್ಯಾರಿ ಸಹಾ — ವಾದೀಯು

ಮತ್ತು

ಮೊಯಿದಿಂ ಕುಂಞಿ ಬ್ಯಾರಿ ಸಹಾ—ಪ್ರತಿವಾದಿಯು

ಅಡ್ಡಂಗೋಡ ಗ್ರಾಮದಲ್ಲಿರುವ ಬೋಂ... ಬ್ಯಾರಿ [illegible] ಬ್ಯಾರಿ ಮಗ ೩ನೇ ಪ್ರತಿವಾದಿ ಅಬ್ದುಲ್ಲ ಬ್ಯಾರಿಗೆ

[illegible] ಗ್ರಾಮದ ೮೯ ಸರ್ವೆನಂಬ್ರ [illegible] ಕೇಳಿದ ರೂಪಾಯಿ 150 ರ ಕೋರ್ಟು ಡಿಕ್ರಿ [illegible] ಸಲು ಬರದಾಡುವ ಬಗ್ಗೆ ವಾದೀಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಖು 30–9–1937ರಲ್ಲು ಕಾಸರಗೋಡು ಡಿ ಮು ಕೋರ್ಟಿನಲ್ಲಿ ತನ್ನ ಬಗ್ಗೆ [illegible] ಆ ದಿವಸ ೩ನೇ ಪ್ರತಿವಾದಿ [illegible] ಹಾಜರು ಆಗದಿದ್ದರೆ ಏಕಪಕ್ಷವಾಗಿ ತೀರ್ಮಾನವಾಗುವುದು.

ಕಾಸರಗೋಡು } 15–9–37 }

B. [illegible] Rao, VAKIL FOR [illegible]

ವರದಕ್ಷಿಣೆಯ ನಿಯಮ ಹೋಗಬೇಕೆ?

ಹಾಗಾದರೆ, ಹೀಗೆ ಮಾಡಿ!

[illegible] ಸಮಾಜದ [illegible] ದುರ್ಮಾರ್ಗದಲ್ಲಿ ಪ್ರವೃತ್ತಿ [illegible] ಕುಲಕ್ಕೂ ಕಾಲಕ್ಕೂ ಕಳಂಕವನ್ನು ತಂದ ಉದಾಹರಣೆಗಳು ಕೂಡ ಕಡಿಮೆ ಇರುವದಿಲ್ಲ. ಆದರೆ ಸಮಾಜವು ಮಾತ್ರ ತನಗೆ ಯಾವುದರ ಲಕ್ಷ್ಯವೂ ಇರುವದಿಲ್ಲ ಎಂಬ ಹಾಗೆ, ಕುರುಡ ಜನರ ಸೋಗು ಹಾಕಿಕೊಂಡು ಮುನ್ನಡೆಯುತ್ತಾ ಇದೆ ಎಂದು ಹಿಂದೀ ಜಗತ್ತಿನ ಸುಪ್ರಸಿದ್ಧ ಸಮಾಜ ಸುಧಾರಕರೂ ಲೇಖಕರೂ ಆಗಿರುವ ಶ್ರೀ ಮೋಹನಲಾಲ ನೇಹರೂ ಅವರು ಮದ್ರಾಸಿನ ಹಿಂದೀ ಪ್ರಚಾರಕದಲ್ಲಿ ಬರೆದ ಒಂದು ಲೇಖನದಲ್ಲಿ ಹೇಳುತ್ತಾರೆ. ಅವರು ಅದೇ ಲೇಖನದಲ್ಲಿ ಈ ವಿಷಯವಾಗಿ ಮುಂದೆ ಬರೆಯುವದೇನಂದರೆ—

ಸ್ತ್ರೀಗೆ ಯಾವ ಬಂಧನವೂ ಇಲ್ಲದಂಥ ಒಂದು ಕಾಲವು ಇದ್ದಿತು. ಆ ಕಾಲದಲ್ಲಿ ಅವಳು ತನ್ನ ಇಚ್ಛೆಗೆ ಬಂದ ಪುರುಷನನ್ನು ಕೂಡಿ ಇರಬಹುದಾಗಿತ್ತು. ಹೀಗೆಂದು ಪಾಂಡು ರಾಜನು ಕುಂತಿಗೆ ಹೇಳಿಯೂ ಇದ್ದನು. ಇದಾದ ಮೇಲೆ ಸ್ತ್ರೀಯು ಯಾರಾದರೂ ಒಬ್ಬನನ್ನು ಮಾತ್ರ ಕೂಡಿಕೊಂಡು ಇರಬೇಕಾದ ಕಾಲವು ಬಂದಿತು. ಆದರೆ ಪತಿವ್ರತೆಯಾಗಿ ಇರುವದಕ್ಕೋಸ್ಕರ ಅವಳು ಬೇರೆ ಪುರುಷರೊಂದಿಗೆ ವಿಹರಿಸಬಾರದೆಂಬ ನಿರ್ಬಂಧವೇನೂ ಆಗ ಇದ್ದಿರಲಿಲ್ಲ. ಇಂಥ ನೂರಾರು ದೃಷ್ಟಾಂತಗಳು ಮಹಾ ಭಾರತದಲ್ಲಿ ಸಿಕ್ಕುತ್ತವೆ. ಯುದ್ಧದಲ್ಲಿ ಗೆದ್ದು ಬಂಧುಬಾಂಧವರಿಂದ ಕಸಕೊಂಡು ಮದುವೆಯಾದ ಸ್ತ್ರೀಯರಿಗೆ ಕೂಡ ಈ ಸ್ವಾತಂತ್ರ್ಯವು ಇರುತ್ತಿತ್ತು. ಆಗ ವರದಕ್ಷಿಣೆ ಕೊಡಬೇಕಾದ ಆವಶ್ಯಕತೆ ಇದ್ದಿರಲಿಲ್ಲ, ಆತ್ಮ ಘಾತ ಮಾಡಿಕೊಳ್ಳಬೇಕಾಗಿಯೂ ಇರಲಿಲ್ಲ.

ಮೆಲ್ಲಮೆಲ್ಲಗೆ ನಮ್ಮ ಪೂರ್ವಜರು ಪತಿಪತ್ನಿಯರೊಳಗಿನ ಪರಸ್ಪರ ಸಂಬಂಧದ ಕುರಿತು ಕಠಿನ ನಿಯಮಗಳನ್ನು ಮಾಡಿದರು ಮತ್ತು ಸಮಯಕ್ಕನುಸಾರ ಮಾಡುತ್ತ ಹೋದರು. ವಾಸ್ತವಿಕಾಂಶವನ್ನು ಹೇಳುವದಾದರೆ ಮನೆಮಾರು ಕಟ್ಟಿಕೊಂಡು ಸಂಸಾರವಂದಿಗನಾಗಿ ಇರಬೇಕಾದರೆ ಆಗ ಇಂಥ ನಿಯಮಗಳ ಅಗತ್ಯ ಕೂಡ ಇದ್ದಿತು. ಬೇರೆ ಬೇರೆ ಮನೆತನಗಳ ಇಬ್ಬರು ಇಂಥಹದ್ದೊಂದು ಮನೆಯಲ್ಲಿ ಆಜೀವನ ಇರಬೇಕಾಗುವದೆಂಬ ವಿಶ್ವಾಸವು ಅವರಿಗೆ ಉಂಟಾದ ಹೊರತು ಆ ಮನೆಯನ್ನು ಅವರು ತಮ್ಮದೆಂದು ತಿಳಿಯುವ ಹಾಗೆ ಇರಲಿಲ್ಲ. ನಮ್ಮ ಪೂರ್ವಜರು ಬಹಳ ದೂರದರ್ಶಿಗಳಾಗಿದ್ದರೆಂಬುದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಅದರ ಪರಿಣಾಮದಿಂದಾಗಿಯೇ, ಅನೇಕಾನೇಕ ಆಕ್ರಮಣಗಳಾಗಿಯೂ ನಮ್ಮ ಮನೆಮಾರುಗಳ ಅಸ್ತಿತ್ವವು ಇನ್ನೂ ಸ್ಥಿರವಾಗಿ ಉಳಿದು ಬಂದಿದೆ.

ಆದರೆ ಇದು ನಡೆದ ಸಾವಿರಾರು ವರ್ಷಗಳು ಕಳೆದ ಮೇಲೆ ಕೆಲವು ಲೋಭಿ ಜನರು ನಮ್ಮ ಸಮಾಜದಲ್ಲಿ ಹುಟ್ಟಿ ವರದಕ್ಷಿಣೆಯ ನಿಯಮವನ್ನು ಮಾಡಿದರು. ಆ ಕಾಲದಲ್ಲಿ ಲಡಾಯಿ ದಂಗೆಗಳಲ್ಲಿ ಬಹಳ ಮಂದಿ ಪುರುಷರು ಸತ್ತುಹೋದ ಕಾರಣದಿಂದ ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಅಧಿಕವಾಗಿದ್ದಿರಬಹುದು; ಅಥವಾ ಜನಗಣನೆ ಆಗದೆ ಇರುತಿದ್ದ ಕಾರಣದಿಂದ ಸ್ತ್ರೀಪುರುಷ ಸಂಖ್ಯಾಮಾನವು ಅವರಿಗೆ ತಿಳಿಯದೆ ಇದ್ದಿರಬಹುದು, ಅಥವಾ ಲೆಕ್ಕವಿಲ್ಲದಷ್ಟು ಜಾತಿ ಉಪಜಾತಿಗಳಾಗಿ ಹಿಂದೂ ಸಮಾಜವು ಒಡೆದು ಹೋಗಿದ್ದಿರಬಹುದು, ಅಥವಾ ಇಂಥ ಇನ್ನು ಯಾವದೋ ಕಾರಣದಿಂದ—ವಿವಾಹ ಕಾಲದಲ್ಲ ಕನ್ಯಾಪಕ್ಷದವರು ವರ ಪಕ್ಷದವರಿಗೆ ಏನಾದರೂ ಶುಲ್ಕ ಕೊಡಬೇಕೆಂಬ ಒಂದು ನಿಯಮವು ಉಂಟಾಯಿತು. ವರದಕ್ಷಿಣೆಯ ಬೇಡಿಕೆಯು ದಿನ ಹೋಗುತ್ತ ಹೋಗುತ್ತ ಬೆಳೆಯುತ್ತ ಬಂದಿತು. ಇದರ ದುಷ್ಪರಿಣಾಮಗಳನ್ನೇ ನಾವಿಂದು ಅನುಭವಿಸುತ್ತಿದ್ದೇವೆ.

ಈಗ ಪರಿಸ್ಥಿತಿ ಎಲ್ಲಿಯ ವರೆಗೆ ಬಂದು ಮುಟ್ಟಿದೆ ಎಂದರೆ—ಮಗಳು ವಿವಾಹ ಯೋಗ್ಯಳಾಗಿ ಬೆಳೆಯದೆ ಇರುವಳಾದರೂ ಕೂಡ ತಂದೆ ತಾಯಿಗಳು ಅವಳಿಗೆ ಒಬ್ಬ ಗಂಡನನ್ನು ಹುಡುಕಲು ಪ್ರಯತ್ನಿಸುತ್ತಾರೆ, ಮತ್ತು ಸಮಾಜದಲ್ಲಿ ಅವರ ದೃಷ್ಟಿಯಿಂದ ಒಬ್ಬ ಯೋಗ್ಯ ವರನು ದೊರೆತರೆ ಅವನನ್ನು ಕ್ರಯಕ್ಕೆ ಪಡೆಯಲಿಕ್ಕೆ ತೊಡಗುತ್ತಾರೆ. ಒಬ್ಬರೊಬ್ಬರಿಗಿಂತ ವರನ ಕ್ರಯವನ್ನು ಏರಿಸುತ್ತಾರೆ. ಇದರಿಂದ ಎಷ್ಟೋ ಕಡೆ ಹೊಯ್ದಾಟ ಬೈದಾಟಗಳೂ ಆಗುತ್ತವೆ. 'ವರನನ್ನು ಕ್ರಯಕ್ಕೆ ಕೊಂಡುಕೊಳ್ಳುವದು' ಎಂಬ ಶಬ್ದವನ್ನು ನಾನು ಉದ್ದೇಶ ಪೂರ್ವಕವಾಗಿ ಉಪಯೋಗಿಸಿರುವೆನು. ಯಾಕೆಂದರೆ ವರದಕ್ಷಿಣೆಗೆ ಬೇರೆ ಯಾವ ಅರ್ಥವನ್ನೂ ನಾನು ಮಾಡಲಾರದವನಾಗಿದ್ದೇನೆ.

ವರದಕ್ಷಿಣೆಯ ಕ್ರಮವನ್ನು ಈಗ ಪ್ರತಿಯೊಬ್ಬನೂ ಕೆಟ್ಟದೆಂದು ಹೇಳುತ್ತ ಇದ್ದಾನೆ. ಆದರೆ ಸಮಯ ಬಂದಾಗ ಮಾತ್ರ ವರನ ಬೆಲೆಯನ್ನು ಹೀಗೆ ಹೇಳುವವರೇ ಏರಿಸುತ್ತಾರೆ! ಇದನ್ನು ಅಜ್ಜಗಳ ವ್ಯಾಪಾರವೆಂದು ಇವರನ್ನುವರು, "ಏನು ಮಾಡೋಣ, ನನಗೆ ವರದಕ್ಷಿಣೆ ತೆಗೆದುಕೊಳ್ಳಬಾರದೆಂದೇ ಇಚ್ಛೆ. ಆದರೆ ಅವ್ವ ಅಜ್ಜ ಕೇಳುವದಿಲ್ಲ" ಎಂದು ಹೇಳುವರು. ಆದರೆ ಇವರ ಈ ಮಾತು ಸಂಪೂರ್ಣ ಸುಳ್ಳು ಎಂಬುದು ಎಲ್ಲರಿಗೆ ಗೊತ್ತಿದ್ದದೇ ಇದೆ.

ವರದಕ್ಷಿಣೆಯ ಕ್ರಮವನ್ನು ಹೇಗೆ ಮುರಿಯಬಹುದು ಎಂಬುದೀಗ ಪ್ರಶ್ನೆ. ಮನುಷ್ಯನೆಂಬುವನು ಸ್ವಭಾವತಃ ಲೋಭಿಯಾಗಿದ್ದಾನೆ. ತನ್ನ ಕಾರ್ಯಸಾಧನೆಯಾಗುವಾಗ ಅವನಿಗೆ ಇತರರ ಸುಖದುಃಖಗಳ ಲಕ್ಷ್ಯವಿಲ್ಲ. ನನ್ನ ಅಭಿಪ್ರಾಯ ಏನಂದರೆ—ಎಂದಿನ ತನಕ ಕನ್ಯಾಪಕ್ಷದವರು ಹಾಸಿಗೆ ನೋಡಿ ಕಾಲು ನೀಡುವದಿಲ್ಲವೋ, ಹೆಣ್ಣು ಮಕ್ಕಳನ್ನು ಸಮೀಪದಲ್ಲಿಯೇ ಮದುವೆಮಾಡಿ ಕೊಡಬೇಕೆಂಬ ಇಚ್ಛೆಗೆ ತಿಲಾಂಜಲಿ ಕೊಡುವದಿಲ್ಲವೋ ಅಂದಿನ ತನಕ ಅವರು ವರದಕ್ಷಿಣೆಯ ನಿಯಮದಿಂದಾಗುವ ಕಷ್ಟನಷ್ಟಗಳನ್ನು ಅನುಭವಿಸಲೇಬೇಕಾಗುವದು. ವರ ಪಕ್ಷದವರಿಗೆ ತಲೆ ತಗ್ಗಿಸಲೇ ಬೇಕಾಗುವದು.

ನಮ್ಮ ದುರ್ಭಾಗ್ಯದಿಂದ ನಮ್ಮ ಸಮಾಜವು ಎಷ್ಟು ಜಾತಿ ಉಪಜಾತಿಗಳಿಂದ ಒಡೆದು ಹೋಗಿರುವದೆಂದರೆ ನಾವು ಬೃಹತ್ ಹಿಂದೂ ಸಮಾಜದ ಸದಸ್ಯರಾಗಿರುವೆವು ಎಂಬುದನ್ನು ಕೂಡ ನಾವು ಮರೆತುಹೋಗಿದ್ದೇವೆ. ಪ್ರಾಚೀನ ಕಾಲದಲ್ಲಿ ಜಾತಿ ವರ್ಣಗಳು ಇದ್ದುವಾದರೂ ಹಿಂದೂಗಳೆಲ್ಲರೂ ಒಂದಾಗಿದ್ದರು. ಅವರು ತಮ್ಮತಮ್ಮೊಳಗೆ ವಿವಾಹ ಸಂಬಂಧವನ್ನು ಮಾಡಿಕೊಳ್ಳುತ್ತಿದ್ದರು, ಮತ್ತು ಅವರಿಗೆ ಹುಟ್ಟಿದ ಮಕ್ಕಳು ಕೂಡ ತಾವು ಇಚ್ಛಿಸಿದ ಜಾತಿ (ವರ್ಣ)ಯಲ್ಲಿ ಇರಬಹುದಾಗಿತ್ತು—ಹೀಗೆಂದು ಶಾಸ್ತ್ರಗಳ ಪ್ರಮಾಣವನ್ನು ಕೊಟ್ಟು ಡಾಕ್ಟರ ಭಗವಾನ ದಾಸರಂಥ ಪಂಡಿತೋತ್ತಮರು ನಮಗೆ ಸಿದ್ಧಮಾಡಿ ತೋರಿಸಿದ್ದಾರೆ.

ಆದ್ದರಿಂದ ಸಮಾಜದ ಉಪರೋಕ್ತ ಲೋಭಿ ಜನರನ್ನು ದಾರಿಗೆ ತರುವ ಒಂದೇ ಒಂದು ಉಪಾಯ, ಎಂದರೆ—ನಾವು ಹಿಂದು-ಹಿಂದೂಗಳಲ್ಲಿ ಪರಸ್ಪರ ಯಾವ ಭೇದವನ್ನೂ ಇಟ್ಟುಕೊಳ್ಳಬಾರದು. ಮುಸಲ್ಮಾನ ಬಾಂಧವರನ್ನು ಕೂಡ ನಾನು ಹಿಂದುಗಳ ಶ್ರೇಣಿಗೇ ತರಲಿಕ್ಕೆ ಸಿದ್ಧನಾಗುತ್ತಿದ್ದೆ. ಆದರೆ ಅವರಲ್ಲಿ ಹೆಚ್ಚಿನವರ ದೃಷ್ಟಿಯು ಇನ್ನೂ ಪೆಲೆಸ್ತೀನ, ಟರ್ಕಿ ಅಫಘಾನಿಸ್ಥಾನಗಳ ಕಡೆಗೆ ಇರುವದು. ಅವರ ದೃಷ್ಟಿ ಭಾರತದ ಕಡೆಗೆ ತಿರುಗುವದೇ ಇಲ್ಲ. ಅವರ ಸಂಗತಿ ಹೇಗಿದ್ದರೂ ಹಿಂದೂ-ಹಿಂದೂಗಳೊಳಗಿನ ಭೇದಭಾವದ ನಾಶವಾಗುವದು ಅಗತ್ಯವಾಗಿದೆ.

ವರದಕ್ಷಿಣೆಯ ಕೆಟ್ಟ ಪದ್ಧತಿಯು ಹಿಂದೂ ಸಮಾಜದ ಪ್ರತಿಯೊಂದು ಸಣ್ಣ ದೊಡ್ಡ ಜಾತಿಯಲ್ಲಿ ಇರುವಾಗ—ಹಿಂದು ಹಿಂದುಗಳೊಳಗಿನ ಭೇದ ಭಾವದ ನಾಶವಾಗಿ ಪರಸ್ಪರ ವಿವಾಹ ಸಂಬಂಧ ಆಗ ತೊಡಗಿದರೆ ಈ ದುಷ್ಟಪದ್ಧತಿಯ ನಾಶವು ಹೇಗಾಗಬಹುದೆಂದು ನೀವು ಕೇಳಬಹುದು. ನಾನು ಹೇಳುವದೇನೆಂದರೆ ಜಾತಿ ಭೇದವು ಹೋದರಾದರೆ ವಿವಾಹ ಸಂಬಂಧ ಮಾಡುವ ಕ್ಷೇತ್ರವು ವಿಸ್ತಾರವಾಗುವದು. ಯಾವ ಜಾತಿಯಲ್ಲಿ ಹುಡುಗರು ಹೆಚ್ಚಾಗಿದ್ದಾರೆಯೋ ಅದರಲ್ಲಿ ಹೆಚ್ಚಿಗೆ ಹುಡುಗಿಯರು ಇರುವ ಜಾತಿಯಿಂದ ಹುಡುಗಿಯರು ಸಿಕ್ಕುವರು. ಈಗಲಾದರೋ ನಾವು ಹಾಗೆ ಮಾಡುವ ಹಾಗೆ ಇಲ್ಲ. ಇದರ ಪರಿಣಾಮ—ಎಷ್ಟೋ ಹುಡುಗರಿಗೆ ಹುಡುಗಿಯರು ಸಿಕ್ಕುವದಿಲ್ಲ. ಮತ್ತು ಎಷ್ಟೋ ಹುಡುಗಿಯರಿಗೆ ಹುಡುಗರು ದೊರೆಯುವದಿಲ್ಲ. ಹೀಗಾಗಿ ಕೆಲಕೆಲವು ಸಂದರ್ಭಗಳಲ್ಲಿ ಹುಡುಗಿಯರು ಆತ್ಮಘಾತ ಮಾಡಿಕೊಳ್ಳಬೇಕಾಗುತ್ತದೆ.

ಒಬ್ಬ ಹಿಂದೂ ಪುರುಷನು ಒಬ್ಬ ಹಿಂದೂ ಸ್ತ್ರೀಯನ್ನು ವಿವಾಹ ಮಾಡಿಕೊಳ್ಳಬಹುದಾಗಿದ್ದರೆ ಮತ್ತು ಜಾತಿಮೂಲಕ ಭೇದವು ಇರುತಿದ್ದಿಲ್ಲವಾದರೆ ನಮ್ಮ ಇಂದಿನ ಎಷ್ಟೋ ಕಷ್ಟಗಳು ದೂರವಾಗುತ್ತಿದ್ದುವು. 1931ನೆ ಜನ ಗಣನೆಯಿಂದ ಭಾರತ ವರ್ಷದಲ್ಲಿ ಪುರುಷರಿಗಿಂತ ಸ್ತ್ರೀಯರ ಕಡಿಮೆಯಾಗಿದ್ದಾರೆಂಬುದು ತಿಳಿದು ಬಂದಿದೆ. ಎಲ್ಲ ಪುರುಷರು ಮದುವೆಮಾಡಿಕೊಳ್ಳುವ ಇಚ್ಛೆಯನ್ನು ಪ್ರಕಟಿಸಿ ಒಬ್ಬೊಬ್ಬರು ಬರೇ ಒಬ್ಬೊಬ್ಬ ಸ್ತ್ರೀಯನ್ನು ಮಾತ್ರ ಮದುವೆ ಮಾಡಿದ್ದಾದರೂ ಕೂಡ ಎಷ್ಟೋ ಮಂದಿ ಪುರುಷರು ಅವಿವಾಹಿತರಾಗಿಯೇ ಇರಬೇಕಾಗುತಿತ್ತು. ಆಗ ಅವಿವಾಹಿತ ಸ್ತ್ರೀ ಒಬ್ಬಳಾದರೂ ಉಳಿಯುವ ಹಾಗೆ ಇದ್ದಿರಲಿಲ್ಲ. ವಿಧವೆಯರು ಕೂಡ ಸಧವೆಯರಾಗಬೇಕಾಗುತಿತ್ತು. ಆದರೆ ನಮ್ಮಲ್ಲಿ ಎಷ್ಟೋ ಮಂದಿ ಪುರುಷರು ಒಬ್ಬರನ್ನಲ್ಲ ನಾಲ್ಕು ನಾಲ್ಕು ಮಂದಿ ಸ್ತ್ರೀಯರನ್ನು ಮದುವೆಯಾಗುತ್ತಾರೆ. ಹೀಗಿದ್ದರೂ ಎಷ್ಟೋ ಮಂದಿ ಅವಿವಾಹಿತ ಸ್ತ್ರೀಯರೂ ವಿಧವೆಯರೂ ಇರುವರು. ಇದೆಲ್ಲ ಜಾತಿಭೇದದ ಪ್ರತಾಪದಿಂದಾಗಿದೆ.

ಸಮಗ್ರ ಭಾರತದಲ್ಲಿ 35,28,37,778 ಸ್ತ್ರೀಪುರುಷರಿದ್ದಾರೆ. ಅವರಲ್ಲಿ ಹಿಂದೂಗಳು 23,85,98,653 ಆಗಿದ್ದಾರೆ. ಈ ಹಿಂದುಗಳಲ್ಲಿ 12,21,72,534 ಪುರುಷರೂ 11,64,36,119 ಸ್ತ್ರೀಯರೂ ಇದ್ದಾರೆ. ಹೀಗೆ ಪುರುಷರಿಗಿಂತ ಸ್ತ್ರೀಯರು 57,36,415 ಕಡಿಮೆಯಾಗಿದ್ದಾರೆ. ಆದ್ದರಿಂದ ಲೆಕ್ಕದಂತೆ ಕೂಡಿ ಎಲ್ಲ ಹಿಂದೂ ಸ್ತ್ರೀಯರ ವಿವಾಹವಾದದ್ದಾದರೂ ಕೂಡ ಸುಮಾರು 57 ಲಕ್ಷ ಹಿಂದೂ ಪುರುಷರು ಅವಿವಾಹಿತರಾಗಿಯೇ ಇರಬೇಕಾಗುವದು. ಯಾವ ಪ್ರಾಂತ ಅಥವಾ ದೇಶಿ ರಾಜ್ಯದಲ್ಲೂ ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಅಧಿಕವಾಗಿರುವದಿಲ್ಲ. ಕೇವಲ ಮದ್ರಾಸ ಪ್ರಾಂತ್ಯದಲ್ಲಿ 1000ಕ್ಕೆ 20ರಂತೆ ಸ್ತ್ರೀಯರು ಹೆಚ್ಚಿಗೆ ಇರುತ್ತಾರೆ. ಪಂಜಾಬಿನಲ್ಲಿ ಪ್ರತಿ ನೂರು ಪುರುಷರ ಹಿಂದೆ ಬರೇ 87 ಸ್ತ್ರೀಯರಿರುವರು. ಆದ್ದರಿಂದ ಪ್ರಾಂತ ಭೇದ ಜಾತಿ ಭೇದ ನಾಶವಾಗಿ ಬಿಟ್ಟರೆ, ಹುಡುಗಿಯರಿಗೆ ವಿವಾಹ ಮಾಡಲಿಕ್ಕೆ ಯಾವ ಕಷ್ಟವೂ ಬರುವಂತಿಲ್ಲ. ಮತ್ತು ನಾವು ಸಮಾಚಾರ ಪತ್ರಗಳಲ್ಲಿ ಓದುವಂಥ ಭೀಷಣ ಕನ್ಯಾಪಹಾರಗಳೂ ಆಗಲಿಕ್ಕಿಲ್ಲ. ಯಾಕೆಂದರೆ ತಂದೆ ತಾಯಿಗಳು ಆತ್ಮ ಸಂತೋಷದಿಂದ ಹುಡುಗಿಯನ್ನು ಎತ್ತಿ ಕೊಡುವಾಗ, ಹುಡುಗಿಯನ್ನು ಕದ್ದು ತಂದು ಮಾರುವ ಆವಶ್ಯಕತೆ ಯಾರಿಗೂ ಉಳಿಯುವದಿಲ್ಲ.

ಇಷ್ಟೇ ಅಲ್ಲ, ಪ್ರಾಂತ್ಯ ಭೇದ ಜಾತಿ ಭೇದವನ್ನು ನಾಶಮಾಡಿಕೊಂಡಿದ್ದಾದರೆ ವರ ಶುಲ್ಕವನ್ನು ಕೇಳುವ ಲೋಭಿ ಜನರೂ ದಾರಿಗೆ ಬರುವರು. ಪುರುಷರು ಸ್ತ್ರೀಯರಿಗಿಂತ ಕಡಿಮೆಯಾಗಿದ್ದಾರೆ. ಸಾಲ ಮಾಡಿ,—ಮನೆಮಾರು ಮಾರಿ—ಹುಡುಗಿಗೆ ಮದುವೆಮಾಡಿಸಬೇಕಾದ ಅಗತ್ಯವಿಲ್ಲ, ಈಗ ಇರುವದಿಲ್ಲ ಎಂಬ ವಾಸ್ತವಿಕಾಂಶವು ಕನ್ಯಾಪಕ್ಷದವರಿಗೂ ಕನ್ಯೆಗೂ ತಿಳಿದು ಬಂದಾಗ ಅವರು ಲೋಭಿ ವರ ಪಕ್ಷದವರನ್ನು ಉಪೇಕ್ಷೆಯಿಂದ ಕಾಣಬಹುದು. ಇಂಥ ಉಪೇಕ್ಷಾ ಭಾವದಿಂದ ಎಷ್ಟೋ ಕೆಲಸವಾಗುವದು. ಆದರೆ ಈ ಸಂದರ್ಭದಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿ ಏನೆಂದರೆ ಎಲ್ಲಿ ಹೆಣ್ಣು ಮಕ್ಕಳಿಗೆ ಶ್ರೀಮಂತ ಮನೆತನದ ಗಂಡು ಮಕ್ಕಳೇ ಗಂಡಂದಿರಾಗಬೇಕೆಂಬ ಹಠವಿರಬಾರದು. ಎಲ್ಲ ಗಂಡು ಮಕ್ಕಳಿಗೆ ಶ್ರೀಮಂತ ಮಾವಂದಿರೇ ಸಿಕ್ಕಬೇಕೆಂಬ ಆಗ್ರಹವಿರಬಾರದು. ಒಬ್ಬ ಹುಡುಗ ಅಥವಾ ಹುಡುಗಿಯನ್ನು ಅನೇಕ ಮಂದಿ ಮೆಚ್ಚಿಕೊಂಡ ಪರಸ್ಪರ ದ್ವೇಷವು ಬೆಳೆಯದಂತೆಯೂ ನೋಡಿಕೊಳ್ಳಬೇಕಾಗಿದೆ.

ಈಗ ರೈಲು ಮತ್ತು ಅದಕ್ಕಿಂತಲೂ ವೇಗದ ವಾಹನಗಳುಂಟಾಗಿವೆ. ಇದರಿಂದಾಗಿ ಬಹು ದೂರದ ಪ್ರದೇಶಗಳು ಕೂಡ ಸಮೀಪವಾಗಿ ಬಿಟ್ಟಿವೆ. ದೂರ ದೂರ ಪ್ರದೇಶಗಳಲ್ಲಿ ವಿವಾಹ ಸಂಬಂಧವನ್ನು ಮಾಡದಿರುವ ಪ್ರಾಚೀನ ಕಾಲದ ಯಾತ ಕಾರಣಗಳೂ ಈಗ ಉಳಿದಿರುವದಿಲ್ಲ. ಆದ್ದರಿಂದ ಈ ಸಂಚಾರಾನುಕೂಲತೆಗಳ ಉಪಯೋಗವನ್ನು ನಾವು ಆಗತ್ಯ ತೆಗೆದುಕೊಳ್ಳಬೇಕು. ಬಂಗಾಲ ಅಥವಾ ಮದ್ರಾಸಿನ ಹುಡುಗಿಯರನ್ನು ಪಂಜಾಬದ ಹುಡುಗರಿಗೆ ಕೊಟ್ಟರೆ ಏನಡ್ಡಿ?

ವರದಕ್ಷಿಣೆ ಬೇಡುವವರನ್ನು ತಾವೆಂದಿಗೂ ಮದುವೆಯಾಗುವುದಿಲ್ಲವೆಂದು ಹಿಂದೂ ಹುಡುಗಿಯರು ದೃಢ ಪ್ರತಿಜ್ಞೆ ಮಾಡಿಕೊಂಡರೆ ಸ್ವಲ್ಪ ಕಾಲದಲ್ಲಿಯೇ ಅವರು ವಿಜಯಿಗಳಾಗುವರು. ಯಾಕೆಂದರೆ—ಮೊದಲನೆಯದಾಗಿ ಹಿಂದೂ ಸಮಾಜದಲ್ಲಿ ಹುಡುಗಿಯರ ಸಂಖ್ಯೆ ಬಹಳ ಕಡಿಮೆಯಾಗಿರುತ್ತದೆ. ಎರಡನೆಯದಾಗಿ ಪುರುಷರಿಗೆ ಆಗ ತಮಗೆ ಯೋಗ್ಯ ಸ್ತ್ರೀಯರು ಸಿಕ್ಕುವದು ಕಷ್ಟವಾಗುತ್ತದೆ. ಆದ್ದರಿಂದ ಅಂಥ ಸಂದರ್ಭದಲ್ಲಿ ಪುರುಷರು ಸ್ತ್ರೀಯರಿಗೆ ತರುಣರು ತರುಣಿಯರಿಗೆ, ಹುಡುಗರು ಹುಡುಗಿಯರಿಗೆ ಬಗ್ಗಲೇ ಬೇಕಾಗುವುದು.

ಹೀಗೆ ಮಾಡಿ ನಾವು ವರದಕ್ಷಿಣೆಯ ನಿಯಮವನ್ನು ಸುಲಭದಿಂದ ಮುರಿಯಬಹುದಾಗಿದೆ. ಕನ್ಯೆಯರೂ ಕನ್ಯಾಪಕ್ಷದವರೂ ವಿಚಾರ ಮಾಡಿ ಈ ಸುಲಭೋಪಾಯವನ್ನು ಕೈಕೊಳ್ಳಲಿ.

...ಗ್ರಾಣ್ಯದ ಸುಧಾರಸವು ಮೃತ್ಯುವಿನ ಕಾಲಕೂಟವೇ?

(೯ನೇ ಪುಟದಿಂದ ಮುಂದುವರಿದುದು)

ಆರು ತಿಂಗಳ ನಂತರ, ಆತನ ಕಣ್ಣಿನೊಳ ...ಕ್ಕ ಐದನೇ ಗುಂಡನ್ನು ಹೊರಗೆಳೆವಾಗ ...ಪರೇಟಿಂಗ್ ಮೇಜಿನ ಮೇಲೆಯ್ಯೇ ಲಿಯೋ ...ಲ್ಲನು ಪ್ರಾಣವನ್ನು ತ್ಯಜಿಸಿದನು

ಇನ್ನೊಂದು ವಿಚಿತ್ರಕಥೆಯು ಮಹಾಯು...ದ ಸಮಯದಲ್ಲಿ ರೋಮೇನಿಯಾದಿಂದ ಕೇ...ಬಂದಿತ್ತು ಮಲತಾಯಿಯ ಉಪಟಳಕ್ಕೆ ...ಸತ್ತ ಏಂಜೆಲಾ ಗಾಲ್ಕಾ ಎಂಬ ತರುಣಿಯು ...ನೆಯನ್ನು ಬಿಟ್ಟೋಡಿ, ಮಹಾಯುದ್ಧದ ಸ...ಯದಲ್ಲಿ ಪುರುಷವೇಶದಿಂದ ಸೈನ್ಯವನ್ನು ...ರಿದಳು ಯುದ್ಧದಲ್ಲಿ ಆಕೆಗೆ ಗಾಯಗಳಾ...ವು ಆ ಸಮಯದಲ್ಲಿ ಆಕೆಯ ನಿಜವೇಶವು ...ಂಬಿತ್ತು ನಂತರ ಆಕೆಯು ನರ್ಸ್ ಆದ...ಳು ಅಲ್ಲಿ ಗಾಯಗೊಂಡು ಬಿದ್ದಿದ್ದ ...ಸ್ತಟಾರನ ಮೋಹಿನ ಪ್ರೇಮದಿಂದ ತಾನೂ ...ಪ್ತಚಾರಿಯಾದಳು

ಆಕೆಯು ಮಹಾಯುದ್ಧದಲ್ಲಿ ಆಸ್ಟ್ರಿಯಾ ...ಂಗೇರಿಯ ಪರವಾಗಿ ರಷ್ಯಾದ ಎದುರು ಕೆಲ...ವಮಾಡಿದಳು ಅದೃಷ್ಟವಶಾತ್ ಯುದ್ಧ ಮುಗಿ...ಯುವ ವೇಳೆಯಲ್ಲಿ ಸ್ವಲ್ಪ ಹಣವನ್ನು ಕೂಡ ...ಹಾಕಿದಳು ಆದರೂ ಆಕೆಯು ಕೆಲಸದಿಂದ ...ವೃತ್ತಳಾಗದೆ ರೋಮೇನಿಯನ್ ಗವರ್ನ...ಮೆಂಟಿನ ಪರವಾಗಿ ಕೆಲಸಮಾಡಹತ್ತಿದಳು

ಈಗ್ಗೆ ಕೆಲವು ವರ್ಷಗಳ ಹಿಂದೆ ಆಕೆಯು ...ವೃತ್ತಳಾದಳು ಹಳ್ಳಿಯಲ್ಲಿನ ಮನೆಯೊಂದ...ಲ್ಲಿ ತಾನು ಅತಿಶಯವಾಗಿ ಪ್ರೀತಿಸುತ್ತಿದ್ದ ...ಮೇನಿಯದ ಸೈನ್ಯದಲ್ಲಿ ಸೈನಿಕನಾಗಿದ್ದ ...ನ್ ಕೊಜೋಕಾರುವಿನೊಡನೆ ವಾಸಿಸಹತ್ತಿ...ಳು ಒಂದು ದಿನ ಆಕೆಯ ತನ್ನ ಕೋಣೆ...ಲಿಯೋ ವ್ಯಕ್ತಳಾಗಿ ಬಿದ್ದಿದ್ದಳ ಅದೇ ...ಣೆಯಲ್ಲಿ ಮತ್ತೊಂದು ಶವವಿತ್ತು ಅದು ...ಕೆಯ ಪ್ರಿಯತಮನದ ... ಮೊದ... ಬರೆದಿಟ್ಟ ಪತ್ರದಲ್ಲಿ ಆ ಗುಪ್ತಚಾರಳು ...ನು ಜರುಗಿಸಿದ ಕೆಲಸಗಳೆಲ್ಲವನ್ನು ಬರೆ...ದ್ದಳು ಆಕೆಯು ಮಹಾಯುದ್ಧದಲ್ಲಿ ರಷ್ಯದ ...ದುರಿಸ ... ರಷ್ಯದ ಪರ... ಯೋ ಕೆಲಸ ಮಾಡಿದ್ದಳಂತೆ ಆ ಕಠಿಣ ಸಂದ...ರ್ಭಗಳಲ್ಲಿ-ಎರಡೂ ಪಕ್ಷದವರನ್ನು ಮೋಸ...ಗೊಳಿಸುವ ಕಾರ್ಯದಲ್ಲಿ ಆಕೆಯ ಜೀವವು ...ಬಹಳ ಅಪಾಯದಲ್ಲಿದ್ದಿತು ಆಕೆಯು ಅನೇಕ ...ರದ ಕಷ್ಟಗಳನ್ನು ಅನುಭವಿಸಿದಳು ಮನುಷ್ಯ...ರಿಗಿಂತ ಹೆಚ್ಚು ಕಠಿಣವಾದ ಆ ಎದೆಯು ಕೂಡ ...ಸೇರಿಸಿತು-ತಾನು ಪ್ರೀತಿಸುವ ಸೈನಿಕನು ಬೇ...ರೊಬ್ಬಳಿಗಾಗಿ ತನ್ನನ್ನು ತ್ಯಜಿಸಲಿರುವನೆಂಬು...ದನ್ನು ಕೇಳಿದೊಡನೆ, ಹೇಗೂ ಆಕೆಯು ಆತ...ನನ್ನು ಬಿಡತಕ್ಕವಳು ಆದರೆ ಆತನು ಮತ್ತೊ...ಬ್ಬಳೊಡನೆ ಸುಖವಾಗಿರಬಹುದೆಂಬ ಯೋಚ...ನೆಯೇ ಆಕೆಯನ್ನು ಕೊಲೆಯಂತಹ ಭೀಕರ ...ಕೃತ್ಯಕ್ಕೆ ನೂಕಿತು ಬಾಲ್ಯದಿಂದಲೂ ಅಡಗಿದ್ದ ...ಕಿಚ್ಚು ಹೊರಹೊಮ್ಮಿ ಎರಡು ಜೀವಗಳನ್ನು ಈ ...ಲೋಕದಿಂದ ಹಾರಿಸಿಕೊಂಡು ಹೋಯಿತು

ಈ ಎಲ್ಲಾ ಮೃತ್ಯುಗಳು ಉಂಟಾಗು...ವುದು ಮನುಷ್ಯನ ಮನಸ್ಸಿನ ದುರ್ಬಲತೆ...ಯಿಂದ! ಬಂದ ಎಡರುಗಳಿಗೆದೆಗೊಟ್ಟು, ಕಷ್ಟ-ನಷ್ಟಗಳನ್ನು ಬೀದಿಯ ಕಲ್ಲಿನಂತೆ ಭಾವಿಸಿ, ಮುಂದೊತ್ತುವಷ್ಟರ ಸ್ಥೈರ್ಯವು ಮನಸ್ಸಿಗಿರುವುದಿಲ್ಲ. ಅಲ್ಲದೆ ಎಂತಹ ಕಠಿನ ಪ್ರಸಂಗ ಬಂದಾಗಲೂ ಅದರಿಂದ ಪಾರಾಗಲು ಮೃತ್ಯುವಿನಹ ಮತ್ತೊಂದು ಹಾದಿಯಿರುವುದನ್ನು ಮನಸ್ಸು ಹುಡುಕಲಾರದಷ್ಟು ಅಶಕ್ತವಾಗಿರುತ್ತದೆ ಇದನ್ನು ಗುಣಮಾಡಬಹುದು, ಆದರೆ ಔಷಧಿಯಿಂದಲ್ಲ.

ಈಗಿನ ಕಾಲದ ವಿದ್ಯಾಭ್ಯಾಸವು ಬಹುತರವಾಗಿ ಎಡರುಗಳಿಗೆ ಎದೆಯನ್ನೊಡ್ಡಿಸುತ್ತಿದೆ. ಈಗಿನ ವಿದ್ಯಾರ್ಥಿಗಳಲ್ಲಿ ಹಲವರ ಸ್ಫೂರ್ತಿಯು ಪ್ರಶಂಸನೀಯವಾಗಿದೆ ಇಂತಹ ಈ ವಿದ್ಯಾಭ್ಯಾಸದಿಂದ ಮುಂದಿನ ಜನಾಂಗದವಾದ ಇಂದಿನ ಹುಡುಗರ ಸ್ಥೈರ್ಯವು ಬೆಳೆಯುತ್ತ ಹೋಗಲಿದೆ ಆ ಸ್ಥೈರ್ಯದ ದೆಸೆಯಿಂದ ಇನ್ನುಮುಂದೆ ಎರಡು ಮೂರು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆಯು ಬಹಳ ಕಡಿಮೆಯಾಗಬಹುದೆಂದು ನಿರೀಕ್ಷೆ. ಯಾಕೆಂದರೆ ಇಂದಿನ ಆಧುನಿಕ ವಿದ್ಯಾಭ್ಯಾಸದಲ್ಲಿ ಎಂತಹ ಕಠಿಣ ಪ್ರಸಂಗದಲ್ಲಾದರೂ ಮೃತ್ಯುವಿಗೆ ಶರಣುಹೊಕ್ಕದೆ ಇರುವ ಸ್ಥೈರ್ಯವು ಬೆಳೆಯಹತ್ತಿರುತ್ತದೆ-ಬೆಳೆಯಲೆಂದೇ ಹಾರೈಕೆ!

ಭಾರತೀಯ ಚಾ ಪಾನಮಾಡಿ

ದೇಹಕ್ಕೆ ಬಲ ಪಡೆಯಿರಿ

ದೇಹವೇ ಆತ್ಮದ ದೇವಾಲಯವೆನ್ನುವರು ದೇಹವನ್ನು ಆರೋಗ್ಯದಿಂದಿಡುವುದು ನಮ್ಮ ಮುಖ್ಯ ಕೆಲಸ ಇದು ಸುಲಭವಲ್ಲ ನಮ್ಮ ಜಡಭರಿತವಾದ ಸ್ವಭಾವವೂ ನಿತ್ಯ ಕೆಲಸಗಳಿಂದುಂಟಾಗುವ ಆಯಾಸವೂ ಇದಕ್ಕೆ ಅಡ್ಡಿ ಮಾಡದಂತೆ ಆರೋಗ್ಯ ಮಾರ್ಗಗಳನ್ನಾಚರಿಸಬೇಕು. ಜಡ ನಿವಾರಣೆಗೂ, ದೇಹಾಲಸ್ಯವನ್ನು ತೊರೆದು ತ್ರಾಣವನ್ನು ಹೆಚ್ಚಿಸುವುದಕ್ಕೂ ಚಾ ಸೇವನೆಯನ್ನು ತಪ್ಪದೆ ಮಾಡಿ ಭಾರತೀಯ ಚಾ ಬಹು ರುಚಿಯಾದುದು ದೇಹಕ್ಕೆ ಹಾನಿಕರವಲ್ಲ

ಚಾ ತಯಾರಿಸುವ ವಿಧಾನ

ನಿರ್ಮಲವಾದ ನೀರನ್ನು ಕಾಸಿ ಉಕ್ಕೆಯಾದ ... ಪಾತ್ರೆಯನ್ನು ಬೆಚ್ಚಗೆ ಮಾಡಿ ಅದರಲ್ಲಿ ತಲಾ ಒಂದು ಚಮಚ ಕೊಡುವುದರಿಂದ ಚಮಚಾ ಉತ್ತಮವಾದ ಭಾರತೀಯ ಚಾ ಸೊಪ್ಪನ್ನು ಹಾಕಿ ನೀರು ಚೆನ್ನಾಗಿ ಕುದಿದ ಮೇಲೆ ಅದರ ಮೇಲೆ ಸುರಿಯಿರಿ ... ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ ಹಾಲು ಸಕ್ಕರೆ ಬೆರಸಿ ಸೇವಿಸಿ

ಹಿಂದೂದೇಶದ ಆನಂದ, ಹೆಮ್ಮೆ-ಭಾರತೀಯ ಚಾ

I K 89

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 461/1937

ಮಹಮ್ಮದ ಬ್ಯಾರಿ ಸಹಾ . ವಾದೀರು

ಮತ್ತು

ಮೊಯಿದಿಂ ಕುಂಞಿ ಬ್ಯಾರಿ ಸಹಾ—ಪ್ರತಿವಾದರು

ಇಳ್ಳಂಗೋಡ ಗ್ರಾಮದಲ್ಲಿರುವ ಬೊಂಬ್ರಾಣ ಕೀಕಾಲಿ ಬ್ಯಾರಿ ಮಗ 2ನೇ ಪ್ರತಿವಾದಿ ಅಬ್ದುಲ್ಲ ಬ್ಯಾರಿಗೆ

ಆರಿಕ್ಕಾಡಿ ಗ್ರಾಮದ ೦೯ ಸರ್ವೆನಂಬ್ರ 12/4ನೇ ಆಸ್ತಿ ಏಲಮಿನಿಂದ ಪ್ಲೈಯಿಂಟಿನಲ್ಲಿ ಕೇಳಿದ ರೂಪಾಯಿ 150 ನ ಕೋರ್ಟು ಖರ್ಚನ್ನು ಸಹಾ ಬರಮಾಡುವ ಬಗ್ಗೆ ವಾದೀರು ದಾವಾಮಾಡಿದ ಮೇಲ್ಕಂಡ ವ್ಯಾಜ್ಯವು ತಾರಿ 30-9-1937ರಲ್ಲು ಕಾಸರಗೋಡು ಡಿ. ೯ ಕೋರ್ಟಿನಲ್ಲಿ ತನ್ನ ಬಗ್ಗೆ ಇಡೋಣಾಗಿರುತ್ತದೆ ಆ ದಿವಸ 2ನೇ ಪ್ರತಿವಾದಿಯು ಹಾಜರಾಗಿ ಉಜರಾಂಸದಿದ್ದರೆ ಏಕಪಕ್ಷವಾಗಿ ತೀರ್ಮಾನವಾಗುವುದು.

ಕಾಸರಗೋಡು }
15-9-'37 }

B. Amrith Rao,
VAKIL FOR PLFFS.

[illegible] ಮದ್ಯ ನಿರೋಧ

[illegible] ಮದ್ಯ ನಿಷೇಧದ [illegible] ಕಾರ್ಯಕ್ರಮದಂತೆ [illegible] ಮತ್ತು ಅದರ ಕುರಿತು ಕ್ರಮಗಳ [illegible] ಮಾಡಿರುವುದು ಪ್ರಕಟನೆ ಸದ್ಯದಲ್ಲಿ [illegible] ಸರಕಾರ ಗೆಜೆಟಿನಲ್ಲಾಗುವುದು. [illegible] ಆ ಕುರಿತು ಅಧಿಕಾರಿಗಳು [illegible] ಅಲ್ಲದೆ ಆ ಬಗ್ಗೆ ವಿಶೇಷ ಶಿಬಂದಿಯ ಏರ್ಪಾಡು ಮಾಡಲಾಗಿದೆ. ಕಳ್ಳಾಟಿಕೆಯಲ್ಲಿ ಮದ್ಯದ ಮಾರಾಟವಾಗದಂತೆ, ಸೇವನೆಯಾಗದಂತೆಯೂ ಅತಿ ಕಠಿಣ ತರದ ಕ್ರಮಗಳು ಜ್ಯಾರಿಮಾಡಲಾಗುವುವು. ಸೇಲಂ ಜಿಲ್ಲೆಯ ಎಲ್ಲಾ ಮದ್ಯದಂಗಡಿಗಳು ಮುಚ್ಚಲಾಗುವುವು. ಕಾಂಗ್ರೆಸ್ ಕಾರ್ಯಕ್ರಮದ ಪ್ರಕಾರ ಮದ್ಯನಿಷೇಧವು ಪ್ರಾರಂಭಿಸಿದ ವಿಚಾರದಲ್ಲಿ ಮದ್ರಾಸಿನ ಸೇಲಂ ಜಿಲ್ಲೆಯು ಪ್ರಥಮ ಸ್ಥಾನವನ್ನು ಪಡೆದಂತಾಗಿದೆ ಇದೇ ರೀತಿಯಲ್ಲಿ ಕ್ರಮೇಣ ಮದ್ಯನಿಷೇಧವು ಸಂಪೂರ್ಣ ಪ್ರಾಂತ್ಯದಲ್ಲಿ ಆಚರಿಸಲಾಗುವಂತೆ ಕ್ರಮಗಳು ಮಾಡಲಾಗುವವು

ಮದ್ರಾಸು ಎಸೆಂಬ್ಲಿ

ಮದ್ರಾಸು ಎಸೆಂಬ್ಲಿಯ ಅಧಿವೇಶನವು ನಡೆಯುತ್ತಿದೆ "ಕಾಂಗ್ರೆಸ್ ಬಜೆಟಿನ ಅನೇಕ ಗ್ರ್ಯಾಂಟುಗಳ ಕುರಿತು ಚರ್ಚಿಸಲು ವಿರೋಧ ಪಕ್ಷದವರು ತಂದ ಅನೇಕ ಕಡಿತ ಠರಾವುಗಳು ಚರ್ಚಿಸಲಾಗುತ್ತಿವೆ ಮದ್ರಾಸು ಸರಕಾರದ ಕಾಂಗ್ರೆಸ್ ಬಜೆಟಿಗೆ ಸಂಪೂರ್ಣ ಕಾಂಗ್ರೆಸ್ ರೂಪ ಇರದಿದ್ದರೂ, ಅದು ಕಾಂಗ್ರೆಸ್ ನಿಯಮಗಳನ್ನು ಪೂರೈಸಲು ಪ್ರಯತ್ನಪಟ್ಟಿರುವುದೆಂದು, ಕಾಂಗ್ರೆಸ್ ಮಹನೀಯರೊಬ್ಬರ ಅಭಿಪ್ರಾಯ. ಕಾಂಗ್ರೆಸ್ ಗುರಿಗಳನ್ನನುಸರಿಸಿ ಬಜೆಟನ್ನು ರಚಿಸಿ, ಸಮಯ ಸಮಯಾನಕೂಲತೆಯಾದುದರಿಂದ ಮುಂದಿನ ಬಜೆಟು ಸಂಪೂರ್ಣ ಕಾಂಗ್ರೆಸ್ ರೂಪವನ್ನು ಹೊಂದುವಂತೆ ಯತ್ನಗಳು ನಡೆಯುವುವಂತೆ

ಒಟ್ಟಿನಲ್ಲಿ ಮದ್ರಾಸು ಸರಕಾರದ ಶ್ರೀ ರಾಜಗೋಪಾಲಾಚಾರ್ಯರ ಬಜೆಟಿನ ಕುರಿತು ಎಲ್ಲರಿಗೂ ಸಮಾಧಾನವಿರುತ್ತದೆನ್ನಬಹುದು

ತೋಟಿಗಳ ಶೋಚನೀಯ ಸ್ಥಿತಿ

ನಮ್ಮ ದೇಶದ ತೋಟಿಗಳು ಹರಿಜನರಲ್ಲಿ ಅತ್ಯಂತ ಕೀಳು ತರಗತಿಯವರೆಂದು ಎಣಿಸಲಾಗುತ್ತಿದೆ ಅನೇಕ ಕಡೆಗಳಲ್ಲಿ ಅವರಿಗೆ ಉಳಕೊಳ್ಳಲು ಸರಿಯಾದ ಮನೆಗಳ ವ್ಯವಸ್ಥೆ ಇರುವುದಿಲ್ಲ, ಅವರಿಗೆ ಸ್ಥಿರವಾದ ಉದ್ಯೋಗವು ದೊರಕುವುದಿಲ್ಲ ಅನೇಕ ಕಡೆಗಳಲ್ಲಿ ಅವರಿಗೆ ಅತಿ ಕಡಿಮೆ ಕೂಲಿಯು ಸಲ್ಲುತ್ತಿದೆ ಅವರಲ್ಲಿ ಅಧಿಕ ಜನರು ಸಾಲದ ಹೊರೆಗೆ ತುತ್ತಾಗಿರುವರು. ಅವರ ಮಕ್ಕಳಿಗೆ ಶಿಕ್ಷಣ ದೊರಕಿಸುವ ಏರ್ಪಾಡುಗಳಿರುವುದಿಲ್ಲ ಈಗ ಎಲ್ಲಾ ಪ್ರಾಂತ್ಯಗಳಲ್ಲಿ ಪ್ರಜೆಗಳಿಂದಲೆ ಆರಿಸಲ್ಪಟ್ಟ ಸರಕಾರಗಳು ರೂಢಿಗೆ ಬಂದಿರುವುದರಿಂದ, ತೋಟಿಗಳ ಪಾಡಿನ ಸುಧಾರಣೆಗೆ ಯತ್ನಗಳು ನಡೆಯಬೇಕೆಂದು, ಹರಿಜನ ಸೇವಾಸಂಘದ ಠಕ್ಕರ ಬಾಬಾರವರು ಮನವಿಮಾಡಿಕೊಂಡಿರುವರು

ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರು

ಶ್ರೀಗಳಾದ ವಿಟ್ಠಲ ಶೆಟ್ಟಿ, ನಗರ ಸಭಾಧ್ಯಕ್ಷ ಮಂಗಳೂರು, ಆರೂರು ಲಕ್ಷ್ಮೀನಾರಾಯಣರಾಯರು, ನಗರಸಭಾಧ್ಯಕ್ಷ ಉಡುಪಿ, ಬಿ. ವಾಸುದೇವರಾಯರು, ಇತ್ಯಾದಿ ಮಹನೀಯರುಗಳಿಂದ ಕೂಡಿದ ಒಂದು ಡೆಪ್ಯುಟೇಶನು, [illegible] ಕುರಿತು ಕೈಗಾರಿಕಾಮಂತ್ರಿ [illegible] ಪ್ರಕಾಶಂರವರ ಬೇಟಿ ಮಾಡಿತು ದಕ್ಷಿಣ [illegible] ಜಿಲ್ಲೆಯಲ್ಲಿ ನೀರಿನ ಸ್ಥಳದ ಮೇಲಿ

ಮತ್ತು ತೋಟಗಳ ಮೇಲೆ ವಿಧಿಸಲಾದ ಕೀ. ಗ. ಸಲೆ ಕಂದಾಯ ಹೆಚ್ಚಿಸಿದುದನ್ನು, ಇಳಿಸಬೇಕಾಗಿ ಕೋರಲಾಯಿತು. ವ್ಯವಸಾಯವಿಲ್ಲದ ಮತ್ತು ಬಂಜರುಭೂಮಿಗಳ ಮೇಲಿರುವ ಕೀರ್ವೆ ರದ್ದುಮಾಡಬೇಕೆಂದು ಕೇಳಿಕೊಂಡರು

ಬಂಗಾಳದಲ್ಲಿ ಕೋಮುವಾರು ಭೇದ

ಬಂಗಾಳದಲ್ಲಿನ ವಿದ್ಯಾರ್ಥಿಗಳಿಗೂ ಕೋಮುವಾರು ಭೇದರೋಗವು ಅಂಟಿದಂತೆ ಕಾಣುತ್ತದೆ ಹಿಂದೂ ಮುಸ್ಲಿಮ, ಭೇದಗಳಿಂದಾಗಿ, ಅಲ್ಲಿನ ಅನೇಕ ಕಾಲೇಜುಗಳಲ್ಲಿ ಮುಷ್ಕರ ಇತ್ಯಾದಿ ಗಲಭೆಯು ಉಂಟಾಗಿರುತ್ತದೆ ಅಲ್ಲದೆ ಇನ್ನಿತರ ವಾತಾವರಣಗಳಲ್ಲೂ ಈ ಕೋಮುಯರು ಬೇಧ ಕಳೆದೋರಿದ್ದು ಕಾಣಿಸುತ್ತದೆ ಮೆಕ್ಡೊನಾಲ್ಡರ ಕೋಮಲ ಎವಾರ್ಡಿನ ಪ್ರಭಾವವಿದು

ಮೊನ್ನೆ ದಿನ ಅಸ್ಸಾಮದಲ್ಲಿ ಭೂಕಂಪವಾಯಿತೆಂದು ಒಂದು ವಾರ್ತೆ ರಾತ್ರಿ ಮಲಗಿದ್ದವರಿಗೆ ಗಾಬರಿಯಾಯಿತಂತೆ

ಜರ್ಮನಿಗೆ ವಸಾಹತುಗಳು ಬೇಕಂತೆ

ಜರ್ಮನಿಯ ನೂರೆಮ್ಬರ್ಗನಲ್ಲಿ ಹಿಟ್ಲರನ ಅಧ್ಯಕ್ಷತನದಲ್ಲಿ ಜರಗಿದ ನಾಜಿಗಳ ಪರಿಷತ್ತಿನಲ್ಲಿ ಜರ್ಮನಿಯು ವಸಾಹತುಗಳನ್ನು ಹಿಂದಕ್ಕೆ ಪಡೆಯಬೇಕೆಂಬ ನಿರ್ಣಯವಾಗಿರುತ್ತದೆ ಇನ್ನೊಂದು ಮಹಾಯುದ್ಧದ ಸಂಭವದಲ್ಲಿ ಜರ್ಮನಿಗೆ ಅವುಗಳನ್ನು ಉಪಯೋಗಿಸುವ ಉದ್ದೇಶವಿರುವುದಿಲ್ಲವಂತೆ

ಫಾರ್ಯಿನ್ 'ಲೀಜನಿನಲ್ಲಿಯ' ನರಕಗಳು

(೧೪ನೇ ಪುಟದಿಂದ ಮುಂದುವರಿದುದು)

ಹೊಡೆಯುವುದೊಂದೇ ಅಲ್ಲಿನ ರಕ್ಷಕರ ಕೆಲಸವಾಗಿತ್ತು ಬಹಳ ಭಾರವಾದ ಕಲ್ಲುಗಳನ್ನು ಬೆನ್ನ ಮೇಲಿರಿಸಿ, ಅಂಗಳದ ಒಂದು ಕೊನೆಯಿಂದಿನ್ನೊಂದು ಕೊನೆಗೆ ಓಡಿಸುತ್ತಿದ್ದರು ಹಲವರು ನಡುವಿನಲ್ಲೇ ಬೀಳುತ್ತಿದ್ದರು ರಕ್ಷಕನ ನೆಟ್ಟಗೆ ಹೋಗಿ ಚಾರುಕೋಲಿ ದೆರದೇಟಗಳನ್ನೂ ಒದೆಗಳನ್ನೂ ಕೊಡುವನು ಜೀವವಿದ್ದಲ್ಲಿ ಕೈಯಿಯೇಳುವನ ಇಲವಾದಲಿ ರಕ್ಷಕನು ಸದ್ದಿಲ್ಲದೇ ಆತನನ್ನು ಕಬರಸ್ಥಾನಕ್ಕೊಯ್ದು ಅವನ ಮೇಲೆ ಮಣ್ಣಿನ ರಾಶಿ ಹಾಕುವನು ಆದರೆ ಎಷ್ಟು ಬಡ ಕೈದಿಗಳು ಉಪವಾಸಿಗಳಾಗಿ, ಈ ರಕ್ಷಕರ ಕ್ರೂರತನಕೆ ಬಲಿಯಾದರೆಂಬುದನ್ನು ಹೇಳಲು ನನಗೆ ಬಾರದು

ಸಿಡಿ ಬೆಲ್ ಎಬೆಸ್ ನಲ್ಲಿಯ ಜೇಲಿನಲ್ಲಿನ ನನ್ನ ಕೋಣೆಯಂತೆಯೇ ಇದ್ದಿತು ಇಲ್ಲಿಯ ಕೋಣೆ ಆಹಾರವು ಸಹಿತ ಅದೇ ರೀತಿಯು [illegible] ಅದರ [illegible] ಮಾತ್ರ ಸ್ವಲ್ಪ ಭೇದವಿತ್ತು. ಈ ಜೇಲಿನಲ್ಲಿ ಎಲ್ಲರೂ ಮೊಣಕಾಲೂರಿ ಆಹಾರ ಸೇವಿಸಬೇಕಾಗಿತ್ತು. ಆಹಾರ ಸೇವಿಸಲು ಬರೇ ಐದು ನಿಮಿಷಗಳ ಸಮಯವು ದೊರಕುತಿತ್ತು ಆದರೂ ದೇವರ ದಯೆಯಿಂದ ಇಂತಹ ಎಲ್ಲಾ ಸಂಕಟಗಳಿಂದ ಪಾರಾಗಿ ಹೊರಬಂದಿರುತ್ತೇನೆ

ಈ ಜೇಲುಗಳಲ್ಲಿನ ಭಯಂಕರ ಅನ್ಯಾಯಗಳ ಕುರಿತು ಬರೆಯ ಕುಳಿತಲ್ಲಿ ಒಂದು ದೊಡ್ಡ ಪುಸ್ತಕವನ್ನೇ ತುಂಬಿಸಬಹುದು ಅದ ಯೋಧನಾಗಿದ್ದ ಓರ್ವ ನಿರಪರಾಧಿಯ ವಿಷಯ ಬರೆದು, ಈ ಲೇಖನವನ್ನು ಮುಗಿಸುತ್ತೇನೆ

ಆತನು ಆಸ್ಟ್ರಿಯಾದವನು ಇಂಡೋಚೈನಾದಲ್ಲಿನ ಸೇನಾದಳಕ್ಕೆ ಸೇರಿದ ಅವನು ಅಲ್ಲಿನ ಸಾರ್ಜಂಟನಾಗಿ ನೇಮಿಸಲ್ಪಟ್ಟ ಹಲವೇ ದಿನಗಳಲ್ಲಿ ಅದೇ ಊರಿನಲ್ಲಿದ್ದ ಒಬ್ಬ ಫ್ರೆಂಚ್ ಮಹಿಳೆಯನ್ನು ಪ್ರೀತಿಸ ತೊಡಗಿದ ಅವಳ ವಿವಾಹವು ಬಹಳ ಬಲಾತ್ಕಾರದಿಂದ ನಡೆದುದೆಂಬುದರ ಹೊರತು, ಆತನಿಗೆ ಆಕೆಯ ವಿಷಯ ಬೇರೇನೂ ತಿಳಿದಿರಲಿಲ್ಲ ಒಂದು ದಿನ ಮನೆಯಲ್ಲಿ ಇಬ್ಬರೂ ಕಾಫಿ ಕುಡಿಯುತ್ತಿರುವಾಗ್ಗೆ ಓರ್ವ ಸೇನಾಧಿಕಾರಿಯು ಬಂದು, ಈ ಸರ್ಜಂಟನಿಗೆ ಕೆನ್ನೆಗೊಂದೇಟಿತ್ತ ಸೇನಾಧಿಕಾರಿಯು ಆಕೆಯ ಪತಿ ಇದನ್ನರಿಯದೇ ಬಿದ್ದ ಪೆಟ್ಟಿಗೆ ಕೋಪಗೊಂಡು ಸಾರ್ಜಂಟನು ಅಧಿಕಾರಿಗೆ ಹೊಡೆದುಬಿಟ್ಟ ಅಧಿಕಾರಿಗೂ ಇದೇ ಬೇಕಾಗಿದ್ದಿತು ಕೂಡಲೇ ಆ ಅಧಿಕಾರಿಯ ನೇತೃತ್ವದಲ್ಲಿ ಆ ಸರ್ಜಂಟನ ವಿಚಾರಣೆಯಾಗಿ ೨೦ ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು. ಆತನನ್ನು ಮೂರು ವರ್ಷಗಳ ತನಕ ಸಂಕೋಲೆಗಳಿಂದಲೇ ಕೈಕಾಲುಗಳನ್ನು ಕಟ್ಟಿಟ್ಟಿದ್ದರು. ಒಮ್ಮೆಯಾದರೂ ಆತನ ಭಗ್ನಹೃದಯಯಾದ ಪ್ರಿಯತಮೆಗೆ ಆತನ ದರ್ಶನವಾಗಗೊಡಲಿಲ್ಲ ಆದರೆ ಆತನು ಅನುಭವಿಸುವ ವಿಚಿತ್ರ ಕಷ್ಟಗಳನ್ನು ಆಕೆಗೆ ತಿಳಿಸುತ್ತಿದ್ದರು ಇವನ್ನು ಕೇಳಿ, ಆಕೆಯ ಮನವು ಬೇಸತ್ತು ಕೊನೆಗೆ ಆಕೆಯು ಆತ್ಮಹತ್ಯೆ ಮಾಡಿಕೊಂಡಳು.

ಈ ಸುದ್ದಿಯು ಆ ಕೈದಿಯನ್ನು ಕೊಲ್ಲಬಹುದೆಂದೆಣಿಸಿ, ಇದನ್ನು ಆತನ ಕಿವಿಯ ತನಕ ಹೋಗಗೊಟ್ಟರು ಆದರೆ ಅದೇ ಸುದ್ದಿಯು ಆತನಿಗೆ ಜೀವದಾನ ಮಾಡಿತು ಜೀವಿಸಿರಬೇಕೆಂಬ ಆಶಾಂಕುರವನ್ನು ಎಸಿತ ಈಗ ಆತನ ತನ್ನ ಸಜೆಯನ್ನು ಮುಗಿಸಿ ಪುನಃ ಸೇನಾದಳದಲ್ಲಿದ್ದಾನೆ

ಮಾಂಟೆ ಕಿಸ್ತೋವಿನಂತೆ ಅವನು ಕೈಯಲ್ಲಿ ರಿವಾಲ್ವರ್ ಹಿಡಿದು ಆ ಸೇನಾಧಿಕಾರಿಯ ಬರವನ್ನು ಕಾಯುತ್ತಿದ್ದಾನೆ ಅವನ ಬಂದ ಇಬ್ಬರ ಭೇಟಿಯೂ ಆಯಿತೆಂದರೆ ಸರಿ! ಇಬ್ಬರಲ್ಲೊಬ್ಬರ ಶವವು ಭೂಪತಿತವಾಗುವುದು

ಹೊಟ್ಟೆಯ ಪೀಡೆಯಿಂದ ನಿದ್ರೆಯಿಲ್ಲದೆ ಗುತ್ತಿರಲಿಲ್ಲ

ನಿಮಗೆ ನಿದ್ರೆ ಸರಿಯಾಗಿ ಬರುವುದಿಲ್ಲವೋ, ಹಾಗಾದರೆ ಮಿಸೆಸ್ ಆರ್ ಬಿ. ಯವರ ಅನುಭವದಿಂದ ನಿಮಗೆ ಉಪಕಾರವಾಗಬಹುದು. ವಿಶ್ರಾಮವು ಏನೆಂಬುದು ಅನೇಕ ವರ್ಷಗಳ ಸಮಯ, ಈ ಸ್ತ್ರೀಗೆ ತಿಳಿದೆ ಇರಲಿಲ್ಲ. ಹೊಟ್ಟೆ ಪೀಡೆಯಿಂದ ಪ್ರತಿರಾತ್ರಿ ಆಕೆಯು ನಿದ್ರೆಯಿಲ್ಲದೆ ಕಳೆಯಬೇಕಾಯಿತು ಮೆಕ್ಲೀನ್ ಬ್ರೇಂಡ್ ಹುಡಿಯನ್ನು ಸೇವಿಸುವ ತನಕ, ಅವಳಿಗೆ ಇತರ ಯಾವತ್ತರಿಂದಲೂ ಶಮನ ದೊರಕಲಿಲ್ಲ

ಮೆಕ್ಲೀನ್ ಬ್ರೇಂಡಿನ ಸೇವನೆಯ ನಂತರ ಯಾವ ತರದ ಮಾರ್ಪಾಟಾಯಿತೆಂದರೆ, ಪ್ರಸಿದ್ಧವಾದ ಈ ಔಷಧಿಯು ರೋಗದ ಮೂಲವನ್ನೇ ಹುಡುಕಿ ಅದರ ನಾಶಮಾಡಿತು

ಹೊಟ್ಟೆಯ ಪದರಿನ ಉರಿತವು ಅದರಿಂದ ಮಾಯವಾಯಿತು ಉದರವಾಯುವು ಮಾಯವಾಯಿತು ದ್ರಾವಕಾಧಿಕ್ಯವು ಸರಿಹೊಂದಿತು ಹೊಟ್ಟೆನೋವೆ ಮಾಯವಾಯಿತು ಒಳ್ಳೆ ವಿಶ್ರಾಮಯುಕ್ತ ನಿದ್ರೆಯು ಬರಲಾರಂಭಿಸಿತು

ನಿಮಗೂ ನಿದ್ರೆಯು ಸರಿಯಾಗಿ ಬರದಿದ್ದರೆ ಅನಾವಶ್ಯಕವಾಗಿ ಮಾತ್ರೆಯಲ್ಲದ ಔಷಧಿಗಳ ಮೇಲೆ ಹಣವನ್ನು ವ್ಯಯಿಸಬೇಡಿರಿ ನಿಮ್ಮ ಹೊಟ್ಟೆಯನ್ನು ಸರಿಪಡಿಸಿರಿ ಇದಕ್ಕೆ ಹೆಚ್ಚೇನೂ ಬೇಕಾಗಿಲ್ಲ

Alex. C. Maclean

ಎಂಬ ಸಹಿಯಿಂದ ಕೂಡಿದ ಕೆಂಪು ಮುದ್ರೆಯುಳ್ಳ ಪೆಟ್ಟಿಗೆಯೊಳಗೆ ಬರುವ ಅದೆ ಸಹಿಯಿಂದ ಕೂಡಿದ ಲೇಬಲ್ ಇರುವ ಬಾಟ್ಲಿಯಲ್ಲಿ ಬರುವ ಖಾತ್ರಿಯಾದ ಮೆಕ್ಲೀನ್ ಬ್ರೇಂಡ್ ಹೊಟ್ಟೆ ಹುಡಿಯನ್ನು ಪಡಕೊಂಡರೆ ಎಲ್ಲವೂ ಸರಿಯಾಗುವುದು ಅದು ನಿಮ್ಮ ಹೊಟ್ಟೆಯನ್ನು ನಿರ್ಮಲಗೊಳಿಸುವುದರಿಂದ ನೀವು ಸುಖವಾಗಿ ನಿದ್ರಿಸುವಿರಿ

ಇದು ಬಿಲ್ಲೆಗಳಿಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರ್ಸ್‌ನಿಂದ ಇದನ್ನು ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಜೆ ಎಲ್ ಮೋರಿಸನ್ ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್

ಸ್ಟೇಂಡಾರ್ಡ ಬಿಲ್ಡಿಂಗ್ ಹೊರ್ನ್ಬಿ ರೋಡ್ ಮುಂಬಯಿ.

S No 72

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂದಾಪುರ ದ ಕ

ಬ್ರೇಂಚ್ ಆಫೀಸುಗಳು

ಕುಂದಾಪುರ,
ಕುಮಟಾ,
ಕೋಟೇಶ್ವರ,
ಬೈಂದೂರು,
ಗೋಕರ್ಣ,
ವೀರರಾಜೇಂದ್ರಪೇಟೆ,
ಸೋಮವಾರ ಪೇಟೆ,
ಶಿವಮೊಗ್ಗಾ,
ತರೀಕೆರೆ.

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ತೆರೆಯಲ್ಪಡುವುವು.

ಶಿವಮೊಗ್ಗಾ ತಾ 26 8 1937.
ತರೀಕೆರೆ , 30-8-1937.

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡಿಸಲ್ಪಡುವುವು.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಮ್ಮದೇ ಆಗಿರುವ ಅದರ್ಶಪ್ರಾಯವಾದ ಈ ಬೇಂಕಿನಲ್ಲಿಯೇ ನಿಮ್ಮ ವ್ಯವಹಾರಗಳನ್ನು ನಡಿಸಬೇಕಾಗಿ ಕೋರುತ್ತೇವೆ.

'Laxmi-Nivas' Buildings, Coondapoor, 8-1-1937.

The Agricultural & Industrial Bank, Ltd

ಬಂಗಾಳದಲ್ಲೂ ಮದ್ಯನಿಷೇಧ

ಕಾಂಗ್ರೆಸು ಪ್ರಾಂತ್ಯಗಳು ಮಾತ್ರವಲ್ಲದೆ ಇತರ ಪ್ರಾಂತ್ಯಗಳೂ ಮದ್ಯ ನಿಷೇಧವನ್ನು ಆಚರಿಸಬೇಕಾಗಿ ನಿರ್ಧರಿಸಿದಂತೆ ಕಾಣುತ್ತದೆ

ಬಂಗಾಳ ಸರಕಾರವು ಮದ್ಯ ಪ್ರತಿಭಂದಕವನ್ನು ಪ್ರಕೃತದಲ್ಲಿ ಪರೀಕ್ಷಾರ್ಥವಾಗಿ ಕೆಲವೆ ಡಿಸ್ಟ್ರಿಕ್ಟುಗಳಲ್ಲಿ ಈಗ ಜ್ಯಾರಿಗೆ ತಂದು, ನಂತರ ಕ್ರಮೇಣ ಅದನ್ನು ಸಮಸ್ತ ಪ್ರಾಂತ್ಯದಲ್ಲಿ ಆಚರಿಸಲ್ಪಡುವಂತೆ, ಸಾಧಿಸ ಪುದಾಗಿಯೂ, ಸಂಪೂರ್ಣ ಮದ್ಯ ಪ್ರತಿಭಂದಕವು, ತಮ್ಮ ಅವಧಿಯೊಳಗೆ ಪೂರೈಸುವ ಪ್ರಯತ್ನ ಮಾಡುವುದೆಂದೂ, ಮುಖ್ಯ ಮಂತ್ರಿ ಹಕ್ಕರ ಪ್ರಕಟಣೆಯಾಗಿರುತ್ತದೆ

ಕಾಂಗ್ರೆಸ್ ಧ್ವಜ

"ಕಾಂಗ್ರೆಸ್‌ಧ್ವಜವು ರಾಷ್ಟ್ರೀಯ ಧ್ವಜವು ಅದಕ್ಕೆ ಎಲ್ಲಾ ಪಕ್ಷಗಳ ಪ್ರೀತಿಯೂ ಮನ್ನಣೆಯೂ ದೊರಕಬೇಕು. ಆ ಧ್ವಜಕ್ಕಾಗಿ ಕಾಂಗ್ರೆಸ್‌ವಾಲರು ಪರಿಶ್ರಮಗಳನ್ನು ಅನು ಸಂಕಟಗಳನ್ನು ಅನುಭವಿಸಿ, ಅದು ಅವರ ಅತ್ಯಂತ ಪ್ರೀತಿಗೆ ಪಾತ್ರವಾಗಿ, ಅದು ಅವರದೆಂಬ ಭಾವನೆಯು ಅವರಲ್ಲಿದ್ದರೂ, ಅವರಲ್ಲಿ ಅದರ ಕುರಿತು ಪ್ರೀತಿಯು ಇರುವುದಾದರೆ, ಅವರು ಈ ಧ್ವಜವನ್ನು ಇತರರು ಉಪಯೋಗಿಸುವುದರ ಕುರಿತು ಆಕ್ಷೇಪ ಎತ್ತಲೇ ಬಾರದು ಪಕ್ಷಭೇದವಿಲ್ಲದೆ ಸರ್ವರೂ ಈ ರಾಷ್ಟ್ರೀಯ ಧ್ವಜವನ್ನು ಉಪಯೋಗಿಸಬೇಕು. ಅದೇ ರೀತಿ ಖಾದಿಯು ಒಂದೇ ಪಕ್ಷದ ಉಡುಪಾಗಬಾರದು ಹಿಂದೂ ಮುಸ್ಲಿಮ ಐಕ್ಯ, ಅಸ್ಪೃಶ್ಯತಾ ನಿವಾರಣೆ, ಮದ್ಯ ಪ್ರತಿಬಂಧಕ ಇತ್ಯಾದಿ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಖಾದಿಯು ಒಂದೆಂದು ಎಲ್ಲರೂ ಭಾವಿಸಬೇಕು" ಶ್ರೀ ರಾಜಗೋಪಾಲಾಚಾರ್ಯರು

ರೈತನ ಪ್ರಾಮುಖ್ಯತೆ

"ಹಿಂದೂದೇಶಕ್ಕಾಗಿ ಒಂದು ಮಹಾ ಕಾರ್ಯ ಸಾಧನೆಯು ಮಾಡಲಿದೆ ಅದಕ್ಕಾಗಿ ನಮ್ಮಲ್ಲಿ ಒಳ್ಳೇ ಆದರ್ಶಗಳೂ ಸಂಕಲ್ಪಗಳೂ ಇರಬೇಕು ಎಂಬುದಾಗಿ ಸಂಯುಕ್ತ ಪ್ರಾಂತ್ಯದ ರೈತರನ್ನು ಕುರಿತು, ಪಂಡಿತ ನೆಹರುಗಳವರು ಭಾಷಣಮಾಡಿರುವರು ಕಳೆದ ವಾರ ಅವರು ಸಂಯುಕ್ತ ಪ್ರಾಂತ್ಯದ ಅನೇಕ ಹಳ್ಳಿ ಪಟ್ಟಣಗಳಲ್ಲಿ ಸಂಚರಿಸಿ ೩೦, ೫೦ ಸಾವಿರ ರೈತರು ನೆರೆದಿರುವ ಸಭೆಯಲ್ಲಿ, ಹಿಂದೂದೇಶದ ಮುಂದಿರುವ ಸಮಸ್ಯೆ, ಅದರಲ್ಲಿ ರೈತನ ಪ್ರಾಮುಖ್ಯತೆ ಈ ವಿಷಯಗಳನ್ನು ತಿಳಿಸಿ, ಭಾಷಣ ಮಾಡಿರುವರು

ಬ್ರಿಟಿಷ ಸೈನ್ಯಬಲವು ಹೊರ ನಡೆಯಬೇಕು

'ಕೇಂದ್ರ ಎಸೆಂಬ್ಲಿಯಲ್ಲಿ ಸರದಾರ್ ಸಂತ ಸಿಂಗರವರು ಮಿಲಿಟರಿ ವೆಚ್ಚದಲ್ಲಿ ಕಡಿತವಾಗಬೇಕೆಂಬುದಾಗಿ ಸೂಚಿಸಿ, ತಂದ ಠರಾವು ಅಧಿಕ ಮತದಿಂದ ಮಂಜೂರಾಗಿರುತ್ತದೆ ಈ ವಿಚಾರದಲ್ಲಿ ಈ ಮೊದಲು ಸರಕಾರದೊಡನೆ ಸೇರುವ ಸದಸ್ಯರು ಕೂಡ ಕಾಂಗ್ರೆಸ್ಸಿನೊಡನೆ ಸೇರಿರುವರು. ಈ ವಿಚಾರದಲ್ಲಿ ಪ್ರಾಂತ್ಯಕೀಯ ಸರಕಾರಗಳು, ತಮಗೆ ಬ್ರಿಟಿಷ ಮಿಲಿಟರಿ ಅಗತ್ಯವಿಲ್ಲವೆಂಬುದಾಗಿ ಇಂಡಿಯಾ ಸರಕಾರಕ್ಕೆ ತಿಳಿಸಿ, ಅಲ್ಲಿಂದ ಬ್ರಿಟಿಷ ಮಿಲಿಟರಿಯನ್ನು ಹಿಂತಿರುಗಿಸುವಂತೆ ಒತ್ತಾಯಪಡಿಸಬೇಕಾಗಿ ಶ್ರೀ ಸತ್ಯಮೂರ್ತಿಯವರ ಪ್ರಕಟಣೆಯಾಗಿರುತ್ತದೆ.

೧೦೦೦ ಮಂದಿ ವಿದ್ಯಾರ್ಥಿಗಳು ಮುಷ್ಕರ ಹಿಡಿದಿರುವರು.

ಒಂದು ಸ್ತ್ರೀ ವಿದ್ಯಾರ್ಥಿಯ ಮೇಲೆ, ಮೇಲಿನ ತರಗತಿಯ ಓರ್ವ ಪುರುಷ ವಿದ್ಯಾರ್ಥಿಯು ಅತ್ಯಾಚಾರದ ಪರಿಣಾಮವಾಗಿ ಕರಾಚಿಯ ದಯಾರಾಮ ಜೇಠ್‌ಮಲ್‌ಸಿಂಧ ಕಾಲೇಜಿನಲ್ಲಿ ಒಂದು ಸಾವಿರ ಮಂದಿ ವಿದ್ಯಾರ್ಥಿಗಳು ಮುಷ್ಕರ ಹಿಡಿದಿರುವರಂತೆ.

ಅರಬಿಯವರಿಗೆ ಪಂಜಾಬಿನಿಂದ ಸಹಾಯ.

ಲಾಹೋರಿನ ಬಾದಶಹಾ ಮಸೀದಿನಲ್ಲಿ ಮುಸ್ಲಿಮರ ಪ್ರಚಂಡ ಸಭೆಯೊಂದು ಸೇರಿ ಈಗ ಅಧಿಕಾರದಲ್ಲಿರುವ ಮುಸ್ಲಿಮ ಯೂನಿಯನಿಷ್ಟ ಸರಕಾರದ ಮೇಲೆ ಅವಿಶ್ವಾಸವನ್ನು ಸೂಚಿಸಿಯೂ, ಪೆಲೆಸ್ತಿನದ ಅರಬಿಯರಿಗೆ ಸಹಾಯಾರ್ಥವಾಗಿ ಸ್ವಯಂಸೇವಕರ ಒಂದು ದಳವನ್ನು ರಚಿಸಬೇಕಾಗಿಯೂ ನಿರ್ಣಯಗಳಾದವು. ಶ್ರೀ ಕೆ ಎಲ್ ಗುಭಾರವರು ಅಧ್ಯಕ್ಷರಾಗಿದ್ದರು

ತನ್ನ ಸಂಬಂಧಿಕರು ತನ್ನ ಒಂದೇ ಒಂದು ಮಗಳನ್ನು ತನ್ನ ಇಚ್ಛೆಗೆ ವಿರೋಧವಾಗಿ ೬೦ ವರ್ಷ ಪ್ರಾಯದವನೊಡನೆ ವಿವಾಹ ನಡೆಯಿಸಿದುದರಿಂದ, ಲಕ್ನೋ ನಗರದ ಬ್ರಾಹ್ಮಣನೊಬ್ಬನು ಪ್ರಾಣತ್ಯಾಗ ಮಾಡಿರುವನು.

ಅಸ್ಸಾಮಿನ ಅಸೆಂಬ್ಲಿಯ ಕಾಂಗ್ರೆಸ್ ಪಕ್ಷದವರು ಒಂದು ಪತ್ರಿಕೆಯನ್ನು ಹೊರಡಿಸಲಿದ್ದಾರೆ ಸಧ್ಯದಲ್ಲಿ ಈ ಪ್ರಾಂತ್ಯವು ಕೂಡ ಕಾಂಗ್ರೆಸ್ ಪ್ರಾಂತ್ಯವಾಗುವ ಸಂಭವಗಳಿವೆ ಎಂದು ತಿಳಿದು ಬರುತ್ತದೆ

ಬಾಬರನನ್ನು ಅನ್ನುಯಿಸಿದವನು

ಮೊಗಲ್ ಸಾಮ್ರಾಜ್ಯ ಸ್ಥಾಪಕನಾದ ಬಾಬರನು ತನ್ನ ಮಗನನ್ನು ಒಂದು ಭಯಂಕರ ಪೀಡೆಯಿಂದ ರಕ್ಷಿಸಲು, ತನ್ನ ಜೀವನವನ್ನು ಕೊಡಲು ಸಿದ್ಧನಿದ್ದ ಕಥೆಯೊಂದು ನೀವು ಕೇಳಿರಬಹುದು ಹಾಗೆನೆ ಲಕ್ನೋ ನಗರದ ಮನ್ನಲಾಲ ಎಂಬಾತನ ಇವತ್ತಿಗೆ ಬಹಳ ಸಮಯದಿಂದ ನರಳುತ್ತಿರುವ ತನ್ನ ಮಗನನ್ನು ರಕ್ಷಿಸಿದರೆ, ತನ್ನ ನಾಲಿಗೆಯ ತುಂಡನ್ನು ತೆಗೆದು ದೇವಿಗೆ ಅರ್ಪಿಸುವೆನು ನಾಲಿಗೆ ಕಡಿದುದರಿಂದ ರಕ್ತಸ್ರಾವವಾಗಿ ಪ್ರಜ್ಞೆ ತಪ್ಪಿ ದೇವಿಯ ಗುಡಿಯಲ್ಲಿ ಬೀಳುವವನಾದನು ಈಗ ಅವನು ತನ್ನ ಮಗನೊಡನೆ ಆಸ್ಪತ್ರೆಯಲ್ಲಿರುವನು

ಪತಿಗಾಗಿ ಪ್ರಾಣವನ್ನರ್ಪಿಸಿದ ಸತಿ.

ಪತಿಗಾಗಿ ಪ್ರಾಣವನ್ನರ್ಪಿಸಿದ ಓರ್ವ ಪತ್ನಿಯ ಕಥೆಯು ಲಾಹೋರಿನಿಂದ ಬಂದಿರುತ್ತದೆ ಕುಂದನ್ ಸಿಂಗೆಂಬವನ ತನ್ನ ಸಂಬಂಧಿಕರ ಇಚ್ಛೆಗೆ ವಿರೋಧವಾಗಿ ತನ್ನ ಮಗಳನ್ನು ಓರ್ವ ತರುಣನಿಗೆ ಕೊಟ್ಟು ವಿವಾಹ ನಡೆಸಬೇಕಾಗಿ ನಿಶ್ಚಯಿಸಿದ್ದನು ರೇಗಿದ ಸಂಬಂಧಿಕರು ಆತನನ್ನು ಹತಮಾಡಬೇಕಾಗಿ ಸಂಕಲ್ಪಮಾಡಿಕೊಂಡು, ಒಂದು ದಿವಸ ರಾತ್ರಿ ಅವನ ಮನೆಯನ್ನು ಹೊಕ್ಕಿದರು. , ಕುಂದನ್ ಸಿಂಘನ ಮಡದಿಯು ಎಚ್ಚರವಾಗಿದ್ದವಳು ಒಂದು ದೊಣ್ಣೆಯನ್ನು ಹಿಡಿದು, ಅಪಾದಿತರಾದವರೊಡನೆ ಮನೆಯಲ್ಲಿರುವ ಇತರರು ಏಳುವ ತನಕ ಕಾದಾಡಿದಳು ಆದರೆ ಅವಳಿಗೆ ಭಯಂಕರತರದ ಘಾತುಕವಾಗಿದ್ದು, ಆಸ್ಪತ್ರೆಗೆ ಒಯ್ಯಲ್ಪಟ್ಟು ಅಲ್ಲಿ ಮೃತಳಾದಳು

ಅರಬರ ಉಪಕಾರ ಸ್ಮರಣೆ.

ಪೆಲೆಸ್ತೀನದ ಅರಬಿಯರ ಸ್ವಾತಂತ್ರ್ಯ ಚಳವಳದೊಡನೆ ಸಹಾನುಭೂತಿ ತೋರಿಸಿ, ಹಿಂದೂದೇಶದಲ್ಲಿ ಅನೇಕ ಪ್ರದರ್ಶನಾ ಸಭೆಗಳು ಇತ್ತೀಚೆಗೆ ನಡೆದು, ರಾಷ್ಟ್ರಪತಿ ಜವಾಹರಲಾಲರು ಪೆಲೆಸ್ತೀನದ ಗ್ರೇಂಡ್ ಮುಫ್ತಿಗೆ ಸಹಾನುಭೂತಿಯನ್ನು ಸೂಚಿಸಿ ತಂತಿಯನ್ನು ಬಿಡಲು, ಅವರಿಂದ ಹಿಂದೂದೇಶದ ಸಹಾನುಭೂತಿಗಾಗಿ ಉಪಕಾರ ಸ್ಮರಣೆಯುಳ್ಳ ತಂತಿಗಳು ಬಂದಿವೆ "ಹಿಂದೂದೇಶಕ್ಕೂ ಪೆಲೆಸ್ತೀನಕ್ಕೂ ಒಂದೇ ತೆರದ ಪೀಡೆಗಳು ಬಾಧಿಸುತ್ತಿವೆ. ಸಾಮ್ರಾಜ್ಯಶಾಹಿ ಪ್ರಬಲಕರಣೆ. ಆದರಿಂದ ಹಿಂದೀಯರ ಸಹಕಾರದಿಂದ ಸಧ್ಯದ ಅಪಾಯದಿಂದ ಪಾರಾಗುವೆವೆಂದು ನನ್ನ ಆಶಯ' ಎಂದು ಆತನು ಕಳುಹಿಸಿದ ಉಪಕಾರಸ್ಮರಣೀಯ ಸಂದೇಶದ ಅಭಿಪ್ರಾಯವಾಗಿರುತ್ತದೆ.

ಜಾಡುಮಾಲಿಗಳ ಮೇಲೆ ಜಮೀನ್ದಾರರ ಅತಿಕ್ರಮ

ಸಂಯುಕ್ತ ಪ್ರಾಂತ್ಯದ ರಾಟೂಲಿ ಎಂಬಲ್ಲಿ ಜಮೀನ್ದಾರರು ಕೆಲವರು ಜಾಡುಮಾಲಿಯೊಬ್ಬನ ಮನೆಯ ಮೇಲೆ ದಾಳಿ ನಡೆಯಿಸಿ, ಕಟ್ಟಡದ ಸಾಮಾನುಗಳನ್ನು ಬಲಾತ್ಕಾರದಿಂದ ಕೊಂಡೊಯ್ದು, ಆ ಕುರಿತು ಸಾಕ್ಷಿ ಹೇಳುವವರನ್ನು ಗದರಿಸಿದುದು, ಅನೇಕ ಜಾಡುಮಾಲಿಗಳ ಮೇಲೆ ಸಾಮಾಜಿಕ ಬಹಿಷ್ಕಾರ ತಂದ ಕುರಿತು ವರದಿಯನ್ನು ಡೆಲ್ಲಿಯ ಪ್ರೊ ಇಂದ್ರರವರು ಪ್ರಧಾನ ಮಂತ್ರಿ ಪಂತರವರಿಗೆ ಮಾಡಿರುವರು

ಹಿಂದೂದೇಶದೊಡನೆ ವ್ಯಾಪಾರ ನಡೆಯಿಸದಿರುವುದು ಉತ್ತಮ

'ಹಿಂದೂದೇಶದೊಡನೆ ವ್ಯಾಪಾರವನ್ನು ಬೆಳೆಯಿಸಿ ಜಾಪಾನಿನ ಮತ್ತು ಹಿಂದೂದೇಶದ ಕೆಲಸಗಾರರ ಸ್ಥಿತಿಯು ನಮ್ಮ ಕೆಲಸಗಾರರಿಗೆ ತರುವ ಬದಲು ಅವರೊಡನೆ ವ್ಯಾಪಾರ ನಡೆಯಿಸದಿರುವುದೇ ಲೇಸು ಎಂದು ಲಂಕಶಯರಿನ ಮಹಾಸೀಯರೊಬ್ಬರು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಬರೆದಿರುವರು. ಹಿಂದೂದೇಶದ ವ್ಯಾಪಾರದಿಂದ ಅವರಿಗೆ ಸುಖ ವೈಭವಗಳಿಂದಿರಲು ಒಳ್ಳೇ ಧಾರಣೆ ದೊರಕದಿರುವುದೇ ಈ ಅಸಮಾಧಾನಕ್ಕೆ ಕಾರಣವಂತೆ

ಜರ್ಮನಿಯು ತನ್ನ ಆಮದನ್ನು ಕಡಿಮೆಮಾಡುವುದು.

ತಾನು ಈ ವರೆಗೆ ಆಮದು ಮಾಡುತ್ತಿದ್ದ ಅನೇಕ ಕಾರಣ ಸಾಮಗ್ರಿಗಳನ್ನು ರಸಾಯನ ಶಾಸ್ತ್ರದ ಮೂಲಕ ಸ್ವದೇಶದಲ್ಲೇ ತಯಾರಿಸುವ ಅನೇಕ ಉಪಾಯಗಳು ಜರ್ಮನಿಯಿಂದ ಕಂಡುಹಿಡಿಯಲಾಗಿವೆ ವಿಸಿನ ಕೊಗಲಿನಿಂದ ಚರ್ಮವನ್ನು ತಯಾರಿಸುವುದು ಅದರಿಂದ ಪಾದಚಾರಿ ಇತ್ಯಾದಿಗಳನ್ನು ತಯಾರಿಸುವುದು, ಮೇಲಿನ ಪರಿಶೋಧನೆಯಲ್ಲಿ ಒಂದ ಪ್ರಾಮುಖ್ಯ ಸಂಶೋಧನೆಯಾಗಿರುತ್ತದೆ

ಕಲ-ಪಕ್ಷಿಗಳ ಹಾರಾಟದ ವೇಗ—

ಪಕ್ಷಿಗಳ ಹಾರಾಟದ ವೇಗವನ್ನು ಬಹಳ ಪರಿಶ್ರಮ ವಹಿಸಿ ಅಮೇರಿಕಾದ ಸಾಗುವಳಿ ಇಲಾಖೆಯವರು ಕಂಡುಹಿಡಿದಿರುವರು ಆಧುನಿಕ ಮೋಟಾರು, ರೈಲು ಇತ್ಯಾದಿ ಯಂತ್ರಗಳಿಗಿಂತ ಅಧಿಕವಾದ ವೇಗದಿಂದ ಚಲಿಸುವ ಪಕ್ಷಿಗಳಿವೆ ಎಂದು ಅವರು ಕಂಡುಹಿಡಿದಿರುವರು. ದೊಡ್ಡ ಗಿಡುಗ ಹಕ್ಕಿಯು ಆಹಾರವನ್ನು ಹುಡುಕಾಡಿ ಹೋಗುತ್ತಿರುವಾಗ ತಾಸು ಒಂದರ ೧೭೫ ಮೈಲುಗಳ ಪ್ರಕಾರ ಚಲಿಸುತ್ತದಂತೆ. ಈ ಹಕ್ಕಿಗೆ ಅವರ ಪಟ್ಟಿಯಲ್ಲಿ ಪ್ರಥಮ ಸ್ಥಾನವು ದೊರಕಿರುತ್ತದೆ ನಂತರ ಬರುವ ಹಕ್ಕಿಯು ತಾಸು ಒಂದರ ೧೨೦ ಮೈಲು ಚಲಿಸಬಲ್ಲುದಂತೆ!

— —

ಭೂಮಿಯು ಗೋಳಾಕಾರದಲ್ಲ—ಅದು ಸಮಸ್ಥಳ ಪ್ರದೇಶವೆಂದು ಅಮೇರಿಕಾದ ಓರ್ವ ವಿಚಿತ್ರ ವೈಜ್ಞಾನಿಕ ವಾದ.

ರೆಡಿಯಮ್ ಲೋಹವು ಕೆಲಿಫ್ಹೋರ್ನಿಯ ಒಂದೆಡೆ ಧಾರಾಳವಾಗಿರುವುದಂತೆ ಅದರಿಂದ ಈಗ ಗ್ರೇಮು ಒಂದರ ರೂ ೫೦ ಸಾವಿರ ಆಗಿರುವ ರೆಡಿಯಮ್ಮಿನ ಧಾರಣೆಯು ಸಗ ಅರ್ಧಕ್ಕೆ ಇಳಿಯಬಹುದಂತೆ ಈ ರೆಡಿಯಮ್ ಲೋಹವನ್ನು ಮೊದಲಾಗಿ ಕಂಡುಹಿಡಿದವರು ಮೆಡಮ್ ಕರಿ ಎಂಬ ಫ್ರೆಂಚ ಸ್ತ್ರೀಯು ಇದರಿಂದ ಕೆನ್ಸರ್ ರೋಗವನ್ನು ಗುಣಪಡಿಸಬಹುದಂತೆ

ಪೆರಿಸ್ ನಗರದಲ್ಲಿ ವೇದಾಂತ

ಸ್ವಾಮಿ ಸಿದ್ಧೇಶ್ವರಾನಂದರವರು ಪೆರಿಸ್ ನಗರದಲ್ಲಿ ಒಂದು ವೇದಾಂತ ಕ್ಷೇತ್ರವನ್ನು ಸ್ಥಾಪಿಸಲು ಅತ್ತ ಕಡೆಗೆ ತೆರಳಿ ಇಂದಿಗೆ ಬಹಳ ಸಮಯವಾಗಿರುತ್ತದೆ. ತಮಗೆ ಅಲ್ಲಿ ಒಳ್ಳೇ ಪ್ರೋತ್ಸಾಹವು ದೊರಕಿರುತ್ತದೆ ವಿನಯಪೂರ್ವಕ ಸ್ವಾಗತವು ದೊರಕಿರುತ್ತದೆ ವೇದಾಂತದ ಪ್ರಚಾರದ ಕುರಿತು ಅಲ್ಲಿ ಒಳ್ಳೇ ಅನುಕೂಲ ಅವಕಾಶಗಳಿವೆ ಶ್ರೀ ರಾಮಕೃಷ್ಣ, ಶ್ರೀ ವಿವೇಕಾನಂದ ಈ ಮಹಾ ವ್ಯಕ್ತಿಗಳ ಜೀವನ ಚರಿತ್ರೆಯಲ್ಲಿ ಅಲ್ಲಿನವರಿಗೆ ಹೆಚ್ಚು ಆಶಕ್ತಿಯಿರುವುದು, ತಮ್ಮ ಆಧ್ಯಾತ್ಮಿಕ ಇತ್ಯಾದಿ ಬೆಳವಣಿಗೆಯನ್ನು ಮಾಡಿಕೊಳ್ಳಲು, ಎಂಬುದಾಗಿ ಸ್ವಾಮಿಜಿಯವರ ಪತ್ರವು ವೇದಾಂತ ಕೇಸರಿ ಎಂಬ ಪತ್ರಿಕೆಗೆ ಬಂದಿರುತ್ತದೆ

ಕುರುಗಳನ್ನೂ, ಹುಣ್ಣುಗಳಾದ ಕಾಲನ್ನು ಗುಣಪಡಿಸಿರಿ.

ಝಾಂಬಕಿನಿಂದ ಕಲೆಗಳು ನಿಲ್ಲುವುದಿಲ್ಲ.

ನಿಮ್ಮಲ್ಲಿ ಕುರುಗಳು ಹುಣ್ಣುಗಳು ವೇದನಾಮಯ ಕಾಲು ಇತ್ಯಾದಿ ಉಂಟಾದರೆ ರೋಗ ಅಂಟಿದ ಭಾಗಕ್ಕೆ ಝಾಂಬಕನ್ನು ಹಚ್ಚಿರಿ ಆದರಿಂದ ನೋವು ಮಾಯವಾಗುವುದು ಎಲ್ಲಾ ಬಗೆಯ ಉರಿತ ತುರಿತವು ದೂರವಾಗುವುದು ಅಲ್ಲಿರುವ ವಿಷ ಪದಾರ್ಥಗಳನ್ನು ಹೊರಗೆಳೆಯುವುದು ವಿಷಮಯ ಕ್ರಿಮಿಗಳನ್ನು ನಾಶಪಡಿಸಿ, ಹೊಸ ಗ್ರಂಥಿಗಳು ಉಂಟಾಗುವಂತೆ ಝಾಂಬಕು ಸಹಕರಿಸುತ್ತದೆ ಅದು ಬೇಗನೇ ಯಶಸ್ವಿಯಾಗಿ ಗುಣಪಡಿಸುವುದು ಗುಣವಾದ ನಂತರ ಕಲೆಗಳು ನಿಲ್ಲಲಾರವು ಯಾವತ್ತೂ ಗಾಯ, ಕಚ್ಚು, ತುರಿಕಜ್ಜಿ ಇತ್ಯಾದಿಗಳಿಗೆ ಝಾಂಬಕನ್ನು ಉಪಯೋಗಿಸಿ, ಉತ್ತಮ ತರದ ಉಪಕಾರವನ್ನು ಹೊಂದಬಹುದು ಎಲ್ಲಾ ಔಷಧಿವ್ಯಾಪಾರಿಗಳಲ್ಲಿ ಝಾಂಬಕ್ ರೂ. ೨—೪—೦ರಂತೆ ಸಿಗುತ್ತದೆ, ಏಜಂಟ್ಸ್—

ಮೆಸರ್ಸ ದಾಧಾ ಎಂಡ್ ಕೊ, ಪಿ. ಟಿ. ಮದ್ರಾಸು.

ಝಾಂಬಕ್

Zam Buk

ಝಾಂಬಕಿನಲ್ಲಿ ಪ್ರಾಣಿಗಳ ಕೊಬ್ಬಿಲ್ಲ.

[illegible] ಕಾಲಕ್ಷೇಪ ೩
[illegible] ೪
[illegible] ೫
ಸಂಪಾದಕೀಯ
ಮದ್ಯಪಾನ ನಿರೋಧ ೧೦
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು ೧೧
ಜಿಲ್ಲೆಗಳಿಂದ ಸಮಾಚಾರ ೧೪
ತಾಲೂಕುಗಳಿಂದ ,,
ಫ್ರಾನ್ಸ್ ದೇಶದಲ್ಲಿಯ ನರಕಗಳು ೧೮

ಸ್ವದೇಶಾಭಿಮಾನಿ

ತಾ. ೧೭ನೆ ಶುಕ್ರವಾರ ಸಪ್ಟಂಬರ ೧೯೩೭

ಮದ್ಯಪಾನ ನಿರೋಧ

ಒಕ್ಟೋಬರ ತಿಂಗಳ ಮೊದಲನೆ ತಾರೀಕಿನಿಂದ ಸೇಲಮ್ ಜಿಲ್ಲೆಯಲ್ಲಿ ಮದ್ಯಪಾನವನ್ನು ನಿರೋಧಿಸುವರೆ ಸರಕಾರವು ನಿರ್ಧರಿಸಿ, ತತ್ಸಂಬಂಧವಾಗಿ ಎಲ್ಲ ಅಪ್ಪಣೆಗಳನ್ನು ಹೊರಡಿಸಿರುವುದು. ಗಾಢವಾಗಿಯೂ ಸಂಪೂರ್ಣವಾಗಿಯೂ ಈ ಅಪ್ಪಣೆಗಳು ತುಂಬ ಕೂಲಂಕಷಗಳನ್ನು ವಿವರಿಸಿಯೆ ಹೊರಡಿರುವುದನ್ನು ನೋಡಿದರೆ, ಹಿಂದೆ ಮಂತ್ರಿಯವರು ತಿಳಿಸಿದಂತೆ, ಸರಕಾರವು ಈ ಅಪ್ಪಣೆಗಳನ್ನು ಜ್ಯಾರಿಗೆ ತರಲು ದೃಢಸಂಕಲ್ಪ ಮಾಡಿರುವಂತೆ ತೋರುತ್ತದೆ.

ಸರಕಾರದ ಕಟ್ಟಪ್ಪಣೆಗಳನ್ನು ಪಾಲಿಸುವುದಕ್ಕೆ ಜನರೂ ಒಮ್ಮತ ವಿಧೇಯತೆಯನ್ನು ತೋರಿಸುವ ಹಾಗೆ, ಅಂತಹ ಅಪ್ಪಣೆಗಳು ಎಲ್ಲರ ಮೇಲೂ ಒಂದೇ ಸಮಾನವಾದ ರೀತಿಯಲ್ಲಿ ಜ್ಯಾರಿಗೆ ಬರುವಂತಾಗಬೇಕು. ಸೀಸೆ ತುಂಬಿದ ಮದ್ಯವನ್ನು ಮಾತ್ರ ಲೈಸನ್ಸು ಪಡೆದವರಿಗೆ ದೊರಬಹುದು; ಅವರೂ ಅದನ್ನು ಮನೆಗೆ ಒಯ್ದು ನಿಶ್ಚಿತ ರೀತಿಯಲ್ಲಿ ಕುಡಿಯಬಹುದು; ಇಂತಿಷ್ಟು ಸೀಸೆ ಮನೆಯಲ್ಲಿಟ್ಟುಕೊಳ್ಳಬಹುದು; ಲೈಸನ್ಸುಗಳಿಗೆ ಕೂಡಲೆ ಅರ್ಜಿ ಬರೆದುಕೊಳ್ಳಬೇಕು. ಎಂದೇ ಮೊದಲಾಗಿ ಅಪ್ಪಣೆ ಕೊಟ್ಟಿರುವುದರಿಂದ, ದೇಶೀಯ ಮದ್ಯದ ಬದಲಾಗಿ ಪರದೇಶೀ ಮದ್ಯವನ್ನು ತುಂಬ ಹಣ ಕೊಟ್ಟು, ಹಿಂದೆ ಕುಡಿಯದಿರದ ಪರದೇಶೀ ಮದ್ಯವನ್ನು ಕುಡಿಯುವ ಅಭ್ಯಾಸದಿಂದ ಇರಲು ಇದು ಲೈಸನ್ಸ್ ಕೊಟ್ಟಂತಾಗಲಾರದೆ? ಬಡವರು ನೂರು ಮಂದಿ ಒತ್ತಾಯದಿಂದ ಕುಡಿತವನ್ನು ಬಿಟ್ಟಾಗ, ಕೆಲವು ಹತ್ತು ಮಂದಿ ಪರದೇಶೀ ಮದ್ಯಕ್ಕೆ ಗಂಟಲೊಡ್ಡಿದರೆ ಹೇಗಾದೀತು? ಲೈಸನ್ಸಿಗೆ ಹತ್ತು ರೂಪಾಯಿ ಇಟ್ಟು, ಲೈಸನ್ಸಿನ ಶರ್ತಗಳೂ ಬಲವಾಗಿರಿಸಿದುದು ತೃಪ್ತಿಕರವೇ. ಪರದೇಶೀಯರಿಗೆ ಕುಡಿತಕ್ಕಾಗಿ ಈ ಸವಲತ್ತುಗಳನ್ನು ಕೊಟ್ಟಿರುವ ವಿಧಾನದಿಂದ ಅವರ ಮಟ್ಟಿಗೆ ನಾವೇನೂ ದೂರಲಾರೆವು. ಅವರ ಆಹಾರವೂ ಅಭ್ಯಾಸವೂ ಒಂದೇ ಆಗಿರುವಾಗ, ಯಾರೇನೂ ಮಾಡಲಾಗುವುದಿಲ್ಲ. ಮುಂದೆ, ಮದ್ಯಪಾನವನ್ನು ಪರಕೀಯರಿಗೆ ಅವರ ಅವಿಭಾಗವೆಂದೇ ಬಿಟ್ಟುಕೊಡುವುದರಿಂದ ಇತರರಿಗೇನೂ ಬಾಧಕವಿಲ್ಲ. ಅವರಲ್ಲಿಯೂ ನಿರೋಧಿಗಳು ಇದ್ದಾರೆ; ಸಂಸ್ಥೆಗಳೂ ಇವೆ. ವಿವೇಚನೆಯು ಅವರಲ್ಲೂ ಇದೆ. ಸುಶಿಕ್ಷಿತ ದೇಶೀಯರು ಮದ್ಯ ಮುಟ್ಟಲಾರದಿರುವಾಗ, ಅವರು ತಾವಾಗಿ ಆ ಅವಮಾದ ಹೊತ್ತು [illegible] ಮದ್ಯಕ್ಕೆ ಬಲಿ ಬಿದ್ದು ಕೊಳ್ಳುವಂತೆ ದುರಭ್ಯಾಸದಿಂದ ಮಹಾ ವ್ಯಸನಕ್ಕೀಡಾಗಲು ಅವಕಾಶ ಕೊಡುವುದು ಸಲ್ಲದು.

ಅಲ್ಲಲ್ಲಿ ನಿವಾರಣಾ ಕಮಿಟಿಗಳನ್ನು ಸ್ಥಾಪಿಸಿರುವುದು ಜನಾಭಿಪ್ರಾಯವನ್ನು ಈ ಕಡೆ ಸೆಳೆಯುವ ಉದ್ದೇಶದಿಂದಾಗಿದೆ ಎಂದೇ ತಿಳಿಯಬೇಕಾಗಿದೆ. ಕಾಗದದ ಮೇಲೆ ಬರೆದ ಈ ಕ್ರಮವು ಬಹು ಅಂಥವಾಗಿ ಸುಲಭದಲ್ಲಿ ಜಯ ಕೊಡುವಂತಾಗಿ ತೋರುವುದು. ಆದರೆ, ಈ ಕಮಿಟಿಗಳ ಸಹಾಯವು ಬಲುದೂರ ಬರುವಂತಿಲ್ಲವೆಂದು ಸರಕಾರಕ್ಕೆ ವಿದಿತವಾಗದಿರದು. ನಮ್ಮ ಹುಟ್ಟುಗುಣವು ನಮ್ಮನ್ನು ಪಕ್ಕನೆ ಇತರರ ಮೇಲೆ ದೂರು ಹೊತ್ತು ಅವರನ್ನು ದಂಡನೆಗೆ ಒಳಪಡಿಸುವುದಕ್ಕೆ ಒಪ್ಪದು. ರೈಲ್ವೆ ಪ್ರಯಾಣಕಾಲದಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡುವ ದಂಡ ದರಿದ್ರರ ಕಡೆಗೆ, ನಾನಾ ಅಪರಾಧಗಳನ್ನು ಮಾಡಿ ಮೇಲಿನಿಂದ ತಪ್ಪಿಸಿಕೊಳ್ಳುವ ಪುಂಡರ ಕಡೆಗೆ ನಮ್ಮ ಕಳು ಸಾಜನಿಕ ದಾಕ್ಷಿಣ್ಯವು ಬಹಳವಾಗಿರುವ ಕಾರಣವೇ ದಿಂಡತನವೂ ಪುಂಡಾಟಿಕವೂ ಬೇಗನೆ ಕುಂದುವ ಹಾಗೆ ಇನ್ನೂ ಕಾಲವು ಒದಗಿಲ್ಲ. ಈ ಕರುಣಾಕಟಾಕ್ಷದಿಂದ ನಾಗರಿಕಧರ್ಮಬುದ್ಧಿಯು ಕೊಂಚ ಸಡಿಲಿಕೊಂಡು ಹೋಗುವ ಹಾಗಿದೆ. ಜನತೆಯಲ್ಲಿ ಸಾಮಾನ್ಯ ಕರ್ತವ್ಯ ಬುದ್ಧಿಯು ಸರಿಯಾಗಿ ಹರಡುವವರೆಗೆ ಪೋಲಿಸ್ ಕರ್ತವ್ಯಗಳನ್ನು ಮಾಡಲು ಪೋಲೀಸರನ್ನು ನಿಯೋಜಿಸಲೇ ಬೇಕಾಗುವುದು. ಪೋಲಿಸರಿಗೂ ಅವರ ಕರ್ತವ್ಯವನ್ನು ಸರಿಯಾಗಿ ಕೈಗೊಳ್ಳುವಂತೆ ಬೋಧಿಸಬೇಕಾಗುವುದು, ಹೊರತು ಅಬಕಾರೀ ಪೋಲಿಸರನ್ನು ಸೇಲಮ್ ಜಿಲ್ಲೆಯಿಂದಲೇ ವಜಾಮಾಡಿ ಮತ್ತೆಲ್ಲಿಗೂ ವರ್ಗಾಯಿಸಿದುದು ಹಲವು ಅನುಭವಿಗಳ ಅಭಿಪ್ರಾಯಕ್ಕೆ ಸರಿಯಾಗಿ ತೋರಿದುದಿಲ್ಲ.

ಹಳ್ಳಿಗಳಲ್ಲಿ ನೀರಿನ ಸರಾಬರಾಯಿ.

ಹಳ್ಳಿಗಳಿಗೆ ಸ್ವಚ್ಛವಾದ ನೀರನ್ನು ಒದಗಿಸುವ ಕುರಿತು ಒಂದು ಯೋಜನೆಯು ಮದರಾಸು ಸರಕಾರದಿಂದ ಹೊರಡಿಸಲ್ಪಡುವುದೆಂದು ತಿಳಿದು ಬರುತ್ತದೆ. ಈ ಬಗ್ಗೆ ಆರೋಗ್ಯಖಾತೆಯ ಡ್ಯಾರೆಕ್ಟರರಿಂದಲೂ ಸೆನಿಟರಿ ಇಂಜಿನಿಯರುಗಳಿಂದಲೂ ಸೂಚನೆಗಳು ಕರೆಯಲಾಗಿವೆ. ಈ ಯೋಜನೆಯು ಐದು ವರ್ಷಗಳ ಸಮಯ ನಡೆಯುವುದಂತೆ.

ಅಂಡಮಾನದಲ್ಲಿರುವ ಮದರಾಸಿ ಕೈದಿಗಳು.

ಅಂಡಮಾನದಲ್ಲಿರುವ ಮದರಾಸಿ ಕೈದಿಗಳನು ಮರುಸ್ವದೇಶಕ್ಕೆ ತರುವುದು ಖಚಿತವಾಗಿರುವುದೆಂದು ತಿಳಿದುಬರುತ್ತದೆ.

ಹರಿಜನ ಉತ್ಸವ.

ಹರಿಜನ ಸೇವಾ ಸಂಘದ ಥಕ್ಕರ್ ಬಾಪಾರವರು ಈ ಕೆಳಗಿನ ಒಂದು ಪ್ರಕಟನೆಯನ್ನು ಮಾಡಿರುವರು.

೨೪ನೆ ಸಪ್ಟಂಬರದಿಂದ ೨ನೇ ಒಕ್ಟೋಬರದ ವರೆಗೆ ಹರಿಜನ ಉತ್ಸವವಾಗಿ ಆಚರಿಸಲಾಗಬೇಕು. ಈ ಅವಧಿಯು ಹರಿಜನ ಚಳವಳದ ಚರಿತ್ರೆಯಲ್ಲಿ ಪ್ರಾಮುಖ್ಯಸ್ಥಾನವನ್ನು ಹೊಂದಿರುತ್ತದೆ.

೨೪ನೆ ಸಪ್ಟಂಬರ ೧೯೩೨ರಲ್ಲಿ ಪೂನಾ ಕರಾರು ಸಹಿ ಹಾಕಲ್ಪಟ್ಟಿತು, ಅದೇ ವರ್ಷದ ಸಪ್ಟಂಬರ ೨೬ರಲ್ಲಿ ಅದು ಬ್ರಿಟಿಷ ಪಾರ್ಲಿಮೆಂಟಿನಿಂದ ಸ್ವೀಕರಿಸಲ್ಪಟ್ಟಿತು. ೧೯೩೨ನೇ ಸಪ್ಟಂಬರ ೩೦ರಲ್ಲಿ ಮುಂಬಯಿಯಲ್ಲಿ ಹರಿಜನ ಸೇವಾಸಂಘದ ಸ್ಥಾಪನೆಯಾಯಿತು. ಹಿಂದೂ ಪಂಚಾಂಗದ ಪ್ರಕಾರ ೧ನೆ ಒಕ್ಟೋಬರವು ಮಹಾತ್ಮಾಜಿಯವರ [illegible]ದಿನವಾಗಿರುತ್ತದೆ.

ಹರಿಜನರಿರುವ ಪ್ರದೇಶಗಳನ್ನು ಸಂದರ್ಶಿಸಿ ಸ್ವಚ್ಛ ಇತ್ಯಾದಿಗಳ ಕುರಿತು ಅವರಿಗೆ ಬೋಧನೆ ಮಾಡುವುದು, ಯಾವದಾದರು ತರದ ಹರಿಜನ ಸೇವೆ ಮಾಡುವುದು, ಹರಿಜನ ಮಕ್ಕಳು ಮತ್ತು ಇತರ ಮಕ್ಕಳನ್ನು ಒಟ್ಟುಗೂಡಿಸಿ ಆಟಪಂದ್ಯಾಟಗಳನ್ನು ನಡೆಯಿಸುವುದು, ಮೆರವಣಿಗೆ, ಭಜನೆ, ಇತ್ಯಾದಿಗಳನ್ನು ನಡೆಯಿಸುವುದು, ಸಾರ್ವಜನಿಕ ಸಭೆಗಳನ್ನು ಅಸ್ಪೃಶ್ಯತಾನಿವಾರಣೆ ಬಗ್ಗೆ ಹಿಂದೂ ಸಮಾಜವು ದೃಢಪ್ರತಿಜ್ಞೆಗೈಯುವುದು, ಇವೆ ಮೊದಲಾದ ಕಾರ್ಯಕ್ರಮಗಳನ್ನು ಆಚರಿಸಿ ಈ ಉತ್ಸವನ್ನು ನಡೆಯಿಸಬೇಕು.

ಕವೀಂದ್ರ ರವೀಂದ್ರರ ದೇಹಾಲಸ್ಯ

ಮಹಾತ್ಮಾಜೀಯವರ ದೇಹಾಲಸ್ಯ!

ಮೆಡಿಟರೇನಿಯನ್ ಪ್ರಕರಣ

ಕವಿ ರವೀಂದ್ರನಾಥ ಠಾಗೂರರ ದೇಹಾಲಸ್ಯ

ಕವಿ ರವೀಂದ್ರನಾಥ ಠಾಗೂರರವರು ವಿಸರ್ಪ ರೋಗಪೀಡಿತರಾಗಿ ಇತ್ತೀಚೆಗೆ ಕೆಲವು ದಿವಸಗಳಿಂದ ಶಯ್ಯೆ ಹಿಡಿದಿರುವರು. ಕಲ್ಕತ್ತೆಯ ಪ್ರವೀಣ ವೈದ್ಯರು ಅವರ ಶುಶ್ರೂಷೆಯನ್ನು ಮಾಡುತ್ತಿದ್ದಾರೆ. ವಿಸರ್ಪ ಜ್ವರದಿಂದ ಮೂರ್ಛೆ ಹೊಂದಿದ ಕವಿಗಳು, ಮೊನ್ನೆಯಿಂದ ಪ್ರಜ್ಞೆಗೆ ಬಂದಿರುವರಾಗಿ, ಅವರೀಗ ಅಪಾಯದಿಂದ ಪಾರಾಗಿರುವರೆಂದು ತಿಳಿದುಬರುತ್ತದೆ. ಸಮಸ್ತ ಹಿಂದೂದೇಶವು ಕವಿಗಳ ಕುರಿತು ಹಂಬಲ ಪಡುತ್ತಿದೆ.

ಮಹಾತ್ಮಾಜಿಯವರ ದೇಹಾಲಸ್ಯ

ರಕ್ತ ಒತ್ತಾಟವು ಹೆಚ್ಚಿ ದೇಹಾಲಸ್ಯ ಹೊಂದಿದ ಮಹಾತ್ಮಾಜಿಯವರ ಸ್ಥಿತಿಯು ಉತ್ತಮಗೊಂಡಿರುತ್ತದೆಂದು ತಿಳಿದುಬರುತ್ತದೆ. ಅವರ ಭೇಟಿ ಮಾಡಲು ನಿರ್ಬಂಧಗಳು ಇನ್ನೂ ಇವೆ. ಮಾನಸಿಕ ಶ್ರಮದಾಗುವ ಕೆಲಸವನ್ನು ಅವರಿನ್ನು ಕೆಲವು ದಿವಸಗಳವರೆಗೆ ಮಾಡಬಾರದಾಗಿ ವೈದ್ಯರು ಸೂಚಿಸಿರುವರು. ಒಂದು ಭಾರತೀಯ ಔಷಧಿಯನ್ನು ಸೇವಿಸಿದ ಪರಿಣಾಮವಾಗಿ, ಅವರೀಗ ದಿನ ಒಂದರ 10 ತಾಸುಗಳ ನಿದ್ರೆಯನ್ನು ಅನುಭವಿಸುತ್ತಿದ್ದಾರೆ.

ಇಟೇಲಿ—ಬ್ರಿಟನ ಒಪ್ಪಂದ

ಇಟಲಿಯು ಎಥಿಯೋಪಿಯದ ಒಡೆಯನೆಂದೂ, ಒಪ್ಪಲವ ಕುರಿತು ಜನಾಂಗ ಮಂಡಳದಲ್ಲಿ ಬ್ರಿಟನು ಪ್ರಯತ್ನಿಸಬೇಕಾಗಿಯೂ ಶೀ. ಮುಸಲೋನಿಯು ಬ್ರಿಟನಿನ ಪ್ರಧಾನ ಮಂತ್ರಿ ಚೆಂಬರ್‌ಲೇನರಿಗೆ ಪತ್ರ ಬರೆದಿರುವನು. ಇಟಲಿ-ಬ್ರಿಟನು ಒಪ್ಪಂದವಾಗುವರೆ ಇದೊಂದು ಪ್ರಾಮುಖ್ಯ ಶರ್ತದಂತೆ.

ಮೆಡಿಟರೆನಿಯನ್ ಪ್ರಕರಣ

ಇತ್ತೀಚೆಗೆ ಬಹಳ ದಿವಸಗಳಿಂದ ಮೆಡಿಟರೇನಿಯನ್ ಸಾಗರದಲ್ಲಿ ಸಾಗುತ್ತಿರುವ ಸರಕು ಮತ್ತು ಪ್ರಯಾಣ ಮತ್ತು ಸಂಗ್ರಾಮ ಜಹಜುಗಳ ಮೇಲೆ, ಏನೊಂದೂ ಕಾರಣವಿಲ್ಲದೆ, ಕೆಲವು ಗೂಢ ಸಬ್‌ಮೆರೀನುಗಳು ಆಕ್ರಮಣ ನಡೆಯಿಸುತ್ತಿರುವುದನ್ನು ಬ್ರಿಟನು ಫ್ರಾನ್ಸು ಇತ್ಯಾದಿ ಒಂಭತ್ತು ಜನಾಂಗ ಒಂದು ಪರಿಷತ್ತಿನಲ್ಲಿ ಕೂಡಿ, ಪರ್ಯಾಲೋಚಿಸಿ ಈ ತರದ ಹಾವಳಿಯನ್ನು ತಡೆಯುವರೆ ಒಂದು ಯೋಜನೆಯನ್ನು ರಚಿಸಿರುವರು. ಇಟಲಿ ಮತ್ತು ಜರ್ಮನಿ ದೇಶಗಳು ಈ ಪರಿಷತ್ತಿನಲ್ಲಿ ಭಾಗಿಗಳಾಗದಿದ್ದರೂ, ಅವರಲ್ಲದೆ ಈ ಕುರಿತು ಕಾರ್ಯ ನಡೆಯಿಸುವರೆ ಇತರ ಜನಾಂಗಗಳಿಗೆ ಸಾಧ್ಯವಿರುವುದೆಂದು, ಈಗ ಅವುಗಳಿಗೆ ಹೊಳೆಯದಿರದು. ಬ್ರಿಟಿಷ ಮತ್ತು ಫ್ರೆಂಚರು ಮೆಡಿಟರೇನಿಯನ್ ಸಾಗರದ ಸಂಪೂರ್ಣ ಅಧಿಕಾರವನ್ನು ವಹಿಸುವರು. ಯಾವ ಸಬ್‌ಮೆರಿನುಗಳು ಲಂಡನಿನಲ್ಲಿ ಹಿಂದೆ ಗೊತ್ತುಮಾಡಲ್ಪಟ್ಟ ನಿಯಮಗಳಿಗೆ ವಿರೋಧವಾಗಿ ನಡೆಯುತ್ತವೋ, ಅವುಗಳನ್ನು 'ಕಳ್ಳರೆಂದು' ಎಣಿಸಲಾಗುವುದು. ಮೆಡಿಟರೆನಿಯನ್ ಸಾಗರದಲ್ಲಿ ಕಳ್ಳ ಹಡಗಗಳು, ಯಾ ಸಬ್‌ಮೆರೀನುಗಳು ಹಾವಳಿ ನಡೆಯಿಸದಂತೆ, ಕಾವಲಿಡುವರು. ಬ್ರಿಟನು ಫ್ರೆಂಚ್ ಇತ್ಯಾದಿ ಒಂಭತ್ತು ಜನಾಂಗಗಳಿಂದ ಕೂಡಿದ ಒಂದು ಏರ್ಪಾಡು ಮಾಡಲಾಗುವುದು.

ಗಡಿನಾಡಿನಲ್ಲಿ ಕಾಂಗ್ರೆಸ್ ಸರಕಾರವು

ಗಡಿನಾಡಿನಲ್ಲಿ ಈಗ ಅಧಿಕಾರಕ್ಕೆ ಬರಲು, ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮಾಡಲಾಗುವುದೆಂದು ತಿಳಿದುಬರುತ್ತದೆ.

ಡೆಟಿನ್ಯೂಗಳ ಬಿಡುಗಡೆ

ಓರ್ವ ಮಹಾಸೇಯರುಗಳ ಭರವಸೆಯ ಮೇಲೆ ಇತ್ತೀಚೆಗೆ ಏಳು ವರ್ಷಗಳಿಂದ ಡೆಟಿನ್ಯೂಗಳಾಗಿದ್ದ ಡಾ| ಮುಖರ್ಜಿ ಎಂಬವರನ್ನು ಬಂಗಾಳ ಸರಕಾರವು ವಿಮುಕ್ತಗೊಳಿಸಿರುವರು. ಎಲ್ಲಾ ಡೆಟಿನ್ಯೂಗಳ ಬಿಡುಗಡೆ ಕುರಿತು, ಸದ್ಯದಲ್ಲಿ ಸರಕಾರವು ಆಲೋಚಿಸುವುದಂತೆ.

ಬ್ಲಿಟಾ ರೈಲ್ವೆ ಅಪಘಾತ

ಈ ಕುರಿತು ಜುಡಿಸಿಯಲ್ ವಿಚಾರಣೆಯು [illegible] ಮುಖಾಂತರ, ಈ ವಿಚಾರಣೆಯು ನಡೆಯಿಸಲಾಗುವುದೆಂದು ತಿಳಿದುಬರುತ್ತದೆ.

ಏಳು ಜನರ ಕೊಲೆ

ಪಂಜಾಬದಲ್ಲಿ ಒಂದು ಹಳ್ಳಿಯಲ್ಲಿ ಎರಡು ವರ್ಗಗಳ ವೈಷಮ್ಯದಿಂದಾಗಿ ಮೊನ್ನೆ ದಿನ ಏಳು ಜನರ ಕೊಲೆಯು ನಡೆದಿರುತ್ತದೆ. ಈ ಎರಡು ವರ್ಗದವರಿಗೆ ಬಹಳ ಸಮಯ ತಿಕ್ಕಾಟ ನಡೆಯುತ್ತಿದ್ದು ಮೊನ್ನೆ ದಿನ ಒಂದು ವರ್ಗದವರು ಇನ್ನೊಂದು ವರ್ಗದವರ ಮೇಲೆ ಆಕ್ರಮಿಸಿ ಬಂದು, ಮೇಲೆ ಸೂಚಿಸಿದ ಕೊಲೆಗಳನ್ನು ನಡೆಸಿದರು.

ಆರನೆ ಜಾರ್ಜರ ಡಿಲ್ಲಿ ದರ್ಬಾರ.

ಆರನೆ ಜಾರ್ಜರ ಡಿಲ್ಲಿ ದರ್ಬಾರು ೧೯೩೮-೩೯ರ ಚಳಿಗಾಲದಲ್ಲಿ ನಡೆಯಬಹುದೆಂಬ ಊಹೆಗಳುಂಟಾಗಿವೆ. ಬ್ರಿಟಿಷ ಚಕ್ರವರ್ತಿಯು ಹಿಂದೂದೇಶದಲ್ಲಿ ಸಾಧಾರಣ [illegible] ತಿಂಗಳ ಸಮಯ ಪ್ರವಾಸ ನಡೆಯಿಸುವರಂತೆ. ಅವರ ಎಲ್ಲಾ ಪ್ರಾಂತ್ಯಗಳನ್ನು ಸಂದರ್ಶಿಸುವರಂತೆ. ಬರುವ ಫೆಬ್ರುವರಿ ಇಂಡಿಯಾ ಸರಕಾರದ ಬಜೆಟಿನಲ್ಲಿ ದರ್ಬಾರ ಸಮಾರಂಭಕ್ಕೆ ೫೦,೦೦೦ ಪವನುಗಳು ವಿಂಗಡಿಸಲಾಗುವುದೆಂದು ವಾರ್ತೆಯಿದೆ. ಪೆಡರೆಶನು ಜ್ಯಾರಿಗೆ ಬಂದ ಮೇಲೆ ಡಿಲ್ಲಿ ದರ್ಬಾರು ನಡೆಯಿಸಬೇಕೆಂಬ ಇದ್ದ ಆಲೋಚನೆಯು ಈಗ ತೊರೆಯಲಾಗಿದಂತೆ. ಕಾರಣ ೧೯೪೧ರ ತನಕ ಪೆಡರೆಶನು ರೂಢಿಗೆ ಬರುವ ಸಂಭವಗಳಿರದಿಲ್ಲವಂತೆ.

ನಿರುದ್ಯೋಗ ನಿವಾರಣೆ.

ವಿದ್ಯಾವಂತರಲ್ಲಿರುವ ನಿರುದ್ಯೋಗ ನಿವಾರಣೆಗಾಗಿ, ಮತ್ತು ವಿದ್ಯಾವಂತರಲ್ಲಿ ಭೂಮಿ ಅಗೆಯುವುದು ಇತ್ಯಾದಿ ಉದ್ಯೋಗಗಳ ಕುರಿತು ಇರುವ ಅಸಡ್ಡೆಯ ಭಾವವನ್ನು ತೆಗೆದುಹಾಕುವುದಕ್ಕೂ, ಅಣ್ಣಾಮಲೈ ವಿಶ್ವವಿದ್ಯಾಲಯದವರು, ಅವರಿಗಾಗಿ, ಒಂದು ವ್ಯವಸಾಯ ಯೋಜನೆಯನ್ನು ಹೊರಡಿಸುವರಂತೆ. ಈ ಯೋಜನೆಗಾಗಿ ೧೦ ಎಕ್ರೆ ಸ್ಥಳವು ವಿಂಗಡಿಸಲಾಗಿದೆ. ನಿರುದ್ಯೋಗಿ ವಿದ್ಯಾವಂತರಿಂದ ಮೂಲಧನವನ್ನು ತೆಗೆದು ಪ್ರತಿಯೊಬ್ಬನಿಗೆ ತಿಂಗಳು ಒಂದರ ರೂ. ೨೫ರ ಪ್ರಕಾರ ದೊರಕುವ ತರದಲ್ಲಿ ಅಲ್ಲೊಂದು ವ್ಯವಸಾಯ ಕ್ಷೇತ್ರ ಸ್ಥಾಪಿಸಲಾಗುವುದಂತೆ. ಅಲ್ಲಿ ವಿದ್ಯಾವಂತರು ದುಡಿಯಬೇಕಂತಿದೆ. ವ್ಯವಸಾಯ ಬಗ್ಗೆ ಅವರಿಗೆ ಸಕಲ ಸೌಕರ್ಯಗಳು ಮಾಡಿಕೊಡಲಾಗುವುವು.

ಚೀನಾಕ್ಕೆ ಅನ್ಯಜನಾಂಗಗಳ ಸಹಾಯವು ದೊರಕುವುದೇ?

ಚೀನಾದೇಶಕ್ಕೆ ಅನ್ಯಜನಾಂಗಗಳ ಸಹಾಯ ಒದಗುವ ಮೊದಲೇ ಅವರನ್ನು ಸದೆಬಡಿಯಬೇಕೆಂದು ಜಪಾನಿನ ಉದ್ದೇಶವಿದ್ದುದರಿಂದಲೇ ಅವರು ಅಲ್ಲಿ ಅಷ್ಟು ಕ್ರೂರಕೃತ್ಯಗಳನ್ನು ಆಚರಿಸುವುದಂತೆ.

ಆದರೆ ಇತ್ತೀಚೆಗಿನ ವಿದ್ಯಮಾನಗಳನ್ನು ಪರಿಶೀಲಿಸಿ ನೋಡಿದರೆ, ಚೀನಾದೇಶಕ್ಕೆ ಯಾವತ್ತೂ ಅನ್ಯ ಜನಾಂಗಗಳ ಸಹಾಯವು ದೊರಕುವ ಹಾಗೆ ಕಾಣಿಸುವುದಿಲ್ಲ.

ಅಮೇರಿಕಾದ ತನ್ನ ಸಂಚಯಗಳ ರಕ್ಷಣೆಗಾಗಿ, ಚೀನಾ ರಣರಂಗಕ್ಕೆ ಇಳಿದರೆ, ಆ ಸಂಚಯಗಳು ಬರಿ ಉಂಟು ದಿವಸದ ಯುದ್ಧದಲ್ಲಿ ಕ್ಷಯಿಸಲಾಗಬಹುದಂತೆ. ಆದರಿಂದ, ಅದಕ್ಕೆ ಚೀನಾ ಪ್ರಕರಣದಲ್ಲಿ ಕೈಮಾಡುವ ಇಚ್ಛೆಯಿರುವುದಿಲ್ಲವಂತೆ. ಬ್ರಿಟನಿಗಂತೂ ಪ್ರಸ್ತುತದ ಸ್ಥಿತಿಯು ಕುರಿತು ಹೆಚ್ಚಿನ ಲಕ್ಷ್ಯ ಕೊಡಬೇಕಾಗಿ, ಬಂದುದರಿಂದ ಅದು ಪೂರ್ವದಲ್ಲಿ ಇನ್ನೊಂದು ತರದುಸ್ಸೆಯನ್ನು ಉಂಟುಮಾಡದಂತೆ, ಫ್ರಾನ್ಸು ಯಾವಾಗಲೂ ಬ್ರಿಟನನ್ನು ಅನುಸರಿಸುವುದು. ಸೋವಿಯಟ್ ರಷ್ಯಾವು ಚೀನಿಯರ ಕಡೆಗೆ ಒಲವಾಗಿದ್ದರೂ, ಎಂದಿನ ವರೇಗೆ ತನ್ನ ಪ್ರದೇಶಗಳಲ್ಲಿ ಜಪಾನು ಕೈಹಾಕುವುದಿಲ್ಲವೋ, ಅಂದಿನ ವರೇಗೆ ಅವು ತಟಸ್ಥವಾಗಿರುವುದಂತೆ.

ಆದುದರಿಂದ ಚೀನಾಕ್ಕೆ ಬುದ್ಧಿಕಾಸಿ ಮಾಡಲು ಇದೇ ತಕ್ಕ ಸಮಯವೆಂದು ತಿಳಿದು ಜಪಾನು ಅದರ ಮೇಲೆ ಮುಮುಕಿರುತ್ತದೆ. ಚೀನಿಯರು ಐಕ್ಯ ಹೊಂದಿಕೊಂಡು ಅತ್ಯಂತ ಪರಿಶ್ರಮದಿಂದ ಕಾದಾಡುತ್ತಿದ್ದಾರೆ.

ಚೀನಿಯರಿಗೆ ಅನ್ಯ ಜನಾಂಗಗಳಿಂದ ಯುದ್ಧ ಶಸ್ತ್ರ ಸಾಮಗ್ರಿ, ಸಿಡಿಮದ್ದು ಇತ್ಯಾದಿಗಳು ಸೇರದಂತೆ ಚೀನಿಯ ಸಮುದ್ರದಲ್ಲಿ ಜಪಾನೀಯ ಯುದ್ಧ ಜಹಜುಗಳು ಕಾವಲು ನಡೆಯಿಸುತ್ತಿದ್ದಾವೆಂದು ವಾರ್ತೆ ಇದೆ.

ಹಳ್ಳಿಗರಿಗೆ ಖಾದಿಯಿಂದಾಗುವ ಆದಾಯ!

ಹಳ್ಳಿಗರಿಗೆ ಖಾದಿಯಿಂದಾಗುವ ಆದಾಯ

"ಹದಿನೆರಡು ಗಂಟೆಗಳ ಕಾಲ ಚರಕದ ಮೇಲೆ ಕೆಲಸ ಮಾಡಿ ಸಿಗುವುದು ಒಂದಾಣೆಯಾದರೆ, ನಾವು ಹಳ್ಳಿಗರಿಗೆ ನೂಲುವ ವೃತ್ತಿಯನ್ನು ಕೈಕೊಳ್ಳುವಂತೆ ಹೇಳುವುದು ಸರಿಯೆ?" ಎಂಬುದಾಗಿ ಬೊಂಬಾಯಿಯ ಕಾಂಗ್ರೆಸ್ ಎಮ್. ಎಲ್. ಎ ಗಳೊಬ್ಬರ ಪ್ರಶ್ನೆ. ಕಾಂಗ್ರೆಸ್ ಪಕ್ಷೀಯರಾಗಿದ್ದು ಖಾದಿಯ ಮಹತ್ವವನ್ನು ಇವರು ಇನ್ನೂ ಅರಿತಿಲ್ಲವೆಂಬುದು ಶೋಚನೀಯ.

ಇವರಂತೆಯೇ ಪ್ರಪಂಚದ ಪರಿಸ್ಥಿತಿಯ ಅರಿವಿಲ್ಲದವರು ಎಷ್ಟೋ ಮಂದಿ ಇರಬಹುದು. ಇದ್ದಾರೆ. ಖಾದಿಯು ಇಂದು ಎಷ್ಟು ಮಂದಿ ಬಡವರಿಗೆ ಊಟವನ್ನು ಒದಗಿಸಿ ಕೊಡುತ್ತದೆಂದು ಇಂಥವರು ತಿಳಿದುಕೊಳ್ಳಬೇಕಾಗಿದೆ. ನಗರಗಳಲ್ಲಿ ಕುಳಿತು ಟೀಕಿಸಿ ಪರಿಹಾಸ ಮಾಡುವ ನಿರಂಕುಶ ವಾಕ್ಪಟುಗಳಿಗೆ ನಮ್ಮಲ್ಲೇನು ಕೊರತೆಯೆ? ಆದರೆ ದರಿದ್ರರಾದ ಗ್ರಾಮಸ್ಥರಿಗೆ ಖಾದಿಯಿಂದಾಗುವ ಲಾಭವು ಸಾಕಷ್ಟು ಇದೆ.

ಬೇಸಾಯದಿಂದಾಗಿ ವರ್ಷವೊಂದಕ್ಕೆ ಬರೀ ನಾಲ್ವತ್ತು ರೂಪಾಯಿ ಉತ್ಪತ್ತಿಯಿರುವವರನ್ನು ಸಮಯವಿದ್ದಾಗ ನೂತು ಹತ್ತಿಪ್ಪತ್ತು ದೊರೆತರೆ ಅದೇನು ಕಡಮೆಯೆ? ತಿರುಚೆಂಗೋಡಿನ ಗಾಂಧಿಯಾಶ್ರಮದ ಕೆಲಸಗಾರರು ತಯಾರಿಸಿದ ಪಟ್ಟಿಯಲ್ಲಿಯ ಈ ಕೆಳಗೆ ಕೊಟ್ಟ ಕೆಲವು ಅಂಶಗಳನ್ನು ಪರೀಕ್ಷಿಸುವದರಿಂದ ಖಾದಿಯ ಮಹತ್ವವು ತಾನಾಗಿ ಖಚಿತವಾಗದಿರದು.

ನೂಲುವವನ ಹೆಸರು	ಖಾದಿಯ ಕೂಲಿ	ಬೇಸಾಯದಿಂದ ಉತ್ಪತ್ತಿ
ಸುರಿಯಾನಸಳು		
ಮುತ್ತಯಿ	೩೦–೬–೦	೪೫ ೦ ೦
ಪಾಲನಾಯಕ	೨೫–೦–೦	೫೬–೦–೦
ನೆಲ್ಲಿಪಾಳಯದ ಪರಿಯಕಾಳ	೧೩–೪ ೦	೯೪–೦ ೦
ಮರಾಯಿ	೨೯–೧೩ ೦	ಬೇಸಾಯವಿಲ್ಲ.
ಕರುಕಂಪಟ್ಟಿ ಸೊಂಬಾಯಿ	೩೩–೧–೦	೪೦ ೦–೦

ನೋಲಿನವುಗಳ ಪರಿಶೀಲನದಿಂದ ಬೇಸಾಯಗಾರರಿಗೆ ಖಾದಿಯಿಂದ ದೊರೆವ ಹಣವು ಸಾಕಷ್ಟು ಇದ್ದು ಯಾರೂ ಕಡೆಗಣಿಸುವಷ್ಟು ಕಡಿಮೆಯಾಗಿಲ್ಲವೆಂದು ವಿಶದವಾಗುವುದು. ಆದುದರಿಂದ ಖಾದಿಯನ್ನು ಹಳಿಯುವವರು ಹಳ್ಳಿಗರ ಹಿತಚಿಂತನೆ ಇಲ್ಲದ ಕರುಣಾರಹಿತರಾದ ಕಟುಕರೆಂದು ಬೇರೆ ಹೇಳಬೇಕಾಗಿಲ್ಲ.

ಇಲಿಯ ಮೇಲಿನ ಕೋಪದಿಂದ ಮನೆಗೆ ಬೆಂಕಿ ಕೊಡುವುದೆ?

ಬಂಗಾಲ ಸರಕಾರವು ರಾಜಶಾಯಿ ಕಾಲೇಜನ್ನು ಮುಚ್ಚಲು ನಿರ್ಧರಿಸಿರುವುದು. ಕಾರಣವಿಷ್ಟೆ – ಕಾಲೇಜಿನ ಕೆಲವು ಮಂದಿ ಮುಸಲ್ಮಾನ ಮತ್ತು ಹಿಂದೂ ವಿದ್ಯಾರ್ಥಿಗಳೊಳಗೆ ಕೈ ಕೈ ಹತ್ತಿತು. ಅದಕ್ಕೋಸ್ಕರ ಕಾಲೇಜನ್ನೇ ಮುಚ್ಚುವ ನಿರ್ಧಾರವಾಗಿದೆ. ವಿದ್ಯಾ ಇಲಾಖೆಯ ಮಂತ್ರಿಗಳು ಬರೆ ಅಲ್ಲಿಗೆ ಹೋಗಿ ಉಭಯ ಪಕ್ಷದವರಿಗೂ ಎರಡು ಬುದ್ಧಿಯ ಮಾತುಗಳನ್ನು ಹೇಳಿದರೆ ಕಲಹವು ಅಲ್ಲಿಗೇ ಮುಗಿಯಬಹುದಿತ್ತು. ಆದರೆ ಇದಿಷ್ಟನ್ನು ಯೋಚಿಸಿ ಮುಂದುವರಿಯುವ ಯೋಗ್ಯತೆಯು ಬಂಗಾಲದ ಮಂತ್ರಿಮಂಡಲದಲ್ಲಿ ಇಲ್ಲವಾಯಿತು. ಒಂದು ಪೆಟ್ಟಿಗೆ ಎರಡು ತುಂಡು ಎಂಬಂತೆ ಇವರು ಇದೇ ಬಗೆಯ ಧೀರತೆಯನ್ನು ಕೈಕೊಂಡರೆ, ಸರ್ಕಾರ ಕೈಕೆಳಗೆ ಬಂಗಾಲ ಪ್ರಾಂತ್ಯದ ಪರಿಸ್ಥಿತಿಯು ಏನಾಗುವುದೋ ಹೇಳಲಾಗುವಂತಿಲ್ಲ.

ಆದರೆ ಅಷ್ಟರ ತನಕ ಜನರು ಸುಮ್ಮನೆ ನೋಡಿ ಕುಳಿತುಕೊಳ್ಳಬಲ್ಲರೆ?

ನಿಮ್ಮ ಉದ್ಧಾರಕ್ಕಾಗಿಯೇ ನಿಮ್ಮನ್ನು ಕೊಲ್ಲುವುದು

ಎಂಬುದಾಗಿ ಚೀನಿಯರ ಕುರಿತು ಜಪಾನ್ ಪತ್ರಿಕೆಗಳು ಸಹಾನುಭೂತಿಯನ್ನು ಸೂಚಿಸಿರುವವು. ತನ್ನ ಜನಾಂಗದವರು ಕೈಕೊಂಡ ದೇಶೋದ್ಧಾರ ಕಾರ್ಯವನ್ನು ಚೀನಿಯರು ಸಮರ್ಥಿಸದುದನ್ನು ಕಂಡು ಅವರಿಗೆ ಬಹಳ ವ್ಯಥೆಯುಂಟಾಗಿರುವುದು. ಆ ಕಾರ್ಯವೇನೆಂದು ಜಪಾನಿನ ಮುಖ್ಯ ಸಚಿವರು ಈ ಮೊದಲೇ ಹೇಳಿರುವರು. ಎಂದೆಂದಿಗೂ ಚೀನಿಯರು ತಲೆ ಎತ್ತದಂತೆ ಮಾಡಿ, ಅನಂತರ ಜಪಾನಿನ ಪಾದಧೂಳಿಯನ್ನು ಶಿರಸಾವಹಿಸಬೇಕು ಅಷ್ಟೆ.

ಹೀಗಿದ್ದೂ ಚೀನಿಯರು ಇದಕ್ಕೆ ಸಮ್ಮತಿಸದಿದ್ದುದು ನಿಜವಾಗಿಯೂ ಖೇದಾಸ್ಪದವಾಗಿದೆ! ಇಹಲೋಕದಲ್ಲಲ್ಲದಿದ್ದರೂ ಯುದ್ಧದಲ್ಲಿ ಸತ್ತರೆ ಪರಲೋಕದಲ್ಲಿಯಾದರೂ ವೀರಸ್ವರ್ಗವು ಲಭಿಸುವುದಲ್ಲವೆ? ಸ್ವರ್ಗವನ್ನು ಒದಗಿಸಿಕೊಡುವುದಕ್ಕಿಂತ ಮಹತ್ವದ ಉದ್ಧಾರ ಕಾರ್ಯವು ಯಾವುದಿದೆ?

ಚೀನ ಜಪಾನ್ ಯುದ್ಧದ ಅಂತರಂಗ

ಚೀನಾ ಜಪಾನ್ ಯುದ್ಧದ ಕಾರಣವೇನೆಂದು ಇತ್ತೀಚೆಗೆ ಜಪಾನಿನ ಪ್ರಮುಖ ಪತ್ರಿಕೆಯೊಂದರಲ್ಲಿ ಪ್ರಕಟವಾದ ಲೇಖನವೊಂದು ಹೀಗೆ ಹೇಳುತ್ತದೆ.

ಜಮೀನುದಾರರೇ ಎಚ್ಚರದಿಂದಿರಿ!

ಇನ್ನೊಂದು ಪ್ರಾಂತ್ಯವು ಕೊಂಗ್ರೆಸ್ಸಿಗೆ ಅಧೀನವಾಯಿತು!

"ಸದ್ಯದ ಜಪಾನಿನ ಅಂತರ್ಗತ ರಾಜಕೀಯ ಆಂದೋಲನವನ್ನು ಹೋಗಲಾಡಿಸಲು ಪರರಾಷ್ಟ್ರಗಳೊಡನೆ ಯುದ್ಧವು ಅತ್ಯಗತ್ಯ. ಅದರಲ್ಲಿ ನಮಗೇ ಜಯವುಂಟಾಗುವ ಸಂಭವವು ಅಧಿಕವಾದರೆ ಮತ್ತಷ್ಟು ಹಿತವೇ ಆಯಿತು." ಎಂಬುದೇ ಆ ಲೇಖನದ ಸಾರಾಂಶ.

ತಲೆ ತಿರುಗುತ್ತಿರಲು ಕಲ್ಲು ಕುಡಿಯುವುದು ಅದಕ್ಕೆ ತಕ್ಕ ಮದ್ದೇ?

ಜಮೀನುದಾರರೇ ಎಚ್ಚರದಿಂದಿರಿ!

ಜನಹಿತಕ್ಕಾಗಿ ಕೊಂಗ್ರೆಸ್ ಮಂತ್ರಿಮಂಡಲದವರು ಮುಂದೆ ತಂದ ಪ್ರತಿಯೊಂದು ಮಸೂದೆಯನ್ನು ಸಮರ್ಥಿಸುವುದರಿಂದಲೆ ತಮಗೆ ಒಳ್ಳೆಯದಾಗುವುದಲ್ಲದೆ ವಿರೋಧಿಸುವುದರಿಂದಲ್ಲವೆಂದು, ಸ್ವಲ್ಪ ಮುಂದಾಲೋಚನೆ ಇದ್ದ ಜಮೀನುದಾರರು ಇಂದು ತಿಳಿದುಕೊಳ್ಳದೆ ಇರಲಾರರು. ಕೊಂಗ್ರೆಸ್ ಸರಕಾರವನ್ನು ಎದುರಾಯಿಸಿದರೆ ಅದನ್ನು ಸ್ಥಾನಚ್ಯುತ ಮಾಡುವ ಕಾರ್ಯದಲ್ಲಿ ಬ್ರಿಟಿಷ್ ಸರಕಾರದಿಂದ ತಮಗೆ ಸಹಾಯವೂ ಸಹಾನುಭೂತಿಯೂ ಒದಗಬಹುದೆಂದು ಅವರು ಮನಸ್ಸಿನೊಳಗೆ ಊಹಿಸಿರಬಹುದು.

ಆದರೆ ಇಂದಲ್ಲ ನಾಳೆ ಸರಕಾರವು ಕೊಂಗ್ರೆಸ್ಸಿನವರೊಡನೆ ಒಪ್ಪಂದವನ್ನು ಮಾಡಬೇಕಾಗುವುದು. ಒಂದೆರಡು ಕಡೆಗಳಲ್ಲಿ ಕೊಂಗ್ರೆಸ್ ಮಂತ್ರಿಮಂಡಲವನ್ನು ಹೊರದಬ್ಬಿದರೂ ಜಮೀನುದಾರರ ಸಂಘವು ಮೇಲಾಗದು. ಬ್ರಿಟಿಷರು ೦ ಜಗೆ ಒಳ್ಳೆಯ ನೆರವು ಇಜಿಪ್ಟಿನ ವೆಫ್ಡ್ ಮಂತ್ರಿಮಂಡಲವು ಎರಡು ಬಾರಿ ಅಧಿಕಾರದಿಂದ ಓಡಿಸಲ್ಪಟ್ಟರೂ ಇಂದು ಅದೇ ಪಂಗಡದ ಮುಖಂಡರನ್ನು ಪ್ರಧಾನ ಅಮಾತ್ಯರನ್ನು ಅಂಗ್ಲ ಪ್ರಮುಖರು ಆದರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಆಂಗ್ಲೇಯರ ದೂರದೃಷ್ಟಿತ್ವವು ಎಲ್ಲರಿಗೂ ತಿಳಿದ ವಿಷಯ. ಆದುದರಿಂದಲೇ ಇಂದಲ್ಲ ನಾಳೆ ಕೊಂಗ್ರೆಸ್ಸಿನವರೊಡನೆ ತಾವು ಒಪ್ಪಂದ ಮಾಡಬೇಕಾಗುವುದೆಂದು ತಿಳಿದು ಅವರು ಸುಮ್ಮನಿರುವರು.

ಸ್ಪೈನಿನಲ್ಲಿ ಜಪಾನ್ ಸೈನಿಕರು

ಜಪಾನು ಚೀನಾಗಳೊಳಗೆ ನಡೆದ ಯುದ್ಧದ ಕಿಡಿಯು ಯುರೋಪು ಖಂಡದಲ್ಲಿ ಹಬ್ಬಿ ಹೊಗೆಯೇಳದಂತೆ ಬ್ರಿಟಿಷರು ಪ್ರಯತ್ನಿಸುತ್ತಿರುವರು. ಸ್ಪೈನಿನಲ್ಲಿ ಯುದ್ಧದ ಘಟನೆಗಳು ರೂಪುಗೊಂಡಂತೆ ಈ ಯುದ್ಧದಲ್ಲಿಯೂ ನಡೆಯಬಹುದೆಂದು ಅಂಜಿಕೆಯುದೆ. ಕಾರಣ, ಜಪಾನಿನವರು ಜರ್ಮನಿಯೊಡನೆ ಮಿಲಿಟರಿ ಒಪ್ಪಂದವನ್ನು ಮಾಡಿರುವರು, ಕಮ್ಯೂನಿಸ್ಟ್ ವಿರೋಧದ ಕರಾರಿನಲ್ಲಿ ಇಟೇಲಿಯವರೊಡನೆ ಸಹ ವ್ಯವಸಾಯಿಗಳಾಗಿರುವರು. ಆದುದರಿಂದ ರಷ್ಯದವರು ವಿಮಾನಗಳನ್ನು ತೆತ್ತು ಚೀನಿಯರಿಗೆ ಸಹಾಯಮಾಡಿದರೆ ಯುರೋಪಿನ ಫಾಸಿಸ್ಟ್ ಪ್ರಭುಗಳು ಜಪಾನಿನ ಬೆಂಬಲಕ್ಕೆ ಬರಬಹುದೆಂದು ಊಹಿಸಲಾಗಿದೆ.

ಜಪಾನೀಯರು ಯುರೋಪಿನ ಫ್ಯಾಸಿಸ್ಟ್ ರಾಷ್ಟ್ರಗಳೊಡನೆ ಅತ್ಯಂತ ಮೈತ್ರಿಯಿಂದ ವ್ಯವಹರಿಸುತ್ತಿರುವರು. ಜನರಲ್ ಫ್ರಾಂಕೋವಿನ ಸೈನ್ಯದಲ್ಲಿ ಅನೇಕ ಮಂದಿ ಜಪಾನೀಯರು ಇರುವರು. ಸ್ಪೈನ್ ಸರಕಾರದವರಿಂದ ಕಸಕೊಳ್ಳಲ್ಪಟ್ಟ ಸೋವಿಯಟ್ ಯುದ್ಧದ ಸಾಮಗ್ರಿಗಳನ್ನು ಅವರು ಪರೀಕ್ಷಿಸಿ ನೋಡಿ ತಾವು ಕಂಡುದನ್ನು ಟೋಕಿಯೊ ನಗರಕ್ಕೆ ತಿಳಿಸುವರು.

ಫಜಲ್ ಹಕ್ಕರಿಗೆ ಪ್ರಾಣ ಭಯ

ಒಮ್ಮೆ ಕೆಲವು ಮಂದಿ ಫಜಲ್ ಹಕ್ಕರ ಅನುಯಾಯಿಗಳು ಕೂಡಿಕೊಂಡು ಅವರ ಮನೆಯ ಮುಂದುಗಡೆಯಲ್ಲಿ "ಫಜಲ್ ಹಕ್ಕ ಜಿಂದಾಬಾದ್" ಎಂದು ಕೂಗುತ್ತ ಗಲಭೆಯನ್ನೆಬ್ಬಿಸಿದರು. ಬಂದವರು ಯಾರು, ಗಲಭೆಗೆ ಕಾರಣವೇನೆಂದು ಕೂಡ ತಿಳಿದುಕೊಳ್ಳುವ ಗೋಜಿಗೆ ಹೋಗದೆ ಹಕ್ಕರು ಮನೆಗೆ ಬೀಗ ಹಾಕಿ ಪೋಲಿಸ್ ಸಹಾಯವನ್ನು ಪಡೆದು, ಮನೆಯ ಉಪ್ಪರಿಗೆಯ ಮೇಲೆ ಕೆಲವು ಮಂದಿ ಸಿ. ಐ. ಡಿ. ಗಳ ಸಂರಕ್ಷಣೆಯಲ್ಲಿ ಸುರಕ್ಷಿತವಾಗಿ ಕುಳಿತುಬಿಟ್ಟರು. ಹೊರಗೆ ಇದ್ದವರು ೩೦೦ ಮಂದಿಯಾದರೂ ೧೦೦೦ಕ್ಕೆ ಮಿಕ್ಕಿ ಇದ್ದಾರೆಂದು ಹಕ್ಕರ ಅಂಬೋಣ. ನೆರೆದವರು 'ಫಜಲ್ ಹಕ್ಕ ಜಿಂದಾಬಾದ್' ಎಂದು ಅವರಿಗೆ ಬಹು ವರ್ಷ ಆಯುಷ್ಯವನ್ನು ಬಯಸಿದರೂ, ಅವರಿಗೆ ಪಾಪ ಪ್ರಾಣಭಯವಾಯಿತು. ವಿಚಿತ್ರವಿದು!

ನಿಜವಾಗಿಯೂ ಹಕ್ಕರಿಗೆ ಪ್ರಾಣಭಯವು ಹುಟ್ಟುವುದೆ? ಕಂಪನಿಗೆ ಎಲ್ಲವೂ ಪೀತ ವರ್ಣಮಯವಾಗಿ ಕಾಣಿಸುವಂತೆ ಇಂದು ಹಕ್ಕರ ಪರಿಸ್ಥಿತಿಯಾಗಿರುವುದೆ?

ರಾಮನೂ ಕುಡಿಯುತಿದ್ದನು!

ನಾವೇಕೆ ಕುಡಿಯಬಾರದು? ಬಹಳಗೆ ಮದ್ಯಪಾನ ಮಾಡಬಾರದಾಗಿ ಹೇಳುವುದು ನೀವು. ತಮ್ಮ ದಿನ ನಿತ್ಯದ ಕೆಲಸವನ್ನು ಮುಗಿಸಿದ ಮೇಲೆ ಮದ್ಯಪಾನವನ್ನು ಮಾಡುವುದರಿಂದ ಅವರ ಮನಸ್ಸಿಗೆ ತುಂಬಾ ಆಹ್ಲಾದವೂ ನೆಮ್ಮದಿಯೂ ಉಂಟಾಗುತ್ತಿದೆ. ರಾಮನೂ ಕುಡಿಯುತಿದ್ದನು! ಎಂದು ಎಸೆಂಬ್ಲಿಯಲ್ಲಿ ಸರ್ ಕೆ. ವಿ. ರೆಡ್ಡಿಯವರ ವಾದ.

ಅಲ್ಲದೆ ದೇಶದಲ್ಲಿ ತುಂಬಾ ಕಳ್ಳತನ ಕೊಲೆಗಳೂ ನಡೆಯುತ್ತಿವೆಯೆಂದೂ ಅವರ ಹೇಳಿಕೆ. ಇದಕ್ಕೆ ಮದ್ಯಪಾನವೇ ಕಾರಣವೆಂದೊಬ್ಬರು ಸೂಚಿಸಲು ಹೌದೆಂದರು ರೆಡ್ಡಿಯವರು. ಅದೂ ಹೌದು, ಇದೂ ಹೌದು. ಹಾಗಾದರೆ ದೇಶದಲ್ಲಿ ತುಂಬಾ ಕಳ್ಳತನ ಕೊಲೆಗಳು ನಡೆಯಲು ಮದ್ಯಪಾನವೇ ಕಾರಣವೆಂದಾದರೆ ಅದಕ್ಕೆ ನಿಷೇಧಿಸಿ ಸಂಪೂರ್ಣ ನಿಲ್ಲಿಸಿ ಬಿಟ್ಟರೆ ಅವುಗಳು ತಾನಾಗಿ ನಿಲ್ಲುವುವೆಂದು ಸರ್ ಕೆ. ವಿ. ರೆಡ್ಡಿಯವರ ತಿಳಿಯದಾದರೆ?

ಪಟ್ಟೆಗಳಿಂದ ಕಾರು ಮತ್ತು ವಿಮಾನಗಳು

ಇತ್ತೀಚೆಗೆ ನಡೆಸಿದ ಶೋಧಗಳ ಫಲವಾಗಿ ಪಟ್ಟೆಗಳಿಂದ ಕಾರುಗಳನ್ನೂ ವಿಮಾನಗಳನ್ನೂ ಮಾಡಲು ಸಾಧ್ಯವಿದೆಯೆಂದು ಕಂಡುಹಿಡಿಯಲಾಗಿದೆ. ಇಷ್ಟರ ತನಕ ಈ ಯಾನಗಳ ಯಂತ್ರಗಳನ್ನು ಉಕ್ಕಿನಿಂದ ಮಾಡುತಿದ್ದರು. ಉಕ್ಕಿಗಿಂತ ಪಟ್ಟೆಯು ಗಟ್ಟಿಯಾಗಿರುವುದಲ್ಲದೆ ಬಹಳ ಹಗುರವಾಗಿಯೂ ಇದೆಯಂತೆ. ಇದರಿಂದಾಗಿ ಪಟ್ಟೆಯಿಂದ ಮಾಡಿದ ಒಂದು ಕಾರು ತೂಕದಲ್ಲಿ ಅದರಲ್ಲಿ ಕೂತುಕೊಳ್ಳುವ ಪ್ರಯಾಣಿಕರ ಭಾರಕ್ಕಿಂತ ಕಡಿಮೆಯಾಗಬಹುದೆಂದು ಅಂದಾಜು ಮಾಡಲಾಗಿದೆ.

"ನಾರಿಯೋ ನಾಯಿಯೋ?

ಅವುಗಳಲ್ಲಿ ಯಾವುದು ಶ್ರೇಷ್ಠ? ಭಾಗಲ್ಪುರದ ಓವರ್ ಆಂಗ್ಲ ಸಾರ್ಜಂಟರಿಗೆ ತನ್ನ ನಾಯಿಯೇ ಶ್ರೇಷ್ಠವೆಂದು ಕಂಡು. ಅವರು ಒಂದು ಮೋಟಾರು ಬಂಡಿಯಲ್ಲಿ ಜುಮ್ಮಾ ಎಂಬಲ್ಲಿ ಪ್ರಯಾಣ ಮಾಡುತ್ತಿರುವ ಶ್ರೀಮತಿ ಜಿ. ಎಸ್. ಸಿಂಗ್ ಎಂಬ ಸ್ತ್ರೀಯನ್ನು ಕೆಳಗಿಳಿಸಿ ಆಕೆಯ ಸ್ಥಳದಲ್ಲಿ ತನ್ನ ಶ್ವಾನವನ್ನು ಪ್ರತಿಷ್ಠಿಸಿದರು.

ಆಕೆಯು ಪೋಲಿಸರಿಗೆ ದೂರು ಕೊಟ್ಟಿರುವಳು. ಕೋರ್ಟು ಏನು ತೀರ್ಪು ಕೊಡುವುದೋ ನೋಡಬೇಕಿದೆ.

ಊಟಿಯಲ್ಲಿ ಪ್ಲೇಗು

ಇಂದಿಗೆ ಕೆಲವು ದಿನಗಳಿಂದ ಊಟಿಯಲ್ಲಿ ಪ್ಲೇಗಿನ ಹಾವಳಿಯು ಬಹಳವಾಗಿದೆ. ಅನೇಕ ಜನರು ಇದರ ಜಾಲದಲ್ಲಿ ಸಿಕ್ಕಿಕೊಂಡು ನಶ್ವರರಾದರು. ಆದರೆ ಆರೋಗ್ಯ ಖಾತೆಯವರ ಪ್ರಯತ್ನದಿಂದಾಗಿ ಪರಿಸ್ಥಿತಿಯು ಬಹಳ ಸುಧಾರಿಸಿರುವುದು. ಮರಣಗಳಿಲ್ಲದೆಯೂ ಪ್ಲೇಗು ಹೊಸಬರಿಗೆ ಹಿಡಿಯದೆಯೂ ಎರಡು ದಿನಗಳು ಕಳೆದಿರುವುವು. ಆದರೂ ಇಲಿಗಳು ಬೀಳುವುದು ಕಮ್ಮಿಯಾಗಿಲ್ಲ. ಚೀನಸಿನ ವ್ಯಾಪಾರಿಗಳ ವಠಾರದಲ್ಲೇ ಹೆಚ್ಚು ಬೀಳುತ್ತಿರುವುವು.

ಯಹೂದ್ಯರ ಗ್ರಹಚಾರ

ಹರ್ ಹಿಟ್ಲರ ವಕ್ರದೃಷ್ಟಿಯು ಯಹೂದ್ಯರ ಮೇಲೆ ಬಿದ್ದಂದಿನಿಂದ ಅವರ ಪರಿಸ್ಥಿತಿಯು ತೀರ ಶೋಚನೀಯವಾಗಿರುವುದು. ಅವರು ಇದ್ದಲ್ಲಿ ಅವರಿಗೆ ನೆಮ್ಮದಿಯಿಲ್ಲ. ಪೆಲೆಸ್ತೀನಿನಲ್ಲಿ ಅನೇಕ ಸಮಯದಿಂದ ಜಾತಿವೈಷಮ್ಯದಿಂದಾಗಿ ಕಲಹಗಳು ನಡೆಯುತಿದ್ದುದು ಎಲ್ಲರಿಗೂ ತಿಳಿದ ಸಂಗತಿ. ಇತ್ತೀಚೆಗೆ ಗೂಢ ಕೊಲೆಗಳೂ ನಡೆಯುತಲಿವೆ. ಮೊನ್ನೆ ಒಂದು ಅರಬರ ತಂಡವು ಎಂಟು ಯಹೂದ್ಯರ ಮೋಟಾರು ಕಾರುಗಳನ್ನು ಹೈಫ್ ಎಂಬಲ್ಲಿ ತಡೆದ ಅವುಗಳಲ್ಲಿದ್ದ ಪ್ರಯಾಣಿಕರನ್ನು ಸುಲಿಗೆ ಮಾಡಿದರು. ಒಬ್ಬನು ಸತ್ತುಹೋದನು. ಇನ್ನೊಬ್ಬನಿಗೆ ಪ್ರಾಣಾಂತಿಕ ಪೆಟ್ಟಾಗಿರುವುದು.

ಅಗೋಸ್ತು ೨೬ರಿಂದ ಕೊಲೆ ನಡೆಸಿದವರನ್ನು ಪತ್ತೆಹಚ್ಚಿ ಕೊಟ್ಟವರಿಗೆ ೧೦,೦೦೦ ಪವನುಗಳು ಬಹುಮಾನವಾಗಿ ಕೊಡಲ್ಪಡುವುದಾಗಿ ಪೋಲಿಸರು ಪ್ರಕಟಣೆಯನ್ನು ಹೊರಡಿಸಿರುವರು. ಕೊಲೆಗಡುಕರ ತಲೆಯೊಂದಕ್ಕೆ ೫೦೦ ಪವನುಗಳಂತೆ ಬೆಲೆ ಇಡಲಾಗಿದೆ.

ಇನ್ನೊಂದು ಪ್ರಾಂತ್ಯವು ಕೊಂಗ್ರೆಸ್ಸಿಗೆ ಅಧೀನವಾಯಿತು.

ನಾನು ಆ ಕಾರಾಗೃಹವನ್ನು ಸೇರಲು ಮಾಡಿದ ಅಪರಾಧವು ವಿಚಾರವು ಅನಗತ್ಯವಾದರೆ ಇಷ್ಟನ್ನು ಮಾತ್ರ ತಿಳಿಸೊಳ್ಳಬಹುದು ಆದಳಗಳಲ್ಲಿನ ಸೈನಿಕನು ಯಾವನಾದರೂ ಕಾರಾಗೃಹದಿಂದ ಪಾರಾಗಲು ಶಕ್ಯನಾಗಿರುವುದಿಲ್ಲ. ಫ್ರೆಂಚ್ ಭಾಷೆಯಲ್ಲಿ ಹೇಳಿದ 'ಆರ್ಡರು'ಗಳ ಅರ್ಥವಾಗದಿರುವುದು, ಯಾ ಸಾಲುಗಟ್ಟಾಗುವಾಗ ತೋರಿದ ಆಲಸ್ಯ-ಇವುಗಳಲ್ಲಿ (ಮತ್ತು ಇಂತಹ ಅನೇಕ ಚಿಕ್ಕ ಅಪರಾಧಗಳಿಗೆ ಒಂದೊಂದೇ ತಪ್ಪು ಸೈನಿಕರನ್ನು ಜೈಲಿಗೆ ಮೂವತ್ತು ದಿನಗಳ ಶಿಕ್ಷೆಯನ್ನನುಭವಿಸ ಕಳುಹಲು ಶಕ್ತವಾಗಿರುತ್ತದೆ ಇವುಗಳ್ಳ ತಪ್ಪುಗಳನ್ನು ಮಾಡದಷ್ಟು ಜಾಣರು ಇದ್ದಲ್ಲಿ, ಹೊಟ್ಟೆಹುರಿಯ ಓರ್ವ ಅಧಿಕಾರಿಯು ಏನಾದರೊಂದು ಕ್ಷುಲ್ಲಕ ಅಪರಾಧವನ್ನು ಹೊರಿಸುವನು ಅದರ ಕೊನೆಯೂ ಮೂವತ್ತು ದಿನಗಳ ಕಾರಾಗೃಹ ಜೀವನ' ಕೈದಿಯಂತೆ ಅವಮಾನದಿಂದ, ಅನ್ಯಾಯದಿಂದುತ್ಪನ್ನವಾದ ಪ್ರದಗ್ಧ ಹೃದಯದಿಂದ ಮೂವತ್ತು ದಿನಗಳ ಅಲ್ಪಾವಧಿಯಾದರೂ ಅನುಭವಿಸುವವರಿಗೆ ಯುಗಾಂತರಗಳ ಸದೃಶವಾದ-ಹೀನ ಜೀವನ'

ನನ್ನ ವಿಚಾರಣೆಯು ಸಿಡಿ ಬೆಲ್ ಎಬ್ಬೆಸ್‌ನಲ್ಲಾಯಿತು ಸೇನಾನಾಯಕನು ನನಗೆ ಮೂವತ್ತು ದಿನಗಳ ಕಠಿಣ ಸಜೆಯನು ವಿಧಿಸಿದ ನನ್ನನ್ನು ಕೂಡಲೆ ಇಬ್ಬರು ಕರ್ಮಚಾರಿಗಳು ಒಂದು ದೊಡ್ಡ ಗುಹೆಗೆ ಕೊಂಡೊಯ್ದರು. ಆ ಜೈಲನ್ನು ಗುಹೆಯೆಂದೇ ಕರೆಯುತ್ತೇನೆ ಏಕೆಂದರೆ ದೊಡ್ಡದಾದ ಎತ್ತರ ಗೋಡೆಯೊಂದರಿಂದ ಆವರಿಸ್ಪಟ್ಟ ಆ ದುರ್ಗಂಧಭರಿತ ಜೈಲಿನೆಡೆ ವಾಯುದೇವನು ಸಹಿತ ವೈದೋರುತ್ತಿದ್ದಿಲ್ಲ, ಸೂರ್ಯನ ಪ್ರಖರಕಿರಣಗಳಿಗೆ ಸಹ ಬಾಗದ ಆ ಜೈಲನ್ನು ಕತ್ತಲೆಯ ಕೋಣೆಗಳನ್ನು ಗುಹೆಗಳೆಂದೇಕೆ ಕರೆಯಲಾಗದು?

ಫಾರೈನ್ ಲೀಜನ್.

ನನ್ನನ್ನಲ್ಲಿಗೊಯ್ದಾರು ಚುರ್ಮರು ಸಹ ಯೋದರು ಅಲ್ಲಿ ದ್ವಾರದೇಶದಲ್ಲಿ ಕಾವಲಾಗಿ ನಿಂತಿದ್ದ ರಕ್ಷಕರನ್ನು ಕಂಡು, ನನ್ನ ಶಕ್ತಿಯಡಗಿತು ಆ ಕೆಲಸಕ್ಕಾಗಿಯೇ ದೇವರು 'ಸ್ಪೆಷಲ್ಲಾ'ಗಿ ತಯಾರಿಸಿದನೇನೋ? ನನ್ನನ್ನು ಅವರು ಕೊಂಡೊಯ್ದು, ಕಬ್ಬಿಣದ ಬಾಗಿಲುಳ್ಳ ಒಂದು ಕೋಣೆಯಲ್ಲಿ ಹಾಕಿದರು ಅಲ್ಲಿಂದು ಗೋಣಿಯಿತ್ತು ಅದನ್ನು ಬಿಡಿಸಿ, ಕುಳಿತುಕೊಳ್ಳಲೆತ್ನಿಸುವಾಗಲೇ, ಒಬ್ಬ ರಕ್ಷಕನು ಪುನಃ ಒಳಬಂದು, ಒಂದು ಗಂಟನ್ನು ನನ್ನೆದುರು ಬಿಸುಟು, 'ಬಟ್ಟೆ ಬದಲಾಯಿಸಿಕೊ' ಎಂದ. ನಾನು ನೋಡಿದೆ. ಬಿಳಿಯಾದೊಂದು ಶರ್ಟ ಮತ್ತು ಇಜಾರು ಇದ್ದಿತು ಅದು ಬಹಳ ಒದ್ದೆಯಾಗಿತ್ತು. ಅದನ್ನು ತೊಟ್ಟುಕೊಂಡಾಗ, ಅದರ ಚಳಿಯು ನನ್ನ ಮೈಗೆ ಸೋಂಕಿ, ನಡುಕ ಹುಟ್ಟಿತು ನಾನು ದಳದಲ್ಲಿ ಬರೇ ಒಂದ ವಾರವಿದ್ದರೂ ಕೂಡ, ಮೇಲಧಿಕಾರಿಗೆ ತಿಳಿಸುವುದರಿಂದ ಪ್ರಯೋಜನವೇನೂ ಇಲ್ಲವೆಂಬುದನ್ನು ಚೆನ್ನಾಗಿ ಅರಿತಿದ್ದೆ

ನಂತರ ನಾನು ನನ್ನ ಕೋಣೆಯನ್ನೊಮ್ಮೆ ಪರೀಕ್ಷಿಸ ಹೊರಟೆ. ಆದರೆ ಅಷ್ಟರಲ್ಲಿ ಒಬ್ಬ ಕರ್ಮಚಾರಿಯು ಬಾಗಿಲಿನ ಬೀಗವನ್ನು ತೆಗೆದು ಒಳಗೆ ಬಂದ. ಆತನನ್ನು ಅನುಸರಿಸುವಂತೆ ಆಜ್ಞಾಪಿಸಿದ. ಈ ನರಕ ಕುಂಡದಿಂದೊಮ್ಮೆಗೆ ಪಾರಾದರೆ ಸಾಕೆಂದೆಣಿಸಿದ ನನಗೆ ಬಹಳ ಸಂತೋಷವಾಯಿತು. ನನ್ನನ್ನು ಆ ಕರ್ಮಚಾರಿಯು ನೆಟ್ಟಗೆ ಒಂದು ಮೈದಾನಕ್ಕೆ ಕೊಂಡು ಹೋದ ಅಲ್ಲಿ ನನ್ನಂತೆ ವೇಷವನ್ನು ಧರಿಸಿದ್ದ ನೂರಾರು ಕೈದಿಗಳು ಮೊನಚಾದ ಗುದ್ದಲಿಗಳಿಂದ ಕಲ್ಲುಗಳನ್ನು ಕಡಿಯುತ್ತಿದ್ದರು ಅವರೆದುರು ಕಲ್ಲುಗಳ ದೊಡ್ಡದೊಂದು ಪರ್ವತವೇ ಬಿದ್ದಿದ್ದಿತ

ಒಂದೇ ನಿಮಿಷ ನನ್ನ ಕೈಯನ್ನೂ ಅಂತಹದೇ ಒಂದು ಗುದ್ದಲಿಯು ಅಲಂಕರಿಸಿತು ನನ್ನನ್ನೂ ನೂಕಿದರು ಆ ಕರ್ಮಚಾರಿಗಳು ಆ ಬಿಸಿಯ ಬಿಸಿಲಿನಿಂದ ಸುಯ್ಯೆನ್ನುವ ವಾತಾವರಣದಲ್ಲಿ-ಕೈದಿಗಳ ಬಿಸಿರಕುತ ಬೆವರು ಸೇರಿನ ರೂಪವಾಗಿ ಹರಿದು ಹೋಗುವ ಸರಸ್ಸಿನಲ್ಲಿ' ಇಡಿ ಒಂದು ಗಂಟೆ ನಾವು ನಮ್ಮ ಗುದ್ದಲಿಗಳಿಂದ ಕಲ್ಲುಗಳನ್ನೊಡೆದೆವು-ಏಕತಾನದಿಂದ ಅಮೇರಿಕದ ಚೈನ್ ಗೆಂಗ್‌ನ ಕೈದಿಗಳ ತೆರದಿಂದ ಸಾಕೆನಿಸುವುದರಿಂದ ಅಶಕ್ತಿಯಿಂದ ಯಾ ಅನಾರೋಗ್ಯದಿಂದ ಉಂಟಾದ ಚಿಕ್ಕದೊಂದು ವಿರಾಮದ ದೆಸೆಯಿಂದ ಕೈದಿಗಳು ಆ ಭೀಕರ ರಕ್ಷಕರ (ರಕ್ಕಸರ?) ಬಾರುಕೋಲಿನಿಂದಲೂ ಪಾದರಕ್ಷೆಗಳಿಂದಲೂ ಆಘಾತ ತಿಂದು ಬಸವಳಿದರು ನನ್ನ ಸಮೀಪದಲ್ಲೇ ಇದ್ದ ಓರ್ವ ಕೈದಿಯ ವಿಚಿತ್ರವಾಗಿ ಕೂಗಿ, ನೆಲಕ್ಕೆ ಬಿದ್ದ ಆತನ ಆರೋಗ್ಯವು ಚೆನ್ನಾಗಿಲ್ಲವೆಂಬುದು ಎಂತಹ ಹುಚ್ಚು ಕುರುಡನಿಗಾದರೂ ಅನಿಸುತ್ತಿತ್ತು ಆದರೂ ಆ ರಕ್ಕಸರೂಪೀ ರಕ್ಷಕನು ಆತನಿಗೆ ಒದೆಗಳನ್ನಿತ್ತು ಪುನಃ ಕೆಲಸಕ್ಕೆ ನಿಲ್ಲಿಸಿದನು. ನೋವಿನ ಹೆದರಿಕೆಯಿಂದ ಕ್ರೂರ ಶಿಕ್ಷೆಯ ಹೆದರಿಕೆಯಿಂದ-ಆ ಬಡ ಪಾಪಿಯು ಪುನಃ ಕೆಲಸಕ್ಕೆ ಆರಂಭಿಸಿದನು ಐದೇ ನಿಮಿಷಗಳಲ್ಲಿ ಪುನಃ ನೆಲಕ್ಕೆ ಬಿದ್ದನು ಈ ಸಲ ರಕ್ಷಕನು ಅವನ ಜ್ಞಾನಶೂನ್ಯ ದೇಹವನ್ನು ನಾಯಿಯಂತೆ ಜೇಲಿಗೆಳೆದುಕೊಂಡು ಹೋದನು ಒಂದು ವಾರದ ನಂತರ ಜಾಗ್ರತೆಯಿಲ್ಲದ, ಕಣ್ಣನಲ್ಲಿ ನೆತ್ತರಿಲ್ಲದ ಸೇನಾದಳದ ಡಾಕ್ಟರನೊಬ್ಬನು ಅವನನ್ನು ಪರೀಕ್ಷಿಸಿದನು ಅಂದಿನಿಂದೊಂದು ವಾರದೊಳಗೆ ಅವನು ತೀರಿಹೋಗಿದ್ದ'

ಪ್ರಥಮ ದಿನದ ಇಂತಹ ಕಟು ಅನುಭವದಿಂದಲಾದರೂ, ಕೈಯಲ್ಲಿ ಬಾರು ಕೋಲು ಹಿಡಿದು ತಿರುಗುತಿದ್ದ ಆ ರಕ್ಷಕರು ಸಹ ನಮ್ಮಂತೆ ಕೈದಿಗಳೆನ್ನುವುದು ನನ್ನ ಲಕ್ಷ್ಯಕ್ಕೆ ಬಾರದಿರಲಿಲ್ಲ ಅಲ್ಪ ಅಪರಾಧಕ್ಕೆ ಅದೊಂದು ತರದ ಶಿಕ್ಷೆಯಾಗಿತ್ತು. ಅವರಿಗೆ ಶಿಕ್ಷೆಯೆಂದರೆ-ಸ್ವಾತಂತ್ರ್ಯ ಹಾನಿ, ಬಹಳ ಹೊತ್ತು ಕೆಲಸ ಮಾಡುವುದು ಮತ್ತು ಚೆನ್ನಾಗಿಲ್ಲದ ಆಹಾರ

ಅಂದು ರಾತ್ರೆ ನನ್ನ ಕೋಣೆಯಲ್ಲಿ ನನಗೆ ಮಲಗಲು ಸಾಧ್ಯವೇ ಆಗಲಿಲ್ಲ ಮಲಗಲು ಮಲಗಿದೆ, ಆದರೆ ನಿದ್ದೆ ಬರಲಾರದಾಯಿತು ಅಲ್ಲಿ ಬಹಳ ಚಳಿಯಾಗಿತ್ತು ನನಗೆ ಹೊದ್ದುಕೊಳ್ಳಲು ಏನೂ ವಸ್ತ್ರಗಳಿರಲಿಲ್ಲ, ನನ್ನ ಹಿಂದೆ ಬಾಗಿಲ ಚಿಲಕವು ಬಿದ್ದ ಕೆಲವೇ ನಿಮಿಷಗಳಲ್ಲಿ, ತಗಣೆಗಳ ಸಂಚಾರದಿಂದ ನನ್ನ ಇಡೀ ಮೈಯು ತುರಿಸಹತ್ತಿತ್ತು ಬೆಳಗ್ಗೆ ಎಳುವಾಗ ಇಡೀ ದೇಹವು ತಗಣೆಗಳ ಕಚ್ಚುವಿಕೆಯಿಂದ ಕೆಂಪಾಗಿ ಹೋಗಿತ್ತು. ನಾನು ರಾತ್ರೆ ಎದ್ದು ನಿಲ್ಲಲೆತ್ನಿಸಿದರೂ ಕೂಡ ಈ ನನ್ನ ಕೋಣೆಯ ಸಂಗಾತಿಗಳು ನನ್ನ ಮೈಮೇಲೆ ಬಿದ್ದು, ಬಾಧೆ ಕೊಡುತ್ತಿದ್ದವು

ಮರುದಿನ ಪ್ರಾತಃಕಾಲ 8 ಗಂಟೆಗೆ ಜೇಲಿನ ಗಂಟೆಯು ಬಾರಿಸಿತು ಎಲ್ಲ ಕೈದಿಗಳೂ ಎದ್ದು ಹೊರಬಂದರು ಸ್ನಾನೂ ಒಂದೆ ನಮ್ಮೆಲ್ಲರ ಬೆನ್ನಿಗೂ ಅರ್ಧ ಹಂಡ್ರೆಡ್ ವೈಟಗೆ ಕಡಿಮೆಯಿಲ್ಲದ ಭಾರದ ಕಲ್ಲುಗಳನ್ನು ಕಟ್ಟಿದರು ಮೂರು ಗಂಟೆಗಳ ಕಾಲ ಅವುಗಳನ್ನು ಬೆನ್ನ ಮೇಲೆ ಹೊತ್ತೇ ನಾವು ಅಂಗಳದಲ್ಲಿ ಸುತ್ತಾಡಿದೆವು ಕೆಲವರ ಬೆನ್ನುಗಳಿಂದ ಅಸ್ವಾಭಾವಿಕ ರಕ್ತಸ್ರಾವ ಸೋರಿಯುತ್ತಿತ್ತು ನಂತರ ಮಧ್ಯಾಹ್ನದ ವರೆಗೆ ಕಲ್ಲುಗಳನ್ನು ಒಡೆದೆವು ನಂತರ ಜೇಲಿಗೆ ಹಿಂತಿರುಗಿದಾಗ, ದಿನಕ್ಕೊಂದೇ ಒಂದಾದ ಊಟವು ಸಿದ್ಧವಿದ್ದಿತು

ಒಂದು ಕೋಣೆಯಲ್ಲಿ ನಮ್ಮೆಲ್ಲರನ್ನು ತುಂಬಿಸಿದರು ಅಲ್ಲಿ ಒಬ್ಬ ರಕ್ಷಕನು ಒಂದು ಪಾತ್ರದಲ್ಲಿ ಮಾಂಸ ಮಂತಾದುವುಗಳನ್ನು ಸೇರನ್ನೂ ತಂದಿಡುವನು. ಕೂಡಲೇ ಎಲ್ಲರೂ ತಮ್ಮ ಕೈಗಳನ್ನು ಹಾಕಿ, ಆಹಾರವನ್ನು ತೆಗೆಯುವರು ನಾನೂ ಅವರ ನಡುವೆಯೇ ಕೈ ಹಾಕಬೇಕಾಯಿತು. ಯಾಕೆಂದರೆ ಸ್ವಲ್ಪ ಸಮಯದ ನಂತರ ಉಪವಾಸೀ ಕ್ಷುಧಾರ್ತ ಪ್ರಾಣಿಗಳು ಪಾತ್ರವನ್ನು ಬರಿದಾಗಿಡುತಿದ್ದರು. ಇದೇ ರೀತಿಯಲ್ಲಿ ನಮಗೆ ಆಹಾರವು ಒದಗಿಸಲ್ಪಡುತಿತ್ತು. ನಾನಾಗಲೇ ಎಣಿಸಿದೆ ನನ್ನ ಪ್ರಥಮದ ಪ್ರಶ್ನೆಗೆ ಉತ್ತರವು ದೊರಕಿದೆಯೆಂದು ನಮ್ಮ ಸೇನಾದಳಗಳೇ ನರಕ ಕುಂಡಗಳು' ಅದರಲ್ಲಿಯೂ ಅಲ್ಲಿನ ಜೇಲುಗಳು ಭಯಂಕರ' ಎನಿಸಿದರೆ ಮೈ ಜುಮ್ಮೆನ್ನುತ್ತದೆ. ಕೊನೆಗಂತೂ ಮೂವತ್ತು ದಿನಗಳ ಶಿಕ್ಷೆಯು ಮುಗಿದ ನಂತರ ಹೊರಬಂದೊಡನೆ ನಿಶ್ಚಯಿಸಿದೆ ಇನ್ನು ಮೇಲೆ ಜೇಲಿಗೆ ಹೋಗಲಾರೆನೆಂದು.

ಆದರೆ ಅಲ್ಲೂ ನಿರಾಶೆಯೇ ಗತಿಯಾಯಿತು ನಮ್ಮ ಯೋಧರು ಧರಿಸುವ ಖಾಕಿ ಉಡುಪನ್ನು ತೆಗೆದಿಟ್ಟಲ್ಲಿಂದ ಯಾರೋ ಜಾರಿಸಿದರು, ಅಧಿಕಾರಿಗಳು ಉಡುಪು ಎಲ್ಲಿದೆಯೆಂದು ಕೇಳಿದರು ಅದನ್ನು ತೆಗೆದವನು ಓರ್ವ ಫ್ರೆಂಚ್ ಯೋಧನೆಂದು ನನಗೆ ತಿಳಿದಿತ್ತು. ಅವನನ್ನು ತೋರಿಸಿದೆ ಧ್ಯುದ್ಧಿಯಾರಂಭವಾಯಿತು ನನ್ನ ಆಶ್ಚರ್ಯಕ್ಕನುಗುಣವಾಗಿ ಆ ಉಡುಪು ನನ್ನ ಕೋಣೆಯಲ್ಲೇ ದೊರಕಿತು ಕೂಡಲೇ ನನ್ನೆದುರಿದ್ದ ಯೋಧರು ಕೋಪಗೊಂಡರು ಅಲ್ಲೇ ಒಂದು ನ್ಯಾಯ ಸಭೆಯು ನಿರ್ಮಿತವಾಯಿತು ನನ್ನನ್ನು ಸುಳ್ಳನೆಂದೂ ಕಳ್ಳನೆಂದೂ ಅಪವಾದನೆಗೆ ಗುರಿಪಡಿಸಿ, ಅಧಿಕಾರಿಯು ಶಿಕ್ಷೆಯನ್ನು ವಿಧಿಸಿದ ಕೂಡಲೇ ಕರ್ಮಚಾರಿಗಳು ನನ್ನ ಬೆನ್ನ ಮೇಲಣ ಅಂಗಿಯನ್ನೆತ್ತಿ, ಚರ್ಮದ 'ಬೆಲ್ಟು'ಗಳಿಂದ ಹೊಡೆದರು ಬೆನ್ನಿನಿಂದ ನೆತ್ತರಧಾರೆ ಹರಿಯಿತು ತಾಳಲಾರದೆ ಕೂಗಿದೆ, ಚೀರಿದೆ ಅರ್ಧ ವರೆಗೆ ಹೊಡೆದು, ನಂತರ ಬಿಟ್ಟರು

ಅಲ್ಲಿಗೇ ಮುಗಿಯಲಿಲ್ಲ ನನ್ನ ಶಿಕ್ಷೆ ನಾನ ವಿನಾಕಾರಣವಾಗಿ ದಳದಲ್ಲಿ ಗಲಾಟೆ ಎಬ್ಬಿಸಿದೆನೆಂಬ ಅಪವಾದನೆಯ ಮೇಲೆ ನನಗೆ ಪುನಃ 30 ದಿನಗಳ ಕಾರಾಗೃಹವೇ ನೆಲೆಯಾಯಿತು ಈ ಸರ್ತಿಯ ಸಜೆಯು ಕಠಿಣವಾಗಿರಲಿಲ್ಲ ಯಾಕೆಂದರೆ ತಪ್ಪಿಸಿಕೊಂಡು ಹೋಗಲೆತ್ನಿಸಿದವರಿಗೆ ಕೊಡುವ ಶಿಕ್ಷೆಯು ಭೀಕರತಮವಾಗಿರುತ್ತದೆ

ಜೇಲಿನಿಂದ ಓಡಿ ಹೋಗಲು ಯತ್ನಿಸಿದ ನನ್ನ ಪ್ರಥಮ ಸಾಹಸವು ಬೇರೆ ಇಬ್ಬರು ಕೈದಿಗಳೊಡನೆಯಾಗಿತ್ತು ನಾವು ಓಡಿದೆವು ಮಾನೆಕಚ್ ಎಂಬಲ್ಲಿ ಪುನಃ ಸಿಕ್ಕಿಬಿದ್ದೆವು ವಿಚಾರಣೆಯಾಯಿತು ಸಮೀಪದಲ್ಲೇ ಇದ್ದ ಸಣ್ಣ ಪರ್ವತದ ತುದಿಯಲ್ಲಿನ ಜೇಲಿನಲ್ಲಿ ಮೂರು ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು. ನಮ್ಮನ್ನು ಅಲ್ಲಿಗೆ ಸಾಗಿಸಿದರು. ಅಲ್ಲಿ ನಮ್ಮನ್ನು ಎಳೆಸ್ಕೆ ಮೂರ ಗಂಟೆಯಿಂದ ಕತ್ತಲೆಯಾಗುವ ತನಕ

(ಆನೇ ಪುಟವನ್ನು ನೋಡ ಪುದು)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜ ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer Dr. D. N JASANI, Vithalbhai Patel Road, BOMBAY 4

ಮದ್ಯನಿಷೇಧದ ಕುರಿತು ಕಾರ್ಯಕ್ರಮ

೧. ಪ್ರತಿಯೊಂದು ಪ್ರಾಂತ್ಯದ ಮದ್ಯದ ಅಂಗಡಿ, ಗಾಂಜಾ ಅಫೀಮು, ಇತ್ಯಾದಿಗಳು ಮಾರಾಟವಾಗುವ, ಅಮಲು ಸೇವನೆಯ ದುಷ್ಟತ್ವ ಅಧಿಕವಾಗಿರುವ ಪ್ರದೇಶಗಳನ್ನು ಗುರುತಿಸಿ ಒಂದು ನಕಾಶೆಯನ್ನು ತಯಾರಿಸಬೇಕು

೨. ಅವುಗಳ ಲೈಸೆನ್ಸು ಅವಧಿ ಕೊನೆಗೊಳ್ಳುವುದಾದರೆ ಮದ್ಯದಂಗಡಿಗಳನ್ನು ಮುಚ್ಚುವುದು

೩. ಈಗ ಆಗುವ ಮದ್ಯದ ಉತ್ಪನ್ನವನ್ನು ಮದ್ಯನಿಷೇಧಕ್ಕೆಂದೇ ನಿಂಗಡಿಸುವುದು

೪ ಮದ್ಯದಂಗಡಿಗಳನ್ನು ಅವುಗಳ ಮುಂಚಿನ ಮದ್ಯಸೇವಕ ಸಂದರ್ಶಕರ ಅನುಕೂಲಕ್ಕಾಗಿ, ವಿಶ್ರಾಂತಿ ಗೃಹಗಳನ್ನಾಗಿ ಮಾರ್ಪಡಿಸುವುದು ಮದ್ಯದಂಗಡಿ ಮಾಲೀಕರೆ ಆ ತರದ ವಿಶ್ರಾಂತಿಗೃಹಗಳನ್ನು ನಡೆಸಬಹುದು

೫ ಕಳ್ಳಭಟ್ಟಿಯಿಂದ ಭಟ್ಟಿ ಇಳಿಸುವುದು ಇತ್ಯಾದಿ ಕಳ್ಳಾಟಿಕೆ ಕ್ರಮಗಳಲ್ಲಿ ಮದ್ಯದ ಮಾರಾಟವಾಗದಂತೆ ನೋಡಲು ಅಬಕಾರಿ ಸಿಬಂದಿಯನ್ನು ಉಪಯೋಗಿಸುವುದು

೬ ಉಪಾಧ್ಯಾಯರೂ, ವಿದ್ಯಾರ್ಥಿಗಳೂ ತಮ್ಮ ಸಮಯದಲ್ಲಿ ಒಂದಂಶವನ್ನು ಮದ್ಯನಿಷೇಧಕ್ಕಾಗಿ ವಿನಿಯೋಗಿಸುವಂತೆ ಮನವಿ ಮಾಡಿಕೊಳ್ಳುವುದು

೭ ಅಮಲುಸೇವಕ ಜನರನ್ನು ಸಂದರ್ಶಿಸಿ, ಅವರನ್ನು ಸುಧಾರಿಸಲು ಯತ್ನಪಡುವಂತೆ ಸ್ತ್ರೀಯರೊಡನೆ ವಿನಂತಿ

೮ ನೆರೆಯ ರಾಜ್ಯವು ಮದ್ಯನಿಷೇಧವನ್ನು ಕೈಗೊಳ್ಳುವಂತೆ ವ್ಯವಹಾರ ನಡೆಯಿಸುವುದು

೯ ಕುಡಿಕರು ತಮ್ಮ ಅಭ್ಯಾಸದ ಬಲಿಯಿಂದ ಪಾರಾಗುವಂತೆ, ಅಮಲು ಪಾನೀಯಗಳ ಬದಲಾಗಿ, ಇತರ ಆರೋಗ್ಯಕರ ವಿಶ್ರಾಂತಿಯನ್ನು ಕೊಡುವ ಪಾನೀಯಗಳನ್ನು ಹುಡುಕಿ ತೆಗೆಯಲು ವೈದ್ಯಕೀಯ ವರ್ಗವು ಶ್ರಮಪಡಬೇಕು ಆ ಬಗ್ಗೆ ಅವರಿಗೆ ವೇತನಗಳನ್ನೂ ಕೊಡಬಹುದು

೧೦ ಕುಡಿಕತನಕ್ಕೆ ವಿರೋಧವಾಗಿ ಪ್ರಚಾರವನ್ನು ನಡೆಯಿಸುವರೆ ಟೆಂಪರೆನ್ಸ್ ಸಂಘಗಳನ್ನು ಜೀವಕ್ಕೆ ತರುವುದು

೧೧ ಮಜೂರರನ್ನು ಉಪಯೋಗಿಸುವವರು ಅವರಿಗಾಗಿ ಆಕರ್ಷಕ ಉತ್ತಮ ತರದ ವಿಶ್ರಾಮ, ವಿಶ್ರಾಂತಿ, ಶಿಕ್ಷಣ ಇತ್ಯಾದಿಗಳನ್ನು ದೊರಕಿಸುವ ವಿಶ್ರಾಂತಿಗೃಹಗಳನ್ನು ಏರ್ಪಡಿಸಬೇಕಾಗಿ ಒತ್ತಾಯ.

೧೨. ಕಳ್ಳು ತೆಗೆಯುವವರನ್ನು ಬೆಲ್ಲಕ್ಕಾಗಿ ಮತ್ತು ಪಾನೀಯವಾಗಿ ಉಪಯೋಗಿಸಲು ಸಿಹಿರಸವನ್ನು ತೆಗೆಯಲು ಉಪಯೋಗಿಸುವುದು ಆದರೆ, ಸಿಹಿರಸವನ್ನು ಕುಡಿಯುವುದು, ಸಿಹಿರಸವನ್ನು ಕಳ್ಳಾಗಿ ಮಾರ್ಪಡಿಸುವುದರಲ್ಲಿ ಬಹಳ ವ್ಯತ್ಯಾಸವಿದೆಯೆಂದು ಎಲ್ಲರೂ ತಿಳಿಯಬೇಕು

ಅಲ್ಲಲ್ಲಿಂದ ಒಂದಿಷ್ಟು

(೧೫ನೇ ಪುಟದಿಂದ ಮುಂದುವರಿಸಿದುದು)

ಎಷ್ಟೋ ಸಲ ಇನ್ಸಪೆಕ್ಟರರ ಕಣ್ಣಿಗೆ ಮಣ್ಣೆರಚಿಯಾಯಿತು ಇನ್ನು ಅದು ಸಾಧ್ಯವಲ್ಲ ಈಗ ಅವರು ಹೇಳಿದ ಹಾಗೆ ಹೆಸರು ಪೂರ್ತಿಗಾದರೂ ಒಬ್ಬ ಹೆಚ್ಚಿಗೆ ಉಪಾಧ್ಯಾಯನ ನೇಮಕವಾಗಬೇಕು ಅಲ್ಲವಾದರೆ ಗ್ರೇಂಟಿಗೆ ಸೊನ್ನೆ ಬಿದ್ದು, ಅದಿ ಅದಿ ಮಾಡಿದ್ದೆಲ್ಲ ನೀರಿನಲ್ಲಿ ಹೋಮವಾಗುವುದು

"ಸ್ವಾಮಿ, ಇನ್ಸಪೆಕ್ಟರರು ಬರುವ ತನಕ ಹಾಜರಿ ಮಾತ್ರ (?) ಕೊಟ್ಟರೆ ಸಾಕು ಉಳಿದ ಕೆಲಸವೆಲ್ಲ ನಾನೇ ಮಾಡುತ್ತೇನೆ ದಯಮಾಡಿ ಬನ್ನಿ

ಊರಿನಲ್ಲಿ ತರಬೇತಿ ಮುಗಿಸಿ ಬಂದ ಉಪಾಧ್ಯಾಯರೊಬ್ಬರಿದ್ದರು ಅವರಿಗೆ ಒಂದು ವರ್ಷ ಕಳೆಯುತ್ತಿದ್ದರೂ ಕೆಲಸ ಆಗಿರಲಿಲ್ಲ ಆ ಉಪಾಧ್ಯಾಯರೊಡನೆ ಶಾಲಾ ಮೆನೇಜರರು ಹಾಗೆ ಹೇಳಿದರು

ನಿಮ್ಮ ಕೆಲಸ ಕಾಯಂ ಏನೂ ಅಲ್ಲ ಒಂದೊಂದು ದಿನದ ಹಾಜರಿಗೆ ಒಂದೊಂದು ರೂಪಾಯಿಯಾದರೂ ಕೊಡಬೇಕು ಆಗಬಹುದಾದರೆ ಬರುತ್ತೇನೆ—ಹೀಗೆಂದು ಆ ಉಪಾಧ್ಯಾಯರು ಪ್ರತ್ಯುತ್ತರ ಕೊಟ್ಟರು

ಒಂದು ಯಾಕೆ ಸ್ವಾಮಿ? ಎರಡೆರಡು ಕೊಡುತ್ತೇನೆ ಹೇಗಾದರೂ ಮಾಡಿ ಸುಧಾರಿಸಬೇಕು ?

ಬೀಸಿದ ಗೆ ಪಂಕ್ಕದ್ದೇ ಲಾಭವಾಯಿತು ೫. ಇನ್ಸಪೆಕ್ಟರರು ಬರುವ ಮೊದಲು ೫ ದಿನ, ಬಂದ ಮೇಲೆ ೫ ದಿನ ಹಾಜರಿ ಕೊಟ್ಟು ಆ ಉಪಾಧ್ಯಾಯರು ೨೦ ರೂಪಾಯಿ ಬಗಲಿಗೆ ಹಾಕಿಕೊಂಡರು. ಈಗ ನೋಡಿದಾಗಲೆಲ್ಲ ಮೆನೇಜರರ ಒಂದೊಂದು ನಮಸ್ಕಾರ ಕೂಡ ಅವರಿಗೆ ರಿಜರ್ವ್ ಆಗಿದೆ ತಾನು ಗೆದ್ದೆನೆಂದೇ ಆ ಉಪಾಧ್ಯಾಯರು ತಿಳಿದಿದ್ದಾರೆ.

ಆದರೆ ಅವರ ಬಾಬ್ತು ಮೆನೇಜರರಿಗೆ ಒಂದು ವರ್ಷದ ಗ್ರ್ಯಾಂಟು ೨೦೦ ರೂಪಾಯಿ ಸಿಕ್ಕಿದ್ದು ಮಾತ್ರ ಅವರಿಗೆ ಇನ್ನೂ ಗೊತ್ತಿಲ್ಲ

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪೀರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಯಾಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು

ಕೊಚ್ಚಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ

ಮಂಗಳೂರಿನ ಪೇಟೆಧಾರಣೆ

ಸಾಮಾಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3— 8	4— 0
ಮುಸ್ಕಿ .	4— 4	4— 8
ಗುಡ್ಡು .	3—12	4— 0
ಕಛಾರ ಅವ್ವಲ್ ಬೆಳ್ತಿಗೆ	4— 8	5— 0
ರಂಗೂನು ಬೆ. ಗೋ. ೧ಕ್ಕೆ	6 — 8	7— 0
ಎಲ್ಲೂರು ಬೆ ಮು. ೧ಕ್ಕೆ	3—14	4— 0
ಗೋದಿ ಗೋಣಿ ೧ಕ್ಕೆ	12 — 8	15— 8
ತೊಗರಿ ಗೋಣಿ ೧ಕ್ಕೆ .	11— 8	18— 8
ಹುರುಳಿ ಗೋಣಿ ೧ಕ್ಕೆ .	5— 0	5 — 4
ಕಡಲೆ ಗೋಣಿ ೧ಕ್ಕೆ ..	9 — 8	10 — 8
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0
ಉದ್ದು ಗೋಣಿ ೧ಕ್ಕೆ	9— 0	9 — 8
ಹೆಸರು ಗೋಣಿ ೧ಕ್ಕೆ	9—12	10— 8
ಊರುಬೆಲ್ಲ ಖಂಡಿ ೧ಕ್ಕೆ	8^— 0	35— 0
ಉಪ್ಪು ಗೋಣಿ ೧ಕ್ಕೆ	4— 8	5— 4
ಕೊಬ್ರಿ ಖಂಡಿ ೧ಕ್ಕೆ	85— 0	90— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ .	20 — 0	21— 0
ಎಳ್ಳಿಂಡಿ ಖಂಡಿ ೧ಕ್ಕೆ	25 —	26 — 0
ಕೊಬ್ರಿ ಎಣ್ಣೆ ಮಣ ೧ಕ್ಕೆ	4— 6	6— 4
ಎಳ್ಳೆಣ್ಣೆ ಮಣ ೧ಕ್ಕೆ	6— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	6— 5	7— 5
ಮೋರಿಸ ಸಕ್ಕರೆ ಮು. ೧ಕ್ಕೆ	2— 11	2 —12
ಮೆಣಸು	4— 8	6— 0
ಸಾಸಿವೆ ಮುಡಿ ೧ಕ್ಕೆ	5 — 8	6— 8
ಕಾಳುಮೆಣಸು ಖ ೧ಕ್ಕೆ	97 – 8	100- 0
ಯೇಲಕ್ಕಿಬೀಜ ಮಣ೧ಕ್ಕೆ	80— 0	85— 0
ಗೇರುಬೀಜ ಮು. ೧ಕ್ಕೆ	3 —14	4— 2
ಕಬ್ಬಿಣ ಖಂಡಿ ೧ಕ್ಕೆ	50— 0	55— 0
ತಾಂಬ್ರತಗಡು ಮ ೧ಕ್ಕೆ	14— 12	15— 0
ತಾಂಬ್ರಪಾತ್ರಗಳು ಮ ೧ಕ್ಕೆ	17— 0	18— 0
ಅಚ್ಚಬೆಳ್ಳಿ ಸೇರು ೧ಕ್ಕೆ	13— 8	14— 0
ಹಿತ್ತಾಳೆ ತಗಡು ಮು. ೧ಕ್ಕೆ	12— 0	12— 0
ಪವನು ೧ಕ್ಕೆ	22— 4	22— 6
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ	140— 0	148— 0
ಫೆಟೇರಿ ಕಾಫಿ ಖಂಡಿ ೧ಕ್ಕೆ	192— 0	195— 0
ಮಡಿಕೇರಿ ಏಲಕ್ಕಿ	67— 0	70 — 0

Byndoor 9th July 1937

From

J M. BANAVALI,
Byndoor Camp

To

The Agent,
The Combined Booking Office,
Byndoor. (S. K.)

Dear Sir,

Received the "Tin" which I had missed in your office at Udipi on 6 7 1937 and which your Udipi Office so kindly and promptly sent to me. I am really startled to ~~see the efficient Management and promptness of the staff in rendering every~~ assistance to the travelling passengers I cannot therefore restrain myself from thanking the Management and the staff.

Yours faithfully,
(Sd) **J. M. Banavali.**

(True Copy)

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied. Buy now and you will also be convinced.

Manufactured by:-

The West Coast Soap Factory.

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ.
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

Sole Agents.

Panchmal Krishnaya Shenoy & Son,
Bunder, MANGALORE

ಗುಣವಾಗದಿದ್ದರೆ ... ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಂತತಿಯುಂಟಾಗುವುದರಿಂದ ಹೆಂಗಸರ ಆಯುಷ್ಯವು ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬೇಡೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು:— ಡಾ॥ ಡಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪುರ ... ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಪಾತವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ: ರೂ. ೪-೦-೦, ವಿ. ಪಿ. ಖರ್ಚ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಶಿಲಾಜಿತ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್
ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:- ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ. ಮುಂಬಾಯಿ 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:-

The Kerala Tea Syndicate,
PONANI—(S. Malabar.)

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ.

ಡೋಂಗರ್‍ಕೆ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ.

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ.

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ.

ಸಿಗುವ ಸ್ಥಳ:—

ಶಾ ಮತ್ತು ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು. ಮಂಗಳೂರು.

... Printed & Published by ... at the Sharada Press, Car Street, Mangalore.

Regd. No. [illegible]

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರಕ್ಷೈರ್ನಹಾಹ್ಯೈರ್ನ ತುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳ ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಒರುತಿರುವ ॥
ಗರಲಕವರಂಜಿದರೆ? ಸುಧೆಯನು । ಪಡೆಯು ವ್ಯರ್ಥರ ತೆರದಿ ಕ ಳತರೆ । ತೆರಳಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು ॥ ೨ ॥

ಪುಸ್ತಕ ೩೧. | ಮಂಗಳೂರು ತಾ. ೨೪ನೇ ಸಪ್ಟಂಬರ ೧೯೩೭ | (24 9 – '37) | ಸಂಚಿಕೆ ೩೬

·The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,76,58,706
1930	59,97,500	9,83,367	28,00,970	2,06,68,328
1933	94,16,500	15,12,692	50,04,871	3,07,98,434
1936	1,36,00,180	26,76,274	82,69,451	5,14,38,205

The Company offers all the up-to-date schemes of Assurances Family Safe Guard Policy a special feature.
Application for agencies will be received from honest and respectable gentlemen
Organisers appointed with pay and allowance.
Gentlemen with organising ability and who can guarantee Business need apply

KOCHIKAR BROTHERS,

Madras Branch Secretaries.

Post Box 337, Mount Road, MADRAS
Phone No 8245

Apply to any of the following Offices:-

Ottapalam	Central Station Road, Trivandrum	Visveshwarapuram Circle, Bangalore City.	Soumyalayam Puthiyara, Calicut	Car Street, Mangalore	Udipi S India	Charni Road, Bombay No 4

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂಕಾದ ಬೇನೆ, ವಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುಂಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುತ್ತದು.

Best Cheap Durable

Use only 515 Red 365 & 232 White bar soap & be satisfied

They are the best and foremost in the Market.

They are the unique products of our Province.

Many have tried & found satisfied. Buy now and you will also be convinced.

Manufactured by:—

The West Coast Soap Factory.

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents.

Panchmal Krishnaya Shenoy & Son,
Bunder, MANGALORE

ಗುಣಕಾರಿದ್ದರೆ **ಹಣ ವಾಪಾಸು!**

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಗರ್ಭ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯವು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯ ಎವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುಗುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು — ಡಾ। ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪೂರ ಇವರು, ಶಾಹೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪—೦—೦. ವಿ. ಪಿ. ಆಣೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಕದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ, ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಿತ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು 8. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಗಾಂ ಮುಂಬಾಯಿ. 4. ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ:—

ಷಾ ಮತ್ತು ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ರೆಜಿ. No. ... ಕ್ರಯ ರೂ. 2-13-0

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ]   ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳ್ ಸಾ । ಗರದ ಮಥಿಸಲ್ ಸುರರಿಂಗದರಿಂ । ಹರುಷವಾಯಿತೆ' ಮತ್ತೆ ವಿಷವ ಸುಡುತ ಒದರುತಿರುವ ॥

ಗರಳಕವರಂಜಿದರೆ ಸುಧೆಯನು । ನುರಿತು ಕ್ಷುದ್ರರ ತೆರದಿ ಕುಳಿತರೆ । ಕೆರಳ ಬಲ್ಲರೆ! ತೊರೆದು ಧೀರರ ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧.   ಮಂಗಳೂರು ತಾ. ೨೪ನೇ ಸಪ್ಟಂಬರ ೧೯೩೭   (24 9-'37)   ಸಂಚಿಕೆ ೩

The Bombay Life Assurance Company, Ltd.

ESTD: 1908.

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,04,466	15,14,855	1,16,38,706
1930	59,97,500	9,83,367	28,00,970	2,66,68,328
1933	94,16,500	15,12,692	50,04,871	3,07,98,434
1936	1,36,00,180	26.76,274	82,69,451	5,14,38,205

The Company offers all the up to-date schemes of Assurances Family Safe Guard Policy a special feature

Application for agencies will be received from honest and respectable gentlemen

Organisers appointed with pay and allowance.

Gentlemen with organising ability and who can guarantee Business need apply

KOCHIKAR BROTHERS,

Madras Branch Secretaries.

Post Box 337, Mount Road, MADRAS

Phone No. 8245

Apply to any of the following Offices:-

Ottapalam	Central Station Road, Trivandrum	Visveshwarapuram Circle, Bangalore City	Soumyalayam Puthiyara, Calicut	Car Street Mangalore	Udipi S. India	[illegible] Road, Bombay No. 4

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

[illegible]

[illegible] ದ್ದುದು, — ಏನು ವಿಶ್ವಾಸವೋ, ಪರ್ವತಪ್ರಸವವೋ ಎಂದು ಅಲ್ಲಿನ ಜನರು ಆಡಿಕೊಳ್ಳುವಂತಾಗಿತ್ತು. ಈಗ ಅದರ ಗರ್ಭದಲ್ಲಿ ಆರಗಿದ ಶಿಲಾರಸವು ಎಂದಿಗೆ ಸಿಡಿದು ಪ್ರಲಯವನ್ನುಂಟುಮಾಡುವ ಅಗ್ನಿರಸವನ್ನು ಸುರಿಯುತ್ತ ಹರಿಯುತ್ತ ಹೊರಡಬಹುದೆಂದು ಕಳೆದ ವಾರದ ಯುರೋಪೀಯ ವಾರ್ತೆಯು ಅರ್ಥವಾಗುತ್ತಿದೆ.

o o o o o

ಬೆಂಕಿಯುನ್ನೆ ನುಂಗುವ ಕೆಲವು ಮಹಾಪುರುಷರು ಈಗ ಯುರೋಪಿನಲ್ಲಿ ತಮ್ಮ ಸಂಸ್ಕೃತಿಯನ್ನು ಕಾಪಾಡಲು ಬೇಕಾಗಿರುವ ಶಾಂತಿಸ್ಥಾಪನೆಗಾಗಿ ತಾವು ಘೋರ ಪ್ರಯತ್ನಗಳನ್ನು ಮಾಡುತ್ತಿರುವಂತೆ-ಭಾಷಣಾದಿಗಳಿಂದ ತೋರಿಸಿಕೊಳ್ಳುತ್ತಾರೆ ಇವರಿಗೆ ವಿರೋಧಿಗಳು ಹಿಂದೆ ಇದು ವರೆಗೆ ಎಂದೂ ಇತರ ರಾಜ್ಯಗಳ ಮೇಲೆ ಯುದ್ಧಹೂಡಿದವರೂ ಅಲ್ಲ, ಇತರ ಭೂಮಿಯ ಒಂದಂಗುಲ ಸ್ಥಳದ ಮೇಲೆ ಆಶೆ ಇಟ್ಟವರೂ ಅಲ್ಲ. ಆದರೂ, ಅವರ ಮೇಲೆ ಯುದ್ಧಮಾಡಿ ಗೆದ್ದು ಅವರನ್ನು ಕಿತ್ತೊಗೆದು ಅವರ ಸ್ಮಶಾನದಲ್ಲಿ ತಮ್ಮ ರಾಜಧಾನಿಯನ್ನು ಕಟ್ಟಬೇಕೆಂಟ ಆತುರವುಳ್ಳ ಶಾಂತಿಪ್ರಿಯ ನ್ಯಾಯನಿಪುಣ ಅಗ್ನಿಮುಖಿಗಳಿವರು!

o o o o

ಸ್ಪೈನಿನಲ್ಲಿ ಹೋರಾಡುವ ಇತ್ತಂಡಗಳೂ ಯುದ್ಧಮಾಡುತ್ತಿರುವುದು ಸುಧಾರಣೆಯನ್ನು ಕಾಪಾಡುವುದಕ್ಕೆ ಎಂದೇ ಸಾರುತ್ತವೆ ಇಟಲಿಯು ಸುಧಾರಣೆಯಿಲ್ಲದಿದ್ದಂಟ ನಾಡನ್ನು ನುಗ್ಗಿ ನೆಲೆಮಾಡಿಕೊಂಡು ತನ್ನ ಸುಧಾರಣೆಯನ್ನು ಪ್ರಚಾರಕ್ಕೆ ತರಲು ತೊಡಗಿದೆ ಜರ್ಮನಿಯು 'ಸ್ವಾತಂತ್ರ್ಯ, ಮರ್ಯಾದೆ, ಗೌರವ, ಧರ್ಮ' ಇವುಗಳನ್ನು ಸರಿಯಾದ ರೀತಿಯಲ್ಲಿ ಜಗತ್ತಿನಲ್ಲಿ ಸ್ಥಾಪಿಸಲು ಯತ್ನಿಸಬೇಕಾಗಿ ಸನ್ನಾಹವನ್ನು ತಯಾರಿಸಿಯದೆ ಇದೆಲ್ಲಾ ಸುಧಾರಣೆಯ ಹೆಸರಲ್ಲಿ ನಡೆವ ಯುದ್ಧಸನ್ನಾಹ

o o o o

ಕೆಲವು ದೊಡ್ಡ ರಾಷ್ಟ್ರಗಳು ಪ್ರಕಟವಾಗಿ ಒಂದನ್ನೊಂದು ಬೈದುಕೊಳ್ಳುತ್ತಲೂ ತಮಗೆ ಸಂಬಂಧವೇನೂ ಇಲ್ಲದಿದ್ದರೂ ಎಲ್ಲೆಲ್ಲಿಯೋ ನಡೆವ ರಾಜ್ಯಗಳಲ್ಲಿನ ಕಾರ್ಯಭಾರವನ್ನು ದೂರುತ್ತಲೂ ಕಾಲಕ್ಷೇಪ ಮಾಡುತ್ತಿದ್ದಾವೆ ಭೂಮಧ್ಯ ಸಮುದ್ರದಲ್ಲಿ ನಡೆವ ಕಳ್ಳ ಹಡಗುಗಳ ಹಡಗು ಕಳ್ಳಾಟಿಕೆಯು ಮಹಾ ಪೀಡೆಯನ್ನು ಕುರಿತಾಗಿ ಬರೆವುದೇ ಟೈಮ್ಸಿನಂತಹ ಪತ್ರಿಕೆಗೆ ನಿತ್ಯದ ಉದ್ಯೋಗವಾಗಿದೆ ಇದನ್ನು ತಡೆಯಲು ಪರಿಷತ್ತು ಸೇರಿತು

o o o o o

ತನ್ನ ಹಡಗುಗಳನ್ನು ಗುಂಡಿಟ್ಟು ನಾಶಪಡಿಸುವ ಕೆಲಸವೆಲ್ಲ ಇಟಲಿಯದೆಂದು ರಷ್ಯವು ಪ್ರಕಟಗೊಳಿಸಿದೆ ಇನ್ನು ಇಟಲಿಯು ಈ ಪರಿಷತ್ತಿನಲ್ಲಿ ಕೂಡುವುದುಂಟೆ? ರಷ್ಯದ ದೂರು ನಿಜವೇ ಅಲ್ಲವೇ ಎಂಬುದನ್ನು ಇಟಲಿಯು ಹೇಳಲಾರದು ಸುಧಾರಣೆಯ ಪ್ರಚಾರಕ್ಕೆ ಹೊರಡುವ ಜನಾಂಗವು ಇಂತಹ ಚಿಲ್ಲರೆ ಅಗೌರವದ ಮಾತುಗಳನ್ನು ಗಮನಕ್ಕೆ ತಂದುಕೊಳ್ಳುವುದುಂಟೆ? ಇದೂ ಸುಧಾರಣೆಯ ಒಂದು ಅಂಗ.

o o o o

ಆದರೂ, ಎಲ್ಲಕ್ಕೂ ಕಾರಣವಾಗಿರುವುವು ಆ ಜಲಾಂತರ್ಗಾಮಿ ನಾವೆಗಳು. ಯಾರ ನಾವೆಗಳವು? ಯಾರೂ ಹೇಳುತ್ತಿಲ್ಲ. ಇದೂ ಸುಧಾರಿತ ರಾಷ್ಟ್ರಗಳ ನೀತಿಯ ಕ್ರಮ. ಸ್ಪೈನಿನ ದಂಗೆಖೋರರು ನಾಲ್ಕು ಸಬ್ ಮೆರಿನುಗಳನ್ನು ಕ್ರಯಕ್ಕೆ ಕೊಂಡರೆಂದು ಒಪ್ಪಿಕೊಳ್ಳು [illegible] ಕೊಂಡಂತಾಯಿತೆ?

o o o o o

ಜಲಾಂತರ್ಗಾಮಿಯನ್ನು ಕಂಡ ಕೂಡಲೆ ಅದು ಮುಖ ತೋರದಿದ್ದರೆ ಅದನ್ನು ನೋಡಿದವರು ಧ್ವಂಸಗೊಳಿಸತಕ್ಕದೆಂದು ಪರಿಷತ್ತಿನಲ್ಲಿ ನಿರ್ಣಯವಾಗಿದೆ. ಇದರಿಂದ, ಈ ಹೊಸ ನಾವೆಗಳನ್ನು ನೀರಿನ ಅಡಿಯಲ್ಲಿ ಇಟ್ಟುಕೊಳ್ಳುವರೆ? ಅಥವಾ ಅವು ಮುಖ ತೋರ ತಾವೇ ಅವು ಎಂದು ಒಪ್ಪಿಕೊಳ್ಳುವುವೆ? ಇವನ್ನು ಕ್ರಯಕ್ಕೆ ಪಡೆದುದೇ ಅಥವಾ ಸಹಾಯಕ್ಕೆ ತಂದುದೇ? ಇವನ್ನು ನಡೆಸುವ ಆಫೀಸರರು ಸ್ಪೈನಿನವರೇ ಇತರರೇ? ಇದನ್ನು ಯಾರೂ ಹೇಳುತ್ತಿಲ್ಲ

o o o o

ಜರ್ಮನಿಯಲ್ಲಿ ಕಳೆದ ವಾರ ನಡೆದ ಮಹಾ ಉತ್ಸವದಲಿ, ಇಂಡಿಯವೂ ಕೆಂಪು ಬೆಂಕಿ ಹಿಡಿದು ಉರಿಯುತ್ತಿರುವಂತೆ ಚಿತ್ರಪ್ರದರ್ಶನ ಮಾಡಲಾಗಿದೆ ಇಲ್ಲಿನವರೆಲ್ಲ ಬೊಲ್ಶೆವಿಕರು, ಇಟಲಿ ಮತ್ತು ಜರ್ಮನ್ ರಾಜತಂತ್ರಕ್ಕೆ ವಿರುದ್ಧ ರಾಜತಂತ್ರವುಳ್ಳವರು; ಇಲ್ಲಿನವರಲ್ಲಿ ಹೊಸ ಸುಧಾರಣೆ ಹರಡಿಸುವುದು ತ್ತಮ ಎಂಬ ಅಭಿಪ್ರಾಯವು ಹಬ್ಬುವುದಕ್ಕೆ ಇದು ಉಪಾಯವಂತೆ ಕಪ್ಪು ಅಂಗಿ ತೊಟ್ಟು ಬಲಗೈಯೆತ್ತಿ ನಡೆಯಲು ಇಲ್ಲಿನವರಿಗೆ ಕಲಿಸುವುದಕ್ಕೆ ಇಷ್ಟು ಪೇಚಾಟದ ಅಗತ್ಯವೇಕೆ? ಇಂಗ್ಲೆಂಡಿನಲ್ಲಿ ಟೋರಿ (ಕನ್ಸರ್ವೇಟಿವ್) ಸರಕಾರವಿರುವ ವರೆಗೆ ಇಂಡಿಯದಲ್ಲಿ ಯಾವ ಕಟೂರ ಅಗತ್ಯವಿಲ್ಲ—ಖಾದಿಯೇ ಸಾಕು ಎಂಬ ದನ್ನು ಜರ್ಮನಿ ತಿಳಿದಿಲ್ಲ

o o o o

ಬೊಲ್ಶೆವಿಕರೆಂದು ಸ್ವಪ್ನದಲ್ಲೂ ಎಣಿಸಬಹುದಾದವರನ್ನು ರಷ್ಯದಲ್ಲಿ, ಅವರ ಜನ್ಮಸ್ಥಾನದಲ್ಲೇ ಗುಂಡಿಟ್ಟು ಕೊಂದಾಗಿದೆ ಇನ್ನು ಬೊಲ್ಶೆವಿಕರು ಎಲ್ಲಿರಬಹುದು? ಅಥವಾ ಜರ್ಮನಿಗೆ ಹೊಸ ಕನಸುಗಳೂ ಕಾಣುವುದುಂಟೆ?

o o o o

ಎಮ್ಮದಲ್ಲಿ ಜಿನ್ನಾ ಸಾಹೆಬರು ಮುಸ್ಲಿಮ ಲೀಗಿನ ವಿಷಯ ಭಾಷಣ ಮಾಡುತ್ತಾ, ಸ್ವಾತಂತ್ರ್ಯಕ್ಕಾಗಿ ಪೇಚಾಡುವುದಕ್ಕೂ, ಈಗಿನ ಆಕ್ಟನ್ನು ರದ್ದುಮಾಡುವುದಕ್ಕೂ ಕಾಂಗ್ರೆಸ್ಸಿನಷ್ಟೆ ಆತುರವು ನಮಗೂ ಇದೆ, ಆದರೆ ಅಲ್ಪಸಂಖ್ಯಾತರ ಧರ್ಮ ಸಂಸ್ಕೃತಿ ಭಾಷೆ ಮೊದಲಾದುವು ಸುರಕ್ಷಿತವಾಗುವ ಹಾಗೆ ಭರವಸೆ ಪಡೆಯಲು ಈ ಪೇಚಾಟ ಎಲ್ಲ ಮುಸ್ಲಿಮರು ಒಂದಾದರೆ, ಅವರು ಮತ್ತೆ ಹಿಂದೂಗಳೊಡನೆ ಕರಾರು ಮಾಡಿ ರಾಜ್ಯಭಾರದಲ್ಲಿ ಸರಿಯಾಗಿ ಮುಂದರಿಯಬಹುದು ಅಷ್ಟಕ್ಕಾಗಿ ನಾನು ಪ್ರಯತ್ನಿಸಿದರೆ ದ್ರೋಹವುದೆ? ಎಂದರು ಹಿಮ್ದೂದ ಮುಸ್ಲಿಮ ಸಮಾಜವು ಅವರನ್ನು ತಮ್ಮ ವಿಶ್ವಾಸಪೂರ್ಣ ಪ್ರತಿನಿಧಿಗಳೆಂದು ಶ್ಲಾಘಿಸಿರುವರು

o o o o

ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಂಪೂರ್ಣವಾಗಿ ಹೊಸ ರೀತಿಯಲ್ಲಿ ಕಡ್ಡಾಯವಾಗಿ ಪ್ರಚಾರಕ್ಕೆ ತರಬೇಕೆಂದು ಬೊಂಬಾಯಿ ಮಂತ್ರಿಗಳು ಯೋಜನೆ ಮಾಡುತ್ತಿರುವಾಗ ಎಸೆಂಬ್ಲಿಯಲ್ಲಿ ಮಹಮ್ಮದ್ ಅಲಿ ಅಲ್ಲಾಬಕ್ಸರವರು ಪ್ರಾಯ್ಮರಿ ಶಾಲೆಗಳಿಗೆ ಉಪಾಧ್ಯಾಯಿನಿಯರೇ ಯೋಗ್ಯರು, ಮೊದಲನೆ ತರಗತಿಯಿಂದಲೇ ಇಂಗ್ಲಿಷು ಕಲಿಸುವುದು ಅಗತ್ಯ ಎಂದರು. (ಮಂತ್ರಿಗಳು ಹಿಂದುಸ್ಥಾನಿ ಕಲಿಸುವಂತಾದುದು ಉತ್ತಮ ಎಂದು ಮೊದಲೇ ಎಂದಿದ್ದರು

o o o o

ಓವಲ್‌ಟಿನ್

ಶಕ್ತಿ, ಚೈತನ್ಯಗಳನ್ನು ಕೊಡುವುದು

ನಿಮ್ಮ ಶಕ್ತಿ ಚೈತನ್ಯಗಳನ್ನು ಕುರುಪುಗೊಳಿಸಿ ದೇಹದುರ್ಬಲತೆಯಿಂದಲೂ ನರಗಳ ಅಶಕ್ತಿಯಿಂದಲೂ ಮತ್ತು ರೋಗರುಜಿಗಳಿಂದಲೂ ರಕ್ಷಿಸಿಕೊಳ್ಳಿ

ಸರಿಯಾಗಿಯೂ ಸುಖಕರವಾಗಿಯೂ ಇರಬೇಕಾದರೆ ಅದಕ್ಕೆ ಸರಿಯಾದ ತಕ್ಕ ಪುಷ್ಟಿಕರ ಆಹಾರವು ಬೇಕು ಅಂತಹ ಪುಷ್ಟಿಕರ ಆಹಾರವು ಸಾಧಾರಣ ದಿನನಿತ್ಯದ ಆಹಾರದಲ್ಲಿ ಸಿಗಲಾರದು ಆದರೆ, ಶ್ರೇಷ್ಠ ಆಹಾರ ಪಾನೀಯವಾದ ಓವಲ್ಟಿನ್ ನಲ್ಲಿ ಅಂಥ ಶ್ರೇಷ್ಠ ಆಹಾರ ಪದಾರ್ಥಗಳ ಸಮೃದ್ಧಿಯಾಗಿವೆ

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಆಹಾರ ಪದಾರ್ಥಗಳಾದ ಪಕ್ವ ಬಾರ್ಲಿ ಸತ್ವದಿಂದಲೂ, ದನದ ಸಿಹಿ ಕೆನೆ ಹಾಲಿನಿಂದಲೂ ತಯಾರಿಸಿದುದರಿಂದ ಓವಲ್ಟಿನ್ ನಲ್ಲಿ ಪರಿಪೂರ್ಣ ಪುಷ್ಟಿ ಆಹಾರಗಳನ್ನು ದೇಹಕ್ಕೆ ಬೇಕಾದಂತೆ ಪೂರೈಸಿಕೊಡುತ್ತದೆ ಇದು ನಿಮ್ಮ ದೇಹದ ಆರೋಗ್ಯ, ಶಕ್ತಿ, ಚೈತನ್ಯಗಳನ್ನು ಹೆಚ್ಚಿಸುತ್ತದೆ ಅಮೂಲ್ಯ ಪ್ರಕೃತೀಯ ವಿಟಮಿನ್‌ಗಳೂ ಓವಲ್ಟಿನ್‌ನಲ್ಲಿವೆ ದೇಹದ ಸೌಖ್ಯಕ್ಕಾಗಿ ಓವಲ್ಟಿನ್ನನ್ನು ಸದಾ ಕುಡಿಯಿರಿ ಬದಲೀಯಗಳನ್ನು ತ್ಯಜಿಸಿರಿ.

'ಓವಲ್‌ಟಿನ್' ಪುಷ್ಟಿಕರ ಆಹಾರ ಪಾನೀಯ

OVALTINE

ಮೆದುಳು, ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತವೆ

ವಿಜಂಟರು — ಜೇಮ್ಸ್ ರೈಟ್ ಲಿಮಿಟೆಡ್ ಕಲ್ಕತ್ತಾ ಕರಾಚಿ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/483

ಗಡಿನಾಡಿನಲ್ಲಿ ಕಾಂಗ್ರೆಸ್ ಮಂತ್ರಿಗಳ ಕಾರ್ಯಭಾರದಲ್ಲಿ ಒಂದನೆಯದು — ಒನರರಿ ಮೆಜಿಸ್ಟ್ರೇಟರನ್ನು ರದ್ದು ಮಾಡಿದ್ದು ಒರಿಸ್ಸದಲ್ಲಿ ಗ್ರಾಮಕೋರ್ಟುಗಳ ಸ್ಥಾಪನೆಯಾಗಬೇಕಾಗಿ ಕೂಡಲೆ ಕಾನೂನಾಗಬೇಕಾಗಿ ನಿರ್ಧಾರವಾದುದೂ ಒರಿಸ್ಸದ ಕಾಂಗ್ರೆಸ್ ಮಂತ್ರಿಗಳ ಕಾರ್ಯಕ್ರಮ.

o o o

ಉತ್ತರ ಮತ್ತು ಪೂರ್ವ ಆಫ್ರಿಕದ ತೀರಗಳಲ್ಲಿರುವ ಇಟಲಿಯ ಸ್ಥಳಗಳಿಗೆ ಇಟಲಿಯ ಹಡಗುಗಳು (ಯುದ್ಧನಾವೆಗಳು) ೩೦೦೦ ಸೈನಿಕರೊಡನೆ ತೆರಳಿವೆ ಜಪಾನಿಗೂ ಇಟಲಿಯ ಸೈನ್ಯ ಬಂದಿದೆ ಫ್ರೆಂಚು ಇಂಗ್ಲಿಷ ಯುದ್ಧನಾವೆಗಳು ಭೂಮಧ್ಯ ಸಮುದ್ರದಲ್ಲಿ ಕಳ್ಳ ಹಡಗುಗಳನ್ನು ಹುಡುಕುತ್ತ, ಇತರರ ಮೇಲೆ ಕೈಯೆತ್ತುವವರ ಕೈಮುರಿಯಬೇಕೆಂದಿವೆ ಯುದ್ಧದ ಸುಳಿಗಾಳಿ ಎಲ್ಲಿ ಯಾವ ರೀತಿಯಿಂದ ಬೀಸಬಹುದೋ ತಿಳಿದಿಲ್ಲವೆಂದು ಬಲ್ಲವರೇ ಬೆದರಿರುವರು. ಬ್ರಿಟಿಷರೂ ಫ್ರೆಂಚರೂ ರಷ್ಯ

(ಆಸೇ ಪುಟವನ್ನು ನೋಡುವುದು)

ಹೆಂಡರನ್ನು ಮಾರುವ ಗಂಡರು!

ನಮ್ಮ ಈ ಭಾರತದಲ್ಲಿ!!

(ಲೇಖಕ: ಶ್ರೀ ಕಟಪಾಡಿ ಶ್ರೀನಿವಾಸ ಶೆಟ್ಟಿ ಅಧ್ಯಾಪಕ, ಕಾರ್ಕಳ)

ಹಿಂದೀ 'ಚಾಂದ' ಪತ್ರಿಕೆಯಲ್ಲಿ ಒಬ್ಬ ಪೀಡಿತ ಆರ್ಯ ಮಹಿಳೆಯು ಹೀಗೆ ಬರೆದಿದ್ದಾಳೆ —

"ಸಂಪಾದಿಕೆಯರೇ,

'ಎಂಥ ನಿಂದನೀಯ ಅವಸ್ಥೆಯಲ್ಲಿ ನಾನು ಜೀವನ ಯಾಪನೆ ಮಾಡುತ್ತಿದ್ದೇನೆಂಬುದು ಬಹಳ ಲಜ್ಜೆ ಮತ್ತು ಅತ್ಯಂತ ಆತ್ಮಗ್ಲಾನಿಯ ವಿಷಯವಾಗಿರುತ್ತದೆ. ಆದರೂ ಕೂಡ, ಹೃದಯವನ್ನು ಕಲ್ಲಾಗಿ ಮಾಡಿ, ಲಜ್ಜೆಗೆ ತಿಲಾಂಜಲಿಯನ್ನು ಕೊಟ್ಟು, ನಾನು ನನ್ನ ದುರವಸ್ಥೆಯನ್ನು ಸ್ವಲ್ಪ ತಮ್ಮ ಮುಂದೆ ಹೇಳಿಕೊಳ್ಳುತ್ತೇನೆ. ತಾವು ದಯೆಯಿಟ್ಟು ನನ್ನ ಮಾತುಗಳ ವಿಚಾರ ಮಾಡಿ, ನನ್ನ ಭವಿಷ್ಯ ಜೀವನವು ಸುಖಮಯವಾಗುವಂತೆ ಉಚಿತ ಸಲಹೆಗಳನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

"ನಾನು ಕುಲೀನ ಮನೆತನಕ್ಕೆ ಸೇರಿದವಳು. ನನ್ನ ತಾಯಿತಂದೆಗಳು ಈಗ ಜೀವಿತರಾಗಿರುವದಿಲ್ಲ. ಸುಮಾರು ಎಂಟು ವರ್ಷಗಳ ಹಿಂದೆ ಅವರು ನನ್ನನ್ನು, ಮೊದಲು ಮೂರು ಬಾರಿ ಮದುವೆ ಮಾಡಿಕೊಂಡ ಒಬ್ಬ ಮೂವತ್ತು ವರ್ಷ ಪ್ರಾಯದ ವ್ಯಕ್ತಿಗೆ ಮದುವೆ ಮಾಡಿಕೊಟ್ಟರು. ನನ್ನ ಆ ಪತಿದೇವನ ದೇಹಾರೋಗ್ಯವು ಸಂಪೂರ್ಣ ಕೆಟ್ಟು ಹೋಗಿರುತ್ತದೆ. ಅವನು ಎಷ್ಟೆಷ್ಟೋ ಔಷಧಿಗಳನ್ನು ತೆಗೆದುಕೊಳ್ಳುತ್ತಾನೆ. ಆದರೂ ಅವನ ದೇಹಸ್ಥಿತಿಯು ಬದಲಾವಣೆಯಾಗುತ್ತಿಲ್ಲ. ಅವನ ಈ ಅವಸ್ಥೆಯಲ್ಲಿ ಕೂಡ ಆಗಿನಿಂದಲೂ ಅವನ ಸೇವೆಯಲ್ಲಿಯೇ ಮಗ್ನಳಾಗಿ ಇರುತ್ತಿದ್ದೆ. ಆದರೆ ನನ್ನ ಪತಿದೇವನ ಮನಸ್ಸಿಗೆ ಏನ ಹೊಳೆಯಿತೋ, ಅವನು ತಾನಾಗಿ ನನ್ನನ್ನು ಪತನದ ಗರ್ತಕ್ಕೆ ತಳ್ಳಿದನು.

ನಮ್ಮ ಮನೆಗೆ ಪತಿದೇವನ ಕೆಲವು ಸಂಬಂಧಿಗಳು ಬರುತ್ತ ಹೋಗುತ್ತ ಇರುತ್ತಿದ್ದರು. ಅವರನ್ನು ನಾನು ಸೇರಿಕೊಳ್ಳಬೇಕೆಂದು ಪತಿದೇವನ ನನ್ನನ್ನು ಸ್ಪಷ್ಟ ಮಾತುಗಳಿಂದ ಪ್ರೇರೇಪಿಸಿದನು. ಪತಿದೇವನು ನನ್ನ ಮೂಲಕ ಹಣ ಸಂಪಾದನೆ ಮಾಡುವ ಇಚ್ಛೆಯುಳ್ಳವನಾಗಿದ್ದಾನೆ. ಈ ವಿಚಾರದಿಂದ ಅವನು ಮೊದಲು ರೇಡಿಯೊ ಕೇಳುವ ನೆವನ ಮಾಡಿಟ್ಟುಕೊಂಡು ಅವನ ಒಬ್ಬ ನವಯುವಕ ಮಿತ್ರನಲ್ಲಿಗೆ ನನ್ನನ್ನು ಕರಕೊಂಡು ಹೋಗಲಾರಂಭಿಸಿದನು. ನನ್ನಿಂದಾಗಿ ಪತಿದೇವನು ಆ ಮಿತ್ರನಿಂದ ಎರಡು ವರ್ಷಗಳಲ್ಲಿ ಎರಡು ಮೂರು ಸಾವಿರ ರೂಪಾಯಿಗಳನ್ನು ಪಡಕೊಂಡನು. ಮಿತ್ರನ ಸಂಬಂಧದಿಂದ ನನಗೆ ಎರಡು ಮಕ್ಕಳೂ ಹುಟ್ಟಿದುವು. ಈ ಎರಡು ಮಕ್ಕಳು–ಒಂದು ಗಂಡು, ಒಂದು ಹೆಣ್ಣು ನನ್ನ ಪಾಪಕರ್ಮದ ಫಲಗಳಾಗಿವೆ. ಕೆಲವು ಸಮಯದ ನಂತರ ನನ್ನ ಮತ್ತು ಆ ಮಿತ್ರನ ಸಂಬಂಧವು ಒಮ್ಮಿಂದೊಮ್ಮೆಗೆ ಕಡಿದು ಹೋಯಿತು. ಅವನ ಹೆಂಡತಿಗೂ ಈ ಎಲ್ಲಾ ಸಂಗತಿಗಳು ತಿಳಿದುಹೋದುವು. ನಾನು ಅವರಲ್ಲಿಗೆ ಹೋಗಿ ಬರುವದನ್ನು ಅವರು ಸಂಪೂರ್ಣ ನಿಲ್ಲಿಸಿಬಿಟ್ಟರು. ನನ್ನ ಕೆಲವು ಸಂಬಂಧಿಗಳಿಗೂ ಈ ಎಲ್ಲಾ ವಿಷಯಗಳನ್ನು ತಿಳಿಸಿಬಿಟ್ಟರು.

"ಅಷ್ಟಾದ ಮೇಲೂ ನನ್ನ ಪತಿದೇವನು ಲಜ್ಜಿತನಾಗಿಲ್ಲ. ಈಗ ಅವನು ತನ್ನ ಒಬ್ಬ ಶ್ರೀಮಂತ ಸಂಬಂಧಿಯೊಡನೆ ನನ್ನ ಪರಿಚಯ ಮಾಡಿಕೊಟ್ಟಿದ್ದಾನೆ. ಆ ಹೊಸ ಸಂಬಂಧಿಯು ಶ್ರೀಮಂತ ಮಾತ್ರನಲ್ಲ, ವಿದ್ವಾಂಸನೂ ಆಗಿದ್ದಾನೆ. ಪತಿದೇವನು ಅವನಿಂದಲೂ ಹಣ ಪಡೆಯುವ ಪ್ರಯತ್ನಗಳನ್ನು ಮಾಡಿದ್ದಾನೆ. ಆ ಶ್ರೀಮಂತನ ಮತ್ತು ನನ್ನ ಸಂಬಂಧವು ಈಗಲೂ ನಡೆದು ಬಂದಿದೆ. ಶ್ರೀಮಂತನು ಈಗಲೂ ನಮ್ಮ ಮನೆಗೆ ಬಂದು ಹೋಗುತ್ತ ಇದ್ದಾನೆ. ಆದರೆ ಅವನಿಂದ ಈ ವರೆಗೆ ಸ್ವಲ್ಪವಾದರೂ ಹಣ ಕೈ ಸೇರಲಿಲ್ಲ ಎಂಬ ಕಾರಣದಿಂದ ಪತಿದೇವನು ಈಗ ನನ್ನ ಮೇಲೆ ರೇಗಿದ್ದಾನೆ.

"ಈ ಎಲ್ಲ ಪಾಪಕೃತ್ಯಗಳನ್ನು ನಾನು ನನ್ನ ಪತಿದೇವನ ಒತ್ತಾಯಕ್ಕೊಳಪಟ್ಟು ಮಾಡಿದ್ದೇನೆ. ಈ ನನ್ನ ಅತ್ಯಂತ ಘೃಣಿತ ಕಾರ್ಯಗಳಿಂದ ನನ್ನ ಹೃದಯಕ್ಕೂ ಮನಸ್ಸಿಗೂ ಬಹಳ ನೋವಾಗಿದೆ, ಆತ್ಮಕ್ಕೆ ಗ್ಲಾನಿಯೂ ಉಂಟಾಗಿದೆ. ಆದರೆ ನಾನು ನನ್ನ ಪತಿದೇವನ ಮಾತುಗಳನ್ನು ಕೇಳದಿದ್ದರೆ, ನನ್ನ ಮತ್ತೆ ಏನು ಗತಿ ಇದ್ದೀತು? ಹೇಳಿದ ಹಾಗೆ ಕೇಳದಿದ್ದರೆ ಅವನು ನನ್ನ ಮೇಲೆ ಅತ್ಯಾಚಾರಗಳನ್ನು ಮಾಡುತ್ತಾನೆ, ಹೊಡೆಯುತ್ತಾನೆ, ಬಡೆಯುತ್ತಾನೆ.

'ನನ್ನ ಜೀವನವು ನನಗೀಗ ದೊಡ್ಡದೊಂದು ಭಾರವಾಗಿದೆ. ಒಮ್ಮೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದೂ ಮನಸ್ಸಾಗುತ್ತದೆ. ಆದರೆ ಮುಂದಿರುವ ಆ ಎರಡು ಮಕ್ಕಳನ್ನು ನೋಡಿ ಹಾಗೆ ಮಾಡಲಿಕ್ಕೆ ಧೈರ್ಯ ಬರುವದಿಲ್ಲ. ನಾನು ಮಕ್ಕಳನ್ನು ಕರಕೊಂಡು ಮನೆಬಿಟ್ಟು ಹೋಗಲೆ? ಹಾಗಲ್ಲವಾದರೆ ನಾನು ಮತ್ತೇನು ಮಾಡಬೇಕು? ತಮ್ಮ ಉತ್ತರವನ್ನು ಸಪ್ಟಂಬರ ತಿಂಗಳ 'ಚಾಂದ'ದಲ್ಲಿ ನೋಡಿಕೊಳ್ಳುತ್ತೇನೆ. ತಾವು ಯಾವ ಉಪಾಯವನ್ನು ಸೂಚಿಸಲಿಲ್ಲವಾದರೆ ಮುಂದೆ ಮನಸ್ಸಿಗೆ ಬಂದಂತೆ ಮಾಡುವೆನು.

—ಒಬ್ಬ ದುಃಖಿನಿ"

ಈ ಪತ್ರವನ್ನು ಪ್ರಕಟಿಸುತ್ತ 'ಚಾಂದ' ಪತ್ರಿಕೆಯ ಸಂಪಾದಿಕೆ, ಶ್ರೀಮತಿ ಮಹಾದೇವಿವರ್ಮಾ ಎಂ. ಎ. ಯವರು ಈ ರೀತಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ –

ಪತ್ರವನ್ನು ಓದಿ ಲಜ್ಜೆಗೂ ಲಜ್ಜೆ ಉಂಟಾಗುವದು. ಇಂಥ ಅತ್ಯಾಚಾರಗಳಿಂದ ವಿಧವೆಯರನ್ನು ರಕ್ಷಿಸುವದು ಸಾಧ್ಯವಿದೆ. ಆದರೆ ದುಃಖಿನಿಯಂಥ ಸಧವೆಯನ್ನು ರಕ್ಷಿಸಲಿಕ್ಕೆ ಯಾವ ಉಪಾಯಗಳಿವೆ?'

ನಿರಾಶರಾಗಿ ಎಟ್ಟಿಸಿರುಬಿಟ್ಟು ಸಂಪಾದಿಕೆಯರು, ಇಂಥ ದುಃಖಿನಿ ಸಧವೆಯರನ್ನು ರಕ್ಷಿಸುವ ಯಾವ ಉಪಾಯಗಳನ್ನು ಸೂಚಿಸಲಿಲ್ಲ. ಶ್ರೀಮತಿ ವರ್ಮಾ ಅವರು ಪ್ರಶ್ನೆಗೆ ಉತ್ತರವನ್ನು ತಾವು ಸ್ವತಃ ಕೊಟ್ಟಿಲ್ಲ. ಪ್ರಶ್ನೆಯನ್ನು ಮಾತ್ರ ಸಮಾಜದ ಮುಂದಿಟ್ಟಿದ್ದಾರೆ. ಅವರು ಹಾಗೆ ಮಾಡಿದ್ದು ಸ್ವಾಭಾವಿಕವಾಗಿದೆ. ಅದು ದೊಡ್ಡ ಪ್ರಶ್ನೆ–ಅದಕ್ಕೆ ಮಹಿಳೆಯರು ಉತ್ತರ ಕೊಡುವಂತಿರುವದಿಲ್ಲ.

ಎಂದಿನ ತನಕ ಪುರುಷ ಸಮಾಜದ ಹೃದಯ ಬದಲಾವಣೆ, ಮತ್ತು ಸ್ತ್ರೀಯರ ಪ್ರತಿ ಅವರಿಗಿರುವ ದುರ್ಭಾವಗಳ ಬದಲಾವಣೆಯಾಗುವದಿಲ್ಲವೋ, ಅಂದಿನ ತನಕ ದುಃಖಿನಿಯಂಥ ಸಧವೆಯರ ರಕ್ಷಣಾಕಾರ್ಯವು ಸಾಧ್ಯವಲ್ಲ.

ಧನಪಿಶಾಚಿಯೂ ಕಾಮಾಂಧನೂ ಆಗಿ ಪುರುಷನು ಏನನ್ನು ಮಾಡಬಹುದು, ಏನನ್ನು ಮಾಡಲಿಕ್ಕಿಲ್ಲ ಎಂಬುದಕ್ಕೆ ದುಃಖಿಯ ಪತ್ರವು ಉತ್ತಮ ನಿದರ್ಶನವಾಗಿದೆ. ಸಮಾಜದಲ್ಲಿ ದುಃಖಿನಿಯ ಇದು ಒಂದೇ ಉದಾಹರಣೆಯಲ್ಲ. ಪ್ರಯತ್ನಪಟ್ಟರೆ, ಸಮಾಜದ ಹಾಸು ಹೊಕ್ಕುಗಳನ್ನು ಸೇರಿ, ಸೂಕ್ಷ್ಮಾವಲೋಕನ ಮಾಡಿದರೆ, ಇಂಥ ಹಲವು ಉದಾಹರಣೆಗಳನ್ನು ನಾವು ಕಾಣಬಹುದು. ಸಾಮಾಜಿಕ ವ್ಯವಸ್ಥೆ ಮತ್ತು ಸ್ತ್ರೀ ಪುರುಷ ಸಂಬಂಧದಲ್ಲಿರುವ ಕುಂದು ಕೊರತೆಗಳಿಂದ ನಮ್ಮ ಸಮಾಜದಲ್ಲಿ ಹೀಗೆಲ್ಲ ನಡೆಯುವದು ಸಾಧ್ಯವಾಗಿದೆ ಎನ್ನಬೇಕು.

ಅದೇ ಕಾರಣ, ತನ್ನ ಆತ್ಮೀಕತೆಯನ್ನು ಪ್ರಕಟಿಸುವಾಗ ದುಃಖಿನಿಗೆ ಎಷ್ಟು ಲಜ್ಜೆ ಮತ್ತು ಆತ್ಮಗ್ಲಾನಿಯಾಗಿರಬಹುದೋ, ಅದಕ್ಕೂ ಸಾವಿರ ಪಾಲು ಹೆಚ್ಚಿಗೆ ಲಜ್ಜೆ ಮತ್ತು ಆತ್ಮಗ್ಲಾನಿಯು ಇಂಥ ವಿಷಮ ಪರಿಸ್ಥಿತಿಯನ್ನು ತಂದೊಡ್ಡಿದ ಪುರುಷ ವರ್ಗಕ್ಕೆ ಸಾಮಾಜಿಕ ವ್ಯವಸ್ಥೆಗೂ ಆಗಬೇಕಾಗಿದೆ.

ಸಮಾಜದಲ್ಲಿ ಕೈಹಿಡಿದ ಹೆಂಡರನ್ನು ಮಾರುವ ಮತ್ತು ಕೊಳ್ಳುವ ಪುರುಷರು, ಅಂಥ ಧನಲೋಲುಪರು ಮತ್ತು ಕಾಮಾಂಧರು ಇರುವರೆಂಬುದಕ್ಕಿಂದ ದೊಡ್ಡ ಲಾಂಛನವು, ಸಮಾಜಕ್ಕೂ ಪುರುಷ ಜಾತಿಗೂ ಬೇರೆ ಯಾವುದಿರಬಹುದು? ಪುರುಷ ವರ್ಗಕ್ಕೆ ಇದಕ್ಕಿಂತ ದೊಡ್ಡ ಕಲಂಕ ಬೇರೆ ತಟ್ಟಬೇಕಾದ್ದೇನು? ದುಃಖಿನಿಯಂಥವರ ಆತ್ಮಬಲಿಗಳಿಂದಾಗಿಯೇ ಎಚ್ಚೆತ್ತು ಸುಧಾರಿಸಿಕೊಳ್ಳಬೇಕಾದಷ್ಟು ನಮ್ಮ ಸಮಾಜವು, ಮುಖ್ಯವಾಗಿ ಪುರುಷ ವರ್ಗವು ಜಡವಾಗಿದೆ ಎಂದು ನಾವು ಭಾವಿಸುವದಿಲ್ಲ. ಯಾವ ದೂಷಿತ ವಾತಾವರಣದಲ್ಲಿ ವಿಷಮ ವಿವಾಹಗಳೂ ಅಪ್ರಾಕೃತಿಕ ಸಂಬಂಧಗಳೂ ಸಾಧ್ಯವಾಗಿರುವವೋ ಆ ವಾತಾವರಣವನ್ನು ತಿದ್ದಿ, ಪರಿಷ್ಕರಿಸಿ ಸಮಾಜ ಸಂಸ್ಕರಣಕ್ಕೆ ಹೆಗಲೊಡ್ಡುವದರ ಮೂಲಕ ಪುರುಷ ಜಾತಿಯು ತನಗೆ ಬಂದ ಈ ಕಲಂಕವನ್ನು ತೊಳೆದು ಹಾಕುವದಾಗಿ ಆಶಿಸುತ್ತೇವೆ.



ದಾದಾಭಾಯಿ ನೌರೋಜಿಯವರು

ಶ್ರೀ ದಾದಾಭಾಯಿ ನವರೋಜಿಯವರೂ ಒಬ್ಬ ಭಾರತದ ಮಹನೀಯರು. ಇವರು ೧೮೨೫ನೇ ಸೆಪ್ಟಂಬರ್ ೪ನೇ ತಾರೀಕಿನ ದಿನ ಜನಿಸಿದರು. ಇವರಿಗೆ ಇವರ ತಾಯಿಯನ್ನು ಕಂಡರೆ ಬಹು ಪ್ರೀತಿ. ಒಂದು ಬಾರಿ ಅವರು ತಮ್ಮ ತಾಯಿಯವರನ್ನು ಕುರಿತು ಈ ರೀತಿ ಹೇಳಿದರಂತೆ –

"ಪ್ರಪಂಚಕ್ಕೆ ನಾನು ಕಾಲಿಟ್ಟಾಗ ನನಗೆ ಮೊದಲು ಪರಿಚಯವಾದವರು, ನನ್ನ ತಾಯಿಯವರು. ಇವರಿಂದಲೇ ನಾನು ಬೆಳೆದು ದೊಡ್ಡವನಾದುದು. ನಾನು ಚಿಕ್ಕವನಾಗಿದ್ದಾಗಲೇ ನನ್ನ ತಂದೆಯವರು ತೀರಿಹೋದರು. ಅಂದಿನಿಂದಲೂ ನನ್ನ ತಾಯಿಯವರು ನನ್ನನ್ನು ಕಷ್ಟಪಟ್ಟು ಸಾಕಿದರು. ಇವರ ಜಾಗ್ರತೆಯು ಅಸಾಧಾರಣವಾಗಿದ್ದಿತು. ಎಷ್ಟು ಕಷ್ಟವಾದರೂ ಇವರ ನನ್ನನ್ನು ಮಾತ್ರ ಒಂದು ದಿನ ಬಿಟ್ಟಿದ್ದವರಲ್ಲ. ಇವರಿಂದಲೇ ನಾನು ವಿದ್ಯಾವಂತನಾದುದು. ದೇಶದಲ್ಲಿ ನಾನು ಇಷ್ಟು ಕೀರ್ತಿಯನ್ನು ಪಡೆದ ನನ್ನ ತಾಯಿಯವರ ಉಪದೇಶದಿಂದಲೇ,' ಎಂಬುದಾಗಿ ಶ್ರೀ ನವರೋಜಿಯವರು ಹೇಳುತ್ತಿದ್ದರಂತೆ.

ಶ್ರೀ ದಾದಾಭಾಯಿ ನವರೋಜಿಯವರು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾಗ ತಮ್ಮ ತರಗತಿಗೆ ತಾವೇ ಮೊದಲನೆಯವರಾಗಿದ್ದರು. ಇವರು ವಿದ್ಯಾರ್ಥಿಗಳಿದ್ದಾಗ ಇವರಿಗೆ ಬಂದ ಬಹುಮಾನಗಳು ಲೆಕ್ಕವೇ ಇಲ್ಲ. ಬಾಲಕರಾಗಿದ್ದಾಗ ಶ್ರೀ ನವರೋಜಿಯವರು ಭಾರತದಲ್ಲೆಲ್ಲಾ ಪ್ರಸಿದ್ಧಿಯನ್ನು ಪಡೆದರು. ಬೆಳೆದು ದೊಡ್ಡವರಾದ ಮೇಲೆ ಇವರ ಯಶಸ್ಸು ಪ್ರಪಂಚದಲ್ಲೆಲ್ಲ ಹಬ್ಬಿತು.

೧೮೪೫ನೇ ಇಸವಿಯಲ್ಲಿ ಶ್ರೀ ದಾದಾಭಾಯಿ ನವರೋಜಿಯವರು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ತಾವು ವ್ಯಾಸಂಗ ಮಾಡಿದ ಕಾಲೇಜಿನಲ್ಲಿಯೇ ಇವರಿಗೆ ಉಪಾಧ್ಯಾಯರ ಹುದ್ದೆಯೂ ದೊರಕಿತು. ಇದು ೧೮೫೦ರಲ್ಲಿ. ಕೆಲವು ದಿವಸಗಳಾದ ಮೇಲೆ ಶ್ರೀ ದಾದಾಭಾಯಿ ನವರೋಜಿಯವರು ಗಣಿತಶಾಸ್ತ್ರದಲ್ಲಿ ಒಂದು ಚಿನ್ನದ ಬಹುಮಾನವನ್ನು ಪಡೆದರು. ಅದೇ ಕಾಲೇಜಿನಲ್ಲಿಯೇ ಗಣಿತಶಾಸ್ತ್ರದ ಪಂಡಿತರೂ ಆದರು. ಶ್ರೀ ನವರೋಜಿಯವರು ಭೌತಿಕ ಶಾಸ್ತ್ರದಲ್ಲಿಯೂ ಹೆಚ್ಚು ಅನುಭವವನ್ನು ಪಡೆದಿದ್ದರು. ೧೮೫೪ರಲ್ಲಿ ಇವರು ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಭೌತಿಕ ಶಾಸ್ತ್ರದ ಪಂಡಿತರೂ ಆದರು. ಇದಾದ ಮೇಲೆ ಇವರ ಬರೋಡಾ ಸಂಸ್ಥಾನದಲ್ಲಿ ಎರಡು ವರ್ಷಕಾಲ ಮಂತ್ರಿಗಳೂ ಆಗಿದ್ದರು. ೧೮೯೨ರ ವೇಳೆಗೆ ಇವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಆಗ ಇವರು ಅಲ್ಲಿನ 'ಪಾರ್ಲಿಮೆಂಟಿ'ಗೆ ಒಬ್ಬ ಸದಸ್ಯರಾಗಿ ಚುನಾಯಿಸಲ್ಪಟ್ಟರು. ಭಾರತೀಯರಿಗೆ ಈ ಸ್ಥಾನವು ದೊರಕಿದುದು ಅದೇ ಮೊದಲು.

ಶ್ರೀ ದಾದಾಭಾಯಿ ನವರೋಜಿಗಳು ಪ್ರಸಿದ್ಧ ಸ್ವದೇಶಾಭಿಮಾನಿಗಳು. ಸ್ವರಾಜ್ಯಕ್ಕೆ ಇವರು ಹೋರಾಡಿದರು. ಅಖಿಲ ಭಾರತ ಕಾಂಗ್ರೆಸು ಸಮಿತಿಗೆ ಇವರು ಮೂರು ಬಾರಿ ಅಧ್ಯಕ್ಷರಾದರು. ರಾಷ್ಟ್ರೀಯ ಧ್ವಜ ಬಾವುಟವನ್ನು ಇವರು ೧೯೦೬ರಲ್ಲಿ ವಿವರಿಸಿದರು. ರಾಷ್ಟ್ರೀಯ ಧ್ವಜ ಬಾವುಟವನ್ನು ಭಾರತದಲ್ಲಿ ಏರಿಸಿದುದು ಇದೇ ಮೊದಲು.

೧೯೦೧ರಲ್ಲಿ ಶ್ರೀ ನವರೋಜಿಯವರು ತಮ್ಮ ಬರವಣಿಗೆಗಳನ್ನೂ ಮತ್ತು ತಮ್ಮ ಭಾಷಣಗಳನ್ನು ಸೇರಿಸಿ ಒಂದು ಪುಸ್ತಕವನ್ನಾಗಿ ಪ್ರಕಟಿಸಿದರು. ಇವರಿಗೆ ಪ್ರಪಂಚದ ಎಲ್ಲಾ ಎಡೆಗಳಲ್ಲಿಯೂ ಗೌರವವಿದ್ದಿತು. ೮೦ ವರ್ಷ ವಯಸ್ಸಾದ ಮೇಲೆ ಇವರಿಗೆ ಎಲ್. ಎಲ್. ಡಿ. ಪ್ರಶಸ್ತಿಯೂ ಬಂದಿತು.

ಇವರನ್ನೇ 'ಭಾರತದ ತಾತ' ಎಂಬ

(೬ನೇ ಪುಟವನ್ನು ನೋಡುವುದು.)

... ಹಾಲಿ ಓಟು ನಡೆಸುತ್ತಾ ... ಶಕ್ತಿಗಳಿಲ್ಲದೆ.

ಸಂಧದ ಸರಕಾರವು, ಲೋಕಲ್ ಬೋರ್ಡ್ ಮತ್ತು ಮ್ಯುನಿಸಿಪಾಲಿಟಿ ಕೌನ್ಸಿಲುಗಳಲ್ಲಿರುವ ತನ್ನ ವೇತನಹೊಂದುವ ಅಧಿಕಾರಿಗಳು ಆಯಾ ಸ್ಥಾನಗಳಿಂದ ರಾಜಿನಾಮೆ ಕೊಡುವಂತೆ ಕೇಳಿಕೊಂಡಿದೆ; ಇನ್ನು ಬಿನ್ ಸರಕಾರೀ ಮೆಂಬರರೇ ಅವುಗಳಲ್ಲಿ ಸೇರುವರು. ಸರಕಾರದ ಸಂಬಳ ಪಡೆವ ಯಾರೂ ನಾಟಕಾದಿಗಳಿಗೆ ಫ್ರೀಪಾಸು ಪಡೆಯಬಾರದೆಂದೂ ಎಚ್ಚರಿಸಲಾಗಿದೆ.

ಕೊಂಗ್ರೆಸ್ಸಿನವರು ನಮ್ಮ ಬಾಲಹಿಡಿದು ಕುಣಿಯುವವರು.

ಲಕ್ನೋ ವಿಶ್ವವಿದ್ಯಾಲಯದ ಪ್ರಮುಖಾಧಿಕಾರಿಗಳೂ ಲಿಬರಲ್ ಪಕ್ಷದ ಮುಖ್ಯಸ್ಥರಲ್ಲೊಬ್ಬರೂ ಆದ ಡಾ. ಆರ್. ಪಿ. ಪರಾಂಜಪೆ ಎಂಬವರು "ಲಿಬರಲ್ ಸಂಗಡವೂ ಅದರ ಕಾರ್ಯಕ್ರಮಗಳೂ" ಎಂಬುದರ ಮೇಲೆ ಭಾಷಣಮಾಡುತ್ತ ಹೀಗೆಂದು ಹೇಳುತ್ತಿರುವರು. "ಮದ್ಯಪಾನ ನಿಷೇಧ ಎಂಬುದು ಪ್ರತಿಯೊಬ್ಬನ ಬಾಯಿ ಮಾತಾಗಿರುವ ಪ್ರಶ್ನೆಯು. ಮೊದಲು ನಮ್ಮಿಂದ ಪ್ರಾರಂಭಿಸಲ್ಪಟ್ಟಿತು. ನಾವು ಮಾಡಿದ್ದುದನ್ನೇ ಕೊಂಗ್ರೆಸ್ಸಿನವರು ಎತ್ತಿಕೊಂಡು ಕುಣಿಯುತ್ತಿರುವರು.

"ಈಗ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಪ್ರತಿಯೊಂದು ಮಾತಿಗೆ ಸತ್ಯಾಗ್ರಹ ಹೂಡಲಾಗುತ್ತದೆ. ಪ್ರತಿಯೊಬ್ಬನ ಮನಸ್ಸಿಗೆ ತೃಪ್ತಿಯಾಗುವಂತೆ ನಡದುಕೊಳ್ಳಲು ಯಾವ ಸರಕಾರಕ್ಕೂ ಸಾಧ್ಯವಿಲ್ಲ. ಹೀಗಿರುವಾಗ ಆಗಾಗ್ಗೆ ಸತ್ಯಾಗ್ರಹ ನಡೆಸುವುದೆಂದರೇನು? ಮಾತು ಮಾತಿಗೆ ಸತ್ಯಾಗ್ರಹ ಹೂಡುತ್ತೇನೆ ಎಂದು ಹೇಳುವುದು ತಪ್ಪು ನೀತಿ. ನಾನೂ ನನ್ನ ಪಕ್ಷದವರೂ ಆತ್ಮ ಗೌರವ ಮತ್ತು ಆತ್ಮಾವಲಂಬನ ದ್ಯೋತಕವಾದ ಸ್ವಾತಂತ್ರ್ಯ ಬೇಕೆನ್ನುತ್ತೇವೆ. ಸಾಮರ್ಥ್ಯವಿಲ್ಲದ ಸ್ವಾತಂತ್ರ್ಯ ನಮಗೇತಕ್ಕೆ?"

THE
BANK OF MANGALORE LTD., MANGALORE
ESTD. 1931.

Branches:- Panemangalore, Mudabidri & Padubidri.

Chairman:—**Philip J. Chandran, Esq.**,
Retd. Dt. Registrar of Joint Stock Companies.

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors.*



Distributors for South Kanara:—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

S. U. N. & Co.,

Silk Merchants,
Chaukhamba, BENARES CITY.

ಈಗಿನ ತರಹ(ಕಾಶಿ) ಬೆನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 10 ಮೊಳದ 2¼ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣ ತರದ್ದು 18 ಮೊಳ ಬುಟ್ಟ ಶೀರೆಗಳು ರೂ. 35ರಿಂದ ರೂ. 55. ಪಟಲು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 16, ಅಗಲ 2¼ ರೂ. 20 ರಿಂದ 35ರ ವರೆಗೆ. ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ: —

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನಾರಿಸ್ ಸಿಟಿ.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ.
ಗರ್ಭಪಾಲ— ಗರ್ಭಶೂಲೆ, ಗರ್ಭಸ್ರಾವಕ್ಕೆ.
ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ.
ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ಮೃತ್ಯುಂಜಯ ಕಾಸವ— ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.
ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ.
ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ— ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ದಕ್ಷಿಣೆಯ ಭಟ್ಟರು

(ಲೇಖಕರು:–ಕಬ್ಬಿನಾಡಿ ಶ್ರೀನಿವಾಸ ಶಟ್ಟಿ, ಕಾರ್ಕಳ)

'ಓ ಸ್ವಾಮಿ, ಪ್ರಭುಗಳೇ, ಬನ್ನಿ, ಹೀಗೆ ಕುಳಿತುಕೊಳ್ಳಿ' ಎಂದು ರಾಮಕೃಷ್ಣಾಚಾರ್ಯರು ಶೇಟ್ ಜಗನ್ನಾಥರಾಯರು ಹಿಡಿದಿದ್ದ ಹಣ್ಣುಕಾಯಿಗಳ ತಟ್ಟೆಯನ್ನು ಕೈಗೆ ತೆಗೆದುಕೊಂಡರು. 'ಸ್ವಾಮಿ, ದೇವದರ್ಶನ ಮಾಡಿಕೊಂಡು ಬನ್ನಿ,' ಎಂದು ನಯವಾದ ಮಾತುಗಳನ್ನಾಡಿ ಎದುರಿಗೆ ಕುಳಿತಿದ್ದ ಒಬ್ಬ ಹುಡುಗನಿಗೆ ಜನಿವಾರ ಹಾಕಿ 'ಸರಿ, ಇನ್ನು ದಕ್ಷಿಣೆ ಕೊಟ್ಟು ಮನೆಗೆ ಹೋಗು' ಎಂದರು

ಹೀಗಾದೀತೆಂದು ಜಗನ್ನಾಥರಾಯರು ಕನಸುಮನಸುಗಳಲ್ಲಿ ಕೂಡ ಎಣಿಸಿರಲಿಲ್ಲ ಅವರು ತಬ್ಬಿಬ್ಬಾಗಿ ಇದ್ದಲ್ಲೇ ನಿಂತುಬಿಟ್ಟರು ಮತ್ತೆ ಒಂದೆರಡು ಕ್ಷಣಗಳ ತನಕ ಸುತ್ತುಮುತ್ತ ನೋಡಿದರು ಅಲ್ಲಿ ಹಲವು ಮಂದಿ ಪುರೋಹಿತರು ಮಂತ್ರಪಾಠ ಮಾಡುತ್ತ ಎದುರಿಗೆ ಕೂತುಕೊಂಡವರ ಕೊರಳುಗಳಿಗೆ ಜನಿವಾರ ಹಾಕಿ ದಕ್ಷಿಣೆ ತೆಕ್ಕೊಳ್ಳುತ್ತ ಇದ್ದರು ಎಲ್ಲಾ ಪುರೋಹಿತರ ದೃಷ್ಟಿ–ಆಚಾರ್ಯ ರಾಯರು ಗಳ ಮೇಲೆ! ಕೆಲವರು ಹಲ್ಲು ಕಡಿಯುತ್ತಿದ್ದರು ಮತ್ತೆ ಕೆಲವರು ತುಟಿಗಳನ್ನು ನಾಲಗೆಯಿಂದ ಸವರಿಕೊಳ್ಳುತ್ತಿದ್ದರು ಉಳಿದವರು ಕೆಂಪು ಕಣ್ಣು ಮಾಡಿ ಕಿಡಿ ಹಾರಿಸುತ್ತಿದ್ದರು

ರಾಮಕೃಷ್ಣಾಚಾರ್ಯರ ಹಿಂದುಗಡೆಯಲ್ಲಿಯೇ ಬೆನ್ನಿಗೆ ಬೆನ್ನು ಮಾಡಿ ನಾರಾಯಣ ತಂತ್ರಿಗಳು ನಿಂತುಕೊಂಡಿದ್ದರು ಅವರ ಮತ್ತು ಜಗನ್ನಾಥರಾಯರ ಕಣ್ಣುಗಳು ಒಂದಾದುವು ಅಂತಲ್ಲಿಂದಲೇ ತಂತ್ರಿಗಳು–'ಬನ್ನಿ ಸ್ವಾಮಿ, ಹೀಗೆ ಬನ್ನಿ' ಎಂದು ಕೈಕಣ್ಣುಗಳ ಸನ್ನೆಯಿಂದ ರಾಯರನ್ನು ಕರೆದರು

ರಾಯರು ಆಚಾರ್ಯರ ಮುಖ ನೋಡಿದರು—ಅವರ ಮುಖದಲ್ಲಿ ನಗುವಿತ್ತು, ಕಾರ್ಯಸಾಧಿಸಿದೆಂಬ ಸಂತೋಷವಿತ್ತು 'ಸ್ವಾಮಿ, ಒಂದು ಸುತ್ತು ತೆಗೆದು ಕಾಣಿಕೆ ಹಾಕಿ ಪ್ರಸಾದ ತೆಗೆದುಕೊಂಡು ಬನ್ನಿ' ಎಂದು ಆಚಾರ್ಯರು ಹೇಳುತ್ತಿರುವಾಗಲೇ ಮತ್ತೊಬ್ಬರ ಕೊರಳಿಗೆ ಜನಿವಾರ ಹಾಕಿದರು

ರಾಯರು ದೇವಸ್ಥಾನದ ಸುತ್ತು ತೆಗೆದುಕೊಂಡು ಬಂದರು ಕಾಣಿಕೆ ಹಾಕಿದರು ಪ್ರಸಾದ ತೆಗೆದುಕೊಂಡರು ಅಷ್ಟರಲ್ಲಿ ತಂತ್ರಿಗಳು ಮುಂದೆ ಬಂದು–'ಸ್ವಾಮಿ, ಹೀಗೆ ಬನ್ನಿ ಎಲ್ಲವೂ ಸಿದ್ಧವಾಗಿದೆ' ಎಂದರು

ಅತ್ತ ಹೋದರೆ ಹೊಳೆ, ಇತ್ತ ಬಂದರೆ ದರಿ ಎಂಬ ಹಾಗೆ ಆಯಿತು—ರಾಯರಿಗೆ ಅವರು ನಿಂತಲ್ಲೇ ನಿಂತುಕೊಂಡು ಇಬ್ಬರನ್ನೂ ಪಕ ಪಕ ನೋಡಲಾರಂಭಿಸಿದರು

ಅಷ್ಟು ಹೊತ್ತಿನಲ್ಲಿ ರಾಯರು ಮತ್ತಿಬ್ಬರು ಹುಡುಗರಿಗೆ ಜನಿವಾರ ಹಾಕಿ ದಕ್ಷಿಣೆ ತೆಗೆದುಕೊಂಡರು ಅವರು ನಿಂತುಕೊಂಡೇ ಇರುವ ರಾಯರನ್ನು ನೋಡಿ 'ಏನು ನಿಂತೇ ಇದ್ದೀರಿ, ರಾಯರೆ? ಬನ್ನಿ ನೋಡುವ ಎಂದು ಕೈಹಿಡಿದೆಳೆದು ಮುಂದುಗಡೆ ಕುಳ್ಳಿರಿಸಿದರು

ತಂತ್ರಿಗಳು ರಾಯರಿಗಿಂತ ಪ್ರಾಯದಲ್ಲಿ ಬಹಳ ಚಿಕ್ಕವರು ಅನುಭವವೂ ಕೊಂಚ ಕಡಿಮೆ ಇಲ್ಲವಾದರೆ ಈ ಕೊಳ್ಳೆಯ ಬೇಟೆಯಾಡಿ ಕೃತಕೃತ್ಯರಾಗುತ್ತಿದ್ದರು ಆದರೆ ಈಗ ಉಪಾಯವಿಲ್ಲ ಆದ್ದರಿಂದ ಅವರು ಹಲ್ಲು ಕಡಿಯುತ್ತ ನಿಂತರು ಮತ್ತೇನು ಮಾಡಬಹುದು?

ಆಚಾರ್ಯರು ರಾಯರಿಗೆ ಯಜ್ಞೋಪವೀತ ಕೊಟ್ಟು–'ಸ್ವಾಮಿ, ಇನ್ನು ಹಳೆ ಜನಿವಾರವನ್ನು ತೆಗೆದುಹಾಕಿ' ಎಂದರು. ಕೂತು ಕೂತು ಬಳಲಿದ ಕಾಲುಗಳನ್ನು ಸ್ವಲ್ಪ ಸಡಿಲಿಸಿಕೊಂಡು ಒಂದು ನಿಟ್ಟುಸಿರು ಬಿಟ್ಟರು.

ರಾಯರು ಚಕ್ರದ ಪಾವಲಿಯನ್ನು ತೆಗೆದು ಕೈಯಲ್ಲಿ ಹಿಡಕೊಂಡರು. ಆಚಾರ್ಯರು ಅದರ ಮೇಲೆ ತುಳಸಿದಳ ಇಟ್ಟು, ನೀರು ಹಾಕಿ ಮಂತ್ರೋಚ್ಚಾರ ಮಾಡಿದರು ಮತ್ತೆ ಪಾವಲಿ ತೆಗೆದುಕೊಂಡ – ಹೂಂ, ಸ್ವಾಮಿ, ದಳ ಮುಡಿದುಕೊಳ್ಳಿ' ಎಂದರು

ಪುರೋಹಿತರು ಹಸಿದ ಹುಲಿಮರಿಗಳಂತೆ ಒಮ್ಮೆ ಆಚಾರ್ಯರನ್ನೂ ಇನ್ನೊಮ್ಮೆ ಅವರ ತಟ್ಟೆಯನ್ನು ಸೇರಿದ ಪಾವಲಿಯನ್ನೂ ನೋಡಿದರು ಅವರು ಸೆರಗಿಗೆ ಗಂಟುಹಾಕಿಕೊಂಡರು–ಇದಕ್ಕೆ ತಕ್ಕ ಪ್ರತೀಕಾರ ಮಾಡದೆ ಇರುವುದಿಲ್ಲವೆಂದು

ಅಂತೂ ಪುರೋಹಿತರ ಭಾಗ್ಯಚಕ್ರವು ಚಕ್ರವಾಗಿಯೇ ಉಳಿಯಿತು—ಆಚಾರ್ಯರ ಅತಿಕ್ರಮದಿಂದ

ಯಜಮಾನರ ನಿತ್ಯ ನೈಮಿತ್ತಿಕ ಕಾರ್ಯಗಳನ್ನು ಅವರವರ ಮನೆಗಳಲ್ಲಿಯೇ ಪುರೋಹಿತರು ಮಾಡಿಸಿಕೊಂಡು ಬರುವುದು ಬಹುಕಾಲದಿಂದ ನಡೆದುಬಂದ ಪದ್ಧತಿ ಆದರೆ ಕಾಲ ಬದಲಾವಣೆಯಾದ ಹಾಗೆ ಒಬ್ಬೊಬ್ಬ ಯಜಮಾನರಿಗೆ ಹತ್ತಾರು ಮಂದಿ ಪುರೋಹಿತರು, ಒಬ್ಬೊಬ್ಬ ಪುರೋಹಿತರಿಗೆ ನೂರಾರು ಮಂದಿ ಯಜಮಾನರು ಆದರು ಯಾವ ಕಾರ್ಯವೂ ಸಕಾಲದಲ್ಲಿ ವ್ಯವಸ್ಥೆಯಿಂದ ಆಗುವ ಹಾಗೆ ಇದ್ದಿಲ್ಲ ಇದರಿಂದ ಯಜಮಾನರಿಗೂ ಕಷ್ಟ, ಪುರೋಹಿತರಿಗೂ ಕಷ್ಟ. ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ ಎಂದು ಪುರೋಹಿತರು ಹೇಳುವುದು, ಪರಿಶ್ರಮಕ್ಕೆ ತಕ್ಕ ಫಲ ಎಂದು ಯಜಮಾನರು ಹೇಳುವುದು ಹೀಗಾಗಿ ನಿತ್ಯ ನೈಮಿತ್ತಿಕ ಕಾರ್ಯಗಳು ಹಲವು ಮಕ್ಕಳ ತಾಯಿಯಂತಾದುವು

ಇದೊಂದು ದೊಡ್ಡ ಸಮಸ್ಯೆ ಸಮಸ್ಯೆಯ ಪೂರ್ತಿ ಮಾಡುವುದರಲ್ಲಿ ಪುರೋಹಿತರು ಕವಿಗಳಿಗಿಂತಲೂ ಗಟ್ಟಿಗರು ಅವರು ಚೆನ್ನಾಗಿ ಆಲೋಚಿಸಿ ಪುರೋಹಿತರು ಕಂಬೈನ್ಡ ಸರ್ವಿಸ್ ಮತ್ತು ಏಜನ್ಸಿ ವ್ಯವಹಾರಕ್ಕೆ ಆರಂಭಿಸಿದರು ಯಜಮಾನರಿಗೆ ಕಡಿಮೆ ಖರ್ಚಿನಿಂದ ಕೆಲಸವಾಗಬೇಕು, ಪುರೋಹಿತರಿಗೆ ಕೂತು ಕೊಂಡಲ್ಲಿ ದಕ್ಷಿಣೆ ಲಾಭವಾಗಬೇಕು, ಆದ್ದರಿಂದ ಅಂದು ಮೊದಲ್ಗೊಂಡು ಉಪಾಕರ್ಮ, ಕೃಷ್ಣಾಷ್ಟಮಿ ಮೊದಲಾದವು ನಗರದ ಅನಂತೇಶ್ವರ ದೇವಾಲಯದಲ್ಲಿಯೇ ನಡೆಯಬೇಕೆಂದೂ ಯಜಮಾನರು–ಪುರೋಹಿತರು ಅಲ್ಲಿಯೇ ಸೇರಬೇಕೆಂದೂ ನಿರ್ಣಯವಾಯಿತು

ಕೆಲವು ವರ್ಷಗಳು ಹೀಗೆ ಕಳೆದುವು ಈ ವರ್ಷ ಮಾತ್ರ ಒಂದು ಹೊಸ ಸಮಸ್ಯೆ ಉಪಸ್ಥಿತವಾಯಿತು.

ಜಗನ್ನಾಥರಾಯರು ತಾಲೂಕು ಕಚೇರಿಯ ಗುಮಾಸ್ತರಾಗಿ ನಗರಕ್ಕೆ ವರ್ಗವಾಗಿ ಬಂದಿದ್ದರು ಹೆಂಡತಿ ಮಕ್ಕಳೊಂದಿಗೆ ನಗರದಲ್ಲಿಯೇ ಬಿಡಾರ ಮಾಡಿಕೊಂಡಿದ್ದರು ಅವರು ಒಳ್ಳೆಯ ಶ್ರದ್ಧಾಳುಗಳು. ವಿಶ್ವಾಸಿಗಳು ನಿತ್ಯಕರ್ಮಗಳನ್ನಾದರೂ ಇಂದಲ್ಲ, ನಾಳೆ ಮಾಡಬಹುದೆಂದು ಬಿಟ್ಟಾರು, ಆದರೆ ವರ್ಷಕ್ಕೊಮ್ಮೆ ಬರುವ ನೈಮಿತ್ತಿಕ ಕರ್ಮಗಳನ್ನು ಎಷ್ಟುಮಾತ್ರಕ್ಕೂ ಬಿಡಲಾರರು ಪುರೋಹಿತರಿಗೆ ದಾನ ದಕ್ಷಿಣೆ, ಭೋಜನಾದಿಗಳನ್ನು ಕೊಟ್ಟು ಅವರ ಪರಮಾನುಗ್ರಹಗಳಿಗೆ ಪಾತ್ರರಾಗಿ ಇರುವಂಥವರು

ನಗರಕ್ಕೆ ಬಂದು ನಾಲ್ಕು ತಿಂಗಳುಗಳಾಗಿದ್ದುವು ಮಾತ್ರ ಕೆಲಕೆಲವು ನೈಮಿತ್ತಿಕ ಕಾರ್ಯಗಳನ್ನು ನಾರಾಯಣ ತಂತ್ರಿಗಳಿಂದಲೇ ಮಾಡಿಸಿದ್ದರು ತಂತ್ರಿಗಳು ಸಮಯವಿದ್ದಾಗ ತಾವೇ ಪೌರೋಹಿತ್ಯಕ್ಕೆ ಬರುತಿದ್ದರು ಸಮಯವಿಲ್ಲದಾಗ ಯಾರಾದರೂ ಮಾಣಿಯನ್ನು ಕಳುಹಿಸಿ ಕೊಡುತ್ತಿದ್ದರು ಈ ಕಾರಣದಿಂದ ರಾಯರ ಪುರೋಹಿತರು ಯಾರೆಂದು ನಿಷ್ಕರ್ಷೆಯಾಗಿರಲಿಲ್ಲ

ಉಪಾಕರ್ಮ ಬಂದಿತು. ರಾಯರು ಜನಿವಾರ ಹಾಕಿದವರಿಗೆ ಚಕ್ರದ ಪಾವಲಿ ದಕ್ಷಿಣೆ ಕೊಡುವರೆಂದು ಅವರೇ ಒಂದು ಸಂದರ್ಭದಲ್ಲಿ ಹೇಳಿದ್ದರು. 'ನೀವು ದೇವಸ್ಥಾನಕ್ಕೆ ಬನ್ನಿ' ಎಲ್ಲ ಕೆಲಸ ನಾನೇ ಸುಧಾರಿಸಿ ಕಳುಹಿಸಿ ಕೊಡುತ್ತೇನೆ' ಎಂದು ತಂತ್ರಿಗಳೇ ಹೇಳಿದ್ದರು

ಚಕ್ರದ ಪಾವಲಿ ಯಾರಿಗೆ ಬೇಡ? ಹತ್ತು ಹದಿನಾರು ಮಂದಿಗಳ ಕೊರಳಿಗೆ ಜನಿವಾರ

(೧೧ನೇ ಪುಟವನ್ನು ನೋಡಿರಿ)

[illegible] ರಾಷ್ಟ್ರಗಳು ಚೀನಕ್ಕೆ ಸಹಾಯ ಮಾಡಬಹುದೆ?

ವಿಷಮ ಕಾದಾಡುತ್ತಿರಲು ಯೂರೋಪು ಒಂದುಗೂಡುತ್ತಿದೆ

ಚೀನಾ ಜಪಾನುಗಳೊಳಗಣ ಕಾಳಗವು ಇಂದು ಎಲ್ಲಾ ರಾಷ್ಟ್ರಗಳ ದೃಷ್ಟಿಯನ್ನು ಸೆಳೆದಿರುತ್ತದೆ. ಎಲ್ಲವೂ ಚೀನಿಯರ ಪಕ್ಷಕ್ಕೆ ಸಹಾನುಭೂತಿಯನ್ನು ತೋರುತ್ತಿರುವುವು, ಆದರೆ ಈ ಸಹಾನುಭೂತಿಯು ಸಹಾಯದ ರೂಪವನ್ನು ತಾಳಲಿಕ್ಕಿಲ್ಲವೆಂದೇ ಹೇಳಬೇಕಾಗಿದೆ. ಕರಾರುಗಳೆಷ್ಟೇ ಇರಬಹುದು. ಆದರೆ ಬೇರೊಂದು ರಾಷ್ಟ್ರದ ಸ್ವಾತಂತ್ರ್ಯವನ್ನು ರಕ್ಷಿಸಲು ಯಾವ ರಾಷ್ಟ್ರವೂ ಮುಂದೊತ್ತಿ ಬರುವಂತಿಲ್ಲ. ಪ್ರತಿಯೊಂದು ರಾಷ್ಟ್ರವು ಇಂದು ತನ್ನ ಆದಾಯದ ಕಡೆಗೇ ಲಕ್ಷ್ಯವನ್ನಿಟ್ಟಿರುವುದಲ್ಲದೆ, ಅನ್ಯರ ಸ್ವಾತಂತ್ರ್ಯದ ಕಡೆಗಲ್ಲ. ಎಂದಿನ ವರೆಗೆ ಯೂರೋಪಿನ ರಾಷ್ಟ್ರಗಳು ಈ ಸ್ವಾರ್ಥಮಯ ಲಾಲಸೆಯನ್ನು ಬಿಡಲೊಲ್ಲವೊ ಅಂದಿನ ವರೆಗೆ ಚೀನಕ್ಕೆ ಯಾರಿಂದಲೂ ಒಂದಿಷ್ಟು ಸಹಾಯವು ಆಗುವಂತಿಲ್ಲ. ಅಬಿಸೀನಿಯದ ಪ್ರಕರಣದಂತೆ ಈ ಯುದ್ಧವು ಮುಗಿಯುವುದೆಂಬುದರಲ್ಲಿ ನಿಸ್ಸಂದೇಹ. ಇದಿ ಯೂರೋಪು ಇಂದು ಸ್ವಾರ್ಥ ಮತ್ತು ಅಸೂಯೆಯ ಕೂಪದಲ್ಲಿ ಮುಳುಗಿರುವುದು.

ಇಂಗ್ಲೆಂಡಿನ ಮನೋವೃತ್ತಿ

1932ನೆಯ ಮಂಚೂರಿಯದ ಪ್ರಸಂಗದಲ್ಲಿ ಅಮೇರಿಕಕ್ಕೆ ವ್ಯಾಪಾರ ಸಂಬಂಧದಲ್ಲಿ ಸಕ್ತಿಗೆ ಕೊಟ್ಟ ಇಂಗ್ಲಾಂಡು ಇಂದು ಚೀನದ ಅಧೋಗತಿಯನ್ನು ಕಾಣಿಸದಿರದು. ಕಾರಣ ಚೀನದ ವ್ಯಾಪಾರಕ್ಕಾಗಿ ಜಪಾನಿನೊಡನೆ ಒಂದಾದರೂ ಕರಾರುಗಳನ್ನು ಮಾಡಬಹುದಾಗಿ ಬ್ರಿಟನ್ನಿಗೆ ಧೈರ್ಯವಿದೆ. ಬ್ರಿಟನ್ನಿನ ಒಲುಮೆಯು ಜಪಾನಿನ ಕಡೆಗಿರುವುದಲ್ಲದೆ ಚೀನದತ್ತ ಇಲ್ಲ. ಆದುದರಿಂದ ಇಂಗ್ಲಾಂಡು ಈಗ ಸುಮ್ಮಗಿರಬಹುದು. ಇಲ್ಲವೆ ಉಭಯ ಪಕ್ಷಗಳೊಡನೆಯೂ ಸಹಾನುಭೂತಿಯನ್ನು ಪ್ರದರ್ಶಿಸಿ ಈಸ್ಟ್ ಇಂಡಿಯಾ ಕಂಪೆನಿಯಂತೆ, ಯುದ್ಧಾಂತ್ಯದಲ್ಲಿ ತನ್ನ ಹವಿರ್ಭಾಗವನ್ನು ಕೇಳಬಹುದು.

ಇಥಿಯೋಪಿಯದ ಪದಭ್ರಷ್ಟ ಚಕ್ರವರ್ತಿಯಾದ ಹೈಲ್ ಸೆಲಾಸಿಯವರು, ಸದ್ಯದಲ್ಲಿಯೇ ಪ್ರಕಟಿಸಬೇಕೆಂದಿದ್ದ ಆತ್ಮಚರಿತ್ರೆಯು ಈಗ ಛಾಪೆಯ ಮುಖವನ್ನೇ ಕಾಣಲಾರದೆಂಬ ವರ್ತಮಾನವು ಮೇಲಿನ ವಾದವನ್ನು ಇನ್ನಷ್ಟು ಸ್ಪಷ್ಟೀಕರಿಸುತ್ತದೆ. ಇದಕ್ಕೆ ಕಾರಣವೇನೆಂದು ವಿಚಾರಿಸಲಾಗಿ ಅರಸರ ರಾಜಕೀಯ ಮಂತ್ರಾಲೋಚಕರು ಅವರಿಗೆ ಹಾಗೆಯೇ ಬೋಧೆಯನ್ನು ಕೊಟ್ಟಿರುವರಾಗಿ ತಿಳಿದು ಬಂದಿದೆ. ಒಮ್ಮೆ ಚಕ್ರವರ್ತಿಯಾಗಿದ್ದವರು ಈಗ ಬ್ರಿಟನ್ನಿನಲ್ಲಿ ತಲೆ ಮರೆಸಿಕೊಂಡಿರುವರು; ಅವರನ್ನು ಪದಚ್ಯುತರನ್ನಾಗಿ ಮಾಡಿದ ರಾಷ್ಟ್ರಗಳೆರಡೂ (ಇಂಗ್ಲಾಂಡು ಮತ್ತು ಇಟೆಲಿ) ಬಂಧುತ್ವದ ಸಲ್ಲಾಪಗಳನ್ನಾಡುತ್ತಿವೆ. ಇನ್ನು ಸದ್ಯದಲ್ಲಿಯೇ ಅಬಿಸೀನಿಯದಲ್ಲಿ ಇಟೆಲಿಯ ಪ್ರಭುತ್ವವು ಒಪ್ಪಿಕೊಳ್ಳಲಾಗುವುದಲ್ಲದೆ, ಹೈಲ ಸೆಲಾಸಿಯವರನ್ನು ಬ್ರಿಟಿಷರು ಇಂಗ್ಲಾಂಡಿನಿಂದ ಹೊರಗಟ್ಟಿದರೆ, ಅಥವಾ ಇಲ್ಲವೆ, ಮುಸಲೀನಿಯವರಿಗೆ ಒಪ್ಪಿಸಿದರೆಂದೂ ಕೇಳಿ ಬಂದರೆ ಅದೊಂದು ಆಶ್ಚರ್ಯವೆನಿಸದು!

ವಿಷಮವು ಕಾದಾಡುತ್ತಿರಲು ಯೂರೋಪು ಒಂದುಗೂಡುತ್ತಿದೆ.

ವಿಶ್ವದಲ್ಲಿ ಈ ವಿಧ ಎರಡು ಜನಾಂಗಗಳು ಯುದ್ಧದ ಗರ್ಭದಲ್ಲಿ ಯಾತನೆಯನ್ನು ಅನುಭವಿಸುತ್ತಿರಲು, ಯೂರೋಪು ಯುದ್ಧವನ್ನು ತಪ್ಪಿಸಲು ಕೈಲಾದ ಪ್ರಯತ್ನವನ್ನು ಮಾಡುತ್ತಿದೆ. ಒಮ್ಮೆ ಶತ್ರುಗಳೆನಿಸಿದ್ದ ಇಂಗ್ಲೆಂಡು ಮತ್ತು ಇಟೆಲಿಯು ಸ್ನೇಹವನ್ನು ಬೆಳಸಿರುವುವು. ಜಪಾನಿನವರು ಬ್ರಿಟಿಷರ ಅಧಿಕಾರವನ್ನೂ ವ್ಯಾಪಾರ ಸ್ವಾತಂತ್ರ್ಯವನ್ನೂ ಅಣಕಿಸುತ್ತಿರಲು, ಅವರಿಗೆ ಶಾಸ್ತಿ ಮಾಡಲು ತನಗೆ ಒತ್ತಾಸೆ ಗೈಯಬೇಕೆಂದು ಮಿ: ಚೇಂಬರಲೇನರು ಮುಸಲೇನಿಯವರೊಡನೆ ಕೇಳಿರುವರು. ಬ್ರಿಟಿಷರ ರಾಜತಂತ್ರವು ಇಂತಹುದಿದೆ! ಒಮ್ಮೆ ಅಬಿಸೀನಿಯಾ ಯುದ್ಧದ ಸಮಯದಲ್ಲಿ ಇಟೇಲಿಯ ಮೇಲೆ ಸಂಕ್ಷನುಗಳನ್ನು ಹೊರಿಸುವಂತೆ ಜನಾಂಗ ಸಂಘಕ್ಕೆ ಪ್ರೇರೇಪಿಸಿದ ಆ ಬ್ರಿಟನ್ನೇ ಇಂದು ಇಟೇಲಿಯೊಡನೆ ಮೈತ್ರಿಯನ್ನು ಸ್ಥಾಪಿಸಿರುವುದು.

ಅಮೇರಿಕದ ದಲಾಭಿಲಾಷೆ

ಅಮೇರಿಕವೂ ಈ ಯುದ್ಧದಿಂದ ಆದಷ್ಟು ದೂರ ನಿಲ್ಲಲು ಪ್ರಯತ್ನಿಸುತ್ತಿದೆ. ಅಲ್ಲಿಯ ಜನರೆಲ್ಲರೂ ಚೀನಿಯರಿಗಾಗಿ ಬಹಳ ನೊಂದಿರುವರು. ಆದರೆ ಇವರ ಸಹಾನುಭೂತಿಯು ಬಾಯಿ ಮಾತಿನಲ್ಲೇ ಮುಗಿಯುವುದಲ್ಲದೆ ಕಾರ್ಯರೂಪವನ್ನು ಹೊಂದಲಿಕ್ಕಿಲ್ಲ. ಪರಂತು ಈ ಯುದ್ಧದಿಂದಾಗಿ ಅಮೇರಿಕದ ಕೆಲವು ಮಂದಿಗೆ ತಮ್ಮ ಚೀಲಗಳನ್ನು ತುಂಬಿಕೊಳ್ಳಲು ಅನುಕೂಲವಾಗಿದೆ. ಹೇರಳ ಸಂಬಳದ ಲಾಲಸೆಯಿಂದ ಅಮೇರಿಕದಲ್ಲಿ ನಿರುದ್ಯೋಗಿಗಳಾಗಿದ್ದ ಅನೇಕ ಮಂದಿ ವಿಮಾನ ಚಾಲಕರು ಚೀನಕ್ಕೆ ಹೋಗಲಿರುವರು. ಇಷ್ಟರ ತನಕ ಚೀನಕ್ಕೆ ಹೊರಟವರ ಸಂಖ್ಯೆಯು 1?2ಕ್ಕೆ ಮಿಕ್ಕಿದೆ.

ಅಲ್ಲದೆ ಮಿ. ನೋರಿಸ್ ಎಂಬವರು ಚೀನಾ ಸರಕಾರದ ಪರವಾಗಿ 500,000 ಡಾಲರುಗಳಷ್ಟು ಮೌಲ್ಯದ ಯುದ್ಧೋಪಕರಣಗಳಿಗೆ ಅಮೇರಿಕದಲ್ಲಿ ಆರ್ಡರ್ ಕೊಟ್ಟಿರುವರು. ಮಿ. ಕೆಂತಾಲ್ ಎಂಬವರು ಬಿಕರಿಗೆ ಸಿದ್ಧವಾಗಿರುವ ಯುದ್ಧದ ಹಡಗುಗಳೆಲ್ಲವನ್ನೂ ತನಗೆ ತೆರಬೇಕೆಂದು ಅಮೇರಿಕದ ಓಶಿಯಾನಿಕ್ ಎಂಡ್ ನೆವಿಗೇಶನ್ ಕಂಪೆನಿಯವರಿಗೆ ಟೆಲಿಫೋನ್ ಮೂಲಕ ತಿಳಿಸಿರುವರು.

ಇದರಿಂದಾಗಿ ಕಳೆದ ಮಹಾಯುದ್ಧದ ಸಮಯದಲ್ಲಾದಂತೆ ಈಗಲೂ ಅಮೇರಿಕದ ಯುದ್ಧಸಾಮಗ್ರಿಗಳು ಮಾರಾಟವಾಗಿ, ಅಲ್ಲಿ ಧನದ ರಾಶಿಯೇ ಸುರಿಯುವಂತಾಗುವುದು. ಚೀನಾ ದೇಶದಲ್ಲಿ ಅಮೇರಿಕಾನರಿಗೆ ಇರುವ ಆಸಕ್ತಿಯು ಇಷ್ಟೆ. ವಿಶ್ವದ ಜನಾಂಗಗಳೆರಡು ಈ ಬಗೆಯಲ್ಲಿ ಬಡಿದಾಡಿ, ತಮ್ಮ ಸಾವಿರಾರು ಮಂದಿ ಜನರನ್ನು ತೋಪುಗಳ ಬಾಯಿಗೆ ಒಡ್ಡಿ ಯೂರೋಪು ಅಮೇರಿಕಾ ದೇಶಗಳಿಂದ ಯುದ್ಧೋಪಕರಣಗಳನ್ನು ಪಡೆಕೊಳ್ಳುವುದು ತೀರ ಶೋಚನೀಯವಾಗಿದೆ.

ಜರ್ಮನಿಯ ದೃಷ್ಟಿ

ಜರ್ಮನಿಯ ದೃಷ್ಟಿಯೂ ಈ ಚೀನಾ ಜಪಾನು ಕಾಳಗದ ಮೇಲೆ ಬೀಳದೆ ಇಲ್ಲ. ಆದರೆ ಅದು ಪೂರ್ಣ ತಟಸ್ಥಭಾವವನ್ನು ವಹಿಸಿರುವುದು. ರಷ್ಯಾ ದೇಶದವರ ನೆಲೆಯೇನೆಂದು ಜರ್ಮನಿಯು ಪ್ರತೀಕ್ಷಿಸುತ್ತಿದೆ. ಇದಕ್ಕೆ ಕಾರಣವಿದೆ. ಜರ್ಮನಿಯ ಸಾಮಗ್ರಿಗಳಿಗೆ ಚೀನದಲ್ಲಿ ತುಂಬಾ ಗ್ರಾಹಕರಿದ್ದಾರೆ. ಅವರನ್ನು ಕಳೆಕೊಳ್ಳಲು ಜರ್ಮನಿಗೆ ಇಷ್ಟವಿಲ್ಲ.

ಮಾತ್ರವಲ್ಲ, ಬೊಲ್ಶೆವಿಝಂ ವಿರೋಧಕ ಕರಾರಿನಿಂದಾಗಿ ಜರ್ಮನಿಯು ಜಪಾನಿನೊಡನೆ ಸೌಹಾರ್ದದಿಂದಿರಬೇಕಾಗಿದೆ. ಜರ್ಮನಿಯ ಅಭಿಪ್ರಾಯದಂತೆ ಚೀನವು ಕೊಮ್ಯೂನಿಜಂನಿಂದಾಗಿ ಭ್ರಷ್ಟವಾಗಿದೆ. ಈ ಯುದ್ಧವು ಇನ್ನೂ ಮುಂದುವರಿದರೆ, ಜರ್ಮನಿಯು ಅದರಲ್ಲಿ ಭಾಗವಹಿಸಬೇಕಾಗಿ ಬಂದರೆ, ಅದು ಜಪಾನಿಗೆ ಬೆಂಬಲವಾಗಿ ನಿಲ್ಲುವುದಲ್ಲದೆ, ಚೀನಕ್ಕೆ ಸಹಾಯ ಮಾಡಲಿಕ್ಕಿಲ್ಲ. ಜಪಾನಿಗೆ ಜಯವಾಗುವುದೆಂಬುದು ಈಗ ನಿಶ್ಚಿತವಾದ ಮಾತು. ಆದುದರಿಂದ ಜರ್ಮನಿಯೇಕೆ ಚೀನಕ್ಕೆ ಸಹಾಯ ಮಾಡಿ ಜಪಾನಿನ ಕಿಚ್ಚಿಗೆ ಗುರಿಯಾಗಬೇಕು?

ರಷ್ಯದ ಪರಿಸ್ಥಿತಿ

ಎಲ್ಲಿಯಾದರೂ ಚೀನಕ್ಕೆ ಸಹಾಯ ಮಾಡುವುದಾದರೆ ರಷ್ಯವು ಮಾಡಬೇಕು. ಆದರೆ ಈಗಿನ ಪರಿಸ್ಥಿತಿಯಿಂದಾಗಿ ಅದೂ ತನ್ನ ದೇಶದ ಹೊರಗಡೆ ಯುದ್ಧದಲ್ಲಿ ತೊಡಗಲು ಸಿದ್ಧವಾಗಿಲ್ಲ. ರಷ್ಯವು ಚೀನಕ್ಕೆ ಸಹಾಯ ಮಾಡಿದರೆ, ಮರುದಿನವೇ ಜರ್ಮನಿ ಜಪಾನುಗಳೊಳಗಣ ಬೊಲ್ಶೆವಿಝಂ ವಿರೋಧ ಕರಾರು ಜಾರಿಗೆ ಬಂದು, ಉಭಯ ರಾಷ್ಟ್ರಗಳೂ ಒಂದಾಗಿ ಯುದ್ಧರಂಗಕ್ಕೆ ಇಳಿಯಬಹುದು. ಇಂತಹ ಸಮಾಗವು ಸಂಘಟಿಸಲು ರಷ್ಯವು ಅಸ್ಪದ ಕೊಡಲಿಕ್ಕಿಲ್ಲವೆಂದೇ ಹೇಳಬೇಕು.

ಯೂರೋಪು ಇಂದು ತನ್ನ ಆಂತರಿಕ ಗೊಂದಲಗಳಲ್ಲಿಯೇ ಸಮಗ್ನವಾಗಿರುವುದಲ್ಲದೆ, ಚೀನದಲ್ಲಿ ಸಿಡಿದಿರುವ ಘೋರ ಸಂಗ್ರಾಮವನ್ನು ನಿಲ್ಲಿಸಲು ಅದು ಕೈಯೆತ್ತುವಂತಿಲ್ಲ. 1931ರಲ್ಲಿ ಜಪಾನು ಮಂಚೂರಿಯವನ್ನು ಪ್ರವೇಶಿಸಿದಾಗ ಉಂಟಾದಂತೆ ಇಂದಿನ ಪರಿಸ್ಥಿತಿಯೂ ರೂಪುಗೊಳ್ಳುತ್ತಿದೆ. ಅಂತೆಯೆ ಅವಸಾನಗೊಳ್ಳುವಂತೆಯೂ ತೋರುತ್ತದೆ.

ಮುಂದೇನು?

ಆದರೆ ಜಪಾನಿಗೆ ಎಂದೆಂದಿಗೂ ಚೀನದಲ್ಲಿ ಸ್ವೇಚ್ಛಾವರ್ತಿಯಾಗಿ ವಿಹರಿಸಲಿಕ್ಕೆ ಯೂರೋಪು ಬಿಡುವುದೆಂದು ತಿಳಿಯಲಾಗದು. ಬಿಳಿ ಜನಾಂಗಗಳ ಪ್ರಭುತ್ವ ಮತ್ತು ಸ್ವಾತಂತ್ರ್ಯಗಳು ಗಂಡಾಂತರಕ್ಕೀಡಾಗುವ ಅದೊಂದು ಸಮಯವು ಕ್ಷಿಪ್ರದಲ್ಲಿಯೇ ಬಂದೊದಗಲಿದೆ. ಆಗ ಮಾತ್ರ ಪಾಶ್ಚಾತ್ಯ ರಾಷ್ಟ್ರಗಳೆಲ್ಲವೂ ಒಂದಾಗಿ, ಚೀನವನ್ನೇ ಯುದ್ಧದ ಮೂಲವನ್ನಾಗಿ ಕಟ್ಟಿಕೊಂಡು, ಜಪಾನಿನೊಡನೆ, ಶಕ್ತಿ ತುಲನದಲ್ಲಿ ತೊಡಗಬಹುದು. ಅವುಗಳೆಲ್ಲವೂ ಜಪಾನಿನ ಮೂಳೆಗಳನ್ನು ಮುರಿಯುವ ಆ ಪ್ರಸಂಗವು ವಿಶ್ವದ ಚರಿತ್ರೆಯಲ್ಲಿ ಇದಿ ಜಗತ್ತಿನ ಇತಿಹಾಸದಲ್ಲಿ ಅದೊಂದು ವಿಷಾದಕರ ಪ್ರಸಂಗವಾಗಿ ಪರಿಣಮಿಸದಿರದು. ಜಪಾನೂ ಚೀನವೂ ಆ ಯುದ್ಧದಿಂದಾಗಿ ತುಂಬಾ ಕಷ್ಟನಷ್ಟಗಳಿಗೆ ಒಳಗಾಗಬಹುದು. ಎರಡು ಜನಾಂಗಗಳ ಕಲಹದಿಂದಾಗಿ ಸಕಲ ಪೌರಾತ್ಯ ಜನಾಂಗಗಳೂ ಯಾತನೆಗಳನ್ನು ಅನುಭವಿಸಬೇಕಾಗಬಹುದು. ಇದರಲ್ಲಿ ಹಿಂದೂ ದೇಶವು ಬಾಹಿರವಾಗದು. ಆಗ ಮಾತ್ರ ಜಪಾನು ತನ್ನ ರಾಜ್ಯಾಭಿಲಾಷೆಯಿಂದಾಗಿ ವಿಶ್ವದಲ್ಲಿ ಪಾಶ್ಚಿಮಾತ್ಯರ ಪ್ರಭುತ್ವವನ್ನು ಮತ್ತೊಮ್ಮೆ ಸ್ಥಿರಗೊಳಿಸಿದುದಕ್ಕಾಗಿ, ಅದನ್ನು ಇಡೀ ಏಷ್ಯಾಖಂಡವು ದೂಷಿಸದಿರದು!

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. S. 277/37

ಪೆರಿಯಪ್ಪಾಡಿ ರಾಮಭಟ್ಟ........ವಾದಿ

ನಾರಾಯಣ ಭಟ್ಟ ಪಳಳಕುಂಜ ಸುಬ್ರಾಯ ಭಟ್ಟರ ಮಗ–ಉತ್ತರ ಮಲಬಾರು ಜಿಲ್ಲಾ ಬಯನಾಡು ತಾಲೂಕು ವೇಮುರಿ ಗ್ರಾಮದ ಮಾದೊತ್ತಿನಲ್ಲಿ . . . . . . ಪ್ರತಿವಾದಿ

ವಾದಿಯು ಪ್ರತಿವಾದಿಯಿಂದ ಬಹಡಿಮಾಂಡ ನೋಟಿನ ಐವಜು ರೂಪಾಯಿ 1158–2–0ಕ್ಕೆ ದಾವಾ ಮಾಡಿರುತ್ತಾನೆ. ಸದ್ರಿ ದಾವೆಯಲ್ಲಿ ಪ್ರತಿವಾದಿಗೆ ನೋಟೀಸು ಇದೇ ಬರುವ ತಾ. 7–10–37ಕ್ಕೆ ವ್ಯಾದೆ ಆಗಿರುತ್ತದೆ. ಮತ್ತು ಪ್ರತಿವಾದಿಗೆ ಬಹ ವಂದರಿಕ್ಕೆಯಚೀಟಿನ ಪ್ರತಿಫಲದ ಮೈತಿ ಅಮಾನತು ಇರುವ ಐವಜನ್ನು ಈ ಕೋರ್ಟಿಗೆ I. A. R. 818/37ನೆ ಅರ್ಜಿ ಹುಕುಂ ಮೇರೆಗೆ ಜಪ್ತಿಗೂ ಅಪೇಕ್ಷಿಸಿ ಆ ವ್ಯಾದೆಗೆ ತನ್ನಗೆ ಇಟ್ಟಿರುತ್ತದೆ. ಆದುದರಿಂದ ಪ್ರತಿವಾದಿಯು ಖುದ್ದು ಯಾ ವಕೀಲರ ಮುಖಾಂತ್ರ ಈ ಕೋರ್ಟಿಗೆ 10 ಘಂಟೆಗೆ ತಪ್ಪದೆ ಹಾಜರಾಗಿ ತನ್ನ ಆಕ್ಷೇಪಗಳನ್ನು ಇದ್ದರೆ ಸದ್ರಿ ಕೋರ್ಟಿಗೆ ಮನವಿಕೊಳ್ಳತಕ್ಕದ್ದು. ತಪ್ಪಿದರೆ ಆತನನ್ನು ಶಿವ್ಯಾ ಏಂತ ಮಾಡಿ ದಾವಾ ಮುಂದರಿಸಲಾಗುವದು. R. I. A. 1028/37ನೆಗೆ ವಾದಿ ಕಡೆಯಿಂದ ಕೊಟ್ಟ ಅರ್ಜಿಯ ಮೇಲೆ ಆದ ಹುಕುಂ ಪ್ರಕಾರ ಈ ನೋಟೀಸು ಪಾಡಿಸಿರುತ್ತದೆ.

ಪುತ್ತೂರು, 19-9-1937 } **B. Ramachandra Rao**, *Pleader for plff.*

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮನಂಬ್ರ 488/1937

ಬಗಡಿ ಸುಬ್ರಾವ್ . . . . ವಾದಿ

ಮತ್ತು

ರಾವ್ ಬಹದೂರ ನೆಲ್ಲಿಕಾಯಿ ವೆಂಕಟ್ರಾವ . . . ಪ್ರತಿವಾದಿ

ಇವರೊಳಗೆ

ಸದ್ರಿ ವಾದಿಯು ಡಿ. ಪ್ರೊ. ನೋಟಿನ ಅಸಲು ಬಡ್ಡಿ ರೂಪಾಯಿ 557–15–8ಕ್ಕೆ ಪ್ರತಿವಾದಿಯ ಮೇಲೆ ದಾಖಲ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 7–10–1937ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನ ಬಗ್ಗೆ ಇಡೋಣಾಗಿಯದೆ. ಪ್ರತಿವಾದಿಯು ಆ ದಿವಸ ಹಗಲು 11 ಘಂಟೆಗೆ ಹಾಜರಾಗದೆ ಇದ್ದಲ್ಲಿ ಏಕಪಕ್ಷವಾದಿ ತೀರ್ಮಾನಿಸಲ್ಪಡುವದೆಂಬ ಸಂಗತಿ ಈ ಮೂಲಕ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

ಕಾಸರಗೋಡ ತಾ. 16–9–37 } **B. Amrith Rao**, *Pleader for plff.*

ಮಂಗಳೂರಿನ ಪೇಟಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ರಾಶಿ ಅಕ್ಕಿ ...	3— 8	4— 0
ಮುಸ್ಸಿ ...	4— 4	4— 8
ಗುಡ್ಡು ...	3—12	4— 0
ಊರ ಅಚ್ಚಲ್ ಬೆಲ್ಲಗ ...	4— 8	5— 0
ರಂಗೂನು ಬೆ. ಗೋ. ಗೆಕ್ಕೆ ...	6 — 8	7— 0
ಎಲ್ಲೂರು ಬೆ. ಮು. ಗೆಕ್ಕೆ ...	3—14	4— 0
ಗೋದಿ ಗೋಣಿ ಗೆಕ್ಕೆ ...	12 — 8	15— 8
ತೊಗರಿ ಗೋಣಿ ಗೆಕ್ಕೆ ...	11— 8	18— 8
ಹುರುಳಿ ಗೋಣಿ ಗೆಕ್ಕೆ ...	5— 0	5 — 4
ಕಡಲೆ ಗೋಣಿ ಗೆಕ್ಕೆ ...	9 — 8	10 — 8
ತೊಗರಿಬೇಳೆ ಗೋಣಿ ಗೆಕ್ಕೆ ...	11— 0	19— 0
ಉದ್ದು ಗೋಣಿ ಗೆಕ್ಕೆ ...	9— 0	9 — 8
ಹೆಸರು ಗೋಣಿ ಗೆಕ್ಕೆ ...	9—12	10— 8
ಊರುಬೆಲ್ಲ ಖಂಡಿ ಗೆಕ್ಕೆ ...	30— 0	35— 0
ಉಪ್ಪು ಗೋಣಿ ಗೆಕ್ಕೆ ...	4— 8	5— 4
ಕೊಬ್ರಿ ಖಂಡಿ ಗೆಕ್ಕೆ ...	85— 0	90— 0
ಕೊಬ್ರಿ ಹಿಂಡಿ ಖಂಡಿ ಗೆಕ್ಕೆ ...	20 — 0	21— 0
ಎಳ್ಳಿಂಡಿ ಖಂಡಿ ಗೆಕ್ಕೆ ...	25 —	26 — 0
ಕೊಬ್ರಿ ಎಣ್ಣೆ ಮುಡಿ ಗೆಕ್ಕೆ ...	4— 6	6— 4
ಎಳ್ಳೆಣ್ಣೆ ಮುಡಿ ಗೆಕ್ಕೆ ...	6— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಗೆಕ್ಕೆ ...	6— 5	7— 5
ಮೋರಿಸ ಸಕ್ಕರೆ ಮು. ಗೆಕ್ಕೆ ...	2— 11	2 —12
ಮೆಣಸು ...	4— 8	6— 0
ಸಾಸಿವೆ ಮುಡಿ ಗೆಕ್ಕೆ ...	5 — 8	6— 8
ಕಾಳುಮೆಣಸು ಖ. ಗೆಕ್ಕೆ ...	97 — 8	100— 0
ಯೇಲಕ್ಕಿಬೀಜ ಮುಡಿಗೆಕ್ಕೆ ...	80— 0	85— 0
ಗೇರುಬೀಜ ಮು. ಗೆಕ್ಕೆ ...	3 —14	4— 2
ಕಬ್ಬಿಣ ಖಂಡಿ ಗೆಕ್ಕೆ ...	50— 0	55— 0
ತಾಂಬ್ರತಗಡು ಮು. ಗೆಕ್ಕೆ ...	14— 12	15— 0
ತಾಂಬ್ರಪಾತ್ರಗಳು ಮು. ಗೆಕ್ಕೆ	17— 0	18— 0
ಚೀನಬೆಳ್ಳಿ ಸೇರು ಗೆಕ್ಕೆ ...	13— 8	14— 0
ಟಿಕ್ಕಾಳೆ ತಗಡು ಮು. ಗೆಕ್ಕೆ ...	12— 0	12— 0
ಹವಳು ಗೆಕ್ಕೆ ...	22— 4	22— 6
ಹುಣಸೆ ಹುಳಿ ಖಂಡಿ ಗೆಕ್ಕೆ ...	40— 0	45— 0
ಪೇಟಿಂಟ್ ಕಾಫಿ ಖಂಡಿ ಗೆಕ್ಕೆ ...	140— 0	148— 0
ಫ್ಲಾಂಟೇರಿ ಕಾಫಿ ಖಂಡಿ ಗೆಕ್ಕೆ ...	192— 0	195— 0
ಮಡಿಕೇರಿ ಹಲಕ್ಕೆ ...	67— 0	70 — 0

ಹೊಟ್ಟೆಹುಣ್ಣುಗಳು ಗುಣವಾದುವು

ಮಿಸೆಸ್ ನೊರ್ಮನಳು, ಈಗ ಸಂತುಷ್ಟ ಹೊಂದಿದವಳಾಗಿದ್ದಾಳೆ. ಬಹಳ ಸಮಯ, ಸಂಕಟ ಅನುಭವಿಸಿದ ಆಕೆಯು, ಕೊನೆಗೆ ಗುಣಹೊಂದಿದಳು. "ಹೊಟ್ಟೆ ಹುಣ್ಣುಗಳಿಂದ ಹೇಗೆ ಗುಣಹೊಂದಿದೆನೆಂಬುದಾಗಿ, ನಿಮಗೆ ತಿಳಿಸಬೇಕೆಂದು ನನಗೆಣಿಸುತ್ತದೆ

"ಅನೇಕ ವರ್ಷಗಳಿಂದ ಹೊಟ್ಟೆವೃಣಗಳಿಂದ ಪೀಡಿತನಾಗಿದ್ದೆನು ಅನೇಕ ಔಷಧಿಗಳನ್ನು ಸೇವಿಸಿದರೂ, ಶಮನವಾಗಲಿಲ್ಲ. ಕಳೆದ ಒಕ್ಟೋಬರದಲ್ಲಿ ಹೊಟ್ಟೆ ವೃಣಗಳಿಂದ, ನಾನು ಅತ್ಯಂತ ಸಂಕಟವನ್ನು ಹೊಂದುವವನಾದೆ. ಪರೀಕ್ಷಾರ್ಥವಾಗಿ ಮೆಕ್ಲೀನ್ ಬ್ರೇಂಡ್ ಹುಡಿಯನ್ನು ತರಲು, ನನ್ನ ಪತಿಯೊಡನೆ ಹೇಳಿಕೊಂಡೆನು ಬರೇ ಎರಡು ಡೋಸುಗಳ ಸೇವನೆಯಿಂದ, ನನಗೆ ಶಮನವು ದೊರಕಿತು ನಂತರ, ಪ್ರತಿರಾತ್ರೆ ಮಲಗುವ ಮೊದಲು, ಎಂದಿಷ್ಟು ಮೆಕ್ಲೀನ್ ಹುಡಿಯನ್ನು ಸೇವಿಸುವುದು ನನ್ನ ಕ್ರಮವು ಅಲ್ಲದೆ ಸಂಕಟವು ತಲೆ ಎತ್ತಿದರೆ, ಆಗಲೂ ಮೆಕ್ಲೀನ್ ಹುಡಿಯನ್ನು ಸೇವಿಸಿದರೆ ಸರಿ ಕೂಡಲೆ ಶಮನವು ದೊರಕುವುದು. ಹೊಟ್ಟೆ ಸಂಕಟ ಪೀಡಿತರೆಲ್ಲರೂ ಈ ಪ್ರಸಿಯನ್ನು ಉಪಯೋಗಿಸಬಹುದಾಗಿ ಈ ಮೂಲಕ ನನ್ನ ಶಿಫಾರಸು"

ಹೊಟ್ಟೆಯ ಪೀಡೆಗಳು ಯಾವುದೇ ತರದ್ದಾಗಿರಲಿ, ಮೆಕ್ಲೀನ್ ಬ್ರೇಂಡಿನ ಶ್ರೇಷ್ಠ ಗುಣಗಳಿಂದಾಗಿ ಒಡನೆ ಸುಖದಾಯಕ ಶಮನವು ದೊರಕುವುದು ಅನೇಕರು ಅತ್ಯಂತ ಭಯಂಕರ ಹೊಟ್ಟೆ ಪೀಡೆಗಳನ್ನ ಪೆಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲೆ

ಎಂಬ ಸಹಿಯುಳ್ಳ ಮೆಕ್ಲೀನ್ ಹುಡಿಯಿಂದ ಗುಣಮಾಡಿಕೊಂಡಿರುವರು. ಅದರ ಖ್ಯಾತಿ ಗುಣಕಾರಿ ಯೋಗ್ಯತೆಯ ಕೀರ್ತಿಯು ಹೆಸರು, ಇತರ ಯಾವತ್ತೂ ಹುಡಿಗಳು ಅದರೆದುರು ನಿಲ್ಲಲಾರವು

ಇದು ಟಿಕ್ಕಿಯರೂಪದಲ್ಲಿಯೂ ಸಿಕ್ಕುತ್ತದೆ ಎಲ್ಲಾ ಔಷಧಿ ಅಂಗಡಿಗಳಲ್ಲಿ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಜೆ ಎಲ್ ಮೊರಿಸನ್ ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್

ಸ್ಟೆಂಡಾರ್ಡ ಬಿಲ್ಡಿಂಗ್, ಹೊರ್ನ್‌ಬೀ ರೋಡ್ ಮುಂಬಯಿ.



S. No. 73.

ಇಂಡಿಯಾದ ಟೀ ಯಿಂದ



ಶಾಶ್ವತ ಶಕ್ತಿಯನ್ನು ಪಡೆಯಿರಿ

ಉರಿಯುವ ಬೇಸಿಗೆಯಲ್ಲಿ ಭಾರತೀಯ ಟೀಯು ದಣುವಾರಿಸಿ ತಂಪನ್ನುಂಟುಮಾಡುವುದು ಬೆಳಿಗ್ಗೆ ಎದ್ದ ಒಡನೆ ಕುಡಿದರೆ ಟೀಯು ನಿದ್ರೆಯ ಮೊಬ್ಬನ್ನು ಓಡಿಸುವುದು ದಿನವೆಲ್ಲಾ ಕಷ್ಟಪಟ್ಟು ದುಡಿದ ನಂತರ ಸಂಜೆಯಲ್ಲಿ ಒಂದು ಬಟ್ಟಲು ಟೀ ಕುಡಿದರೆ ಸೊಕ್ಕಿ ಸೊರಗಿರುವ ಇಂದ್ರಿಯಗಳಲ್ಲಿ ಲವಲವಿಕೆಯನ್ನುಂಟುಮಾಡುವುದು. ಎಡೆಬಿಡದ ಉಪಯೋಗದಿಂದ ಇದು ಶಾಶ್ವತ ಶಕ್ತಿಯನ್ನು ಕೊಟ್ಟಿದೆ ನೀವೂ ಆ ಫಲಗಳನ್ನು ಪಡೆಯಿರಿ

ಇಂದಿನಿಂದಲೇ ದಿನಂಪ್ರತಿ ಭಾರತೀಯ ಟೀ ಕುಡಿಯಲಾರಂಭಿಸಿರಿ ಆದರಿಂದ ಹೊಂದಬಹುದಾದ ಎಲ್ಲ ಉಪಕಾರಗಳನ್ನು ಹೊಂದಿರಿ

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿರಿ ಬಿಸಿಯಾಗಿರುವ ಮಣ್ಣಿನ ಪಿಂಗಾಣಿ ಪಾತ್ರೆಯೊಳಗೆ ದನ್ನು ಬಿಟ್ಟಿಗೆ ಮಾಡಿರಿ ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ಆಳಿಗೆ ಒಂದು ಚಮಚ ಮತ್ತು ಪಾತ್ರೆಗಾಗಿ ಒಂದು ಚಮಚ ಉತ್ತಮವಾದ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ ನೀರು ಕುದಿಯಲಾರಂಭಿಸಿದ ಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ

ಭಾರತೀಯ ಟೀಯು ಭಾರತವರ್ಷದ ಆನಂದ ಮತ್ತು ಹೆಮ್ಮೆಯ ಬೀಡು

I. K. 11

ಪಾದ್ರಿಗಳಿಗೆ ಪ್ರಾಯದ ಹುಡುಗಿಯರು

ಮನಶ್ಶಾಸ್ತ್ರವೇತ್ತರ ಅನುಭವ!

ಈಗ್ಗೆ ಹಲವು ದಿನಗಳಿಂದೀಚೆಗೆ ಇಂಗ್ಲೆಂಡಿನಲ್ಲಿ ವಯಸ್ಕರಾದ ಅನೇಕ ಮಂದಿ ಪಾದ್ರಿಗಳು ಚಿಕ್ಕ ಪ್ರಾಯದ ಹುಡುಗಿಯರನ್ನು ಮದುವೆಯಾಗುವುದು ಹೆಚ್ಚಾಗಿದೆ.

ಇಲ್ಲಿ ಉದಾಹರಣೆಗಾಗಿ ನಾಲ್ಕಾರು ಹೆಸರುಗಳನ್ನು ಹೇಳಬಹುದು-

ರೆವೆರೆಂಡ್ ಪಿಸ್ಟನ್, ವಯಸ್ಸು ೫೫, ೧೭ ವಯಸ್ಸಿನ ಹುಡುಗಿಯನ್ನು ಮದುವೆಯಾದದ್ದು!

ರೆವೆರೆಂಡ್ ಸ್ಟಬ್ಸ್ ೬೦, ೧೬ ವರ್ಷದ ಹುಡುಗಿಯನ್ನು ವಿವಾಹವಾದದ್ದು!

ರೆವೆರೆಂಡ್ ಗ್ರೀನ್ ೬೮, ೨೩ ವರ್ಷದ ಹುಡುಗಿಯನ್ನು ಮದುವೆಯಾದುದು!

ರೆವೆರೆಂಡ್ ನಾರ್ಟನ್ ೬೯, ೨೮ ವಯಸ್ಸಿನ ಕನ್ಯೆಯನ್ನು ವಿವಾಹವಾದುದು!

ಈ ಪಾದ್ರಿಗಳೇ ಅಲ್ಲದೆ ವಯಸ್ಕರಾದವರಲ್ಲನೇಕರು ಚಿಕ್ಕ ಪ್ರಾಯದ ಹುಡುಗಿಯರನ್ನು ಮದುವೆಮಾಡಿಕೊಳ್ಳುವುದನ್ನು ನಾವು ಸಾಮಾನ್ಯವಾಗಿ ನೋಡಬಹುದು ಒಂದು ವೇಳೆ ಆಂತಹ ಮದುವೆಮಾಡಿಕೊಳ್ಳದಿದ್ದರೂ, ತರುಣಿಯರನ್ನು ವಿವಾಹವಾಗಬೇಕೆನ್ನುವ ಆಸೆ ಅನೇಕ ಮಂದಿ ಶಕ್ತಿಹೀನರಾದ ಮುದುಕರಿಗೆ ಇರುತ್ತದೆ.

ಇದಕ್ಕೆ ಕಾರಣವೇನೆಂಬುದನ್ನು ವಿವರಿಸುತ್ತಾ ಮನಶ್ಶಾಸ್ತ್ರಜ್ಞರೊಬ್ಬರು ಈ ರೀತಿ ಹೇಳಿದ್ದಾರೆ

"ವಯಸ್ಕರಾದವರಿಗೆ ಎಳೆ ಪ್ರಾಯದವರೊಡನೆ ಇರಬೇಕೆಂಬ ಆಸೆ ಸಾಮಾನ್ಯವಾಗಿರುತ್ತದೆ. ಏರಿ ಬರುತ್ತಿರುವ ತಮ್ಮ ಮುದಿತನವನ್ನು ತಡೆಗಟ್ಟಲು ಅವರು ಸ್ವಭಾವಿಕವಾಗಿ ಈ ರೀತಿ ಮಾಡುತ್ತಾರೆ.

ಒಬ್ಬಳು ಹೆಂಡತಿ ಸತ್ತ ಭಾವನೆಯು ಅವರ ಮನಸ್ಸಿನಲ್ಲಿ ಪ್ರಬಲವಾಗಿ ಮೂಡಿರುವುದರಿಂದ, ತಮ್ಮ ಜೀವಮಾನ ಕಾಲದಲ್ಲಿ ಮತ್ತೊಬ್ಬ ಹೆಂಡತಿಯು ಸಾವಿನ ನೋವನ್ನು ಇದಿರಿಸಲು ಅವರ ಮನಸ್ಸು ಸಿದ್ಧವಿರುವುದಿಲ್ಲ. ತಮ್ಮ ಜೀವಿತ ಕಾಲದಲ್ಲಿ ಸಾಯುವ ಸಂಭವವಿಲ್ಲದಂತಹ, ತಮ್ಮ ಇಳಿವಯಸ್ಸಿನಲ್ಲಿ ತಮ್ಮನ್ನು ಪೋಷಿಸಲು ಶಕ್ತಳಾಗಿರುವಂತಹ ವ್ಯಕ್ತಿಯನ್ನು ಅಂದರೆ ವಯಸ್ಸಿನಲ್ಲಿ ತಮಗಿಂತ ಚಿಕ್ಕವಳನ್ನು ವಿವಾಹ ಮಾಡಿಕೊಳ್ಳಲು ಬಹು ಅಪೇಕ್ಷಿಸುವರು

"ಇದಲ್ಲದೆ ಇನ್ನೊಂದು ವಿಚಾರವೇನೆಂದರೆ ಎಳೆ ಪ್ರಾಯದ ಹುಡುಗಿಯರು, ಸ್ವಲ್ಪ ವಯಸ್ಕರಾದ ಹೆಂಗಸರಿಗಿಂತ ಹೆಚ್ಚು ಸೌಂದರ್ಯವತಿಯರಾಗಿರುವುದರಿಂದ ವಯಸ್ಕರ ಮನಸ್ಸು ಚಿಕ್ಕ ವಯಸ್ಸಿನ ಹುಡುಗಿಯರ ಕಡೆಗೇ ಎಳೆಯಲ್ಪಡುವುದು.

...ಕೆಲಸಗಾರರ ... ಸರಿಯಾಗಿ ನಡೆಯುದಿರುವುದರಿಂದಲೂ, ಕೆಲಸಗಾರರಲ್ಲಿ ಕಾಠಿಣ್ಯವನ್ನಿಡುವುದರಿಂದಲೂ, ಕೆಲಸಗಾರರನ್ನು ತೊಂದರೆಪಡಿಸುವುದರಿಂದಲೂ ತಮ್ಮ ಅಹವಾಲುಗಳನ್ನು ಹೇಳಿದರೂ, ಯೂನಿಯನ್ನು ಮುಖಾಂತರ ಹೇಳಿಕಳುಹಿಸಿದರೂ ವ್ಯಾಲೀಕರು ಗಮನವೀಯದಿರುವುದರಿಂದಲೂ ಇಲ್ಲಿಯ ಸುವಾಸಿನೀ ಬೀಡಿ ಪರ್ಸ್ನ ಸುಮಾರು ಮಂದಿ ಕೆಲಸಗಾರರು ಮುಷ್ಕರ ಹಿಡಿದಿರುವರು.

ಜನಾಂಗ ಮಂಡಳದೊಡನೆ ಚೀನಾದ ಮನವಿ

"ಜಪಾನು ತನ್ನ ಮೇಲೆ ಆಕ್ರಮಿಸಿ ಬಂದುದು ಪ್ರಪಂಚದ ಶಾಂತಿಭಂಗಕ್ಕೆ ಒಂದು ಕಾರಣವು; ಆದ್ದರಿಂದ ಜನಾಂಗ ಮಂಡಳವು ಆ ಬಗ್ಗೆ ನಿಗಾ ತೆಗೆದುಕೊಳ್ಳತಕ್ಕದೆಂದು, ಚೀನಾವು ಜನಾಂಗಮಂಡಳಕ್ಕೆ ಮನವಿಮಾಡಿಕೊಂಡಿರುತ್ತದೆ.

ಮೊನ್ನೆ ದಿನ ಅಸ್ಸಾಮದಲ್ಲಿ ಭೂಕಂಪವಾಯಿತೆಂದು ಒಂದು ವಾರ್ತೆ. ರಾತ್ರೆ ಮಲಗಿದ್ದವರಿಗೆ ಗಾಬರಿಯಾಯಿತಂತೆ.

ಸದಾಕಾಲ ರೈಲ್ವೆ ಪ್ರಯಾಣದಿಂದ ಆತನಲ್ಲಿ ಮಲಬದ್ಧತೆ ಉಂಟಾಗುತ್ತಿತ್ತು

ತನ್ನ ಆರೋಗ್ಯವನ್ನು ನೆಟ್ಟಗಿಡುವುದು ಕ್ರುಶನ್ ಲವಣಗಳೊಂದೆ ಎಂದು ಓರ್ವ ಪ್ರಯಾಣಿಕ ಮಾರಾಟಗಾರನ ಅಭಿಪ್ರಾಯ

"ನಾನೊಬ್ಬ ವ್ಯಾಪಾರಿ ಪ್ರಯಾಣಕ, ಸದಾಕಾಲ ರೈಲ್ವೆ ಸಂಚಾರ ಮಾಡಲಿಕ್ಕಿರುವುದರಿಂದ, ಕ್ರುಶನ್ ಲವಣಗಳ ಸೇವನೆ ಅಲ್ಲದಿದ್ದರೆ ಮಲಬದ್ಧತೆಯು ಪರಿಣಮಿಸುತಿತ್ತು. ನನ್ನ ಉದರವನ್ನು ನಿರ್ಮಲವಾಗಿಡಲು, ಅದು ಒಂದೇ ಒಂದಾದ ಉಪಾಯವಾಗಿರುತ್ತದೆ. ಅದರಿಂದ ನನ್ನ ಕೆಲಸಕ್ಕೆ ಅಡಚಣೆಗಳು ಉಂಟಾಗುವುದಿಲ್ಲ. ರಜಾ ಸಮಯ ಕ್ರುಶನಿನ ದೊಡ್ಡ ಡೋಸನ್ನೂ, ಇತರ ಸಮಯ ಒಂದು ದಿವಸ ಬಿಟ್ಟು ಒಂದು ದಿನಸ ಸಣ್ಣ ಡೋಸುಗಳನ್ನೂ ಪ್ರಾತಃಕಾಲ ಸೇವಿಸುವುದು ನನ್ನ ಕ್ರಮ. ದಿನಪೂರ್ಣ ಚಟುವಟಿಕೆಗಳನ್ನು ನಡೆಯಿಸುವಂತೆ ಉಲ್ಲಾಸವನ್ನೂ ಶಕ್ತಿಯನ್ನೂ ಪಡೆಯಲು ಒಂದೇ ಒಂದಾದ ಉಪಾಯವೆಂದರೆ ಇದೇ. ಬೇರೆ ಯಾವತ್ತೂ ಜಾಡಿಸೆ ಮದ್ದುಗಳಿಗೆ ಈ ತರದ ಪರಿಣಾಮವಿರುವುದಿಲ್ಲ" ಹೀಗೆಂದು ಆತನ ಅಭಿಪ್ರಾಯ.

ವಿ. ಎಲ್.

ನಿಮ್ಮ ಉದರವನ್ನು ಶುಚಿಯಾಗಿಡಲು ಕ್ರುಶನ್ ಲವಣಗಳು ನೈಸರ್ಗಿಕ ವಿಧಾನವು. ಅದರಲ್ಲಿರುವ ಆರು ಲವಣಗಳಿಂದ ನಿಮ್ಮ ಅಂಗಾಂಗಗಳು ಸರಿಯಾದ ರೀತಿಯಲ್ಲಿ ಕಾರ್ಯಿಸುತ್ತವೆ. ನಿಮ್ಮ ಉದರದಿಂದ ಎಲ್ಲಾ ಕಲ್ಮಶಗಳು ಹೊರದೂಡಲಾಗುವುವು. ಈ ಕಲ್ಮಶಗಳನ್ನು ಹೊರದೂಡದಿದ್ದರೆ ನಿಮ್ಮ ಆರೋಗ್ಯವು ಕೆಡುವುದು. ಕ್ರುಶನ್ ಲವಣಗಳಿಂದ ನಿಮ್ಮ ರಕ್ತವು ಪರಿಶುದ್ಧವಾಗಿ ನಿಮ್ಮಲ್ಲಿ ನವಚೇತನವು ಉಲ್ಲಾಸವೂ ಉಂಟಾಗುವುದು ಕ್ರುಶನ್ ಲವಣಗಳು ಎಲ್ಲಾ ಔಷಧಾಲಯಗಳಲ್ಲೂ, ಬಜಾರುಗಳಲ್ಲೂ ದೊರೆಯುತ್ತವೆ.

ಸನ್‌ಲೈಟ್ ಸಾಬೂನು

ಅದೇ ಆಶ್ಚರ್ಯಕರವಾದ ಸಾಬೂನು ಆದರೆ ಬೇರೆ ಅನುಕೂಲವಾದ ಹೊಸ ಸೈಜಿನಲ್ಲಿ



ಸನ್‌ಲೈಟು ಸಾಬೂನು ಇನ್ನೂ ಮೊದಲಿನ ಸೈಜಿನ ಪ್ಯಾಕಿನಲ್ಲೂ ದೊರೆಯುತ್ತದೆ.

ನಿಮ್ಮ ಅನುಕೂಲಕ್ಕೋಸ್ಕರ ಸುಪ್ರಸಿದ್ಧಿಯಾದ ಸನ್‌ಲೈಟ್ ಸಾಬೂನು ಈಗ ೩ ದೊಡ್ಡ ಸಾಬೂನುಗಳಿಂದ ಕೂಡಿದ ಪೆಟ್ಟಿಗೆಯಲ್ಲಿ ದೊರೆಯುತ್ತದೆ. ಈ ಹೊಸಪೆಟ್ಟಿಗೆಯ ಸನ್‌ಲೈಟು ನಿಮ್ಮ ತಾತ್ಕಾಲಿಕ ಉಪಯೋಗಕ್ಕೆ ಬರುವಂತೆ ಸಹಾಯಕವಾಗಿದೆ ಪ್ರತಿಯೊಂದು ಸಾಬೂನು ಯಾವಾಗಲೂ ಹೊಸದಾಗಿರುವಂತೆ ಬೇರೆಬೇರೆ ಕಾಗದಗಳಿಂದ ಸುತ್ತಲ್ಪಟ್ಟಿದೆ. ನಿಮ್ಮ ವ್ಯಾಪಾರಗಾರರಲ್ಲಿ ಇದು ಇದೆ. ಈದಿನವೇ ಅವರನ್ನು ಹೊಸಪ್ಯಾಕಿನ ಸನ್‌ಲೈಟನ್ನು ಕೇಳಿರಿ.

ಒಗೆಯುವುದಕ್ಕೆಲ್ಲಾ ಉತ್ತಮವಾದ ಸನ್‌ಲೈಟನ್ನು ಬಿಟ್ಟರೆ ಯಾವ ಸಾಬೂನು ಇಲ್ಲ. ಇದು ಬಹುಬೇಗ ಮತ್ತು ಸುಲಭವಾಗಿ, ಹದ್ದಾಗಿ ಒಗೆಯದೆ ಕೊಳೆಯನ್ನೆಲ್ಲಾ ಹೋಗಿಸುತ್ತದೆ. ಸನ್‌ಲೈಟನ್ನು ಉಪಯೋಗಿಸುವುದರಿಂದ ಬಟ್ಟೆಗಳು ಎಷ್ಟು ಬಿಳಿಯಾಗಿ, ಸುಖಕರವಾಗಿರುವುದೆಂಬುದನ್ನು ಅದೇ ನಿರ್ಧರಿಸಿಕೊಡುತ್ತದೆ.

ಇಂಡಿಯಾದಲ್ಲೇ ವನಸ್ಪತಿಗಳ ಶುದ್ಧ ಎಣ್ಣೆಯಿಂದ ತಯಾರಿಸಿದುದು.

X-S 1248-2008A LEVER BROTHERS (INDIA) LIMITED

KANARESE

ದಾಧಾಬಾಯಿ ನೌರೋಜಿಯವರು.

(೪ನೇ ಪುಟದಿಂದ ಮುಂದುವರಿಸಿದುದು.)

ಬಾಗಿ ಭಾರತೀಯರೆಲ್ಲರೂ ಕರೆಯುತ್ತಿದ್ದುದು. ೧೯೦೭ನೇ ಇಸವಿಯಲ್ಲಿ ಶ್ರೀ ದಾದಾಭಾಯಿ ನವರೋಜಿಯವರು ದೈವಾಧೀನರಾದರು. ಭಾರತೀಯರೆಲ್ಲರೂ ಈ ಮಹನೀಯರ ನಿಧನಕ್ಕೆ ಬಹುವಾಗಿ ಸಂಕಟಪಟ್ಟರು. ಅಂತೂ ಶ್ರೀ ದಾದಾಭಾಯಿ ನವರೋಜಿಯವರು ಪ್ರತಿಯೊಬ್ಬರಿಗೂ ಮೇಲ್ಪಂಕ್ತಿಯನ್ನು ಹಾಕಿ ತಮ್ಮ ಕೀರ್ತಿಯು ಆಚಂದ್ರಾರ್ಕವಾಗಿರುವಂತೆ ಮಾಡಿರುತ್ತಾರೆ

ಸತಿ ರೂಸ್ವೆಲ್ಟರ ಕಾರ್ಯೋತ್ಸಾಹ

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ರಾಷ್ಟ್ರಾಧ್ಯಕ್ಷ ರೂಸ್ವೆಲ್ಟರ ಹೆಂಡತಿಯು ಚಲನಚಿತ್ರ ವ್ಯಾಪಾರದಲ್ಲಿ ಒಂದು ಹುದ್ದೆಯನ್ನು ಒಪ್ಪಿಕೊಂಡಿದ್ದಾಳೆ. ಆಕೆಯ ಬಿಡುವಿಲ್ಲದ ಕಾರ್ಯಮಾಲಿಗೆ ಈ ಕೆಲಸವೂ ಸೇರಿದಂತಾಯಿತು.

ಹೀಗೆಂಬುದಾಗಿ ಮಿ। ಸ್ಯಾಮು ಗೋಲ್ಡ್ವಿನ್‌ರವರು ಈಚೆಗೊಂದು ಹೇಳಿಕೆಕೊಟ್ಟರು.

"ಸ್ಮಾಲ್ ಟೌನ್ ಸ್" ಎಂಬ ಚಲಚ್ಚಿತ್ರಕ್ಕೆ ಶಾಟ್ ಗ್ರಾಫುಗಳನ್ನು ಬರೆಯುವ ಸ್ಥಳವಾಗಿ ಮಿಸೆಸ್ ರೂಸ್ವೆಲ್ಟರ ಸೇವೆಯನ್ನು ಕೇಳಲಾಗಿದೆಯಂತೆ. ಆದರೆ ಇದಕ್ಕೆ ಪ್ರತಿಯಾಗಿ ಆಕೆಗೆ ಕೊಡುವ ಶುಲ್ಕವೆಷ್ಟೆಂಬುದು ಮಾತ್ರ ಹೊರಬಿದ್ದಿಲ್ಲ.

ಈಗಾಗಲೇ ಮಿಸೆಸ್. ರೂಸ್ವೆಲ್ಟ್ ತನ್ನ ಗಂಡನ ವಾರ್ಷಿಕ ಸಂಬಳವಾದ ೧೫,೦೦೦ ಪೌಂಡುಗಳಿಗಿಂತ ಹೆಚ್ಚಾಗಿ ಸಂಪಾದಿಸುತ್ತಿದ್ದಾಳೆ.

ಆದರೆ ಆಕೆ ಸಂಪಾದಿಸಿದುದನ್ನೆಲ್ಲ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸುತ್ತಾಳೆ. ದಾನಧರ್ಮವೆಂದರೆ ಆಕೆಗೆ ಗಾಢವಾದ ಆಸಕ್ತಿ.

"ನನ್ನ ದಿನಚರಿ" ಎಂಬ ಹೆಸರಿನಲ್ಲಿ ಆಕೆ ದಿನಂಪ್ರತಿ ಒಂದು ಕಲಂ ಲೇಖನವನ್ನು ಬರೆಯುತ್ತಾಳೆ. ಈ ಲೇಖನವು ಐವತ್ತು ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಆಕೆಯನ್ನು ಬ್ರಾಡ್‌ಕಾಸ್ಟಿಂಗ್ ಸಂಸ್ಥೆಯವರು ಕರಾರಿಗೆ ಒಪ್ಪಿಸಿದ್ದಾರೆ. ಮಕ್ಕಳ ಮಾಸಪತ್ರಿಕೆಯೊಂದರ ಸಂಪಾದಕಿ ಆಕೆ. ಅಲ್ಲದೆ ನ್ಯೂಯಾರ್ಕಿನ ಫರ್ನಿಚರ್ ಅಂಗಡಿಯೊಂದರ ಪಾಲುಗಾರ್ತಿ ಕೂಡ.

ಎಲ್ಲಕ್ಕಿಂತ ಮಿಗಿಲಾಗಿ ಆಕೆ ಸರಕಾರಿ ಭವನದಲ್ಲಿ ಅತಿಥೇಯಳು. ಗ್ರಾಮಾಂತರಗಳ ಕಡೆ ಸಾವಿರಾರು ಮೈಲಿ ಹೋಗಿ ಬರುವಳು. ಅಧ್ಯಕ್ಷರ ಕಣ್ಣುಗಳೆಂದು ಆಕೆ ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದಾಳೆ.

ವಿಚಿತ್ರ ಯಂತ್ರ

ಬ್ರಿಟನ್ನಿನ ವಸ್ತುಸಂಗ್ರಹ ಎಂದು ಯಂತ್ರವನ್ನಿಟ್ಟಿದ್ದಾರೆ.

ವಿಚಿತ್ರ ಯಂತ್ರ. ಬ್ರಿಟನ್ನಿನ ವಸ್ತು ಸಂಗ್ರಹಾಲಯದ ಕಟ್ಟಡವು ಬಹು ವಿಶಾಲವಾದುದು. ಇದರಲ್ಲಿರುವ ಪುಸ್ತಕಗಳು ಅಸಂಖ್ಯಾತ. ಈ ಯಂತ್ರವು ಕಟ್ಟಡದ ಒಂದು ಮೂಲೆಯಲ್ಲಿರುವ ಪುಸ್ತಕವನ್ನು ಸುಮಾರು ೩ ೪ ನಿಮಿಷಗಳಲ್ಲಿ ತಂದೊಗೆಯುವುದು. ಇದಕ್ಕೆ ಮುಂಚೆ ಯಾವುದಾದರೂ ಒಂದು ಪುಸ್ತಕವನ್ನು ಈಚೆಗೆ ತಂದು ಕೊಡಬೇಕಾದರೆ ಸುಮಾರು ಒಂದು ಘಂಟೆ ಕಾಲ ಬೇಕಾಗಿದ್ದಿತಂತೆ. ಈಗ ಈ ಯಂತ್ರದಿಂದ ಸಾಕಾದಷ್ಟು ಕಷ್ಟವು ಕಡಿಮೆಯಾಗಿರುವುದು.

ರಷ್ಯಾ ದೇಶದ ಮೊಸ್ಕೋ ನಗರದಿಂದ ಸಂಯುಕ್ತ ಅಮೇರಿಕಾದ ನ್ಯೂಯೋರ್ಕಿಗೆ ಇನ್ನು ಬರೆ ೬೪ ತಾಸುಗಳಲ್ಲಿ ತೆರಳಬಹುದಂತೆ. ಉತ್ತರಧ್ರುವವಲಯ ಮಾರ್ಗವಾಗಿ ವಿಮಾನದ ಮೂಲಕ, ಸೋವಿಯಟ್ ವೈಮಾನಿಕ ಸಾಹಸಿಗಳಲ್ಲಿ ಕೆಲವು ಮೊಸ್ಕೋ ನಗರದಿಂದ ಉತ್ತರಧ್ರುವವಲಯವಾಗಿ, ಅಮೇರಿಕಾದ ಸಾನ್ ಫ್ರಾನ್ಸಿಸ್ಕೊ ನಗರಕ್ಕೆ ನಿಲ್ಲದೆಹಾರಾಡಿ-(ಸಾಧಾರಣ ೬೦೦೦ ಮೈಲು) ಅದು ಸಾಧ್ಯವಿದೆ ಎಂದು ಖಚಿತಪಡಿಸಿರುವರು.

ಚಿಯಾಂಗ್-ಕೈ-ಶಾಕ್‌ರವರ ಧರ್ಮಪತ್ನಿಯವರು

ಚೀನದ ಸರ್ವ ಸೇನಾಪಡಳಿತವನ್ನು ನೋಡುವ ಕೂಟದಲ್ಲಿರುವರು. ಇದುವರೆಗೆ ಪ್ರಪಂಚದಲ್ಲಿ ನಡೆದ ಮಹಾಯುದ್ಧಗಳಲ್ಲಿ ಇಂತಹ ಪದವಿಯನ್ನು ಯಾರೊಬ್ಬ ಸ್ತ್ರೀಯೂ ಪಡೆದುದಿಲ್ಲ. ಈಗ ಈ ಸ್ತ್ರೀಯು ಜಗತ್ತಿಗೆಲ್ಲ ಸರಿಯಾಗಿ ತಿಳಿದುಬರುವಂತೆ ಹೇಳಿರುವ ವಚನಗಳಲ್ಲಿ ಇತರರ ಮೌನದಿಂದಾಗಿ ಉಂಟಾಗಿರುವ ದುಃಖವೂ ತೋರಿಬರುವುದಲ್ಲದೆ, ಚೀನಿಯರ ಮನೋನಿರ್ಧಾರವೂ ಸ್ಪಷ್ಟವಾಗಿದೆ. ಈಕೆ ಅಮೇರಿಕದ ಜನರಿಗೆ ರೇಡಿಯೊ ಮೂಲಕವಾಗಿ ಭಾಷಣಮಾಡಿರುವಳು. ಜಪಾನಿನವರು ಚೀನದಲ್ಲಿ ಅಕಾರಣ ಕಾರಣ ಹುಡುಕಿ ಯುದ್ಧಮಾಡುತ್ತಿರುವಾಗಲೂ, ಪಾಶ್ಚಾತ್ಯ ರಾಷ್ಟ್ರಗಳ ಸರಕಾರಗಳು ಒಂದು ಮಾತನ್ನೂ ಆಡದೆ, ಯುದ್ಧಾಳುಗಳಲ್ಲದವರ ವಿನಾಶವಾಗುವಾಗ, 'ಮನೆಗಳು ಧ್ವಂಸವಾಗುವಾಗ, ವ್ಯವಹಾರಗಳು ದಿಕ್ಕೆಟ್ಟು ಹೋಗುವಾಗ ಸುಮ್ಮನಿರುವುದು ಆಕೆಗೆ ಶೋಚನೀಯವಾಗಿ ತೋರಿದೆ. ಎಲ್ಲರಿಗೂ ಹಾಗೆಯೆ ಎನ್ನಬಹುದು. ಈ ಪಾಶ್ಚಾತ್ಯ ರಾಷ್ಟ್ರಗಳು ಚೀನದೊಡನೆ ಮಾಡಿರುವ ಸಂಧಾನಗಳನ್ನು ಮರೆತು ಹೀಗೆ ದೂರವಾಗಿ ನಿಂತರೆ, ಧೀರರಲ್ಲವೆಂದು ನಿಂದೆಗೆ ಪಾತ್ರರಾದ ಚೀನಿಯರು ತಮ್ಮ ದೃಢಬುದ್ಧಿಯನ್ನು ಪರಾಕ್ರಮಪೂರ್ವಕವಾಗಿ ತೋರಿಸಬೇಕಾಗಿ ಬರುವುದು. ಜಯವಾಗುವ ತನಕ, ಅಥವಾ ಸೋತು ನುಚ್ಚುನೂರಾಗುವ ತನಕ ಚೀನಿಯರು ತಮ್ಮ ರಕ್ತದಿಂದ ಸ್ವದೇಶದ ನೆಲವನ್ನೆಲ್ಲ ತೊಯ್ದುಬಿಟ್ಟು ದೇಶವೆಲ್ಲ ಅಗ್ನಿಗೆ ಆಹುತಿಯಾಗುವ ವರೆಗೆ ಯುದ್ಧಮಾಡಿಯೇ ಮಾಡುವರು' ಎಂದೇ ಆಕೆಯ ಕೊನೆಯ ಮಾತು.

ಆತ್ತ ಜರ್ಮನಿಯ ಮಾತು

ತನ್ನ ವಸಾಹತುಗಳನ್ನು ಮರಳಿಕೊಡುವುದು ಅಗತ್ಯವೆಂದು ಪುನಃ ಹಿಟ್ಲರ್ ಮಹಾಶಯನ ಭಾಷಣವಾಗಿದೆ. ತಮಗೆ ಪರದೇಶಗಳಲ್ಲಿ ವಸಾಹತುಗಳನ್ನು ಪುನಃ ಸ್ಥಾಪಿಸುವುದಕ್ಕೆ ನೈತಿಕ ಅಧಿಕಾರವಿದೆ ಎಂದು ಮೊನ್ನೆಯ ಭಾಷಣದಲ್ಲಿ ಹೊಸ ಸೂಚನೆಯಿದ್ದಿದೆ ವಸಾಹತಿನ ಜನಗಳಿಗೆ ಈ ನೈತಿಕ ಅಧಿಕಾರಕ್ಕೆ ಆಧಾರವಿದೆಯೋ ಇಲ್ಲವೆ ಎಂದು ಹೇಳುವ ಅಧಿಕಾರವಾದರೂ ಉಂಟೆ? ಇಲ್ಲವೆ? ಇಟಲಿಯ ಡಿಕ್ಟೇಟರನಾದರೆ, ವಸಾಹತುಗಳು ಬೇಕನ್ನುವಾಗ 'ಸುಧಾರಣೆ ಹಬ್ಬಿಸುವ ಅಧಿಕಾರ'ದ ಮಾತೆತ್ತುವಂತೆ, ಹಿಟ್ಲರನು ಅಂತಹ ಕಾರಣಗಳನ್ನು ಹೇಳದಿರುವುದು ಸೊಗಸಾಗಿದೆ ಅಥವಾ, ಇನ್ನಿತರ ವಿಲಾಯತಿಯವರಂತೆ, ಈ ಜನಗಳ ಹಿತಸಾಧನೆಯು ನಮ್ಮ ಜವಾಬ್ದಾರಿಯಲ್ಲಿದೆ ಎಂದೂ ಆತನು ಹೇಳುವುದಿಲ್ಲ. ತಮಗೆ ಬೇಕಾಗಿರುವ ಕಚ್ಚಾಮಾಲನ್ನೂ ಆಹಾರವಸ್ತುಗಳನ್ನೂ ದೊರಕಿಸಿಕೊಳ್ಳುವುದಕ್ಕೆ ವಸಾಹತುಗಳು ಬೇಕು ಎಂಬುದೇ ಆತನ ನಿರ್ಧಾರ. ಇವೇ ಕಾರಣಗಳಿಂದಾಗಿ ಇತರ ದೇಶಗಳೂ ವಸಾಹತುಗಳನ್ನು ಕಟ್ಟಿಕೊಂಡಿವೆ ಎಂದೂ ಆತನಿಗೆ ಗೊತ್ತಿದೆ. ಇಂತಹ ಸರಕಾರಗಳೇ ತನ್ನ ಆಸೆಗೆ ವಿರೋಧಿಗಳಾಗಿವೆ ಎಂದು ಆತನು ತಿಳಿದು ಉದ್ರೇಕಗೊಂಡಿರುವುದೂ ಸಹಜವೆ. ದೊಡ್ಡ ವಸಾಹತುಗಳುಳ್ಳ ರಾಷ್ಟ್ರಗಳು ತನಗೆ ಬುದ್ಧಿಹೇಳತೊಡಗಿರುವುದು ಆತನಿಗೆ ಹೇಗೆ ರುಚಿಸಬಹುದು? ಆದರೂ,— ವಸಾಹತುಗಳ ಜನರ ಇಚ್ಛೆಯು ಹೇಗಿದೆ ಎಂದು ಯಾರೂ ವಿಚಾರಿಸಿ ನೋಡಬೇಡವೆ? ಮಸಾಲೆ ಕಡೆದು ಆದ ಬಳಿಕ ಕೊರಳೊಡ್ಡಿ ನಿಲ್ಲುವಂತೆ ಒತ್ತಾಯಗೊಳಿಸಬಹುದಾಗಿರುವ ಕೋಳಿಗಳೇ ಅವುಗಳು? ಒಂದು ಜನಾಂಗವು ಮತ್ತೊಂದರ ಮೇಲೆ ಅಧಿಕಾರವನ್ನು ತೋರಿಸಿ ಮೆರೆವ ಬುದ್ಧಿ ಮುಗಿಯುವ ತನಕ, ಪ್ರತಿಯೊಂದೂ ಜನಾಂಗವು ವಸಾಹತು ಸಾಮ್ರಾಜ್ಯ ಎಂದೇ ದೂರುತ್ತ ಕೊನೆಗೆ ಎಲ್ಲರು ಯುದ್ಧದಲ್ಲೆ ಈ ಆಸೆಯ ಅನ್ಯಾಯವನ್ನು ತಿಳಿದುಕೊಳ್ಳುವ ಸಂಭವಗಳು ಮುಗಿಯುವಂತಿಲ್ಲ ಎನ್ನಬೇಕು

ಪ್ರತ್ಯೇಕವಾದ ಆಂಧ್ರಪ್ರಾಂತ್ಯ.

ಇದೊಂದನ್ನು ಸೃಷ್ಟಿಸುವ ಉದ್ದೇಶದಿಂದ ಹಿಂದಣ ಎಲ್ಲ ಚಳವಳವನ್ನು ಪುನಃ ಪ್ರಾರಂಭಿಸಬೇಕಾಗಿಯೂ, ಬೆಜವಾಡದಲ್ಲಿ ಈ ವಿಷಯವಾಗಿಯೇ ಒಂದು ಮಹಾಸಭೆ ಕೂಡಿಸಬೇಕಾಗಿಯೂ ನಿರ್ಧಾರವಾಗಿದೆ. ಭಾಷಾನ್ವಯ ಪ್ರಾಂತ್ಯರಚನೆಗೆ ಕೊಂಗ್ರೆಸ್ ಸಭೆಯ ಸಮ್ಮತಿಯಿದೆ. ಭಾಷಾನ್ವಯ ಪ್ರಾಂತ್ಯರಚನೆಗಾಗಿ ಮೊದಲಾಗಿ ಚಳವಳಿಸಿದ ಆಂಧ್ರರು ಅಲ್ಲೇ ಇದ್ದಾರೆ ಸಿಂಧ ಒರಿಸ್ಸಾ ಪ್ರಾಂತ್ಯಗಳಾಗಿಯೂ ಹೊಸ ರಾಜ್ಯಭಾರಕ್ರಮವು ಅಲ್ಲಿ ರೂಢಿಗೆ ಬಂದೂ ಆಯಿತು ಕೊಂಗ್ರೆಸ್ ಪಕ್ಷವು ಈಗ ಅಧಿಕಾರ ನಡೆಸುವ ಕಾರಣವೇ ಈ ಪ್ರಶ್ನೆಗೆ ಹೆಚ್ಚಿನ ಮಹತ್ವಬರಲೂ ಕಾರಣವಿದೆ. ಲಕ್ಷಗಟ್ಟಲೆ ಜನರ ಸಹಿಯಿಂದ ಸರಕಾರಕ್ಕೆ ಈ ಸುಧಾರಣೆಗಾಗಿ ಅರ್ಜಿ ಮಾಡಬೇಕೆಂದು ಈಗ ತಾನೆ ನಿಶ್ಚಿತವಾಗಿದೆ. ಶ್ರೀ। ಸಾಂಬಮೂರ್ತಿಯವರು ಇದೇ ಅಭಿಪ್ರಾಯಗಳನ್ನು ಹಿಂದೆಯೆ ನುಡಿದಿರುವರು. ರಾಯಲಸೀಮ (ಕನ್ನಡಾಂಧ್ರ) ಯನ್ನೂ ಚಿತ್ತೂರು (ತಮಿಳಾಂಧ್ರ) ಜಿಲ್ಲೆಯನ್ನೂ ಹಾಗೇ ಬಿಟ್ಟು ಈ ಪ್ರಾಂತ್ಯವೊಂದು ಆಗಲಾರದು ಎಂದು ಡಾ ಪಟ್ಟಾಭಿಯವರು ಹೇಳಿರುವರು. ಇಲ್ಲಿ ಚಳವಳದಿಂದ ಕಳವಳಕ್ಕೆ ಕಾರಣವುಂಟಾಗದು. ಇದರಿಂದ ಆಂಧ್ರಪ್ರಾಂತ್ಯವು ರಚನೆಯಾಗುವುದೇ ದೂರವಾದೀತು ಹಿಟ್ಲರನ ವಸಾಹತುಗಳಂತೆ ಇವರೇಕೆ ಇತರ ಭಾಷಾಪ್ರಾಂತ್ಯಗಳನ್ನು ಕೂಡಿಸಿಕೊಳ್ಳಲು ಇಚ್ಛಿಸುವರು?' ಅಥವಾ, — ಬಲಾತ್ಕಾರದಿಂದ ಅಬಿಸಿನಿಯವನ್ನು ಗೆದ್ದಂತೆ ಇವರೂ ಇಟಲಿಯ ಸಮಬೋಡಾಗಿ ಏಕೆ ನಿಲ್ಲುವ ಅಭಿಲಾಷೆ ಪಡಬೇಕು?

ಚೀನವು ಐಕ್ಯಹೊಂದಿರುತ್ತದೆ.

ಈ ಬಾರಿ ಜಪಾನಿನ ಅತಿಕ್ರಮವನ್ನು ವಿರೋಧಿಸಲು, ಚೀನಾದೇಶದ ಸಕಲ ಸಂಗ್ರಾಮ ನಾಯಕರು, ಚಿಯಾಂಗ್ ಕ್ಯಾ ಶೇಕ್‌ರ ಅಡಿಯಲ್ಲಿ ಐಕ್ಯವಾಗಿರುವರು. ಕಳೆದ ಬಾರಿ ಜಪಾನು ಮಂಚೂರಿಯಾದ ಮೇಲೆ ಏರಿ ಬಂದಾಗ, ಇವರೆಲ್ಲರು ಕದಡದೆ ಸುಮ್ಮನೆ ಕುಳಿತಿದ್ದರಂತೆ.

ಅಮೇರಿಕದ ಸರಕಾರವು ಅವರ ದೇಶದಿಂದ ಯುದ್ಧಶಸ್ತ್ರ ಇತ್ಯಾದಿ ಸೇರದಂತೆ ಹಾಕಿದ ನಿರ್ಬಂಧಕ್ಕಾಗಿ, ಚೀನಾ ಸರಕಾರವು, ಅವರೊಡನೆ ಪ್ರತಿಕೂಲಿಸಿರುವುದು.

ಜಂಜಿಬಾರಿನ ಲವಂಗವಿರುವ ಬೀಡಾವನ್ನು ಕೊಂಡುಕೊಳ್ಳಬೇಡಿರಿ.

ಜಂಜಿಬಾರಿನಲ್ಲಿ ಭಾರತೀಯರ ಕಡೆಗಿನ ವಕ್ರಧೋರಣೆಯನ್ನು ಸರ್ವ ಭಾರತವು ಖಂಡಿಸಿರುವುದು. ಜಂಜಿಬಾರಿನ ಭಾರತೀಯರಿಗೆ ಲಭಿಸುವ ಅನ್ಯಾಯಗಳಿಗೆ ಪ್ರತಿರೂಪವಾಗಿ ಅಲ್ಲಿನ ವ್ಯಾಪಾರದಲ್ಲಿ ಪ್ರಾಮುಖ್ಯವೆನಿಸುವ ಲವಂಗಗಳ ಮೇಲೆ ಹಿಂದೂದೇಶದಲ್ಲಿ ಬಹಿಷ್ಕಾರ ಹಾಕಬೇಕಾಗಿ ಕಾಂಗ್ರೆಸಿನ ನಿರ್ಣಯವಾಗಿರುವುದು. ಈ ಕುರಿತು ರಾಷ್ಟ್ರಪತಿಯವರ ಪ್ರಕಟಣೆ ಹೊರಡಿರುವುದು. ಆದರಿಂದ ಜಂಜಿಬಾರಿನ ಲವಂಗವಿರುವ ಬೀಡಾವನ್ನು ಕೊಂಡುಕೊಳ್ಳಬೇಡಿ

ಸಂಚಾರದ ಭತ್ತೆ ಮತ್ತು ಎಲ್ಲೊವೆನ್ಸುಗಳು

ಒಂದೊಂದು ಸಂಸ್ಥಾನದಲ್ಲಿ ಎಷ್ಟು ಹಣ ನುಂಗುವುವೊ ಒಮ್ಮೆ ಪರಿಶೀಲಿಸಿದರೆ ತಲೆ ತಿರುಗಬೇಕು! ರೈತನನ್ನು ಯಾತ್ರೆಗೆ ಹೊರಡುವಂತೆ ಅವಸರಿಗೆ ತಂದಿರುವ ಕಾರಣಗಳಲ್ಲಿ ಈ ಭತ್ತೆಯೂ ಒಂದು ಎಂದು ರೈತರ ದೂರು ಇದೆ. ಸಂಯುಕ್ತಪ್ರಾಂತ್ಯದ ಸರಕಾರವು ಈಗ ಭತ್ತೆಗಳನ್ನು ಹೆಚ್ಚಾಗಿ ಇಳಿಸದೆಯೆ, ಭತ್ತೆಯ ದುರುಪಯೋಗವಾಗುವುದೇ ಮಾತ್ರವಲ್ಲದೆ, ಅನ್ಯಾಯ ಅಪವ್ಯಯಗಳಾಗದಂತೆ ಹೊಸ ನಿಯಮಗಳನ್ನು ಪ್ರಕಟಿಸಿಯದೆ. ನೌಕರರು ಭತ್ತೆಗಳೆಂಬವು ಒಂದು ಬಗೆಯಾಗಿ ಸಂಬಳದ ಜತೆಗೆ ಬರುವ ಉಂಬಳಿಯೆಂದೇ ಬಗೆಯುವರು. ರೈಲು ಮೂಲಕ ಬೇಗನೆ ಅಗ್ಗವಾಗಿ ಪ್ರಯಾಣಮಾಡುವುದನ್ನು ಬಿಟ್ಟು, ಗಾಡೀಮಾರ್ಗವಾಗಿ ಮೋಟರಿನಲ್ಲಿ ಸಂಚರಿಸುವವರಿದ್ದಾರೆ ಒಂದು ರೂಪಾಯಿಯ ಬದಲು 15 ರೂಪಾಯಿ ವ್ಯಯವಾಗುವಂತೆ ತೋರಿ ಭತ್ತೆಗೆ ಕೂಡಿ ಬರುವ ರೀತಿಯಿದು. ಹಾಗೆಂದು ಭತ್ತೆಯ ಮೊಬಲಗು ಕಡಿಮೆಯಾಗಬೇಕೆಂದ ಕೂಡಲೆ ಸಂಚಾರಮಾಡಬಾರದೆಂದಿಲ್ಲ ಆಫೀಸರರು ಮಲಬಾರಿಗೆ ಬಂದವರೇ ನಮ್ಮ ಜಿಲ್ಲೆಗೂ ಬಂದರೆ ಖರ್ಚು ಕಡಮೆ, ಮಲಬಾರಿನಿಂದ ಹಿಂದೋಡಿ, ಪುನಃ ಮದ್ರಾಸಿನಿಂದ ಇಲ್ಲಿಗೆ ಬರುವರಾದರೆ ಖರ್ಚು ಅಪಾರ ಕೆಲವರಿಗಂತೂ ದಿಕ್ಕು ದಿಕ್ಕುಗಳಿಗೆ ಸರ್ಕೀಟೂ ವರ್ಗಾವರ್ಗಿಯೂ ಆಗುದುವುಂಟು. ಸಂಯುಕ್ತ ಪ್ರಾಂತ್ಯದ ಭತ್ತೆಯ ಬೆಲೆ 45 ಲಕ್ಷ'

ಪ್ರಜೆಗಳ ಆಡಳಿತದಲ್ಲಿ ಬಜೇಟು.

ಕ್ರಮವೇ ಬೇರೆ, ಇದುವರೆಗೆ ಇದ್ದ ಕ್ರಮವೇ ಬೇರೆ ಹುಟ್ಟು ಎಷ್ಟಿದೆಯೋ ಅದನ್ನೆ ಖರ್ಚು ಹಂಚಿ, ಹುಟ್ಟನ್ನೆ ಹೆಚ್ಚಿಸುವ ಸಲುವಾಗಿ ಹೊಸ ತೆರಿಗೆಗಳನ್ನು ವಿಧಿಸುವ ಕ್ರಮ ಹಿಂದಿನದು. ಪ್ರಜಾಪಾಲನೆಗೆ ಮತ್ತು ಸಂಪದಭಿವೃದ್ಧಿಗೆ ಬೇಕಾಗುವಷ್ಟು ಖರ್ಚಿನ ಲೆಕ್ಕವನ್ನು ಮೊದಲಾಗಿ ತಯಾರಿಸಿಕೊಂಡು, ತರುವಾಯ ಈ ಖರ್ಚಿಗೆ ಹೇಗೆ ಅನುಕೂಲಿಸಬೇಕು ಎಂದು ಪ್ರತಿನಿಧಿಗಳನ್ನು ಸಭೆಯಲ್ಲಿ ಕೇಳಿ ಅದರಂತೆ, ಆಯವನ್ನು ಕಡಿಮೆ ತೋರುವಲ್ಲಿ ಹೊಸ ತೆರಿಗೆಗಳ ಆಗತ್ಯವಿದ್ದರೆ ಅದನ್ನು ವಿಧಿಸುವುದಕ್ಕೆ ಸೆಂಕ್ಷನು ಕೇಳುವುದು ಪ್ರಜಾಸತ್ತೆಯ ಸರಕಾರಕ್ರಮ. ಬಜೇಟನ್ನು ತಯಾರಿಸುವಾಗ, ಆಯದಷ್ಟೆ ವ್ಯಯವನ್ನು ಮಾಡಿ ಉಳಿತಾಯವಿಲ್ಲದಿದ್ದರೂ, ಕಡಮೆಯಾಗಿ ಆಯವನ್ನು ತೋರಿಸದಂತೆ ಪೇಚಾಡುವ ಕ್ರಮವು ಈಗ ಮಂತ್ರಿಗಳಿಗೆ ಇರಲಾರದು. ಇದುವರೆಗೆ ಈ ಕ್ರಮವನ್ನು ಹಿಡಿದು, ನಮ್ಮ ಸರಕಾರವು ಹಣವನ್ನು ಸರಿಯಾಗಿ ವ್ಯಯಿಸದೆ ಈಗ ಒಮ್ಮೆಲೇ ಕಡುಕಷ್ಟಕ್ಕೆ ನಾವು ಬೀಳುವಂತಾಗಿದೆ. ಮುಖ್ಯವಾಗಿ ತೀರ್ವೆಯನ್ನು ಇಳಿಸಲು 76 ಲಕ್ಷವನ್ನು ವಜಾಮಾಡುವಂತಾದುದು ಎಷ್ಟೂ ತೃಪ್ತಿಕರವಾಗಿಲ್ಲವೆಂದು ಪ್ರತಿಯೊಂದು ಕಡೆಯಲ್ಲೂ ಕೇಳಬರುತ್ತದೆ. ನಿಜವಾಗಿಯೂ ಇನ್ನೂ 75 ಲಕ್ಷ ಕಳೆದರೂ ಸಾಕಾಗುತ್ತಿರಲಿಲ್ಲ. ಅಲ್ಪಸ್ವಲ್ಪವಾಗಿ ಜನಪ್ರಿಯವಾದ ಸುಧಾರಣೆಗಳಿಗಾಗಿ ಸರ್ವಿಸು ಸಿಬಂದಿಯಿಂದ ಸಂಬಳ ಕಡಿದುಕೊಳ್ಳುವಂತೆ ಕೇಳಬೇಕಾಗಿ ಬಂದಿದೆ. ರೈತರು ಸ್ವಲ್ಪ ಸರಿಯಾಗಿ ಉಸಿರಾಡುವುದಕ್ಕೋಸ್ಕರ ಈ ಮಹನೀಯರೇ ಮಾತ್ರವಲ್ಲದೆ, ಅಧಿಕಾಧಿಕ ಲಾಭವುಳ್ಳವರೂ, ತಮ್ಮ ಚೀಲಗಳ ಬಾಯಿಕಟ್ಟನ್ನು ಸಡಿಲಿಸಿದರೆ ಉತ್ತಮ. ರೂಪಾಯಿಯಲ್ಲಿ ಹತ್ತಾಣೆಯಂತೆ ಸರಕಾರಕ್ಕೆ ತೀರ್ವೆ ತೆತ್ತು ಲಾಭವು (ಗಳಿಕೆಯು) ನಿಶ್ಚಿತವಾಗಿಲ್ಲದಿದ್ದರೂ ರೈತರು ಇದುವರೆಗೆ ಸರಕಾರಕ್ಕೆ ಸಹಾಯಮಾಡಿರುವರು. ಬಜೇಟಿನ ಚರ್ಚಾಕಾಲದಲ್ಲಿ ನಾನಾ ಬಗೆಯಾಗಿ ಅಡಚಣೆಯ ಭಾಷಣಗಳನ್ನು ಮಾಡುವ ಬದಲು, ಇನ್ನೂ 75 ಲಕ್ಷ ರೂಪಾಯಿ ಹೆಚ್ಚಿಗೆ ವ್ಯಯವಾಗುವಂತೆ ನವೀನ ಅನುಕೂಲತೆಗಳನ್ನು ನಮ್ಮ ಪ್ರತಿನಿಧಿಗಳು ತೋರಿಸಿಕೊಡಲಿ ಬಸ್ತಿಯ ಮೇಲೆ ವ್ಯಯಿಸಿದ ಹಣಕ್ಕೆ ಸೇಕಡಾ 3ರ ಉತ್ಪನ್ನವೂ ಹುಟ್ಟದಂತಾಗದಿರುವಾಗ, ಶಿಕ್ಷಿತ ಯುವಕರು ಗ್ರಾಮೋದ್ಧಾರಕ್ಕೆ ನೆರವಾಗುವುದೂ ಪೆನ್ಶನರರು ಗ್ರಾಮಗಳಲ್ಲಿ ನೆಲೆನಿಲ್ಲುವುದೂ ಉತ್ತಮವೆಂದು ಸಾರಿದರೆ ಅದು ಅರಣ್ಯರೋದನವೇ

ರಕ್ತ ವಿಷಮವಾಗುವುದನ್ನೂ ಚರ್ಮರೋಗಗಳನ್ನೂ ತಪ್ಪಿಸಿರಿ..

ಒಂದು ಗಾಯದ ನಿರ್ಲಕ್ಷ್ಯವಾದರೆ ಅದರಿಂದ ರಕ್ತದಲ್ಲಿ ವಿಷಸೇರಬಹುದು, ಇದರಿಂದಾಗಿ ನೀವು ಬಹಳ ಸಮಯ ನೋವನ್ನೂ ಸಂಕಷ್ಟಗಳನ್ನೂ ಅನುಭವಿಸುವಂತಾಗುವುದು. ನಿಮಗಾದ ಎಲ್ಲಾ ಗಾಯಗಳೂ ಕಡಿತಗಳೂ ಬೇಗನೆ ಗುಣಹೊಂದುವಂತೆ ಜ್ಯಾಂಬಕ ಲೇಪನವನ್ನು ಅವುಗಳ ಮೇಲೆ ಹಚ್ಚಿರಿ. ಅದರಿಂದ ವಿಷಮಯ ಪದಾರ್ಥಗಳು ನಾಶವಾಗಿ ಗಾಯಹೊಂದಿದ ಸ್ಥಳಗಳು ನಿರ್ಮೂಲಹೊಂದುವವು. ಅದರಿಂದ ಉರಿಯು ಕಡಿಮೆಯಾಗುತ್ತದೆ. ಕಲೆಗಳನ್ನುಂಟುಮಾಡದೆ ಅದು ಗುಣಪಡಿಸುವುದು. ತುರಿಕಜ್ಜಿ, ಹುಣ್ಣು, ಕಾಲುದೊಕ್ಕೆ, ಕಡಿತ, ಸುಟ್ಟುಹೋಗುವಿಕೆ ಇವುಗಳಿಗೆಲ್ಲಾ ಜ್ಯಾಂಬಕು ದಿವ್ಯ ಲೇಪನವು. ಎಲ್ಲಾ ದವಾಖಾನೆಗಳಲ್ಲಿ ಜ್ಯಾಂಬಕು 1ಕ್ಕೆ ರೂಪಾ 1 ಮತ್ತು 2-4-0ರಂತೆ ಸಿಕ್ಕುತ್ತದೆ.

ಏಜಂಟರು:— (ಜ್ಯಾಂಬಕಿನಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರವಿಲ್ಲ).

ಮೆಸ್ಸರ್ಸ್ ದಾಧಾ ಎಂಡ್ ಕೊ, ಪಿ. ಟಿ. ಮದ್ರಾಸು.



ಜ್ಯಾಂಬಕ್

Zam Buk

[illegible]

ಅಗ್ರಲೇಖ

ಯುವಕರೇನಂತೆ ... ೧೦

ವರ್ತಮಾನ ಸಂಗ್ರಹ

ವಿವಿಧ ಸಮಾಚಾರಗಳು ... ೧೧

ಮಂಗಳೂರು ಸಮಾಚಾರ ... ೧೪

ತಾಲೂಕುಗಳಿಂದ ... ,,

ಸ್ವದೇಶಾಭಿಮಾನಿ

ತಾ. ೨೪ನೆ ಶುಕ್ರವಾರ ಸಪ್ಟಂಬರ ೧೯೩೭

ಯುವಕರೇನಂತೆ?

ಜನತೆಯ ಪ್ರತಿನಿಧಿಗಳ ಮೂಲಕವಾಗಿ ಈಗಣ ಆಕ್ಟನ್ನು ರದ್ದುಗೊಳಿಸಿ ಹೊಸ ಆಕ್ಟನ್ನು ಮಾಡಿಕೊಳ್ಳಬೇಕೆಂಬ ಠರಾವು ವರಿಷ್ಠ ಎಸೆಂಬ್ಲಿಯಲ್ಲಿ ಬರಲು; ಗಡಿನಾಡಿನ ಪ್ರತಿನಿಧಿಗಳಾಗಿರುವ ಶ್ರೀ| ಅಬ್ದುಲ್ ಕಯ್ಯೂಮರು ಹೀಗೆಂದರು:—ಒಳಗಿಂದೊಳಗಣ ಕರಾರು ಸಂಧಾನ ರೀತಿಗಳನ್ನು ಗಣನೆಗೆ ತಾರದಿರುವ ವಿಶ್ವಾಸವುಳ್ಳ 'ಯುವಕರೇ ಈಗ ಬೆಳೆಯುತ್ತಿದ್ದಾರೆ. ಹೀಗಾಗಿ ಜಾತಿಗಳನ್ನು ಅನುಸರಿಸಿ ಪ್ರತ್ಯೇಕ ಸಂಘಗಳನ್ನು ಮಾಡಿಕೊಳ್ಳುವ ಕ್ರಮವು ಸರಿಬೀಳದಂತಹ ಜಾಗ್ರತೆಯು ದೇಶದಲ್ಲೆಲ್ಲ ಉಂಟಾಗಿದೆ.' ಮುಸ್ಲಿಮ ಯುವಕರ ಈ ಧ್ಯೇಯವು ದೇಶಕ್ಕೆಲ್ಲ ಆಶಾಜನಕವಾಗಿದೆ ಎನ್ನಬೇಕು.

ಕಳೆದ ಮೂವತ್ತು ವರ್ಷಗಳಿಂದಲೂ, ರಾಜಕಾರಣದಲ್ಲಿ ಸೇರಿದವರು ಜಾತಿಯ ಕಡೆಗೆ ಲಕ್ಷ್ಯವನ್ನಿಟ್ಟು, ರಾಜಕೀಯ ಪಕ್ಷಗಳನ್ನು ಜಾತಿ ಪಕ್ಷಗಳನ್ನಾಗಿ ಮಾಡಿ, ಅನಾವಶ್ಯಕವಾದ ಮಹತ್ವವನ್ನು ಜಾತಿವಿಚಾರಗಳಿಗಿಟ್ಟುಕೊಂಡುದರಿಂದ ಮೊರ್ಲೇಮಿಂಟೋ ಸುಧಾರಣೆಗಳಾಗುವಾಗ, ಶ್ರೀ| ಗೋಖಲೆಯವರು ಸದ್ಯಕ್ಕೆ ಆಯಾ ಜಾತಿಗಳ ಮೂಲಕವೇ ಪ್ರತಿನಿಧಿಗಳು ಚುನಾವಣೆ ಹೊಂದಲಿ ಎಂದು ಸೂಚನೆ ಮಾಡಿದ್ದರು. ಅಲ್ಲಿಂದ ಇಂದಿನ ವರೆಗೂ ಒಮ್ಮೆಗೆಂದು ಬಗೆದ ಈ ಜಾತಿ ಪ್ರಾತಿನಿಧ್ಯ ಕ್ರಮವು ಕ್ರಮೇಣ ದೃಢವಾಗುತ್ತ ಬಂದೇ ಬರುತಂತಾಗಿದೆ. ಜನಾಂಗವೆಲ್ಲ ಈಗ ಹಲವು ಪ್ರತ್ಯೇಕ ಪಂಗಡಗಳಲ್ಲಿ ವಿಭಾಗ ಹೊಂದುವಂತಾಗಿ, ಇಡೀ ದೇಶದ ಪ್ರಗತಿಗೆ ದೊಡ್ಡ ಆತಂಕವುಂಟಾಗಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

೧೯೨೭ರಲ್ಲಿ, ಪ್ರತ್ಯೇಕ ಪ್ರಾತಿನಿಧ್ಯ ಕ್ರಮವು ಬೇಡವೆಂದು, ಕೊಂಗ್ರೆಸಿನ ನಿರ್ಧಾರವಾಗಿಂದು ದೇಶಕ್ಕೆಲ್ಲ ಆನಂದವುಂಟಾಯಿತಾದರೂ ಒಂದೇ ವರ್ಷದೊಳಗೆ ಇದು ಮುಂದೇ ಹೋಗದಂತೆ ಪ್ರತಿಕೂಲ ವಿಚಾರಗಳು ಎದ್ದುವು. [illegible] ಸಮುದಾಯದ, ಅಧಿಕಾರೀ ವ[illegible] ಗಳಲ್ಲಿ ಈ ನ್ಯಾಯ [illegible]. ಹೀಗಾಗಿ, ಯಾವತ್ತರೊಂದು ವಿಚಾರವು ಮುಂದೆ ಬಂದ ಕೂಡಲೆ, ಜಾತಿ ದೃಷ್ಟಿಯಿಂದ ಅದನ್ನು ಪರೀಕ್ಷಿಸ ತೊಡಗಿ, ಸಮರ್ಪಕವಾಗಿ ಜನಾಂಗದ ಹಿತಕ್ಕಾಗುವಂತಹ ತೀರ್ಮಾನಗಳು ಉಂಟಾಗದಂತಾಯಿತು. ಪ್ರತಿಯೊಂದು ವಿಷಯಕ್ಕೂ ತಮ್ಮ ಜಾತಿಯ ಪ್ರತಿನಿಧಿಗಳನ್ನು ಕೇಳಿಲ್ಲವೆಂದು, ಪ್ರತಿಯೊಂದು ಜಾತಿಯವರ ಆಕ್ಷೇಪಕ್ಕೆ ಕಾರಣವಾಯಿತು. ಹೀಗೆ ೧೯೦೯ರಲ್ಲಿ ಪ್ರಾರಂಭಕ್ಕೆ ನೆಟ್ಟ ಈ ಜಾತಿ ಪ್ರಾತಿನಿಧ್ಯದ ಸಸಿಯು ಈಗ ಪುಷ್ಟವಾಗಿ ಬೆಳೆದು, ಅದರ ಗೆಲ್ಲುಗಳು ಹಬ್ಬಿ, ದೇಶದ ಮೇಲೆಲ್ಲ ಅದರ ನೆರಳು ಕತ್ತಲಂತೆ ಮುಚ್ಚಿದೆ ಹೊರತು, ಅಭ್ಯುದಯದ ಸೂರ್ಯನ ಕಿರಣಗಳು ಜನತೆಯ ಮೇಲೆ ಇನ್ನೂ ಬೀಳುವ ಹಾಗಿಲ್ಲವಾಗಿದೆ.

ಇಷ್ಟು ಕಾಲ, ಜನತೆ ಹೇಗಿದೆ? ಇನ್ನೂ ಇನ್ನೂ ದರಿದ್ರವಾಗುತ್ತ ಶಿಥಿಲವಾಗುತ್ತ ಬಂದಿದೆ; ಶಿಕ್ಷಿತರ ಸಂಭಾಷಣೆ ತರ್ಕಗಳು ಇತ್ತ ಎಡೆಬಿಡದೆ ಸಾಗುತ್ತವೇ ಇವೆ. ಜನಕೋಟಿಯಲ್ಲಿ ದೀನರಾಗಿರುವವರು ತಮ್ಮ ಉಪವಾಸವನ್ನು ನಿವಾರಿಸುವ ದಾರಿ ಕಾಣದಿರುವಾಗ, ದೊಡ್ಡಾಳುಗಳು ಜಾತಿ, ಸಮಾಜಗಳ ಭಿನ್ನ ಭಾವಗಳನ್ನು ಹಿಡಿದು ಕಚ್ಚಾಟಗಳಲ್ಲೇ ದಿನ ಹರಣ ಮಾಡುತ್ತಿದ್ದಾರೆ. ಹಿಂದುವಾಗಲಿ ಮುಸ್ಲಿಮನಾಗಲಿ ಏಕಪ್ರಕಾರವಾದ ಸಂಕಟಗಳಿಗೆ ಈಡಾಗಿದ್ದಾರಾದರೂ, ಮಹಾತ್ಮಾಜಿಯವರು ಕೊಂಗ್ರೆಸಿನಲ್ಲಿ ಎದ್ದು ನಿಲ್ಲುವ ತನಕ, ಇವೆರಡೂ ಮಹಾ ಸಮಾಜಗಳ ದುಃಖದುರ್ದಶೆಗಳನ್ನು ಕುರಿತಾಗಿ ಒಂದೇ ವಿಚಾರ ಮಾಡಲು ಪ್ರಯತ್ನಪಟ್ಟವರು ಕಡಮೆ. ಇವೆರಡು ಸಮಾಜಗಳಲ್ಲಿ ಭೇದವುಂಟಾಯಿತೋ ಹೆರವರಿಗೆ ಅದರೊಳಗೆ ನುಗ್ಗಿ ತಮ್ಮ ಕಾರ್ಯ ಸಾಧಿಸಲು ಅನುಕೂಲವಾಯಿತು. ಆಡಳಿತದಲ್ಲಿ ಬದಲಾವಣೆಯ ಬದಲು, ರಾಜಕೀಯ ಹಕ್ಕುಗಳ ಮಾರ್ಪಾಟವು ಅಗತ್ಯವೆಂದೂ ಅದರಿಂದಲೂ ಎಲ್ಲ ಅಭಿವೃದ್ಧಿಗೆ ದಾರಿಯಿದೆ ಎಂದೂ ತಿಳಿದು ಬರುವ ವರೆಗೆ, ನೂರರಲ್ಲಿ ೯೦ ಜನ ಬಡವರಿಗೆ ಉದ್ಧಾರ ಹೊಂದಲು ಉಪಾಯವಾವುದೆಂದೂ ತಿಳಿದು ಯತ್ನಿಸಲು ಮುಂದೆ ದುಡುಕಿದವರಿಲ್ಲ.

ಸರಕಾರದ ಹುದ್ದೆಗಳಲ್ಲಿ ಯಾವ್ಯಾವ ಜಾತಿಗೆ ಎಷ್ಟೆಷ್ಟು ಸೇಕಡಾ ದಾಮಾಶಾಯಿದಂತೆ ಸಿಗಬೇಕೆಂದು ನಿರ್ಧಾರ ಮಾಡುವುದಕ್ಕಾಗಿ, ಪ್ರತಿನಿಧಿಗಳ ಸಭೆ ಸೇರಿಸಬೇಕೆನ್ನುವುದೇ ಅಲ್ಲ. ಇಡೀ ಜನಾಂಗವು ರಾಜಕೀಯ ಕ್ಷೇತ್ರದಲ್ಲಿ ಹೇಗೆ ಬಾಳಬೇಕೆಂದು ಅಭಿಪ್ರಾಯಪಡುತ್ತದೆ ಎಂಬ ವಿಚಾರವನ್ನು ನಿರ್ಧಾರ ಮಾಡುವುದಕ್ಕಾಗಿ ಈ ಸಭೆ ಬೇಕಾಗಿದೆ. ಕೊಮ್ಯುನಲ್ ಎವಾರ್ಡು ಮೊದಲಾದುವಕ್ಕೆ ಎರಡನೆ ವಿಶೇಷತೆ ಕೊಡಬಹುದು. ಶ್ರೀ| ಜಿನ್ನರಂತೆ ಜನತೆಗಾಗಿ ಮಹೋತ್ಸಾಹದಿಂದ ದುಡಿದು, ಜನತೆಗಾಗಿ ಪ್ರತಿಯೊಂದೂ ವಿಧದಲ್ಲಿ ಸೇವೆಮಾಡಿ ಮಾಡಿ ಅತುಳ ಪುಣ್ಯ ಕೀರ್ತಿಗಳನ್ನು ಕಾಣಿಕೆಯಾಗಿ ಪಡೆದವರು ಸಹ ಈಗ ಜಾತಿಯ ನಾತನ್ನೆತ್ತಿ ವಿರಸವಾಗಿ ಭಾಷಣ ಮಾಡುವಂತಾದುದು, ೧೯೩೨ನೆ ಇಸವಿಯಲ್ಲಿ ನಮಗೆ ದೊರೆತ ಅಂದಿನ ಸದ್ಯದ ವ್ಯವಸ್ಥೆಯೇ ಕಾರಣದಿಂದಲೇ ಎನ್ನಬಹುದು. ಅದೇ ಜಾತಿಭೂತದ ನೆಲೆಗೆ ಆಶ್ರಯ ಕೊಟ್ಟಿರುವ ಕೊಮ್ಯುನಲ್ ಪಕ್ಷಪಾತದ ಮರ.

ಈಗ ಇಂತಹ ಯುವಕರು ಮೇಲೆಹೇಳಿರುವ ಮಾತುಗಳಿಂದ ಸ್ಪಷ್ಟವಾಗಿ ತಿಳಿಸಿರುವುದನ್ನು ಓದಿದರೆ, ಈ ಯುವಕರು ಆ ಮರವನ್ನು ಕಡಿದಿಕ್ಕಲು ಹೊರಟುದನ್ನು ಗ್ರಹಿಸಬಹುದು. ಯುವಕ ಜನಾಂಗವು ಹೀಗೆ ಏಕಕಂಠವಾಗಿ ದೃಢ ನುಡಿದ ಈ ಮಾತುಗಳಲ್ಲಿ, ಮುಂದೆಯಾದರೂ ಭಾರತ ವರ್ಷಕ್ಕೆ ಸುದಿನಗಳುಂಟು. ಅದೂ ಬೇಗನೆ ಮಾಡುವುದು ಎನ್ನಲು ಹೆಚ್ಚಿನ ಧೈರ್ಯ ಹುಟ್ಟುತ್ತದಲ್ಲವೆ?

ತೀರ್ವೆಯ ತೀರ್ಮಾನ

೧೯೧೯ನೇ ಇಸ್ವಿಯಿಂದಲೂ ಪಾರ್ಲಿಮೆಂಟರಿ ಕಮಿಟಿಯು ನಿರ್ಧಾರ ಮಾಡಿರುವ ತೀರ್ವೆಯ ತೀರ್ಮಾನವು ಇನ್ನೂ ಆಗಿಲ್ಲ. ಕಳೆದ ಐದು ವರ್ಷಗಳಲ್ಲಿ ಕೃಷಿಯ ಉತ್ಪನ್ನಗಳ ಮೌಲ್ಯ ತಗ್ಗುತ್ತ ಬಂದಿದೆ; ಆದರೆ, ಸರಕಾರದ ಖರ್ಚು ಕಡಮೆಯಾಗದೆ ಇದ್ದುದರಿಂದ ಕಂದಾಯವನ್ನು ಇಳಿಸಲಾದುದಿಲ್ಲ. ತೀರ್ವೆ ತೆರಲಾರದವರ ಸಂಖ್ಯೆಯೂ ಸಂಕಷ್ಟಗಳೂ ಹೆಚ್ಚುತ್ತಲೇ ಬಂದಿವೆ. ಕೊಂಗ್ರೆಸು ಅಧಿಕಾರಕ್ಕೆ ಬರುವಾಗ ತೀರ್ವೆಯ ವಿಷಯ ಖಂಡಿತವಾದ ತೀರ್ಮಾನವನ್ನು ಮಾಡುವುದಾಗಿ ಸೂಚಿಸಿರುವುದನ್ನು ವಿಶ್ವಾಸದಿಂದ ನಂಬಿರುವ ಕೃಷಿಕರಿಗೆ ಈಗ ಸ್ವಲ್ಪವಾದರೂ ಧೈರ್ಯವುಂಟಾಗುವಂತೆ ಉಪಯುಕ್ತ ಸೂಚನೆಗಳಾಗಬೇಕು. ಈ ಮಧ್ಯೆ ವಜಾಮಾಡಿರುವ ೭೫ ಲಕ್ಷದ ರಿಯಾಯಿತಿಯನ್ನು ಯಾವ ವಿಧದಿಂದಲೂ ಕೊಂಡಾಡಲಾಗದಷ್ಟು ಕಡಮೆಯಾಗಿಯೇ ಎಣಿಸಬೇಕಾಗಿದೆ. ಮೊನ್ನೆ ಎಸೆಂಬ್ಲಿಯಲ್ಲಿ ಸರಕಾರವು ಕೊಂಗ್ರೆಸಿನ ಕಾರ್ಯಕ್ರಮವನ್ನು ಈ ಭಾಗದಲ್ಲಿ ಸಂಪೂರ್ಣವಾಗಿ ಅಂಗೀಕರಿಸಿಯದೆ ಎಂದೇ ಮಂತ್ರಿಗಳು ತಿಳಿಸಿ, ಇನ್ನಷ್ಟು ಅವಕಾಶಬೇಕೆಂದೂ ತಿಳಿಸಿದ್ದಾರೆ. ಆದರೆ ಎಷ್ಟೆಂದರೂ, ಪರಂಪರೆಯಾಗಿ ಬಂದಿರುವ ಪ್ರಾರಬ್ಧ ದೋಷವನ್ನು ಈ ಮಂತ್ರಿಗಳು ದೂರಬೇಕಾಗಿದೆ. ರೂಪಾಯಿಯನ್ನು ೧೬ರಿಂದ ೧೮ ಪೆನ್ಸಿಗೆ ಸರಿಮಾಡಿದುದರಿಂದ ಇಷ್ಟು ವರ್ಷಗಳಲ್ಲಿ (ಆ ರೀತಿಯ ವಿನಿಮಯವನ್ನು ಮಾಡಿದವರು ಅಕಾಲ ಮೃತ್ಯುವಿಗೆ ತುತ್ತಾದರೂ) ಎಷ್ಟೋ ಕೋಟಿ ರೂಪಾಯಿಗಳ ನಷ್ಟವನ್ನು ಉಂಟುಮಾಡಿಯದೆ. ಗ್ರಾಮಸ್ಥರ ಸಾಲವು ಎಷ್ಟೋ ಕೋಟಿ ರೂಪಾಯಿ ಹೆಚ್ಚಿಯದೆ. ಅನಗತ್ಯವಾಗಿರುವ ಒಂದು ರೆವಿನ್ಯೂ ಬೋರ್ಡು ಇದೆ; ಅದರ ಕೆಲವಂಶ ಕೆಲಸವನ್ನು ಇತರರಿಗೆ ವರ್ಗಾಯಿಸುತ್ತಿರಾದುದರಿಂದ ಈ ಬೋರ್ಡು ಇನ್ನಷ್ಟು ಅನಾವಶ್ಯಕವೇ ಆಗುತ್ತ ಬರುತ್ತದೆ. ಅಕ್ಕ ಆ ಬೋರ್ಡನ್ನು ರದ್ದುಮಾಡುವ ಅಧಿಕಾರ ಕೊಟ್ಟಿಲ್ಲವಾದರೂ, ಅದನ್ನು ಕಿತ್ತುಹಾಕುವ ಇಚ್ಛೆಯನ್ನಾದರೂ ಮಂತ್ರಿಗಳು ತೋರಿಸಬಾರದೆಂದೇನೂ ಇಲ್ಲ. ಇವೆಲ್ಲ ವಿಷಯಗಳನ್ನು ಕುರಿತಾಗಿ ಮಂತ್ರಿಗಳು ಖಂಡಿತವಾದ ಅಭಿಪ್ರಾಯಗಳನ್ನು ಸದ್ಯದಲ್ಲೆ ಪ್ರಕಟಿಸುವುದು ಅಗತ್ಯವಾಗಿದೆ.

ಕಳೆದ ವರ್ಷ ಗ್ರಾಮಪಂಚಾಯತುಗಳು

ತೃಪ್ತಿಕರವಾಗಿ ಕೆಲಸಮಾಡಿವೆ ಎಂದು ಸರಕಾರದ ವರದಿ. ಈ ಪಂಚಾಯತುಗಳಿಗೆ ಈಗಿರುವುದಕ್ಕಿಂತ ಹೆಚ್ಚಿನ ಅಧಿಕಾರಗಳನ್ನು ಉದ್ಯೋಗಗಳನ್ನು ಕೊಡುವುದರಿಂದ, ಇವು ಇನ್ನಷ್ಟು ಪ್ರಬಲವಾಗಿ ಜನತೆಯ ಹಿತಕ್ಕೆ ದುಡಿಯಬಹುದು. ಹಿಂದೆ ರಾಜ್ಯದಲ್ಲೆಲ್ಲ ಪ್ರಮುಖ ಮೂಲ ಸಂಸ್ಥೆಗಳಾಗಿ ಗ್ರಾಮಪಂಚಾಯತುಗಳೇ ಇದ್ದುವು; ಇವುಗಳ ಅಧೋಗತಿಯಿಂದ ಗ್ರಾಮಗಳೇ ಮಾತ್ರವಲ್ಲದೆ, ಇಡೀ ದೇಶವೇ ಅವನತಿಗೆ ಇಳಿಯಿತೆನ್ನಬಹುದು. ಪಂಚಾಯತದಾರರು ಜಾತಿಮತ ಮೊದಲಾದುವುಗಳ ಪಕ್ಷಪಾತ ಹಿಡಿದು, ಲಂಚಖೋರರಾಗಿ ವರ್ತಿಸುವರೆಂಬ ಊಹನೆ ಇತ್ತು; ಅದು ವರದಿಯಲ್ಲಿ ಹೇಳಿರುವಂತೆ ಬಹುಮಟ್ಟಿಗೆ ನಿರಾಧಾರವಾಗಿದೆ. ಕೆಲವೇ ಕಡೆಗಳಲ್ಲಿ ಕಂಡುಬಂದ ದುರ್ಗುಣಗಳಿಂದ ಇಡೀ ವ್ಯವಸ್ಥೆಯೇ ಹಾಳಾಗಿದೆ ಎನ್ನುವುದು ಶುದ್ಧ ತಪ್ಪು ಗ್ರಹಿಕೆ. ಹತ್ತೆಂಟು ಸಾಮಾನ್ಯ ದೋಷಗಳು ಇವುಗಳ ಕಾರ್ಯನಿರ್ವಹಣದಲ್ಲಿ ಕಂಡುಬರುತ್ತವೆಯಾದರೂ ಅವನ್ನು ಹೋಗಲಾಡಿಸಲು ಕೂಡಲೇ ಸೂಚನೆಗಳನ್ನು ಕೊಡಲಾಗಿದೆ. ಸರಕಾರದ ಉಚ್ಚ ಅಧಿಕಾರಿಗಳು ಇವುಗಳ ಮೇಲೆ ಇಡಬೇಕಾಗಿರುವಷ್ಟು ಚೆನ್ನಾಗಿ ನಿಗಾ ಇಟ್ಟಿಲ್ಲ. ಅದಕ್ಕಾಗಿಯೆ ಇವರನ್ನು ಸರಕಾರವು ಎಚ್ಚರಿಸಿಯದೆ. ಇಲ್ಲಾ ಮುನ್ಸಿಫ್ ಕೋರ್ಟುಗಳ [illegible] ದಾಗಿದ್ದ ವ್ಯಾಜ್ಯಗಳಲ್ಲಿಷ್ಟೋ ಅಂಶ, ಪಂಚಾಯತುಗಳಲ್ಲೇ ತೀರ್ಮಾನವಾಗಿರುವ ಪ್ರಯುಕ್ತ, ಇವುಗಳ ಉಪಯೋಗವು ಬಹಳ ಪ್ರಚಾರಕ್ಕೆ ಬಂದಿದೆ ಎನ್ನಬೇಕು. ಬೇಗನೆ ತೃಪ್ತಿಕರವಾದ ನ್ಯಾಯ ಸಿಗುವಂತೆ ಇವನ್ನು ಇನ್ನಷ್ಟು ಧಾರಾಳ ಉಪಯೋಗಕ್ಕೆ ಬರುವಂತೆ ಇವನ್ನು ಬಲಗೊಳಿಸಬೇಕು.

ಮದ್ಯಪಾನ ನಿರೋಧ ಸೂತ್ರಗಳಲ್ಲಿ

ಅಗತ್ಯವಾಗಿಯೂ ಕೆಲವು ಹುಳುಕುಗಳಿವೆ. ಶ್ರೀಮಂತರಿಗೆ ಸಿಗುವ ನಮೂನೆಯ ರಿಯಾಯತಿಗಳು ಬಡವರಿಗೆ 'ಏಕೆ ಸಿಗುತ್ತಿಲ್ಲವೆಂದೊಬ್ಬ ಮಾನ್ಯರು ಕೇಳಿರುವರು. ಎಂದರೆ ಜನರಿಗೆ ಅವರ ಸಂಪತ್ತಿನ ಸ್ಥಿತಿಗೆ ತಕ್ಕಂತೆ ಕಾನೂನಾಗಬಹುದೆ? ಎಂದು ಕೇಳಿದಂತಾಯಿತು. ಎರಡು ತರಗತಿಯವರಿಗೆ ಮದ್ಯ ಕುಡಿಯಲು ಅನುಕೂಲತೆ ಇರಬೇಕೆಂದರ್ಥವಲ್ಲ, ಇಬ್ಬರಿಗೂ ಒಂದೇ ಬಗೆಯ ನಿರೋಧ ಏತಕ್ಕಾಗದು? ಎಂದೇ ಪ್ರಶ್ನೆ. ಏಕೆಂದರೆ, ವರದಕ್ಷಿಣೆ ಆಡಂಬರ ಅನಾವಶ್ಯಕ ಖರ್ಚು ದುಸ್ತು ಮೊದಲಾದ ಎಲ್ಲ ವಿಷಯಗಳಲ್ಲೂ ಬಡವರು ಒಂದು ಬಗೆಯ ಅನುಕರಣ ಬುದ್ಧಿಯಿಂದ ಶ್ರೀಮಂತರು ಹಾಕಿ ಕೊಟ್ಟಿರುವ ಮಾದರಿಯನ್ನೆ ಅನುಸರಿಸುವುದುಂಟು. ಎಂದ ಬಳಿಕ ಸಾಮಾಜಿಕ ಹೆಗ್ಗಳಿಕೆಗಾಗಿಯೋ ಅದೊಂದು ಯೋಗ್ಯತಾ ಸೂಚಕ ವಿಷಯವೆಂದೋ ಬಡವರು ಸಹ ಮೆಲ್ಲನೆ ಶ್ರೀಮಂತರಿಗಾಗಿಟ್ಟ ರಿಯಾಯತಿಗಳಿಗೆ ಪೇಚಾಡಬಹುದಲ್ಲವೆ? ಮನೆ ಕಟ್ಟುವಾಗ ಅಸ್ತಿಭಾರವನ್ನು ಮೊದಲು ಕಟ್ಟುವರು; ಮನೆ ಕೆಡಹುವಾಗ ಮಾಡನ್ನು ಮೊದಲು ಕೆಡಹುವರು. ಹಾಗೆಯೆ ಸಮಾಜವು ಭದ್ರವಾಗಿ ರಚನೆ ಹೊಂದುವ ಹಾಗೆ ಕೆಳ ಸ್ಥಿತಿಯ ಜನರಿಂದ ಸುಧಾರಣೆಗಳನ್ನು ಪ್ರಾರಂಭಿಸಬೇಕು; ತಲೆಭಾರವಾಗಿ ನಿಲ್ಲುವಂತೆ ನಾನಾ ದುರಭ್ಯಾಸಗಳೂ ದುರಾಚಾರಗಳೂ ಉಂಟಾಗಿರುವಾಗ ಅವನ್ನು ಕೀಳಲು ಅಲ್ಲಿಂದಲೇ ಪ್ರಾರಂಭಿಸಬೇಕಲ್ಲದೆ, ಅಸ್ತಿಭಾರದಿಂದಲ್ಲ. ದುರ್ಗುಣಗಳನ್ನು ಉತ್ತಮ ಸ್ಥಿತಿಯವರಿಂದ ಕಿತ್ತರೆ ಅನ್ಯ ಮತ್ತೆ ಕೆಳ ಸ್ಥಿತಿಯವರ ಅನುಕರಣಕ್ಕೆ ಪಾತ್ರವಾಗುವುದಿಲ್ಲ. ಉದಾಹರಣೆಗಾಗಿ—ಖಾದೀ ಪ್ರಚಾರ ಶ್ರೀಮಂತ ವ್ಯವಹಾರಗಳ ಉದಾಹರಣೆಯು ಬಡವರಿಗೆ ಭಯಂಕರ ಮಾದರಿಯಾಗದಂತೆ ಅಲ್ಲೇ ಅದನ್ನು ತಡೆಯಬೇಕಾಗಿ ಈ ನಿರೋಧ ಸೂತ್ರಗಳ ಪ್ರಶ್ನೆ ಎದ್ದಿದೆ. ಹೀಗಿರುವುದರಿಂದ ಈ ರಿಯಾಯತಿಗಳ ವಿನಾಯತಿಗೆ ಬೇಗನೆ ತೊಡಗುವುದು ಅಗತ್ಯವಾಗಿದೆ.

ನಿರುದ್ಯೋಗಿಗಳ ಖಾನೆಸುಮಾರಿ

ನಿರುದ್ಯೋಗಿ ಶಿಕ್ಷಿತರ ಒಂದು ಖಾನೆಸುಮಾರಿಗೆ ನಮ್ಮ ಸರಕಾರವು ತೊಡಗಿದೆ. ಇವರ ದೈನ್ಯತೆಯನ್ನು ಇವರು ಸಾಮಾನ್ಯವಾಗಿ ಸರಕಾರಕ್ಕೆ ತಿಳಿಸುವಂತಿಲ್ಲ. ಹಾಗೆಂದು ಇವರನ್ನು ಇನ್ನೂ ದೀನರಾಗಬಿಟ್ಟರೆ ಸರಕಾರಕ್ಕೂ ಜನತೆಗೂ ಗಂಡಾಂತರವುಂಟು. ಶಿಕ್ಷಿತರಲ್ಲಿ ಸಂಕಟ ಹೆಚ್ಚುವಂತೆ ಜನಾಂಗದಲ್ಲಿ ಕ್ಲೇಶವು ಹೆಚ್ಚುತ್ತ, ಕೊನೆಗೆ ಹೇಗೂ ಮಾಡಿ ಒಮ್ಮೆಗೆ ಒಂದು ಬಗೆಯ ಸ್ಥಿತಿಗೆ ಬರಲು ನಾನಾ ಚಳವಳಿಗಳು ಉಂಟಾಗುವುವು! ಇವರ ಖಾನೆಸುಮಾರಿ ಆದ ಬಳಿಕ ಇವರಿಗೆ ಯಾವ ಉದ್ಯೋಗಗಳು ಸಿಗಲಿಕ್ಕಿವೆ ಎಂಬುದನ್ನು ಗೊತ್ತುಹಚ್ಚಿದ ಬಳಿಕವೇ ಈ ಉದ್ಯಮವನ್ನು ತೊಡಗುವುದುಚಿತ. ಹಳ್ಳಿಗಳ ಉದ್ಧಾರ ಕಾರ್ಯಕ್ಕೆ, ಶಿಕ್ಷಣ ಕಾರ್ಯಕ್ಕೆ, ಪಂಚಾಯತು, ಸಹಕಾರ ಸಂಘ ಇತ್ಯಾದಿಗಳಲ್ಲೂ ಹಿಂದೀ ಪ್ರಚಾರ ಕಾರ್ಯದಲ್ಲೂ ಇವರನ್ನು ಸೇರಿಸುವುದೂ, ಕೊಂಗ್ರೆಸಿನ ಕಾರ್ಯಕ್ರಮಾದಿಗಳನ್ನು ಜನತೆಗೆ ವಿವರಿಸಿ ಹಳ್ಳಿಗಳಲ್ಲಿನ ದುಸ್ಥಿತಿಗಳನ್ನು ಸರಕಾರಕ್ಕೆ ನಿವೇದಿಸುವುದೂ ಮೊದಲಾದ ಕೆಲಸಗಳಿಗೆ ಇವರ ನೇಮಕವಾಗಬಹುದೇನೋ!

ಅಖಿಲ ಭಾರತ ಕೊಂಗ್ರೆಸ್ ಅಧಿವೇಶನ!

ಕೊಂಗ್ರೆಸ್ಸಿಗೆ ಶರಣುಬಂದರು!

ಚೀನದ ಅರಣ್ಯರೋಧನ! ಹಿಟ್ಲರನ ಘರ್ಜನೆ!

ಬ್ರಿಟನ್ನಿನ ಜಲಸ್ತಂಭ.

ಅಬಿಸೀನಿಯದ ಯುದ್ಧವು ಮೊದಲಾದಂದಿನಿಂದ ಬ್ರಿಟನ್ನಿನ ಪರಿಸ್ಥಿತಿಯು ಬಹಳ ಕೆಟ್ಟಿರುತ್ತದೆ. ಜಗತ್ತಿನಲ್ಲಿ ಅತಿ ಪ್ರಬಲವೆನಿಸಿದ ಬ್ರಿಟನ್ನು ಈ ದಿನ ನಿಶ್ಶಕ್ತವಾಗಿ ನಿರ್ವೀರ್ಯವಾಗಿರುವುದು.

ಅಬಿಸೀನಿಯವನ್ನು ಇಟಲಿಯು ನುಂಗುತ್ತಿರಲು, ಹೈಲ್ ಸೆಲಾಸಿಯವರಿಗೆ ಬೆದರಬೇಡಿ ಎಂದು ಬರಿವಾರದ ಮಾತುಗಳನ್ನಾಡಿ ಆಯಿತು. ಸ್ಪೈನಿನಲ್ಲಿ ಕ್ರಾಂತಿಕಾರರು ಸರಕಾರದ ಮೇಲೆ ತಿರುಗಿ ಬೀಳಲು ಅದು ತಪ್ಪೆಂದು ಹೇಳಿ ಮುಗಿಯಿತು. ಜಪಾನಿನವರು ಈಗ ಚೀನದ ಮೇಲೆ ಅತಿಕ್ರಮವನ್ನು ನಡೆಸುತ್ತಿರಲು ಮತ್ತು ಸ್ವಂತ ಹಡಗುಗಳನ್ನೇ ಗುಂಡಿಕ್ಕಿ ಹುಡಿಮಾಡುತ್ತಿರಲು "ನೀವು ಮಾಡುವುದು ತಪ್ಪು. ಕ್ಷಮಾಪಣೆ ಬೇಡಿರಿ" ಎಂದು ಪತ್ರಗಳನ್ನು ಬರೆಯುವುದರಲ್ಲೇ ತೃಪ್ತವಾಗಿರುವುದು.

ಇಂದು ಜಪಾನು, ಇಟಲಿ, ಜರ್ಮನಿ ಮುಂತಾದ ದಿಟ್ಟ ರಾಷ್ಟ್ರಗಳು ಕೂಡಿಕೊಂಡು ಬ್ರಿಟನ್ನಿಗೆ ಮಾನಭಂಗದ ಕಹಿಯೂಟವನ್ನು ಉಣ್ಣಿಸುತ್ತಿರಲು ಕಣ್ಣು ಮುಚ್ಚಿ ಅದನ್ನು ನುಂಗಿಕೊಂಡೂ ಬ್ರಿಟನ್ನು ಸುಮ್ಮಗಿರುವುದೇಕೆ? ಬ್ರಿಟನ್ನಿನ ಸಾಮ್ರಾಜ್ಯ ಶಕ್ತಿಯು ಕಳೆಗುಂದುತ್ತಿದೆಯೆ?

ಮಹಾಭಾರತದಲ್ಲಿ ಭೀಮನು ಮಾಡಿದಲ್ಲಿ ನುಡಿದ ಮಾತುಗಳನ್ನು ಕೇಳಿಯೂ ನೀರಿನಡಿಯಲ್ಲಿ ಅಡಗಿಕೊಂಡಿದ್ದ ದುರ್ಯೋಧನನಂತೆ ಈ ಹೊತ್ತು ಬ್ರಿಟನ್ನಿನ ಪರಿಸ್ಥಿತಿಯಾಗಿರುವುದು.

ಕಳ್ಳು ಕುಡಿವ ಗಾಂಧಿ

ಕಳೆದ ವಾರ ಪೂನದಲ್ಲೊಂದು ಫೆನ್ಸಿ ಡ್ರೆಸ್ ಬೋಲ್ ನಡೆಯಿತು. ಹಚಿನ್ಸ್ ಎಂಬ ಕುದುರೆ ಸವಾರನೊಬ್ಬನು (Jockey) ಗಾಂಧಿಜಿಯವರಂತೆ ಉಡಿಗೆ ತೊಡಿಗೆಗಳನ್ನು ಧರಿಸಿಕೊಂಡು, "ಮದ್ಯಪಾನ ನಿಷೇಧ" ಎಂದು ಬರೆದಿರುವ ಒಂದು ರಟ್ಟಿನ ತುಂಡನ್ನು ಬೆನ್ನಿಗೆ ತೂಗಾಡಿಸಿ ಕೈಯಲ್ಲೊಂದು ಮದ್ಯದ ಸೀಸೆಯನ್ನು ಹಿಡಿದು, ಮದ್ಯ ಕುಡಿದು ವ್ಯವಹರಿಸುವನಂತೆ ನಟಿಸಿದನು.

ಆತನಿಗೆ ಪ್ರಥಮ ಬಹುಮಾನವೂ ಕೊಡಲಾಯಿತು.

ಇದನ್ನು ಕೇಳಿ ಯುರೋಪಿಯನರೇ ಅನೇಕ ಮಂದಿ ನೊಂದಿರಲು ಅಲ್ಲಿ ಹಾಜರಿದ್ದ ಭಾರತೀಯರು ಸುಮ್ಮಗಿದ್ದುದು ಪರಮಾಶ್ಚರ್ಯವಾಗಿದೆ! ಜಗದ್ವಿಖ್ಯಾತರಾದ ಮಹಾತ್ಮರನ್ನು ಈ ಬಗೆಯಲ್ಲಿ ಪರಿಹಾಸ್ಯ ಮಾಡುವ ಆ ಸವಾರನ ಮನೋವೃತ್ತಿಯು ಅದೆಷ್ಟು ಹೀನವಾಗಿರಬೇಕು? ಅದನ್ನು ನೋಡಿಯೂ ಸಹಿಸಿಕೊಂಡ ಭಾರತೀಯರ ಆತ್ಮಗೌರವವು ಅದೆಷ್ಟು ಕೆಳಕ್ಕಿಳಿದಿರಬೇಕು?

ಮದ್ಯಪಾನ ನಿರೋಧಕ್ಕೆ ಕ್ರೈಸ್ತರ ಸಮ್ಮತಿ

ಮದ್ಯಪಾನ ನಿರೋಧಕ್ಕೆ ಕ್ರೈಸ್ತರ ಅಸಮ್ಮತಿಯಿದೆ. ಮದ್ಯಪಾನ ನಿಷೇಧ ಚಳವಳವನ್ನು ಖಂಡಿಸಿ ಅನೇಕ ಕ್ರೈಸ್ತ ಬಂಧುಗಳಿಂದ ಬಂದ ಪತ್ರಗಳಿಂದಾಗಿ ಗಾಂಧಿಜಿಯವರಿಗೆ ವಿಚಾರಕ್ಕಿಟ್ಟಿತು. ಆದುದರಿಂದ ಈ ಕುರಿತು ಹಲವು ಕ್ರೈಸ್ತ ಪ್ರಮುಖರ ಅಭಿಪ್ರಾಯಗಳನ್ನು ಸಂಗ್ರಹಿಸುವಂತೆ ಅವರು ಶ್ರೀ ದೇಸಾಯಿಯವರಿಗೆ ಹೇಳಿದರು.

ಅವುಗಳನ್ನು ಸಂಗ್ರಹಿಸಲು ಕ್ರೈಸ್ತರು ಮದ್ಯಪಾನ ನಿಷೇಧಕ್ಕೆ ವಿರೋಧವಿಲ್ಲವೆಂದು ತಿಳಿದುಬಂದಿದೆ. ಪ್ರತಿಭಟಿಸುವವರು ಒಬ್ಬರಿಬ್ಬರಿರಬಹುದು? ಆದರೆ ಅಂಥವರು ಯಾವ ಮತದವರಿಲ್ಲ?

ಇದು ಸರಿಯೆ?

ಕೇಂದ್ರ ಸಭೆಯಲ್ಲಿ ಹಾಕಿದ ಆದೊಂದು ಪ್ರಶ್ನೆಗೆ ಪೂರ್ವ ಆಫ್ರಿಕದಿಂದ ವರ್ಷಂಪ್ರತಿ ಸರಾಸರಿ ೪೦ ಸಾವಿರ ಟನ್ ಹತ್ತಿಯು ಹಿಂದೂದೇಶಕ್ಕೆ ಆಮದು ಮಾಡಲಾಗುವುದೆಂದು ಸರಕಾರದ ಉತ್ತರವು ದೊರೆತಿರುವುದು.

ತನ್ನಲ್ಲಿರುವ ಅಧಿಕ ಹತ್ತಿಗೇ ಗಿರಾಕಿಗಳನ್ನು ಪಡೆಯಲು ಈ ದೇಶಕ್ಕೆ ಕಷ್ಟವಾಗುವಾಗ, ಪರದೇಶಗಳಿಂದ ಈ ಬಗೆಯಲ್ಲಿ ಹತ್ತಿಯನ್ನು ಒಳಗೆ ಬಿಡಬೇಕೆ?

ಸುಂಕವನ್ನು ಹೇರಿಸಿ ಹಣ ಸಂಪಾದಿಸಲು ಸರ್ ಜೇಮ್ಸ್ ಗ್ರಿಗ್ಗರಿಗೆ ಇಲ್ಲಿ ತುಂಬಾ ಅನುಕೂಲವಿದೆ? ಅವರು ಹಾಗೆಯೆ ಮಾಡಬಲ್ಲರೆ?

ಕಮ್ಮಿ ಖರ್ಚು.

ತಮಗೆ ಹಿತವಲ್ಲದ ಪ್ರಶ್ನೆಗಳು ಮುಂದೆ ಬಂದಾಗ ಕೇಂದ್ರ ಸರಕಾರದವರು "ಜನತೆಯ ಹಿತದೃಷ್ಟಿಯಿಂದಾಗಿ ಅವುಗಳಿಗೆ ಉತ್ತರ ಕೊಡುವುದು ಸರಿಯಲ್ಲ"ವೆಂದು ಹೇಳುವುದಿದೆ. ಆದರೆ ಆಗಾಗ ಕೆಲವು ಪ್ರಶ್ನೆಗಳಿಗೆ ಅವರಿಗೆ ಉತ್ತರ ಕೊಡದೆ ನಿರ್ವಾಹವಿರುವುದಿಲ್ಲ. ಹಿಂದುಸ್ಥಾನದ ಖಜಾನೆಯಿಂದ ಬ್ರಿಟಿಷ್ ಸೇನೆಗಾಗಿ ಆಗುವ ವೆಚ್ಚವೆಷ್ಟೆಂದು ಸರ್ದಾರ್ ಮಂಗಲಸಿಂಗರು ವಿಚಾರಿಸಿದರು. ಅವುಗಳ ಬದಲಾಗಿ ಹಿಂದೀಯರ ಸೈನ್ಯವನ್ನು ಕಟ್ಟಿಕೊಂಡರೆ ಉಳಿಯಬಹುದಾದ ಹಣವೆಷ್ಟೆಂದೂ ಕೇಳಿದರು. ಬ್ರಿಟಿಷ್ ಸೈನ್ಯಕ್ಕಾಗಿ ವರ್ಷಾವಧಿ ೧೨ ಕೋಟಿ ರೂಪಾಯಿಗಳು ವೆಚ್ಚವಾಗುತ್ತಿರುವುದಾಗಿಯೂ, ಹಿಂದೀಯರನ್ನು ನೇಮಿಸಿದರೆ ಸರಿ ಅರ್ಧ ಖರ್ಚು ಉಳಿಯಬಹುದೆಂದೂ ಸರ್ ಜೇಮ್ಸ್ ಗ್ರಿಗ್ಗರೆಂದರು. ಈಗಾಗಲೇ ತೆರಿಗೆಗಳ ಭಾರದಿಂದ ಕುಗ್ಗಿರುತ್ತಿರುವ ಭಾರತಕ್ಕೆ ೬ ಕೋಟಿ ರೂಪಾಯಿಗಳಷ್ಟು ಉಳಿತವೆಂದರೆ ಸಾಧಾರಣವಲ್ಲವೆ? ಭಾರತೀಯರಿಗೇ ಸೈನ್ಯದಲ್ಲಿ ಸ್ಥಾನವನ್ನು ಕೊಟ್ಟರೆ ಅದೆಷ್ಟು ಮಂದಿಗೆ ಉದ್ಯೋಗವು ದೊರೆತಂತಾಗುವುದು? ಹೀಗೆ ಮಾಡಲು ಸಾಧ್ಯವಿದ್ದರೂ ಸ್ವಾರ್ಥಪರರಾದ ಬ್ರಿಟಿಷರು ಇದಕ್ಕೆ ಒಪ್ಪಲಾರರು.

ಚೀನದ ಅರಣ್ಯರೋದನ.

ಜಪಾನಿನ ಮರಣದ ಹಿಡಿತದಿಂದ ತನ್ನನ್ನು ಕಾಯುವಂತೆ ಚೀನವು ಜನಾಂಗ ಸಂಘಕ್ಕೆ ಮೊರೆಯಿಟ್ಟಿರುವುದು. ಆದರೆ ಇಂದು ಅದು ಜೀವನ್ಮೃತವಾಗಿರುವುದು. ಚೀನವು ತನ್ನ ರಕ್ಷಣೆಗಾಗಿ ಜನಾಂಗ ಸಂಘದ ಮೇಲೆ ಆಧಾರಿಸಿರುವುದಾದರೆ ಅಬಿಸೀನಿಯಕ್ಕಾದ ಗತಿಯೇ ಅದಕ್ಕೂ ಉಂಟಾಗುವುದು. ಚೀನವು ನಾಶವಾದರೂ ಜಗತ್ತಿನ ಶಾಂತಿ ಭಂಗವಾದರೂ ಜಪಾನಿಗೆ ಅವುಗಳ ಗೊಡವೆಯಿಲ್ಲ. ಇದನ್ನು ಸತ್ತಂತಿರುವ ಜನಾಂಗ ಸಂಘಕ್ಕೆ ಚೀನವು ಮೊರೆಯಿಟ್ಟಿರುವುದೆಂದು ಹೇಳುವುದು ಹಾಸ್ಯಾಸ್ಪದವಾದ ಮಾತು. ಈ ಹೊತ್ತು ಯಾರಿಂದಲೂ ಚೀನಕ್ಕೆ ಒಂದಿಷ್ಟು ಸಹಾಯವಾಗುವಂತಿಲ್ಲ. ಅದು ತನ್ನನ್ನೇ ಆಧರಿಸಿಕೊಂಡು ಬೇಕಾಗಿದೆ. ತನ್ನ ಅಂತಃಕಲಹಗಳನ್ನು ಬತ್ತಿಟ್ಟುಗಿಟ್ಟು ಒಂದು ಅದು ಒಕ್ಕಟ್ಟಿನಿಂದ ಜಪಾನನ್ನು ಇದಿರಾಯಿಸಬೇಕಾಗಿದೆ. ಆಗ ಮಾತ್ರ ಚೀನವು ಈ ಸಂಕಷ್ಟದಿಂದ ಪಾರಾಗುವ ಆಶೆಯಿದೆ.

ಕೊಂಗ್ರೆಸ್ಸಿಗೆ ಶರಣು ಬಂದರು

ಬಂಗಾಲ ಮಂತ್ರಿಮಂಡಲದವರು ರಾಜಕೀಯ ಕೈದಿಗಳನ್ನು ಬಿಡಲು ನಿರ್ಧರಿಸಿದ್ದರಷ್ಟೆ. ಈಗ ಆ ನಿರ್ಧಾರವನ್ನು ಸ್ವಲ್ಪ ಸಡಿಲು ಬಿಟ್ಟಂತೆ ಕಾಣುತ್ತದೆ. ಮಂತ್ರಿ ಸಭೆಯವರಾದ ಶ್ರೀ ಫಜಲ್ ಹಕ್ಕರು ಕೊಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ಶರತ್ಚಂದ್ರ ಭೋಸರಿಗೆ ಅಲ್ಲಿಗೆ ಹೋಗಿ ಎರಡೂ ಪಕ್ಷದ ವಿದ್ಯಾರ್ಥಿಗಳಿಗೆ ಒಪ್ಪಂದವಾಗುವಂತೆ ಪ್ರಯತ್ನಿಸಬೇಕಾಗಿ ಕೇಳಿಕೊಂಡಿರುವರು.

ಈ ಕಾರ್ಯವನ್ನು ಕೈಕೊಳ್ಳಲು ತನ್ನ ಪಕ್ಷದವರು ಅನುಕೂಲಿಸಿದ ಶ್ರೀ ಹಕ್ಕ ಮಾತವೆ? ತಾನು ತಿಳಿದಿಲ್ಲವ ದರೂ ಅವರು ಕೊಂಗ್ರೆಸ್ಸಿಗೆ ಶರಣುಬಂದಿರುವರು.

ಹಿಟ್ಲರರ ಘರ್ಜನೆ

ಕಳೆದ ಮಹಾ ಯುದ್ಧದ ಮೊದಲು ತಮ್ಮದಾಗಿದ್ದ ಪ್ರದೇಶಗಳೆಲ್ಲವನ್ನೂ ಹಿಂತಿರುಗಿ ಪಡೆಕೊಳ್ಳುವ ತನಕ ಜರ್ಮನಿಯು ಸುಮ್ಮಗೆ ಕುಳಿತುಕೊಳ್ಳುವಂತಿಲ್ಲವೆಂದು ಹೆರ್ ಹಿಟ್ಲರರು ಗರ್ಜಿಸಿರುವರು.

ಈಗ ಅವು ಯಾರ ಸ್ವಾಧೀನದಲ್ಲಿವೆಯೋ ಅವರೂ ತಾವು ಅವುಗಳನ್ನು ಬಿಟ್ಟುಕೊಡುವಂತಿಲ್ಲವೆಂದೂ ಖಂಡಿತವಾಗಿ ಹೇಳುವರು.

ಹಾಗಾದರೆ ಮುಂದೇನು? ಯುದ್ಧ, ಅಥವಾ ಆ ಪ್ರದೇಶಗಳಿಗೆ ಸ್ವಾತಂತ್ರ್ಯದಾನ. ಸ್ವಾತಂತ್ರ್ಯವನ್ನು ಕೊಟ್ಟರೆ ಕಲಹದ ಕಾರಣವು ಮಾಯವಾಗುವುದು. ಇಂಗ್ಲಂಡು ಮತ್ತು ಫ್ರಾನ್ಸು ಇದಕ್ಕೆ ಒಪ್ಪದಿದ್ದರೆ ಮತ್ತೆ ಯುದ್ಧವಾಗುವುದೇ ನಿಶ್ಚಯ. ಹಿಟ್ಲರನೂ ತನಗೆ ಜಯವಾಗುವ ಚಿಹ್ನೆಗಳನ್ನು ಕಂಡೊಡನೆ ಯುದ್ಧವನ್ನು ಸಾರಬಹುದು.

ಖಾದಿ ಮಾಸ ಪತ್ರಿಕೆ.

ಎ ಐ ಎಸ್ ಎ ಯ ತಮಿಳುನಾಡು ಶಾಖೆಯವರು ಖಾದಿಯ ಪ್ರಚಾರಕ್ಕಾಗಿ 'ಕುಡಿನೂಲು' ಎಂಬ ಹೆಸರಿನ ಆದೊಂದು ಮಾಸಪತ್ರಿಕೆಯನ್ನು ಪ್ರಕಟಿಸಬೇಕೆಂದು ನಿರ್ಧರಿಸಿರುವರು. ಅದರ ಪ್ರಥಮ ಸಂಚಿಕೆಯು ಇದೇ ತಿಂಗಳ ೨೦ನೆಯ ತಾರೀಖಿನ ದಿನ ಹೊರಬೀಳುವುದು.

ಸ್ವತಂತ್ರ ಭಾರತ ಎಂಬ ವಾರಪತ್ರಿಕೆ.

ಕೊಂಗ್ರೆಸ್ಸಿನ ಪ್ರಚಾರಕಾರ್ಯಕ್ಕಾಗಿ "ಸ್ವತಂತ್ರ ಭಾರತ" ಎಂಬ ಶಿರೋನಾಮದಿಂದ ಒಂದು ವಾರಪತ್ರಿಕೆಯು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಹೊರಡಲಿದೆಯೆಂದು ವಿಶ್ವಾಸನೀಯವಾಗಿ ತಿಳಿದುಬರುತ್ತದೆ.

ಅದರ ಪ್ರಥಮ ಸಂಚಿಕೆಯು ವಿಜಯ ದಶಮಿಯ ದಿನ ಪ್ರಕಟಿಸಲ್ಪಡುವುದಂತೆ. ಈ ಕಾರ್ಯವನ್ನು ಕೈಕೊಂಡವರ ಧ್ಯೇಯವು ಸ್ತುತ್ಯವಿದೆ. ಅವರಿಗೆ ಜಯವಾಗಲೆಂದೇ ನಮ್ಮ ಹಾರೈಕೆ.

ರೆಕ್ಕೆಯುಳ್ಳ ಸೈನಿಕರು.

ರಷ್ಯವು ರೆಕ್ಕೆಯುಳ್ಳ ಸೈನಿಕರ ಪಡೆಯೊಂದನ್ನು ತಯಾರಿಸುತ್ತಿದೆ. ಈ ಪಡೆಗಳ ಸಿಪಾಯಿಯುಕ್ತ ತರಬೇತಿಯನ್ನು ಹೊಂದಿದ ಸಾವಿರಾರು ಭಟರು ಈಗ ಕೃತಕ ರೆಕ್ಕೆಗಳನ್ನು ಉಪಯೋಗಿಸಿ ವಿಮಾನಗಳಿಂದ ಧರೆಗಿಳಿಯಲು ಪ್ರಯತ್ನಿಸುತ್ತಿರುವರು.

ಈ ರೆಕ್ಕೆಗಳು ನಾಜೂಕಾದ ಸಿಲ್ಕ್ ಬಟ್ಟೆಯಿಂದ ತಯಾರುಮಾಡಲ್ಪಡುತ್ತವೆ. ಸೋವಿಯಟ್ ಪ್ರಾಜ್ಞರು ವಿಮಾನಗಳಿಂದ ಕೆಳಗಿಳಿಯುವವರಿಗೆ ಅವುಗಳು ಪಕ್ಷಿಗಳಂತೆ ಹಾರಾಡಲಿಕ್ಕಲ್ಲದಿದ್ದರೂ ತಮ್ಮ ಪತನವನ್ನು ಬೇಕಾದತ್ತ ತಿರುಗಿಸಲು ಸಹಾಯವಾಗಿವೆಯೆಂದು ಹೇಳುವರು.

ಅಂದಮಾನ ಕೈದಿಗಳ ಬಿಡುಗಡೆ

ಮದ್ರಾಸು ಸಂಸ್ಥಾನದ ಅಂದಮಾನ ಕೈದಿಗಳನ್ನು ಬಿಡುಗಡೆಮಾಡಿ ಸ್ವದೇಶಕ್ಕೆ ಕರೆಕೊಳ್ಳಲಾಗುವುದಂತೆ.

ಆಂಧ್ರರಿಗೆ ಪ್ರತ್ಯೇಕ ಒಂದು ಪ್ರಾಂತ್ಯ.

ಕನ್ನಡಿಗರು ತಮಗೊಂದು ಪ್ರತ್ಯೇಕ ಪ್ರಾಂತ್ಯವು ಬೇಕೆಂದು ಎಷ್ಟೋ ವರ್ಷಗಳಿಂದ ಒದ್ದಾಡುತ್ತಿರುವರು. ಆದರೆ ಆಯಾವು ಇಷ್ಟರ ತನಕ ಸಫಲವಾದುದಿಲ್ಲ. ಕೊಂಗ್ರೆಸ್ಸಿನವರು ಮಂತ್ರಿಪದವಿಯನ್ನು ಸ್ವೀಕರಿಸಿದಂದಿನಿಂದ ಈ ಚಳವಳವು ಪುನಃ ಚೇತನಗೊಂಡಿದೆ.

ಆಂಧ್ರದ ಪರಿಸ್ಥಿತಿಯೂ ಇದೇ ರೀತಿಯಾಗಿದೆ. ಅನೇಕ ವರ್ಷಗಳಿಂದ ಅವರೂ ತಮಗೊಂದು ಪ್ರತ್ಯೇಕ ಪ್ರಾಂತ್ಯವಾಗಬೇಕೆಂದು ಕೂಗುತ್ತಿರುವರು. ಈಗ ಅವರು ಅಲ್ಲಲ್ಲಿ ಸಭೆಗಳನ್ನು ಮಾಡಿ ಪುನಃ ಚಳವಳಕ್ಕೆ ಪ್ರಾರಂಭಿಸಿರುವರು.

ವೈರಿಗಳನ್ನು ಹಿಂದಟ್ಟಲು ಚೀನಿಯವರ ಚಮತ್ಕಾರದ ಸಾಹಸಗಳು

ಚೀನಿಯರು ಕಾಂಗ್‌ಚೌ ಚೆನ್‌ಸಿನ್ ಮತ್ತು ಎಕ್ ಪ್ರಾಂತ್ಯದ ಗಡಿಗಳಲ್ಲಿ ತಮ್ಮ ಸೈನ್ಯಬಲವನ್ನು ಹೆಚ್ಚಿಸಿ ವೈರಿಗಳ ಎದುರಂಟಿಕೆಯನ್ನು ಇದಿರಿಸಲು ಬೇಕಾದ ಸಿದ್ಧತೆಗಳನ್ನು ಮಾಡಿದ್ದಾರೆ. ಅಲ್ಲದೆ ಕೆಲವು ಪ್ರಾಂತ್ಯಗಳಲ್ಲಿ ಕಾಲುವೆಗಳ ಮತ್ತು ನದಿಗಳ ದಡೆಗಳನ್ನು ಕಡಿದು ನೀರಿನ ಪ್ರವಾಹವು ಹರಿಯುವಂತೆ ಮಾಡಿ ಜಪಾನೀಯರ ಸೈನ್ಯಗಳ ಮುಂದರಿಯುವಿಕೆ ಮಾಡಿರುವರು. ದಕ್ಷಿಣ ಚೈನದಲ್ಲಿ ಕೆಂಟೋನ್ ಪ್ರಾಂತ್ಯದಲ್ಲಿ ನಡೆದ ಯುದ್ಧದಲ್ಲಿ ಜಪಾನಿಯರು ಚೈನದ ಒಂದು ಯುದ್ಧನೌಕೆಯನ್ನು ಮುಳುಗಿಸಿದರಾಗಿಯೂ ಮತ್ತು ಇನ್ನೊಂದು ಹಡಗನ್ನು ಬೋಂಬುಗಳಿಂದ ನಾಶಪಡಿಸಿದರಾಗಿಯೂ ತಿಳಿದುಬರುತ್ತದೆ.

ಉತ್ತರ ಚೈನಾದಲ್ಲಿ ಚೀನಿಯರ ಪರಾಜಯ

ನಾಲ್ಕು ದಿವಸಗಳ ಭಯಂಕರ ಯುದ್ಧದಲ್ಲಿ ಪಿಪ್ಪಿಂಗಿನ ಚೀನಾಬಲವು ಜಪಾನೀಯರಿಂದ ಪರಾಜಿತರಾಗಿ ದಕ್ಷಿಣಕ್ಕೆ ಹಿಂದಟ್ಟಲ್ಪಟ್ಟು ಜಪಾನಿಯರು ಪಿಪ್ಪಿಂಗನ್ನು ವಶಪಡಿಸಿಕೊಂಡರು.

ಚೀನಿಯರ ಪ್ರಬಲವಾದ ಯುದ್ಧ ಸೇನೆಯು ನೆಲೆಯಾದ ಹೌಟಿಂಗ್ ಪೂರ್ವಕ್ಕಿಂತ ೩೦ ಮೈಲು ಮುಂದಕ್ಕಿರುವ ಪಿಪ್ಪಿಂಗ ಹಂಕೋ ರೈಲ್ವೆ ಲೈನುಗಳ ಪ್ರಾಂತ್ಯದಲ್ಲಿ ಕಳೆದ ಮೂರು ವಾರಗಳಿಂದಲೂ ಹತೋಟಿಗೆ ತರಲು ಪ್ರಯಾಸವಾದ ಚೀನಿಯರ ಸೈನ್ಯವನ್ನು ಜಪಾನಿಯರು ಅತಿ ಸಾಹಸದಿಂದ ಹಿಂದಟ್ಟಿರುವರು. ಸದ್ಯದಲ್ಲೇ ಮುಂದುವರಿಸಿ ಅವರ ಸೇನಾಬಲದ ನೆಲೆಯನ್ನು ಆಕ್ರಮಿಸಲು ಪ್ರಯತ್ನಿಸಬಹುದು.

ಜನಾಂಗ ಸಭೆಯ ಅನಾದರಣೆ! ಸ್ಪೈನಿನ ಮನವಿಯು ಸಫಲವಾಗಲಿಲ್ಲ

ಇಟಲಿ ಮತ್ತು ಜರ್ಮನಿಯರ ಅತ್ಯಾಚಾರದ ಕುರಿತು ಜನಾಂಗ ಸಭೆಗೆ ಮಾಡಿಕೊಂಡ ಸ್ಪೈನಿನ ಮನವಿಯು ಏನೊಂದೂ ಸಫಲವಾಗಲಿಲ್ಲ. ಇಟಲಿ ಮತ್ತು ಜರ್ಮನಿಯರ ಪರಸ್ಪರ ಸಹಾಯ ಮತ್ತು ಅನ್ಯೋನ್ಯತೆಯಿಂದಾಗಿ ಅವರು ತನ್ನ ಈ ದುರವಸ್ಥೆಗೆ ಕಾರಣಭೂತರಾದರೆಂದೂ, ಆದ್ದರಿಂದ ಈ ಕುರಿತು ಜನಾಂಗ ಸಭೆಯವರು ಈ ಪ್ರಸಂಗದಲ್ಲಿ ತನಗೆ ಉತ್ತೇಜನಮಾಡಿ ತಕ್ಕ ನ್ಯಾಯ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿತು. ಆದರೆ ಪ್ರಸ್ತುತದ ಪರಿಸ್ಥಿತಿಯಲ್ಲಿ ಜನಾಂಗ ಸಭೆಯವರು ತಮ್ಮಕ್ಕೇ ರೀಗ ಕವೆನೆಂಟಿನ ಅಕ್ರಮುಕ್ಕಸೂಸರಿಸಿ ಯಾವ ತರದ ತೀರ್ಮಾನವನ್ನು ಸ್ಪೇನಿನ ನ್ಯಾಯಗಳಲು ಸಿದ್ಧವಿಲ್ಲವೆಂಬುದನ್ನು ಸೂಚಿಸಿರುತ್ತಾರೆ.

ಎಲ್ಲಾ ಜನಾಂಗದ ರಾಯಭಾರಿಗಳಿಗೆ ಸ್ಪೇನ್ ಕಾಂಗ್ರೆಸ್ಸು ಕಳುಹಿ ಹೋಗುವಾಗ ಜಪಾನು ಎತ್ತರಿಸುತ್ತದೆ. ಇದಕ್ಕನುಗುಣವಾಗಿ ಬ್ರಿಟನು, ಇಟಲಿ, ಜರ್ಮನಿ ಮುಂತಾದ ರಾಷ್ಟ್ರ ರಾಯಭಾರಿಗಳು ತಪ್ಪಿರುವುದಿಲ್ಲ. ಅಮೇರಿಕ ರಾಯಭಾರಿಯಾದ ಜೋನ್‌ನರು ಹೊರಡಲುದ್ಯುಕ್ತರಾಗಿದ್ದರು.

ಫ್ರೆಂಚ ರಾಯಭಾರಿಯು ಈ ಕುರಿತು ಪೆರಿಸ್ಸಿನಿಂದ ಹುಕುಂನ್ನು ಎದುರುನೋಡುತ್ತಿರುವರು.

ನಾಯಕ್ ಒಪ್ಪಂದಕ್ಕೆ ಇಟಲಿಗೆ ಸಮಾಧಾನವಿಲ್ಲ.

ಈ ಒಪ್ಪಂದವು ಏನೊಂದೂ ಸಮಾಧಾನಕರವಲ್ಲ. ಇನ್ನುಮುಂದಕ್ಕೆ ಆಗಬಹುದಾದ ಯುದ್ಧದಲ್ಲಿ ಬ್ರಿಟನು ಮತ್ತು ಫ್ರಾನ್ಸು ಒಟ್ಟುಗೂಡಿ ತಮ್ಮ ನೆಲೆಯನ್ನು ದೃಢಪಡಿಸಿಕೊಳ್ಳುವರ್ಥ ಮಾಡಿರುವ ಒಂದು ಒಳಸಂಚು ಎಂದು ಇಟಲಿಯ ಅನೇಕ ಪತ್ರಿಕೆಗಳು ಪ್ರತಿಭಟಿಸುತ್ತವೆ.

ಅಖಿಲ ಭಾರತ ಕೊಂಗ್ರೆಸ್ ಅಧಿವೇಶನ

ಬರುವ ಅಖಿಲ ಭಾರತ ಕೊಂಗ್ರೆಸ್ ಅಧಿವೇಶನವು ಹರಿಪುರದಲ್ಲಿ ಜರಗುವುದಾಗಿ ನಿಶ್ಚಯಿಸಿರುತ್ತದೆ. ಕೊಂಗ್ರೆಸ್ ಸಭಾಮಂಟಪದ ಬಗ್ಗೆ ತಪತೀ ನದಿಯ ತೀರದಲ್ಲಿ ೨ ಮೈಲುಗಳಷ್ಟು ವಿಶಾಲವಾಗಿ ಸುಮಾರು ೭೦೦ ಎಕ್ರೆ ವರೆಗೆ ವಿಸ್ತರಿಸಿಕೊಂಡಿರುವ ಬಯಲು ಪ್ರದೇಶವನ್ನು ಪಡೆಕೊಂಡಿರುವರು. ಅಲ್ಲದೆ ಈಗಲೇ ೧೧,೦೦೦ ಸ್ವಯಂಸೇವಕರು ಸಿದ್ಧರಾಗಿದ್ದಾರೆ.

ಈ ಮೊದಲು ಫೈಜಪುರದಲ್ಲಿ ತಿಲಕನಗರವನ್ನು ರಚಿಸಿದ ಶ್ರೀಯುತ ರಾಮದಾಸ ಗೋಪಟ್ಟಿಯವರು ಈ ಸಲವೂ ಕೊಂಗ್ರೆಸ್ ನಗರವನ್ನು ರಚಿಸುವರೆ ಇಂಜಿನೀಯರಾಗಿ ನೇಮಿಸಲ್ಪಟ್ಟಿದ್ದಾರೆ.

ಅಕ್ಟೋಬರ ೧೫ನೆಯ ದಸರಾ ದಿವಸ ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರೂರವರು ಕೊಂಗ್ರೆಸ್ ಸಭಾಮಂಟಪದ ಅಸ್ತಿವಾರ ಹಾಕುವ ಸಮಾರಂಭವನ್ನು ನೆರವೇರಿಸ ತ್ತಾರೆಂದು ಸಹ ತಿಳಿದು ಬಂದಿದೆ.

ತಾಳೆ ಪ್ರೋಲೆಯು ಎಷ್ಟು ಶ್ರೇಷ್ಠ ಮತ್ತು ಬೆಲೆಯುಳ್ಳದ್ದೊ ಅದಕ್ಕಿಂತ ಹಜ್ಜಾಗಿ ತಾಳೇ ಮರವನ್ನು ರಕ್ಷಿಸುವದು ಮಿಗಿಲಾಗಿದೆ

ಈ ರೀತಿಯಾಗಿ ಮದ್ರಾಸು ಸಂಸ್ಥಾನದ ಪ್ರಧಾನ ಸಚಿವರಾದ ಶ್ರೀ ರಾಜಗೋಪಾಲಾಚಾರ್ಯರು ಅವರಿಗೆ ಮತ್ತು ಅವರ ಮಂತ್ರಿಮಂಡಲದವರಿಗೆ ಮದ್ರಾಸ ಕೋಓಪರೇಟಿವ ಪಕ್ಷದವರು ಕೊಟ್ಟ ಪೋಷಾಕೆಯಲ್ಲಿ ಸನ್ಮಾನಪತ್ರಕ್ಕೆ ಉತ್ತರವಾಗಿ ಮದ್ಯ ನಿಷೇಧ ಕಾರ್ಯವನ್ನು ಪುಷ್ಟೀಕರಿಸಿ ಮಾತಾಡಿದರು. ಆಷ್ಟುಮಾತ್ರವಲ್ಲದೆ ಅವರು ಮತ್ತು ಅವರ ಮಂತ್ರಿಮಂಡಲದವರು ಕೈಕೊಂಡ ಶ್ರೇಯೋಸ್ಕರ ಕಾರ್ಯದ ವಿಷಯವಾಗಿ ಪ್ರಸ್ತಾಪಿಸಿ ಅವರ ಗಣನೀಯತೆಗಳನ್ನೂ ಕಾಣಿಸುವುದರ ವಿಷಯವಾಗಿ ಅವರ ಸಂತುಷ್ಟಿಗೊಂಡಿರುವುದಾದರೂ ಅದಕ್ಕೂ ಪುನಃ ಪುನಃ ಎಲ್ಲೆಲ್ಲಿಯೂ ಹೊಗಳಿದರೆ ಅವರು ಕೈಕೊಂಡ ಕಾರ್ಯವು ಸಂಪೂರ್ಣಯಾಗಲಿಕ್ಕಿಲ್ಲವಾಗಿಯೂ ಆ ಕುರಿತು ಅವರಿಗೆ (ಮಂತ್ರಿಮಂಡಲದವರಿಗೆ) ಅದೇ ರೀತಿಯ ಉತ್ಸಾಹದಿಂದ ಎಲ್ಲಾ ಕಡೆಗಳಿಂದಲೂ ಕಾರ್ಯರೂಪದಿಂದ ಸಹಾಯಮಾಡಿ ಅವರ ಕಾರ್ಯಕ್ರಮದಲ್ಲಿ ಸಹಾನುಭೂತಿಯನ್ನು ತೋರಿ ಅವರು ಕೈಕೊಂಡ ಸಾಧನೆಯನ್ನು ಸಫಲಗೊಳಿಸುವಂತೆ ಮಾಡಿಕೊಡುವಂತೆಯೂ ಕೇಳಿಕೊಂಡಿರುವರು.

ಸಂಬಳ ಕಡಿತ ವಿಚಾರದಲ್ಲಿ ಮುಂಜಾಗ್ರತೆ

ಇನ್ನು ಮುಂದಕ್ಕೆ ಬರಬಹುದಾದ ಸಂಬಳ ಕಡಿತದ ಮುಂಜಾಗ್ರತೆಯಾಗಿ ಶಹಜಾನ್ ಪುರದ ಮಿಷ್ಯಾಟ ಕಲೆಕ್ಟರೊಬ್ಬರು ಈಗಲೇ ಸಂಭ್ರಮದ ಕೆಲವು ವಿಷಯಗಳ ಕುರಿತು ನಿಗಾ ತೆಗೆದುಕೊಂಡಿರುವರು. ಸಾಯಂಕಾಲ ಕ್ಲಬ್ಬಿಗೆ ಹೋಗುವಾಗ ಎತ್ತಿನ ಬಂಡಿಯಲ್ಲಿ ಪೈಜಾಮನ್ನು ಧರಿಸಿ ಬರಲಿಕ್ಕೆ ಪ್ರಾರಂಭಿಸಿರುವರಾಗಿ ಪೊಯನಿಯರ್ ಪತ್ರಿಕೆಯಿಂದ ತಿಳಿದುಬರುತ್ತದೆ.

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ

ಬೋಲಾ ಬಾಬಾ ಎಂಬ ಒಬ್ಬ ಸನ್ಯಾಸಿಯು ತನ್ನ ಶಿಷ್ಯ ಮಂಡಲಿಗೆ ಲೋಕದಲ್ಲಿ ದುಷ್ಕೃತ್ಯ ಉಂಟಾಗಲಿಕ್ಕೆ ಮುಖ್ಯ ಕಾರಣವೇ ಮನುಷ್ಯನಿಗೆ ಇರುವ ಕಣ್ಣುಗಳೆಂಬುದಾಗಿ, ಅವುಗಳನ್ನು ನಾಶಮಾಡಿದಲ್ಲಿ ತುಂಬಾ ಪ್ರಯೋಜನಕಾರಿಯಾಗಬಹುದೆಂಬುದಾಗಿ ತನ್ನ ಕಣ್ಣುಗಳೆರಡನ್ನೂ ಕೈಬೆರಳುಗಳಿಂದ ಕೀಳ ಹೊರಗೆಡವಿದನು. ಈಗ ಜುಬುಲ್‌ಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾನೆ.

[illegible]ದಲ್ಲಿ ಇನ್ನೊಂದು ದಂಗೆ ಬಿಡ್ಡುಗಳಾಗುತ್ತಿವೆ

ಮುಸಲೋನಿಯು ನಿಲಯದ ಮೇಲೆ ಬಾಂಬು ಉರುಳಿತು!

[illegible]

ಕಲ್ಲಿದ್ದಲಿನಿಂದ ಬೆಣ್ಣೆ.

[illegible]

ಮೆಕ್ಸಿಕೋಗೆ ಸ್ಪೇನಿನ [illegible] ಸ್ವಾಗತ.

[illegible] 13 [illegible] 500 [illegible]

[illegible]

ಜನರಲ್ ಫ್ರಾಂಕೋಗಾಗಿ ಆಂಗ್ಲೇಯ ನಾವಿಕರು.

[illegible]

ಅಮೇರಿಕಾದ ಸುವರ್ಣ ಕ್ಷೇತ್ರ.

[illegible]

ಸೌಂದರ್ಯವತಿಯೋರ್ವಳು ಪುರುಷನಾಗಿ ವಿವಾಹವಾಗುವಳು

[illegible]

ಇಟಲಿಯ ಸರ್ವಾಧಿಕಾರಿಯನ್ನು ನಾಶ ಪಡಿಸುವ ಉದ್ದೇಶದಿಂದ, ಮೊನ್ನೆ ದಿನ ಆತನು ವಾಸ್ತವ್ಯವಾಗಿರುವ ಮನೆಯ ಮೇಲೆ ಹಾರು ತ್ತಿದ್ದ ಒಂದು ವಿಮಾನವು ಗಗನಮಂಡಲದಿಂದ ಒಂದು ಬಾಂಬನ್ನು ಉರುಳಿಸಿತು! ಆದರೆ ಬಾಂಬು ಸಿಡಿಯಲಿಲ್ಲ.

ಮುಸಲೋನಿಗೆ ಶತ್ರುಗಳನೇಕರು ದೇಶ ದೊಳಗೂ ಹೊರಗೂ ಅನೇಕರಿದ್ದಾರಂತೆ. ಅವ ರಿಂದ ತನಗೆ ಹಾನಿಯುಂಟಾಗದಂತೆ, ಆತನು ತನ್ನ ಕಾವಲಿಗಾಗಿ ವಿಶೇಷ ತರದ ಏರ್ಪಾಡು ಗಳನ್ನು ಮಾಡಿರುವನು. ಈತನ ಮೇಲೆ ಕಾವಲಾಗಿ, ಸದಾಕಾಲ ಹತ್ತು ಜನರು ಕೋವಿ ಧರಿಸಿದವರಾಗಿ ಇದ್ದಾರಂತೆ.

ಸನ್ನದಲ್ಲಿ ಮುಸಲೋನಿಯು ಹಿಟ್ಲರನ ಭೇಟಿಗಾಗಿ ಬರ್ಲಿನ್ ನಗರಕ್ಕೆ ತೆರಳುವಾಗ, ತನ್ನ ಸುತ್ತಲೂ ವಿಶೇಷ ತರದ ಕಾವಲಿರುವಂತೆ ವ್ಯವಸ್ಥೆ ಮಾಡಲಾಗಿದೆ.

ಕಪ್ಪೆಗಳ ವೃಷ್ಟಿ.

ಹಂಗೇರಿದೇಶದ ಟಾಪ್ಪಾ ಎಂಬಲ್ಲಿ, ಮಳೆ ಸುರಿಯುತ್ತಿರುವಾಗ ಗಗನಮಂಡಲದಿಂದ [illegible] ಪ್ರಮಾಣದ ನೂರು ಸಾವಿರ ಕಪ್ಪೆಗಳು, ಬಿದ್ದುವೆಂದು ಒಂದು ವಾರ್ತೆ!

ತನ್ನ ಮಗನ ಭಾವ!

[illegible] ತನ್ನ ಮಗನ ಭಾವನಾಗು [illegible] ಇಂಗ್ಲಾಂಡಿನ [illegible] ಎಂಬಾತನು ಈಗ ತನ್ನ ಮಗನ ಭಾವನಾಗಿರುವನಂತೆ!

[illegible] ವಿವಾಹವಾದನು. ಈ [illegible] ಚಾರ್ಲಿ ಮತ್ತು [illegible] ಎಂಬ [illegible]

[illegible]

ಜರ್ಮನಿಯಲ್ಲಿ ಹಂದಿಗಳಿಗೆ ಪ್ರೋತ್ಸಾಹ.

ಮಕ್ಕಳ ಪಾಠಶಾಲೆಯಲ್ಲಿ ಹಾಳಾಗು ತ್ತಿರುವ ಮಾಂಸಗಳ ತುಂಡು, ಹಣ್ಣುಹಂಪಲು ಗಳ ಸಿಪ್ಪೆ, ಊಟ ಫಲಾಹಾರಗಳಲ್ಲಿ ಉಳಿಸಿದ ವಸ್ತು, ಇತ್ಯಾದಿಗಳ ಸದುಪಯೋಗದಿಂದ ಜನರ ಐಶ್ವರ್ಯದ ಅಭಿವೃದ್ಧಿ ಮಾಡುವ ಉದ್ದೇಶ ದಿಂದ, ಪ್ರತಿಯೊಂದು ಪಾಠಶಾಲೆಯಲ್ಲಿ ಒಂದು ಹಂದಿಯಿರಬೇಕಾಗಿ ಹಿಟ್ಲರನ ಕಟ್ಟಾಜ್ಞೆ.

ಪಾಠಶಾಲೆಯಲ್ಲಿ ಹಾಳಾಗುತ್ತಿರುವ ತಿಂಡಿತಿನಸುಗಳಿಂದ ಹಂದಿಗಳನ್ನು ಬೆಳೆಯಿಸಿ, ಅವುಗಳನ್ನು ಆಹಾರಕ್ಕಾಗಿ ಉಪಯೋಗಿಸು ವುದೆ ಹಿಟ್ಲರನ ಉದ್ದೇಶ.

ಹಿಂದೂದೇಶದಲ್ಲಿ ಯುದ್ಧವಿಮಾನ, ಶಸ್ತ್ರ, ಸಿಡಿಮದ್ದು ಕಾರ್ಖಾನೆ.

ಮೆಡಿಟೆರೆನಿಯನ್ ಸಾಗರವು ಮುಚ್ಚಿ ಬಿಟ್ಟರೆ, ಆಗ ಬ್ರಿಟನು ತನ್ನ ಸಾಮ್ರಾಜ್ಯ ರಕ್ಷಣೆಯನ್ನು ಹೇಗೆ ಮಾಡುವುದು?

ಈ ವಿಚಾರವು ಮೊನ್ನೆ ಜರಗಿದ ಇಂಪೀರಿಯಲ್ ಪರಿಷತ್ತಿನಲ್ಲಿ ಇತ್ಯರ್ಥಹೊಂದಿರುತ್ತದೆ. ಬ್ರಿಟಿಷ ಸಾಮ್ರಾಜ್ಯದ, ಕೆನಡಾ, ಆಸ್ಟ್ರೇಲಿಯಾ, ಆಫ್ರಿಕಾ, ಇಂಡಿಯಾ, ಇತ್ಯಾದಿ ಕಡೆಗಳಲ್ಲಿ ಯುದ್ಧವಿಮಾನ, ಶಸ್ತ್ರ, ಸಿಡಿಮದ್ದು ಹಡಗು ಇತ್ಯಾದಿಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಿ, ಬ್ರಿಟಿಷ ಸಾಮ್ರಾಜ್ಯಕ್ಕೆ ಮುಂದಕ್ಕೆ ಬರಬಹುದಾದ ಯುದ್ಧ ಸಂಭವಗಳಿಗೆ ಸಿದ್ಧತೆಗಳನ್ನು ಮಾಡುವುದು.

ಈ ವ್ಯವಸ್ಥೆಯಿಂದ ಸಾಮ್ರಾಜ್ಯ ರಕ್ಷಣೆಯನ್ನು ಮಾಡುವರಂತೆ

ಐಯರ್ಲೆಂಡು ಒಂದು ಇಲ್ಲದಿರುತ್ತಿದ್ದರೆ ಇಂದಿನ ಅಮೇರಿಕಾದ ಸೃಷ್ಟಿಯೇ ಆಗುತ್ತಿರ ಲಿಲ್ಲ. ಕಾರಣ, ಹಿಂದೆ ದೇಶವನ್ನು ತೊರೆದು ಅಮೇರಿಕಾಕ್ಕೆ ಹೋದವರಲ್ಲಿ ಹೆಚ್ಚಿನವರು ಐಯರ್ಲೆಂಡಿನವರು.



ತಾಲೂಕುಗಳಿಂದ

[illegible]

ಮಂಗಳೂರು

[illegible]

ಪೆಲೆಸ್ತೀನದಲ್ಲಿ ಇನ್ನೊಂದು ದಂಗೆಗೆ ಸಿದ್ಧತೆಗಳಾಗುತ್ತಿವೆ.

1936ರ ಪೆಲೆಸ್ತೀನದ ದಂಗೆನಾಯಕರು ಈಗ ಇನ್ನೊಂದು ದಂಗೆಯನ್ನು ಎಬ್ಬಿಸುವ ಸಿದ್ಧತೆಯಲ್ಲಿ ತೊಡಗಿರುವರು.

ರಹಸ್ಯವಾದ ರೀತಿಯಲ್ಲಿ ಬ್ರಿಟಿಷ ಸಂಗ್ರಾಮದಂಡಿನ ಚಟುವಟಿಕೆಗಳನ್ನು ತಿಳಿದು ಅದಕ್ಕೆ ಸರಿಯಾದ ವಿರೋಧಗಳನ್ನು ಸಿದ್ಧಪಡಿಸುತ್ತಿದ್ದಾರೆ. ಇನ್ನೊಂದು ದಂಗೆಯು ಒಳ್ಳೇ ವ್ಯವಸ್ಥಿತ ರೀತಿಯಿಂದ ನಡೆಯುಸುವುದು ಅವರ ಆಲೋಚನೆಯು.

ಪೆಲೆಸ್ತೀನದ ಎಲ್ಲಾ ಕಡೆಗಳಲ್ಲಿ ದಂಗೆ ಪಡೆಗಳು ಸಮಯನಿರೀಕ್ಷಣೆಯನ್ನು ಮಾಡುತ್ತಿದ್ದಾರೆ

ಕಲ್ಲಿದಲ್ಲಿನಿಂದ ಬೆಣ್ಣೆ.

ಜರ್ಮನಿಯಲ್ಲಿ ಕಲ್ಲಿದಲ್ಲಿನಿಂದ ಮತ್ತು ಗ್ಲಿಸರಿನ್ನಿನಿಂದ ಬೆಣ್ಣೆಯನ್ನು ತಯಾರಿಸುವ ಉಪಾಯವನ್ನು ಕಂಡುಹಿಡಿದಿರುವರು ಈ ತರದಲ್ಲಿ ತಯಾರಾದ ಬೆಣ್ಣೆಯನ್ನು ಹಿಟ್ಲರನಿಗೆ ಕಳುಹಿಸಲಾಗಿದೆ. ಗ್ಲಿಸರಿನನ್ನು ಮರದಿಂದ ತೆಗೆಯುತ್ತಿದ್ದಾರೆ.

ಖೇರರಿಗೆ ಸ್ತ್ರೀಯರ ಸ್ವಾಗತ

ಬೊಂಬಾಯಿಯ 18 ಬೇರೆ ಬೇರೆ ಸಂಘಗಳ ಪ್ರತಿನಿಧಿಗಳಾದ 500 ಮಂದಿ ಸ್ತ್ರೀಯರು ಕಳೆದವಾರ ಸಭೆಸೇರಿ ಬೊಂಬಾಯಿಯ ಪ್ರಧಾನ ಸಚಿವರಾದ ಶ್ರೀ। ಬಿ. ಜಿ ಖೇರರನ್ನೂ ಅವರ ಮಂಡಲದವರನ್ನೂ ಸ್ವಾಗತೀಕರಿಸಿದರು

ಅಲ್ಲದೆ, ಇವರೆಲ್ಲರೂ ಕೊಂಗ್ರೆಸ್ಸಿಗೆ ತಮ್ಮ ಮಂಡಲದವರ ಸಹಾನುಭೂತಿಯೂ ಸಹಾಯವೂ ಇದೆಯೆಂದು ಸೂಚಿಸಿದರು

ರಷ್ಯದಲ್ಲಿ ಮತದ್ವೇಷದ ಚಳವಳ

ಇತ್ತೀಚೆಗೆ ರಷ್ಯದಲ್ಲಿ ತಲೆಯೆತ್ತುತ್ತಿರುವ ಮತಪ್ರಚಾರವನ್ನು ಮರಿಯಲು ಅಲ್ಲಿಯ ವ್ಯಾಪಾರಿ ಸಂಘದವರು ಪ್ರಚಂಡ ಚಳವಳವನ್ನು ಹೂಡಿರುವರು

ತನ್ನ ಹತೋಟಿಯಲ್ಲಿರುವ 22 ಮಿಲಿಯ ಮಂದಿ ಮಜೂರರಿಗೆ ಮತಪ್ರಚಾರ ಕಾರ್ಯವನ್ನು ಮುರಿಯುವಂತೆಯೂ, ಮತಾವಲಂಬತೆದ ವಿಷಯದಲ್ಲಿ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವಂತೆಯೂ ಈ ವ್ಯಾಪಾರಿಸಂಘದ ಕಾರ್ಯಕಾರಿ-ಮಂಡಲದವರು ಸೂಚಿಸಿರುವರು

ಮಾಜಿ ಬ್ರಿಟಿಷ ಚಕ್ರವರ್ತಿಯವರು ಹಿಟ್ಲರನನ್ನು ಕಾಣುವರಂತೆ!

ಒಂಭತ್ತು ತಿಂಗಳ ಹಿಂದೆ ತೊರೆದ ಮಾತೃದೇಶವನ್ನು ಮಾಜಿ ಬ್ರಿಟಿಷ ಚಕ್ರವರ್ತಿಯವರು (ಈಗ ಡ್ಯೂಕ್ ಎಫ್ ವಿಂಡ್ಸರರು) ಸಧ್ಯದಲ್ಲಿ ಸೇರುವವರಿದ್ದಾರೆ. ಸ್ವದೇಶಕ್ಕೆ ತೆರಳುವ ಮೊದಲು ಅವರು ಜರ್ಮನಿಗೆ ತೆರಳಿ ಸರ್ವಾಧಿಕಾರಿ ಹಿಟ್ಲರನನ್ನು ಕಾಣುವರಂತೆ ಈ ಕುರಿತು ಇಂಗ್ಲಂಡಿನ ಉಚ್ಚವರ್ಗದಲ್ಲಿ ಗಲಾಟೆ ಉಂಟಾಗಿರುತ್ತದೆ

ಚೀನಾಕ್ಕೆ ಅಮೇರಿಕದ ಮತ್ತು ಬ್ರಿಟನಿನ ಸಹಾಯವಿಲ್ಲ!

ಚೀನಾಕ್ಕೆ ಬ್ರಿಟನಿನ ಮತ್ತು ಅಮೇರಿಕದ ಸಹಾನುಭೂತಿಯು ದೊರೆಕುವುದಿಲ್ಲವೆಂಬ ದು ಖಚಿತವಾಗಿರುತ್ತದೆ ಚೀನಾಕ್ಕೆ ಅಮೇರಿಕಾದಿಂದ ಯುದ್ಧಶಸ್ತ್ರಗಳು ಸೇರದಂತೆ ರೂಸ್‌ವೆಲ್ಟನ ಸರಕಾರವು ನಿರ್ಬಂಧಹಾಕಿರುತ್ತದೆ. ಬ್ರಿಟನಿನ ಚೀನಾ ಪ್ರಕರಣದ ಕುರಿತು ಧೋರಣೆಯು ಅತ್ಯಂತ ಚಂಚಲದುನಸ್ಯವಾಗಿರುತ್ತದೆ. ಬ್ರಿಟನು ಏನನ್ನೂ ಮಾಡಲು ಸಿದ್ಧವಿಲ್ಲವೆಂಬುದಾಗಿ ತಿಳಿದುದರಿಂದಲೆ, ಜಪಾನು ಈ ಸಾಹಸದಲ್ಲಿ ಕೈಹಾಕಿದೆ.

ಜನರಲ್ ಫ್ರೆಂಕೋವಿಗೆ ಆಂಗ್ಲೇಯ ನಾವಿಕರು.

ಸ್ಪೈಯಿನಿನ ನಾವಿಕರೆಲ್ಲ ಸರಕಾರದ ಬದಿಗೆ ಸೇರಿರುವುದರಿಂದ ಜನರಲ್ ಫ್ರೆಂಕೊವಿಗೆ ನಾವಿಕರ ಅಭಾವವು ಉಂಟಾಗಿರುತ್ತದೆ ಅವನಿಗೀಗ ಒಳ್ಳೇ ಸಾಹಸವಂತ ನಾವಿಕರು ಬೇಕಾಗಿದ್ದಾರಂತೆ ಇಂಗ್ಲಾಂಡಿನ ಅನೇಕ ನಿರುದ್ಯೋಗಿ ನಾವಿಕರು, ಸಂಪತ್ತು ಪಡೆಯಲು ಜನರಲ್ ಫ್ರೆಂಕೊನನ್ನು ಸೇರುವರೆಂದು ತಿಳಿದು ಬರುತ್ತದೆ.

ಅಮೇರಿಕಾದ ಸುವರ್ಣಶೇಖರ

ಜಗತ್ತಿನ ಅತ್ಯಂತ ಮಹತ್ತಾದ ಸುವರ್ಣಶೇಖರವು ಅಮೇರಿಕಾದೊಡನಿರುವುದು ಅದನ್ನೀಗ ಭದ್ರವಾಗಿಡಲು ಒಂದು ದೊಡ್ಡ ಖಜಾನೆಯನ್ನು ನಿರ್ಮಿಸಿರುವರು ಈ ಖಜಾನೆಯು ಅತ್ಯಂತ ವೆಚ್ಚದಿಂದ ತಯಾರಿಸಿದಾಗಿದ್ದು, ಕಳ್ಳಕಾಕರ ಯಾವ ತರದ ಹಾವಳಿಯೂ ಬಾರದಂತೆ ರಚನೆಯಾಗಿರುತ್ತದೆ ಅಲ್ಲಿಗೆ ಭಂಗಾರವನ್ನು ಕೊಂಡೊಯ್ಯಲು ವಿಶೇಷ ತರದ ರೈಲ್ವೆ ಏರ್ಪಾಡಾಗಿರುತ್ತದೆ ಆದರೆ, ಒಂದು ವೇಳೆ ಕಳ್ಳರು ಭಂಗಾರವನ್ನು ದೋಚಿಕೊಂಡು ಹೋದರೂ, ಅದನ್ನು ಉಪಯೋಗಿಸಲು ದಾರಿಯಿಲ್ಲವಂತೆ

ಆದರೂ ಅಮೇರಿಕಾವು ತನ್ನ ಸುವರ್ಣಶೇಖರದ ಕುರಿತು ಅಷ್ಟು ಜಾಗರೂಕತೆಯ ರಕ್ಷಣೆ ಏರ್ಪಾಡುಗಳನ್ನು ಮಾಡಿರುತ್ತದೆ

ಸೌಂದರ್ಯವತಿಯೋರ್ವಳು ಪುರುಷನಾಗಿ ವಿವಾಹವಾಗುವಳು!

ನ್ಯೂಜಿಲೆಂಡಿನ ವೆಲ್ಲಿಂಗ್‌ಟನ್ ಎಂಬಲ್ಲಿ ಬಲಿಷ್ಠ ಸೌಂದರ್ಯವತಿಯೋರ್ವಳು ಪುರುಷನಾಗಿ ವಿವಾಹವಾಗುವಳು

ಇತ್ತೀಚೆಗೆ ಅವಳಲ್ಲಿ ಲಿಂಗ ಮಾರ್ಪಾಟಾಗುತ್ತಾ ಬಂದಿರುತ್ತದೆ ಅವಳು ಸಧ್ಯದಲ್ಲಿ ಪುರುಷಳಾಗುವಳೆಂದೂ, ಆ ಬಗ್ಗೆ ಅವಳು ಶಸ್ತ್ರಚಿಕಿತ್ಸೆಗೆ ಒಳಗಾಗುವಳೆಂದೂ ತಿಳಿದು ಬರುತ್ತದೆ

ನಗ್ನ ನರ್ತನ ಮಂಡಳಗಳು

ಅನೇಕ ಕಠಿಣತರದ ನಿರ್ಬಂಧ ಕ್ರಮಗಳಿದ್ದಾಗ್ಯೂ ಅಮೇರಿಕಾದಲ್ಲಿ ಅನೇಕ ನಗ್ನ ನರ್ತನ ಮಂಡಳಿಗಳು ರಹಸ್ಯದಲ್ಲಿ ಕಾರ್ಯಸುತ್ತಿನಂತೆ

ಗಿರಾಕಿಗಳನ್ನು ತರಲು ಏಜಂಟರ ಏರ್ಪಾಡುಗಳಿವೆ ನಗ್ನ ನರ್ತನಮಂಡಳಕ್ಕೆ ವಿವಿಧ ತರದ ಪ್ರವೇಶ ಫೀಜಿನ ಏರ್ಪಾಡಿರುತ್ತದೆ. ಈ ತರದ ರಹಸ್ಯ ಮಂಡಳಗಳಿಂದ, ಅವುಗಳನ್ನು ನಡೆಯಿಸುವವರಿಗೆ ಧಾರಾಳ ಸಂಪಾದನೆಯಾಗುತ್ತಿರುವುದಂತೆ

ಈ ತರದ ನರ್ತನಮಂಡಳಗಳಿಂದ ಇತರ ನಾಟಕ ಇತ್ಯಾದಿಗಳಿಗೆ ಪ್ರೇಕ್ಷಕರ ಸಂಖ್ಯೆಯು ಕಡಿಮೆಯಾಗಿ, ತಮ್ಮನ್ನು ಈ ತರದ ನಷ್ಟದಿಂದ ಪಾರುಮಾಡಬೇಕಾಗಿ ಸರಕಾರದೊಡನೆ ಮನವಿ ಮಾಡಿಕೊಂಡಿರುವರು.

ಜರ್ಮನಿಯಲ್ಲಿ ಪುರುಷರೆಲ್ಲಾ ಯುದ್ಧ ಶಸ್ತ್ರ ಕೈಗಾರಿಕೆಯಲ್ಲಿ ಮಗ್ನರಾದುದರ ದೆಸೆಯಿಂದ ಭೂಕೃಷಿಸಾಯವು ಬಾಕಿನಿಲ್ಲುವ ಸಂಭವಗಳುಂಟಾಗಲು, ಈಗ ವ್ಯವಸಾಯದ ಬಗ್ಗೆ ಹೊರಕಡೆಗಳಿಂದ ಜನರನ್ನು ಕರೆಸುತ್ತಿದ್ದಾರೆ.

ಮುಸಲೇನಿಯ ನಿಲಯದ ಮೇಲೆ ಬಾಂಬು ಉರುಳಿತು!

ಇಟೇಲಿಯ ಸರ್ವಾಧಿಕಾರಿಯನ್ನು ನಾಶಪಡಿಸುವ ಉದ್ದೇಶದಿಂದ, ಮೊನ್ನೆ ದಿನ ಆತನು ವಾಸ್ತವ್ಯವಾಗಿರುವ ಮನೆಯ ಮೇಲೆ ಹೆಸರಿಲ್ಲದ ಒಂದು ವಿಮಾನವು ಗಗನಮಂಡಳದಿಂದ ಒಂದು ಬಾಂಬನ್ನು ಉರುಳಿಸಿತು! ಆದರೆ ಬಾಂಬು ಸಿಡಿಯಲಿಲ್ಲ

ಮುಸಲೇನಿಗೆ ಕಡುವೈರಿಗಳನೇಕರು ದೇಶದೊಳಗೂ ಹೊರಗೂ ಅನೇಕರಿದ್ದಾರಂತೆ ಅವರಿಂದ ತನಗೆ ಹಾನಿವುಂಟಾಗದಂತೆ, ಆತನು ತನ್ನ ಕಾವಲಿಗಾಗಿ ವಿಶೇಷ ತರದ ಏರ್ಪಾಡುಗಳನ್ನು ಮಾಡಿರುವನು ಈತನ ಮೇಲೆ ಕಾವಲಾಗಿ, ಸದಾಕಾಲ ಹತ್ತು ಜನರು ಕೋವಿ ಧರಿಸಿದವರಾಗಿ ಇದ್ದಾರಂತೆ.

ಸಧ್ಯದಲ್ಲಿ ಮುಸಲೇನಿಯು ಹಿಟ್ಲರನ ಭೇಟಿಗಾಗಿ ಬರ್ಲಿನ್ ನಗರಕ್ಕೆ ತೆರಳುವಾಗ, ತನ್ನ ಸುತ್ತಲೂ ವಿಶೇಷ ತರದ ಕಾವಲಿರುವಂತೆ ವ್ಯವಸ್ಥೆ ಮಾಡಲಾಗಿದೆ

ಕಪ್ಪೆಗಳ ವೃಷ್ಟಿ

ಹಂಗೇರಿದೇಶದ ಟಾರ್‍ಪ್ಪಾ ಎಂಬಲ್ಲಿ, ಮಳೆ ಸುರಿಯುತ್ತಿರುವಾಗ ಗಗನಮಂಡಳದಿಂದ ಅರ್ಧ ಇಂಚು ಪ್ರಮಾಣದ ನೂರು ಸಾವಿರ ಕಪ್ಪೆಗಳು, ಬಿದ್ದಿರುತ್ತವೆಂದು ಒಂದು ವಾರ್ತೆ!

ತನ್ನ ಮಗನ ಭಾವ!

ತಂದೆಯು ತನ್ನ ಮಗನ ಭಾವನಾಗುವುದು ನೀವು ಎಲ್ಲಾದರೂ ಕೇಳಿದುದುಂಟೆ? ಆದರೆ, ಇಂಗ್ಲೆಂಡಿನ ಹೆರ್‍ರಿ ಬೇಕರ್ ಎಂಬಾತನು ಈಗ ತನ್ನ ಮಗನ ಭಾವನಾಗಿರುವನಂತೆ

ಪ್ರಥಮ ಪತ್ನಿಯನ್ನು ಕಳಕೊಂಡ ಬೇಕರನು ಮತ್ತೊಮ್ಮೆ ವಿವಾಹವಾದನು ಈ ಮೊದಲು ಆತನಿಗೆ ಚಾರ್ಲಿ ಮತ್ತು ಡೈಸಿ ಎಂಬ ಈರ್ವರು ಮಕ್ಕಳಿದ್ದರು

ಚಾರ್ಲಿಯು ತನ್ನ ಮಲತಾಯಿಯ ತಂಗಿಯನ್ನು ಮದುವೆಯಾದ ಡೈಸಿ, ಆಕೆಯ ತಮ್ಮನನ್ನು ಮದುವೆಯಾದಳು

ಈ ರೀತಿ, ಬೇಕರನು ತನ್ನ ಮಕ್ಕಳಿಗೆ ಭಾವನಾಗಿ, ತನ್ನ ಪತ್ನಿಯ ತಂಗಿ, ತಮ್ಮನವರಿಗೆ ಮಾವನಾದ

ಜರ್ಮನಿಯಲ್ಲಿ ಹಂದಿಗಳಿಗೆ ಪ್ರೋತ್ಸಾಹ

ಮನೆಗಳ ಪಾಕಶಾಲೆಯಲ್ಲಿ ಹಾಳಾಗುತ್ತಿರುವ ಮಾಂಸಗಳ ತುಂಡು, ಹಣ್ಣುಹಂಪಲುಗಳ ಸಿಪ್ಪೆ, ಊಟ ಫಲಾಹಾರಗಳಲ್ಲಿ ತ್ಯಜಿಸಿದ ವಸ್ತು, ಇತ್ಯಾದಿಗಳ ಸದುಪಯೋಗದಿಂದ ಜನರ ಪೌಷ್ಟಿಕದ ಅಭಿವೃದ್ಧಿ ಮಾಡುವ ಉದ್ದೇಶದಿಂದ, ಪ್ರತಿಯೊಂದು ಪಾಕಶಾಲೆಯಲ್ಲಿ ಒಂದು ಹಂದಿಯಿರಬೇಕಾಗಿ ಹಿಟ್ಲರನ ಕಟ್ಟಾಜ್ಞೆ

ಪಾಕಶಾಲೆಯಲ್ಲಿ ಹಾಳಾಗುತ್ತಿರುವ ತಿಂಡಿತಿನಸುಗಳಿಂದ ಹಂದಿಗಳನ್ನು ಬೆಳೆಯಿಸಿ, ಅವುಗಳನ್ನು ಆಹಾರಕ್ಕಾಗಿ ಉಪಯೋಗಿಸುವುದೆ ಹಿಟ್ಲರನ ಉದ್ದೇಶ

ಹಿಂದೂದೇಶದಲ್ಲಿ ಯುದ್ಧವಿಮಾನ, ಶಸ್ತ್ರ, ಸಿಡಿಮದ್ದು ಕಾರ್ಖಾನೆ

ಮೆಡಿಟೆರೆನಿಯನ್ ಸಾಗರವು ಮುಚ್ಚಲ್ಪಟ್ಟರೆ, ಆಗ ಬ್ರಿಟನು ತನ್ನ ಸಾಮ್ರಾಜ್ಯ ರಕ್ಷಣೆಯನ್ನು ಹೇಗೆ ಮಾಡುವುದು?

ಈ ವಿಚಾರವು ಮೊನ್ನೆ ಜರಗಿದ ಇಂಪೀರಿಯಲ್ ಪರಿಷತ್ತಿನಲ್ಲಿ ಇತ್ಯರ್ಥಹೊಂದಿರುತ್ತದೆ ಬ್ರಿಟಿಷ ಸಾಮ್ರಾಜ್ಯದ ಕೆನಡಾ, ಆಸ್ಟ್ರೇಲಿಯಾ, ಆಫ್ರಿಕಾ, ಇಂಡಿಯಾ ಇತ್ಯಾದಿ ಕಡೆಗಳಲ್ಲಿ ಯುದ್ಧವಿಮಾನ, ಶಸ್ತ್ರ, ಸಿಡಿಮದ್ದು ತುಪಾಕಿ ಇತ್ಯಾದಿಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಿ, ಬ್ರಿಟನ ಸಾಮ್ರಾಜ್ಯಕ್ಕೆ ಮುಂದಕ್ಕೆ ಒದಗಬಹುದಾದ ಯುದ್ಧ ಸಂಭವಗಳಿಗೆ ಸಿದ್ಧತೆಗಳನ್ನು ಮಾಡುವುದು

ಈ ವ್ಯವಸ್ಥೆಯಿಂದ ಸಾಮ್ರಾಜ್ಯ ರಕ್ಷಣೆಯನ್ನು ಮಾಡುವರಂತೆ

ಐಯರ್ಲೆಂಡು ಒಂದು ಇಲ್ಲದಿರುತ್ತಿದ್ದರೆ ಇಂದಿನ ಅಮೇರಿಕಾದ ಸೃಷ್ಟಿಯೆ ಆಗುತ್ತಿರಲಿಲ್ಲ ಕಾರಣ, ಹಿಂದೆ ದೇಶವನ್ನು ತೊರೆದು ಅಮೇರಿಕಾಕ್ಕೆ ಹೋದವರಲ್ಲಿ ಹೆಚ್ಚಿನವರು ಐಯರ್ಲೆಂಡಿನವರು

Choosing a Bank

If you are an investor the first consideration is the safety of your deposit. You expect a fair rate of interest but since you do not want your own bank to endanger your money by trying to invest its deposits at a higher rate. The Bank of your choice must adhere rigidly to a Safety First Policy

The first of a series of short bank talks

RESOURCES OF A CRORE

ESTD. 1906

CANARA BANK LIMITED

ತಾಲೂಕುಗಳಿಂದ

ಕಾರ್ಕಳ:— ತಾ ೯—೯—೧೯೩೮ರ ದಿನ ಸಾಯಂಕಾಲ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ವಕೀಲ ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರುಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ವ್ಯವಸ್ಥಾಪಕ ಕಾರ್ಯದರ್ಶಿಯವರಾಗಿರುವ ಶ್ರೀ ಯಸ್. ಯಸ್. ಕಿಲ್ಲೆಯವರು ಕಾಂಗ್ರೆಸ್ಸಿನ ಇತಿಹಾಸ ಮತ್ತು ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಅಪ್ರತಿಮ ಭಾಷಣವನ್ನು ಕೊಟ್ಟರು.

ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ಇಲ್ಲಿಯ ವಿದ್ಯಾರ್ಥಿಗಳ ಬಗ್ಗೆ ತೆರೆದ ಹಿಂದಿ ತರಗತಿಯಲ್ಲಿ ಈಗ ಸುಮಾರು 35 ವಿದ್ಯಾರ್ಥಿಗಳು ಹಿಂದಿಯ ಅಭ್ಯಾಸ ಮಾಡುತ್ತಾ ಇದ್ದಾರೆ. ಸದ್ಯದಲ್ಲಿಯೇ ಶ್ರೀಯುತರು ಪ್ರಾಯಸ್ಥರಿಗಾಗಿ ಮತ್ತೊಂದು ಹಿಂದಿ ತರಗತಿಯನ್ನು ತೆರೆಯುವರಾಗಿ ತಿಳಿದುಬರುತ್ತದೆ.

ತಾ. ೧೦—೯—೧೯೩೮ರ ದಿನ ಇಲ್ಲಿಯ ಪ್ರಸಿದ್ಧ ವಕೀಲರಾಗಿರುವ ಶ್ರೀ ಓ. ವಿ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಮೂಡಬಿದ್ರೆಯಲ್ಲಿ ಸಾರ್ವಜನಿಕ ಸಭೆ ಕೂಡಿ ಶ್ರೀ ಕಿಲ್ಲೆಯವರು ಜನರ ರಾಜಕೀಯ ಕರ್ತವ್ಯಗಳ ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ಮುಂದಿನ ಜಿಲ್ಲಾ ಬೋರ್ಡು ಚುನಾವಣೆಯ ಪ್ರಸಂಗವನ್ನೆತ್ತಿ ಅದರಲ್ಲಿ ಎಲ್ಲರೂ ಕಾಂಗ್ರೆಸ್ ಉಮೇದುವಾರರಿಗೆ ತಮ್ಮ ಮತದಾನ ಮಾಡುವ ಅವಶ್ಯಕತೆಯನ್ನು ಮನಗಾಣಿಸಿ ಮಾತನಾಡಿದರು.

ನಮ್ಮ ತಾಲೂಕಿನ ಮಲೆ ಪ್ರಾಂತ್ಯವಾಗಿರುವ ಮಾಳ ಗ್ರಾಮದ ಅಡಿಕೆ ತೋಟಗಳಲ್ಲಿಯೂ ಅದೀಗ ಕೊಳೆರೋಗದ ಪ್ರವೇಶವಾಗಿದ್ದು ಆರಂಭದಲ್ಲಿಯೇ ಅದನ್ನು ತಡೆಯದಿದ್ದರೆ, ಅದರ ಹಾವಳಿಯಿಂದಾಗುವ ಕಷ್ಟನಷ್ಟಗಳು ಸಹ ಸಾವೇಕವಾಗಬಹುದೆಂದು ಗ್ರಾಮಸ್ಥರು ಬಹಳ ಹೆದರಿ ಹೋಗಿದ್ದಾರೆ. ತಾಲೂಕಿನ ಮುಖಂಡರೂ ಸರಕಾರದ ಅಧಿಕಾರಿಗಳೂ ಸಹಾಯ ಮಾಡಿ ರೋಗ ನಿವಾರಣೆಗೆ ಪ್ರಯತ್ನಿಸಿ ಗ್ರಾಮಸ್ಥರನ್ನು ಬದುಕಿಸುವರಾಗಿ ನಂಬಲಾಗಿದೆ.

ಕಳೆದ ವರ್ಷದಂತೆ ಈ ವರ್ಷವೂ ಇಲ್ಲಿಯ ಗಣೇಶೋತ್ಸವವು ಸಕಲ ವೇಶಾದಿಗಳ ಸಂಚಿತ ಕರ ರುಗಳಿಲ್ಲದೆ ಶಾಂತ ರೀತಿಯಿಂದ ನಡೆಯಿತು. ಜನಸಮೂಹವನ್ನು ಮನ್ನಿಸಿ ನಕಲಿ ವೇಶಗಳನ್ನು ಹೊರಡಿಸದೆ ಇದ್ದುದಕ್ಕಾಗಿ ಉತ್ಸವದ ವ್ಯವಸ್ಥಾಪಕರು ನಮ್ಮ ಧನ್ಯವಾದಗಳಿಗೂ ಕೃತಜ್ಞತೆಗಳಿಗೂ ಪಾತ್ರರಾಗಿದ್ದಾರೆ.

ಪಾಣೆಮಂಗಳೂರು.— ಇಲ್ಲಿಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಪಿ. ಧರ್ಮದಾಸ ನ್ಯಾಕರೂ ಮತ್ತು ಕೆ ಸೋಮಯ್ಯ ಕಾಮತರೂ ಬಾಳ್ತಿಲ ಮತ್ತು ಗೋಳ್ತಮಜಲು ಗ್ರಾಮಗಳಲ್ಲಿ ಸಂಚರಿಸಿ ಕಾಂಗ್ರೆಸ್ ಸಭಾಸದರನ್ನು ಕೂಡಿಸಿರುತ್ತಾರೆ. ಅಲ್ಲದೆ ಈ ಎರಡು ಗ್ರಾಮಗಳಲ್ಲಿ ಸದ್ಯದಲ್ಲೇ ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು ಕೂಡಾ ಸ್ಥಾಪಿಸುವದರಲ್ಲಿ ದ್ದಾರಾಗಿ ತಿಳಿಸುತ್ತಾರೆ.

ಬೆಳ್ಪಾರು.— ಬಡಗ್ರಾಮಸ್ಥರ ಮನವಿ: ಕಾಸ್ರಗೋಡು ತಾಲ್ಲೂಕಿನಲ್ಲಿ ನೆಟ್ಟಣಿಗೆ ಬೆಳ್ಪಾರು ಎಂಬ ೨ ಗ್ರಾಮಗಳು ಕೇವಲ ೫—೬ ಮೈಲು ರಾಜಮಾರ್ಗದಿಂದ ದೂರವಿದ್ದು ಸಾಧಾರಣ ೬—೮ ಸಾವಿರ ಜನಗಳು ವಾಸಿಸುವ ಕೇವಲ ಹಳ್ಳಿಯಾಗಿರುತ್ತದೆ.

ಈ ಗ್ರಾಮಗಳಿಗೆ ಅವಶ್ಯಕವಾದ ಯಾವುದೊಂದು ತರದ ಹೊರಗಿನಿಂದ ಬರಬೇಕಾದ ಅಥವಾ ಗ್ರಾಮದಿಂದ ರಫ್ತಾಗಬೇಕಾದ ಮಾಲುಗಳು ಕೂಡ ಕಾಲ್ನಡೆಯಲ್ಲಿಯೆ ಆಗಬೇಕಾದ್ದರಿಂದ ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾದರೂ ಕೂಡ ಅಂಥಾ ಕಷ್ಟಗಳನ್ನು ಸಹಿಸಲಾರದೆ ನೀಗುವರೆ ಬೇಕಾದ ಏರ್ಪಾಡುಗಳನ್ನು ಮಾಡಿಕೊಳ್ಳುವರೆ ಅನಾನುಕೂಲವಾದ ಕಾರಣ ಸರಕಾರಿ ಪಂಚಾಯತ ಆಫೀಸರರಲ್ಲಿ ಈ ಮೊದಲು ಹಲವು ಸಾರಿ ಕೇಳಿಕೊಂಡದಕ್ಕೆ ಯಾವುದೊಂದು ತರದ ಉತ್ತರವಿಲ್ಲದೆ ಕಟಿಕ್ಕರಾಗಿ ಇರುವುದನ್ನು ನೋಡಿ ಬಡಗ್ರಾಮಸ್ಥರಾದ ನಾವು ಕೋಚನೀಯಪಡುತ್ತೇವೆ. ಇನ್ನು ಮುಂದಾದರೂ ಈ ಗ್ರಾಮಸ್ಥರ ಮೇಲೆ ದಯವಿಟ್ಟು ನಮ್ಮ ೨ ಗ್ರಾಮಗಳಿಗೆ ಗ್ರಾಮ ಪಂಚಾಯತನ್ನು ನಮ್ಮನ್ನು ಗ್ರಾಮಕಾರ್ಯಗಳಲ್ಲಿ ಪ್ರೋತ್ಸಾಹಿಸಬೇಕಾಗಿ ಮೇಲಧಿಕಾರಿಗಳಾದ ಜನರಿಗೆ ನಮ್ಮ ಮನವಿ.

ಮೊಗವೀರ ಸ್ಪೋರ್ಟ್ಸ್ ಕ್ಲಬ್, ಮುಂಬಾಯಿ:— ಇದರ ನವಮ ವಾರ್ಷಿಕ ಮಹೋತ್ಸವವು ಕಳೆದ ತಾ. ೧೮—೯—೧೯೩೮ನೇ ರವಿವಾರ ಪೂರ್ವಾಹ್ನ ಘಂಟೆ ೩-೩೦ಕ್ಕೆ ೧೮೫ನೇ ಮೋದಿ ರಸ್ತೆಯಲ್ಲಿರುವ ಮೊಗವೀರ ರಾತ್ರಿಶಾಲಾ ಮಂದಿರದಲ್ಲಿ, ಡಾಕ್ಟರ್ ಮಿಸ್. ಡಿ. ಕಾಂಚನ್, ಯಲ್. ಸಿ. ಪಿ. ಯಸ್‌ರವರ ನ್ಯಾಯಾಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಯಶಸ್ವಿಯಾಗಿ ಜರಗಿಸಲ್ಪಟ್ಟಿತಲ್ಲದೆ, ಈ ಕೆಳಗಿನ ಮಹಾಶಯರನ್ನು ೧೯೩೮ನೇ ಇಸವಿಯ ಕಾರ್ಯನಿರ್ವಾಹಕ ಸಭೆಗೆ ಆರಿಸಲ್ಪಟ್ಟಿತು.

ಶ್ರೀಯುತರುಗಳಾದ ಯಸ್. ಕೆ ಮೆಂಡನ್, ಅಧ್ಯಕ್ಷರು, ಯಸ್. ವಿ ಪುತ್ರನ್, ಉಪಾಧ್ಯಕ್ಷರು ಅಲ್ಲದೆ, ಮೂವರು ಗೌರವ ಜತೆ ಕಾರ್ಯದರ್ಶಿಗಳೂ, ಎರಡು ಮಂದಿ ಗೌರವ ಕೋಶಾಧಿಕಾರಿಗಳೂ, ಇನ್ನೀವರು ಮುಖ್ಯ ದಳಪತಿ, ಉಪದಳಪತಿಯರಾಗಿಯೂ, ೫ ಮಂದಿ ಮೆಂಬರರಾಗಿಯೂ ಆರಿಸಲ್ಪಟ್ಟರು.

ಶ್ರೀಯುತ ಬೋಳೂರು ಜನಾರ್ಧನ ಸುವರ್ಣರು ಪ್ರತಿ ವರ್ಷವೂ ಆಚರಿಸಿಕೊಂಡು ಬರುವಂತಹ ಬ್ರಹ್ಮಶ್ರೀ ನಾರಾಯಣ ಗುರು ಪರಮಹಂಸರ ಸಮಾಧಿಯ ದಿನವನ್ನು ಅದೇ ತಿಂಗಳ ತಾ ೧೦ನೇ ಶುಕ್ರವಾರ ಮುಂಬಯಿ ಕೋಟೆಯೊಳಗಣ ಬೋರ್‌ಬಜಾರ್ ರಸ್ತೆಯಲ್ಲಿರುವ ಜಹಂಗೀರ್ ಕಟ್ಟೋಣದಲ್ಲಿ ಶ್ರೀಯುತ ಹೊನ್ನೆಗೆಬಜಾರ್ ಎಚ್. ಎ ಹರಿದಾಸರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.

ಬದಿಯಡ್ಕ:— ತಾರೀಕು ೧೯—೯—೧೯೩೮ನೇ ಆದಿತ್ಯವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನೂ, ಧ್ಯೇಯಗಳನ್ನೂ ಪ್ರಚಾರಪಡಿಸುವುದಕೋಸ್ಕರ ಶ್ರೀಯುತ ಪೆರಡಾಲು ಮಹಾರಾಜನ ಸಂಸ್ಕೃತ ಕೋಲೇಜಿನ ಪ್ರಿನ್ಸಿಪಾಲರಾದ ಬಿ ನಾರಾಯಣ ಭಟ್ಟ, ಬಿ ಎ ಇವರ ಅಧ್ಯಕ್ಷತೆಯಲ್ಲಿ ಒಂದು ಮಹಾಸಭೆಯು ಜರಗಿಸಲ್ಪಟ್ಟಿತು. ಊರಮಹನೀಯರನೇಕರು ನೆರೆದಿದ್ದರು. ಸಭಾಕಾರ್ಯವು ಪ್ರಾರಂಭವಾಗುವ ಸಮಯಕ್ಕೆ ಸರಿಯಾಗಿ ಮಹಾರಾಜನ ಸಂಸ್ಕೃತ ಕೋಲೇಜಿನ ತರುಣ ವಿದ್ಯಾರ್ಥಿಗಳು ರಾಷ್ಟ್ರಧ್ವಜವನ್ನು ಹಿಡಕೊಂಡು ರಾಷ್ಟ್ರಗೀತೆಯನ್ನು ಹಾಡುತ್ತಾ ಮೆರವಣಿಗೆಯಲ್ಲಿ ಬಂದರು. ಸಭೆಯಲ್ಲಿ ನೆರೆದ ಮಹನೀಯರುಗಳ ಪೈಕಿ ಶ್ರೀಯುತ ಬಿ ಜಗನ್ನಾಥ ಶೈ ಯಸ್ ನಾರಾಯಣ ಕಿಲ್ಲೆ ಮತ್ತು ಯಂ ಉಪೇಂದ್ರರಾವ್ ಬಿ ಎ ಬಿ ಯಲ್ ಇವರುಗಳು ಈಗಿನ ರಾಜಕೀಯ ಪರಿಸ್ಥಿತಿಯನ್ನು ಕಾಂಗ್ರೆಸ್ ಕಮಿಟಿಗಳನ್ನು ಏರ್ಪಡಿಸುವುದರ ಅವಶ್ಯಕತೆಯನ್ನು ಸ್ಫೂರ್ತಿಯುಕ್ತವಾದ ಭಾಷಣಗಳಿಂದ ಸಭಿಕರಿಗೆ ವಿವಿಧವಾಗಿ ತಿಳುಹಿಸಿದರು. ಅನಂತರ ಬೇಳ, ನೀರ್ಚಾಲು, ಕುಂಬಡಾಜೆ, ಉಬರಂಗಳ ಈ ಗ್ರಾಮಗಳಿಗೆ ೧೩ ಮಂದಿ ಮೆಂಬರರೊಡಗೂಡಿದ ಒಂದು ಸಂಯುಕ್ತ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಸೆಕ್ರೆಟರಿಗಳನ್ನು ಚುನಾಯಿಸಲಾಯಿತು. ಅಧ್ಯಕ್ಷರ ಭಾಷಣದ ನಂತರ ಕೃತಜ್ಞತಾ ಭಾಷಣದೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಂಬಳೆ:— ಈ ದಿನ ಇಲ್ಲಿ ಜನಾಬ್ ಎಂ ಸಿ ಮಮ್ಮು ಸಾಹೇಬರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿ ಡಿಸ್ಟ್ರಿಕ್ಟ್ ಕಮಿಟಿ ಕಡೆಯಿಂದ ಬಂದ ಮ ರಾ ನಾರಾಯಣ ಕಿಲ್ಲೆಯವರು ಕಾಂಗ್ರೆಸ್ಸಿನ ಕತ್ತದ ಕುರಿತು ಚಲೋದಾದ ಭಾಷಣಮಾಡಿದರು. ಕೂಡಿದ ಸಭೆಯವರು ನೆರೆಗ್ರಾಮಗಳ ೭ ೮ ಗ್ರಾಮಗಳನ್ನು ಕೂಡಿಸಿ ಕುಂಬಳೆ ಸಂಯುಕ್ತ ಕಾಂಗ್ರೆಸ್ ಕಮಿಟಿಯೊಂದನ್ನು ಸ್ಥಾಪಿಸಿದ್ದಲ್ಲದೆ ಸದ್ರಿ ಕಮಿಟಿಗೆ ಜನಾಬ್ ಎಂ. ಸಿ ಮಮ್ಮುಯವರನ್ನು ಅಧ್ಯಕ್ಷರನ್ನಾಗಿಯೂ ರಾ ಕೃಷ್ಣಭಟ್ಟರನ್ನು ಉಪಾಧ್ಯಕ್ಷರನ್ನಾಗಿಯೂ ರಾ। ನರಸಿಂಹ ಕಾಮತ್ ಮತ್ತು ಬಿ ದೇವಪ್ಪ ಆಳ್ವರನ್ನು ಜೊತೆ ಕಾರ್ಯದರ್ಶಿಯರನ್ನಾಗಿಯೂ ಇನ್ನಿತರ ೯ ಮಂದಿ ಗೃಹಸ್ಥರನ್ನು ಕಮಿಟಿ ಮೆಂಬರರನ್ನಾಗಿಯೂ ಆರಿಸಲಾಯಿತು.

ಉಡುಪಿ.

[ನಮ್ಮ ಸ್ವಂತ ಬಾತ್ಮೀದಾರರಿಂದ]

ತಾ ೫ನೆಗೆ ಸ್ಥಳೀಯ ಸರಕಾರಿ ಆಸ್ಪತ್ರೆಯ ಡಾಕ್ಟರರ ಸುಮಾರು ೪ ವರ್ಷ ಪ್ರಾಯದ ಗಂಡು ಮಗುವು ಹೆತ್ತವರೊಡನೆ ಮಟ್ಪೆ ಸಮುದ್ರತೀರಕ್ಕೆ ವಿಹಾರಕ್ಕೆ ಹೋಗಿದ್ದಲ್ಲಿ ಆಕಸ್ಮಾತ್ತಾಗಿ ನೀರುಪಾಲಾಗಿ ಸತ್ತು ಹೋಯಿತೆಂದು ತಿಳಿಸುವರೆ ವಿಷಾದವೆನಿಸುತ್ತದೆ. ಮಗುವನ್ನು ನೀರಿನಿಂದೆತ್ತಿ ತಂದು ಎಷ್ಟು ಉಪಶಮನಮಾಡಿದಾಗ್ಯೂ ನಿರರ್ಥಕವಾಯಿತು.

ಸ್ಥಳೀಯ ಗಾಂಧಿ ಮೈದಾನಿನಲ್ಲಿ ದಿವಂಗತ ಹಾಜಿ ಅಬ್ದುಲ್ಲಾ ಸ್ಮಾರಕವಾಗಿ ಸಾರ್ವತ್ರಿಕವಾದ ವ್ಯಾಯಾಮ ಶಾಲೆಯೊಂದು ಪೂರ್ತಿಗೊಳ್ಳುತ್ತಿದೆ. ಆಧುನಿಕ ರೀತಿಯಂತೆ ಶಹರುಗಳಲ್ಲಿ ಎಳೇ ಪ್ರಾಯಸ್ಥರೂ, ಯೌವನಸ್ಥರೂ ಅಂಗಸಾಧನೆ ದೇಹದಾರ್ಢ್ಯತೆಯನ್ನು ಅಭ್ಯಸಿಸುವಂತೆ ಇಂತಹ ಸಂಸ್ಥೆಗಳು ದೊಡ್ಡ ಶಹರುಗಳಲ್ಲಿದ್ದಂತೆ, ನಮ್ಮ ಮುಂದಾಳುಗಳು ಈ ರೀತಿ ಸ್ಮಾರಕವನ್ನುದ್ದೇಶಿಸುವ ಹವ್ಯಾಸಗೊಂಡುದು ಸ್ತುತ್ಯಾರ್ಹ. ಇದನ್ನು ಮಕ್ಕಳು ವ್ಯಕ್ತಿಗಳ ಕಂಡು, ಇಂತಹ ಹಲವು ವ್ಯಾಯಾಮಶಾಲೆಗಳು ಹುಟ್ಟಿಕೊಳ್ಳಲಿ ಸಾರ್ವಜನಿಕರ ಉದಾರಹಸ್ತಗಳಿಂದ ಸಹಾಯ ಪ್ರೋತ್ಸಾಹಗಳನ್ನು ಮಾಡದಿರಲಾರರೆಂದು ಆಶೆಯಿದೆ. ಈ ವ್ಯಾಯಾಮಶಾಲೆಯ ಪ್ರಾರಂಭೋತ್ಸವವು ಸದ್ಯದಲ್ಲೇ ಜರಗಲಿದೆ.

ಮಾನ್ಯ ಮಂತ್ರಿಗಳಾದ ಶ್ರೀ ವಿ ವಿ ಗಿರಿ ಮತ್ತು ವಿ ಐ ಮುನಿಸ್ವಾಮಿ ಪಿಳ್ಳೆಯವರು ಅಕ್ಟೋಬರ ತಾ ೪ನೇ ಮಧ್ಯಾಹ್ನ ಉಡ್ಪಿಗೆ ಚಿತ್ತೈಸುವವರಿದ್ದು ಊಟವಾದ ಮೇಲೆ ಉಡುಪಿ ಪುತ್ತೂರಿನ ಮಂಚಮರ ಕೋಲೊನಿಯನ್ನೂ ಕಲ್ಯಾಣಪುರದ ಸಕ್ಕರೆ ಕಾರ್ಖಾನೆಯನ್ನೂ ಉಡುಪಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಕೊ-ಓಪರೇಟಿವ್ ಸೊಸೈಟಿಯನ್ನೂ ಸಂದರ್ಶಿಸಿ, ಮಲ್ಪೆ ಬಂದರವನ್ನೂ ನೋಡಿಕೊಂಡು ಉಡುಪಿಯಲ್ಲಿ ಅಪರಾಹ್ನ ೫ ತಾಸಿಗೆ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಲಿರುವರೆಂದು ತಿಳಿದುಬರುತ್ತದೆ. ಅಂದೇ ಸಾಯಂಕಾಲ ಮೂಲ್ಕಿ ಮಾರ್ಗವಾಗಿ ಮಂಗಳೂರಿಗೆ ತೆರಳಲಿರುವರು. ಇವರಿಗೆ ಸ್ಥಳೀಯ ಮುನಿಸಿಪಾಲಿಟಿಯಿಂದ ಮಾನಪತ್ರಗಳೀಯುವ ಹವಣಿಕೆಯು ನಡೆಯುತ್ತಿದೆ.

ಉಡುಪಿ ಮುನಿಸಿಪಾಲಿಟಿಯನ್ನು ರದ್ದುಮಾಡುವ ವಿಷಯದಲ್ಲಿ ಮದ್ರಾಸು ಸೆಕ್ರೆಟರಿಯೇಟಿನಲ್ಲಿ ವಿಚಾರಿಸಿದ ಮಟ್ಟಿಗೆ ಸದ್ರಿ ಮುನಿಸಿಪಾಲಿಟಿಯನ್ನು ತೆಗೆದುಹಾಕುವುದು ಅಸಾಧ್ಯ ಮಾತ್ರವಲ್ಲದೆ ಇನ್ನೂ ಚಿಕ್ಕ ಊರುಗಳಿಗೂ ಮುನಿಸಿಪಾಲಿಟಿಗಳನ್ನು ಸ್ಥಾಪಿಸುವ ಯೋಜನೆಯಲ್ಲಿ ಇದೆಯೆಂಬುದಾಗಿ ತಿಳಿಯಗೊಟ್ಟರೆಂದು ತಿಳಿದುಬರುತ್ತದೆ.

ಉಡುಪಿ ಮುನಿಸಿಪಲ್ ಚೆಯರ್ ಮೇನರಾದ ಶ್ರೀ ಬರ್ಕೂರು ಲಕ್ಷ್ಮೀನಾರಾಯಣರಾವ್ ಬಿ ಎ ಬಿ ಎಲ್ ಎಡ್ವೊಕೇಟರು ಸರಕಾರಿ ವಕೀಲರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಮೂಡಬಿದ್ರೆ: ಈ ಸೆಂಟರಿನ ಉಪಾಧ್ಯಾಯರ ಸಂಘದ ೪ನೇ ಸಾಮಾನ್ಯ ಸಭೆಯು ಇದೇ ಸೆಪ್ಟಂಬರ ತಾ ೧೧ರಲ್ಲಿ ಬೋರ್ಡ್ ಮೈನ್ ಶಾಲೆಯಲ್ಲಿ ಇಲ್ಲಿಯ ಸಾಹುಕಾರ ಮ. ರಾ ಗುರ್ಕಾರ ಗೋಪಾಲಕೃಷ್ಣರ ಅಧ್ಯಕ್ಷತೆಯಲ್ಲಿ ಸಾಂಗ್ಯವಾಗಿ ಜರಗಿತು. ಸಂಘದ ೩೯ ಮೆಂಬರರ ಪೈಕಿ ೪೦ ಮಂದಿ ಹಾಜರಿದ್ದರು. ದಿಗಂಬರ ಜೈನಶಾಲಾ ಅಧ್ಯಾಪಕರಾದ ಮ ರಾ ನಾಗರಾಜ ಮುದಯಾಡರು ೧ನೇ ಕ್ಲಾಸಿನ ಮಕ್ಕಳಿಗೆ ಅಂಕೆ ಸಂಖ್ಯಾಕಲನವನ್ನು ಮಾದರಿ ಪಾಠವಾಗಿ ಕೊಟ್ಟರು. ಅನಂತರ ಮೆಂಬರರ ಪರ್ಚೇಸು ಮತ್ತು ಅಧ್ಯಕ್ಷರ ಗ್ರಾಮಾಭಿವೃದ್ಧಿ ಮತ್ತು ವಿದ್ಯೆಯ ವಿಷಯ ಭಾಷಣವಾದ ಬಳಿಕ, ರಾಷ್ಟ್ರಗೀತದೊಡನೆ ಸಭೆಯು ಮುಕ್ತಾಯವಾಯಿತು. ಬರುವ ಸಭೆಯು ಅಕ್ಟೋಬರ ತಾ ೨೩ಕ್ಕೆ ಜೈನಶಾಲೆಯಲ್ಲಿ ಜರಗಿಸಲ್ಪಡುತ್ತದೆ.

ಇದೇ ಕಳೆದ ತಾ. ೧೬—೯—೧೯೩೮ರಲ್ಲಿ ಮೂಡಬಿದ್ರೆಯ ಕೆಲವು ಉತ್ಸಾಹೀ ತರುಣರ ಆಮಂತ್ರಣದ ಮೇರೆಗೆ ಜಿಲ್ಲಾ ಬೋರ್ಡ ನ ಮತ್ತು ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ ಸದಸ್ಯರಾಗಿರುವ ಶ್ರೀಯುತ ಟಿ ವಿ ನೋರೊನ್ಹಾಯವರು ಮೂಡಬಿದ್ರೆಗೆ ಬಂದು ಲೇಬರ್ ಎಲಿಮೆಂಟರಿ ಶಾಲೆ ಮೂಡಬಿದ್ರಿ ಬೋರ್ಡ್ ಎಲಿಮೆಂಟರಿ ಶಾಲೆ ಪಕ್ಕಿಗೆ ಮೊದಲಾದ ೧೦—೧೨ ಶಾಲೆಗಳಿಗೆ ಸಂದರ್ಶಿಸಿ, ಅಲ್ಲಿಯ ಅವ್ಯವಸ್ಥೆಗಳನ್ನು ಕಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದು ಅವನ್ನು ತಿದ್ದುವರೆ ಪ್ರಯತ್ನಿಸುವರೆಂದು ತಿಳಿದುಬರುತ್ತದೆ.

ಕುಂದಾಪುರ:— ಇದೇ ತಾ ೧೫ರಲ್ಲಿ ಕುಂದಾಪುರ ಕರ್ನಾಟಕ ಸಂಘದ ನೇತೃತ್ವದಲ್ಲಿ ನಮ್ಮ ಜಿಲ್ಲೆಯ ಆಧುನಿಕ ಯಕ್ಷಗಾನ ಅರ್ಥಗಾರರಿಂದ ಕೂಡಿದ ಒಂದು ಯಕ್ಷಗಾನ ಕೂಟವು ಜರಗಿತು. ಇದರಲ್ಲಿ ಸಿಕ್ಕಿದ ಮೊಬಲಗಿನಲ್ಲಿ ಖರ್ಚು ಕಳೆದು ಉಳಿದುದನ್ನು ಇಲ್ಲಿಯ ಸಾರ್ವಜನಿಕ ವಾಚನಾಲಯಕ್ಕೆ ಕೊಡ ಪುದೆಂತ ನಿಶ್ಚೈಸಿದೆ.

೧೯೩೦ನೇ ಇಸವಿಯಲ್ಲಿ ಅಸಹಕಾರ ಚಳವಳಿಯಲ್ಲಿ ಪ್ರಥಮದಲ್ಲಿ ಲಾಠೀಪೆಟ್ಟು ತಿಂದು ಇಲ್ಲಿಯವರಿಗೆ ಪರಿಚಿತರಾಗಿರುವ ಮಲ್ಪೆ ಸಾಮುಗರು ಅರೆಂಟು ಹರಿಕೀರ್ತನೆಗಳನ್ನು ನಡೆಸಿ ಜನಮೆಚ್ಚುಗೆಗೆ ಪಾತ್ರರಾಗಿರುವರು.

ಇಲ್ಲಿ ಕೋಣ್ಣಿ ಶಿವಾನಂದರಾಯರು ನಾರಾಯಣ ಭಂಡಾರಕಾರರು, ಡಾಕ್ಟರ್ ಕಮಲಾಕ್ಷ ಕಂಪ್ಲಿಯವರು ಮೊದಲಾದ ಮಹನೀಯರುಗಳಿಂದ ಇತ್ತೀಚೆಗೆ 'ಕುಂದಾಪುರ ಸ್ಪೋರ್ಟಿಂಗ್ ಕ್ಲಬ್' ಎಂಬ ಹೆಸರಿನ ಒಂದು ಕ್ರಿಕೆಟ್ ಟೀಮು ಸ್ಥಾಪಿಸಲ್ಪಟ್ಟಿದೆ. ಸಾರ್ವಜನಿಕರ ಉದಾರಾಶ್ರಯವು ಇನ್ನು ಹೆಚ್ಚಿಗೆ ಸಿಗಬಹುದೆಂದು ಆಶಿಸಲಾಗಿದೆ.

ಕಾಸರಗೋಡು:— ಈ ತಾಲೂಕಿನ ಉಪಾಧ್ಯಾಯಿನೀ ಸಂಘದ ಪ್ರಥಮ ವಾರ್ಷಿಕೋತ್ಸವವು ಇದೇ ಕಳೆದ ಶನಿವಾರ ಇಲ್ಲಿಯ ಟೌನ್ ಎಲಿಮೆಂಟರಿ ಶಾಲೆಯಲ್ಲಿ ಯಶಸ್ವಿಯಾಗಿ [illegible]

ಮಂಗಳೂರು.

ಜಿಲ್ಲಾ ಬೋರ್ಡು ಚುನಾವಣೆ:— ಲೋಕಲ್ ಬೋರ್ಡು ಆಕ್ಟಿನಲ್ಲಿ ಈಗಿನ ಮಂತ್ರಿಮಂಡಲದವರು ತಿದ್ದುಪಡಿ ಮಾಡಲಿರುವರೆಂದೂ ಎಸೆಂಬ್ಲಿ ಓಟರರ ಪಟ್ಟಿಯನ್ನೆ ಈ ಚುನಾವಣೆಗಳಲ್ಲಿ ಉಪಯೋಗಿಸುವ ಸಂಭವವಿದೆಯೆಂದೂ ತಿಳಿದುಬಂದಿರುವುದರಿಂದ ಬರುವ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸ್ ಕಡೆಯ ಉಮೇದ್ವಾರರಾಗಲು ಅರ್ಜಿ ಹಾಕುವ ಸಮಯವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಒಂದು ತಿಂಗಳಿಗೆ ಮುಂದರಿಸಿರುವರು, ಎಂದು ಪಿ. ರಾಮರಾಯ ಮುಖ್ಯ ಕಾರ್ಯದರ್ಶಿ, ಇವರು ತಿಳಿಸುತ್ತಾರೆ.

ಇತ್ತೀಚೆಗೆ ಹೊಸದಾಗಿ ಕಟ್ಟಿಸಿದ ಶ್ರೀಕೃಷ್ಣ ಮಂದಿರದ ಭವ್ಯವಾದ ಕಟ್ಟಡದಲ್ಲಿ ಇದೇ ಬರುವ ಆದಿತ್ಯವಾರ ದಿವಸ ತಾ ೨೫ರಲ್ಲು ಬೆಳಗ್ಗೆ ಘಂಟೆ ೮ಕ್ಕೆ ಶ್ರೀ ವಿವೇಕಾನಂದ ಸಭೆಯು ಆಶ್ರಯದಲ್ಲಿ ಶ್ರೀಯುತ ಉಡುಪಿ ಗೋಪಾಲ ಶೆಟ್ಟಿಯವರು "ಕರ್ಮ ಮತ್ತು ಧರ್ಮ" ವೆಂಬ ವಿಷಯವನ್ನು ಎತ್ತಿಕೊಂಡು ಭಾಷಣ ಮಾಡುವರು. ಎಲ್ಲರಿಗೂ ಸುಸ್ವಾಗತವಿದೆ.

ಹಿಂದೀ ಕ್ಲಾಸು:— ಅಧ್ಯಾಪಕ ವರ್ಗದವರು ಹಿಂದೀ ಕಲಿಯುವಂತೆ ಒಕ್ಟೋಬರ ತಿಂಗಳ ೪ನೇ ಸೋಮವಾರ ದಿನದ ಆರಭ್ಯ ವಾರದಲ್ಲಿ ಸೋಮವಾರ, ಬುಧವಾರ, ಶುಕ್ರವಾರ ದಿನಗಳಲ್ಲಿ ಸಾಯಂಕಾಲ ಗಂಟೆ ೫ ೩೦ರಿಂದ ೬.೩೦ರ ತನಕ ಕೆನರಾ ಹೈಸ್ಕೂಲಿನಲ್ಲಿ ಸದ್ರಿ ಶಾಲೆಯ ಅಧ್ಯಾಪಕರಾದ ಶ್ರೀಯುತ ಯು ಕೇಶವರಾಯರಿಂದ ಹಿಂದೀ ಕ್ಲಾಸುಗಳು ನಡೆಸಲ್ಪಡುವವು. ಕಾಶಿಪ್ಪ ಕ್ರಮಪಟ್ಟಲ್ಲಿ ಬರುವ ಫೆಬ್ರವರಿಯಲ್ಲಿ ಮಾಧ್ಯಮಿಕ ಪರೀಕ್ಷೆಗೆ ಕೂತುಕೊಳ್ಳಲು ಸಮರ್ಥರಾಗುವಂತೆ ಮಾಡಲಾದೀತು. ಹಿಂದೀ ಕಲಿಯಲಿಚ್ಛಿಸುವ ಉಪಾಧ್ಯಾಯರೆಲ್ಲರೂ ಕೂತುಕೊಳ್ಳಲು ಸ್ಥಳ ವಗೈರೆ ಏರ್ಪಾಡುಮಾಡಲು ಅನುಕೂಲವಾಗುವಂತೆ ತಮ್ಮ ಹೆಸರನ್ನು ಬರುವ ತಿಂಗಳ ೧ನೇ ತಾರೀಕು ಒಳ್ತಾ ಪಾದರೊಳಗಾಗಿಯೇ ಕದ್ರಿ ಬಿ ಸಿ ಮಿಶನಿನ ಅಧ್ಯಾಪಕರಾದ ವಿ ಸುಬ್ಬರಾಯರೊಡನೆ ಕೊಟ್ಟು ಈ ಸುಸಂದರ್ಭದ ಪ್ರಯೋಜನವನ್ನು ಪಡೆಯಬೇಕಾಗಿ ಸವಿನಯ ವಿನಂತಿ.

ಮಂಗಳೂರು ಮುನಿಸಿಪಲ್ ಉಪಾಧ್ಯಾಯರ ಸಂಘದ ಸಾಮಾನ್ಯ ಮೀಟಿಂಗೊಂದು ಕಳೆದ ತಾ ೧೮ ೯—೧೯೩೮ನೇ ಶನಿವಾರ ಅಪರಾಹ್ನ ೩ ಘಂಟೆಗೆ ಮಾರ್ಕೆಟ್ ವಾರ್ಡ್ ಶಾಲಾ ಕಟ್ಟಡದಲ್ಲಿ ಜರಗಿತು. ಸ್ಥಳೀಯ ಗವರ್ನ್‌ಮೆಂಟ್ ಕೋಲೇಜಿನ ಕನ್ನಡ ಪಂಡಿತರಾದ ಶ್ರೀಯುತ ಸೀತಾರಾಮ ಆಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಸಭೆಯ ಕಾರ್ಯಕ್ರಮಗಳಾಗುವ ಮೊದಲು ಶ್ರೀ ಬಿ ಕಂತ್ರಿಗಳು ವಂದೇ ಮಾತರಂ ಎಂಬ ಪ್ರಾರ್ಥನಾ ಪದ್ಯವನ್ನು ಹಾಡಿದರು. ತರುವಾಯ ಅಧ್ಯಕ್ಷರು ಉಪಾಧ್ಯಾಯರು ಗಮನಿಸಬೇಕಾದ ಕೆಲವು ಸಂಗತಿಗಳು ಎಂಬ ವಿಷಯವನ್ನು ಎತ್ತಿಕೊಂಡು ಸುಮಾರು ೧ ಘಂಟೆ ಸುರಸವಾಗಿ ಭಾಷಣವಿತ್ತರು. ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ಜಪಾನಿನವರು ಚೈನಾ ದೇಶವನ್ನು ಆಕ್ರಮಿಸುವುದಕ್ಕಾಗಿ ಹೂಡಿರುವ ಸಮರವನ್ನು ಖಂಡಿಸುವುದಕ್ಕಾಗಿಯೂ ಚೈನೀಯರಲ್ಲಿ ಭಾರತೀಯರಿಗಿರುವ ಸಹಾನುಭೂತಿಯನ್ನು ತೋರಿಸಲಿಕ್ಕೂ ಮತ್ತು ನಮ್ಮ ದೇಶದ ಸೈನಿಕರನ್ನು ನಮ್ಮ ಅನುಮತಿಯಿಲ್ಲದೆ ಚೈನಾದೇಶಕ್ಕೆ ಕಳುಹಿಸಿರುವುದಕ್ಕಾಗಿ ನಮ್ಮ ನಿಷೇಧವನ್ನು ಸೂಚಿಸುವರೆಯೂ ಇದೇ ತಾ ೨೬ನೇ ಆದಿತ್ಯವಾರವನ್ನು ಅಖಿಲ ಭಾರತದಲ್ಲಿ ಚೈನಾ ದಿನವನ್ನಾಗಿ ಆಚರಿಸಬೇಕೆಂದು ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರುಗಳು ಭಿನ್ನವಿಸಿಕೊಂಡಿದ್ದಾರೆ. ಈ ಕಾರಣದಿಂದ ಅದೇ ದಿನ ಮಂಗಳೂರು ಸಾರ್ವಜನಿಕ ಮೈದಾನಿನಲ್ಲಿ ಸಾಯಂಕಾಲ ಗಂಟೆ ೬ಕ್ಕೆ ಸಭೆಸೇರಲಿರುವುದು. ಪುರಜನರೆಲ್ಲರೂ ಸಭೆಯಲ್ಲಿ ಭಾಗವಹಿಸಬೇಕಾಗಿ ಭಿನ್ನಹ.

ಟೌನ್ ಆಧ್ಯಕ್ಷತೆಯಲ್ ಮತ್ತು ಕೂಡ್ಲು ಶಾಲಾ ಬಾಲಕಿಯರು ಸಂಗೀತ ನಾಟಕ ಇತ್ಯಾದಿ ವಿವಿಧ ವಿನೋದಾವಳಿಗಳಿಂದ ಸಭೆಯನ್ನು ಸಂತೋಷಗೊಳಿಸಿದರು, ಸಭಿಕರಲ್ಲಿ ರಾ। ಲಕ್ಷ್ಮೀನಾರಾಯಣ ಪುಣಿಂಚತ್ತಾಯರೂ, ಉಮೇಶರಾಯರೂ ಸರಸವಾಗಿ ಕೆಲವು ಮಾತುಗಳನ್ನಾಡಿದರು, ಕೊನೆಗೆ ಅಂದಿನ ಸಭಾಧ್ಯಕ್ಷ ಶ್ರೀ। ದತ್ತಾತ್ರಯರಾವ್, ಬಿ.ಎ., ಎಲ್. ಟಿ. ಯವರ ಸಮಯೋಚಿತ ಭಾಷಣಾನಂತರ ಕಾರ್ಯದರ್ಶಿನಿಯರು ಧನ್ಯವಾದಗಳನ್ನರ್ಪಿಸಿದ ಮೇಲೆ ಸಮಾರಂಭವು ಮುಕ್ತಾಯ

ನವರತ್ನಾ 'ಚ್ಯವನಪ್ರಾಶಾವಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ತನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟುಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹವಿದು. ಕೆಮ್ಮು, ಖಾಸ(ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳೆಲ್ಲವಂಗೂ ಇದು ಉತ್ತಮವಾದ ಔಷಧ.

ರಾತಲು 1ಕ್ಕೆ ರೂ. 2—6—0. ½ ರಾತಲು 1—4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಪೈಲೇರಿಯಾ, ಎರಳದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸುವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳೆದು.

ಕ್ರಯ 16 oz 3-0-0; 8 oz 1 10-0; 4 oz 0 - 14—0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪಾಪ್ಯುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಣೈ ಕಾರ್ಕಳ.
ಕೆ. ಎಲ್. ಐತಾಳ, ಉಡುಪಿ — ಮೊಡರ್ನ್ ಫಾರ್ಮೆಸಿ, ಕುಂದಾಪುರ.
ಪಿ. ಜಿ. ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರ.
ಡಾ॥ ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NARSI & CO.
Chemists, Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in — Watches, Clocks, Timepieces, Rolled Gold Jewellery & Sporting Materials etc,



Stockists of West End, Zenith Meridian, Swiss Watches of latest designs & tastes

Repairers – Watches, Clocks, Timepieces and Gramophones.

Japan	8 Inch	Octegon	Rs	6	0	0
„	8 „	Regulator	„	6	12	0
„	10 „	Octegon	,	6	8	0
„	10 „	Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ವ ಗ್ರಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ ಮಂಗಳೂರು

FOR
Quality Frames & Lens,
Please Visit



Nayaks' Optical Stores

Scientific Opticians,
Temple Square, MANGALORE

ಪೈಂಟರ್ಸ್

Whenever you require the service of PAINTERS
Please call on or write to:—



Simon & Co ,
Painters,
Churchgate, Hampankatta No 18, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ದಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶ್ರೇಷ್ಠ ಮಾಡೆಲ್ ಗಟ್ಟಿಯಾದ ಯಂತ್ರಸಾಮಗ್ರಿಗಳು ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು, ಅತಿ ಕಮ್ಮಿ ಬೆಲೆಗಳು ದಶವರ್ಷದ ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ಟಪ್ಪಾಲು ಖರ್ಚು ಮುಫತ್ ನಿಕ್ಕೇಲ ಉರುಟು ವಾಚು 1ಕ್ಕೆ ರೂ 2 15-0 ಅದರಲ್ಲಿ ಉತ್ತಮವಾದದ್ದು 3-8-0 ಬಂಗಾರದ ಗಿಲಿಟಿದ್ದದಕ್ಕೆ ರೂ 4—8—0 ಶೀಡಿಯ ರೂ 5-0 0 ನಿಕ್ಕೇಲ ಆಯತಾಕಾರದಕ್ಕೆ 6-8-0 ಅದರಲ್ಲಿ ಬಂಗಾರದ ಗಿಲಿಟಿದ್ದುದಕ್ಕೆ 7-8-0 ಲಿವರ್ ಪಾಕೆಟ್ ವಾಚಿಗೆ ಬರಿ ರೂ. 1-14-0 ಟೈಂಪೀಸ್ 1ಕ್ಕೆ ಬರಿ ರೂ. 1-15-0 ಮಾತ್ರ

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176, Cross Street CALCUTTA

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತ ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು—ಹಣ್ಣುಗಳು—ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 3-8-0 ಅಡ್ವಾನ್ಸ್ ಇಲ್ಲದೆ ಆರ್ಡರ್ ಪಡೆಯಲಾಗದು

ವಿಳಾಸ —

The Royal Seed Co ,
Florists & Seedsmen, 27 Ilpay Thope
HUDSON BANGALORE

Change of Address:

Bungra Ramanath Shanbhogue Certified Job Typist & Commercial Instructor, has shifted his office to Gonsalves new building Court Road, Mangalore, near Central Co-operative Bank.

– Charges most moderate –

ಸ್ವದೇಶಾಭಿಮಾನಿ ಪತ್ರಿಕೆಗೆ ಇಂದೇ ಚಂದಾದಾರರಾಗಿರಿ.

ನರಹರಿಯ ಪತ್ರಗಳು

ಲೇಖಕ—"ಶ್ರೀಶ"

ಮಾನ್ಯ ಕಲೆಕ್ಟರ್ ಧೊರೆಗಳವರಿಗೆ—

ಅಯ್ಯಾ, ನಮ್ಮವರಲ್ಲಿ ಹೆಚ್ಚಿನವರು ಹುಟ್ಟು ದರಿದ್ರರೆಂದು ತಮಗೆ ಚೆನ್ನಾಗಿ ಗೊತ್ತು. ಅವರಿಗೆ ಅನ್ನ ಬಟ್ಟೆಗಳಿಗೆ ಸಹ ಗತಿ ಇರುವುದಿಲ್ಲ. ಅಷ್ಟಾಗಿಯೂ, ಸ್ವಾಮಿ, ಅವರು ಬುದ್ಧಿಹೀನರು ಅವಿವೇಕಿಗಳು; ಬಹಳ ಕಷ್ಟಪಟ್ಟು ಸಂಪಾದಿಸಿದ ದುಡ್ಡುದುಗ್ಗಾಣಿಗಳನ್ನು ಉಪವಾಸ ಬೀಳುವ ಹೆಂಡತಿಮಕ್ಕಳು, ತಂದೆತಾಯಿಗಳು ಮತ್ತು ಬಂಧುಬಳಗದ ಪಾಲನೆ ಪೋಷಣೆಗಳಿಗೆ ಉಪಯೋಗಿಸುವುದರ ಬದಲಿಗೆ ಗೋವಾ ಲೋಟರಿ-ಐರಿಷ್ ಸ್ವೀಪುಗಳಿಗೆ ಖರ್ಚು ಮಾಡುತ್ತಾರೆ—ವ್ಯರ್ಥ ಹಾಳು ಮಾಡುತ್ತಾರೆ ಸ್ವಾಮಿ.

ಈಚೆಗೆ ಕೆಲವು ವರ್ಷಗಳಿಂದ ಗೋವಾ ಲೋಟರಿ ಐರಿಷ್ ಸ್ವೀಪುಗಳ ದೊಡ್ಡ ಪ್ರವಾಹವೇ ನಮ್ಮ ಜಿಲ್ಲೆಗೆ ಹರಿದುಬಂದಿದೆ ಸ್ವಾಮಿ! ಈ ಪ್ರವಾಹದಲ್ಲಿ ಹಲವು ಮಂದಿ ಶ್ರೀಮಂತರ ಮನೆಗಳು ಮುಳುಗಿ ಹೋದುವು; ಧ್ಯೋಂಪಡಿ ಗುಡಿಸಲುಗಳು ಬಿದ್ದುಹೋದುವು; ಅವು ಕೊಚ್ಚಿ ಹೋದವುಗಳಿಗೆ ಲೆಕ್ಕವೇ ಇಲ್ಲ. ಅನೇಕ ಮಂದಿ ಚಂಬು ಚರಿಗೆಗಳನ್ನು ಮಾರಿ, ಹೆಂಡತಿ ಮಕ್ಕಳನ್ನು ಬಿಟ್ಟು, ಗಡ್ಡಮೀಸೆಗಳನ್ನು ಬೆಳೆಯಿಸಿಕೊಂಡಿದ್ದಾರೆ, ಸ್ವಾಮಿ, ಸನ್ಯಾಸಿಗಳಾಗಿದ್ದಾರೆ! ಎಷ್ಟೋ ಜನರು ಲೋಟರಿದೇವಿಯ ಒನಪು ಒಯ್ಯಾರ, ಥಳಕು ಬೆಳಕುಗಳಿಗೆ ಮನಸೋತು ಮಂಕರೂ ಹುಚ್ಚರೂ ಆಗಿದ್ದಾರೆ, ಸ್ವಾಮಿ! ನಮ್ಮ ಜಿಲ್ಲೆಯಲ್ಲಿ ಲೋಟರಿ ದೇವಿಯ ಪೂಜೆ ಆರಾಧನೆಗಳು ಸರಾಗವಾಗಿ ನಡೆಯುತ್ತಿವೆ, ಸ್ವಾಮಿ!

ಪಂಶ್ರಮಪಡದೆ ಒಂದೆರಡು ರೂಪಾಯಿಗಳನ್ನು ಖರ್ಚು ಮಾಡಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಬೇಕೆಂಬುದು ಹುಚ್ಚಲ್ಲದೆ ಮತ್ತೇನು ಸ್ವಾಮಿ? ಆ ಭಾಗ್ಯ ಎಲ್ಲರ ಹಣೆಗಳಲ್ಲಿ ಬರೆದಿರುತ್ತದೆಯೇ? ಆದರೂ ನಮ್ಮ ಜಿಲ್ಲೆಯವರು ಪ್ರತಿ ತಿಂಗಳು ತಮ್ಮ ಭಾಗ್ಯ ಪರೀಕ್ಷೆಗೆಂದು ಸಾವಿರಾರು ರೂಪಾಯಿಗಳನ್ನು ಪರಪ್ರಾಂತ ಪರದೇಶಗಳಿಗೆ ಕಳುಹಿಸಿ ಕೊಡುತಿದ್ದಾರೆ ಸ್ವಾಮಿ! ಹೀಗೆಯೇ ನಡೆದರೆ ಮುಂದೆ ಹೇಗಾದೀತು ಸ್ವಾಮಿ! ಆಶ್ರಯಿಗಳು ನಿರಾಶ್ರಯಿಗಳಾಗುತ್ತಾರೆ, ಸಂಬಂಧಿಗಳು, ಮಕ್ಕಳು ಮರಿಗಳು ರೋಗಿಗಳಾಗುತ್ತಾರೆ. ಇಂಥ ಇನ್ನು ಅನೇಕ ಕಷ್ಟ ಸಂಕಷ್ಟಗಳು ಬರುತ್ತವೆ. ಆದರೆ ಅವುಗಳ ನಿವಾರಣೆಗೆ ಖರ್ಚು ಮಾಡದೆ ರೂಪಾಯನ್ನು ಲೋಟರಿಗೆ ರವಾನೆ ಎಂದು ಬಿಸಾಡುತ್ತಾರೆ, ಸ್ವಾಮಿ! ಎಂತಹ ಮೂರ್ಖತನವಿದು?

ಲೋಟರಿ ಅಂದರೆ ಶ್ರೀಮಂತರ ವಿಲಾಸ, ಬಡವರ ಶಾಪ. ಲೋಟರಿಗಳಿಗೆ ದುಡ್ಡು ಹಾಕುವವರು ನಿಜವಾಗಿಯೂ ನಮ್ಮ ನಿಮ್ಮ ಕರುಣೆಗೆ ಪಾತ್ರರು. ತಾವು ಸ್ವಾಮಿ ಜಿಲ್ಲೆಯ ಜನರ ಹಿತಚಿಂತಕರು. ಅವರಿಗೆ ಸ್ವಲ್ಪ ಬುದ್ಧಿ ಹೇಳಲಾರಿರಾ? ಲೋಟರಿ ರೂಪದ ಈ ಹಣದ ದಾಕ್ಷಿಣ್ಯವನ್ನು ತಡೆಗಲಾರಿರಾ? ಸರಕಾರಕ್ಕೆ ಬರೆದು ಹಾಕಿ ಲೋಟರಿ ಟಿಕೇಟುಗಳ ಮಾರಾಟವನ್ನು ಪ್ರತಿಬಂಧಿಸಲಾರಿರಾ? ಅಥವಾ ಲೋಟರಿ ಮೇಲೆ ದೊಡ್ಡ ಸುಂಕ ಹಾಕಿ ಬಡವರಾದರೂ ಅದರ ಜಾಲದಲ್ಲಿ ಬಿದ್ದು ಸರ್ವನಾಶ ಮಾಡಿಕೊಳ್ಳದಂತೆ ಮಾಡಿಸಲಾರಿರಾ? ಹಾಗೆ ಮಾಡಿದರೆ ತಮ್ಮ ಉಪಕಾರವು ಚಿರಸ್ಮರಣೀಯವಾಗುವುದು! ಜಿಲ್ಲೆಯ ಇತಿಹಾಸದಲ್ಲಿ ತಮ್ಮ ಹೆಸರು ಸ್ವರ್ಣಾಕ್ಷರಗಳಿಂದ ಬರೆಯಲ್ಪಡುವುದು.

ಇತಿ ತಮ್ಮ—ನರಹರಿ.

೨.

ಬಸ್ ಕಂಪೆನಿಯ ಮಾಲಕರಿಗೆ—

ಅಯ್ಯಾ, ತಾವು ತಮ್ಮ ಕೆಲವು ಬಸ್ಸುಗಳಲ್ಲಿ ಮಾತ್ರ 'ಬತ್ತಿ ಸೇದುವದು ನಿಷೇಧಿಸಲ್ಪಟ್ಟಿದೆ' ಎಂದು ಇಂಗ್ಲೀಷಿನಿಂದ ನೋಟೀಸು ಹಚ್ಚಿದ್ದೀರಲ್ಲ? ಉಳಿದ ಬಸ್ಸುಗಳಲ್ಲಿ ಬೇಕಾದಂತೆ ಬತ್ತಿ ಸೇದಬಹುದೆಂದು ಅದರ ಅರ್ಥವೆ ಸ್ವಾಮಿ?

ಮೈನೋರಿಟಿಗಳ ಸುಖಾನುಕೂಲತೆಗಳನ್ನು ಮೆಜೋರಿಟಿಯವರು ನೋಡಿಕೊಳ್ಳಬೇಕಾದುದು ಅವರ ಧರ್ಮವಾಗಿದೆ. ಬತ್ತಿ ಸೇದದವರೆಲ್ಲ ಈಗ ಮೈನೋರಿಟಿ ಪಕ್ಷಕ್ಕೆ ಸೇರಿದವರೆಂಬುದು ನಿಜ. ಸೇದುವವರು ಸೇದದವರ ಅನುಕೂಲತೆಗಳನ್ನು ಸ್ವಲ್ಪವಾದರೂ ಲೆಕ್ಕಿಸಬೇಡವೆ ಸ್ವಾಮಿ? ಬತ್ತಿ ಸೇದುವವರು ಹೊಗೆ ಬಿಡುವುದನ್ನು ನೋಡುವಾಗ ಸೇದದವರ ತಲೆ ತಿರುಗುತ್ತದೆ, ವಾಂತಿಯಾಗುತ್ತದೆ, ಪಾಪದ ಅವರು ಎಷ್ಟೋ ಕಷ್ಟಗಳನ್ನು ಅನುಭವಿಸುತ್ತಾರೆ, ನರಳುತ್ತಾರೆ. ಸುಂಕಕೊಟ್ಟು ಹೊಳೆ ಈಜಬೇಕೆ ಸ್ವಾಮಿ? ದುಡ್ಡುಕೊಟ್ಟು ಬಸ್ಸುಗಳಲ್ಲಿ ನರಳಬೇಕೆ, ಸ್ವಾಮಿ?

ಒಬ್ಬ ದೊಡ್ಡ ಮನುಷ್ಯರು, ಸರಕಾರದ ಭಾರಿ ನೌಕರರಂತೆ, ಬಸ್ಸಿಗೆ ಹಚ್ಚಿದ ಪ್ರೊಹಿಬಿಶನ್ ನೋಟೀಸನ್ನು ನೋಡಿಯೂ ಎರಡೆರಡು ಸಿಗಾರುಗಳನ್ನು ಒಟ್ಟೊಟ್ಟಿಗೆ ಸೇದಿ ಬಸ್ಸು ತುಂಬಾ ಹೊಗೆ ಮಾಡಿಬಿಟ್ಟರು ಸ್ವಾಮಿ; ಕಾನೂನು ಮುರಿದು ದೇಶೋದ್ಧಾರ ಮಾಡಿದ ವೀರ ಸ್ವಯಂಸೇವಕನಂತೆ ಸುತ್ತಮುತ್ತಲೂ ನೋಡಿದರು, ಸ್ವಾಮಿ. ಅವರ ಲಕ್ಷ್ಯವನ್ನು ನೋಟೀಸಿನ ಕಡೆಗೆ ಎಳೆದಾಗ—'ಓಹೋ, ಆ ನೋಟೀಸು ನಮಗಲ್ಲ!' ಎಂದು ಬಾಯಿಹಾರಿಸಿ ಬಿಟ್ಟರು ಸ್ವಾಮಿ! ದೊಡ್ಡವರೊಡನೆ ತರ್ಕ ಮಾಡುವುದು ಮೂರ್ಖತನ ಎಂದು ಆಗ ನಾನು ಸುಮ್ಮನಾದೆ ಸ್ವಾಮಿ! ಪ್ರೊಹಿಬಿಶನ್ ನೋಟೀಸು ಬತ್ತಿ ಸೇದುವವರಿಗಲ್ಲವಾದರೆ, ಬೇರೆ ಯಾರಿಗೆಂದು ಅದನ್ನು ಹಚ್ಚಿಸಿದ ತಾವಾದರೂ ಸ್ಪಷ್ಟ ಮಾಡಲಾರಿರಾ? ಸ್ವಾಮಿ!

ಮೈನೋರಿಟಿ ಪಕ್ಷಕ್ಕೆ ಕೆಲವು ಸುಖಾನುಕೂಲತೆಗಳನ್ನು ಕೊಡುವದಕ್ಕಾಗಿ ಎಲ್ಲ ಬಸ್ಸುಗಳಲ್ಲಿಯೂ ಪ್ರೊಹಿಬಿಶನ್ ನೋಟೀಸುಗಳನ್ನು ಹಚ್ಚಬೇಕು ಸ್ವಾಮಿ. ಮೋಟರಿನೊಳಗೆ ಬತ್ತಿ ಸೇದುವುದನ್ನು ಪೂರ್ಣ ನಿಷೇಧಿಸಬೇಕು ಸ್ವಾಮಿ, ಬಸ್ಸು ನಡೆಯುವಾಗಲೂ ಬತ್ತಿ ಸೇದಲೇ ಬೇಕಾದ, ತಮ್ಮ ದುರಭ್ಯಾಸದ ಗುಲಾಮರು ಇದ್ದೇ ಇರುವರಾದರೆ, ಅವರಿಗಾಗಿ ಬಸ್ಸಿನ ಹಿಂದಿನ ಸೀಟುಗಳನ್ನಾದರೂ ರಿಜರ್ವ ಮಾಡಿಸಿ, ಅವರನ್ನು ಅಲ್ಲೇ ಕುಳ್ಳಿರಿಸಿ, ಸ್ವಾಮಿ. ಅಲ್ಲವಾದರೆ ಅವರು ಸ್ಟೇಶನುಗಳಲ್ಲಿ ಬಸ್ಸು ನಿಂತಾಗ ಕೆಳಗಿಳಿದು ಬತ್ತಿ ಸೇದಲಿಕ್ಕೆ ತಿಳಿಸುವಂತೆ ಡ್ರೈವರ ಕಂಡಕ್ಟರುಗಳಿಗೆ ಕಟ್ಟಾಜ್ಞೆ ಕೊಡಬೇಕು ಸ್ವಾಮಿ.

ಹೀಗೆ ಮಾಡಿ ಆಗಾಗ ಬಸ್ ಪ್ರಯಾಣ ಮಾಡುವ, ನನ್ನಂಥ ಬತ್ತಿ ಸೇದದವರನ್ನು ಸೇದುವವರ ಕಾಟದಿಂದ ಬದುಕಿಸಿ ಕಾಪಾಡಬೇಕು ಸ್ವಾಮಿ.

ನಾನು ತಮ್ಮ—ನರಹರಿ.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಭಾದ್ರಪದ ಬ॥ ೫ ಶನಿವಾರದಿಂದ, ಬಾದ್ರಪದ ಬ॥ ೧೨/ಶುಕ್ರವಾರದ ವರೇಗಿನ ಪಂಚಾಂಗ.(೧೯೩೭ನೇಯ (ಕನ್ಯಾ ಸಿಸ್ಟೆಂಬರ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
25	ಶನಿ	೫	೬	ಕೃತ್ತಿಕೆ	೧೩	೯	
26	ರವಿ	೬	೩೩	ರೋಹಿಣಿ	೯	೧೦	
27	ಸೋಮ	೭	೪೮	ಮೃಗಶಿರ	೫	೧೧	
28	ಕುಜ	೮	೪೩	ಆರ್ದ್ರ	೫೭	೧೨	
29	ಬುಧ	೧೦	೩೮	ಪುಷ್ಯ	೫೫	೧೩	
30	ಗುರು	೧೧	೩೫	ಆಶ್ಲೇಷ	೫೩	೧೪	
1	ಶುಕ್ರ	೧೨	೩೨	ಮಘ	೫೨	೧೫	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 months 3½%

Auction chit Funds ranging from Rs. 100/ to Rs 5000/ run regularly on systematic lines. Unique Banking facilities to Businessmen and interested Public

Apply for particulars— **K R. GURU,** *Managing Director*

The Canara Banking Corporation, Udipi, Ltd.

ESTD. 1906.

(INCORPORATED IN BRITISH INDIA.)

Head Office: UDIPI.

Members:- **RESERVE BANK OF INDIA**
CLEARING HOUSE, MADRAS.

STATEMENT OF POSITION AS ON 31-8-1937

LIABILITIES.				ASSETS			
Paid up Capital	Rs. 2,88,975	0	0	Land property & buildings	Rs. 3,56,043	7	8
Reserve & other funds	„ 3,63,593	5	3	Advances	„ 27,80,431	1	2
Deposits	„ 38,21,587	14	1	Govt. securities & deposits with Bankers	„ 15,54,814	14	2
Due to Bankers	„ 6,74,591	4	11	Sundries including interest receivable, bill for collection etc. etc.	„ 3,78,806	5	10
Sundries including interest payable, bills per contra, accrued profits etc.	„ 2,16,765	15	1	Cash on hand & with Bankers	„ 2,95,417	10	6
	Rs. 53,65,513	7	4		Rs. 53,65,513	7	4

17—9—1937

V. R. Kamath, B. A. LL. B.
Manager.

ಖಾಸಗಿ ಉಪ್ಪನ್ನು ತಯಾರಿಸಬಹುದಾಗಿ ಪ್ರಕಟಣೆ!

ಇಂಡಿಯಾ ಸರಕಾರದ ಅಪೇಕ್ಷೆ ಮೇರೆಗೆ ಮದ್ರಾಸು ಪ್ರಾಂತ್ಯದ ಉಪ್ಪಿನ ಶೀರ್ವೆಯ ಕಲೆಕ್ಟರರು ಈ ಕೆಳಗೆ ಕಾಣಿಸಿದ ಪ್ರಾಂತ್ಯಗಳಲ್ಲಿ ಖಾಸಗಿಯಾಗಿ ಉಪ್ಪನ್ನು ತಯಾರಿಸಬಹುದಾಗಿ ಪ್ರಕಟಣೆಯನ್ನು ಹೊರಡಿಸಿರುವರು. 1. ನೆಲ್ಲೂರು ಜಿಲ್ಲೆ; 2. ಕಡಪಾ ಜಿಲ್ಲೆ; 3. ಅನಂತಪುರ ಜಿಲ್ಲೆ; 4. ರಾಮನಾಡ ಜಿಲ್ಲೆಯ ರಾಮನಾಡ ಮತ್ತು ಮುದುಕುಳತ್ತೂರ ತಾಲೂಕುಗಳು; 5. ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಿರಿಗುಪ್ಪಾ, ಆಲ್ಲೂರು, ಅಡೋನಿ ರಾಯದುರ್ಗ, ತಾಲೂಕುಗಳು; 6. ಕರ್ನೂಲು ಜಿಲ್ಲೆಯ ಸಿರ್ವೇಲ್, ನಂದ್ಯಾಲ್, ಧೋನ, ಪತ್ತಿಕೊಂಡ, ನಂದಿಕೊತ್ಕೂರು, ಕರ್ನೂಲ್, ಕೊಯಿಲಕುಂಟ್ಲ, ಕಂಬಂ ಮತ್ತು ಮಾರ್ಕಾಪುರ ತಾಲೂಕುಗಳು; 7. ತಂಜಾವೂರು ಜಿಲ್ಲೆಯ ತಿರುತುರೈಪುಂಡಿ ಮತ್ತು ಪಟ್ಟುಕೋಟ್ಟಾ ತಾಲೂಕುಗಳು; 8. ಚಿಂಗಲ್‌ಪೆಟ್ ತಾಲೂಕು; 9. ತಿನ್ನವೆಲ್ಲಿ ಜಿಲ್ಲೆಯ ನಂಗುನೇರಿ ತಾಲೂಕು.

ಐ. ಎಮ್. ಎಸ್. ಅಧಿಕಾರಿಗಳ ಕುರಿತು

ಕಳೆದ 14ನೆಯ ತಾರೀಕಿನಲ್ಲಿ ನಡೆದ ಎಸೆಂಬ್ಲಿಯ ಅಧಿವೇಶನದಲ್ಲಿ ಶ್ರೀ ಡಾ ರಾಜನನವರು ಐ. ಎಮ್. ಎಸ್. ಅಧಿಕಾರಿಗಳಿಗಾಗಿ ಕಾದಿಡಲ್ಪಟ್ಟ ಸ್ಥಾನಗಳು ಯಾವುವೆಂದು ವಿವರಿಸಿ ಹೇಳಿ, ಈ ತನಕ ಸಿವಿಲ್ ಸರ್ವಿಸಿನಲ್ಲಿದ್ದವರ ಹಕ್ಕುಬಾಧ್ಯತೆಗಳೂ ಎಪ್ರಿಲ್ 1 ರಲ್ಲಿ ಪ್ರಕಟವಾದ ಪಟ್ಟಿಯಲ್ಲಿ ಹೆಸರಿಲ್ಲದವರ ಹಕ್ಕುಗಳೂ ಕಾಪಾಡಲಾಗುವುವೆಂದು ಹೇಳಿರುವರು.

ಇನ್ನೂ ಹೆಚ್ಚಿನ ಪ್ರಶ್ನೋತ್ತರಗಳು ನಡೆಯಲು, ಐ. ಎಮ್. ಎಸ್. ಆಫೀಸರರಿಗೆಂದು ಕಾದಿಡಲಾಗದ ಸ್ಥಾನಗಳಿಗೆ ಅಗತ್ಯವಿದ್ದಾಗ ಮದ್ರಾಸ್ ಮೆಡಿಕಲ್ ಸರ್ವಿಸಿನ ಅಧಿಕಾರಿಗಳನ್ನು ನೇಮಿಸಲಾಗುವುದೆಂದೂ ತಿಳಿದು ಬಂತು.

ಸಂಬಳದಲ್ಲಿ ಕಡಿತ ಯಥೋಚಿತವಾದುದು

ಸರಕಾರಿ ನೌಕರರ ಸಂಬಳದಲ್ಲಿ ಕಡಿತವನ್ನು ಮಾಡಬೇಕೆಂಬ ಮಾತು ಮುಂದೆ ಬಂದಂದಿನಿಂದ ಎಷ್ಟೋ ವಿರೋಧಾಭಿಪ್ರಾಯಗಳೂ ಹಿಂಬಾಲಿಸಿರುವುವು. ಈ ಕುರಿತು ಶ್ರೀ ಪ್ರಕಾಶರವರು ಎಸೆಂಬ್ಲಿಯಲ್ಲಿ ಮಾತನಾಡುತ್ತಾ ಹೀಗೆಂದಿರುವರು—

'ನಾವಿಂದು ಒಂದು ಹೊಸ ಯುಗದಲ್ಲಿ ಕಾಲಿಡುತ್ತಿದ್ದೇವೆ. ಈಗಿನ ಸರಕಾರವೆಂದೆನಿಸಿಕೊಳ್ಳುವವರು ದೇಶದ ಆಯವ್ಯಯಗಳನ್ನು ಸರಿಪಡಿಸಿಕೊಳ್ಳಬೇಕಷ್ಟೆ. ಈಗಿನ ಪರಿಸ್ಥಿತಿಗನುಗುಣವಾಗಿ ತೆರಿಗೆದಾರರಿಂದಲೇ ಪೋಷಿಸಲ್ಪಡುತ್ತಿರುವ ಪ್ರತಿಯೊಂದು ಸರಕಾರಿ ಉದ್ಯೋಗದ ಖಾತೆಯಲ್ಲಿ ತೆರಿಗೆದಾರರು ಇಂದಿಷ್ಟು ಕಡಿತವನ್ನು ಅಪೇಕ್ಷಿಸುವುದು ಅನುಚಿತವಾಗದು. ಈ ಮೊದಲು ಹೀಗೆಯೇ ನಡೆದ ನಿದರ್ಶನಗಳು ಅನೇಕ ಇವೆ. 1931–32ರಲ್ಲಿ ಇಂಡಿಯಾ ಸರಕಾರದ ಫೈನೆನ್ಸ್ ಮೆಂಬರರು 19 ಕೋಟಿ ರೂಪಾಯಿ ನಷ್ಟವಿರುವ ಆಯವ್ಯಯದ ಪಟ್ಟಿಯನ್ನು ತಯಾರಿಸಿ ಸರಕಾರಕ್ಕೆ ಒಪ್ಪಿಸಿದರು. ಒಡನೆ ಗವರ್ನರರುಗಳು ತಮ್ಮ ಸಂಬಳದಲ್ಲಿ ಸೇಕಡಾ 20 ರೂಪಾಯಿಯಂತೆ ಬಿಟ್ಟುಕೊಟ್ಟರು. ನಂತರ ಅವರ ಮಂತ್ರಿಮಂಡಲದವರು ನೂರರಲ್ಲಿ 15 ರಂತೆ ಕಡಿತಕ್ಕೆ ಒಪ್ಪಿಗೆಯನ್ನಿತ್ತರು. ಎಲ್ಲಾ ಸರಕಾರಿ ಖಾತೆಗಳಲ್ಲಿ ಸರಾಸರಿ ಸೇಕಡಾ 10ರಂತೆ ಕಡಿತವು ಮಾಡಲಾಯಿತು.

ಆಗಿನಗಿಂತ ಈಗಿನ ಪರಿಸ್ಥಿತಿಯು ಬಹಳ ಶೋಚನೀಯವಾಗಿದೆ. ಈಗಿನ ಪ್ರಾಂತೀಯ ಸರಕಾರದ ಆದಾಯವು ಬಹುಮಟ್ಟಿಗೆ ಕಮ್ಮಿಯಾಗಿದ್ದು ಆದರೆ ಖರ್ಚು ಹೆಚ್ಚಾಗಿದೆ. ರೈತರ ಸಾಲದ ಹೊರೆಯು ಸಹಿಸಲಾರದಷ್ಟಿದೆ. ಇದಕ್ಕೆ ಕಾರಣವು ಕೇವಲ ಆಂತರಿಕ ಮಾತ್ರವಲ್ಲ, ಬಹಿರ್‌ಕಾರಣಗಳೂ ಇವೆ. 1927ರಿಂದ ರೂಪಾಯಿಯ ಎಕ್ಸ್‌ಚೇಂಜುರೇಶಿಯಾ 16 ಶಿಲಿಂಗ್ ಇದ್ದುದು 18 ಶಿಲಿಂಗ್ ಮಾಡಿದುದೇ ಇದಕ್ಕೆ ಕಾರಣ. ಎರಡು ವರ್ಷಗಳೊಳಗೆ ಕೋಟಿಗಟ್ಟಲೆ ರೂಪಾಯಿಗಳು ದುರ್ವ್ಯಯವಾದುವು. ಎಂಟು ತಿಂಗಳುಗಳೊಳಗೆ 30 ಕೋಟಿ ರೂಪಾಯಿಗಳು ಮಾಯವಾದುವು. ಬರೀ ರಿವರ್ಸ್ ಕೌನ್ಸಿಲ್‌ಗೆಂದು ಅನೇಕ ಕೋಟಿ ರೂಪಾಯಿಗಳು ವೆಚ್ಚಮಾಡಲ್ಪಟ್ಟವು. 1920–1921ರಲ್ಲಿ ಎಕ್ಸ್‌ಚೇಂಜ್‌ರೇಶಿಯಾ 1 ಶಿಲ್ಲಿಂಗ್ 4 ಪೆನ್ಸ್ ಇದ್ದುದು 2 ಶಿಲ್ಲಿಂಗ್ 10 ಪೆನ್ಸ್ ಆದ ದರಿಂದ ಆದ ಅನಾಹುತವು ಎಲ್ಲರಿಗೂ ತಿಳಿದಿರಬಹುದು. ಇದರಿಂದಾಗಿ ಮುಂಚಿನ ದಿನ ಲಕ್ಷಾಧಿಪತಿಗಳಾಗಿದ್ದವರು ಮರುದಿನ ಭಿಕ್ಷಾಧಿಪತಿಗಳಾದರು. ಈಗಿನ ಪರಿಸ್ಥಿತಿಯು ನಮಗೆ ಹಿಂದಿನವರು ಕಟ್ಟಿಕೊಟ್ಟ ಬುತ್ತಿಯಾಗಿದೆ. ನ್ಯಾಯದಲ್ಲಿಯೂ ಸಂಬಳದಲ್ಲಿಯೂ ಕಡಿತವು ಇಂದು ಅತ್ಯಗತ್ಯವಾಗಿದೆ.

ಗಾಂಧಿ ಟೊಪ್ಪಿ

ತಲಚೇರಿಯ ಕೋರ್ಟು ನೋಟೀಸುಗಳನ್ನು ಬಟವಾಡೆಮಾಡುವ ಪೇದೆಗಳ ಸಂಘದ ಮೀಟಿಂಗಿನಲ್ಲಿ, ಪೇದೆಗಳೆಲ್ಲರೂ ಖಾದಿಯನ್ನು ಧರಿಸಿಕೊಳ್ಳಬೇಕಾಗಿಯೂ, ತಮ್ಮ ಮುಂಡಾಸಿನ ಬದಲಾಗಿ ಗಾಂಧಿಟೊಪ್ಪಿಯನ್ನು ಇಟ್ಟುಕೊಳ್ಳಬೇಕಾಗಿಯೂ ನಿರ್ಣಯಿಸಲಾಗಿದೆ.

ಕಾವೇರಿ ನದಿಗೆ ಸಂಕ.

ಸೇಲಂ ಜಿಲ್ಲಾ ಬೋರ್ಡಿನವರು ಕಾವೇರಿ ನದಿಗೆ ನಮಕ್ಕಲ್ ತಾಲೂಕಿನಲ್ಲಿರುವ ವೇಲೂರು ಪಗಲೂರು ದಂಡೆಯ ಮೇಲೆ ಒಂದು ಸಂಕವನ್ನು ಕಟ್ಟಿಸುವಂತೆ ಸರಕಾರಕ್ಕೆ ಕೇಳಿಕೊಳ್ಳಬೇಕಾಗಿ ನಿಶ್ಚೈಸಿರುವರು.

ಪ್ರಾಂತ್ಯಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ.

ಪ್ರಾಥಮಿಕ ವಿದ್ಯಾಭ್ಯಾಸದ ಪ್ರಸಾರದ ಕುರಿತು ಎಲ್ಲಾ ಕಾಂಗ್ರೆಸ್ ಪ್ರಾಂತ್ಯಗಳು ಒಟ್ಟುಗೂಡಿ ಪರ್ಯಾಲೋಚಿಸಿ ಒಂದೇ ವಿಧದ ಯೋಜನೆಯನ್ನು ಕೈಕೊಳ್ಳಬೇಕೆಂದು, ಬೊಂಬಾಯಿ ಮುಖ್ಯ ಪ್ರಧಾನರಾದ ಶ್ರೀ ಬಿ. ಜಿ. ಖೇರರು ಪ್ರಯತ್ನಿಸುತ್ತಿರುವರು. ಬೇಗನೆ ಒಂದು ಪರಿಷತ್ತು ಕರೆಯಲ್ಪಟ್ಟು, ಧರ್ಮಾರ್ಥ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಪ್ರಚುರಪಡಿಸಲು ಯಾವುದಾದರೊಂದು ವ್ಯವಸ್ಥೆಯು ಮಾಡಲಾಗುವುದೆಂದು ನಿರೀಕ್ಷಿಸಲಾಗಿದೆ.

ನಾಗಪುರಕ್ಕೊಂದು ರಾಷ್ಟ್ರೀಯ ದಳ.

ನಾಗಪುರದ ನಗರ ಕಾಂಗ್ರೆಸ್ ಸಮಿತಿಯವರು ನಾಗಪುರಕ್ಕೆ ಒಂದು ರಾಷ್ಟ್ರೀಯ ದಳವನ್ನು ನಿರ್ಮಿಸಬೇಕೆಂದು ನಿರ್ಧರಿಸಿ, ಸ್ವಯಂಸೇವಕರನ್ನು ಒಟ್ಟುಗೂಡಿಸುವ ಕಾರ್ಯದಲ್ಲಿ ನಿಮಗ್ನರಾಗಿರುವರು. ಮುಖ್ಯ ಸಚಿವರಾದ ಡಾ. ಎನ್. ಬಿ. ಖಾರೆಯವರೂ ಒಬ್ಬ ಸ್ವಯಂಸೇವಕನಾಗಿ ಸೇರಿದ್ದಾರೆ.

ಕಲ್ಲಿಕ್ಕಿ ಕೊಂದನು.

ಓರ್ವ ರೈತ ಹುಡುಗಿಯು ಶೈಕುಪುರದ ಒಬ್ಬ ಜಮೀನುದಾರನ ಗದ್ದೆಗಳಲ್ಲಿದ್ದ ಹುಲ್ಲನ್ನು ಕೊಯ್ಯುತ್ತಿದ್ದಳು. ಅದನ್ನು ನೋಡಿದೊಡನೆ ಆತನು ಆಕೆಯನ್ನು ಬೆದರಿಸಿ ಬೈಯತೊಡಗಿದನು. ಪ್ರತಿಯಾಗಿ ಆಕೆಯೂ ಬೈದಳು. ಜಮೀನುದಾರನಿಗೆ ಬಂತು ಕೋಪ. ಕೈಯಲ್ಲಿ ಕಲ್ಲುಗಳನ್ನೆತ್ತಿ ಆಕೆಗೆ ಹೊಡೆಯತೊಡಗಿದನು. ಕಲ್ಲುಗಳಿಂದ ಆದ ಆಘಾತಗಳಿಂದಾಗಿ ಆಕೆಯ ಪ್ರಾಣವು ಕೂಡಲೆ ಹಾರಿಹೋಯಿತು.

ಜಮೀನುದಾರನನ್ನು ಕೊಲೆಯ ಅಪಾದನೆಯ ಮೇಲೆ ಕೈದುಮಾಡಲಾಗಿದೆ.

ಮಾಪ್ಲಾ ದಂಗೆಯ ಕೈದಿಗಳನ್ನು ಬಿಡುಗಡೆಮಾಡಲಾಗುವುದು.

ಮದ್ರಾಸು ಪ್ರಾಂತ್ಯದಲ್ಲಿಯೂ ಅಂಡಮಾನದಲ್ಲಿಯೂ ಇರುವ ಮಲಬಾರಿನ ಮಾಪ್ಲಾ ದಂಗೆಯ ಕೈದಿಗಳನ್ನು ಬಿಡುಗಡೆ ಮಾಡುವಂತೆ ಅಪ್ಪಣೆಯು ಕೊಡಲಾಗಿದೆಯೆಂದು ಶ್ರೀ ರಾಮನ್ ಮೇನನರು ಹೇಳಿರುವರು.

ಹಿಂದೂದೇಶದವರಿಗಾಗಿಯೂ ರೋಪ್‌ದೇಶದವರ ಸಹಾನುಭೂತಿ.

ಇಂಗ್ಲಾಂಡಿನ ರೋಯಲ್ ಸೊಸೈಟಿಯವರು ಹಿಂದೂದೇಶದ ಮಕ್ಕಳ ಪೋಷಣ ಪರಿಸ್ಥಿತಿಯ ಕುರಿತು ವಿಚಾರಣೆ ನಡೆಸಲು ಧನವನ್ನು ಪ್ರತ್ಯೇಕಿಸಿರುವರು. ಡಾ ಕರ್ನಲ್ ವಿಲ್ಸನ್ ಎಂಬವರು ಈ ಕೆಲಸವನ್ನು ಮಾಡಲಿರುವರು. ಡಾ ಅಯ್ಯಂಗಾರ್ಯರ್ಯ ಎಂಬವರೊಡನೆ ಇವರು ಪಂಜಾಬಿನಲ್ಲಿ ಗೋದಿ ತಿನ್ನುವ ಕಾಲೇಜ್ ಕೈ ಸಂಗಡಗಳಲ್ಲಿ ತಮ್ಮ ಕೆಲಸವನ್ನು ಮೊದಲು ಮಾಡಿದರು.

ಇನ್ನು ಮುಂದೆ ಇವರು ತಮ್ಮ ಕೆಲಸವನ್ನು ಮಧ್ಯಪ್ರಾಂತಗಳಲ್ಲಿ ಪ್ರಾರಂಭಿಸಲಿರುವರು. ಅವರ ಶೋಧಗಳ ಫಲಿತಾಂಶವು ಅಲ್ಲಿಯ ಜನರಿಗೆ ತುಂಬಾ ಪ್ರಯೋಜನಕಾರಿಯಾಗದಿರದು. ಪ್ರಾನ್ತ್ಯದಲ್ಲಿ ಛತ್ತೀಸ್‌ಗಢ ಜಿಲೆಗಳಲ್ಲಿರುವ ಕುಷ್ಠರೋಗದ ವ್ಯಾಪಕತೆಯನ್ನು ಹೋಗಲಾಡಿಸಲು ಸಹಾಯವಾಗಬಹುದು. ಮಧ್ಯಪ್ರಾಂತದ ಸರಕಾರದವರು ಡಾ ವಿಲ್ಸನ್ನವರಿಗೆ ರೂ 500ರ ವರೆಗೆ ಧನಸಹಾಯ ಮಾಡಲಿರುವರು.

ಒರಿಸ್ಸಾದಲ್ಲಿ

ಶಿಕ್ಷಿತ ನಿರುದ್ಯೋಗಿಗಳ ಪಟ್ಟಿಯು ತೆಗೆಯಲಾಗುವುದು—ಎಂಬುದಾಗಿ ಶ್ರೀ ಬಿಶ್ವನಾಥ ದಾಸರವರು ಹೇಳಿರುವರು.

TEST YOUR EYES

By the Electro Ophthalmoscope





All Varieties of Frames & Lenses.
AT
The Mangalore Trading Association Ltd.
Sight Testing Ophthalmic Opticians,
Car Street, MANGALORE

'Dil Roz' (Regd)

'Dil Roz' is a sure cure for Oriental sores local sores, all kinds of deep rooted sores, skin eruptions, Pimples, Eczema, Ringworm, Sinus, Fistula auxillary-Abscess

There is no need of dressing the wounds, nor are baths prohibited.

Price Rs. 2
Postage extra.

TAHIR DIN,
Anarkali, LAHORE

ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಆದರಿಂದ ಸೌಖ್ಯ, ಆನಂದ
ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಇಂದ್ರಿಯಗಳು ಗಟ್ಟಿಯಾಗುವುದಕೆ
ಶಾಂತಿಗೆ,
ಜೀವ ಸತ್ವಗಳಿಗೆ
ನವಯೌವನಕ್ಕೆ,
ರಾಜಮಾರ್ಗವೆಂದರೆ

ಜೀವಾಮೃತ

ಆಯುರ್ವೇದಾಶ್ರಮಂ,
೧೫ ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು.

ದ. ಕ. ಜಿಲ್ಲೆಯ ಏಜಂಟರು –
ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

ಸದಾ ಉಪಯೋಗಿಸಿರಿ

ಲೋಧ್ರ ಲಲನೆಯರ ಸೌಖ್ಯಾರೋಗ್ಯಗಳಿಗೆ

ಕೇಸರೀ ಕುಟೀರಂ ರಾಯಪೇಟೆ ಮದರಾಸು

ಮಂಗಳೂರು ಪ್ರವರ್ತಕರು ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

HOUNSA



ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲಿಕಟ್ಟಾ ಬಜಾರ್, ಮಂಗಳೂರು

ಶಾಸ್ತ್ರೀಯ ರೀತ್ಯಾ ತಯಾರಿಸಿದ
ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು
ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,
Flower Market South, Mangalore.

ಮಧನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0(ವಿ.ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O. Peridepi (ನೆಲ್ಲೂರು ಜಿ.)

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ, ಕೂಗು, ಹೊರಳಾಟ, ಬಿಕ್ಕಳಿಕೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡಾಚಿಹ್ನೆಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒಟ್ಟಾರೆ 10 ನಿಮಿಷಗಳಲ್ಲಿ ಮಾಯವಾಗುತ್ತವೆ, ಮತ್ತು ರೋಗಿಯು ಶಾಂತಿಯನ್ನೂ ಆರೋಗ್ಯವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ.

C. L. Namawala,
Palace Road, BARODA

"ಮೌನದ ರೀತಿಯಲ್ಲಿ ಸೇವೆ ಮಾಡುತ್ತಿದ್ದ ಸಬರಮತಿಯ ಸತ್ಯಾಗ್ರಹ ಆಶ್ರಮದ ಸದಸ್ಯರ ಪ್ರತಿಜ್ಞೆಯು, ಆದರೆ ಇಂದು ಆ ಆಶ್ರಮವು ಚದರಿಹೋದ ಒಂದು ಕುಟುಂಬವಾಗಿ ಬಿಟ್ಟಿದೆ.

ಮೊನ್ನೆ ಪ್ರಾಣತ್ಯಾಗ ಮಾಡಿಕೊಂಡ ಶ್ರೀ ಚೋಟಲಾಲ ಜೈನರು, ಸಬರಮತಿ ಆಶ್ರಮದ ಆದರ್ಶದ ಅವತಾರ ಪುರುಷರೇ ಆಗಿದ್ದರು. ಮೌನವಾಗಿ ಸೇವೆ ಮಾಡುವ ಕುರಿತು ಅವರಲ್ಲಿದ್ದ ಆತುರವನ್ನು ವರ್ಣಿಸಲು ತಕ್ಕ ಭಾಷೆ ನನ್ನಲ್ಲಿರುವುದಿಲ್ಲ. ಪ್ರಸಿದ್ಧಿಯ ಕುರಿತು ಅವರು ಭಯಪಡುತ್ತಿದ್ದರು. ಮೌನವಾದ ರೀತಿಯಲ್ಲಿ ಯಾರಿಗೂ ತಿಳಿಯದ ರೀತಿ ಸೇವೆ ಮಾಡುವುದರಲ್ಲಿ ಅವರಿಗೆ ತುಂಬಾ ಪ್ರೀತಿ. ನಿಜವಾಗಿಯೂ ಅವರ ಬಲಗೈಯು ಏನು ಮಾಡುತ್ತಿರುವುದೆಂಬುದು ಅವರ ಎಡಕೈಗೆ ತಿಳಿದಿರುತ್ತಿರಲಿಲ್ಲವೆನ್ನಬಹುದು. ಯಾರಾದರೂ ಸಂಬಂಧಿಕರು ಅವರ ದರ್ಶನಕ್ಕೆ ಬಂದುದು ನಾನರಿಯೆ. ನನ್ನ ಕೂಡೆ ಅವರ ಯಾವತ್ತೂ ಸಂಬಂಧಿಕರ ಕುರಿತು ಮಾತೆತ್ತುತ್ತಿರಲಿಲ್ಲ. ಈಗಲೂ ನನಗೆ ಅವರ ಸಂಬಂಧಿಕರು ಎಲ್ಲಿರುವರೆಂಬುದು ತಿಳಿದೇ ಇಲ್ಲ."

ಈ ತರದಲ್ಲಿ ಮಹಾತ್ಮಾಜಿಯವರು ಕಳೆದ ವಾರದ ಹರಿಜನ ಪತ್ರಿಕೆಯಲ್ಲಿ ವಾರ್ಧಾವಿನ ಮೆಘನ್ನಾಡಿಯಲ್ಲಿ ಗ್ರಾಮಾಭ್ಯುದಯ ಕಾರ್ಯದಲ್ಲಿ ತೊಡಗಿದ, ಕೆಲವು ದಿವಸಗಳಿಂದೀಚೆ ವಿಷಮಜ್ವರ ಪೀಡಿತರಾದ, ಮೊನ್ನೆ ಪ್ರಾಣತ್ಯಾಗ ಮಾಡಿದ ಶ್ರೀ ಚೋಟಲಾಲರ ಕುರಿತು, ಬರೆದ ಲೇಖದ ಪ್ರಾರಂಭದ ನುಡಿಗಳಾಗಿರುತ್ತವೆ.

"ನನ್ನ ಸಹುದ್ಯೋಗಿಗಳು, ನನ್ನ ಕೈಕಾಲುಗಳಂತಿರುವ ಪುಣ್ಯವು ನನ್ನದು. ಅವರ ಮನಃಪೂರ್ವಕ, ಮತ್ತು ಅತ್ಯಂತ ನಿಷ್ಠೆಯ ಸಹಕಾರವಿಲ್ಲದಿದ್ದರೆ ನನ್ನಿಂದ ಏನೂ ಮಾಡಲಾಗದು. ಅವರಲ್ಲಿ ಪ್ರಾಮುಖ್ಯರೆಂದೆನಿಸಿಕೊಂಡವರು ಶ್ರೀ ಚೋಟಾಲಾಲರು. ಅವರಲ್ಲಿ ಸರ್ವಕಾರ್ಯ ಚಾತುರ್ಯದ ಮತ್ತು ಪ್ರಬಲವಾದ ಬುದ್ಧಿವಂತಿಕೆ ಇದ್ದು, ಅವರು ಯಾವತ್ತು ಕಾರ್ಯಗಳನ್ನು ವಹಿಸಿಕೊಳ್ಳಲು ಹೆದರುತ್ತಿರಲಿಲ್ಲ. ಹುಟ್ಟು ಭಾಷಾ ಜ್ಞಾನಿಗಳು. ರಾಜಪುತಾನವು ಅವರ ಮಾತೃನಾಡು. ಹಿಂದಿಯು ಅವರ ಮಾತೃಭಾಷೆ. ಆದರೆ ಅವರಿಗೆ ಗುಜರಾತಿ, ಮರಾಠಿ, ಬಂಗಾಳಿ, ತಮಿಳು, ಸಂಸ್ಕೃತ, ಉರ್ದು, ಆಂಗ್ಲೇಯ ಇತ್ಯಾದಿ ಭಾಷೆಗಳು ಬರುತ್ತಿದ್ದವು. ನೂತನ ಒಂದು ಭಾಷೆಯನ್ನು ಅತಿ ಬೇಗನೆ ಅರಿತುಕೊಳ್ಳುವ ಯೋಗ್ಯತೆಯು ಅವರಲ್ಲಿತ್ತು. ಸಬರಮತಿ ಆಶ್ರಮದ ಸ್ಥಾಪಕ ಸದಸ್ಯರು ಅವರು. ಆಶ್ರಮದ ಅನೇಕ ಚಟುವಟಿಕೆಗಳಲ್ಲಿ ಹಿಂದಿಷ್ಟು ಶ್ರಮವನ್ನು ತೋರಿಸದೆ ಭಾಗಿಗಳಾಗಿದ್ದರು. ಅವರ ಸ್ಪರ್ಶಮಾತ್ರದಿಂದಲೆ ಆಶ್ರಮದ ಚಟುವಟಿಕೆಗಳು ಬೆಳಗುತ್ತಿದ್ದವು. ಅಡಿಗೆ ಕೆಲಸವಾಗಲಿ, ತೋಟಕೆಲಸವಾಗಲಿ, ನೇಯುವ ಕೆಲಸವಾಗಲಿ, ನೂಲುವ ಕೆಲಸವಾಗಲಿ, ಲೆಕ್ಕ ಬರೆಯುವುದಾಗಲಿ, ಭಾಷಾಂತರ ಮಾಡುವ ಕೆಲಸವಾಗಲಿ, ಪತ್ರವ್ಯವಹಾರ ಕೆಲಸವಾಗಲಿ ಎಲ್ಲವು ಅವರಿಗೆ ಸಾಮಾನ್ಯವಾಗಿತ್ತು.

ಹೆಚ್ಚಿನ ಕಷ್ಟಗಳಿರುವ ಕಾರ್ಯಗಳನ್ನೆ ವಹಿಸಿಕೊಳ್ಳುವುದು, ಚೋಟಾಲಾಲರು ಸ್ವಭಾವ, ಅವುಗಳನ್ನು ವಹಿಸಿಕೊಂಡರೆ, ಅವುಗಳನ್ನು ಪೂರೈಸುವ ತನಕ ವಿಶ್ರಮಿಸರು. ತಾನು ಹಿಡಿದ ಕಾರ್ಯದಲ್ಲಿ ಸಂಪೂರ್ಣ ಮಗ್ನನಾಗಿ, ದಣಿಯದ ಶಕ್ತಿಯನ್ನು ಹಾಕುವುದು ಅವರ ಅಭ್ಯಾಸವಾಗಿತ್ತು. ಕಾರ್ಯ ಪೂರೈಸಿದ ನಂತರ ಅವರು ಸುಮ್ಮನಿರುವರಲ್ಲ. ಇನ್ನೊಂದು ಕಾರ್ಯವನ್ನು ವಹಿಸಿಕೊಳ್ಳಲು ಸಿದ್ಧರೆ ಆಗಿದ್ದರು. ದಣಿವು ಎಂಬುದು ಅವರಿಗೆ ತಿಳಿದೆ ಇರಲಿಲ್ಲ. ಸೇವೆಯನ್ನು ಮಾಡುವುದೆ ಅವರ ಜೀವನದ ಮುಖ್ಯ ಗುರಿಯಾಗಿತ್ತು. ಅಖಿಲ ಭಾರತ ಗ್ರಾಮ ಕೈಗಾರಿಕೆ ಸಂಘವು ವಾರ್ಧಾದಲ್ಲಿ ಸ್ಥಾಪನೆಯಾಗಲು, ಅಲ್ಲಿ ಎಣ್ಣೆಗಾಣ, ಜೇನು ನೊಣ ಸಾಕುವಿಕೆ ಇತ್ಯಾದಿಗಳನ್ನು ರೂಢಿಗೆ ತಂದರು ಶ್ರೀ ಚೋಟಾಲಾಲರು ಅಲ್ಲದೆ ಅವರ ಮರಣದಿಂದ ನನ್ನ ಒಂದು ಕೈಯೆ ಮುರಿದಂತಾಗಿದೆ. ನಾನು ಬಹಳ ದುಃಖಾಕ್ರಾಂತನಾಗಿರುವೆನು. ಅವರು ಸಾಕಿದ ಜೇನುನೊಣಗಳಲ್ಲಿ ಇದೆ ತರದ ಭಾವವು ಉಂಟಾಗಿರಬಹುದು. ಅವುಗಳನ್ನು ಒಂದು ತಾಯಿಯಂತೆ ಸಾಕಿಸಲಹುತ್ತಿದ್ದರು.

ಸ್ವರಾಜ್ಯವೆಂದರೆ ರಾಮರಾಜ್ಯ

ಶ್ರೀ ಚೋಟಾಲಾಲ ಜೈನರಂತೆ ಮೌನವೀರರ ಒಂದು ಮಹಾ ದಂಡಿನ ಅವಶ್ಯವು ಹಿಂದೂದೇಶಕ್ಕಿದೆ

ಓರ್ವ ಸಹುದ್ಯೋಗಿಗಳ ಕುರಿತು ಮಹಾತ್ಮಾಜಿಯವರ ಪ್ರಶಂಸೆ

ನೊಣ ಸಾಕುವಿಕೆ ಇತ್ಯಾದಿಗಳನ್ನು ರೂಢಿಗೆ ತಂದರು ಶ್ರೀ ಚೋಟಾಲಾಲರು ಅಲ್ಲದೆ ಅವರ ಮರಣದಿಂದ ನನ್ನ ಒಂದು ಕೈಯೆ ಮುರಿದಂತಾಗಿದೆ. ನಾನು ಬಹಳ ದುಃಖಾಕ್ರಾಂತನಾಗಿರುವೆನು. ಅವರು ಸಾಕಿದ ಜೇನುನೊಣಗಳಲ್ಲಿ ಇದೆ ತರದ ಭಾವವು ಉಂಟಾಗಿರಬಹುದು. ಅವುಗಳನ್ನು ಒಂದು ತಾಯಿಯಂತೆ ಸಾಕಿಸಲಹುತ್ತಿದ್ದರು.

ಇನ್ನು ಅವುಗಳನ್ನು ಅಷ್ಟು ಪ್ರೀತಿಯಿಂದ ಸಾಕಿಸಲಹುವವರು, ಯಾರಿದ್ದಾರೆಂದು ನನಗೆ ತಿಳಿಯದು. ಶ್ರೀ ಚೋಟಾಲಾಲರು ಜೇನುನೊಣ ಸಾಕುವಿಕೆಯಲ್ಲಿ ಇತ್ತೀಚೆಗೆ ಮಗ್ನರಾಗಿದ್ದರು. ಜೇನುನೊಣಗಳನ್ನು ಕೂಡಿಸುವ ಕೆಲಸದಲ್ಲಿ ಅವರಿಗೆ ವಿಷಮಜ್ವರವು ತಗಲಿತು. ಬರೆ ಹದಿನೇಳು ದಿವಸಗಳಿಗೆ ಮಾತ್ರ ಅವರ ಹಾಸಿಗೆ ಹಿಡಿದಿದ್ದರು. ಗತಿಯಿಲ್ಲದವನಾಗಿ ಪರಾಧೀನನಾಗುವ ಆಲೋಚನೆ ಅವರನ್ನು ಬಹಳವಾಗಿ ಪೀಡಿಸಿದುದರಿಂದ 31ನೆ ಆಗೋಸ್ತು ತಿಂಗಳ ಮಂಗಳವಾರ ದಿವಸ ರಾತ್ರಿ ಎಲ್ಲರೂ ಮಲಗಿರುವ ಸಮಯ, ಹತ್ತಿರವಿರುವ ಬಾವಿಯಲ್ಲಿ ಹಾರಿ ಪ್ರಾಣತ್ಯಾಗ ಮಾಡಿಕೊಂಡರು.

"ಪ್ರಾಣತ್ಯಾಗ ಮಾಡಿಕೊಂಡದಕ್ಕಾಗಿ ಚೋಟಾಲಾಲರನ್ನು ದಟ್ಟಿಸಲು ನನ್ನಿಂದಾಗದು. ಅವರು ಅಂಜುಬುರುಕರಾಗಿರಲಿಲ್ಲ. ಇಷ್ಟರ ತನಕ ಯಾವತ್ತು ಅಸಂಯ್ಯುಕರ ಕೆಲಸವನ್ನು ಮಾಡದವರಲ್ಲ. ಪರಾಧೀನವಾಗಲು ಇಚ್ಛೆಯಿರದಿರುವುದೆ ಅವರ ಪ್ರಾಣತ್ಯಾಗದ ಕಾರಣ. ಹೊರತು ಇತರ ಕಾರಣಗಳು ನಾನರಿಯೆ. ನಿಜ ಅದೊಂದು ಮಹಾ ಗರ್ವದ ಕುರುಹು. ಅದು ಅವರಿಗೆ ತಿಳಿದಿರಲಿಲ್ಲ.

'1915ರಲ್ಲಿ ನಡೆದ ಡೆಲ್ಲಿ ಒಳಸಂಚ ಮೊಕದಮ್ಮೆಯಲ್ಲಿ ಅವರ ಹೆಸರಿತ್ತು. ಅದರಿಂದ ಪಾರಾಗಿ ಹೊರಬರುವ ಇಚ್ಛೆಯು ತನಗಿರಲಿಲ್ಲವೆಂದ ಅವರು ನನ್ನೊಡನೆ ಹೇಳಿದ್ದರು. ನನ್ನ ಬರವಣಿಗೆ ಜಗಿದ್ದ ಓದಿದ ಚೋಟಾಲಾಲರ ಸಂಪೂರ್ಣ ಮಾರ್ಪಾಟು ಹೊಂದಿದರು. ದಕ್ಷಿಣ ಆಫ್ರಿಕಾದ ನನ್ನ ಚಟುವಟಿಕೆ ಅತ್ಯಂತ ಕುತೂಹಲದಿಂದ ಕಲಿತರು. ಹಿಂಸಾಚಾರಿಗಳಾಗಿದ್ದವರ ಅಹಿಂಸಾಸೂತ್ರದ ಹಾಗೆ ಅಧಾರಿಗಳಾದರು.' ತನ್ನಲ್ಲಿರುವ ಹಿಂಸಾಭಾವವನ್ನು ಸಂಪೂರ್ಣವಾಗಿ ತೊರೆದಿದ್ದರು. ಸ್ವಭಾವದಲ್ಲಿ ನಾಟಿಕೊಂಡಿದ್ದ, ಗರ್ವ ಮತ್ತು ಕೋಪವನ್ನು ಸಂಪೂರ್ಣವಾಗಿ ಅಧಿಕಾರದಲ್ಲಿಡಲು ಅವರಿಂದಾಗದೆ ಹೋಯಿತು. ಅದಕ್ಕಾಗಿ ತನ್ನ ಪ್ರಾಣವನ್ನೆ ಅರ್ಪಿಸಿದರೇನು?

'ಅವರು ತನ್ನ ಮರಣದಿಂದ (ಅವರ ಪ್ರಾಯವು 40) ನಮ್ಮನ್ನು ಅವರ ಋಣದಲ್ಲಿ ಹಾಕಿರುವರು. ಅವರ ಕುರಿತು ನನ್ನಲ್ಲಿ ಮಹಾ ಆಶಯಗಳಿದ್ದವು. ಅವರಲ್ಲಿ ನ್ಯೂನತೆಯನ್ನು ನಾನು ಸಹಿಸುತ್ತಿರಲಿಲ್ಲ. ಅದಕ್ಕಾಗಿ ಅವರನ್ನು ನಾನು ಆಗಾಗ್ಗೆ ಜರಿಯುತ್ತಿದೆ. ಆದರೆ ಅವರು ಎಲ್ಲವನ್ನು ಸಹಿಸುತ್ತಿದ್ದರು. ಆ ಕುರಿತು ಅವರ ದೂರಿಡುತ್ತಿರಲಿಲ್ಲ. ಅವರನ್ನು ಆ ರೀತಿ ಜರಿಯಲು ನನಗೆ ಅಧಿಕಾರವಿದ್ದಿತೆ? ಒಂದಾನೊಂದು ದಿನ ಹಿಂದು ಮುಸ್ಲಿಮ, ಐಕ್ಯ ಅಸ್ಪೃಶ್ಯತಾನಿವಾರಣಾ ಬಲಿಪೀಠದ ಮೇಲೆ ಅವರನ್ನು ಅರ್ಪಿಸಬೇಕಾಗಿ ನನ್ನ ಇಚ್ಛೆಯಾಗಿತ್ತು. ನನ್ನ ಮನಸ್ಸಿನಲ್ಲಿ ಅವುಗಳು ಸ್ವರಾಜ್ಯ ಸಾಧನೆ ಎಂಬ ಮಹಾ ಯಜ್ಞದ ಬಲಿಪೀಠಗಳು. ಅವರಲ್ಲಿ ಆ ಬಗ್ಗೆ ಬಲವೂ ಯೋಗ್ಯತೆಯು ಇದ್ದಿತು.

ದೇಶಕ್ಕೆ ಈ ತರದ ಮೌನ ವೀರರ ಒಂದು ಮಹಾ ದಂಡಿನ ಅವಶ್ಯವಿದೆ. ಸ್ವರಾಜ್ಯವನ್ನು ಪಡೆಯುವುದಾದರೆ ನಮ್ಮಲ್ಲಿ ರಾಮರಾಜ್ಯ ಸ್ಥಾಪನೆಯಾಗುವುದೆಂಬ ನನ್ನ ಅಭಿಪ್ರಾಯ. ಚೋಟಲಾಲರ ಜೀವನದ ಈ ಗೋಚವು ಹಿಂದೂದೇಶದ ಸ್ವಾತಂತ್ರ್ಯದ ಹೋರಾಟಕ್ಕಾಗಿ ಜನರಿಗೆ ಸ್ಫೂರ್ತಿ ಕೊಡಲೆಂದು ನನ್ನ ಹಾರೈಕೆ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER ORIGINAL

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್ ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬೇನೆ ಎಲ್ಲಾ ಪ್ರಮೇಹ ಎಷ್ಟೇ ಹಳೆಯ ಯಾವುದೇ ಸ್ಥಿತಿಯಲ್ಲಿರಲಿ ನೋವು ಮೂತ್ರದಲ್ಲಿ ಉರಿ ಮತ್ತು ತೀವ್ರ ಸುರಿಯುವಿಕೆ ಮೂತ್ರ ಕಟ್ಟುವಿಕೆ ಧಾತುಸ್ರಾವ ಬಿಳುಪು ಹರಿಯುವುದು ಇದೇ ಮೊದಲಾದ ಯಾವತ್ತು ಗೊನೋರಿಯದಿಂದುಂಟಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3 0-0 (ಮೂರ) ಅಂಚೆ ಛಾರ್ಜು ಬೇರೆ

ನಕಲಿ ಮದ್ದುಗಳಿಗೆ ಬಲಿಯಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್ ಮುಂಬಯಿ 4

Sole Manufacturer Dr D N JASANI, Vithalbhai Patel Rd BOMBAY 4

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

(ಬ್ರಿಟಿಷ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು —'ಲಕ್ಷ್ಮಿನಿವಾಸ' ಬಿಲ್ಡಿಂಗ್ಸ್, ಕುಂದಾಪುರ ದ ಕ

ಬ್ರೇಂಚ್ ಆಫೀಸುಗಳು
ಕುಂದಾಪುರ,
ಕುಮಟಾ,
ಕೋಟೇಶ್ವರ,
ಬೈಂದೂರು,
ಗೋಕರ್ಣ,
ವೀರರಾಜೇಂದ್ರಪೇಟೆ,
ಸೋಮವಾರ ಪೇಟೆ,
ಶಿವಮೊಗ್ಗಾ,
ತರಿಕೆರೆ

ಈ ಬೇಂಕಿನ ಎರಡು ಶಾಖೆಗಳು ಮೈಸೂರು ಸಂಸ್ಥಾನದಲ್ಲಿ ಶಿವಮೊಗ್ಗಾ ತರಿಕೆರೆಯಲ್ಲಿ ತೆರೆಯಲ್ಪಟ್ಟಿವೆ.

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುವು.

ದಕ್ಷಿಣ ಕನ್ನಡ ಉತ್ತರ ಕನ್ನಡ, ಕೊಡಗು, ಶಿವಮೊಗ್ಗಾ ಮತ್ತು ಕಡೂರು ಜಿಲ್ಲೆಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳನ್ನು ದಕ್ಷತೆಯಿಂದ ನಿರ್ವಹಿಸುವ ತಮ್ಮದೇ ಆಗಿರುವ ಆದರ್ಶಪ್ರಾಯವಾದ ಈ ಬೇಂಕಿನಲ್ಲಿಯೇ ನಿಮ್ಮ ವ್ಯವಹಾರಗಳನ್ನು ನಡಿಸಬೇಕಾಗಿ ಕೋರುತ್ತೇವೆ

'Laxmi-Nivas' Buildings
Coondapoor, 8-1 1937

The Agricultural & Industrial Bank, Ltd

ದಕ್ಷಿಣೆಯ ಭಟ್ಟರು

(ಹಿಂದಿನ ಪುಟದಿಂದ ಮುಂದುವರಿಸಿದುದು.)

ಹಾಕಿದರೂ ಇಷ್ಟು ದಕ್ಷಿಣೆ ಯಾವ ಪುರೋಹಿತನಿಗೂ ಸಿಕ್ಕುತಿದ್ದಿಲ್ಲ ಅದ್ದರಿಂದ ಆ ಪಾಲಿಯನ್ನು ತಾವು ತಾವೇ ಪಡೆಯಬೇಕೆಂದು ಪ್ರತಿಯೊಬ್ಬನು ಕಾದಿದ್ದನು

ಆದರೆ—'ಇಷ್ಟರ ತನಕ ರಾಯರ ಕಾರ್ಯಗಳನ್ನು ಮಾಡಿದವನು ನಾನು ಆ ಪಾಲಿಗೆ ನಾನಲ್ಲದೆ ಬೇರೆ ಯಾರು ಹಕ್ಕುದಾರರಾಗಬಹುದು? ಅದು ನನಗೇ ಸಿಕ್ಕುವದು ಎಂದು ತಂತ್ರಿಗಳು ನಿಶ್ಚಿಂತರಾಗಿದ್ದರು

ಜಗನ್ನಾಥರಾಯರು ಹಣ್ಣುಕಾಯಿ ಕಟ್ಟಿ ಹಿಡಕೊಂಡು ದೇವಾಲಯಕ್ಕೆ ಬರ ತಿದ್ದರು ಕೆಲವು ಪುರೋಹಿತರು ಅವರು ಬರುವುದನ್ನು ದೂರದಲ್ಲಿಯೇ ಕಂಡರು ಮೆಟ್ಟಲು ಏರಬೇಕಾದರೆ—'ಸ್ವಾಮಿಾ' ಎಂದು ಕೈಮುಂದೆ ಮಾಡಿ ತಟ್ಟೆ ಹಿಡಕೊಳ್ಳಲಿಕ್ಕೆ ಹೋದರು

ಆದರೆ ಅದನ್ನು ಎಳೆದು ಇಟ್ಟುಕೊಳ್ಳುವ ಸಾಹಸ ಆ ಪುರೋಹಿತರಿಗಿದ್ದಿಲ್ಲ ಅದು ಒಬ್ಬ ರಾಮ ಕೃಷ್ಣಾಚಾರ್ಯರಿಗೆ ಮಾತ್ರ ಇದ್ದಿತು ಈ ಕಾಲದಲ್ಲಿ ಬಲವಿದ್ದವರೇ ಬಾಳುವರು ರಾಮಕೃಷ್ಣಾಚಾರ್ಯರಿಗೆ ಮಾತ್ರ ಇದ್ದಿತು ಈ ಕಾಲದಲ್ಲಿ ಬಲವಿದ್ದವರೇ ಬಾಳುವರು ರಾಮಕೃಷ್ಣಾಚಾರ್ಯರು ಮುಂಥದಲ್ಲಿ ಗೆದ್ದರು ಅದ್ದರಿಂದ ಬಾಳಿದರು

ತಂತ್ರಿಗಳ ಅಳುಮೋರೆ ನೋಡಿ ರಾಯರಿಗೆ ಬಹಳ ಕರಕರೆಯಾಯಿತು 'ಇವರೆಂಥ ಭಟ್ಟರಪ್ಪಾ ಇಂಥ ಭಟ್ಟರನ್ನು ನಾನು ಬೇರೆಲ್ಲಿಯೂ ನೋಡಲಿಲ್ಲ ಎಂದು ಗೊಣಗುತ್ತ ಅವರು ಮನೆಗೆ ಹೋದರು

ಪುರೋಹಿತರ ಪಂಚಾಯತು ನಡೆಯಿತು ಎಲ್ಲರಿಗಿಂತ ತಂತ್ರಿಗಳ ಹೊಟ್ಟೆ ಹೆಚ್ಚು ಉರಿಯುತ್ತಿತ್ತು ಅವರು ಹೇಳಿದರು—ರಾಮ ಕೃಷ್ಣಾಚಾರಿ ಒಬ್ಬ ಸಲ್ಲಿ ಮಾಡಿದರೆ ಜನರಿಗೆ ದೇವರ ಮೇಲೆ ವಿಶ್ವಾಸ ಹುಟ್ಟುವುದು ಹೇಗೆ?'

'ಹೌದು, ಕೊಡಲಿ ಕಾವು ಕುಲಕ್ಕೆ ಕೇಡು. ಆಚಾರಿಯನ್ನು ಇಷ್ಟು ನಡಿಲು ಬಿಡಬಾರದು' ಎಂದು ಉಳಿದ ಪುರೋಹಿತರೆಂದರು

ಮರುದಿನದಿಂದ ಪುರೋಹಿತರ ಕಂಬ್ಯಾನ್ವ ಬುಕ್ಕಿಂಗ ಏಜನ್ಸಿ ಮತ್ತು ಸರ್ವಿಸು ಮುಂದು ಹೋಗಿದೆಯಾಗಿ ತಂತ್ರಿಗಳು ಊರಲ್ಲೆಲ್ಲ ಫ್ಲ್ಯಾಶ್ ಮಾಡಿದರು

'ಪುರೋಹಿತರು ಕೂಡಿದ್ದು—ದಕ್ಷಿಣೆಗಾಗಿ' ಈಗ ಬೇರೆ ಪುದೂ ದಕ್ಷಿಣೆಗ್ಗಾಗಿ'' ದಕ್ಷಿಣೆ ಬಿಟ್ಟು ಪುರೋಹಿತರಿಲ್ಲ ಪುರೋಹಿತರನ್ನು ಬಿಟ್ಟು ದಕ್ಷಿಣೆ ಇಲ್ಲ ನಮ್ಮ ಕೆಲಸ ನಾವೇ ಮಾಡೋಣ!' ಎಂದು ಜನರನ್ನುಕೊಡಗಿದರು

ಈಗ ನಗರದಲ್ಲಿ ಒಂದು ಆರ್ಯಸಮಾಜದ ಸ್ಥಾಪನೆಯಾಗಿದೆ

ಬೆವರಿನಲ್ಲಿ ಬಂಗಾರ

ರೋಗಿಯ ಬೆವರಿನಲ್ಲಿ ಬಂಗಾರ ಕಾಣಿಸಿಕೊಂಡಿದೆಯಂತೆ' ಇದು ಲಂಡನ್ನಿನ ಪತ್ರಿಕೆಯೊಂದರಲ್ಲಿಯ ಸಮಾಚಾರ

ಅಲ್ಲಿಯ ಒಂದು ಆಸ್ಪತ್ರೆಯಲ್ಲಿ ರಾತ್ರಿಯಲ್ಲಿ ಅಲ್ಲಿಯ ನರ್ಸಳು ತನ್ನ ಟೇಬಲಿನ ಹತ್ತಿರ ಸ್ವಸ್ಥವಾಗಿ ಕುಳಿತುಕೊಂಡಿದ್ದಳು ಪಕ್ಕದಲ್ಲಿನ ರೂಮಿನಿಂದ ಯಾರೋ ಕೂಗಿದ ಸದ್ದಾಯಿತು ಹೋಗಿ ನೋಡಿದಳು ಕೂಗಿದವನು ರೋಗಿಯಾಗಿದ್ದ ನರ್ಸ ಆತನ ಬಳಿ ಹೋಗಿ ನೋಡುತ್ತಾಳೆ,—ಬಂಗಾರದ ತಗಡು ಹೊದ್ದುಕೊಂಡು ಕುಳಿತಿರುವನೋ ಎಂಬಂತೆ ಕಾಣುತಿದ್ದ ರೋಗಿ ಇದನ್ನು ಕಂಡು ನರ್ಸ ಚಕಿತಳಾದಳು ಡಾಕ್ಟರನ್ನು ಕರೆತಂದಳು ಡಾಕ್ಟರಿಗೂ ಆಶ್ಚರ್ಯವಾಯಿತು ಮೈಯನ್ನೆಲ್ಲಾ ಚೆನ್ನಾಗಿ ಉಜ್ಜಲು ಆ ಬೆವರೆಲ್ಲ ಚಿನ್ನದ ಪುಡಿಯಂತೆ ಉದುರಬೀಳುತ್ತಿತ್ತು ರೋಗಿಗೆ ಮಲಗುವ ಮುಂಚೆ ಚಿನ್ನವನ್ನು ಬೆರೆಸಿದ್ದ ಔಷಧಿಯನ್ನು ಇಂಜೆಕ್ಷನ್ ಕೊಡಲಾಗಿತ್ತಂತೆ. ಆದರೂ ಔಷಧಿಯ ಚಿನ್ನವು ಹೀಗೆ ಮೈಮೇಲೆ ಬರುವ ವೈಚಿತ್ರ್ಯವು ಯಾರಿಗೂ ಈ ವರೆಗೆ ಸಂಭವಿಸಿರಲಿಲ್ಲವೆಂದು ಡಾಕ್ಟರುಗಳು ಹೇಳುತ್ತಾರೆ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮನಂಬ್ರ 488/1937

ಕೆ ಸರ್ವೋತ್ತಮ ಕಮ್ತಿ . ವಾದಿ

ಮತ್ತು

1 ಮೇಲೋತ್ತ ಚಾತ್ತುಕುಟ್ಟಿ ನಂಬ್ಯಾರ ರಾಮುನಾಯರ ಮೊಮ್ಮಗ ಮತ್ತು ಇಚ್ಚಿರಿ ಅಮ್ಮನ ಮಗ

2 ಕುಂಞಿರಾಮ ನಂಬ್ಯಾರ ಕಣ್ಣನಾಯರ ಮೊಮ್ಮಗ ಚಮನಾಡ ಗ್ರಾಮಸ್ತರು

ಪ್ರತಿವಾದೀರು

1ನೇ ಪ್ರತಿವಾದೀಯು 2ನೇ ಪ್ರತಿವಾದೀಗೆ ಬರಕೊಟ್ಟ ಗೇಣಚೀಟು ಪ್ರಕಾರ 1ನೇ ಪ್ರತಿವಾದಿಯಿಂದ 2ನೇ ಪ್ರತಿವಾದೀಗೆ ಸಲ್ಲತಕ್ಕ ಗೇಣಿ ಬಾಕಿ ವಸೂಲು ಮಾಡುವ ಹಕ್ಕನ್ನು ವಾದಿಯು ಮೇಲಚೀಟಿಗೆ ಪಡದು ಆ ಕುರಿತು ದಾಖಲು ಮಾಡಿದ ಮೊಕದ್ದಮೆಯ ವಿಚಾರಣೆ ತಾ 8—10—1937ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿ ಬಗ್ಗೆ ಇಡೋಣವಾಗಿರುತ್ತದೆ ಎಂಬ ಸಂಗತಿ ಈ ಮೂಲಕ ಸದ್ರಿ ಪ್ರತಿವಾದೀಗೆ ತಿಳಿಸೋಣವಾಗುತ್ತದೆ

20 9—37, B Amrit Rao
ಕಾಸರಗೋಡು *Vakil for Plaintiff*

WANTED

Applications are invited up to 7th October 1937 from young and energetic persons for the posts of a Clerk and two organizing travelling agents Salary according to qualifications Only competent hands with previous experience need apply with references to

Bhuvanendra Products Limited,
Katapadi South Canara

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳ ಎಲ್ಲಾ ಸ್ಯಾಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸ ವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,
ಸರಾಫ — ತು. ಮೆಟಲ — ಮರ್ಚಂಟ್,
ಬಡಗ ಪೇಟೆ ಉಡುಪಿ.

Byndoor [illegible]th July 1937

From

J M. BANAVALI,
Byndoor Camp

To

The Agent,
The Combined Booking Office,
Byndoor (S K)

Dear Sir

Received the 'Tin' which I had missed in your office at Udipi on [illegible] and which your Udipi Office so kindly and promptly sent to me I am really startled to see the efficient Management and promptness of the staff in rendering every assistance to the travelling passengers I cannot therefore restrain myself from thanking the Management and the staff

Yours Faithfully
(Sd) **J. M Banavali**

(True Copy)

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by—

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

...ಚಾರದಿದ್ದರೆ — ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮನುಷ್ಯ ಸರ್ಟಿಫಿಕೇಟು:— ಡಾ। ಬಿ. ಎ ವೈದ್ಯ ಎಲ್. ಸಿ ಪಿ ಎಸ್ ಕೇವಾಪಾಟಿವು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪—೦—೦ ವಿ. ಪಿ. ಆಣೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೋ. ಮಿರಜೆ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ ೨—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ ೨ ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಂಗಾ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರ್ಸ್ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Edited Printed & Published By A. S. Kamath at the Sharada Press, Car Street, Mangalore.